ಜನವರಿ

೧೯೫೬

ಬೆಲೆ:

೮ ಆಣೆಗಳು

# ಸಂಕ್ರಾಂತಿ

೧

ಮೂಡುಗಾಳಿ ಬೀಸಿ ಬೀಸಿ,
ನಾಡಬೆಳೆಯು ಕಸುಕ ಸೋಸಿ,
ಮಾಡಿ ವಿವಿಧ ಧಾನ್ಯರಾಶಿ
ಹಸಿವೆಗೀಯೆ ಶಾಂತಿ—
ಕಳೆದು ಭ್ರಾಂತಿ, ತುಳಿದಶಾಂತಿ
ಹೊಳೆಯಿತು ಸಂಕ್ರಾಂತಿ!

೨

ಬಿಸುಪ ಕಳೆದುಕೊಂಡ ರವಿ
ಎಸೆವನಿದೋ ತೀವಿ ಛವಿ
ಹೊಸ ಹಬ್ಬವಿದೆನಿತು ಸವಿ?
ಬುವಿಯು ಭಾಗ್ಯವಂತಿ—
ಕಳೆದು ಭ್ರಾಂತಿ ತುಳಿದಶಾಂತಿ
ಹೊಳೆಯಿತು ಸಂಕ್ರಾಂತಿ!

೩

ಒಲವಮ್ಮನ ಜಾತ್ರೆಗೆಂದು
ಚೆಲುವಿನ ಗುಡಿಯೆತ್ತ ನಿಂದು
ನಲಿಯುತಲಿವೆ ಹೆಣ್ಣು-ಗಂಡು
ಇಲ್ಲದೆ ವಿಶ್ರಾಂತಿ—
ಕಳೆದು ಭ್ರಾಂತಿ ತುಳಿದಶಾಂತಿ
ಹೊಳೆಯಿತು ಸಂಕ್ರಾಂತಿ!

# ಈ ಸಂಚಿಕೆಯಲ್ಲಿ:


ಕರ್ನಾಟಕವೋ ಮೈಸೂರೋ? ( ಸಂಪಾದಕೀಯ )
ಸಂಪಾದಕರು .... .... .... ೨೮೧

ರಾಯಚೂರಿನ ಸಾಹಿತ್ಯ ಸಮ್ಮೇಳನ ( ವರದಿ )
ನಮ್ಮ ಪ್ರತಿನಿಧಿಗಳು .... .... .... ೨೮೨

ಹಾವು ( ಒಂದು ಹಾಸ್ಯಕಥೆ )
ಶ್ರೀ. ಕೆ. ಅಶ್ವತ್ಥನಾರಾಯಣರಾಯರು, ಬನಾರಸ .... .... ೨೮೫

ಭಾರತೀಯ ವೇಷ-ಭೂಷಣಗಳು ( ಸಂಸ್ಕೃತಿ ಸಂಶೋಧನ )
ಶ್ರೀ. ಸಗರ ಕೃಷ್ಣಾಚಾರ್ಯರು ಬಿ. ಎ. ಶಹಪೂರ .... ೨೯೨

ಕರ್ನಾಟಕಸಾಮ್ರಾಜ್ಯ ( ಗೀತರೂಪಕ )
ಶ್ರೀ. ಪದ್ಮನಾಭ ಸೋಮಯಾಜಿ, ಸುರತಕಲ್ಲು .... ೨೯೬

ಸಾಧ್ವೀಮಣಿ ಪದ್ಮಾವತೀದೇವಿ ( ಕವಿಪತ್ನಿಯ ಕಥೆ )
ಶ್ರೀ. ಕೆ. ಎಸ್. ಶರ್ಮಾ 'ವಿಶಾರದ' ಕಾಸರಗೋಡು .... ೨೯೯

ಆಕಾಶದೀಪ ( ಕವನ )
ಶ್ರೀ. ಬಿ. ಬಿ. ಹಿಂಗಮಿರೆ, ಬೆಳಗಾಂವಿ .... .... ೩೦೨

ಅಲಂಕಾರಮೀಮಾಂಸೆ ( ಲಕ್ಷಣವಿಚಾರ )
ಶ್ರೀ. ಎನ್. ಭೀಮಭಟ್ಟ ಸಾಹಿತ್ಯಶಿರೋಮಣಿ, ಕನ್ಯಾನ .... ೩೦೩

ನಿರುದ್ಯೋಗಿ ( ನವ್ಯಕವನ )
ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್ಸಿ., ಎಲ್ ಎಲ್. ಬಿ. ಮುಂಬಯಿ ೩೦೫

ಮಾರಾಟ ( ಒಂದು ನಗೆಯಾಟ )
ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ. ಟಿ. ಧಾರವಾಡ ೩೦೬

ಹಚ್ಚುವೆವು ದೀಪವನು ( ಕವನ )
ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ .... ೩೧೧

ಗೀತಗೀತಾ ( ಶ್ರವಣಿಕಾ )
ಶ್ರೀ ಶ್ರೀನಿವಾಸ ವೆಂಕಟೇಶ ಗಲಗಲಿ, ಧಾರವಾಡ .... ೩೧೨

ವಿಮರ್ಶೆ ಎತ್ತ ಸಾಗಿದೆ? ( ಒಂದು ಚರ್ಚೆ )
ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ., ಎಲ್ಎಲ್. ಬಿ. ಧಾರವಾಡ ೩೧೩

ಎರಡು ಭಾವರೂಪಗಳು ( ಕಿರುಗತೆಗಳು )
ಶ್ರೀ. ಹಾ. ಮ. ನಾಗೇಶ, ಉಸ್ಮಾನಿಯಾ ಕಾಲೇಜ್, ಗುಲ್ಬುರ್ಗಾ ೩೧೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ ಕೆ. ಎಸ್. ಶರ್ಮಾ, ಕಾಸರಗೋಡು .... .... ೩೧೫

ಸಾದರಸ್ವೀಕಾರ ಹೊದಿಕೆಯ ೩ನೆಯ ಪುಟ

# ಜಯಂತಿ

ಸಂಪುಟ ೧೮ ಸಂಚಿಕೆ ೮

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.


***


ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.


# ಸಂಪಾದಕೀಯ

●

## ಕರ್ನಾಟಕವೋ ಮೈಸೂರೋ ?

ಪುನರ್ಘಟಿತವಾಗಲಿರುವ ಕನ್ನಡ ರಾಜ್ಯಕ್ಕೆ ಯಾವ ಹೆಸರು ಇರಬೇಕೆಂಬುದೂ, ಇಂದು ಒಂದು ವಾದದ ವಿಷಯವಾಗಿ ಕುಳಿತುದು ವಿಷಾದದ ಸಂಗತಿಯಾಗಿದೆ.

ರಾಯಚೂರಿನಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನವು 'ಕರ್ನಾಟಕ' ಎಂಬ ಹೆಸರೇ ಇರಬೇಕೆಂದು ಗೊತ್ತುಮಾಡಿ, ನಾಡಿನಲ್ಲಿಯ ಸಂಸ್ಕೃತಿ ಸಂಪನ್ನರ ಆಶಯವೇನಿರುವುದೆಂಬುದನ್ನು ಸ್ಪಷ್ಟಮಾತುಗಳಲ್ಲಿ ತಿಳಿಸಿದುದು ಸಂತೋಷದ ಸಂಗತಿಯೇ ಸರಿ.

ಕರ್ನಾಟಕ ಏಕೀಕರಣದ ಚಳವಳಿಯು ಪ್ರಾರಂಭವಾದುದು ಕನ್ನಡಿಗರ ಸರ್ವತೋಮುಖ ಅಭಿವೃದ್ಧಿ–ಅಭ್ಯುದಯಗಳಿಗಾಗಿ. ಕೇವಲ ಸಂಸ್ಕೃತಿಪ್ರಿಯ ಕನ್ನಡಿಗರೇ ಇದನ್ನು ಪ್ರಾರಂಭಿಸಿದವರು. ಅವರಿಗೆ ಬೇಕಾದುದು ಕನ್ನಡಿಗರೆಲ್ಲರಲ್ಲಿಯೂ ವಿದ್ಯುಚ್ಚಲನೆಯನ್ನು ಹುಟ್ಟಿಸುವಂತಹ 'ಕರ್ನಾಟಕ' ಎಂಬ ಹೆಮ್ಮೆಯ ಹೆಸರೇ ಅಲ್ಲದೆ, 'ಮೈಸೂರು' ಎಂಬುದೂ ಅವರಿಗೆ ಸಂತೃಪ್ತಿಯನ್ನು ಉಂಟುಮಾಡದು; 'ಧಾರವಾಡ' ಎಂಬುದೂ ಅವರಿಗೆ ಸಂತುಷ್ಟಿಯನ್ನು ಉಂಟುಮಾಡದು.

'ಕರ್ನಾಟಕ' ಎಂಬ ಹೆಸರು ಧಾರವಾಡದ ಕನ್ನಡಿಗರಲ್ಲಿಯೂ ಅಭಿಮಾನವನ್ನು ಹುಟ್ಟಿಸುವಂತಹದು; ಮೈಸೂರುದೇಶದ ಕನ್ನಡಿಗರಲ್ಲಿಯೂ ಅಭಿಮಾನ–ಉತ್ಸಾಹಗಳನ್ನು ಹುಟ್ಟಿಸುವಂತಹದು. ಅದನ್ನು ಬಿಟ್ಟು 'ಧಾರವಾಡ' ಎಂದು ಇರಿಸಿದರೆ, ಉತ್ತರಕರ್ನಾಟಕದ ಯಾವ ಕನ್ನಡಿಗನೂ ಒಪ್ಪಲಾರನು. ಹಾಗೆಯೆ 'ಮೈಸೂರು' ಎಂದು ಇರಿಸಿದರೆ, ಸಮಂಜಸ ಬುದ್ಧಿಯ ಯಾವ ಮೈಸೂರಿಗರೂ ಒಪ್ಪಲಾರರು; ಒಪ್ಪಲಾಗದು.

ಪ್ರಜಾಪ್ರಭುತ್ವದ ಹೆಸರಿನಿಂದ ನಡೆಸಿರುವ ಇಂದಿನ ಕೆಲವು ಜನ ಅಧಿಕಾರಲುಬ್ಧ ಧುರೀಣಪ್ರವರ ಚಟುವಟಿಕೆಗಳು, ಔಚಿತ್ಯ–ಅನೌಚಿತ್ಯಗಳ ವಿಚಾರವನ್ನೇ ಮಾಡುತ್ತಿಲ್ಲ. ಅನೇಕ ಸಲ ತಮ್ಮ ಆತ್ಮಸಾಕ್ಷಿಯನ್ನೂ ಮೀರಿ, ಕೇವಲ ವಿರೋಧ ಪ್ರಕಟಿಸುವ ಉದ್ದೇಶದಿಂದ, ಸತ್ಯ ತತ್ತ್ವಗಳನ್ನೂ ಅವು ತುಳಿಯುತ್ತ ಹೊರಟಿರುವುವು. ಈ ತಮೋವೃತ್ತಿಯಿಂದ ದೇಶದ ಜನರಿಗೆ ಯಾವ ಸುಖ–ಸಮಾಧಾನಗಳೂ ಇಲ್ಲದಂತಾಗುವುವು. ಇಷ್ಟೆ ಅಲ್ಲ ಈ ಬಗೆಯ ವಿರೋಧಿ ಚಟುವಟಿಕೆಗಳ ಆಸುರೀ ಶಕ್ತಿ ಹೆಚ್ಚಾದರೆ, ನಮ್ಮ ಮೂಡಲಿರುವ ರಾಜ್ಯಕ್ಕೆ ಶಾಶ್ವತವೆನಿಸಬಹುದಾದ ಕೆಲವು ದೋಷಗಳು ಅಂಟಿಕೊಂಡು ನಿಲ್ಲುವ ಸಂಭವುಂಟು.

ನಾವೆಲ್ಲರೂ ಈಗ ಒಂದೆ ನಾಡಿನಲ್ಲಿ ಒಟ್ಟುಗೂಡುತ್ತಿರುವುದು ಕರ್ನಾಟಕಸ್ಥರೆಂದು. ಕರ್ನಾಟಕದ ಇತಿಹಾಸ–ಸಂಸ್ಕೃತಿಗಳು ನಮ್ಮೆಲ್ಲರಿಗೂ ಸ್ಫೂರ್ತಿದಾಯಕವಾಗಿರುವುವು. ಮೈಸೂರು ರಾಜರು ಬೆಳೆಸಿದುದು ಮೈಸೂರುಸಾಹಿತ್ಯ–ಸಂಸ್ಕೃತಿಗಳ ಇತಿಹಾಸವನ್ನಷ್ಟೇ ಅಲ್ಲದೆ, ಕರ್ನಾಟಕದ ಸಾಹಿತ್ಯ–ಸಂಸ್ಕೃತಿಗಳ ಇತಿಹಾಸವನ್ನು ಬೆಳೆಸಿದ್ದಾರೆ. ನೂತನ ಕರ್ನಾಟಕದಲ್ಲಿ ಅವರ ಕಾರ್ಯವು ಅಖಿಲ ಕರ್ನಾಟಕದ ಅಭಿಮಾನೋತ್ಸಾಹಗಳ ಸಾಮಗ್ರಿಯಾಗಿ ನಿಲ್ಲಬಲ್ಲದು. ಮೈಸೂರಿನ ಅರಸರು ಕನ್ನಡಿಗರಾದುದರಿಂದಲೇ, ಕನ್ನಡಿಗರೆಲ್ಲರೂ ಅವರನ್ನು ಆತ್ಮೀಯತೆಯಿಂದ ಕಂಡರು. ಅವರು ರಾಜಪದದಲ್ಲಿ ಉಳಿದಿದ್ದರೆ, ಅವರ ಆಧಿಪತ್ಯವನ್ನೂ ಸಂತೋಷದಿಂದ ಸ್ವೀಕರಿಸಲು ಸಿದ್ಧರಿದ್ದರು. ಉತ್ತರ ಕರ್ನಾಟಕದಲ್ಲಿಯೂ ಅನೇಕ ಜನ ರಾಜರು ಇದ್ದರು. ಆದರೆ ಅವರು ಎಂದೂ ಕನ್ನಡಿಗರ ಆತ್ಮೀಯತೆಗೆ ಪಾತ್ರರಾಗಲಿಲ್ಲ. ಅವರಂತೆಯೆ ಮೈಸೂರಿನ ಅರಸರೂ ಕೇವಲ ಮೈಸೂರಿನ ಅರಸರಾಗಿಯೆ ಉಳಿದಿದ್ದರೆ, ಕನ್ನಡಿಗರೆಲ್ಲರ ಆತ್ಮೀಯತೆಯ ಕಾಣಿಕೆ ಅವರಿಗೆಂದೂ ಸಲ್ಲುತ್ತಿರಲಿಲ್ಲ.

( ೩೦ನೆಯ ಪುಟ ನೋಡಿರಿ )

# ರಾಯಚೂರಿನ ಸಾಹಿತ್ಯಸಮ್ಮೇಳನ

( ವಿಹಂಗಮಾವಲೋಕನ )

**ನಮ್ಮ ಪ್ರತಿನಿಧಿಗಳಿಂದ**

●

ಈ ಸಲ ರಾಯಚೂರಿನಲ್ಲಿ ಕೂಡಿದ್ದ ೩೭ನೆಯ ಕನ್ನಡ ಸಾಹಿತ್ಯ ಸಮ್ಮೇಲನವು, ಕನ್ನಡಿಗರ ೪೦ ವರುಷಗಳ ಕನಸು ನನಸಾಗುವ ಕಾಲದಲ್ಲಿ ಕೂಡಿದ ಈ ಸಮ್ಮೇಲನವು, ಹಲವು ವಿಧದಿಂದ ಮಹತ್ತ್ವದ್ದಾಗಿದೆ ಎಂದು ಬೇರೆ ಹೇಳಬೇಕೆ! ಅಸಾಮಾನ್ಯ ಪಾಂಡಿತ್ಯವನ್ನು ಗಳಿಸಿಕೊಂಡ ಮೇಧಾವಿ ಶ್ರೀರಂಗರು ಈ ಸಮ್ಮೇಲನದ ಅಧ್ಯಕ್ಷರಾಗಿದ್ದುದೇ ಈ ಸಲದ ಸಮ್ಮೇಲನದ ವೈಶಿಷ್ಟ್ಯವಾಗಿತ್ತು.

ಮೊದಲೇ ನಿರ್ಧರಿಸಿದಂತೆ ರಾಯಚೂರಿನ ಪ್ರವಾಸವನ್ನು ಕೈಕೊಂಡೆ. ಗುಂಟಕಲ್ಲು ರೈಲುನಿಲ್ದಾಣದಲ್ಲಿಳಿದಾಗ, ನಾಲ್ಕಾರು ಜನ ಬೆಂಗಳೂರಿನ ಪತ್ರಿಕಾಪ್ರತಿನಿಧಿಗಳ—ಕೆಲವು ತರುಣ ಸಾಹಿತಿಗಳ—ಪರಿಚಯ ಆಯಿತು. ನಾವೆಲ್ಲರೂ ಕೂಡಿಯೇ ರಾಯಚೂರ ಗಾಡಿಯನ್ನು ಹತ್ತಿದೆವು. ಎಲ್ಲರೂ ಒತ್ತಟ್ಟಿಗೆ ಕುಳಿತದ್ದರಿಂದ, ಸ್ವಾಭಾವಿಕವಾಗಿ ಸಾಹಿತ್ಯಸಮ್ಮೇಲನದ ಬಗ್ಗೆ ಮಾತುಕತೆಗಳು ನಡೆದುವು. ಮಾತುಗಳು ಬೆಳೆಯುತ್ತ ಸಮ್ಮೇಲನದ ವಿವಿಧಗೋಷ್ಠಿಗಳ ಅಧ್ಯಕ್ಷರ ಆಯ್ಕೆಯ ಬಗೆಗೆ ಚರ್ಚೆ ನಡೆಯಿತು. ಬೆಂಗಳೂರಿನ ಉದಯೋನ್ಮುಖ ಸಾಹಿತಿಗಳೊಬ್ಬರು ಕೇಳಿದರು : "ಏನು ಸಾರ್, ಮಹಿಳಾಗೋಷ್ಠಿಯ ಅಧ್ಯಕ್ಷರಾಗಿದ್ದರಲ್ಲಾ— ಶ್ರೀಮತಿ ಪಾಟೀಲ ಪುಟ್ಟಮ್ಮ—ಅವರು ಧಾರವಾಡ ಸೀಮೆಯವರು. ಅವರು ಏನಾದರೂ ಪುಸ್ತಕಗಳನ್ನು ಬರೆದಿದ್ದಾರೆಯೇ? " ಕನ್ನಡದಲ್ಲಿ ಪ್ರಕಟವಾದ ಎಲ್ಲ ಪುಸ್ತಕಗಳನ್ನೂ ಒಬ್ಬನು ಓದುವುದು ಸಾಮಾನ್ಯವಾಗಿ ಅಶಕ್ಯವಾದರೂ, ಸಾಹಿತ್ಯಪ್ರಿಯತೆ ಇದ್ದ ವ್ಯಕ್ತಿ, ಹೊಸಹೊಸದಾಗಿ ಹೊರಟ ಪುಸ್ತಕಗಳ ಹೆಸರನ್ನಾದರೂ ಕೇಳಿರುತ್ತಾನೆ. ನನಗೆ ನನ್ನ ಮಿತ್ರರ ಪ್ರಶ್ನೆಗೆ ಉತ್ತರ ಕೊಡುವುದು ದುಸ್ತರವಾಯಿತು. ಆದರೂ ಹೇಳಿದೆ: "ನಾನೂ ಈ ಹೆಸರನ್ನು ಇದೇ ಮೊದಲ ಸಲ ಕೇಳುತ್ತಿರುವುದು." ಮಂಗಳೂರಿನ ಮಹಾಶಯರೊಬ್ಬರು ಕೂಡಲೇ ಕೈಚೀಲದೊಳಗಿಂದ 'ರಾಷ್ಟ್ರಮತ' ಪತ್ರಿಕೆಯನ್ನು ಹೊರದೆಗೆದು ಅದರಲ್ಲಿ ಅಚ್ಚಾದ ಸಾಹಿತ್ಯ ಸಮ್ಮೇಲನದ ಬಗೆಗಿರುವ ಲೇಖನದ ಕೆಲವು ಭಾಗವನ್ನು ಓದಿ ತೋರಿಸಿದರು:

"ಈ ವರ್ಷದ ಸಮ್ಮೇಳನಾಧ್ಯಕ್ಷರನ್ನು ಬಿಟ್ಟರೆ, ಉಳಿದ ಗೋಷ್ಠಿಗಳ ಅಧ್ಯಕ್ಷರು ಯಾರು ಯಾರು? ನಾಳೆ ಸಮ್ಮೇಳನದ ದಿನ, ಗೋಷ್ಠಿಗಳ ಅಧ್ಯಕ್ಷಬಾಷಣ ಮಾಡುವಾಗ ಅವರು ಲೇಖಕರಾಗಿ ಮಾತನಾಡುವುದಿಲ್ಲ. ನಟನೆ ಮಾಡುವವನು ಏನೇ ಇರಲಿ ಹೇಗೇ ಇರಲಿ, ನಾಟಕಗೋಷ್ಠಿಯ ಅಧ್ಯಕ್ಷ. ಹೆಂಗುಸಾದವಳು ಮಹಿಳಾ-ಗೋಷ್ಠಿಯ ಅಧ್ಯಕ್ಷೆ ಆಗುವುದು ನ್ಯಾಯವೇ ಸರಿ. ಆದರೆ ವಿಶಿಷ್ಟ ಯೋಗ್ಯತೆಗಳಿಲ್ಲದೆ ಅವರು ಕನ್ನಡಕ್ಕೆ ಏನನ್ನೂ ಒದಗಿಸಲಾರರು!" ಪತ್ರಿಕೆಯಲ್ಲಿ ಪ್ರಕಟವಾದ ಈ ಮಾತನ್ನು ಅವರು ಓದಿ ತೋರಿಸಿದಾಗ, ನಾನು ನಿರುತ್ತರನಾದರೂ, ಮುಂದೆ ಮಹಿಳಾಗೋಷ್ಠಿಯ ಅಧ್ಯಕ್ಷರು ತಮ್ಮ ಭಾಷಣವನ್ನು ಓದಿದಾಗ, ನಮ್ಮ ಮಿತ್ರರು ಪಟ್ಟ ಅಭಿಪ್ರಾಯ ಅಷ್ಟೊಂದು ಸರಿಯಲ್ಲವೆನಿಸಿತು— "ಆದರೆ ವಿಶಿಷ್ಟಯೋಗ್ಯತೆಯು ಇಲ್ಲದೇ ಅವರು ಕನ್ನಡಕ್ಕೆ ಏನನ್ನೂ ಒದಗಿಸಲಾರರು" ಈ ಮಾತನ್ನು ನಾನು ಒಪ್ಪದಂತಾದೆ— ಅಧ್ಯಕ್ಷೆ ಪಾಟೀಲ ಪುಟ್ಟಮ್ಮನವರು ತಮ್ಮ ಭಾಷಣದ ಪ್ರಾರಂಭದಲ್ಲಿ "......ಈ ಗೋಷ್ಠಿಯ ಅಧ್ಯಕ್ಷಸ್ಥಾನವನ್ನು ಕನ್ನಡನಾಡಿನಲ್ಲಿ ಮಹಿಳೆಯರ ಸಲುವಾಗಿ ಕಳಕಳಿಯಿಂದ ದುಡಿಯುತ್ತಿರುವವರನ್ನೋ, ಉದ್ದಾಮ ಮಹಿಳಾಸಾಹಿತಿಗಳನ್ನೋ ಕರೆತಂದು ಗೌರವಿಸಬೇಕಿತ್ತು; ಆದರೆ ನಾನು ಸಾಹಿತಿಯೂ ಅಲ್ಲ; ಅಂತಹ ಸಾಮಾಜಿಕ ಕಾರ್ಯಕರ್ತಳೂ ಅಲ್ಲ" ಎಂದು ಹೇಳಿಕೊಂಡರು. ಸಾಹಿತ್ಯಕ್ಕೂ ತನಗೂ ಯಾವ ಸಂಪರ್ಕವೂ ಇಲ್ಲವೆಂದು ಪ್ರಾಮಾಣಿಕತನದಿಂದ ಒಪ್ಪಿದಾಗ, ಅವರಲ್ಲಿ ಯಾವ ವಿಶಿಷ್ಟ ಯೋಗ್ಯತೆ ಇಲ್ಲವೆಂದು ಹೇಳುವುದು ಅಷ್ಟು ಸರಿಯಾಗಬಹುದೇ? ಮನುಯುಗದ ಮಾತು ಹಳೆಯದಾಯಿತು. ಆದರೆ ಅಣಗದಲ್ಲಿ ಪ್ರಾಮಾಣಿಕತೆಯು ದುರ್ಮಿಳ ವಸ್ತುವಾಗಿದೆ. ಅಂತಹ ಸಂದರ್ಭಗಳಲ್ಲಿ ಪ್ರಾಮಾಣಿಕತೆ ಇರುವುದೂ ಒಂದು ವಿಶಿಷ್ಟಯೋಗ್ಯತೆಯೇ! ಅವರೇ ಮತ್ತೆ ಮುಂದೆ ಹೇಳಿದರು: "ಹೀಗಿದ್ದರೂ ನೀವು ನನ್ನನ್ನು ಆರಿಸಿದುದು ನಿಮ್ಮ ಹಿರಿತನ ವಿಶ್ವಾಸ( ? ) ಗಳನ್ನು ತೋರಿಸುತ್ತದೆ." ಒಂದು ಪ್ರಶ್ನೆ ನನಗೆ ಬಗೆಹರಿಯದೆ ಹೋಯಿತು. ನನ್ನ ಮಿತ್ರರನ್ನೇನೋ 'ಪ್ರಾಮಾಣಿಕತೆ, ಒಂದು ಯೋಗ್ಯತೆ' ಎಂದು ಹೇಳಿ ಮಾತಿನಲ್ಲೇನೋ ಗೆದ್ದೆ; ಆದರೆ ಅದೇ ಮಾತಿಗೆ ಸೋತೆ. ಅವರು ಸಮ್ಮೇಲನದ ಕೊನೆಯ ದಿನ ಕೇಳಿಯೇ ಬಿಟ್ಟರು: "ಅಲ್ಲರೀ, ಅವರು ನೀವು ಹೇಳಿದ್ಹಾಂಗ ಯೋಗ್ಯತಾ ಸಂಪನ್ನರು ಅನ್ನು ಮಾತ ಒಪ್ಪಿದೆ. ಆದರೆ ಅವರಾಗಿಯೇ ನನಗೂ ಸಾಹಿತ್ಯಕ್ಕೂ ಸಮಾಜ-ಕಾರ್ಯಕ್ಕೂ ಯಾವುದೇ ಬಗೆಯ ಸಂಪರ್ಕವಿಲ್ಲವೆಂದು ಹೇಳಿದರು. ಅವರನ್ನು ಆರಿಸಿದುದು ಯಾರ ತಪ್ಪು?" ಆ ಮಾತಿಗೆ ನಾನು ಉತ್ತರ ಕೊಡದೆ ಹೋದರೂ, ನನ್ನ ಮನಸ್ಸೇ ನನಗೆ ಪ್ರಶ್ನೆ ಕೇಳಿತು. "ತಪ್ಪು ಯಾರದು?" "ತಪ್ಪು ಯಾರದು?" ಇನ್ನೊಂದು ಮನಸ್ಸು ಉತ್ತರಿಸಿತು. "ತಪ್ಪು ಸಾಮಾನ್ಯ ಜನತೆಯದಲ್ಲ; ಬುದ್ಧಿವಂತರದು!"

ಅಂತೂ ಗಾಡಿಯಲ್ಲಿ ಮರಿಸಮ್ಮೇಲನಾಧ್ಯಕ್ಷರ ಆಯ್ಕೆಯ ಬಗ್ಗೆ ತುರುಸಿನ ಚರ್ಚೆ ನಡೆಯಿತಾದರೂ, ಯಾರೂ ಅಸಮಾಧಾನದಪಟ್ಟು ಕೊಳ್ಳಲಿಲ್ಲ. ಮಾತು ಬೇಸರವಾದಾಗ ಅದೇ ಮಿತ್ರರ ಕೈಯಲ್ಲಿದ್ದ

ಒಂದು ಮಾಸಪತ್ರಿಕೆಯನ್ನು ಕೈಗೆತ್ತಿಕೊಂಡು ನೋಡಿದೆ; ಅದು ಕನ್ನಡ ಸಾಹಿತ್ಯಪರಿಷತ್ತಿನ ಪತ್ರಿಕೆಯಾದ “ಕನ್ನಡ ನುಡಿ” ಯ ವಿಶೇಷಸಂಚಿಕೆಯಾಗಿತ್ತು. ಪುಟಗಳನ್ನು ತೆರೆದೆ. ಕನ್ನಡದ ಕೆಲ ಹಿರಿಯ ಸಾಹಿತಿಗಳು, ಶ್ರೀರಂಗರ ಪರಿಚಯವನ್ನು ಮಾಡಿಕೊಟ್ಟಿದ್ದರು. ನೋಡಿ ಆಶ್ಚರ್ಯವೂ ಆಯಿತು. ಆಶ್ಚರ್ಯವಾದದ್ದು. ಅ. ನ. ಕೃ. ಅವರ ಲೇಖನದ ಬಗ್ಗೆ. “ಕನ್ನಡಮ್ಮನ ಗುಡಿ’ಯಲ್ಲಿ ಶ್ರೀರಂಗರಿಗೆ ನಾಟಕದ ಓನಾಮ ತಿಳಿಯದೆಂದು ಪ್ರಲಾಪಿಸಿದ ಅ. ನ. ಕೃ. ಅವರೇ ಈಗ ಶ್ರೀರಂಗರ ಪರಿಚಯ ಮಾಡಿಕೊಟ್ಟು ಹೊಗಳಿದ್ದನ್ನು ಕಂಡು ಆಶ್ಚರ್ಯಪಟ್ಟೆ; ಸಂತೋಷಪಟ್ಟೆ. ಆದರೆ ಅ. ನ. ಕೃ. ವ್ಯಕ್ತಪಡಿಸಿದ ಈ ಎರಡು ಭಿನ್ನ ಭಿನ್ನ ಅಭಿಪ್ರಾಯಗಳಲ್ಲಿ ಯಾವುದು ನಿಜ? ಈ ಎರಡು ಅಭಿಪ್ರಾಯಗಳು ಒಂದಕ್ಕೊಂದು ತೀರ ಭಿನ್ನವಾಗಿರುವುವು. ಹಿಂದೊಂದು ಸಲ ಶ್ರೀರಂಗರು ಧಾರವಾಡದಲ್ಲಿ, ಇದೇ ತಮ್ಮ ‘ಆರ್. ವ್ಹಿ. ಜಹಗೀರದಾರ’ ಎಂಬ ಹೆಸರನ್ನು ಬದಲಾಯಿಸಿ ಆದ್ಯ ರಂಗಾಚಾರ್ಯ-ರಾದ ಕಾಲಕ್ಕೆ ಭಾಷಣ ಮಾಡುವಾಗ ಹೇಳಿದ್ದರು: “ನನಗೆ ಎರಡು ಹೆಸರುಗಳಾದರೂ ನಾಲಗೆ ಒಂದೇ” ಎಂದು. ಆದರೆ ಅ. ನ. ಕೃ.ರಿಗೆ ಹೆಸರು ಒಂದೇ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ; ಆದರೆ ಅವರು ತೀರ ಬೇರೆ ತೆರನಾದ ಅಭಿಪ್ರಾಯವನ್ನು ವ್ಯಕ್ತಪಡಿಸಿ-ದಾಗ, ಅವರ ನಾಲಗೆಯ ಸಂಖ್ಯೆ ತೀರ ಸಾಮಾನ್ಯಮನುಷ್ಯನಿಗೆ ತಿಳಿಯದಂತಾಗುವುದು. ‘ಆದರೂ ಮನಃಪರಿವರ್ತನೆ ಏಕಾಗಿರ-ಬಾರದು?’ ಎಂದು ಲೇಖನವನ್ನೋದಿದೆ. ಕೆಲ ಭಾಗಗಳನ್ನೋದಿ-ದಾಗ ಮತ್ತೆ ಅಸಮಾಧಾನವೇ ಆಯಿತು! ಅಲ್ಲಿ ಮತ್ತೆ ಅ. ನ. ಕೃ. ಅವರ ಅಹಂಭಾವದ ದರ್ಶನವಾಯಿತು. ಆ ಅವತರಣಿಕೆಯ ಪುಟ ನೋಡಿದರೆ ತಿಳಿಯುತ್ತದೆ....ಅದರ ಹಿಂದೆ ಅಡಗಿದ ಅಹಂಕಾರ ಮನೋಭಾವನೆ:

೧೯೩೦ರಲ್ಲಿ ಶ್ರೀರಂಗರು ತಾವು ಬರೆದ ಮೂರು ನಾಟಕಗಳನ್ನು ಪಂಡಿತ ತಾರಾನಾಥರ ಕಡೆಗೆ ಮುನ್ನುಡಿ ಬರೆಯಲು ಕೊಟ್ಟಾಗ, ರಸಋಷಿ ಪಂ. ತಾರಾನಾಥರು ಆ ಹಸ್ತಪ್ರತಿಗಳನ್ನು ಅ. ನ. ಕೃ. ರ ಕೈಗಿರಿಸಿ, ತಮ್ಮ ಅಭಿಪ್ರಾಯ ಕೊಡಲು ಕೇಳಿದರಂತೆ. ತಾವು ಅವುಗಳನ್ನು ಓದಿ, ಸದಭಿಪ್ರಾಯ ವ್ಯಕ್ತಪಡಿಸಿದ ಮೇಲೆ, ತಾರಾ-ನಾಥರು ತಾವು ಬರೆದ ಮುನ್ನುಡಿ ತೋರಿಸಿದರಂತೆ

ಈ ಮಾತಿನ ಸತ್ಯಾಸತ್ಯತೆಯ ಬಗ್ಗೆ ಯಾವ ವಿವೇಚನೆಯೂ ಬೇಕಿಲ್ಲ. ಹದಿನಾರಾಣೆ ನಿಜವಿರಲೂ ಬಹುದು; ಆದರೆ ಈ ಮಾತು ಇಂದಿನ ಪರಿಚಯದ ಕಾಲಕ್ಕೆ ಅನಾವಶ್ಯಕವಾಗಿತ್ತು.

ಸರಿ, ಕನ್ನಡನುಡಿಯನ್ನು ಮುಚ್ಚಿದೆ. ಗಾಡಿಯ ಬಾಗಿಲು ತೆರೆದ ಸಪ್ಪಳ ಕೇಳಿಸಿತು. ಆಗಲೇ ರಾಯಚೂರ ನಿಲ್ದಾಣ ಬಂದಿತ್ತು.

ಮಧ್ಯಾಹ್ನ ಮೂರುಗಂಟೆಯ ಸುಮಾರಿಗೆ ‘ತಾರಾನಾಥ ನಗರ’ವನ್ನು ತಲುಪಿದೆ. ಅಲ್ಲಿ ಮೊಟ್ಟಮೊದಲಿಗೆ ನನ್ನ ಒಬ್ಬ ಮಿತ್ರರು ಭೇಟಿಯಾದರು. ಅವರು “ನೀವು ದುರ್ದೈವಿಗಳು” ಎಂದರು. ಆಶ್ಚರ್ಯದಿಂದ “ಏಕೆ?” ಎಂದೆ— “ಮುಂಜಾನೆಯ ಅಧ್ಯಕ್ಷರ ಮೆರವಣಿಗೆಯನ್ನು ನೀವು ನೋಡಲೇ ಬೇಕಿತ್ತು. ಯಾವ ಸಮ್ಮೇಲನದಲ್ಲಿಯೂ ಈ ಬಗೆಯ ಮೆರವಣಿಗೆಯಾಗಿರಲಿಲ್ಲ.”

ನನ್ನ ಕುತ್ತಿಗೆಯ ಶಿರಗಳು ಬಿಗಿದು ಬಂದುವು. ಶ್ರೀರಂಗರು ಪ್ರಾಧ್ಯಾಪಕ ವೃತ್ತಿಗೆ ಶರಣುಹೊಡೆದ ಕಾಲ. ಅವರ ಪತ್ನಿ ಬಹು ದಿನ ಹಾಸಿಗೆ ಹಿಡಿದಿದ್ದರು. ನೌಕರಿ ಇಲ್ಲ. ಅವರು ಪಟ್ಟ ಕಷ್ಟ-ಗಳನ್ನು ಕಣ್ಣಾರೆ ಕಂಡಿದ್ದೆ. ಹಾಗೆ ಸಹಿಸಲಸಾಧ್ಯವಾದ ಕಷ್ಟ-ಗಳನ್ನು ಸಹಿಸಿದ ಶ್ರೀರಂಗರನ್ನು ವೈಭವದ ಮೆರವಣಿಗೆಯಲ್ಲಿ ಕಾಣ-ಬೇಕಿತ್ತಲ್ಲಾ—ಎಂದು ಮನಸ್ಸು ಕಾತರಿಸಿತು. ನಾನು ನೋಡದಿದ್ದರೂ ನನ್ನ ಮಿತ್ರರು ಅದನ್ನು ರಸವತ್ತಾಗಿ ವರ್ಣಿಸಿದರು.

೩ ಗಂಟೆಗೆಂದು ಗೊತ್ತಾಗಿದ್ದ ಸಮ್ಮೇಲನದ ಕಾರ್ಯಕ್ರಮ-ಗಳು ಕೊಂಚ ತಡವಾಗಿಯೇ ಪ್ರಾರಂಭವಾಗುತ್ತ, ಸ್ವಾಗತಗೀತದಿಂದ ಸಮ್ಮೇಳನ ಪ್ರಾರಂಭವಾಯಿತು. ಸಭಾಗೃಹ ಕಿಕ್ಕಿರಿದು ತುಂಬಿತ್ತು. ರಾಯಚೂರ ನಾಗರಿಕರ ಕರ್ತವ್ಯಪರಾಯಣತೆ, ಸಾಹಿತ್ಯಭಕ್ತಿ ಅಲ್ಲಿ ಒಡೆದು ಕಾಣುತ್ತಿದ್ದುವು. ಹೈದರಾಬಾದಿನ ಮುಖ್ಯಮಂತ್ರಿಗಳಿಗೆ ಕೆಲವೊಂದು ಅನಿವಾರ್ಯ ಕಾರಣಗಳ ಮೂಲಕ ಬರಲಾಗದ್ದರಿಂದ, ಇನ್ನೊಬ್ಬಮಂತ್ರಿಗಳಾದ ಡಾ. ಮೇಲುಕೋಟೆಯವರಿಂದ ಸಮ್ಮೇಳನದ ಉದ್ಘಾಟನವಾಯಿತು. ಅದಾದ ಬಳಿಕ, ಹಿಂದಿನ ಸಲದ ಅಧ್ಯಕ್ಷರಾದ ಶ್ರೀ. ಶಿವರಾಮ ಕಾರಂತರು ಹೊಸ ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟರು.

ಅಧ್ಯಕ್ಷರಾದ ಶ್ರೀರಂಗರು ಭಾಷಣಕ್ಕಾಗಿ ಎದ್ದುನಿಂತರು. ಆ ವರೆಗೂ ಪೆಂಡಾಲಿನಿಂದ ಒಳಹೊರಗೆ ಆಡ್ಡಾಡುವ ಜನರೆಲ್ಲ ಒಂದೆಡೆ ಕುತೂಹಲಿಗಳಾಗಿ ಕುಳಿತರು. ಅಧ್ಯಕ್ಷ ಶ್ರೀರಂಗರು ಹೇಗೆ ಮತ್ತು ಏನು ಮಾತನಾಡಿದರು ಎಂಬ ಪ್ರಶ್ನೆಯನ್ನು ಕೇಳಲೇಬೇಕಾಗಿಲ್ಲ. ಮೊದಲು ಪ್ರಾಸ್ತಾವಿಕವಾಗಿ ಸಮ್ಮೇಲನದ ಬಗ್ಗೆ ಮಾತನಾಡಿ, ಕನ್ನಡ ಪ್ರಾಂತದ ಬಗ್ಗೆ “ಐವತ್ತು ವರುಷಗಳ ಹಿಂದೆ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಸಮಿತಿಯಲ್ಲಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದರು. ಆ ಗೊತ್ತುವಳಿಯೆಂದರೆ ಆಡಳಿತ, ಶಿಕ್ಷಣ ಸಂಸ್ಕೃತಿಗಳ ಅನುಕೂಲತೆ ಮತ್ತು ರಕ್ಷಣೆಗಾಗಿ ಮುಂಬಯಿ, ಮದರಾಸು, ಮೈಸೂರು ಮೊದಲಾದ ಭಾಗಗಳ ಎಲ್ಲ ಕನ್ನಡ ಜಿಲ್ಲೆ-ಗಳನ್ನು ಒಂದೇ ಪ್ರಾಂತವನ್ನಾಗಿ ಮಾಡಬೇಕೆಂದು. ತಮ್ಮ ಗೊತ್ತು-ವಳಿ ತಾತ್ತ್ವಿಕ ದೃಷ್ಟಿಯಿಂದ ಎಷ್ಟು ಆಗತ್ಯ ಮತ್ತು ಮಹತ್ತ್ವ-ದ್ದಾಗಿತ್ತೋ ಅಷ್ಟೇ ಕಾರ್ಯರೂಪದಲ್ಲಿ ಬರಲು ದುಃಸ್ಸಾಧ್ಯವಾಗಿ-ತ್ತೆಂಬುದನ್ನು ಆ ಸಾಧುಹೃದಯದ ಸಾಹಿತಿಗಳು ಅರಿತಿದ್ದರೋ ಇಲ್ಲವೋ! ಆದರೆ....ದೇಶವು ಸ್ವತಂತ್ರವಾದೊಡನೆ, ತಮ್ಮ ಇಚ್ಛೆ ನೆರ-ವೇರಿತೆಂದು ಅವರೆಲ್ಲರಿಗೂ ಅಭಿಮಾನವೆನಿಸಬಹುದಲ್ಲವೇ?....”ಎಂದು ಹೇಳಿ, ಮುಂದೆ ನಿರ್ಮಾಣವಾಗಲಿರುವ ಸಂಯುಕ್ತಕರ್ನಾಟಕಕ್ಕೆ ಮೈಸೂರೆಂದು ಹೆಸರಿಸಬೇಕೆನ್ನುವ ಕೆಲವರ ಹುರುಳಿಲ್ಲದ ಹಟವನ್ನು ಗಮನಿಸಿ “ಮಹಾಭಾರತ ಕಾಲದಿಂದ ನಡೆದು ಬಂದ ‘ಕರ್ನಾಟಕ’ ಎನ್ನಿರಿ, ಇತ್ತೀಚಿನ ಕಾಲದಿಂದ ನಡೆದು ಬಂದ ‘ಮೈಸೂರು’ ಎನ್ನಿರಿ–

ಹೆಸರು ಯಾವುದಾದರೂ ರಾಜ್ಯ ಕನ್ನಡಿಗರದೇ ಅಲ್ಲವೇ? ಗಡಿ ನಿಂತರೂ ದೇಶ ನಮ್ಮದೇ ಅಲ್ಲವೇ?'' ಎಂದು ಹೇಳಿದರು. ಮೈಸೂರೆಂದೇ ಹೆಸರಿಡಬೇಕೆಂದು ಹಟತೊಟ್ಟ ಕೆಲವರು ಈ ಮಾತಿಗೆ ನಿರುತ್ತರರಾಗಲೇಬೇಕು. 'ಕರ್ನಾಟಕ' ಹೆಸರಿನ ಹಳೆಯತನವನ್ನು ಅವರು ಒಂದೇ ವಾಕ್ಯದಲ್ಲಿ ಮನದಟ್ಟಾಗುವಂತೆ ಪ್ರತಿಬಿಂಬಿಸಿದರು. ಕರ್ನಾಟಕದಲ್ಲಿಯ ಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಪರಿಸ್ಥಿತಿಗಳ ಮೇಲೆ ಶ್ರೀರಂಗರು ಮಾತನಾಡಿ ಪರಿಹಾರವನ್ನು ಸೂಚಿಸಿದರು. 'ಹವ್ಯಾಸ ಸಾಹಿತಿಗಳು ಹೆಚ್ಚಾದ ಇಂದಿನ ಕಾಲದಲ್ಲಿ ಸಾಹಿತ್ಯಪ್ರಗತಿಯು ಸಾಧ್ಯವೇ?' ಎಂದು ಚರ್ಚೆಮಾಡುತ್ತ "ಇಂದು ಸಾಹಿತ್ಯದ ಮಟ್ಟ ನಿಂತಲ್ಲಿಯೇ ನಿಂತಿದ್ದರೆ ಒಂದು ವೇಳೆ ಕೆಳಮಟ್ಟಕ್ಕೆ ಇಳಿದಿದ್ದರೆ, ಅದಕ್ಕೆ ಯೋಗ್ಯತೆ ಇಲ್ಲದೆ ಕೇವಲ ಹಟದಿಂದ ಬರೆಯುತ್ತಿರುವ ಹವ್ಯಾಸ ಸಾಹಿತಿಗಳು ಹೆಚ್ಚಾಗಿ ಕಾರಣರಾಗಿದ್ದಾರೆ" ಎಂದು ಹೇಳಿದರು. ಸಾಹಿತ್ಯದ ಪ್ರಗತಿಗೆ ಸಂಸ್ಕೃತಭಾಷೆಯ ಅಭ್ಯಾಸದ ಅಗತ್ಯವೆಷ್ಟಿದೆ ಎಂಬುದನ್ನು ಅವರು ವಿವೇಚಿಸಿದರು. ಕನ್ನಡ ಮತ್ತು ಸಂಸ್ಕೃತ ಭಿನ್ನ ಸಂಸ್ಕೃತಿಯ ಭಾಷೆಗಳಾಗಿದ್ದರೂ, ಅವು ಒಂದನ್ನೊಂದು ಹೊಂದಿಕೊಂಡು ಹೇಗೆ ಬೆಳೆದಿವೆಯೆಂಬುದನ್ನೂ ಸೋದಾಹರಣವಾಗಿ ತಿಳಿಸಿದರು. ಸಂಸ್ಕೃತದ ಅಗತ್ಯದ ಬಗ್ಗೆ ಕನ್ನಡಿಗರಲ್ಲಿ ಆಂಡಯ್ಯನ ಕಾಲದಿಂದಲೂ ಭಿನ್ನಾಭಿಪ್ರಾಯವಿವೆ; ಆದರೆ ಅಭಿಪ್ರಾಯ ಭಿನ್ನವಾದರೂ ಸಂಸಾರವು ಕೂಡಿಯೇ ನಡೆಯುವುದು ಅನಿವಾರ್ಯವೆಂಬ ಸಾಂಪ್ರದಾಯಿಕ ಗಂಡ-ಹೆಂಡತಿಯ ಜೊತೆಯಂತೆ, ಸಂಸ್ಕೃತ ಕನ್ನಡಗಳ ಜೊತೆ ಇದೆ—ಎಂಬುದನ್ನು ತಿಳಿಸಿ ಶ್ರೀರಂಗರು, ಮುಂದೆ ಇಂದಿನ ಪ್ರಕಾಶನ ಸಂಸ್ಥೆಗಳು, ಶೋಧಸಾಹಿತ್ಯ ಇವುಗಳ ಬಗೆಗೂ ಮಾರ್ಮಿಕವಾಗಿ ಮಾತನಾಡಿದರು. ನಿಯತಕಾಲಿಕ ಪ್ರಕಾಶನಸಂಸ್ಥೆಗಳು, ಎಂತಹವೋ ಪುಸ್ತಕಗಳನ್ನು ಅಚ್ಚುಹಾಕಿಸಿ, ಜಾಹೀರಾತಿನ ವಿಮರ್ಶೆಯನ್ನು ಬರೆಸಿ ಬಾಳುತ್ತಿರುವುದು ಸುಸಂಸ್ಕೃತಿಗೇಡಿತನದ ಲಕ್ಷಣವಾಗಿದೆ ಎಂದು ಹೇಳಿ, ಇಂತಹ ಪರಿಸ್ಥಿತಿಯನ್ನು ಹೊಡೆದು ಹಾಕುವುದಕ್ಕಾಗಿ ಒಂದು ಪರಿಹಾರವನ್ನು ಸೂಚಿಸಿದರು. ಹಾಗೆಯೇ ಸಾಹಿತಿಯ ಬಗೆಗೂ ಕೆಲ ವಿಚಾರಗಳನ್ನು ಮಂಡಿಸಿದರು: "ಸಾಹಿತಿಯ ಹೃದಯ ತಳಮಳಿಸುವುದು ಇಡಿಯ ಲೋಕಕ್ಕಾಗಿ; ಕೇವಲ ನೆರೆಮನೆಯ ಬಾಲವಿಧವೆಗಾಗಿ ಅಲ್ಲ ....ಸಾಹಿತಿಯ ಶೋಧ ಪ್ರಾಮಾಣಿಕಸತ್ಯಕ್ಕಾಗಿ, ಪೇಟೆಯ ಪ್ರಚಾರಕ್ಕಾಗಿ ಅಲ್ಲ!" ಎಂದು ಹೇಳಿದರು

ಆಳವಾದ ಅಭ್ಯಾಸ, ಕನ್ನಡಭಾಷೆ-ಸಾಹಿತ್ಯಗಳ ಮೇಲಿನ ಉತ್ಕಟ ಪ್ರೇಮ, ಅವರ ಪ್ರಗತಿಯ ಬಗೆಗೆ ಇರುವ ಸದಭಿಲಾಷೆ, ಇವು ಶ್ರೀರಂಗರ ಭಾಷಣದಲ್ಲಿ ವ್ಯಕ್ತವಾಗುತ್ತಿದ್ದುವು ಅವರು ಭಾಷಣವನ್ನು ಮುಗಿಸಿದಾಗ, 'ಮುಗಿಯಿತೇ?' ಎಂದು ಕೇಳುವಂತಾಯಿತು. ಇನ್ನೂ ಕೇಳುತ್ತ ಕುಳಿತುಕೊಳ್ಳಬೇಕೆನಿಸುವಂತಿತ್ತು ಅವರ ಭಾಷಣ.

ಅಧ್ಯಕ್ಷರ ಭಾಷಣನದಂತರ ವಿಷಯನಿಯಾಮಕ ಸಮಿತಿಯೊಂದನ್ನು-ನಿರ್ಮಿಸುವ ಕಾರ್ಯಕ್ರಮ ನಡೆಯಿತು. ಅಂದೇ ರಾತ್ರಿ ಬಾಗಿಲುಕೋಟೆಯ ಶ್ರೀವಾಸುದೇವ ವಿನೋದಿನೀ ನಾಟ್ಯಸಂಘದವರು, ಶ್ರೀರಂಗರ 'ಜರಾಸಂಧಿ' ನಾಟಕವನ್ನು ಚೆನ್ನಾಗಿ ಅಭಿನಯಿಸಿದರು. ಜರಾಸಂಧಿ ನಾಟಕದ ನಂತರ, ಶ್ರೀ. ಬಸವರಾಜ ರಾಜಗುರುಗಳ ಸಂಗೀತವಾಗುವುದಿತ್ತು; ಆದರೆ ಅಂದು ಅವರು ಬಾರದ್ದರಿಂದ, ಹೈದರಾಬಾದಿನ ನಾಟ್ಯಕಲಾನಿಕೇತನದವರು 'ನಮ್ಮ ಹಳ್ಳಿ' ನಾಟಕವನ್ನು ಆಡಿ ತೋರಿಸಿದರು. ಎರಡನೆಯ ದಿನವೇ ನಾಟ್ಯಗೋಷ್ಠಿ ಮತ್ತು ಮಹಿಳಾಗೋಷ್ಠಿಗಳು ನಡೆದುವು. ನಾಟ್ಯಗೋಷ್ಠಿಯ ಅಧ್ಯಕ್ಷರು ಇಂದಿನ ಕಾಲದಲ್ಲಿ ನಾಟಕಗಳು ಯಾವ ಪರಿಸ್ಥಿತಿಯಲ್ಲಿವೆಯೆಂಬುದನ್ನು ಹೇಳಿದರು. ಶ್ರೀ. ಸಿದ್ದಯ್ಯ ಪುರಾಣಿಕ, ಶ್ರೀ. ಆರ್. ಗುರುರಾಜ, ಶ್ರೀ ಮಾ. ನಾ. ಚೌಡಪ್ಪ, ಶ್ರೀ. ಎನ್ಕೆ, ಶ್ರೀ ಎ. ಎನ್. ಸುಬ್ಬರಾವ್ ಅವರು ನಾಟಕದ ವಿಷಯವಾಗಿ ಮಾತನಾಡಿದರು. ನಾಟಕಗೋಷ್ಠಿಯು ಸಮಾಪ್ತವಾಗುವ ಸಮಯಕ್ಕೆ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಬಂದು—ಕನ್ನಡದಲ್ಲಿಯೇ ಮಾತನಾಡಿ, ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ಶುಭವನ್ನು ಕೋರಿದರು.

ಮಹಿಳಾಗೋಷ್ಠಿ ಆಗಬೇಕಾದಷ್ಟು ಯಶಸ್ವಿಯಾಗಲಿಲ್ಲವೆಂದು ಅಸಮಾಧಾನದಿಂದ ಹೇಳಬೇಕಾಗುವುದು. ಮೊದಲು ಯೋಜಿಸಿದ ವಕ್ತಾರರು ತಮ್ಮ ಅಚ್ಚಾದ ಭಾಷಣಗಳನ್ನು ಓದಿದನಂತರ, ಕೆಲವು ಜನ ತರುಣಲೇಖಿಕೆಯರೂ ಮಾತನಾಡಿದರು. ಒಬ್ಬ ತರುಣ ಲೇಖಿಕೆ "ಗಂಡುಸುರು ಬರೆದುದಕ್ಕಿಂತಲೂ ಹೆಣ್ಣುಮಕ್ಕಳು ಹೆಚ್ಚಾಗಿ ಬರೆಯಲೇಬೇಕು" ಎಂದರು. ಹೆಚ್ಚೆಚ್ಚು ಬರೆಯುವುದೇ ಸಾಹಿತ್ಯದ ಒಳ್ಳೆಯ ಲಕ್ಷಣವೆಂದು ಅವರು ತಿಳಿದಿದ್ದರೋ ಏನೋ! ಅಂತೂ ಮಹಿಳಾಗೋಷ್ಠಿ ನಡೆದ ಶಾಸ್ತ್ರವೂ ಆಯಿತು. ಯಾವ ವಕ್ತಾರರ ಭಾಷಣವೂ ಪದ್ಯದ ಪರಿಸ್ಥಿತಿಯ ಅಭ್ಯಾಸದಿಂದ ಪರಿಪೂರ್ಣವಾಗಿರಲಿಲ್ಲ. ಆಮೇಲೆ ನಡೆದ ಬಹಿರಂಗ ಅಧಿವೇಶನದಲ್ಲಿ ಕೆಲವು ಮುಖ್ಯ ಗೊತ್ತುವಳಿಗಳು ಪಾಸಾದುವು ನೆರೆನಾಡಾದ ಮಲೆಯಾಳದ ಸಾಹಿತಿ ಶ್ರೀ. ನಾಯರರು ತಮ್ಮ ಭಾಷೆ-ಸಾಹಿತ್ಯದ ಬಗ್ಗೆ ಮಾತನಾಡಿದರು.

ಅಂದೇ ರಾತ್ರಿ ಧಾರವಾಡದ ನಾಟ್ಯವಿಲಾಸಿಸಂಘದವರು ಶ್ರೀರಂಗರ ನಾಟಕ 'ಶೋಕಚಕ್ರ'ವನ್ನು ಅಭಿನಯಿಸಿದರು. ನಾಟಕ ಎಲ್ಲರ ಮನಸ್ಸನ್ನು ಹಿಡಿಯಿತು. ಇನ್ನೂ ಹೆಚ್ಚು ಚೆನ್ನಾಗಿ ಅಭಿನಯಿಸಿ ತೋರಿಸಬಹುದಾಗಿತ್ತು; ಆದರೆ ಮನೋರಂಜನ ವಿಭಾಗದ ಕಾರ್ಯದರ್ಶಿಗಳಿಗೆ, ಶ್ರೀ. ಬಸವರಾಜ ರಾಜಗುರುಗಳ ಸಂಗೀತದ ಕಾರ್ಯಕ್ರಮದ ಕಡೆಗೇ ಹೆಚ್ಚು ಒಲವು ಇದ್ದುದರಿಂದ, 'ಶೋಕಚಕ್ರ' ನಾಟಕದ ನಟರಿಗೆ, ನಡುವಿನ ಮಾತುಗಳನ್ನು ಹಾರಿಸಿ, ಬೇಗ ಮುಗಿಸಿರಿ—ಎಂದು ಒತ್ತಾಯ ತರತೊಡಗಿದ್ದುದನ್ನು ನಾನು ಕಂಡೆ. ಮನಸ್ಸಿಗೆ ಅಸಮಾಧಾನವಾಯಿತು. ನಾಟಕ ಸಂಪೂರ್ಣವಾಗಿಯೇ ಅಭಿನಯಿಸಲ್ಪಟ್ಟಿತು; ಆದರೂ ಒಂದು ಬಗೆಯ ಖೇದ—ನಾಟಕದ ಬಗೆಗಲ್ಲ— 'ನಾಟಕದ ದೃಶ್ಯಗಳನ್ನು ಹಾರಿಸಿ ಬೇಗನೆ ಮುಗಿಸಿ' ಎನ್ನುವ ಮಹನೀಯರ ಸಲುವಾಗಿ! ಇಂದಿನ ನಾಟಕಗಳು ಇಂತಹರ ನಡುವೆ ನಿಂತು ಬಾಳಬೇಕಾಗಿದೆ.

*

[೩೦ನೆಯ ಪುಟ ನೋಡಿರಿ]

# ಹಾವು!

( ಒಂದು ಹಾಸ್ಯಕಥೆ )

ಶ್ರೀ. ಕೆ. ಅಶ್ವತ್ಥನಾರಾಯಣರಾಯರು, ಬನಾರಸ

卐

**ಇಂದಿನ ಸುಶಿಕ್ಷಿತ ನಾಗರಿಕರ ಸ್ವಭಾವದ ವಿಡಂಬನೆಯ ಚಿತ್ರವಿದು. ಯಾವುದೇ ಗಂಡಾಂತರ ಪ್ರಸಂಗದಲ್ಲಿ, ಧೈರ್ಯದಿಂದ ನುಗ್ಗಿ ಪ್ರತಿಕಾರ ಮಾಡುವ ಯೋಗ್ಯತೆಯಿರದಿದ್ದರೂ, ಆ ಗಂಡಾಂತರ ಪ್ರಸಂಗದ ಮೇಲೆ ಕೂಲಂಕಷವಾದ ತರ್ಕವನ್ನು ನಡೆಸುವುದನ್ನು ಮಾತ್ರ ಇವರು ಚೆನ್ನಾಗಿ ಬಲ್ಲರು.**

卐

" ಆ..........!! "

ಹೆಂಗಸಿನ ಚೀತ್ಕಾರವನ್ನು ಕೇಳಿ, ಓದುತ್ತಿದ್ದ ಪುಸ್ತಕವನ್ನು ಬಿಸಾಡಿ ಹೊರಗಡೆಗೆ ಓಡಿದೆ. ನಮ್ಮ ನೆರೆಯ ಪ್ರೊಫೆಸರ್ ಲಕ್ಷ್ಮಿಯವರ ಹೆಂಡತಿ, ಗಾಳಿಯಲ್ಲಿ ಹಾರಾಡುತ್ತಿದ್ದ ಸೆರಗನ್ನೂ ಗಮನಿಸದೆ, ಅವರ ಮನೆಯ ಕಡೆಗೆ ಓಡಿಹೋಗುತ್ತಿದ್ದರು.

" ಹಾವು! ಹಾವೂ!! " ಓಡುತ್ತಲೇ ಕೂಗಿಕೊಂಡರು.

ಕೇಳದೆಯೇ ನನಗೆ ಉತ್ತರ ದೊರೆಯಿತು. ತಕ್ಷಣವೇ ನನ್ನ ಮನೆಯೊಳಗೆ ಹೋಗಿ, ನನ್ನ ಮಿರ್ಜಾಪುರದ ಲಾಠಿಯನ್ನು ತೆಗೆದು-ಕೊಂಡು ಮತ್ತೆ ಹೊರಗಡೆಗೆ ಧಾವಿಸಿದೆ ಅಷ್ಟು ಹೊತ್ತಿಗೆ ಪ್ರೊ. ಲಕ್ಷ್ಮಿಯವರೂ ಅವರ ಸೋದರಳಿಯ ದತ್ತನೂ ಹೊರಗೆ ಬಂದಿದ್ದರು. ಪ್ರೊಫೆಸರರ ಕೈಯಲ್ಲಿ ದೊಡ್ಡ ಗಳುವಿತ್ತು. ದತ್ತನ ಕೈಯಲ್ಲಿ ಮಂಚದ ಉದ್ದ ಪಟ್ಟಿ.

" ಎಲ್ಲಿ? " ನಾನು ಮುಂದಿನ ಮೆಟ್ಟಿಲನ್ನಿಳಿಯುತ್ತ ಕೇಳಿದೆ.

" ನಿಂಬೆ ಗಿಡದ ಕೆಳಗಂತೆ. ಕಾಯಿ ಕೀಳೋದಕ್ಕೆ ಹೋದೋಳು ತುಳಿದೇ ಬಿಡ್ತಾ ಇದ್ದಳಂತೆ " ಪ್ರೊಫೆಸರು ಹೇಳುತ್ತ ನಿಂಬೆಯ ಗಿಡದ ಕಡೆಗೆ ಬಂದರು. ನಾನೂ ಹೋದೆ.

ಬಗ್ಗಿ ನೋಡಿದೆವು— ದೂರದಿಂದಲೇ.

" ಓ, ಅದೇ! " ಪ್ರೊ. ಲಕ್ಷ್ಮಿಯವರು ಒಂದು ಹೆಜ್ಜೆ ಹಿಂದಿಡುತ್ತ ಹೇಳಿದರು.

" ಅದೇ! ಆ ದಿನ ಕಂಡದ್ದು—! ಒಂದೋ ಎರಡೋ? " ನನ್ನ ಕುತೂಹಲ ಮುಂದೆ ಹೆಜ್ಜೆ ಇಡಿಸಿತು. ಆದರೆ ಲಕ್ಷ್ಮಿಯವರು ನನ್ನನ್ನು ಹಿಂದಕ್ಕೆಳೆದುಕೊಂಡು " ಹುಷಾರಾಗಿರಿ! " ಎಂದು ತಗ್ಗುಧ್ವನಿಯಲ್ಲಿ ಹೇಳಿದರು: " ಒಂದೇ ಅಂತ ಕಾಣುತ್ತೆ ಇವತ್ತು "

ಎಷ್ಟು ಬಿರುಗಣ್ಣು ಬಿಟ್ಟರೂ, ಕಣ್ಣನ್ನು ಕೊಕ್ಕರಿಸಿದರೂ ಗಿಡದ ಕೆಳಗೆ ಪೊದೆಯ ಹುಲ್ಲಿನ ಮುಚ್ಚಿನಲ್ಲಿ ನನಗೇನೂ ಕಾಣಿಸು-ತ್ತಿರಲಿಲ್ಲ.

" ನೋಡಿ, ನೋಡಿ, ಅಲ್ಲಿ–ಆ ಹಳದಿ ಎಲೆಯ ಹತ್ತಿರ! "

ಇಬ್ಬರೂ ಬಗ್ಗಿದೆವು. ಹುಂ, ಈಗ ಸ್ವಲ್ಪ ಕಾಣಿಸಿತು. ಹಳದಿ ಕಪ್ಪು ಸರಪಳಿ ಪಟ್ಟೆ, ರಟ್ಟೆಯ ಗಾತ್ರ, ಮೆಲ್ಲಗೆ ಸರಿಯುತ್ತಿತ್ತು!

" ಹೂಂ, ಅದೇ-ಒಂದೇ ಅಂತ ಕಾಣುತ್ತೆ " ದತ್ತನೂ ಹೇಳಿದ.

' ಅದೇ ' ಅಂದರೆ, ಅದಕ್ಕೆ ನಾಲ್ಕು ದಿನಗಳ ಹಿಂದಿನ ಘಟನೆ-ಯನ್ನು ಹೇಳಬೇಕು.

ಆ ಬೆಳಗ್ಗೆ ಲಕ್ಷ್ಮಿಯವರು ಬಾಗಿಲು ತಟ್ಟಿ ನನ್ನನ್ನು ಕರೆದು " ಭಾರಿ ಹಾವು! ನಿಮ್ಮ ' ಸೋಕ್‌ಪಿಟ್ ' ಇದೆಯಲ್ಲ— ಅದರ ಬಳಿ ಕಂಡಿತು. ಮಹಡಿಯ ಮೇಲಿನಿಂದ ನೋಡಿದೆ. ಎಷ್ಟುದ್ದ ಅಂತೀರಿ! ಇಲ್ಲಿಂದ ಅಲ್ಲಿಯವರೆಗೆ " ಎಂದು ಕೈಯಿನ ಗಳುವಿನಿಂದ ನೆಲವನ್ನು ಅಲ್ಲಿ ಇಲ್ಲಿ ಬಡಿದು, ಏಳೆಂಟು ಅಡಿ ಉದ್ದವನ್ನು ಗುರುತಿಸಿದರು. ಇಂದಿ-ನಂತೆಯೇ ಅಂದೂ ನಾನು ದೊಣ್ಣೆಧಾರಿಯಾಗಿ ಅವರೊಡನೆ ಹೋದೆ. " ಎಲ್ಲೋ ಆ ಮಣ್ಣಿನಲ್ಲಿ ಹೋಗಿದೆ....ಅ! ನೋಡಿ! ತಲೆ ಹೊರಗೆ ಹಾಕಿದ್ದು ಕಂಡಿತೆ? "

ಆಗಲೂ ನನಗೆ ಕಂಡಿರಲಿಲ್ಲ. ಅವರು ನಾಲ್ಕು ಬಾರಿ ಕೇಳಿದ ಮೇಲೆ 'ಹುಂ' ಎಂದು ತಲೆಯಾಡಿಸಿದ್ದೆ. ಎಷ್ಟೋ ಹೊತ್ತು ಕಾಯ್ದೆವು. ಪ್ರಯೋಜನವಾಗಲಿಲ್ಲ. ನಾನು ಒಳಗೆ ಬಂದ ಐದು ನಿಮಿಷದೊಳಗಾಗಿ ನನಗೆ ಮತ್ತೆ ಕರೆ ಬಂದಿತು.

" ಬನ್ನಿ, ಬನ್ನಿ. ಈಗ ನಿಂಬೇ ಗಿಡದ ಕೆಳಗೆ ಕಂಡೆ. ಅಲ್ಲೇ ಇದೆ. ದತ್ತ ನೋಡ್ತಾ ಇದ್ದಾನೆ. "

ಆಗ ಈಗಿನಂತೆಯೇ ಹಾವು ಕಂಡಿತ್ತು. ಆದರೆ ಲಕ್ಷ್ಮಿಯವರಿಗೆ ಎರಡು ಕಂಡಿದ್ದುವು.

" ಹುಂ, ಎರಡಿವೆ. ಬೇರೆ-ಬೇರೆ ಬಣ್ಣ. ಗೋಧಿ ಬಣ್ಣ, ಹಳದಿ ಬಣ್ಣ " ಎಂದರು.

ಇಷ್ಟರಲ್ಲೇ ದಾರಿಯಲ್ಲಿ ಹೋಗುತ್ತಿದ್ದ ಹಳ್ಳಿಯುವನೊಬ್ಬ ಬಂದ. ಲಕ್ಷ್ಮಿಯವರು ಗಳುವನ್ನು ಅವನ ಕೈಗೆ ಕೊಟ್ಟರು. ಆದರೆ ಒಂದೇ ಆಯಿತು. ಅವನೂ ನಮ್ಮ ಹಾಗೆ ಹೊಂಚು ಹಾಕುವವನೇ, ಹೊಡೆಯುವವನಲ್ಲ. ಪಕ್ಕದಲ್ಲಿನಿಂದ ಇಳಿದು ಡಾಕ್ಟರ್ ಕುಟ್ಟಿಯವರೂ ಬಂದರು : " ಏನು ಏನು ಹಾವೇ ? " ಎನ್ನುತ್ತ.

" ಏನು ಬಂಡೆ ಹಾವೇ ? ನಾನು ಒಂದನ್ನು ನನ್ನ ತೋಟದಲ್ಲಿ ಕೊಂದೆ. ಅಲ್ಲಿಂದೀಚೆಗೆ ನನ್ನ ಕಣ್ಣಿಗೆ ಒಂದೂ ಬಿದ್ದಿಲ್ಲ. ಇಲ್ಲೆಲ್ಲ ಬೇಕಾದಷ್ಟಿವೆ ಅಂತಾರೆ. " ಕುಟ್ಟಿಯವರು ಅಲ್ಲಲ್ಲಿ ಬಗ್ಗಿ ನೋಡುತ್ತ ಹೇಳುತ್ತಿದ್ದರು " ಹಾವುಗಳಿಗೇನು ಸ್ವಾಮಿ ಈ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ! ನಾವಿರುವುದು 'ನಾಗುವಾ' ಅಲ್ಲವೆ ? 'ನಾಗುವಾ' ಅಂದರೆ 'ನಾಗಗಳ ವಾಸಸ್ಥಾನ' ಅಂತ. ಹರಿಶ್ಚಂದ್ರನ ಮಗ ಹಾವು ಕಡಿದು ಸತ್ತ ಜಾಗ ಇದೇಯಂತೆ. ಇನ್ನೇನು ಇಂಥ ಬೆಣ್ಣೆಯಂಥ ಮಣ್ಣು. ಸ್ವಲ್ಪ ಮಳೆ ಬಿದ್ದರೆ ಸಾಕು, ಇಲಿಗಳು ಕೊರೆದು ಬಿಲಮಾಡುತ್ತವೆ, ಹಾವು ಮನೆಮಾಡಿಕೊಳ್ಳುತ್ತೆ. ಇಲ್ಲಿ ಎಲ್ಲೆಲ್ಲೂ ಹಾವು! ಹಾವಿನ ಮಯ! " ಲಕ್ಷ್ಮಿಯವರು, ನಾವು ಅನೇಕ ಬಾರಿ ಕೇಳಿದ್ದ ಸ್ಥಳಪುರಾಣವನ್ನು ಹೇಳಿದರು. ಕೇಳಿದೆವು— ಅತ್ತಿತ್ತ ಸುತ್ತುತ್ತ, ಬಗ್ಗಿ ಬಗ್ಗಿ ನೋಡುತ್ತ. ಎಲ್ಲರ ಕಣ್ಣಿಗೂ ಕಾಣಿಸುತ್ತಿತ್ತು. ಒಬ್ಬರಿಗೆ ಒಂದು, ಇನ್ನೊಬ್ಬರಿಗೆ ಎರಡು.

" ಹೇಗಾದರೂ ಹೊಡೀಬೇಕಲ್ಲ " ಕುಟ್ಟಿಯವರು ಕೈಗೊಂದು ಇಟ್ಟಿಗೆಯ ಚೂರನ್ನು ತೆಗೆದುಕೊಂಡರು.

" ಶ್! ಶ್! ಅದರಿಂದ ಪ್ರಯೋಜನವಿಲ್ಲ. ಅದರಿಂದ ಸತ್ತೀತೇ ? ಛಾಂಗಿ. ತಪ್ಪಿಸಿಕೊಳ್ಳುತ್ತೆ. ಲಾಠಿಯಿಂದಲೇ ಹೊಡೀಬೇಕು. ಆದರೆ ಇಷ್ಟು ದೊಡ್ಡ ಹಾವು! ಹೊಡೀಬಹುದು, ಸ್ವಲ್ಪ 'Presence of mind' ಬೇಕು ಅಷ್ಟೆ ! ನೋಡಿ, ಒಂದು ಸಲ ಒಂದು ಹಾವು ಬಿಲ ಹೊಕ್ಕೋತಾ ಇತ್ತು. ತಲೆ ಹಾಕಿತ್ತು. ಮೈಯೆಲ್ಲ ಹೊರಗಿತ್ತು. ನಮ್ಮ ದತ್ತ ಈಗ ಹೊಡೀತೀನಿ ಅಂತ ಹೋದ; ದೊಣ್ಣೆ ಬೀಸಿದರೆ, ಏಟು ಎಲ್ಲೋ. ಹಾವೆಲ್ಲೋ—ನೂರುದ್ದ ವ್ಯತ್ಯಾಸ! ಕೈಯಿಂದ ದೊಣ್ಣೆಯೂ ಬಿತ್ತು. ಹಾವು ಬಿಲಾನೂ ಸೇರಿಕೊಂಡಿತು. ಈ ಹಾವನ್ನು ಹೊಡೆಯೋದರಲ್ಲಿ ಪೂರ್ವಬಂಗಾಳಾದೋರು ನುಸುಸಿದ್ಧರು; ನಾನೂ ಅಲ್ಲಿಯೋನೇ. ರಾಜ್, ನಿಮ್ಮ ಕಾಲೇಜಿನ ಪ್ರೊ. ದತ್ ಇದ್ದಾರಲ್ಲ. ಅವರು ಇದರಲ್ಲಿ ಎಕ್ಸ್‌ಪರ್ಟ್......." ಲಕ್ಷ್ಮಿಯವರು ಹೇಳುತ್ತಲೇ ಇದ್ದರು.

" ಅಲ್ಲಿ ನೋಡಿ ! ಅಕೊ ! " ಕುಟ್ಟಿಯವರು ಕೈ ತೋರಿಸಿದರು.

ಗಿಡದ ಪಕ್ಕದ ಮಣ್ಣಿನ ಗುಡ್ಡೆಯ ಮೇಲೆ ಗೋಧಿಯ ಬಣ್ಣದ ಹಾವಿನ ತಲೆಯ ಭಾಗ ಮೊಳದುದ್ದ ಕಂಡಿತು. ಕಪ್ಪು ಕಣ್ಣು ಪಳಗುಟ್ಟಿತು. ನಾಲಗೆ ನೀರು ಮುಕ್ಕಳಿಸಿದಂತೆ ಹೊರಚಾಚಿ ಒಳ ಹೊಕ್ಕಿತು. ಹೊಡೆಯಬೇಕೇ, ಬಿಡಬೇಕೆ? ಹೊಡೆಯುವುದು ಯಾರು ? ಹೇಗೆ ?........ಹಾವು ಮತ್ತೆ ಗಿಡದ ಕೆಳಗಿನ ಪೊದೆಗೆ ನುಸುಳಿಕೊಂಡಿತೆಂದು ಹೇಳಲೇಬೇಕಾಗಿಲ್ಲ. ನಾವು ನೋಡುತ್ತಲೇ ಇದ್ದೆವು; ಮರೆಯಾದ ಮೇಲೆ " ಯಾವ ತರಹದ ಹಾವು ? ಹೆಡೆಯಿತ್ತೆ ? ವಿಷದ ಹಾವೆ ? ಏನು, ಎತ್ತ " ಎಂದು ಚರ್ಚಿಸುತ್ತಿರುವಲ್ಲಿ, ಹಳ್ಳಿಯುವಕ " ಇಲ್ಲಿ ಬಂತು " ಎಂದ. ನಾವು ಅತ್ತ ಹೋದೆವು. ಆಗಲೇ ನಮ್ಮ ಮನೆಯ ಮಣ್ಣಿನ ಕಾಲುವೆಯಲ್ಲಿ ಹರಿಯುತ್ತಿತ್ತು, ಅಷ್ಟು ಉದ್ದ! ನಾವು ಅದರ ಪಕ್ಕದಲ್ಲೇ ಹೋದೆವು, ದೂರದಿಂದಲೇ.

" ಜೋಡಿ ಹೆಣಕೊಂಡಿದೆ. " ಹಳ್ಳಿಯುವ

" ಹುಂ. ಅವೇ ಎರಡು ಅನ್ನಲಿಲ್ಲವೆ ನಾನು ? " ಲಕ್ಷ್ಮಿಯವರು.

" ಅರೇ! ಎರಡು ಕಡೆಯೂ ಒಂದೊಂದು ಹೆಡೆ. ಒಂದು ಇನ್ನೊಂದನ್ನು ಎಳೆದುಕೊಂಡು ಹೋಗ್ತಾ ಇದೆ "

ಹೌದು. ಅವರು ಹೇಳಿದ ಹಾಗೇ. ಎರಡು ತುದಿಗೂ ಎಂಜಿನ್ ತಗಲುಹಾಕಿದ ರೈಲುಗಾಡಿಯಂತಿತ್ತು, ಹಾಗೇ ಹರಿಯುತ್ತಿತ್ತು, ಆ ಹಾವಿನ ಜೋಡಿ. ಹಾವು ಭಯಾನಕಜಂತುವೇನೋ ಸರಿ. ಆದರೆ ಅದರ ಸೌಂದರ್ಯ ಹಿಡಿದು ನಿಲ್ಲಿಸುವಂತಹದು. ನಾವು ಏನನ್ನೂ ಮಾಡದಿದ್ದುದಕ್ಕೆ, ನಾವು ಆ ನೋಟದಿಂದ ಮುಗ್ಧರಾಗಿದ್ದುದೂ ಒಂದು ಕಾರಣವೆನ್ನಬೇಕೆನ್ನಿಸುತ್ತದೆ.

ಸ್ವಲ್ಪ ದೂರ ನಡೆಯುವ ಹೊತ್ತಿಗೆ, ಹಿಂದುಗಡೆಯ ಹಾವು ನಮ್ಮನ್ನೇ ನೋಡುತ್ತಿದ್ದುದು— ಬೇರ್ಪಡಿಸಿಕೊಂಡು, ಸರ್ರನೆ ನಮ್ಮ ಕಾಂಪೌಂಡು ಗೋಡೆಯ ಬತ್ತಿನಲ್ಲಿ ಓಡಿ, ಎಡಗಡೆಗೆ ತಿರಿಗಿ ಮಾಯವಾಯಿತು. ಇನ್ನೊಂದೇ ಕ್ಷಣ! ಅದರ ಸಂಗಾತಿಯೂ ಮತ್ತಿನಿಂದ ಎಚ್ಚತ್ತಂತೆ ತಲೆಯೆತ್ತಿ, ಸೂರ್ಯನ ಬೆಳಕಿನಲ್ಲಿ ಮಿರಮಿರನೆ ಮಿಂಚುತ್ತ ಸೊಟ್ಟಸೊಟ್ಟನೆ ವಾಯುವೇಗದಿಂದ ಹಿಂದಿನ ಮೈದಾನದಲ್ಲಿ ಓಡಿ ಹೋಯಿತು. ಓಡಿಹೋಯಿತು ! ಆ ಸುಂದರ ದೃಶ್ಯವನ್ನು ನೋಡಿಯೇ ಸವಿಯಬೇಕು. ನಾಗಾಲೋಟವೆಂದರೆ ಏನೆಂಬುವನ್ನು ನಾನು ಅಂದು ಕಂಡುಕೊಂಡೆ. ಎಡಗಡೆಗೆ ತಿರಿಗಿದ ಮೊದಲ ಹಾವನ್ನು ನೆನೆಸಿಕೊಂಡು, ಬಾಗಿಲು ತೆರೆದು ಬಂದಿದ್ದ ನಾನು, ಅವೆಲ್ಲಾದರೂ ಮನೆ ಹೊಕ್ಕಿದ್ದೀತೆಂದು ಭಯ. ಜಾಗರೂಕತೆಯಿಂದ ಒಳಹೊಕ್ಕು ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಸುತ್ತಲೂ ನೋಡುತ್ತ, ಮೂಲೆಗಳು, ಬಚ್ಚಲು, ಮೂಟೆಗಳ ಹಿಂದೆ, ಸಂದಿ ಗೊಂದಿ ಎಲ್ಲವನ್ನೂ ಶೋಧಿಸಿ ನೋಡಿ, ಎಲ್ಲ ಬಾಗಿಲುಗಳನ್ನೂ ಹಾಕಿಕೊಂಡು ಬಂದು, ಹೊರಗೆ ಗೋಡೆಯ ಪಕ್ಕದಲ್ಲೆಲ್ಲ ನೋಡುತ್ತಿದ್ದೆ. ಅಷ್ಟು ಹೊತ್ತಿಗೆ ಸ್ನೇಹಿತರು ಬಾಗಿಲಿಗೆ ಬಂದರು.

" ಹೊಡೀಬೇಕಾಗಿತ್ತು. ಜಂಟಿ ಹಾಕಿಕೊಂಡಿದ್ದಾಗ ಒಳ್ಳೆ ಅವಕಾಶವಿತ್ತು. " ಕುಟ್ಟಿಯವರು.

" ಅಂತೂ ಗಾಬರಿಮಾಡಿಬಿಟ್ಟಿದೀವಿ. ಹೇಗೆ ಓಡಿದುವು ನೋಡಿದಿರಲ್ಲ ಅಬ್ಬಬ್ಬ ! ಒಳ್ಳೇದಾಯ್ತು. ಇನ್ನು ಇತ್ತ ಬರೋದಿಲ್ಲ ಅಂತ ಕಾಣುತ್ತೆ, " ಲಕ್ಷ್ಮಿಯವರು ತಮ್ಮನ್ನೇ ತಾವು ನಂಬಿಸಿಕೊಳ್ಳುತ್ತಿದ್ದರು.

" ಹಾಗೇ ಆಗಲಿ ಸದ್ಯ. " ನನ್ನ ಪ್ರಾರ್ಥನೆ.

ಆದರೇನು ಮತ್ತೆ ಬಂದಿತ್ತು ಈ ದಿನವೂ. ಈಗ ನಮ್ಮನ್ನೇ ನಾವು ನೆಚ್ಚಿಕೊಳ್ಳುವುದು ಸರಿಯಲ್ಲವೆಂದೆನಿಸಿತು. ಬಲಗಡೆಗೆ ತಿರುಗಿ ನೋಡಿದಾಗ, ಮೂರನೆ ಮನೆಯ ಸರದಾರಜಿ ಕಂಡರು.

"ಸರದಾರಜೀ! ಬನ್ನಿ! ಇಲ್ಲಿ ಕೊಂಚ ಬನ್ನಿ," ಕೂಗಿದೆ

"ಏನು? ಏನು ಸಮಾಚಾರ?" ಬರುತ್ತ ಕೇಳಿದರು. ನಾನು ಕೈಮಾಡು ಹಾಕಿ ಸೂಚಿಸಿದೆ.

"ಸರ್ಪವೇ? ಬಂದೆ" ಎಂದು ಪಕ್ಕದ ಮನೆಯ ಮುಂದೆ ನಿಂತು "ಡಾಕ್ಟರ್‌ಸಾಬ್, ಡಾಕ್ಟರ್‌ಸಾಬ್. ಒಂದು ಲಾಠಿ ಕೊಡಿ" ಎಂದು ಕೂಗಿದರು. ಯಾರೋ ತಂದುಕೊಟ್ಟ ಅವರ ಉದ್ದದ ದೊಣ್ಣೆಯನ್ನು ಹೆಗಲಿನ ಮೇಲಿಟ್ಟುಕೊಂಡು ಬಂದರು. ಅವರನ್ನು ನೋಡಿದಾಗ ಗದೆ ಹೊತ್ತ ಭೀಮನ ನೆನಪು ಬಂದಿತು. ಸರದಾರಜಿ ಸಾಮಾನ್ಯರಲ್ಲ, ಸುಪ್ರಸಿದ್ಧ ಗಾಮ. ಇಮಾಮ್‌ಬಕ್ಸ್ ಜಟ್ಟಿಗಳನ್ನು ಮನಸ್ಸಿಗೆ ತರುತ್ತಿದ್ದರು. ಬಂಡೆಗಳನ್ನು ಜೋಡಿಸಿಟ್ಟಂತಿತ್ತು ಆಕಾರ. 'ಟಾರ್ಚ್‌ಲೈಟ್'ನಂತೆ ಕೆಳಗಿನಿಂದ ಮೇಲಿನವರೆಗೂ ಒಂದೇ ಸಮವಾಗಿದ್ದ ಸಿರು ದಟ್ಟಿಯ ಲಕ್ಷ್ಮೆಯವರಂತಲ್ಲ. ನಾನಂತೂ ನರಪೇತಲ ಬಿಡಿ. ಸರದಾರರನ್ನು ಕಡಿದರೆ ನನ್ನಂಥವರು ಎಷ್ಟು ಕಡಿಮೆಯೆಂದರೂ ನಾಲ್ಕಾಳಿಗೆ ಕಡಿಮೆಯಾಗುತ್ತಿರಲಿಲ್ಲ. ಸಿಕ್‌ರಾಗಿದ್ದು ಕೇಶ, ದಾಡಿ. ಪೇಟ ಕಟ್ಟಿರಲಿಲ್ಲ. ಚುರಿದಾರ್ ಪೈಜಾಮು, ಚಡಾವು. ಈ ಭೀಮಾಕೃತಿಯನ್ನು ಕಂಡು ನನಗೆಷ್ಟೋ ಧೈರ್ಯ ಬಂದಿತು. 'ಹಾವು ಸತ್ತಿತು' ಎಂದುಕೊಂಡು ಸಂತೋಷಿಸಿದೆ. ಲಕ್ಷ್ಮೆಯವರೂ "ಪರವಾಗಿಲ್ಲ. ಸರದಾರಜಿ ಬಂದರಲ್ಲ!" ಎಂದರು. "ಎಲ್ಲಿ? ಎಲ್ಲಿ?" ಸರದಾರರು ಕೇಳುತ್ತ ಅತ್ತಿತ್ತ ಬಗ್ಗುತ್ತಿದ್ದಂತೆಯೇ, ನಮಗೆಲ್ಲರಿಗೂ ಕಾಣುವಂತೆ ಹಾವು ರಾಜಕಾಲುವೆಯಿಂದ ಹೊರಗೆ ಹರಿದುಬಂದಿತು. ಸರದಾರಜಿ "ಎಲಾ ಸಾಲ! ಎಷ್ಟು ಧೈರ್ಯ ಇದಕ್ಕೆ" ಎಂದು ಹಿಂದಕ್ಕೆ ಸರಿದಾಗ ನಾವೂ ಸರಿದುಕೊಂಡೆವು ಆಶಾಭಂಗದಿಂದ. ನಾಗರಾಜ ಅಲ್ಲಿಂದ ನಮ್ಮ ಸೋಕ್‌ಪಿಟ್ಟಿನ ಮೇಲೆ ಹರಿದು, ಹತ್ತಿರದಲ್ಲಿದ್ದ 'ಜಂಗಲ್–ಕಿ–ಜಿಲೇಬಿ' ಅಂದರೆ ಸೀಮೆಹುಣಿಸೆ ಮರವನ್ನು ಸುತ್ತಿಕೊಂಡು ಹತ್ತಿತು! "ಎಲಾ ಸಾಲ! ಮರಬೇರೆ ಹತ್ತುತ್ತೆ. ಆ!"

ಹಾವು ಮರವನ್ನು ಸೇರಿತು. ಈವರೆಗಾಗಲೇ ಪಕ್ಕದ ಮನೆಯ ಸಿಂಹರವರು, ಉಟ್ಟಿದ್ದ ಕಚ್ಚೆಪಂಚೆಯ ಒಂದು ಭಾಗವನ್ನೇ ಬೆತ್ತಲೆಯ ಎದೆಯ ಮೇಲೆ ಎಸೆದುಕೊಂಡು 'ವಾಕಿಂಗ್ ಸ್ಟಿಕ್' ಹಿಡಿದುಕೊಂಡು ಬಂದರು. 'ಎಲ್ಲಿ ಎಲ್ಲಿ?' ಎಂದು ಮೆಟ್ಟಿನ ಕಾಲಿನ ಮೇಲೆ ನಿಂತು ಹಿಂದಕ್ಕೂ ಮುಂದಕ್ಕೂ ತೂಗಾಡುತ್ತ ಬೋಳುತಲೆಯನ್ನು ಸವರಿಕೊಳ್ಳುತ್ತಿದ್ದಾಗ ದೊಡ್ಡ ಸೌತೆಕಾಯಿಗೆ ಕೈಕಾಲು ಬಂದಂತಿತ್ತು. ಇವರ ಹಿಂದೇ ದೊಡ್ಡ — ಹದಿನೈದಡಿ — ಬೊಂಬನ್ನು ಹೊತ್ತುಕೊಂಡು ಒಬ್ಬ ಮಹನೀಯರು ಬಂದರು. ಅವರು ಸಿಂಹರವರ ಮನೆಯ ಮಕ್ಕಳಿಗೆ ಪಾಠ ಹೇಳುವ ಮೇಷ್ಟರೆಂದು ಅನಂತರ ತಿಳಿಯಿತು. ಈ ಗದ್ದಲವನ್ನು ಕೇಳಿ ಆಚೆಯ ಮನೆಯ ಆರು ಅಡಿ ಉದ್ದದ ಸಣಕಲು ಪ್ರೊ. ಗರುಡರವರು, ಎಂಟು ಅಡಿಯ ಲಾಠಿಯನ್ನು ಹಿಡಿದುಕೊಂಡು ಬಂದರು. ಅದೇ ಸಮಯದಲ್ಲಿ 'ಏನು ಮತ್ತೆ ಹಾವೇ?' ಎನ್ನುತ್ತ ಡಾ. ಕುಟ್ಟಿಯವರೂ ಹಿಂದಿನಂತೆಯೇ ಬೈಸಿಕಲ್ ಇಳಿದು ಎಲೆಕ್ಟ್ರಿಕ್ ಕಂಬಕ್ಕೆ ಒರಗಿಸಿ ಗುಂಪನ್ನು ಸೇರಿದರು. ಇಷ್ಟು ಹೊತ್ತಿಗೆ ಸಂದರ್ಭವನ್ನು ತಿಳಿದು ಲಕ್ಷ್ಮೆಯವರು, ಬೀದಿಯಲ್ಲಿ ಹೋಗುವ ಆಳು ಕಾಳು ಹಳ್ಳಿಯವರನ್ನೆಲ್ಲ "ಹಾವು ಹೊಡೀತೀಯಾ? ಬಾ" ಎಂದು ಕರೆಕರೆದು ಗುಡ್ಡೆ ಹಾಕಿಕೊಂಡಿದ್ದರು. ಅವರೆಲ್ಲ ಹೊಡೆಯುತ್ತಿದ್ದರೋ ಇಲ್ಲವೋ. ಗುಂಪಿಗಂತೂ ಸೇರಿದರು. ಅಲ್ಲಿಂದ ಇಲ್ಲಿಂದ ಎಲ್ಲೆಲ್ಲಿಂದಲೋ ದೊಡ್ಡ ದೊಡ್ಡ ಲಾಠಿಗಳು, ಕೋಲುಗಳು, ಕೊಂಬೆಗಳು ಎಲ್ಲವೂ ಸರಬರಾಜಾದುವು. ಒಬ್ಬ ಮಹನೀಯರು ಒಂದು ಏಣಿಯನ್ನೂ ತಂದರು. ಜೆ. ಪಿ. ಹಾಲಿನ ಸೀತಾರಾಮು — ಇವನನ್ನು ನಮ್ಮ ನೈಜಾಮು ಕಾಲೊನಿಯ ವಿದೂಷಕನೆನ್ನುತ್ತಾರೆ — ಹಾಲಿನ ಡಬ್ಬಿಯನ್ನು ಎಲ್ಲೋ ಇಟ್ಟು ಬಂದ. ಪ್ರತಿಯೊಬ್ಬರ ಮನೆಯ ವರಾಂಡದಲ್ಲೂ ಹೆಂಗಸರೂ ಮಕ್ಕಳೂ ಅಲ್ಲೇ ನಿಂತು ಇತ್ತ ಇಣಿಕಿಣಿಕಿ ನೋಡುತ್ತಿದ್ದರು.

ಈ ಮಧ್ಯೆ ಹಾವು ಮರವನ್ನು ಆರಾಮವಾಗಿ ಹತ್ತುತ್ತಿತ್ತು. ಮರವೆಂದರೆ ಬಹಳ ಎತ್ತರವಲ್ಲ. ಕೇವಲ ಹದಿನಾಲ್ಕು ಹದಿನೈದಡಿ. ಹಾವಿನ್ನೂ ಎಂಟು ಹತ್ತು ಅಡಿಯ ಎತ್ತರದಲ್ಲೇ ಕೊಂಬೆಗೆ ಸುತ್ತಿಕೊಂಡಿತ್ತು. ನಾವೆಲ್ಲ ಭಟರು ನಮ್ಮ ನಮ್ಮ ಲಾಠಿಗಳನ್ನು ಹಿಡಿದು ಮರದ ಸುತ್ತಲೂ ಬೇಲಿಯ ಗೂಟಗಳಂತೆ ನಿಂತಿದ್ದೆವು. ಈಗ ಒಂದು ಕಡೆಯಿಂದ "ಇಗೋ ಇಲ್ಲಿ" ಎಂದು ಕೂಗು. ಜನರೆಲ್ಲ ಅತ್ತ ಕಡೆಗೆ ಜರುಗುತ್ತಿದ್ದರು. ತುದಿಗಾಲಿನಲ್ಲಿ ನಿಂತು, ಕತ್ತನ್ನು ಕೊಕ್ಕರಿಸಿ, ಎತ್ತಿ ಬಾಗಿಸಿ, ತಿರಿಚಿ ಅತ್ತಿತ್ತ ಕೈಯಾಡಿಸುತ್ತ ಒಬ್ಬರಿಗೊಬ್ಬರು ತೋರಿಸುತ್ತಿದ್ದರು. ಹಾವು ಅತ್ತಕಡೆ ತಲೆಹಾಕಿ ದೊಡ್ಡ ಕಣ್ಣುಗಳನ್ನು ಬಿಟ್ಟು, ನಾಲಗೆ ಚಾಚಿ ಮೆಲ್ಲಗೆ ಸರಿದುಕೊಂಡು ಬೇರೆಯ ಕಡೆಗೆ ಹೊರಳಿಕೊಳ್ಳುತ್ತಿತ್ತು. ಮತ್ತೆ ಇದೇ ಆಟ ಇನ್ನೊಂದು ದಿಕ್ಕಿನಲ್ಲಿ.

"ಧಾಮಿನ್ ಧಾಮಿನ್" ಸಿಂಹರವರು ಹೇಳಿದರು.

"ಅಂದರೆ?" ನಾನು ಕೇಳಿದೆ.

"ಅದರ ಜಾತಿ!"

"ಕಚ್ಚುತ್ತದೆಯೇ?" ಸರದಾರಜಿ.

"ವಿಷದ ಹಾವೇ?" ಲಕ್ಷ್ಮೆಯವರು.

ಆದರೆ ಸಿಂಹರವರ ಝೂಆಲಜಿ ಮುಂದೆ ಹೋಗಲಿಲ್ಲ.

"ಇಲ್ಲ, ಗೆವ್" ಮೇಷ್ಟರು. ಅಂದರೆ ಗೋದಿನಾಗರ.


ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ದಿ ಸದ್ವೈದ್ಯ ಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿ

" ಛೆ, ಎಲ್ಲಾದರೂ ಉಂಟೆ? ಧಾಮಿನ್ ಖಂಡಿತ. ನಂಗೆಲ್ಲ ಗೊತ್ತು. "

" ಬಣ್ಣ ನೋಡಿ ಡಾಕ್ಟರ್ ಸಾಬ್ " ಮೇಸ್ತ್ರಿ ವಾದ.

" ಉಹುಂ, ಕ್ರೋಟ್ ಇರಬೇಕು. "

" ಆ! "

" ಇಲ್ಲ ಇಲ್ಲ. ಅದರ ಬಣ್ಣನೇ, ರೀತಿಯೇ ಬೇರೆ. "

" ಅದೆಲ್ಲಿ ಮರ ಹತ್ತುತ್ತೆ ಬಿಡ್ರೀ! ಧಾಮಿನೇ. ಧಾಮಿನ್ ಮರ ಹತ್ತುತ್ತೇ?" ಸಿಂಹರವರು ಹಳ್ಳಿಯವನನ್ನು ಕೇಳಿದರು. ಅವನು ದೀರ್ಘವಾಗಿ ಊಂ ಎಂದು, ಅನುಮಾನದಿಂದ ಗೊಣಗಿದ. ಸಿಂಹ-ರವರು " ನೋಡಿದಿರಾ. ಅದೇ. ನಾನು ಹೇಳಿದ್ದೇ ನಿಜ " ಎಂದರು.

"ಎಲ ಸಾಲಾ. ಮರ ಹತ್ತಿದ ಮೇಲೆ ನಮಗೆಲ್ಲ ಏನು ಕ್ಷೇಮ? ಮನೆಯ ಹತ್ತಿರ ಗಿಡಗಳಿವೆ. ಡ್ರೇನ್ ಪೈಪ್ ಮೇಲೆ ಕೂಡ ಹತ್ತಿ ಬರಬಹುದು " ಸರದಾರಜಿ ಭಯವನ್ನು ಸೂಚಿಸಿದರು.

" ನಾವೆಲ್ಲ ಮಹಡಿಯ ಮೇಲೇ ಮಲಗ್ತೀವಿ, ಆ!" ಗರುಡ್-ರವರು.

" ಅದೇ ನಾನಂದದ್ದೂ " ಸರದಾರಜಿ.

" ಹೊಡೀಬೇಕು " ಕುಟ್ಟಿಯವರು.

" ಏನೋ ಸೀತಾರಾಮ್, ಹೊಡೆಯೋ ಮತ್ತೆ. ಏನೇನೋ ಬಿಡ್ತೀಯಲ್ಲ— ಹಾಗೆ ಮಾಡಿದೆ, ಹೀಗೆ ಮಾಡಿದೆ ಅಂತ! "

" ಆಗಲಿ ಹುಜೂರ್. ಅದರ ತಲೇ ಮೇಲೆ ಒಂದೇಟು ಬೀಳಲಿ, ಚೆನ್ನಾಗಿ. ಆ ಮೇಲೆ......

" ನಿನ್ನ ತಲೆ. ಹುಚ್ಚುಮುಂಡೆ. "

" ಎಲ್ಲಿ, ಯಾರನ್ನಾದರೂ ಪಿ. ಡಬ್ಲ್ಯು ಡಿ.ಗೆ ಕಳಿಸಿ— ಅವರ ಗಡಂಗಿಗೆ. ಬೇಗ ಬರೋ ಹಾಗೆ ಹೇಳಿ ಕಳಿಸಬೇಕು. ಅಲ್ಲಿವರೆಗೆ ನಾವೂ ಕಾಯ್ತಾ ಇರೋಣ " ಸರದಾರಜಿ ಸೇನಾನಾಯಕರಂತೆ ಹೇಳಿದರು.

" ಹುಂ, ಹೂಂ. ನನ್ನ ಆಳಿಯನ್ನ ಕಳಿಸ್ತೀನಿ. ಹೋಗಿ ಬಾ. ಬೇಗ. ಅವರ ಸ್ಟೋರ್ಸ್ಸಿಗೆ. " ದತ್ತ ಬೈಸಿಕಲ್ ಹತ್ತಿ ಮಾಯವಾದ.

" ಅರೆರೇ, ಮನೆಯ ಆಳುಗಳು ಇಲ್ಲೇ ಇರುವಾಗ...... ಏನೋ ಮೊಸರಿಟ್ಟುಕೊಂಡು ಮಜ್ಜಿಗೆ...... " ಸಿಂಹರವರು ಯಾರನ್ನೋ ಇತ್ತಕಡೆಯ ಕಡೇ ಮನೆಗೆ ಅಟ್ಟಿದರು. ಆದರೆ ಮರುಕ್ಷಣದಲ್ಲಿ ಹಿಂದಿರಿಗಿ ಬಂದವನು " ಅವರು ಯಾರೂ ಹೊಡೆಯೋದಿಲ್ಲವಂತೆ " ಎಂದ.

" ಸಾಲಾ ಹೊಡೆಯೋರು ಯಾರೂ ಇಲ್ಲವಲ್ಲಾ " ಸರದಾರಜಿ ಮರುಗಿದರು. " ನನ್ನ ಕಾಂಪೌಂಡಿನಲ್ಲೊಂದು ನುಗ್ಗಿತ್ತು ಹೋದ ವರ್ಷ, ಘಾರೀದು. ಹೊಡೆದು ಹಾಕಿದೆ. "

" ನನ್ನ ಹಿತ್ತಲಿನಲ್ಲಿ ಎರಡು ಬಂಡೆಹಾವುಗಳನ್ನು ನಾನೇ ..." ಕುಟ್ಟಿಯವರು ಅಂದು ಹೇಳಿದ್ದ ಹಳೆಯ ಕತೆಯನ್ನು ಸಾಂಗವಾಗಿ ಹೇಳಿದರು. ಒಂದೇ ವ್ಯತ್ಯಾಸವೆಂದರೆ ಈ ವರೆಗೆ ಈ ನಾಲ್ಕು ದಿನಗಳಲ್ಲಿ ಒಂದು ಬಂಡೆಯ ಹಾವು ಎರಡಾಗಿತ್ತು, ಅಷ್ಟೆ.

" ನನ್ನ ಬಚ್ಚಲುಮನೇಗೇ ನುಗ್ಗಿಬಿಟ್ಟಿತ್ತು, ಘಟಸರ್ಪ, ಧಾಮೀನ್ ಅಲ್ಲ. ಹೊಡೆದು ಹಾಕಿದೆ. ಜಮೀನ್ ಮೇಲಿತ್ತು. ಇದು ಅಂದರೆ ಮರ ಹತ್ತಿದೆ. ಕೆಳಗೆ ಬಂದರೆ...." ಸಿಂಹರವರು ಹೇಳುತ್ತಲೇ ಮಾಸ್ತರು " ಅದಕ್ಕೇನು, ಬಡಿದು ಬಿಡೋಣ. ಕೆಳಗೆ ಬೀಳುತ್ತೆ ಇಲ್ಲ ಇಳಿಯುತ್ತೆ, ಆಗ ತಾವು ಹೊಡೀಬಹುದು " ಎಂದು ಸೀತಾರಾಮನಿಗೆ " ಬಾರೋ ಎತ್ತೋಣ ಇದನ್ನ " ಎಂದು ಇಬ್ಬರೂ ತಿಣಕುತ್ತ ದೊಡ್ಡ ಬೊಂಬನ್ನು ಅರ್ಧ ಎತ್ತಿ ನಿಲ್ಲಿಸಿದರು.

" ತಾಳಿ, ತಾಳಿ. ಛೀ. ಬೇಡ. ಎಲ್ಲಾದರೂ ಗಾಬರಿಯಾಗಿ ಓಡಿಹೋದೀತು ಸಿಕ್ಕದೆ. ಪಿ. ಡಬ್ಲ್ಯು. ಡಿ. ಗೆ ಹೇಳಿ ಕಳಿಸಿದೀವಲ್ಲ, ಆ ಆಳುಗಳು ಬರಲಿ. ಮುಂಡೇದು, ಬಹಳ ಜೋರಾಗಿ ಓಡುತ್ತಂತೆ. ಧಾಮಿನ್ ಜೋರಾಗಿ ಓಡುತ್ತೇನಯ್ಯಾ? " ಸಿಂಹರವರು ಅದೇ ಹಳ್ಳಿಯವರನ್ನು ಕೇಳಿದರು. ಅವನು ಅದೇ ಅನುಮಾನದ 'ಊಂ' ಗುಟ್ಟಿದ. " ನೋಡಿದಿರಾ, ಅದೇ ನಾನು ಹೇಳಿದ್ದು ಧಾಮಿನೇ. ನಾಲ್ಕು ದಿನಗಳ ಹಿಂದೆ ಇಲ್ಲೇ ಕಂಡರಂತೆ ಓಡಿದ್ದನ್ನ. ಕೇಳಿ ಇವರಿಂದ" ಸಿಂಹರವರು ನನ್ನ ಕಡೆಗೆ ತಿರುಗಿದರು ನಾಲ್ಕೂ ಜನ ನನ್ನನ್ನು ಮುತ್ತಿಕೊಂಡರು. ಕತೆ ಹೇಳಿದೆ. " ಆಗಲೇ ಹೊಡೀಬೇಕಾಗಿತ್ತು, ಹದವಾಗಿ ಎರಡೂ ಸಿಕ್ಕಿದ್ದುವು " ಮಾಸ್ಟರ್ ಹೇಳಿದರು. ಇನ್ನು ಹತ್ತು ನಿಮಿಷದೊಳಗಾಗಿ ಕುಟ್ಟಿಯವರು ಈ ಕತೆಯನ್ನು ನಾಲ್ಕು ಸಾರಿಯೂ, ಲಕ್ಷ್ಮಿಯವರು ಆರೇಳು ಸಾರಿಯೂ, ನಮ್ಮಿಂದ ಕೇಳಿಕೊಂಡಿದ್ದ ಸರದಾರಜಿ— ಸಿಂಹರವರು, ತಾನೇ ಕಂಡಂತೆ ಎಷ್ಟೆಷ್ಟೋ ಸಾರಿಯೂ ಹೇಳಿದರು.

ಇಷ್ಟುಹೊತ್ತಿಗೆ ದತ್ತ ಬಂದ. " ಪಿ. ಡಬ್ಲ್ಯು. ಡಿ. ಇಂದ ಯಾರೂ ಬರೋಲ್ಲ " ಅಂದ. " ಸಾಲಾ. ಅವರಿವರು ಅಂದರೆ ಓಡಿ ಹೋಗ್ತಾರೆ. ನಾವು ಹೇಳಿಕಳಿಸಿದರೆ ಹೀಗೇ. ರಿಪೋರ್ಟುಮಾಡೋಣ" ಸರದಾರಜಿ ಸಿಂಹನಾದ ಮಾಡಿದರು.

" ಹೂಂ, ಗೋಪಾಪ್ರಸಾದರವರು ಹೇಳಿಕಳಿಸಿದಾಗ ಬಂದು ಆಗೆದರಂತೆ ಹನ್ನೆರಡು, ಸರಿಯಾಗಿ ಒಂದು, ಎರಡು, ಮೂರು, ಹನ್ನೆರಡು ಹಾವು—ಸಣ್ಣದು ದೊಡ್ಡದು ಎಲ್ಲಾ ಸೇರಿ ಸಿಕ್ಕಿದುವಂತೆ" ಗರುಡ್‌ರವರು.

" ಹಾವಿಗೇನು ಇಲ್ಲಿ ಸುಗ್ಗಿ. ಹೋದವರ್ಷ ರಾಯರ ಮನೇಲಿ ಪ್ರೊಫೆಸರ್ ಅಯ್ಯರ್ ಇದ್ದಾಗ, ಮಿಸೆಸ್ ಅಯ್ಯರ್ ಓದ್ತಾ ಕೂತಿದ್ದಾಗ, ಕಾಲು ಹತ್ತಿರದಲ್ಲೇ ಹರಿದುಬಂದಂತೆ. ಏಳೋದಕ್ಕೂ ತಪ್ಪಿ ಬಾರದೆ ಕೂಗಿಕೊಂಡರು. ನಾವೆಲ್ಲ ಹೋಗಿ ಹೊಡೆದು ಹಾಕಿದೆವು. ನಾನು ಪೂರ್ವಬಂಗಾಲದಲ್ಲಿ ಇದ್ದಾಗ, ಹಾವೂ ಅಂದರೆ ಅದೇನು ಅಂತೀರಿ........" ಲಕ್ಷ್ಮಿಯವರು ಹಾಸಿಗೆಗಳ ಮೇಲೇ ಇರುತ್ತಿದ್ದ ಹಾವುಗಳು, ತೊಲೆಗಳು, ಗೂಟಗಳಿಂದ ನೇತು ಬಿದ್ದಿರುತ್ತಿದ್ದ ಹಾವು ಇತ್ಯಾದಿ ಬಣ್ಣಿಸಿದರು.

ಕತೆಯ ಮೇಲೆ ಕತೆ ಬೆಳೆಯಿತು. ಹಾವು ಮಾತ್ರ ಮ ಮೇಲೆ ಈಗ ಆ ಕೊಂಬೆ ಈ ಕೊಂಬೆ ಹತ್ತುತ್ತ ಇಳಿಯುತ್ತ, ಕ ಎರಡು ಕೊಂಬೆಗಳಿಂದ ಮಾಲೆಯಾಗಿ, ಈಗ ಕೊಂಬೆಯೊಂದ

ಸುರುಳಿ ಸುತ್ತಿಕೊಂಡು—ಹೀಗೆಲ್ಲ ಇರುತ್ತಿತ್ತು. ಇಳಿಯುವುದಕ್ಕೆ ಅದಕ್ಕೂ ಭಯ. ಇಳಿದಿದ್ದರೆ ಏನಾಗುತ್ತಿತ್ತೋ! ಆದರೆ ಪಾಪ, ಅದಕ್ಕೇನು ಗೊತ್ತು ?

" ಹೇಗೆ ಕೊಲ್ಲೋಣಾ ಅಂತ. ಅಲ್ಲೇ ಬಡಿದುಹಾಕಿಬಿಟ್ಟರೆ, ದೊಡ್ಡ ಗಳುವಿನಿಂದ ? " ಸಿಂಹರವರು.

" ಅಯ್ಯೋ, ಇಷ್ಟೊಂದು ಕೊಂಬೆಗಳಿರೋವಾಗ ಇಲ್ಲಿಂದ ಏಟು ಬೀಳೋಣ ಅಂದರೇನು ! " ನಾನು.

" ಏಣಿ ಹಾಕಿಕೊಂಡು......."

" ಛಿ ಛೀ, ಆಗದ ಕೆಲಸ. ಒಂದು ಮಚ್ಚೋ ಕುಡುಗೋಲೋ ಇದ್ದರೆ ಗಳುಗೆ ಕಟ್ಟಿ, ಹಾವಿಗೆ ಸರಿಯಾಗಿ ಹಿಡಿದು ಸರಕ್ಕನೆ ಕತ್ತರಿಸಿ ಬಿಡಬೇಕು. ಎರಡು ತುಂಡಾಗಿ—ಒಂದೇ ಏಟಿಗೆ, ಕಾಯಿ ಕುಯ್ದ ಹಾಗೆ " ಸರದಾರಜಿಯ ಸಲಹೆ. ಸಿಂಹರವರು ಒಪ್ಪಿದರು. ನಾವೆಲ್ಲ ಸುಮ್ಮನಿದ್ದೆವು. ನನಗೆ ನಗುವೇ ಬಂದಿತು. ತಡೆದುಕೊಂಡೆ. ಹಾಗೂ " ಅದು ಆಯುವಾಗಿ ಸಿಕ್ಕೂ ಸುಮ್ಮನೆ ಇರಬೇಕಲ್ಲ. ಮೇಲಾಗಿ ಅದೇನು ಸೆಟೆಗೊಂಡಿರುತ್ತೇ ? ಬಳುಕು, ನುಣುಪು, ರಬ್ಬರಿನ ಹಾಗೆ " ಎಂದೆ. ಆದರೆ ಸೀತಾರಾಮು " ಸರದಾರಜಿ ಹೇಳಿದ್ದು ಒಪ್ಪತಕ್ಕದ್ದು. ಚಟಕ್ ಅಂತ ಆಗಿಹೋಗುತ್ತೆ " ಎಂದ. ಇನ್ನೊಂದು ನಿಮಿಷದಲ್ಲಿ ಸೀತಾರಾಮು ಸಿಂಹರವರ ಮನೆಯಿಂದ ಕುಡುಗೋಲನ್ನು ತಂದು ನಮ್ಮ ಮೆಟ್ಟಲಿನ ಮೇಲೆ ಮಸೆಯುತ್ತಿದ್ದ.

" ಅಯ್ಯೋ, ಆ ಮೊಂಡು ಕುಡುಗೋಲಿಗೆ ಸಿಕ್ಕೀತೆ ? ಎಲ್ಲೀ ಕೆಲಸ ಬಿಡ್ರೀ " ಗರೂಡರವರು ನಿರುತ್ಸಾಹಪಡಿಸಿದರು.

" ಹಾಗಾದರೆ ಸಾಲಾ, ನನ್ನ ಕತ್ತೀನೇ ತರೋಣ. ದೊಡ್ಡದು ಇದೆಯಲ್ಲ ನನ್ನ ಹತ್ತಿರ, ಏನೂ ಕೆಲಸ ಮಾಡದೆ ಬೊಂಬಿಗೆ ಕಟ್ಟಿ ಒಂದೇಟಿಗೆ ...."

" ಏನೋ ಅನುಮಾನ. "

" ಹೋಗಲಿ, ಚುಚ್ಚಿಬಿಡೋಣ. ಸಾಲಾ ಸಾಯಲಿ, ರಕ್ತ ಸೋರಿ. ಬೇಟಾ, ಹೋಗು ತಗೊಂಡು ಬಾ ತಲವಾರ್ " ಸರದಾರರು ತಮ್ಮ ಮಗನನ್ನು ಕಳುಹಿಸಿದರು.

" ಸಾಲಾಕ್ಕೆ ಹಾಗೇ ಸರಿ " ಸೀತಾರಾಮು ಹೋ ಎಂದು ನಕ್ಕ.

" ಈ ಮರಕ್ಕೇ ಬೆಂಕಿ ಹಚ್ಚಿಬಿಡೋಣ ಸೀಮೆಯೆಣ್ಣೆ ಹಾಕಿ '

" ಹೂಂ, ಸಾಲಾ ಬೆಂದು ಭಸ್ಮವಾಗಿ ಹೋಗಲಿ " ಸೀತಾರಾಮು ಇನ್ನೂ ನಕ್ಕ

" ಸದ್ಯ ರಾಯರ ಮನೇಗೆ ಎಲ್ಲಾದರೂ ಬೆಂಕಿ ಇಟ್ಟೀರಪ್ಪ, ಗಜ ದೂರವೂ ಇಲ್ಲ " ಗರೂಡ್‌ರವರು ನಗುತ್ತ ಹೇಳಿದರು.

" ಒಂದು ಬಂದೂಕು ಇದ್ದಿದ್ದರೆ ! ಹುಂ, ಡಾಕ್ಟರ್ ಭಾರ್ಗವ್ ಇದ್ದಿದ್ದರೆ ತರಬಹುದಾಗಿತ್ತು. ಅವರೊ, ರಜದಲ್ಲಿ ಹೋಗಿಬಿಟ್ಟಿದ್ದಾರೆ" ಸರದಾರಜಿ ತಮ್ಮ ನೆರೆಯನ್ನು ನೆನೆಸಿಕೊಂಡರು.

" ಹಾಂ, ಸರದಾರಜಿ, ಅದು ನಿಸೂರಾದ ಕೆಲಸ. ಢಂ ಅಂತ ಹಾರಿಸಿಬಿಟ್ಟಿದ್ದರೆ ಜೊಪ್ಪಂತ ಬಿದ್ದು ಸಾಯುತ್ತಿತ್ತು." ಸೀತಾರಾಮುನಿಗೆ ಇದಂತು ಬಹಳ ಒಪ್ಪಿಗೆಯಾಯ್ತು.

ಉತ್ತಮೋತ್ತಮ ಪ್ರೊಫೆಸರರುಗಳ ತಲೆಗಳಿಂದ ಮೇಲೆ ಕೇಳಬೇಕೆ ! ಫಲವತ್ತಾದ ಬುದ್ಧಿಗಳಿಂದ ಸಲಹೆಗಳ ಬೆಳೆ ಗಳಿಗೆಗಳಿಗೂ ಹುಟ್ಟುತ್ತಿತ್ತು. ಸೀತಾರಾಮು ಎಲ್ಲಕ್ಕೂ ಒಪ್ಪಿಗೆ ಕೊಡುತ್ತಿದ್ದ. ಅವನ ಸಂತೋಷ ಎಲ್ಲೂ ಹಿಡಿಸದು. ಹಾಲನ್ನು ನಿರೀಕ್ಷಿಸಿಕೊಂಡಿದ್ದವರ ಗತಿ ಏನಾಯಿತೋ.

" ಮಿಸ್ಟರ್ ! ಏಯ್ ! " ಸೀತಾರಾಮು ಬೀದಿಯಲ್ಲಿ ಬೈಸ್ಕಲ್ ಮೇಲೆ ಹೋಗುತಿದ್ದ ಇಬ್ಬರನ್ನು ಕೂಗಿದ. ಅವರು ನಿಲ್ಲದೆಯೇ ಹೋಗುತ್ತಿದ್ದರು. ಈ ವರೆಗೆ ನಮ್ಮ ಬುದ್ಧಿಯ ಕಟ್ಟಕಡೆಗೆ ಬಂದಿದ್ದ ನಾವು ಇವರಲ್ಲೇನೋ ಇರಬೇಕೆಂದು ಊಹಿಸಿ ಅವರನ್ನು ಎಲ್ಲರೂ ಸೇರಿ ಕೂಗಿದೆವು. ಅವರು ಇಳಿದು ಬಂದರು. ಒಬ್ಬಾತ ನಮ್ಮಂತೆಯೇ 'ಜಂಟಲ್‌ಮನ್,' ಇನ್ನೊಬ್ಬ ಗರಡಿಯ ಮಟ್ಟಿ ಬಳಿದುಕೊಂಡಿದ್ದ ಯುವಕ. ಸರದಾರಜಿಯಲ್ಲಿ ಮೂರನೆಯ ಒಂದು ಭಾಗ ಗಾತ್ರ.

" ಅರೇ, ಇಲ್ಲಿ ಸರ್ಪ ಇದೆ. ಬಡಿದು ಹಾಕೋ " ಸೀತಾರಾಮು ಯುವಕನಿಗೆ ಹೇಳಿದ. ಯುವಕ ಏನೂ ಹೇಳದೆ ಮರದ ಬುಡಕ್ಕೆ ನೇರವಾಗಿ ಹೋಗಿ ಮೇಲೆ ನೋಡಿದ.

" ನೋಡಿ, ಇವನಾದರೆ ಹೊಡೀತಾನೆ, ಸಿಕ್ಕಿದರೆ" ಲಕ್ಷ್ಮಯವರು ನನ್ನ ಹತ್ತಿರ ಪಿಸುಗುಟ್ಟಿದರು.

" ಮಿಸ್ಟರ್ ಏಯ್. ಅಷ್ಟು ಹತ್ತಿರ ಹೋಗಬೇಡ. ಸಾಲಾ ಕಚ್ಚಿಗಿಚ್ಚಿ ಮಾಡಿದರೆ ? " ಸರದಾರಜಿ ಎಚ್ಚರಿಕೆ ಕೊಟ್ಟರು.

" ಧಾಮಿನ್ ಅಲ್ಲವೆ ? " ಸಿಂಹರವರು ಕೇಳಿದರು.

ಅವನು ಉತ್ತರ ಕೊಡಲಿಲ್ಲ. ಅತ್ತಿತ್ತ ಸುಳಿದಾಡುತ್ತ ಹಾವಿನ ಸ್ಥಳ-ಗತಿಗಳನ್ನು ನೋಡುತ್ತಿದ್ದನೆನ್ನಬೇಕು.

" ಧಾಮಿನ್ ಅಲ್ಲವೆ ? " ಸಿಂಹರವರು ಅವನ ಸಂಗಾತಿಯನ್ನು ಕೇಳಿದರು.

" ಎಂಥಾದ್ದೋ ಯಾರಿಗೆ ಗೊತ್ತು ಸ್ವಾಮಿ. ಅಂತೂ ಬಡಿದು ಹಾಕಬೇಕು " ಆತ ಹೇಳಿದ.

ಯುವಕ ನನ್ನ ಲಾಠಿಗೆ ಕೈ ನೀಡಿದ. ಕೊಟ್ಟೆ. ಸಣ್ಣದಾದರೂ ಗಂಡುಬಿದಿರಿನ ದೊಣ್ಣೆ. ಸರ್ವೆ ಕ್ಯಾಂಪಿಗೆ ಹೋದಾಗ ಆರಿಸಿ ತಂದಿದ್ದೆ. ಈ ಕಡೆಯ ಹಳ್ಳಿಯ ಪ್ರತಿಯೊಬ್ಬನೂ ಇಂತಹದೊಂದು ಲಾಠಿಗೆ ಬೆಳ್ಳಿಯದೋ ಹಿತ್ತಾಳೆಯದೋ ಕಟ್ಟನ್ನು ಹಾಕಿಸಿ, ಹೆಗಲಿನ ಮೇಲೆ ಹೊತ್ತೇ ತಿರುಗುತ್ತಿರುತ್ತಾನೆ. ಅದೇನು ಹಾವಿಗೋ ಹಗೆಗೋ ಹೇಳಲಾರೆ. ಅಂತೂ ಬಡಿದಾಟ, ದೊಂಬಿಗಳಿಗೆ, ಡಕಾಯಿತರಿಗೆ ಇಲ್ಲೇನು ದರಿದ್ರವಿಲ್ಲ. ಲಾಯರಿಗೆ ಭೂರಿದಕ್ಷಿಣೆ ಇದು ಹೇಗಾದರೂ ನನ್ನ ಅಹಿಂಸಾದೊಣ್ಣೆ ಈವರೆಗೆ ಪರಂಗಿ ಹಣ್ಣನ್ನು ತಿವಿದು ಬೀಳಿಸುವುದಕ್ಕಲ್ಲದೆ ಬೇರೆಯ ಕೆಲಸಕ್ಕೆ ಉಪಯೋಗವಾಗಿರಲಿಲ್ಲ. ಇದರ ಜತೆಯದೊಂದನ್ನು ಕತ್ತರಿಸಿ ಬೀಸುವ ಕಲ್ಲಿಗೆ ಗೂಟ ಮಾಡಿದ್ದೆ. ಇರಲಿ

ಯುವಕ ಏನನ್ನು ಮಾಡುತ್ತಿದ್ದಾನೆ, ಹಾವು ಎಲ್ಲಿದೆ, ಏನು ಮಾಡುತ್ತಿದೆ ಎಂದು ನಾವು ಕಣ್ಣಿನಲ್ಲಿ ಕಣ್ಣಿಟ್ಟುಕೊಂಡು ನೋಡುತ್ತಲೇ ಇದ್ದೇವೆ. ಅದೇನಾಯಿತೋ ನಮಗೆ ಗೊತ್ತಾಗಲೇ ಇಲ್ಲ.

ಮರಕ್ಕೆ ಬಡಿದ ಲಾಠಿ ಶಬ್ದವೊಂದು, ನೆಲಕ್ಕೆ ಬಡಿದ ಶಬ್ದ ನಾಲ್ಕು. ನಾವೆಲ್ಲ ಅವನನ್ನು ಸುತ್ತುಗಟ್ಟಿದ್ದೆವು. ಆಗೋ ಅಲ್ಲಿ ಬಿದ್ದಿತ್ತು, ಹಾವು—ತಲೆ ಜಜ್ಜಿ, ರಕ್ತ ಸುರಿದು, ಮಣ್ಣು ಮೆತ್ತಿಕೊಂಡು, ಬಾಲವನ್ನು ಹೊರಳಿಸುತ್ತ. ಮೈಗೆ ಒಂದೇಟು ಬಿದ್ದ ಕಡೆಯೂ ಕಾಣುತ್ತಿತ್ತು. ಗಲಭೆ ಹತ್ತಿತ್ತು. "ಹಾಕಿ ಏಟು! ಸಾಲಾ! ಹೊಡೀರಿ! ಬಡೀರಿ! ತುಳೀರಿ! ಸಾಯಿಸಿ!" ಈಗ ಅವೆಷ್ಟೋ ಬಿದ್ದ ಏಟುಗಳು ಸತ್ತ ಹಾವಿನ ಮೇಲೆ. ಉತ್ತೈಯವರು 'ಹಾ!' ಎಂದು ಮೂಗಿಯನ್ನು ಮುಚ್ಚಿಕೊಂಡರು. ಸರದಾರಜಿ 'ಸಾಲಾ' ಎಂದು ಬೀಸಿದ ದೊಣ್ಣೆಯೇಟು ಬಡಿದಿತ್ತು. ಆದರೆ ಅದು ಸ್ವಮಾದವಾಗಿರಲಿಲ್ಲ. ಗಳಿಗೆಯ ಕಾಲ ಹಾವನ್ನು ದಿಟ್ಟಿಸುವುದರಲ್ಲಿ ನಾವೆಲ್ಲ ಮೈಮರೆತಿದ್ದೆವು.

ಅದು ಹೇಗೋ ನನ್ನ ಕೈಗೆ ದೊಣ್ಣೆ ಬಂದಿತ್ತು. "ಆತನಿಗೆ ಏನಾದರೂ........" ಸುತ್ತ ನೋಡುವಷ್ಟರಲ್ಲಿ ಯುವಕ ಗುಂಪಿನಿಂದ ದಾರಿಬಿಡಿಸಿಕೊಂಡು ಹೊರಟುಹೋಗಿದ್ದ. ಅದೇನು ಅವನ ಕೆಲಸದ ಆತುರವೋ, ನಮ್ಮ ಬಗ್ಗೆ ತಿರಸ್ಕಾರವೋ, ಅವನ ಸ್ವಭಾವವೇಯೋ ಅಥವಾ ಆ 'ಜಂಟಲ್‌ಮನ್' ವೇಗ ಕರೆದುಕೊಂಡು ಹೋದನೋ ಯಾವುದನ್ನೂ ಹೇಳಲಾರೆ.

"ಎಲ್ಲಾರೂ ಅವರವರ ಲಾಠಿಗಳನ್ನು ಚೆನ್ನಾಗಿ ತೊಳೆದುಕೊಳ್ಳಿ. ವಿಷಮಯ. ಧಾಮಿನ್ ವಿಷದ ಹಾವು ಅಲ್ಲವೇ?" ಸಿಂಹರವರು ಯಾರನ್ನು ಕೇಳಿದರೋ ಏನೋ. ಉತ್ತರವಂತೂ ಬರಲಿಲ್ಲ.

"ಇದನ್ನು ಹೂಳಿಬಿಡಬೇಕು. ಸೀತಾರಾಮ, ನಡಿಯೋ ಅದನ್ನು ಸರಿಸಿಕೊಂಡು ಇದಿರು ಹೊಲಕ್ಕೆ" ಗರುಡ್‌ರವರು.

ಸೀತಾರಾಮ ಲಾಠಿಯಿಂದ ರಸ್ತೆಯಾಚೆಗೆ ತಳ್ಳಿಕೊಂಡು ಹೋದ. ಸುತ್ತಲಿನ ಗುಂಪೆಲ್ಲ ಅದರೊಂದಿಗೇ ಹೋಯಿತು—ಹಾವನ್ನು ಮಧ್ಯೆ ಇಟ್ಟುಕೊಂಡೇ. ಈಗ ಎಲ್ಲ ಮನೆಯ ಮಕ್ಕಳೂ—ಗಂಡು ಹೆಣ್ಣು ಎರಡು ವರ್ಷದಿಂದ ಮೇಲಿನವೆಲ್ಲ—ಬಂದು ಸುತ್ತಲೂ ಕುಕ್ಕರುಗಾಲಿನಲ್ಲಿ ಕುಳಿತುವು. ನಾವೆಲ್ಲ ದೊಡ್ಡ ಬೇಟೆಯಾಡಿದ ಧೀರರಂತೆ ಲಾಠಿಯನ್ನು ವಿಧವಿಧದಲ್ಲಿ ಹಿಡಿದುಕೊಂಡು ನಿಂತಿದ್ದೆವು.

"ಹೂಳೋದಕ್ಕಿಂತ ಮುಂಚೆ ಸುಟ್ಟುಬಿಡಬೇಕು, ಸೀಮೆ ಎಣ್ಣೆ ಹಾಕಿ" ಸಿಂಹರವರು ಸೂಚಿಸಿದರು.

"ಹೂಂ, ಸಾಲಾ ಹಾಗೇ ಹೂಳಬಾರದು" ಸರದಾರಜಿಯೆಂದ.

"ಪ್ರಭಾಕರ ಬೇಟಾ, ಮನೆಯಿಂದ ಸಲಾಯಿ ತಗೊಂಡು ಬಾ" ಪ್ರಸಾದರು ಸಣಬಿನ ಒಣ ಕಡ್ಡಿಗಾಗಿ ಕಳುಹಿಸಿದರು.

"ದತ್ತ, ಸೀಮೆಯೆಣ್ಣೆ" ತರಫ್‌ದಾರ್.

"ಮಹಾ ವಿಷ, ದುರ್ನಾತ, ಕಜ್ಜಿತುರಿ ಬಂದುಬಿಡುತ್ತೆ ಇದರ ಹೊಗೆ ತಗಲಿದರೆ. ಧಾಮಿನ್ ಅಂದರೆ ಹಾಗೇ" ಸಿಂಹರವರು ಬಣ್ಣಿಸಿದರು.

"ಅಲಾ ಸಾಲಾ ಹಾಗೇ! ಏ, ಎಲ್ಲ ದೂರ ಬನ್ನಿ. ಹಾಳುವಿಷ. ಸಾಲಾ ಇನ್ನೂ ಬಾಲ ಬೀಸ್ತಾಲೇ ಇದೆ." ಸರದಾರರು ಹಿಂದೆ ಸರಿದು ಮಕ್ಕಳನ್ನೆಲ್ಲ ಹಿಂದಕ್ಕೆ ಸರಿಸಿದರು.

"ಹೂಂ. ಬಾಲ ಸಾಯೋದಿಲ್ಲ ಬೇಗ. ಈ ಬಂಡೆಹಾವಿನ ಬಲವೆಲ್ಲ ಬಾಲದಲ್ಲೇ. ಇದು ಕಚ್ಚೋದಿಲ್ಲ, ಆದರೆ ಬಾಲದಿಂದ ಫರೀರ್ ಅಂತ ಚಾವಟಿಗೂ ಜೋರಾಗಿ ಏಟು ಕೊಡುತ್ತೆ. ಏಟು ತಿಂದೋರು ದಪ್ಪಂತ ಬೀಳೋದೇ. ಎತ್ತು ಕುದುರೆಗಳಿಗೂ ಹೊಡೆದುಬಿಡುತ್ತೆ. ಒಂದೇಟು ಸಾಕು, ಬಿತ್ತು ಅನ್ನಿ. ನಂಗೆ ಗೊತ್ತು" ಕುಟ್ಟಿಯವರು ಬಾಲದ ಕತೆಯನ್ನು ಬಾಲಬಾಲವಾಗಿ ಹೇಳಿದರು.

"ಬಂಡೆಹಾವಲ್ಲ. ಇದು ಧಾಮಿನ್ ಏನು ಬೇಕಾದರೂ ಹೇಳಿ" ಸಿಂಹರವರು ಅತ್ತಿತ್ತ ನೋಡಿದರು. ಹತ್ತಿರದಲ್ಲಿ ದೊಡ್ಡ ಏಣಿಯೊಂದನ್ನು ಹೊತ್ತು ಬರುತ್ತಿದ್ದ ಎಲೆಕ್ಟ್ರಿಕ್ ಇಲಾಖೆಯ ಕೆಲಸಗಾರರನ್ನು ಕಂಡು "ಇಲ್ಲಿ ನೋಡು, ಇದು ಧಾಮಿನ್ ಅಲ್ಲವೆ?" ಎಂದು ಕೇಳಿದರು.

"ಹೂಂ. ಹಾಗೇ ಕಾಣುತ್ತೆ" ಅವರಲ್ಲಿ ಮುಂದಿನ ತುದಿಯವನು ಹೇಳಿದ.

"ನೋಡಿದಿರಾ ಅದೇ".

"ಬಹಳ ಜೋರಾಗಿ ಓಡುತ್ತೆ, ಮರ ಹತ್ತಿ ಹಕ್ಕಿಗಿಕ್ಕಿ ತಿನ್ನುತ್ತೆ"

"ಹುಂ, ಹುಂ, ಕೇಳಿ ನಾನು ಧಾಮಿನ್ ಧಾಮಿನ್ ಅಂತ ಅರಚಿಕೋತಾಲೇ ಇದೀನಿ ಯಾರೂ ಕೇಳೋದೇ ಇಲ್ಲ." ಎಂದು ಸುತ್ತಲೂ ಹೆಮ್ಮೆಯಿಂದ ನೋಡಿದರು. ಇಷ್ಟು ಹೊತ್ತಿಗೆ ಹಿಂದಿನ ತುದಿಯವನು ಆ ಸ್ಥಳಕ್ಕೆ ಬಂದಿದ್ದು, ತನ್ನ ಸಂಗಾತಿಯನ್ನು ಉದ್ದೇಶಿಸಿ "ಛಿ. ಬೇಕೂಫ, ಇದು ಧಾಮಿನೇ? 'ಬರಸಾತಿ' ಕಣೋ" ಎಂದ. ಎಂದರೆ ಮಳೆಗಾಲಕ್ಕೆ ಬರುವುದು. ಆಗ ಸಿಂಹರವರ ಮುಖ ಚಿಕ್ಕದಾಗಿ ಮುಚ್ಚಿಕೊಂಡಿತಾದರೂ ಅವರು "ಹುಂ, ನಿಂಗೆ ಗೊತ್ತಿಲ್ಲ ಬಿಡು" ಅಂದರು. ಈ ವೇಳೆಗೆ ಅತ್ತ ಹಾಯ್ದ ಇನ್ನೊಬ್ಬ ದಾರಿಗ "ಇದು ಅಷಾಢಿ" ಎಂದ. ಸಿಂಹರವರು ಪಟ್ಟನ್ನು ಬಿಡದೆ ಅವನೊಂದಿಗೂ ವಾದಿಸಿದರು.

ಅಂತೂ ಧಾಮಿನ್ನೋ, ಬಂಡೆಹಾವೋ, ಬರಸಾತಿಯೋ, ಅಷಾಢಿಯೋ, ಗೋಧಿನಾಗರವೋ ಏನೋ—ಯಾರಿಗೆ ಬೇಕು. ಸೀತಾರಾಮ ನನ್ನ ಲಾಠಿಯಿಂದ ಅಳತೆ ಹಾಕಿದಂತೆ ಹಾವು ಎಂಟು ಅಡಿಯಷ್ಟು ಉದ್ದವಾಗಿತ್ತು. ಸುಮಾರು ಮೂರು ಮೂರೂವರೆ ಅಂಗುಲ ಅಡ್ಡಳತೆ. ತಲೆಯಿಂದ ಸ್ವಲ್ಪ ಭಾಗ ಗೋಧಿಯ ಸರಪಳಿ ಅನಂತರ ಹಳದಿ ಕಪ್ಪು. "ಈಗ ಮೇಲೆ ನೋಡಿದಿರಲ್ಲ, ಇನ್ನು ಕೆಳಗೆ ನೋಡಿ" ಎಂದು ಸೀತಾರಾಮ ಹೊರಳಿಸಿದಾಗ ಕಂಡದ್ದು ಹಳದಿ ಬಿಳುಪು ಹೊಟ್ಟೆಯ ಮೇಲೆ ಕಪ್ಪು ಪಟ್ಟೆ. ಇನ್ನೂ ದೇಹ, ಬಾಲ—ಈ ಭಾಗ ಹೊರಳುತ್ತ, ಬಾಗುತ್ತ ಒದ್ದಾಡುತ್ತಲೇ ಇತ್ತು. ಬಾಯಿಂದ ರಕ್ತ, ಜೊಲ್ಲು ಹರಿಯುತ್ತಲೇ ಇತ್ತು. ಛೆ!

ಕುಟ್ಟಿಯವರ ಕಿರಿಯ ಹುಡುಗ ಮೂರು ವರ್ಷದ ಸುರೇಶ ಅತ್ತಿತ್ತ ನಡೆಯುತ್ತ, ನೋಡುತ್ತ, ಅದೇನೋ ಅದರ ಬಾಲದೆಡೆಗೆ ಹೋಗುತ್ತಿದ್ದ. ಕುಟ್ಟಿಯವರು "ಸುರೇಶ! ಸುರೇಶ, ಇತ್ತ ಬಾ" ಎಂದು ಎಳೆದುಕೊಳ್ಳುತ್ತಲೇ ಇದ್ದರು. ಅಕ್ಕ ಐದು ವರ್ಷದ 'ನಿಮ್ಮಿ'ಯನ್ನು ಗುಂಪಿನಿಂದ ಎಳೆದು, ಅಕ್ಕ-ತಮ್ಮಂದಿರಿಬ್ಬರಿಗೂ ಹಾವನ್ನು

ಚೆನ್ನಾಗಿ ತೋರಿಸುತ್ತ “ ನೋಡಿದಿರಾ ರಾತ್ರಿ ಬಗೀಚಕ್ಕೆ ಹೋಗಬೇಡಿ ಅನ್ನೋದು ಯಾಕೆ ಅಂತ ಗೊತ್ತಾಯ್ತೋ ಈಗ? ಇಂಥಾದ್ದು ಇರುತ್ತೆ ಜೋಕೆ! ಇನ್ನು ಹೋಗ್ತೀರಾ? ಹೋಗೋದಿಲ್ಲ ತಾನೆ?” ಎಂದು ತಂದೆ ಕೇಳುತ್ತಿದ್ದರು ಇತರ ತಂದೆಯುವರೂ ಅವರವರ ಮಕ್ಕಳಿಗೆ ಎಚ್ಚರಿಕೆ ಕೊಟ್ಟರು

ಸೀಮೆಯೆಣ್ಣೆ ಬಂದಿತು, ಸೆಣಬಿನ ಕಡ್ಡಿಯೂ ಬಂದಿತು.

“ ಇನ್ನು ಅದರ ತಲೆ ಚೆನ್ನಾಗಿ ಜಜ್ಜಿ, ಸಂಸ್ಕಾರಕ್ಕೆ ಮುಂಚೆ” ಕುಟ್ಟಿಯುವರು ಹೇಳಿದರು. ಸೀತಾರಾಮ ಕುಟ್ಟಿದ.

“ ಸರಿ, ಇನ್ನೇನಿದೆ ಅಲ್ಲಿ ಕುಟ್ಟೋದಕ್ಕೆ, ಎಲ್ಲ ಅಜ್ಜಿಗುಜ್ಜಿ-ಯಾಗಿದೆ” ಎಂದೆ ನಾನು.

“ ಹಾಗೆನ್ನಬೇಡಿ. ನಾನು ನೋಡಿದೀನಿ, ಈ ಬಂಡೆಹಾವನ್ನೇ ಹಾವಾಡಿಗರು ತರೋದು. ಇದಕ್ಕೂ ಮುಂಗಸಿಗೂ ಜಗಳ ಮಾಡಿ-ಸ್ತಾರೆ. ಮುಂಗಸಿ ಇದರ ಮೂತೀನೆಲ್ಲ ಹೀಗೇ ಕಚ್ಚಿಹಾಕುತ್ತೆ. ಆದರೆ ಒಂದು ವಾರದೊಳಗಾಗಿ ಎಲ್ಲ ಮತ್ತೆ ಸರಿಹೋಗುತ್ತಂತೆ. ಹಿಂದಿನ ಹಾಗೇ ತಯಾರ್” ಕುಟ್ಟಿಯುವರು ತಿಳಿಸಿದರು.

“ ಆಹಾ! ಎಲಾ! ಸಾಲಾ! ” ಸರದಾರಜಿಯಿಂದ.

“ ಕಣ್ಣುಗಿಣ್ಣು ಎಲ್ಲಿ? ” ಲಕ್ಷ್ಮಿಯುವರು.

“ ಓಹೋ ” ಕುಟ್ಟಿಯುವರಿಗೆ ಅನುಮಾನವೇ ಇರಲಿಲ್ಲ ನಾನು ಸುಮ್ಮನಿದ್ದುಬಿಟ್ಟೆ.

“ ಹಾವಾಡಿಗರು ಇದನ್ನು ತಿಂದುಬಿಡ್ತಾರೆ, ತಲೆ ಮಾತ್ರ ತೆಗೆದುಬಿಟ್ಟು” ಇನ್ನೂ ಅಷ್ಟು ವಿಷಯವನ್ನು ತಿಳಿಸಿದರು.

“ ಹೂಂ. ಪೂರ್ವಬಂಗಾಳದಲ್ಲೂ ತಿನ್ತಾರೆ” ಲಕ್ಷ್ಮಿಯುವರು ಸಮರ್ಥಿಸಿದರು.

“ ಹೂಂ ಬಾಬುಜೀ. ಮಾರ್ಕೆಟ್ಟಿನಲ್ಲಿ ಇದು ಎರಡು ಎರಡೂವರೆ ರೂಪಾಯಿನ ತರಕಾರಿ” ಸೀತಾರಾಮ ಹೇಳಿದ.

“ ಥೂ! ಸಾಲಾ! ” ಸರದಾರಜಿಯಿಂದ.

ಒಂದು ಗುದ್ದಲಿಯನ್ನೂ ಯಾರೋ ತಂದರು. ಸೀತಾರಾಮ ಗುಂಡಿಮಾಡಿ, ಕಡ್ಡಿಯೊಟ್ಟಿ, ಹಾವಿನ ಮೇಲೆ ಸೀಮೆಯೆಣ್ಣೆ ಸುರಿದು, ಕಡ್ಡಿಗೆ ಬೆಂಕಿಯಿಟ್ಟು, ಹಾವನ್ನು ತಿರಿತಿರಿಗಿಸಿ ಸುಟ್ಟ. ಮಣ್ಣುಮುಚ್ಚಿದ. ಮಣ್ಣು ಮುಚ್ಚಿದ ಮೇಲೂ ಮಕ್ಕಳು ಸುತ್ತಲೂ ಕುಳಿತೇ ಇದ್ದುವು.

“ ಅಂತೂ ಒಂದು ಹಾವು ದಹನವಾಯ್ತು ” ನಾನೆಂದೆ.

“ ಹೂಂ, ಇನ್ನೊಂದು ಇದೆ. ಅದು ಎಂದು ಬರುತ್ತೊ. ಆಗ ನಾವೇ ಹೊಡೆದು ಹಾಕಬೇಕು ” ಲಕ್ಷ್ಮಿಯುವರು ಹೇಳಿದರು.

“ ಹೌದು. ಸಾಲಾ ನಾವೇ ಹೊಡೀಬೇಕು ” ಸರದಾರಜಿ ಹೇಳಿದರು. ಲಕ್ಷ್ಮಿಯುವರು ಅವರ ಕಡೆಗೆ ನೋಡಿ ಮುಗುಳುನಗೆ ನಕ್ಕರು. ಅವರಿಗೆ ಮಂಡಿಯ ನೋವು ಮರಕಳಿಸಿರಬೇಕು.

“ ಈಗ ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ಅದರ ಸಂಗಾತಿಯನ್ನು ಕೊಂದಿದೀವಿ. ಅದು ಹಟ ಸಾಧಿಸೀತು ” ಕುಟ್ಟಿ-ಯುವರು.

“ ಆಹಾ! ” ನಾನು ಆಶ್ಚರ್ಯದಿಂದ ಕೇಳಿದೆ.

“ ಹೂಂ, ಹಾವು ಅಂದರೆ ಏನು ಅಂತ ತಿಳಿದುಕೊಂಡು ಬಿಟ್ಟಿರಿ? ಹನ್ನೆರಡು ವರ್ಷ ಹಟ ಸಾಧಿಸುತ್ತೆ. ಪುಣೆಯಲ್ಲಿ ಒಬ್ಬ ಪರಂಗಿಯೋ, ನಿಷ್ಟ. ಅವನು ಬೇಟೆಗೆ ಹೋದಾಗ ಒಂದು ಹಾವನ್ನು ಕಂಡು, ಬಂದೂ-ಕಿನಿಂದ ಗೋಲೀ ಹಾರಿಸಿದನಂತೆ. ಅದು ಹೆಡೆಗೆ ತಗುಲಿ ಗಾಯ ಮಾಡಿದರೂ ಹಾವು ಸಾಯದೆ ತಪ್ಪಿಸಿಕೊಂಡಿತಂತೆ. ಆಗ ಅಲ್ಲಿಯೋರು ‘ ಸಾಹೇಬ್, ನೀವು ಈ ಕ್ಷಣ ಇಂಗ್ಲೆಂಡಿಗೆ ಹೋಗಿಬಿಡಿ. ಅದಕ್ಕೂ ನಿಮಗೂ ಮಧ್ಯೆ ಸಮುದ್ರವಿರಬೇಕು. ಇಲ್ಲದಿದ್ದರೆ, ಈ ದೇಶದಲ್ಲೇ ಎಲ್ಲಿದ್ದರೂ, ಬರ್ಮಾ ಚೀಣಾ ಎಲ್ಲಿಗೆ ಹೋದರೂ ನಿಮಗೆ ಪ್ರಾಣಭಯ ತಪ್ಪೋದಿಲ್ಲ ” ಅಂತ ಹೇಳಿದರಂತೆ. ಅವನು ಹಾಗೇ ಹೊರಟ. ಬೊಂಬಾಯಿನಲ್ಲಿ ಹಡಗು ತಪ್ಪಿ ಮುಂದಿನದಕ್ಕೆ ನಾಲ್ಕು ದಿನ ಕಾಯ-ಬೇಕಾಯಿತಂತೆ. ದೊಡ್ಡ ಹೋಟಲೊಂದರಲ್ಲಿ— ‘ ಟಾಜೋ, ’ ‘ ಗ್ರೀನ್ಸೋ ’ ಇರಬೇಕು— ಇಳಿದುಕೊಂಡಿದ್ದನಂತೆ. ಒಂದು ದಿನ ಅವನ ಹಾಸಿಗೇನೇ ಹೊಕ್ಕು, ಅವನು ಹೇಗೆ ಹೊಡೆದು ಗಾಸಿ ಮಾಡಿ-ದ್ದನೋ ಹಾಗೇ, ಅದೇ ಅವನ ಹಣೆಯನ್ನೇ ಕಚ್ಚಿಬಿಟ್ಟಿತಂತೆ ” ಕುಟ್ಟಿಯುವರು ಬೆರಳನ್ನು ಬಗ್ಗಿಸಿ ಅಕ್ಷತೆ ಇಟ್ಟುಕೊಳ್ಳುವ ಕಡೆಗೆ ಬಡಿದುಕೊಂಡರು.

“ ಆಮೇಲೆ? ” ಸಿಂಹರವರು.

“ ಆಮೇಲೇನು? ಆಗೇಹೋದ. Finish ”

“ ಎಲಾ ಸಾಲಾ! ” ಯಾರಿಂದ ಎಂದು ಹೇಳಲೇಬೇಕಾಗಿಲ್ಲ.

“ ಇನ್ನು ಅದರ ಸಂಗಾತಿಯೆಂದರೆ ಇನ್ನೂ ಹೆಚ್ಚು ಕೋಪ, ಹಟ. ”

“ ಆದರೆ ಹೊಡೆದೋನು ಅವನಲ್ಲ ” ಸಿಂಹರವರು ದಾರಿಯನ್ನು ಹುಡುಕಿದರು.

“ ಆದರೆ ನಾವೆಲ್ಲ ಒಂದೆರಡು ಏಟು ಹಾಕಿದೆವಲ್ಲ ” ಸರದಾರಜಿ

“ ನಿಜ. ಹುಷಾರಾಗಿರಬೇಕು ” ಲಕ್ಷ್ಮಿಯುವರು ಖಿನ್ನರಾದರು.

“ ಸಾಲಾ, ಇದೊಂದು ಪೀಕಲಾಟ ಬಂತಲ್ಲ, ಇದನ್ನು ಹೊಡೆದು ಹಾಕಿದೆವು ಅಂದರೆ. ಏ. ಎಲ್ಲಾರೂ ಕೇಳಿದರೇನೋ ಕುಟ್ಟಿಯುವರ ಕತೆ? ಹುಷಾರ್!.”

ಗುಂಪು ಚೆದರಿತು.

ಕುಟ್ಟಿಯುವರದ್ದು ‘ ಕತೆ ’ಯೆಂದುಕೊಂಡರೂ ನಾನೂ ಎಚ್ಚರಿಕೆ-ಯಿಂದಲೇ ಇದ್ದೇನೆ. ಇದರ ಸಂಗಾತಿ ಕಂಡಾಗ ಮುಂದಿನ ಸಂಗತಿ.

# ಭಾರತೀಯ ವೇಷ-ಭೂಷಣಗಳು

( ಕ್ರಿಸ್ತಪೂರ್ವ ೩೦೦೦ ವರ್ಷಗಳಿಂದ ಕ್ರಿಸ್ತಶಕಾರಂಭ ಪರ್ಯಂತ )*

ಶ್ರೀ. ಸಗರ ಕೃಷ್ಣಾಚಾರ್ಯ ಬಿ. ಎ, ಶಹಪುರ

卐

## ಲೇಖಾಂಕ ೧

**ವೇದಕಾಲದಲ್ಲಿ ಅರ್ಥಾತ್ ನೂರುವರೆ ಸಾವಿರ ವರ್ಷಗಳ ಮುಂಚೆ, ಭಾರತೀಯರ ಉಡುಪು ಹೇಗಿದ್ದಿತು ಎಂಬುದನ್ನು ತಿಳಿದುಕೊಳ್ಳಲು ಋಗ್ವೇದದಂತಹ ಪ್ರಾಚೀನತಮ ಶ್ರೇಷ್ಠ ಗ್ರಂಥವು, ಸರಿಯಾದ ರೀತಿಯಲ್ಲಿ ತಿಳಿಸಿಕೊಡಲು ಸಮರ್ಥವಾಗಿದೆ. ಅದರ ಆಧಾರದ ಮೇಲಿಂದ ವೇದಕಾಲದ ಆರ್ಯರು ವಸ್ತ್ರ ಪ್ರಾವರಣದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿ ಕೊಂಡಿದ್ದರೆಂದು ಕಂಡುಬರುತ್ತದೆ.**

卐

ಕ್ರಿ. ಶ. ೧೯೩೪ರ ವರೆಗೆ ನಮ್ಮ ಈ 'ಭಾರತ' ದೇಶದ 'ಸಂಸ್ಕೃತಿ'ಯ ಮತ್ತು ಅದರ ಪ್ರಾಚೀನತೆಯ ವಿಚಾರ, ವೇದಕಾಲ ಪರ್ಯಂತ, ಎಂದರೆ ಕ್ರಿ. ಶಕಾರಂಭಕ್ಕಿಂತ ಎರಡು ಸಾವಿರ ವರ್ಷಗಳ ಪರ್ಯಂತವೇ ಮರ್ಯಾದಿತವಾಗಿತ್ತು; ಆದರೆ ಕಳೆದ ಮೂವತ್ತು ವರ್ಷಗಳಲ್ಲಿ, ಸಿಂಧಪ್ರದೇಶದಲ್ಲಿಯ ಮೊಹೋಂಜೊದಾರೊದಲ್ಲಿಯ ಉತ್ಖನನದಿಂದ, ಈ ಪ್ರಾಚೀನ ಇತಿಹಾಸವು ಇನ್ನೂ ಒಂದು ಸಾವಿರ ವರ್ಷ ಆಚೆಗೆ (ಹಿಂದಕ್ಕೆ) ಹೋಗಿದೆ; ಮತ್ತು ಅದರಿಂದ ವೇದ-ಪೂರ್ವಕಾಲದ ಇತಿಹಾಸದ ಆಕಲನ ಮಾಡುವುದೂ ಶಕ್ಯವಾಗಿದೆ. ಇದರಂತೆಯೆ ಪಂಜಾಬದಲ್ಲಿಯ ಮಾಂಟಗೋಮೆರಿ ಹತ್ತಿರವಿದ್ದ ಹರಪ್ಪದಲ್ಲಿಯ ಉತ್ಖನನದ ಮೂಲಕವೂ, ಲುಪ್ತಪ್ರಾಯವಾಗಿದ್ದ ಪ್ರಾಚೀನ ಇತಿಹಾಸವನ್ನು ಗುರುತಿಸುವುದು ಸಾಧ್ಯವಾಗಿದೆ; ಅಲ್ಲದೆ ಈ ಮೂಲಕ ಈಗ ನಾಲ್ಕೈದು ಸಾವಿರ ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ವಾಸವಾಗಿದ್ದ ನಮ್ಮ ಪೂರ್ವಜರ ಇರುವಿಕೆ, ಅವರ ವ್ಯವ-ಸಾಯ, ರಾಜ್ಯಪದ್ಧತಿ, ಉಡುಪು ಮತ್ತು ಆಭರಣಗಳು ಯಾವುವು? ಮತ್ತು ಅವರ 'ಸಂಸ್ಕೃತಿ' ಎಂತಹದು?—ಎಂಬುದರ ಬಗೆಗೆ ಸಾಧ್ಯ-ವಾದ ಮಟ್ಟಿಗೆ ಅನುಮಾನಿಸಲೂ ಶಕ್ಯವಾಗಿದೆ. ನಮ್ಮ ಭಾರತೀಯ ಸಂಸ್ಕೃತಿಯು, ಇಜಿಪ್ತ ಮತ್ತು ಬೆಬಿಲೋನಿಯನ್, ಸುಮೇರಿಯನ್ ಮತ್ತು ಅಸೀರಿಯನ್ ಸಂಸ್ಕೃತಿಯಷ್ಟು ಪುರಾತನವಾಗಿದೆಯೆಂದು ವಿಶ್ವಾಸದಿಂದ ಹೇಳಬಹುದು. (ಕ್ರಿ. ಶ. ಪೂರ್ವ ೩೦೦೦ ವರ್ಷಗಳಿಂದ ೨೦೦೦) ಈ ದೃಷ್ಟಿಯಿಂದ ವಿಚಾರಮಾಡಿದರೆ, ಗ್ರೀಸದ ಉದಯವೇ ಯುರೋಪಿಯನ್ ಸಂಸ್ಕೃತಿಯ ಆರಂಭಕಾಲವೆಂದು ಹೇಳಬಹುದು. (ಕ್ರಿ. ಪೂರ್ವ ೭ನೆಯ ಶತಮಾನ) ಅರ್ಥಾತ್ ಭಾರತೀಯ ಸಂಸ್ಕೃತಿಯು ಯುರೋಪಿಯನ್ ಸಂಸ್ಕೃತಿಗಿಂತ ೨೦೦೦ ವರ್ಷಗಳ ಹಿಂದಿನದೆಂದು ಖಂಡಿತವಾಗಿ ಹೇಳಬಹುದು.

**ವೇದಪೂರ್ವಕಾಲದ ವಸನಗಳು:—** ಮೊಹೋಂಜೊ-ದಾರೋದಲ್ಲಿ ಗಡ್ಡವನ್ನು ಬೆಳೆಸಿದ ಮನುಷ್ಯರ ಎರಡು ಮೂರ್ತಿಗಳು ಮತ್ತು ಇತರ ಎಷ್ಟೋ ವಸ್ತುಗಳು ಉತ್ಖನನದಲ್ಲಿ ಸಿಕ್ಕಿವೆ. ಅವುಗಳ ಮೇಲಿಂದ ಈ ಜನರು ಭವ್ಯವಾದ ಗಡ್ಡಗಳನ್ನು ಬೆಳೆಸುತ್ತಿದ್ದರಾದರೂ ಮೀಸೆಗಳನ್ನು ಮಾತ್ರ ಬೆಳೆಸುತ್ತಿದ್ದಿಲ್ಲ; ಮೈಮೇಲೆ ಆಭರಣಗಳನ್ನು ಹಾಕಿಕೊಳ್ಳುತ್ತಿದ್ದರು; ಪುರುಷರು ಧೋತರವನ್ನೂ ಸೆಲ್ಲೆಯನ್ನೂ ಉಪಯೋಗಿಸುತ್ತಿದ್ದರು; ಪುರುಷರ ಸರಾಸರಿ ಎತ್ತರ ಐದುವರೆ ಫೂಟು ಇದ್ದರೆ, ಹೆಂಗಸರ ಎತ್ತರ ಒಂದು ಫೂಟು ಕಡಮೆ ಇರಬಹುದೆಂದು ಶಂಕಿಸಲಾಗುತ್ತದೆ. ಅವರು ಕಲೆಯಲ್ಲಿ ಒಳ್ಳೆಯ ಪ್ರಗತಿಯನ್ನು ಸಾಧಿಸಿದ್ದರು. ಅಂತೆಯೆ 'ಶಾಲಿ'ಯಂತಹ ಬೆಲೆಬಾಳುವ ಉಚ್ಚತರದ ವಸ್ತ್ರಗಳನ್ನು ಧರಿಸುತ್ತಿರಬಹುದು! ಹಡಗುಗಳನ್ನು ನಿರ್ಮಿಸುವ (ಕಟ್ಟುವ) ಕಲೆ ಅವರಿಗೆ ಚೆನ್ನಾಗಿ ಅವಗತವಾಗಿತ್ತು ಮತ್ತು ಅವರು ಒಳ್ಳೆಯ ವ್ಯಾಪಾರಿಗಳೂ ಆಗಿದ್ದರು. ಅಂತೆಯೆ ಅವರ ಸಮಕಾಲೀನವಾದ ಇತರ ದೇಶಗಳ ಜನರ ವೇಷ-ಭೂಷಣಗಳ ಮೇಲಿಂದ ಅವರ ವೇಷ-ಭೂಷಣಗಳ ಕಲ್ಪನೆಯನ್ನು ಮಾಡಿಕೊಳ್ಳಬಹುದು. ಬಾಬಿಲೋನಿಯನ್ ಮತ್ತು ಅಸೀರಿಯನ್ ದೇಶಗಳಲ್ಲಿಯ (ಕ್ರಿ. ಪೂ. ೩೦೦೦ ದಿಂದ ೨೦೦೦) ಜನರು ಉಣ್ಣೆಯ ಮೋಟು ಮತ್ತು ಹೊಲಿಯದ ಬಟ್ಟೆಗಳನ್ನು ಉಡುತ್ತಿದ್ದರು. ಇಂತಹ ಬಟ್ಟೆಯನ್ನು ಒಂದು ಹೆಗಲಿನ ಮೇಲೆ ಹೊದ್ದುಕೊಂಡು, ಇನ್ನೊಂದ

* ಶ್ರೀಮಾನ್ ಮು. ಮಾ. ಘಾಟೀಕರ ಎಂ. ಎ., ಬಿ. ಟಿ. ಡೆಪ್ಯೂಟಿ ಡೈರೆಕ್ಟರ್ ವಿದ್ಯಾಖಾತೆ, ಹೈದರಾಬಾದ್ ಅವರು ಮೂಲ ಇಂಗ್ಲಿಷಿನಲ್ಲಿ ಬರೆದ ಲೇಖನವನ್ನು ಕನ್ನಡಿಸಲಾಗಿದೆ. — ಅನುವಾದಕರು

ಜೆಗಲನ್ನು ಹಾಗೆಯೇ ತೆರೆದು ಇಡುತ್ತಿದ್ದರು. ಕ್ರಿ. ಶ. ಪೂರ್ವ ೭೦೦ರಲ್ಲಿ ಅತ್ತಕಡೆಯ ಪುರುಷವೇಷವು ನಮ್ಮ ದೇಶದಲ್ಲಿಯ ನಿಂತ ಬುದ್ಧನ ಮೂರ್ತಿಯಂತೆ ಕಂಡುಬರುತ್ತದೆ. ತಲೆಗೆ ಮಕುಟ, ಟೊಂಕಕ್ಕೆ ಕಟಿವಸ್ತ್ರ ಮತ್ತು ಕೊರಳಲ್ಲಿ ಒಂದು ಎದ್ದು ಕಾಣುವ ಒಳ್ಳೆಯ ಹಾರ,—ಮುಂತಾದುವೇ ಇತ್ತಕಡೆಗೂ ಪ್ರಚಾರದಲ್ಲಿರ-ಬಹುದು. ಇದರ ವಿನಾ ಬೇರೆ ರೀತಿಯಿಂದ ಅನುಮಾನಿಸುವುದು ಅಪ್ರಸ್ತುತವಾಗಬಹುದು.

**ಆರ್ಯರು ಸಾಧಿಸಿದ ಪ್ರಗತಿ** :— ಅನಂತರದ ವೇದಕಾಲ-ದಲ್ಲಿ ( ಸುಮಾರು ಕ್ರಿ ಶ. ಪೂರ್ವ ೨೦೦೦ ದಿಂದ ಕ್ರಿ. ಪೂ. ೧೪೦೦ ) ಎಂದರೆ ೩೫೦೦ ವರ್ಷಗಳ ಪೂರ್ವದಲ್ಲಿ, ಭಾರತೀಯರ ಉಡುವು ಹೇಗಿದ್ದಿತೆಂಬುದನ್ನು ತಿಳಿದುಕೊಳ್ಳಲು ಋಗ್ವೇದದಂತಹ ಪುರಾತನ ಶ್ರೇಷ್ಠಗ್ರಂಥವು ಸರಿಯಾದ ರೀತಿಯಲ್ಲಿ ವಿಷಯವನ್ನು ಒದಗಿಸಿ ಕೊಡಲು ಸಮರ್ಥವಾಗಿದೆ. ವೇದಕಾಲದ ಆರ್ಯರು ವಸ್ತ್ರ-ಪ್ರಾವ-ರಣದಲ್ಲಿ ಸಾಕಷ್ಟು ಪ್ರಗತಿಶೀಲರಾಗಿದ್ದರೆಂಬುದನ್ನು ಅದರ ಆಧಾರದ ಮೇಲಿಂದ ಸಿದ್ಧಮಾಡಬಹುದು. ವೇದಕಾಲದ ಆರ್ಯರು ಮನೆ-ಮಾಡುಗಳನ್ನು ಕಟ್ಟಿಕೊಂಡು, ನೆಲಸಿ, 'ಕೃಣ್ವಂತೋ ವಿಶ್ವಮಾರ್ಯಂ' ಎಂಬ ವಿಜಿಗೀಷುವೃತ್ತಿಯಿಂದ ತಮ್ಮ ಸಂಸ್ಕೃತಿಯನ್ನು ಹರಡು-ತ್ತಿರುವಾಗ, ಸದ್ಯದ ಈ ಇಂಗ್ಲೆಂಡ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ಜನ್ಮ ಕೂಡ ತಾಳಿದ್ದಿಲ್ಲ. ಆ ಕಾಲದ ಅಲ್ಲಿಯ ಜನರು ತೀರ ಆರಂಭ ದಶೆಯಲ್ಲಿ ಅರ್ಥಾತ್ ಕಾಡುಸ್ಥಿತಿಯಲ್ಲಿ ಇರುತ್ತಿದ್ದರು.

ಋಗ್ವೇದದಲ್ಲಿ ಸೂಜಿಯ ಮತ್ತು ಹೊಲಿಗೆಯ ಕೆಲಸದ ಉಲ್ಲೇಖ ಕಂಡುಬರುತ್ತದೆ. 'ಸೀವ್ಯತ್ವಪಃ ಸೂಚ್ಯಾಽಚ್ಛಿದ್ಯಮಾನಯಾ.' (ಐತರೇಯ ಬ್ರಾಹ್ಮಣ ೨,೩,೪) ಇದೇ ರೀತಿ ಎರಡು ತುಂಡು-ಗಳನ್ನು ಸೂಜಿಯಿಂದ ಒಂದೆಡೆಗೆ ಸೇರಿಸುವ (ಜೋಡಿಸುವ) ಸಂಬಂಧ-ದಲ್ಲಿಯೂ 'ಯಥಾ ಸೂಚ್ಯಾ-ವಾಸಃ ಸಂದಧೀಯಾನ್, ಏವಮೇವ ಏತಾಭಿರ್ಯಜ್ಞಸ್ಯಚ್ಛಿದ್ರ ಸಂದಧೇತ್' (ಐ. ಬ್ರಾ. ೩,೧೮) ಎಂದು ಉಲ್ಲೇಖವಿದೆ. ಸೂಜಿಯನ್ನು ಮತ್ತು ಸೂಜಿಯಿಂದ ಹೊಲಿಯುವ ಕಲೆಯನ್ನು ಬಲ್ಲವರಾಗಿದ್ದಾಗ ನೇಯುವ ಕಲಸ ಬರುತ್ತಿತ್ತೇ?—ಎಂದು ಕೇಳುವುದು ಅಪ್ರಸ್ತುತವೆಂದೇ ತೋರುತ್ತದೆ. 'ವಾಸಸ್' ಎಂಬ ಶಬ್ದವನ್ನು ಮೈಮೇಲೆ ಹೊದ್ದುಕೊಳ್ಳುವ ಇಲ್ಲವೆ ಧರಿಸುವ ವಸ್ತ್ರ, ಎಂಬ ಅರ್ಥದಲ್ಲಿ ಬಳಸಲಾಗಿದೆ. ಲೋಕಮಾನ್ಯರ ಅಭಿಪ್ರಾಯದಂತೆ ಋಗ್ವೇದಕಾಲದಲ್ಲಿಯ ಆರ್ಯರು ಕುರಿಗಳನ್ನೂ, ಆಡುಗಳನ್ನೂ ಸಾಕುತ್ತಿದ್ದರು. ಆಡಿನ ಹಾಲು, ಆಡಿನ ತುಪ್ಪ ಅವರಿಗೆ ಗೊತ್ತಿದ್ದಿತು. ಯಾಕೆಂದರೆ ಯಜ್ಞಕರ್ಮಗಳಲ್ಲಿ ತುಪ್ಪದ ಸಲುವಾಗಿ ಇಲ್ಲವೆ ತುಪ್ಪದ ಪಾತ್ರೆಯ ಸಲುವಾಗಿ 'ಆಜ್ಯಮ್' 'ಆಜ್ಯಪಾತ್ರಮ್' ಎಂಬೀ ಶಬ್ದಗಳು ಸಿಕ್ಕುತ್ತವೆ. ಎಮ್ಮೆಯ ಇಲ್ಲವೆ ಆಕಳಿನ ಗಟ್ಟಿತುಪ್ಪ ವೇದಕಾಲದಲ್ಲಿ ಇದ್ದಿರಲಿಲ್ಲ. ಯಾಕೆಂದರೆ, 'ಘೃತ' ಈ ಶಬ್ದ ಆಕಳು ಮತ್ತು ಎಮ್ಮೆಗಳನ್ನು ಸಾಕುವುದು ಆರಂಭವಾದ ನಂತರ ಸಂಸ್ಕೃತ ವಾಙ್ಮಯದಲ್ಲಿ ಕಂಡುಬರುತ್ತದೆ. ಇದೇ ರೀತಿ 'ಕಾರ್ಪಾಸ-


ಮಕ್ಕಳ ಸದೃಢತೆ-ಗಾಗಿ

"ಬಗನ ಬಾಲಾ-ಮೃತ"

ಹಲ್ಲು ಬರುವಾಗ

ಅಸ್ಟೋನ ಗ್ರಾಯಿಪ ಹೀಲರ ಮಕ್ಕಳಿಗಾಗಿ

"ಎಸ್ಟನ್ ಗ್ರಾಇಪ್" ಹೀಲರ್

ಜಂತು ಆದರೆ

TRADE MARK ಪಮರ್ ಆಯಿಲ

"ಪಮರ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು

The National Pharmacies &
Pharmaceuticals Ltd., Dharwar


ತಂತು' 'ಕಾರ್ಪಾಸಸೂತ್ರ' ಅಥವಾ 'ಕಾರ್ಪಾಸ ವಾಸಃ' ಎಂಬ ಶಬ್ದಗಳೂ ಕಾಣಿಸುವುದಿಲ್ಲ. ಇದರ ಮೇಲಿಂದ ಹತ್ತಿಯ ಹೂವಿನಿಂದ ಹೊರಟ ಹತ್ತಿಯ ವಸ್ತ್ರಗಳನ್ನುಪಯೋಗಿಸದೆ, ಕುರಿಯ ಮೈಮೇಲಿನ ಉಣ್ಣೆಯ ಬಟ್ಟೆಗಳನ್ನೆ ಉಪಯೋಗಿಸುತ್ತಿರಬಹುದೆಂದು ತಿಳಿಯುತ್ತದೆ. 'ಪೂಷನ್' ಎಂಬ ದೇವತೆಗೆ 'ವಾಸೀವಾಯ' ಎಂದರೆ 'ಬಟ್ಟೆಗಳನ್ನು ಮಾರುವವ' ಎಂದು ಹೇಳಲಾಗಿದೆ. ( ಋ. ೧೦-೨೬-೬ ) ಪೂಷನ್ ದೇವತೆಯ ಸಂಬಂಧವು ಬೇರೆ ಬೇರೆ ಆಕಾರವನ್ನು ಕೊಡುವುದರ ಸಲುವಾಗಿ ಬರುತ್ತಿತ್ತು ಮರುತ, 'ಹಿರಣ್ಯಮಾನ್ ಅತ್ಕಾನ್' ( ಋ. ೧೦-೧೫೫-೬ ) ಎಂದರೆ 'ಬಂಗಾರದ ಲತಾ-ಬಳ್ಳಿಗಳನ್ನು ತೆಗೆದ ಬಟ್ಟೆಗಳನ್ನು ಧರಿಸುವವ' ಎಂಬ ವರ್ಣನೆ ಇದೆ. ಇದರ ಮೇಲಿಂದ ಬಂಗಾರದ ಲತಾ ಬಳ್ಳಿಗಳನ್ನು ತೆಗೆದ ಬಟ್ಟೆಗಳನ್ನು ಹಾಕಿ-ಕೊಳ್ಳಲು ಜನರು ಇಷ್ಟಪಡುತ್ತಿದ್ದರೆಂದು ತಿಳಿದುಬರುತ್ತದೆ. 'ಸುರಭಿ' ಮತ್ತು 'ಸುವಸನ' ಎಂಬ ವಿಶೇಷಣಗಳೂ ಈ ಮಾತಿಗೆ ಪುಷ್ಟಿ-ಯನ್ನೀಯುತ್ತವೆ. ಯಾಕೆಂದರೆ ಈ ವಿಶೇಷಣಗಳನ್ನು, ಸರಿಯಾಗಿ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಶೋಭಿಸುವ ಮತ್ತು ಮೈಗೆ ಸರಿಯಾಗಿ ಹೊಂದಿಕೆಯಾಗುವ ವಸ್ತ್ರಗಳ ಸಲುವಾಗಿಯೇ ಉಪಯೋಗಿಸಿರಬಹುದೆಂದು ಎನಿಸುತ್ತದೆ. ಕಸೂತಿಯ ಕಲೆಯು ಆ ಕಾಲದಲ್ಲಿ ಹೆಚ್ಚು ಪ್ರಗತಿಯನ್ನು ಹೊಂದಿದ್ದಿತು. ಅಂತೆಯೇ ಕಸೂತಿಯ ಕೆಲಸದ ವಿಷಯದ ಬಗ್ಗೆಯೂ ಅಲ್ಲಲ್ಲಿ ಉಲ್ಲೇಖಗಳು ಕಂಡುಬರುತ್ತವೆ.

**ಮೂರು ವಿಧದ ಬಟ್ಟೆಗಳು :—** ವೇದಕಾಲದಲ್ಲಿಯ ಜನರು ಮೂರು ವಿಧದ ಬಟ್ಟೆಗಳನ್ನು ಉಪಯೋಗಿಸುತ್ತಿದ್ದರು: ೧. 'ನೀವಿ;' ಇದು ಒಳಗಿನ ವಸ್ತ್ರ ಇರಬಹುದು. ೨. 'ವಸ್ತ್ರ;' 'ವಸನ;' 'ವಾಸಸ್;' ಇದು ಸಾಮಾನ್ಯಾರ್ಥದಲ್ಲಿ ಪೋಷಾಕನ್ನು ತೋರಿಸುವ ಶಬ್ದ ಇರಬಹುದು. ೩. 'ಅಧಿವಾಸನ;' ಇದು ಮೇಲಿನ ವಸ್ತ್ರ ಇರಬಹುದು. ಒಟ್ಟಿಗೆ ಒಂದು ಉಡುವ ವಸ್ತ್ರ, ಮತ್ತೊಂದು ಉತ್ತರೀಯ (ಅಧಿವಾಸ) ಇರಬಹುದು. ಇಲ್ಲವೆ, 'ಅಧಿವಾಸ' ಎಂಬುದು ಹೊಲಿದ 'ಕಪನಿ' ಇದ್ದರೂ ಇರಬಹುದು: ಇವುಗಳಲ್ಲದೆ ನರ್ತಕಿಯರು, 'ಪೇಶಸ್' ಎಂದರೆ ಕಸೂತಿತೆಗೆದ ವಸ್ತ್ರಗಳನ್ನೂ ಉಪಯೋಗಿಸುತ್ತಿದ್ದರು. 'ವಾಸಸ್' ಎಂಬ ಶಬ್ದವು, ಋಗ್ವೇದಕಾಲದಿಂದ ಭಗವದ್ಗೀತೆಯ ಕಾಲದ ವರೆಗೂ, ಮೈಮೇಲೆ ಹೊದ್ದುಕೊಳ್ಳುವ, ಇಲ್ಲವೆ ಪರಿಧರಿಸುವ ವಸ್ತ್ರ—ಎಂಬರ್ಥದಲ್ಲಿ ಉಪಯೋಗವಾಗಿದೆ. ಯಜ್ಞಪ್ರಸಂಗದಲ್ಲಿ 'ಉಷ್ಣೀಷ'ವನ್ನು ಉಪಯೋಗಿಸುತ್ತಿದ್ದರು. 'ಉಷ್ಣೀಷ' ಎಂದರೆ ಕುತ್ತಿಗೆಯ ಸುತ್ತಲೂ ಸುತ್ತಿಕೊಳ್ಳುವ ವಸ್ತ್ರ. ಅದರ ಕೊನೆ(ಅಂಚು)ಗಳನ್ನು ಕುತ್ತಿಗೆಯ ಬದಿಯವರೆಗೂ ತಂದು ಗಂಟು ಹಾಕುತ್ತಿದ್ದರು. ಇದೊಂದು ಹೊಸ ಪದ್ಧತಿಯ ಉಡುಪು. ವೇದಕಾಲದ ಜನರು ವಸ್ತ್ರಗಳನ್ನು ಧರಿಸುವುದರ ಕಡೆಗೆ ಸಾಕಷ್ಟು ಲಕ್ಷ್ಯಕೊಡುತ್ತಿದ್ದರು. ಕೇವಲ ದಿಗಂಬರ ವೃತ್ತಿಯಿಂದಿರುವ ಯತಿಗಳು ಮಾತ್ರ ಇದಕ್ಕೆ ಅಪವಾದವಾಗಿದ್ದರು. ಇಂಥ ಯತಿ-ಮುನಿಗಳ ಉಲ್ಲೇಖವನ್ನು 'ಮುನಯೋ ವಾತವಸನಃ' ಎಂಬೀ ಶಬ್ದಗಳಲ್ಲಿ ಮಾಡಿದುದು ಕಂಡುಬರುತ್ತದೆ. ಋಗ್ವೇದದಲ್ಲಿ (೧,೨೫,೧೩) ವರುಣನು 'ದ್ರಾಪಿ'ಯನ್ನು ಧರಿಸಿಕೊಂಡು, ತನ್ನ ಸ್ವರ್ಗೀಯ ರಾಜಸಿಂಹಾಸನದ ಮೇಲೆ ವಿರಾಜಮಾನನಾಗಿದ್ದುದರ ವರ್ಣನೆ ಸಿಕ್ಕುತ್ತದೆ. 'ದ್ರಾಪಿ' ಎಂಬುದಕ್ಕೆ 'ಅಂಗಿ' ಎಂದು ಅರ್ಥಮಾಡಿಕೊಳ್ಳಬೇಕೋ ಅಥವಾ ಸೆಲ್ಲೆಯ (ಉತ್ತರೀಯ) ಎಂದು ಅರ್ಥಮಾಡಿಕೊಳ್ಳಬೇಕೋ ತಿಳಿಯದು. ಆದರೆ ರಾಜ-ಮಹಾರಾಜರು 'ದ್ರಾಪಿ'ಯನ್ನು ಧರಿಸುತ್ತಿದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ, ಮತ್ತು 'ದ್ರಾಪಿ' ಎಂಬುದು ಮಂಗಲ ಪ್ರಸಂಗದಲ್ಲಿ, ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಉಪಯೋಗಿಸುವ ಬಣ್ಣದ ಉದ್ದನೆಯ ಮಿಂಚುವ ಸೆಲ್ಲೆಯ ಇರಬಹುದೆಂದು ಎನಿಸುತ್ತದೆ.

**ಹೆಂಗುಸರ ಉಡುಪು ಹೇಗಿತ್ತು? —** ಸ್ತ್ರೀಯರ ವಿಶಿಷ್ಟ ವಸನಗಳ ಮಾಹಿತಿಯು ವೇದವಾಙ್ಮಯದಲ್ಲಿ ಸಿಕ್ಕುವುದಿಲ್ಲ. ಅಲ್ಲದೆ ಸ್ತ್ರೀಯರ ಬಟ್ಟೆಗಳ ಬಗೆಗೆ ಬೇರೆ ಶಬ್ದಗಳೂ ಗೋಚರವಾಗುವುದಿಲ್ಲ. 'ವಾಸಃ ಅಂತರಂ' ಎಂದರೆ ಒಳಗಿನ ವಸ್ತ್ರ, ಮತ್ತು 'ಪರಿಧಾನಮ್' ಎಂದರೆ ಮೇಲಿನ ವಸ್ತ್ರ ಎಂದಾಗುವುದು. ಆದರೆ ಈ ವಸ್ತ್ರಗಳು ಸ್ತ್ರೀಯರಿಗೆ ಸಂಬಂಧಪಟ್ಟವೊ ಇಲ್ಲವೆ ಪುರುಷರಿಗೆ ಸಂಬಂಧಪಟ್ಟವೊ ಎಂಬುದರ ಸರಿಯಾದ ನಿಷ್ಕರ್ಷೆಯಾಗುವುದಿಲ್ಲ. ವೇದವಾಙ್ಮಯದಲ್ಲಿ 'ರಂಗಾರಿ' (ಬಣ್ಣಗಾರ) ಎಂಬ ಶಬ್ದ ಇದೆ. ಈ ಅರ್ಥದಲ್ಲಿ ಬಹುಶಃ, ಸ್ತ್ರೀಸ್ವಭಾವಾನುರೂಪವಾಗಿ, ಸ್ತ್ರೀಯರ ಎರಡೂ ವಸ್ತ್ರಗಳು ಬಣ್ಣ ಎದ್ದಿದುವುಗಳಾಗಿರಬಹುದು. ಶತಪಥ ಬ್ರಾಹ್ಮಣದಲ್ಲಿ (೧,೩,೩,೬) 'ಕಟಿಬಂಧ' ಎಂಬ ಶಬ್ದದ ಪ್ರಯೋಗವಾಗಿದೆ. ಇದರ ಮೇಲಿಂದ ಟೊಂಕದವರೆಗೂ ಸುತ್ತಿಕೊಂಡು ಮೈಮೇಲೆ ಹೊತ್ತುಕೊಳ್ಳುವ ವಸ್ತ್ರ ಅಥವಾ ಸೀರೆಯೆಂದು ಆಗಬಹುದು. 'ನೀವಿ' ಇಲ್ಲವೆ 'ವಾಸಃ ಅಂತರಮ್' ಎಂಬುದು ಒಂದು ವಸ್ತ್ರ, ಮತ್ತು 'ಪರಿಧಾನಮ್' ಎಂದರೆ 'ದ್ರಾಪಿ' ಎಂಬುದು ಇನ್ನೊಂದು ವಸ್ತ್ರ. ಇದು ಒಂದು ತರದ ಶಾಲು ಇರಬಹುದು. ಇದೇ ರೀತಿ ಶತಪಥ ಬ್ರಾಹ್ಮಣದಲ್ಲಿ (೧೪,೨,೧,೮) ಇಂದ್ರಾಣಿಯು ತಲೆಗೆ ಉಷ್ಣೀಷವನ್ನು ಸುತ್ತಿದ ಹಾಗೆ ಉಲ್ಲೇಖವಿದೆ. ಇದರ ಮೇಲಿಂದ ಉಚ್ಚವರ್ಣದವರು ಅಥವಾ ಶ್ರೀಮಂತರ ಹೆಂಗುಸರು ಉಷ್ಣೀಷವನ್ನು ಉಪಯೋಗಿಸುತ್ತಿದ್ದರೆಂಬುದು ತಿಳಿದುಬರುತ್ತದೆ. ಇಲ್ಲವೆ 'ಪರಿಧಾನಮ್' ಮತ್ತು 'ಉಷ್ಣೀಷ' ಎಂಬೀ ಎರಡೂ ವಸ್ತ್ರಗಳನ್ನು, ವಿಶಿಷ್ಟ ಮಂಗಲ ಪ್ರಸಂಗಗಳಲ್ಲಿ, ಸಮಾರಂಭಗಳಲ್ಲಿ ಉಪಯೋಗಿಸುವ ಪದ್ಧತಿ ಇದ್ದರೂ ಇರಬಹುದು. ವಿವಾಹಸೂಕ್ತದಲ್ಲಿ ವಧು ವಿವಾಹರಾತ್ರಿಯಲ್ಲಿ



'ಶ್ಯಾಮ್ಯುಲ್ಯಮ್' ಉಟ್ಟಿದ್ದ ಉಲ್ಲೇಖವಿದೆ. ಮತ್ತು ಎರಡನೆಯ ದಿವಸ ಮುಂಜಾವಿನಲ್ಲಿಯೇ ಅದನ್ನು ಬಿಟ್ಟುಬಿಟ್ಟ ಉಲ್ಲೇಖವೂ ಕಂಡುಬರುತ್ತದೆ. 'ಶ್ಯಾಮ್ಯುಲ್ಯಮ್' ಎಂದರೆ ಸೀರೆ ಇರಬಹುದು. ಕಸೂತಿಯ ಕಲೆಯು ಸಾಕಷ್ಟು ಪ್ರಗತಿಯಲ್ಲಿತ್ತು. ಈ ದೃಷ್ಟಿಯಿಂದ ಸ್ತ್ರೀಯರು ವಿವಾಹಪ್ರಸಂಗದಲ್ಲಿ ಐದು ಆರು ವಾರದ ಉದ್ದದ ಸೀರೆಗಳನ್ನು ಉಟ್ಟುಕೊಂಡು, ಅದೇ ಸೀರೆಯ ಪದರನ್ನು ನೆತ್ತಿಮೇಲೂ ಹೆಗಲಮೇಲೂ ಈಗಿನ ಸ್ತ್ರೀಯರಂತೆ, ಹೊದ್ದುಕೊಳ್ಳುತ್ತಿರಬಹುದೆಂದು ಊಹಿಸಲು ಸಾಧ್ಯವಿದೆ. ಆದರೆ ಇದೇ ಪದ್ಧತಿಯಲ್ಲಿ ಸೀರೆ ಉಡುತ್ತಿದ್ದರೆಂದು ಮಾತ್ರ ನಿಶ್ಚಯವಾಗಿ ಹೇಳಲು ಬರುವಂತಿಲ್ಲ.

ಕಾತ್ಯಾಯನ ಶ್ರೌತಸೂತ್ರದ ಪ್ರಕಾರ ನೋಡಲಾಗಿ, ಯಾಜಕಪತ್ನಿಗೆ, ಇಲ್ಲವೆ ಯಜಮಾನ ಪತ್ನಿಗೆ ಉಡುವುದಕ್ಕಾಗಿ 'ಚಂಡಾತಕ ವಸ್ತ್ರ' ಕೊಡುತ್ತಿದ್ದರೆಂದು ತಿಳಿದುಬರುತ್ತದೆ. ಈ ಚಂಡಾತಕವಸ್ತ್ರವನ್ನುಟ್ಟುಕೊಂಡೇ ಯಜಮಾನನ ಪತ್ನಿಯು ಯಜ್ಞಸ್ತಂಭದ ಶಿರೋಭಾಗದಲ್ಲಿದ್ದ ಒಂದು ಎತ್ತರದ ಸಾವಟಿಗೆಯ ಮೇಲೆ ಕಾಲಿಟ್ಟು ಏರಬೇಕಾಗುತ್ತಿತ್ತು. ವೇದಕಾಲದಲ್ಲಿ ಇಂಥ ಪ್ರಸಂಗದಲ್ಲಿ "ಕೌಪೀನ"ವನ್ನು ಉಪಯೋಗಿಸುತ್ತಿದ್ದರೆಂದು ತಿಳಿದುಬರುತ್ತದೆ. ವೇದಕಾಲದಲ್ಲಿ ಹೊಲಿಗೆಯ ಕಲೆಯು ಅವಗತವಾಗಿದ್ದರೂ ಉಚ್ಚವರ್ಣದ, ಮನೆತನದ ಸ್ತ್ರೀ-ಪುರುಷರು, ಹೊಲಿಗೆಯ ಬಟ್ಟೆಗಳನ್ನು ತೊಡುವುದು ಗೌಣ ಮತ್ತು ಹೀನವೆಂದು ತಿಳಿಯುತ್ತಿದ್ದರು. ಪಾಣಿನಿ (ಕ್ರಿ. ಪೂ. ೭೦೦) ಪತಂಜಲಿ (ಕ್ರಿ. ಪೂ. ೧೫೦) ಮತ್ತು ಅಮರ (ಕ್ರಿಸ್ತಾಬ್ದ ಆರನೆಯ ಶತಕ) ಮುಂತಾದವರಿಗೆ 'ಚಂಡಾತಕ' ಶಬ್ದವು ಕಾತ್ಯಾಯನ ಸೂತ್ರಾನುಸಾರ ಗೊತ್ತಿರಲಿಕ್ಕಿಲ್ಲ.

**ಅಲಂಕಾರದ ಹೌಸು:** ವೇದಕಾಲದ ಭಾರತೀಯ ಸ್ತ್ರೀ-ಪುರುಷರ ವಸನಗಳ ಪರಿಚಯ ಮಾಡಿಕೊಡುವಾಗ, ಆ ಕಾಲದ ಆಭರಣಗಳ ಪರಿಚಯವನ್ನು ಮಾಡಿಕೊಡುವುದು ಕ್ರಮಪ್ರಾಪ್ತವಾಗಿದೆ. ಕಾರಣ ಅಲಂಕಾರ ಮತ್ತು ವಸನ ಇವೆರಡೂ ಕೂಡಿಯೇ ಆಭರಣಗಳಾಗುತ್ತವೆ. ಆ ಕಾಲದ ಜನರು ವಸ್ತ್ರ-ಒಡವೆ, ಭೂಷಣಗಳು ಮತ್ತು ಅಲಂಕಾರಗಳನ್ನು ಹಾಕಿಕೊಳ್ಳುತ್ತಿದ್ದರು. ಕಾರಣ ಋಗ್ವೇದದಲ್ಲಿ **ಕುರೀರ, ಕರ್ಣಶೋಭನ, ಖ್ಯಾದಿ, ಮಣಿ, ಓಪಶ** ಎಂಬ ಶಬ್ದಗಳು ಸಿಗುತ್ತವೆ. ಪುರುಷರೂ ಸ್ತ್ರೀಯರೂ ಕಂಕಣಗಳನ್ನು ತೊಡುತ್ತಿದ್ದರು. ಕೈಯಲ್ಲಿ ಕಂಕಣಗಳನ್ನು ಹಾಕಿಕೊಂಡಂತೆ ಕಾಲುಗಳಲ್ಲಿ ಸರಪಣಿ (ಚೈನು) ಗಳನ್ನೂ ಹಾಕಿಕೊಳ್ಳುತ್ತಿದ್ದರು. (ಋ. ೫,೫೪,೧೧,೧,೬೮,೩) ಕೈಯ ಬೆರಳುಗಳಲ್ಲಿ ಉಂಗುರಗಳು ಮತ್ತು ಹೆಗಲ ಮೇಲೂ (ಕೊರಳಿನಲ್ಲಿಯೂ) ಒಡವೆಗಳನ್ನು ಹಾಕಿಕೊಳ್ಳುತ್ತಿದ್ದರು. 'ಅಂಸೇಷ್ವಾ ವಃ ಪ್ರಪಥೇಷು ಖ್ಯಾದಯಃ' (೧ ೧೬೬ ೯) ವಕ್ಷಸ್ಥಳದ ಮೇಲೆ ಬಂಗಾರದ ಮತ್ತು ಹೊಳೆಯುವ ಮುತ್ತಿನ ಸರವನ್ನು ಉದ್ದವಾಗಿ ಬಿಡುತ್ತಿದ್ದರು. ಕರ್ಣಭೂಷಣಗಳನ್ನು ಹಾಕಿಕೊಳ್ಳುತ್ತಿದ್ದರು. ತಲೆಯಮೇಲೆ ಕುಂಭವನ್ನು ತೆಗೆದುಕೊಳ್ಳುತ್ತಿದ್ದರು. 'ಕುರೀರಮಸ್ಯ ಶೀರ್ಷಣಿ ಕುಂಭಂ ಚಾಧಿತಿ ದಧ್ಮಸಿ' (ಅಥರ್ವವೇದ ೬,೧೩೮,೩) ಆ ತರುವಾಯದ ಆರ್ಯರು ಸಮುದ್ರ ದಂಡೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡ ನಂತರ, ಮುತ್ತುಗಳ ಉಲ್ಲೇಖ ಬ್ರಾಹ್ಮಣಗ್ರಂಥದಲ್ಲಿ ಸಿಗುತ್ತದೆ. ಇದಲ್ಲದೆ, ಮುಕ್ತಾಜಾಲ, ಶಿಖಾಪಾಶ, ಶಿಖಾಜಾಲ ಮುಂತಾದ ಅಲಂಕಾರಗಳನ್ನು ತಲೆಯ ಮೇಲೆ ಇಲ್ಲವೆ ಕಪೋಲದ ಮೇಲೆ ಉಪಯೋಗಿಸುವ ಪದ್ಧತಿ ಇರಬಹುದು.

ಸಾರಾಂಶವಾಗಿ ವೇದಕಾಲದ ಮತ್ತು ವೇದಪೂರ್ವಕಾಲದ ಸ್ತ್ರೀ-ಪುರುಷರ ವಸ್ತ್ರಾಭರಣಗಳ ಚರ್ಚೆಯನ್ನು ವೇದ-ವಾಙ್ಮಯದಲ್ಲಿಯ ಉಲ್ಲೇಖಗಳ ಮೇಲಿಂದ ಮತ್ತು ಉತ್ಖನನದಲ್ಲಿ ಸಿಕ್ಕ ಮೂರ್ತಿಗಳ ಮತ್ತು ಪ್ರತಿಮೆಗಳ ಆಧಾರದ ಮೇಲಿಂದ ಮಾಡಿದ್ದಾಯಿತು. ಇನ್ನು ಮುಂದೆ ಶಿಲ್ಪಕೃತಿಗಳ ಆಧಾರದ ಮೇಲಿಂದ ಮತ್ತು ಸಂಸ್ಕೃತ-ವಾಙ್ಮಯಾಂತರ್ಗತ ಉಲ್ಲೇಖಗಳ ಆಧಾರದ ಮೇಲಿಂದ ಈ ಚರ್ಚೆಯನ್ನು ಕ್ರಿಸ್ತಶಕಾರಂಭದ ವರೆಗೂ ತಂದು ಪೂರ್ತಿಗೊಳಿಸುವ ವಿಚಾರವನ್ನು ಯಥಾಕ್ರಮ ಮಾಡಲಾಗುವುದು.

---


## ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

| | |
|---|---|
| **ಜೈನಧರ್ಮ** | ೧೫-೦-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |
| **ಹಾಲು-ಹಣ್ಣು (ಕವನ ಸಂಗ್ರಹ)** | ೧-೮-೦ |
| ಶ್ರೀ. ಭುಜೇಂದ್ರ ಮಹಿಷವಾಡಿ | |
| **ಮೂಲಶಿಕ್ಷಣದ ಮೌಲ್ಯಮಾಪನ** | ೦-೧೨-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |
| **ಬಾಳ-ಬಂಡಿ (ಕವನ ಸಂಗ್ರಹ)** | ೦-೮-೦ |
| ಶ್ರೀ. ಬಾಳ ಬಿ. ಉಪಾಧ್ಯೆ | |
| **ಭರತೇಶನ ನಾಲ್ಕು ಚಿತ್ರಗಳು** | ೧-೪-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |

ಅಚ್ಚಿನಲ್ಲಿ :

**ಸಂಸ್ಕೃತಿಯ ಹೃದಯ**

**ಭಾರತದ ಬೆಳಕು**

ಪ್ರತಿಗಳಿಗಾಗಿ ಬರೆಯಿರಿ :

**ಶಾಂತಿ ಸೇವಾಸದನ, ಸೇಡಬಾಳ**

ಪೋ. : **ಸೇಡಬಾಳ** (ಜಿಲ್ಲಾ ಬೆಳಗಾಂವಿ)

# ಕರ್ಣಾಟಕ ಸಾಮ್ರಾಜ್ಯ

( ಗೀತರೂಪಕ )

ಶ್ರೀ. ಬಿ. ಪದ್ಮನಾಭ ಸೋಮಯಾಜಿ, ಸುರತಕಲ್ಲು

卐

## ದೃಶ್ಯ ೧

[ ಹರಿಸಂಚಾದ ಕನ್ನಡನಾಡು : ಕನ್ನಡಕುವರನು ಸಮಗ್ರವೇಶವನ್ನು ಸುತ್ತಾಡುತ್ತ, ಆಲಿಸುತಿದ ಪಂಸೆಯುತ್ತ ಸಾಗಿ ಬರುವನು. ]

**ಕನ್ನಡಕುವರ :—**

ಏನ್ ಸೊಗಸಿನಾಗರಂ ಭವ್ಯ ಕರ್ನಾಟಕಂ!
ತನುಮನವನಾರಯ್ವ ರಮಣೀಯ ನಂದನಂ,
ಮಂದಾನಿಲದಿ ಬೆರೆತ ನವಚಂದನಾಂಕುರಂ,
ಪಲ್ಲವೋತ್ತಂಸ ಮಾಕಂದರಮಣೀಯಕಂ;
ಕಲ್ಪತರು ನಿಚಯದಿಂ ವಿವಿಧ ಗಿರಿಶಿಖರದಿಂ
ತುಂಗೆ—ಕಾವೇರಿಯರ ಮಂಜುಳನಿನಾದದಿಂ
ಇಮ್ಮಾವಿನೊಳ್ ಪುದಿದ ಭ್ರಮರಸಂದೋಹದಿಂ
ಕಂಗೊಳಿಪ, ಮುದಗೊಳಿಪ ಸಸ್ಯಾಳಿ-ಫಲಗಳಂ,
ನೋಡಿಬಂದಿಹೆನೀಗ ನಿಖಿಲ ಕನ್ನಡ ನಾಡ,
ಪ್ರಕೃತಿಸೊಬಗಿನ ಕಣಿಯು, ಸೊಗವನುಣ್ಣಿಪ ಸಿರಿಯು.
ಕಂಡಿಹೆನ್ ನೀಲಸಾಗರ ತಡಿಯ ಸೌಂದರ್ಯ
ಕರಿಕಲ್ಲ ನಿಡುಕರನು, ಬೇಲೂರ ಹಳೇಬೀಡ!
ಶರಣರಿಗೆ ಶರಣೆನಿಪ ಭಜಕರಿಗೆ ನಿಧಿಯೆನಿಪ
ಉಡುಪಿಕೃಷ್ಣನ ಕಂಡು, ಕೊಡಗುಸೊಬಗನ್ನುಂಡು
ಮುಗುದೆ ಕಾವೇರಿಯಾ ಉದಯಶಿಖರದಿ ನಿಂದು
ನಾಡ ನಡುಮನೆಹಾಯ್ವ ತುಂಗಭದ್ರೆಯ ಕಂಡು
ಅಳಿದುಳಿದ ಹಂಪೆಯೊಳ್ ಗತರಾಜ್ಯ ಕೊಂಪೆಯೊಳ್
ಭಾವಿಪೆನ್ ಭವ್ಯ ಕನ್ನಡ ರಾಜ್ಯದೈಸಿರಿಯ!

[ ಆರ್ತರವವನ್ನಾಲಿಸಿ ]

ಆರದೀ ಕ್ರಂದನಂ; ಹೃದಯದ ವಿಜೃಂಭಣಂ!
ಕರುಳು ಸೆಳೆಯುವ ಅಳಲ ನರಳಾಟವಲೆ, ದಿಟಂ!

[ ಆಕಡೆ ನೋಡಿ ಅಚ್ಚರಿಗೊಂಡು ]

ಏನೀದೀಯದ್ಭುತಂ! ಅವಳೇ ಮುತ್ತೈದೆ!!
ಕರುಣೆಯೇ ಮೂರ್ತಿವೆತ್ತಂತಿಹುದು ಈ ರೂಪು!
ಹಿರಿಯ ಮುತ್ತೈದೆಯಾಗಿರುತಿಹಳು ಈ ಅವ್ವೆ!
ಹಿಂದೊಮ್ಮೆ ಹಿರಿಯ ಜೀವನ ನಡೆಸಿ, ಸೌವರ್ಣ-
ಯುಗದ ಕಾಂತಿಯ ಮೆರೆಸಿದಂತಿಹುದು ವೈಭವಂ.
ಏನಿದೀ ಗಾಂಭೀರ್ಯ! ಏನಿದೀ ನವತೇಜ!
ಆದರೇನಿಂದು ಕಡು ಬಡತನವನಾಂತಿಹಳ್,
ಬಿಚ್ಚಿಹುದು ಸಿರಿಮುಡಿಯು; ಕಂದಿಹುದು ಮೊಗಸಿರಿಯು!
ಕುಂದಿಹುದು ತನುಕಾಂತಿ, ಬೆಂದಿದೆ ಮನಶ್ಶಾಂತಿ!
ಕೇಳುವೆನ್ನೈದೆಯಂ [ ಹತ್ತಿರಕ್ಕೆ ಹೋಗಿ ]

ಆರವ್ವ ನೀ ತಾಯೆ!
ಅಳುವೆಯೇತಕೆ ಮಾತೆ! ಬವಣೆಯೇನ್ ಬಂದಿಹುದು?

**ಕನ್ನಡತಾಯ್ :—**[ನಿಟ್ಟುಸಿರಿಟ್ಟು ಮೆಲ್ಲನೆ ತಲೆಯನ್ನೆತ್ತಿ ಮೊಗವನ್ನೀಕ್ಷಿಸಿ]

ಏನ ಪೇಳಲಿ ಕಂದ! ಹೆತ್ತವ್ವೆಯಂ ಮರೆತ
ಪರರ ಮೋಹಕೆ ಬೆರೆತ ಕುವರರಾ ಬಗೆಗಿಂದು!
ಮರೆತಿಹುದು ಗುರುತೆನ್ನ; ಕಂಡರೂ ಗುರುತರಿಯೆ;
ನಾನೆಕಾಣ್ ಹೆತ್ತವ್ವೆ; ಎನ್ನೆದೆಯ ಹಾಲುಂಡು
ಎನ್ನ ಮಡಿಲಲ್ಲಾಡಿ ಕಣ್ಣ ಮುಂದೆಯೆ ಬೆಳೆದೆ!
ಯೌವನದ ಪದದಲ್ಲಿ ಮರೆತಿರುವೆ ನೀನಿಂದು!
ಸ್ವಾರ್ಥದಿಂ ಕುರುಡಾಂತ ನಿನಗೆಲ್ಲಿ ಗುರುತಿಂದು!
ನಾನಿದ್ದ ಸಾಮ್ರಾಜ್ಯ, ನಾ ಕುಳಿತ ಪಟ್ಟವಣೆ,
ನಾ ಬೆಳೆದ ನಡುವಲಯ! ಪರಕೀಯವಾಗಿಹುದು!
ಕಾಣು, ನನ್ನಯ ಗಾತ್ರ ಛಿದ್ರವಾಗಿಹುದಿಂದು.
ತುಂಡಾದ ದೇಹದಿಂ ಸಾಯುತಿಹೆ ನಾನಿಂದು!
ಎನ್ನಣುಗರೇ ಎನ್ನ ಕತ್ತರಿಸಿ ಕೊಡುವರೆಲೆ
ನಾಲ್ದೆಸೆಯ ನೋಡತ್ತ! ನಡೆಸಿಹುದು ಅನ್ಯಾಯ!
ನೂರಾರು ಬರಿಸದಿಂ ಬಾಳಿರ್ಪ ಕುವರರಂ
ನಿನ್ನ ತಮ್ಮಂದಿರಂ ಎಳೆಯುತಿರ್ಪರು ಕಣಾ!
ಪಾಪ! ಆ ಶಿಶುಗಳವು, ಗತಿಗೋತ್ರವಿಲ್ಲದೆಯೆ
ಸರಿನಿಲ್ಲಲಾರದೆಯೆ, ಶರಣರನು ಕಾಣದೆಯೆ,
ತನ್ನವರ ನೋಡದೆಯೆ, ಕಂಡವರ ಕಡೆ ಸಿಲುಕಿ
ಬಲಿಬಿದ್ದು ನೋಯುತಿವೆ! ಸವೆಯುತಿವೆ! ನೋಡಲ್ಲಿ!
ಉದ್ಧರಿಸು ನೀ ಕಂದ! ಏನಿದೀ ತಾಮಸಂ?

**ಕ. ಕುವರ :—** [ ಆಕ್ಷೇಪದಿಂದ ]

ಏನಮ್ಮ ತಾಮಸಂ? ಏಕಿದೀ ಬೇಸರಂ?
ಆದರ್ಶನಾಡೆಂದು ಮಾದರಿಯ ಜನಮೆಂದು
ಕಂಡಕಂಡವರೆಲ್ಲ ಪೊಗಳಿರ್ಪರೈಸಲೆ!

ಕ. ತಾಯಿ :— [ ವಿಕಟನಗು ನಕ್ಕು ]
ನೋಡೆನ್ನ ಅಕ್ಕ-ತಂಗಿಯರಂತು ಮೆರೆವ ಪರಿ !
ನೋಡವರ ಪುತ್ರರನು; ಮಾತೃವಾತ್ಸಲ್ಯವೆನಿ-
ತಿಹುದಿರ್ಪುದವರ ನಡೆನುಡಿಯ ಮೇಲ್ಪಾಳಿನೊಳ್ !
ಆಡರ್ಪೆ ಅನ್ಯ ನುಡಿ ತಮ್ಮ ನುಡಿಯಂ ಬಿಟ್ಟು !
ಮಾಡರ್ಪೆ ಕಾರ್ಯಮಂ ತಮ್ಮ ಮಾತೆಯ ಬಿಟ್ಟು !
ತಮ್ಮ ಸೋದರರ ಬಗೆಗೆನಿತು ವಾತ್ಸಲ್ಯವೋ !
ಭೇದಭಾವವ ಮರೆತ ಆ ಪುತ್ರಸಂದೋಹ
ಒಂದಾಗಿ ಇಂದಿನೊಳ್ ಸೆಳೆದೆಳೆದು ತೋರ್ಪರಲೆ
ತಮ್ಮವ್ವನಿಗೆ ಎನ್ನ ಈ ಶರೀರದ ತುಂಡ!
ತಮ್ಮ ಮಾತೆಯ ಸಂತಸಕ್ಕೆಂದು ಎನ್ನೊಡಲ
ಆಕ್ರಮಿಸಿ ಬಲುಕರಿಸಿ ಪೀಡಿಸುತಿಹರು ಕಣಾ !
ಕುವರ ! ನಿನಗಂತಿರುವ ಅಣ್ಣರುಂಟೇ ಇಂದು ?
ಅಧಿಕಾರಲಾಲಸೆಯ ದುಷ್ಟ ವ್ಯವಹಾರದೊಳ್
ಸ್ವಾರ್ಥ-ಮದ-ಮೋಹದಿಂ ಕುರುಡಾಂತ ಕಂಗಳೊಳ್
ತನ್ನತನವೇ ಮೂರ್ತಿವೆತ್ತಂತೆ ಬಾಳಿರುವೆ !

[ ಕೋಪದಿಂದ ]

ಸುಡು ನಿನ್ನ ಪೇಟಗಳ ! ಬಿಡು ನಿನ್ನ ದಂಭಗಳ !
ಏಕಿದೀ ಸೌಂದರ್ಯ ! ಏಕಿದೀ ಒಣವೇಷ !
ಮಾತೆಯಂ ತಳ್ಳಿಸಿ ಪೂಜಿಸದ ಒಣತೋಳು !
ಮಾತೃ ಕೈಂಕರ್ಯಮಂ ಕೊಳ್ಳದಿರುವೀ ಗಾತ್ರ !
ಮಾತೆಯಾ ಮೇಲ್ಮೆಯಂ ಪಾಡದಿರ್ಪಾ ರಸನೆ !
ತನ್ನ ತಾಯಿಯ ಕಷ್ಟ ನೆನೆಯದಿಹ ಕಟುಹೃದಯ !

[ ವ್ಯಸನದಿಂದ ]

ಇಹರೆನಗೆ ಮಕ್ಕಳ್ಳೆ ! ಒಬ್ಬಿಬ್ಬರೇನಲ್ಲ !
ನೂರು, ಸಾವಿರವಲ್ಲ ! ಎರಡೆರಡು ಕೋಟಿಗಳ್ !
ಏನು ಬಂದುದೆ ಭಾಗ್ಯ ! ಸುಡು ನಿನ್ನ ಒಣಮೊಗವ !

ಕ. ಕುವರ :— ತಾಳಲಾರೆನು ಅವ್ವ ! ಕ್ಷಮಿಸುವುದು ! ಕರುಣಿಪುದು !
ಕೇಳಲಾರದು ಕಿವಿಯು ! ತಾಳಲಾರದು ಹೃದಯ !
ಪರಸವ್ವ ! ಹುರುಪುಕೊಡು ! ಚೈತನ್ಯದುಂಬಿಸೌ !
ಮೌಢ್ಯವದು ಹೆಚ್ಚಿತ್ತು ! ಮನವು ಬರಿದಾಗಿತ್ತು !
ಕಣ್ ತೆರೆಯಿತಿಂದೀಗ ! ಸಾಗುವೆನ್ ಈಗಿಂದ !
ನಿನ್ನ ಪುತ್ರರ ತಂದು ನಿನ್ನ ಕೈಯಲ್ಲಿಟ್ಟು
ನಿನ್ನ ಧ್ವಜವೇರಿಸದೆ, ನಿನ್ನ ಮನ ತೋಷಿಸದೆ,
ನಿನ್ನ ವೈಭವಗಳಂ ಹಿಂದಿನಂತಾಗಿಸದೆ
ಬರಲಾರೆ ! ಇದೊ ಆಣೆ ! ಹರಸೆನ್ನ ನೀ ಮಾತೆ !
ಬೇಡುವೆನ್ ಕರುಣೆಯಂ ! ತೋರುವೆನ್ ಶೌರ್ಯಮಂ.

[ ವಂದಿಸುವನು ]

ಕ. ತಾಯಿ :— ಪೋಗು ಬೇಗನೆ ಕಂದ, ಸಿದ್ಧಿಸಲಿ ನಿನ್ನಿಷ್ಟ !
ನಿನ್ನ ತಮ್ಮಂದಿರನು ಬಿಡಿಸಿ ಬಾರೈ ಬೇಗ !

## ದೃಶ್ಯ ೨

### ಭಾಗ ೧

[ಕೇರಳಮಾತೆಯು ಕನ್ನಡಬಾಲಕನನ್ನು ಎಳೆದುಕೊಂಡು ಬರುತ್ತಿರುವಳು].

**ಬಾಲಕ:**— ಎಲ್ಲಿರುವಳೆನ್ನವ್ವ ! ಏಕಿಂತು ಪೀಡಿಸುವೆ ?
ಬರಲಾರೆ, ಬರಲಾರೆ, ತೋರೆನ್ನ ಮಾತೆಯನು !
**ಕೇರಳತಾಯಿ:**— ಬಾ ಮಗುವೆ ನನ್ನೊಡನೆ; ಏನುಬೇಕೈ ನಿನಗೆ ?
ಬೇಕಾದುದೆಲ್ಲವಂ ಕೊಡುವೆನೈ ಬಾ ಕಂದ !
ಮನೆ ಚಿಕ್ಕದಾದೊಡಂ ಭವ್ಯವಾಗಿರುತಿಹುದು;
ತೆಂಗುಕಂಗುಗಳ ಹಿರಿದೋಟ ಮನೆದಿರ್ಪುದಲೆ;
ಎಳನೀರ ಕುಡಿದು ನೇಂದ್ರದ ಬಾಳೆಹಣ್ ತಿನಲು
ಬಾ ಕಂದ: ನೋಡುವೈ ಗಗನಾಂಗಣದಿ ಮೆರೆವ
ಗೋಪುರಗಳಂದೆಸೆವ ದೇವಾಲಯಂಗಳಂ;
ಶಾಂತಿಯೊಂದುತೆ ಅಲ್ಲಿ ಸುಖದಿಂದ ಬಾಳ್ ಚೆನ್ನ!

### ಭಾಗ ೨

[ತಮಿಳುಮಾತೆಯು ಕನ್ನಡಬಾಲಕನನ್ನು ಎಳೆದೆಳೆದು ಬರುತ್ತಿರುವಳು]

**ಬಾಲಕ:**— ಎಲ್ಲಿರುವಳೆನ್ನವ್ವ; ಏಕಿಂತು ಪೀಡಿಸುವೆ ?
ಬರಲಾರೆ, ಬರಲಾರೆ: ತೋರೆನ್ನ ಮಾತೆಯಂ !
ತಮಿಳು ತಾಯಿ :— ಏನ್ ಕಂದ ! ಗುರುತಿಲ್ಲದವರಂತೆ **ಚಡಪಡಿಪೆ !**
ಎಮ್ಮೊಂದಿಗೇ ಇದ್ದು ಎಮ್ಮ ಮನೆಯೊಳ್ ಬಳೆದು
ಎಮ್ಮಲ್ಲಿಯೇ ಜ್ಞಾನ-ಬುದ್ಧಿಗಳ ಸಾಧಿಸುತ
ಈಗ ತಾನ್, ಕರೆಯುವೆಯ ಅವ್ವನೆಲ್ಲಿಹಳೆಂದು ?
ನಾವೆಲ್ಲರೊಂದಾಗಿ ಒಟ್ಟಾಗಿ ಬಾಳಿದೊಡೆ
ಅಂಜಿಕೆಯು ಇನಿತಿಲ್ಲ ಆರಿಂದಲೆಮಗಿನ್ನು—
ದಿಲ್ಲಿಯೊಳ್ ಕುಳಿತಿಹಳು ನಮ್ಮ ಆ ದೊಡ್ಡಮ್ಮ;
ಅವಳೊಡನೆ ಸೆಣಸಾಡಿ ಬಹುಪಾಲ ಪಡೆಯಲ್ಕೆ
ನಾವೆಲ್ಲರೊಂದಾಗಿ ಬಾಳ್ವುದೇ ಹಿತಕರಂ !

### ಭಾಗ ೩

[ ಆಂಧ್ರಮಾತೆಯು ಕನ್ನಡ ಬಾಲಕನನ್ನು ಎಳೆದುಕೊಂಡು ಬರುತ್ತಿರುವಳು ]

**ಬಾಲಕ** :— ಎಲ್ಲಿರುವಳೆನ್ನವ್ವ ಏಕಿಂತು ಪೀಡಿಸುವೆ ?
ಬರಲಾರೆ, ಬರಲಾರೆ, ತೋರೆನ್ನ ಮಾತೆಯನು.
**ತೆಲುಗುತಾಯಿ** :— ಬಾ ಕುವರ ! ನಿಮ್ಮಂತೆ ಕಿರಿದಲ್ಲ ನಮ್ಮಮನೆ;
ಬಲ್ ಪಿರಿದು : ಕೆಲದಿನದೊಳಿನ್ನಷ್ಟು ಹಿರಿದಹುದು;
ಕಾರ್ಮಿಕರ ಬಲ್ ಕೂಟ; ಕಾರ್ಖಾನೆಗಳ ನೋಟ,
ಒಡಲು ತುಂಬುವ ಊಟ ಇರ್ಪುದೈ ನಮ್ಮಲ್ಲಿ;
ಜನಜನಾಂಗದಿ ನೆಗಳ್ತೆಯನ್ನಾಂತ ಮುಂದಾಳು
ಉದಿಸಿರುವರಲ್ತೆ ನಮ್ಮಲ್ಲಿಂದು; ನೀ ಕುವರ
ಆ ಮಹಾಕುವರರಂತಾಗುವೈ ನೀಬಳಿಕ !
ಒರಟು ಛಲವಂ ಬಿಟ್ಟು ನಮ್ಮೊಡನೆ ಇರು ಬಾಲ :

### ಭಾಗ ೪

[ ಮಹಾರಾಷ್ಟ್ರ ಮಾತೆಯು ಕನ್ನಡ ಬಾಲನನ್ನು ಎಳೆದು ತರುತ್ತಿರುವಳು ]

**ಬಾಲಕ :**— ಎಲ್ಲಿರುವಳೆನ್ನವ್ವ ಏಕೆಂತು ಪೀಡಿಸುವೆ?
ಬರಲಾರೆ, ಬರಲಾರೆ ತೋರಿಸೌ ಮಾತೆಯನು.

**ಮರಾಠಾಮಾಯಿ :**—
ಬಾ ಪುರುಷೆ, ಎನ್ನೊಡನೆ ತುಂಬಿ ತುಳುಕುವ ಮನೆಗೆ!
ಆಳ್ವಿಗೆಂದೇ ಕಟ್ಟಿಸಿದುದು ಕಣಾ ನಮ್ಮ ಮನೆ;
ಹುಟ್ಟು ಜನಕಟಿಗರ ಮನೆ; ಐತಿಹಾಸಿಕ ನೆಗ-
ಳ್ತೆಯನಾಂತ ಶಿವಭಾನು ನಮ್ಮಲ್ಲೆ ಬೆಳೆದುದಲೆ?
ಮುಂಗಾಣ್ಕೆ ಮುಂಬಾಯಿ, ಭಾರತದ ಹಿರಿಬಾಯಿ
ನಮ್ಮದಾಗುವುದು ಕೆಲದಿನದಿ ನೀ ನೋಳ್ಪೆ ಕಣಾ!
ನನ್ನೊಡನೆ ಬರೆಲೆ ಏಕೆ ಜೇಗುದಿ ಕಂದ?

**ಕನ್ನಡ ಕುವರ :**—[ ಆಕ್ರೋಶದಿಂದ ಪ್ರವೇಶಿಸಿ ]
ಆರವ್ವ ನೀವೆಲ್ಲ; ಏಕೆ ಸೆಳೆದೊಯ್ಯುವಿರಿ?
ದೂರ ಸರಿಯಿರಿ ಬೇಗ! ಬಿಡಿರೆಮ್ಮ ಕಂದಗಳ!
[ ಅಷ್ಟರಲ್ಲೇ ಆ ಮಕ್ಕಳು 'ಅಣ್ಣ! ಅಣ್ಣ' ಎಂದು ಬಂದು ಅಪ್ಪಿಕೊಳ್ಳುವರು. ]
ಅಳಬೇಡಿ ಕಂದರಿರ: ಮುದ್ದು ತಮ್ಮಂದಿರ!
ತೋರ್ಪೆನೈ ಮಾತೆಯಂ ನಿಮ್ಮ ಹಡೆದವ್ವೆಯಂ
ಬನ್ನಿರೈ ಎನ್ನೊಡನೆ! ಒಮ್ಮನದಿ ಆಡುವೈ!
[ ಕರೆದುಕೊಂಡು ಹೋಗುವನು. ]

## ದೃಶ್ಯ ೩

[ ಕನ್ನಡನಾಡಿನ ಸಮಗ್ರ ಚಿತ್ರಮಧ್ಯದಲ್ಲಿ ಸಿಂಹಾಸನವಿದೆ! ಕನ್ನಡ ದೇವಿ ಹಸನ್ಮುಖಿಯಾಗಿ ಸಿಂಹಾಸನದಿ ಕುಳಿತಿರುವಳು; ಮಕ್ಕಳು ಓಡಿ ಬಂದು ಅಮ್ಮ ಅಮ್ಮ ಎಂದು ದೇವಿಯನ್ನು ಅಪ್ಪಿಕೊಳ್ಳುವರು. ಕನ್ನಡ ಕುವರನೂ ಬಂದು ಸಾಷ್ಟಾಂಗ ವಂದಿಸುವನು. ]

**ಕ. ತಾಯಿ :**—ಎದ್ದೇಳಿ ಕಂದರಿರ! ಬಹು ಬವಣೆಯಾಂತಿರೈ.
ಮುದವೆರಸಿ ಚಿರಕಾಲ ಒಮ್ಮನದಿ ಬಾಳಿರೈ :—
[ ಆಶೀರ್ವದಿಸುವಳು ]

**ಕ. ಕುವರ :**—ನಲಿನಲಿದು ಹರಸವ್ವ! ರನ್ನ ಸಿಂಹಾಸನದ
ರಾಜರಾಜೇಶ್ವರಿಯೆ ಕರುಣೆಯಂ ಬೀರವ್ವ!
ಗೆಲುವು ತುಂಬಲಿ ಮೊಗದಿ; ಒಲವು ತುಂಬಲಿ ಮನದಿ!
ಕನ್ನಡದ ನವಕುವರ ಜಗದ ಕಣ್ಣಾಗಲೌ!
ಜಯ ಭಾರತಂ ಸದಾ, ಜಯತು ಕರ್ಣಾಟಕಂ.
ನವಭಾರತಂ ಗೆಲ್ಗೆ! ಸಿರಿಗನ್ನಡಂ ಗೆಲ್ಗೆ!
ಜಯಮಕ್ಕೆ, ಹಿತಮಕ್ಕೆ, ಶುಭಮಕ್ಕೆ ಮಂಗಳಂ!

---


## ಪುಸ್ತಕ ಪ್ರಕಾಶಕರಲ್ಲಿ:

'ಆನಂದಕಂದ'ರ ಕೆಳಗೆ ಕಾಣಿಸಿದ ಪುಸ್ತಕಗಳ ಹಿಂದಿನ ಆವೃತ್ತಿಯ ಪ್ರತಿಗಳೆಲ್ಲ ತೀರಿಹೋಗಿವೆ. ಪೇಟೆಯಲ್ಲಿ ಅವು ಸಿಕ್ಕದಂತಾಗಿವೆ. ಆದುದರಿಂದ ಅವುಗಳನ್ನು ಮತ್ತೆ ಮುದ್ರಿಸಿ ಪ್ರಕಟಿಸಬೇಕಾಗಿದೆ. ಪ್ರಕಟಿಸಲು ಇಷ್ಟವಿರುವ ಪ್ರಕಾಶಕರು ಪತ್ರವ್ಯವಹಾರಮಾಡಿ ವ್ಯವಹಾರವನ್ನು ಹೊಂದಿಸಿಕೊಳ್ಳಬೇಕು.

### ಪ್ರಕಟಿಸಬೇಕಾದ ಪುಸ್ತಕಗಳು

| | |
|---|---|
| ಸುದರ್ಶನ ( ಸಾಮಾಜಿಕ ಕಾದಂಬರಿ ) | ಸುಮಾರು ೧೫೦ ಪುಟಗಳು |
| ರಾಜಯೋಗಿ ( ಐತಿಹಾಸಿಕ ಕಾದಂಬರಿ ) | ಸುಮಾರು ೧೯೨ ಪುಟಗಳು |
| ನಮ್ಮ ಬದುಕು ( ಕಥಾಸಂಕಲನ ) | ಸುಮಾರು ೧೨೦ ಪುಟಗಳು |
| ಮಾತನಾಡುವ ಕಲ್ಲು ( ಕಥಾಸಂಕಲನ ) | ಸುಮಾರು ೧೨೦ ಪುಟಗಳು |
| ಅರುಣೋದಯ ( ಕವನ ಸಂಕಲನ ) | ಸುಮಾರು ೫೦ ಪುಟಗಳು |
| ವಿರಹಿಣಿ ( ಕವನ ಸಂಕಲನ ) | ಸುಮಾರು ೮೦ ಪುಟಗಳು |
| ಒಡನಾಡಿ ( ಕವನ ಸಂಕಲನ ) | ಸುಮಾರು ೬೪ ಪುಟಗಳು |

**ಸಂಪಾದಕ 'ಜಯಂತಿ' ಧಾರವಾಡ**

# ಸಾಧ್ವೀಮಣಿ ಪದ್ಮಾವತೀ ದೇವಿ

( ಕವಿಪತ್ನಿಯ ಕಥೆ )

ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ ಕಾಸರಗೋಡು

卐

**'ಗೀತಗೋವಿಂದ' ಎಂಬ ಕಾವ್ಯ ಸಂಸ್ಕೃತಸಾಹಿತ್ಯದಲ್ಲಿ ತನ್ನದೇ ಆದ ಒಂದು ವಿಶಿಷ್ಟಸ್ಥಾನವನ್ನು ಪಡೆದಿದೆ. ಅದನ್ನು ರಚಿಸಿದವನು ಜಯದೇವ. ಜಯದೇವ ಪರಮಭಕ್ತನಿದ್ದಂತೆ, ಅವನ ಹೆಂಡತಿ ಪದ್ಮಾವತಿ, ಪರಮ ಪತಿವ್ರತೆಯಾಗಿದ್ದಳು.**

卐

ಅನನ್ಯ ಭಕ್ತಿಯಿಂದ ಪತಿಸೇವೆಯನ್ನು ಮಾಡಿ, ಸದಾ ಸತ್ಯವ್ರತೆಯಾಗಿದ್ದು ಸತ್ಕಾರ್ಯಗಳನ್ನು ಅನುಗೊಳಿಸುತ್ತಿರುವ ಮಹಾ ತಾಯಿಯೆ 'ಪತಿವ್ರತೆ'ಯೆಂಬ ನಾಮಧೇಯಕ್ಕೆ ತಕ್ಕವಳು; ಆಕೆಯೆ 'ಸದ್ಭಾರ್ಯೆ'

× × × ×

ಪವಿತ್ರಗಂಗೆಯ ಅಲೆಗಳ ತುಂತುರುಹನಿಗಳಿಂದ ಶೈತ್ಯವನ್ನು ಹೊಂದಿ, ಮೃದುವಾಗಿ ಬೀಸುವ ಮಂದಮಾರುತದ ಸುಖಸ್ಪರ್ಶದಂತೆ, ಸಾಹಿತ್ಯವಾಹಿನಿಯ ರಸತರಂಗಗಳಿಂದ ತುಂಬಿ ಬೆಳಗುವ 'ಗೀತಗೋವಿಂದ'ವನ್ನು ಆಸ್ವಾದಿಸದ ಕಲಾಕಾರನಿಲ್ಲ! ಅದೆಂದರೆ ಮಧುರ ರಸಸೃಷ್ಟಿಗಳನ್ನಿತ್ತ ಮಹಾಕವಿ ಜಯದೇವನ ಗೀತಕಾವ್ಯ. ಶಬ್ದಾರ್ಥಸಂಪತ್ತಿನಿಂದ ತುಂಬಿ ಹರಿಯುವ ಆ ಗೀತಕಾವ್ಯವನ್ನು ಹಾಡುವಾಗ ಎಂತಹವನೂ ಮರುಳಾಗಬೇಕು ಹೆಚ್ಚೇಕೆ, ಅಚೇತನವಸ್ತುವೂ ಚೇತನವನ್ನು ಹೊಂದಿ ನಲಿದಾಡಬೇಕು. ಈ ಸತ್ಯವನ್ನು ತೋರಿದ್ದಾಳೆ ಸಾಧ್ವೀಮಣಿ ಪದ್ಮಾವತಿ!

ಕೆಲವು ಶತಮಾನಗಳ ಹಿಂದಿನ—ಒಂದು ಶುಭದಿನ, ಜಗನ್ನಾಥಪುರಿಯಲ್ಲಿ ವಾಸಿಸುತ್ತಿದ್ದ ಪ್ರಸಿದ್ಧ ಶ್ರೋತ್ರಿಯ ಬ್ರಾಹ್ಮಣನಾದ ಅಗ್ನಿಹೋತ್ರ ಎಂಬವನ ಮಗಳಾಗಿ ಪದ್ಮಾವತಿಯು ಜನಿಸಿದಳು. ಜನನಕಾಲದಲ್ಲೇ ತಾಯಿ-ತಂದೆಗಳ ಒಲವಿನ ಎರಕವಾಗಿ ರೂಪುದೋರಿದ ಆ ಮಗು. ಭವ್ಯ ಭವಿಷ್ಯವನ್ನು ತನ್ನೆಡೆಗೂ, ಸಮಾಜದೆಡೆಗೂ ಸೆಳೆದುಕೊಂಡೇ ಬಂದಿದ್ದಳೆಂದರೆ, ಈ ಮಾತು ಚರಿತ್ರೆಯ ಸತ್ಯತೆಗೆ ಪ್ರತೀಕವಾಗಿದೆ. ತಾಯಿ-ತಂದೆಗಳ ಮುದ್ದಾದ ಪಾಲನೆಯಲ್ಲಿ ಬೆಳೆದ ಆ ಕುವರಿ, ದಿನದಿಂದ ದಿನಕ್ಕೆ ಚಂದ್ರಕಲೆಯಂತೆ ಬೆಳೆಯುತ್ತ ಸರ್ವಾಂಗಸೌಂದರ್ಯದ ಪರಮಾವಧಿಯಲ್ಲಿ ತನ್ನ ಯೌವನದ ಮೊದಲ ಹಂತಕ್ಕೆ ಕಾಲಿರಿಸಿದಳು. ಮಗಳ ಭವ್ಯಭಾವಿಯನ್ನು ಆಶಿಸಿದ ತಂದೆ-ತಾಯಿಗಳು ವರಾನ್ವೇಷಣೆಯಲ್ಲಿ ತೊಡಗಿ, ಕೊನೆಗೊಂದು ದಿನ ಕೃತಾರ್ಥರಾದರು. ತಮ್ಮ ಪುತ್ರಿಯ ವಿವಾಹಸಂಬಂಧವನ್ನು, ಬಿಲ್ವಾ ಗ್ರಾಮದಲ್ಲಿ ವಾಸಿಸುತ್ತಿದ್ದ ಶ್ರೋತ್ರಿಯ ಬ್ರಾಹ್ಮಣನಾದ ನಾರಾಯಣಭಟ್ಟನ ಸುಪುತ್ರನಾದ ಪ್ರಾಪ್ತವಯಸ್ಕನಾದ ಸದ್ಗುಣಸಂಪನ್ನನಾದ ಬಡವನಾದರೂ ವಿದ್ವತ್ಸಂಪತ್ತಿನಿಂದ ತುಂಬಿದವನಾದ ಜಯದೇವನೊಡನೆ ನೆರವೇರಿಸಲು ಬಗೆದರು. ವಿಧಿಯೂ ಅನುಕೂಲವಾಗಿ ಬಂದಿತೆಂದಾದರೆ, ವಿವಾಹಸಮಾರಂಭಕ್ಕೆ ದೀರ್ಘವೆಲ್ಲಿಂದ ಬರಬೇಕು? ಒಂದು ಶುಭದಿನದಲ್ಲಿ ಜಯದೇವನು ಬಂಧು-ಬಾಂಧವರ ಗುರು–ಹಿರಿಯರ ಹರಕೆಯೊಡನೆ ಮಾಂಗಲ್ಯಸೂತ್ರವನ್ನು ಪದ್ಮಾವತಿಯ ಕೊರಳಿಗೆ ತೊಡಿಸಿದನು. ಆದರ್ಶ ದಂಪತಿಗಳ ಒಲವಿನ ಕೂಟವನ್ನು ಕಂಡ ಆ ತಂದೆತಾಯಿಗಳ ಹೃದಯಾನಂದವನ್ನು ವರ್ಣಿಸುವುದು ಲೇಖನಿಯಿಂದಾಗದ ಕೆಲಸ.

ಅತ್ತೆಯ ಮನೆಯನ್ನು ಸೇರಿದ ಪದ್ಮಾವತಿ ಪತಿಭಕ್ತಿಸಂಪನ್ನೆಯಾಗಿ ಅತ್ತೆಮಾವಂದಿರ ಹೃದಯಾವರ್ಜಕಳಾಗಿ, ಬಡತನದಲ್ಲೂ ಜೀವಿತವನ್ನು ಸುಂದರವಾಗಿ ನಡೆಸಿದಳು. ಹೆಚ್ಚೇಕೆ, ಹೃದಯ ಸಂಪತ್ತನ್ನು ತುಂಬಿಕೊಂಡ ಆ ಸಾಧ್ವಿ, ಆ ಸಂಸಾರವನ್ನು 'ಸಪ್ತಸ್ವರ್ಗಕ್ಕೂ ಮಿಗಿಲಾಗಿ' ರೂಪಿಸಿದಳೆಂದರೆ, ಜಯದೇವನು ತನ್ನ ಜೀವನವನ್ನು ಧನ್ಯವನ್ನಾಗಿ ಎಣಿಸಿದುದು ತಪ್ಪಲ್ಲ. ಅಂತೂ ಜಯದೇವನು ತನ್ನ ಒಲವಿನ ಮಡದಿಯನ್ನು ಪಡೆಯುತ್ತ, ಜನ್ಮಲಬ್ಧವಾದ ಕವಿತಾಲಹರಿಯಲ್ಲಿ ತನ್ನ ಜೀವನಾದವನ್ನು ದನಿಯೆತ್ತಿದನು. ದಂಪತಿಗಳ ಉಜ್ವಲ ಪ್ರೇಮಪೀಯೂಷಧಾರೆಯಲ್ಲಿ ರೂಪುದೋರಿದ 'ಗೀತಗೋವಿಂದ' ಕಾವ್ಯವು—ಜನತೆಯ ಜೀವನಕ್ಕೆ ಸುಖಶಾಂತಿಗಳನ್ನೊದಗಿಸಿತು. ಅಂದಿನ ಸಮಾಜ ಜಯದೇವನನ್ನು 'ಪೀಯೂಷ ವರ್ಷಕವಿ'ಯೆಂದು ಕೊಂಡಾಡಿತು. ಸುತ್ತುಮುತ್ತಲ ವಾತಾವರಣ, ಆ ದಂಪತಿಗಳ ಮಧುರಕಂಠದಿಂದ ಹೊರಹೊಮ್ಮಿದ—

"ಧೀರ ಸಮೀರೇ ಯಮುನಾತೀರೇ ವಸತಿ ವನೇ ವನಮಾಲೀ—
ಮಾಕುರು ಧನುರ್ಧರ ಗಮನ ವಿಲಂಬನಂ ಅತಿಮಧುರಾ ವನನಾರೀ"

ಎಂಬೀ ರಸನಾದದ ಪಲ್ಲವಿಯಲ್ಲಿ ಬೆಳುದಿಂಗಳ ಪ್ರಶಾಂತ

ತೃಪ್ತಿಯನ್ನು ಕಂಡಿತು. ಗೀತಗೋವಿಂದದ ಮಧುರರಸ ತರಂಗಿಣಿಯಲ್ಲಿ ತೇಲಾಡಿತು. ಸಾವಿರಾರು ಜನ ಭಕ್ತಿಪೂರ್ಣವಾದ ಈ ಗಾನಪ್ರವಾಹವನ್ನು ಮೊರೆಮೊರೆದು ಕುಡಿಯಿತು; ತಣಿಯಿತು; ನಲಿಯಿತು.

ಜಯದೇವನು ಇದೇ ಸಂಸಾರಗತಿಯಲ್ಲೇ 'ಗೀತಗೋವಿಂದ'ದಂತೆ ಘನವಾದ 'ಪ್ರಸನ್ನರಾಘವ'ವನ್ನೂ ಬರೆದು ಖ್ಯಾತಿಯನ್ನು ಹೊಂದಿದನು.

× × × ×

ಜಯದೇವನ ಅಸಾಮಾನ್ಯವಾದ ಸಂಗೀತ-ಸಾಹಿತ್ಯಗಳ ಪ್ರೌಢಿಮೆಯನ್ನು ಮನಗಂಡ, ಜಗನ್ನಾಥಪುರಿಯ ನೆರೆಹೊರೆಯ ಗ್ರಾಮದಲ್ಲಿ ವಾಸಿಸುತ್ತಿದ್ದ ಪ್ರಸಿದ್ಧ ಶ್ರೇಷ್ಠಿಯೊಬ್ಬನು, ಒಮ್ಮೆ ತನ್ನಲ್ಲಿಗೆ ಜಯದೇವನನ್ನು ಬರಮಾಡಿಕೊಂಡನು. ಕೆಲವು ದಿನಗಳವರೆಗೆ ತನ್ನ ಗ್ರಾಮದಲ್ಲೇ ಇದ್ದು ಜನತೆಯ ಹೃದಯಕ್ಕೆ ಆನಂದವನ್ನೊದಗಿಸಬೇಕೆಂದು ಬೇಡಿಕೊಂಡನು. ಸಾತ್ತ್ವಿಕ ಪ್ರಕೃತಿಯವನಾದ ಜಯದೇವನು ಸಾಹುಕಾರನ ವಿನೀತವಾದ ಬೇಡಿಕೆಯನ್ನು, ತಿರಸ್ಕರಿಸಲಾರದೆ ಅವನಿಚ್ಛೆಯಂತೆ ಕೆಲವು ಸಮಯ ಅಲ್ಲೇ ಉಳಿದನು. ತಾನು ನೆಲೆನಿಂತ ಆ ದಿನಗಳಲ್ಲಿ ಜಯದೇವನು ಆ ಗ್ರಾಮದ ಹಲವು ಜನರಲ್ಲಿ ಭಗವದ್ಭಕ್ತಿಯನ್ನು ತುಂಬಿದನು. ಮುಂದೊಂದು ದಿನ ಜಯದೇವನು ಊರಿಗೆ ತೆರಳುವ ಬಯಕೆಯನ್ನು ಸಾಹುಕಾರನ ಮುಂದಿರಿಸಲು, ಸಾಹುಕಾರನು ಒಡನೆಯೆ ಜಯದೇವನ ಪ್ರಯಾಣಕ್ಕೆ ಅನುಕೂಲವಾದ ಏರ್ಪಾಡನ್ನು ಮಾಡಿದನು. ಅದರೊಂದಿಗೆ ಸಾಹುಕಾರನು ಕವಿಯ ನಿಸ್ಪೃಹತೆಯನ್ನು ಮನಗಂಡರೂ ಆ ಸಂಸಾರದಲ್ಲಿ ನೆಲಸಿದ ಬಡತನವನ್ನು ಮನಗಂಡು, ಜಯದೇವನಿಗರಿಯದಂತೆ, ಆತನ ಸಂಸಾರಕ್ಕೆ ಹಾಗೂ ಪತ್ನಿಗೆ ಬೇಕಾಗಬಹುದಾದ ಚಿನ್ನಾಭರಣಗಳನ್ನು ಗಾಡಿಯ ಒಳಬದಿಯಲ್ಲಿ ತುಂಬಿಸಿಟ್ಟು, ಸಾರಥಿಗದರ ತಿಳಿವನು ಕೊಟ್ಟು ಮನೆಗೆ ತಲುಪಿಸುವ ಏರ್ಪಾಡನ್ನು ಮಾಡಿದನು. ಗಾಡಿ ಮುಂದುವರಿಯಿತು. ಕವಿತಾಲಹರಿಯಲ್ಲಿ, ಪಾರಮಾತ್ಮಿಕಭಾವಸಮಾಧಿಯಲ್ಲಿ ಲೀನನಾದ ಕವಿ, ಸಕಲಜನರಿಗೂ ಕೈ ಮುಗಿದನು. ಜಯಘೋಷವು ತುಂಬಿ ಮೊರೆಯಿತು.

ಗ್ರಾಮವನ್ನು ಬಿಟ್ಟು, ಅರಣ್ಯಮಾರ್ಗಕ್ಕೆ ಕಾಲಿರಿಸಿ ಗಾಡಿಯು ಒಮ್ಮಿಂದೊಮ್ಮೆಯೆ ಅರಣ್ಯವಾಸಿಗಳಾದ ಜನರಿಂದ ತಡೆದು ನಿಲ್ಲಿಸಲ್ಪಟ್ಟಿತು. ಆ ಜನರು ಸಾರಥಿಯನ್ನು ದೂರಕ್ಕೆ ತಳ್ಳಿ, ಗಾಡಿಯ ಒಳಗೆ ಹೊಕ್ಕರು. ನೋಡುವುದೇನು ? ಜಯದೇವನು ಇನ್ನೂ ಕಾವ್ಯಸಮಾಧಿಯಲ್ಲೇ ಲೀನನಾಗಿದ್ದಾನೆ. ಮಂದಸ್ಮಿತದಿಂದ ಕವಿತಾದೇವಿಯನ್ನು ಸುಂದರವಾಗಿ ಸಮೆಯುತ್ತಿದ್ದಾನೆ. ಚೋರರಿಗೇನು ? ಜಯದೇವನನ್ನು ಹಿಡಿದೆಳೆದ ಚೋರರು, ಗಾಡಿಯನ್ನೆಲ್ಲಾ ಶೋಧಿಸಿ, ಗುಪ್ತವಾಗಿರಿಸಿದ ಧನಸಂಪತ್ತನ್ನು ಸ್ವಾಧೀನವಾಗಿಸಿ, ತಮ್ಮ ಭಾವಿಗೆ ತೊಡಕುಂಟಾಗದಂತೆ ಜಯದೇವನನ್ನು ಬಲವಾಗಿ ಹೊಡೆದು, ಹಾಳು ಬಾವಿಯೊಂದರಲ್ಲಿ ಜೀವಸಮೇತವಾಗಿ ತಳ್ಳಿದರು. ಇತ್ತ ಸಾರಥಿಯಂತೂ ಚೋರರ ಕ್ರೂರಹಿಂಸೆಗೆ ಬಲಿಯಾಗಿದ್ದು ಮೊದಲೇ ಜೀವನವನ್ನು ಕೊನೆಗೊಳಿಸಿದ್ದನು. ಬಾವಿಗೆ ಬಿದ್ದ ಜಯದೇವನು, ದೇಹಕ್ಕೆ ಬಂದಡಸಿದ ವೇದನೆಯಿಂದ ಒಮ್ಮೆ ತುಸು ಚಲಿತನಾಗಿ, ಅದುವೆ ಸ್ಥಿತಿಯಲ್ಲಿ ಒಮ್ಮೆ ಪದ್ಮಾವತಿಯ ಕಲ್ಯಾಣವನ್ನೂ ಬಗೆದು—ಗೀತಗೋವಿಂದದ ಮಧುರ ಗಾನಲಹರಿಯಲ್ಲಿ ತನ್ಮಯನಾದನು.

ಮರುದಿನ ದೈವನಿಯೋಗವೆಂಬಂತೆ ಕ್ರೌಂಚದೇಶಾಧೀಶನಾದ ವೀರಸೇನನು ಬೇಟೆಗಾಗಿ ಆ ವನದೆಡೆ ಬಂದನು. ದೂರದಿಂದಲೆ ಮಧುರವಾಗಿ ಕೇಳಿಸುತ್ತಿದ್ದ ಗೀತದ ಸವಿಗೆ ಮನಸೋತು, ಮಕರಂದದ ಸವಿಗೆ ಓಡಿಬರುವ ಮಧುಕರನಂತೆ-ನೇರಾಗಿ ಸೇನಾಸಮೇತನಾಗಿ ಬಾವಿಯೆಡೆಗೆ ಬಂದನು. ಬಂದವನೇ ಸೈನಿಕರಿಂದ ಜಯದೇವನನ್ನು ಬಾವಿಯಿಂದ ತೆಗೆಯಿಸಿ, ಅವನ ಪೂರ್ವೋತ್ತರವನ್ನೆಲ್ಲ ತಿಳಿದು ದುಃಖಿತನಾಗಿ, ಆದರಾಭಿಮಾನಪೂರ್ವಕವಾಗಿ ತನ್ನರಮನೆಗೆ ಸಾಗಿಸಿದನು. ಅಲ್ಲಿ ಔಷಧೋಪಚಾರಗಳಿಂದವನ ಕೈಕಾಲುಗಳನ್ನು ಸರಿಪಡಿಸಿದನು. ಅಲ್ಲಾತನು ಶುಶ್ರೂಷೆಯನ್ನು ಪಡೆಯುತ್ತಿರುವಾಗಲೆ....

× × × ×

ಇತ್ತ ಪದ್ಮಾವತಿಯು ತನ್ನ ಪತಿದೇವನ ಬರವನ್ನು ಹಾರಯಿಸುತ್ತಾ, ಅಹರ್ನಿಶಿ ದೇವದೇವನಲ್ಲಿ ಮಾಂಗಲ್ಯದ ರಕ್ಷಣೆಗಾಗಿ ಬೇಡುತ್ತಿದ್ದಳು. ಸದಾ ಪ್ರತಿಕೂಲಶಾಂತಿಗಾಗಿ ಗೌರೀವ್ರತವನ್ನನುಗೊಳಿಸುತ್ತ ಕಾಲವನ್ನು ಕಳೆಯುತ್ತಿದ್ದಳು. ಈ ಮಧ್ಯದಲ್ಲೇ ಒಂದು ದಿನ ಅನಿರೀಕ್ಷಿತವಾಗಿ ರಾಜದೂತನು ಬಂದು ಮನೆಯೆದುರು ಕಾಣಿಸಿಕೊಳ್ಳಲು, ಪದ್ಮಾವತಿಯು ತನ್ನ ಮಾವನನ್ನು ಮುಂದಿರಿಸಿ ಹೊರಗೆ ಬಂದಳು. ರಾಜದೂತನು ಜಗನ್ನಾಥಪುರಿಯಿಂದ ಹಿಂದಿರುಗುತ್ತಿದ್ದ ಜಯದೇವನಿಗಾದ ದುರಂತವನ್ನೂ, ಇದೀಗ ಸುಖಸಂಪನ್ನನಾಗಿದ್ದ ಬಗೆಯನ್ನೂ ಹೇಳಿ, ರಾಜಸನ್ನಿಧಿಯಿಂದ ಅನುಗ್ರಹೀತವಾದ ಆಜ್ಞಾಪತ್ರವನ್ನೂ, ಜಯದೇವನಿತ್ತ ಕ್ಷೇಮಪತ್ರವನ್ನೂ ಅರ್ಪಿಸಿದನು. ಪದ್ಮಾವತಿಯು ತನ್ನ ಪತಿದೇವನ ಪತ್ರವನ್ನು ಅತುಲಾನಂದದಿಂದ ಸ್ವೀಕರಿಸುತ್ತ, ಒಡನೆ ಒಳಬಂದು ಗೌರಿಯ ಮುಂದೆ ನಿಂತು, ದೀಪವನ್ನು ಬೆಳಗಿ, ಭಕ್ತಿಯಿಂದ ಮಣಿದಳು. ಅಲ್ಲಿಂದೆದ್ದು ಅತ್ತೆಮಾವಂದಿರ ಬಳಿ ಬಂದು ಭಕ್ತಿಯಿಂದ ಪತ್ರವನ್ನೊಡೆದು ವಾಚಿಸಿದಳು.

ಒಂದೆಡೆ— ಅರಮನೆಗೆ ಸಂಸಾರಸಮೇತವಾಗಿ ಬರಬೇಕೆಂದು ವಿನಂತಿಸಿದ ರಾಜಾಜ್ಞೆಯ ಓಲೆಯನ್ನು ಓದಿನ ಆನಂದ, ಮತ್ತೊಂದೆಡೆ ಸಂಸಾರವನ್ನು ಕಾಣಲು ಆಶಿಸಿ, ಆ ತಂದೆ-ತಾಯಿಗಳ ಹರಕೆಯ ಆಶೆಯೊಡನೆ ಪತ್ನಿಗಿತ್ತ ಒಲವಿನ ಸಂದೇಶವನ್ನು ವಾಚಿಸಿದ ಮಹದಾನಂದ. ಈ ದ್ವಿಮುಖವಾಗಿ ಹರಿದೋಡಿದ ಆನಂದಶರಧಿಯಲ್ಲಿ ತೇಲಾಡಿದ ಪದ್ಮಾವತಿ ಆನಂದಬಾಷ್ಪಗಳನ್ನು ಸುರಿಸುತ್ತ, ಪತಿದೇವನ ಸನ್ನಿಧಿಗೆ ತೆರಳುವ ಮಹದಾನಂದದಲ್ಲಿ ತನ್ನನ್ನು ತಾನೇ ಮರೆತು ತನ್ನ ನೆಚ್ಚಿನ, ಮೆಚ್ಚಿನ ಅಷ್ಟಪದಿಯನ್ನು ಹೃದಯಂಗಮವಾಗಿ ಹಾಡಿದಳು; ಈ ಸಂಭ್ರಮದ ಸಂದರ್ಭವನ್ನು ಮನಗಂಡ ರಾಜದೂತನೂ ದಿಙ್ಮೂಢನಾಗಿ ಭಕ್ತಿಯ ಹೊನಲಲ್ಲಿ ಮೈಮರೆತನು. ಸಾಧ್ವಿಯರ ತಪಶ್ಶಕ್ತಿಯು ಯಾರನ್ನು ತಾನೇ ಮೈಮರೆಸದು! ಪಾತಿವ್ರತ್ಯದ ಮಾಂಗಲ್ಯಪದಕದ ಹಿರಿಮೆಯೆಂದರೆ ಅದು ವರ್ಣನಾತೀತವು.

ಅಂತೂ, ಪದ್ಮಾವತೀದೇವಿಯು ಅತ್ತೆ-ಮಾವಂದಿರೊಡನೆ ಕ್ರೌಂಚ-ನಗರಿಗೆ ಹೊರಟಳು. ಒಂದೆರಡು ದಿನಗಳಲ್ಲೇ ಸುಖಪ್ರಯಾಣದಲ್ಲಿ ಪತಿದೇವನ ಸಾನ್ನಿಧ್ಯವನ್ನು ಸೇರಿದಳು. ಆನಂದಬಾಷ್ಪಗಳಿಂದ ತಡೆ-ಗಟ್ಟಿದ ಮಾತುಗಳುಳ್ಳ ಆ ಸಾಧ್ವಿ, ತನ್ನ ಪತಿದೇವನ ಪಾದಪದ್ಮಗಳಲ್ಲಿ ತಲೆಯಿರಿಸಿ ಪಾದಗಳನ್ನು ಕಣ್ಣೀರಿಂದ ತೊಯಿಸಿದಳು. ಎತ್ತೆತ್ತಲೂ ಆನಂದ; ಎತ್ತೆತ್ತಲೂ ಶಾಂತಿ; ಎತ್ತೆತ್ತಲೂ ಅಭೂತಪೂರ್ವ ಹೃದ-ಯಾನಂದದ ಹೊನಲು.

ಕ್ರೌಂಚರಾಜನು ತನ್ನ ಗುರುವಾದ ಜಯದೇವನ ಪತ್ನಿ ಪದ್ಮಾ-ವತಿಯನ್ನು ಗುರುಪತ್ನಿಯ ನೆಲೆಯಲ್ಲಿ ಅಭಿವಂದಿಸಿ, ತನ್ನ ರಾಣಿಯ ಬಳಿ ನಿಲ್ಲುವಂತೆ ಬೇಡಿಕೊಂಡನು. ಪದ್ಮಾವತೀದೇವಿಯು ಅಂತಃಪುರದಲ್ಲೇ ನೆಲೆನಿಂತು, ಅಹರ್ನಿಶ ತನ್ನ ಅತ್ತೆ-ಮಾವಂದಿರ ಸೇವೆಯನ್ನು ಮಾಡುತ್ತ, ಬಿಡುವಿನ ಕಾಲದಲ್ಲಿ ರಾಜಪತ್ನಿಗೆ ನೀತಿಬೋಧೆಯನ್ನಿ-ಯುತ್ತ, ಅರುಂಧತಿಯಂತೆ ಬಾಳಿದಳು.

ಒಂದು ದಿನ, ಎಂದಿನಂತೆ ಪದ್ಮಾವತಿಯು ಪಾತಿವ್ರತ್ಯದ ಕುರಿತು ರಾಜಪತ್ನಿಗುಪದೇಶಿಸುತ್ತಿರಲು, ಒಬ್ಬ ಸೇವಕನು ಅಲ್ಲಿಗೆ ಬಂದು, ರಾಜಪತ್ನಿಯ ಸಮೀಪದ ಬಂಧುವೊಬ್ಬನು ಮೃತನಾದನೆಂದೂ 'ಅವನ ಪತ್ನಿಯು ಸಹಗಮನಕ್ಕಾಗಿ ಬಯಸುತ್ತಿರುವಳು' ಎಂದೂ ತಿಳಿಸಿದನು. ಈ ವಾರ್ತೆಯನ್ನು ಕೇಳಿದ ಅಂತಃಪುರವು ಶೋಕಾ-ಕುಲಿತವಾಯಿತು. ಆದರೆ ಪದ್ಮಾವತಿಯು ಮಾತ್ರ ಆಶ್ಚರ್ಯಚಕಿತೆ-ಯಾಗದಿರುವುದನ್ನು ಮನಗಂಡ ರಾಜಪತ್ನಿಯು 'ಅಮ್ಮಾ, ಆ ಮಹಾ ಪತಿವ್ರತೆಯು ತನ್ನೆಡೆಯಲ್ಲಿದ್ದ ಸಕಲಸುಖಗಳನ್ನು ತ್ಯಜಿಸಿ–ಪತಿ-ಯೊಡನೆ ಸಹಗಮನಕ್ಕಾಗಿ ಬಯಸಿದ ವಾರ್ತೆಯನ್ನು ಕೇಳಿದ, ನೀವು ಚಕಿತೆಯಾಗದಿರಲು ಕಾರಣವೇನು? ಇಂತಹ ಹೃದಯವಿದಾರಕ ವಾರ್ತೆಯು ನಿಮ್ಮನ್ನು ಕದಡದಿರಲು ಕಾರಣವೇನು? ದಯವಿರಿಸಿ ತಿಳಿಸಬೇಕು" ಎಂದು ಕೇಳಿಕೊಂಡಳು. ಈ ಆಕ್ಷೇಪಣೆಯನ್ನು ಕೇಳಿದ ಪದ್ಮಾವತಿಯು "ತಾಯೀ, ಪತಿಯ ಮರಣವಾರ್ತೆಯನ್ನು ಕೇಳಿದ ಪತಿವ್ರತೆಯು ಒಡನೆಯೆ ಮೂರ್ಛೆಗೆ ಸಂದು, ಹಾಗೆಯೆ ಪತಿ-ಧ್ಯಾನಾಸಕ್ತ ಚಿತ್ತವೃತ್ತಿಯಿಂದ ಮರಣಕ್ಕೀಡಾಗುವಳಲ್ಲದೆ, ಅನಂತರ ಮರಣವನ್ನು ಹೊಂದುವುದು ಆತ್ಮಘಾತವೇ ಹೊರತು ಸ್ತುತ್ಯಸೇವೆ-ಯಾಗದು" ಎಂದೆಂದು ಮೌನವನ್ನಂಗೀಕರಿಸಿದಳು.

ಪದ್ಮಾವತಿಯ ಶುದ್ಧಾಂತಃಕರಣದಿಂದ ಹೊರಟ ಮಾತುಗಳು ರಾಜಪತ್ನಿಯ ಕಿವಿಯಲ್ಲಿ ಶಲ್ಯದಂತೆ ನಾಟಿದುವು. ಆಕೆಯು—ಪದ್ಮಾ-ವತಿಯು ತಾನೇ ಪತಿವ್ರತೆಯಾಗಿರುವೆನೆಂಬ ಗರ್ವದಿಂದೀ ಮಾತು-ಗಳನ್ನಾಡಿದಳೆಂದು ಬಗೆದು, ಆಕೆಯ ಸತೀತ್ವಭಂಗವನ್ನೆಸಗಲು ಅವಿ-ವೇಕದಿಂದ ನಿಶ್ಚಯಿಸಿಕೊಂಡಳು. ರಾಜಪತ್ನಿಯೇನು ಬಲ್ಲಳು ಪದ್ಮಾ-ವತೀದೇವಿಯ ಹೃದಯಸಂಪತ್ತನ್ನು! ತಪಶ್ಶಕ್ತಿಯನ್ನು!!

× × × ×

ರಾಜಪತ್ನಿಯಲ್ಲವೆ? ಅಧಿಕಾರಮದವಿದೆ. ಮೊದಲೇ ಕೆಟ್ಟಿದ್ದ ಅವಿವೇಕಪೂರ್ಣವಾದ ಮನಸ್ಸಿನ ಕಾವಿದೆ. ಎಂದಮೇಲೆ ತನ್ನ ಮುಂದೆ ಬರಬಹುದಾದ ಮಹಾವಿಪತ್ತನ್ನಾಕೆ ಎಲ್ಲಿ ಕಾಣಬೇಕು? ಸಂದರ್ಭವನ್ನು ಕಾಯುತ್ತ ಕುಳಿತಳು.

ಈ ಘಟನೆಯ ಮುಂದೊಂದು ದಿನ, ಜಯದೇವನು ರಾಜ-ನೊಡನೆ ಮೃಗಯಾಕುತೂಹಲಿಯಾಗಿ ಅರಣ್ಯದೆಡೆ ಸಾಗಿದನು. ಸದಾ ಭಾವಸಂಪನ್ನ ಹೃದಯಕ್ಕೆ ಮೃಗಯೆ ಆದರೇನು? ಇನ್ನೊಂದಾದ-ರೇನು? ಅಹಿಂಸಾಪೂರ್ಣವಾದ ಜಗತ್ತೇ ಆತನ ನಿಲುದಾಣವಲ್ಲದೆ ಮತ್ತೇನು?

ಜಯದೇವನು ಅರಣ್ಯಾಭಿಮುಖನಾಗಿ ಸಾಗಿದ ಈ ಗಳಿಗೆಯಲ್ಲಿ ರಾಜಪತ್ನಿಯು, ಮಂತ್ರಿಯನ್ನು ಕರೆದು ತನ್ನ ಕುಹಕವನ್ನು ಬಿತ್ತಿದಳು. ಒಲ್ಲದ ಮನಸ್ಸಿನಿಂದಾದರೂ ಮಂತ್ರಿ ಅಧಿಕಾರದ ಮುಂದೆ ತಲೆವಾಗಿ ಮುನ್ನಡೆದನು. ಇತ್ತ ಅಂತಃಪುರಕ್ಕೆ ಸಾಗಿದ ರಾಜಪತ್ನಿ, ಎಂದಿನಂತೆ ಪದ್ಮಾವತಿಯು ಉಪದೇಶಿಸುತ್ತಿದ್ದ ಮಾತುಗಳಿಗೆ ತಲೆಗೊಟ್ಟು ಕುಳಿ-ತಳು. ಇದೇ ವೇಳೆಯಲ್ಲೇ ಅನಿರೀಕ್ಷಿತವಾಗಿ, ಸಂಭ್ರಮದಿಂದ ರಾಜ ದೂತನೊಬ್ಬನು ಮ್ಲಾನವದನನಾಗಿ ಆಗಮಿಸಿ, ಏನನ್ನೂ ಉಸಿರಲಾರ-ದವನಂತೆ ತಲೆಗುತ್ತಿ ನಿಂತನು. ರಾಜಪತ್ನಿಯು ವಿಚಾರವನ್ನರಿತವ-ಳಾಗಿದ್ದರೂ ಏನೂ ಅರಿಯದವಳಂತೆ ದೂತನ ಬಾಯ್ಬಿಡಿಸಲು ಯತ್ನಿಸಿದಳು. ದೂತನು ದೀನಮುಖನಾಗಿ "ಅಮ್ಮಾ, ಏನು ಹೇಳಲಿ? ವಿಧಿಯ ಮಾಯೆಗೆ ತುತ್ತಾಗದವರಾರು? ಅರಣ್ಯವನ್ನು ಬಂದು ಸೇರಿದ ನಾವು ಮೃಗಯಾತತ್ಪರರಾಗಿದ್ದ ಕಾಲದಲ್ಲೇ, ದೊಡ್ಡ ಪೊದ-ರೊಂದರಿಂದ ಧುಮುಕಿ ಮೇಲೆದ್ದ ಹೆಬ್ಬುಲಿಯು...... ಅಮ್ಮಾ, ಅಮ್ಮಾ..... ಗುರುವರ್ಯರಾದ ಜಯದೇವಕವಿಯ ಮಸ್ತಕವನ್ನು ಸೀಳಿಹಾಕಿತು. ಮುಂದೆ ಇನ್ನೇನು ಹೇಳಲಿ" ಎಂದೆಂದು ಅತ್ತಿತ್ತ ನೋಡದೆ ಒಡನೆಯೆ ತೆರಳಿದನು. ರಾಜಪತ್ನಿಯು ತನ್ನ ಮುಖವನ್ನು ತಿರುಗಿಸುತ್ತಿರುವಳು...... ಅದೇ ಕಾಲದಲ್ಲೇ ನಿಶ್ಚೇಷ್ಟಿತಳಾಗಿ ಬಿದ್ದಿದ್ದ ಪದ್ಮಾವತಿಯನ್ನು ಕಂಡು ಬೆರಗಾಗಿ, ಮರುಗಿ, ತನ್ನ ತಪ್ಪನ್ನು ಒಡನೆಯೆ ಮನದಂದು ದುಃಖೋದ್ಗಾರಗಳನ್ನೆತ್ತಿದಳು. ಪಾತಿವ್ರತ್ಯದ ಪ್ರಭಾವವನ್ನು ಪರೀಕ್ಷಿಸ ಹೊರಟ ತನ್ನ ಅವಿವೇಕವನ್ನು ನೆನೆನೆನೆದು ದುಃಖಿಸಿದಳು. ಮೊದಲು ಈ ಕಾರ್ಯಕ್ಕೆ ಸಹಕರಿಸಿದ ಪರಿವಾರವೆಲ್ಲ ರಾಣಿಯ ಈ ಕೃತ್ಯಕ್ಕಾಗಿ ಒಳಗಿಂದೊಳಗೆ ಹೇಸಿತು; ಭೀತ್ಕರಿಸಿತು.

ಅರಮನೆಯ ಪ್ರಶಾಂತ ವಾತಾವರಣ ಕದಡಿತು. ಎತ್ತೆತ್ತಲೂ ಹಾಹಾಕಾರವೆದ್ದಿತು. ಮನೆಯಿಂದ ಮನೆಗೆ ವರ್ತಮಾನವು ಮೊರೆ-ದೆದ್ದು ಪಸರಿಸಿತು. ಕೊನೆಗೆ ಅರಣ್ಯದಿಂದ ಹಿಂದಿರುಗುತ್ತಿದ್ದ ರಾಜ ಪರಿವಾರದ ವರೆಗೂ ಈ ಸುದ್ದಿ ತಲುಪಿತು. ಅಸಹ್ಯವಾದೀ ವರ್ತ-ಮಾನವನ್ನು ಕೇಳಿದ ಜಯದೇವನ ಹೃದಯವೇ ಶೋಕಾಕುಲಿತ-ವಾಯಿತು. ಕುದಿಯುವ ನೀರ್ಗುಳ್ಳೆಯಂತೆ ಹೃದಯದ ಕಳವಳ ಕುದಿಯೇರಿತು. ಓಡೋಡಿ ಬಂದನು. ಕವಿಯೊಡನೆ ಪರಿವಾರವೇ ಓಡಿಬಂದಿತು....

ನೋಡುವುದೇನು? ಪದ್ಮಾವತೀದೇವಿ ನಿಶ್ಚೇಷ್ಟಿತಳಾಗಿ ಬಿದ್ದಿರು-ವಳು. ಪಾತಿವ್ರತ್ಯ ಪ್ರಭಾವದ ಸೆಲೆಮಾತ್ರ ಮುಖದಲ್ಲಿ ಮಿಂಚು-ತ್ತಿತ್ತು. ಜಯದೇವನು ತನ್ನ ಪತ್ನಿಯೆಡೆ ಬಂದನು. ಆಕೆಯನ್ನೆತ್ತಿ

ತನ್ನ ಮಡಿಲಲ್ಲಿ ತಲೆಯೂರಗಿಸುವಂತೆಸಗಿ ಕಾಳಿತನು. ಪರಿಪರಿಯಾಗಿ ಕರೆದನು. ಆದರೂ ಮರುನುಡಿಯಿಲ್ಲ. ಪುನಃ ದನಿಯೆತ್ತಿದನು. ಒರಲಿದನು. ಆದರೂ ಮೌನ!......ನಿಮಿಷಗಳು ಕಳೆದುವು. ಕಳೆದಂತೆ ಕವಿಯ ಹೃದಯ ಪುಟದೆದ್ದಿತು. ಪದ್ಮಾವತೀದೇವಿಗೆ ಎಂದೆಂದೂ ಮೆಚ್ಚಿನದಾದ, ಹೃದಯದ ಜ್ಯೋತಿಯಾದ 'ಅಷ್ಟಪದಿಯ ಇಪ್ಪತ್ತೈದನೆ'ಯ ಗೀತವನ್ನು ಆವೇಶದಿಂದ ಹಾಡಿದನು. ಹೃದಯಪೂರ್ಣವಾಗಿ ಹಾಡಿದನು. ಪುನಃ ಪುನಃ ಹಾಡಿದನು. ಹಾಡಿನ ಪೂರ್ಣತೆ ದನಿಯೆತ್ತಿತು. ಸುತ್ತಲೂ ಜ್ಯೋತಿರ್ಮಾಲೆ ಬೆಳಗಿದಂತಾಯಿತು. ಎಲ್ಲರ ಮುಖದಲ್ಲೂ ಮೌನಶಾಂತಿ ಹರಡಿದೆ. ಆದರೂ ಭಕ್ತಿಯ ಹೊನಲು ಚಿಮ್ಮಿ ಹರಿಯುತ್ತಿದೆ.

ಜಯದೇವನ ದಿವ್ಯವಾದ ಗಾನವು ಪದ್ಮಾವತಿಯ ಹೃದಯವನ್ನು ಸ್ಪರ್ಶಿಸಿತು. ಕಣ್ಣುಗಳನ್ನರಳಿಸಿ ಪತಿದೇವನ ದಿವ್ಯೋಜ್ವಲ ಮುಖವನ್ನು ಆಕೆ ಮನದಣಿಯೆ ನೋಡಿದಳು. ಥಟ್ಟನೆ ಎದ್ದು ಪತಿಯ ಪಾದವನ್ನು ಬಿಗಿಯಾಗಿ ಹಿಡಿದು, ಕಣ್ಣೀರಿಂದ ತೊಯಿಸುತ್ತ ಅದೇ ಗೀತವನ್ನು ಮತ್ತೊಮ್ಮೆ ತಾನೂ ಹಾಡಿ ಸುತ್ತಲೂ ನೋಡಿದಳು.

ಈ ಸಂದರ್ಭವನ್ನು ನಿಟ್ಟಿಸುತ್ತಿದ್ದ ರಾಜಪತ್ನಿ ಪದ್ಮಾವತಿಯ ಕಾಲಿಗೆರಗಿ, ತನ್ನ ತಪ್ಪಿಗೆ ಕ್ಷಮೆಯನ್ನು ಯಾಚಿಸಿದಳು. ಆದರೆ ಪದ್ಮಾವತೀದೇವಿ ಆ ತಪ್ಪನ್ನು ನೆನೆಯುವವಳೆ! ಕಾಲಿಗೆ ಬೀಳುವ ಮುನ್ನವೆ ಎತ್ತಿ ಹಿಡಿದ ಆ ಸಾಧ್ವಿ, ತನ್ನ ಮಾಂಗಲ್ಯವನ್ನು ರಕ್ಷಿಸಿದ ಆ ಗೌರೀದೇವಿಯೊಡನೆ ರಾಜಪತ್ನಿಯ ಮಾಂಗಲ್ಯರಕ್ಷಣೆಯನ್ನೂ ಬೇಡಿಕೊಂಡಳು.

ರಾಜನು ಮಾತ್ರ ಈ ಅನರ್ಥಕ್ಕೆಲ್ಲ ತನ್ನ ಪತ್ನಿಯೆ ಕಾರಣಳಾದಳೆಂದು ತಿಳಿದು, ಆಕೆಯನ್ನು ತ್ಯಜಿಸಲು ನಿಶ್ಚಯಿಸಿದನು. ರಾಜನ ನಿರ್ಧಾರವನ್ನರಿತ ಆ ದಂಪತಿಗಳು ರಾಜನನ್ನು ಸಮಾಧಾನಗೊಳಿಸಿ, ಸಖ್ಯದಿಂದಿರುವಂತೆ ಬೋಧಿಸಿದರು. ಇದೆಲ್ಲವನ್ನೂ ನಿಟ್ಟಿಸುತ್ತ ಅದುವರೆಗೆ ಕಲ್ಲಿನ ಪ್ರತಿಮೆಗಳಂತೆ ನಿಂತಿದ್ದ ಜನತೆ, ಆನಂದೋದ್ರೇಕವನ್ನು ತಡೆಯಲಾರದೆ ಜಯಘೋಷವನ್ನೆಸಗಿ, ಆ ದಂಪತಿಗಳ ಕಾಲ್ಮುಟ್ಟಿ ವಂದಿಸಿದರು; ಕೃತಾರ್ಥರಾದರು.

ಮುಂದೊಂದು ದಿನ ಆ ದಂಪತಿಗಳು ಪಿತೃಗಳೊಂದಿಗೆ ವಾರಣಾಸಿಗೆ ತೆರಳಿದರು. ಆ ದಂಪತಿಗಳನ್ನು ಬೀಳ್ಕೊಡಲು ನಗರವಿಡೀ ಸಂಭ್ರಮದಿಂದ ನೆರೆದು, ಆಶೀರ್ವಾದವನ್ನು ಪಡೆದುಕೊಂಡಿತು. ಆ ಬೀಳ್ಕೊಡುಗೆಯ ದುಃಖೋದ್ವೇಗದ ಸಂಧಿಕಾಲದಲ್ಲೀ ಮತ್ತೊಮ್ಮೆ ಅಷ್ಟಪದಿಯ ಗೀತಗಳು ಕೇಳಿಸಿದುವು. ಎಲ್ಲರ ಮನಸ್ಸೂ ಭಕ್ತಿಯಿಂದ ತುಂಬಿತು. ಎಲ್ಲೆಲ್ಲೂ ಭಕ್ತಿವಾಹಿನಿಯು ಹರಿಯಿತು. ಶಾಂತಿಯ ಅಲೆಯುಲಿ ಜನಮನದಲ್ಲಿ ನೆಲೆಗೊಂಡು ನಿಂತಿತು.

---

## ಆಕಾಶದೀಪ!

(ನವ್ಯಕವನ)

ಶ್ರೀ. ಬಿ. ಬಿ. ಹಂಗರಗಿ, ಬೆಳಗಾಂವಿ

ಮೇಲೇರಿ ಮೇಲೇರಿ
ಸಿಂಗಾರವನು ಸಾರಿ
ಅಲ್ಲಾಡುತಿವೆ ಅಲ್ಲಲ್ಲಿ ದೀಪಗಳ ರಾಶಿ!
ಆನಂದರೂಪಗಳ ಕೈಲಾಸ ಕಾಶಿ!!
ಬಹುಚೆಂದ ಆಕಾಶಬುಟ್ಟಿಗಳ ಮಧ್ಯದಲಿ;
ಸಲ್ಲಾಪ ಸಡಗರದ ಸಾನಂದರಂಗದಲಿ;
ಉರಿಯುತಿವೆ ಮುದದಿಂದ,
ಮೆರೆಯುತಿವೆ ನೂರಾರು ದೀಪ!
ನೋಡಲ್ಲಿ ಪಾಪ!
ಬಡಜನರ ದೀಪ!
ಕಾರುತಿವೆ ಕಡುಕಷ್ಟ, ತುಂಬಿರುವ ಧೂಮವನು!
ತುಂಬಿಹುದು ನೋಡಲ್ಲಿ–ಮನೆಯಲ್ಲಿ ಎಲ್ಲೆಲ್ಲಿ:
ಮನದಲ್ಲಿ, ರೋಮದಲಿ ದುರ್ವಾಸಧೂಮ!
ಅದ ಕಂಡು, ಉಸಿರೆಳೆದು ಎನುತಿಹರು ಬಡಜನರು
ಹೇ! ರಾಮ, ರಾಮ!! ೧

ನಗುವವರು ನಗುತಿಹರು
ನೋಡಲ್ಲಿ ನೋಡು!
ಅಳುವವರ ಅಳುಕಂಡು ಕೇಳು!
ನಲಿಸುತಿವೆ ಬಗೆ ಬಗೆಯ ಆಕಾಶ ದೀಪಗಳ
ಬಗೆ ಕಂಡು ಬಡಜನರ ಚಪ್ಪರದ ದೀಪ!
ಅರಗಿನಾ ಅರಮನೆಯ ಮಧ್ಯದಲಿ
ಗಹಗಹಿಸಿ ನಗುತಲಿವೆ ಆಕಾಶದೀಪ!
ಅಲ್ಲಾಡಿ ಅರುತಿವೆ, ಕಡುಕಷ್ಟ ಬಹು ಸಹಿಸಿ
ಬಡಜನರ ಮುರುಕುಮನೆ ದೀಪ! ೨

ಎಂದೆಂದು ಮುಂದಿಹುದು
ಇಂದಿಂಗೆ ಬಂದಿಹುದು:
ಮನದಂತೆ ಮರೆಯುತಿಹ ಆಕಾಶದೀಪಗಳ ಪತನ!
ಉರಿಹತ್ತಿ ಅರಮನೆಗೆ, ಉರಿಯುವುವು ಕೊನೆಗೊಮ್ಮೆ
ಭುಗಿಲೆಂದು ಅಂದು–
ಆಕಾಶದೀಪಗಳ ದುಃಖಾಂತ ಕಥನ!! ೩

# ಅಲಂಕಾರ ಮೀಮಾಂಸೆ

ಶ್ರೀ. ಎಸ್. ಭೀಮಭಟ್ಟ 'ಸಾಹಿತ್ಯಶಿರೋಮಣಿ' ಕನ್ಯಾನ ದ. ಕ.

卐

**ನಮ್ಮ ಸಾಂಪ್ರದಾಯಿಕ ಕಾವ್ಯಪ್ರಪಂಚದಲ್ಲಿ ಅಲಂಕಾರಶಾಸ್ತ್ರಕ್ಕೊಂದು ಮಹತ್ವದ ಸ್ಥಾನವಿದೆ. ಮಾತುಗಳನ್ನು ಅಂದಗೊಳಿಸಿ ತೋರಿಸಬೇಕೆನ್ನುವವರು, ಸಾಮಾನ್ಯ ವ್ಯಾವಹಾರಿಕ ಭಾಷೆಯಲ್ಲಿಯೂ ಅಲಂಕಾರಗಳನ್ನು ಬಳಸುತ್ತಿರುವರು. ಆದರೆ ತಾವು ಬಳಸಿದ ಅಲಂಕಾರಗಳ ಪ್ರಜ್ಞೆಯುಳ್ಳವರು ತೀರ ಕಡಮೆ ಜನರು !**

卐

'ಅಲಂಕರೋತಿ' ಸಾಕುಮಾಡುತ್ತದೆ—ಪರ್ಯಾಪ್ತ ಶೋಭೆ-ಯನ್ನುಂಟುಮಾಡುತ್ತದೆ—ಎಂಬುದೇ ಅಲಂಕಾರ ಶಬ್ದನಿಷ್ಪತ್ತಿಯು ...ಸ್ಯ. ಶೋಭಾಧಾಯಕತ್ವವು ಅಲಂಕಾರದ ಮುಖ್ಯ ಗುಣ; ...ಷ್ಯರ ಶರೀರದ ಶೋಭೆಯನ್ನು ಹೆಚ್ಚಿಸಲೆಂದೇ ಮುತ್ತೈದೆಯರು ...ಲಂಕಾರಗಳನ್ನು ಧರಿಸಿಕೊಳ್ಳುತ್ತಾರೆ. ಇದೇ ರೀತಿ ಕಾವ್ಯಕ್ಕೆ ...ಶೋಭೆಯನ್ನೊದಗಿಸುವುದೇ ಅಲಂಕಾರಗಳ ಕಾರ್ಯ. ಮುಖ್ಯ ...ರ್ಯ. ಅದಕ್ಕಾಗಿಯೇ ಕಾವ್ಯಗಳಲ್ಲಿ ಅಲಂಕಾರಗಳನ್ನು ಬಳಸುತ್ತಾರೆ.

ಸಾಹಿತ್ಯರಸಿಕರು ಕಾವ್ಯವನ್ನು ಕಾಂತೆಗೆ ಹೋಲಿಸಿದ್ದಾರೆ. ...ತೆಯ ಸರಸತೆ, ಸೌಂದರ್ಯ, ಹಿತೈಷಿತ್ವದ ಸಾದೃಶ್ಯ ಕಾವ್ಯ...ದೆ. ಕಾವ್ಯದ ಅರ್ಥ ಭಾವ ರಸಗಳ ಸಾಮ್ಯ ಕಾಂತೆಯಲ್ಲಿ ...ರ್ಶಿತವಾಗಿದೆ. ಕಾಂತನನ್ನು ರಸಪಾರವಶ್ಯದಲ್ಲಿ ಸೆರೆಹಿಡಿದು ...ವ್ಯದಲ್ಲಿ ಕುತುಕಿಯನ್ನಾಗಿಯೂ ಅಕರ್ತವ್ಯದಲ್ಲಿ ಅಕುತುಕಿ-ಯನ್ನಾಗಿಯೂ ಕಾಂತೆಯು ಚಮತ್ಕೃತಿಯಿಂದ ಸಾಧಿಸುವಂತೆ, ...ವ್ಯವೂ ಸಹೃದಯನ ಮೇಲೆ ಪರಿಣಾಮವೆಸಗುತ್ತದೆ. ಕಾವ್ಯದ ...ದ್ದೇಶ-ಪ್ರಯೋಜನಗಳು ನೆರವೇರುವ ಪೂರ್ವಭಾವಿಯಾಗಿ ರಸ-...ರತಿ ಪ್ರತಿಪಾದಿತವಾಗಲು ಅಲಂಕಾರಗಳು ಐಕದೇಶಿಕವಾಗಿ ಸಹ-...ಸುತ್ತವೆ.

ಶಬ್ದಾರ್ಥಗಳು ಕಾವ್ಯಶರೀರ. ಧ್ವನಿಯೇ ಕಾವ್ಯದ ಆತ್ಮ. ...ನುಪ್ರಾಸಾದ್ಯಲಂಕಾರಗಳು ಶರೀರಕ್ಕೆ ಅಲಂಕಾರಗಳಿದ್ದಂತೆ. ಗುಣ-...ಆತ್ಮಸಂಬಂಧಿಗಳಾಗಿಯೂ ಶೈಲಿ-ವೃತ್ತಿಗಳು ಅಂಗಸೌಷ್ಠವ...ಕಗಳಾಗಿಯೂ ಪರಿಗಣಿಸಲ್ಪಡುತ್ತವೆ. ಗುಣಗಳು ಆತ್ಮೋಪ-...ರಕಗಳೆಂದೂ ಅಲಂಕಾರಗಳು ಶರೀರ ಶೋಭಾವರ್ಧಕಗಳೆಂದೂ ...ಗಳ ವ್ಯವಸ್ಥಿತ ಮರ್ಯಾದೆಯನ್ನುಲ್ಲೇಖಿಸಲಾಗಿದೆ.

ಕಾವ್ಯದಲ್ಲಿ ಅಲಂಕಾರಗಳ ಸ್ಥಾನವನ್ನು ನಿಷ್ಕರ್ಷಿಸುವುದು ...ಲಿನ ವಿವರಣೆಯಿಂದ ಸುಲಭವಾಗಬಹುದು. ಆದರೆ ಪ್ರಾಚೀನ ...ಕ್ಷಣಕಾರರ ಮತವೇನೆಂಬುದನ್ನು ನಾವು ತುಸು ವಿಚಾರಿಸ-...ಸಿದರೆ ಅಪ್ರಕೃತವೆನಿಸದು. ಕಾವ್ಯಲಕ್ಷಣಸೂತ್ರ ನಿರ್ಮಿಸುವಾಗ ...ಲಂಕಾರ ಸಹಿತ" ಎಂಬ ವಿಶೇಷಣವನ್ನು ಪ್ರಾಚೀನರು ಮರೆಯದೆ ...ಸುತ್ತಿದ್ದರು. ದಂಡ್ಯಾಚಾರ್ಯರೂ ಬೇರೆ ಬೇರೆ ವಿಶೇಷಣಗಳನ್ನು ಹೇಳುತ್ತಾ ಬಂದು "ಅಲಂಕೃತಿ" ಬೇಕೆನ್ನಲು ಮರೆಯಲಿಲ್ಲ. [ "ಕಾವ್ಯಂ ಕಲ್ಪಾಂತರಸ್ಥಾಯಿ ಜಾಯೇತ ಸದಲಂಕೃತಿ" ಕಾವ್ಯಾದರ್ಶ. ] ಪ್ರಾಚೀನರೇ ಆದರೂ ಮಮ್ಮಟಾಚಾರ್ಯರು "ಅನಲಂಕೃತೀ ಪುನಃ ಕ್ವಾಪಿ" ಎಂದಿದ್ದಾರೆ. ಕೆಲವೆಡೆ ಅಲಂಕಾರವಿಲ್ಲವಾದರೂ ಕಾವ್ಯ-ವಾಗಬಹುದೆಂದು ಅವರೊಪ್ಪಿದ್ದಾರೆ. ಕೆಲ ಪ್ರಾಚೀನರು ಅಲಂಕಾರ-ಗಳ ಬಗ್ಗೆ ವಿಶೇಷ ಮೋಹ ತಾಳಿದ್ದರು. ಕಾವ್ಯಮೀಮಾಂಸೆಯಲ್ಲಿ ರಸಕ್ಕೆ ಪ್ರಾಧಾನ್ಯವಿದ್ದರೂ "ಅಲಂಕಾರಶಾಸ್ತ್ರ" ಎಂಬ ರೂಢಿ ಪ್ರಸಿದ್ಧವಾಗಲು ಇದೇ ಕಾರಣವಾಗಿರಬೇಕು. ನಮ್ಮಲ್ಲಿ ಕೆಲ ಹೆಂಗುಸರಿಗೆ ಮಕ್ಕಳಿಗೆಲ್ಲಾ ಅಲಂಕಾರಮೋಹ ಹೆಚ್ಚಾಗಿರುತ್ತದೆ. ಶರೀರದ ತುಂಬ ಆಭರಣ ಹಾಕಿಕೊಳ್ಳಬೇಕೆಂಬ ಚಾಪಲ್ಯ ಅವರಿಗೆ ಬಹಳ. ಅದರಂತೆಯೇ ಅಲಂಕಾರಗಳ ಬಗ್ಗೆ ಕೆಲ ಲಾಕ್ಷಣಿಕರಿಗೂ ಪ್ರಾಚೀನರಿಗೂ ಮೋಹವಿತ್ತೆನ್ನಬಹುದು. ಆದರೆ ಸಹೃದಯ ವಿದ್ವಾಂಸರು, ಅಲಂಕಾರ ಮೋಹದಿಂದ ದೂರವಾಗಿರುತ್ತಾರೆ. ಆನಂದ-ವರ್ಧನಾಚಾರ್ಯರು ಜಗನ್ನಾಥ ಪಂಡಿತರೇ ಮೊದಲಾದ ವಿದ್ವಾಂಸರು ಅಲಂಕಾರವನ್ನು ಗೌಣವೆಂದಿದ್ದಾರೆ. ಧ್ವನ್ಯಾಚಾರ್ಯರು ಧ್ವನಿ ನಿರೂಪಣೆಯನ್ನೂ ಜಗನ್ನಾಥ ಪಂಡಿತರು ರಸ ಪ್ರತಿಪಾದನೆಯನ್ನೂ ಚೆನ್ನಾಗಿ ಮಾಡಿ ವಿಶೇಷ ಕ್ರಾಂತಿಯೆಬ್ಬಿಸಿದ್ದಾರೆ.

ಕವಿಯು ಕಾವ್ಯದಲ್ಲಿ ಅಲಂಕಾರಗಳನ್ನು ತುಂಬಿಸಲು ಯತ್ನಿಸ-ಬಾರದು. ಅರ್ಥಸಂದರ್ಭಾನುಸಾರವಾಗಿ ಅಲಂಕಾರಗಳು ಕಾವ್ಯದಲ್ಲಿ ಮೈಗೂಡಿಕೊಳ್ಳಬೇಕು.

"ರಸಾಕ್ಷಿಪ್ತತಯಾ ಯಸ್ಯ ಬಂಧಃ ಶಕ್ಯಕ್ರಿಯೋ ಭವೇತ್"
ಅಪೃಥಗ್ಯತ್ನನಿರ್ವರ್ತ್ಯಃ ಸೋಲಂಕಾರೋಧ್ವನೌ ಮತಃ"
"ಧ್ವನ್ಯಾಲೋಕ"

ರಸಾವಹಿತನಾದ ಕವಿಯು ತದವಸ್ಥೆಯಲ್ಲೇ ಸ್ವೀಕರಿಸಿ-ಕೊಳ್ಳುವ ಅಲಂಕಾರವು ಧ್ವನಿಸಮ್ಮತವಾದುದು. ಪ್ರತ್ಯೇಕ ಪ್ರಯತ್ನ-ದಿಂದ ಅಲಂಕಾರವನ್ನು ಸಾಧಿಸುವುದು ಸರಿಯಲ್ಲ. ಅರ್ಥಾತ್ ರಸಾನುಗುಣವಾಗಿ ಅಲಂಕಾರವು ಅಯತ್ನಸಾಧ್ಯವಾಗಿ ಬರಬೇಕು. ಮಹಿಮಭಟ್ಟನೂ ತನ್ನ ವ್ಯಕ್ತಿವಿವೇಕದಲ್ಲಿ.

"ನಚಾಲಂಕಾರ ನಿಷ್ಪತ್ತೌ ರಸಬಂಧೋದ್ಯತಃ ಕವಿಃ"

ಯತ್ರತೇ ತ್ರೇಹಿ ತತ್ಸಿದ್ಧಿನಾಂತರೀಯಕಸಿದ್ಧಯಃ " ಎಂಬನ್ನಾನೆ. ರಸಸಿದ್ಧಿನಾಂತರೀಯಕವಾಗಿ ಅಲಂಕಾರವು ಸಿದ್ಧಿಸಬೇಕು. ಅಂದರೆ ಪ್ರಧಾನ ರಸಸಿದ್ಧಿ. ಆ ಸಿದ್ಧಿಯಿಂದಲೇ ಅಲಂಕಾರದ ಸಿದ್ಧಿಯಾಗುವುದು ಉಚಿತವೆನಿಸುತ್ತದೆ. ರಸಪ್ರಧಾನವಾದ ಕಾವ್ಯದಲ್ಲಿ ಅಲಂಕಾರದ ಬಳಸುವಿಕೆಗೆ ಮಿತಿ-ಔಚಿತ್ಯಗಳು ಬೇಕೆಂಬುದನ್ನೇ, ಈ ಧ್ವನಿಕಾರಿಕೆಯು ಸೂಚಿಸುತ್ತದೆ:

ಧ್ವನ್ಯಾತ್ಮಭೂತೇ ಶೃಂಗಾರೇ ಸಮೀಕ್ಷ್ಯ ವಿನಿವೇಶಿತಃ |
ರೂಪಕಾದಿರಲಂಕಾರವರ್ಗ ಏತಿ ಯಥಾರ್ಥತಾಮ್ ||

ಇದೂ ಅಲ್ಲದೆ " ಅಲಂಕೃತೀನಾಂ ಶಕ್ತಾವಪ್ಯಾನುರೂಪ್ಯೇಣ ಯೋಜನಂ " ಎಂದು ಆನಂದವರ್ಧನಾಚಾರ್ಯರು ವಿಧಿಸಿದ್ದಾರೆ. ಅಲಂಕಾರಗಳನ್ನೆಷ್ಟೇ ಬಳಸುವ ಸಾಮರ್ಥ್ಯವಿದ್ದರೂ, ಕವಿಯು ರಸಾನುಗುಣವಾಗಿ ಅವುಗಳನ್ನು ಯೋಜಿಸಿಕೊಳ್ಳಬೇಕೆಂಬುದು ಸಾರಾಂಶವಾಗಿದೆ. ಉತ್ತಮ ಅಲಂಕಾರಗಳನ್ನು ರಸಾನುಕೂಲವಾಗಿ ಬಳಸಿ ಕವಿಗಳು ಕೃತಕೃತ್ಯರಾಗುತ್ತಾರೆ.

ಕಾವ್ಯದಲ್ಲಿ ರಸಾದಿಗಳು ಅಂಗವಾಗಿದ್ದು ಬೇರೊಂದರ್ಥವು ವಾಕ್ಯಾರ್ಥವಾಗಿದ್ದಲ್ಲಿ, ಆ ಕಾವ್ಯದಲ್ಲಿ ರಸಾದಿಗಳು ರಸವದಲಂಕಾರ ವಿಷಯಗಳೆಂದು ಹೇಳಲಾಗಿದೆ. ಈ ವಿವರವನ್ನು ರಸ–ಅಲಂಕಾರಗಳ ಧ್ವನಿಸಂಬಂಧಿ ವಿವರಗಳನ್ನು ಇಲ್ಲಿ ಕೊಡಲಿಲ್ಲ.

ರಮಣಿಯ ಸೌಂದರ್ಯವನ್ನು ಹೆಚ್ಚಿಸಲು ಅಲಂಕಾರಗಳೆಷ್ಟು ಸಹಕಾರಿಗಳಾಗುತ್ತವೋ—ಅಷ್ಟೇ ಕಾವ್ಯದಲ್ಲೂ ಅಲಂಕಾರಗಳ ಉಪಯೋಗಬೀಳುವುದೆಂದು ನಾವು ಹೇಳಿದಂತಾಯಿತು. ಹೀಗಿರುವುದರಿಂದ "ಅಲಂಕಾರವೇ ಕಾವ್ಯಸರ್ವಸ್ವ"ವೆಂದು ತಿಳಿಯುವವರು, ರಸವನ್ನು ಕಡೆಗಣಿಸುವವರು ಅಸಹೃದಯರೆಂದೇ ಹೇಳಬಹುದು. ಶಬ್ದಾಲಂಕಾರಗಳ ಪ್ರಾಚುರ್ಯವನ್ನು ತಂದೊಡ್ಡುವವರಂತೂ ಉತ್ತಮಕವಿಗಳೆನಿಸಲಾರರು. ಧ್ವನಿಕಾರರು, ಶಬ್ದಾಲಂಕಾರಗಳಿಂದ ತುಂಬಿದ ಕಾವ್ಯವನ್ನು 'ಚಿತ್ರಕಾವ್ಯ' 'ಅಧಮಕಾವ್ಯ' ಎಂದಿರುವರಲ್ಲದೆ, ಅವುಗಳ ಬಗ್ಗೆ ಆದರವನ್ನು ವ್ಯಕ್ತಪಡಿಸಿಲ್ಲ. ಅವು ಎಂದಿಗೂ ರಸಿಕಮಾನ್ಯವೆನಿಸವು. ಕುಂತಕನೆಂಬ ಅಲಂಕಾರಿಕನು ತನ್ನ 'ವಕ್ರೋಕ್ತಿಜೀವಿತ' ದಲ್ಲಿ " ಯಮಕಾದಿಗಳಲ್ಲಿ ವರ್ಣವಿನ್ಯಾಸವೈಚಿತ್ರ್ಯಕ್ಕಿಂತ ಮಿಗಿಲಾದ ಮಹತ್ತ್ವ-ಸೊಗಸುಗಳಾವುವೂ ಇಲ್ಲದಿರುವುದರಿಂದ ತಾನು ಅವುಗಳ ವಿಚಾರ ಬೆಳೆಸುವುದಿಲ್ಲ " ಎಂದಿದ್ದಾನೆ.

ಶಬ್ದಾಲಂಕಾರಗಳನ್ನು ಕೇವಲ ಆಧುನಿಕ ಫ್ಯಾಶನ್ನಿನ ಗಿಲಿಟಿನ ಆಭರಣಗಳಿಗೆ ಹೋಲಿಸಬಹುದು. ಶಬ್ದಾಲಂಕಾರ, ಯಮಕಾದಿಗಳೆರಡೂ ಕೃತ್ರಿಮತೆಯ ಪರಮಾವಧಿಯೆನ್ನುವುದರಲ್ಲಿ ಸಂದೇಹವಿಲ್ಲ. ವಿಷಯ, ರಸ, ಪ್ರಾಮಾಣಿಕತೆಯ ದೃಷ್ಟಿಯಲ್ಲೂ ಅವು ಅನಪೇಕ್ಷಣೀಯವಾಗಿಯೂ, ಕ್ಷತಿಕಾರಿಗಳಾಗಿಯೂ ಪರಿಣಮಿಸುತ್ತವೆ. ಶಬ್ದಚಮತ್ಕೃತಿಗೆ ಮಾರುಹೋಗಿ ಅರ್ಥವನ್ನೂ ರಸವನ್ನೂ ಕಡೆಗಣಿಸುವುದು ತಪ್ಪು. ಎಷ್ಟೇ ನಿಪುಣನಾಗಿದ್ದರೂ ಕವಿಯು ಶಬ್ದಾಲಂಕಾರಗಳಿಗೆ ಮಾರುಹೋದರೆ, ರಸದೃಷ್ಟಿಗೆ ವಿಘಾತವೊದಗುತ್ತದೆ. ಮಾಘಪ್ರಭೃತಿಗಳು ಶಬ್ದಾಲಂಕಾರಗಳ ಮೋಹದಲ್ಲಿ ಸಿಲುಕಿ ಕೆಲವೊಮ್ಮೆ ಪಟ್ಟ ಪರಾಭವವನ್ನು ನಾವು ಕಾಣಬಹುದು. ವೀರರಸಾದಿ ಸಂದರ್ಭದಲ್ಲಿ ಶಬ್ದಾಡಂಬರವು ಅರ್ಥಕ್ಕೆ ತಕ್ಕಂತೆ ಬೇಕಾಗುತ್ತದೆ. ಅಲ್ಲೂ ಶಬ್ದಾಲಂಕಾರಗಳಿಗೆ ಕವಿ ಸೋಲುವುದು ಸರ್ವಥಾ ಅಕ್ಷಮ್ಯಾಪರಾಧವೆನ್ನಬಹುದು.

ಅರ್ಥಾಲಂಕಾರಗಳು ಕಾವ್ಯದ ಶೋಭೆಯನ್ನು ನಾಕಷ್ಟು ಹೆಚ್ಚಿಸುತ್ತವೆ ಅಲಂಕಾರಗಳಿಂದ ರಸಪರಿಪೋಷವಾಗುವುದಿದೆ. ಅಲಂಕಾರಗಳನ್ನು ಹಾಕಿಕೊಂಡಾಗ ರಮಣಿ ಸೊಗಸಾಗಿ ನಯನಾನಂದವನ್ನುಂಟುಮಾಡುವಂತೆ, ಅಲಂಕಾರಭರಿತವಾದ ಕವಿವಾಣಿಯೂ ರಸಿಕನಿಗೆ ಆನಂದವನ್ನುಂಟುಮಾಡುತ್ತದೆ. ರಸಿಕನಾದ ಕವಿಯು ಸುಂದರವಾಗಿ ಅಲಂಕಾರವಾಗಿ ತನ್ನ ಭಾವವನ್ನು ಹೊರಗೆಡಹಿ ರಸನಿರ್ಝರಿಣಿಯನ್ನು ಹರಿಸುತ್ತಾನೆ.

'ಸಹಜಸುಂದರಿಯಾದ ಸ್ತ್ರೀಗೆ ಅಲಂಕಾರಗಳೇಕೆ?' ಎಂಬುದಾಗಿ ರಸಿಕಕವಿಗಳೇ ಪ್ರಶ್ನಿಸಿದ್ದಾರೆ. ನಿರಾಭರಣ ಸೌಂದರ್ಯವೆಂದರೆ ಅತಿಶ್ರೇಷ್ಠವೆಂದು ರಸಿಕರು ಹೇಳುತ್ತಾರೆ. " ಯಸ್ಯ ನೈಸರ್ಗಿಕೀ ಶೋಭಾ, ತನ್ನ, ಸಂಸ್ಕಾರಮರ್ಹತಿ | ಕಃ ಕಲಾಂ ಶಶಿನೋ ಮಾರ್ಷ್ಟಿ? ಕೌಸ್ತುಭಃ ಕೇನ ರಜ್ಯತೇ? " ಎಂದಿದ್ದಾನೆ. ಕವಿ ಶಕ್ತಿಭದ್ರ. ನಿಸರ್ಗಸುಷಮೆಗೆ ಸಂಸ್ಕಾರದ ಅಪೇಕ್ಷೆಯಿಲ್ಲ. ಶಶಿಕಲೆಯನ್ನಾರು ತೊಳಗಿಸುತ್ತಾರೆ? ಕೌಸ್ತುಭ ಯಾರಿಂದ ರಂಜಿಸಲ್ಪಡುತ್ತದೆ? " ಅಭೂಷಣೋಽಪಿ ರಮ್ಯತ್ವಂ ಮಾಧುರ್ಯಂ ' ಎಂಬ " ವಿಚ್ಛಿತ್ತಿರತಿರಮ್ಯತ್ವಂ ಸ್ವಲ್ಪೈರಪಿ ವಿಭೂಷಣೈಃ (ಅಲ್ಪಾಭರಣಗಳಿಂದಲೂ ಹೆಚ್ಚಿನ ಶೋಭೆಯೆ ವಿಚ್ಛಿತ್ತಿ " ಎಂದೂ ಹೇಳಿದ್ದಾರೆ. ಕುಮಾರಸಂಭವದಲ್ಲಿ " ಕಂಠಸ್ಯತಸ್ಯಾಃ ಸ್ತನಬಂಧುರಸ್ಯ " ಎಂಬ ಪದ್ಯದಲ್ಲಿ ಕಾಳಿದಾಸನು ಪಾರ್ವತಿಯ ಕುತ್ತಿಗೆಗೂ ಮುತ್ತಿನಹಾರಕ್ಕೂ ಭೂಷಣ ಭೂಷ್ಯಭಾವವನ್ನು ಕಲ್ಪಿಸಿದ್ದಾನೆ. ಯಾವುದರ ಶೋಭೆಯನ್ನು ಯಾವುದು ಹೆಚ್ಚಿಸಿತೆನ್ನಲಿ? ಎರಡೂ ಸುಂದರವಾದುವುಗಳೆ! ಎರಡೂ ಸೇರಿ ಮತ್ತಷ್ಟು ರಂಜಿಸಿದುವು—ಹೀಗೆ ಸಹಜ ಸೌಂದರ್ಯ ಅಲಂಕಾರಗಳನ್ನು ವಿವೇಚಿಸುತ್ತಾ ರಮ್ಯವಾದ ಕವಿಸೂಕ್ತಿಯಲ್ಲಿ ಅಲಂಕಾರಗಳ ಸ್ಥಾನವನ್ನು ನಿಷ್ಕರ್ಷಿಸಲು ನಾವು ಕಷ್ಟಪಡಬೇಕಾಗಿಲ್ಲ.

ರಸದ ಕಡೆಗೆ ಪ್ರಧಾನವಾಗಿ ದೃಷ್ಟಿಯಿಟ್ಟು ಅಲಂಕಾರವನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಯುಕ್ತವಾದುದು. ರಸಬಂಧಪ್ರಕರ್ಷಕ್ಕೆ ಬೇಕಾದಂತೆ ಕವಿಯು ಅಲಂಕಾರಗಳನ್ನು ಬಳಸಿಕೊಳ್ಳಬೇಕು. ಆದರೆ ರಸದ ಕಡೆಗೆ ಮನಸ್ಸು ಹಾಕದೆ 'ಅಲಂಕಾರ' ಮೋಹವಶನಾಗುವುದೆಂದರೆ, ಜೀವವನ್ನು ಕಡೆಗಣಿಸಿ ಆಭರಣಗಳಿಗೆ ಮಹತ್ತ್ವ ಕೊಟ್ಟಂತೆ! ಶರೀರಕ್ಕೆ ಬೇಕಾದಂತೆ ಶರ್ಟು ಹೊಲಿಸಿಕೊಳ್ಳಬೇಕಲ್ಲದೆ, ಶರ್ಟಿನ ಅಂದಾಜಿಗೆ ಶರೀರವನ್ನು ಹೊಂದಿಸಿಕೊಳ್ಳುವ ಪದ್ಧತಿ ಇಲ್ಲ ತಾನೆ! ಹೀಗೆಯೇ ಕಾವ್ಯಾಲಂಕಾರಗಳ ವಿಚಾರವೂ ಕೂಡ. ಪ್ರಾಚೀನ ಕಾವ್ಯ, ನಮ್ಮ ಜೀವನಗಳಿಗನ್ವಯಿಸುವಂತೆ ಈ ಅಲಂಕಾರ ಪ್ರಯೋಗ ವಿಧಾನವನ್ನು ಆಧುನಿಕ ಕೃತಿಗಳಿಗೂ ಆಧುನಿಕ ಕಾವ್ಯಗಳಿಗೂ ಔಚಿತ್ಯಪೂರ್ಣವಾಗಿ ಅಳವಡಿಸಿಕೊಳ್ಳುವುದು ಸಾಹಿತ್ಯಪ್ರಗತಿಯ ದೃಷ್ಟಿಯಲ್ಲಿ ಸೂಕ್ತವೂ ಉಚಿತವೂ ಆಗಿದೆ.

---

# ನಿರುದ್ಯೋಗಿ

(ನವ್ಯ ಕವನ)

ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್‌ಸಿ., ಎಲ್ ಎಲ್. ಬಿ. ಮುಂಬಯಿ

ನಾವು ಅಲೆಯುವೆವು ಬಿಸಿಗೈಯಲಿ
ಡಾಂಬರ ದಾರಿಯ ದೀಪಸ್ತಂಭಗಳನೆಣಿಸುತ್ತ.

ಮೈಗೆ ಮೈತಿಕ್ಕಿ ಹಾಯುವ ಟ್ಯಾಕ್ಸಿಗಳ ನಂಬರನು
ಕಾರುಗಳ ಹೊಸ ಮಾದರಿಗಳನ್ನು
ಪಕ್ಕದ ಹೊಟೇಲು ಹಲಗೆಗಳ ಸ್ವರ್ಣಾಕ್ಷರಗಳನು
ತಪ್ಪದೇ ಹೇಳುವ ಧಂದೆ ನಮ್ಮದು.

ದಿನಾ ನಡೆಯುವೆವು ದಾರಿಗುಂಟ.
ಎಡಬಲಕೆ ಹಾಯುವರು ಜನರು ಪೌಂಡ್ರಕವೃತ್ತಿಯಲಿ
ಆಫೀಸುಕತೆಗಳ ಸವಿಯುತ್ತ ಮಸಾಲೆ ಕಲಸಿ.
ನಮ್ಮ ಕಡೆ ಬೆನ್ನುಮಾಡಿ ನಡೆಯುವರಲ್ಲ ಪಾಪಿಗಳು!

ಆದರೂ ನಡೆವೆವು ನಾವು ಬಿಸಿಗೈಯಲಿ.
ಪ್ರತಿ ಆಫೀಸಿನ ಬಳಿ ಜ್ವರ ನಶಿಸುತಿದೆ ಒಳಹೊಗುವಾಗ.
ಹೊರಗೆ ಬರುವಾಗ ಪಿತ್ತ ಏರುವುದು ಒಮ್ಮೆಂದೊಮ್ಮೆ.
ಸುತ್ತು ಮುತ್ತು ಹಲ್ಲು ಕಿಸಿಯುವುವು ಕಟ್ಟಡದ ಸಾಲು.
ಒಬ್ಬೊಬ್ಬರು ಎದುರು ಅಯ್ಯೋ ಎಂದು, ಬೆನ್ನಹಿಂದೆ
ಮಾಡುವರು ತಮಾಷೆ.
ಕೆಲವರು ಕೈಕೊಟ್ಟಂತೆ ನಟಿಸಿ ಕಾಲ ಕಡಿವವರೂ ಇದ್ದಾರೆ;
ಆದರೂ ಅಲೆವೆವು ನಾವು
ಒಂದಿಲ್ಲದಿದ್ದರೆ ಇನ್ನೊಂದು ಮಗುದೊಂದು........
ಹೊಟ್ಟೆಯಲಿ ಬೆಂಕಿ ಭುಗಭುಗಿಸುವುದೆಂದು
ಜೇಬಿಗೆ ಕೈಯಿಕ್ಕಿದರೆ ಸುರಂಗ!
ಹಲಗೆಯ ಸ್ವರ್ಣಾಕ್ಷರಗಳಿಗೆ ಹೊರಗಿನಿಂದಲೇ ಸಲಾಮನಿಕ್ಕಿ
ಅಳಿದುಳಿದ ಶಕ್ತಿಯೊಂದುಗೂಡಿಸಿ
ಮತ್ತೆ ಹೊಡೆಯುವೆವು ಗಾಡಿ ನಗರತುಂಬಾ.

ಕೆಳಮೋರೆಯಲಿ ಮನೆಹೊಕ್ಕಿದಾಗ
ಗೋಡೆಗಳು ದಿಟ್ಟಿಸಿ ನೋಡುತಿವೆ ಮೊಗವನ್ನು
ಎಲ್ಲವನ್ನು ತಿಳಿದು ಕೇಳುತಿವೆ,
ಎಲ್ಲಿಯವರೆಗೆ ಆಶ್ರಯ ಕೊಡಬೇಕೆಂದು.

ಮುಖಮೀಸೆ ತಿರುವುವವರು ನಾವು
ಎಲ್ಲಿಯವರೆಗೆ ಪರರ ಬೆನ್ನ ಬದನಿಕೆಯಾಗಿರುವುದಯ್ಯೋ,
ಆ ಲಜ್ಜೆ ಆ ಸೋಲಿನ ಹೊಡೆತ
ತಾಳುವವನೇ ಧೀರ ಕರ್ಮಯೋಗಿ.

ಆಶೆಯ ಮೇಲೇ ಭಾರಹಾಕಿ ಓಡಾಡುವೆವು.
ಅದೊಂದೇ ನಮ್ಮ ಬದುಕಿಸುವ ಕಲ್ಲುದೇವರು.
ಅದಿಲ್ಲದಿದ್ದರೆ ಮನ ಚೂರಾಗುತಿದೆ ಮೈ ಬೆಂಡಾಗುತಿದೆ.
ಮುಂದುಗಡೆಯೆಲ್ಲಾ ಬರೀ ಕಗ್ಗವಿದಾರಿ.
ಕಾಲಿಟ್ಟಲ್ಲಿ ಪಾಚಿಗಲ್ಲು.
ಎಲ್ಲಿಯೂ ಏನೂ ಇಲ್ಲ.
ಪಕ್ಕದಲ್ಲೊಂದು ಕಿಂಡಿಕದವಿಲ್ಲ.
ಎದುರು ಬರೀ ಕಗ್ಗವಿದಾರಿ.
ಛೇ—ಬೇಡೆಲವೋ ಆ ಯೋಚನೆ.

ಆಶೆಯ ಮೇಲೇ ಭಾರಹಾಕಿ ಓಡಾಡುವೆವು.
ಹರಯದ ಹುರುಪು ಹೊಕ್ಕಿದೆ ವೈಶಾಖದ ಹೊಂಡ.
ಹೃದಯ ನರಳುತಿದೆ ಉಪವಾಸಬಿದ್ದು.
ಉಕ್ಕಿ ಬರುವ ತರಂಗಗಳು
ನಿರಾಶೆಯ ಮಳಲಲ್ಲಿ ಬತ್ತಿ ಲಯವಾಗುತಿವೆ.
ಕೈ-ಕೈ ಬೆಸೆದು ಅಲೆವ ದಂಪತಿಗಳ ಬೆನ್ನ ನೋಡಿ
ನಿಟ್ಟುಸಿರ ಬಿಡುವುದೇ ನಮ್ಮ ಸುಖ.
ಅಯ್ಯೋ ಹಾರಿಹೋಗುತಿವೆ ದಿನ. ದಿನ ಮಾಸ ಮಾಸ—
ಕ್ರಮೇಣ ನೆತ್ತರ ಗಡ್ಡೆಗಟ್ಟುತಿದೆ ಕಲ್ಲು ಮೈಯಲ್ಲಿ,
ಭೂಭಾರ ಲಜ್ಜೆ ಭವಿಷ್ಯತೆಯ ಭೀತಿ.
ಹೆಪ್ಪುಗಟ್ಟಿವೆ ಕಣ್ಣುಗಳಲ್ಲಿ.
ಒಂದೆರಡು ಬಡ ಆಶೆ-ಆಕಾಂಕ್ಷೆಗಳಿದ್ದರೆ,
ಮನದಲ್ಲೇ ಹತ್ತಿಕ್ಕಿ ಕೊಲ್ಲುವೆವು.
ನಮ್ಮ ಕೈ ನೋಡುವ ಬಡ ತಮ್ಮ-ತಂಗಿಯರ
ಅಳುಮೋಗ ನೋಡಿ ಕಣ್ಣೊರಸಿ ಅಗಲುವುದೇ ರೂಢಿ.
ಅಯ್ಯೋ-ಸಾವಿರಾರು ಜನ ಹೀಗೇ ಅಲೆಯುವರೇ?
ಮುಂದೇನೆಂಬ ಶೂನ್ಯವಿಚಾರದಲಿ
ತಲೆಬರಡು ಮಾಡಿಕೊಳ್ಳುತ್ತ?
ಒಳಗೊಳಗೆ ಜ್ವಲಿಸುತ?
ಅವರ ಅಸ್ತಿತ್ವಕ್ಕೆ ಮಾನ್ಯತೆಯಿಲ್ಲವೇ?
ಇದೆಂಥ ಕಾಲ ಬಂದಿದೆ!

# ಮಾರಾಟ

( ಒಂದು ನಗೆಯಾಟ )

ಶ್ರೀ. ಗೋವರ್ಧನಾಚಾರ್ಯ ಗಲಗಲಿ, ಎಂ. ಎ. ಬಿ. ಟಿ. ಧಾರವಾಡ

卐

ಪಾತ್ರಗಳು :

ಮರ್ಯಾ :— } ಸೆರೆಗುಡುಕರು
ಮಾಯಾ :— }

ನ್ಯಾಯಾಧೀಶ, ಸಿಪಾಯಿ

ಕಾರಕೂನ ಇತ್ಯಾದಿ.

ಕರೆವ್ವ :— ಮರ್ಯಾನ ಹೆಂಡತಿ

ಕಾಲ :— ಬ್ರಿಟಿಶ್ ಸತ್ತೆಯಿದ್ದಾಗ ಅಸಹಕಾರ ಆಂದೋಲನದ ಸಮಯ.

## ದೃಶ್ಯ ೧

[ ಮಾಯಾನ ಗುಡಿಸಿಲಿನಲ್ಲಿ ಮಾಯಾ, ಮರ್ಯಾ ಇಬ್ಬರೂ ಕುಳಿತಿದ್ದಾರೆ. ಇಬ್ಬರ ಹತ್ತಿರವೂ ಒಂದೊಂದು ಸೆರೆಯ ಮಗಿ ಹಾಗೂ ಕಪ್ಪು ಇರುವುವು. ಒಮ್ಮೆ ಮರ್ಯಾನು ತನ್ನ ಮಗಿಯೊಳಗಿಂದ ಸೆರೆ ಸುರಿಯುತ್ತಲೂ, ಅದರ ಪ್ರತ್ಯುಪಕಾರಕ್ಕಾಗಿ ಇನ್ನೊಮ್ಮೆ ಮಾಯಾನು ತನ್ನ ಮಗಿಯಿಂದ ಸೆರೆ ಸುರಿಯುತ್ತಲೂ, ಕುಡಿಯುತ್ತ ಹರಟೆಕೊಚ್ಚುತ್ತ ಕುಳಿತಿದ್ದಾರೆ. ತಾಸೆರಡು ತಾಸಾಯಿತು. ಹೀಗೆ ಒಂದೇಸವನೆ ನಡೆದೇ ಇದೆ. ಅಮಲಿನ ಆವೇಶ ಇಬ್ಬರ ಮುಖದಲ್ಲಿಯೂ ಒಡೆದು ಕಾಣುವುದು. ]

ಮಾ:— ಏನಪಾ ಇಂಗ್ರೇಜಿ ಮನಶ್ಯಾರು ? ಛೆ, ಛೆ, ಗನಾ ಹೋಗು !

ಮರ್ಯಾ:— ಯಾಕಲೇ ಮಾಯಾ ?

ಮಾಯಾ:— ಅಲ್ಲ, ಮುಮ್ಮಾಯಿ ಪಟ್ಣಣಾ ನೀರಾಗ ಕಟ್ಯಾನ. ಪೊನ್ನೆ ನಾ ಹೋದಾಗ ನೋಡಿದ್ನಿ; ಇಕಾ, ಹೀಂಗ ಮ್ಯಾಲೆ ನೀರ ಐತಿ, ಕೆಳಗ ಪಟ್ಣೈತಿ. ತಿರಿಗಿ ಬಂದ ಮ್ಯಾಲೆ, ಮೂರು ತಿಂಗಳಾದರೂ ನನ್ನ ತಲ್ಯಾಗಿನ ಗುಂಗ ಹೋಗಲಿಲ್ಲ !

ಮರ್ಯಾ:— ಮತ್ತ, ಅಲ್ಲಿ ಅಗ್ನಿನಗಾಡಿ ನೋಡಿದಿಲ್ಲೊ! ಹಾಂಗ ಹ್ಯಾಂಗ ಹೋಕ್ಕೈತಿ ಬರಗುಡಕೋತ ಕೆಬ್ಬಿಣ ಹಳಿ ಮ್ಯಾಗ! ಇಕಾ, ಹಿಡಿ ಹಿಡಿ, ಇನ್ನೊಂದೀಟು ಕುಡಿ! [ ಎರಡೂ ಕಪ್ಪುಗಳಲ್ಲಿ ಸುರಿಯುವನು. ಇಬ್ಬರೂ ಕುಡಿಯುವರು ]

ಮಾಯಾ:— ಅಲ್ಲೆ........ ಅಗ್ನಿನ ಗಾಡೀ, ಮ್ಯಾಲೆ ತಂತಿಗೆ ಜೋತುಬಿದ್ದಿರತಾವ! ಅಲ್ಲಲೇ, ಎಲ್ಲಾ ಕಡೆ ದೇಶದ ತುಂಬ ಇಂಗ್ರೇಜಾರು, ಕಂಬಾ ತಂತಿ ಯಾಕ ಹಾಕ್ಯಾರ ಅಂತಿ ?

ಮರ್ಯಾ:— ಸುದ್ದೀ ಕಳಸಲಾಕ !

ಮಾಯಾ:— ಮಳ್ಳ! ನಿನಗೇನು ಗೊತ್ತೈತಿ ಹೋಗು. ಈ ಚಳವಳಿ ಮಾಡತಾರಲಾ........ಇವರು ಬಿಡಿಸಿಗೋ ಬಾರದಂತ, ನಮ್ಮ ದೇಶಾನೆಲ್ಲಾ ತಂತೀಲೆ ಬಿಗೀತಾರ, ಗೊತ್ತೈತೇ ? ನೀ ಏನ ಅನ್ನು, ಆಳಬೇಕು ಇಂಗ್ರೇಜಾರ ನೋಡು. ಈ ಬಿಳೀ ಟೊಪ್ಪಿಗೀವೇನಲೇ ಬಿಕನಾಸಿಗೋಳು! ತಾವೂ ಕುಡ್ಯಾಣೆಲ್ಲ, ಮಂದಿಗೂ ಕುಡಿಸಿಗೊಡಾಣೆಲ್ಲ. ಇಂಗ್ರೇಜಾರು ನೋಡು, ಹೆಂಡದ ಹೊಳೀನ ಹರಿಸಿಬಿಟ್ಟಾರ! ಬೇಕಾದವರು ಬೇಕಾದಷ್ಟು ಕುಡೀರಿ! ಹೊಡಿ ಹೋಗಲಿ. [ ಏಳಲು ಪ್ರಯತ್ನಿಸಿ, ಅರ್ಧ ಎದ್ದು ತಲೆಗೆ ಕೈಹಿಡಿದು ] ಯಪ್ಪಾ, ಇದೇನಲೆ! ಮರ್ಯಾ, ಮುಗಲು ತಲಿಗೆ ತಾಕತೈತಿ; ಎತ್ತಿಹಿಡೀ ಏಳಲೇ ಒಂದೀಟು!

ಮರ್ಯಾ:— ಕೆಳಗ ಕೂಡು ಒಂದೀಟು, ಈಗ ತಾನ ಮ್ಯಾಲ ಹೋಕ್ಕೈತಿ [ಮಾಯಾ ಕೂಡುವನು] ಅಲ್ಲಲೇ ಮಾಯಾ, ನಮ್ಮ ದುಡ್ಡಿಲೆ ನಾವು ಸೆರೆ ಕುಡಿದರ ......ಈ ಬಿಳೀ ಟೊಪ್ಪಿಗಿಯವರದೇನು ಗಂಟು ಹೋಕ್ಕೈತಿ ?

ಮಾಯಾ:— ಪಿಕೆಟಿಂಗ್ ಮಾಡತಾರಂತ ಪಿಕೆಟಿಂಗ್ ! ಇವರ ಫಟ್‌ಫಜೀತಿ ಮಾಡಬೇಕು ನೋಡಲೆ!

ಮರ್ಯಾ:— ನಾವು ಮಾಡೋ ಕಾರಣಾನ ಇಲ್ಲೋ! ಸರಕಾರದವರ ಮಾಡಲಾಕ ಹತ್ಯಾರ. ಕುಂತಾವಲಾ ಈಗ ಬಂದೀಖಾನ್ಯಾಗ! ಮಾಡನ್ನು ಪಿಕೆಟಿಂಗ್ ಅಲ್ಲೆ ಬೀಸೂಕಲ್ಲ ಮುಂದ! ಹಿಡಿ ಹಿಡಿ, ಇನ್ನಟ ಸೆರೆ [ ತನ್ನ ಮಗಿಯಿಂದ ಇಬ್ಬರ ಕಪ್ಪುಗಳಲ್ಲಿಯೂ ಸೆರೆ ಸುರಿಯುವನು; ಇಬ್ಬರೂ ಎತ್ತಿ ಕುಡಿಯುವರು ] ಅವರಲ್ಲೆ ಬೀಸಿಗೋತ ಕುಂಡರ್ಲಿ; ನಾವು ಇಲ್ಲೆ ಕುಡಕೋತ ಕುಂಡ್ರೂಣು. ಹ! ಹ! ಹ! ಹ! ( ನಗುವನು. )

ಮಾಯಾ:— ಮೊನ್ನೆ ನಾ ಕರೀವಂದ್ರ್ಯಾ, ಬಾಳ ಗಾಬರ್ಯಾಗಿದ್ನಪಾ !

ಮರ್ಯಾ:— ಅದ್ಯಾಕಲೆ ?

ಮಾಯಾ:— ಗಡಂಗದ ಮುಂದ ಬಂದ ಕೂಡಲೇನ ಸರಕಾರದವರು ಇವರ್ನ ಹಿಡಿದು ಹಾಕತಿದ್ದರು; ಅಂಥಾದು ಮನ್ನೆ ಶನಿವಾರ ದಿನ, ಏನು ಮಾಡಿದರೂ ದಾದ ಇಲ್ಲ! ನಾ ಅಂದಿನಿ 'ಎಲ್ಲರೇ ಸ್ವರಾಜ್ಯ ಸಿಕ್ಕಿತೋ ಏನು ನೋಡ್ರಿಲೆ!'

ಮರ್ಯಾ:— ಅಲ್ಲೀನು ಸಿಗತೈತಿ ? ಸ್ವರಾಜ್ಯ ಅಂದ್ರೇನು ಹುಡುಗಾಟಗೇನು ? ಅದು ಭಾಳ ಹಗರಂತ ತಿಳದಾರಿವರು ! ಅದೇನು

ಬಿಳೀ ಟೊಪ್ಪಿಗೇನು....ನಾಕಾಣೆ ಕೊಟ್ರಾತು ಅಂಗಡ್ಯಾಗ ಸಿಗತೈತಿ ಅನ್ನಾಕ!

ಮಾಯಾ:— ಅಲ್ಲಲೆ ಮರ್ಯಾ, ಸ್ವರಾಜ್ಯಂದ್ರ ಏನಲೆ? ಹಿಡಿಕೊಗೊ ಮೊದಲ ಕುಡಿಯೋಣ [ ತನ್ನ ಮುಗಿಯೊಳಗಿಂದ ಸರಿ ಸುರಿಯುವನು ] ಕುಡಿಯುವರು ಎಂದೂ ಜೇನರಿರೂದಿಲ್ಲ ನೋಡಲೆ!

ಮರ್ಯಾ:— ಮತ್ತs ಕರೀ ಗೆಳೆತನ ಅಂದರ ಅವರೊಳಗs ಇರತೈತಿ! ಉಳಿದವರೇನಲೆ ಬಿಕನಾಸಿಗೋಳು!

ಮಾಯಾ:— ಮತ್ತs ಸತ್ಯವಂತರನಬೇಕು ಅವರs! ಮೊನ್ನೆ ರಾಜಾ ಹರಿಶ್ಚಂದ್ರ ನಾಟಕಾ ನೋಡಲಿಲ್ಲ? ಏನು ಸತ್ಯವಂತನವಾ ಅಂವ! ತನ್ನ ಕೊಟ್ಟ ಮಾತಿಗಾಗಿ ಹೆಂಡ್ರ-ಮಕ್ಕಳನ್ನ ಕೂಡಾ ಮಾರಿ ಬಿಟ್ಟನಲ್ಲವಾ ಹೊಲ್ಯಾರಂವಗ!

ಮರ್ಯಾ:— [ಒಮ್ಮೆಲೆ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭ ಮಾಡುವನು] ಏನು ಮಾಡಲ್ಯೋ ಮಾಯಾ!!

ಮಾಯಾ:— ಅಳಬ್ಯಾಡೋ ಮರೆಪ್ಪಾ! ನಿನ್ನ ನೋಡಿ ನನಗೂ ಅಳು ಬರತೈತಲೆ [ ಅವನೂ ಅಳಲು ಪ್ರಾರಂಭಿಸುವನು. ಇಬ್ಬರೂ ಅಟ್ಟ-ಮುಟ್ಟಿ ಹಾಕಿಕೊಂಡು ಅಳುವರು] ನಿನಗೇನು ಬೇಕು ಹೇಳೋ ಮರೆಪ್ಪಾ?

ಮರ್ಯಾ:— ನನ್ನ ಮಾನಾ ಉಳಿಸಲೇ ಮಾಯಾ........ನನ್ನ ಅಬ್ರೂ ಹೋಕ್ಕೈತಲೆ........

ಮಾಯಾ:— [ ಒಮ್ಮೆಲೆ ವೀರಾವೇಶದಿಂದ ] ಮನಿಸ್ಯಾಗ ಮಾನ ನೋಡಲನೇದ್ದೇನವಾ! ನನ್ನ ಜೀವಾ ಕೊಟ್ಟರೂ ಚಿಂತಿಲ್ಲ, ನಿನ್ನ ಮಾನಾ ಉಳಿಸತೀನಿ! ಹೇಳು ಮೊದಲ, ನಿನಗೇನು ಬೇಕು? ಇಕಾ ಕುಡಿ ಇನ್ನೊಂದು ಕಪ್ಪು! [ ಸರಿ ಸುರಿಯುವನು ]

ಮರ್ಯಾ:— [ ಕಪ್ಪು ಬರಿದು ಮಾಡಿ ಚೇತರಿಸಿಕೊಂಡು ] ಇದ್ನೋ-ಡಪ್ಪಾ, ಬರೂ ಬುದವಾರಂಬೂದರಾಗ, ನನಗ ನೂರು ರೂಪಾಯಿ ಬೇಕು. ಹೆಂಡರೂ ಮಕ್ಕಳನ್ನ ಮಾರಿ ಆದರೂ ಚಿಂತಿಲ್ಲ, ಆ ಗೌಡಸಾನ ಸಾಲಾ ನಾನು ತೀರಿಸಲಾಕs ಬೇಕು.

ಮಾಯಾ:— ಅಂ! ಹೆಂಡ್ರ-ಮಕ್ಕಳನ್ನ ಮಾರತೀದಿ?

ಮರ್ಯಾ:— ಓಹೋ! ಒಳೇ ಮಾರತೀನಿ! ಮತ್ತ ರಾಜಾ ಹರಿಶ್ಚಂದ್ರ ಮಾರಲಿಲ್ಲ ಏನಲೆ?

ಮಾಯಾ:— ಮಾರಿಬಿಡು ಹೋಗಲಿ ಹಾಂಗಾದರ; ನಾನs ತಗೋತೇನಿ!

ಮರ್ಯಾ:— ಹೇಳಿಬಿಡು ಹಾಂಗಾರ; ಏನು ನನ್ನ ಹೇಣತಿನ್ನ ತಗೋತೀಯೋ, ಏನು ಮಗನ್ನೋ?

ಮಾಯಾ:— ನಿನ್ನ ಮಗನ್ನೇನ ಬ್ಯಾಡವಾ. ಹೇಣತಿನ್ನs ಮಾರತೀ ಏನು ಹೇಳು! ಕೊಂಡು ತೊಗೊಂತುಬಿಡತೀನಿ ನನಗೂ ಹೇಣತಿ ಇಲ್ಲ.

ಮರ್ಯಾ:— ಟರಾಯಿತ್ತು ಹಾಂಗಾದರ ಕಿಮ್ಮತ್ತು. ಕೂತ ಕಟ್ಟಿನ ಮ್ಯಾಲೇ ಬಗೀ ಹರದು ಹೋಗಬಿಡ್ಲಿ. ನೀ ಎಷ್ಟಕ್ಕಾದರ ತಗೋಳಾಂವ?

ಮಾಯಾ: - ನೀ ಎಷ್ಟಕ್ಕಾದರ ಮಾರಾಂವ?

ಮರ್ಯಾ:— ನೋಡಪಾ, ಎಡ್ಡನೂರು ರೂಪಾಯಿ ಬಂದರ, ನಾ ಕೊಟ್ಟುಬಿಡತೀನಿ ನೋಡು.

ಮಾಯಾ:— ಅಲ್ಲಲೇ, ನಿನ್ನ ಹೇಣತಿನ್ನ ನಾ ಏನು ನೋಡಿಲ್ಲೇನು? ಊದ್ಹಕ ಹಾಂಗs ನಂದೀಕೋಲಾಗ್ಯಾಳ. ನ್ಯಾಯಾಗ ಒಂದಿಟು ಕಂಡ ಇದ್ದರ ಚಿಂತಿಲ್ಲವಾ, ಯಾರಾದರೂ ಹೆಚ್ಚಿಗೆ ರೂಪಾಯಿ ಕೊಟ್ಟು ಕೊಂಡಾರು.

ಮರ್ಯಾ:— ಇಕಾ, ನನಗೂ ಬ್ಯಾಡಾ, ನಿನಗೂ ಬ್ಯಾಡಾ! ಅಳದs ಕೊಟ್ಟ ಬಿಡತೀನಿ ತೊಗೊಂಡುಬಿಡು.

ಮಾಯಾ:— ಏನು? ನಿನ್ನ ಹೇಣತಿನ್ನ ಅಳದು ಕೊಡಾಂವನ? ಕೊಡು ಹೋಗಲಿ ಹಂಗಾರ. ಅದು ಹ್ಯಾಂಗ ಅಳದು ಕೊಡಾಂವ?

ಮರ್ಯಾ:— ಈ ಮಗೀಲೇನs ಅಳದು ಕೊಡತೇನಿ, ಮತ್ತೇನೈತಿ? ಏಸು ಮಗೀ ಆಗತಾಳ, ಅsಸು ಲೆಕ್ಕಾಮಾಡಿ ರೂಪಾಯಿ ಕೊಟ್ಟುಬಿಡು ಆತಿಲ್ಲೊ!

ಮಾಯಾ:— ಟರಾಸು ಹಾಂಗಾರ ಧಾರಣಿ! ಒಂದು ಮಗೀಗೆ ಏಸು ರೂಪಾಯಿ ಹೇಳು.

ಮರ್ಯಾ:— ಮಗೀಗೆ ಹತ್ತುರೂಪಾಯಿದಂತೆ ತೊಗೊಂಡು ಬಿಡು ಹೋಗಲಿ.

ಮಾಯಾ:— ಹೊಗೋ ಮಳ್ಳs ಹೋಗತ್ಲಾಗ! ಹತ್ತು ರೂಪಾಯಿಕ ಒಳೇ ಊಚೀ ಸೆರೆ ಬರತೈತಿ.

ಮರ್ಯಾ:— ಅದು ಕರ್‍ಯೈತಿ. ಆದರ ಕುಡದ್ಹಾಂಗ ಕುಡ-ದ್ಹಾಂಗ ಸೆರೆ ಗಪ್ಪಾಗಿ ಬಿಡತೈತಿ; ಆದರ, ಹೇಣತಿ ಗಪ್ಪಾಗಿಬಿಡತಾಳ— ಏನಲೆ?

ಮಾಯಾ:— ನೀ ಅಂದ್ಹಾಂಗ ಅದೂ ಕರೇನs! ಒಮ್ಮೆ ಕೊಂಡುಬಿಟ್ರಾತು; ಕಡೆತನಕಾನೂ ಉಳೀತಾಳ. ಆದರ ಮರ್ಯಾ, ನೀ ಲಗ್ನಾಗಿ ಏಸು ವರ್ಸಾತು?

ಮರ್ಯಾ:— ಹತ್ತು ವರ್ಸಾತು.

ಮಾಯಾ:— ಹಾಂಗಾರ ಆದರ ವಜಾ ಹಾಕಾಂಗಿಲ್ಲೇನು?

ಮರ್ಯಾ:— ಅಲ್ಲಲೇ, ಏನ ನಿನ್ನ ತಲೀ ಅದು ಅಂತೀನಿ! ಹೇಣತಿ, ಹೆಂಡ ಇವು ಹಳೇವಾದ್ಹಾಂಗ ಹೆಚ್ಚು ಪಾಡವಾ!

ಮಾಯಾ — ಇಂವ ಒಳೇ ಅಕಲ ಹೇಳಂವಪಾ! ಯಾರ್‍ನ ಟೊಪ್ಪಿಗೀ ಹಾಕಬೇಕಂತ ಮಾಡಿ? ಹಳೇದಾದ ಹಾಂಗ ಹೆಂಡ ಹುಳಚಾಗತೈತಿ; ಹೇಣತೇನು ಹುಳಚಾಗತಾಳು? ಅದೇನಿಲ್ಲ. ಎಂಟು ರೂಪಾಯಕ್ಕ ಮಗೀಯಂತೆ ಆದರ ನಾ ತೊಗೋತೀನಿ— ನೋಡು. ಬೇಕಾರ ಕೊಡು, ಸಾಕಾರ ಬಿಡು

ಮರ್ಯಾ:— ಆತು ನಿನ್ನ ಹಾಂಗs ಆಗಲಿ. ಆಷ್ಟಕ್ಕರೇ ಕಬೂಲ ಆದೀಯಾ?

ಮಾಯಾ — ಏಳ ಹಾಂಗಾರ. ಈಗಿಂದೀಗ ಅಳತೀಮಾಡಿ ಕೊಟ್ಟುಬಿಡು. ನಾನೂ ರೋಕ್ ರೂಪಾಯಿ ಕೊಡತೀನಿ. ನಿನ್ನ ಹಾಂಗ ಉದ್ದಾರೀ ಯಾರಲ್ಲೂ ಮಾಡಾಂವಲ್ಲ ನಾ.

ಮರ್ಯಾ:— ಒಗೀ ಹಾಂಗಾರ ಹತ್ತು ರೂಪಾಯಿ ಸಂಚಗಾರಕ!

ಮಾಯಾ:— ಅಲ್ಲಲೇ ಮರ್ಯಾ, ಸೆರೆಕುಡದವರ ಹಾಂಗ ಹಂಗ್ಯಾಕ ಮಾಡತೀ ಅಲೆ? ನಾನೂ ಮಳ್ಳನ ಹಾಂಗ ಹೂಂ ಅಂದಿನೀ; ಆದರ........

ಮರ್ಯಾ:— ಆದರ್ಕ ಗೀದರ್ಕ ಈ ಅನುಮಾನ ಬ್ಯಾಡೇನಪಾ. ನೀ ಕೊಂಡು ತೊಗೊಳ್ಳವನೋ ಇಲ್ಲೋ, ಇಷ್ಟು ಹೇಳು.

ಮಾಯಾ:— ಒಳೇ ತೊಗೋತೀನೇಳು! ಇಕಾ ಹತ್ತು ರೂಪಾಯಿ ಯಾಕ, ಇಪ್ಪತ್ತು ರೂಪಾಯಿ ತೊಗೊ [ ಎಂದು ರೂಪಾಯಿ ಒಗೆಯುವನು ] ಆದರ, ನೀ ಈ ಮಗೀಲೆ ಅಳದು ಕೊಡತೇನಂತಿ; ಅಕೇನು ನಮ್ಮ ನಿನ್ನ ಹಾಂಗ ಗಟ್ಟಿ ಅವಾಳೊ, ಏನು ಈ ಸೆರೆದ್ಹಾಂಗ ಅಳ್ಳಕ ಆದಾಳೊ?

ಮರ್ಯಾ:— ನೀ ತೊಗೊಂಬಾಂವ ಗಟ್ಟಿ ಅದೀ ಇಲ್ಲೊ! ನಾ ಎಲ್ಲಾ ಅಳದು ಕೊಡತೇನಂತ. ಈ ಮರ್ಯಾನ ತಲೀ ಅರೆ ಪರೀಕ್ಷಾ ಮಾಡು.

ಮಾಯಾ:— ಅಲ್ಲೊ. ಒಂದೀಟ ಹೇಳರೇ ಹೇಳಲಾ. ಅಕಿನ್ನ ಕರಗಸತೀಯೊ ಏನು ಮಣ್ಣು! ಕರಗಿಸಿದರ ಮುಂದ ಹೆಪ್ಪಗಟ್ಟಲಿಲ್ಲಾ ಅಂದರ?

ಮರ್ಯಾ:— ಕರೇ ನೋಡಪಾ, ನಿನ್ನ ದಡದ ಮ್ಯಾಲಿಂದದು ತಲೀನ್ಕ ಅಲ್ಲ ನೋಡು.... ಖಾಲೀ ಮಗೀ ಅಂತೀನಿ. ಅಲ್ಲಲೆ, ಈಟು ತಿಳಿಯೂದಿಲ್ಲಕ? ಮನಿಸ್ಯಾನ್ನ ಯಾರರೇ ಕರಗಿಸತಿರತಾರ? ಅದೇನು ಬೆಣ್ಣೀ!

ಮಾಯಾ:— ಹಾಂಗಾರ ನಿನ್ನ ಬೇತರೇ ಏನು ಐತಿ ಹೇಳಲಾ!

ಮರ್ಯಾ:— ಇದ್ನೋಡು, ನಮ್ಮ ಮನ್ಯಾಗ ಒಂದು ದೊಡ್ಡ ಪೀಪಾಯಿ ಐತಿ ನೋಡೀ ಇಲ್ಲೊ?

ಮಾಯಾ:— ಆ ಕಟಗೀ ಬ್ಯಾರಲ್ಲು, ಎದೀಮಟ ಐತಲಾ ಅದ್ಕ ಹೌದಲ್ಲೊ?

ಮರ್ಯಾ:— ಹಾಂ. ಅದ್ಕ ನೋಡು!

ಮಾಯಾ:— ಅದರಾಗೇನು ನಿನ್ನ ಹೇಣತಿನ್ನ ನೀರು ಮಾಡಿ ಸುರುವಾಂವಾ?

ಮರ್ಯಾ:— ಏ ಭಿಕನಾಸಿ! ಪೂರಾ ಒಂದೀಟು ಹೇಳುಮಟಾ ಕೇಳರಿ ಕೇಳು. ಅದನ್ನ ಅಂಚುಮಟ ಮೊದಲ ನೀರಲೆ ತುಂಬೂದೇನಪಾ.

ಮಾಯಾ:— ಮುಂದ?

ಮರ್ಯಾ:—ಅಲ್ಲಿಂದ ಎತ್ತಿ ಆಕಿನ್ನ ಅದರಾಗ ಕೂಡಸೂದೇನಪಾ!

ಮಾಯಾ:— ಹಾಂ!!

ಮರ್ಯಾ:— ಆಗ ನೀರು ಹೊರಗ ಚಲ್ಲತಾವು. ಹೌದನ್ನು, ಆಕಿ ಎಷ್ಟು ಅದಾಳು, ಅಷ್ಟಕ ನೀರು ಚೆಲ್ಲತಾವು. ಹೆಚ್ಚಿಲ್ಲಾ, ಕಡಿಮಿಲ್ಲಾ. ಅವನ್ನ ಈ ಮಗೀಲೆ ಅಳದರಾತು.

ಮಾ:— ಅಂದ ಹಾಂಗ ಮರ್ಯಾ, ಏನ ನಿನ್ನ ತಲೀ ಐತಿ! ವಕೀಲರು ಬ್ಯಾರಿಸ್ಟರು ಝುಕ್ಕಿಸಿದರು ನೋಡು!

ಮ:— ಅವಕ್ಕೆಲ್ಲಿ ಅಕಲಿರತೈತಿ? ಬರೇ ನಾಕು ಟಿಸ್ ಪಿಸ್ ಮಾತಾಡಿದರಾತೇನು?

ಮಾ:— ಅಲ್ಲಲೆ ಮರ್ಯಾ, ಇನ್ನೊಂದು ಅನುಮಾನಬರತೈತಿ. ಆ ನೀರು ಚೆಲ್ಲಿ ಹರದು ಹೋಗಿ ಬಿಡತಾವು; ಅವನ್ನ ಹ್ಯಾಂಗ ಹಿಡಿದು ಅಳೀಲಾಕ ಬರತೈತಲೆ?

ಮ:— ಅಲ್ಲಲೆ, ಅದೇನ ನಿನ್ನ ತಲೀನೋ, ಉರೀ ಹಚ್ಚೊ ಒಲೀನೋ! ಏ ಮಳ್ಳಾ, ಆ ನೀರು ಹಿಡಿಯೋ ಹಾಂಗಿಲ್ಲ ಇಲ್ಲ, ತಿಳೀತೇನುಕ. ಅಕಿನ್ನ ಹೊರಗ ತಗಿಯೋದು; ಅಲ್ಲಿಂದ ಮಗಿ ಮಗೀಲೇ ಅಳದು ಪಿಪಾಯಿ ತುಂಬೂದು. ಅಕಿನ್ನ ಒಳಗ ಮಣಾಗುಸೂದರಿಂದ ಎಸು ನೀರು ಹೊರಗ ಹೋಗಿರತಾವು, ಅಷ್ಟು ನೀರು ಒಳಗ ಭರತೀ ಹಾಕಿಧಾಂಗಾತು! ಅಳತಿ ಸಿಕ್ಕತೋ ಇಲ್ಲೋ?

ಮಾ:— [ ಪೂರ್ಣ ತಿಳಿದು, ತಲೆ ಅಲ್ಲಾಡಿಸುತ್ತ ] ಛೆ, ಛೆ, ಮರ್ಯಾ ನೀ ಖರೆ ಅಕಲವಂತ ನೋಡು. ಜಜ್ಜು ಸಾಹೇಬಗೂ ಇಷ್ಟು ಅಕಲು ಹರಿಯಾಣಿಲ್ಲ ಬಿಡು! ನಡಿ ಏಳು ಹಂಗಾರ ಹೋಗೋಣು!

ಮ:— ಗೆಳೆತನ ಅಂದರ ಇದಕ್ಕ ಅನಬೇಕು. ಹಿಡಿ ಇದಿಷ್ಟು ಉಳದೈತಿ, ಕುಡದುಬಿಡೋಣು. [ ಮಗಿಯಿಂದ ಸುರಿಯುವನು. ]

ಮಾ:- ಮತ್ತ ನಂದರೇ ಯಾಕ ಇಟಗೊಳ್ಳಿ? ಪೂರಾ ಖಾಲೀನೇ ಮಾಡಿಬಿಡೋಣ. [ಸುರಿಯುವನು. ಇಬ್ಬರೂ ಕುಡಿಯುವರು] ಮತ್ತ ಬೇಕಾರ, ಹಾದ್ಯಾಗ ಇನ್ನೊಂದು ಮಗೀ ಖರೀದೀ ಮಾಡೋಣಂತ.

ಮ:— ಏಳಿನ್ನ ಗಡಾನ! ಹೊತ್ತಾಗತೈತಿ! [ ಇಬ್ಬರೂ ಕೈಯಲ್ಲಿ ಕೈ ಹಾಕಿ ಹೊರಡುವರು. ]

## ದೃಶ್ಯ ೨

[ ನ್ಯಾಯಾಸ್ಥಾನ. ಮಾಯಾ ಹಾಗೂ ಮರ್ಯಾ ಇಬ್ಬರೂ ಆರೋಪಿಗಳ ಪಿಂಜರದಲ್ಲಿ ಕುಳಿತಿದ್ದಾರೆ. ಇತ್ತ ಮತ್ತೊಂದು ಬದಿಗೆ ಕರೆವ್ವನ ಜವಾಬು ನಡೆದಿದೆ. ]

ನ್ಯಾಯಾಧೀಶ:— ಒಳ್ಳೇದು ಕರೆವ್ವಾ. ಇವರಿಬ್ಬರೂ ಬಂದು ನಿನ್ನನ್ನು ನೀರುತುಂಬಿದ ಪೀಪಾಯಿಯಲ್ಲಿ ಮುಳುಗಿಸಿದರು, ಹೌದಲ್ಲೊ? ನಡೆದುಹೋದ ಘಟನೆಯನ್ನೆಲ್ಲ ವಿವರವಾಗಿ ಹೇಳು. ಎದ್ದು ನಿಲ್ಲು!

ಕರೆವ್ವ:- ನಾ ಗುಡಿಸಲ ಮುಂದ ಜ್ವಾಳಾ ಹಸನಮಾಡಿಕೋತ ಕೂತಿದ್ದೆನ್ರಿ. ಆಗ........

ಕಾರಕೂನ:— ಏ ಕರೆವ್ವಾ, ದೇವರಾಣೀ ಮಾಡಿ ಖರೆ ಹೇಳತೀನನ್ನು.

ಕರೆವ್ವ:— ಯಪ್ಪಾ, ನಾ ಸುಳ್ಳ ಯಾಕ ಹೇಳಲ್ರಿ? ಖಟ್ಟಿ ಖರೇವಾ ಹೇಳತೇನ್ರಿ. ಆಗ......

ಕಾರಕೂನ:— ಏ, ಅನ್ನಬೇ, ದೇವರಾಣೀ ಮಾಡಿ ಖರೆ ಹೇಳತೀನಂತ! ಹಾಂಗ ಅನಬೇಕಂತ ಕಾಯದೆ ಐತಿ!

ಕರೆವ್ವ:— ದೇವರಾಣೀ ಮಾಡಿ ಖರೆ ಹೇಳತೀನ್ರಿ. ನಾ ಹಸಮಾಡಿಕೋತ ಕೂತಿದ್ನಿ. ಆಗ ಇವರಿಬ್ಬರೂ ಬಂದ್ರಿ

ಬಂದಾವ್ರ, ಕೆಟ್ಟಗಣ್ಣಿಲೇ ನನ್ನ ನೋಡಲಾಕ ಹತ್ತಿದರ್‍ರಿ. ನನ್ನ ಯೆದಿ ಧಡಾ, ಧಡಾ ಅನ್ನಾಕ ಹತ್ತಿರಿ. ಯಾಕಂದ್ರ, ಇವರಿಬ್ಬರೂ ಕುಡಿವರಂದ್ರ, ಏನು ಮಾಡ್ಯಾರು — ಏನ ಮಾಡಲಿಕ್ಕಿಲ್ಲ ನೇಮಾಇಲ್ರಿ.

ಮಾ:— ಏ ಕರೆವ್ವಾ, ಆಗ ನಾ ಕುಡಿದಿದ್ನೊ, ಇಲ್ಲೊ? ಮದಲ ಹೇಳು ಅದನ್ನ.

ಮ:— ಏ, ಇಬ್ಬರೂ ಕುಡಿದಿದ್ವೆವನ್ನs. ಸುಳ್ಳು ಮಾತಾಡ-ಬ್ಯಾಡ; ಇದು ಕಚೇರಿ ಐತಿ.

ನ್ಯಾ:—[ಕಠೋರವಾಗಿ] ಏ, ಈಗೂ ಕುಡಿದೀರೇನ್ರೋ? ನ್ಯಾ-ಮ್ಯಾಲೆ ಖಬರದನೊ ಇಲ್ಲೊ? ಇದೇನು ಗಡಂಗಂತ್ಲೆ ತಿಳಿದೀರಿ, ಜಗಳಾಡಲಿಕ್ಕೆ?

ಮ:— ಅಲ್ರೀ ಜಜ್ಜಸಾಹೇಬರs, ಕುಡ್ಯೋದೇನ ಗುನ್ಹೋ ಆಕ್ಕತೇನ್ರಿ?

ಮಾ:— ದೊಡ್ಡ ದೊಡ್ಡ ಸಾಹೇಬ್ರೂ ಕುಡೀತಾರಂತ!

ಸಿಪಾಯಿ:— ಏ ಬಾಯಿ ಮುಚ್ಚೊ!

ನ್ಯಾ:— ಒಳ್ಳೇದು ಕರೆವ್ವಾ, ನಿನ್ನ ಜವಾಬು ಮುಂದೆ ಸಾಗಿಸು.

ಕ:— ಆಗ ನನ್ನ ಗಂಡ ಕೇಳಿದ: "ಏ ಕರೀ, ನಿನಗ ಹತ್ತು ರೂಪಾಯಿ ಬೇಕೇನು?" 'ಎಲ್ಲಿದವು ಕೊಡು' ಅಂತ ನಾ ಅಂದ್ನಿ. "ಹಾಂಗಾರ ನಾ ಹೇಳಿದ್ಹಾಂಗ ಮಾಡು," ಹೀಂಗಂದವನs ಒಳಗ ಹೋಗಿ ಪೀಪಾಯಿ ತಗೊಂಡು ಬಂದ. "ಇದನ್ನ ಪೂರಾ ಅಂಚಮಟ ತುಂಬು; ಇಕಾ ಈ ಐದು ರೂಪಾಯಿ ತೊಗೊ. ಪೂರಾ ತುಂಬಿದ ಮ್ಯಾಲೆ ಉಳಿದೈದು ರೂಪಾಯಿ ಕೊಡತೇನಿ" ಅಂತ ಅಂದನ್ರಿ. ನನ್ನ ಜನ್ಮದಾಗ ನಾ ಇಷ್ಟು ರೂಪಾಯಿ ನೋಡಿದ್ದಿಲ್ರಿ. ಬಾವಿಯಿಂದ ನೀರು ಜಗ್ಗಿ ಜಗ್ಗಿ ತುಂಬಲಾಕ ಹತ್ತಿದೆನ್ರಿ.

ನ್ಯಾ:— ಅದಕ್ಕೆ ಎಷ್ಟು ವೇಳೆ ಹಿಡಿಯಿತು?

ಕ:— ಚೆಲೋ ಒಂದು ತಾಸರೆs ಹಿಡಿದಿದ್ದೀತ್ರಿ. ಭಾಂವಿ ನಮ್ಮ ಗುಡಿಸಿಲದಿಂದ ದೂರ ಐತ್ರಿ.

ನ್ಯಾ:— ಅಷ್ಟು ಹೊತ್ತಿನ ವರೆಗೆ ಇವರಿಬ್ಬರೂ ಏನು ಮಾಡ-ತಿದ್ದರು?

ಕ:— ಮತ್ತೇನು ಮಾತೂದರಿ ಅವರು? ಕಪ್ಪಾಗೂತ್ಲೆ ಕಪ್ಪು, ಕಪ್ಪಾಗೂತ್ಲೆ ಕಪ್ಪು — ಹೀಂಗs ಸೆರೆ ಕುಡಕೋತs ಕೂತಿದ್ರು' ಪೀಪಾಯಿ ಪೂರಾ ತುಂಬಾಣಾ, ಮರ್‍ಯಾ ಸೊನ್ನೀ ... . ಆಗ ಇಬ್ಬರೂ ಎದ್ದರ್‍ರಿ. ಎದ್ದವರs ನನ್ನ ಅನಾತs ನೆಗವಿದರು. ಮರ್‍ಯಾ ಕೈ ಹಿಡಿದs; ಮಾಯಾ ಎಡ್ಡೂ ಕಾಲು ಹಿಡಿದ. ನಾ ಒದರಲಾಕ ಹತ್ತಿದೆನ್ರಿ. ಆದರೂ ಕೇಳಲೇ ಇಲ್ರಿ. ಎತ್ತಿದವ್ರs ಆ ಪೀಪಾಯ-ದಾಗ ನನ್ನ ಮುಳಗಿಸಿದರ್‍ರಿ!

ಮ:— ಏ, ಕರೀ, ಕರೇ ಹೇಳs. ನಿನ್ನ ಪೂರಾ ಮುಣಿಗಿಸಿ-ದೇವs?

ಕ:— ನನ್ನ ಕುತ್ಗೀಮಟ ಆ ಪಿಪಾಯದಾಗ ಕುಂಡ್ರಿಸಿದರ್‍ರಿ. ಆಗ ನನ್ನ ಗಂಡ ಅಂದನ್ರೀ: "ಇಕಾ ಶಿರಾ ಆಟ ಮ್ಯಾಲೆ ಐತ್ಯಾ. ಆದರದೂ ಆತಟ ಲೆಕ್ಕಾ ಹಿಡೀಲಾಕಬೇಕು, ನಾಕು ಮಗೀ ಹೆಚ್ಚಿಗೆ ಹಿಡಿಯುವ ನಾ." ಆಗ ಮಾಯಾ ಅಂದ; "ಅದೇನ ಪಂಚೇತಿ ಬ್ಯಾಡಪಾ, ಅದನ್ನೂ ಅಷ್ಟ ನೀರಾಗ ಮುಣಗಿಸೇ ಬಿಡು. ಬರಾಬರೀ ಲೆಕ್ಕ ಹೊರಡತೈತಿ." ಆಗ ಮರ್‍ಯಾ ಒತ್ತಿ ನನ್ನ ತಲೀ ನೀರಾಗ ಮುಣಗಿಸಿದನ್ರಿ. ನಾ ನೀರಾಗ ಗಪ್ಪ ಆದ್ನಿ. ದಿಕ್ಕs ತೋರ-ಧಾಂಗಾತ್ರಿ.

ಮಾ:— ಏ ಕರೆವ್ವಾ, ಕರೇ ಹೇಳs. ಅಲ್ಲಿಂದ ನಾನs ನಿನ್ನ ಹಿಡದು ಹೊರಗ ತಗೀಲಿಲ್ಲ?

ಕ:— ನಾ ಎಲ್ಲಿ ಇಲ್ಲಂತೀನಿ?

ಮ:— ನಿನ್ನ ಕೊಲ್ಲಬೇಕಂತ ನನ್ನ ಇರಾದಿ ಇತ್ತಂದ್ರ ಹಾಂಗ್ಯಾಕ ಮಾಡತಿದ್ನಿ?

ಸಿಪಾಯಿ:— ಏ ಮುಚ್ಚೊ ಬಾಯಿ. ನೀ ಯಾಕ ನಡುವ ಮಾತಾಡತಿ? ನಿನ್ನ ಪಾಳೀ ಬಂದಾಗ ಎಲ್ಲಾ ಹೇಳೀಯಂತ!

ನ್ಯಾ:— ಒಳ್ಳೇದು ಕರೆವ್ವ, ಮುಂದೇನಾತು?

ಕ:— ನನ್ನ ಹೊರಗ ತಗದವನs ಅಂದ: "ಏ ಹೆಣ್ಣೇs ಹೋಗಿನ್ನ; ಮತ್ತೊಂದು ಒಣಾ ಸೀರೀ ಉಟಗೊಂಡು ಬಾ ಹೋಗು" ನಾ ಮಾತ್ರ ಅಲ್ಲಿ ನಿಂದರಲೇ ಇಲ್ರಿ! ಹಾಂಗs ಒದ್ದೀ ಸೀರೀಲೇ ನಮ್ಮಣ್ಣನ ಮನೀಗೆ ಓಡಿ ಹೋದ್ನಿ. ಅಂವ ನನ್ನ ಫೌಜದಾರ-ಸಾಹೇಬರ ಕಡೆ ಕರಕೊಂಡು ಹೋದ. ಅಲ್ಲಿಂದ ನಾವೆಲ್ಲಾರೂ ಕೂಡೇ ನಮ್ಮ ಮನೀಗೆ ಬಂದೆವ್ರಿ.

ನ್ಯಾ:— ಆಗಿವರು ಏನು ಮಾಡತಿದ್ರು? ಇನ್ನೂ ಅಲ್ಲೇ ಇದ್ರೇನು?

ಕ:— ಟಗರಿನ್ಹಾಂಗ ಇಬ್ಬರೂ ಗುದ್ಯಾಡಕೋತs ಅಲ್ಲೇ ಕೂತಿದ್ದರ್‍ರಿ. ಹದಿನೈದು ಮಗೀ ಆಗತಾಳ ಅಂತ ನನ್ನ ಗಂಡ ಅಂತಿದ್ದ; 'ಇಲ್ಲ, ನೀ ತಪ್ಪ ಅಳದಿ, ಹನ್ನೆರಡs ಮಗೀ ಆಕ್ಕಾಳ' ಅಂತ ಮಾಯಾ ಅಂತಿದ್ದ. ಆಗ ಫೌಜದಾರಸಾಹೇಬರು ಇಬ್ಬರನ್ನೂ ಬೇಡೀ ಹಾಕಿ ಇಲ್ಲಿ ತಗೊಂಡು ಬಂದರ್‍ರಿ. ಯಪ್ಪಾ, ಈಟಾದದ್ದು ಕರೇವೈತೇನ್ರಿ. ಈ ಗಂಡನ ಸೋಬತಿ ಸಾಕಾಗೇತಿ. ನನಗ ಸೋಡಚೀಟಿ ಕೊಡಿಸಿ-ಬಿಡ್ರಿ. ಎಲ್ಲ್ಯಾರೆ ದುಡಿದು ಹೊಟ್ಟೀ ತುಂಬಿಕೋತೀನ್ರಿ. ಯಪ್ಪಾ, ನಿಮಗ ಕೈಮುಗಿದು ಬೇಡಿಕೋತೀನಿ. [ಎಂದು ಅಳುವಳು]

ನ್ಯಾ:— ಪ್ರತಿವಾದಿ ಮಾಯಪ್ಪಾ, ನೀನು ಈ ದುಷ್ಟ ಹಂಚಿಕೆ-ಯಲ್ಲಿ ಮುಖ್ಯ ಚಿಥಾವಣಿದಾರನಿದ್ದಂತೆ ತೋರುತ್ತದೆ. ಇದರ ಬಗ್ಗೆ ನಿನ್ನ ಅಂಬೋಣೇನು?

ಮಾ:— ಜಜ್ಜಸಾಹೇಬರ, ನಿಮಗ ಮೊದಲೇ ಹೇಳಲಿಲ್ಲs ನಾ — ಆಗ ಕುಡದು ಪೂರಾ ನಿಶೇದಾಗ ಇದ್ದಿನ್ರಿ ಅಂತ?

ನ್ಯಾ:— ಅದು ನನಗೆ ಗೊತ್ತಿದೆ. ಸಾಗು ಮುಂದೆ.

ಮಾ:— ಆಗ ಒಂಬತ್ತು ಹೊಡಿದಿರಬೇಕು, ಎಡ್ಡು ಮಗೀ ತೊಗೊಂಡು ಮರ್‍ಯಾ ನಮ್ಮನಿಗೆ ಬಂದ. "ಇಕಾ, ಈ ಮಗೀ ನಿಂದು,

ಈ ಮಗೀ ನಂದು’ ಅಂತ ಅಂದವನ್ನ ಎಡ್ಡೂ ಮಗಿ ಇಟ್ಟು ಕುಂತ. ಆಗ ನಾ ಒಳಗ ಹೋಗಿ ಎಡ್ಡು ಕಪ್ಪು ತಗೊಂಡು ಬಂದ್ನಿ. ನನ್ನ ಮಗ್ಯಾಗಿಂದ ಎಡ್ಡೂ ಕಪ್ಪಿನಾಗ ಸುರುವಿದ್ನಿ, ಇಬ್ಬರೂ ಕುಡದೆವು.

ನ್ಯಾ:— ಒಳ್ಳೇದು ಮುಂದೆ?

ಮಾ:—ಅಲ್ಲಿಂದ ಅಂವ ತನ್ನ ಮಗ್ಯಾಗಿಂದ ಸುರುವಿದಾ, ಮತ್ತ ಕುಡದೆವಿ. ಅಲ್ಲಿಂದ ನನ್ನ ಮಗ್ಯಾಗಿಂದ ಸುರುವಿದ್ನಿ. ಕುಡದೆವು ಹಿಂಗ ಇದು ಮಧ್ಯಾನ್ನ ಮಟಾ ನಡೀತರಿ! ಅಲ್ಲಿಂದ ಒಮ್ಮಿಂದೊ. ನ್ಮ್ಯಾಲೇ ಅಂವ ಅಳಾಕ ಹತ್ತಿದ. ‘ಯಾಕಲೆ ಮರ್‍ಯಾ’ ಏನಾಗೇತಲೇ, ಅಂತ ನಾ ಕೇಳಿದ್ನಿ ‘ಬರೂ ಬುಧವಾರಂಬೂದರಾಗ ನನಗ ನೂರು ರೂಪಾಯಿ ಬೇಕ ನೋಡಪಾ. ಆ ಗಡಂಗದವನ ಸಾಲಾ ತೀರಸ-ಬೇಕಾಗೇತಿ! ಬೇಕಾರ ನನ್ನ ಹೆಣತಿನ್ನ ಕೂಡ ಮಾರಾಕ ತಯಾರ್-ದೀನಿ’ ಅಂತ ಅಂದ. ನಾನೂ ಆಗ ಕುಡದು ಟರ್ ಆಗಿದ್ನಿ. ನನ್ನ ಹೆಣತೀನೂ ಸತ್ತು ಎಡ್ಡು ವರ್ಸಾಗಿತ್ತು. ‘ಹಂಗಾರ ನಾನ ತೊಗೋ-ತೇನಿ; ಕಿಮ್ಮತ್ತ ಠರಾಯಿಸ್ಸು’ ಅಂತ ನಾ ಅಂದ್ನಿ. ಅವನೂ ನನ್ನಹಾಂಗ ಕುಡದು ಟರ್ ಆಗಿದ್ದ. ಮತ್ತ ಜಜ್ಜ ಸಾಹೇಬರ, ನಿಶೇಪಾಗಿದ್ದಾಗ ಮನಿಸ್ಯಾಗ ಹ್ಯಾಂಗ ಮಸಕ ಮಸಕ ಇಚಾರ ಬರತಾವಂಬೂದು ನಿಮಗೂ ಗೊತ್ತಿರಬೇಕು .. ..

ಕಾರಕೂನ:— ಏ ನೋಡಿ ಮಾತಾಡೊಂದಿಪ್ಪ, ಜಜ್ಜ ಸಾಹೇ-ಬರೇನು ನಿನ್ನ ಹಾಂಗ ಸೆರೆ ಸಿಂದೀ ಕುಡೀತಾರಂತ ತಿಳಿದೀ ಏನು?

ಮಾ:— ಸೆರೆ ಸಿಂದೀ ಯಾಕ ಕುಡದಾರ್‍ರೀ, ಬ್ರ್ಯಾಂಡೀ ವ್ಹಿಸ್ಕೀ ಕುಡೀತಾರು! ನನಗಷ್ಟು ತಿಳಿಯೂದಿಲ್ಲೇನು? (ಎಲ್ಲರೂ ನಗುವರು.)

ನ್ಯಾ:— ಹೂಂ. ಮುಂದೆ ಸಾಗು!

ಮಾ:— ಆ ಸೆರೇದ ಮಬ್ಬಿನಾಗ ಮರ್‍ಯಾ ಅಂದ: ನಾ ಆಕಿನ್ನ ಈ ಮಗೀಲೆ ಅಳದ ಕೊಡಾಂವ ನೋಡಪಾ!’ ‘ಹಂಗ ಮಾಡ ಹಂಗಾರ’ ಅಂತ ನಾನೂ ಅಂದ್ನಿ. ಎಂಟು ರೂಪಾಯಕ ಒಂದ ಮಗೀ ಯಂತೆ ಧಾರಣೀ ಠರಾಸಿದೆವಿ. ಅಲ್ಲಿಂದ ನಾ ಅಂದೆ “ಮನಿಸ್ಯಾರ್ನ ನೀ ಮಗೀಲೆ ಹ್ಯಾಂಗ ಅಳೆಯಾಂವಪಾ?” ಆಗ ಅಂವ ತನ್ನ ಹಂಚಿಕೀ ಹೇಳಿದ. ಅದನ್ನ ಇದ್ದ ಈಗ ಕರೆವ್ವ ನಿಮಗ ಹೇಳಿದಳಲ್ಲ. ಮತ್ತೊಮ್ಮೆ ನಾ ಹೇಳೋದರಾಗ ಏನರ್ಥ ಐತಿ? ಸೆರೇದ ಮಬ್ಬಿ-ನಾಗಿದ್ದರೂ ಮರ್‍ಯಾನ ತಲಿ ಎಷ್ಟು ಸುಪೀಕ ಐತಿ—ನೀವ ವಿಚಾರ ಮಾಡ್ರಿ. ಆದರ ಅಳತೀ ಅಂದಾಜಿನಾಗ, ಅಂವ ನನ್ನ ಮುಂದ ಓಡಾಣಿಲ್ಲ ಬಿಡ್ರಿ. ಇಪ್ಪತ್ತು ಮಗಿ ಆಕ್ಯಾಳ ಅಂತ ಆವನ ಲೆಕ್ಕ; ಅಂಥಾದು, ಹನ್ನೆಡ್ಡs ಮಗಿ ಆಗಬೇಕ! ಜಜ್ಜಸಾಹೇಬ್ರ, ಬರೆ ಹನ್ನೆಡ್ಡ ಮಗಿ!! ಹ! ಹ! ಹ! [ ಗಟ್ಟಿಯಾಗಿ ನಗಲುಹತ್ತುವನು ]

ಕಾರಕೂನ, ಸಿಪಾಯಿ ಮೊದಲಾದವರು:— ಏ ಬಾಯಿ ಮುಚ್ಚು ಒಂದಿಷ್ಟು. [ ಮಾಯಾ ಸುಮ್ಮನಾಗುವನು ]

ನ್ಯಾ:— ಮರೆಪ್ಪಾ, ಇದಕ್ಕೆ ನಿನ್ನ ಅಂಬೋಣವೇನಿದೆ?

ಮ:— ಮಾಯಣ್ಣಾ ಹೇಳಿದ್ದು ತಂತಿತೋತಂತ, ಕಟ್ಟ ಕರೇ-ವೈತಿ. ನಾವು ಸೆರೆಗುಡಕರು ಎಂದೂ ಸುಳ್ಳ ಮಾತಾಡೋದಿಲ್ಲ ನನ್ನ ಹೇಣತಿನ್ನ ಮಾರತೇನಿ—ಅಂತ ನಾನs ಮೊದಲ ಹೇಳಿದವ. ಆಕಿನ್ನ ಅಳಿಯೋ ಹಂಚಿಕೀ ಆದರೂ ನಾನs ಹುಡಿಕಿ ತಗದ್ನಿ.

ನ್ಯಾ:— ಹೀಗೆ ಲಗ್ನವಾದ ಹೆಂಡತಿಯನ್ನು ಮಾರುವುದು ನ್ಯಾಯುವೇ?

ಮ:— ಅದರಾಗ ಏನ ತಪ್ಪೈತಿ ಅಂತೀನಿ ನಾ! ರಾಜಾ ಹರಿಶ್ಚಂದ್ರ ತನ್ನ ಹೇಣತಿನ್ನ ಮಾರಲಿಲ್ಲ! ಧರ್ಮರಾಯ—ಯಾರಕಿ? (ನೆನವು ಮಾಡಿಕೊಳ್ಳುತ್ತ) ಆಕಿ ಹೆಸರೇನು! ಮೊನ್ನೆ ದೊಡ್ಡಾಟದಾಗ ಬಂದಿದ್ದಳಲ್ಲಪಾ— ಹಾರಗೆಡಸು, ಹೋಗಲಿ— ಆ ಧರ್ಮರಾಯಾ ತನ್ನ ಹೇಣತಿನ್ನ ಪಣಕ್ಕ ಹಚ್ಚಲಿಲ್ಲ? ನಾ ತೆರವು ತೆತ್ತು ಮಾಡಿ-ಕೊಂಡ ಹೇಣತಿನ್ನ ಮಾರಲಾಕ, ತೂರಲಾಕ ನನಗ ಪುಟ್ಟಪೂರಾ ಅಧಿಕಾರ ಐತಿ. ಇದರಾಗ ಯಾಂವ ನನ್ನ ಕೈ ಹಿಡಿಯಾಂವ?

ನ್ಯಾ:— ಅದೆಲ್ಲ ಹಿಂದಿನ ಕಾಲದಲ್ಲಿ ನಡೆಯುತ್ತಿರಬಹುದು. ಆದರೆ ಈಗ ಹಾಗೆ ಮಾಡಲು ಬರುವದಿಲ್ಲ!

ಮ:— ಯಾಕ ಬರೂದಿಲ್ಲಾs ಅಂತೀನ್ನಾ. ಆಗೊಂದು, ಈಗೊಂದು, ಆಳೂ ಅರಸಗೊಂದೂ, ಕೊರ್‍ರ ಮರ್‍ಯಾಗೊಂದು, ಹೀಂಗಿದ್ರ, ಆವಕ್ಕ ಯಾರರೇ ಕಾಯದೆ ಅಂತಾರುs?

ಮಾ:— ಕಾಯದೆ ಅಂದಮ್ಯಾಲೆ, ಯಾವಾಗಲೂ ಒಂದ, ಎಲ್ಲಾರಿಗೂ ಒಂದ.

ನ್ಯಾ. :— ಮರೆಪ್ಪಾ, ಇನ್ನು ನಿನ್ನ ಜವಾಬು ಸಾಕುಮಾಡು. ಈ ವ್ಯಾಜ್ಯದಲ್ಲಿ ಅಂಥ ಜಟಿಲಪ್ರಶ್ನೆ ಯಾವುದೂ ಇರುವುದಿಲ್ಲ. ಇವರ ತೀರ್ಪನ್ನು ಈಗಿಂದೀಗ ಕೊಟ್ಟುಬಿಡುವೆ. (ಸ್ವಲ್ಪ ತಡೆದು, ಬರೆದು ಮುಗಿಸಿ ಓದತೊಡಗುವನು. ವಾದಿ ಕರೆವ್ವನ ಹೇಳಿಕೆಯಂತೆ, ಅವಳನ್ನು ಎತ್ತಿ ನೀರು ತುಂಬಿದ ಪೀಪಾಯಿಯಲ್ಲಿ ಮುಣುಗಿಸಿದ ಸಂಗತಿ ನಿಜವಿದೆ. ಇದನ್ನು ಪ್ರತಿವಾದಿ ಮಾಯಣ್ಣಾ ಹಾಗೂ ಮರೆಣ್ಣಾ ಇಬ್ಬರೂ ಒಪ್ಪುತ್ತಾರೆ ಆದರೆ ಹೀಗೆ ಮಾಡುವಲ್ಲಿ, ಪೋಲೀಸ್ ಪ್ರಾಸಿಕ್ಯೂಟರು ಆಪಾದಿಸುವಂತೆ, ಅವಳನ್ನು ಕೊಲ್ಲುವ ಉದ್ದೇಶ ಅವರದಾಗಿರಲಿಲ್ಲ—ಎಂಬುದು ಸ್ಪಷ್ಟವಿದೆ. ಅವಳ ಅಳತೆಯನ್ನು ತೆಗೆದುಕೊಳ್ಳುವುದಿಷ್ಟೇ ಅವರ ಉದ್ದೇಶವಾಗಿದ್ದಿತು. ಆದ್ದರಿಂದ, ಇವರಿರ್ವರೂ ದೋಷಮುಕ್ತರೆಂದು ನಾನು ಜಾಹೀರ್ ಪಡಿಸುತ್ತೇನೆ. ಇನ್ನು........

ಮ:— ಹೌದರಿ, ಜಜ್ಜ ಸಾಹೇಬರ; ಇದಕ್ಕಂತಾರ ಇಂಗ್ರೇಜರ ರಾಜ್ಯಂತ! ಸುಮ್ಮಾಕ ನನ್ನ ಅಬ್ರೂ ತೊಗೊಂಡರ್‍ರಿ!

ಕಾ:— ಏ, ಸುಮ್ಮನಾಗೊ! ಹಾಗೆ ನ್ಯಾಯಾಧೀಶರು ತೀರ್ಪು ಹೇಳುವಾಗ ನಡುವೆ ಬಾಯಿಹಾಕಬಾರದು.

ಮ:— ತಪ್ಪಾತ್ರಿ ಯಪ್ಪಾ! ಜಜ್ಜಸಾಹೇಬ್ರ, ಮುಂದ ಓದ್ರಿ ಯಪ್ಪಾ!

ನ್ಯಾ:— ಇನ್ನು ಘನಪದಾರ್ಥಗಳನ್ನು ಪ್ರವಾಹೀ ಪದಾರ್ಥ-ಗಳಂತೆ ಅಳೆಯಲು ಪ್ರಯತ್ನಿಸಿದ್ದು weights and measures sec. 194 para 2. ಈ ನೇಮದ ಪ್ರಕಾರ ಅಪರಾಧವಾಗುತ್ತ-ದೇನೊ ನಿಜ. ಆದರೆ, ಆಗ ಆಪಾದಿತರು ಸೆರೆ ಕುಡಿದು ಸಂಪೂರ್ಣ

ಶ್ರಮಲಿನಲ್ಲಿದ್ದರು. ಕುಡಿದಾಗ ಮನುಷ್ಯನ ಬುದ್ಧಿ ಅವನ ಸ್ವಾಧೀನ-ದಲ್ಲಿ ಇರುವುದಿಲ್ಲ. ಅವನ ವಿಚಾರವು ವಿಚಿತ್ರರೀತಿಯಲ್ಲಿ ಹರಿಯು-ತ್ತದೆ. ಇನ್ನು ಕುಡಿಯುವುದೇ ಅಪರಾಧವೆನ್ನಬೇಕೆಂದರೆ, ಹಾಗೆ Indian Penal Code ನಲ್ಲಿ ಎಲ್ಲಿಯೂ ಹೇಳಲಾಗಿಲ್ಲ. ಇದೇ ಕಾರಣಕ್ಕಾಗಿ, ಲಗ್ನವಾದ ಹೆಂಡತಿಯನ್ನು ಮಾರುವ ಹಾಗು ಕೊಂಡು-ಕೊಳ್ಳುವ ಅಪರಾಧದಿಂದ ಇವರಿರ್ವರು ದೋಷಮುಕ್ತರೆಂದು ಹೇಳದೆ ಇರಲಾರೆ. ಮೇಲಾಗಿ, Hindu Law ದ ಪ್ರಕಾರ, ಪತಿಗೆ ತನ್ನ ಪತ್ನಿಯ ಮೇಲೆ ಎಲ್ಲಿಯವರೆಗೆ ಅಧಿಕಾರವಿರುತ್ತದೆಂಬುದು ವಿವಾದಾ-ಸ್ಪದವಿದೆ. ರಾಣಿಯ ಜಾಹೀರ್‌ನಾಮೆಯಂತೆ, ಧರ್ಮದಲ್ಲಿ ಕೈಹಾಕು-ವುದು ಸರಕಾರದ ಧೋರಣವಿಲ್ಲ. ಕೊನೆಯದಾಗಿ, ಯಾವ ಶೋಧ-ವನ್ನು ಮಾಡಿ, Archemedes ನು ಅಜರಾಮರ ಕೀರ್ತಿಯನ್ನು ಸಂಪಾದಿಸಿದನೋ, ಅಂಥ ಅನಿಯಮಿತ ಘನಪದಾರ್ಥಗಳ ಪರಿ-ಮಾಣವನ್ನು ಅರಿತುಕೊಳ್ಳುವ ರೀತಿಯನ್ನು ಕಂಡುಹಿಡಿದ ಮರೆಣ್ಣ-ನಿಗೆ ನಿಜವಾಗಿಯೂ ನಾಬೆಲ್ ಪಾರಿತೋಷಕ ದೊರೆಯತಕ್ಕದ್ದು.

ಮ:— ಏ ಕರೀ, ಕೇಳದಿಲ್ಲೊ? ನಡಿ ಇನ್ನ ಮನೀಗೆ, ನಿನ ಚರ್ಮನೇ ಸುಲೀತೀನಿ— ನಿನ್ನ ಅಣ್ಣನ ಮೇಲಗಟಿಗೊಂಡು ನನ್ನ ಕಚೇರೀ ಕಟ್ಟಿಗೆಳದಿ?

ಮಾ:— ಅಲ್ಲಲೆ, ನಿನಗ ಜಜ್ಜ ಸಾಹೇಬ್ರು ಏನಂದ್ರು ಕೇಳ-ದಿಲ್ಲೊ? ನೀ ಏನೋ ಗನ್ತ ಆದೀಯಂತ! ನಿನಗ ಇನಾಮು ಕೊಡ-ಬೇಕಂತ!

ಮ:— ಹಾರಗೆಡಿಸು ಆ ಇನಾಮು! ಈ ಕರೀ ಅಣ್ಣ, ಆ ಸೋಮ್ಯಾ, ಅಂವ ಬಾಳ ಮಸ್ತಿಗೆ ಬಂದಾನ; ಅವನ ಮ್ಯಾಲೆ ಅಬ್ರು-ಲುಕ್ಸಾನ್ ದಾವೇ ಮಾಡತೀನಿ. ಹೆಂಗs, ಬಿಡತೀನೇನ್ ನಾ!

(ತೆರೆಯು ಬೀಳುವದು.)

(ವಸ್ತುವನ್ನು Mopasant ರವರ ಒಂದು ಕಥೆಯಿಂದ ಆಯ್ದು-ಕೊಳ್ಳಲಾಗಿದೆ.)

## ಹಚ್ಚುವೆವು ದೀಪವನು!

ಪ್ರೊ. ಎಚ್. ಜಿ. ಉಪಾಧ್ಯಾಯ, ಎಂ. ಎ. ಹೈದ್ರಾಬಾದು

ಹಚ್ಚುವೆವು ದೀಪವನು ಕನ್ನಡದ ಸಿರಿಗುಡಿಗೆ
ಉಚ್ಚತಮ ಭಕುತಿಯಲಿ ಮಣಿದು ದೇವಿಯ ಅಡಿಗೆ. ||ಪ||

ತುಂಗೆ-ತಡಿಯಲಿ ಮೆರೆವ ಹಂಪೆ ಇರುವೆಡೆಗೆ,
ಜಂಗಮರ ಅನುಭವದ ಮಂಟಪದ ಗಡಿಗೆ,
ಸಿಂಗರದ ವೈಭವದ ಬಂಗಾರದ ಮಡಿಗೆ,
ತುಂಗತರ ಕಡಲೆಗೆ ಮಲುಪೆ ಇರುವೆಡೆಗೆ.

ತುಂಗನೊರೆದಿಹ ತಿರುಳುಗನ್ನಡದ ನುಡಿಗೆ,
ಜಂಗಮರ ವಚನಗಳ ಅನುಭವದ ಸಿರಿಗೆ,
ರಂಗವಿಠಲನ ನಾಮಕೀರ್ತನೆಯ ಸುಧೆಗೆ,
ರಂಗುರಂಗಿನ ಹೊಸತುಕನ್ನಡದ ನುಡಿಗೆ. ೨

ಶಿಲ್ಪಸಿದ್ಧಿಯ ಪಡೆದ ಬೇಲೂರ ಗುಡಿಗೆ
ಒಲಿದು ಪೊರೆಯುವ ಹಂಪೆ-ವಿರುಪಾಕ್ಷನಡಿಗೆ,
ಕೊಳಲನೂದುವ ಉಡುಪಿಮೋಹನನ ಗುಡಿಗೆ,
ಬೆಳುಗೊಳದ ಜಿನರೊಡೆಯ ಗೊಮ್ಮಟನ ಅಡಿಗೆ. ೩

ಒಮ್ಮನದ ಭಾವನೆಯ ಹಣತೆ ಹದಗೊಳಿಸಿ,
ಕೂರ್ಮೆ-ನಲುಮೆಯ ಎಣ್ಣೆ ಅದಕೆ ಸುರಿಸಿ,
ಕನ್ನಡದ ಕೆಚ್ಚೆದೆಯ ಬತ್ತಿ ಹುರಿಗೊಳಿಸಿ,
ಚೆನ್ನದೀಪವ ಹಚ್ಚಿ ಪ್ರೀತಿಜ್ಯೋತಿಯ ಮುಡಿಸಿ. ೪

ಆರ್ಯವಿದ್ಯಾರಣ್ಯ ಮೆರೆದ ಘನತೆಯ ದೀಪ,
ಧೀರಬಸವೇಶ್ವರನ ಸರ್ವಸಮತೆಯ ದೀಪ,
ವೀರನಾರಾಯಣನ ಭಕ್ತಿಭಾಗ್ಯದ ದೀಪ,
ಧೀರ 'ಶ್ರೀ' ಬೆಳಗಿರುವ ಕನ್ನಡದ ಶ್ರೀದೀಪ. ೫

ಮನೆಮನೆಯ ತೊಳಗಲ್ಲಿ ಈ ಭವ್ಯದೀಪ,
ಮನಮನವ ಬೆಳಗಲ್ಲಿ ಈ ದಿವ್ಯದೀಪ,
ಕನ್ನಡದ ವೈಭವದ ಆಶಾಪ ದೀಪ—
ಘನಮಹಿಮೆ ಭಾರತೀಯ ಕೀರ್ತಿಪ್ರದೀಪ. ೬

ಆರದಿರಲೀ ದೀಪ ಬಿರುಗಾಳಿಪಡೆಗೆ
ಸೋರದಿರಲ್ಲಿ ಎಣ್ಣೆ ಹಣತೆ ಮುರುಗಡೆಗೆ,
ಕಾರದಿರಲ್ಲಿ ಹೊಗೆಯ ಮಂಕಿಡಿದು ಕುಡಿಗೆ,
ಬೀರಿಬರಲೀ ದೀಪ ಬೆಳಕೆಲ್ಲ ಕಡೆಗೆ. ೭

# ಗೀತ ಗೀತಾ

(ಶ್ರವಣಿಕಾ)

ಡಾ. ಶ್ರೀನಿವಾಸ ವೆಂಕಟೇಶ ಗಲಗಲಿ, ಧಾರವಾಡ

卐

## ವಿಷಾದಯೋಗ

( ಹಿನ್ನೆಲೆಯಲ್ಲಿ ರಣರಭಸವು ನಿಮಿಷಾರ್ಧ ಕೇಳಬಂದು, ಶಿರಸೌಮ್ಯವಾಗುವುದು. )

ನಿವೇದಕ :—ಇದು ಯುದ್ಧಧ್ವನಿಯು! ಕುರುಕ್ಷೇತ್ರದ ರಣರಭಸವು! ಕೌರವ-ಪಾಂಡವರಲ್ಲಿ ಜರುಗಲಿರುವ ಮಹಾಯುದ್ಧದ ಸಿದ್ಧತೆಯು!

ಕುರುಕ್ಷೇತ್ರದ ರಣರಂಗಸ್ಥಳದಲ್ಲಿ ಅಕ್ಷೋಹಿಣಿಯಾಗಿ ಸಮರ ಕುತೂಹಲಿಗಳಾದ ಸೈನಿಕರೂ ಸೇನಾಪತಿಗಳೂ ನೆರೆದಿದ್ದಾರೆ—ತಮ್ಮ ತಮ್ಮ ಚತುರಂಗಬಲ ರಚನೆಯನ್ನು ನೋಡುತ್ತ ಉಭಯಪಕ್ಷಗಳ ಮುಂದಾಳುಗಳೂ ಯುದ್ಧಪ್ರಾರಂಭಸೂಚನೆಯ ದಾರಿ ಕಾಯುತ್ತಿದ್ದಾರೆ. ಅತಿರಥಿ-ಮಹಾರಥಿಗಳಿಂದ ಕೂಡಿದ ಉಭಯಸೈನ್ಯಗಳು ಸರ್ವಸಿದ್ಧತೆಯಿಂದ ಕೂಡಿವೆ.

ಇಷ್ಟರಲ್ಲಿ ಅದೋ! ( Effect : ಶಂಖ, ಭೇರಿ ಮೊದಲಾದ ರಣವಾದ್ಯಗಳು ಬಾರಿಸುವವು) ಪುನಃ ರಣವಾದ್ಯಗಳು ಮೊಳಗ… ತೊಡಗಿವೆ.

ಇನ್ನು ಯುದ್ಧವು! ಶಾಂತಿಯನ್ನು ತರಬೇಕೆಂದು ಹೂಡುವ ಯುದ್ಧವು ಇಷ್ಟರಲ್ಲಿಯೇ ಪ್ರಾರಂಭವಾಗುವುದು.

ಇದೇನು ವಿಚಿತ್ರ! ಅರ್ಜುನನು ತನ್ನ ಗಾಂಡೀವಧನುಸ್ಸನ್ನು ಕೈಯಿಂದ ಕೆಳಗಿಟ್ಟು, ಸರ್ವೇಂದ್ರಿಯ ನಿಯಾಮಕನಾದ ಶ್ರೀಕೃಷ್ಣನನ್ನು ಕುರಿತು ಹೇಳುತ್ತಿದ್ದಾನೆ:

ಜನಾರ್ದನ, ಹೊಳೆಯದು ಏನೇನು ॥ ಪ ॥
ಶಸ್ತ್ರ-ಶಾಸ್ತ್ರಸಂನ್ಯಾಸವೃತ್ತಿಗಾಧೀನನಾದೆ ನಾನು ॥ ಅ. ಪ ॥

ಕಾದಲೆಂದು ಕೂಡಿರುವ ಉಭಯಬಲ ನೋಡಿದಾಗಿನಿಂದ।
ತಿರುಗಿತೆನ್ನ ಮನ! ಹೋಯ್ತು ವೀರತನ! ಬುದ್ಧಿಯಾಯ್ತು ಮಂದ! ॥
ರಣವೆ ಬೀಜ ಮತ್ತೊಂದು ರಣಕೆ! ಸುಖ-ಶಾಂತಿ ಸಾಧ್ಯವೇನು? ॥ ೧ ॥

ಯುದ್ಧವೆಂದರುತ್ಸವದಿ ನಲಿವ ಕಣ್ಗಳಿಗೆ ಕತ್ತಲಾಯ್ತು!।
ಸ್ಫುರಿಸುವಂಥ ಭುಜಬಲವೆ ಅಡಗಿ, ಗಾಂಡೀವ ಕುಸಿದು ಬಿತ್ತು!॥
ನಡುಗುತಿಹುದು ಮೈ! ವೀರರಸದ ಸೆಲೆ ಬತ್ತಿಹೋಯಿತೇನು? ॥ ೨ ॥

ಯುದ್ಧವೇಕೆ? ಬಹು ಗೆಲವದೇಕೆ? ಸಾಮ್ರಾಜ್ಯದಾಸೆಯೇಕೆ?।
ಬಂಧು-ಬಳಗ-ಗುರುಹಿರಿಯರೆಲ್ಲರನು ನಾಶಗೊಳಿಸಬೇಕೇ? ॥
ಆಗದಾಗದಿದು ಪಾಪಕರ್ಮ! ಮೂಲೋಕ ದೊರೆತರೇನು? ॥ ೩ ॥

ಪಾಪಕರ್ಮದಲಿ, ವಂಶಧರ್ಮ-ವನಿತೆಯರ ಶೀಲನಾಶ!
ವರ್ಣವರ್ಣ ಸಂಕರಕೆಯಾಗಲದರಿಂದೆ ನರಕವಾಸ ॥
ಸರ್ವಪುಣ್ಯಫಲ ಕಳೆವ ಕದನದಲಿ, ದೊರೆವಸಿದ್ಧಿಯೇನು? ॥ ೪ ॥

ರಾಜ್ಯಲೋಭದಲಿ, ಸ್ವಜನವಧೆಗೆ ನಿಂತಿರುವ ಪಾಪಿಯಾದ।
ನನ್ನ ಕೊಂದು ಕೌರವರು ಸುಖದಿ ಬದುಕಿರಲಿ, ನೀಗಿ ವಾದ!
ಯುದ್ಧಗಿದ್ಧ ಸುಖಶಾಂತಿಗಲ್ಲ! ಬರಿಭ್ರಾಂತಿಯಲ್ಲವೇನು! ॥ ೫ ॥

---

# ವಿಮರ್ಶೆ ಎತ್ತ ಸಾಗಿದೆ?

ಶ್ರೀಮತಿ ಸರೋಜಿನಿ ಮಹಿಷಿ, ಎಮ್. ಎ. ಎಲ್ ಎಲ್. ಬಿ.

卐

**ಇಂದು ಇದೊಂದು ಮಹತ್ತ್ವದ ಪ್ರಶ್ನೆಯೇ ಆಗಿದೆ; ಏಕೆಂದರೆ ಪತ್ರಿಕೆಗಳು ಹೆಚ್ಚಿದಂತೆಲ್ಲ ನಮ್ಮಲ್ಲಿ ವಿಮರ್ಶಕರ ಸಂಖ್ಯೆಯೂ ಬೆಳೆಯುತ್ತಲಿದೆ. ಆದರೆ ವಿಮರ್ಶಕನ ಹೊಣೆ ಎಂತಹದೆಂಬುದನ್ನು ಅರಿತ ವಿಮರ್ಶಕರು ಮಾತ್ರ ಮಳೆಗಾಲದ ಮಾವಿನಹಣ್ಣಿನಂತೆ ಅಪೂರ್ವವಾಗಿ ಇದ್ದಾರೆ.**

卐

ವಿಮರ್ಶೆಯು, 'ನಿರ್ಮಿಸಿದ ಸಾಹಿತ್ಯದ ಬಗ್ಗೆ—ಕೈಕೊಂಡ ಕೃತಿಯ ಬಗ್ಗೆ ಅವಶ್ಯ ಎಂಬುದನ್ನು ಒಪ್ಪಿದ ಮೇಲೆ, ಇಂದಿನ ವಿಮರ್ಶೆ ಎತ್ತ ಸಾಗಿದೆ? ಎತ್ತ ಸಾಗಬೇಕು? ಎಂದು ಯೋಚಿಸುವುದೂ ಅನಿವಾರ್ಯ. ವಿಮರ್ಶೆ ಮಾಡಬೇಕಾದ ವ್ಯಕ್ತಿ ಅಧಿಕಾರಿಯಾಗಿದ್ದರೆ, ಮಾಡಿದ ವಿಮರ್ಶೆಗೂ ಬೆಲೆಯಿದೆ ಎಂಬುದು ನಿರ್ವಿವಾದ. 'ಸಹಸಾ ವಿದಧೀತ ನಕ್ರಿಯಾಂ ಅವಿವೇಕಃ ಪರಮಾಪದಾಂ ಪದಂ,' ಎಂದು ಭಾರವಿ, ಹೇಳುವುದರ ಸಾರವನ್ನೆಲ್ಲ ಒಂದೇ ಮಾತಿನಲ್ಲಿ ಹೇಳಿದ್ದರೂ, ಅದರರ್ಥ ವಿವಿಧ ಸಂದರ್ಭಗಳಿಗೆ ತಕ್ಕಂತೆ ಹಲವಾರು ರೂಪಗಳನ್ನು ಧರಿಸಬಹುದು. ಸಾಹಿತ್ಯದ ಕ್ಷೇತ್ರದಲ್ಲಿ, ಕೃತಿಗಿಂತ ವಿಮರ್ಶೆ ಉತ್ತಮಕೃತಿಯಾದುದರ ಉದಾಹರಣೆಗಳುಂಟು; ಆದರೆ ವಿಮರ್ಶಕನು ಕೃತಿಯಲ್ಲಿ ಒಳಹೊಕ್ಕು, ನಿಷ್ಪಕ್ಷಪಾತಬುದ್ಧಿಯಿಂದ ರಸವನ್ನು ಸವಿದರೆ ಮಾತ್ರ! ಆದರೆ ಇಂದಿನ ವಿಮರ್ಶೆ ಈ ಮಟ್ಟಕ್ಕೇರಬಲ್ಲದೆ? ಬೆರಳ ಮೇಲೆಣಿಸುವಷ್ಟು ಅಧಿಕಾರಿಗಳಾದ ವಿಮರ್ಶಕರನ್ನು ಬಿಟ್ಟರೆ, ಇನ್ನುಳಿದ ಸಾಮಾನ್ಯ ವಿಮರ್ಶಕರೆಂದು ಕೇಳಿಕೊಳ್ಳುವವರಿಗೆಲ್ಲ, ವಿಮರ್ಶೆಯು ಮಾಪನದಂಡ ರಸನಿರ್ಮಿತಿಯೂ ಅಲ್ಲ; ಸಾಹಿತಿಯ ಔಚಿತ್ಯಜ್ಞಾನವೂ ಅಲ್ಲ; ಶೈಲಿಯೂ ಅಲ್ಲ. ಆ ಮಾಪನದಂಡ ಸಾಹಿತಿಗೂ ವಿಮರ್ಶಕನಿಗೂ ಇರುವ ಸಿಹಿ-ಕಹಿ ವೈಯಕ್ತಿಕ ಬಾಂಧವ್ಯ!

ಕೃತಿ ತುಂಬ ಒಳ್ಳೆಯದಿರಬಹುದು; ವಿಮರ್ಶಕನು ಅದರ ಬಗ್ಗೆ ತನ್ನ ಮೆಚ್ಚಿಕೆಯನ್ನೂ ವ್ಯಕ್ತಮಾಡಿರಬಹುದು. ಆದರೂ ಕೃತಿಯನ್ನೋದದೆ ವಿಮರ್ಶೆಯಷ್ಟನ್ನೇ ಓದುವ ಜನ, ವಿಮರ್ಶಕನ ಕೃತಿಯನ್ನು ಮೆಚ್ಚಬೇಕಾದರೆ, ಇಬ್ಬರಿಗೂ ಯಾವುದೋ ಸಿಹಿ ಬಾಂಧವ್ಯವೋ, ಋಣಾನುಬಂಧವೋ ಇರಬೇಕು,—ಎಂದು ಊಹಿಸುವರು. ಈ ಊಹೆಯೇ ವ್ಯಂಗ್ಯಾರ್ಥ-ಉತ್ತಮಕಾವ್ಯ! ಬರೀ ಮೇಲಿನ ವಾಚ್ಯಾರ್ಥವನ್ನು ತಿಳಿದುಕೊಳ್ಳುವವರು, — ಅವರು ಸಾಹಿತ್ಯದ ಒಳ-ಒಳಗಿನ ರಾಜಕಾರಣಕ್ಕೆ ಅಪರಿಚಿತರು!

ಸ್ಪಾರ್ಟಾ ನಡುಗಡ್ಡೆಯಲ್ಲಿ, ಜನರೆಲ್ಲ ಆರೋಗ್ಯಸಂಪನ್ನರಾಗಿರಬೇಕೆಂಬ ಉದ್ದೇಶದಿಂದ, ಅಲ್ಲಿಯ ರಾಜನು ಒಂದು ವಿಶಿಷ್ಟ ತೂಕದ ಕೆಳಗಿನ ಮಕ್ಕಳನ್ನು ಹುಟ್ಟಿದೊಡನೆಯೇ ಕೊಲ್ಲಿಸಿಬಿಡುತ್ತಿದ್ದನಂತೆ! ಆ ಮಗುವು ತನ್ನ ತೂಕವನ್ನು ಬಲಪಡಿಸಿಕೊಳ್ಳಲು ಅವಕಾಶವೇ ದೊರೆಯಕೂಡದೇ?—ದೈಹಿಕ ತೂಕವನ್ನು ನೋಡಲು ತಕ್ಕಡಿಯಿದೆ. ಸಾಹಿತ್ಯದ ತೂಕವನ್ನಳೆಯಲು ವಿಮರ್ಶಕನ ವಿವೇಕವಲ್ಲದೆ ಬೇರಾವ ತಕ್ಕಡಿಯಿದೆ?

ಸಾಹಿತಿಗಳು, ವಿಮರ್ಶಕರು, ಪತ್ರಿಕಾಸಂಪಾದರು—ಇವರಲ್ಲಿಯ ಸಂಬಂಧ, ದೊಡ್ಡ ಸಾಹಿತಿಯನ್ನು ಕೆಳಕ್ಕುರುಳಿಸಬಹುದು; ಚಿಕ್ಕ ಸಾಹಿತಿಯನ್ನು ಮೇಲಕ್ಕೆತ್ತಬಹುದು. ದೊಡ್ಡವನನ್ನು ದೊಡ್ಡವನೆಂದು ತುಂಬ ಹೆಮ್ಮೆಬಡಬಹುದೆಂದಲ್ಲ; ಚಿಕ್ಕವನಿಗೆ ಪ್ರೋತ್ಸಾಹ ಕೊಟ್ಟು ಮುಂದೆ ತರಬೇಕೆಂದಲ್ಲ; ಆದರೆ ಚಿಕ್ಕವನು ವಿಮರ್ಶಕನನ್ನು ಯಾವುದೋ ಬಗೆಯಲ್ಲಿ ಋಣಿಯಾಗಿಸಿದ್ದಾನೆಂಬ ಕಾರಣದಿಂದ, ದೊಡ್ಡವನು ಹಾಗೆ ಮಾಡಿಲ್ಲವೆಂಬ ಕಾರಣದಿಂದ; ವಿಮರ್ಶಕನು ವಿಮರ್ಶೆಯನ್ನು ಮಾಡುವಾಗ (ಅ) ಸಾಹಿತಿಯು ಯಾವ ಜಾತಿಗೆ ಸೇರಿದ್ದಾನೆ. (ಬ) ಅವನ ಕೃತಿ ಎಲ್ಲಿಂದ ಪ್ರಕಾಶಿತವಾಗಿದೆ? (ಕ) ಅವನ ಸ್ನೇಹ ಯಾರೊಡನೆ ಹೆಚ್ಚಾಗಿದೆ? (ಡ) ಅವನ ರಾಜಕೀಯ ಅಭಿಪ್ರಾಯ ಯಾವ ಗುಂಪಿಗೆ ಸೇರಿದ್ದು? (ಇ) ವೈಯಕ್ತಿಕವಾಗಿ ತನಗೂ ಆ ಸಾಹಿತಿಗೂ ಏನಾದರೂ ಅಸೂಯೆ ಉಂಟೋ ಹೇಗೆ?—ಇತ್ಯಾದಿ ವಿಷಯಗಳನ್ನು ನೆನೆಯುತ್ತಾನೆ.

ಸಾಹಿತಿ, ವಿಮರ್ಶಕ, ಪತ್ರಿಕಾಸಂಪಾದಕ ಇವರು ಮೂವರೂ ತ್ರಿಕೋನವಿದ್ದ ಹಾಗೆ. ಮೇಲಿನ ವಿಷಯಗಳನ್ನೆಲ್ಲ ನೆನೆದು ವಿಮರ್ಶಕನು ವಿಮರ್ಶೆ ಬರೆದರೆ, ಪತ್ರಿಕಾಸಂಪಾದಕರು ಅದನ್ನು ಪ್ರಕಟಿಸಬೇಕಲ್ಲ? ಸಂಪಾದಕರಿಗೂ ಸಾಹಿತಿಗೂ ವೈಮನಸ್ಯವಿದ್ದಲ್ಲಿ, ಇಲ್ಲವೆ ವಿಮರ್ಶಕನಿಗೂ ಸಂಪಾದಕರಿಗೂ ನಿಕಟಸ್ನೇಹವಿದ್ದಲ್ಲಿ, ಆ ವಿಮರ್ಶೆ ಬೆಳಕನ್ನು ಕಾಣಬಹುದು. ವಿಮರ್ಶೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಮಾಡುತ್ತಿದ್ದರೆ, ಸಾಹಿತ್ಯದ ರಾಜಕಾರಣವನ್ನರಿತ ಓದುಗರು ಸಹಜವಾಗಿಯೇ ಊಹಿಸಿಬಿಡಬಹುದು: ಸಾಹಿತಿಗೂ ಸಂಪಾದಕರಿಗೂ ನಿಕಟಸಂಬಂಧವಿದೆಯೆಂದು; ಎಲ್ಲ ಪ್ರಸಂಗಗಳಲ್ಲಿಯೂ ಹೀಗೆಯೇ ಊಹಿಸುತ್ತ ಹೋದರೆ, ಎಷ್ಟೋ

ಬಾರಿ ಒಳ್ಳೆಯ ಸಾಹಿತ್ಯಕ್ಕೂ ಅನ್ಯಾಯವಾಡಿದಂತಾಗಬಹುದು! ಒಳ್ಳೆಯ ಸಾಹಿತ್ಯ ಕಟುವಿಮರ್ಶೆಯನ್ನು ಪಡೆದು ಬಂದರೆ, ಅದಕ್ಕೂ ಕೂಡ ಹಿಂದೆ ಸಾಹಿತ್ಯದ ರಾಜಕಾರಣ ಇದ್ದುದೇ! ಕಟುವಾದ ವಿಮರ್ಶೆ ಒಂದು ಪಂಗಡದಿಂದ ಬಂದರೆ, ಸಾಹಿತಿ ಅಸಮಾಧಾನಪಟ್ಟುಕೊಳ್ಳುತ್ತಾನೇನೋ ನಿಜ; ಆದರೆ ಸಾಹಿತಿಗೂ ಒಳಗಿನ ತಂತ್ರ ಗೊತ್ತು! ತನ್ನ ಬೆಂಬಲಿಗರಿಂದ ಒಳ್ಳೆಯ ವಿಮರ್ಶೆಯನ್ನು ಬರೆಯಿಸಿ, ಇನ್ನೊಂದು ಪತ್ರಿಕೆಯಲ್ಲಿ ಅದು ಪ್ರಕಟವಾಗುವಂತೆ ನೋಡಿಕೊಳ್ಳುತ್ತಾನೆ. ಅಂತೂ ಇಂದಿನ ಪತ್ರಿಕೆಗಳ ಪಾತ್ರ, ಸಮಾಜವನ್ನು ರೂಪಿಸುವಲ್ಲಿ ತುಂಬ ಹೊಣೆ ಹೊತ್ತಿವೆ. ಇಂತಹ ಪತ್ರಿಕೆಗಳು ವೈಯಕ್ತಿಕ ದ್ವೇಷವನ್ನು ಸಾದಿಸಲು ಸಾಧನವಾಗುವ ಮಟ್ಟಕ್ಕಿಳಿಯಬಹುದೇ?

ಯಾವುದೊಂದು ಕೃತಿಯನ್ನು ಸಾದ್ಯಂತವಾಗಿ ಸಹೃದಯದ ದೃಷ್ಟಿಯಿಂದ ಓದಿ ವಿಮರ್ಶೆ ಮಾಡಬೇಕೆಂಬ ನಿರ್ಬಂಧ ಇಂದು ಉಳಿದಿಲ್ಲ. ವಿಮರ್ಶೆಯ ಒಂದು ಪಡಿಯಚ್ಚೇ ನಿರ್ಮಾಣವಾಗಿದೆ. ಯಾವುದೇ ವೈಮನಸ್ಯವಿಲ್ಲದಿದ್ದರೆ 'ಲೇಖಕರು ತುಂಬ ಪರಿಶ್ರಮಪಟ್ಟು ಬರೆದಿದ್ದಾರೆ. ಇಟ್ಟ ಬೆಲೆಯಲ್ಲಿ ಕೊಟ್ಟಿರುವ ಬಹುಮೂಲ್ಯವಾಗಿದೆ. ಇನ್ನೂ ಹೆಚ್ಚಿನ ಸೇವೆಯನ್ನು ಲೇಖಕರು ಸಲ್ಲಿಸಿ, ಸಾಹಿತ್ಯಭಾಂಡಾರವನ್ನು ತುಂಬಲಿ!' ಇತ್ಯಾದಿ, ಇತ್ಯಾದಿ! ಇದಕ್ಕೆ ವಿರುದ್ಧವಾಗಿ ಕಟುವಾದ ವಿಮರ್ಶೆಯನ್ನೂ ಮಾಡಬಹುದು; ಅದನ್ನೂ ಓದದೆಯೇ! ಓದಿ ವಿಮರ್ಶೆ ಮಾಡುವ ಜನ, ಓದದೆಯೇ ಮಾಡಬಲ್ಲ ಶಕ್ತಿ ಪಡೆದವರಿಂದ ಹಾಸ್ಯಾಸ್ಪದರಾಗುವ ಸಂದರ್ಭಗಳೂ ಎಷ್ಟೋ! ಆದರೂ ತಮ್ಮ ಪ್ರಾಮಾಣಿಕತೆಯಲ್ಲಿ ನಂಬುಗೆಯನ್ನಿಟ್ಟು ಓದಿ ವಿಮರ್ಶೆ ಮಾಡುವವರ ಸಂಖ್ಯೆಯಿಲ್ಲವೆಂದಲ್ಲ.

ಸಾಹಿತ್ಯಕ್ಷೇತ್ರದಲ್ಲಿ ಪಂಗಡಗಳು ವೈಮನಸ್ಯ ಇದ್ದಂತೆ, ಇನ್ನುಳಿದ ಕ್ಷೇತ್ರಗಳಲ್ಲಿಯೂ ಇವೆ. ಪ್ರಾಮಾಣಿಕ ಸ್ಪರ್ಧೆಯನ್ನು ಕಲೆಯ ಹೆಚ್ಚಳದಲ್ಲಿ ಒಪ್ಪೋಣ. ಆದರೆ ಒಬ್ಬರೊಬ್ಬರನ್ನು ತೆಗಳುವಲ್ಲಿಯೂ ಸ್ಪರ್ಧೆಯಿರಬೇಕೇ?—ಸಾಹಿತ್ಯ–ವಿಮರ್ಶೆಗಳ ಕ್ಷೇತ್ರದಲ್ಲಿ ವೈಯಕ್ತಿಕವಾಗಿ ಹುಟ್ಟಿದ ವೈಮನಸ್ಯ, ವೈಯಕ್ತಿಕವಾಗಿಯೇ ಜೀವನದ ವಿವಿಧಕ್ಷೇತ್ರಗಳಲ್ಲಿಯೂ ಹಬ್ಬುತ್ತದೆಂಬುದು ಆಶ್ಚರ್ಯದ ಸಂಗತಿ!

ಸ್ವಾರ್ಥದ ಸಮಾಧಾನವೇ ಉದ್ದೇಶಸಿದ್ಧಿಯಾಗಿರದಿದ್ದರೆ, ಕಲೆಯ ಪ್ರಗತಿಯ ದೃಷ್ಟಿಯಿಂದ, ರಾಷ್ಟ್ರದ ಹಿತದ ದೃಷ್ಟಿಯಿಂದ ಔದಾರ್ಯವನ್ನು ಬಯಸುವ ಪ್ರತಿಯೊಬ್ಬರೂ, ಬಹುದಿನಗಳವರೆಗೆ ಬದುಕಲಾರದ ಸ್ವಾರ್ಥವನ್ನು ಬೇಗನೇ ಬದಿಗಿಟ್ಟಷ್ಟೂ ಒಳ್ಳೆಯದು!

# ಎರಡು ಭಾವರೂಪಕಗಳು

ಶ್ರೀ. ಹಾ. ವೆ. ನಾಗೇಶ, ಉಸ್ಮಾನಿಯಾ ಕಾಲೇಜ್, ಕಲಬುರ್ಗಿ

## ಸರದಾರರು ನಾವು!

ನಾವು ದಾರಿಗುಂಟ ನಡೆಯುವೆವು. ನಡುದಾರಿಯಲ್ಲೇನನೋ ಕಾಣುವೆವು. ಆಸೆಬುರುಕರಂತೆ ಕಣ್ಣೆಳೆದತ್ತ ಧಾವಿಸುವೆವು. ಅದು ಮತ್ತೇನೂ ಇರುವುದಿಲ್ಲ-ಒಂದು ಕುದುರೆಯ ಲಾಳ, ಬರಿ ಹಳೆಯ ಲಾಳ.

"ಓಹ್ ...... ಕುದುರೆಯ ಲಾಳ! ಸರದಾರನ ಕುದುರೆಯ ಲಾಳ! ಆನಂದ ...ಮಹದಾನಂದ! ಇಗೋ, ಒಂದು ಲಾಳ! ಇನ್ನೇನು ಒಂದು ಕುದುರೆ ದೊರೆತರಾಯಿತು; ನಾವು ಅದರ ಮೇಲೆ ಏರಿದರಾಯಿತು. ಕುದುರೆ ನಾಗಾಲೋಟದಿಂದ ಜಿಗಿಯುವುದು. ಖಟ್ ....ಖಟ್....ಖಟ್ ಖಟ್........ವಾವ್ವಾವ್ವಾ........ ಹೌದು ನಾವೀಗ ಸರದಾರರು!"

"ಹೌದು ನಾವು ಸರದಾರರಾಗುವೆವು. ಕೋಟೆ ಕೊತ್ತಲಗಳನ್ನು ಗೆಲ್ಲುವೆವು. ನಮ್ಮ ಹಗೆಗಳನ್ನು ಸದೆಬಡೆಯುವೆವು. ಏಕಮೇವಾದ್ವಿತೀಯ ಸರದಾರರಾಗಿ ಮೆರೆಯುವೆವು. ಈ ಕುದುರೆಯ ಮೇಲೇರಿ ಶ್ರೀಮದ್ಗಾಂಭೀರ್ಯದಿಂದ ಊರೂರು ತಿರುಗುವೆವು. ಖಟ್....ಖಟ್....ಖಟ್....ಏಕೆ ನಾವೇನು ಸರದಾರರಲ್ಲವೆ? ಹೌದು ನಾವು ಸರದಾರರು.

ಸರದಾರರು ನಾವು!

## ಹಾರಿಬಂದ ಹಕ್ಕಿ*

ಗೊತ್ತುಗುರಿಯಿಲ್ಲದ ಕತ್ತಲೆನೆತ್ತಣಿಂದೋ ಒಂದು ಹಕ್ಕಿ ಹಾರಿಬಂದಿತು. ಹೊರಗೆ ಚಳಿಗಾಳಿ ಬೀಸುತ್ತಲಿತ್ತು. ಸುಳಿಗಾಳಿ ಸುಳಿಯುತ್ತಲಿತ್ತು. ಮಳೆ ತೊಟಕಿಡುತ್ತಿತ್ತು. ಹಕ್ಕಿ ಆಸರೆಗೆಂದು ಯಾವುದೋ ಒಂದು ಕೋಣೆಯೊಳಕ್ಕೆ ಹಾರಿಬಂದು ಕುಳಿತಿತು.

ಅಲ್ಲಿ ಬೇಕಾದಷ್ಟು ಬೆಚ್ಚಗಿತ್ತು. ಬೆಳ್ಳಂಬೆಳಕು ಸುತ್ತಲೂ ಹಬ್ಬಿಕೊಂಡಿತ್ತು. ಯಾರೋ ಸುತ್ತ ಕುಳಿತು ಬಿಸಿಬಿಸಿಯಡುಗೆ ಉಣ್ಣುತ್ತಿದ್ದರು. ಅವರು ತಮ್ಮ ಊಟದಲ್ಲೇ ಮಗ್ನರಾಗಿದ್ದಷ್ಟು ಕಾಲ ಆ ಹಕ್ಕಿ, ನಿರ್ಭಯದಿಂದ ಹತ್ತಿರವೆ ಸ್ವಲ್ಪ ಎತ್ತರದಲ್ಲಿ ಚಳಿಕಾಯಿಸುತ್ತ ಕುಳಿತುಕೊಂಡಿತು. ಅವರು ಅದನ್ನು ಹೊಡೆದೋಡಿಸುವ ಗೋಜಿಗೆ ಹೋಗಲಿಲ್ಲ.

ಆಗಲೇ ಅವರ ಊಟ ಮುಗಿಯಿತು. ಅವರು ಆ ಹಾರಿಬಂದ ಹಕ್ಕಿಯನ್ನು ನೋಡಿದರು. ತಕ್ಷಣ ಅವರು ಅದನ್ನು ಅಲ್ಲಿಂದ ಹೊಡೆದೋಡಿಸಿದರು. ಅನಂತ ಕತ್ತಲಿನಿಂದ ಹಾರಿಬಂದ ಹಕ್ಕಿ, ಪುನಃ ಅನಂತ ಕಾಳಿಮೆಯಲ್ಲಿ ಮಾಯವಾಯಿತು.

* ಬೀಡನ ಭಾವೋದ್ಧರಣ. —ಲೇ.

# ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ ' ಸಂಸ್ಕೃತಿಸಮರ ' ಎಂಬ ಸಣ್ಣ ಕತೆಯ ವಿಮರ್ಶೆ ೭ ಜನರಿಂದಲೂ ಬೇರೆ ಬೇರೆ ಮೂರು ಕವಿತೆಗಳ ವಿಮರ್ಶೆ ೬ ಜನರಿಂದಲೂ ಬಂದಿವೆ. ಕವಿತಾವಿಮರ್ಶಕರಲ್ಲಿ ' ಕವಿಕುಲದ ಗುರುವೆ ' ಎಂಬುದನ್ನು ವಿಮರ್ಶಿಸಿದವರು ನಾಲ್ವರು; ಮಿಕ್ಕ ಇಬ್ಬರಲ್ಲಿ ಒಬ್ಬರು ' ನಾಡನುಳಿಸಲು ಕರೆ ' ಎಂಬ ಕವಿತೆಯನ್ನೂ ಇನ್ನೊಬ್ಬರು ' ಬಹಳ ದಿನಗಳ ಮೇಲೆ ' ಎಂಬ ಕವಿತೆಯನ್ನೂ ವಿಮರ್ಶಿಮಾಡಿದ್ದಾರೆ.

**' ಸಂಸ್ಕೃತಿಸಮರ ' ದ ವಿಮರ್ಶಕರು :**

೧. ಶ್ರೀ. ಎನ್. ಪಿ. ಹಿರೇಮಠ, ಡಿ. ಎ. ವಿ. ಕಾಲೇಜ್, ಬನಾರಸ ೨. ಶ್ರೀ. ಸೂಗಣ್ಣ ಹುಂಡೇಕಾರ, ಶಂಕರ ಕಾಲೇಜ್, ಯಾದಗಿರಿ ೩. ಶ್ರೀ. ವೆಂಕಟರಾಮ ಪುಣಿಂಚತ್ತಾಯ. ಕಾಸರಗೋಡು ೪. ಶ್ರೀ. 'ಎಮ್ಮೆಸ್ಕೆ' ಕೆನರಾ ಕಾಲೇಜ್ ಕುಮಟಾ ೫. ಶ್ರೀ. ಕೆ. ದಾಮೋದರ ಐತಾಳ, ಕುಂಜಿಬೆಟ್ಟು, ಉಡುಪಿ ೬. ಶ್ರೀ. ಕೆ. ಎಸ್. ಶರ್ಮಾ ' ವಾಣೀಮಂದಿರ ಕಾಸರಗೋಡು ೭. ಶ್ರೀ. ಎಸ್. ಮಾಧವರಾವ್, ಮದ್ರಾಸ್.

**' ಓ ಕವಿಕುಲದ ಗುರುವೆ ! ' ಕವಿತೆಯ ವಿಮರ್ಶಕರು :**

೧. ಶ್ರೀ. ಗೋಪಾಲಕೃಷ್ಣ ಹುನಗುಂದ, ಮುಳುಂದ (ಮುಂಬಯಿ) ೨. ಶ್ರೀ. ವೆಂಕಟರಾಜ ಪುಣಿಂಚತ್ತಾಯ ಕಾಸರಗೋಡು. ೩. ಶ್ರೀ. ಕೆ. ಎಸ್. ಶರ್ಮಾ ' ವಾಣೀಮಂದಿರಂ ' ಕಾಸರಗೋಡು. ೪. ಶ್ರೀ. ವಿ. ಗೋಪೀನಾಥ, ಕೊಯಿಮತ್ತೂರು.

**' ನಾಡನುಳಿಸಲು ಕರೆ ' ಯ ವಿಮರ್ಶಕರು**

೧ ಶ್ರೀ. ಪ್ರತಾಪಸಿಂಗ ಅಮರಸಿಂಗ ಬ್ಯಾಳಿ, ಬೆಟಗೇರಿ ( ಗದಗು )

**' ಬಹಳ ದಿನಗಳ ಮೇಲೆ ' ವಿಮರ್ಶಕರು**

೧. ಶ್ರೀ. ಶಾಂತಿಮೂಲೆ ಶಂಕರನಾರಾಯಣಭಟ್ಟ ' ವಿದ್ವಾನ್ ' ಹಾತೂರು ( ದ. ಕೊಡಗು )

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕ ಮಂಡಲಿಯವರೇ ನೋಡಿ ತೀರ್ಮಾನವನ್ನು ಇತ್ತಿದ್ದಾರೆ :

ಒಟ್ಟಿನ ಮೇಲೆ ಈಸಲದ ವಿಮರ್ಶೆಗಳು ಹೆಚ್ಚು ಸಂಖ್ಯೆಯಲ್ಲಿ ಒಳ್ಳೆಯವಾಗಿರುವುದು ಸಂತೋಷದ ಸಂಗತಿ

ಕತೆ ಮತ್ತು ಕವಿತೆಗಳೆರಡನ್ನೂ ಕುರಿತ ಶ್ರೀ ಕೆ. ಎಸ್ ಶರ್ಮಾ ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಎಸ್. ಪಿ ಹಿರೇಮಠ ಮತ್ತು ಶ್ರೀ. ' ಎಮ್ಮೆಸ್ಕೆ ' ಅವರ ವಿಮರ್ಶೆಗಳು ಉತ್ತಮವಾಗಿವೆಯಾದರೂ ತುಂಬ ದೀರ್ಘವಾಗಿವೆ. ಶ್ರೀ. ವೆಂಕಟರಾಜ ಪುಣಿಂಚತ್ತಾಯ, ಶ್ರೀ. ದಾಮೋದರ ಐತಾಳ ಅವರ ವಿಮರ್ಶೆಗಳು ಚೆನ್ನಾಗಿವೆ. ಶ್ರೀ. ಶಾಂತಿಮೂಲೆ ಶಂಕರನಾರಾಯಣ ಮತ್ತು ಶ್ರೀ. ವೆಂಕಟರಾಜ ಪುಣಿಂಚತ್ತಾಯ ಅವರ ಕವಿತಾವಿಮರ್ಶೆಗಳೂ ಚೆನ್ನಾಗಿವೆ. ಶ್ರೀ. ಗೋಪಾಲಕೃಷ್ಣ ಹುನಗುಂದ ಅವರಲ್ಲಿ ವಿಮರ್ಶನ ಶಕ್ತಿ ಚೆನ್ನಾಗಿದೆಯೆಂಬುದು ಕಂಡುಬರುವುದಾದರೂ, ಪ್ರಸ್ತುತ ವಿಮರ್ಶೆಯಲ್ಲಿ ವಿಷಯಾಂತರವಾದಂತಿದೆ. ಮಿಕ್ಕುವೆಲ್ಲ ಸಾಮಾನ್ಯವಾಗಿವೆ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ ' ಹಾವು ' ಎಂಬ ಕತೆಯನ್ನಾಗಲಿ, ' ಮಾರಾಟ ' ಎಂಬ ನಗೆಯ ನಾಟಕವನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು.

**—ಸಂಪಾದಕರು**

# ಸಂಸ್ಕೃತಿ ಸಮರ

( ಸಣ್ಣಕಥೆಯ ವಿಮರ್ಶೆ )

**ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ ಕಾಸರಗೋಡು**

ಸ್ತ್ರೀ-ಪುರುಷ ಹೃದಯಾಯತ್ತವಾಗಿ ನೆಲೆನಿಲ್ಲುವ ಪ್ರೀತಿ-ಪ್ರೇಮಗಳೆಂದರೆ, ಅವು ಕೇವಲ ಲೌಕಿಕವ್ಯವಹಾರದಲ್ಲಿ ವಿರಾಮವನ್ನು ಬಲಿಯುವವುಗಳಲ್ಲ; ಅದು ಆಂತರಿಕ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಂದು ಉದಾತ್ತ ಆದರ್ಶವೆನ್ನಬಹುದು. ದಾಂಪತ್ಯ ಜೀವನದ ಸಾಮರಸ್ಯಕ್ಕೆ-ಪೂರ್ಣತೆಗೆ-ನಿಷ್ಕಳಂಕ ಚಿತ್ತವೃತ್ತಿಗೆ ಪ್ರೀತಿ-ಪ್ರೇಮಗಳ ಆಂತರಿಕ ಸಂಸ್ಕೃತಿಯು ನೆರವು ಬೇಕು. ಈ ಬಗೆಯ ಸಂಸ್ಕೃತಿಯು ದಾಂಪತ್ಯದಲ್ಲಿ ಕಳೆಯೇರಬೇಕಾದರೆ, ಜೀವನಾನುಭವ-ವಿದ್ಯೆ-ಸಮಾಜಜೀವನದ ರಹಸ್ಯ, ಉತ್ತಮ ಪರಂಪರೆ, ಪ್ರೇಮೇತಿಹಾಸದ ಮಾರ್ಮಿಕ ಹೃದಯಾನುಭಾವ ಇವುಗಳು ಸ್ತ್ರೀ-ಪುರುಷ ಜೀವನದಲ್ಲಿ ಹೆಜ್ಜೆಯನ್ನಿರಿಸಿರಬೇಕು; ಹಾಗುದಾರಿಯನ್ನು ನಿಷ್ಟೈಸಿರಬೇಕು. ಅದುವೆ ಅದರ ಪೂರ್ಣತೆ.

'ಸಂಸ್ಕೃತಿಸಮರ–' ಇದೊಂದು ಸಣ್ಣಕತೆ. ಕತೆಗಾರರಿಲ್ಲಿ ಇಬ್ಬಗೆಯ–ಅರ್ಥಾತ್ ಪಾಶ್ಚಿಮಾತ್ಯ ಮತ್ತು ಆರ್ಯಸಂಸ್ಕೃತಿಗಳನ್ನು ತಂದಿರಿಸಿ, ಅವುಗಳಿಗೊಂದು ನೂತನವಾದ ಸಮರವನ್ನನುಗೊಳಿಸಿ ಕಥಾಜೀವಿತವನ್ನು ಸಂಯೋಜಿಸಿದ್ದಾರೆ. ಈ ಯೋಜನೆಯಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಹಿಂದಿಕ್ಕಿನಿಂತ ಆರ್ಯ-ಸಂಸ್ಕೃತಿಯ ಭವ್ಯತೆಯನ್ನು ಸಾರಿದ್ದಾರೆ. ಇದುವೆ ಲೇಖಕರು ಸಾಧಿಸಿದ ಸಂಸ್ಕೃತಿಸಮರ.

ಹಾಗಾದರೆ ಈ ಕತೆಯ ವಸ್ತು ?—

ಇಂದಿರಾರಮಣನು ಎಂ. ಬಿ. ಬಿ. ಎಸ್. ಪರೀಕ್ಷೆಯನ್ನು ತೇರಿ, ಸಂಪ್ರದಾಯದಂತೆ ಇಂದಿರೆಯೆಂಬ ಮಹಿಳಾಮಣಿಯನ್ನು ವಿವಾಹಿತನಾಗಿ, ಉಚ್ಚ ವಿದ್ಯಾಭ್ಯಾಸಕ್ಕೆಂದು ಲಂಡನ್ನಿಗೆ ತೆರಳುವನು. ಅಲ್ಲಿ ತನ್ನ ಪೂರ್ವಪರಿಚಿತರಾದ ಮಿ. ಕ್ಲೇಟನ್ನರ ಮನೆಯಲ್ಲೇ ಉಳಕೊಂಡು, ತನ್ನ ಅತ್ಯಂತ ಪರಿಚಿತೆ ಮಿ. ಕ್ಲೇಟನ್ನರ ಪುತ್ರಿ ವಿಂಡರ್ ಇವರ ಜೀವಿತದೊಡನಾಡಿಯಾಗಿ ಬಾಳಿದನು. ಬಾಳಿನ ಅಂತರ್ವಾಹಿನಿಯಲ್ಲಿ ಅವರಿಬ್ಬರೂ ಸಮರಸರಾಗಿ, ಪರೀಕ್ಷೆ ಕಳೆದೊಡನೆ ದಾಂಪತ್ಯದ ಹೊಸ ತೆರೆಯನ್ನು ಬಾಳಿನಲ್ಲಿ ಸೆಳೆದುಕೊಂಡರು. ಬಳಿಕ ಪುನಃ ಇಂದಿರಾರಮಣನು ತನ್ನ ಊರಾದ ಮುಂಬಯಿಗೆ ಬಂದು, ತನ್ನ ಮಡದಿ ಇಂದಿರೆಗೂ, ವಿಂಡರಿಗೂ ಒಳಗುಟ್ಟನ್ನು ತಿಳಿಯಪಡಿಸದೆಯೆ, ಅವರಿಬ್ಬರನ್ನೂ ಬೇರೆಬೇರೆಯಾಗಿ ಇರಿಸಿ ತನ್ನ ನಾಟಕವನ್ನು ಹೆಣೆದನು. ಚಿಕಿತ್ಸಾವ್ಯಾಜದಿಂದ ವಿಂಡರನ್ನು ವಂಚಿಸಿ ಎಷ್ಟೋ ಬಾರಿ ಇಂದಿರೆಯ ಬಳಿ ಬಂದಿರುವುದು ಇಂದಿರಾರಮಣನ ಉಪಾಯವೆಂದಾದರೆ, ಈ ಉಪಾಯವು ಯಾವ ಬಗೆಯಲ್ಲೂ ಕುಸಿಯದಂತೆ, ಆಕೆಯ ವಿಶ್ವಾಸಕ್ಕಾಗಿ "ತಾನು ತೆರಳುವೆನು" ಎಂದಂದ ಸ್ಥಳದ ವಸ್ತುಗಳನ್ನು ತಂದೀಯುವುದದು ಮತ್ತೊಂದು ನಾಟಕತಂತ್ರದ ಅಂತರ್ನಾದವು. ವಿಂಡರಳಿಗೆ ಕೆಲವೊಂದು ಘಟನೆಗಳಿಂದ ಪತಿಯ ಕುರಿತು ಸಂದೇಹ ಬಂದರೂ, ಕಾರಣಾಂತರದಿಂದದು ನಿವಾರಣೆಯನ್ನೈದಿದರೂ, ಒಂದುದಿನ ಜರುಗಿದ ಸಮ್ಮೇಳನವು ಆಕೆಯನ್ನು ಮೊರೆದೆಬ್ಬಿಸಿತು. ಇಂದಿರಾರಮಣನ ಜೀವಿತದ ಮತ್ತೊಂದು ದೃಶ್ಯವನ್ನಾಕೆ ಮನಗಂಡಳು. ಅದೇ ದಿನ ಪತಿಯೊಡನೆ ಪ್ರತಿಭಟಿಸಿ, ಯಥಾರ್ಥ್ಯವನ್ನು ಹೊರಗೆಳೆದು, ಅಲ್ಲಗಳೆದು–ಪತಿ ತೋರಿದ ವಂಚನೆಗಾಗಿ ದಾವೆಯನ್ನು ಹೂಡಿದಳು. ಇಂದಿರಾರಮಣ, ಸಮಾಜದ ಪ್ರತಿಷ್ಠಿತ ವ್ಯಕ್ತಿ; ಎಲ್ಲರ ಮುಂದೆ ಕೋರ್ಟಿನಲ್ಲಿ ನಗೆಗೀಡಾಗಬೇಕಾದ ದುರ್ಘಟಸಂಧಿಯಲ್ಲಿ–ಆರ್ಯ ಮಹಿಳೆ ಇಂದಿರೆ, ಪತಿಯ ಮಾನವನ್ನು ಕಾದು, ವಿಂಡರಳ ವಿವಾಹವು ತನ್ನ ಒಪ್ಪಿಗೆಯಿಂದೆಂದು ಸಾರಿ, ಸ್ತ್ರೀಚಾರಿತ್ರ್ಯದ ಉದಾತ್ತ ಇತಿವೃತ್ತವನ್ನು ಪ್ರಕಾಶಗೊಳಿಸಿದಳು. ಕೋರ್ಟಿನಲ್ಲಿ ನೆರೆದ ಜನಜಂಗುಳಿ ಬೆರಗಾಗಿ. ಇಂದಿರೆಯ ಜೀವನವನ್ನು ಮುಕ್ತಕಂಠದಿಂದ ಪ್ರಕಾಶಿಸಿದಾಗ, ಲೇಖಕರು ಸಂಸ್ಕೃತಿಯ ಸಮರವನ್ನು ಕೊನೆಗೊಳಿಸಿರುವರು.

ಇದೀಗ ಸಂಸ್ಕೃತಿಸಮರದ ಇತಿವೃತ್ತವಾದರೆ, ಕಥಾಘಟಕಗಳೇನಿರಬಹುದೆಂಬುದನ್ನು ನೋಡುವುದಗತ್ಯ. ಕತೆಯು ಆದಿಯು ಲಂಡನಿಗೆ ತೆರಳುವ ಇಂದಿರಾರಮಣನ ಬೀಳ್ಕೊಡುಗೆಯ ಸಮಾರಂಭದಿಂದ ತೊಡಗಿ ಸಾಗುವುದು. ಅದರ ಮುಂದೆಯೆ ಲೇಖಕರು–ಲಂಡನಿನಿಂದ ಬಂದ ಮಿ. ಕ್ಲೇಟನ್‌ರ ಪತ್ರವೊಂದನ್ನು ಕಾಣಿಸಿದ್ದಾರೆ. ಮುಂದೆ ಕತೆಯು ಇಂದಿರಾರಮಣನು ಲಂಡನಿಗೆ ಸಾರಿ, ಕ್ಲೇಟನರಲ್ಲಿ ಉಳುಕೊಂಡು ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ವಿವಾಹಿತೆ ವಿಂಡರ್‌ರೊಡನೆ ಮುಂಬಯಿಗೆ ಹಿಂದಿರುಗುವಲ್ಲಿಗೆ ಒಂದು ಚುಕ್ಕೆಯನ್ನೀಯುವುದು. ಬಳಿಕಿನ ಭಾಗವು ಇಂದಿರಾರಮಣನು ಇಂದಿರೆಯನ್ನೂ-ವಿಂಡರಳನ್ನೂ ಬೇರೆಬೇರೆಯಾಗಿರಿಸಿಕೊಂಡು ಜೀವನ ಸಾಗಿಸುವುದನ್ನೂ, ಡಾಕ್ಟರರ ಪ್ರವಾಸಕಾಲದಲ್ಲಿ ವಿಂಡರಳ ಮುಂದೆ ಬಂದು ನಿಂತ ಅನೇಕ ಸಂದೇಹಪೂರಿತ ಘಟನೆಗಳನ್ನೂ–ಅವುಗಳ ಸಮುಚಿತ ನಿವಾರಣೆಯನ್ನೂ ಸಾಗಿಸಿದರೆ–ಉಪಸಂಹಾರದ ಮೊದಲ ಹಂತವು–ಸಮ್ಮೇಳನದಲ್ಲಿ ವಿಂಡರಳ ಮುಂದೆ ಬಂದು ನಿಂತ ಭೀಕರ ತಾಕಲಾಟವನ್ನೂ, ಇಂದಿರಾರಮಣ ಹಾಗೂ ವಿಂಡರ್‌ರೊಳಗೆ ನಡೆದ ಮಾರ್ಮಿಕಸಂಭಾಷಣೆಗಳನ್ನೂ ಸ್ಫುಟಗೊಳಿಸುವುದು. ಕೊನೆಯ ಹಂತವು ಕೋರ್ಟಿನ ವಿಚಾರಣೆಯ ಮುಂದೆ ನಿಂತ ಆರ್ಯ ಮಹಿಳೆ ಇಂದಿರೆಯ ಜೀವಿತದ ಶುಭ್ರಾಧ್ಯಾಯವನ್ನು ತೆರೆದು ತೋರುವುದು. ಇವಿಷ್ಟು, ಕಥಾನುಗುಣವಾಗಿ ಹೊಂದು ನಿಂತ ಸಾಮಾನ್ಯ ಸನ್ನಿವೇಶಗಳು.

ಇಂದಿರಾರಮಣನ ಬೀಳ್ಕೊಡುಗೆಯ ಸಮಾರಂಭದಿಂದ ತೊಡಗಿದ ಕತೆಯು—ಇಂದಿರಾರಮಣನನ್ನು ಮುಂಬಯಿಗೆ ತಲುಪಿಸುವವರೆಗೆ ಸಾಮಾನ್ಯವಾದ ಗತಿಯಿಂದಲೇ ಸಾಗಿದೆಯೆಂದು ಮಾತ್ರವಲ್ಲ ಆಕರ್ಷಣೆಯನ್ನುಳಿದ ಕುಂದನ್ನು ಸೇರಿಗೊಂಡು ಬಂದಿದೆಯೆನ್ನಬೇಕು

ಅರ್ಥಾತ್ ಈ ಸನ್ನಿವೇಶದಲ್ಲಿ ತಲೆಗಾಣಿಸಿದ ಆ ಒಂದು ಪತ್ರ ತೀರಾ ಅನಗತ್ಯವೆಂದು ತೋರುತ್ತದೆ. ಪಾಶ್ಚಿಮಾತ್ಯ ಕುಟುಂಬದ ಜೀವನಾಧ್ಯಾಯವನ್ನು ವ್ಯಕ್ತವಾಗಿ ಕಾಣಿಸುವ ಸಂದರ್ಭವನ್ನಿರಿಸಿಕೊಂಡ ಲೇಖಕರು, ಅದೇಕೆ ನಡುವಿನಲ್ಲಿ 'ಪತ್ರ'ವನ್ನು ಕಾಣಿಸಿದರೋ ತಿಳಿಯದು. ಕಥಾಮಾರ್ಗದಲ್ಲಿ ನೆಲೆಗೊಳ್ಳಬೇಕಾದ ಸೆಳೆತ, ಚರಿತ್ರ ಚಿತ್ರಣ, ಘಟನೆಗಳ ಎರಕ ಇವುಗಳಿಂದಲೇ ಈ ಸಂಧಿಗಳು ಜತೆಗೊಳ್ಳುವುವೆಂದಾದಾಗ, ತೀರಾ ಸಂಬಂಧಕ್ಕೆ ನಿಲುಕದ ಇಂತಹ ಪ್ರಸಂಗಗಳನ್ನನುಗೊಳಿಸುವುದು ರುಚಿರವಲ್ಲ. ಆದುದರಿಂದಲೆ ಆದಿಯಲ್ಲೆ ಕತೆ ಕುಸಿದಿದೆಯೆನ್ನಬೇಕು. ಇಲ್ಲಿ ಇಂದಿರಾರಮಣನು ತನ್ನ ಆಂಗ್ಲವಿವಾಹಕ್ಕೆ ಸಮ್ಮತಿಸಿದ ವಿಚಾರವು "ಕೃತಜ್ಞತೆಯ ಸಂಕೋಲೆ – ಮತ್ತು – ನಿರುಪಾಯಸಂಧಿ'ಗಳಲ್ಲಿ ಮರೆಯಾಗುವುದಿದ್ದರೂ, ಆಂಗ್ಲಕುಟುಂಬದ ಜೀವನದ ಮುಂದೆ, ಧೋರಣೆಯ ಮುಂದೆ ಅದೆಂತು ಮರೆಯಾಗಿರುವುದೆಂಬುದಕ್ಕೆ ಕಥಾಪ್ರಸ್ತಾರವು ಉತ್ತರಿಸುವುದಿಲ್ಲ. ನಡೆದ ಘಟನೆಯಿದು ಅಸ್ವಾಭಾವಿಕವಲ್ಲವಾದರೂ, ಇಂದಿರಾರಮಣನು ವಿವಾಹನಿರ್ಣಯದ ಮುಂದೆ, ಸಂಪ್ರದಾಯದ ಮುಂದೆ ಅದೆಂತು ಕೃತಜ್ಞತೆಗೆರವಾದನೆಂಬುದಕ್ಕೆ ಕತೆಯಾಗಲಿ, ಪತ್ರವಾಗಲಿ ಉಚಿತವಾಗಿ ಉತ್ತರಿಸುವುದಿಲ್ಲ—ಆದರೆ ಮುಂಬಯಿಗೆ ಬಂದಬಳಿಕ ಇಂದಿರಾರಮಣನ ಜೀವಿತಪ್ರಸಂಗವನ್ನನುಗೊಳಿಸುವಲ್ಲಿಂದ ಲೇಖಕರು ಕತೆಯನ್ನು ಜಾಗರೂಕತೆಯಿಂದ, ಆಕರ್ಷಣೆಯಿಂದ ಸೆಳೆದಿದ್ದಾರೆ. ಇಲ್ಲಿ ಪ್ರಥಮವಾಗಿ ವಿಂಡರ್ ಕಂಡ ದೃಶ್ಯಗಳವು ಸಂದೇಹವನ್ನು ತಂದೊಡ್ಡಿದರೆ, ಶುಭಾಶಯಗತಿಯಲ್ಲಿ ತುಂಬಿದ ನಗರದಲ್ಲಿ, ಮೋಟಾರಿನ ಶೀಘ್ರಗತಿಯಲ್ಲಿ ನಿವಾರಣೆಯನ್ನು ತರುವುದು ಸಹಜವಾಗಿದೆ. ಇದರ ಮುಂದೆ ಧರ್ಮಪ್ರಚಾರಕಳಾದ ಸಿಸ್ಟರ್ ನ್ಯೂಲಂಡ್ ಬಂದು—ವಿಂಡರಳನ್ನು ಕುರಿತು ಆಕೆಯ ಅತಿಥಿ ಮಹಿಳಾಮಣಿಯನ್ನು ವಿಚಾರಿಸಿದಾಗ ನಡೆದ ಸಂಭಾಷಣೆಯು, ಮೆಲುಮೆಲುವಾಗಿ ವಿಂಡರಳ ಹೃದಯವನ್ನು ಕುಲುಕುವುದು. ಸಿ.ನ್ಯೂಲಂಡ್ ತಾನು ಕಂಡ ದೃಶ್ಯಗಳನ್ನು, ಡಾಕ್ಟರರ ಪರಿಚಯವನ್ನು, ವಿಂಡರಳ ಮುಂದಿರಿಸಿದಾಗ ಆಕೆಯು ತ್ರಸ್ತಳಾದಂತೆ, ಪತಿಯನ್ನು ವಿಚಾರಿಸುವರೆ ನೆನೆದು ಸಿಸ್ಟರನ್ನು ಕಳುಹುವಳು. ಮುಂದೇನು ಇಂದಿರಾರಮಣ ಬಂದಾಗ, ಅವನ ಉಪಾಯವು ಮೈಸೂರಿನ ವಿಶಿಷ್ಟವಸ್ತುಗಳನ್ನೆ ತಂದಿತ್ತಾಗ ವಿಂಡರ್–ಸಿಸ್ಟರಿಗೆ ಭ್ರಾಂತಿಯೊಂದರಿಯುವುದು ಬಹು ಸುಂದರವಾಗಿದೆ. ಅಷ್ಟೊಂದು ನಿರ್ಲಿಪ್ತ ಮನೋಭಾವದ ಚಿತ್ರಣವನ್ನು ತುಂಬಿದ್ದಾರೆ ಕತೆಗಾರರು ಇಂದಿರಾರಮಣನ ಗತಿಯಲ್ಲಿ ! ಮುಂದಿನ ಘಟನೆಯೆಂದರೆ ವಿಂಡರಳ ಹೃದಯವನ್ನು ಭೀಕರವಾದ ಸುಳಿಗೆರವಾಗಿಸುವುದು. ಆರ್ಯಮಹಿಳಾ ಮಂದಿರಕ್ಕೆ ಆಮಂತ್ರಿತಳಾಗಿ ತೆರಳಿದ ಆಂಗ್ಲಮಹಿಳೆ ವಿಂಡರ್–ಅಲ್ಲಿಗೆ ಬಂದ ಗುರ್ಜರಮಹಿಳೆಯೊಡನೆ ಸಂಭಾಷಣೆಯನ್ನು ಕೈಕೊಳ್ಳುವುದು ಸ್ವಾಭಾವಿಕವಾಗಿದ್ದರೂ, ಪ್ರಕೃತ ಕಥೆಗದು ಅನಗತ್ಯ. ಆದರೆ ಈ ಸಂದರ್ಭದಲ್ಲಿ ನಾವು ಕಾಣುವ "ವಿಂಡರ್—"ನಾನು ಇನ್ನೂ ಅವಿವಾಹಿತಳಾಗಿಯೇ ಇದ್ದು ರೆಡ್‌ಕ್ರಾಸ್ ಸೊಸ್ಯಾಟಿಯ ಪ್ರಚಾರಕಾರ್ಯವನ್ನು ಕೈಕೊಂಡು ಬಂದಿರುವೆ" ಎಂಬೀ ಮಾತು ವಿಂಡರಳ ನಾಲಗೆಯಿಂದ ಅದೇಕೆ ಹೊರಬಿತ್ತೆಂದೇ ಅರ್ಥವಾಗುವುದಿಲ್ಲ. ಹಾಗೆ ಆಕೆ ವಿಚಾರವನ್ನು ಮರೆಸುವ ಅಗತ್ಯವೇನು? ವಿವಾಹಿತೆ ಎಂದರೆ ತಪ್ಪೇನು? ಯಾವ ಬಗೆಯ ಔಚಿತ್ಯಕ್ಕೂ ಇಲ್ಲೆಡೆಯಿಲ್ಲವೆಂದು ನನಗೆನಿಸುತ್ತಿದೆ. ಬಳಿಕ ಸಮಾರಂಭಕ್ಕೆ ಇಂದಿರಾದೇವಿಯು ಆಗಮಿಸುವಲ್ಲಿಂದ ಕಥೆಯು ನಿರರ್ಗಳವಾಗಿ ಹರಿಯುತ್ತದೆ. ಈ ಭಾಗದಲ್ಲಿ ನಾವು ಕಾಣುವ ಕಾತರೆ ವಿಂಡರ್, ಸುಶಾಂತೆ ಇಂದಿರೆ ಪೂರ್ಣರೂಪದಲ್ಲಿದ್ದಾರೆ. ತಾಕಲಾಟದಕ್ಕಿ ಬಿರುಸುಳಿಯಲ್ಲಿ ಸಿಕ್ಕ ವಿಂಡರ್ ಮನೆಗೆ ತೆರಳಿ, ಇಂದಿರಾರಮಣನನ್ನು ಪ್ರಶ್ನಿಸುವುದು.—ತಾನು ಇಂದಿರೆಯಿಂದ ಪಡೆದ ಫೋಟೋವನ್ನು ಕಾಣಿಸಿ ವಿಚಾರವನ್ನು ಹೊರಗೆಳೆವುಯುವುದು—ಬಹು ಮಾರ್ಮಿಕವಾಗಿದೆ. ಇಲ್ಲಿಯ ಪ್ರತಿಯೊಂದು ಮಾತುಗಳೂ ವ್ಯರ್ಥವಲ್ಲದ ಗತಿಯಲ್ಲೇ ನೆಲೆನಿಂತಿವೆ. ಆದರೆ ಮಾತಿನ ಮಧ್ಯದಲ್ಲಿ "ಇಂದಿರಾ–ಸದ್ಭಾವನೆಯಿಂದ ಪ್ರೇಮಪಾಲನೆಗಾಗಿ ಮಾಡಿದ ಅಗತ್ಯಾಚರಣೆಯೂ ಕ್ಷಮ್ಯವಾದುದಲ್ಲವೇ?" ಎಂಬ ಮಾತು ಇಂದಿರಾರಮಣನ ಹೃದಯವನ್ನು ಪೂರ್ಣವಾಗಿ ಕಾಣಿಸಿದ ಮೇಲೂ–ಒಂದೆರಡು ಮಾತುಗಳ ಮುಂದೆ "ವಿಂಡರ್ – ಹಾಗಾದರೆ ಅದರ ಸತ್ಯಸ್ವರೂಪವೇನು ?" ಎಂದಾಡುವುದು ಅಗತ್ಯವೆ? ಆ ಬಳಿಕ ಇಂದಿರಾರಮಣನು ಸತ್ಯವನ್ನು ಹೊರದೋರುವುದು ರಸಾವಹವೇ ?–ಮೊದಲ ಮಾತಿನ ಮುಂದೆಯೆ ವಿಂಡರಳ ಹೃದಯ ಸತ್ಯವನ್ನು ಕಾಣಬೇಕಿತ್ತು. ಅದಿಲ್ಲದೆ ಮಧ್ಯದಲ್ಲಿ ಕಾಣಿಸಿದ ಒಂದೆರಡು ಮಾತುಗಳು ಸಹಜತೆಯನ್ನು ಮೀರಿ ನಿಂತಿವೆ. ಹಾಗಿನಿಂತ ಮುಂದಿನ ಮಾತುಗಳು ಇಂದಿರಾರಮಣನ ನಿಶ್ಚಿತವನ್ನೂ, ವಿಂಡರಳ ಉದ್ವೇಗವನ್ನೂ ವ್ಯಕ್ತವಾಗಿ ಸಾರಿದರೆ, ವಿಂಡರಳಾಡುವ "ನಾನು ಧನಕ್ಕಾಗಿ ಬುಭುಕ್ಷಿತಳಾಗಿಲ್ಲ; ಶುದ್ಧಪ್ರೇಮ, ಸನ್ಮಾನ, ಸರಳವರ್ತನೆಗಾಗಿ ಬುಭುಕ್ಷಿತಳಿರುವೆ." ಎಂಬೀ ಮಾತು ಆಕೆಯ ಹೃದಯವನ್ನೂ, ಒಲವನ್ನೂ, ಕಾತರವನ್ನೂ, ಕೌಟುಂಬಿಕ ಗೌರವವನ್ನೂ, ಸಮಾಜದ ಗತಿಯನ್ನೂ ಪ್ರತಿಬಿಂಬಿಸುವುದು. ಈ ಭಾಗದಲ್ಲಿ ಬಂದ ಮಾತುಗಳೆಲ್ಲ ಮಾರ್ಮಿಕವಿದ್ದಂತೆ, ಕಥಾಗತಿಗೂ ಅನುಕೂಲವಾಗಿವೆ. ಆದರೆ ಈ ಮಧ್ಯದಲ್ಲಿ ಕಾಣಿಸಿದ ಮತ್ತೊಂದು "ಧನ–ಧನ ವಿದ್ಯುತ್ತುಗಳು ಎಂದೂ ಕೂಡಲಾರವು" ಎಂಬ ಮಾತು ಅರ್ಥವಾಗುವುದಿಲ್ಲ. ಇಲ್ಲಿ ಕತೆಗಾರರ ಆಶಯವೇನೋ!

ಮುಂದಿನ ಅಧ್ಯಾಯವೇ ಉಪಸಂಹಾರ. ಕಥಾಜೀವನಾಡಿ ! ಈ ಭಾಗಕ್ಕೆ ಅನುಕೂಲವಾಗುವಂತೆ, ಕಥೆಯ ಆದಿಯಲ್ಲೇ ವಿವಾಹಿತ ವಿಂಡರ್ ಮತ್ತು ಇಂದಿರಾರಮಣರ ಭಾವಚಿತ್ರದಲ್ಲಿ ಕತೆಗಾರರು 'ದಿನವನ್ನು' ಬರೆಯಲು ಮರೆಯಲಿಲ್ಲ. ಅದುವೆ ಮುಂದಿನ ತೀರ್ಮಾನದ ಮುನ್ನ, ದಾವೆಹೂಡಿದ ವಿಂಡರಳ ವಿಚಾರಣೆಯ ಮುನ್ನ ಇಂದಿರಾದೇವಿಯನ್ನು ಕೋರ್ಟಿನಲ್ಲಿ ತಲೆದೋರಿಸಿತು. ಈ "ದಿನ"ವೇ ಕಥೆಯ ಉಪಸಂಹಾರಕ್ಕೆ ಜೀವನಾಡಿ. ಈ ಭಾಗದಲ್ಲಿ ಕಾಣಿಸಿದ ಇಂದಿರಾರಮಣನ ಚಿತ್ತವೃತ್ತಿಯ ಚಿತ್ರಣವು ತುಸು ದೀರ್ಘವಾಗಿದೆ; ಆದರೆ ಇದರ ಮುಂದೆ ನಿಂತ ಇಂದಿರೆಯ ವಿಚಾರಣೆ ಆಕೆ ಉತ್ತರಿಸಿದ

ಮಾತು, ತನ್ನ ಸಮ್ಮತಿಯಿಂದಲೇ ಪತಿಯು ವಿಂಡರಳನ್ನು ಮದುವೆಯಾದುದೆಂದಾಡಿದ ಮಾತು ಆರ್ಯಮಹಿಳೆ ಇಂದಿರೆಯ ನಾಲಗೆಯನ್ನು ಪವಿತ್ರಗೊಳಿಸಿದಾಗ, ಆ ಸ್ತ್ರೀಹೃದಯವನು ಕೊಂಡಾಡದವರಾರು? ಉರಿದೆದ್ದ ಆಂಗ್ಲಮಹಿಳೆ ತಣಿದು ಒಲವಿನ ಸಾಗರದಲ್ಲಿ ತೇಲಾಡುವಂತಾದುದು ಆಶ್ಚರ್ಯವೆ? 'ವಿಂಡರ್'ಳು ಇಂದಿರೆಯಾಡಿದ "ಅಹುದು. ಮೊದಲಿನಂತೆಯೇ ಅಷ್ಟೇ ಪ್ರೀತಿಸುವೆ" ಎಂದಾಡಿದ ಮಾತಿನಲ್ಲೇ ಸಂಸ್ಕೃತಿ ಸಮರದಲ್ಲಿ ತನ್ನ ಸೋಲನ್ನು ಒಪ್ಪಿಕೊಂಡಿರಬೇಕು. ಇಂದಿರೆಯ ಮುಂದೆ ನಿಂತು ತನ್ನ ಭಾಗ್ಯವನ್ನು ಕೊಂಡಾಡಿರಬೇಕು. ಆ ಪ್ರಶಾಂತ ಮುಖದ ಅಂತರ್ಭಾಗದಲ್ಲಿ ನೆಲೆಗೊಂಡ ಪ್ರೀತಿಯ ಸೆಲೆಯನ್ನು ಕಂಡಿರಬೇಕು.—ಆದರೇನು, ಕತೆಯಿಲ್ಲಿಗೆ ಮುಗಿಯಲಿಲ್ಲ. ಸೇರಿದ ಜನ ಆಡುವ ಮಾತಿನ ಮಾಲೆಯನ್ನು ಪೋಣಿಸಿಕೊಂಡು ಕೊನೆಯನ್ನು ಕಾಣಿಸಿದೆ. ಈ ಸಂಸ್ಕೃತಿ ಸಮರದ ಪೂರ್ಣತೆಗೆ ಜನತೆಯಾಡುವ ಮಾತಿನ ಸರದ ಅಗತ್ಯವಿಲ್ಲ. ಕೋರ್ಟಿನ ತೀರ್ಮಾನವೇ ಕೊನೆಯನ್ನು ಕಾಣಿಸಿದಾಗ, ಕೋರ್ಟಿನ ಮುಂದೆಯೆ ಶ್ರೀದೇವಿ-ಭೂದೇವಿಯರ ಎರಕದಲ್ಲಿ ಇಂದಿರಾರಮಣ ಕಂಗೊಳಿಸಿದಾಗ, ಜಯಹಿಂದ್ ಕೇಳಿಸದೆ, ಮತ್ತೂ ಮುಂದುವರಿದುದು ಸುಂದರವಾಗಿಲ್ಲವೆನ್ನಬೇಕು.

ಅಂತೂ ಕತೆಯಿದು—ಒಂದು ಬಗೆಯ ನೂತನ ಮನೋವಿಶ್ಲೇಷಣಾತ್ಮಕ ಘಟನೆಯಿಂದ ಸೇರಿ ನಿಂತಿದೆ. ಉತ್ತಮ ಭಾಷಾಸಂಪತ್ತು, ಸುರುಚಿರ ವಸ್ತುಸಂಪತ್ತು ಇವುಗಳಿಂದೀ ಕತೆಯು, ಒಂದೆರಡು ಕಡೆಯಲ್ಲಿ ತುಸು ಕುಸಿದಿದ್ದರೂ—ಶ್ರಾವ್ಯವಾಗಿದೆಯೆನ್ನಬಹುದು. ಸಂಭಾಷಣೆಗಳ ವಿಧಾನದಲ್ಲಿ ಲೇಖಕರು ತೋರುವ ಕೆಲವು ವಿಚಾರಗಳು ಗಮನೀಯವಾಗಿವೆ; ಮಾತ್ರವಲ್ಲ ಸುಂದರವಾಗಿವೆ.

———

## "ಓ-ಕವಿಕುಲದ ಗುರುವೆ!"

(ಕವಿತೆಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ ಕಾಸರಗೋಡು

ಜಯಂತಿಯ ಕಾವ್ಯೋದ್ಯಾನದಲ್ಲಿ ಅರಳಿನಿಂತು ಸೌರಭ್ಯವನ್ನು ಸೂಸುವ ಕವಿತಾಕುಸುಮವೊಂದನ್ನು ಆಯ್ದುಕೊಂಡು, ಅದರ ಸವಿಯುಣ್ಣಲು ಬಗೆದಿರುವೆ; ಸವಿಯುಣಿಸಿನಲ್ಲಿ ನೆಲೆಗೊಂಡ ಅಮೃತಸಾರವೆಂದರೆ ಅದು ಪ್ರೇಮ! ವಿಶ್ವಕವಿ ಕಾಲಿದಾಸನು ತನ್ನ ದಿವ್ಯ ಪ್ರತಿಭೆಯಿಂದ ಲೋಕಕ್ಕೆ ಸಾರಿದ ಮಧುರರಸವಾಹಿನಿಯು ಪ್ರೇಮಾನುರಂಜಿತ ಹೃದಯತರಂಗಗಳು. ಅವು ಮೃದುವಾಗಿ ಓಲಾಡುವಾಗ ಜೀವನದ ಪೂರ್ಣಸ್ವರೂಪವನ್ನು ತಂದೀಯುವಾಗ—ಪ್ರೇಮ, ಜ್ಯೋತಿಯು ಕೈವರ್ತಕನಿಗೆ ಪಥದೀಪಿಕೆಯಾಗುವುದು. ಈ ಬಗೆಯ ಜೀವನವನ್ನು ತುಂಬುವ ಪ್ರೇಮಭಾವವನ್ನು ತನ್ನ ಕೃತಿಯಲ್ಲಿ ಕಾಲಿದಾಸನು ಒಡಮೂಡಿಸಿದುದರಿಂದಲೆ—ಅವನು ಕವಿಕುಲಗುರುವಾದನು; ರಸವತಿಯ ವರವಾದನು; ಹೆಚ್ಚೇನು, ಸೌಂದರ್ಯಕಲ್ಪತರುವಾದನು!—

ಪ್ರತಿಭಾವಂತ ಕವಿಗಳಾದ ಶ್ರೀ. ಆನಂದಕಂದರು ಈ ಬಾರಿಯ ಜಯಂತಿಯಲ್ಲಿ ಕಾಲಿದಾಸನನ್ನು ಆದರದಿಂದ ಕರೆದು, ಸಮಾಜದ ಒಳಿತನ್ನು ನೆನೆದು ಯಾಚಿಸಿದ್ದಾರೆ. ಮರೆಯಲಾಗದ ಮಾತದು. "ಭಾರತದಲಿ ಮತ್ತೆ ಜನಕೆ ಪ್ರೇಮಪಾಠ ಬೀರೈ. ಕಾರಿರುಳಿನ ದಾರಿಗರಿಗೆ ದಿವ್ಯದೀಪ ತೋರೈ, ಭಾರತೀಯ ಕಲಾಧ್ವಜಕೆ ನವವರ್ಣವ ತಾರೈ" ಎಂದಾಡಿದ ಕವಿಗಳು, ಸಮಾಜದ ಅಂತಶ್ಶಕ್ತಿಗೆ ಬೇಕಾಗುವ ಸಾಧನಗಳನ್ನೇ ಯಾಚಿಸಿದ್ದಾರೆ. ನಿಜವಾದ 'ಪ್ರೇಮ'ವನ್ನರಿಯದೆ ಪ್ರೇಮದ ಸೋಗಿನಲ್ಲಿ, ಹೃದಯಾನುಭಾವವಿಲ್ಲದ ಜೀವಿತಗತಿಯಲ್ಲಿ ಸಾಗುತ್ತಿರುವ—ಪ್ರೇಮದ ದುರವಸ್ಥೆಯನ್ನು ಕಂಡು ಮರುಗಿ ಅದರ ಭವ್ಯತೆಗಾಗಿ ಆಶಿಸಿದ್ದಾರೆ. ಪ್ರೇಮವಿಲ್ಲದ ಜೀವನ ಬರಡು. ಶುದ್ಧ ಪ್ರೇಮ, ಆಂತರಿಕ ಸಂಸ್ಕೃತಿಯ ತನಿರಸವನ್ನು ತುಂಬುವ ದಿವ್ಯ-ಪ್ರೇಮ ಇಂದಿನ ಕಾರಿರುಳಿನಲ್ಲಿ ಅಗತ್ಯವಿದೆ. ಕುರುಡುಜೀವನವು ಮುಂದೆ ಸಾಗಿ ಶುಭ್ರತೆಗೆ ಪಾತ್ರವಾಗಬೇಕಾದರೆ ದಿವ್ಯದೀಪವನ್ನು ಪ್ರೇಮವು ಕಾಣಿಸಬೇಕು. ಭಾರತೀಯ ಹೃದಯಮಂದಿರವನ್ನು ಬೆಳಗುವ, ಪ್ರೇಮಭಾವವನ್ನು ತಲೆಯೆತ್ತಿ ಕಾಣಿಸುವ ಕಲಾಧ್ವಜವು ನವವರ್ಣದಿಂದ ತುಂಬಬೇಕಾದರೆ, ಕಾಲಿದಾಸನು ತೋರಿದ ಅಂದಿನ ಸಮಾಜವನ್ನು ಬೆಳಗಿ ಮುಂದಿನ ಸಮಾಜದ ಭವ್ಯತೆಗೂ ತೋರಿದ ಸುವರ್ಣದೀಪಿಕೆ ಬೇಕು. ಆ ವಿಶುದ್ಧಪ್ರೇಮದ ಭಾವಲಹರಿ ಜೀವನದಲ್ಲಿ ತುಂಬಿ ಮೊರೆಯಬೇಕು. ಹಾಗೆಂದಾದರೆ ಅವನು ಕೊಟ್ಟ ಶಾಕುಂತಲ, ರಘುವಂಶ, ಕುಮಾರಸಂಭವ, ಮೇಘಸಂದೇಶಗಳು ಮಾನವತೆಯಲ್ಲಿ ದೈವತ್ವವನ್ನು ತುಂಬುವ ರಸತರಂಗಿಣಿಗಳಲ್ಲವೆ? ಅವನ ಸೊಲ್ಲು ಸುಧಾಬಿಂದುಗಳಲ್ಲವೆ? ಆದುದರಿಂದಲೆ ಕಾಲಿದಾಸನನ್ನು ಬೇಡಿದ್ದಾರೆ ಕವಿಗಳು.

ಮೊದಲ ಪದ್ಯದಲ್ಲಿ ಕವಿಗಳು ಕಾಲಿದಾಸನನ್ನು ಕರೆಯುವಾಗಲೇ—ಕಾಲಿದಾಸನ ಭವ್ಯಕೃತಿಗಳ ಸಾರವನ್ನದರಲ್ಲಿ ಕಾಣಬಹುದು. ರಸವತಿಯ ವರವಾಗಿ, ಸೌಂದರ್ಯಕಲ್ಪತರುವಾಗಿ ಕಾಲಿದಾಸನು ಆಮಂತ್ರಿಸಲ್ಪಟ್ಟಾಗ, ವಿಶ್ವಜೀವನದ ಸಾಮರಸ್ಯವನ್ನದರಲ್ಲಿ ಕಂಡರೆ ಎರಡನೆಯ ಪಾದದಲ್ಲಿ ವಿಶ್ವವ್ಯಾಪಿಯಾಗಿ ನಿಂತ ಕಾಲಿದಾಸ ಕೃತಿಗಳ ಸುಧೆಯನ್ನೂ ನಾವರಿಯಬಹುದು. ಅಲ್ಲೇ ಕಾಣಿಸುವ "ದಿವಿ-ಭುವಿಯ ಹುದುಗಿರುವುದು ಕವನದೊಳೇ— ಎಂಬುದನು ಲೋಕಕೊರೆವೆ"—"ಅವಿತು ನಿಂತು ಮಾನವತೆಯನ್ನು ಕರೆವೆ" ಎಂಬೀ ಮಾತಿನಲ್ಲಿ ಶ್ರೀ. ಆನಂದಕಂದರು ಕವಿತಾಹೃದಯವನ್ನೂ, ಕವಿಯ ಗುರಿಯನ್ನೂ, ದಿವಿ-ಭುವಿಯ ಮಧುರ ಸಾಮರಸ್ಯದಲ್ಲಿ ನೆಲೆಗೊಳ್ಳುವ ಮಾನವತೆಯ ರೂಪವನ್ನೂ ತೋರಿದಂತೆ—ಕಾಲಿದಾಸನ ಕೃತಿಗಳ ಮಹೋನ್ನತಿಯನ್ನು ಸಾರಿ ತೋರಿದ್ದಾರೆನ್ನಬೇಕು. ಈ ದೃಷ್ಟಿಯನ್ನು ಯಾರೂ ಅಲ್ಲಗಳೆಯರು. ಕಾಲಿದಾಸನ ಕೃತಿಗಳಲ್ಲಿ ಆ ಬಗೆಯ ಸಂಸ್ಕಾರ, ಮಹೋನ್ನತಿಯಿರುವುದರಿಂದಲೇ ಜೀವನಸೌಂದರ್ಯ ಕಲ್ಪ-

ತರುವಾಗಿದ್ದಾನೆ. ಮುಂದಿನ ಪದ್ಯದಲ್ಲಿ ಕಾಣಿಸುವ "ಒಂದೆ ಬಿರು-ನುಡಿಯ ಬಳಸಲಾರೆ; ಅಹುದು, ನೀ ಕಾಲಿದಾಸ; ಕೆಡುನುಡಿಯ ವನುಜವ್ಯಂದ ತರೆದು ಕೆಡಹಿ ಕಾಪಿಟ್ಟೆ, ಮಧುರವಚನಗಳ ನಲ್ಮೆಯಿಂದ "ಈ ಮಾತುಗಳು ಕಾಲಿದಾಸನ ಜೀವನವನ್ನೂ, ಕಾವ್ಯ-ಹೃದಯವನ್ನೂ ತೋರಸೂಸುವ ಸುವರ್ಣದರ್ಪಣದ ಚೌಕಟ್ಟು! ಈ ಚೌಕಟ್ಟಿನಲ್ಲಿ ಕಾಲಿದಾಸನ ಕೃತಿಗಳ ಸರಸತೆಯನ್ನೂ, ಸತ್ಯವನ್ನೂ ನಾವು ಕಾಣಬಹುದು; ಅಂತೆಯೆ "ಶಿವೇತರಕ್ಷತಯೇ" ಎಂಬ ಕಾವ್ಯ-ಪ್ರಯೋಜನವನ್ನೂ ಕಾಣಬಹುದು.

ಮುಂದಿನ ಪದ್ಯದ ಸೊಗಸು ಇನ್ನೊಂದು ವಿಧ: ಸ್ವಭಾವ-ಕಥನದಲ್ಲಿ ಕಾಲಿದಾಸನೆತ್ತಿದ ಕೈ. "ನುಡಿಗಡೆನಿತು ಕುಸುರು! ಮೊದ್ದು ಕೊರಡು ಮರಗಳಲಿ ತುಂಬಿಹೆಯೊ ತಳಿರನೆಳೆಯು ಹಸುರು" ಶ್ರೀ ಆನಂದಕಂದರ ಈ ಮಾತು ಸಹಜ ಸುಂದರ ಮಾತ್ರವಲ್ಲ; ಕೊರಡು-ಮರಗಳಲ್ಲಿ ತಳಿರನೆಳೆಯ ಹಸುರನ್ನು ಹಾಯಿಸುವ ಹೃದಯಂಗಮ ಚಿತ್ರ! ಈ ಚಿತ್ರವನ್ನು ಸ್ಫುಟಗೊಳಿಸುವಂತೆ ಅಲ್ಲೇ ಕೇಳಿಸುವ "ಮಾತಿನಿಂದೆ ಮಾನವರನು ನಿರ್ಮಿಸಿ ಅವರಿಗಿತ್ತೆ ನೀನುಸಿರು" ಎಂಬ ಮಾತು ಕಾಲಿದಾಸನ ಕಾವ್ಯದ ಹಿರಿಮೆಯನ್ನು ಸಾರಿದಂತೆ, ಸವಿದು ಉಂಡ-ಕವಿಹೃದಯಸಂಪತ್ತನ್ನೂ ಪ್ರತಿಭಾನಿಸುತ್ತಿದೆ. ನಾಲ್ಕೆ ನುಡಿಗಳಲ್ಲಿ ಶ್ರೀ. ಆನಂದಕಂದರು ಕಾಲಿದಾಸನ ಹೃದಯವನ್ನು ಮನಂಬುಗುವಂತೆ ಚಿತ್ರಿಸಿದ್ದಾರೆ.

ನಾಲ್ಕನೆಯ ಪದ್ಯವು ಕಾಲಿದಾಸನ ಕಾವ್ಯಧರ್ಮವನ್ನು ಸಾರುತ್ತಿದೆ "ಭಾರತಧರ್ಮದ ತಿರುಳನುಂಡು ತೇಗಿರುವ ಶಿಲ್ಪಕಾರಾ" ಎಂಬೀ ಮಾತು ಸಾರ್ವಕಾಲಿಕವಾಗಿ ನೆಲೆನಿಲ್ಲುವ ಸತ್ಯ. ಜೀವನಧರ್ಮವನ್ನರಿಯದೆ, ಅನುಭವವಿಲ್ಲದೆ, ಅನುಭಾವವಿಲ್ಲದೆ ಬರೆದ ಕಾವ್ಯ ಚಿರಂತನವಾಗಿ ನಿಲ್ಲದು ಇದಲ್ಲ ಕಾವ್ಯಧರ್ಮ. ಧರ್ಮದ ತಿರುಳುಂಡು ತೇಗಿದ ಶಿಲ್ಪಿಮಾತ್ರ "ಆದರ್ಶಧರ್ಮಿಗಳ ಪ್ರತಿಮೆಯ ಸಂಸಾರ ರಚಿಸುವನು—ಎಂದು ಶ್ರೀ. ಆನಂದಕಂದರಾಡಿದ ಮಾತು ಉತ್ತಮ ಸಮಾಜನಿರ್ಮಾಣವೆಸಗುವ, ಕಾವ್ಯಧರ್ಮಿಗಳಿಗೊಂದು ಎಚ್ಚರದ, ಹಿತದ ಮಾತು. ಮರೆಯಲಾಗದ ಮಾತಿದು. ಈ ಸತ್ಯವನ್ನೆ ಅವರು ವಿವರಿಸುತ್ತ "ಬುದ್ಧಿ ಹೃದಯಗಳ ಬೆಲೆಯುನರಿತು ಬೇಹಾರಗೈದೆ" "ಶುದ್ಧಹೃದಯವೇ ಮಾನವತೆಯ ಗುರಿ"ಎಂಬ ಅನುಭವಾಮೃತದಲ್ಲಿ ತೇಲಾಡಿಸಿದ್ದಾರೆ. ಕಾಲಿದಾಸನಲ್ಲಿ ಈ ಹಿರಿಮೆಯಿತ್ತು. ಇಂದಿನ ಜನತೆಯದನ್ನು ಕಾಣಬೇಕು. ಅದಕ್ಕಾಗಿಯೆ ಕವಿಗಳು ಕಾಲಿದಾಸನನ್ನು ಒಕ್ಕೊರಲ ನಾದದಿಂದ ದನಿಗೂಡಿದ್ದಾರೆ. ಕಾಲಿದಾಸನ ಹೃದಯವು ಕಲಾಧ್ವಜಕ್ಕೆ ನವವರ್ಣವನ್ನೀಯಲಿ!

ಮುಂದಿನ ಪದ್ಯದಲ್ಲಿ ರಘುವಂಶದ ಹಿರಿಮೆಯನ್ನೆತ್ತಿ ಮಾತಾಡಿ, ಕಾಲಿದಾಸನನುಗೊಳಿಸಿದ ಕಾರ್ಯವನ್ನು ಕೊಂಡಾಡಿ "ಆ ನಾಕದಿಂದ ಲೇಸೆ ಲೋಕವಿದು?" ಎಂದಾಡುವಂತಾದ ಭಾಗ್ಯವನ್ನು ತಿಳಿ-ಸಿರಿದ್ದಾರೆ. ಮುಂದಿನ ಪದ್ಯದಲ್ಲಿ ಮಾನವರು ನಿರ್ಜರರಾಗುವ ಬಗೆಯನ್ನು ಅದೆಷ್ಟು ಸರಸವಾಗಿ ರೂಪಿಸಿದ್ದಾರೆ! "ಪ್ರೇಮದಮೃತ-ಪಾನದಲಿ ನರರು ನಿರ್ಜರರಾಗುವುದಿದು ನೇಮ"—ಎಂಬೀ ಮಾತು ಸತ್ಯದ ಪರಾಕಾಷ್ಠೆಯ ನುಡಿ. ಕಾಲಿದಾಸನು ಸಾರಿದ ಪ್ರೇಮಧರ್ಮ-ವನ್ನು ಎತ್ತಿತೋರಿದ ಕವಿಗಳು, ಈ ಪ್ರೇಮಾಮೃತಪಾನದಿಂದ ನರರು ನಿರ್ಜರರಾಗುವರೆಂದಾಡುವುದಿದು ಸತ್ಯವಲ್ಲದೆ ಮತ್ತೇನು? ಈ ಪ್ರೇಮದಾರಾಮವೆ "ನರನಾರಿಯರೆದೆಗಳು" ಎಂದಾಗ, ವಿಶಾಲ-ವ್ಯಾಪ್ತವಾದ ಪ್ರೇಮದ ಗತಿಯನ್ನೂ ಪರಿಭಾವಿಸಬಹುದು. ಎಲ್ಲರಿಗೂ ಸುಲಭವಾಗಿ ಸಿಗುವ ಈ ಪ್ರೇಮವನ್ನು ದೊರೆಕಿಸಿಕೊಂಡು ಜೀವನದೊಡನೆ ಹೊಂದಿಕೊಂಡುಹೋಗುವ ಚೈತನ್ಯ ಮಾತ್ರ ಬೇಕು; ಅದೆಂತು ಸಾಧ್ಯ? ಮಾನವತೆಯನ್ನು ದೈವತ್ವದಲ್ಲಿ ತುಂಬಿಡುವ ಕ್ಷೇತ್ರದಲ್ಲಿ ಮಾತ್ರ ಸಾಧ್ಯ. ಇದಕ್ಕೆ ಬೇಕು ಹೃದಯಸಂಪತ್ತು. ಈ ಪದ್ಯದಲ್ಲಿ ಕವಿಗಳು ಉಪಯೋಗಿಸಿದ "ಸತ್ಯವಿಪೋಮ" ಎಂಬುದು ಗ್ರಾಹ್ಯವಿದೆ; ಮಧುರವಿದೆ; ಅರ್ಥಪೂರ್ಣವಿದೆ. ಸೋಮನ ತನಿಗದಿರು ನುಣ್ಣದಿರು ಜೀವನದ ಮೇಲೆ ಅದೆಷ್ಟು ಸುಖವಾಗಿ ಪ್ರಕಾಶಿಸುತ್ತಿದೆ? ಸರಿ. ಅಂತೆಯೆ ಕಾಲಿ-ದಾಸನ ಮುದ್ದಾದ ಕಾವ್ಯಗತಿ! ಈ ಗತಿಯನ್ನು ಒಂದೇ ಪದದಲ್ಲಿ ಹಾಡಿ ಮುಗಿಸಿದ ಶ್ರೀ. ಆನಂದಕಂದರ ಪದಪ್ರಯೋಗದ ಜಾಣ್ಮೆಯು ಶ್ಲಾಘ್ಯವಿದೆ; ಸುಶ್ರಾವ್ಯವಿದೆ. ಈ ಮಾತಿನ ಮುಂದೆ ಕವಿಗಳು ಕಾಲಿ-ದಾಸನ ಬಂಧದ ಸೊಗಸನ್ನೂ, ಅವನು ಚಿತ್ರಿಸಿದ ಮೇಘಸಂದೇಶ ಕಾವ್ಯದ ಸೊಗಸನ್ನೂ ಕಿರಿದಹ ಮಾತಿನಲ್ಲಿ ಹಿರಿದಾಗಿ ಮುಗಿಸಿ "ನೀನಹುದು ಪ್ರತಿಭೆಯಸ್ಕಂದ!" ಎಂದು ಸಾರಿದ್ದಾರೆ.

ವಿಶ್ವವಿಖ್ಯಾತವಾದ "ಅಭಿಜ್ಞಾನ ಶಾಕುಂತಲನಾಟಕ"ದ ಹಿರಿಮೆಯೆ ಉಪಸಂಹಾರ ಪದ್ಯದ ಮೊದಲ ಪದ್ಯದ ಹಿರಿಮೆ. ಕಾಲಿ-ದಾಸನು ಚಿತ್ರಿಸಿದ "ಶಕುಂತಲೆಯ ಪ್ರೇಮಮರ್ಮ ಬಲ್ಲನೇನು ಬ್ರಹ್ಮ?" ಸತ್ಯದ ಮಾತಿದು. ಅಷ್ಟೊಂದು ಅನ್ಯಾದೃಶವಾದ ಪ್ರೇಮ-ಗೀತವದು. ಬ್ರಹ್ಮನೂ ಅರಿಯಲಾರನೆಂದರೆ ಕಾಲಿದಾಸನ ಪ್ರೇಮ ಚಿತ್ರಕ್ಕೆ ಬೇರೊಂದು ಮಾತು ಬೇಕೆ? "ಬ್ರಹ್ಮ" ಈ ಮಾತಿನ ಶಕ್ತಿ ಪ್ರೇಮಧರ್ಮದ ಹಿರಿಮೆಯ ಸಾಕ್ಷಿ! "ಅನಸೂಯೆಯ ಸ್ನೇಹ-ಧರ್ಮ ಕವಿಯೆ ನಿನ್ನ ಕರ್ಮ"—ನಿಜವಿದು. ಅನಸೂಯೆಗೆಲ್ಲಿದೆ ದ್ವೇಷ? ಆಕೆಯ ಧರ್ಮ ಸ್ನೇಹವಲ್ಲದೆ ಮತ್ತೇನು? "ಪ್ರಿಯಂವದೆಯ ಚತುರ-ವಚನ ರಚನೆಗಿಲ್ಲ ಸರಿಸಮ"—ಇದೂ ಸತ್ಯದ ಮಾತು. ಪ್ರಿಯಂ-ವದೆಗೆ ಈ ಗುಣವಿಂಲೇ ಬೇಕಲ್ಲವೆ? ಇವೆಲ್ಲವೂ ಮಧುರವಾಗಿ ಕಂಗೊಳಿಸಬೇಕಾದರೆ, ಜೀವನೋನ್ನತಿಯನ್ನು ಸಾಧಿಸಬೇಕಾದರೆ, ಕವಿಗಳು ಕೊನೆಗೆ ತಂದಿರಿಸಿದ "ಗೌತಮಿಯಾ ಮನದರಳಿಕೆ ಎಂತ-ಹದದು—ಅನುಪಮ!" ಎಂಬ ಮಾತು ಬೇಕು. ಆ ಕಣ್ವಾಶ್ರಮದಲ್ಲಿ ಮೇಲೆ ಹೇಳಿದ ಶಕುಂತಲೆ, ಅನಸೂಯೆ, ಪ್ರಿಯಂವದೆ ಇವರ ಜೀವನಧರ್ಮವು ಭದ್ರವಾಗಬೇಕಾದರೆ "ಗೌತಮಿಯ ಮನದರಳಿಕೆ ಬೇಕು." ಇದು ಜೀವನಧರ್ಮ. ಜೀವನವು ಪೂರ್ಣವಾಗಬೇಕಾದರೆ ಪ್ರೇಮ, ಪ್ರೀತಿ, ಚತುರತೆ, ಮನದರಳಿಕೆಗಳು ಬೇಕು. ಇವನ್ನೇ ಕಾಲಿದಾಸನು ಲೋಕಕ್ಕಾಗಿ ನೀಡಿದ್ದಾನೆ. ಕಾಲಿದಾಸನ ಕಾವ್ಯ-

ರ್ಮವನ್ನರಿತ ಶ್ರೀ. ಆನಂದಕಂದರು ಅದೇ ತತ್ತ್ವವನ್ನೇ ನಾಲ್ಕು ಮಾತುಗಳಲ್ಲಿ ತುಂಬಿದ್ದಾರೆ.

ಇವೆಲ್ಲ ಸಂಪತ್ತನ್ನು ನೊಗೆದಿತ್ತ ಕವಿಕುಲಗುರುವಾದ ಕಾಲಿದಾಸನನ್ನು ಕವಿಗಳು ಆಮಂತ್ರಿಸಿದ್ದಾರೆ. ಆಶೆಯನ್ನು ತೋಡಿದ್ದಾರೆ. ಪ್ರಸ್ತುತ ಸಮಾಜವನ್ನು ಚೆಲುವಾಗಿ ರೂಪಿಸಿ–ಅದು ಭದ್ರವಾಗಿ ನೆಲಸಬೇಕಾದ ಮಾರ್ಗವನ್ನು ಕಾಲಿದಾಸನ ಸ್ತುತಿಯಿಂದ ಕಾಣಿಸಿದ್ದಾರೆ.

ಮಧುರಪದವಿನ್ಯಾಸ, ಮಧುರಭಾವಸಮಾವೇಶ, ಉಚಿತ ಪದಪ್ರಯೋಗ, ವಸ್ತ್ವನುಗುಣವಾದ ಲಲಿತಬಂಧ ಇವುಗಳಿಂದೀ ಕವಿತೆಯು ನನಗೆ ಇಷ್ಟವೆಂದು ಮಾತ್ರವಲ್ಲ; ಮೆಚ್ಚುಗೆಗೂ ಪಾತ್ರವಾಗಿದೆ. ಶ್ರೀ. ಆನಂದಕಂದರ ಕವಿತೆಗಳಲ್ಲಿ ಎಂದೂ ಅಗತ್ಯವಿಲ್ಲದ ಪದಗಳಿಗೆಡೆಯಿಲ್ಲ; ಅಗತ್ಯವಿಲ್ಲದ ವಿಷಯಕ್ಕೆ ಸ್ಥಾನವಿಲ್ಲ. ಹೇಳಬೇಕಾದ ಅಂಶವನ್ನು ಕಿರಿದಾಗಿ ನಿರೂಪಿಸುವ ಆ ಜಾಣ್ಮೆ ಈ ಕವಿಗಳಲ್ಲಿದೆ. ಅದಕ್ಕೆ ಈ ಕವಿತೆಯೇ ಸಾಕ್ಷಿ! ಆಕಾಶವಾಣಿ ಕೇಂದ್ರದಲ್ಲಿ ಬಿತ್ತರಿಸಲು ಯೋಗ್ಯವಾದ ಕಾರ್ಯಕ್ರಮವಿದು. ಮುಂದೆಯೂ ಇಂತಹ ಕವಿತೆಗಳು, ಜೀವನಧರ್ಮವನ್ನು ಸಾರುವ ಕವಿತೆಗಳು ಜನತೆಯ ಹೃದಯನ್ನಾಪ್ಯಾಯನಗೊಳಿಸಲಿ.

ಶ್ರೀ. ಆನಂದಕಂದರ ಮಧುರಕವಿತೆಗೆ–ತುಂಬಿದೆಯ ಸ್ವಾಗತವು

---

## ಸಂಪಾದಕೀಯ

( ೩೨೧ನೆಯ ಪುಟದಿಂದ ಮುಂದುವರಿದುದು )

ಇಂದು ಯಾವುದೋ ಒಂದು ಮೋಹಕ್ಕೆ ಒಳಗಾಗಿ 'ಮೈಸೂರು' ಎಂದೇ ಹೆಸರಿರಿಸಬೇಕೆಂದು ಹಟಹಿಡಿದಿರುವವರೂ ಅಂತರಂಗದಲ್ಲಿ, ತಾವು ಹಾಗೆನ್ನುತ್ತಿರುವುದು ಸರಿಯಾದುದಲ್ಲವೆಂದು ಯೋಚಿಸುತ್ತಿರಬಹುದು; ಏಕೆಂದರೆ, ಇವರಲ್ಲಿಯ ಬಹುಜನರು, ರಾಜಕೀಯ ಅವಿವೇಕಕ್ಕೆ ಒಳಗಾಗದಿರುವ ಹಿಂದಿನ ಕಾಲದಲ್ಲಿ, ಕರ್ನಾಟಕ ಏಕೀಕರಣಕ್ಕಾಗಿ ದುಡಿದವರಾಗಿದ್ದಾರೆ.

ಇಂದು ನಾವೆಲ್ಲರೂ ಪ್ರಜಾಪ್ರಭುತ್ವವನ್ನು ಒಪ್ಪಿದ್ದೇವೆ. ಎಂತಹ ದಿವ್ಯವ್ಯಕ್ತಿತ್ವದಿಂದ ಕೂಡಿದವರಾಗಿದ್ದರೂ ರಾಜರ ಪ್ರಭುತ್ವಕ್ಕೆ ಇನ್ನು ಅವಕಾಶವೇ ಇಲ್ಲ. ಕನ್ನಡ ಜನತೆಯೆಲ್ಲ ಕೂಡಿ, ತಮ್ಮ ರಾಜ್ಯವನ್ನು ಸಂಘಟಿಸಿ ಆಡಳಿತವನ್ನು ನಡೆಸಬೇಕಾಗಿದೆ. ಹೀಗಿರುವಾಗ ನಮ್ಮ ರಾಜ್ಯಕ್ಕೆ 'ಮೈಸೂರು' ಎಂಬ ಅರ್ಥವ್ಯಾಪ್ತಿಯಿಲ್ಲದ ಹೆಸರನ್ನು ಇರಿಸುವುದರಲ್ಲಿ ಯಾವ ಔಚಿತ್ಯ–ಪ್ರಯೋಜನಗಳಿವೆ? ಈ ಪ್ರಾದೇಶಿಕ ನಾಮವು ಬಹುಸಂಖ್ಯಾಕ ಕನ್ನಡಿಗರಿಗೆ ಆತ್ಮೀಯದ್ವೇನಿಸಲಾರದು. ಕನ್ನಡ ಜನತೆಯ ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಡುವುದರಲ್ಲಿಯೆ ಸಮಂಜಸತೆಯಿದೆ; ಸತ್ಪ್ರಯೋಜನವೂ ಇದೆ.

**—ಸಂಪಾದಕರು**

( ೩೦೪ನೆಯ ಪುಟದಿಂದ ಮುಂದುವರಿದುದು )

ಮರುದಿನ, ಲೇಖಕಗೋಷ್ಠಿಯು ನಡೆಯಿತು. ಲೇಖಕ. ಲೇಖಕ ಗೋಷ್ಠಿಯ ಅಧ್ಯಕ್ಷ ಶ್ರೀ. ನಿರಂಜನರ ಭಾಷಣ, ಸದ್ಯದ ಪರಿಸ್ಥಿತಿಯ ಸರಿಯಾದ ಅಭ್ಯಾಸದ ದ್ಯೋತಕವಾಗಿತ್ತು. ಮುಂದೆ ಶ್ರೀ ವ್ಹಿ. ಎಮ್. ಇನಾಮದಾರ, ಶ್ರೀ. ತ. ಶ್ರೀಕಂಠಯ್ಯ ಶ್ರೀ ನರಸಿಂಗರಾವ ಮಾನವಿಯವರು ಮಾತನಾಡಿದರು. ಸಣ್ಣ ಕತೆಗಳ ವಿಷಯವಾಗಿ ಕತೆಗಾರರಲ್ಲದ ಶ್ರೀ. ತ. ಶ್ರೀಕಂಠಯ್ಯನವರು ಮಾತನಾಡಿದರು. ಕಥೆಯು ಹೇಗೆ ಬಂದಿತು. ಕಥಾಶಬ್ದದ ವ್ಯುತ್ಪತ್ತಿ ಮುಂತಾದ ಅನಾವಶ್ಯಕ ಸಂಗತಿಗಳನ್ನು ಅಲ್ಲಿ ಕೂಡಿದ ಆಂತ ಜನತೆಯೆದುರು ತಿಳಿಸಿ ಹೇಳಿ, ಮುಂದೆ ಕೆಲವೆ ಜನ ಹಿರಿಯ ಕತೆಗಾರರ ಕತೆಗಳನ್ನು ಒಂದೊಂದಾಗಿ ವಿಮರ್ಶಿಸಿ, ಇನ್ನೂ ಕೆಲವು ಕತೆಗಳನ್ನು ವಿಮರ್ಶಿಸಲು ವೇಳೆ ಇಲ್ಲವೆಂದು ತಡಪಡಿಸಿದರು. ಅವರ ಭಾಷಣದೆಂದರೆ ವಾರಪತ್ರಿಕೆಗಳಲ್ಲಿ ಬಂದ ವಿಮರ್ಶೆಗಳ ಸಂಗ್ರಹದಂತಿತ್ತು. ಅನಂತರ ವಿಚಾರಸಾಹಿತ್ಯದ ಮೇಲೆ ಕೆಲವರು ಮಾತನಾಡಿದರು. ಶ್ರೀ. ಬಿ. ಹಿ. ರಾವ ಚಂದ್ರಶರ್ಮರ ಭಾಷಣ ಮಾತ್ರ ಮನನೀಯವಾಗಿತ್ತು. ತಮ್ಮ ಚಿಕ್ಕ ಭಾಷಣದಲ್ಲಿ ಅವರು ನವ್ಯಕಾವ್ಯವನ್ನು ಮನದಟ್ಟಾಗುವಂತೆ ಸಮರ್ಥಿಸಿದರು. ವಿಚಾರಸಾಹಿತ್ಯದ ಬಗ್ಗೆ ಶ್ರೀ. ಎಸ್. ಎಮ್. ಹುಣಶ್ಯಾಳರೂ ಮಾತನಾಡಿದರು—ಆ ಭಾಷಣ ಅವರಿಗಾದರೂ ತಿಳಿಯಿತೋ ಇಲ್ಲವೋ ದೇವರೇ ಬಲ್ಲ. ನಿರರ್ಥಕ ಭಾಷಣಗಳಿಗೆ ಒಂದು ಉತ್ತಮ ಮಾದರಿಯಾಗಿತ್ತು ಅವರ ಭಾಷಣ. ಮಧ್ಯಾಹ್ನ ಲೇಖಕರ ಪರಸ್ಪರ ಪರಿಚಯದ ಕಾರ್ಯಕ್ರಮವಾಯಿತು. ಆಯಿತು ಎನ್ನುವುದಕ್ಕಿಂತಲೂ 'ಶಾಸ್ತ್ರವಾಯಿತು' ಎಂದು ಹೇಳಿದರೆ ಒಪ್ಪಬಹುದು.

ಸಂಜೆ ಕಾವ್ಯವಾಚನವಾದ ನಂತರ, ಅಧ್ಯಕ್ಷರ ಸಮಾರೋಪ ಭಾಷಣ ತುಂಬಾ ಉದ್ಬೋಧಕವಾಗಿತ್ತು. ವಿಮರ್ಶಕನ ಆವಶ್ಯಕತೆ ಎಷ್ಟು ಇದೆ ಎಂಬುದನ್ನು ಮನಗಾಣಿಸಿದರು. ಹಾಗೇ ಸರಿಯಾದ ವಿಮರ್ಶಕ ಇನ್ನೂ ಹುಟ್ಟದಿದ್ದುದಕ್ಕೆ ವಿಷಾದಪಟ್ಟರು. ಸಾಹಿತ್ಯಲೋಕದಲ್ಲಿ ಸುಳಿದಾಡುವ ಶರ್ವಿಲಕರ ಬಗೆಗೂ ಅವರು ಮಾತನಾಡಿದರು.

ಮೂರು ದಿನಗಳಿಂದ ನಡೆದ ಸಮ್ಮೇಲನಸಮಾಪ್ತಿಯಾಯಿತು. ಅಸಮಾಧಾನದ ಅಂಶ ಸ್ವಲ್ಪವೇ ಇದ್ದರೂ, ಆನಂದದ ಅಂಶವೇ ಹೆಚ್ಚಿತ್ತು. ರಾಯಚೂರ ನಾಗರಿಕರ ದುಡಿತ ಮಾತ್ರ ಅವರ್ಣನೀಯವಾಗಿತ್ತು ಶ್ರೀ. ಭಗೀರಥರಾವ ದೇಶಪಾಂಡೆ,, ಶ್ರೀ. ರಾ. ಗು. ಜೋಶಿ ಶ್ರೀ. ತಿರುಮಲರಾವ, ಶ್ರೀ. ಸಂಗಮೇಶ್ವರ, ಶ್ರೀ. ಹುಣಶ್ಯಾ! ಇವರೆಲ್ಲ ಅವಿಶ್ರಾಂತವಾಗಿ ದುಡಿದರು. ಯಾವುದೇ ವಿಷಯದಲ್ಲಿ ಹೊರಗಿನಿಂದ ಬಂದ ಜನರಿಗೆ ತೊಂದರೆಯಾಗದಂತೆ ನೋಡಿಕೊಂಡರು—ರಾಯಚೂರಿನ ಜನ.

ಈ ಸಮ್ಮೇಲನವು ಬರಲಿರುವ ಸ್ವತಂತ್ರ ಕರ್ನಾಟಕಪ್ರಾಂತದ 'ಶ್ರೀಗಣೇಶ'! ಎಂತಲೇ ಈ ಸಮ್ಮೇಲನದಲ್ಲಿ ನಡೆದ ಕಾರ್ಯಕ್ರಮಗಳು, ಪಾಸಾದ ಠರಾವುಗಳು ಕಾರ್ಯರಂಗಕ್ಕಿಳಿಯುವ ಭರವಸೆ ಹೆಚ್ಚು ಎಂದೆನಿಸುತ್ತದೆ.

# ಸಾದರ ಸ್ವೀಕಾರ

೭೨ **ಯುಗಪುರುಷ** (ಮಾಸಪತ್ರಿಕೆಯ ದಸರಾ ವಿಶೇಷ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ಕೊಡತ್ತೂರು ಅನಂತ ಪದ್ಮನಾಭ ಉಡುಪರು, ಯುಗಪುರುಷ ಕಾರ್ಯಾಲಯ, ಕಿನ್ನಿಗೋಳಿ, ದ. ಕ. ಜಿಲ್ಲೆ. ಕ್ರೌ. ೧೬ದ ೮೨ ಪುಟಗಳು. ಬೆಲೆ ೧-೦-೦

೭೩ **ಶ್ರೀ. ಬುರ್ಲಿ ಬಿಂದುಮಾಧವರ ಸತ್ಕಾರಸಮಿತಿಯ** ವರದಿ. ಸತ್ಕಾರಸಮಿತಿಯ ಅಧಿಕಾರಿಗಳಿಂದ ಬಂದಿದೆ. ಡೆ. ಅ. ೨೦ ಪುಟಗಳು. ಸತ್ಕಾರ ನಿಧಿಗಾಗಿ ಹಣವನ್ನು ಕೊಟ್ಟವರ ಹೆಸರುಗಳ ಪಟ್ಟಿಯೂ ಇದರಲ್ಲಿ ಪ್ರಕಟವಾಗಿದೆ.

೭೪ ವಿಜಯಮಾಲಾ (ಸಚಿತ್ರ ಮಾಸಪತ್ರಿಕೆ) ಕ್ರೌ ಅ. ಸುಮಾರು ೫೦ ಪುಟಗಳು. ಬೆಲೆ ೩-೦-೦. ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ಕೆ. ಪಿ. ಮುತ್ತುಸ್ವಾಮಿ, ಸುಲ್ತಾನ್‌ಪೇಟೆ ಬೆಂಗಳೂರು

೭೫ **ಕವನಕುಸುಮ** (ಕವನಸಂಕಲನ) ಹೈದರಾಬಾದ್ ಕರ್ನಾಟಕದಲ್ಲಿಯ ಬೇರೆ ಬೇರೆ ಕವಿಗಳು ಬರೆದ ಆಧುನಿಕ ಕವನಗಳನ್ನು ಶ್ರೀ. ಎಂ. ಆರ್. ಬುದ್ಧಿವಂತ ಸೆಟ್ಟಿಯವರು ಸಂಕಲಿಸಿದ್ದಾರೆ. ಪ್ರಕಾಶಕರು ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ. (ಸುರಪುರ) ಕ್ರೌ. ಅ. ೫೨ ಪುಟಗಳು. ಬೆಲೆ ೦-೮-೦.

೭೬ **ಪುರಂದರ ದಾಸರ ಕೀರ್ತನೆಗಳು** (ಸಂಕಲನ). ಪ್ರಕಾಶಕರು ಉಪಾಧ್ಯಾಯ ಪ್ರಕಟನಾಲಯ, ಗೋಪಾಲಕೃಷ್ಣ-ಸ್ವಾಮಿ ಗುಡಿಯ ಬೀದಿ, ಚಿಕ್ಕಪೇಟೆ, ಬೆಂಗಳೂರು. ಕ್ರೌ. ಅ. ೧೯೦ ಪುಟಗಳು. ಬೆಲೆ ೦-೧೨-೦.

೭೭ **ಅಂಬುಜಾಕ್ಷಿ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ಎಸ್. ವೆಂಕಟರಾಜ ಅವರು. ಪ್ರಕಾಶಕರು ಶ್ರೀಕೃಷ್ಣ ಪ್ರಕಾಶನ, ಯೋಗೀಂದ್ರ ಸದನ, ಉಡುಪಿ ಕ್ರೌ. ಅ. ೧೦೦ ಪುಟಗಳು. ಬೆಲೆ ೦-೧೪-೦.

೭೮ **ಉಗಮ** (ಕವನಸಂಕಲನ). ಬರೆದವರು ಶ್ರೀಮಾನ್ 'ವಿನಾಯಕ'. ಪ್ರಕಾಶಕರು ಪ್ರೊ. ರಂ. ಶ್ರೀ. ಮುಗಳಿ, ವಿಲಿಂಗ್ಡನ್ ಕಾಲೇಜ್, ಸಾಂಗಲಿ. ಕ್ರೌ. ಅ. ೫೨ ಪುಟಗಳು. ಒಳ್ಳೆಯ ಪ್ರತಿಗೆ ಬೆಲೆ ೧-೦-೦; ಸಾದಾ ಪ್ರತಿಗೆ ೦-೧೨-೦.


## ದಿ ನ್ಯಾಶನಲ್ ಮ್ಯುಜಿಕಲ ಹಾಲ್
## ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್ ಮಾರಾಟಮಾಡುವವರು, ರಿಪೇರಿ ಮಾಡುವವರು.

**ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ**

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**


೭೯ **ಕನ್ನಡಮ್ಮಗೆ ಕಂಬನಿಯ ಕಾಣಿಕೆ** (ಎರಡು ಕವನಗಳ ಕಿರುಹೊತ್ತಿಗೆ.) ಬರೆದವರು 'ಶ್ರೀನಿಲಯ' ಕಾಸರಗೋಡು. ಪ್ರಕಾಶಕರು: ಶ್ರೀನಿವಾಸ ಮುದ್ರಣಾಲಯ, ಕಾಸರಗೋಡು. ಕ್ರೌ. ೧೬ ದ ೮ ಪುಟಗಳು. ಬೆಲೆ ?

೮೦ **ವೀರರಮಣಿ ಕರ್ಮದೇವಿ** (ಐತಿಹಾಸಿಕ ಕಥೆ) ಬರೆದವರು ಶ್ರೀ. ಕೆ. ಎಸ್. ಶರ್ಮ, ಕಾಸರಗೋಡು. ಪ್ರಕಾಶಕರು ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು ಕ್ರೌ. ಅ. ೧೬ ಪುಟಗಳು. ಬೆಲೆ ೦-೧-೦.

೮೧ **ಗುಲಾಬಿ ಗೊಂಚಲು.** (ಶಿಶುಗೀತಗಳ ಸಂಕಲನ) ಕವಿಗಳು ಶ್ರೀ. ಬಿ.ಎ. ಸನದಿ ಮತ್ತು ಶ್ರೀ. ಶ್ರೀಕಾಂತ ಶಮನೇವಾಡಿ, ಜಿಲ್ಲಾ ಬೆಳಗಾಂವಿ ಪ್ರಕಾಶಕರು: ಸ್ನೇಹಪ್ರಕಾಶನ, ಶಮನೇವಾಡಿ, ಜಿಲ್ಲಾ ಬೆಳಗಾಂವಿ. ಕ್ರೌ. ಅ. ೪೪ ಪುಟಗಳು. ಬೆಲೆ ೦-೫-೦.

೮೨ **ಮಲೆದೇಗುಲ** (ಪದ್ಯಸಂಕಲನ). ಬರೆದವರು ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರು. ಪ್ರಕಾಶಕರು: ಕಾವ್ಯಾಲಯ ಪ್ರಕಾಶನ, ಮೈಸೂರು. ಕ್ರೌ. ಅ. ೬೦ ಪುಟಗಳು. ಬೆಲೆ ೧-೦-೦.

೮೩ **ಸೋಹ್ರಾಬ್ ಮತ್ತು ರುಸ್ತುಂ** (ಕಥನಕವನ). ಬರೆದವರು ಶ್ರೀಮಾನ್ ಕೆ. ನರಸಿಂಹಶಾಸ್ತ್ರಿಯವರು. ಕಾವ್ಯಾಲಯ ಪ್ರಕಾಶಕರು, ಮೈಸೂರು. ಕ್ರೌ. ಅ. ೪೮ ಪುಟಗಳು. ಬೆಲೆ ೦-೧೨-೦.

೮೪ **ಗೋರಾ** (ಅನುವಾದಿತ ಕಾದಂಬರಿ). ಮೂಲ ಬಂಗಾಲಿ ಲೇಖಕರು ದಿವಂಗತ ಶ್ರೀ ರವೀಂದ್ರನಾಥಠಾಕೂರರು. ಅನುವಾದಿಕೆಯರು: ಶ್ರೀಮತಿ ಎಚ್. ವಿ. ಸಾವಿತ್ರಮ್ಮನವರು. ಕಾವ್ಯಾಲಯ ಪ್ರಕಾಶಕರು, ಮೈಸೂರು. ಕ್ರೌ. ಅ. ೪೧೬ ಪುಟಗಳು. **ಬೆಲೆ:** ೨-೪-೦.

# ದ್ವಿಶಕ್ತಿಯುತವಾದ……

# ಮೋಬಿಲ್‌ಗ್ಯಾಸ್

## ಉಪಯೋಗಿಸಿ ನಿಮ್ಮ ಹಣಕ್ಕೆ ಹೆಚ್ಚು ಎಂಜಿನ್ ಶಕ್ತಿಯನ್ನು ಪಡೆಯಿರಿ!

ಇಂಜಿನಿಯರುಗಳ ಅಭಿಪ್ರಾಯದಲ್ಲಿ ಕೊನೆಯಪಕ್ಷ ಐದು ಮುಖ್ಯ ಕಾರಣಗಳಿಂದ ನಿಮ್ಮ ಎಂಜಿನ್ನು ಶಕ್ತಿಯನ್ನು ಕಳೆದುಕೊಳ್ಳಬಹುದು. ಪೆಟ್ರೋಲಿನಲ್ಲಿ ಯಾವದೇ ಒಂದು ಆಡಿಟಿವ್ ಸೇರಿಸುವುದರಿಂದ ಈ ಎಲ್ಲ ತೊಂದರೆಗಳನ್ನೂ ನಿವಾರಣೆಮಾಡುವುದು ಸಾಧ್ಯವಿಲ್ಲವೆಂಬುದು ಪ್ರತ್ಯಕ್ಷ.

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸನ್ನು ಉಪಯೋಗಿಸಲು ಇಂದೇ ಶುರುಮಾಡಿರಿ. ಮೋಬಿಲ್ ಪವರ್ ಕಾಂಪೌಂಡನ್ನೊಳಗೊಂಡಿರುವ ಪೆಟ್ರೋಲು ಇದೊಂದೇ. ಈ ಕಾಂಪೌಂಡು ಯಾವುದೋ ಒಂದು ಸಾಮಾನ್ಯ ಆಡಿಟಿವ್ ಎಂದು ತಿಳಿಯಬೇಡಿರಿ. ಇದು ಅನೇಕ ಆಡಿಟಿವ್‌ಗಳ ಬಲವಾದ ಮಿಶ್ರಣ. ಇಷ್ಟು ಬಲವಾದ ಮಿಶ್ರಣವು ಇದುವರೆಗೆ ಪೆಟ್ರೋಲಿನಲ್ಲಿ ಸೇರಿಸಲ್ಪಟ್ಟೇ ಇಲ್ಲ.

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸು ಬೇರೆಯಾವ ಭಾಬದ ಪೆಟ್ರೋಲಿನಕಿಂತಲೂ ಹೆಚ್ಚು ಎಂಜಿನ್ ತೊಂದರೆಗಳನ್ನು ನಿವಾರಣೆ ಮಾಡುತ್ತದೆ. ನಿಮ್ಮ ಎಂಜಿನ್ನು ಹೆಚ್ಚು ಶಕ್ತಿಯನ್ನು ಕೊಡುತ್ತದೆ. ಮೋಬಿಲ್‌ಗ್ಯಾಸು ನಿಮ್ಮ ಹಣಕ್ಕೆ ಹೆಚ್ಚು ಮೌಲ್ಯವನ್ನು ಕೊಡುವುದರಿಂದ ಅದನ್ನು ಉಪಯೋಗಿಸಲು ಶುರುಮಾಡುವುದು ನಿಮಗೆ ಲಾಭಕರ.

ಹಾರುವ ಕೆಂಪು ಕುದುರೆಯ
ಗುರುತಿರುವಲ್ಲಿ ದೊರೆಯುತ್ತದೆ




ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ (ಕಂಪೆನಿಯ ಮೆಂಬರುಗಳ ಹೊಣೆಗಾರಿಕೆಯು ಮಿತಿಸಿದೆ)

Printed by N. A. Hoskeri at the Vijaya Press, Dharwar and published for the Proprietors Jayanti publications, by K. S. Betgeri at the Jayanti Office. Dharwar

ಫೆಬ್ರುವರಿ

೧೯೫೭

ಬೆಲೆ:

೮ ಆಣೆಗಳು

# ಸುವಿವೇಕದ ಭೋಜ್ಯ

೧

‘ಶಾಂತಿ ಬೇಕು, ಸುಖವು ಬೇಕು’ ಇಂತೆಲ್ಲರ ಕೂಗು....
ಎಂತು ದೊರೆಯಬೇಕು ಇಲ್ಲದಿರಲು ಮತಿಯ ಮಾಗು?
ಅನ್ನ, ಜ್ಞಾನ, ಅಭಯದಾನ, ಪ್ರೇಮವಿರಿಸಿ ಸಾಗು....
ವಿಷಮತೆಗಾಗುವುದೆ ಧೈರ್ಯ ಮೇಲೆತ್ತಲು ಮೂಗು?
ಅರಳಲಿ ಮಾನವತೆ— ಅರಳಿ ಮೆರೆಯಲಿ ಮಾನವತೆ!

೨

‘ತನಗಾಗಿಯೆ ತನ್ನಬದುಕು’ ಎಂಬುದದುವೆ ತ್ಯಾಜ್ಯ....
ಜನಮಂಗಲಯಜ್ಞಕಾಗಬೇಕು ತಾನು ಆಜ್ಯ!
ಎಲ್ಲರ ಎದೆಯುಣ್ಣಬೇಕು ಸುವಿವೇಕದ ಭೋಜ್ಯ....
ಸರ್ವೋದಯ, ಜಗದೊಳಿಂಮು ಶಾಂತಿಯ ಸಾಮ್ರಾಜ್ಯ!
ಅರಳಲಿ ಮಾನವತೆ— ಅರಳಿ ಮೆರೆಯಲಿ ಮಾನವತೆ!

ಪುಟ

JAYANTI

ಸಂಚಿಕೆ ೬

# ಈ ಸಂಚಿಕೆಯಲ್ಲಿ :

●


**ಕಗ್ಗತ್ತಲೆಯಲ್ಲಿ ಕರ್ನಾಟಕ ( ಸಂಪಾದಕೀಯ )**
ಸಂಪಾದಕರು .... .... .... ೩೨೧

**ನಾಡನಡೆ ( ಸಾಂದರ್ಭಿಕ ಟಿಪ್ಪಣಿಗಳು )**
' ಕಾಲಭೈರವ ' .... .... .... ೩೨೩

**ಇದೊಂದುಕತೆ ( ಜೀವನ ಚಿತ್ರ )**
ಶ್ರೀ. ಎಲ್. ಡಿ. ಸಭಾಹಿತ, ಮುಂಬಯಿ .... .... ೩೨೫

**ಕಾಲಿದಾಸಕವಿಯ ಗಾನಕಲಾಭಿಜ್ಞತೆ ( ಪೂರ್ವಾರ್ಧ )**
ಪಂಡಿತ ಬಿ. ಜಿ. ಹುಲಿಕವಿ ಬಿ. ಎ., ಎಸ್. ಟಿ. ಸಿ. ಬೆಳಗಾಂವಿ ೩೩೩

**ಅಶೋಕಚಕ್ರ ( ಗೀತರೂಪಕ )**
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ .... .... ೩೩೬

**ಮಹಾತ್ಮಾಗಾಂಧಿ ( ಮಕ್ಕಳಿಗಾಗಿ ಪದ್ಯ )**
ಶ್ರೀ. ಕೆ. ವೆಂಕಟರಾವ್, ಉಡುಪಿ .... .... ೩೪೫

**ನೀನು ನನಗೆ ಏನಾಗಬೇಕು ? ( ವೈಜ್ಞಾನಿಕ ಲಘುಪ್ರಬಂಧ )**
ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ. ಹೈದರಾಬಾದ್ ೩೪೬

**ಆ ದೀಪದ ಕಂಭ ! ( ಸಣ್ಣಕತೆ )**
ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ .... ೩೪೯

**ಸುಪ್ರಭಾತದ ಬಯಸಿರಿ ( ಕವನ )**
ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ., ಬಿ. ಟಿ. ಗುಳೇದಗುಡ್ಡ ೩೫೩

**ಉಗಮ ( ಕವನಸಂಕಲನದ ವಿಮರ್ಶೆ )**
ಶ್ರೀ. ಆರ್. ಜಿ. ಕುಲಕರ್ಣಿ ( ಬೆಸಕಟ್ಟಿ ), ಧಾರವಾಡ .... ೩೫೪

**ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ ( ' ಮರಾಟ'ದ ವಿಮರ್ಶೆ )**
ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು .... ೩೫೮

**ಸಾದರಸ್ವೀಕಾರ** ಹೊದಿಕೆಯ ೩ನೆಯ ಪುಟ

# ಜಯಂತಿ

ಸಂಪುಟ ೧೮ ಸಂಚಿಕೆ ೯

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವವರ
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.


# ಸಂಪಾದಕೀಯ

●

## ಕಗ್ಗತ್ತಲೆಯಲ್ಲಿ ಕರ್ನಾಟಕ

ನಮ್ಮ ರಾಜಕೀಯ ಧುರೀಣರ ಸ್ವಾರ್ಥಮೂಲವಾದ ಅವಿವೇಕ ಯಾವ ಯಾವ ಅನರ್ಥಗಳನ್ನು ತಂದು ಮುಂದೆ ಇರಿಸೀತೋ ತಿಳಿಯದಂತಾಗಿದೆ.

'ಇನ್ನೇನು, ಕನ್ನಡಿಗರಿಗೆ ಕರ್ನಾಟಕ ಪ್ರಾಂತ್ಯ ಬಂದೇ ಬಂದಿತು' ಎಂಬ ಆಶೆಯಿಂದ ನೋಡುತ್ತಿರುವಾಗ, ಜನರ ಕಣ್ಣೆದುರು ಒಂದು ಕಗ್ಗತ್ತಲೆಯ ತೆರೆಯು ಬಂದು ಮುಸುಕಿಬಿಟ್ಟಿದೆ. ಆದರಿಂದ ನಮಗೆ ದೊರೆಯುವುದೆಂದಿದ್ದ ಕರ್ನಾಟಕದ ಕಬಂಧವೂ ಕಾಣದಂತಾಗಿದೆ.

ನಮ್ಮ ರಾಷ್ಟ್ರದ ಮುಖ್ಯಪ್ರಧಾನರು ರಾಜ್ಯದ ಪುನರ್ಘಟನಾ ಸಮಿತಿಯ ನಿರ್ಣಯವನ್ನು ಸಾರಿದದಿನವೇ, ಕನ್ನಡಿಗರಿಗೆ ಎಲ್ಲೆಲ್ಲಿ ನೋಡಿದರೂ ನಿರಾಶೆಯೇ ಕಾಣತೊಡಗಿತು. ನೂರರಲ್ಲಿ ೭೦ಕ್ಕಿಂತ ಹೆಚ್ಚು ಜನ ಕನ್ನಡಿಗರಿರುವ ಜತ್ತ, ಅಕ್ಕಲಕೋಟೆ ಭಾಗಗಳೂ ಮಡಕಸಿರಾ, ಕೃಷ್ಣಗಿರಿ, ಹೊಸೂರು ತಾಲ್ಲೂಕುಗಳೂ ಕನ್ನಡಿಗರಿಗೆ ದೊರೆಯುವುದು ಗೊತ್ತಾಯಿತು; ಇಷ್ಟೇ ಅಲ್ಲ, ಕನ್ನಡಿಗರ ಕೈಯಲ್ಲಿಯೇ ಇರುವ— ಕನ್ನಡಿಗರೇ ಬಹುಸಂಖ್ಯಾಕರಾಗಿರುವ—ಕಾಸರಗೋಡು ತಾಲ್ಲೂಕು ಕನ್ನಡಿಗರ ಕೈಬಿಟ್ಟುದು ತಿಳಿಯಿತು. ನಿಸ್ಸಂದಿಗ್ಧವಾಗಿ ಕನ್ನಡಿಗರವೇ ಆಗಿದ್ದ ಬಳ್ಳಾರಿಜಿಲ್ಲೆಯ ಮೂರು ತಾಲ್ಲೂಕುಗಳ ನಿರ್ಣಯವು, ಸಂದೇಹವನ್ನು ಹೊತ್ತುಕೊಂಡು ಕುಳಿತಿತು. ಎಲ್ಲಕ್ಕಿಂತ ಹೆಚ್ಚಿನ ದುರ್ದೈವದ ಸಂಗತಿಯೆಂದರೆ: ಮುಂಬರುವ ಕನ್ನಡಿಗರ ರಾಜ್ಯವು 'ಕರ್ನಾಟಕ' ಎಂಬ ಸರ್ವಜನ ಪ್ರಿಯವಾದ ಪವಿತ್ರವಾದ ಹೆಸರನ್ನು ಕಳೆದುಕೊಂಡುದೂ ಗೊತ್ತಾಯಿತು. ಮರುದಿನವೇ ಬೆಳಗಾಂವಿಯಲ್ಲಿ ನಡೆದ ಪುಂಡಾಟಿಕೆಯಿಂದ ಅಲ್ಲಿಯ ಕನ್ನಡಿಗರು ಪಟ್ಟ ಕಷ್ಟ ನಷ್ಟಗಳ ವರ್ತಮಾನವೂ ಹವೆಯಲ್ಲಿ ಹರಡಿತು ಇಷ್ಟೆಲ್ಲವಾದರೂ ಎಂತಹದೇ ಆಗಲಿ, ಯಾವ ಹೆಸರಿನದೇ ಆಗಲಿ, ಕನ್ನಡಿಗರ ಸ್ವತಂತ್ರ ರಾಜ್ಯವೊಂದು ನಿರ್ಮಾಣಗೊಂಡು ನಿಲ್ಲುವುದೇ ?—ಎಂದರೆ, ಈಗ ಅದೂ ಬೇರೆಯ ಸ್ವರೂಪವನ್ನು ಪಡೆಯಬಹುದಾದ ಮಾತುಗಳು ಕೇಳತೊಡಗಿವೆ.

'ಕೋಣನೆರಡುಂ ಹೋರೆ ಗಿಡುವಿಂಗೆ ಮೃತ್ಯು' ಎಂಬಂತೆ, ಮುಂಬಯಿನಗರದ ಸಲು-ವಾಗಿ ಮಹಾರಾಷ್ಟ್ರದ ರಾಜಕೀಯ ನಾಯಕರಿಗೂ ಮುಂಬಯಿಯ ಗುಜರಾತೀ ನಾಯಕರಿಗೂ ನಡೆದ ಹೋರಾಟ, ರಾಜ್ಯಪುನರ್ಘಟನೆಯ ವಿಚಾರವನ್ನು ಬೇರೆಯ ದಾರಿಗೇ ತಿರುಗಿಸಿರುವುದು. ಇವರ ಹೋರಾಟದ ಪರಿಣಾಮವಾಗಿ ಮಹಾರಾಷ್ಟ್ರದ 'ವೀರ' ರಿಂದ ಗುಜರಾತೀ ಸಿರಿವಂತ ಸೆಟ್ಟಿ-ಗಳ ಸಂಪತ್ತಿನ ಸುಲಿಗೆಯಾಯಿತು; ಮನೆ-ಮಾರುಗಳ ಹೋಳಿ ನಡೆಯಿತು. ಪುಂಡಾಟಿಕೆಯನ್ನು ತಗ್ಗಿಸಬೇಕೆಂಬ ಉದ್ದೇಶದಿಂದ ಸರಕಾರವು ಪೋಲೀಸರಿಂದ ಗುಂಡಿನ ಮಳೆಯನ್ನು ಸುರಿಯಿ-ಸಿತು. ಈ ಗುಂಡಿನ ಮಳೆಯಿಂದ ಸತ್ತುಹೋದವರಲ್ಲಿ ನಿಜವಾದ ಅಪರಾಧಿಗಳೆಷ್ಟೋ, ನಿರಪ-ರಾಧಿಗಳಾದ ಪ್ರೇಕ್ಷಕರೆಷ್ಟೋ! ಅಂತೂ ಮುಂಬಯಿಯಲ್ಲಿ ಒಂದು ಮಹಾಪ್ರಳಯವೇ ನಡೆಯಿತು.

ಈ ಪ್ರಳಯದ ತರುವಾಯ, ನಮ್ಮ ರಾಜಕೀಯನಾಯಕರ ಬುದ್ಧಿ ಬೇರೆ ಕಡೆಗೆ ಓಡ-ತೊಡಗಿದುದರಿಂದ, ರಾಜ್ಯಪುನರ್ಘಟನೆಯ ಮಾತು ಮಂಜಿನಲ್ಲಿ ಹುದುಗುತ್ತ ಹೊರಟಿದೆ. ದ್ವಿ-ಭಾಷಾ, ತ್ರಿಭಾಷಾ ರಾಜ್ಯಗಳನ್ನು ರಚಿಸುವ ಮಾತುಗಳು ರಭಸದಿಂದ ಹಾರಾಡತೊಡಗಿವೆ. ಕನ್ನಡಿಗರಿಗೆ ಇದರಿಂದ 'ಕೈಗೆ ಬಂದ ತುತ್ತು ಬಾಯಿಗೆ ಬೀಳದೆ ಹೋಗುವುದೇನೋ!' ಎಂಬ ಶಂಕೆ-ಚಿಂತೆಗಳಿಂದ ಕುದಿಯುತ್ತ ಕೂಡುವ ಸಂದರ್ಭ ಒದಗಿಬಂದಿದೆ.

ಮದ್ರಾಸ-ಕರ್ನಾಟಕ-ಕೇರಳ ರಾಜ್ಯಗಳನ್ನು ಸೇರಿಸಿ ದಕ್ಷಿಣಪ್ರದೇಶವನ್ನು

ನಿರ್ಮಿಸಬೇಕೆಂಬ ಸೊಲ್ಲು ಒಂದು ಕಡೆಯಿಂದ ಕೇಳಬರುತ್ತಿದ್ದರೆ, ಆಂಧ್ರ-ಕರ್ನಾಟಕಗಳನ್ನು ಒಂದುಗೂಡಿಸಿ ಒಂದು ಸಂಯುಕ್ತ ರಾಜ್ಯವನ್ನು ರಚಿಸಬೇಕೆಂಬ ಕೂಗು ಇನ್ನೊಂದು ಕಡೆಯಿಂದ ಕೇಳಬರತೊಡಗಿದೆ. ಇಂದು ಅಧಿಕಾರಸೂತ್ರಗಳನ್ನು ಕೈಯಲ್ಲಿ ಹಿಡಿದಿರುವ ನಮ್ಮ ರಾಜಕೀಯ ನಾಯಕರು, ಪಕ್ಷದ ಶಿಸ್ತಿಗಾಗಿ ತಮ್ಮ ಸ್ವತಂತ್ರ ವ್ಯಕ್ತಿತ್ವವನ್ನು ಕಳೆದುಕೊಂಡಿದ್ದಾರೆ. 'ಇವರ ಅಧಿಕಾರ ಹೋಗಲಿ' ಎಂದು ಆಶಿಸುವ ವಿರೋಧಿಪಕ್ಷದ ಮುಂದಾಳುಗಳು 'ಸವತಿಯ ಗಂಡ ಸಾಯಲಿ' ಎಂಬ ದುರ್ಭಾವನೆಯಲ್ಲಿ ಇದ್ದಾರೆ ಹೊರತು, ಸ್ವತಂತ್ರ ಕರ್ನಾಟಕ ರಾಜ್ಯದ ಗತಿಯೇನೆಂಬ ವಿಚಾರವನ್ನೇ ಅವರು ಮಾಡುತ್ತಿಲ್ಲ. ಇಂತಹ ಜನರ ಅವಿವೇಕ ಧೋರಣೆಗಾಗಿಯೇ 'ಕರ್ನಾಟಕ'ವು 'ಮೈಸೂರು' ಎಂಬ ಅರ್ಥಹೀನವಾದ ಹೆಸರನ್ನು ಪಡೆಯಿತು. ಅವರೇ ಈಗ ಕರ್ನಾಟಕವು ದ್ವಿಭಾಷಾ-ತ್ರಿಭಾಷಾ ಸಂಯುಕ್ತ ರಾಜ್ಯದಲ್ಲಿ ಕೂಡಿಹೋಗಬಹುದೆಂದು ಸಂತೋಷದಿಂದ ಕುಣಿಯುತ್ತಲಿದ್ದಾರೆ.

ದ್ವಿಭಾಷಾ-ತ್ರಿಭಾಷಾ ಸಂಯುಕ್ತ ರಾಜ್ಯಗಳನ್ನೇ ರಚಿಸುವುದಾದಲ್ಲಿ, ಈಗಿರುವ ರಾಜ್ಯವ್ಯವಸ್ಥೆಯನ್ನು ಹದಗೆಡಿಸಬೇಕಾದರೂ ಏಕೆ? ಆಡಳಿತದಲ್ಲಿ ಪ್ರಾದೇಶಿಕ ಭಾಷೆಗೆ ಒಂದು ಪ್ರಮುಖವಾದ ಸ್ಥಾನವಿರಬೇಕು! ಈಗಿರುವ ದ್ವಿಭಾಷಾ-ತ್ರಿಭಾಷಾತ್ಮಕ ರಾಜ್ಯ ವ್ಯವಸ್ಥೆಯಲ್ಲಿ ಕನ್ನಡಭಾಷೆಗೆ ಯೋಗ್ಯವಾದ ಸ್ಥಾನವಿರಲಿಲ್ಲವೆಂತಲೇ ಕನ್ನಡಿಗರು ಸ್ವತಂತ್ರ ಕರ್ನಾಟಕ ಪ್ರಾಂತಕ್ಕಾಗಿ ೪೦-೪೫ ವರ್ಷಗಳಿಂದಲೂ ಚಳವಳಿ ಮಾಡುತ್ತ ಬಂದಿದ್ದಾರೆ. ಆ ಚಳವಳಿಯ ಫಲ ಕೈಗೆ ಬರುವುದೆಂಬ ಆಶೆಯಲ್ಲಿ ಅವರು ಇರುವಾಗ 'ಎಣ್ಣೆ ಬರುವ ಹೊತ್ತಿಗೆ ಗಾಣದ ದಿಂಡು ಮುರಿಯಿತು' ಎಂಬ ಅವಸ್ಥೆ ಬಂದು ಕುಳಿತಿದೆ. ಇನ್ನೂ ಮನದಲ್ಲಿ ಮೂಡುತ್ತಿರುವಾಗಲೇ ಕರ್ನಾಟಕ ರಾಜ್ಯದ ಚಿತ್ರವು ಮಸುಕಾಗತೊಡಗಿದೆ. ಯಾರದೋ ಅವಿವೇಕದ ಕಟುಫಲವನ್ನು ಕನ್ನಡಿಗರು ತಿನ್ನಬೇಕೆ? ಇದು ಅನ್ಯಾಯವಲ್ಲವೆ?

ಕರ್ನಾಟಕರಾಜ್ಯ ಈಗ ಯಾವ ಸಂಯುಕ್ತ ಪ್ರದೇಶಕ್ಕೆ ಸೇರಿಕೊಂಡರೂ ಅದರ ಸಂಸ್ಕೃತಿವಿಕಾಸಕ್ಕೆ— ಆರ್ಥಿಕಸಮೃದ್ಧಿಗೆ— ಅವಕಾಶವೇ ಇಲ್ಲದಂತಾಗುವುದು. ದಕ್ಷಿಣಪ್ರದೇಶದಲ್ಲಿ ಸೇರಿಕೊಂಡರೆ ತಮಿಳರು ಪ್ರಬಲರಾಗಿರುವರು. ಆಂಧ್ರರೊಡನೆ ಕೂಡಿಕೊಂಡರೆ, ಅವರ ಸಂಖ್ಯಾಬಾಹುಲ್ಯದ ಮುಂದೆ ಕನ್ನಡಿಗರ ಸಂಖ್ಯೆ ಕಡಿಮೆಯಾಗುವುದು. ಮತ್ತೆ ಕನ್ನಡಿಗರು ಇನ್ನೊಬ್ಬರ ಕೈಯ ಕಡೆಗೆ ನೋಡುತ್ತ ಕಾಲಕಳೆಯುವ ಪರಿಸ್ಥಿತಿಯಲ್ಲಿಯೇ ಉಳಿಯಬೇಕಾಗುವುದು. ನ್ಯಾಯವಾಗಿಯೂ ಕನ್ನಡಿಗರ ಸೊತ್ತಾಗಿರುವ ಬಳ್ಳಾರಿಯ ಮೂರು ತಾಲ್ಲೂಕುಗಳನ್ನು, ಇಂತಹ ಕಾಲದಲ್ಲಿಯೂ ಕಬಳಿಸಬೇಕೆಂಬ ಹಟಹಿಡಿದ ಆಂಧ್ರರು, ಕನ್ನಡಿಗರನ್ನು ಯಾವ ಬಗೆಯ ಆತ್ಮೀಯತೆ, ವಿಶ್ವಾಸಗಳಿಂದ ಕಾಣಬಹುದು? ರಾಜಕಾರಣದಲ್ಲಿ ನುರಿತು ತಂಬಿಯತ್ತುಗೊಂಡ ತಮಿಳರು, ಇದೀಗ ರಾಜಕಾರಣದಲ್ಲಿ ಕಾಲಿಸುತ್ತಿರುವ ಎಳೆಯ ಕರ್ನಾಟಕದ ಜನತೆಯ ಹಕ್ಕು-ಬಾಧ್ಯತೆಗಳನ್ನು ಎಷ್ಟರ ಮಟ್ಟಿಗೆ ಸಂರಕ್ಷಿಸಬಹುದು? ಈ ಮಾತಿನ ಸಂಪೂರ್ಣ ವಿಚಾರವನ್ನು, ಅಧಿಕಾರ ಕ್ಷೇತ್ರದಲ್ಲಿರುವ ನಮ್ಮ ನಾಯಕರೂ ಮಾಡಬೇಕು; ವಿರೋಧಿ ಪಕ್ಷದ ನಾಯಕರೂ ಮಾಡಬೇಕು. ಈಗ ಅವರು ಅವಿಚಾರಿಗಳಾಗಿ ನಡೆದರೆ, ಅದರ ದುಷ್ಫಲವನ್ನು ಕನ್ನಡಿಗರು ವಂಶಪರಂಪರೆಯಾಗಿ ಅನುಭವಿಸಬೇಕಾಗುವುದೆಂಬುದನ್ನು ಯಾರೂ ಮರೆಯಲಾಗದು.

ಯಾವುದೇ ದೇಶದಲ್ಲಿಯೂ ರಾಜಕೀಯ ನಾಯಕರು ಕೇವಲ ವ್ಯಕ್ತಿಗಳೇ! ಆದರೆ ಸ್ವಾರ್ಥರಹಿತವಾದ ಮುಂಧೋರಣೆಯ ವಿಚಾರಗಳಿಂದ ಜನತೆಯ ಕಲ್ಯಾಣವನ್ನು ಚಿಂತಿಸಿದರೆ, ಅವರು ದೇಶದ ಶಕ್ತಿಗಳಾಗಿ ಮೆರೆಯಬಹುದು. ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಕನ್ನಡ ರಾಜಕೀಯಲೋಕದಲ್ಲಿ ಎದ್ದುಕಾಣುತ್ತಿರುವ ನಾಯಕರ ಮನಸ್ಸು ಹೃದಯಗಳನ್ನು ವಿಶ್ಲೇಷಿಸುತ್ತ ಹೋದರೆ, ಬಹುಜನ ನಾಯಕರು ವೈಯಕ್ತಿಕ ಸ್ವಾರ್ಥ-ಲೋಭಗಳಿಂದಲೇ ರಾಜಕೀಯ ಕಣ್ಣುಮುಚ್ಚಾಟವನ್ನು ನಡೆಸಿದಂತೆ ಕಾಣುತ್ತಲಿದೆ. ಅವರ ಕಣ್ಣುಮುಚ್ಚಾಟ ಇಂದು ಕನ್ನಡ ಜನತೆಯ ಕಣ್ಣುಮುಂದೆ ಕಗ್ಗತ್ತಲೆಯನ್ನು ಹರಡಿಬಿಟ್ಟಿದೆ. ಆ ಕಗ್ಗತ್ತಲೆಯು ಕನ್ನಡಿಗರ ಭವಿಷ್ಯವನ್ನೇ ಮರೆಮಾಡಿಬಿಟ್ಟಿದೆ. ಪ್ರತಿಯೊಬ್ಬ ಕನ್ನಡಿಗನೂ ಈಗ 'ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು!' ಎಂದು ದೈನ್ಯವಾಣಿಯಿಂದ ಪ್ರಾರ್ಥಿಸುತ್ತಿದ್ದರೆ ಅದೇನು ಆಶ್ಚರ್ಯವಲ್ಲ. ಆ ಕರುಣಾಳು ಬೆಳಕು ನಮ್ಮ ಕನ್ನಡ ರಾಜಕೀಯ ನಾಯಕರನ್ನು ಕೈಹಿಡಿದು ಒಳ್ಳೆಯ ಮಾರ್ಗದಲ್ಲಿ ನಡೆಸಲಿ! ಕನ್ನಡಿಗರ ಸ್ವತಂತ್ರ ರಾಜ್ಯ 'ಕರ್ನಾಟಕ' ಎಂಬ ಹೆಸರಿನಿಂದಲೇ ರೂಪುಗೊಂಡು ನಿಲ್ಲಲಿ!

— ಸಂಪಾದಕ

## ಚಂದಾದಾರರಲ್ಲಿ ಬಿನ್ನಹ

ಜಯಂತಿಗೆ ಚಂದಾದಾರರಾಗಲು ಇಷ್ಟವಿಲ್ಲದ ಮಹನೀಯರು ದಯೆಯಿಟ್ಟು, ಮೊದಲೇ ಒಂದು ಕಾರ್ಡು ಬರೆದು ತಿಳುಹಬೇಕು. ಅದಕ್ಕಾಗಿಯೆ ಒಂದು ತಿಂಗಳು ಮೊದಲೇ ಸೂಚನೆಯನ್ನು ಕಳುಹಿರುವೆವು. ವಿ. ಪಿ. ಗಳನ್ನು ತಿರುಗಿ ಬಿಡುವುದರಿಂದ, ಜಯಂತಿಗೆ ಆರ್ಥಿಕ ನಷ್ಟವಾಗುವುದೆಂಬುದನ್ನು ಎಲ್ಲರೂ ಸಹಾನುಭೂತಿಯಿಂದ ವಿಚಾರಮಾಡಬೇಕು.

—ವ್ಯವಸ್ಥಾಪಕ

# ನಾಡನಡೆ

卐

## ರಾಜ್ಯ ಪುನರ್‌ಘಟನೆಯುಲ್ಲಾದ ದೋಷಗಳು

ಭಾಷಾನುಗುಣರಾಜ್ಯಗಳ ಪುನರ್ಘಟನೆ, ಭಾರತದಲ್ಲಿ ಇಂದು ಎಲ್ಲರಿಗೂ ಬೇಕಾದ ಮಾತು. ಆದರೆ ಕೇಂದ್ರ ಸರಕಾರವು ಅದರ ಬಗ್ಗೆ ಕೊರಡಿಸಿದ ನಿರ್ಣಯವು ಮಾತ್ರ ಎಲ್ಲರಲ್ಲಿಯ ೂ ಒಂದೊಂದು ಬಗೆಯ ಅತೃಪ್ತಿಯನ್ನು ಉಂಟುಮಾಡಿದೆ. ಭಾಷಾನುಗುಣ ರಾಜ್ಯಗಳನ್ನು ಎಲ್ಲರಿಗೂ ತೃಪ್ತಿಯಾಗುವಂತೆ ರಚಿಸುವುದು ಅಸಾಧ್ಯವಾದ ಮಾತೆಂಬುದನ್ನು ಯಾರೂ ಒಪ್ಪಿಕೊಳ್ಳಬೇಕಾದ ಸಂಗತಿಯೇನೋ ಸರಿಯೆ. ಆದರೆ ಸರ್ವಮಾನ್ಯವೆನಿಸುವಂತಹ ಕೆಲವು ನಿಯಮಗಳನ್ನು ಮೊದಲೇ ಮಾಡಿಕೊಂಡು, ಈ ರಾಜ್ಯಪುನರ್ಘಟನೆಯ ಕಾರ್ಯವನ್ನು ಕೈಕೊಂಡಿದ್ದರೆ, ದೇಶದಲ್ಲಿ ಇಷ್ಟೊಂದು ಗೊಂದಲ-ಗಲಾಟೆಗಳು ಏಳುತ್ತಿರಲಿಲ್ಲ.

ಮೊದಲನೆಯ ದೋಷವೆಂದರೆ, ನಮ್ಮ ರಾಜಕೀಯ ನಾಯಕರಲ್ಲಿ ಕೆಲವರಿಗೆ, ಭಾಷಾನುಗುಣ ರಾಜ್ಯರಚನೆಯ ಅಗತ್ಯದ ಬಗೆಗೆ ಶ್ರದ್ಧೆಯಿರಲಿಲ್ಲ. ಅದಕ್ಕಾಗಿ ಸಮಿತಿ-ಉಪಸಮಿತಿಗಳನ್ನು ನಿಯಮಿಸುವ ದೀರ್ಘಸೂತ್ರೀವೃತ್ತಿಯನು ಅವಲಂಬಿಸಬೇಕಾಯಿತು. ನಿಜವಾಗಿ ನೋಡಿದರೆ ಇಂತಹ ಸಮಿತಿ-ಉಪಸಮಿತಿಗಳ ಅಗತ್ಯವು ಏನೂ ಇರಲಿಲ್ಲ.

ಭಾರತ ರಾಷ್ಟ್ರೀಯಸಭೆಯು, ತನ್ನ ಆಡಳಿತದಲ್ಲಿ ಭಾಷಾನುಗುಣ ಪ್ರಾಂತಗಳನ್ನು ವಿಂಗಡಿಸಿಯೇ ಬಿಟ್ಟಿತ್ತು. ಆ ವಿಂಗಡನೆಗನುಗುಣವಾಗಿ, ಯಾವ ವಾದ-ವಿವಾದಗಳಿಲ್ಲದೆ ಕಾಂಗ್ರೆಸ್ಸಿನ ಆಡಳಿತವು ಸುಗಮವಾಗಿ ನಡೆಯುತ್ತಿತ್ತು. ಅಂದಿನ ಕಾಂಗ್ರೆಸ್ಸಿನ ಪ್ರಾಂತಗಳನ್ನೇ ರಾಜ್ಯಗಳೆಂದು ಒಪ್ಪಿಕೊಂಡುಬಿಟ್ಟಿದ್ದರೆ, ಯಾವ ತೊಡಕೂ ತಲೆದೋರುತ್ತಿರಲಿಲ್ಲ. ಒಂದು ವೇಳೆ ಅಲ್ಲಿ ಇಲ್ಲಿ ಗಡಿಗಳ ಬಗೆಗೆ ಪ್ರಾದೇಶಿಕ ತೊಡಕುಗಳೇನಾದರೂ ತಲೆದೋರಿದ್ದರೆ, ಅಷ್ಟರಮಟ್ಟಿಗೆ ಸರ್ವಮಾನ್ಯವಾದ ನಿಯಮದಿಂದ ವಾದವನ್ನು ಬಗೆಹರಿಸಬಹುದಾಗಿತ್ತು.

ಆಂಧ್ರರು ನಡೆಸಿದ ಉಗ್ರ ಚಳವಳಿಗೆ ನಮ್ಮ ಕಾಂಗ್ರೆಸ್ಸೂ ಕೇಂದ್ರ ಸರಕಾರವೂ ಹೆದರಿತೆಂಬ ಭಾವನೆಯು ನಮ್ಮ ಜನಸಾಮಾನ್ಯರಲ್ಲಿ ಬೇರೂರುವಂತೆ ಅವಕಾಶವಾದುದು ಇನ್ನೊಂದು ದೋಷ. ಭಾಷಾನುಗುಣ ಪ್ರಾಂತಗಳನ್ನು ಬೇರೆಯವರೂ ಬೇಡುತ್ತಿರುವಾಗ, ಎಲ್ಲರನ್ನೂ ಬಿಟ್ಟು ಆಂಧ್ರರಿಗೆ ಸ್ವತಂತ್ರರಾಜ್ಯವನ್ನು ಕಲ್ಪಿಸಿಕೊಟ್ಟು, ನಮ್ಮ ಕಾಂಗ್ರೆಸ್ ನಾಯಕರು ತಮ್ಮ ಮಿದುತನವನ್ನು ತೋರಿಸಿಕೊಂಡರು. ಇದರ ಪರಿಣಾಮವೇನಾಯಿತೆಂದರೆ, ಉಗ್ರ ಚಳವಳಿಯನ್ನು ಮಾಡಿ, ತಮಗೆ ಬೇಕಾದುದೆಲ್ಲವನ್ನೂ ಪಡೆಯಬಹುದೆಂಬ ಭಾವನೆ ನಮ್ಮ ಜನರಲ್ಲಿ ನೆಲೆಯೂರಿ ಬೆಳೆಯಲು ಅವಕಾಶವಾಯಿತು.

ಇನ್ನು ಮೂರನೆಯ ದೋಷವೆಂದರೆ, ರಾ. ಪು. ಆಯೋಗದ ರಚನೆ; ಅದರ ಕಾರ್ಯ! ಆ ಆಯೋಗ ಯಾವ ಸಾಮಾನ್ಯ ನಿಯಮಗಳನ್ನೂ ಇರಿಸಿಕೊಳ್ಳದೆ, ಒಂದಕ್ಕೊಂದು ವಿರೋಧವೆನಿಸುವಂತೆ ತನ್ನ ನಿರ್ಣಯವನ್ನು ಕೊಟ್ಟಿತು. ಇದರಿಂದ, ಪುನರ್ಘಟಿತವಾಗಲಿರುವ ರಾಜ್ಯಗಳು ಭಾಷಾನುಗುಣತತ್ತ್ವವನ್ನು ಅವಲಂಬಿಸಿದುವೆಂದೂ ಎನಿಸಲಿಲ್ಲ. ಬೇರೆ ಯಾವುದಾದರೂ ತತ್ತ್ವವನ್ನು ಅವಲಂಬಿಸಿದುವೆಂಬುದೂ ಗೊತ್ತಾಗಲಿಲ್ಲ.

ಇವೆಲ್ಲ ದೋಷಗಳು ನಿರ್ಮಾಣಮಾಡಿದ ವಿಕೃತಿ, ಜನಸಾಮಾನ್ಯರ ಮನುಷ್ಯತ್ವವನ್ನೇ ಮರೆಯಿಸಿತು. ತಮ್ಮ ಕಣ್ಣಲ್ಲಿ ತಾವೇ ಬೆರಳನ್ನು ಚುಚ್ಚಿಕೊಳ್ಳುವಂತಹ ದುಷ್ಪ್ರಸಂಗವನ್ನು ಒದವಿಸಿತು.

## ನಡೆದ ಪ್ರಲಯಕ್ಕೆ ಹೊಣೆಗಾರರಾರು?

ರಾಜ್ಯಪುನರ್ಘಟನೆಯ ವಿಚಾರದಲ್ಲಿ ಉಂಟಾದ ವಿಕೃತಿಗೆ, ನಮ್ಮ ದೇಶದ ವಿರೋಧೀ ರಾಜಕೀಯ ಪಕ್ಷಗಳಿಂದ ಪರಿಪುಷ್ಟಿ ದೊರೆಯಿತು. ಈ ಪಕ್ಷಗಳ ನಾಯಕರಿಗೆ ಇನ್ನೇನೂ ಬೇಕಾಗಿಲ್ಲ; ಸದ್ಯದ ಅಧಿಕಾರಿಪಕ್ಷಕ್ಕೆ ವಿರೋಧವಾಗಿ ಜನತೆಯ ಮನಸ್ಸನ್ನು ಕಲುಷಿತಗೊಳಿಸುವುದು ಮಾತ್ರ ಬೇಕಾಗಿದೆ. ಅದಕ್ಕೆ ಈಗ ಅಂತಹ ಸುಸಂದರ್ಭ ತಾನಾಗಿಯೇ ದೊರಕಿತಂತಾಯಿತು.

ಆದರೆ ಅವರ ಮಾತಿನಂತೆ ಕುಣಿದು, ಅವರೊಂದಿಗೆ ಸೇರಿ, ಅವರಿಗೆ ಬೇಕಾದುದನ್ನೇ ಮಾಡಲು ಸಿದ್ಧರಾದ ಕಾಂಗ್ರೆಸಿನ ಕೆಲವು ಜನನಾಯಕರನ್ನು ನೋಡಿ, ಎಲ್ಲರಿಗೂ ಆಶ್ಚರ್ಯ-ವಿಷಾದಗಳೆನಿಸುವಂತಿವೆ. ತಮ್ಮ ಜೊತೆಗಾರರನ್ನೇ ಇವರು ವೈರಿಗಳಂತೆ ಕಾಣತೊಡಗಿದರು. ತಮ್ಮ ವಿರೋಧಿಗಳನ್ನೇ—ವಿಕೃತಭಾವನೆಗಳ ಭರದಲ್ಲಿ—ಮಿತ್ರರೆಂದು ತಿಳಿಬಿಟ್ಟರು. ಇದರ ಪರಿಣಾಮವನ್ನು ಯಾವ ಪಾಪವನ್ನೂ ಅರಿಯದ ನಮ್ಮ ಸಾಮಾನ್ಯಜನತೆ ಅನುಭವಿಸಬೇಕಾಗಿ ಬಂದಿತು.

ಈಗ ಮುಂಬಯಿ ನಗರದ ಪ್ರಲಯವನ್ನೇ ಉದಾಹರಣೆಗಾಗಿ ತೆಗೆದುಕೊಳ್ಳೋಣ. ಮುಂಬಯಿ ಮಹಾರಾಷ್ಟ್ರದಲ್ಲಿ ಸೇರಲೇ ಕೂಡದೆಂದು ಹಟಹಿಡಿದ ಮುಂದಾಳುಗಳಿಗೂ ಏನೂ ಆಗಲಿಲ್ಲ; ಮುಂಬಯಿಯನ್ನು ಮಹಾರಾಷ್ಟ್ರದಲ್ಲಿ ಸೇರಿಸಿಯೇ ತೀರಬೇಕೆಂಬ ಮುಂದಾಳುಗಳಿಗೂ ಏನೂ ಆಗಲಿಲ್ಲ. ಅರ್ಥಹಾನಿ—ಮಾನಹಾನಿ—ಪ್ರಾಣಹಾನಿಗಳನ್ನು ಅನುಭವಿಸಿದುದು ಸಾಮಾನ್ಯ ಜನತೆ. ವಿರೋಧಿ ಪಕ್ಷಗಳಿಗೆ, ಕಾಂಗ್ರೆಸ್ಸಿಗರ ಮುಖಕ್ಕೆ ಕಪ್ಪು ಹಚ್ಚುವ ಕೆಲಸ ಮಾಡಬೇಕಾಗಿತ್ತು. ಅದನ್ನವರು 'ಕಾಂಗ್ರೆಸ್ ನಿಷ್ಠರು, ಎನಿಸಿಕೊಳ್ಳುವವರ ಕೈಯಿಂದಲೇ ಮಾಡಿಸಿ ನಗುತ್ತನಿಂತಿದ್ದಾರೆ. ಕೈಮೀರಿದ ಮೇಲೆ ಈ ಕಾಂಗ್ರೆಸ್ ನಿಷ್ಠರೆನಿಸಿಕೊಳ್ಳುವವರಿಗೆ ಬುದ್ಧಿ ಬಂದಿದೆ. ಆದರೆ ಈಗ ಬುದ್ಧಿ ಬಂದು ಮಾಡುವುದೇನು? ಮುಂಬಯಿಯಲ್ಲಿ ನಡೆದ ಪ್ರಳಯಕ್ಕೆ ಈ ಕಾಂಗ್ರೆಸ್ ನಿಷ್ಠರೇ ಹೊಣೆಗಾರರೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

## ಕನ್ನಡಿಗರ ಹೃದಯದುರಿ :

ಭಾಷಾನುಗುಣರಾಜ್ಯವನ್ನು ಬಯಸುವ ಜನರು ಇನ್ನು ಮೇಲಾದರೂ ಒಂದು ಸರಿಯಾದ ದಾರಿಯನ್ನು ಹಿಡಿದು ನಡೆಯುವುದು ಎಲ್ಲರಿಗೂ ಒಳ್ಳೆಯದು. ಈಗಲೂ ತತ್ತ್ವಗೇಡಿತನದಿಂದ ಸ್ವಾರ್ಥಿಗಳಾಗಿ ವರ್ತಿಸತೊಡಗಿದರೆ, ರಾಜ್ಯಗಳ ರಚನೆಯ ಕಾರ್ಯ ಸುಸೂತ್ರವಾಗಿ ನಡೆಯದು.

ಈಗ ಮಹಾರಾಷ್ಟ್ರೀಯರ ವಿಚಾರವನ್ನೇ ತೆಗೆದುಕೊಳ್ಳೋಣ. ಪ್ರಾದೇಶಿಕ ತತ್ತ್ವಕ್ಕನುಗುಣವಾಗಿ, ಮುಂಬಯಿಯನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕೆನ್ನುತ್ತಾರೆ. ಮಾಡಿ ಕೊಳ್ಳಲಿ! ಅದಕ್ಕಾಗಿ ಶಾಸನಬದ್ಧವಾದ ಸರಲಮಾರ್ಗದಿಂದ ಹೋರಾಡಲಿ! ಅವರ ನ್ಯಾಯವಾದ ಹೋರಾಟಕ್ಕೆ ಕನ್ನಡ ಜನತೆಯೂ ತನ್ನ ಸಹಾನುಭೂತಿಯನ್ನು ಸಲ್ಲಿಸಬಹುದು; ಆದರೆ ಮಹಾರಾಷ್ಟ್ರೀಯರು ಆಕ್ರಮಣ ಬುದ್ಧಿಯನ್ನಿರಿಸಿಕೊಂಡು ಬೆಳಗಾಂವಿ-ಕಾರವಾರ ಜಿಲ್ಲೆಯ ಭಾಗಗಳನ್ನೂ ತಮ್ಮವನ್ನಾಗಿ ಮಾಡಿಕೊಳ್ಳಬೇಕೆಂದು ದುಡುಕುತ್ತಿರುವುದು ಕಿಡಿಗೇಡಿತನವೇ ಸರಿ. ಯಾವ ತತ್ತ್ವಕ್ಕಾಗಿ ಅವರು ಮುಂಬಯಿಯನ್ನು ಬೇಡುತ್ತಿರುವರೋ, ಅದೇ ದೃಷ್ಟಿಯಿಂದ ಅವರು ಬೆಳಗಾಂವಿ ಕಾರವಾರಗಳನ್ನು ನೋಡಬೇಕು. ಹಾಗೆ ನೋಡಿದರೆ ಯಾವ ತೊಂದರೆಯೂ ಇಲ್ಲ. ಅದನ್ನು ಬಿಟ್ಟು ಬಲವನ್ನು ಪ್ರದರ್ಶಿಸಿ ಬೆಳಗಾಂವಿ-ಕಾರವಾರಗಳನ್ನು ಕನ್ನಡಿಗರಿಂದ ಕಿತ್ತುಕೊಳ್ಳಲು ಹವಣಿಸಿದರೆ, ಭಾರತದ ದುರ್ದೈವವಿನ್ನೂ ಮುಗಿದಿಲ್ಲವೆಂದೇ ಹೇಳಬೇಕಾಗುವುದು.

ದಾಯಾದಕಲಹವೇ ಭಾರತದ ಸತ್ತ್ವವನ್ನು ಕಡಿಮೆ ಮಾಡಿ ಅದನ್ನು ಪರದಾಸ್ಯಪಂಕದಲ್ಲಿ ನೂಕಿತೆಂಬುದನ್ನು ನಮ್ಮ ಇತಿಹಾಸ ಸಾರಿ ಸಾರಿ ಹೇಳುತ್ತದೆ. ಅದನ್ನು ನಾವು ಅರಿತೂ ಇದ್ದೇವೆ. ಈಗಲಾದರೂ ನಾವು ಆ ದಾಯಾದಕಲಹದಿಂದ ವಿಮುಖರಾಗಬಾರದೆ? ಬೆಳಗಾಂವಿ-ಕಾರವಾರಗಳಿಗಾಗಿ ಮಹಾರಾಷ್ಟ್ರೀಯರು ಕುಸ್ತಿಗೆ ನಿಂತರೆ, ಅನಿವಾರ್ಯವಾಗಿ ಕನ್ನಡಜನತೆಯೂ ಚಡ್ಡಿಯನ್ನು ಹಾಕಿ ಕಣಕ್ಕಿಳಿಯಬೇಕಾಗುವುದು. ಕುಸ್ತಿಯಾಡುವ ರಜೋವೃತ್ತಿಯು ಕನ್ನಡಿಗರಲ್ಲಿ ಇಲ್ಲವೆಂದಲ್ಲ. ತಮ್ಮ ಸೊತ್ತನ್ನು ಇನ್ನೊಬ್ಬರು ಕಿತ್ತುಕೊಂಡು ಹೋಗುವರೆಂದರೆ, ಅವರು ಸುಮ್ಮಗೆ ಕೊಡುವುದಾದರೂ ಹೇಗೆ? ಕನ್ನಡ ಮುಂದಾಳುಗಳ ನೀತಿಯ ಮಾರ್ಗದ ಉಪದೇಶ, ಕನ್ನಡಜನತೆಯನ್ನಿಂದು ದುಡುಕಿನ ದಾರಿಯಿಂದ ತಡೆದುಹಿಡಿದಿದೆ. ಮುಂದಾಳುಗಳ ಮಾತನ್ನು ನಂಬಿ ಜನತೆ ಸುಮ್ಮ ಕುಳಿತಿದೆಯಾದರೂ, ಬೆಳಗಾಂವಿಯಲ್ಲಿ ಕನ್ನಡಿಗರ ಮೇಲೆ ನಡೆಸಿ ಮರಾಟಿಗರ ಪುಂಡಾಟಿಕೆಯಿಂದ ಅದರ ಭಾವನೆ ಉರಿಯುತ್ತಲಿ ಈ ಸಂದರ್ಭದಲ್ಲಿ ಮಹಾರಾಷ್ಟ್ರದ ನಾಯಕರು ಸಮಂಜಸವೃತ್ತಿಯಿಂದ ನಡೆಯದೆ ಹೋದರೆ, ಕನ್ನಡಜನತೆಯು ಈ ಎದೆಯು ಯಾವಾಗ ಭುಗಿಲ್ ಎಂದೀತೆಂಬುದರ ನಿಯಮವಿಲ್ಲ. ಎಲ್ಲರೂ ತತ್ತ್ವದ ದಾರಿಯಿಂದ ನಡೆದರೆ ಆ ಉರಿಯು ಶಾಂತವಾದೀತು.

## ಕಾಸರಗೋಡನ್ನು ಕಳೆದುಕೊಂಡೆವೆ ?

ಕೇಂದ್ರದಲ್ಲಿಯ ಕೇರಳದ ನಾಯಕರ ಪ್ರಭಾವವು, ಕನ್ನಡಿಗ ಕೈಯಿಂದ ಕಾಸರಗೋಡು ತಾಲೂಕನ್ನು ಕಿತ್ತುಕೊಳ್ಳುವುದರಲ್ಲಿ ಇದರ ಪರಿಣಾಮವನ್ನೂ ನಮ್ಮ ಕೇಂದ್ರಸರಕಾರದ ಮಹಾ ನಾಯಕರು ಸಂಪೂರ್ಣವಾಗಿ ವಿಚಾರಮಾಡಿ ನೋಡಬೇಕು. ಇಂದು ಕಾಸರಗೋಡಿನ ಜನರು ಕರ್ನಾಟಕವನ್ನು ಬಿಟ್ಟು ಕೇರಳಕ್ಕೆ ಸೇರುವ ಪ್ರಸಂಗ ಬಂದುದಕ್ಕಾಗಿ ತಳಮಳಿಸ ತೊಡಗಿದ್ದಾರೆ. ಶಾಂತಿಮಯ ವಾದ ಚಳವಳಿಯನ್ನೂ ಹೂಡಿದ್ದಾರೆ. ಅಲ್ಲಿಯ ಕಾಂಗ್ರೆಸ್ ಕಮಿಟಿಯು ಕೀಲಿಯನ್ನು ಹಾಕಿಕೊಂಡಿದೆ. ಪಂಚಾಯ ಬೋರ್ಡುಗಳು ಸದಸ್ಯರಿಲ್ಲದೆ ನಿಷ್ಕ್ರಿಯವಾಗಿ ಕುಳಿತ ಮಂಗಳೂರ ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರ ನಗರ ಸಭೆ ಮೊದಲಾದ ಹೊಣೆಗಾರ ಸಂಸ್ಥೆಗಳಲ್ಲಿ, ಕಾಸರಗೋಡಿನ ಕನ್ನಡಿಗ ಆ ಭಾಗವು ಕೇರಳಕ್ಕೆ ಸೇರಕೂಡದೆಂದು ಗೊತ್ತುವಳಿಯನ್ನು ಎ ಹಿಡಿದಿದೆ. ಕಾಸರಗೋಡಿನ ಕನ್ನಡಿಗರಷ್ಟೇ ಅಲ್ಲ; ಅಲ್ಲಿಯ ಮ ಯಾಳಿ ಭಾಷೆಯನ್ನಾಡುವ ಜನರೂ ಮಂಗಳೂರು ಜಿಲ್ಲೆಯನ್ನು ಬಿಟ್ಟು ಬೇರೆ ಹೋಗಲು ಸಿದ್ಧರಿಲ್ಲ. ಪರಿಸ್ಥಿತಿಯು ಹೀಗಿರುವಾಗಲು ಕಾಸರಗೋಡಿನ ಜನರನ್ನು ಒತ್ತಾಯದಿಂದ ಕೇರಳಕ್ಕೆ ಸೇರಿಸುವುದರಲ್ಲಿ, ರಾ. ಪು. ಆಯೋಗಸಮಿತಿ, ಕಾಂಗ್ರೆಸ್ ನಾಯಕಸಮಿ ಇವುಗಳಿಗೆ, ಯಾವ ಆಂತರಿಕ ಉದ್ದೇಶವಿದೆಯೋ ತಿಳಿಯದಂತಾಗಿ ಕೇರಳರಾಜ್ಯವನ್ನು ವಿಶಾಲಗೊಳಿಸಬೇಕೆಂಬ ದೊಡ್ಡ ಮನಸ್ಸಿನಿಂ ಕರ್ನಾಟಕಕ್ಕೆ ಅನ್ಯಾಯವನ್ನು ಬಗೆಯುವುದೆ? ಇದೆಂತಹ ಪ್ರಜಾ ಪ್ರಭುತ್ವದ ನೀತಿ! ನಾಯಕರೆನಿಸಿಕೊಳ್ಳುವವರ ಮನೋಲಹರಿಯಂತೆ ಜನರು ನಡೆದುಕೊಳ್ಳುವುದು ಪ್ರಜಾಪ್ರಭುತ್ವವೆನಿಸುವುದೆ ಕಾಸರಗೋಡಿನ ಜನರಿಗೆ ಕರ್ನಾಟಕವನ್ನು ಬಿಟ್ಟುಹೋಗಲು ಮನಸ್ಸಿಲ್ಲ. ಇದನ್ನರಿತ ನಮ್ಮ ನಾಯಕರೂ ಕಾಸರಗೋಡನ್ನು ಕಳೆ ಕೊಳ್ಳದಂತೆ ಎಚ್ಚರಿಕೆ ವಹಿಸಬೇಕೆಂದು ನಮ್ಮ ಹಾರಯಿಕೆ.

# ಇದೊಂದು ಕತೆ

( ಜೀವನಚಿತ್ರ )

**ಶ್ರೀ. ಎಲ್. ಡಿ. ಸಭಾಹಿತ, ಮುಂಬಯಿ**

卐

**ಇಂದಿನ ಕ್ರಾಂತಿಯ ವಾತಾವರಣದಲ್ಲಿ, ಸಮಾಜದ ಒಂದೊಂದು ಘಟಕವೂ ಚಿತ್ರ-ವಿಚಿತ್ರ ಘಟನೆಗಳನ್ನು ಒದಗಿಸಿಕೊಡುತ್ತಲಿದೆ. ಆನಂದ ಇಂದಿನ ನಾಗರಿಕತೆಯ ತರುಣರ ಪ್ರತಿನಿಧಿ. ಅವನ ಸಾಂಪ್ರದಾಯಿಕ ಬುದ್ಧಿ, ಅವನ ಕ್ರಾಂತಿಜೀವನವನ್ನು ದುಃಖಮಯವಾಗಿ ಮಾಡಿದೆ.**

卐

ಮೈಮೂಳೆ ಕಾಣಲಾರದಷ್ಟು ಪುಷ್ಟನಾಗಿದ್ದ ಆನಂದ ಎಲುಬಿನ ಪಂಜರದಂತಾಗಿರುವುದರಿಂದ, ಒಮ್ಮೆಲೇ ಗುರುತಿಸಲಾರದ ವಸಂತ, ಇವನು ಇದೇ ಆನಂದನೆ?—ಎಂದು ಅನುಮಾನಪಟ್ಟುಕೊಳ್ಳುತ್ತ ಹಾಗೇ ನಿಂತಿದ್ದಂತೆ, ಹೀಗೆ ಅಕಸ್ಮಾತ್ತಾಗಿ ಆಫೀಸಿಗೇ ತನ್ನನ್ನು ಹುಡುಕಿಕೊಂಡು ಬಂದ ಗೆಳೆಯನನ್ನು ಕಂಡು ಆನಂದನಿಗೆ ಗೆಳೆಯನ ಈ ದರ್ಶನಲಾಭಕ್ಕಾಗಿ ಆನಂದವೆನ್ನಿಸಿತ್ತಾದರೂ, ಮರುಕ್ಷಣದಲ್ಲೇ ಅಪರಾಧಿಯ ಎದೆಯಳುಕು ಅವನಲ್ಲಿ ಉಂಟಾಗಿತ್ತು. ಆದರೂ ಅದನ್ನು ಅಡಗಿಸಿಕೊಳ್ಳುತ್ತ "ಯಾವಾಗ ಬಂದೆ ವಸಂತ? ಇಲ್ಲಿಗೆ ಬರುವ ಮೊದಲು ಒಂದು ಕಾರ್ಡನ್ನಾದರೂ ಗೀಚಬಾರದಾಗಿತ್ತೆ?" ಎಂದ ಅವನನ್ನೇ ನಿಟ್ಟಿಸುತ್ತ.

"ಇದೇ ಸ್ಟೇಶನ್ನಿನಿಂದ ನೇರವಾಗಿ ನಿನ್ನನ್ನೇ ಹುಡುಕಿಕೊಂಡ್ ಬರುತ್ತಿದ್ದೇನೆ. ಪುಣೆಯಿಂದ ಇಲ್ಲಿಗೆ ಪತ್ರಬರೆದರೆ ಅದು ಮುಟ್ಟುವುದಕ್ಕೂ ಮೊದಲು ನಾನೇ ಇಲ್ಲಿಗೆ ಬಂದು ನಿನ್ನನ್ನು ಕಾಣುವುದು ಜರೂರಾಗಿದ್ದಕ್ಕೆ ಬಂದೆ. ನಾನು ಬಂದದ್ದೇನೂ ನಿನಗೆ ಬೇಡವಾಗಲಿಲ್ಲವಲ್ಲ?" ಎಂದು ಪ್ರಶ್ನಿಸಿದ್ದನವ. ಆ ಮಾತು ಆನಂದನ ಅಂತರಂಗವನ್ನೇ ಅಲುಗಿಸುತ್ತಿತ್ತು. ಅದೇ ಅಪರಾಧಿಯ ಅಳುಕಿನಲ್ಲಿ—"ಜೀವದ ಗೆಳೆಯನಾದ ನಿನ್ನನ್ನು ಎರಡು ವರ್ಷಗಳ ಮೇಲಾದರೂ ಕಾಣುವ ಯೋಗ ಬಂತು ಎಂದುಕೊಂಡಿದ್ದ ನನಗೆ ಪ್ರಶ್ನೆ ನೀನು ಕೇಳುತ್ತಿರುವುದು ನನ್ನ ದುರ್ದೈವ. ಮೊದಲೇ ತಿಳಿಸಿದ್ದರೆ ಆಫೀಸಿಗೆ ಚಕ್ಕರಹಾಕಿ ಸ್ಟೇಶನ್ನಿನಲ್ಲೇ ನಿನ್ನನ್ನು ಎದುರುಗೊಳ್ಳಬಹುದಾಗಿತ್ತಲ್ಲ—ಎಂಬುದಕ್ಕೆ ಅಂದೆ."

"ನಾನು ನಿನ್ನನ್ನು ಕಾಣುತ್ತೇನೆ— ಯಾ ಕಾಣಬೇಕು ಎಂದು ಮೊದಲೇ ತಿಳಿದಿದ್ದರೆ, ನೀನು ಹೇಳಿದಂತೆಯೇ ಮಾಡುತ್ತಿದ್ದೆ. ಆದರೆ ನನಗೂ ಅಕಲ್ಪಿತವಾಗಿ ನಿನ್ನನ್ನು ಕಾಣುವುದಕ್ಕೆ ಕಾರಣವಾದದ್ದು ಇಂದು ಬೆಳಗಿನಲ್ಲಿ ಕೈಸೇರಿದ ಈ ಪತ್ರ" ಎಂದು ಅವನು ತನ್ನ ಕೋಟಿನ ಕಿಸೆಗೆ ಕೈಹಾಕುತ್ತಿದ್ದಂತೆ, "ಏನು ಪತ್ರವೆ? ಎಲ್ಲಿಂದ? ಯಾರು ಬರೆದಿದ್ದಾರೆ?" ಎಂದು ಆನಂದ ಆತುರನಾಗಿ ಕೇಳುತ್ತಿದ್ದ ಹಾಗೆ, "ಕುಮಟೆಯಿಂದ ಬಂದದ್ದು" ಎನ್ನುತ್ತ ವಸಂತ ಅವನ ಕೈಗೆ ಅದನ್ನು ಕೊಟ್ಟಿದ್ದ. ಅದೇ ಆತುರದಲ್ಲಿ ಆನಂದ ಅದನ್ನು ಬಿಡಿಸಿ ಓದತೊಡಗಿದ್ದ.

"ಪ್ರಿಯ ವಸಂತಣ್ಣನವರಲ್ಲಿ

ಚಿ. ಶ್ರೀಕಾಂತನು ಮಾಡುವ ನಮಸ್ಕಾರಗಳು.

ಕ್ಷಮಿಸಿ, ನಾನು ಪತ್ರ ಬರೆಯುವುದರಲ್ಲಿ ಪಳಗಿದವನಲ್ಲ. ಪತ್ರ ಹೇಗೆ ಆರಂಭಿಸಿ ಮುಗಿಸಬೇಕು ಎಂಬುದನ್ನೂ ತಿಳಿದವನಲ್ಲ ಆದರಿಂದ ನೇರವಾಗಿ ಉದ್ದಿಷ್ಟವಾದ ಮಾತಿಗೆ ಬರುತ್ತೇನೆ.

ಈಚೆಗೆ ಆರು ತಿಂಗಳಾಗುತ್ತ ಬಂತು; ಆನಂದಣ್ಣನವರಿಂದ ಯಾವ ಸಮಾಚಾರವೂ ಇಲ್ಲ. ಇಷ್ಟರಲ್ಲಿ ನಾಲ್ಕಾರು ಪತ್ರಗಳನ್ನಾದರೂ ನಾನು ಅವರಿಗೆ ಬರೆದ ನೆನಪು; ಆದರೆ ಒಂದೂ ಮುಟ್ಟಿದ ಬಗ್ಗೆ ಸಹ ಅವರಿಂದ ಉತ್ತರವಿಲ್ಲ. ಆ ಮೊದಲು ತಿಂಗಳವೂ ಅವರಿಂದ ಬರುತ್ತಿದ್ದ ಹಣವೂ ಈಗ ಬರುತ್ತಿಲ್ಲ. ಹಣ ಅವರಿಗೆ ಕಳುಹುವುದಕ್ಕೆ ಅನುಕೂಲವಾಗದಿದ್ದರೆ ತೊಂದರೆಪಟ್ಟುಕೊಂಡು ಕಳುಹುವುದೂ ಅಲ್ಲ. ಸ್ವಶಕ್ತಿಯಿಂದ ಪಡೆಯುವಂತಾದ ಅವರ ದುಡಿಮೆಯಲ್ಲಿ ಪಾಲುಗೊಳ್ಳುವ ಅಧಿಕಾರ ನನಗಿಲ್ಲ. ಹಾಗೆ ಹಣದ ಪ್ರಸ್ತಾಪಮಾಡಿ ಈ ವರೆಗೆ ಎಂದೂ ಬರೆದ ನೆನಪೂ ನನಗೆ ಇಲ್ಲ. ಅವರ ತೊಂದರೆ ನನ್ನದಲ್ಲ—ಎಂದು ನಾನು ಭಾವಿಸಿದವನೂ ಅಲ್ಲ. ಆದರೆ ಅವರ ತೊಂದರೆಗೆ ನಾನು ಮುಟ್ಟಲಾರೆನಾಗಿದ್ದೇನಲ್ಲ—ಎಂಬ ವ್ಯಥೆ ನನಗೆಷ್ಟಿಲ್ಲ? ನನ್ನ ಅಂತರಂಗವನ್ನು ಈ ರೀತಿಯಲ್ಲಿ ತೋಡಿಕೊಳ್ಳಬೇಕಾದದ್ದು ನನ್ನ ದುರ್ದೈವ. ಮಾಡಿತೋರಿಸಲಾಗದ ಅಸಹಾಯತೆಯಿಂದ ಈ ಮಾತು ಆಡಿಕೊಳ್ಳಬೇಕಾಗಿ ಬಂದದ್ದು, ಪರಿಸ್ಥಿತಿಯ ಒತ್ತಾಯದಿಂದ ನಿರುಪಾಯನಾಗಿ ಅಷ್ಟೆ!

ಈ ಆರು ತಿಂಗಳಿಂದಲೂ ಆನಂದಣ್ಣನವರ ಸಮಾಚಾರವಿಲ್ಲ ಎಂದೆನಲ್ಲವೆ? ಅಮ್ಮ ಪೂರಾ ಹಾಸಿಗೆ ಹಿಡಿದೂ ಸಾಮಾನ್ಯ ಅಷ್ಟೇ ದಿನಗಳಾಗುತ್ತ ಬಂದುವು. ಮೊದಲಿನಿಂದಲೂ ಅವರದು ದುರ್ಬಲ ಶರೀರ ಎಂಬುದನ್ನು ನೀವು ಅರಿಯದ ವಿಚಾರವೇನಲ್ಲ. ಎಂದೂ ದಮ್ಮಿನ ಪ್ರಕೃತಿಯವರು. ಅಪರವಯಸ್ಸು ಬೇರೆ. ಈ ಸ್ಥಿತಿಯಲ್ಲಿ ಮಗನ ಕೊರಗೂ ಸೇರಿ ಮುದುಕಿಯ ಉಸಿರು ಎಳೆಯುತ್ತಿದೆ. ಅವರ ಕೊನೆಯ ಆಸೆ ಆನಂದಣ್ಣನವರನ್ನು ಒಮ್ಮೆ ಕಾಣಬೇಕು ಎಂದು, ದಿನವೂ ನನ್ನನ್ನು ಎಷ್ಟು ಸಲ ಕೇಳುತ್ತಾರೆ—"ಆನಂದನ ಪತ್ರ ಬಂತೆ?" ಎಂದು. ಆದರೆ ಇದ್ದ ಸತ್ಯವನ್ನು ಹೇಳಿ ಅವರ ಕೊರಗನ್ನು ಇನ್ನಷ್ಟು ಹೆಚ್ಚಿಸಬಾರದೆಂಬುದಕ್ಕೆ "ಹೌದು, ಬಂದಿದೆಯಮ್ಮ" ಎಂದರೆ, "ಬರುವ ವಿಚಾರ ಬರೆದಿದ್ದಾನೆಯೆ?" ಎಂದು ಕೇಳುತ್ತಾರೆ. ಅದಕ್ಕೂ "ರಜೆ ಸಿಗದೇ ತೊಂದರೆಪಡುತ್ತಿದ್ದೇನೆ, ಸಿಕ್ಕೊಡನೆಯೇ ಬರುತ್ತೇನೆ" ಎಂದು ಬಂಡಿದೆಯಾಗಿ ಸುಳ್ಳು ಉತ್ತರವನ್ನೇ ಹೇಳಿ ನಂಬಿಸುತ್ತ ಬಂದಿದ್ದೇನೆ. ಆದರೆ ರುಗ್ಣಶಯ್ಯೆಯಲ್ಲಿದ್ದ ಮುದುಕಿಯನ್ನು ಇಷ್ಟು ವಂಚಿಸುವಾಗ ನನಗಾಗುವ ವ್ಯಥೆಯನ್ನು ಯಾವ

ಮಾತಿನಲ್ಲಿ ವ್ಯಕ್ತಪಡಿಸಲಿ? ಇರುವ ಮಾತು ಇದ್ದ ಹಾಗೇ ಹೇಳಿದರೆ, ಅವರ ಕೊರಗು ಹೆಚ್ಚುವುದಲ್ಲ—ಎಂಬುದಕ್ಕೆ. ನಾನು ಹಾಗೆ ಸುಳ್ಳು ಹೇಳದೆ ಬೇರೆ ಗತಿಯಿಲ್ಲ.

"ಅಣ್ಣಾ, ಅಮ್ಮ ಹಾಸಿಗೆ ಹಿಡಿದಿದ್ದಾರೆ. ಒಮ್ಮೆ ನಿಮ್ಮನ್ನು ನೋಡಬಯಸುತ್ತಿದ್ದಾರೆ," ಎಂಬ ವಿಚಾರವನು ನಾನು ಈಚೆಗೆ ಅವರಿಗೆ ಬರೆದ ಪ್ರತಿ ಪತ್ರದಲ್ಲಿಯೂ ಬರೆದಿರುತ್ತೇನೆ; ಆದರೆ ಏಕೋ ಅವರಿಗೆ ನನ್ನ ಮಾತಿನ ಮೇಲೆ ನಂಬಿಕೆಯಿಲ್ಲವೋ, ಇಲ್ಲವೆ ನನ್ನ ಪತ್ರಗಳೇ ಅವರ ಕೈಸೇರಲಿಲ್ಲವೊ ತಿಳಿಯಲಾರೆನಾಗಿದ್ದೇನೆ. ಅವರ ವಿಳಾಸ ಈಗ ಬದಲಾಗಿರದಿದ್ದರೆ, ಅವರು ಮೊದಲು ಕೊಟ್ಟಿದ್ದ ವಿಳಾಸಕ್ಕೇ ಬರೆದಿರುವೆನಾದದ್ದರಿಂದ, ಅವರಿಗೆ ಅದು ಸಿಗಲಿಲ್ಲ ಎಂಬ ಅನುಮಾನಕ್ಕೆ ಕಾರಣವಿಲ್ಲ. ಎಲ್ಲವೂ ಅವರ ಆಫೀಸಿನ ವಿಳಾಸಕ್ಕೇ ಬರೆದುವು. ಒಮ್ಮೆ ಮೊದಲಿದ್ದ ಸ್ಥಳದಿಂದ ಬೇರೆ ಕಡೆಗೆ ವರ್ಗಾಯಿಸಿದ್ದರೆ, ಅವರು ವರ್ಗಾಯಿಸಲ್ಪಟ್ಟಿದ್ದ ಹೊಸ ಸ್ಥಳಕ್ಕೆ ರಿಡೈರೆಕ್ಟಾಗಿಯಾದರೂ ಪತ್ರ ಹೋಗಬಹುದಲ್ಲವೆ? ಇಲ್ಲವೆ ನೊಟ್‌ಪೇಡ್ ಆಗಿದ್ದರೆ, ಅವರಿಗೆ ಬರೆದ ಪ್ರತಿಯೊಂದು ಕವರಿನ ಮೇಲೂ ನನ್ನ ಪತ್ತೆ ಬರೆದಿರುವುದರಿಂದ, ನನಗಾದರೂ ತಿರುಗಿ ಬರಬೇಕಾಗಿತ್ತು. ಆದರೆ ಒಂದೂ ಹಾಗೆ ನನಗೆ ಬಂದಿದ್ದು ಇಲ್ಲ. ಆದರಿಂದ ನನ್ನ ಪತ್ರಗಳೆಲ್ಲವೂ ಅವರ ಕೈಸೇರಿವೆಯೆಂಬುದರಲ್ಲಿ ನನಗೆ ಸ್ವಲ್ಪವೂ ಅನುಮಾನವಿಲ್ಲ. ಆದರೆ ಅವರೇ ಏಕೋ ನನ್ನ ಮೇಲೆ ಬೇಸರಪಟ್ಟುಕೊಂಡಂತಿದೆ. ಇಲ್ಲವಾದರೆ ಏದಕ್ಕೂ ಹೀಗೆ ಉತ್ತರಕೊಡದಿರುತ್ತಿದ್ದರೆ? ಆದರೆ ಒಮ್ಮೆಲೇ ಅವರು ನನ್ನ ಮೇಲೆ ಇಷ್ಟು ನಿಷ್ಠುರರಾಗುವುದಕ್ಕೆ ಕಾರಣ ತಿಳಿಯದೆ ವ್ಯಥೆಪಡುತ್ತಿದ್ದೇನೆ. ಹಿರಿಯರೂ, ಸುಜ್ಞರೂ ಆದ ಅವರು ಕಾರಣವಿಲ್ಲದೆ ಈ ರೀತಿ ಮಾಡಲಾರರು ಎಂಬ ವಿಶ್ವಾಸ ನನಗಿದ್ದರೂ, ನನ್ನ ತಿಳುವಳಿಕೆಗೆ ಅದು ಏನು ಎಂದು ನಿಲುಕದಾಗಿದೆ.

ತಮ್ಮ ಆವಶ್ಯಕತೆ. ತೊಂದರೆಗಳನ್ನೆಲ್ಲ ಮರೆತು, ಎಂದಿನಿಂದಲೂ ಅವರು ತನ್ನ ತಮ್ಮ, ತಾಯಿ ಎಂಬ ಅಭಿಮಾನದಿಂದ ನಮ್ಮನ್ನು ಕಾಣುತ್ತಲೇ ಬಂದಿದ್ದಾರೆ. ತಂದೆಯವರನ್ನು ಕಳೆದುಕೊಂಡು ಹಸುಗೂಸಾಗಿದ್ದ ನನ್ನನ್ನು ಅದೇ ಅಪತ್ಯಪ್ರೇಮದಿಂದ ಬೆಳೆಸಿಕೊಂಡು ಬಂದ ಭ್ರಾತೃವಿನಲ್ಲಿ, ಇಂದು ವಯಸ್ಸಿಗೆ ಬಂದ ನಾನು ವ್ಯತಿರೇಕವಾಗಿ ಏನಾದರೂ ನಡೆದುಕೊಂಡಿದ್ದರೆ, ತಿಳಿಸಿ ದಂಡಿಸಿದ್ದರೂ ನಾನು ಉಸಿರೆತ್ತುತ್ತಿರಲಿಲ್ಲ. ಆದರೆ ಹೀಗೆ ದೂರಮಾಡಿದ್ದಾರಲ್ಲ—ಎಂದು ನೊಂದುಕೊಳ್ಳುತ್ತಿದ್ದೇನೆ. ನನ್ನ ವಿಚಾರದಲ್ಲಿ ಅವರು ನಡೆದುಕೊಳ್ಳುವ ಬಗೆಗೆ ನಾನು ಆಕ್ಷೇಪಿಸುವುದೂ ಇಲ್ಲ. ಆದರೆ ತಾಯಿ ಎಂಬ ಮಮತೆ ಕ್ಷಮತೆ ಕೂಡ ಇಂದು ಅವರಲ್ಲಿ ಇಲ್ಲದಂತಾಗಿದೆಯೆ?—ಎಂದು ನಾನು ಅನುಮಾನಪಡುವಂತಾಗಿದೆ. ಆದರೂ ಪತ್ರದಲ್ಲಿ ಒಮ್ಮೆಯೂ ಈ ಕುರಿತು ಆಕ್ಷೇಪಿಸಿ ನಾನು ಬರೆದವನಲ್ಲ. ಕಿರಿಯನಾದ ನಾನು ಹಿರಿಯರಲ್ಲಿ ಎಷ್ಟು ವಿನಯದಲ್ಲಿ ಬರೆದುಕೊಳ್ಳಬಹುದೋ ಆ ರೀತಿಯಲ್ಲಿ ಅಮ್ಮನ ಅವಸ್ಥೆಯನ್ನು, ಆಶೆಯನ್ನು ವಿಶದಪಡಿಸಿದ್ದೇನೆ. ಇನ್ನು ನನ್ನ ತಿಳುವಳಿಕೆಗೂ ನಿಲುಕದೆ ಏನಾದರೂ ಒಂದು ಆಕ್ಷೇಪದ ಮಾತು ನುಸುಳಿಹೋಗಿದ್ದರೂ ಇರಬಹುದು; ಇಲ್ಲ ಎನ್ನಲಾರೆ. ಆದರೆ ಅದು ನನ್ನ ಎನಿಸಿಕೆಗಳನ್ನು ಆಡಿ ತೋರಿಸಲಾಗದ ನನ್ನ ಮಾತಿನ ದುರ್ಬಲತೆ, ಅಷ್ಟೇ ನನ್ನ ಮಾನಸಿಕ ವ್ಯಗ್ರತೆ ಇವುಗಳಿಂದಾಗಿ—ಎಂದು ಹೇಳಬಯಸುತ್ತೇನೆ.

ಆನಂದಣ್ಣನವರ ವಿಚಾರದಲ್ಲಿ ಅನ್ಯಥಾಭಾವನೆ ನನಗೆ ಇಂದೂ ಇಲ್ಲ. ಅವರೇ ತೊಂದರೆಯಲ್ಲಿ ಇರುತ್ತಿರುವುದಕ್ಕೆ ಅದನ್ನು ತಿಳಿಯಪಡಿಸಿ, ನಮ್ಮನ್ನು ವ್ಯಥೆಪಡಿಸಬಾರದು ಎಂದುಕೊಂಡಿರುವುದಕ್ಕೆ ಈ ರೀತಿಯಲ್ಲಿ ತಲೆಮರೆಸಿಕೊಂಡು ಇದ್ದಾರೆ—ಎಂದು ನನ್ನ ಮಟ್ಟಿಗೆ ನಿಲುಕುವ ಉತ್ತರ. ಅಂಥದೇನೇ ಇದ್ದರೂ ಅಮ್ಮನ ಸಮಾಧಾನಕ್ಕಾದರೂ, ಸುಳ್ಳಾದರೂ 'ಕ್ಷೇಮದಲ್ಲಿ ಇದ್ದೇನೆ' ಎಂಬ ಒಂದೇ ಒಂದು ಮಾತು ಬರೆದಿದ್ದರೆ, ನಾನು ಈ ಪತ್ರ ಬರೆದು ನಿಮ್ಮನ್ನು ತೊಂದರೆಪಡಿಸುವ ಪ್ರಸಂಗವೇ ಇರಲಿಲ್ಲ.

ಇಲ್ಲಿ ಅಮ್ಮ ತೀರ ಕಾಯಿಲೆಯಲ್ಲಿ ಮಲಗಿದ್ದಾರೆ. ಪರವೂರಿನಲ್ಲಿ ಅಣ್ಣನವರು ಯಾವ ತೊಂದರೆಯಲ್ಲಿ ತೊಳಲುತ್ತಿದ್ದಾರೆಯೋ ತಿಳಿಯದೆ ನಾನು ಮಿಡುಕುತ್ತಿದ್ದೇನೆ. ನೀವೂ, ನನ್ನ ಅಣ್ಣನವರೂ ಬಾಲ್ಯದಿಂದಲೂ ಸ್ನೇಹಿತರಾಗಿ ಬೆಳೆದುಬಂದವರು. ಆದರಿಂದ ನೀವೂ ನನ್ನ ಒಬ್ಬ ಅಣ್ಣ ಎಂದು ನಾನು ಎಂದಿನಿಂದಲೂ ಭಾವಿಸಿ ಬಂದಿದ್ದೇನೆ. ಈ ಮಾತು ಆಡಿ ವ್ಯಕ್ತಮಾಡಬೇಕಾಗಿ ಬಂದದ್ದು ನನ್ನ ದುರದೃಷ್ಟ. ನೀವೂ ಊರಿನಲ್ಲಿ ಇದ್ದಾಗ ಅದೇ ಮಮತೆಯಿಂದ ನನ್ನನ್ನು ಕಂಡಿದ್ದೀರಿ. ಅದೇ ವಿಶ್ವಾಸದಿಂದ ಈ ನಿಮ್ಮ ತಮ್ಮನ ಅಸಹಾಯ ಕಂಗಾಲತೆಯನ್ನು ಅರಿದು ಒಂದು ಉಪಕಾರ ಮಾಡುತ್ತೀರಿ ಎಂದು ನಂಬಿದ್ದೇನೆ. ಇದು ಒಂದು ಒತ್ತಾಯವಲ್ಲ; ದೈನ್ಯದ ಒಂದು ಯಾಚನೆ ಅಷ್ಟೆ.

ನನ್ನ ಬೇಡಿಕೆ ಮತ್ತೇನೂ ಅಲ್ಲ: ಪುಣೆಯಿಂದ ಮುಂಬೈ ದೂರವೇನೂ ಅಲ್ಲ. ಅಲ್ಲದೆ ಮುಂಬೈಗೆ ನೀವು ಹೊಸಬರೂ ಅಲ್ಲ. ಈ ಮೊದಲು ಅಲ್ಲಿ ನಮ್ಮ ಅಣ್ಣನವರ ಇರವನ್ನು ನೀವು ಕಂಡವರು ಎಂಬುದಕ್ಕೆ, ನಿಮ್ಮ ಹೊರತು ನನಗಿಂದು ಮುಟ್ಟಬಹುದಾದ ಜನ ಬೇರೆ ಇಲ್ಲ—ಎಂಬುದಕ್ಕೆ ಒಂದು ಯಾಚನೆಮಾಡಿಕೊಳ್ಳುತ್ತಿದ್ದೇನೆ. ಈ ಪತ್ರ ಕೈಸೇರುತ್ತಲೇ ನಿಮ್ಮ ಯಾವ ತೊಂದರೆಯಲ್ಲೂ ಒಮ್ಮೆ ನನಗಾಗಿ, ಅಲ್ಲ—ನಮ್ಮ ಮುದಿ ಅಮ್ಮನ ಅಂತಿಮ ಆಶೆಗಾಗಿ, ಅಲ್ಲಿಯವರೆಗೆ ಒಮ್ಮೆ ಹೋಗಿ ನನ್ನ ಅಣ್ಣನವರನ್ನು ಕಂಡು, ಅವರು ಸುಖವಾಗಿ ಇದ್ದಾರೆಯೋ—ಎಂದು ಒಂದು ಮಾತು ತಿಳಿದು ತಿಳಿಸುತ್ತೀರಿ ಎಂದು ತುಂಬಾ ವಿಶ್ವಾಸಪಟ್ಟುಕೊಂಡಿದ್ದೇನೆ. ಹೊತ್ತು ಹೆತ್ತ ಮಾತೆಯ ಬಗ್ಗೆ ಇಷ್ಟು ಕೇಳಿಕೊಳ್ಳುತ್ತಿದ್ದೇನೆ. ಅವರು ಒಮ್ಮೆ ಇಲ್ಲಿಗೆ ಕೂಡಲೇ ಬರುವಂತೆ ಪ್ರೇರೇಪಿಸಿದರೆ, ನಾನು ನಿಮಗೆ ಆಜನ್ಮ ಋಣಿ ಎಂದು ಹೇಳದಿರಲಾರೆ.

ನನಗಾಗಿ ನಿಮ್ಮನ್ನು ಈ ಬಗ್ಗೆ ತೊಂದರೆಪಡಿಸುತ್ತಿದ್ದೇನೆ ಎಂದು ತಿಳಿದಿರುವಷ್ಟೇ ಈ ಪ್ರವಾಸದ ವೆಚ್ಚಕ್ಕೆ ಹಾಕುತ್ತಿದ್ದೇನೆ

ಎಂಬುದನ್ನೂ ಬಲ್ಲೆ. ಆದರಿಂದ ನನ್ನ ದಾರುಣ ಪರಿಸ್ಥಿತಿಯನ್ನು, ಅಪ್ರಾಸಂಗಿಕವಾದರೂ ಸ್ವಲ್ಪ ಹೇಳಬೇಕು ಎಂದುಕೊಂಡಿದ್ದೇನೆ. ನುಂಗಲಾರದ ನನ್ನ ಅಳಲನ್ನು ಒಮ್ಮೆ ಆಡಿಕೊಳ್ಳಬೇಕು ಎಂಬುದಕ್ಕಿಂತಲೂ ಹೆಚ್ಚಿನ ಉದ್ದಿಷ್ಟದಿಂದ ಅಲ್ಲ ಎಂದು ಮೊದಲೇ ಹೇಳುತ್ತೇನೆ. ವ್ಯಸನಪಡುತ್ತಿರುವ ಜೀವಿಗೆ ಅದನ್ನು ತೋಡಿಕೊಳ್ಳುವುದರಲ್ಲಿಯೂ ಒಂದು ಸಮಾಧಾನವಿದೆ ಎನ್ನಬೇಕು. ಅದರಿಂದ ಹೇಳುತ್ತೇನೆ. ಬೇಸರವಿಲ್ಲವಷ್ಟೆ?

ನಾನು ಅನುಕೂಲ ಕುಟುಂಬದಲ್ಲಿ ಜನಿಸಿ ಬಂದಿದ್ದರೆ, ಈ ಸಲದ ಇಂಟರಸಾಯನ್ಸ್ ಪರೀಕ್ಷೆಗೆ ನಾನು ಕಟ್ಟುತ್ತಿದ್ದೆ. ಹಾಗೆ ಅನುಕೂಲ ಪುಳ್ಳವನಾಗಿಲ್ಲವಲ್ಲ ಎಂದು ನಾನೀಗ ವ್ಯಸನಪಡುತ್ತಿದ್ದೇನೆಂದಲ್ಲ— ಬದುಕಿನ ತೀವ್ರತೆ ನನಗೂ ಬಡಿಯಿತು ಎಂಬುದಕ್ಕೆ ಅಂದೆ. ಆನಂದಣ್ಣನವರಿಂದ ಹಣ ಬರುವುದು ಬಂದಾದಾಗಲೇ ನಾನು ಕಾಲೇಜು ಬಿಟ್ಟುಬಿಟ್ಟೆ. ನನ್ನ ಶಿಕ್ಷಣದ ಮಟ್ಟಿಗೆ ನನಗೆ ದೊರೆಯು. ತ್ತಿದ್ದ ಶಿಷ್ಯವೃತ್ತಿಯು ಹೊರತಾಗಿ ಒಂದೆರಡು ಪಾಠಗಳು ಇದ್ದದ್ದರಿಂದ ಹೇಗೂ ನಡೆಯುತ್ತಿತ್ತಾದರೂ, ಅಣ್ಣನವರು ಮೌನವ್ರತ ತಾಳಿದಮೇಲೆ, ಇಲ್ಲಿನ ನನ್ನ ತಾಯಿಯವರ ದೈನಂದಿನ ಸಮಸ್ಯೆ ಬಗೆಹರಿಯದಂತಾಗಿ ಬಾಧಿಸಿದ್ದಕ್ಕೆ, ಎರಡನೆಯ ಟರ್ಮಿನ ಆರಂಭಕ್ಕೆ, ನನ್ನ ಶಿಕ್ಷಣಕ್ಕೆ ತಿಲಾಂಜಲಿ ಕೊಟ್ಟು, ಮತ್ತೆ ಕೆಲವು ಪಾಠಗಳನ್ನು ಹಿಡಿದುಕೊಂಡು ಜೀವನಕ್ಕೆ ನಿಂತೆ. ನಾನು ಪದವೀಧರನಾಗಲಿಲ್ಲವಲ್ಲ ಎಂಬ ಅಸಮಾಧಾನ ನನಗೆ ಸ್ವಲ್ಪವೂ ಇಲ್ಲ. ಮಾತೃಸೇವೆಯನ್ನು ಹೇಳಿಕೊಳ್ಳುವ ರೀತಿಯಲ್ಲಿ ಮಾಡಲಾರೆನಾಗಿದ್ದರೂ, ಈ ಆರು ತಿಂಗಳ ಕಾಲ ನನ್ನ ಪರಿಶ್ರಮದಿಂದ ನನ್ನ ಕೈಯಿಂದಲೇ ತುತ್ತು ನೀಡಿದೆನೆಂಬ ಸಮಾಧಾನ ನನಗೆಷ್ಟಿದ್ದರೂ, ಅವರ ಕೊರಗನ್ನು ನೀಗಿಸಲಾರೆನಾಗಿದ್ದೇನಲ್ಲ—ಎಂದು ನೊಂದುಕೊಳ್ಳುತ್ತಿದ್ದೇನೆ. ಅವರು ಇನ್ನು ಬಹುಕಾಲ ಬದುಕುವುದಿಲ್ಲ ಎಂದ. ನನ್ನ ಮಟ್ಟಿಗೆ ತಿಳಿದಂತಾಗಿದೆ. ನಾನೇನೋ ನನ್ನ ಕೈಲಾದಷ್ಟು ಸೇವೆ ಸಲ್ಲಿಸುತ್ತಲೇ ಇದ್ದೇನೆ. ಆದರೆ ಮನೋರೋಗಕ್ಕೆ ಯಾವ ಮದ್ದು ಇದೆ? ನಾನಿಂದು ಅವಿಶ್ರಾಂತನಾಗಿ ದುಡಿಯುತ್ತಿದ್ದರೂ, ಪ್ರತಿಫಲ ಮಾತ್ರ ನನ್ನ ಆವಶ್ಯಕತೆಗಳು ಬೇಡುವ ತ್ಯಾಗವನ್ನು ಎಷ್ಟಕ್ಕೂ ನೀಗಿಸಲು ಶಕ್ತವಾಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ಸ್ಥಿತಿಯಲ್ಲಿ ನಾನೇ ಮುಂಬೈ ತನಕ ಹೋಗಿ ಅಣ್ಣನವರನ್ನು ಕಾಣುವಷ್ಟು ಅನುಕೂಲನಾಗಿಲ್ಲ ಎಂದು ಹೇಳಬೇಕಾಗಿದ್ದಷ್ಟೇ ಅಮ್ಮನ ಈ ಶಯ್ಯಾಸ್ಥಿತಿಯಲ್ಲಿ ನನ್ನ ಹೊರತು ಮತ್ತೆ ಯಾರೂ ನೋಡಿಕೊಳ್ಳುವುದಕ್ಕೆ ಇಕ್ಕಿಲ್ಲದಿರುವಾಗ ಮನೆ ಬಿಡುವಂತೆಯೂ ಇಲ್ಲ ಎನ್ನಬೇಕಾಗಿದೆ. ಅಲ್ಲದೆ ನಾನು ಈ ವರೆಗೆ ಊರು ಬಿಟ್ಟು ಹೊರಟವನಲ್ಲ, ಮುಂಬೈಯಂಥ ದೊಡ್ಡ ಶಹರದಲ್ಲಿ ಒಬ್ಬನೇ ತುಕ್ಕಬಲ್ಲೆ ಎಂಬ ಧೈರ್ಯವೂ ನನಗಿಲ್ಲ. ಈಗ ಪರೀಕ್ಷೆಯು ಹಂಗಾಮು ಬೇರೆ. ನನ್ನ ಪಾಠಗಳಿಗೂ ತೀರ ಬಿಡುವಿಲ್ಲ. ಪರೀಕ್ಷೆಗಳೆಲ್ಲಾ ಮುಗಿದ ಮೇಲೆ ಮತ್ತೆ ಸ್ಕೂಲು ಸುರುವಾಗುವ ವರೆಗೆ ಅನ್ನಕ್ಕೆ ಏನು ಮಾಡುವುದೋ ತಿಳಿಯದಾಗಿದೆ. ಇಂದು—ನಾಳೆ—ಒಂದೊಂದೂ ನನ್ನನ್ನು ಕಾಡುತ್ತಿದೆ. ಈ ನನ್ನ ಅಸಹಾಯತೆ ಅಮ್ಮನನ್ನು ಅದಷ್ಟು ಬೇಗ ಕಳೆದುಕೊಳ್ಳುವುದಕ್ಕೆ ಅನುಕೂಲವಾಗಿಯೇ ಇದೆ. ನನ್ನಂಥ ದುರ್ದೈವೀ ಮಗನನ್ನು ಹೆತ್ತ ತಪ್ಪಿಗೆ ಇದು ಅವಳು ಒಪ್ಪಿಸಿಕೊಳ್ಳುವ ಶಿಕ್ಷೆಯಲ್ಲದೆ ಮತ್ತೇನು?

ಈ ಪರಿಸ್ಥಿತಿಯಲ್ಲಿ ನಾನು ನನಗಾಗಿ ಕೇಳಿಕೊಂಡ ನಿಮ್ಮ ಮುಂಬೈ ಪ್ರವಾಸದ ವೆಚ್ಚವನ್ನು ನಿಮಗೆ ಮುಂದಾಗಿ ಸಲ್ಲಿಸಲಾರೆನಾದರೂ, ನನ್ನ ಆಯುಸ್ಸು ಆರೋಗ್ಯ ಗಟ್ಟಿಯಾಗಿ ಉಳಿದರೆ ನಿಮ್ಮ ಋಣ ಖಂಡಿತವಾಗಿ ಮುಟ್ಟಿಸುತ್ತೇನೆ— ಎಂದು ಆಶ್ವಾಸನ ಕೊಡುತ್ತೇನೆ. ನನ್ನ ಇಂದಿನ ಅವಸ್ಥೆ-ಅಸಹಾಯತೆಗಳನ್ನು ಮನದಂದು, ನನ್ನವರು ಎಂದು ವಿಶ್ವಾಸಪಟ್ಟುಕೊಂಡು ಬರೆದದ್ದಕ್ಕೆ, ನೀವು ಇಷ್ಟು ಮಾಡುತ್ತೀರಿ ಎಂದು ನಂಬಿಕೊಂಡಿದ್ದೇನೆ.

ಈ ಪತ್ರದಲ್ಲಿ ಬಳಸಿದ್ದ ಮಾತು ಏನೇ ಇದ್ದರೂ, ನಿಮಗೆ ಈ ಪರಿಸ್ಥಿತಿಯ ಕಲ್ಪನೆ ಕೊಡುವುದಕ್ಕಿಂತಲೂ ಬೇರೆ ಉದ್ದೇಶ ಅದಕ್ಕೆ ಇಲ್ಲ. ಅದರಿಂದ ನೀವು ನನ್ನ ಅಣ್ಣನವರಿಗೆ ಈ ಪತ್ರ ತೋರಿಸಬೇಕಾದದ್ದೇನೂ ಇಲ್ಲ. ಎಂದರೆ ತೋರಿಸಬಾರದು ಎಂದು ಅಲ್ಲ. ನೋಡಿ ಈ ಸಂಕಟಕ್ಕೆ ಅವರು ಮತ್ತಷ್ಟು ನೊಂದುಕೊಳ್ಳಬಹುದು ಎಂಬುದಕ್ಕೆ ಹಾಗೆ ಹೇಳಿದೆ. ಇಷ್ಟರ ಮೇಲೆ ನಿಮ್ಮ ಚಿತ್ತಕ್ಕೆ ಸರಿಯೆಂದು ಕಂಡಂತೆ ನಡೆಯುವುದಕ್ಕೆ ನಾನು ಹೇಳುವುದೇನಿದೆ? ಉದ್ದಿಷ್ಟವಾದ ಈ ಪತ್ರ ಈಗಾಗಲೇ ಸಾಕಷ್ಟು ಉದ್ದ ಬೆಳೆದುದರಿಂದ ಇಲ್ಲಿಗೇ ಮುಗಿಸುತ್ತೇನೆ. ಏನಾದರೂ ಅಪಚಾರದ ಮಾತು ಇಲ್ಲಿ ಬರೆದಿದ್ದರೆ, ಅದು ನನ್ನ ಮಾನಸಿಕ ವ್ಯಥೆಯಿಂದಾಗಿ ಎಂದು ಮನ್ನಿಸುವಿರಷ್ಟೆ? ಇಂತು—

ನಿಮ್ಮ ಕೃಪಾಭಿಲಾಷಿ
ಶ್ರೀಕಾಂತ


**ದಿ ನ್ಯಾಶನಲ್ ಮ್ಯುಜಿಕಲ್ ಹಾಲ್**

**ಧಾರವಾಡ**

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

**ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ**

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ಇಷ್ಟು ಸುದೀರ್ಘವಾದ ಪತ್ರವನ್ನು ಓದಿ ಮುಗಿಸಿದ ಆನಂದ ಆಗ ಮನುಷ್ಯನೇ ಅಲ್ಲ. ತಾನು ಆಫೀಸಿನಲ್ಲಿ ಇದ್ದೇನೆ ಎಂಬುದನ್ನೂ ಮರೆತು, ಅವನು ಸಣ್ಣ ಮಗುವಿನಂತೆ ಕಣ್ಣೀರು ಕರೆಯುತ್ತಿದ್ದ. ಅವನ ಸಹೋದ್ಯೋಗಿಗಳೆಲ್ಲ ಸಹಜವಾಗಿ ಊಹಿಸಿಕೊಳ್ಳುವಂತಾಗಿತ್ತು:– ಏನೋ ದುಃಖದ ವಾರ್ತೆಯನ್ನು ಅವನ ಈ ಗೆಳೆಯ ತಂದಿದ್ದಾನೆ ಎಂದು. ಆಫೀಸಿನ ಹೊರಗಿನ ಅವನ ಬದುಕು ಅವರಿಗೇನು ತಿಳಿದಿರಬೇಕು? ಈ ನಗರದ ಜೀವನದಲ್ಲಿ, ಪ್ರತಿಯೊಂದು ನೌಕರ ವ್ಯಕ್ತಿಯು ಕುರಿಕಾದರೂ ಅಷ್ಟೆ: ಆಫೀಸಿನ ಹೊರಗೆ ಅವನು ಯಾರೋ ಏನೋ?

ಆಗಷ್ಟೇ ನಾಲ್ಕು ಗಂಟೆ. ಆಫೀಸು ಬಿಡುವುದಕ್ಕಿನ್ನೂ ಅವಕಾಶ ವಿಸ್ತಿತಾದರೂ ಆನಂದನಿಂದ ಅಲ್ಲಿ ಕೂಡ್ರುವುದಾಗಲಿಲ್ಲ. ಬಿಡುವು ಪಡೆದು ವಸಂತನೊಂದಿಗೆ ಅವನು ಹೊರಟುಬಿಟ್ಟ.

ಆನಂದನೊಂದಿಗೆ ಅವನ ರೂಮು ಸೇರುವವರೆಗೂ ವಸಂತ ಅವನ ಮೌನವನ್ನು ಮುರಿಯಲಿಲ್ಲ. ರೂಮಿನ ಒಳಸೇರಿ ಅವನೊಂದಿಗೆ ಕಾಟಿನ ಮೇಲೆ ಕುಳಿತುಕೊಳ್ಳುತ್ತಿದ್ದಂತೆ, ನಾಲಗೆ ನೇತುಹಾಕಿದ್ದ ಹೆಂಗುಸರ ಉಡುಗೆಯನ್ನು ಕಂಡು ಒಮ್ಮೆಲೇ "ಇದೇನು ಆನಂದ, ಹೀಗೆ ಯಾರಿಗೂ ತಿಳಿಸದೆ ಲಗ್ನವಾಗುವುದೆ? ನನಗೀಗ ಅರ್ಥವಾಯಿತು—ಒಮ್ಮಿಂದೊಮ್ಮೆ ನಿನ್ನ ಈ ಬಗೆಯ ಬದಲಾವಣೆಗೆ ಕಾರಣವೇನು ಎಂದು. ಆದದ್ದು ಸಂತೋಷ. ಮದುವೆ ಎನ್ನುವುದು ಪ್ರಾಯಕ್ಕೆ ಬಂದಾಗ ಆಗಬೇಕಾದದ್ದೆ; ಗಂಡು-ಹೆಣ್ಣು ಪರಸ್ಪರ ಒಲಿದು ಆಗಬೇಕಾದುದು, ಆಯಿತಲ್ಲ! ಇದರಲ್ಲಿ ಮುಚ್ಚಿಡತಕ್ಕ ಮಾತೇನಿದೆ?" ಎಂದು ತುಟಿ ಮೀರಿ, ಎಲ್ಲಾ ಊಹಿಸಿಕೊಂಡವನಂತೆ ವಸಂತ ನುಡಿದಿದ್ದ. ಆ ಮಾನಸಿಕ ತೊಯ್ದಾಟದಲ್ಲೂ ಅವನಾ ಊಹೆಗೆ, ಆ ಮಾತಿನ ರೀತಿಗೆ ಆನಂದನ ಬತ್ತಿದ ತುಟಿಗಳಲ್ಲೂ ಒಂದು ನಗೆಮುರಳಿತ್ತು. ಆದರೆ ಅದು ನಗೆಯಲ್ಲ, ನಗೆಯ ಹೆಣವಾಗಿತ್ತು.

"ಯಾಕೆ ಮಾತನಾಡುವುದಿಲ್ಲ? ನನ್ನ ಊಹೆ ನಿಜವಷ್ಟೆ?" ಎಂದು ಇನ್ನೂ ಮೌನಿಯಾಗಿದ್ದ ಆನಂದನನ್ನು ವಸಂತ ಮತ್ತೆ ಪ್ರಶ್ನಿಸಿದ್ದ.

ಕಳೆದ ಆರು ತಿಂಗಳುಗಳಿಂದಲೂ ತನ್ನ ಅಂತರಂಗದಲ್ಲೇ ಅದುಮಿಕೊಂಡಿದ್ದ ಅಳಲನ್ನೆಲ್ಲ, ಇಂದು ತನ್ನವನು ಎಂದುಕೊಂಡ ವ್ಯಕ್ತಿಯಲ್ಲಿ ಆಡಿಕೊಳ್ಳುವುದಕ್ಕೆ ಆನಂದ ಹಿಂದುಮುಂದೆ ನೋಡುತ್ತಿರಲಿಲ್ಲವಾದರೂ, ಅವನ ಅಂತರಂಗದ ಉದ್ವೇಗ ನಾಲಗೆಯನ್ನು ಹಿಡಿದಿತ್ತು. 'ಅವನ ಅಂತರಂಗವನ್ನು ಕೊರೆಯುತ್ತಿದ್ದ ಮಾತು ಏನೋ ಒಂದು ಇರಬೇಕು' ಎಂದು ವಸಂತನೀಗ ಗೆಳೆಯನ ಮೋರೆಯಿಂದಲೇ ಊಹಿಸಿಕೊಳ್ಳುವಂತಾಗಿತ್ತಾದರೂ, ಅದರ ಸತ್ಯ ಅವನ ಊಹೆಗೆ ನಿಲುಕದ ಮಾತಾಗಿತ್ತು.

"ಇದೇನು ಆನಂದ? ಹೀಗೆ ಭೂತ ಬಡಿದವರಂತೆ ಬೆಪ್ಪನಾಗಿ ಕುಳಿತಿರುವೆಯಲ್ಲ? ಏನೂ ಹೇಳಬಾರದು ಎಂದು ಇದ್ದರೆ, ಮತ್ತೆ ಉಸಿರೆತ್ತದೆ ನಾನು ಹೀಗೇ ಹೊರಟುಹೋಗುತ್ತೇನೆ. ನಿನ್ನ ತಮ್ಮನಿಗೆ ಏನು ತಿಳಿಸಬೇಕು ಎಂಬುದನ್ನಾದರೂ ಹೇಳಿಬಿಡು" ಎಂದು, ಅಷ್ಟೇ ಅವನ ಮೌನಕ್ಕೆ ಬೇಸರದಿಂದ ವಸಂತ ಗೆಳೆಯನನ್ನು ಕುಕ್ಕಿದ್ದ.

ಸೋತ ಸ್ವರದಲ್ಲಿ ಅವನು ನಾಲಗೆ ಸಡಿಲಿಸಿ "ನನ್ನ ಕತೆ ಹಾಗಿರಲಿ ವಸಂತ. ಮೊದಲು ನನ್ನಲ್ಲಿಗೆ ಬಂದ ನಿನಗಷ್ಟು ಉಪಚಾರವಾಗಬೇಡವೆ? ಆಮೇಲೆ ನಮ್ಮ ಸುಖ-ದುಃಖದ ಕತೆ ಹೇಳಿಕೊಳ್ಳುವುದು ಇದ್ದೇ ಇದೆ" ಎಂದ. ಆನಂದನ ಮಾತಿಗೆ ಅವನು "ಉಪಚಾರ ಎಲ್ಲಿಗೆ ಓಡಿಹೋಗುತ್ತದೆ? ನಾನೇನೂ ನಿಂತ ಕಾಲ ಮೇಲೆಯೇ ಹೊರಟು ಹೋಗುವುದಕ್ಕೆ ಬಂದವನಲ್ಲ. ಒಂದು ದಿನ ಉಳಿದೇ ಹೋಗುತ್ತೇನೆ. ನಿನ್ನ ಆತಿಥ್ಯ ಆಮೇಲೆ. ಅದೇನು ಸುಖ-ದುಃಖದ ಕತೆ ಎಂದೆಯಲ್ಲ...."

"ಹೌದು, ಕತೆ ಎಂದೆ. ಅದು ಕತೆಯೆ! ನನ್ನ ಅಳಲೇ ಮೊದಲಾಗಲಿ ಎಂದಾಗ ಹೇಳಬೇಕಾಯಿತು" ಎಂದು ಚೇತನವೇ ಉಡುಗಿ ಹೋಗಿದ್ದವನಂತೆ ಅವನು ಮಾತು ಎತ್ತಿದ್ದ—

× × × ×

"ವಸಂತ, ಕಾಲೇಜಿನಲ್ಲಿ ಲೆಕ್ಚರರನಾಗಿದ್ದ ನಿನಗೆ, ನಿನ್ನ ಲೆಕ್ಚರು ಮುಗಿದೊಡನೆಯೇ ಮನೆಗೆ ಮರಳುವುದಾದ ಸ್ವಾತಂತ್ರ್ಯ ಇದೆ. ಆದರೆ ಈ ಸೆಕ್ರೆಟರಿಯೇಟಿನಲ್ಲಿ ಕೆಲಸ ಮಾಡುವ ನನ್ನಂತಹನಿಗೆ ಹಾಗಲ್ಲ. ಆಫೀಸಿನ ವೇಳೆ ಮುಗಿದರೂ ಈ ವೃತ್ತಿ ನಿರ್ವಹಿಸಿಕೊಳ್ಳುವುದಕ್ಕೆ ದಿದವೂ ಲೇಟು ಕುಳಿತುಕೊಳ್ಳಬೇಕಾಗುತ್ತದೆ ಎಂದರೂ ತಪ್ಪಲ್ಲ. ಆ ದಿನವೂ ಹಾಗೇ ಲೇಟಾಗಿ ಆಫೀಸಿನಿಂದ ಹೊರಟು ಚರ್ಚ್‌ಗೇಟ್ ಸ್ಟೇಶನ್ನಿಗೆ ಬಂದಾಗ, ಟಿ. ಸಿ. ಒಬ್ಬ ತರುಣಿಯನ್ನು ತಡೆದು ನಿಲ್ಲಿಸುತ್ತಿದ್ದ. ಕತ್ತಲಾಗುವ ಹೊತ್ತು. ಗದ್ದಲ ಕಡಿಮೆಯಾಗಿತ್ತು. ಕಾರಣ ನಾನಾಗಲೇ ಊಹಿಸಿಕೊಂಡಿದ್ದರೂ, ಆ ತರುಣಿಯನ್ನು ಕಂಡು ಏಕೋ ಹಾಗೇ ನಿಂತೆ. ನನ್ನನ್ನು ಕಂಡಾಗ ಅವಳಿಗೆ ಏನೆನ್ನಿಸಿತೊ: 'ಮಿಸ್ಟರ್' ಎಂದು ನನ್ನನ್ನೇ ಕರೆದು ಕೈಮಾಡಿದ್ದಳು. ಅಪರಿಚಿತ ಹೆಣ್ಣು ಇಷ್ಟು ದಿಟ್ಟೆಯಾಗಿ ಹಾಗೆ ನಡೆದುಕೊಂಡ ಬಗ್ಗೆ ನನಗೇ ಸ್ವಲ್ಪ ಸಂಕೋಚವೆನ್ನಿಸಿತಾದರೂ, ಆ ಕರೆಯನ್ನು ಮೀರಿ ಮುಂದುವರಿಯುವಷ್ಟು ನಿರ್ದಾಕ್ಷಿಣ್ಯತೆಯೂ ನನ್ನಲ್ಲಿ ಉಳಿದಿರಲಿಲ್ಲ. ಅವಳೇ ಸ್ವಲ್ಪ ನನ್ನತ್ತ ಮುಂದುವರಿದು "Mister, I have been caught by this T. C for having forgotten to bring my pass that I Kept in my purse. So I seek some help Can you? ಎಂದಾಗ, "What help you waut?" ಎಂದು ಥಕ್ಕನೆ ಪ್ರಶ್ನಿಸಿಬಿಟ್ಟಿದ್ದೆ. "You keep this ring and give me five Rupees. I will repay your amount tomorrow and take it back" ಎಂದು ನನ್ನ ಕೈಗೆ ತನ್ನ ಎಡಗೈ ನಡುಬೆರಳಿಗೆ ಸಿಕ್ಕಿಸಿಕೊಂಡಿದ್ದ ಹೊಳೆಯುವ ನೀಲಿ ಹರಳಿನ ಉಂಗುರವನ್ನು ತೆಗೆದು, ಸ್ವಲ್ಪವೂ ಸಂಕೋಚಪಡದೆ ನನ್ನ ಬಲಗೈ ಕಿರು ಬೆರಳಿಗೆ ಸಿಕ್ಕಿಸಿದಾಗ 'ನಾನು ಕೊಡಲಾರೆ, ಯಾಕೆ ನನ್ನಲ್ಲಿ ಅಷ್ಟು ಹಣವಿಲ್ಲ' ಎನ್ನುವುದಕ್ಕೂ ದಾರಿ ಉಳಿದಿರಲಿಲ್ಲ. ಹಾ

ಬೇರೆ ಕೈಯ್ಯಲ್ಲಿ ಇರುವಾಗ, ಕೇಳಿದ್ದಕ್ಕೂ ಹೆಚ್ಚಿನ ಬೆಲೆಯ ವಸ್ತು ನನ್ನಲ್ಲಿ ಇಟ್ಟಿರುವಾಗ, ಅಂಥ ಹೆಣ್ಣಿನ ಮಾತು ಅಲ್ಲಗಳೆಯಬೇಕು ಎಂಬ ಬುದ್ಧಿ ನನ್ನಂಥ ತರುಣನಲ್ಲಿ ಉಂಟಾಗುವುದು ಶಕ್ಯವಿಲ್ಲ. ಕೋಟಿನ ಕಿಸೆಯಿಂದ ಪಾಕೀಟು ಹೊರಗೆ ತೆಗೆದು ಐದು ರೂಪಾಯಿಯ ನೋಟನ್ನು ಅವಳಿಗೆ ಕೊಡುತ್ತಿರುವಂತೆ "Let me know your name and address please" ಎಂದು ಕೇಳಿದ್ದಕ್ಕೆ ನಾನು ಕೊಡಬೇಕಾಯಿತಷ್ಟೆ. ನನಗೆ ಹಣ ವಾಪಸು ಮುಟ್ಟಿಸಿ, ಅವಳ ವಸ್ತು ಅವಳು ಪಡೆಯ ಬಯಸಿ ಕೇಳುತ್ತಿದ್ದಾಳೆ— ಎಂದು, ಮರುದಿನ ಆಫೀಸಿಗೇ ಬಂದು ಕಾಣುವುದು ಒಳಿತು ಎಂದು ಹೇಳಿದೆ: ಈ ನೌಕರಿಗೆ ಬಂದ ತಪ್ಪಿಗೆ ಹಗಲೆಲ್ಲ ಆಫೀಸೇ ಮನೆ ಎಂಬುದಕ್ಕೆ. ನನ್ನಿಂದ ಹಣ ಪಡೆಯುತ್ತಲೇ "Thank you very much" ಎಂದು ಆ ಟಿ. ಸಿ.ಯತ್ತ ತಿರುಗಿ "ಅರೇ, ಫ್ಯಾನ್ಸನೇವಾಲೇ, ಲೋ ತುಮ್ಹಾರೇ ಪೈಸೇ!" ಎಂದು ಒಂದು ರೀತಿಯಲ್ಲಿ, ಅದೇ ನೋಟನ್ನು ಅವನಿಗೆ ಕೊಡಹೋದಾಗ, ಅವನು ನನ್ನನ್ನು ನೋಡಿ ತಡೆದರೂ, ಒಂದು ವಿಚಿತ್ರ ನಗೆಯನ್ನು ಬೀರುತ್ತಿರುವುದನ್ನು ಕಂಡಾಗ, ನನಗೆ ತಿಳಿಯದಂತೆಯೇ ನಾನು, ಅವಳನ್ನೂ ನೋಡದೆ ಅಲ್ಲಿಂದ ಕಾಲುಕಿತ್ತು ಪ್ಲೆಟಫಾರ್ಮಿನ ಒಳಗೆ ನಡೆದಿದ್ದೆ.

ಆ ಮರುದಿನ ನಾಲ್ಕು ಗಂಟೆಯ ಸುಮಾರಿಗೆ ನಮ್ಮ ಆಫೀಸಿಗೆ ನನ್ನನ್ನು ಹುಡುಕಿಕೊಂಡು ಅವಳು ಬಂದೇ ಬಂದಳು. ಸಹೋದ್ಯೋಗಿಗಳ ಎದುರು ಅವಳೊಂದಿಗೆ ಮಾತಿಗೆ ಸಂಕೋಚವೆನ್ನಿಸಿದ್ದಕ್ಕೆ, ಅವಳನ್ನು ಕಂಡೊಡನೆಯೇ ನಾನು "ಬನ್ನಿ, ಸ್ವಲ್ಪ ಚಹ ತೆಗೆದು ಕೊಳ್ಳೋಣ" ಎಂದು ನಮ್ಮ ಕೆಂಟೀನಿಗೆ ಅವಳನ್ನು ಕರೆದೊಯ್ದಿದ್ದೆ. ಅಲ್ಲಿ ಕುಳಿತ ಹದಿನೈದು ನಿಮಿಷಕಾಲ ಅವಳು, ಬಹುದಿನಗಳ ಪರಿಚಿತಳಂತೆ ನನ್ನೊಂದಿಗೆ ಮಾತನಾಡುವುದನ್ನು ಕಂಡಾಗ, ಅವಳ ಸ್ವಚ್ಛಂದತೆಯನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೆ. ಅಲ್ಲಿಂದ ಹೊರಬಿದ್ದೊಡನೆಯೇ ಅವಳು ತನ್ನ ಪರ್ಸ್ ತೆಗೆದು, ಐದು ರೂಪಾಯಿಯ ನೋಟು ತೆಗೆದು ಕೊಡುತ್ತಿದ್ದಾಗಲೇ—ನಾನು ಅವಳ, ಹಿಂದಿನ ದಿನ ನನ್ನ ಬೆರಳಿಗೆ ಹಾಕಿದ್ದ—ಉಂಗುರ ಕಳಚಿಕೊಟ್ಟೆ. ಅವಳು ನಡೆದುಕೊಂಡಿದ್ದ ಸಲುಗೆಯಲ್ಲಿ ಮಾತ್ರ ನನ್ನಿಂದ ವರ್ತಿಸಲಾಗಲಿಲ್ಲ ಆಗಲೂ; ಆದರೂ ಹಿಂದಿನ ದಿನ ಮರೆತ ಒಂದು ಮಾತು ನನಗೆ ನೆನಪಾಗಿ "May I know your name please" ಎಂದೆ. ಅವಳು ತಕ್ಷಣವೇ "ಚತುರಾ" ಎಂದು ಅಂದಾಗ "it's very sweet" ಎಂದು ಉಸಿರಿದ್ದೆ. ಆ ಮಾತು ಅವಳನ್ನು ಉಬ್ಬಿಸಿರಬೇಕು. ಅದೇ ಅರಿಬಿರಿದ ನಗೆಯಲ್ಲಿ "I am very much thankful to you. May I expect this friendship will continue?" "Why not? surely!" ಎಂದು ನನಗರಿಯದಂತೆ ಉತ್ತರ ಹೊರಟುಹೋಗಿತ್ತು. ಆ ಮಾತಿನಲ್ಲಿ ತನ್ನ ಬಗೆಗೆ ನನ್ನ ಅಂತರಂಗವನ್ನೇ ಅವಳು ಅರಿತುಕೊಂಡಳೇನೊ! ಅವಳ ಸಲುಗೆ ಸ್ನೇಹದ ದಿಕ್ಕು ಹಿಡಿದಿತ್ತು. ಮಾತಿನ ದಿಶೆಯನ್ನು ಬದಲಿಸಿತ್ತು.

"Have you seen Samsons & Delielha?"

"No I seldom go to picture"

"shall we go? I am told much about the picture"

ಎಂದು ಅವಳಾಗಿ ದಾಗ, ಆ ಹೆಣ್ಣಿನ ಕರೆಯನ್ನು ನಿರಾಕರಿಸುವಷ್ಟು ನಿರ್ದಯತೆ ನನ್ನಲ್ಲಿ ಉಳಿದಿರಲಿಲ್ಲ. ಮರುದಿನ ಶನಿವಾರವಾಗಿತ್ತು. ೩ ಗಂಟೆಗೆ ನ್ಯೂ ಎಂಪಾಯರಿನಲ್ಲಿ ತಾನು ನಿರೀಕ್ಷಿಸುವೆನೆಂಬ ಅವಳ ಆಗ್ರಹಕ್ಕೆ ಒಪ್ಪಿ, ಅವಳನ್ನು ಬೀಳ್ಕೊಂಡು ಆಫೀಸಿಗೆ ಮರಳಿದೆ.

ಅವಳ ಒಂದೊಂದು ಮಾತೂ ಆಗಲೇ ನನಗೆ ಮೋಡಿ ಹಿಡಿಸಿತ್ತು. ಯಾವುದೋ ವಿಸ್ಮರಣೆ ಮನಸ್ಸನ್ನು ಮುತ್ತುತ್ತಿತ್ತು. ನನ್ನ ಸಂಕೋಚದ ಸ್ವಭಾವದಿಂದಾಗಿ, ಇಂತಹ ಸಿಟಿಯಲ್ಲಿ ಇದ್ದರೂ ಹೆಣ್ಣಿನ ಸಲುಗೆ ಸ್ನೇಹ ಇಷ್ಟು ಸನಿಹವಾಗಿ ಬಂದದ್ದು ನನಗೆ ಇದೇ ಮೊದಲಾಗಿತ್ತು. ಆಫೀಸಿನಲ್ಲಿ ಕುಳಿತಿದ್ದರೂ ಮನಸ್ಸು ಮರುದಿನದ ಸ್ಮರಣೆಯಲ್ಲೇ ಉತ್ಸಿತವಾಗಿತ್ತು.

ಆ ಮರುದಿನ ಥೇಟರಿನಿಂದ ಹೊರಬೀಳುವಾಗ ನಾನು ಪೂರಾ ಅವಳ ಸ್ಮೃತಿಯಲ್ಲೇ ಮುಳುಗಿಹೋಗಿದ್ದೆ. ಹರಯದ ಹೆಣ್ಣು ಅಷ್ಟು ಸಲುಗೆಯುವಳಾದಾಗ ನಾನು ವಿವಶನಾದದ್ದು ಅಸಹಜವಲ್ಲ. ಎಂದರೆ ನನ್ನನ್ನೇ ನಾನು ಸಮರ್ಥಿಸಿಕೊಳ್ಳುತ್ತಿದ್ದೇನೆ ಎಂದು ಅಲ್ಲ. ನನ್ನ ಇರುವಿಕೆ, ವಯಸ್ಸು ಅದಕ್ಕೆ ಅನುಕೂಲವಾಗಿತ್ತೆನ್ನುವುದೂ ನಿಜ. ಮೊದಲಿನಿಂದಲೂ ನನಗೆ ಸಿನೇಮಾದ ಗೀಳು ಇಲ್ಲವಲ್ಲ! ಅವಳ ಕರೆಗೆ ಹೋದ ನಾನು ಪೂರಾ ಸೋತುಹೋಗಿದ್ದೆ ಎಂದರೂ ಸರಿ. ಆ ಮರೆವಿನಲ್ಲಿ ಚಿತ್ರದ ಕತೆ ನನ್ನ ತಿಳುವಳಿಕೆಗೆ ನಿಲುಕಿದ್ದೇನೂ ಇಲ್ಲ. ಅಲ್ಲಿಂದ ಹೊರಟ ಮೇಲೆ ನನ್ನ ವಿಚಾರದಲ್ಲಿ ತುಂಬಾ ಪ್ರಶ್ನೆ ಮಾಡಿದ್ದಳವಳು. ನಾನಿಲ್ಲಿ ಒಂಟಿಯಾಗಿದ್ದು ಅವಿವಾಹಿತನಾಗಿರುವೆನೆಂದು ಅರಿತುಕೊಳ್ಳುವ ಉದ್ದೇಶವಾಗಿತ್ತೇನೊ!

ಹಾಗೆ ಹೊರಟ ನಾವು ಹೋಟೆಲ್ಲು ಹೊಕ್ಕು ಹೊರಬಿದ್ದೂ ಆಯಿತು. ಅನಂತರ ಒಂದು ಗಂಟೆಗೂ ಹೆಚ್ಚು ಕಾಲ ಫೋರ್ಟಿನ ತುಂಬಾ ಜೊತೆಯಾಗಿ ಅಲೆದೆವು. ಆಗ ಆಡಿದ ಮಾತು ಎಷ್ಟೋ ಏನೊ! ಅದೆಲ್ಲ ನೆನಪಿಗೆ ಬರುವುದಲ್ಲ. ಅದೇ ಸಂಜೆಯಾಗುತ್ತಿದ್ದಂತೆ ಹೊತ್ತಿಕೊಂಡಿದ್ದ ಸಾಲುದೀಪದ ಬೆಳಕಿಗೆ, ಅವಳ ಸ್ನಿಗ್ಧ ಕಣ್ಣುಗಳ ಹೊಳಪಿಗೆ ನನ್ನ ಕಣ್ಣು ಕೋರೈಸಿತ್ತು. ಹೆಣ್ಣಿನ ಹರಯವೇ ಮಾದಕವಾಗಿದ್ದರೆ, ಅವಳ ಚೆಲುವು ಅದಕ್ಕೆ ಇಮ್ಮಡಿ ಎಂದರೆ ಅವಳ ಚೆಲುವಿನ ಬಗೆಗೆ ಮತ್ತೆ ವಿವರಣೆ ಬೇಡ. ನನ್ನ ಮನಸ್ಸು ಎಂದೂ ಸಿಲುಕದ ತರ್ಕ-ವಿತರ್ಕಕ್ಕೆ ಆಗಲೇ ಸಿಲುಕಿಕೊಂಡಿತ್ತು. ಹಾಗೆ ರಾಜರಸ್ತೆಯಲ್ಲಿ ನಡೆದಿದ್ದೇವೆ ಎಂಬುದನ್ನೂ ಮರೆತು, ಅವಳನ್ನು ಅಪ್ಪಿ ಚುಂಬಿಸಬೇಕು ಎಂಬ ಬಯಕೆ ಉಂಟಾದದ್ದು ಒಂದು ಬಾರಿಯಲ್ಲ. ಅಂಥ ಹೆಣ್ಣಿನ ಬಗೆಗೆ ಯಾವ ತರುಣನಿಗೂ ಆ ಸಾಮೀಪ್ಯದಲ್ಲಿ ಉಂಟಾಗುವ ಸಹಜವಾದ ಬಯಕೆ ಅದು. ಆದರೆ ಬಯಕೆ ಮತ್ತು

ಆಚರಣೆಗಳ ನಡುವೆ ಗೌರವದ ಮಾತು ಒಂದು ಇದೆ ಎಂದು ನನ್ನ ವಿವೇಕ ತಡೆಯುತ್ತಿತ್ತು.

ಈ ಬಗೆಯಲ್ಲಿ ನನ್ನ ಎಣಿಕೆಗಳನ್ನು ಉದ್ರೇಕಿಸಿ, ನನ್ನ ಅಂತರಂಗದಲ್ಲಿ ತನ್ನ ಹೆಣ್ತನದ ಪ್ರಭಾವ ಕೆಡಹಿ "ಹೊತ್ತಾಯಿತು ಹೋಗುತ್ತೇನೆ" ಎಂದಾಗ, ನನ್ನ ವಿಹ್ವಲತೆಯನ್ನೆಲ್ಲ ಹತ್ತಿಕ್ಕಿ ಅವಳನ್ನು ಬೀಳ್ಕೊಟ್ಟೆ. ಆಮೇಲೆ ನನಗೆ ನೆನಪಾಗಿತ್ತು "ಮತ್ತೆ ಸಿಗುವುದೆಂದು?" ಎಂದು ಅವಳನ್ನು ಕೇಳಬೇಕಿತ್ತು ಎಂದು. ಅವಳ ಪತ್ತೆಯನ್ನಾದರೂ ಕೇಳಿ ತಿಳಿದುಕೊಂಡಿದ್ದರೆ, ನಾನಾದರೂ ಹೋಗಿ ಕಾಣಬಹುದಾಗಿತ್ತು—ಎಂಬ ವಿಚಾರವೂ ಆಮೇಲೆ ಬಂದಿತ್ತು. "ಅವಳು ನನ್ನ ವಿಚಾರದಲ್ಲಿ ಏನೆಲ್ಲಾ ಕೇಳಿದಳು; ನಾನು ಅವಳ ವಿಚಾರದಲ್ಲಿ ಏನೂ ಕೇಳಲಿಲ್ಲವಲ್ಲ. ತನ್ನ ಬಗೆಗೆ ನಾನು ಅಷ್ಟು ಅನಾಸಕ್ತ ಎಂದುಕೊಂಡರೆ?" ಎಂದು ನನ್ನಲ್ಲೇ ಎಂದುಕೊಳ್ಳತೊಡಗಿದ್ದೆ.

ಅನಂತರ ಒಂದು ವಾರವೆಲ್ಲ ಅವಳ ನೆನಪಿನಲ್ಲೇ ಕಳೆಯುತ್ತಿದ್ದಂತೆ ಬಂದ ಶನಿವಾರ, ಲೇಟು ಕೂತ್ಕೊಳ್ಳುವ ಮನಸ್ಸಿಲ್ಲದೆ ಆಫೀಸಿನ ವೇಳೆ ಮುಗಿದೊಡನೆಯೇ ಹೊರಟು ಗೇಟಿಗೆ ಬಂದಾಗ, ಅಲ್ಲಿ ಟಿಕೇಟಿಗಾಗಿ ಅವಳು ನಿಂತಿರುವುದನ್ನು ಕಂಡು, ಕಳೆದುಕೊಂಡ ವಸ್ತು ಸಿಕ್ಕಾಗ ಸಂತೋಷಪಡುವಂತೆ ಅವಳ ಬಳಿಸಾರಿ "Hullo! where were you all these days? All the while I was remembering you." ಎಂದು ನನ್ನನ್ನೇ ನಾನು ಮರೆತು ಆಡಿಬಿಟ್ಟಿದ್ದೆ.

"It is very good of you ಎಂದು ನಕ್ಕಳು. ನನಗೆ ಮಾತಿನ ಚಪಲ ಉಂಟಾಗಿತ್ತು: "So how you happen to meet me here?"

"I had been to University"

"Is it, why?"

"To see my B. A. result" ಎನ್ನುವಾಗ, ಅವಳ ಮೊಗದಲ್ಲಿದ್ದ ಗೆಲವನ್ನು ನೋಡಿಯೇ ನಾನು ಊಹಿಸಿಬಿಟ್ಟೆ—ಅವಳು ಪಾಸಾಗಿದ್ದಾಳೆಂದು.

"Congratulations! when are you going to give a party then?" ಎಂದು ಕೇಳಿದ್ದಕ್ಕೆ

"Surely you will be given. but not today as I have got some urgent work to attend now"

ಆಮೇಲೆ ತಿಂಗಳಷ್ಟಾದರೂ ಕಾಲ ಸಂದಿರಬೇಕು. ನಿಧಾನವಾಗಿ ನನ್ನ ಸ್ಮೃತಿಯಿಂದ ಅವಳು ಮರೆಯಾಗುತ್ತಿರುವಷ್ಟಕ್ಕೆ, ಒಂದು ದಿನ ಅವಳು ಆಫೀಸಿಗೇ ನನ್ನನ್ನು ಹುಡುಕಿಕೊಂಡು ಬಂದವಳು ಹಿಂದಿಯಲ್ಲಿ "ಪಾರ್ಟಿ ಕೇಳಿದವರು ಮತ್ತೆ ಭೆಟ್ಟಿಯಾಗಲೇ ಇಲ್ಲವಲ್ಲ? ಆದರಿಂದ ನಾಳೆಗ್ಗೆ ನಮ್ಮಲ್ಲಿಗೆ ಬರಬೇಕು ಎಂದು ಕರೆಯುವುದಕ್ಕೆ ಬಂದೆ" ಎಂದು ಮೃದುವಾಗಿ—ನನಗಷ್ಟೇ ಕೇಳುವಂತೆ—ಪಿಸುಗುಟ್ಟಿದ್ದಳು. ಅಂದಿನ ಅವಳ ಚೆಲುವಿನಲ್ಲಿ ಏನೋ ಒಂದು ಹೊಸತನವಿತ್ತು. ಅವಳ ಸಹವಾಸ ನನಗೆ ಬೇಡವಾಗಿರದಿದ್ದರೂ, ಸಹೋದ್ಯೋಗಿಗಳ ನಡುವೆ ಹೆಣ್ಣೊಂದಿಗೆ ಅಷ್ಟು ಸಲುಗೆ ತೋರಿಸುವುದಕ್ಕೆ ಸಂಕೋಚವೆನ್ನಿಸಿದ್ದಕ್ಕೆ, ಮತ್ತೆ ಮಾತು ಬೆಳೆಸದೆ "ಸರಿ. ವಿಳಾಸ ಕೊಟ್ಟು ಹೋದರೆ, ತಿಳಿಸಿದ ಹೊತ್ತಿಗೆ ನಾನು ಹುಡುಕಿಕೊಂಡು ಬರುತ್ತೇನೆ" ಎಂದೆ.

"ಅಷ್ಟು ತೊಂದರೆ ಯಾಕೆ? ಮೂರು ಗಂಟೆಗೆ ನೀವು ಬಾಂದ್ರಾ ಸ್ಟೇಷನ್ನಿಗೆ ಬನ್ನಿ. ಅಲ್ಲಿ ನಾನು ನಿಮಗಾಗಿ ಆ ಹೊತ್ತಿಗೆ ಕಾಯುತ್ತಿರುತ್ತೇನೆ."

"ಹಾಗಾದರೆ ನಾಳೆ ಆಫೀಸಿಗೆ ಚಕ್ರ ಹಾಕಬೇಕೆ?"

"ನನಗಾಗಿ ಅಷ್ಟು ಮಾಡಿ" ಎಂದು ಅವಳು ಸಲುಗೆಯಿಂದ ಅಂದಾಗ, ಮತ್ತೆ ಮಾತು ಬೆಳೆಸದೆ ಒಪ್ಪಿ ಕಳುಹಿದ್ದೆ.

ಮಾತು ಕೊಟ್ಟಂತೆ ಮರುದಿನ ಬಾಂದ್ರಾ ಸ್ಟೇಶನ್ನಿನಲ್ಲಿ ಅವಳನ್ನು ಕಂಡೆ. "ನಮ್ಮ ಮನೆ ಇಲ್ಲಿಂದ ಸ್ವಲ್ಪ ದೂರವಿದೆ; ಬಸ್ಸಿನಲ್ಲಿ ಹೋಗೋಣ" ಎಂದು ಅವಳು ಅಂದದ್ದಕ್ಕೆ ನಾನೇ ಬೇಡವೆಂದೆ. 'ಇಬ್ಬರೂ ಜೊತೆಯಾಗಿ ಹರಟುತ್ತ ಹೋಗಬಹುದಲ್ಲ' ಎಂದು. ದಾರಿ ನಡೆಯುತ್ತಿದ್ದಂತೆ ನಾನು ಅವಳಲ್ಲಿ ಹೇಳುತ್ತಿದ್ದೆ: "ಆಕಸ್ಮಿಕವಾಗಿ ಆದ ಪರಿಚಯದಿಂದ ಬೆಳೆದ ಸ್ನೇಹಕ್ಕೆ ಕಟ್ಟುಬಿದ್ದು ನಿಮ್ಮ ಕರೆಗೆ ಒಪ್ಪಿಕೊಂಡೆ. ಆದರೆ ನಿಮ್ಮ ಮನೆಮಂದಿಯ ಪರಿಚಯ ನನಗಿಲ್ಲ. ಆದರಿಂದ ನನಗೆ ಸ್ವಲ್ಪ ಸಂಕೋಚವೆನ್ನಿಸುತ್ತದೆ. ನಿಮ್ಮ ಮನೆಯ ಜನಕ್ಕೆ ಅಪರಿಚಿತನಾದ ನನ್ನನ್ನು ನೀವು ಕರೆದಿದ್ದೀರಿ. ನಿಮಗೆ ಮನೆಯಲ್ಲಿ ಅಷ್ಟು ಸ್ವಾತಂತ್ರ್ಯವಿದೆಯೆ?"

"ಮನೆಯಲ್ಲಿ ನನಗೆ ಬೇಕಾದ ಸ್ವಾತಂತ್ರ್ಯ ಇಲ್ಲ ಎನ್ನಲಾರೆ. ಆದರೆ ಇಂದು ಮನೆಯಲ್ಲಿ ಮತ್ತೆ ಯಾರೂ ಇಲ್ಲ."

ನನಗೆ ಅಷ್ಟೇ ಸಾಕಾಯಿತು. ಮತ್ತೆ ಆ ಬಗ್ಗೆ ವಿವರಣೆ ಕೇಳುವ ಕುತೂಹಲ ನನಗೆ ಉಂಟಾಗಲಿಲ್ಲ. ನನ್ನ ಮನಸ್ಸಿನ ಮೇಲೆ ಅವಳ ಪ್ರಭಾವ ಬಿದ್ದಿರುವಂತೆ, ಅವಳ ಮನಸ್ಸಿಗೂ ನನ್ನ ಕುರಿತ ವಿಚಾರ ಇಲ್ಲದಿಲ್ಲ. ಇಲ್ಲವಾದರೆ ಇಂದು ಇವಳ ಈ ಔತಣವೇನು? ಎಂದೆಲ್ಲ ಯೋಚಿಸತೊಡಗಿದ್ದೆ. ಆ ಸ್ಥಿತಿಯಲ್ಲಿ ಏನೇನೋ ಹರಟುತ್ತಲೇ ಅವಳ ಮನೆ ತಲುಪಾಗಿತ್ತು. ಬಾಂದ್ರಾ ಸೀಫೇಸಿನಲ್ಲಿ ಒಂದು ಸಣ್ಣ ಬಂಗಲೆ ಅದು. ಅದರಲ್ಲಿ ಮುಂಬದಿಯ ಮೂರು ರೂಮಿನ ಒಂದು ಬ್ಲೋಕು ಅವಳ ಮನೆಗೆ ಸೇರಿದ್ದು. ಹೊರಗೆ ವರಾಂಡದಲ್ಲಿ ಕುಳಿತರೆ ಎದುರಿಗೆ ಕ್ಷಿತಿಜದ ಅಂಚಿನ ವರೆಗೂ ಹಬ್ಬಿರುವ ಅಪಾರಜಲಧಿ. ಅಲ್ಲಿಯ ಸುಳಿಗಾಳಿಯಲ್ಲಿ ಕುಳಿತು ಪಶ್ಚಿಮಕ್ಕೆ ನಡೆದ ಸೂರ್ಯ ನೋಡುವುದಕ್ಕೆ ತುಂಬಾ ಸೊಗಸು. ಅಲ್ಲಿಯ ವಾತಾವರಣವೇ ನನಗೊಂದು ಹಿತವಾದ ಅನುಭವವನ್ನು ಕೊಡುತ್ತಿತ್ತು.

ನನ್ನ ಮೈಮರೆವಿನಲ್ಲಿ—ಅವಳು ತಂದಿಟ್ಟ ತಿಂಡಿಗಳು ಏನು? ನಾನೆಷ್ಟು ತಿಂದೆ? ಎಂಬ ಅರಿವು ನನಗಿರಲಿಲ್ಲ. ಅಂದಿನ ಅವಳ ನುಡಿ, ನಡೆದ ರೀತಿ, ನಮ್ಮಿಬ್ಬರಿಗೇ ಮೀಸಲಾದ ಆ ಏಕಾಂತ ನನಗೆ ಪೂರಾ ಹುಚ್ಚು ಹಿಡಿಸಿಬಿಟ್ಟಿತ್ತು. ಉಪಾಹಾರ ಮುಗಿಸಿ ನಾನು ಅಲ್ಲೇ

ಕೋಟಿನ ಮೇಲೆ ಸ್ವಲ್ಪ ಒರಗಿಕೊಂಡಿದ್ದೆ. ಅವಳೂ ಅಲ್ಲೇ ಮೈಗೆ ತಾಗಿಯೂ ತಾಗದವಳಂತೆ ಬಂದು ಕುಳಿತು "ನೀವು ಬಿ. ಎ. ಎಲ್ ಎಲ್. ಬಿ. ಆಗಿ ಈ ಸರಕಾರೀ ನೌಕರಿಗೆ ಜೋತುಬೀಳುವುದೆ?" ಎಂದು ಪ್ರಶ್ನಿಸಿದ್ದಳು.

"ನನಗೂ ಒಮ್ಮೊಮ್ಮೆ ಹಾಗೆ ಅನ್ನಿಸುತ್ತದೆ, ಮೈಮೇಲೆ ಬಿದ್ದ ಆಫೀಸಿನ ಕೆಲಸದ ಹೊರೆಯನ್ನು ಕಂಡಾಗ. ಆದರೆ ಈ ಮೂರು ವರ್ಷದ ಸರ್ವೀಸಿನಲ್ಲೇ ನನಗೆ ಕೆಲಸ ಖಾಯಂ ಆಗಿದೆ. ಪ್ರಮೋಶನ್ನೂ ಸಿಕ್ಕಿದೆ. ಇನ್ನೂ ಮೇಲಕ್ಕೆ ಏರಬಹುದು ಎಂಬ ಭರವಸೆಯೂ ಇದೆ. ಇದನ್ನೆಲ್ಲ ನೋಡುವಾಗ, ಇಲ್ಲಿ ನೊಣ ಹೊಡೆಯುವ ಎಷ್ಟೋ ಲಾಯರುಗಳಿಗಿಂತ ನಾನು ಅನುಕೂಲವಾಗಿ ಇದ್ದೇನೆ ಎಂದು ಹೇಳಬಹುದಾಗಿದೆ. ಇಲ್ಲಿ ಪ್ರಾಕ್ಟೀಸಿಗೆ ನಿಲ್ಲುವುದು ಎಂದರೆ ಸುಲಭವೆ? ಅಷ್ಟೆಲ್ಲ ಖರ್ಚುಮಾಡಿ ನಾನೂ ಹತ್ತರ ಜೊತೆಗೆ ಹನ್ನೊಂದಾಗಿ ನೊಣ ಹೊಡೆಯುವ ಪರಿಸ್ಥಿತಿಯೇ ಆದರೆ? ಆದರಿಂದ ಈ ನೌಕರಿಯೇನೂ ಹಾಳಲ್ಲ ಎಂದುಕೊಂಡಿದ್ದೇನೆ." ಎಂದು ನಾನು ಆಡುತ್ತಿದ್ದಾಗ, ಅವಳ ಮೈ ಹೆಚ್ಚು ಹೆಚ್ಚಾಗಿ ನನ್ನ ಕಡೆಗೆ ವಾಗಿತ್ತು. ಏಕಾಂತದಲ್ಲಿ ಹರೆಯದ ಹೆಣ್ಣು ಅಷ್ಟು ಸಲುಗೆ ತೋರುವಾಗ ಯಾವ ತರುಣ ಸಂಯಮ ಕಾದುಕೊಳ್ಳಬಲ್ಲ? ಆ ವಿಸ್ಮೃತಿಯಲ್ಲಿ ಬರಸೆಳೆದು ಅವಳನ್ನು ಚುಂಬಿಸಿಬಿಟ್ಟೆ. ಅವಳಿಂದ ಯಾವ ಬಗೆಯ ನಿರಾಕರಣೆಯೂ ಬಾರದ ಮೇಲೆ ಮತ್ತು ಹಿಡಿದವರಂತೆ ಮತ್ತೆ ಮತ್ತೆ ಅವಳನ್ನು ಎಷ್ಟು ಬಾರಿ ಚುಂಬಿಸಿದೆನೊ! ಅಷ್ಟು ಸಂಯಮ ಸಡಿಲಿ ಹೋಗಿದ್ದರೂ, ಮೈಚಳಿ ಬಿಟ್ಟು ಕಾಮುಕನಾಗಿ ನಡೆದುಕೊಳ್ಳಲಿಲ್ಲ. ಅದುವರೆಗೆಂದೂ ಪಡೆಯದ ಹೆಣ್ಣಿನ ಆಲಿಂಗನ-ಚುಂಬನ ಪಡೆದ ಧನ್ಯತೆಯೇ ನನಗೆ ಬೇಕಾದಷ್ಟಾಗಿತ್ತು. ಕತ್ತಲಾದಾಗ ಅಲ್ಲಿಂದ ಹೊರಟಿದ್ದೆ....ನನ್ನ ಮನದಲ್ಲೆಲ್ಲಾ ಅವಳನ್ನೇ ತುಂಬಿಕೊಂಡು.

ಅಂದಿನಿಂದ ದಿನವೂ ಅವಳ ಸಾಮೀಪ್ಯಕ್ಕಾಗಿ ಮನಸ್ಸು ಹಲವು ಬಗೆಯಲ್ಲಿ ಯೋಚನೆಗೆ ಒಳಗಾಗುತ್ತಿತ್ತಾದರೂ, ಅವಳು ಕರೆಯದೆ ನಾನಾಗಿ ದೇಶಾವರಿಯವನಂತೆ ಹೋಗುವುದೆ? ಈಗಲೂ ಮನೆಯಲ್ಲಿ ಅವಳು ಒಬ್ಬಳೇ ಇರುವಳೆಂದು ಹೇಗೆ ಹೇಳುವುದು? ಹಾಗೇನಾದರೂ ಇದ್ದರೆ ಅವಳು ನನ್ನನ್ನು ಹುಡುಕಿಕೊಂಡು ಬರಬಹುದಾಗಿತ್ತಲ್ಲ! ನನಗೆ ಅಂದು ಅಷ್ಟಕ್ಕೆಲ್ಲ ಆಹ್ವಾನ ಕೊಟ್ಟವಳು ಅವಳೇ ಅಲ್ಲವೆ? ಎಂದು ನೂರು ಬಗೆಯಲ್ಲಿ ಯೋಚಿಸುತ್ತ ಎಂಟು ದಿನ ಕಳೆದಾಗ, ಒಂದು ದಿನ ಆಫೀಸು ತೆರೆಯುವ ವೇಳೆಗೂ ಮೊದಲು, ನನ್ನನ್ನು ಅರಸಿಕೊಂಡು ಯಾರೋ ಇಬ್ಬರು ಬಂದಿರುವುದು, ನಾನು ಆಫೀಸು ಒಳಸೇರಿದಾಗಲೇ ಜವಾನ ಹೇಳಿದಾಗ ತಿಳಿಯಿತು. 'ಯಾರಿರಬಹುದು? ಯಾಕೆ ಬಂದಿರಬಹುದು?' ಎಂದುಕೊಂಡು ನಾನು ನೋಡುವುದಕ್ಕೆ ಹೊರಟೆ. ಒಬ್ಬ ಹರಯ ಸಂದ ಕೂದಲು ನೆರೆತ ವ್ಯಕ್ತಿ, ಅವನೊಂದಿಗೆ ನನ್ನ ವಯಸ್ಸಿನವನೆನ್ನಬಹುದಾದ ತರುಣ ಹೀಗೆ ಇಬ್ಬರು ಅಲ್ಲಿ ನಿಂತಿರುವುದನ್ನು ಕಂಡು ಹಿಂದಿಯಲ್ಲಿ "ನೀವು ನನ್ನನ್ನು ಹುಡುಕಿಕೊಂಡು ಬಂದಿದ್ದೀರಾ?" ಎಂದಾಗ, "ಆನಂದ ಎಂದರೆ ನೀವೇನೆ?" ಎಂದು ಆ ಮುದುಕ ಪ್ರಶ್ನಿಸಿದ್ದ—ಅದೇ ಹಿಂದಿಯಲ್ಲಿ. "ಹೌದು, ಯಾಕೆ?" ಎಂದು ಅದೇ ಕುತೂಹಲದಲ್ಲಿ ನಾನು ಕೇಳಿದ್ದೆ. "ಸ್ವಲ್ಪ ಹೊರಗೆ ಬನ್ನಿ. ನಿಮ್ಮೊಂದಿಗೆ ಮಾತನಾಡಬೇಕಾಗಿದೆ" ಎಂದ ಅದೇ ಮುದುಕ. 'ಈ ಅಪರಿಚಿತ ವ್ಯಕ್ತಿ ನನ್ನೊಂದಿಗೆ ಏಕಾಂತ ಬಯಸುವ ಮಾತೇನಿರಬಹುದು?' ಎಂಬ ಕುತೂಹಲದಲ್ಲಿ ನಾನು ಆ ಇಬ್ಬರನ್ನೂ ಅನುಸರಿಸಿದ್ದೆ.

ಆಫೀಸಿನ ಹಿಂಬದಿಯ ಬಯಲಿನ ಒಂದು ನೆಳಲಲ್ಲಿ ಬಂದು ನಿಂತಾಗ "ನಿಮ್ಮ ಹೆಸರನ್ನು ನಾನು ಕೇಳಬಹುದೆ?" ಎಂದು ಆ ಮುದುಕನನ್ನು ಪ್ರಶ್ನಿಸಿದೆ.

"ನನ್ನ ಹೆಸರು ಥಿರಲ್ದಾಸ. ಇವನು ನನ್ನ ಮಗ ದಯಾಳ. ಇವನೊತ್ತಿನವಳೇ ಚತುರಾ"........ಎಂದು ಅವನು ಹೇಳುತ್ತಿದ್ದಂತೆ ಅದುವರೆಗೂ ನನಗೆ ಮಾದಕವಾಗಿದ್ದ ಆ ಹೆಸರನ್ನು ಮುದುಕ ಉಚ್ಚರಿಸಿದಾಗ, ಅವ್ಯಕ್ತಭೀತಿಯೊಂದು ನನ್ನಲ್ಲಿ ಉಂಟಾಗಿತ್ತು. ಏನು ಕೇಡುಗಾಲ ಬಂತೋ ಎಂದು ಯೋಚಿಸುತ್ತಿರುವಾಗಲೇ ಅವನು ಪ್ರಶ್ನಿಸಿದ್ದ :—"ನೀವು ಅವಳನ್ನು ಮದುವೆಯಾಗುವುದು ಯಾವಾಗ?" ಎಂದಾಗ, ನನ್ನ ಕಲ್ಪನೆಗೂ ಬಾರದ ಈ ಮಾತು ನನ್ನನ್ನು ಮಂಕಾಗಿಸಿತ್ತು. ಅಂದು ನಾನು ಔಚಿತ್ಯ ಮೀರಿ ನಡೆದುಕೊಂಡಿದ್ದರ ಪರಿಣಾಮ ಇದಾಗಿರಬಹುದೆ? ಆದರೆ ಅಂದು ಮನೆಯಲ್ಲಿ ಅವಳ ಹೊರತು ಮತ್ತಾರೂ ಇರಲಿಲ್ಲವಲ್ಲ! ಅವಳೇ ಇವರಿಗೆಲ್ಲ ಹೇಳಿರಬೇಕು. ಹಾಗೆ ಹೇಳುವುದಕ್ಕಿಂತ ಅವಳೇ ಬಂದು ಕೇಳಬಹುದಾಗಿತ್ತಲ್ಲವೆ? ಸ್ತ್ರೀಸಹಜವಾದ ನಾಚಿಕೆ ಎನ್ನಬೇಕೆ? ಅಂದು ನನ್ನನ್ನು ಯಾವ ಬಗೆಯಿಂದಲೂ ತಡೆಯದಿದ್ದುದು ಈ ಮದುವೆಯ ಹಂಬಲದಿಂದಲೇ ಆಗಿರಬೇಕು. ಇಷ್ಟು ಉದ್ದದ ನೀರಿಗೆ ಇಳಿಯಬೇಕಾಗಬಹುದು ಎಂಬ ವಿಚಾರ ನನಗೆ ಆಗಲೇ ಹೊಳೆದಿದ್ದರೆ, ನನ್ನ ಈ ವರೆಗಿನ ವಿಚಾರನಿಷ್ಠೆ ಉದ್ದಕ್ಕೂ ಉಳಿಯುತ್ತಿತ್ತು ಎಂದು ನಾನು ಯೋಚಿಸುತ್ತಿದ್ದೆ. ಆ ದಯಾಳ ಮೋರೆ ಗಂಟಿಕ್ಕಿಕೊಂಡು ನನ್ನನ್ನೇ ದಿಟ್ಟಿಸುತ್ತಿದ್ದ. ಅವನ ಹೆಸರು 'ದಯಾಳ' ಎಂದು ಆಗಿದ್ದರೂ ಅವನಿಗೆ ದಯೆಯ ಅರಿವಾಗಲಿ, ದಾಕ್ಷಿಣ್ಯದ ಗುರುತಾಗಲಿ ಇರಲಿಲ್ಲ. ಇದು ನಾನು ಆಕ್ಷೇಪಕ್ಕೆ ಹೇಳುವ ಮಾತಲ್ಲ. ಅವನು ನನ್ನನ್ನು ಹೆದರಿಸುವುದಕ್ಕೇ ಹೊರಟವನಂತೆ ಆಡುತ್ತಿದ್ದ—"ಮಿಸ್ಟರ್, ಇದು ಇಬ್ಬರಿಗೂ ಗೌರವದ ಪ್ರಶ್ನೆ. ನೀವು ನಿರಾಕರಿಸಿದರೆ ಮುಂದೆ ಏನು ಆದೀತು ಎಂಬುದನ್ನೂ ಸ್ವಲ್ಪ ಯೋಚಿಸಿಕೊಳ್ಳಬೇಕು. ಇಲ್ಲಿ ನೋಡಿ" ಎಂದು ಕಿಸೆಯಿಂದ ಏನೋ ಹೊರಗೆ ತೆಗೆದಿದ್ದ. ಅದು ನಾನು ಚತುರೆಯನ್ನು ಅಪ್ಪಿ ಚುಂಬಿಸುತ್ತಿರುವಾಗ ತೆಗೆದ ಚಿತ್ರ! ಆ ದಿನ ಇಷ್ಟೆಲ್ಲ ವ್ಯವಸ್ಥೆಯಾಗಿತ್ತೆಂದು ನಾನಾಗಲೇ ತಿಳಿದಂತಾಗಿತ್ತು. ಆ ಪರಿಸ್ಥಿತಿಗೆ ವಿಮೂಢನಾದ ನನ್ನಲ್ಲಿ ಯೋಚಿಸುವಷ್ಟು ಶಕ್ತಿಯೇ ಉಳಿದಿರಲಿಲ್ಲ. ನಾನು ಬದುಕಿ ಗೌರವವಾಗಿ ಉಳಿಯಬೇಕು ಎಂದುಕೊಳ್ಳುವುದಕ್ಕೆ, ಎಷ್ಟಕ್ಕೂ ಅವರ ಮಾತು ಮೀರಿ ನಡೆಯುವುದಕ್ಕೆ ಆಸ್ಪದವೇ ಉಳಿದಿರಲಿಲ್ಲ. ನಾನೇ ತಂದುಕೊಂಡ ನಿರುಪಾಯತೆ ಅದು. ಇದು ನನ್ನ ಮದುವೆ ನಡೆದು ಹೋದ ಕತೆ! ಈ ಮಾತಿಗೆ

ಆರು ತಿಂಗಳೇ ಕಳೆದಿರಬೇಕೀಗ. ಅಂದಿನಿಂದ ನನ್ನ ಬದುಕು ಹೀಗೆ ನಡೆದಿದೆ ” ಎಂದು ಆನಂದ ಮಾತು ನಿಲ್ಲಿಸಿದ.

ಹಾವಾಡಿಗನ ಪುಂಗಿಯ ನಾದಕ್ಕೆ ಹೆಡೆ ನಿಮಿರಿಸಿ ನಿಂತ ಹಾವಿನಂತೆ, ಆನಂದನ ಅಂತರಂಗದಲ್ಲಿ ಕೊರೆಯುತ್ತಿದ್ದ ಕತೆ ಕೇಳುವುದಕ್ಕೆ ಕಿವಿ ಕೊಟ್ಟು ಕುಳಿತ ವಸಂತ, ಗೆಳೆಯನ ಗಂಡಾಂತರದ ಕತೆ ಕೇಳಿ ವಿಷಾದಪಟ್ಟುಕೊಂಡಷ್ಟೇ ಆಶ್ಚರ್ಯಗೊಂಡಿದ್ದ. ಆದರೂ ಆ ಸ್ನೇಹದ ಋಣ ಈ ಸ್ಥಿತಿಯಲ್ಲಿ ಅವನಿಗೊಂದು ಸಂತೈಕೆಯ ಮಾತನ್ನಾದರೂ ಆಡಲು ಆತುರಪಟ್ಟದ್ದಕ್ಕೆ “ ಆನಂದ ತಾರುಣ್ಯದ ತಪ್ಪು ತೆತ್ತಿಸಿದ ಬೆಲೆ ಎಷ್ಟಿದ್ದರೂ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ವಿವೇಕ. ಏನನ್ನೂ ಮನಸ್ಸಿಗೆ ಹಚ್ಚಿಕೊಂಡರೆ ಅದು ದೇಹದ ಮೇಲೆ ಪರಿಣಾಮಮಾಡದಿರುತ್ತದೆಯೆ ? ಗಂಡು ವಯಸ್ಸಿಗೆ ಬಂದಾಗ ನೂರು ತೊಂದರೆಗಳಿದ್ದರೂ ಮದುವೆಯಾಗುವುದು ಹಿತ. ‘ ಗಂಡಿಗೆ ಹೆಣ್ಣಾಗಿ ಕಾಡಿತ್ತು ಮಾಯೆ ! ’ ಎಂಬುದು ಅನುಭಾವದ ಮಾತು. ನಿನಗೆ ಎಷ್ಟು ಬಾರಿ ನಿನ್ನ ತಾಯಿ ಮದುವೆಯ ಬಗ್ಗೆ ಒತ್ತಾಯಿಸಲಿಲ್ಲ ? ಹೆಣ್ಣು ಹೆತ್ತ ನಮ್ಮ ಜನ ಯಾರೂ ನಿನ್ನನ್ನು ಖುಷಿಯಿಂದ ಅಳಿಯನನ್ನಾಗಿಸಿಕೊಳ್ಳದಿರುತ್ತಿರಲಿಲ್ಲ. ಮದುವೆಯಾಗದಿರುವುದಕ್ಕೆ ಅನನುಕೂಲವಾದ ಪರಿಸ್ಥಿತಿ ನಿನಗೇನು ಇತ್ತು ? ಈ ಮುಂಬೈ ಜೀವನ ಬಯಸಿ ಬಂದು ನೌಕರಿಗೆ ನಿಂತ ಮೇಲೆ, ಮದುವೆಗೇ ಹೆದರಿಕೊಂಡವನಂತೆ ಊರಿಗೆ ಹೋಗದೆ ಉಳಿದೆ. ಒಳ್ಳೇ ಮನೆತನವನ್ನು ನೋಡಿ ಅಷ್ಟರಲ್ಲೇ ಒಂದು ಹೆಣ್ಣನ್ನು ಮದುವೆಯಾಗಿದ್ದರೆ, ಸಲುಗೆಗೆ ಬಂದ ಯಾವುದೋ ಕಾಣದ ಹೆಣ್ಣಿನ ಮೇಲೆ ಹೀಗೆ ಹರಿದುಬೀಳುವಷ್ಟು ಸಂಯಮ ತಪ್ಪಿ ನಡೆಯುತ್ತಿದ್ದೇಯೆ ? ಹರಯವೇ ಒಂದು ಜಾರುವ ದಾರಿ. ಅಂತೂ ಈಗ ಮದುವೆಯಾಗಿದ್ದೀಯಲ್ಲ, ಆದರಿಂದ ಈ ವಿಚಾರದಲ್ಲಿ ಏನನ್ನೂ ಮತ್ತೆ ಕೆದಕುವುದು ಸರಿಯಲ್ಲ. ಇದೇ ಹೆಣ್ಣಿನ ಸಲುಗೆ ನಿನಗಾಗಬೇಕಾಗಿತ್ತು. ಅವಳೇ ಈಗ ಬಾಳ ಜೊತೆಗಾರ್ತಿಯಾಗಿದ್ದಾಗ ಬೇಡ ಎನ್ನಿಸದಿದ್ದರೆ–ಇದಕ್ಕಾಗಿ ನಿನ್ನ ತಾಯಿ ತಮ್ಮ ಇವರಿಗೆ ನೀನು ಶಿಕ್ಷಿಸುವುದಲ್ಲ. ಅವರು ನಿನಗೆ ಮಾಡಿದ ಅನ್ಯಾಯವೇನು ? ನಿನ್ನ ಎಂಥ ತಪ್ಪನ್ನೂ ಮರೆಯುವ ಜನರನ್ನು ನೀನೂ ಮರೆಯಬಾರದು. ಇಷ್ಟಕ್ಕಾಗಿ ನೀನು ಅವರನ್ನು ಕಾಣದೇ ಉಳಿಯಬೇಕಾದದ್ದೇನೂ ಇಲ್ಲ. ಇನ್ನು ನಿನ್ನ ಜವಾಬ್ದಾರಿ ಈಗ ಬೆಳೆದಿದೆ. ನೀನು ಮದುವೆಯಾಗಿದ್ದೀಯೆ. ಕೈತುಂಬ ಸಂಬಳವನ್ನೂ ತರುತ್ತೀದ್ದೀಯೆ. ಏನೋ ನಾಲ್ಕು ಕಾಸು ಮನೆಗೆ ಕಳುಹಿದರೆ ನಿಮ್ಮಿಬ್ಬರಿಗೆ ಇಲ್ಲಿ ತಾಪತ್ರಯವಾದೀತಲ್ಲ ಎಂಬ ಮಾತೇನೂ ಇಲ್ಲ. ನೀನೇ ಬೇಕೆಂದು ಇಷ್ಟೆಲ್ಲ ಮಾಯದ ಬಲೆ ಬೀಸಿ ಮದುವೆಯಾದ ಹೆಣ್ಣು, ನಿನಗೆ ಪ್ರತಿಕೂಲವಾಗಿ ನಡೆಯಬಹುದು ಎಂಬ ಮಾತೂ ಇಲ್ಲ. ನಿಮ್ಮ ದಾಂಪತ್ಯ ಅನುಕೂಲವಾಗಿಯೇ ಇರಬೇಕು. ವಿಜಾತಿಯವಳಾದರೇನಂತೆ ? ಈ ನಗರದಲ್ಲಿಯಂತೂ ಅಂಥ ಪ್ರಶ್ನೆಯೇನು ಬರುವುದಿಲ್ಲ. ಇಲ್ಲಿಗೆ ಬಂದದ್ದಕ್ಕೆ ನಿನ್ನ ದಾಂಪತ್ಯದ ಒಂದು ಕತೆ ಕೇಳಿದ ಹಾಗಾಯಿತು. ಅಲ್ಲ, ಇಷ್ಟು ಹೊತ್ತು ಮರೆತೇ ಬಿಟ್ಟಿದ್ದೆನಲ್ಲ! ನಿನ್ನ ಹೆಂಡತಿಯೆಲ್ಲಿ ? ಅವಳೂ ಈಗ ನೌಕರಿಗೆ ಹತ್ತಿಕೊಂಡಿದ್ದಾಳೆಯೇ ? ಇಲ್ಲಿ ಹೆಂಗಸರಿಗೆ ನೌಕರಿ ಸಿಕ್ಕುವುದೇನೂ ಕಷ್ಟವಲ್ಲ. ನಿನಗೂ ಅನುಕೂಲವೇ ಆಯಿತು. ಇನ್ನೇನು, ಆಫೀಸು ಬಿಡುವ ಹೊತ್ತಾಗಿದೆ. ಈಗ ಬಂದಾಳು ಅಲ್ಲವೆ ? ” ಎಂದು ಅವಳ ಅನುಪಸ್ಥಿತಿಗೆ, ತನಗೆ ನಿಲುಕುವ ಒಂದು ಕಾರಣವನ್ನು, ಸಿಟಿಯ ಬಗೆಗೆ ಸಹಜವಾಗಿ ಎನ್ನಿಸಿದ ತನ್ನ ಊಹೆಯೊಂದಿಗೆ ಮಾತು ನಿಲ್ಲಿಸುವಷ್ಟಕ್ಕೆ ರುಕ್ಷವಾದ ದನಿಯಲ್ಲಿ ತನ್ನ ಅಂತರಂಗದ ಬೇಗುದಿಯೆಲ್ಲವನ್ನೂ ಬೆರಸಿ ಆನಂದ ಉತ್ತರಿಸಿದ್ದ :— “ ನಿನ್ನ ಊಹೆ ತಪ್ಪು ವಸಂತ, ಅವಳಿಂದು ಒಂದು ಹೆಣ್ಣುಮಗುವಿನ ತಾಯಿ. ಬಾಂದ್ರಾ ಮೆಟರ್ನಿಟಿ ಹೋಮಿನಲ್ಲಿ ಹಡೆದು ಇಂದಿಗೆ ಆರು ದಿನಗಳಾದುವು ”

“ ಏನು ? ಮದುವೆಯಾದ ಆರು ತಿಂಗಳಲ್ಲೇ ಅವಳು ತಾಯಿ ಯಾಗಿದ್ದಾಳೆಯೇ ?

“ ಹೌದು ! ತಾಯೀ ಆದರೆ ಆ ಕೂಸಿನ ತಂದೆ..........” ಆ ಮಾತು ಅಲ್ಲಿಗೆ ನಿಂತಿತ್ತು. ವಸಂತನಿಗೀಗ ಗೆಳೆಯನ ಹೃದಯ ಹಿಂಡುತ್ತಿದ್ದ ಮಾತಿನ ಅರಿವಾಗಿತ್ತು. ಆನಂದನಷ್ಟೇ ಅವನೂ ಈಗ ಆ ಮೂಕವೇದನೆಯಲ್ಲಿ ಮುಳುಗಿ ಹೋಗಿದ್ದ.


ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

# ಕಾಲಿದಾಸಕವಿಯ ಗಾನಕಲಾ ಜ್ಞತೆ

( ಪೂರ್ವಾರ್ಧ )

ಪಂಡಿತ ಭೀಮಾಜಿ ಜೀವಾಜಿ ಹುಲಿಕವಿ, ಬಿ. ಎ., ಎಸ್. ಟಿ. ಸಿ., ಬೆಳಗಾಂವಿ.

卐

**ಭಾರತದ ಗಾಯನಕಲೆಯು ಕಾಲಿದಾಸನ ಕಾಲದಲ್ಲಿಯೆ ಎಷ್ಟೊಂದು ಪರಿಣತಾವಸ್ಥೆಗೆ ಮುಟ್ಟಿದ್ದಿತೆಂಬುದು ಈ ಲೇಖನದಲ್ಲಿ ಕಂಡುಬರುವಂತಿದೆ; ಅಲ್ಲದೆ ಕವಿಕಾಲಿದಾಸನಿಗೆ ಗಾಯನಕಲೆಯಲ್ಲಿ ಎಂತಹ ಅಭಿಜ್ಞತೆ-ಆಸಕ್ತಿಗಳಿದ್ದುವೆಂಬುದೂ ಚೆನ್ನಾಗಿ ವ್ಯಕ್ತವಾಗುತ್ತದೆ.**

卐

ಪುರಾ ಕವೀನಾಂ ಗಣನಾಪ್ರಸಂಗೆ । ಕನಿಷ್ಠಿಕಾಧಿಷ್ಠಿತ ಕಾಲಿದಾಸಾ ।
ಅದ್ಯಾಪಿ ತತ್ತುಲ್ಯಕವೇರಭಾವಾತ್ । ಅನಾಮಿಕಾ ಸಾರ್ಥವತೀ ಬಭೂವ ॥

ಕಾಲಿದಾಸನ ಕವಿತ್ವದ ಸರ್ವಶ್ರೇಷ್ಠತೆಯನ್ನು ಬಣ್ಣಿಸುವ ಈ ಶ್ಲೋಕದೊಳಗಿನ "ಅದ್ಯಾಪಿ ತತ್ತುಲ್ಯಕವೇರಭಾವಾತ್ ।" ಎಂಬ ಮಾತು ಈಗಲೂ ಸತ್ಯವಾಗಿದೆಯೆಂಬುದು ಸರ್ವಸಮ್ಮತವಾದ ಅಭಿಪ್ರಾಯವು ಭರತಖಂಡದಲ್ಲಿಯಷ್ಟೇ ಅಲ್ಲ; ಜಗತ್ತಿನೊಳಗಿನ ಎಲ್ಲ ಭೂಖಂಡಗಳಲ್ಲಿ ಈ ಕವಿಯು ಅತ್ಯಂತ ವಿಖ್ಯಾತನು. ಈ ಮಹಾಕವಿಯು (೧) ಅಭಿಜ್ಞಾನ ಶಾಕುಂತಲ (೨) ವಿಕ್ರಮೋರ್ವಶೀಯ (೩) ಮಾಲವಿಕಾಗ್ನಿಮಿತ್ರ ಎಂಬ ಮೂರು ನಾಟಕಗಳನ್ನೂ, (೧) ಕುಮಾರಸಂಭವ (೨) ರಘುವಂಶ ಎಂಬ ಎರಡು ವ, ಗಳನ್ನೂ, ಮೇಘದೂತವೆಂಬ ಖಂಡಕಾವ್ಯವನ್ನೂ ಮತ್ತು ಋತುಸಂಹಾರವೆಂಬ ನಿಸರ್ಗಕಾವ್ಯವನ್ನೂ — ಹೀಗೆ ಒಟ್ಟು ಏಳು ಗ್ರಂಥಗಳನ್ನು — ರಚಿಸಿದ್ದಾನೆ. ನಾಟಕಕಾರ, ಮಹಾಕವಿ ಮತ್ತು ಭಾವಕವಿ ಈ ತ್ರಿವಿಧರೂಪದಲ್ಲಿಯೂ ಕಾಲಿದಾಸನ ಭೂಮಿಕೆಯು ಸರ್ವೋತ್ಕೃಷ್ಟವಾಗಿದೆ. ಇವನ ಗ್ರಂಥಸಮೂಹವೆಂಬ ಸಪ್ತವರ್ಣದ ಇಂದ್ರಧನುಷ್ಯವು ಸಾಹಿತ್ಯನಭೋಮಂಡಲದಲ್ಲಿ ಸ್ಥಿರವಾಗಿ ವಿರಾಜಿಸುತ್ತಿದೆ. ಕಳೆದ ಎರಡುಸಾವಿರ ವರ್ಷಗಳಿಂದ ಸಹೃದಯರು ಈ ಕವಿಪುಂಗವನ ಮಾಹಾತ್ಮ್ಯವನ್ನು ಪರಿಶ್ರಮದಿಂದಲೂ ಕುತುಕದಿಂದಲೂ ಪರಿಸುತ್ತ ಬಂದಿದ್ದಾರೆ. ಜಗತ್ತಿನಲ್ಲಿ ರಸಿಕತೆಯು ಜೀವಿಸಿರುವ ವರೆಗೂ, ಈ ಪುಣ್ಯಪುರುಷನ ಮಾಹಾತ್ಮ್ಯದ ಪಾರಾಯಣವು ಮುಂದಿನ ಯುಗಯುಗಗಳಲ್ಲಿ ಕೂಡ ಹೀಗೆಯೇ ಅನುಸ್ಯೂತವಾಗಿ ಸಾಗತಕ್ಕದ್ದೆಂಬ ವಿಷಯದಲ್ಲಿ ಸಂದೇಹವಿಲ್ಲ.

ಈ ಕವಿಸಾರ್ವಭೌಮನಿಗೆ ಗಾನಕಲೆಯ ಜ್ಞಾನವು ಎಷ್ಟರ ಮಟ್ಟಿಗೆ ಇತ್ತೆಂಬುದನ್ನು ತಿಳಿದುಕೊಳ್ಳಲು ಯಥಾಶಕ್ತಿಯಾಗಿ ಯತ್ನ ಮಾಡುವುದು ಈ ನನ್ನ ಲೇಖನದ ಉದ್ದೇಶವಾಗಿದೆ.

'ಗಾನಕಲೆಯೆಂದರೆ ಹಾಡುವುದು' ಎಂದಿಷ್ಟೇ ಅರ್ಥವನ್ನು ಕೆಲವರು ಮಾಡಿಕೊಳ್ಳಬಹುದು; ಆದರೆ, ನಿಜವಾಗಿ ಗಾನಕಲೆಯೆಂದರೆ ನೃತ್ಯ-ವಾದ್ಯ-ಗೀತಗಳ ಸಮುದಾಯವು ನೃತ್ಯವು ನಾಟ್ಯವನ್ನು ಅಥವಾ ಅಭಿನಯವನ್ನು ಒಳಗೊಳ್ಳುತ್ತದೆ. ನೃತ್ಯವನ್ನು ಮಾಡುವವರು, ವಾದ್ಯವನ್ನು ಬಾರಿಸುವವರು ಅಥವಾ ಸಾಮಾನ್ಯವಾಗಿ ನಟವರ್ಗವು ಇವರಂತೂ ಸಾಕ್ಷಾತ್ತಾಗಿ ಬೇಕೇಬೇಕು. ಅಲ್ಲದೆ, ಶ್ರೋತೃಗಳು ಅಥವಾ ಪ್ರೇಕ್ಷಕರು ಇವರಾದರೂ ಅತ್ಯಾವಶ್ಯಕರೆಂಬುದು ಸ್ಪಷ್ಟವೇ. ಇವರೆಲ್ಲರಿಗೂ ಅನುಕೂಲವಾದ ರಂಗಸ್ಥಲವಾದರೂ ಅಗತ್ಯದ್ದು. ಗೀತವು ಅಥವಾ ಹಾಡು ಉಚಿತವಾದ ಶಬ್ದಗಳಿಂದ, ಉಚಿತವಾದ ರಾಗ-ತಾಲ-ಲಯಗಳಲ್ಲಿ ರಚಿತವಾಗಿರಬೇಕು. ಈ ಔಚಿತ್ಯವು ಗೀತಾರ್ಥವನ್ನು ಅಥವಾ ಗೀತಾವಿಷ್ಕೃತವಾದ ರಸ-ಭಾವಗಳನ್ನು ಅವಲಂಬಿಸಿರುತ್ತದೆ. ರಾಗಗಳು ಸಪ್ತಸ್ವರಗಳ ಆರೋಹಣಾವರೋಹಣಗಳನ್ನು ಆಶ್ರಯಿಸಿರುತ್ತವೆ ತಾಲ-ಲಯಗಳು ಪರಸ್ಪರ ಸಂಬಂಧವಾಗಿರುತ್ತವೆ. ಇವೆಲ್ಲ ಅವಾಂತರ ಸಂಗತಿಗಳ ಸಮಾಲೋಚನವಿಲ್ಲದೆ, ಗಾನಕಲೆಯ ಅಥವಾ ಸಂಗೀತಕಲೆಯ ವಿವೇಚನವು ಪೂರ್ಣವಾಗಲಾರದು.

ಆದದ್ದರಿಂದ, ಬಂಧು-ಭಗಿನಿಯರೆ, ಕವಿಕುಲಗುರು ಕಾಲಿದಾಸನ ಗ್ರಂಥಗಳಲ್ಲಿ ಸಂಗೀತಶಾಸ್ತ್ರಕ್ಕೆ ಅಥವಾ ಗಾನಕಲೆಗೆ ಸಂಬಂಧಪಟ್ಟ ಉಪಯುಕ್ತವಾದ ಅಂಗೋಪಾಂಗಗಳ ಉಲ್ಲೇಖವು ಎಲ್ಲೆಲ್ಲಿ ಹೇಗೆ ಹೇಗೆ ಬಂದಿದೆಯೆಂಬುದನ್ನು ಇನ್ನು ಮುಂದೆ ಸಂಕ್ಷೇಪವಾಗಿ ನಿವೇದಿಸುವೆನು.

## ನಾಟ್ಯವಿಚಾರ

ಕಾಲಿದಾಸನ ಮೂರೂ ನಾಟಕಗಳಲ್ಲಿ ಸಂಗೀತಶಾಲೆಯ ಉಲ್ಲೇಖವಿದೆ. ದುಷ್ಯಂತನ ರಾಜ್ಞಿಯಾದ ಹಂಸಪದಿಕೆಯು ಸಂಗೀತಶಾಲೆಯಲ್ಲಿ ಕುಳಿತು ಸಪ್ತಸ್ವರಗಳ ಆರೋಹಣಾವರೋಹಣಗಳನ್ನು ನುಡಿಸುತ್ತಿದ್ದಳೆಂದು ಶಾಕುಂತಲದಲ್ಲಿದೆ ಇದಕ್ಕೆ "ಪರಿಚಯ" ವೆಂದು ಹೆಸರು ಮಹಾರಾಜ್ಞಿಯ ದಾಸಿಯಾದ ನಿಪುಣಿಕೆಯು ಸಂಗೀತಕಲೆಯಲ್ಲಿ ನಿಷ್ಣಾತಳಿದ್ದಳೆಂದು ವಿಕ್ರಮೋರ್ವಶೀಯದಲ್ಲಿ ಬರುತ್ತದೆ. ದಾಸೀಸಾಮಾನ್ಯವಾದ ಸೇವೆಯನ್ನು ಸಲ್ಲಿಸುವುದಲ್ಲದೆ, ಸಂಗೀತಶಾಲೆಯಲ್ಲಿ ನೃತ್ಯ-ಗೀತಾದಿಗಳಿಂದ ಮಹಿಷಿಯ ಮನೋವಿನೋದನವನ್ನು ಮಾಡುವುದು ಅವಳ ಕರ್ತವ್ಯವಾಗಿತ್ತು. ಕಾಲಿದಾಸನು ಈ ಮೂರೂ ನಾಟಕಗಳ ಮುಖಾಂತರ ನಾಟ್ಯ-ನಾಟಕ ವಿಷಯದಲ್ಲಿಯ

ತನ್ನ ಅಭಿಪ್ರಾಯವನ್ನು ಕೃತಿಯಿಂದಲೇ ವ್ಯಕ್ತಮಾಡಿದ್ದಾನೆ; ಅಲ್ಲದೆ, ಆಯಾ ಪಾತ್ರಗಳ ಮುಖಾಂತರವಾಗಿಯೂ ಅದನ್ನು ಅಲ್ಲಲ್ಲಿ—ವಿಶೇಷವಾಗಿ ಮಾಲವಿಕಾಗ್ನಿಮಿತ್ರದಲ್ಲಿ—ಪ್ರಕಟಪಡಿಸಿದ್ದಾನೆ.

"ನಾಟ್ಯಪ್ರಯೋಗದ ಸಿದ್ಧತೆಯಾದ ಬಳಿಕ ನಮಗೆ ಹೇಳಿಕಳುಹಿಸು" ಎಂದು ಮಾಲವಿಕಾಗ್ನಿಮಿತ್ರದಲ್ಲಿ ವಿದೂಷಕನು ಅರಸನ ಪರವಾಗಿ ದಾಸಿಗೆ ಆಜ್ಞೆಮಾಡಿ, ಕೂಡಲೆ "ಹೇಳಿಕಳುಹಿಸುವ ಆವಶ್ಯಕತೆಯಾದರೂ ಏನು? ಮೃದಂಗದ ಧ್ವನಿಯೇ ನಮ್ಮನ್ನು ಎಚ್ಚರಿಸುವುದು" ಎಂದು ಅನ್ನುತ್ತಾನೆ. ಶಾಕುಂತಲದ ಆರಂಭದಲ್ಲಿ ಸರ್ವಸಿದ್ಧತೆಯಾದ ಬಳಿಕ "ಇನ್ನು ಏನನ್ನು ಮಾಡತಕ್ಕದ್ದು?" ಎಂದು ನಟಿಯು ಸೂತ್ರಧಾರನನ್ನು ಕೇಳುತ್ತಾಳೆ. "ಈ ಶ್ರೋತೃವೃಂದದ ಕಿವಿಗಳನ್ನು ಪ್ರಸನ್ನಗೊಳಿಸುವ ಸಂಗೀತವನ್ನುಳಿದು ಮತ್ತೇನನ್ನು ಮಾಡುವುದಿದೆ?" ಎಂದು ಸೂತ್ರಧಾರನು ಪ್ರತಿಪ್ರಶ್ನೆಯಿಂದ ಉತ್ತರ ಕೊಡುತ್ತಾನೆ. ಇದರಂತೆಯೇ, ನಾಟಕವನ್ನು ಆರಂಭಿಸುವಾಗ "ಸಂಗೀತವು ನಡೆಯಲಿ" ಎಂದು ಮಾಲವಿಕಾಗ್ನಿಮಿತ್ರದಲ್ಲಿ ಸೂತ್ರಧಾರನು ಅನ್ನುತ್ತಾನೆ. ನಾಟ್ಯಾರಂಭದಲ್ಲಿ ಸಂಗೀತವಿರುತ್ತಿತ್ತೆಂದು ಇದರಿಂದ ಸೂಚಿತವಾಗುತ್ತದೆ.

ಮಾಲವಿಕಾಗ್ನಿಮಿತ್ರ ನಾಟಕದಲ್ಲಿ ಸಂಗೀತಶಾಲೆಯು ಮಹತ್ತ್ವದ ಸ್ಥಾನವಾಗಿದೆ. ಅಗ್ನಿಮಿತ್ರರಾಜನ ಪಟ್ಟದರಸಿಯಾದ ಧಾರಿಣಿಯು ಈ ನಾಟಕದ ನಾಯಿಕೆಯಾದ ಮಾಲವಿಕೆಗೆ ಸಂಗೀತಶಾಸ್ತ್ರವನ್ನು ಕಲಿಸುವ ವ್ಯವಸ್ಥೆಯನ್ನು ಮಾಡಿದ್ದಳು. ಹರದತ್ತ ಮತ್ತು ಗಣದಾಸ ಎಂಬ ಇಬ್ಬರು ಕುಲಪರಂಪರಾಗತ ನಾಟ್ಯಾಚಾರ್ಯರು ಅಗ್ನಿಮಿತ್ರನ ಆಶ್ರಯದಲ್ಲಿದ್ದರು. ಹರದತ್ತನು ಅಗ್ನಿಮಿತ್ರನ ಮತ್ತೊಬ್ಬ ರಾಜ್ಞಿಯಾದ ಇರಾವತಿಯ ಶಿಕ್ಷಕನು; ಮತ್ತು ಗಣದಾಸನು ಮಾಲವಿಕೆಯ ಶಿಕ್ಷಕನು. ನಾಟ್ಯಾಚಾರ್ಯನಾದ ಗಣದಾಸನ ಮುಖದಿಂದ ಕಾಲಿದಾಸನು ನಾಟ್ಯವನ್ನು ಕುರಿತು ಹೀಗೆ ಹೇಳಿಸಿದ್ದಾನೆ:—

"ಗಣದಾಸಃ—ಕಾಮಂ ಖಲು ಸರ್ವಸ್ಯಾಪಿ ಕುಲವಿದ್ಯಾ ಬಹುಮತಾ। ನ ಪುನರಸ್ಮಾಕಂ ನಾಟ್ಯಂ ಪ್ರತಿ ಮಿಥ್ಯಾಗೌರವಮ್। ಕುತಃ
ದೇವಾನಾಮಿದಮಾಮನಂತಿ ಮುನಯಃ ಕಾಂತಂ ಕ್ರತುಂ ಚಾಕ್ಷುಷಂ
ರುದ್ರೇಣೇದಮುಮಾಕೃತವ್ಯತಿಕರೇ ಸ್ವಾಂಗೇ ವಿಭಕ್ತಂ ದ್ವಿಧಾ
ತ್ರೈಗುಣ್ಯೋದ್ಭವಮತ್ರ ಲೋಕಚರಿತಂ ನಾನಾರಸಂ ದೃಶ್ಯತೇ
ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್ ॥

"ತಮ್ಮ ತಮ್ಮ ಕುಲವಿದ್ಯೆಯು ಎಲ್ಲರಿಗೂ ಮಹತ್ತ್ವದ್ದೆನಿಸುವುದು ನಿಜವು; ಆದರೆ ನಾಟ್ಯವಿಷಯದಲ್ಲಿಯ ನಮ್ಮ ಅಭಿಮಾನವು ಮಾತ್ರ ಈ ಒಂದೇ ಕಾರಣದಿಂದಲ್ಲ: ನಾಟ್ಯವು ದೇವತೆಗಳಿಗೆ ಸುಂದರವಾದ ಚಾಕ್ಷುಷಯಜ್ಞವಾಗಿದೆಯೆಂದು ಮುನಿಜನರು ತಿಳಿಯುತ್ತಾರೆ. ಚಾಕ್ಷುಷವೆಂದರೆ ಕಣ್ಣುಗಳಿಂದ ಆನಂದಾನುಭವವನ್ನು ಪಡೆಯಬಹುದಾದದ್ದು. ಶಂಕರನು ಅರ್ಧನಾರೀನಟೇಶ್ವರನಾಗಿದ್ದಾನೆ. ಆ ಸ್ವರೂಪದಿಂದ ಅವನು ನಾಟ್ಯದ ಲಾಸ್ಯ–ತಾಂಡವಗಳೆಂಬ ಭೇದಗಳನ್ನು ಸ್ವತಃ ಪ್ರಕಟಗೊಳಿಸಿದ್ದಾನೆ. ಸಾತ್ತ್ವಿಕ–ರಾಜಸ–ತಾಮಸರೆಂದು ಜನರು ಮೂರು ಪ್ರಕಾರದವರಿರುತ್ತಾರೆ. ಅವರ ವ್ಯವಹಾರಗಳು ಸುಖ–ದುಃಖಾತ್ಮಕವಾದ ಅನೇಕ ಭಾವನೆಗಳಿಂದ ಕೂಡಿರುತ್ತವೆ. ಹೀಗೆ ಭಿನ್ನ ಭಿನ್ನ ರುಚಿಗಳುಳ್ಳ ಎಲ್ಲ ಜನರಿಗೆ ನಾಟ್ಯವು ಸರಿಯಾಗಿಯೇ ಸಂತೋಷಕರವಿರುತ್ತದೆ."

ಈ ವರ್ಣನೆಯಿಂದ ನಾಟ್ಯವಿದ್ಯಾರ್ಥಿಗಳು ಎಷ್ಟೋ ಸಂಗತಿಗಳನ್ನು ಕಲಿಯುವಂತಿದೆ.

ಕಾಲಿದಾಸನು ಸಾಭಿನಯವಾದ ಮತ್ತು ಗಾನಪೂರ್ವಕವಾದ ನರ್ತನವನ್ನು ಈ ನಾಟಕದಲ್ಲಿ ಚೆನ್ನಾಗಿ ಬಣ್ಣಿಸಿದ್ದಾನೆ; ನಾಟ್ಯಾಚಾರ್ಯನನ್ನು "ಅಭಿನಯಾಚಾರ್ಯ"ನೆಂದೂ, ನಾಟ್ಯವಿದ್ಯೆಯನ್ನು "ಅಭಿನಯವಿದ್ಯೆ"ಯೆಂದೂ ಕರೆದಿದ್ದಾನೆ; ಮತ್ತು ನಾಟ್ಯವಿದ್ಯೆಯ ಪಾರಂಗತತ್ವವನ್ನು "ಮೂರ್ತಿಮದ್ಭಾವ" ಎಂದು ಬಣ್ಣಿಸಿದ್ದಾನೆ. ಮನೋಭಾವನೆಗಳೊಡನೆ ಅಥವಾ ಮನೋವಿಕಾರಗಳೊಡನೆ ಸಮರಸವಾಗುವುದು ಉತ್ತಮನಟನ ಲಕ್ಷಣವೆಂದು ಇದರ ತಾತ್ಪರ್ಯವು. ಈ ನಾಟಕದ ಆರಂಭದಲ್ಲಿ "ಚಲಿತ"ವೆಂಬ ನೃತ್ಯದ ಪ್ರಯೋಗವು ನಡೆಯುತ್ತದೆ. ಎರಡನೆಯವರ ಮನೋಭಾವವನ್ನು ವ್ಯಕ್ತಪಡಿಸುವ ನಿಮಿತ್ತದಿಂದ ಸ್ವಾಂತರಂಗವನ್ನು ಪ್ರಕಟಮಾಡುವ ಅಭಿನಯಕ್ಕೆ "ಚಲಿತ"ವೆಂಬ ಸಂಜ್ಞೆಯು. ಇದಾದ ಬಳಿಕ ಕಾಲಿದಾಸನು ಶರ್ಮಿಷ್ಠಾಕೃತ ಕಾವ್ಯದ ನಾಲ್ಕನೆಯ ಭಾಗದ ರಸಾನುಕೂಲವಾದ ಮತ್ತು ಅಭಿನಯಯುಕ್ತವಾದ ಗಾನವನ್ನು ಮಾಲವಿಕೆಯಿಂದ ಮಾಡಿಸಿದ್ದಾನೆ; ಮತ್ತು ಆಕೆಯ ಅಭಿನಯಕುಶಲತೆಯನ್ನು ಹೀಗೆ ಹೊಗಳಿದ್ದಾನೆ:—

ಅಂಗೈರಂತರ್ನಿಹಿತವಚನೈಃ ಸೂಚಿತಃ ಸಮ್ಯಗರ್ಥಃ।
ಪಾದನ್ಯಾಸೋ ಲಯಮನುಗತಸ್ತನ್ಮಯತ್ವಂ ರಸೇಷು ॥
ಶಾಖಾಯೋನಿರ್ಮೃದುರಭಿನಯಸ್ತದ್ವಿಕಲ್ಪಾನುವೃತ್ತೌ
ಭಾವೋ। ಭಾವಂ ನುದತಿ ವಿಷಯಾದ್ರಾಗಬಂಧಃ ಸ ಏವ ॥

"ಆಕೆಯ ಅಂಗವಿಕ್ಷೇಪಗಳು ಮೂಕಭಾಷಣದಿಂದ ಗೀತಾರ್ಥವನ್ನು ಚೆನ್ನಾಗಿ ಅಭಿವ್ಯಕ್ತ ಮಾಡುತ್ತಿದ್ದವು. ಕುಣಿಯುವಾಗ ತಾಲಗಳ ಲಯಕ್ಕನುಗುಣವಾಗಿ ಅವಳು ಹೆಜ್ಜೆಯನ್ನಿಕ್ಕುತ್ತಿದ್ದಳು. ಗೀತದೊಳಗಿನ ರಸದೊಡನೆ ಅವಳು ತಾದಾತ್ಮ್ಯವನ್ನು ಹೊಂದಿದ್ದಳು. ಅವಳ ಅಂಗೋಪಾಂಗಗಳ ಅಭಿನಯವು ಸುಕುಮಾರವಾಗಿತ್ತು. ಇಂತಹ ಅಭಿನಯದಿಂದ ವ್ಯಕ್ತವಾಗುವ ಭಾವಗಳಲ್ಲಿ ಈಗಿನದು ಹಿಂದಿನದನ್ನು ಪೂರ್ಣವಾಗಿ ಮರೆಯಿಸುತ್ತಿತ್ತು; ಆದರೆ ರಮಣೀಯತೆಯು ಮಾತ್ರ ಮೊದಲಿನಿಂದ ಕೊನೆಯವರೆಗೂ ಏಕರೂಪವಾಗಿತ್ತು."

ಈ 'ಚಲಿತ' ನೃತ್ಯದ ಪ್ರಯೋಗಕ್ಕೆ ಸ್ವತಂತ್ರವಾದ ಒಂದು ರಂಗಸ್ಥಳವು ಏರ್ಪಟ್ಟಿರುತ್ತದೆ. ಅದಕ್ಕೆ ಕಾಲಿದಾಸನು "ಪ್ರೇಕ್ಷಾಗಾರ" ಎಂಬ ಹೆಸರನ್ನು ಕೊಟ್ಟಿದ್ದಾನೆ. ಈ ಪ್ರೇಕ್ಷಾಗಾರದ ಸಂಗೀತರಚನೆಯು ಮುಗಿದ ಬಳಿಕ—ಎಂದರೆ ಸಂಗೀತಸಾಮಗ್ರಿಯು ಸುಸಜ್ಜಿತವಾದ ಬಳಿಕ—ಪ್ರೇಕ್ಷಕರು ಅಲ್ಲಿ ಪ್ರವೇಶಿಸುವರು. ನೃತ್ಯಪ್ರಯೋಗವನ್ನು ಮಾಡುವ ಪಾತ್ರವು ನೇಪಥ್ಯದ ಹಿಂದೆ ಇರುವುದು ಮತ್ತು ಸರ್ವಸಿದ್ಧತೆಯಾದ ಬಳಿಕ ಹೊರಗೆ ಬರುವುದು. ಅದಕ್ಕು

ಮೊದಲು ಆಚಾರ್ಯನು ಪ್ರಯೋಗದ ಹೆಸರನ್ನು ಉದ್ಘೋಷಿಸುವನು. ಈ ರೀತಿಯಾಗಿ ಕಾಲಿದಾಸನು ಪ್ರೇಕ್ಷಾಗಾರದ ವ್ಯವಸ್ಥೆಯನ್ನು ಹೇಳಿದ್ದಾನೆ.

ಕಾಲಿದಾಸನು ಶರ್ಮಿಷ್ಠಾಕೃತಿಯನ್ನು "ಲಯಮಧ್ಯಾ" ಮತ್ತು "ಚತುಷ್ಪದಾ" ಎಂದು ಕರೆದಿದ್ದಾನೆ. ಆದದ್ದರಿಂದ ಈ ಕಾವ್ಯವು ನಾಲ್ಕು ಪಾದಗಳುಳ್ಳದ್ದೂ, ಮಧ್ಯಲಯದಲ್ಲಿ ಹಾಡತಕ್ಕದ್ದೂ ಇರಲಿಕ್ಕೆಬೇಕು. ಇದರಂತೆಯೇ ಸರಸ್ವತೀರಚಿತವಾದ ಲಕ್ಷ್ಮೀಸ್ವಯಂವರವೆಂಬ ಕಾವ್ಯಬಂಧದ ಪ್ರಯೋಗವನ್ನು ನಾಟ್ಯಾಚಾರ್ಯನಾದ ಭರತಮುನಿಯು ಅಪ್ಸರಸ್ತ್ರೀಯರಿಂದ ಇಂದ್ರಸಭೆಯಲ್ಲಿ ಮಾಡಿಸಿದನೆಂಬ ಉಲ್ಲೇಖವು ವಿಕ್ರಮೋರ್ವಶೀಯದಲ್ಲಿ ಇದೆ. ಈ ಲಕ್ಷ್ಮೀಸ್ವಯಂವರದಲ್ಲಿ ಎಂಟು ರಸಗಳ ಅಧಿಷ್ಠಾನವಿತ್ತೆಂದೂ ಅಭಿನಯದ ಪ್ರಸಂಗಗಳು ಅತ್ಯುತ್ಕೃಷ್ಟವಾಗಿದ್ದುವೆಂದೂ ಉಕ್ತವಾಗಿದೆ. ಕಾಲಿದಾಸನು ಈ ಪ್ರಯೋಗವನ್ನು ಕಾವ್ಯಬಂಧವೆಂದು ಕರೆದಿದ್ದಾನೆ. ಸ್ತ್ರೀಯರ ಪಾತ್ರಗಳನ್ನು ಸ್ತ್ರೀಯರೇ ಮಾಡಿದರೆಂಬುದು ಈ ಬಂಧದ ವೈಶಿಷ್ಟ್ಯವಾಗಿದೆ. ಇದರಲ್ಲಿ ಲಕ್ಷ್ಮಿಯ ಪಾತ್ರವನ್ನು ಊರ್ವಶಿಯೂ ವಾರುಣಿಯ ಪಾತ್ರವನ್ನು ಮೇನಕೆಯೂ ವಹಿಸಿದ್ದರು.

ಶಂಕರ-ಪಾರ್ವತಿಯರ ವಿವಾಹಸಮಾರಂಭದ ವರ್ಣನಾವಸರದಲ್ಲಿ ಕಾಲಿದಾಸನು, ನಾಟ್ಯಪ್ರಯೋಗದ ಉಲ್ಲೇಖವನ್ನು ಕುಮಾರಸಂಭವದಲ್ಲಿ ಮಾಡಿದ್ದಾನೆ. ಈ ವರ್ಣನದಲ್ಲಿ ಸಂಧಿ, ವೃತ್ತಿ, ರಸ, ರಾಗ ಮತ್ತು ಪ್ರಯೋಗ ಈ ಪಾರಿಭಾಷಿಕ ಶಬ್ದಗಳು ಬಂದಿವೆ. ಸಂಧಿಯೆಂದರೆ ನಾಟಕದೊಳಗಿನ ಮೆಟ್ಟಲುಗಳು. ಇವು ಮುಖ, ಪ್ರತಿಮುಖ, ಗರ್ಭ, ಸಾವಮರ್ಶ ಮತ್ತು ನಿರ್ವಹಣ ಎಂಬುದಾಗಿ ಐದು ಇರುತ್ತವೆ. ವೃತ್ತಿಯೆಂದರೆ ಭಾಷಾಶೈಲಿಯು. ಕೈಶಿಕಿ, ಸಾತ್ತ್ವತಿ, ಆರಭಟಿ, ಮತ್ತು ಭಾರತಿ ಎಂದು ಇದು ಚತುರ್ವಿಧವು. ವಿಶಿಷ್ಟವಾದ ರಸವು ವಿಶಿಷ್ಟವಾದ ವೃತ್ತಿಯಲ್ಲಿಯೇ ಇರಬೇಕಾಗುತ್ತದೆ. ಶೃಂಗಾರಸಗಳೂ ಭೈರವ್ಯಾದಿ ರಾಗಗಳೂ ಸರ್ವಶ್ರುತವಾಗಿವೆ. ನಾಟಕದ ವಿಶಿಷ್ಟವಾದ ಮೆಟ್ಟಲಿಗೆ ವಿಶಿಷ್ಟವಾದ ವೃತ್ತಿಯು ಇರಬೇಕೆಂದೂ ರಸಭೇದಕ್ಕನುಸರಿಸಿ ರಾಗಭೇದವಿರಬೇಕೆಂದೂ ಕಾಲಿದಾಸನು ಈ ವರ್ಣನದಲ್ಲಿ ಸೂಚಿಸಿದ್ದಾನೆ. ಎಂದರೆ ವಿಶಿಷ್ಟವಾದ ರಾಗಗಳಿಂದ ವಿಶಿಷ್ಟವಾದ ರಸಗಳ ಪರಿಪೋಷವಾಗುತ್ತದೆಂದು ತಾತ್ಪರ್ಯವು. ಶಂಕರ-ಪಾರ್ವತಿಯರ ಮದುವೆಯಾದ ಬಳಿಕ:—

ತೌ ಸಂಧಿಷು ವ್ಯಂಜಿತವೃತ್ತಿಭೇದಂ | ರಸಾಂತರೇಷು ಪ್ರತಿಬದ್ಧರಾಗಂ | ಅಪಶ್ಯತಾಮಪ್ಸರಸಾಂ ಮುಹೂರ್ತಂ | ಪ್ರಯೋಗಮಾದ್ಯಂ ಲಲಿತಾಂಗಹಾರಂ ||

"ಯಾವ ನಾಟಕದ ಬೇರೆ ಬೇರೆ ಭಾಗಗಳು ಅನುರೂಪವಾದ ಬೇರೆ ಬೇರೆ ಭಾಷಾಶೈಲಿಯಿಂದ ಶೋಭಿಸುತ್ತಿದ್ದುವೋ, ಯಾವ ನಾಟಕದಲ್ಲಿಯ ಹಾಡುಗಳು ರಸಾನುಗುಣವಾದ ರಾಗಗಳಲ್ಲಿ ರಚಿತವಾಗಿದ್ದುವೋ, ಯಾವ ನಾಟಕದೊಳಗಿನ ಪಾತ್ರಗಳ ಹಾವಭಾವಗಳು ಆಕರ್ಷಕವಾಗಿದ್ದುವೋ ಅಂತಹ ನಾಟಕವನ್ನು ಅಪ್ಸರಸ್ತ್ರೀಯರು ಆಡಿದರು. ಆ ನಾಟಕವನ್ನು ನವಪರಿಣೀತ ದಂಪತಿಗಳು ಒಂದೆರಡು ಗಳಿಗೆಯ ವರೆಗೆ ನೋಡಿದರು," ಎಂದು ಕಾಲಿದಾಸನು ಹೇಳಿದ್ದಾನೆ.

ಭಾಸ, ಸೌಮಿಲ್ಲ, ಕವಿಪುತ್ರರೆಂಬ ನಾಟಕಕಾರರ ಹೆಸರನ್ನು ಹೇಳಿ, "ಅಂತಹರು ರಚಿಸಿದ ನಾಟಕಗಳನ್ನುಳಿದು, ಈ ಹೊಸ ಕವಿಯ ಹೊಸನಾಟಕವು ಪರಿಷತ್ತಿನ ಮೆಚ್ಚಿಗೆಯನ್ನು ಹೇಗೆ ಪಡೆಯಬಲ್ಲುದು?" ಎಂದು ಪೂರ್ವಪಕ್ಷವನ್ನು ಮಾಡಿಕೊಂಡು, ಕಾಲಿದಾಸನು ಮಾಲವಿಕಾಗ್ನಿಮಿತ್ರದಲ್ಲಿ ತಾನೇ ಈ ರೀತಿಯಾಗಿ ಸಮಾಧಾನವನ್ನು ಹೇಳುತ್ತಾನೆ:—

ಪುರಾಣಮಿತ್ಯೇವ ನ ಸಾಧು ಸರ್ವಂ | ನ ಚಾಪಿ ಕಾವ್ಯಂ ನವಮಿತ್ಯವದ್ಯಂ | ಸಂತಃ ಪರೀಕ್ಷ್ಯಾನ್ಯತರದ್ಭಜಂತೇ | ಮೂಢಃ ಪರಪ್ರತ್ಯಯನೇಯಬುದ್ಧಿಃ ||

"ಹಳೆಯದೆಂಬ ಕಾರಣದಿಂದಲೇ ಎಲ್ಲವೂ ಒಳ್ಳೆಯದಲ್ಲ; ಹೊಸದೆಂಬ ಕಾರಣದಿಂದಲೇ ಎಲ್ಲವೂ ಕೆಟ್ಟುದಲ್ಲ. ಸಹೃದಯರಾದ ಪ್ರೇಕ್ಷಕರು ಒಳಿತು-ಕೆಡುಕುಗಳನ್ನು ಪರೀಕ್ಷಿಸಿ, ಒಳ್ಳೆಯದನ್ನೇ ಅಂಗೀಕರಿಸುತ್ತಾರೆ. ಮೂಢರು ಮಾತ್ರ ಪರರು ಮಾಡಿದ ನಿರ್ಣಯವನ್ನು ಹಿಂಬಾಲಿಸುತ್ತಾರೆ." ಇದರಿಂದ ಆಗಿನ ಕಾಲದ ಪ್ರೇಕ್ಷಕವರ್ಗವು ಸಾಮಾನ್ಯವಾಗಿ ಹೇಗಿತ್ತೆಂಬುದು ತಿಳಿಯುವುದು. ವಿಕ್ರಮೋರ್ವಶೀಯದಲ್ಲಿ "ಹಿಂದಿನ ಕವಿಗಳ ಎಷ್ಟೋ ನಾಟಕಗಳನ್ನು ಪರಿಷತ್ತು ನೋಡಿದೆ. ಆದರೆ ಇಂದು ನಾನು ವಿಕ್ರಮೋರ್ವಶೀಯವೆಂಬ ಹೊಸ ನಾಟಕವನ್ನು ಆಡಿ ತೋರಿಸತಕ್ಕವನಿದ್ದೇನೆ!" ಎಂದು ಸೂತ್ರಧಾರನು ಹೇಳುತ್ತಾನೆ. ಪ್ರೇಕ್ಷಕರೂ ನಟರೂ ಪರಸ್ಪರರನ್ನು ಸೌಹಾರ್ದದಿಂದ ನೋಡುತ್ತಿದ್ದರೆಂದು ಇದರಿಂದ ಸೂಚಿತವಾಗುತ್ತದೆ. ಶಾಕುಂತಲ ನಾಟಕದಲ್ಲಿಯಂತೂ ಪರಿಷತ್ತಿಗೆ "ಅಭಿರೂಪಭೂಯಿಷ್ಠಾ" ಎಂದರೆ ಬಹುಜನ ವಿಮರ್ಶಕವಿದ್ವಾಂಸರಿಂದ ಕೂಡಿದ್ದು ಎಂಬರ್ಥದ ವಿಶೇಷಣವನ್ನು ಕಾಲಿದಾಸನು ಕೊಟ್ಟಿದ್ದಾನೆ. ಇಂತಹ ಪರಿಷತ್ತಿನ ಎದುರಿಗೆ ಕಾಲಿದಾಸಕೃತ ನವೀನ ನಾಟಕದ ಪ್ರಯೋಗವಾಗತಕ್ಕದ್ದಿದೆಯೆಂದು ಅಲ್ಲಿ ಸಾರಿದೆ. ಆಗಿನ ಶ್ರೋತೃವೃಂದವೂ ಪ್ರೇಕ್ಷಕವೃಂದವೂ ನಾಟಕಪ್ರೇಕ್ಷಣದಲ್ಲಿ ಕುತೂಹಲ[illegible]ದ್ದೆಂದೂ, ನಟವರ್ಗವು ಸಮರ್ಥ ಸೂತ್ರಧಾರನಿಂದ ಚೆನ್ನಾಗಿ ಶಿಕ್ಷಣಪಡೆದದ್ದೆಂದೂ ಇದರಿಂದ ಸೂಚಿತವಾಗುತ್ತದೆ. "ಇಂತಹ ರಸಿಕಸಹೃದಯರಿಗೆ ಪರಿತೋಷವನ್ನುಂಟು ಮಾಡುವ ನಾಟ್ಯಪ್ರಯೋಗವೇ ಯಶಸ್ವಿಯಾದ್ದೆಂದು" ಕಾಲಿದಾಸನು ಹೇಳುತ್ತಾನೆ. ಪಾತ್ರಗಳಿಗೆ ಚೆನ್ನಾಗಿ ಶಿಕ್ಷಣಕೊಟ್ಟು ಸನ್ನದ್ಧರನ್ನಾಗಿ ಮಾಡಿದ್ದರೂ, ಪ್ರಯೋಗಕಾಲದಲ್ಲಿ ಬಹುಜನರಿಗೆ ತಮ್ಮ ಕೃತಿಯ ವಿಷಯದಲ್ಲಿ ಆತ್ಮವಿಶ್ವಾಸವು ಹುಟ್ಟುವುದಿಲ್ಲವೆಂದು ಅವನು ಅಭಿಪ್ರಾಯ ಪಡುತ್ತಾನೆ. ಇನ್ನು ಉತ್ತರಾರ್ಧದಲ್ಲಿ ವಾದ್ಯ ಮತ್ತು ಗಾನಗಳ ವಿವೇಚನೆಯು ಬರುವುದು.

---

# ಅಶೋಕಚಕ್ರ

(ಗೀತರೂಪಕ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

卐

## ಪಾತ್ರವರ್ಗ:

ಮೇಳನಾಯಕ (ಕಥಾಸಂದರ್ಭಸೂಚಕ) ಇವನಿಗೆ ಹಿಮ್ಮೇಳದವರೂ ಇರಬಹುದು.
ಅಶೋಕ (ಮಗಧದೇಶದ ರಾಜ—ಮುಂದೆ ಭಾರತದ ಸಮ್ರಾಟ)
ರಾಧಾಗುಪ್ತ (ಅಶೋಕನ ಪ್ರಧಾನಸಚಿವ)
ಮಹೇಂದ್ರ (ಅಶೋಕರಾಜನ ಮಗ—ವಯಸ್ಸು ೧೬-೧೭ ವರ್ಷ)
ನ್ಯಗ್ರೋಧ (ಅಶೋಕನ ಅಣ್ಣನಾದ ಸುಸೀಮನ ಮಗ. ಬುದ್ಧಭಿಕ್ಷು. ವಯಸ್ಸು ೧೬-೧೮ ವರ್ಷ)
ಸುಭದ್ರಾಂಗಿ (ಅಶೋಕನ ಒಬ್ಬ ಹೆಂಡತಿ, ಬೌದ್ಧಧರ್ಮಾಸಕ್ತಳು)
ಸಂಘಮಿತ್ರಾ (ಸುಭದ್ರಾಂಗಿಯ ಮಗಳು)
ಪ್ರತಿಹಾರಿ (ಅಶೋಕರಾಜನ ಸನ್ನಿಧಿಯ ಸೇವಕ)

ಅಲ್ಲದೆ ರಣಭೂಮಿಯಲ್ಲಿಯ ಬೇರೆ ಬೇರೆ ಕರುಣಾಧ್ವನಿಗಳನ್ನು ತೆಗೆಯುವವರು.

## ೧

(ರಾಜಧಾನಿಯ ವಾತಾವರಣಪ್ರದರ್ಶಕವಾದ ಭೇರಿ-ದುಂದುಭಿ-ಕಹಳೆಗಳ ಮೊಳಗು ಮೂಡಿ ಮರೆಯಾಗುತ್ತವೆ.)

**ಮೇಳದವನು:**

(ತಂತುಣಿಯ ಮಿಡಿತ—ಡಪ್ಪಿನ ಗತಿಗಳೊಂದಿಗೆ.)

ಮಗಧರಾಜ್ಯ ಮಿಗಿಲಾದುದು ಜಗದೊಳು, ರಾಜಧಾನಿ ಪಾಟಲಿಪುತ್ರಾ—
ವಿಗತಪರಾಕ್ರಮಿ ಅಶೋಕರಾಜನು ಹಿಡಿದಿಹನಾ ರಾಜ್ಯದ ಸೂತ್ರಾ!
ಯುದ್ಧ-ವಿಜಯಗಳ ಭೋಗಭೂತಗಳ ಬೆನ್ನು ಹಿಡಿದು ನಡೆದಿಹನಾತಾ—
ಭದ್ರ ಭದ್ರ ರಾಜ್ಯಂಗಳ ಸತ್ತ್ವದಿ ಒದ್ದು ಕೆಡಹಿದನು ಪ್ರಖ್ಯಾತಾ!
ಯುದ್ಧದಿಂದ ಹೊತ್ತಿದ್ದ ದುಃಖದುರಿ ದಿಗ್ದೇಶದಿ ಹರಿಹಬ್ಬಿಹುದೋ-
ಉದ್ವೇಗದಿ ದೆಸೆಗೆಟ್ಟಿಹ ಜನತೆಯು ಬಿದ್ದು ಬಾಯಿ-ಬಾಯ್ಬಿಡುತಿಹುದೋ!
ಮಗಧದ ರಾಣಿ ಸುಭದ್ರಾಂಗಿಯು ತಾ ದಯೆಯ ದಿವ್ಯಮೂರ್ತಿ-
ತಗುಬಗೆಗೊಳುವಳು ಕೇಳಿ ಕೇಳಿ ಕಾಳಗದ ಕೊಲೆಯ ಕೀರ್ತಿ!
ಜನತೆಯ ಶಾಂತಿಗೆ ದಿನ-ರಾತ್ರಿಯು ಮರಮರನೆ ಮರುಗುತಿಹಳು—
ಮನವನಿತ್ತು ಕೇಳಿರಿ ನೀವೆಲ್ಲರು ಏಕೊ ಕೊರಗುತಿಹಳು:

(ವೀಣೆಯ ಕರುಣಾಸ್ವರಗಳು ಮಿಡಿದು ನಿಂತ ಮೇಲೆ)

**ಸುಭದ್ರಾಂಗಿ**

ಎಂದು ಮೆರೆವುದೊ ಸ್ನೇಹ-ಶಾಂತಿಯ ಧ್ವಜವು ಭಾರತದೇಶದಿ...
ಎಂದು ಮನುಜರು ಮುಕ್ತರಹರೋ ದ್ವೇಷ, ಲೋಭದ ಪಾಶದಿ?
'ಆಶೆಯೇ ದ್ವೇಷವನು ಹಡೆವುದು
ದ್ವೇಷವೇ ಕ್ಲೇಶಂಗಳೆಡೆಯುದು!'
ಈ ಸುನೀತಿಯನೆಂದು ತಿಳಿವುದೊ ಭಾರತದ ಜನತೆ...
ಆ ಸಮಯವನೇ ಕಾಯುತಿಹೆ ಮಗು, ಬೇಗ ಬಂದೀತೆ?

ಬುದ್ಧಂ ಶರಣಂ ಗಚ್ಛಾಮಿ!
ಧರ್ಮಂ ಶರಣಂ ಗಚ್ಛಾಮಿ!!
ಸಂಘಂ ಶರಣಂ ಗಚ್ಛಾಮಿ!!!

**ಮಹೇಂದ್ರ**

[ಸಂಭ್ರಾಂತಭಾವದವನಾಗಿ]

ನಿನ್ನ ಚಿಂತೆಗೆಂದು ಕೊನೆಯೊ ಕಾಣೆ ನಾನು ತಾಯೆ!
ಮನ್ನೆಯರೆದೆ-ಮತಿಗಳನೂ ಮಥಿಸುತಿಹುದು ಮಾಯೆ!

ರಾಣಿಯು ಸಿರಿಯುಳಿದು ನೀನು ಆಗಿ ಕುಳಿತೆ ಜೋಗಿಣಿ—
ಕ್ಷೋಣೀಶನ ಕೆರಳಿಸುತಿದೆ ಭೋಗವಿಷದ ನಾಗಿಣಿ!
ಧರ್ಮ-ಧರ್ಮವೆನುವೆ ನೀನು, ಧರ್ಮವೆನುವನಾ ದೊರೆ—
ಧರ್ಮವೆಂಬ ಭ್ರಾಂತಿಯೊಳೇ ಭ್ರಮಿಸುತಿಹುದು ಈ ಧರೆ!
ದಿಟದ ಧರ್ಮವಾವುದಮ್ಮ, ದಿಟದ ಧರ್ಮವಾವುದೆ?
ಅಟಮಟಗೊಳುತಿರುವೆ ನಾನು ಧರ್ಮದ ನೆಲೆಯರಿಯದೆ!

### ಸುಭದ್ರಾಂಗಿ

ಏನು ಮಾತಿದು ಮಗು ಮಹೇಂದ್ರನೆ,
ನೀನರಿಯೆಯಾ ಧರ್ಮವ?—
ದೈನ್ಯ-ದುಃಖಕೆ ಎಡೆಯಿರದು ತಿಳಿ
ಧರ್ಮರಾಜ್ಯದ ಮರ್ಮವ!

( ಅನತಿದೂರದಿಂದ ನ್ಯಗ್ರೋಧನ ಧರ್ಮಗೀತವು ಕೇಳಬರುವುದು. )

### ನ್ಯಗ್ರೋಧ

( ಏಕತಾರಿಯ ಅವಿರತವಾದ ಮಿಡಿತದೊಂದಿಗೆ )

ಕಾಯುವ ಮಾನವನವನೇ ದೇವ—
ಈಯುವ ಮಾನವನವನೇ ದೇವ.......!
ಆಯಾಸಗೊಳುತಿಹ ಹೀನ-ದೀನರ ಕಂಡು
ನೋಯುವ ಹೃದಯದವನೆ ದೇವದೇವ! ||ಪಲ್ಲ||

ಕರುಣೆ-ಮೈತ್ರಿಗಳನು ನರರು ಸ್ವಾಗತಿಸಲು
ನರಲೋಕವಪ್ಪುದು ಸುರಲೋಕ.......
ಅರಸರೆಲ್ಲರು ವೈರ ತೊರೆದಹಿಂಸೆಗೆ ಮನ-
ವೆಂಸಿದರೀ ಧರೆ ಧರ್ಮನಾಕ! || ೧ ||

ಕಾಯುವ ಮಾನವನವನೇ ದೇವ—
ಈಯುವ ಮಾನವನವನೇ ದೇವ!

### ಸುಭದ್ರಾಂಗಿ

( ಆತುರಭಾವದವಳಾಗಿ )

ಅರರೇ ಇನಿನುಡಿಯು? ಬಂದನೇ ನ್ಯಗ್ರೋಧ?....
ನ್ಯಗ್ರೋಧನೇನವನು, ಸದ್ಧರ್ಮಬೋಧ!
ಎಳೆಯತನದೊಳೆ ಅವನಿಗೆನಿತು ಜ್ಞಾನ....
ಬೆಳೆದುದೋ ಹೊರಗೇರಿ—ಅಂತ್ಯಜರ ತಾಣ!

### ಮಹೇಂದ್ರ

ದೊರೆಯ ಮೆಚ್ಚಿಕೆಯನೂ ಪಡೆದಿರುವನಾತ ....
ಅವನ ನುಡಿ ಕೇಳಿ ತಲೆದೂಗುವನು ತಾತ!
ಕೆಸರಿನಲ್ಲಿಯ ಕಮಲ ತಾಯಿ ನ್ಯಗ್ರೋಧ....
ಬಿಸುಟನೆಂತೋ ಅವನು ವಿದ್ವೇಷ—ಕ್ರೋಧ?

( ನ್ಯಗ್ರೋಧನ ಹಾಡು ಹತ್ತಿರ-ಹತ್ತಿರವಾಗುತ್ತ ಬರುವುದು. )

### ನ್ಯಗ್ರೋಧ

ಪರಹಿತಕಾಗಿಯೆ ಹರಿವುವು ಹೊಳೆಗಳು,
ಪರಹಿತಕೆಂದೇ ಹಣ್ಣಿರುವುವು ತರುಗಳು,
ಪರಹಿತಕೇ ಹಸು ಕರೆವುವು ಹಾಲು....
ಪರಹಿತಕಾಗಿಯೇ ಮನುಜನ ಬಾಳು! || ೨ ||

ಕಾಯುವ ಮಾನವನವನೇ ದೇವ....
ಈಯುವ ಮಾನವನವನೇ ದೇವ!

### ಸುಭದ್ರಾಂಗಿ

( ಆನಂದಾತುರದ ಧ್ವನಿಯಲ್ಲಿ )

ಬಂದೆಯಾ, ಬಾ, ಮಗನೆ, ಕಂದ ನ್ಯಗ್ರೋಧ....
ನಿನ್ನ ಬರುವಿಕೆ ನನಗೆ ತಹುದು ಆನಂದ!

### ನ್ಯಗ್ರೋಧ

ಮಣಿವೆ ಜನನಿಯೆ ನಿನ್ನ ಅಡಿಗಳೆಡೆಗೆ....
ನಿನ್ನ ಹರಕೆಯೆ ನನ್ನ ಜೀವನಕೆ ತೊಡುಗೆ!
ಧನ್ಯನಿಹೆ ನಾನಿನ್ನ ತಾಯೊಲುಮೆಗಾಗಿ ...
ಆದರೇನಮ್ಮ, ನಾ ನಿಲುವೆ ತಲೆಬಾಗಿ!

### ಮಹೇಂದ್ರ

ನಿನ್ನ ಮೊಗದಲಿ ದುಗಡವೇಕೆ ತುಂಬಿಹುದು?
ಅಣ್ಣ, ಅರುಹೈ ತಂದ ವಾರ್ತೆ ಯಾವುದದು?

### ಸುಭದ್ರಾಂಗಿ

( ಕರುಣಾವಾಣಿಯಲ್ಲಿಯೆ )

ಕಂದ, ಬಿಡು ಸಂದೆಗವ ಹೇಳೈ
ತಂದ ವಾರ್ತೆಯದೇನು?
ಇಂದೆಯೂ ಕೇಳುವೆನೆ ಯುದ್ಧದ
ದಂದುಗದ ಪಾಡನ್ನು?

### ನ್ಯಗ್ರೋಧ

ಅಹುದು, ದುರ್ದೈವದ ಕುವಾರ್ತೆಯು,
ಸಹನೆಯೊಂದೇ ದಾರಿ....
ಮತ್ತೆ ದೊರೆ ಯುದ್ಧಕ್ಕೆ ಹೊರಟಿಹ
ಎತ್ತಿಹಳು ಮೊಗ ಮಾರಿ!

( ಡೋಲು, ಭೇರಿ, ಕಹಳೆ ಮೊದಲಾದ ರಣವಾದ್ಯಗಳ ಮೊಳಗು )

ಕೇಳು ಕೇಳಿದೊ ತಾಯೆ, ಮೊರೆವುವು
ಡೋಲು ಭೇರಿ ತುತೂರಿ....
ಕಾಳೆಗಕೆ ಅಣಿಗೊಂಡ ಸೈನ್ಯವು
ಹಿಡಿಯಲಿದೆ ಹೆದ್ದಾರಿ!

**ಸುಭದ್ರಾಂಗಿ**

( ಕಳವಳ ಸೂಚಿಸುವ ಧ್ವನಿಯಲ್ಲಿ )

ಯಾವ ನಿಟ್ಟಿಗೆ ಕದನಪಯಣವೀ ಬಾರಿ....
ಯಾವ ಜನರಕ್ತವನು ಬಯಸಿಹಳು ಮಾರಿ ?

**ನ್ಯಗ್ರೋಧ**

ದೇಶ-ದೇಶಂಗಳನು ಗೆಲುವಾ ಆಶೆಗೆಣೆಯೇ ಇಲ್ಲ !
ಈ ಸಲಕೆ ಹೊರಟಿಹನು ದೊರೆಯು, ಕಲಿಂಗರಾಜ್ಯವನೆಲ್ಲ....
ನಾಶಮಾಡಿಯೆ ಬಿಡುವನಿದರೊಳು ಏನು ಸಂಶಯವಿಲ್ಲ !

**ಮಹೇಂದ್ರ**

ಅಕಟ ! ಎಂತಹದಾ ಕಲಿಂಗರ ಸುರಾಜ್ಯ....
ಸಕಲಕಲೆಗಳ ಬೀಡು ಶಾಂತಿಯ ಸುಭೋಜ್ಯ !
ವಿಜಯಲೋಭದ ಮಗಧರಾಜಗಜವೆದ್ದು
ನಿಜ ಶಾಂತಿ-ಸುಖದ ಸರಸಿಯನು ಕಲಕುವುದು !

**ಸುಭದ್ರಾಂಗಿ**

ತಡೆಯಬೇಕು ಕದನವಿದನು ತಡೆಯಬೇಕು ನಾವು....
ಹುಡುಕಿ ಹಿಡಿಯಬೇಕು; ಯಾವುದಿದನು ತಡೆವುಪಾಯವು ?

**ನ್ಯಗ್ರೋಧ**

ಮುನಿವರೇಣ್ಯ ಉಪಗುಪ್ತರೆ ಇದಕುಪಾಯ ಬಲ್ಲರು....
ಅವರಲ್ಲದೆ ಇನ್ನಾರೂ ದೊರೆಯ ತಿದ್ದಲರಿಯರು !

**ಸುಭದ್ರಾಂಗಿ**

( ಆತುರ-ಕಾತರಭಾವದಲ್ಲಿ )

ಹೋಗು ಮಗುವೆ ನೀ ನನ್ನ ದೊರೆಯನೊರೆ
ಬೇಗ ಹೋಗು ಮುನಿಯೆಡೆಗೆ....
ಈಗಲೆ ನಾನೂ ಮಹೇಂದ್ರನೊಂದಿಗೆ
ಹೋಗುವೆ ದೊರೆಯಿಹ ಕಡೆಗೆ !

[ ಎಲ್ಲರೂ ಕೂಡಿ ]

ಬುದ್ಧಂ ಶರಣಂ ಗಚ್ಛಾಮಿ !
ಧರ್ಮಂ ಶರಣಂ ಗಚ್ಛಾಮಿ !
ಸಂಘಂ ಶರಣಂ ಗಚ್ಛಾಮಿ !

## ೨

[ ಹಿನ್ನೆಲೆಯಲ್ಲಿ ಸೈನ್ಯದ ಪಾಳೆಯದ ವಾತಾವರಣಧ್ವನಿ: ಕುದುರೆಗಳ ಕೆನೆತ, ಆನೆಗಳ ಬೃಂಹಿತ, ನಾಯಿಗಳ ಬೊಗಳು, ಜನರ ಮಾತಿನ ಗುಲ್ಲು, ಗಲಾಟೆ. ]

**ಮೇಳನಾಯಕ**

( ತಂತಾಣಿಯ ನಾದ—ಡಪ್ಪಿನ ಗತಿಯೊಂದಿಗೆ: )

ಮಗಧರಾಜ್ಯಪತಿ ಅಶೋಕಭೂಪತಿ ಕಲಿಂಗವಿಜಯಕೆ ನಡೆದಿಹನೋ
ದಿಗುವಲಯವನೇ ಜಯಿಸಿ ಜಗತ್ಪತಿಯಾಗುವ ಹವಣಿಕೆ ಹಿಡಿದಿಹನೋ !
ಮಗಧದ ಸೈನ್ಯವು ವಿರೋಧಿಶೂನ್ಯವು, ಪದಾತಿಗಳಿಗಿಲ್ಲವೊ ಲೆಕ್ಕ—
ಕುದುರೆಗಳೆನಿತೋ ಆನೆಗಳೆನಿತೋ ತೇರಾಳುಗಳಿರುವರು ಲಕ್ಷ !
ದಂಡು ನಡೆದು ಬೈಗಿನಲಿ ಒಂದು ಹೊಳೆದಂಡೆಯಲ್ಲಿ ಬಿಟ್ಟಿದೆ ಬೀಡ—
ಗಂಡುಗಲಿಯು ಮಗಧಾಧಿಪ ಕುಳಿತಿಹ ಗುಡಾರದಿ ಮಂತ್ರಿಯು ಕೂಡೆ.
ಎಂಥ ಬಂಟನವ ಅಶೋಕಭೂಪತಿ ಎಂಥದವನ ಮೊಗದೈಶ್ವರಿಯ—
ಹುಂಕಾರ ಚಲದಂಕಮಲ್ಲನವ ನೋಡಿರಿಂದಿನಾತನ ಚರಿಯ !

**ಅಶೋಕ**

ವೃದ್ಧ ಮಂತ್ರಿವರರೆ, ನನ್ನ ಒಳನುಡಿಯಿದು ನೋಡಿ,—
ಯುದ್ಧ ಬೇಡವೆನುವ ಮನುಜ ವೀರನಲ್ಲ.... ಹೇಡಿ !

**ಮಂತ್ರಿ-ರಾಧಾಗುಪ್ತ**

ಕ್ಷಾತ್ರಕುಲಕೆ ತಕ್ಕುದಿಹುದು ದೊರೆಯೆ ತಮ್ಮದೀ ನುಡಿ
ಶತ್ರುಗಳನು ಸದೆಯುವುದೇ ಕ್ಷಾತ್ರಕರ್ಮ ನೋಡಿ !
ಗೆಲುವ ಹದನ ಕಳೆದುಕೊಂಡ ಕ್ಷತ್ರಿಯನಿಗೆ ದುರ್ಗತಿ —
ಸಲುವುದೆ ನಿಜವೆಂದು ಸಾರುತಿಹುದು ರಾಜನೀತಿ !

**ಅಶೋಕ**

ರಾಜನೀತಿಯೆ ನನಗೆ ಕಲಿಸಿಹುದು ಧರ್ಮ ...
ರಾಜಾಧಿರಾಜರಾ ಕರ್ತವ್ಯಮರ್ಮ !

**ರಾಧಾಗುಪ್ತ**

ಸಕಲದೇಶದಿ ಮಗಧಶಾಸನ—
ಶಕವು ಮೆರೆಯಲೆ ಬೇಕು—
ನಿಖಿಲಜನತೆ ಅಶೋಕಭೂಪನ
ಮುಕುಟಕೆರಗಲೆ ಬೇಕು.

ಧಾರಿಣಿಯು ಧೃತಿವೀರನಲ್ಲದೆ
ಬೇರೆಯವರನು ಒಲಿವಳೆ?
ಸಾರರಹಿತನ ಸಾರ್ವಭೌಮಿಕೆ
ನೀರನೇಲಿನ ಗೆರೆಯಲೆ?

**ಅಶೋಕ**

ಭಳಿಭಳಿರೆ ಮಂತ್ರಿವರ ರಾಜಧರ್ಮವನು—
ತಿಳಿದಿಹಿರಿ ತಿರುಳೊಂದಿಗದರ ಮರ್ಮವನು!

( ದೂರದಿಂದ ಹಾಡು ಕಿವಿಗೆ ಬೀಳುವುದು: )

**ಸುಭದ್ರಾಂಗಿ, ಸಂಘಮಿತ್ರೆ, ಮಹೇಂದ್ರ**

( ಎಲ್ಲರೂ ಕೂಡಿ ಹಾಡುತ್ತಿರುವರು. )

ದಯೆಗೆಡೆಯಿಲ್ಲದ ಧರ್ಮವದಾವುದೊ
ದಯೆಯೇ ಸದ್ಧರ್ಮದ ಮೂಲ—
ದಯೆಯನುಳಿದ ಮಾನವನೇ ದಾನವ
ದಯೆಯೊಂದೇ ಜೀವನಶೀಲ!

**ಅಶೋಕ**

( ಜುಗುಪ್ಸೆಯಿಂದ )

ಯಾರದೀ ಬರುರಗಳೆ? ಧ್ವನಿಯೇನೊ ಗುರುತಿನದು!

**ರಾಧಾಗುಪ್ತ**

ಯಾರದೇ ಇರಲಿ ಬಿಡಿ. ನಮಗೇನ ಮಾಡುವುದು?
ದಯೆ-ಅಹಿಂಸೆಯ ಹಿರಿಮೆ ಕೊಂಡಾಡಿ ಇವರು
ಜಯದ ದಾರಿಗಳನೇ ಮರೆಮಾಡುತಿಹರು....
ವೀರಘಾತಕರು!

**ಅಶೋಕ**

ದಯೆಯಿರದ ಮಾನವನೆ ದಾನವನು ಅಂತೆ—
ಶಕ್ತಿಯನೆ ಕೆಡಿಸುತಿದೆ ಈ ಹಾಳುಕಂತೆ!

**ರಾಧಾಗುಪ್ತ**

( ಕ್ರುದ್ಧಭಾವದವನಾಗಿ )

ದಯೆಯ ಬೆಂಬಳಿಸಿದರೆ ವೈರಿಗಳ ಅಳಿವೆಂತು?
ಹಿಂಸೆಯಿಲ್ಲದೆ ವೈರಿಬಲವು ವಶವಹುದೆಂತು?

( ಹಾಡು ಹತ್ತಿರ-ಹತ್ತಿರವಾಗುತ್ತ ಬರುವುದು. )

**ಸುಭದ್ರಾಂಗಿ, ಸಂಘಮಿತ್ರೆ, ಮಹೇಂದ್ರ**

ವೈರಿಗಳನ್ಯರೆ? ವೈರಿ ತನಗೆ ತಾನೇ!
ವೈರಮೂಲವು ಒಂದೇ ಸ್ವಾರ್ಥ!
ದೂರಕಟ್ಟಲು ಬೇಕು ಕ್ರೂರ ಸ್ವಾರ್ಥದ ಭೂತ—
ದಯೆಯೇ ಧರ್ಮದ ಸರವಾರ್ಥ....
ದಯೆಯಿಂದೇ ಜೀವನ ಸಾರ್ಥ!

**ಅಶೋಕ**

( ಆತುರಭಾವದವನಾಗಿ )

ಬೇಡ ಬಳಿಯೇ ಹಾಡುತಿಹರು ಯಾರವರು?
ನೋಡಿ ಬಾ ಪ್ರತಿಹಾರಿ,— ಬಂದಿಹರದಾರು?

( ಪ್ರತಿಹಾರಿ ಹೋಗುವನು )

ನಮ್ಮ ಸೈನ್ಯದ ನೆಲೆಯನರಿತುಕೊಳ್ಳಲಿಕೆಂದು
ಹಮ್ಮಿಹರೆ ಹಂಚಿಕೆಯ ಹಗೆಯ ಬೇಹಿಗರು?

**ಪ್ರತಿಹಾರಿ**

( ಮರಳಿ ಬಂದು ಹೇಳುವನು )

ಜೀಯ ಚಿತ್ತಯಿಸುವುದು ಅಜ್ಞೆಯ
ಕಾಯುತಿರುವರು ದ್ವಾರದಿ...
ಸ್ತ್ರೀಯರಿಬ್ಬರು, ತಮ್ಮ ಕುವರ ಮ-
ಹೇಂದ್ರ ಪ್ರಭುಗಳು ತವಕದಿ!

**ಅಶೋಕ**

( ಆಶ್ಚರ್ಯದಿಂದ )

ಏತಕಿಲ್ಲಿ ಮಹೇಂದ್ರಕುವರನು!
ಮಾತೆಯನು ಕರೆತಂದನೆ?
ಗೀತದಾ ಧ್ವನಿ ಕೇಳಿದಾಗಲೆ
ಆತುರಕೆ ಮನದ:ದೆನೆ!

( ಪ್ರತಿಹಾರಿಗೆ )

ಹೋಗು ಬೇಗನೆ ಕರೆಯವರನೊಳ.
ಗೀಗದೇತಕೆ ಬಂದರೊ!
ಸಾಗಿರುವೆ ನಾ ಸಮರಕೆಂಬುದ
ಹೇಗೆ ಮರೆದೈತಂದರೊ!

**ರಾಧಾಗುಪ್ತ**

ಓ!— ಇದೊ ಇದೋ ಬಂದರಿದೊ ರಾಣಿಯವರು—
ಇವರಾರು? ಸಂಘಮಿತ್ರಾ ಕುಮಾರಿಯರು!
ಬಾಲ್ಯೆ, ಮಹೇಂದ್ರ ಸುಕುಮಾರ, ಇದು ಏನು?
ಕಾಲಿರುಳು!.... ಕಾಲ್‌ನಡೆಯೊಳೇ ಬಂದಿರೇನು?

**ಮಹೇಂದ್ರ**

ವಂದನೆಯು ಮಂತ್ರಿಗಳೆ, ವಂದಿಸುವೆ ತಾತಾ!
ಬಂದಿರುವರಿದೊ ತಂಗಿ, ಭದ್ರಾಂಗಿಮಾತಾ!

**ಸಂಘಮಿತ್ರೆ**

ಪೂಜ್ಯಪಾದರ ಚರಣಸರಸಿಜಕೆ ಮಣಿವೆ,
ಒಲವಿನಿಂದೀವ ಹರಕೆಗಳಿಂದ ತಣಿವೆ!

**ಸುಭದ್ರಾಂಗಿ**

ನಿಜವಪ್ಪ ವಿಜಯ ದೊರೆಯಲಿ ಆರ್ಯಪುತ್ರರಿಗೆ,
ರಜವು ಮುಸುಕಿದ ನಾರಿ ಸುಗಮವಾಗಲಿ ನಮಗೆ!
ಸ್ವೀಕರಿಸುವಿರೆ ನನ್ನ ವಿನಯವಂದನೆಯ?
ನೂಕಿ ಬಿಡುವಿರೆ ಸತಿಯ ಹೃದಯಯಾತನೆಯ?

**ಅಶೋಕ**

ಅಚ್ಚರಿಯು ಅಚ್ಚರಿಯು! ಅಚ್ಚರಿಯೆ ಆಹುದು!
ಎಚ್ಚರವೊ ಸ್ವಪ್ನವೋ ತಿಳಿಯದಂತಿಹುದು!
ಆ ಕಲಿಂಗದ ವೈರಿ ಬಂದು ಮುತ್ತಿದ್ದರೂ
ಅಗದಂತಹ ಬೆರಗನಿವರು ಹೊಚ್ಚಿಹರು!

**ಸಂಘಮಿತ್ರೆ**

ವೈರಿಯೇತಕೆನುವೆ ತಾತ, ಆ ಕಲಿಂಗರಾಜಗೆ?
ಬೀರು ದಯೆಗೆ ಹೃದಯಸದನ, ತೋರದೆಲ್ಲಿಯೂ ಹಗೆ!
ತನ್ನ ರಾಜ್ಯದಲ್ಲಿ ತಾನು ಶಾಂತಿ-ಸುಖದಲಿರುವನು,
ನಮ್ಮನೇನು ಮಾಡಿರುವನು ಆ ಕಲಿಂಗರಾಜನು?

**ಅಶೋಕ**

ಬಲ್ಲೆನೌ ಮಗಳೆ ನಾ ನೀತಿ-ಧರ್ಮವನು....
ಬಲ್ಲೆಯೇ ನಾ ನಿನ್ನ ತಂದೆಯೆಂಬುದನು?
ಲೋಕದಲಿ ಬಹುಕಾಲ ಬಾಳಿರುವೆ ನಾನು—
ನೀ ಕೂಸು ಅರಿತಿಹೆಯೆ ಧರ್ಮ-ಕರ್ಮವನು?

**ಸುಭದ್ರಾಂಗಿ**

ಅವಳು ಕೂಸು ಸರಿಯೆ; ಈಗ ನಾ ತಮ್ಮೊಳು ಬೇಡುವೆ:
ಅವನಿಯ ಆಳಿಯಾಶೆಗಾಗಿ ನಡೆದ ಕೊಲೆಯ ನೋಡುವೆ!
ಅಕಟ! ಯುದ್ಧ ಜೀವಹತ್ಯೆ, ರಕುತದ ಚೆಲ್ಲಾಟವು!
ಸುಖವಾರಿಗೆ? ಯುದ್ಧವಿಜಯ ಲೋಕಕೊಂದು ಕಾಟವು!
ಏಸು ಜನರ ಮರಣ ಮತ್ತದೇಸು ದುಃಖಕಾರಣ—
ಸಾಸಿರ-ಸಾಸಿರದ ಕರುಳ ತಾಪ-ಶಾಪಪೂರಣ!
ಇನ್ನು ಯುದ್ಧವೆಂಬ ಸೊಲ್ಲು ಸೊನ್ನೆಗೂಡಿ ಹೋಗಲಿ—
ಮನ್ನೆಯ-ಮನ್ನೆಯರು ಬೆರೆತು ಶಾಂತಿಗಾಗಿ ಕೂಗಲಿ!

ಎಲ್ಲರಿಗೂ ಜೀವ ಬೇಕು, ಸುಖ-ಶಾಂತಿಯು ಬೇಕು,
ಇಲ್ಲದವರಿಗುಳ್ಳವರೇ ಅವನು ನೀಡಬೇಕು!
ಮರಳಿೀಗ ನಿಲಿಸಿ ಯುದ್ಧ; ಜಗದಿ ಶಾಂತಿಯುದಿಸಲಿ,
ಸೆರಗನೊಡ್ಡಿ ಬೇಡುವಳೀ ದಾಸಿ ತಮ್ಮ ಅಡಿಯಲಿ!

**ಅಶೋಕ**

ಹೇಳಿ ಮಂತ್ರಿಗಳೆ, ಇದು ಎಂತಹದು ಶಕುನ?
ಕೇಳದಿರಲೇ ರಾಣಿಯವರ ಸದ್ವಚನ?

**ರಾಧಾಗುಪ್ತ**

ಹೊಸಯುಗದ ಗಾಳಿಯಿದು, ಮಾತೆ—ಬರಿಮಾತು!
ರಾಜಕಾರ್ಯದ ಸುಳಿಯು ಅದಕೇನು ಗೊತ್ತು?
ರಾಜನೀತಿಯದಲ್ಲ ಅಜ್ಜಿಯರ ಕಥೆಯು,
ರಾಜ್ಞಿಯರಿಗೇಕೆ ಆಡಳಿತದಾ ವ್ಯಥೆಯು?
ಮಗಧಾಧಿಪತಿಗೆ ಏನೆಲ್ಲ ಶುಭಶಕುನ—
ಬಗೆಯ ಕರಗಿಸಿತೆ ರಾಣಿಯರ ಹಿತವಚನ?

**ಸುಭದ್ರಾಂಗಿ**

ಕರ್ತವ್ಯವೆನಿಸಿ ನಾನಿಲ್ಲಿ ಬಂದಿಹೆನು,
ಸತ್ಯದೇವತೆಯ ಸಂದೇಶ ಸಾರಿದೆನು.
ಮುಗಿದುದೆನ್ನಾ ಕಾರ್ಯ; ಮಂಗಲವು ನಿಮಗೆ!—
ಯುಗದ ಗುರುವೇ ತಹನು ಲೋಕಕ್ಕೆ ಒಸಗೆ!
ನಡೆ ಮಗಳೆ, ಬಾ ಮಗೂ, ಹೋಗೋಣ ಮರಳಿ—
ತಡೆಯುವುದು ಸರಿಯಲ್ಲ ಈ ಎಡೆಯಲಿ—
ಕೊಲೆಯ ಮನವಿರುವಲಿ!

( ಮೂವರೂ ಸೇರಿ )

ಬುದ್ಧಂ ಶರಣಂ ಗಚ್ಛಾಮಿ!
ಧರ್ಮಂ ಶರಣಂ ಗಚ್ಛಾಮಿ!!
ಸಂಘಂ ಶರಣಂ ಗಚ್ಛಾಮಿ!!!

(ಮೂವರ ಧ್ವನಿಯು ದೂರ ದೂರ ಹೋದಂತೆ ಕೇಳಿಸಬೇಕು.)
( ದೂರ ಹೋದ ಮೇಲೆ, ರಾಧಾಗುಪ್ತ ಗಟ್ಟಿಯಾಗಿ ನಗುವನು. )

**೨**

( ಹಿನ್ನೆಲೆಯಲ್ಲಿ ಹದ್ದು-ಕಾಗೆಗಳ ಹಾರಾಟ, ಕಿರುಚಾಟ; ನರಿಗಳ ಕೂಗು; ನಾಯಿಗಳ ಬೊಗಳಾಟ; ಗೂಗೆಗಳ ಘೂತ್ಕಾರ )

**ಮೇಳನಾಯಕ**

( ತಂತುಣಿಯ ನಾದ, ಡಪ್ಪಿನ ಗತಿಯೊಂದಿಗೆ )

ವಿಜಯ-ವಿಜಯವೋ ಮಗಧಭೂಪತಿಗೆ ವಿಜಯ ದೊರೆಯಿತೋ ಸಂಗರದಿ....
ಭುಜಬಲವೀರ ಕಲಿಂಗರಾಜನನು ಬಿಗಿದಿರಿಸಿಹ ಕಾರಾಗೃಹದಿ!
ಎಂಥ ಯುದ್ಧವದು ಎಂಥ ಯುದ್ಧವೋ, ಹಿಂದೆಂದೂ ಕಾಣದ ಕದನ....
ಕಲಿಂಗವೀರರ ಪ್ರಾಣಗಳೆಲ್ಲಾ ಹಾರಿ ಸೇರಿಹವೊ ಯಮಸದನ!

ರಣಭೂಮಿಯಿದೋ ಹೆಣಮಯವಾಗಿದೆ, ನೋಡಿದತ್ತ ರುಂಡವೆ ರುಂಡ ...
ನೆಣ- ನೆತ್ತರಗಳ ಹೊನಲಲಿ ಬಿದ್ದಿವೆ ಬಣಬೆಗೊಂಡು ವೀರರ ಮುಂಡ !
ಗಾಯತಾಗಿ ಹೊರಳಾಡುವ ಬಂಟರ ನೋವು ನರಳಿಕೆಗೆ ಇಲ್ಲ ಮಿತಿ.—
ಸಾಯುವವರ ಒಣ ಬಾಯ್ಗಳ ನೀರಿಂ ತೋಯಿಸಲಿಕೆ ಯಾರಿಲ್ಲ ಗತಿ !
ನಾಯಿ-ನರಿಗಳಿಗೆ ಹಾಯೆನಿಪೌತಣ, ಕಾಗೆ ಹದ್ದು ಹೆಣ ಹರಿಯುತಿವೆ ....
ಮಾಯೆ ಮರುಳು-ಶಾಕಿನಿ-ಡಾಕಿನಿಗಳು ನೆಣ–ನೆತ್ತರಗಳ ಸುರಿಯುತಿವೆ !
ಎಂಥ ಯುದ್ಧವಿದು ಎಂಥ ಯುದ್ಧವೋ, ಅಂತ-ಆದಿಯಿಲ್ಲದ ಮರಣ....
ಸಂಥಕಾರ ಮಗಧೇಶನಾದನೋ ವಿಜಯದೇವಿಗೊಂಬಾಭರಣ !
ಇರುಳು ಪ್ರಹರ ಕಳೆದಿರುವುದು, ಗೆಲವಿನ ದೊರೆಯು ಮಂತ್ರಿಯೊಂದಿಗೆ ಬೆರೆತು—
ತಿರುಗುತಿರುವನಿದೊ, ಯುದ್ಧಭೂಮಿಯನು ನಿರುಕಿಸುತ್ತಲಿಹನೇಕಿನಿತು ?

**ರಾಧಾಗುಪ್ತ**

ಮಗಧ ಸಾಮ್ರಾಜ್ಯದಿ ಕಲಿಂಗವೂ ಬೆರೆಯಿತು....
ಮಗಧೇಶನಿಂದು ಜಗದೀಶನಾದಂತಾಯ್ತು!
ದೊರೆಗಳಿಗೆ ಇನ್ನು ಎದುರೆಂಬುದೇ ಇರದು....
ಅರಿಬಲಾಂತಕರೆಂಬುದೇ ತಮ್ಮ ಬಿರುದು !

( ನರಳಾಟ-ಒರಲಾಟಗಳ ನಡುವೆ ಒಂದು ಧ್ವನಿಯು ಕೇಳುವುದು. )

**ಒಂದುಧ್ವನಿ**

" ಅಯ್ಯೊ, ನಾ ಸಾಯುತಿಹೆ ... ನೀರು.........ನೀರು....
ನೀರ-ಹನಿಯೆರೆಯ ಇಲ್ಲವೆ ಯಾರುಯಾರೂ ?
ಗೆಲವಾಯ್ತು ದೊರೆಗೆ, .. ನನಗಿಲ್ಲಿ ಸಾವು....
ಅಯ್ಯೊ, ಅಕಟಾ ತಾಳಲಾರೆನೀ ನೋವು !"

**ಅಶೋಕ**

( ಕರುಣಾಧ್ವನಿಯಲ್ಲಿ )

ನಮ್ಮ ಸೈನಿಕನೇನೊ ಗಾಯಗೊಂಡವನು—
ಬಾಯಾರಿ ನೀರೆಂದು ಕೂಗುತಿಹನು !
ಎನಿತು ಜನ ಹೀಗೆ ಬಿದ್ದೊರಲುತಿಹರೊ....
ನನ್ನ ಗೆಲವನ್ನಿಂತು ಶಪಿಸುತಿಹರೊ !
ನನಗಾಯ್ತು ಗೆಲವಿವರ ಸಾವು-ನೋವಿನಲಿ,
ಹನಿನೀರನೆರೆಯದೇ ಅಲೆಯುತಿಹೆನಿಲ್ಲಿ !

( ಮತ್ತೆ ನರಳಾಟ_ಹೊರಳಾಟದ ನಡುವೆ ಇನ್ನೊಂದು ಧ್ವನಿ ಏಳುವುದು. )

**ಇನ್ನೊಂದು ಧ್ವನಿ**

" ಅಕ್ಕಟಾ, ಕಂಗಳಲಿ ನೆಟ್ಟಿಹವು ಬಾಣ !
ಸಹಿಸಲಾಗದ ನೋವು,.... ಬೇಗ ಬಾ ಮರಣ !
ಅಯ್ಯೊ ನಲ್ಲೆಯೆ.... ನಿನ್ನ ಕಾಂಬೆನೇ ನಾನು ?....
ಕಳೆದುಕೊಂಡಿಹೆನೆರಡು ಕಂಗಳನ್ನು !
'ಹಾಳು ಯುದ್ಧ, ಹಾಳು ಯುದ್ಧ ಬೇಡ' ಎಂದೆ ಯುದ್ಧ
ಕೇಳದೆಯೇ ನಿನ್ನ ನುಡಿಯ ಬಂದೆ ನಾನು ಮೊದ್ದ !
ಅಕಟಕಟಾ....ತಾಳಲಾರೆ....ತಾಳಲಾರೆ ಸಂಕಟ—
ಬೇಗನೆ ಬಾ, ಬೇಗನೆ ಬಾ, ಜೀವಕೊಳ್ಳ ಯಮಭಟ !"

**ಅಶೋಕ**

ಎನಿತು ಸಂಕಟಗೊಳುವನೀ ನಮ್ಮ ತರುಣ !
ನನ್ನ ಗೆಲವಿದು ಇವಗೆ ಕೊಡಬಹುದೆ ಕಣ್ಣ ?
ಇವನ ನಲ್ಲೆಗೆ ಇನ್ನದೆನಿತು ಸಂತಾಪ....
ಅವಳೆನಗೆ ಕೊಡದಿರುವಳೇ ನಿತ್ಯ ಶಾಪ ?

**ರಾಧಾಗುಪ್ತ**

ಬೆದರಿದಿರೆ ತಾವು ಭಾರತಸಾರ್ವಭೌಮ ?
ಇದುವೆ ಸರಿ ಇಹುದಲೇ ಸಮರಪರಿಣಾಮ ?

**ಅಶೋಕ**

( ಪಿಸುಗುಡುವ ಧ್ವನಿಯಲ್ಲಿ )

ಸಮರ ಪರಿಣಾಮ.........ಸಮರ ಪರಿಣಾಮ .......

( ನರಳಾಟ_ಒರಲಾಟಗಳ ನಡುವೆ ಮತ್ತೊಂದು ಗೋಳು ಕೇಳುವುದು. )

**ಮತ್ತೊಂದು ಧ್ವನಿ**

" ಮಗಳ ಮದುವೆಯು ಮುಗಿದ ದಿನವೆ ಯುದ್ಧಕೆ ಬಂದೆ,
ಅಳಿಯನನು ಜೊತೆಗೆ ಕರೆತಂದು....ನಾನೇ ಕೊಂದೆ !
ಅಕಟಾ.........ನಾನಿಲ್ಲಿ ಸಾಯುತಿಹೆನು — ಇನ್ನಲ್ಲಿ

ಮಗಳ ಗತಿ ಏನು ಏನು ?

ಹಾಳಾಯ್ತು ನನ್ನ ಬಾಳು— ದಿಟದಿಟವು
ಕಾಳಿಗವು ಜಗದ ಗೋಳು !
ಮಗಳೆ, ಮಗಳೆ, ಮ–ಗ—ಳೇ " "

( ಕೊನೆಯ ಬಿಕ್ಕು ಬಿಕ್ಕಿ ಪ್ರಾಣಬಿಡುವನು. )

**ಅಶೋಕ**

ಮಗಳ ಬಾಳಿನ ಗೋಳ ನೆನೆಯುತ
ಜಗವನಗಲಿದನೀತ......
ಮಗಧದರಸನಿಗಾಗಿಯಲ್ಲವೆ
ತನ್ನದೆಲ್ಲವ ಸೋತ!
ಏನ ಮಾಡಲು ಬಲ್ಲೆ ನಾನಿವ
ಗೇನ ಮಾಡಲು ಬಲ್ಲೆನೋ ...
ಆ ನವೋಢೆಯ ವ್ಯಥೆಯ ತವಿಸಲು
ಕಾಣೆನೊಂದೂ ಬಗೆಯನೋ!

**ರಾಧಾಗುಪ್ತ**

ಇಲ್ಲಿ ಅಲೆವುದು ಬೇಡ, ಅಲ್ಲಿ ಆ ಕಡೆಗೆ
ಖುಲ್ಲ ವೈರಿಗಳು ಬಿದ್ದೊರಲುತಿರುವೆಡೆಗೆ—
ಅಡಿಯಿಡಿರಿ, ನಾವೀಗ ಹೋಗೋಣ ಮುಂದೆ—
ಕೆಡುಕರಾ ಸೋಲ ನೋಡೋಣ ಕಣ್ಣಿಂದೆ!

**ಅಶೋಕ**

ಸಾವು-ನೋವುಗಳ ಸಂಕಟ ಒಂದೆ ಬಗೆಯುದಲೆ?
ಇಲ್ಲೇನು ಅಲ್ಲೇನು, ಎಲ್ಲರೂ ಮನುಜರಲೆ?
ಸೋಲಿನಲ್ಲಿಯು ಸಾವು-ನೋವು....
ಗೆಲವಿನಲ್ಲಿಯು ಸಾವು-ನೋವು!
ನಮ್ಮ ಭಟರಂತೆಯೇ ಅವರಿಗೂ ಸಾವು....
ನಮ್ಮ ಭಟರಂತೆಯೇ ಅವರಿಗೂ ನೋವು!

**ರಾಧಾಗುಪ್ತ**

ದೊರೆಯು ಕೆಟ್ಟಿದೆಯು ಇಂದೇಕೆ ಮೌನ?
ಸರಿಯಾದುದಲ್ಲ ವಿಜಯಕ್ಕೆ ಈ ಶಕುನ!
ಬನ್ನಿ-ಬನ್ನಿರಿ ಮುಂದೆ ನಾವು ಸಾಗೋಣ....
ಹಗೆಯ ಪತನವ ಕಂಡು ತುಷ್ಟರಾಗೋಣ!

**ಅಶೋಕ**

( ತನ್ನಲ್ಲಿ ತಾನೆ )

ಹಗೆಯ ಪತನ........ಹಗೆಯ ಪತನ.... ...

( ಎಂದು ನುಡಿಯುತ್ತಲೆ ಮುಂದುವರಿಯುವನು. ಗದ್ದಲ-ಗಲಾಟೆ-
ಗುಲ್ಲು-ಕೂಗುಗಳ ನಡುವೆ ಒಂದು ಧ್ವನಿ )

**ಒಂದುಧ್ವನಿ**

"ಇರುವನೊಬ್ಬನೊಬ್ಬನೆ ಮಗ, ಮರಣಲೋಕ ಸಾರ್ದನೋ....
ಇರವೇತಕೆ ಇನ್ನು ನನಗೆ? ನಾನು ಒಡನೆ ನಡೆವೆನೋ!
ಸಾಯುವ ಮೊದಲೊಮ್ಮೆ ನಿನ್ನ ಮೊಗವ ಕಾಣಬೆನೆಂದೇ
ಬಂದೆನಿಲ್ಲಿ, ಎಲ್ಲಿ ಇರುವೆ? ಎಲ್ಲಡಗಿಹೆ ತಂದೇ!

ಹಾಳಾಗಲಿ ಮಗಧರಾಜ್ಯ, ಹಾಳಾಗಲಿ ಆ ದೊರೆ –
ನನ್ನಂತೆಯೆ ಮಗನನಗಲಿ ಮುಗಿಲಿಗಿಡಲಿ ಅವ ಮೊರೆ!"

**ಅಶೋಕ**

( ಕರಗಿದೆದೆಯವನಾಗಿ )

ಕೇಳಲಾರೆ ಕೇಳಲಾರೆ, ಕರುಳಿನ ಸಂತಾಪ–
ತಾಳಲಾರೆ ತಾಳಲಾರೆ, ನೊಂದ ಎದೆಯ ಶಾಪ!

**ಇನ್ನೊಂದುಧ್ವನಿ**

" ಮಗಧರಾಜ್ಯ ಛತ್ರವನ್ನು ನನ್ನೊಡಲುರಿ ಉರಿಯಲಿ,
ಮಗಧದ ಸಾಮ್ರಾಜ್ಯಧ್ವಜವು ಮುರಿದು ಮಣ್ಣುಗೂಡಲಿ!

**ಮತ್ತೊಂದು ಧ್ವನಿ**

" ಕಲ್ಲ ಬೊಂಬೆಯೊ ಏನೊ ಮಗಧದರಸು....
ಇಲ್ಲವಿಲ್ಲವೆ ಅವಗೆ ಮಾನವರ ಮನಸು!
ಅಯ್ಯೊ!
ಬೆಲ್ಲದಚ್ಚಿನ ಪರಿಯ ನಮ್ಮ ನಾಡರಸು –
ಎಲ್ಲಿಹನೊ ಎಲ್ಲಿಹನೊ, ನಮ್ಮ ಸವಿಗನಸು!"

**ಮಗುದೊಂದು ಧ್ವನಿ**

" ಮಗಧರಾಜನು ಮನುಜನಲ್ಲ, ರಾಕ್ಷಸಪುತ್ರ—
ಅವನ ನಾಶಕೆ ದೇವ ತಳೆವನವತಾರ!
ಆ ದೊರೆಯ ವಂಶವನೆ ತೊಡೆದು ಬಿಡಲಿ....
ಯುದ್ಧವೆನುವಾ ಹೆಸರು ಕೇಳದಿರಲಿ!"

**ಅಶೋಕ**

ಅಕಟ ತಡೆಯಲಾರೆ ನಾನು ಅಭಿಶಾಪದ ಸುರಿಮಳೆ....
ಬೆರಳಿಂಸುತೆ ಮುಚ್ಚಿಕೊಳುವೆ ಕಿವಿಯೆರಡನು ಈಗಳೆ!
ದೇವಾ ದೇವಾ!
ಕಿವಿಗಳನ್ನು ಮುಚ್ಚಿದರೂ ಕೇಳಿಸುತಿವೆ ಶಾಪಸ್ವರ,
ಕಣ್ಣುಮುಚ್ಚಿ ನಿಂತಿದ್ದರು ಎಂಥ ದೃಶ್ಯ, ಬಲು ಭೀಕರ!
ಮಂತ್ರಿಗಳೇ!
ನೋಡಿ ಸಹಿಸಲಾರೆ ನಾನು ಈ ಭೀಕರ ರೂಪವ....
ಕೇಳಲಾರೆ ಕೇಳಲಾರೆ, ನೊಂದೆದೆಗಳ ಶಾಪವ!

**ರಾಧಾಗುಪ್ತ**

ಇಲ್ಲಿ ತಿರುಗಾಡುವುದೆ ಬೇಡವೀಗ—
ಅಲ್ಲಿ ನಡೆವುದು ತಮ್ಮ ಬೀಡಿಂಗೆ ಬೇಗ!
ದಯೆಮಾಡಿ.ದಯೆಮಾಡಿ,
ಅಡಿಗಳನು ಮುಂದಕಿಡಿ!

( ಹೋಗುವರು. )

ಜಯ

# ೪

( ಕರುಣೆ-ಕುತೂಹಲಗಳನ್ನುಂಟುಮಾಡುವ ಮೆಲುನಾದ )

## ಮೇಳನಾಯಕ

( ಒಂದೇ ಏಕತಾರಿಯ ನಾದದೊಂದಿಗೆ )

ಏನಿದಚ್ಚರಿ, ಎನಿತಿದಚ್ಚರಿ, ಮೌನವಾತವು ಸುಳಿಯಿತೊ,
ಸೇನೆಯಿಳಿದಾ ಪಾಳ್ಯ-ಪಾಳ್ಯದಿ ಮೌನವೇ ಬಂದಿಳಿಯಿತೊ!
ವಿಜಯ ಪಡೆದಾ ವೀರಸೈನ್ಯದಿ ವಿಜಯದಾ ಗುರುತಿಲ್ಲ....
ಗಜರುದುಂದುಭಿ-ಭೇರಿ-ಕಹಳೆಯ ಗಜಬಜೆಗೆ ಇರುಹಿಲ್ಲ.
ಮಗಧಭೂಪತಿ ಬಗಿದ ನೊಗದಲಿ ಕುಳಿತಿಹನು ಗೂಡಾರದೆ...
ಬಗೆಯ ಕಳವಳ ಕಾಡುತಿದೆ ಉಸಿರೊಗೆವನೊಂದೂ ತೋರದೆ!
ವೃದ್ಧಮಂತ್ರಿಯ ರಾಜಕಾರ್ಯದ ಬುದ್ಧಿಯದು ಬರಡಾಯಿತೋ
ರಾಜನೀತಿಯ ತೇಜವೆಲ್ಲವು ಮಾಜಿ ಮಸು-ಮಸುಕಾಯಿತೋ!
ಕಂಬನಿಯ ಕನಸಿನಲು ಕಾಣದ ದೊರೆಯ ಕಣ್ಣಲಿ ಕಂಬನಿ....
ಇಂಬುಗೊಂಡಿದೆ ಹೃದಯ-ಮನಗಳಲೀ ವಿಚಾರತರಂಗಿಣಿ:

( ತಂತುವಾದ್ಯಗಳ ಕರುಣಾಸ್ವರಗಳ ನಾದ )

### ಅಶೋಕ

ಸಾಮ್ರಾಜ್ಯ, ಸಾಮ್ರಾಜ್ಯ....ಸಾಮ್ರಾಜ್ಯ ಕಾಮದಲಿ.
ಏಸು ಜನರಸುಗಳನು ಮಾಡಿದೆನೊ ಹೋಳಿ!
ಒಡಹುಟ್ಟಿದವನೆಂಬ ಎಚ್ಚರವನೂ ತೋರದು,
ಬಡ ಸುಸೀಮನ ಬಲಿಯಕೊಂಡೆ ಸುರಗಿಯಲಿರಿದು.
ಅಂಗವನು ಮುತ್ತಿದೆನು, ವಂಗವನು ಕುತ್ತಿದೆನು,
ಪಾಂಚಾಲವನು ಸುಲಿದೆ, ಗಾಂಧಾರವನು ಗೆಲಿದೆ,
ಕರ್ನಾಟರನು ಕೋಳುಹಿಡಿದೆ, ಆಂಧ್ರರ ಜಡಿದೆ,
ಕಾನ್ಯಕುಬ್ಜರ ಸತ್ತ್ವದೀಪಿಕೆಯನಾರಿಸಿದೆ,
ಕಾಶ್ಮೀರಶೂರಕುಲಕಾದೆ ಮಾರಣಮಲ್ಲ!
ಅಕಟ, ಸಾವುಗಳೆನಿತು! ಸಾವೆ ಸಾವು!
ಏಸು ಜನರೆದೆಗಾಯ್ತು ನನ್ನಿಂದ ನೋವು!

ನನಗೆ ಸಾವಿಲ್ಲವೇ........ಸಾವು ನನಗಿಲ್ಲವೇ ?
ಸಾವು ನನಗೂ ಇಹುದು, ಸಾವು ನನಗೂ ಇಹುದು!
ಹುಟ್ಟಿದವನೊಂದುದಿನ ಸಾಯಲೇ ಬೇಕು!
ಸಮ್ರಾಟನೂ ಕೂಡ ಸಾಯಲೇ ಬೇಕು!
ಸತ್ತ ಮೇಲೇನಿಹುದು ?....ಸಾಮ್ರಾಜ್ಯವೆಲ್ಲಿ ?....
ಮೃತ್ಯುದೇವನ ಮುಂದೆ ನನಗೆ ಮಾತೆಲ್ಲಿ ?
ಕುರುಡ ನಿಜ, ಮಗಧೇಶ ಕಣ್ಣಿರುವ ಕುರುಡ!
ಛತ್ರ ಚಾಮರ ಸಾವ ತಡೆಯ ಬಹುದೆ ?
ಕೋಟೆ-ಕೊತ್ತಳ ತಡೆದು ಹಿಡಿಯಬಹುದೆ ?
ಅಸ್ತ್ರ-ಶಸ್ತ್ರಗಳು ಸಾವಿಂದೆ ಕಾಯುವುವೆ ?
ರಾಜನೀತಿಯು ಮರಣವಿಜಯವರಿತಿಹುದೆ ?
ಅಯ್ಯೋ!
ಸಾಯುವಾ ಮನುಜನವ ಬದುಕಿ ಮಾಡುವನೇನು ?
ಮಾನವನ ಬದುಕಿಗೊಂದರ್ಥವಿದೆಯೇನು ?

(ದೂರದಿಂದ ನ್ಯಗ್ರೋಧನ ಹಾಡು ಕೇಳಿಸುವುದು.)

ಕರುಣೆ ಪ್ರೀತಿಗಳನು ನರರು ಸ್ವಾಗತಿಸಲು
ನರಲೋಕವಪ್ಪುದು ಸುರಲೋಕ!
ಅರಸರೆಲ್ಲರು ವೈರ ತೊರೆದಹಿಂಸೆಗೆ ಮನ-
ವೆರಸಿದರೀ ಧರೆ ಧರ್ಮನಾಕ!
ಕಾಯುವ ಮಾನವನವನೇ ದೇವ—
ಈಯುವ ಮಾನವನವನೇ ದೇವ!

### ಅಶೋಕ

ನ್ಯಗ್ರೋಧನ ಹಾಡಿದು, ನಿಜ, ನ್ಯಗ್ರೋಧನ ಹಾಡು!
ಇನಿತೇತಕೆ ಕೆರಳುತಲಿದೆ ನನ್ನ ಎದೆಯ ಗೂಡು ?
ಹಿಂದೆ ಏಸೋ ಬಾರಿ ಇದನು ನಾನು ಕೇಳಿ ಇಹೆನು...
ಇಂದು ಬೇರೆ ಭಾವಗಳನೆ, ತೋರುತಿಹುದಿದೇನು ?
ಒಂದೊಂದೂ ಮಾತು ಇರಿಯುತಿಹುದು ನನ್ನ ಕರುಳನು....
ಸಿಡಿಲಿನಂತೆ ಹೊಡೆಯುತಿಹುದು ನನ್ನ ಮನದ ಶಿಲೆಯನು!
ನ್ಯಗ್ರೋಧನ ಮೊಗವನೀಗ ನಾನು ನೋಡಲಾರೆ—
ನನ್ನ ಧೈರ್ಯ-ಶೌರ್ಯಂಗಳು ಹೋಗಿಹವೈ ಸೋರೆ!

( ಹತ್ತಿರದಲ್ಲಿಯೆ ನ್ಯಗ್ರೋಧನ ಹಾಡು )

ಕಾಯುವ ಮಾನವನವನೇ ದೇವ....
ಈಯುವ ಮಾನವನವನೇ ದೇವ!
ಆಯಾಸಗೊಳುತಿಪ ಹೀನ-ದೀನರ ಕಂಡು
ನೋಯುವ ಹೃದಯದವನೆ ದೇವದೇವ!

ನ್ಯಗ್ರೋಧ

( ಅಶೋಕನ ಬಳಿ ಬಂದು )

ವಂದನೆ ವಂದನೆಯು ನಿಮಗೆ
ವಿಜಯಶಾಲಿ ಮಗಧೇಂದ್ರಾ!

ಅಶೋಕ

ನಾ ವಿಜಯಶಾಲಿಯೇ? ವಂದನೆಯೆ ನನಗೆ....
ಭೂವಿನಾಶಕ ಘೋರಪತಿತ ಪಾತಕಿಗೆ?
ನನ್ನ ಬದುಕಿಗೆ ಒಂದು ಬೆಲೆಯು ಇಹುದೆ?
ಇನ್ನು ಇಳೆಯಲಿ ನನಗೆ ನೆಲೆಯು ಇಹುದೆ?

ನ್ಯಗ್ರೋಧ

( ಆಶ್ಚರ್ಯ ಭಾವದಲ್ಲಿ )

ನಾನೇನ ಕೇಳುತಿಹೆ? ನಾನೇನ ನೋಡುತಿಹೆ?
ಮಗಧ ಸಮ್ರಾಟರಲ್ಲವೆ ತಾವು? ಅಚ್ಚರಿಯು!

ಅಶೋಕ

ನಾನು ಸಾಮ್ರಾಟನೇ?–ಕೊಲೆಗಡುಕ, ಕೇಡಿಗನು!
ಇನ್ನು ಧಾರಿಣಿ ನನಗೆ ಈಯುಳಿದೆಯನ್ನು!
ಏಸು ಜನರನು ಕೊಂದೆ, ಏಸು ಜೀವನ ತಿಂದೆ ....
ದೇಶದೇಶದ ಸಿರಿಯನೇಸು ನಾಶಿಸಿದೆ?

ನ್ಯಗ್ರೋಧ

ನಾನೇತಕೆ ಬಂದೆನಿಲ್ಲಿ, ಏನಿದು ಪರಿವರ್ತನ ....
ನುಡಿಯುತಿರುವಿರೇನು ದೊರೇ, ಅಣಕಿಸಿ ನನ್ನನ್ನ?

ಅಶೋಕ

ಎಲ್ಲರಣಕಕೆ ಪಾತ್ರ ನ್ಯಗ್ರೋಧ ನಾನು,
ಇಲ್ಲ, ಅಣಕಿಸಿ ನುಡಿಯುತಿಲ್ಲವೇನೇನು!

ನ್ಯಗ್ರೋಧ

ಆನಂದ, ಆನಂದ ನಿಮ್ಮ ಈ ಮಾತು;
ಭೂವನದ ಶುಭಕಾಲ ಬಳಿಯೊಳೇ ಬಂತು!

ಅಶೋಕ

ನನಗೆ ಎಡೆಯುಂಟೆ ಭೂವನದಿ ನ್ಯಗ್ರೋಧ?

ನ್ಯಗ್ರೋಧ

ನಿಮ್ಮಿಂದಲೇ ಧರಿಗೆ ಬರಲಿದೆ ಪ್ರಮೋದ!
ಉಪಗುಪ್ತ ಗುರುವಿನಪ್ಪಣೆಯಾಂತು ಬಂದೆ—
ನಿಮಗಾಗಿ ಅವರ ಆದೇಶಧನ ತಂದೆ!

ಅಶೋಕ

ಏನವರ ಆದೇಶ ನನ್ನಂಥ ಪಾತಕಿಗೆ—
ಮಾನವರ ನೆತ್ತರದಿ ಮಿಂದ ಘಾತಕಿಗೆ?

ನ್ಯಗ್ರೋಧ

ಪಾತಕಿ ನೀವಲ್ಲ, ಪಶ್ಚಾತ್ತಾಪದಿ ಬೆಂದು
ಪೂತರಾಗಿಹಿರೀಗ ದೊರೆಯೆ!
ಮಾತನಿದನು ಮೊದಲೇ ಕಂಡು ಗುರುದೇವ
ದೂತನಟ್ಟಿಹರೆನ್ನ, ಸರಿಯೆ!
ಘನಮಹಿಮರವರು ಗುರು ಉಪಗುಪ್ತರು....
ಮನುಜಕುಲ ಮಂಗಲದ ವ್ರತದೀಪ್ತರು!
ನಿಮ್ಮ ಜೀವನ ಬೆಲೆಯನರಿತ ಅವರು....
ದಿವ್ಯಸಂದೇಶವನು ಕಳುಹಿರುವರು!

ಅಶೋಕ

ಏನಿಹುದು.......ಏನಿದೆ ಮಹಾತ್ಮರಾ ಸಂದೇಶ?

ನ್ಯಗ್ರೋಧ

ನಾನೊರೆವೆನದನೀಗ ಚಿತ್ತೈಸಿ ಮಗಧೇಶ!
"ನಿನ್ನಿಂದಲೆ ಯುದ್ಧ-ಹಿಂಸೆಗಂತವಾಗಬೇಕು!
ನಿನ್ನಿಂದಲೆ ಮಾನವತೆಯು ಗುರಿಯು ಕಾಣಬೇಕು!
ನಿನ್ನಿಂದಲೆ ಸಕಲಜನವು ಶಾಂತಿಯೊಂದಬೇಕು!
ಜ್ಞಾನ-ದಾನ-ಅಭಯಂಗಳ ಧ್ವಜವು ಮೆರೆಯಬೇಕು!"

ಅಶೋಕ

ಧನ್ಯನಾದೆನು ನಾನು, ಧನ್ಯನಾದೆನು ನಾನು,
ಮಾನ್ಯರಾಜ್ಞೆಯನು ಶಿರದಲಿ ಹೊತ್ತು ನಡೆಯುವೆನು!

ನ್ಯಗ್ರೋಧ

ಇದೊ, ನಿಮಗೆ ಗುರುಗಳಿತ್ತಿಹರು, ಜೀವನಸೂತ್ರ,
ನಿಮ್ಮ ಧರ್ಮಧ್ವಜದ ಸಂಕೇತಯಂತ್ರ!

ಜಯ

ಜಗದ ಶೋಕವನೆಲ್ಲ ತೆಗೆವ ಬಿರುದಿನ ಚಕ್ರ !—
ಇದರಿಂದ ಸೀಪಹಿರಿ ಭೂಸ್ವರ್ಗಶಕ್ರ !

**ಅಶೋಕ**

ನಾನಿನ್ನು ಜೀವಿಸುವೆ, ನಾನಿನ್ನು ಜೀವಿಸುವೆ,
ಮಾನವರ ಕಲ್ಯಾಣದಾ ಗುರಿಯ ಸಾಧಿಸುವೆ !

**ನ್ಯಗ್ರೋಧ**

ಜಯವಹುದು ಜಯವಹುದು ಅವನಿಯೊಡೆಯ....

ನಿಮ್ಮ ಕಾರ್ಯದಲಿನ್ನು ಧರ್ಮೋದಯ !
ಜಯವಹುದು, ಜಯವಹುದು, ದೇವಪ್ರಿಯ !

**ನೇಳನಾಯಕ**

ಅಶೋಕಚಕ್ರವು ಅಶೋಕಚಕ್ರವು
ಶಾಂತಿಸಾಧನದ ಸನ್ಮಿತ್ರ....
ವಿಶಾಲಭಾವದ ಪುಣ್ಯಾಕಾಶದಿ
ಮೂಡಿ ಮಿರುಗುತಿಹ ನಕ್ಷತ್ರ !

( ಮಂಗಲವಾದ್ಯಗಳ ಮೊಳಗಿನೊಂದಿಗೆ ಕೊನೆ. )

---

# ಮಹಾತ್ಮಾ ಗಾಂಧೀ

( ಮಕ್ಕಳಿಗಾಗಿ ಪದ್ಯ )

**ಶ್ರೀ. ಕೆ. ವೆಂಕಟರಾವ್, ಉಡುಪಿ ( ದ. ಕ. )**

ಜನತಾಸೇವೆಯ ಮಾಡುತಲಿದ್ದರು
ಜನರೇ ತನ್ನಯ ಬಾಂಧವರೆಂದು
ಜನತೆಯ ನೈತಿಕ ಮಟ್ಟವನೇರಿಸಿ
ಜನತಾಪ್ರಗತಿಯ ಮಾಡಿದರವರು.

ಜನರಿಗಾಗಿಯೇ ಹುಟ್ಟಿದರವರು,
ಜನರಿಗಾಗಿಯೇ ತೀರಿದರವರು.

ಶಾಂತಿಯ ಸಾರುತ
ಸತ್ಯವ ಹೇಳುತ
'ಚರಖ'ವ ತಿರುಗಿಸಿ
ಗೀತೆಯ ಬೋಧಿಸಿ

ಹಿಂದೂದೇಶದ ಪಿತನೆನ್ನಿಸಿದರು,
ಲೋಕಕೆ ಗಾಂಧೀಗುರುವೆನ್ನಿಸಿದರು.

'ಜನಸೇವೆಯದು
ಈಶನ ಸೇವೆ'

ಎನ್ನುವ ತತ್ತ್ವವ ಬೋಧಿಸಿದರ್
ಪರಮಾತ್ಮನಲ್ಯೈಕ್ಯವೆ ಆದರ್. ೧

ಸರ್ವೋದಯವನು ಸಾಧಿಸಲಾಗಿಸಿ
ಸರ್ವರಿಗಾಗಿಯೆ ತೀರಿದರವರು;
ಸರ್ವರಉತ್ತಮ ಗುಣವನು ಕಾಣುತ
ಸರ್ವ ಪ್ರಿಯರೆನಿಸಿದರವರಂದು.

ತಮ್ಮಯ ಆಯುವ ದೇಶಕಾಗಿಯೇ
ಅರ್ಪಿತವಾಗಿರಿಸಿದರವರಂದು.

ಎಲ್ಲಾ ಮತಗಳ-
ನೊಂದೇ ಎಣಿಸುತ
ಎಲ್ಲಾ ದೇವರ-
ನೊಂದೇ ಆಗಿಸಿ

ಎಲ್ಲರಿಗಾಗಿಯೆ ದುಡಿದರು ಅಲ್ಲದೆ,
ಲೋಕವನೆಚ್ಚರಗೊಳಿಸಿದರಲ್ಲದೆ,

ದೇಶವನೆಲ್ಲವ
ತಿರುಗುತಲವರು,

ತಮ್ಮಯ ತತ್ತ್ವವ ಪೇಳಿದರು;
ಜನತೆಯನೆಚ್ಚರುಗೊಳಿಸಿದರು. ೨

---

# ನೀನು ನಮಗೆ ಏನಾಗಬೇಕು?

(ವೈಜ್ಞಾನಿಕ ಪ್ರಬಂಧ)*

ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ. ಹೈದರಾಬಾದ್

卐

**ನಮ್ಮ ಸಂಪ್ರದಾಯವು ನಮ್ಮ ಬಾಲಕರಿಗೆಲ್ಲ ಸೂರ್ಯನನ್ನು ಒಂದು ದೇವತಾವ್ಯಕ್ತಿಯನ್ನಾಗಿ ಪರಿಚಯಮಾಡಿಕೊಟ್ಟಿರುವುದು. ಸಾಂಪ್ರದಾಯಿಕ ಮನೋಭಾವದಲ್ಲಿ ಬೆಳೆದ ಎಷ್ಟೋ ಜನ ಹಿರಿಯರೂ ಸೂರ್ಯನನ್ನು ಒಂದು ದೈವತವೆಂದು ಭಾವಿಸಿರುವರು. ವಿಜ್ಞಾನಸಿದ್ಧ ಸೂರ್ಯ, ಅವರ ಭಾವನೆಯ ಮೇಲೆ ಎಂತಹ ಆಘಾತವನ್ನು ಹಾಕುವುದು, ನೋಡಿರಿ!**

卐

"ನೀನು ನಮಗೆ ಏನಾಗಬೇಕು? ಪ್ರತಿ ದಿನ ಬೆಳಗ್ಗೆ ನಾಲ್ಕು ದಿಕ್ಕುಗಳಲ್ಲಿ ನಿನ್ನ ಸಹಸ್ರಾರು ಕಿರಣಗಳನ್ನು ಹರಡಿಸಿಕೊಂಡು ನೀನು ನಮ್ಮ ಹತ್ತಿರ ಬರುವೆ. ಮತ್ತು ಸಂಜೆಯಾಗುತ್ತಲೆ ಕತ್ತಲಿನಲ್ಲಿ ನಿನ್ನ ಮುಖವನ್ನು ಅಡಗಿಸಿಕೊಂಡು ಬಿಡುವೆ. ಹೇಳು; ನಿನ್ನ ಹೆಸರೇನು, ಮತ್ತು ನೀನು ನಮಗೇನಾಗ ಬೇಕು? ನಿನ್ನ ಮುಖವನ್ನು ನೋಡುತ್ತಲೆ ಜಗತ್ತು ನಗಲು ಪ್ರಾರಂಭಿಸುತ್ತದೆ. ಎಂದ ಮೇಲೆ ನಿನ್ನ ಸಂಗಡ ನಮ್ಮ ಜನರ ಸಂಬಂಧ ಯಾವುದು? ಹೆಣ್ಣು, ಗಂಡು, ಪಕ್ಷಿಗಳು, ಪ್ರಾಣಿಗಳು—ಎಲ್ಲವೂ ನಿನ್ನನ್ನು ನೋಡಿದ ಕೂಡಲೆ ಸಂತೋಷಗೊಂಡು, ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನವಾಗಿ ಬಿಡುತ್ತವೆ. ನೀನು ಇಲ್ಲಿಂದ ಮಾಯವಾದ ಕೂಡಲೆ ಜಗತ್ತೇ ಶೂನ್ಯವಾಗಿ ಬಿಡುತ್ತದೆ; ಉದಾಸೀನತೆಯಿಂದ ತುಂಬಿ ತುಂಬಿ ಹೋಗುತ್ತದೆ. ಎಲ್ಲರೂ ತಮ್ಮ ಕಾರ್ಯಕಲಾಪಗಳನ್ನು ಬಿಟ್ಟು ನಿದ್ರೆಯಲ್ಲಿ ಮುಳುಗಿ ಬಿಡುತ್ತಾರೆ. ಬಿಸಿಲಿನಿಂದ ಪ್ರಾಣಹೋದರೂ ನೀನಿಲ್ಲದೆ ಕೆಲಸ ನಡೆಯುವಂತಿಲ್ಲ. ಇದು ಹೀಗೇಕೆ ಎಂಬುದನ್ನು ವಿವರಿಸುವೆಯಾ?"

"ಹಾಗೊ! ಹೇಳುತ್ತೇನೆ ಕೇಳಿ. ನನ್ನ ಹೆಸರು ಸೂರ್ಯ. ಇದಲ್ಲದೆ ನನ್ನನ್ನು ದಿನಕರ, ದಿವಾಕರ, ಪ್ರಭಾಕರ, ರವಿ, ಭಾನು, ಆದಿತ್ಯ ಮುಂತಾದ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಇನ್ನೂ ನನಗೆ ಅನೇಕ ಹೆಸರುಗಳಿವೆ. ಬೇರೆ ಬೇರೆ ಜನಾಂಗದವರು ನನ್ನನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಪುರಾತನ ಕಾಲದಲ್ಲಿ ಜನರು ನನ್ನನ್ನು ದೇವನೆಂದು ತಿಳಿದು ಪೂಜಿಸುತ್ತಿದ್ದರು; ಈಗಲೂ ಭಾರತದಲ್ಲಿ ಸಹಸ್ರಾರು ಜನರು ನನ್ನನ್ನು ಆರಾಧಿಸುತ್ತಾರೆ. ಸಂಸ್ಕೃತ ಭಾಷೆಯಲ್ಲಿ ನನ್ನನ್ನು ಸ್ತುತಿಸುತ್ತಾರೆ; ನನಗೆ ನಮಸ್ಕಾರ ಮಾಡುತ್ತಾರೆ. ಆದರೆ ನಾನು ಯಾರೆಂಬುದು ನನಗೇ ಗೊತ್ತು. ನಾನು ದೇವನಲ್ಲ; ದೇವನೆಂದು ಹೇಳಿಕೊಳ್ಳುವಷ್ಟು ಸಾಮರ್ಥ್ಯವೂ ನನ್ನಲಿಲ್ಲ. ದೇವರು ರಚಿಸಿದ ಈ ಜಗತ್ತನ್ನು ಪಂಡಿತರು 'ಬ್ರಹ್ಮಾಂಡ' ಎಂದು ಕರೆದಿದ್ದಾರೆ ಇಂಥ ಲೆಕ್ಕವಿಲ್ಲದಷ್ಟು ಬ್ರಹ್ಮಾಂಡಗಳು ಇವೆ. ಇವೆಲ್ಲವುಗಳ ಎದುರಿನಲ್ಲಿ ನಾನು ಉಸುಕಿನ ಒಂದ ಕಣಕ್ಕಿಂತಲೂ ಸಣ್ಣವನು. ನನ್ನಂತೆ ಇನ್ನೂ ಸಹಸ್ರಾರು ಸೂರ್ಯರು ಆಕಾಶದಲ್ಲಿ ಹಗಲೂ ಇರುಳೂ ಸುತ್ತಾಡುತ್ತಿದ್ದಾರೆ. ನೀವು ವಾಸಿಸುವ ಜಗತ್ತಿನ ಸುತ್ತಳತೆ ಬಹಳವಾದರೆ ೨೫ ಅಥವಾ ೩೦ ಸಾವಿರ ಪರಿಧಿಯಷ್ಟು ಇರಬೇಕು. ಇಷ್ಟಕ್ಕೆ ನೀವು ಇದನ್ನು ದೊಡ್ಡದೆಂದು ತಿಳಿದುಕೊಂಡಿದ್ದೀರಿ. ನಾನು ಎಷ್ಟು ದೊಡ್ಡವನಿದ್ದೇನೆಂಬ ಕಲ್ಪನೆ ನಿಮಗಿದೆಯೆ? ನನ್ನನ್ನು ಒಡೆದು ನಿಮ್ಮ ಜಗತ್ತಿನಷ್ಟು ೧೩ ಲಕ್ಷ ೨೫ ಸಾವಿರ ಜಗತ್ತುಗಳನ್ನು ಮಾಡಿದರೂ, ನನ್ನ ಸ್ವಲ್ಪ ಭಾಗ ಇನ್ನೂ ಹಾಗೆಯೇ ಉಳಿಯುತ್ತದೆ. ಇಷ್ಟೊಂದು ದೊಡ್ಡವನು ನಾನು. ನನಗಿಂತ ಇನ್ನೂ ಅನೇಕ ದೊಡ್ಡ ಸೂರ್ಯರಿದ್ದಾರೆ. ನಿಮ್ಮ ಜಗತ್ತೂ, ಚಂದ್ರನೂ, ಚಂದ್ರನಷ್ಟೇ ದೊಡ್ಡದಾದ ಅನೇಕ ನಕ್ಷತ್ರಗಳೂ ಇವೆ. ಇವೆಲ್ಲವುಗಳ ಎದುರಿನಲ್ಲಿ ನನ್ನಂಥವನ ಯೋಗ್ಯತೆ ಎಷ್ಟು? ನಿಮ್ಮ ಜಗತ್ತಂತೂ ಎಣಿಕೆಯಲ್ಲಿಯೂ ಬಾರದು.

ಇರಲಿ, ನಾನು ಯಾರೆಂಬುದನ್ನು ಈಗ ನಿಮಗೆ ಹೇಳುತ್ತೇನೆ. ನಿಮ್ಮ ಜಗತ್ತು ನನ್ನ ಶರೀರದ ಒಂದು ಭಾಗ. ಮನುಷ್ಯನು ಸೂಕ್ಷ್ಮದರ್ಶಕಯಂತ್ರವೊಂದನ್ನು ತಯಾರಿಸಿದ್ದಾನೆ. ಈ ಯಂತ್ರದ ಮೂಲಕ ನೋಡಿದಾಗ, ನಕ್ಷತ್ರ-ರಾಶಿಗಳ ಮಧ್ಯದಲ್ಲಿ ಬೆಳ್ಳನ್ನ ಒಂದು ವಸ್ತು ಕಾಣಿಸುತ್ತದೆ. ಇದನ್ನು ಜ್ಯೋತಿಷ್ಕರು ಆಂಗ್ಲಭಾಷೆಯಲ್ಲಿ "ನೆಬುಲಾ" ಎಂದು ಕರೆಯುತ್ತಾರೆ. ನೀವು ಬೇಕಾದರೆ ಇದನ್ನು "ಬಾಷ್ಪಪುಂಜ" ಎಂದು ಕರೆಯಬಹುದು. 'ನೆಬುಲಾ' ಸಣ್ಣ ಸಣ್ಣ ಭಾಗಗಳಿಂದ ಕೂಡಿದ ಒಂದು ಘನವಸ್ತು. ಸಂಸ್ಕೃತಭಾಷೆಯಲ್ಲಿ ಇದನ್ನು "ಜಡಪರಮಾಣು" ಎಂದು ಕರೆದಿದ್ದಾರೆ. ಜೆಟ್ಟಿನ

---

* ಶ್ರೀ. ಪಾರ್ವತೀನಂದನ ಎಂಬವರು ಹಿಂದಿಯಲ್ಲಿ ಬರೆದ 'ತುಮ್ ಹಮಾರೇ ಕೌನ್ ಹೋ?' ಎಂಬ ಲೇಖನದ ಅನುವಾದ. —ಲೇ.

ಉಷ್ಣತೆಯಿಂದ ಇದು ಕರಗಿ ಆವಿಯ ರೂಪದಲ್ಲಿ ಪರಿವರ್ತನೆಗೊಂಡಿದೆ. ಮೊದಮೊದಲು ಎಂದರೆ—ನೂರಾರು ಕೋಟಿ ವರ್ಷಗಳ ಹಿಂದೆ, ನಾನಾದರೂ ಇದೇ ಸ್ಥಿತಿಯಲ್ಲಿದ್ದೆ. ನಾನೊಂದು ದೊಡ್ಡ 'ನೆಬುಲಾ'ದ ಗುಂಪಾಗಿದ್ದೆ. ಆಗ ನಿಮ್ಮ ಜಗತ್ತಾಗಲಿ, ಚಂದ್ರನಾಗಲಿ ಹುಟ್ಟಿರಲಿಲ್ಲ.

ಉಷ್ಣತೆ ಕ್ರಮೇಣ ಕಡಮೆಯಾಗಿ ಆವಿ ಗಟ್ಟಿಯಾಗುತ್ತದೆ. ಶಾಖದ ಪ್ರಭಾವದಿಂದ ಒಮ್ಮೊಮ್ಮೆ ನನ್ನಿಂದ ಅನೇಕ ತುಣುಕುಗಳು ಒಡೆದು ಬೇರೆಯಾಗಿ, ಬಹಳ ದೂರ ಬಿದ್ದುಹೋಗಿವೆ. ಅವುಗಳಲ್ಲಿಯು ಉಷ್ಣಾಂಶ ಕಡಮೆಯಾಗಿ ಮೇಲಿನ ಭಾಗ ಗಟ್ಟಿಯಾಗಿದೆ. ಆದರೆ ಅವುಗಳಲ್ಲಿರುವ ಎಲ್ಲ ಶಾಖ ಇನ್ನೂ ಸಂಪೂರ್ಣ ಕಡಮೆಯಾಗಿಲ್ಲ. ನಾನು ಯಾವಾಗಲೂ ಪಶ್ಚಿಮದಿಂದ ಪೂರ್ವದ ಕಡೆಗೆ ತಿರುಗಾಡುತ್ತೇನೆ. ಈ ತುಣುಕುಗಳೂ ನನ್ನ ಮಾರ್ಗವನ್ನೇ ಅನುಸರಿಸಿವೆ. ಅವು ನನ್ನನ್ನು ಬಿಟ್ಟು ಅಗಲಲಾರವು. ಬಿಟ್ಟರೆ ಅವುಗಳ ಕೆಲಸ ನಡೆಯುತ್ತದೆಯೆ? ನನಗಾದರೂ ಅವುಗಳನ್ನು ಬಿಟ್ಟಿರಲು ಮನಸ್ಸಿಲ್ಲ. ನಾನು ಅವುಗಳನ್ನು ನನ್ನ ಕಡೆಗೆ ಆಕರ್ಷಿಸುತ್ತೇನೆ. ನಿಮ್ಮ ಜಗತ್ತಿನಲ್ಲಾಗುವ ಜ್ವಾಲಾಮುಖಿ, ಭೂಕಂಪ, ಪರ್ವತಗಳಿಂದ ಅಗ್ನಿ ಹೊರಬೀಳುವುದು ಮುಂತಾದುವುಗಳು ಇದೇ ಶಾಖದ ಕಾರಣದಿಂದಲೇ. ಆದರೆ ಜಗತ್ತಿನ ಮೇಲಿನ ಭಾಗವು ಬಹಳ ತಣ್ಣಗಾಗಿರುತ್ತದೆ. ಇದರಿಂದಲೇ ನೀವು ಅದರ ಮೇಲೆ ವಾಸಿಸುತ್ತಿರುವುದು.

ನೋಡಿ; ನಾನಿಲ್ಲದಿದ್ದರೆ ನೀವು ಜೀವಿಸುವುದು ತುಂಬ ಕಠಿನವಾಗುತ್ತಿತ್ತು. ನನ್ನಿಂದಲೇ ನೀವೆಲ್ಲರೂ ಜೀವಿಸುತ್ತಿದ್ದೀರಿ. ನಿಮ್ಮ ಜಗತ್ತಿನ ಉಷ್ಣಾಂಶ ಕಡಮೆಯಾಗತೊಡಗಿದೆಯೆಂದು ಈ ಮೊದಲೇ ನಾನು ಹೇಳಿದ್ದೇನೆ. ನಾನಿಲ್ಲದಿದ್ದರೆ ಜಗತ್ತಿನ ಶಾಖ ನಂದಿಹೋಗಿ, ಅದು ಬಹಳ ತಣ್ಣಗಾಗಿ ಬಿಡುತ್ತಿತ್ತು; ಅದರ ಮೇಲೆ ಯಾವ ಪ್ರಾಣಿಗೂ ಜೀವಿಸುವುದು ಅಸಾಧ್ಯವಾಗಿ ಬಿಡುತ್ತಿತ್ತು; ಯಾವ ಗಿಡ-ಮರಗಳೂ ಬೆಳೆಯುತ್ತಿರಲಿಲ್ಲ. ನನ್ನಲ್ಲಿ ಶಾಖ ಮತ್ತು ಬೆಳಕು ಇರದೆ ಹೋಗಿದ್ದಲ್ಲಿ, ಧಾನ್ಯದ ಒಂದು ಕಾಳೂ ನಿಮಗೆ ಸಿಕ್ಕುತ್ತಿರಲಿಲ್ಲ. ಬೇಸಗೆಯ ದಿನಗಳಲ್ಲಿ ನೀವು ಸಿಹಿಮಾವಿನಹಣ್ಣುಗಳನ್ನು ತಿನ್ನುವಾಗ ನನ್ನ ನೆನಪಾಗುತ್ತದೆಯೆ? ಕರಮಂಚಿ, ಕಲ್ಲಂಗಡಿ ಹಣ್ಣುಗಳನ್ನು ತಿನ್ನುವಾಗ ನಿಮಗೆ ಒಮ್ಮೆಯಾದರೂ ನನ್ನ ಇರುವಿಕೆಯ ವಿಚಾರ ಬಂದಿದೆಯೆ?

ಬೇಸಗೆಯ ದಿನಗಳಲ್ಲಿ ಬಿಸಿಗಾಳಿ ಬೀಸಿದಾಗ, ನೀವು ನನ್ನನ್ನು ಮನಸ್ಸಿನಲ್ಲಿಯೇ ಏಕೆ, ನಿರ್ದಾಕ್ಷಿಣ್ಯವಾಗಿ ಬೈಯುತ್ತೀರಿ; ಶಪಿಸುತ್ತೀರಿ. ನನ್ನ ಮೇಲೆ ಸಿಟ್ಟಾಗುತ್ತೀರಿ. ಆದರೆ ತಂಗಾಳಿಯಿಂದ ಕೂಡಿದ ಬೆಳದಿಂಗಳಲ್ಲಿ ನೀವು ನಿಮ್ಮ ಗೆಳೆಯರ ಸಂಗಡ ಗಂಗಾನದಿಯ ದಡದ ಮೇಲೆ ತಿರುಗಾಡುವಾಗ; ಗಾಳಿಯ ಹೊಡೆತದಿಂದ ಎಲೆಗಳಲ್ಲಿ "ಸುರ್ ಸುರ್" ಎಂಬ ಶಬ್ದ ಹೊರಟಾಗ; ಗಂಗಾನದಿಯಲ್ಲಿ ಮೇಲೇಳುವ ತೆರೆಗಳ ನಾದ ಕೇಳಿ ಆನಂದಭರಿತರಾದಾಗ; ನೀರಿನ ಮೇಲೆ ನಗುವ ಚಂದ್ರನ ಪ್ರತಿಬಿಂಬ ಕಾಣಿಸಿಕೊಂಡಾಗ; ಬೆಳುದಿಂಗಳಿನಲ್ಲಿ ನಿಮ್ಮ ನಾಲ್ಕೂ ಕಡೆಗೆ ಎಲ್ಲ ವಸ್ತುಗಳೂ ಥಳ ಥಳ

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

"ಎಸ್ಪನ್ ಗ್ರಾಇಪ್" ಹೀಲರ್

ಜಂತು ಆದರೆ

"ನವರ್ಸ" ಆಯಿಲ್

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು

The National Pharmacies & Pharmaceuticals Ltd., Dharwar

ಹೊಳೆಯುವುದನ್ನು ಕಂಡಾಗ—ಒಮ್ಮೆಯಾದರೂ ನೀವು ನಾನು ಇದ್ದೇನೆಂಬುದನ್ನು ವಿಚಾರಿಸುವಿರಾ? ನನ್ನಿಂದಲೇ ನದಿ ಹರಿಯುತ್ತದೆ; ನನ್ನಿಂದಲೇ ಗಾಳಿ ಚಲಿಸುತ್ತದೆ. ನನ್ನ ಪ್ರಕಾಶದಿಂದಲೇ ಚಂದ್ರನು ಪ್ರಕಾಶಮಾನನಾಗಿದ್ದಾನೆ. ನನ್ನಿಂದ ಚಂದ್ರನು ಭಿಕ್ಷೆಪಡೆದ ಈ ಬೆಳುದಿಂಗಳನ್ನು ನಿಮ್ಮ ಕವಿಗಳು ಅದೆಷ್ಟು ವರ್ಣಿಸಿದ್ದಾರೆ? ಭಿಕ್ಷೆಯಿಂದ ಸಿಕ್ಕಿದ ಸಂಪತ್ತನ್ನೇ ನೋಡಿಕೊಂಡು ಜನರು, ಚಂದ್ರನ ಅಹಂಕಾರವನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. ಹೋಗಿ, ನೀವೆಲ್ಲರೂ ಉಂಡಮನೆಯ ಗಳ ಎಣಿಸುವವರು! ನಾನು ನಿಮ್ಮ ಸಲುವಾಗಿ ಹಗಲು-ರಾತ್ರಿ ದುಡಿದರೂ ನೀವು ಒಮ್ಮೆಯಾದರೂ ನನ್ನನ್ನು ಸ್ಮರಿಸಬಾರದೆ? ಚಂದ್ರನನ್ನು ವರ್ಣಿಸುವ ವಿಷಯದಲ್ಲಿ ಅದೆಷ್ಟು ಕವಿತೆಗಳು? ಅದೆಷ್ಟು ಪದ್ಯಗಳು? ಚಂದ್ರನನ್ನು ಈ ರೀತಿ ಹೊಗಳುವುದೆ? ಎಲ್ಲ ಕವಿಗಳು ಹುಚ್ಚರು! ನಾನು ಯಾವುದಾದರೊಂದು ಕಸದ ಬುಟ್ಟಿಯಲ್ಲಿ ಪುಕ್ಕಟೆಯಾಗಿ ಸಿಕ್ಕಿರುವೆನೆಂದು ತಿಳಿದಿರುವಿರಾ? ಚಂದ್ರನು ಕೆಲವು ದಿನ ಮಾಯವಾಗಿ ಅನಂತರ ಕಾಣಿಸಿಕೊಳ್ಳುತ್ತಾನೆ; ಇದೇ ಕಾರಣದಿಂದ ನೀವು ಅವನನ್ನು ಇಷ್ಟು ಆದರದಿಂದ ನೋಡಿಕೊಳ್ಳುತ್ತೀರಾ? ನಾನು ದಿನಾಗಲು ಬಂದು ಹೋಗುತ್ತೇನೆಂದು

ಇಷ್ಟು ಹಳಬನಾದೆನೆ? ಇದು ಒಳ್ಳೆಯ ನ್ಯಾಯ! ಸೃಷ್ಟಿಯನ್ನು ರಚಿಸಿದ, ನಿಮಗೆ ಶರೀರ ಮತ್ತು ಜೀವನವನ್ನು ದಯೆಪಾಲಿಸಿದ ಮತ್ತು ನಿಮ್ಮೆಲ್ಲರನ್ನು ಬಹುಪರಿಯಾಗಿ ಪ್ರೀತಿಸುವ ದೇವರನ್ನೇ ಹಗಲು-ರಾತ್ರಿಯಲ್ಲಿ ಒಂದುಸಲವೂ ನೆನೆಯದವರು ನೀವು ನನ್ನನ್ನು ನೆನೆಯುವಿರಾ? ನಾನಂತೂ ಆವನ ಎದುರಿನಲ್ಲಿ ಒಂದು ಮಣ್ಣಿನ ಜಡಪಿಂಡ! ನನಗೆ ಮತ್ತೊಬ್ಬರನ್ನು ಪ್ರೀತಿಸುವುದೇ ಗೊತ್ತಿಲ್ಲ. ಹಗಲು ರಾತ್ರಿ ಕೇವಲ ದುಡಿಯುತ್ತೇನೆ; ಎಂದಮೇಲೆ ನೀವು ಒಮ್ಮೆಯಾದರೂ ನನ್ನನ್ನು ನೆನೆಯಬೇಕೆಂದು ನಾನೇಕೆ ಆಶಿಸಬೇಕು?

ನಾನು ಚಂದ್ರನೊಂದಿಗೆ ಜಗಳವಾಡುತ್ತಿದ್ದೇನೆಂದು ನೀವು ತಿಳಿದಿರಬಹುದು. ಎಂದಿಗೂ ಇಲ್ಲ. ನೀವು ಅವನನ್ನು ಎಷ್ಟು ವರ್ಣಿಸಿದರೂ ಅದರಿಂದ ನನ್ನ ಹೆಸರಿಗೆ ಕುಂದು ಬಾರದೆ ನನ್ನ ಖ್ಯಾತಿ ಇನ್ನೂ ಹೆಚ್ಚಾಗುತ್ತ ಹೋಗುತ್ತದೆ. ನಿಮ್ಮ ಜಗತ್ತಿನಂತೆ ಚಂದ್ರನು ನನ್ನದೇ ಆದ ಒಂದು ತುಣುಕಾಗಿದ್ದಾನೆ. ನನ್ನ ಪ್ರಕಾಶದಿಂದಲೇ ಅವನು ಇಷ್ಟೊಂದು ವಿರಾಜಮಾನನಾಗಿ ಕಾಣಿಸಿಕೊಳ್ಳುತ್ತಾನೆ. ಎಂದ ಮೇಲೆ ಅವನ ಸಂಗಡ ನಾನೇಕೆ ಜಗಳವಾಡಲಿ? ಆದರೆ ನೋಡಿ, ನೀವು ನನ್ನಿಂದ ಇಷ್ಟು ಲಾಭಪಡೆದುಕೊಂಡರೂ ನನ್ನ ಒಂದು ಮಾತಿಗೂ ಲಕ್ಷ್ಯಕೊಡುದಿವುಲ್ಲ. ಆದುದರಿಂದಲೇ ನೀವು ಉಪಕಾರವಿಲ್ಲದವರು ಎಂದು ಹೇಳ ಬೇಕಾಗಿದೆ. ಮೊದಲಿನ ಕಾಲದಲ್ಲಿ ಜನರು ನನ್ನ ಪೂಜೆಯನ್ನು ಮಾಡುತ್ತಿದ್ದರು. ಆದರೆ ಈಗ ನೀವು ನನ್ನ ಸಂಬಂಧವನ್ನೆ ಕಡಿದು ಹಾಕಿದ್ದೀರಿ? ಇದೊಂದು ವಿಷಾದದ ಸಂಗತಿ.

ತನ್ನನ್ನು ತಾನೇ ಬಣ್ಣಿಸುವುದು ಒಳ್ಳೇಯದಲ್ಲ. ನಿಮ್ಮ ಸಂಗಡ ಮಾತನಾಡುವುದಕ್ಕೂ ನನ್ನ ಮನಸ್ಸು ಒಪ್ಪುವುದಿಲ್ಲ. ನಾನು ನನ್ನನ್ನೆ ಬಣ್ಣಿಸಲು ಇಷ್ಟೊಂದು ಉಪ್ಪು-ಕಾರ ಹಚ್ಚಿ ಮಾತನಾಡುತ್ತಿದ್ದೇನೆ ಎಂದು ತಿಳಿಯಬೇಡಿರಿ. ನಾನು ನಿಮಗೆ ಏನಾಗಬೇಕೆಂದು ನೀವೇ ಕೇಳಿದ್ದಕ್ಕೆ ಇಷ್ಟೆಲ್ಲ ಹೇಳಬೇಕಾಯಿತು. ಹೇಳಬೇಕಾದದ್ದನ್ನೆಲ್ಲ ಹೇಳಿದ್ದೇನೆ. ಈಗ ಇನ್ನೊಂದು ಮಾತು ಹೇಳುತ್ತೇನೆ: ಇಂಥ ದೊಡ್ಡ ಬ್ರಹ್ಮಾಂಡದಲ್ಲಿ ನಾನು ಉಸುಕಿನ ಒಂದು ಕಣಕ್ಕಿಂತಲೂ ಕಡೆ. ನನ್ನಲ್ಲಿ ಸಾಮರ್ಥ್ಯವಿದ್ದರೆ ಅದು ಭಗವಂತನಿಂದ ಬಂದುದು; ಎಂದ ಮೇಲೆ ನಾನೇಕೆ ಹೆಮ್ಮೆ ಪಡಬೇಕು.? ನನಗೆ ಮುಖಸ್ತುತಿ ಬೇಕಾಗಿಲ್ಲ. ನನ್ನಲ್ಲಿ ಯಾವುದಾದರೊಂದು ಕಲೆ ಇದ್ದರೆ, ಅದರಿಂದ ನನ್ನ ಯಜಮಾನನ ಹಿರಿಮೆ ಹೆಚ್ಚಾಗುತ್ತದೆ; ನನ್ನದಲ್ಲ. ಹೋಗಲಿ, ನಾನು ನಿಮ್ಮ ಸೇವಕನಾಗಿ ನೇಮಕ ಹೊಂದಿದ್ದೇನೆಂದ ಮೇಲೆ ನಿಮ್ಮನ್ನೇ ಸ್ತುತಿಸುತ್ತೇನೆ. ನಾನು ನಿಮ್ಮ ಸೇವಕ! ಒಂದು ಕವಡಿಯನ್ನೂ ತೆಗೆದುಕೊಳ್ಳದೆ ನಿಮಗೆ ಗಾಳಿಯನ್ನೂ ನೀರನ್ನೂ ಒದಗಿಸುಕೊಡುತ್ತೇನೆ ನನ್ನ ಈ ಮಾತು ನಿಮಗೆ ಸರಿಯಾಗಿ ಅರ್ಥವಾಗಿಲ್ಲವೆಂದು ಕಾಣುತ್ತದೆ. ಈಗ ತಿಳಿಸಿ ಹೇಳುತ್ತೇನೆ.

ಬೇಸಗೆಯ ದಿನಗಳಲ್ಲಿ ನಿಮ್ಮ ಜಗತ್ತು ಬಿಸಿಲಿಂದ ಉರಿಯುವಾಗ, ನಾನು ನಿಮಗೆ ಗಾಳಿ ಮತ್ತು ನೀರನ್ನು ಒದಗಿಸಿಕೊಡುತ್ತೇನೆ. ಮನೆಗೆ ಯಾವಾಗಲಾದರೂ ಉರಿ ಹತ್ತಿದಾಗ, ನಾಲ್ಕೂ ಕಡೆಗೆ ಗಾಳಿ ಚಲಿಸುತ್ತಿರುವುದನ್ನು ನೀವು ನೋಡಿರಬಹುದು. ಹೀಗೇಕೆ ಆಗುತ್ತದೆಂಬುದು ನಿಮಗೆ ಗೊತ್ತೆ? ಉರಿ ಹತ್ತಿದಾಗ ಅಲ್ಲಿರುವ ಗಾಳಿ ಉಷ್ಣತೆಯಿಂದ ಹಗುರವಾಗಿ ಮೇಲಕ್ಕೆ ಹೋಗುತ್ತದೆ. ಇದಕ್ಕೆ ಪ್ರತಿಯಾಗಿ ಆ ಸ್ಥಳದಲ್ಲಿ ತಣ್ಣನ್ನ ಮತ್ತು ಭಾರವಾದ ಗಾಳಿ ಬಂದು ಸೇರಿಕೊಳ್ಳುತ್ತದೆ. ಬೇಸಗೆಯ ದಿನಗಳಲ್ಲಿ ನಾನು ನಿಮ್ಮ ಭಾರತವನ್ನು ಹೆಚ್ಚು ಕಾಯಿಸಿಬಿಡುತ್ತೇನೆ. ಆಗ ಅಲ್ಲಿರುವ ಗಾಳಿ ಹಗುರವಾಗಿ ಆಕಾಶದ ಮೇಲುಗಡೆ ಹೋಗುತ್ತದೆ; ಇದಕ್ಕೆ ಪ್ರತಿಯಾಗಿ ತೆರವಾದ ಸ್ಥಳದಲ್ಲಿ ದಕ್ಷಿಣಸಮುದ್ರದಿಂದ ತಂಗಾಳಿ ಬೀಸತೊಡಗುತ್ತದೆ. ತಂಗಾಳಿ ಬೀಸಿದಾಗ ನಿಮಗೆ ಅದೆಷ್ಟು ಆನಂದವಾಗುತ್ತದೆ? ಈ ಗಾಳಿಯನ್ನು ನಾನೇ ನಿಮಗೆ ತಂದುಕೊಡುತ್ತೇನೆಂದು ಹೇಳಿದರೆ ನೀವು ಒಮ್ಮೆಯಾದರೂ ಒಪ್ಪುವುದಿಲ್ಲ. ನಿಮ್ಮ ಭಾರತದಲ್ಲಿ ಅಷ್ಟೇ ಅಲ್ಲ; ಎಲ್ಲ ರಾಷ್ಟ್ರಗಳಲ್ಲಿ, ಎಲ್ಲ ಸಮುದ್ರಗಳಲ್ಲಿ ನನ್ನ ಮೂಲಕವಾಗಿಯೇ ಗಾಳಿ ಬೀಸುತ್ತಿರುತ್ತದೆ. ನಾನಿಲ್ಲದೆ ಹಡುಗುಗಳು ಚಲಿಸುವಂತಿಲ್ಲ; ಹಡಗುಗಳು ಚಲಿಸದಿದ್ದಲ್ಲಿ ನಿಮಗೆ ಬೇಕಾದ ವಸ್ತುಗಳು ಸಿಕ್ಕುತ್ತಿರಲಿಲ್ಲ

ನನ್ನ ಶಾಖದಿಂದಲೇ ಸಮುದ್ರದ ನೀರು ಆವಿಯಾಗಿ ಗಾಳಿಯಲ್ಲಿ ಕೂಡಿಕೊಳ್ಳುತ್ತದೆ. ಸಮುದ್ರದಿಂದ ಗಾಳಿ ಭೂಮಿಯ ಕಡೆಗೆ ಚಲಿಸುವಾಗ, ಕಣ್ಣಿಗೆ ಕಾಣಿಸದ ಈ ಆವಿ ಆ ಗಾಳಿಯ ಜೊತೆಯಲ್ಲಿ ಭೂಮಿಯ ಮೇಲೆ ಬರುತ್ತದೆ. ಆಗ ಇದು ಇಬ್ಬನಿ, ಆಣೆಕಲ್ಲು ಅಥವಾ ಮಳೆಯ ರೂಪದಲ್ಲಿ ಭೂಮಿಯ ಮೇಲೆ ಬೀಳುತ್ತದೆ. ಇದರಿಂದ ಭೂಮಿ ತಣ್ಣಗಾಗಿ ಹದಗೊಳ್ಳುತ್ತದೆ. ಹಿಮಾಲಯದ ಹಿಮದೊಳಗಿಂದ ಗಂಗಾನದಿ ಹರಿದುಬಂದಿದೆ. ಈ ಹಿಮ ಆವಿಯಿಂದಲೇ ಉಂಟಾಗುತ್ತದೆ. ನದಿಯಲ್ಲಿ ನೀರು ಬರುವುದು ಆವಿಯಿಂದಲೇ. ಇಷ್ಟೇ ಅಲ್ಲ; ಆವಿ ಜಗತ್ತನ್ನು ಚಳಿಗಾಲ ಮತ್ತು ಬೇಸಗೆಯ ಕಾಲಗಳಲ್ಲಿ, ಹೆಚ್ಚು ಚಳಿ ಮತ್ತು ಬಿಸಿಲು ಆಗದಂತೆ ನಿಮ್ಮನ್ನು ರಕ್ಷಿಸುತ್ತದೆ. ಆವಿ ಇಲ್ಲದೇ ಹೋಗಿದ್ದಲ್ಲಿ, ನಿಮಗೆ ದಿನದಲ್ಲಿ ನನ್ನ ಶಾಖವನ್ನು ತಡೆದುಕೊಳ್ಳುವುದು ಆಗುತ್ತಿರಲಿಲ್ಲ; ರಾತ್ರಿಯಲ್ಲಿ ಜಗತ್ತಿನ ಶಾಖ ಬೇಗನೆ ಆರಿಹೋಗುತ್ತಿತ್ತು; ಎಲ್ಲ ಕಡೆ ಹಿಮ ಬಿದ್ದುಬಿಡುತ್ತಿತ್ತು; ಮೋಡಗಳು ಉಂಟಾಗುತ್ತಿರಲಿಲ್ಲ; ಮಳೆ ಆಗುತ್ತಿರಲಿಲ್ಲ, ಮತ್ತು ಜಗತ್ತಿನಲ್ಲಿ ಜೀವಿಸುವುದು ತುಂಬ ಕಠಿಣವಾಗುತ್ತಿತ್ತು.

ನಾನು ನಿಮಗೆ ಏನಾಗಬೇಕೆಂಬುದು ಈಗ ನಿಮಗೆ ಗೊತ್ತಾಗಿರಬಹುದು! ಇಡಿಯ ದಿನವೇ ನಿಮ್ಮ ಸಂಗಡ ಹರಟುತ್ತ ನಾನು ನನ್ನ ಸುಖ-ದುಃಖಗಳನ್ನು ಹೇಳಿಕೊಂಡೆ. ಈಗ ಸಂಜೆಯಾಗುತ್ತ ಬಂದಿದೆ. ಇನ್ನು ನಾನು ಜಗತ್ತಿನ ಎರಡನೆಯ ಭಾಗವನ್ನು ಬೆಳಗಿಸಬೇಕಾಗಿದೆ. ನೀವಿನ್ನು ವಿಶ್ರಾಂತಿ ತೆಗೆದುಕೊಳ್ಳಿರಿ. ನನಗಂತೂ ವಿಶ್ರಾಂತಿಯೇ ಇಲ್ಲ. ಹೋಗಿಬರುವೆ. ನಮಸ್ಕಾರ!

---

# ಆ ದೀಪದ ಕಂಬ!

( ಸಣ್ಣಕಥೆ )

ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ

●

**ಬೀದಿಯ ದೀಪದ ಮಿಣುಕುಬೆಳಕಿನಿಂದಲೂ ಜೀವನವನ್ನು ಬೆಳಗಿಸಿಕೊಂಡವರು ಅಲ್ಲಲ್ಲಿ ನೋಡಲು ಸಿಕ್ಕಬಹುದು. ರಾಯರೂ ಅಂತಹರಲ್ಲಿ ಒಬ್ಬರು. ತಮ್ಮ ವೈಭವಜೀವನದಲ್ಲಿಯೂ ಹಿಂದೆ ತಮಗೆ ಬೆಳಕನ್ನು ಕೊಟ್ಟ ಬಡಬೀದಿಯದೀಪದ ಋಣದ ಅರಿವು ಅವರಿಗೆ ಮರೆಯಾಗಿಲ್ಲ.**

●

ಎಂದಿನಂತೆ ರಂಗರಾಯರು ಮುಂಜಾವಿನಲ್ಲಿ ದಿನಪತ್ರಿಕೆಯನ್ನು ತಿರುವುತ್ತ—ತಮ್ಮ ಚಹಾಸೇವನೆ ನಡೆಸಿದ್ದರು. ನೋಡುತ್ತಾರೆ. ಮೊದಲನೆಯ ಪುಟದ ಮೇಲೆಯೇ ದಪ್ಪಗಿನ ಅಕ್ಷರಗಳಲ್ಲಿ "**ಜಿಲ್ಲಾ ನ್ಯಾಯಾಧೀಶ ರಂಗರಾಯರಿಗೆ ಸತ್ಕಾರ!**" ಎಂಬ ತಲೆಬರೆಹದಲ್ಲಿ, ಅವರ ಸೇವಾನಿವೃತ್ತಿಯನ್ನು ಕುರಿತೂ ಮತ್ತು ವಕೀಲವೃಂದವು ಅವರಿಗೆ ಬಾರಿನಲ್ಲಿ ಸಲ್ಲಿಸಬೇಕಾದ ಸತ್ಕಾರದ ಬಗೆಗೂ ನಿವರಣೆ ತುಂಬಿತ್ತು! ಆ ಆಕರ್ಷಣೀಯವಾದ ತಲೆಬರಹವನ್ನು ರಾಯರು ಮತ್ತೊಮ್ಮೆ ನೋಡಿ, ಹತ್ತಿರವೇ ಇದ್ದ ಟಿಪಾಯಿ ಮೇಲೆ ಪತ್ರಿಕೆಯನ್ನೊಗೆದು, ಗಾಜಿನಗುಂಡನ್ನು ತಿರುವುತ್ತ ಕುಳಿತುಕೊಂಡರು ಮನಸ್ಸು ಎಲ್ಲೆಲ್ಲಿಯೋ ಹಾರಾಡಿ ಸ್ತಿಮಿತಕ್ಕೆ ಬಂದಾಗ, ರಾಯರು ಎದ್ದು ತಮ್ಮ ದಿವಾನ್‌ಖಾನೆಯಲ್ಲಿ ಶತಪಥ ನಡೆಸಿದರು. ರಾಯರ ಮಡದಿ ಒಮ್ಮೆ ಹೊರಗೆ ಇಣುಕಿ ನೋಡಿದರೇನೋ ಸರಿ—ಆದರೆ ರಾಯರ ಮುಖದ ಗಾಂಭೀರ್ಯವನ್ನು ಕಂಡು, ಎದುರಿಸದೆ ಹಾಗೆಯೆ ಹಿಂದೆ ಸರಿದರು. ರಾಯರು ಉಗ್ರಸ್ವಭಾವದವರಲ್ಲ. ವಾದರೂ, ಅವರ ನಿಷ್ಠಾಪೂರ್ಣ ಜೀವನವು, ಅವರ ಮುಖಕ್ಕೆ ಒಂದು ಬಗೆಯ ಗಾಂಭೀರ್ಯವನ್ನು ಒದಗಿಸಿಕೊಟ್ಟಿದ್ದಿತು. ರಾಯರ ಮನಸ್ಸು ಯಾವ ಪ್ರಶ್ನೆಗೆ ಉತ್ತರವಾಗಿಯೋ ಏನೋ, ಒಮ್ಮೆಲೆ "ಹುಂ—ಹಾ—ಏ ಶ್ಯಾಮಾ" ಎಂದು—ತಳಕಂಡ ವಸ್ತುವು ನೀರಲ್ಲಿ ಗುಳ್ಳೆ ಎಬ್ಬಿಸುವಂತೆ—ವಾಣಿಯನ್ನು ಹೊರಹೊರಡಿಸಿತು.

"ಶ್ಯಾಮ ಈಗ ತಾನೇ ಎಲ್ಲಿಯೋ ಹೋದ!" ಎಂದು ರಾಯರ ಮಡದಿ ಕಮಲಕ್ಕ ನುಡಿದರು.

"ಎಲ್ಲಿ ಹೋದನೋ ಏನೋ—ಯಾವಾಗ ನೋಡಿದರೂ ಮನೆಯಲ್ಲಿ ಇರುವುದೇ ಇಲ್ಲ. ತಿರುಗುವುದೊಂದೇ ಇವರಿಗೆ ವ್ಯಸನ" ಎನ್ನುತ್ತ ರಾಯರು ಕುರ್ಚಿಯ ಮೇಲೆ ಕುಳಿತುಕೊಂಡರು. ಮನೆಯ ಆಳು ಸುಮ್ಮನೆ ಸುಳಿದು—ಹೂದೋಟದ ಕಡೆಗೆ ನಡೆದ. ಕಮಲಕ್ಕ ನಿಂತಲ್ಲಿಯೇ ನಿಂತಿದ್ದರು. ರಾಯರು ಮತ್ತೆ "ನಾವು ಸಣ್ಣವರಿದ್ದಾಗ,...... ಎಷ್ಟು ಕಷ್ಟಪಡುತ್ತಿದ್ದೆವೋ....ಆ ದೇವರೇ ಬಲ್ಲ!" ಎಂದರು.

"ನೀವು ಕಷ್ಟಪಟ್ಟರೆ .. .... ನಿಮ್ಮ ಮಕ್ಕಳೂ ಕಷ್ಟಪಡಬೇಕೇನು?" ಎಂದರು ಕಮಲಕ್ಕ.

"ನೋಡು! ನೀನು ಮಕ್ಕಳನ್ನು ಮೇಲುಗಟ್ಟಿಮಾತಾಡಿಯೇ ಹೀಗಾಗಿರುವುದು. ಇವರಿಗಿರುವ ಸೌಕರ್ಯಗಳನ್ನು ನೋಡು! ನಿನ್ನೆ ೭೫ ರೂಪಾಯಿ ಕೊಟ್ಟು ಆ ಟೇಬಲ್‌ಲ್ಯಾಂಪ್ ತಂದಿದ್ದಾನೆ.... ನನಗಾದರೋ...."

"ನಿಮಗೇನಾಗಿತ್ತು? .. ಹಳೆಯ ಕಾಲದ ಮಾತನ್ನ ಈಗ ನೆನಸಿದರೇನು?"

"ಹುಚ್ಚೀ....ಆ ನನ್ನ ಹಿಂದಿನ ದಿನದ ನೆನವು ನನಗೆ ಎಷ್ಟು ಆನಂದ ಕೊಡುತ್ತದೆ! ಏನು ಆಗಿನ ಕಷ್ಟ? ಅಷ್ಟೇ ನನಗೆ ಧೈರ್ಯವೂ ಇತ್ತು ನೋಡು!"

"ಪೇನ್‌ಶನ್ ಆತು—ಅಂತ, ಹಿಂದಿನ ಹಳೆಯ ರಾಮಾಯಣ ಸುರುವು ಮಾಡಿದಿರೇನೋ....ಶ್ಯಾಮು ಈಗ ಬಂದಾನು; ಎಲ್ಲಿಯೋ ಗೆಳೆಯರ ಮನೆಗೆ ಹೋಗಿದ್ದಾನು."

ರಾಯರು ಸ್ವಲ್ಪಕಾಲ ಸುಮ್ಮನೆ ಕುಳಿತು ಏನೋ ಯೋಚಿಸಿ "ಹಂ... ನೀನು · ಹಳೆಯ ರಾಮಾಯಣ ಅಂತ ಅಂದೆಲ್ಲಾ! ಅದನ್ನ ನಿಮಗೆಲ್ಲಾ ಒಮ್ಮೆ ಹೇಳಿಬಿಡತೀನಿ. ನೀನು ಅರ್ಧಾಂಗಿ; ಆದರೂ ನನ್ನ ಪೂರ್ಣ ಕಥೀ ಇನ್ನೂ ಕೇಳಿಲ್ಲ!"

"ಏನು ಕಥಿಯೋ ಏನೋ! ...ಅದು ಹೌದಲ್ಲೋ... ನೌಕರಿ ಒಳಗ ನನಗ ಎಷ್ಟು ಕಷ್ಟ ಆತು? ನಾ ಹ್ಯಾಂಗ ಪಾರಾದೆ. ಮತ್ತೆ ದೊಡ್ಡ ನೌಕರಿ ಹ್ಯಾಂಗ ಸಿಕ್ಕೀತು....ಇದು ಹೌದೋ ಅಲ್ಲೋ? ಸಾಕು ಬಿಡ್ರಿ!"

"ಏ ಹುಚ್ಚೀ, ಇದೆಲ್ಲಾ ಇತ್ತೀಚಿನ ಪುರಾಣ—ನೀನು ಕಂಡದ್ದು! ಆದರ, ನೀ ಮನಿಗೆ ಮಡದಿ ಆಗಿ ಬರೋದಕ್ಕಿಂತಾ ಮೊದಲಿನ ಪುರಾಣ ಒಂದು ಅದ. ಅದನ್ನ ನಿಮಗೆಲ್ಲಾ ಒಮ್ಮೆ ಹೇಳಬೇಕು ಅಂತ ನನ್ನ ಇಷ್ಟ. ತಿಳೀತ?"

"ಸಾಕು ಬಿಡ್ರಿ. ಏನೋ ಎಂತೋ....ನನಗ ಒಳಗ ಕೆಲಸ ಕರೀತದ. ನೀವಂತೂ ಸಂಜೆಗೆ ಭರ್ಜರೀ ಪಾರ್ಟೀಗೆ ಹೋಗೋ ಅವರು."

"ಯಾಕ? ನಿನಗೂ ಆಮಂತ್ರಣ ಅದ. ನಿಮ್ಮದೂ ತಯಾರಾಗಲಿ! ಆ ಬೆಂಗಳೂರ ಸೀರಿ ಹೊರಗ ಬರಲಿ ಇಂದು!"

"ಸಾಕು ಬಿಡ್ರಿ, ನಿಮ್ಮದಂತೂ! ಪೆನ್‌ಶನ್ ಆದ್ರೂ ಹುಡುಗಾಟಿಕೆ ತಪ್ಪಲಿಲ್ಲ. ಇರಲಿ, ಎಷ್ಟೊತ್ತಿಗೆ ಹೋಗೋದು, ಇವತ್ತ ಪಾರ್ಟೀಗೆ?"

“ ಸಾಯಂಕಾಲ ೫ ಗಂಟೆಗೆ ಕರೆಯಲಿಕ್ಕೇ ಬರೇನೆ! ” ಮಾತು ಮುಂದುವರಿಯಬಾರದೆಂದೋ ಏನೋ, ಕಮಲಕ್ಕ “ ಈಗ ಬರ್ತೀನಿ ” ಎಂದು ನುಡಿದು ಒಳಗೆ ಹೋಗಿಬಿಟ್ಟರು. ರಾಯರು ಮಾತ್ರ ಯೋಚನಾಪರರಾಗಿ, ವಿರಾಮ-ಖುರ್ಚಿಯೊಂದರಲ್ಲಿ ಮಂಡಿಸಿದರು. ನೌಕರಿಯಲ್ಲಿದ್ದಾಗ ತುಂಬಾ ಕೆಲಸವಿರುವುದರಿಂದ ಯಾವ ಯೋಚನೆಗಳೂ ಬರುವುದಿಲ್ಲ ಆದರೆ ಸೇವಾನಿವೃತ್ತಿಯಾದೊಡನೆ ಹಳೆಯ ನೆನಪುಗಳೇ ಗೆಳೆಯರಾಗಿ ಪರಿಣಮಿಸುವುವಷ್ಟೆ? ರಾಯರ ಗತಿಯೂ ಈಗ ಹಾಗೆಯೇ ಆಗಿದ್ದಿತು.

ರಂಗರಾಯರಿಗೆ ಶ್ಯಾಮನೊಬ್ಬನೇ ಮಗ! ಕಮಲಕ್ಕ ಆತನನ್ನು ಬಹು ಮಮತೆಯಿಂದ ನೋಡಿಕೊಳ್ಳುತ್ತಿದ್ದರು. ಆದರೆ ರಾಯರು ಮಾತ್ರ ತಮ್ಮ ಅಂತಃಕರಣವನ್ನು ಹೊರಗೆ ತೋರಿಸದೆ, ತಮ್ಮ ಅಧಿಕಾರದ ದರ್ಪವನ್ನೇ ಮನೆಯಲ್ಲಿಯೂ ನಟಿಸುತ್ತಿದ್ದರು! ಶ್ಯಾಮ ಇದೀಗ ಬಿ. ಎ. ಕ್ಲಾಸಿಗೆ ಬಂದು ಮುಟ್ಟಿದ್ದ. ಪ್ರತಿಯೊಂದು ಪರೀಕ್ಷೆಯಲ್ಲಿಯೂ ಎರಡುವರುಷ ಕಳೆಯುತ್ತ ನಿಧಾನವಾಗಿಯೆ ಆತನು ಮುಂದುವರಿದಿದ್ದ. ಅದಕ್ಕಾಗಿಯೇ ರಾಯರ ಕೋಪವು ಹೆಚ್ಚಾಗಿತ್ತು. ತಾವು ಅಧಿಕಾರದಲ್ಲಿರುವಾಗಲೇ ಶ್ಯಾಮನಿಗೆ ಒಂದು ನೌಕರಿ ಕೊಡಿಸಬೇಕೆಂದು ಅವರ ‘ ಒಳ ಒಳ ಒಳಗಿನ ದನಿಯು. ’ ರಾಯರು ಸಾಕಷ್ಟು ಹಣವನ್ನೇನೋ ಗಳಿಸಿದ್ದರು; ಆದರೆ ‘ ಕೂತು ಉಂಡರೆ ಕುಡಿಕೆ ಹೊನ್ನು ಸಾಲದು ’ ಎಂಬ ಮಾತು ಅವರನ್ನು ಚುಚ್ಚುತ್ತಿತ್ತು. ಶ್ಯಾಮನಾದರೊ ನಿತ್ಯ ನಾಗರಿಕತೆಯ ವೈಭವದೊಂದಿಗೆ ಮೆರೆಯುತ್ತಿದ್ದ. ಆತನು ಬಿಳಿ ಡಕ್ಕಿನ ಪ್ಯಾಂಟು ತೊಟ್ಟು, ಕೈಯಲ್ಲಿ ಟೆನಿಸ್ ರ್‍ಯಾಕೆಟ್ಟು ಹಿಡಿದು ಹೊರಟನೆಂದರೆ—ರಾಯರು ತಮ್ಮ ಅಟ್ಟದ ಕಿಟಕಿಯಿಂದ ಇಣಿಕಿ ನೋಡಿ, ಉಸ್ಸೆಂದು ಉಸಿರ್ಗರೆಯುತ್ತಿದ್ದರು. ‘ ತಂದೆ ಮಗನನ್ನು ನೋಡಿ ಹೀಗೆ ಮಾಡಬೇಕೆ? ’ ಎಂದು ಜನ ನುಡಿಯಬಹುದು; ಆದರೆ ರಾಯರು ಹಿಂದಿನ ತಮ್ಮ ಜೀವನದೊಂದಿಗೆ ಮಗನ ಈ ಬಗೆಯ ಜೀವನವನ್ನು ಹೋಲಿಸಿದಾಗ, ಅವರಿಗೆ ತಾವು ಪಟ್ಟ ಕಷ್ಟದ ನೆನಹು ಆಗುತ್ತಿತ್ತು; ಅದು ಅವರ ತಪ್ಪಲ್ಲ!

* * * *

ಅಂದು ಸಾಯಂಕಾಲ ಬಾರ್‌ರೂಮಿನಲ್ಲಿ ರಾಯರಿಗೆ ತುಂಬ ವೈಭವದಿಂದ ಸತ್ಕಾರಸಮಾರಂಭವು ಜರುಗಿತು. ಎಲ್ಲರೂ ಮುಕ್ತಕಂಠದಿಂದ ರಾಯರ ಗುಣಗಾನ ಮಾಡಿ. ದೊಡ್ಡ ಹೂಮಾಲೆಗಳನ್ನು ಅರ್ಪಿಸಿದರು. ಕಮಲಕ್ಕ ತುಂಬುಗಣ್ಣುಗಳಿಂದ ಅದೆಲ್ಲವನ್ನೂ ನೋಡಿ ಹರ್ಷಪಟ್ಟರು. ಆದರೆ ‘ ಇನ್ನು ಈ ಬಗೆಯ ಸತ್ಕಾರ-ಸಮಾರಂಭಗಳು ನಮಗೆ ಇಲ್ಲವಲ್ಲಾ! ’ ಎಂದು ಅವರಿಗೆ ಹಳಹಳಿ! ನಿವೃತ್ತಿಯ ಬಳಿಕ ತಮ್ಮನ್ನು ತಮ್ಮ ಆಳುಮಗ ಸಹಿತ ಕೇಳಲಿಕ್ಕಿಲ್ಲ—ಎಂದು ಅವರಿಗೆ ಬಾರಿಬಾರಿಗೂ ಎನಿಸಿದ್ದುಂಟು! ರಾಯರು ಮಾತ್ರ ಸಮಾಧಾನ-ಗಾಂಭೀರ್ಯಗಳಿಂದ ಶೋಭಿಸುತ್ತಿದ್ದರು. ಸಮಾರಂಭವು ಮುಗಿದೊಡನೆ, ರಾಯರು ಜನರೊಡನೆ ಆ ಮಾತು ಈ ಮಾತು ಆಡುತ್ತ ತಮ್ಮ ಕಾರಿನ ಬಳಿಗೆ ಬಂದೊಡನೆ, ಕೋರ್ಟಿನ ಜವಾನನು

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು.
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ

ಅವರಿಗೆ ತನ್ನ ಕೊನೆಯ ಸಲಾಮು ಕೊಟ್ಟ! ಎಲ್ಲರೂ ನಮಸ್ಕಾರ ಮಾಡಿದರು. ರಾಯರ ಕಾರು ಸಾವಕಾಶವಾಗಿ ಹೊರಟಿತು. ಮೋಟಾರು ಕೋರ್ಟಿನ ಪಟಾಂಗಣವನ್ನು ದಾಟಿ ತುಸು ಮುಂದಕ್ಕೆ ಬಂದಾಗ, ರಾಯರು ಡ್ರೈವ್ಹರನಿಗೆ “ ತುಸು ಗಾಡಿ ನಿಲ್ಲಿಸು ” ಎಂದು ಹೇಳಿ, ತಾನೇ ಬಾಗಿಲನ್ನು ತೆರೆದು ಕೆಳಗೆ ಇಳಿದರು. ಮೋಟಾರಿನ ಬಾಗಿಲನ್ನು ತೆರೆದು ರಾಯರು ಕೆಳಗಿಳಿದುದನ್ನು ಕಂಡು ಡ್ರೈವ್ಹರನಿಗೆ ಆಶ್ಚರ್ಯವಾಯಿತಲ್ಲದೆ, ತುಸು ಭೀತಿಯೂ ಎನಿಸಿತು. ರಾಯರು ಎಂದೂ ಹಾಗೆ ಮಾಡುವವರಲ್ಲ. ಗಾಡಿಯನ್ನು ನಿಲ್ಲಿಸಿ ಡ್ರೈವ್ಹರನೇ ಬಾಗಿಲು ತೆರೆಯಬೇಕಷ್ಟೇ? ಕಮಲಕ್ಕ ಬೆಚ್ಚಿದವರಾಗಿ “ ಯಾಕೆ? ಯಾರಾದರೂ ಬಂದರೋ? ” ಎಂದರು.

“ ನೀವು ಮುಂದೆ ಸಾಗಿರಿ....ನಾನು ತುಸು ತಿರುಗಾಡಿ ಬರುತ್ತೇನೆ. ” ಎಂದು ರಾಯರು ವಾಕಿಂಗ್‌ಸ್ಟಿಕ್ ತಿರುಹುತ್ತ ನಿಂತುಕೊಂಡರು.

“ ವಾಕಿಂಗ್ ಇಂದೆಯೆ ಸುರುವು ಮಾಡಿದಿರೇನು? ಮನೆಗೆ ನಮ್ಮನ್ನು ಮುಟ್ಟಿಸಿ ಹೋದರಾಯಿತು! ” ಎಂದರು ಕಮಲಕ್ಕ.

“ ಬೇಡ. ನಾನು ಒಬ್ಬನೇ—ಹಾಗೇ ತಿರುಗಾಡಿ ಬರುತ್ತೇನೆ ” ಎಂದು ರಾಯರು ಹೊರಟೇಬಿಟ್ಟರು. ಗಾಡಿಯು ಸಾಗಿಹೋಯಿತು! ರಾಯರು ಕೋರ್ಟಿನ ಎದುರಿನ ರಸ್ತೆಯ ಆಚೆಗಿದ್ದ ದೀಪದ ಕಂಬದ ಕಟ್ಟೆಯ ಹತ್ತಿರ ಬಂದು ನಿಂತುಕೊಂಡರು—ಅದೇ ಆ ಕಂಬ! ಎಷ್ಟೋ ಕಾಲ ಗತಿಸಿದ್ದರೂ ಅದು ಹಾಗೆಯೇ ನಿಂತಿತ್ತು. ಕಬ್ಬಿಣದ ಕಂಬ—ಅದರ ತಲೆಯ ಮೇಲೆ—ಚೌಕಾಗಿ ಇದ್ದ ಕಾಜಿನ ಮನೆ ಹಾಗೆಯೇ ಇದ್ದಿತು. ಆದರೆ ಅದರ ಮಧ್ಯದಲ್ಲಿ ಮಾತ್ರ ದೀಪವೇ ಇದ್ದಿಲ್ಲ!

ರಾಯರು ಒಂದು ಸುತ್ತು ತಿರುಗಿ ಮೇಲೆ ಕೆಳಗೆ ನೋಡಿದರು. ಅವರ ಮನಸ್ಸು ಏನು ಹೇಳಿತೋ—ಅಲ್ಲಿಯೇ ಆ ಕಟ್ಟೆಯ ಮೇಲೆ ಅವರು ಕುಳಿತುಕೊಂಡರು. ನ್ಯಾಯಾಸ್ಥಾನದಲ್ಲಿ, ಸಿಂಹಾಸನದಂತಿರುವ ಖುರ್ಚಿಯಲ್ಲಿ ಮಂಡಿಸುವ ರಾಯರು, ಮ್ಯುನಸಿಪಾಲಿಟಿಯ ದೀಪದ ಕಟ್ಟೆಯ ಮೇಲೆ, ಹಿಂದು ಮುಂದೆ ನೋಡದೆ ಕುಳಿತುಬಿಟ್ಟರು! ಕೋರ್ಟಿನ ಆವಾರದಲ್ಲಿದ್ದ ಸಿಪಾಯಿಗಳು ಇಣುಕಿ

ರಾಯರನ್ನು ನೋಡಿ ಮತ್ತೆ ಒಳಗೆ ಹೋದರು! ರಾಯರ ಮನಸ್ಸು ವರ್ತಮಾನಕಾಲದ ಎಲ್ಲೆಯನ್ನು ಮೀರಿ—ಆದು ಭೂತಕಾಲದಲ್ಲಿ ಅಡಿ ಇಟ್ಟಿತ್ತು! ಆ ದೀಪದ ಕಂಬದ ಹತ್ತಿರವೇ ನವಯುಗದ ವಿದ್ಯು-ದ್ದೀಪದ ಕಂಬ ನಿಂತುಕೊಂಡು, ತನ್ನ ವೈಭವವನ್ನು ಮೆರೆಸುತ್ತಿತ್ತು. ರಾಯರಿಗೆ ಏನೋ ಒಂದು ವಿಧದ ನೋವಾಯಿತು. ಹಿಂದಕ್ಕೆ ಸಾಯಂಕಾಲವಾದೊಡನೆ ಒಬ್ಬ ಸಿಪಾಯಿ ಬಂದು, ಅಲ್ಲಿ ದೀಪ ಹಚ್ಚಿಟ್ಟು ಹೋಗುತ್ತಿದ್ದ. ಈಗ ಯಾರೂ ಇಲ್ಲ! ಯಾವುದೋ ಒಂದು ಶಕ್ತಿ ದೆವ್ವನಂತೆ ಒಮ್ಮೆಲೆ ಬೆಳಕು ಕೊಡುತ್ತದೆ. ರಾಯರು ಮನದಲ್ಲಿಯೇ ನುಡಿದರು: “ಇದು ಏನು ಚೆಂದ! ಹಿಂದಕ್ಕೆ ನಾನು ‘ಸಿಪಾಯಿ ಯಾವಾಗ ಬಂದಾನು; ದೀಪ ಯಾವಾಗ ಹಚ್ಚಿಯಾನು?’ ಎಂದು ಹಾದಿ ಕಾಯುತ್ತಿದ್ದೆ. ಇರಲಿ. ಅದೂ ಒಂದು ಕಾಲ, ಇದೂ ಒಂದು ಕಾಲ.” ಹೀಗೆ ರಾಯರು ಯೋಚನಾಪರರಾಗಿ ಕುಳಿತಿರುವಾಗ ಮುಬ್ಬುಗತ್ತಲಾಗಲು—ವಿದ್ಯುದ್ದೀಪಗಳು ಫಕ್ಕನೆ ಹತ್ತಿದುವು. ಆ ಹಳೆಯ ಕಂಬ ಹಾಗೆಯೇ ದೀಪವಿಲ್ಲದೆ ನಿಂತಿತ್ತು. ರಾಯರು ಎದ್ದು ಆ ದೀಪವಿಲ್ಲದ ಕಂಬಕ್ಕೆ ಭಕ್ತಿಯಿಂದ ನಮಸ್ಕರಿಸಿದರು; ಸಾವಕಾಶ-ವಾಗಿ ಮನೆಯ ಹಾದಿಯನ್ನು ಹಿಡಿದರು. ಕತ್ತಲು ಸುತ್ತಲೂ ಆವರಿಸುತ್ತಿತ್ತು. ಆದರೆ ನಿತ್ಯಜೀವನವು ಸಾಗಿಯೇ ಇತ್ತು—ಮೋಟಾರುಗಳ ‘ಭರ್’ ಎಂಬ ಶಬ್ದ—ಟಾಂಗೆಗಳ “ಗಣ ಗಣ” ಧ್ವನಿ ಕೇಳುತ್ತಲೇ ಇದ್ದುವು. ರಾಯರಿಗೆ ಆದಾವುದರ ಕಡೆಗೂ ಲಕ್ಷ್ಯವಿದ್ದಂತಿರಲಿಲ್ಲ—ಮನೆಗೆ ಬಂದು ಮಹಡಿಯನ್ನೇರಿ—ಒಂದು ವಿರಾಮಖುರ್ಚಿಯನ್ನೆಳೆದುಕೊಂಡು, ಸುಮ್ಮನೆ ಕುಳಿತುಬಿಟ್ಟರು! ಅಲ್ಲಿಯೇ ಹತ್ತಿರದ ಕೋಣೆಯಲ್ಲಿ ಶ್ಯಾಮು, ಅಂದೆಯೇ ತಂದ ಹೊಸ ಟೇಬಲ್ ಲ್ಯಾಂಪಿನ ಬಳಿ ಕುಳಿತು ಓದುತ್ತಿದ್ದ! ರಾಯರು ‘ಶ್ಯಾಮಾ’ ಎಂದು ಮಗನನ್ನು ಕೂಗಿದರು.

“ಯಾಕೆ? ಬಂದೆ. ಏನು ಬೇಕು ಕಾಕಾ?” ಎಂದು ಶ್ಯಾಮು ಹತ್ತಿರ ಬಂದು ನಿಂತುಕೊಂಡ. ರಾಯರು ಬಹು ಶಾಂತಚಿತ್ತದಿಂದ “ಆಕೆಯನ್ನು ಕರೆ” ಎಂದರು. ಶ್ಯಾಮುವಿಗೆ ತಂದೆಯ ಮುಖ ನೋಡಿ ತುಸು ವಿಚಿತ್ರವೆನಿಸಿತು. ಮಾತನಾಡದೆ ದಡ ದಡ ಮೆಟ್ಟ-ಲಗಳನ್ನಿಳಿದು ಅವನು ಹೊರಟುಹೋದ. ಅಡುಗೆಯ ಮನೆಯಲ್ಲಿ ಮೇಲ್ವಿಚಾರಣೆ ಮಾಡುತ್ತಿದ್ದ ಕಮಲಕ್ಕ ಶ್ಯಾಮು ಬಂದುದನ್ನು ನೋಡಿ “ಏನು ಶ್ಯಾಮೂ, ಅಡುಗೆಯ ಮನೆಯ ಕಡೆಗೆ ಬಂದೆ-ಯಲ್ಲಾ! ಆಹಹ....ಇನ್ನೂ ನಿನ್ನ ಮದುವೆ ದೂರವಿದೆ!” ಎಂದು ಚೇಷ್ಟೆಮಾಡಿದರು! ಶ್ಯಾಮು ತಲೆ ತಗ್ಗಿಸಿದನಾದರೂ “ಅವ್ವಾ, ಅಪ್ಪ ನಿನ್ನ ಕರೆಯುತ್ತಾನೆ” ಎಂದ. ಈ ಮಾತಿಗಂತೂ ಕಮಲಕ್ಕ ಮತ್ತಷ್ಟು ಉಬ್ಬಿ “ನೋಡೋ.......ನಾ ಹೇಳಿದ್ದು ನಿಜ! ನಿನ್ನ ಮದುವೆಯ ವಿಚಾರವೇ ಇರಬೇಕು. ಸೇನ್‌ಶನ್ ಆದ ಮ್ಯಾಲೆ.... ಹೊಸ ಮಾಡಿಕೊಟ್ಟ ಚಹಾನ...ಬಹಳ ರುಚಿ ಅಂತ!...ತಿಳೀ-ತ್ಲೋ?”....ಎಂದು ಗಹಗಹಿಸಿ ನಗಹತ್ತಿದರು. ಶ್ಯಾಮು “ಅವ್ವಾ ದಿರಲಿ.. ಅಪ್ಪ ಯಾಕೋ ಸ್ವಲ್ಪ ಗಂಭೀರ ಆಗಿ ಕುಳಿತಿದ್ದಾರೆ—ನೀ ಹೋಗು” ಎಂದು ಹೇಳಿ, ತನ್ನ ಕೋಣೆಗೆ ಜಾರಿದ.


## ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

| | |
|---|---|
| ಜೈನಧರ್ಮ | ೧೫-೦-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |
| ಹಾಲು-ಹಣ್ಣು (ಕವನ ಸಂಗ್ರಹ) | ೧-೮-೦ |
| ಶ್ರೀ. ಭುಜೇಂದ್ರ ಮಹಿಷವಾಡಿ | |
| ಮೂಲಶಿಕ್ಷಣದ ಮೌಲ್ಯಮಾಪಣ | ೦-೧೨-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |
| ಬಾಳ-ಬಂಡಿ (ಕವನ ಸಂಗ್ರಹ) | ೦-೮-೦ |
| ಶ್ರೀ. ಬಾಳ ಬಿ. ಉಪಾಧ್ಯೆ | |
| ಭರತೇಶನ ನಾಲ್ಕು ಚಿತ್ರಗಳು | ೧-೪-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |

ಅಚ್ಚಿನಲ್ಲಿ:
ಸಂಸ್ಕೃತಿಯ ಹೃದಯ
ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

**ಶಾಂತಿ ಸೇವಾಸದನ, ಸೇಡಬಾಳ**
ಪೋ.: ಸೇಡಬಾಳ (ಜಿಲ್ಲಾ ಬೆಳಗಾಂವಿ)


ಕಮಲಕ್ಕ ಸೀರೆಯ ಸೆರಗಿನಿಂದ ಕೈಯೊರಸಿಕೊಳ್ಳುತ್ತ—ಅಟ್ಟದ ಪಾವಟಿಗೆ ಏರಿ ಬಂದು “ಏನು ಪ್ರಕೃತಿ ಸರಿಯಾಗಿಲ್ಲವೆ?” ಎಂದರು.

“ಛೇ! ನನಗೇನಾಗಿದೆ?”

“ಮುಂಜಾವಿನಿಂದ ಏನೋ ಯೋಚನೆ ಮಾಡುತ್ತಿದ್ದೀರಿ!” ಎಂದು ಕಮಲಕ್ಕ ರಾಯರ ಗಂಭೀರಮುಖ ನೋಡಿ ಸಾವಕಾಶವಾಗಿ ನುಡಿದರು.

“ನೋಡು. ಮನುಷ್ಯನ ಜೀವನವೆಂದರೆ ಹೀಗಿರುತ್ತದೆ!”

“ಈಗ ನಿಮಗೇನಾಗಿದೆ? ದುಡಿತವಂತೂ ತಪ್ಪಿತು. ಮಗ ಕಲಿಯುತ್ತಿದ್ದಾನೆ....ಅವನ ಮದುವೆ ಮಾಡಿ....ಸುಖವಾಗಿ ಇರುವು-ದನ್ನು ಬಿಟ್ಟು....” ಎಂದು ಕಮಲಕ್ಕ ಅರ್ಧಕ್ಕೇ ತಡೆದು ನಿಂತರು.

“ಅರ್ಧಕ್ಕೇ ನಿಂತೆಯಲ್ಲಾ ಹೇಳು!” ಎಂದು ರಾಯರು ಕುರ್ಚಿಯ ಮೇಲೆ ನೆಟ್ಟಗೆ ಕುಳಿತುಕೊಂಡರು.

“ಇಲ್ಲದ ಯೋಚನೆ ಯಾಕೆ?” ಎಂದೆ.

“ಇಲ್ಲದ ಯೋಚನೆಯಾಕೆ....ಆಹಹ....ಇದ್ದದ್ದನ್ನೇ....ಹೇಳ-ಬೇಕಾಗಿದೆ!”

"ಏನೋ....ಎಂತೋ....ನ್ಯಾಯಾಧೀಶರ ಮಾತಿನ ಅರ್ಥ ಯಾರಿಗೆ ತಿಳಿಯಬೇಕು!"

"ನಾನು ಸುಖವಾಗಿದ್ದೇನೆ ನಿಜ; ಆದರೂ ಬಹಳ ದಿನಗಳಿಂದ ಹೇಳಬೇಕಾದ ಒಂದು ಸಂಗತಿ ನನ್ನನ್ನು ಬಹಳ ಚುಚ್ಚುತ್ತದೆ!"

"ಅಂತಹದೇನು ಚುಚ್ಚುವುದು? ಮಗ ಮಾತು ಕೇಳುವನೋ ಇಲ್ಲೋ?—ಇದೇ ಅಹುದಲ್ಲೋ?"

"ನೀನು ಹುಚ್ಚಿ....ಇರಲಿ ಶ್ಯಾಮನನ್ನು ಕರೆ....ನಿಮ್ಮಿಬ್ಬರಿಗೂ ಒಂದು ನನ್ನ ಕಥೆ ಹೇಳಬೇಕಾಗಿದೆ" ಎಂದರು. ಬಾಗಿಲ ಬಳಿ ನಿಂತ ಶ್ಯಾಮ ತಂದೆಯ ಮಾತನ್ನು ಕೇಳಿ, ಒಳಗೆ ಬಂದು ಕುರ್ಚಿಯ ಮೇಲೆ ಕುಳಿತುಕೊಂಡ.

"ಶ್ಯಾಮಾ, ನೋಡು—ನಾನು ಮೊದಲು ಬಹಳ ಬಡವ. ಸಣ್ಣವನಿರುವಾಗಲೇ ತಂದೆಯನ್ನು ಕಳೆದುಕೊಂಡೆ. ನಿನಗೆ ತೋರಿಸಬೇಕೆಂದರೆ ನಿಮ್ಮ ಅಜ್ಜನ ಫೋಟೋ ಸಹಿತ ಇಲ್ಲ! ಇರಲಿ. ನಮ್ಮ ಅಪ್ಪ ನನ್ನನ್ನು ಇದೇ ಈ ಊರಿಗೆ ಕರೆದುಕೊಂಡು ಬಂದಾಗ, ನಾನು ಹತ್ತು ವರುಷದವ; ಅನ್ನಕ್ಕಾಗಿ ಅಲೆದಾಡಬೇಕಾಗಿ ಬಂದಿತು. ತಾಯಿ ಬಹಳ ಕಷ್ಟಪಡುತ್ತಿದ್ದಳು!"

"ಇದನ್ನೆಲ್ಲ ಸ್ವಲ್ಪ ನಾವು ಅವರಿವರಿಂದ ಕೇಳಿದ್ದೇವೆ" ಎಂದು ಕಮಲಕ್ಕ ನಡುವೆ ಬಾಯಿಹಾಕಿದರು.

"ಅಹುದು, ಕೇಳಿರಬಹುದು! ನಮ್ಮ ಬಡತನ ಹೋಗಿ ಈಗ ಮೂವತ್ತು ವರ್ಷಗಳಾಗಿರಬಹುದು. ನಿಮಗೆಲ್ಲಾ ನನ್ನ ಹಿಂದಿನ ಕಷ್ಟ ಹೇಗೆ ಗೊತ್ತಾದೀತು? ಇಂದು ಕೋರ್ಟಿನಲ್ಲಿಯ ಪಾರ್ಟಿ ಮುಗಿಸಿಕೊಂಡು ಹೊರಗೆ ಬಂದಾಗ ನಾನು, ನಡುವೆ ಮೋಟಾರಿನಿಂದ ಇಳಿದೆ ತಿಳಿಯಿತೆ?"

"ಅಹುದು—ಹಾಗೇಕೆ ಮಾಡಿದಿರಿ?" ಕಮಲಕ್ಕ ಆತುರದಿಂದ ಕೇಳಿದರು.

"ಅದನ್ನೇ ಹೇಳಬೇಕಾಗಿದೆ ಕೇಳು. ಅಲ್ಲಿ ಒಂದು ಹಳೆಯ ಮ್ಯುನಸೀಪಾಲಿಟಿಯ ಕಂದೀಲು ಇದೆ.....ಆದರಲ್ಲಿ ಈಗ ದೀಪ ಹಚ್ಚುವುದಿಲ್ಲ! ಆ ದೀಪವೆಂದರೆ ನನಗೆ ಪಂಚಪ್ರಾಣ! ಅದೇ ದೀಪ ನನ್ನ ಮನೆಯ ಇಂದಿನ ದೀಪವನ್ನು ಬೆಳಗಿಸುತ್ತದೆ!" ಎಂದು ರಾಯರು ಯಾವುದೋ ಒಂದು ದಿವ್ಯಶಕ್ತಿಯ ಕಡೆಗೆ ಹೊರಳಿ ಮಾತನಾಡಿದಂತೆ ಮಾತನಾಡಿದರು! ಕಮಲಕ್ಕ ಶ್ಯಾಮ ಸುಮ್ಮನೆ ಕುಳಿತದ್ದನ್ನು ನೋಡಿ ರಾಯರು ಮತ್ತೆ "ಅಲ್ಲಿ ಈಗ ಹೊಸಕಾಲದ—ಇಲೆಕ್ಟ್ರಿಕ್ ದೀಪ ನಿಂತುಕೊಂಡಿದೆ—"

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಔಷಧ
ಜೀವನಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ [illegible] ಪೌಡರ ಉಪಯೋಗಿಸಿರಿ

"ಅಹುದು. ಮುಂದೇನು?" ಎಂದ ಶ್ಯಾಮ.

"ಶ್ಯಾಮಾ—ನಿನಗೇನು ಗೊತ್ತು—ಆ ದೀಪದ ಮಹಿಮೆ! ನೀನು ಈಗ ಸುಖಿಯಾಗಿದ್ದಿ. ಬಡತನದ ಬವಣೆ ನಿನಗಿಲ್ಲ. ದೇವರು ಎಂದೂ ಅದನ್ನು ನಿನಗೆ ತರಲೂ ಬೇಡ! ನೋಡು, ನೀನು ೫೦ ರೂಪಾಯಿ ಕೊಟ್ಟು ಸುಂದರವಾದ ಟೇಬಲ್ ಲ್ಯಾಂಪ ತಂದಿದ್ದೀ. ಅದನ್ನು ನೋಡಿ ನನಗೆ ನನ್ನ ಹಿಂದಿನ ಆ ಜೀವನ ನೆನಪಾಯಿತು, ತಿಳಿಯಿತೇ? ಆ ಮ್ಯುನಸೀಪಾಲಿಟಿಯ ದೀಪದ ಕಂಬದ ಹತ್ತಿರ ಕುಳಿತು ನಾನು ಶಾಲೆಯ ಅಭ್ಯಾಸ ಮಾಡುತ್ತಿದ್ದೆ! ಆ ದೀಪದ ಕಂಬವೇ ನನ್ನ ಬಾಳುವೆಗೆ ಬೆಳಕು ಕೊಟ್ಟದ್ದು!"

"ಕಷ್ಟಪಟ್ಟರೇನೇ ಸುಖ—ಅಂತಾರಲ್ಲಾ ಅದು ನಿಜ!" ಎಂದು ಕಮಲಕ್ಕ ತಮ್ಮ ತತ್ತ್ವಜ್ಞಾನ ಹೇಳಿದರು.

"ಅಹುದು ನೀನೆನ್ನುವದು ತುಂಬಾ ನಿಜ! ಆದರೆ ಆ ಕಷ್ಟದ ಜೀವನದಲ್ಲಿಯೋ—ಎಂತಹ ಸುಖವಿತ್ತೆಂಬುದನ್ನು ನೀನು ಹೇಗೆ ತಿಳಿದಿ? ನೋಡು ಒಮ್ಮೊಮ್ಮೆ ಸಾಯಂಕಾಲ ದೀಪ ಹಚ್ಚುವ ಸೀಪಾಯಿ ಅಲ್ಲಿಗೆ ತಡವಾಗಿ ಬರುತ್ತಿದ್ದ; ನಾನು 'ಅವನು ಬಂದಾನೇ ದೀಪ ಹಚ್ಚಿಯಾನೆ?' ಎಂದು ಕಾಯುತ್ತಿದ್ದೆ ಆ ಕಟ್ಟೆಯಮೇಲೆ!"

ಕಮಲಕ್ಕ, ಶ್ಯಾಮ ರಾಯರ ಮಾತನ್ನು ಕೇಳಿ ಮಂತ್ರಮುಗ್ಧರಾಗಿ ಕುಳಿತಿದ್ದಾಗ—ರಾಯರು ಶಾಂತಚಿತ್ತದಿಂದ ನುಡಿದರು: "ಶ್ಯಾಮಾ ನೀನು ನಮ್ಮ ಮನೆಯ ಬೆಳಕು— ಆ ಮ್ಯುನಸೀಪಾಲಿಟಿಯ ದೀಪವೇ ನನಗೆ ಈ ಬೆಳಕನ್ನು ಕೊಟ್ಟದ್ದು! ನಿನ್ನ ಬೆಳಕಿನಲ್ಲಿಯೂ ನಮ್ಮ ನಾಡಿನ ಹಲವರು; ಪ್ರಯೋಜನ ಪಡೆಯಬೇಕು!" ಎಂದರು. ಅಹುದು ಎನ್ನುವಂತೆ ಗೋಪುರದ ಗಡಿಯಾರ "ಢಣ್ ಢಣ್ ಢಣ್" ಎಂದು ಹತ್ತು ಬಾರಿಸಿತು!

# ಸುಪ್ರಭಾತವ ಬಯಸಿರಿ

ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ., ಬಿ. ಟಿ. ಗುಳೇದಗುಡ್ಡ

卐

ಏಳಿರೇಳಿರಿ ನಾಡದೇವಿಗೆ ಸುಪ್ರಭಾತವ ಬಯಸಿರಿ,
ತಾಯ ಕರುಣೆಯ ಬಲದಿ ಸಂತತ ಬಾಳ ಕಣದೊಳು ಜಯಿಸಿರಿ.

೧

ನಾಡಜನಗಳ ಪುಣ್ಯಸಂಚಯವಿಂದು ತಾನದು ಫಲಿಸಿತು,
ನಾಡಿನೇಕತೆಗಾಗಿ ಜನವದು ಎನಿತು ತಾ ಹಂಬಲಿಸಿತು!
ಎನಿತು ದಿನಗಳ ಆಶೆಯದು ತಾ ರೂಹುಗೊಳುತಿದೆ ಈ ದಿನ-
ಹೊಸತು ಕನ್ನಡ ನಾಡಿಗೋಸುಗ ಹರುಷಗೊಳುತಿದೆ ಮನಮನ!

೨

ನಾಡ ಸುತ್ತಿದ ಕಾಳ ಕತ್ತಲೆ ಇಂದು ತಾನದು ಸರಿಯಿತೆ?
ಸುಪ್ರಭಾತದ ಸುಮದ ಸಂಕುಲ ಒಯ್ಯನೊಯ್ಯನೆ ಬಿರಿಯಿತೆ?
ತೀಡುತಿದೆ ಮುಂಜಾವಿನೆಲರದು ಸುತ್ತು ನಾಡೊಳು ಅಲೆಯುತೆ,
ಉಷೆಯು ಕನ್ನಡನಾಡಿಗೊಸಗೆಯ ತರುವಳೀದಿನ ನಲಿಯುತೆ.

೩

ಹೊಸತು ಹಸೆಯದು ಸಿದ್ಧಗೊಳುತಿದೆ ನಾಡದೇವಿಯು ಇರವಿಗೆ;
ಹೊನ್ನ ನೀರನು ಚಿಮುಕಿಸೆಲ್ಲೆಡೆ ನಾಡೊಳವಳಾ ಬರವಿಗೆ
ಮೂಡು-ಪಡುವಣ-ಬಡಗು-ತೆಂಕಣ ಸುತ್ತು ದೆಸೆಯನು ಬೆಳಗುತೆ
ಮೂಡಿ ಬರುವನು ಭಾಗ್ಯಭಾಸ್ಕರ ಹರುಷದಲಿ ತಾ ಮುಳುಗುತ.

೪

ಅಂತು ಕೊನೆಗದು ನಮ್ಮದೆಂಬುವ ನಾಡು ಈ ದಿನ ಹೊಳೆಯಿತು-
ಹರಿದು ಹಂಚಿದ ನಮ್ಮ ಜನತೆಯು ದೊಡ್ಡ ಕೊರತೆಯು ಕಳೆಯಿತು;
ಒಂದೆ ಛತ್ರದ ಅಡಿಯಲೆಲ್ಲರು ನಿಲುವ ದಿನವದು ಬಂದಿತು,
ಕನ್ನಡದ ಕುಲ ಒಂದುಗೂಡುವ ದಿವ್ಯ ದಿನವೈತಂದಿತು.

೫

ನಾಡ ಬಂಧುಗಳೆಲ್ಲರಿದೆಯಿದೆ ಒಂದುಗೂಡಿದರೆನ್ನುತಿರೆ
ಪೀಡೆ ಕೊಡುತಲಿ ಗಡಿಯ ನೆಲವನು ಪರರು ಕಸಿಯಲು ಬರುವರೆ!
ಪ್ರೇಮ-ಸತ್ಯಾಹಿಂಸೆಯಿಂದಲಿ ನಡೆದ ನಾಡಿಗೆ ಈ ಗತಿ!
ಹೇಳಬೇಕೇ ನಮ್ಮ ಕನ್ನಡ ನಾಡಿಗೊದಗಿದ ಈ ಸ್ಥಿತಿ?

೬

ಇಂದು ಕನ್ನಡ ಜನಗಳೆಲ್ಲವು ಒಂದುಗೂಡುವ ಕಾಲದಿ
ಇಂದು ಮನಮನ ಬೆಸುಗೆಹೊಂದಿರೆ ಬಂಧುಭಾವದ ಜಾಲದಿ
ಅತ್ತ ಕೆಲವರನಿತ್ತ ಹಲವರ ದೂರವಿರಿಸುವುದೇನಿದು!
ಎನಿತು ದೈವವು ಕಾಡುತಿಹುದೋ ನಮ್ಮ ನಾಡನು ತಾನದು!

೭

ಬಂದಿತೋ ಹೊಸದಿನವು ಕೊನೆಗದು ಅಖಿಲ ಭಾರತದೇಶಕೆ,
ತಂದಿತೋ ಹೊಸತೊಂದು ಬಾಗಿನ ಇಂದು ಕನ್ನಡ ದೇಶಕೆ!
ನುಗ್ಗಿ ಸಾಗಲಿ ನಮ್ಮ ಜನವದು ದುಷ್ಟಶಕ್ತಿಯ ನಾಶಕೆ-
ಶಕ್ತಿ ಸಂಪದ ಬಂದುಸೇರಲಿ ನಮ್ಮ ಕನ್ನಡ ಕೋಶಕೆ.

೮

ಏಳಿ, ಬಯಸಿರಿ ಸುಪ್ರಭಾತವ ತೋರಿ ಹೃದಯದ ಪ್ರೀತಿಯ
ಇಳೆಗೆ ಸಾರಿರಿ ಕನ್ನಡದ ಆ ಸಂಸ್ಕೃತಿಯ ಹಿರಿ ನೀತಿಯ;
ಏಳಿ, ಹೇಳಿರಿ ತಾಯ ಬಳಿಗೆ ದಿವ್ಯ ಮಂಜುಳಗೀತೆಯ
ಒಂದೆ ಮನದಲಿ ಸೇವೆಗೆಯ್ಯಿರಿ ಸತತ ಕನ್ನಡ ಮಾತೆಯ.

× × × ×

ಏಳಿರೇಳಿರಿ ನಾಡದೇವಿಗೆ ಸುಪ್ರಭಾತವ ಬಯಸಿರಿ
ತಾಯ ಕರುಣೆಯ ಬಲದಿ ಸಂತತ ಬಾಳ ಕಣದಲಿ ಜಯಿಸಿರಿ.

# ಉಗಮ

(ಶ್ರೀ. ವಿನಾಯಕರ ನವ್ಯಕವನಸಂಗ್ರಹದ ವಿಮರ್ಶೆ.)

ಶ್ರೀ. ಆರ್. ಜಿ. ಕುಲಕರ್ಣಿ, (ಬೆನಕಟ್ಟಿ), ಧಾರವಾಡ

卐

'ನವ್ಯಕವನ' ಎಂಬ ಹೆಸರಿನಿಂದ ನಿರರ್ಥಕ ಶಬ್ದಜಾಲಗಳನ್ನು ಹೆಣೆಯುವ ಕವಿಗಳೂ ನಮ್ಮ ನಾಡಿನಲ್ಲಿ ಅಲ್ಲಲ್ಲಿ ಕಾಣುತ್ತಾರೆ. ಅವರು 'ನವ್ಯಕಾವ್ಯ' ಎಂಬುದರ ಬಗೆಗೆ ಜನರಲ್ಲಿ ಒಂದು ಬಗೆಯ ಜುಗುಪ್ಸೆಯನ್ನೂ ಉಂಟುಮಾಡಿದ್ದಾರೆ. 'ಉಗಮ' ದಲ್ಲಿಯ ನವ್ಯಕವನಗಳು, ಆ ಜುಗುಪ್ಸೆಯನು ಕಡಿಮೆ ಮಾಡಬಹುದು!

卐

"ಈ ವಾಗರ್ಥಪ್ರತಿಪತ್ತಿಗೆ
ನಿನ್ನ ಶಾಸ್ತ್ರದಲ್ಲಿ ಸ್ಥಾನವಿರದಿದ್ದರೆ—
ಓ! ವಿಮರ್ಶಕ!
ಆ ಶಾಸ್ತ್ರವನ್ನು ಹಿಗ್ಗಿಸು.
ಬಲವನ್ನು ವಿಸ್ತಾರಗೊಳಿಸು!"

'ಉಗಮ'ವು ಕೇವಲ ಬಿಡಿ ನವ್ಯಕವನಗಳ ಸಂಗ್ರಹವಲ್ಲ. ಅದರಲ್ಲಿ ಒಂದು ಅಖಂಡ ಸೂತ್ರಬದ್ಧತೆಯಿದೆ. ಅಲ್ಲಿಯ ಎಲ್ಲ ಕವನಗಳೂ ಒಂದೇ ದರ್ಶನದ ಹಲವು ಮುಖಗಳಾಗಿರುತ್ತವೆ. "ಒಂದು ಬಿಂದುವಿನ ಸಂಧಾನವೇ ಈ ಕಾವ್ಯ. ಬಿಂದುವೊಂದರಲಿ ಸೇರಿದೆ ಸಿಂಧು!" ಎಂದು ಕವಿಗಳು ಮುನ್ನುಡಿಯಲ್ಲಿ ಹೇಳಿದ ಮಾತು ಈ ಕವನಸಂಗ್ರಹದ ಮೂಲಭೂತ ದೃಷ್ಟಿಯಾಗಿದೆ. ಶ್ರೀ. ವಿನಾಯಕರು ಯಾವುದೇ ಸಮಸ್ಯೆಯನ್ನು ನೋಡಲಿ, ಅದನ್ನು ಅಖಂಡವಾದ ಪೂರ್ಣದೃಷ್ಟಿಯಿಂದ ನೋಡುತ್ತಾರೆ. ಅದು ಅವರ ವೈಶಿಷ್ಟ್ಯ. ಅವರ 'ಸಮಂಸವೇ ಜೀವನ' ಕಾದಂಬರಿಯಲ್ಲಿಯೂ ಇದೇ ವಿಸ್ತಾರವಾದ ಅಖಂಡದರ್ಶನ ಕಂಡುಬರುತ್ತದೆ.

ನವ್ಯಕವಿತೆಯೆಂದರೆ, 'ಕೇವಲ ನಿರಾಶೆಯ ವಿಕ್ಷ,' 'ತರ್ಕದ ಡೊಂಬರಾಟ,' 'ಸಿಗರೇಟುತುಂಡುಗಳ ರಾಶಿ' ಇತ್ಯಾದಿ ಅಸ್ತವ್ಯಸ್ತ ಚಿತ್ತವೃತ್ತಿಯ ಪ್ರತೀಕವೆಂಬ ಕಲ್ಪನೆ ಕೆಲವರಿಗಿದೆ; ಆದರೆ 'ಉಗಮ' ವನ್ನು ನೋಡಿದಾಗ, ನವ್ಯಕವಿತೆಯಲ್ಲಿ ಸೌಂದರ್ಯದ ಸರ್ವಾಂಗ ದರ್ಶನ, ಭವ್ಯ ಮಂಗಲಾನುಭೂತಿ, ಅನನ್ಯಾನುಭವ, ವಾಸ್ತವತೆಯನ್ನು ಅಲ್ಲಗಳೆಯದ ಸಂಕಲ್ಪದ ಸಂಕೇತಗಳೂ ಇರಬಲ್ಲುವೆಂಬುದು ಕಂಡುಬರುತ್ತದೆ.

ಕನ್ನಡನಾಡಿನ ಗಂಗೆಯಾದ ಕೃಷ್ಣೆಯ ಉಗಮವೇ ಈ ಕವನಗಳ ಸ್ಫೂರ್ತಿಯ ನೆಲೆಯಾಗಿದೆ. ಮಹಾಬಳೇಶ್ವರದ ಉತ್ತುಂಗ ಶಿಖರದಲ್ಲಿ ನಿಂತು, ಸಹ್ಯಾದ್ರಿಯ 'ಅನಂತಸಾಗರ' ವನ್ನು ನಿಟ್ಟಿಸುವಾಗ, ಗಿರಿಕಂದರಗಳ ಮೌನಗುಂಭದ ನಿಗೂಢಸೌಂದರ್ಯ, ಭಯಾನಕ ನೀರವತೆಗಳು ಒಂದೆಡೆ ಕಂಡರೆ, ಇನ್ನೊಂದೆಡೆಗೆ ಆ ಜಡದ ಗರ್ಭದಿಂ ಸೋಗೆದು ಬಂದ ಮಾನವನ ಜೀವನದ ಹೋರಾಟ ಕಾಣುತ್ತದೆ. ಇವೆರಡರ ಮಧ್ಯದಲ್ಲಿ "ಉಗಮದ ಪುಣ್ಯೋದಕವು" 'ಒಡ್ಡಿದ ಕೈಗೊಂದು ಬೊಗಸೆಯಂತೆ' ಅಕ್ಷಯನಿಧಿಯಾಗಿ ಹೊರಚಿಮ್ಮುತ್ತಿದೆ.

"ಆ ನೀರಿಗೆ ಅಮೃತದ ರುಚಿಯಿತ್ತು.
ಕಾಲನ ಅಂಕಿತದಲ್ಲಿದ್ದರೂ
ಕಾಲಾತೀತ ಅನಂತದ ಸ್ಪರ್ಶವಿತ್ತು ಅದರಲ್ಲಿ"

'ಉಗಮ'ದಲ್ಲಿಯ ಕವನಗಳು ಈ ಮೂರು ಮುಖದ ದರ್ಶನದ ಪ್ರತಿಬಿಂಬಗಳಾಗಿ ಬಂದಿವೆ: 'ವಿಹಂಗಮ ನೋಟ' 'ನೂತನ ಪುರಾಣ' "ಅರ್ಥರ್ ಆಸನ" ಕವನಗಳಲ್ಲಿ ಸಹ್ಯಾದ್ರಿಯ ರಮ್ಯಾದ್ಭುತ ಸೌಂದರ್ಯವು ರಂಗುರಂಗಾಗಿ ಮೂಡಿನಿಂತಿದೆ. ಈ ಚೆಲುವಿನ "ವಿಹಂಗಮ ನೋಟ"ದಲ್ಲಿ ಮಾತು ಮಿಂಚಾಗಿ, ಚೆಲುವಿನೊಳಗಿರುವ ಸತ್ಯ ಹಾಗು ಮಂಗಲತೆಗಳನ್ನು ಕಾಣುವ ದೃಷ್ಟಿ ಮೂಡುತ್ತದೆ. ತುಂಗೋತ್ತುಂಗವಾಗಿ, ಅಂತಸ್ತುಗಳ ಮೇಲಂತಸ್ತುಗಳಾಗಿ, "ಹಸುರಿನ ಮೇಲೆ ಹಸುರು,—ಕುಸುರಿನ ಮೇಲೆ ಕುಸುರು" ಗಳಿಂದ ಕಣ್ಮನಗಳ ಸೆಳೆವ ಗಿರಿಶೃಂಗಗಳು ಕಾಣುತ್ತವೆ. ಬ್ರಹ್ಮಾರಣ್ಯದ ನೀರವತೆಯಲ್ಲಿ ಸುಳಿಸುಳಿಯಾಗಿ ಸುತ್ತಿ, ಝುರಿಯಾಗಿ ಹರಿದು, ತೊರೆಯಾಗಿ ಮೊರೆದು, ಧಡಗುಟ್ಟಿ ಹರಿವ ಪ್ರವಾಹದ ಏಕಾಂತ ಸಂಭ್ರಮವಿದೆ. ಜಿಟಿಜಿಟಿ, ಹನಿಹನಿ, ಧೋ! ಧೋ! ವರುಣವೃಷ್ಟಿಯಾಗಿ ಬಂಡೆಗಲ್ಲುಗಳನ್ನು ಕೊರೆದು ಧುಮುಕುವ ನೀರು,"

"ಬೆಟ್ಟದ ಸಂದಿಗೊಂದಿಗಳಲ್ಲಿ ಕಣ್ಣಾಮುಚ್ಚಾಟವಾಡುತ್ತ
ಕೊನೆಗೊಮ್ಮೆ ಥೂಸಿಗೊ! ಎಂದು ಬೆರೆಯುವ ನೀರು
....ತೆಂಗಿನ ಹಾಲಂತೆ ಹಿಂಜಿ ಹಿಂಜಿದ ನೀರು!"
"ಏನೆಂಥ ವೈಭವ ಏನೆಂಥ ಚೆಲುವಿನ ಸಂಭ್ರಮ!"

ಪರಿಯೊಳಗೆ ಪರಿ
ಚೆಲುವಿನೊಳಗೆ ಚೆಲುವು.
ಚೆಲುವಿನೊಳಗೆ ಧುಮುಕಿ ಸತ್ಯವನ್ನು ಕಾಣು.
ಚೆಲುವಿನೊಳಗೇಸಿ ಮಂಗಳವನ್ನರಸು.
ಏಳು ಸಿದ್ಧನಾಗು ... .... ...."

ಈ ಅದ್ಭುತಸೌಂದರ್ಯದ ಮೂಲವಿರುವುದು ಪಂಚಭೂತಗಳ ಸಂಗಮದ ಸಾಮರಸ್ಯದಲ್ಲಿ. ಅತಿಬಲ-ಮಹಾಬಲಗಳಂತೆ, ಪ್ರಕೃತಿಯ ಮಡಲಿನಿಂದ ಬರಿ ಮಣ್ಣುಮುದ್ದೆಯೇ ವಿಕಾರವಾಗಿ ಬೆಳೆದು ನಿಂತರೆ ಚೆಲುವು ಅಲ್ಲಿ ಸುಳಿಯಲಾರದು. ವಾಯು ಬಂದು ಮಣ್ಣು ತೂರಿ ವರುಣ ಬಂದು ಪೃಥ್ವಿಯ ಕಂದರಗಳನ್ನು ತುಂಬಿ, ಅದರ ಶೃಂಗಗ



ಜಯಂ

ತಲೆತಗ್ಗಿಸಿ, ಪಾರ್ಥಿವ ಕೇಂದ್ರಕ್ಕಿಳಿಯಬೇಕಾಗುತ್ತದೆ. ಬೆಂಗದಿರನ ಪ್ರಖರ ತೇಜಸ್ಸಿಗೆ ಪರ್ವತಗಳು ಸೀಳಿ; ಕೊನ್ನಾರಗಳು ಹುಟ್ಟಿಕೊಳ್ಳ-ಬೇಕು. ಆಗ ಆ "ಕಾಲನ ಕಂದರಗಳ ಬಾಳ ನೀಕ್ಶೊಟ್ಟಿಲ" ದಲ್ಲಿ ಮಾನವನುದಯವಾಗುತ್ತದೆ ಈ ಬೊಂದು ಸಾಮರಸ್ಯದ ಸಂಕೇತ. ಗಳಾಗಿ, 'ಬ್ರಹ್ಮನ ಮುತ್ತೈದೆಯರಂತೆ' ಕೃಷ್ಣಾ, ವೇಣ್ಯಾ, ಸರಸ್ವತಿ, ಕೊಯನಾ ನದಿಗಳು ಹರಿಯುತ್ತಿವೆ. ಅದೊಂದು ಅಪೌರುಷೇಯ ಪ್ರಕೃತಿ! ವಿರಾಟ್ ಸೃಷ್ಟಿಯ ಪರಮಾದ್ಭುತ ಪವಾಡ!!

ಈ ಭೀಮಕಾಂತಿಯ ಗಿರಿಕಂದರಗಳ ಏಕಾಂತಸಂಭ್ರಮದ ಅರ್ಥವೇನು? ದಿಙ್ಮೂಢಗೊಂಡ ಮನ ಪ್ರಶ್ನಿಸೇಳುತ್ತದೆ. ಅದಕ್ಕೆ ಶ್ರೀ. ವಿನಾಯಕರು "ಅರ್ಥರ್ ಆಸನ"ದಲ್ಲಿ ಉತ್ತರವೀಯುತ್ತಾರೆ:

"ಕಾಳ್ಗತ್ತಲೆಯಲ್ಲಿ, ಅಪರಿಚಿತ ಆವರಣದಲ್ಲಿ, ವಿಶ್ವದ
ವಿಪದ್ರಂಗದಲ್ಲಿ.
ಮಾನವನ ಚೈತನ್ಯವು ಮುಗಿಲೆಡೆಗೆ ಕೈಯೆತ್ತಿ,—
ಇನ್ನೂ ಬದುಕಿದ್ದೇನೆ! ತಲೆ ತಗ್ಗಿಸದೆ ನಿಂತಿದ್ದೇನೆ.
ಎಂದು ಮುಗಿಲೋಲಗಕ್ಕೆ ಸಾರುವುದು ನೋಡಾ!"

ಹೀಗೆ ಈ ಮೂರು ಕವನಗಳಲ್ಲಿ ಪ್ರಕೃತಿಸೌಂದರ್ಯದ ದರ್ಶನ ಮಾಡಿಸಿದ ಕವಿಗಳು, "ವಿಷವಾತಾವರಣ," "ಮೊಲೆಗೂಸಿನ ತಾಯಿ," "ಸಾಧಕನಿಲ್ಲದ ಸಮಾಜ," "ಪೂಜಾರಿ," "ಅಮೃತದ ಹಾಲಾಹಲ" "ಭಾರತ ರಾಷ್ಟ್ರ" ಮೊದಲಾದ ಕವನಗಳಲ್ಲಿ, ಭಾರತೀಯ ವ್ಯಕ್ತಿ, ಭಾರತೀಯ ಸಮಾಜ, ಭಾರತರಾಷ್ಟ್ರಗಳ ಸಮಕಾಲೀನ ವಿಕೃತಿಯನ್ನು ಅತ್ಯಂತ ವ್ಯಥಿತಹೃದಯದಿಂದ ಚಿತ್ರಿಸಿದ್ದಾರೆ. ಆ ಚಿತ್ರಣದಲ್ಲಿ ಕರುಳು ಹಿಂಡುವ ಸಂಕಟವಿದೆ. ಆದರೂ ಎದೆಗೆಡದೆ ಇದ್ದ ವಿಕೃತಿ-ಯನ್ನು ನಿಟ್ಟಿಸಿನೋಡಿ, ಸಾರಿಹೇಳುವ ಧೀರ ವಿಮರ್ಶಕ ದೃಷ್ಟಿಯಿದೆ. ಆ ವಿಮರ್ಶೆಯಲ್ಲಿ ಹಲವೆಡೆಗೆ ಕಟುತ್ವ ಕಂಡುಬಂದರೂ ಅದು ಆಶಾ ವಾದವುಳ್ಳ ಸಹಾನುಭೂತಿಪರ ವಿಮರ್ಶೆಯೆಂಬುದನ್ನು ನೆನಪಿಡಬೇಕು.

ವ್ಯಕ್ತಿಯನ್ನು ವಿಕೃತಗೊಳಿಸಿದ ಸಮಾಜ, ರೋಗಿಷ್ಠ ಸಮಾಜ ದಲ್ಲಿ ನಿಶ್ಚಿಂತನಾಗಿರುವ ಜಡವ್ಯಕ್ತಿಗಳಿಂದ ಕೂಡಿದ ರಾಷ್ಟ್ರಕ್ಕೆ ಭವಿತವ್ಯವುಂಟೆ? ವ್ಯಷ್ಟಿ-ಸಮಷ್ಟಿಗಳಲ್ಲಿ ಒಂದು ಸಾಮರಸ್ಯವನ್ನು ಬೆಳೆಸಿಕೊಂಡು, ಅವೆರಡರ ಆಚೆಗಿರುವ ಒಂದು ಪರಾತತ್ತ್ವದಲ್ಲಿ ಆ ಸಾಮರಸ್ಯದ ಸಾಫಲ್ಯವನ್ನು ಕಾಣುವಂತಾಗಬೇಕಾಗಿದೆ. ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೇನಾದರೂ ಇದ್ದರೆ ಈ ತ್ರಿಮುಖತತ್ತ್ವದ ಸಮನ್ವಯದಲ್ಲಿದೆ.

"ವಿಷವಾತಾವರಣ"ದಲ್ಲಿ ಸೌಂದರ್ಯದೃಷ್ಟಿಯನ್ನು ಕಳೆದು-ಕೊಂಡ ಭಾರತೀಯರ ದಾರಿದ್ರ್ಯ-ವಿಪನ್ನಾವಸ್ಥೆಯ ಚಿತ್ರಣವಿದೆ. ಸೌಂದರ್ಯದ ಗರ್ಭದಲ್ಲಿದ್ದರೂ ಸೌಂದರ್ಯವೇನೆಂದು ಅರಿಯದೆ, ಸಹ್ಯಾದ್ರಿಯ ಪರಮೋತ್ಕೃಷ್ಟ ಪರಿಸರದಲ್ಲಿದ್ದರೂ ರೋಗ-ರುಜಿನಗಳಿಗೆ ಬಲಿಯಾಗಿ, ಅದೊಂದು ಅಸಹಾಯ ಸ್ಥಿತಿಯಲ್ಲಿ ನರಪ್ರಾಣಿಯು ಒದ್ದಾಡುತ್ತಿದೆ. ಮಹಾಬಲೇಶ್ವರದಂತಹ ಪುಣ್ಯಭೂಮಿ ಯಾತ್ರಿಕರ ರಮ್ಯಸ್ಥಳವಾಗಿರಬಹುದು; ಆದರೆ ಅಲ್ಲಿಯ ಜನರಿಗೆ ಅದೊಂದು ನರಕಕುಂಡಕ್ಕಿಂತ ಬೇರೆ ಏನೂ ಅಲ್ಲ.

"ಎಲ್ಲ ಬೇನೆಗಳೂ ಬಂದು ಛಾವಣಿ ಹೂಡಿದಿವೆ.
ಕ್ಷಯವು ಅಕ್ಷಯವಾಗಿದೆ—!"

ಇಂತಹ ಸ್ಥಿತಿಯಲ್ಲಿ ಮನುಷ್ಯನಲ್ಲಿಯಾದರೂ ಹುಸು ಮಾನವತೆ ಯುಳಿದಿದೆಯೆನ್ನಬೇಕೆ? ಗೌಡನೊಬ್ಬ ತೋಳನಂತಾಗಿದ್ದಾನೆ. ಬಂದ ಯಾತ್ರಿಕರು ಅಲ್ಲಿಯ ದರಿದ್ರಜನಜಂಗುಳಿಗೆ "ಒಂದು ಕಾಸು ಕೊಟ್ಟು ಯಾಚನೆಯನ್ನು ಮುಂದುವರಿಸುವ ರಾಕ್ಷಸಗಣವಾಗಿದೆ."

"ಶೂನ್ಯದೃಷ್ಟಿಯನ್ನು ಮುಗಿಲೆಡೆಗೆತ್ತಲಾಗಿ
ಮುನ್ನೂರಿಂಚು ಮಳೆಬಿದ್ದು ಮೈಯೊಳಗಿಂದ ಹುಲ್ಲು ಬೆಳೆ-
ಯುವುದು!
ನೆಲದೆಡೆಗೆ ತಿರುಗಿಸಲಾಗಿ ಹೊಲದ ಹೊಳವೇ ಕಾಣದು.
ಏನನ್ನು ಬೆಳೆಯುವುದು? ಏನನ್ನು ತಿನ್ನುವುದು?
ಆ ಥಂಡಿಗೆ ನಡುಗಿ, ಆ ಮಳೆಗೆ ಮುದುಡಿಕೊಂಡು
ದಾರಿಯಿದ್ದೂ ಕಾಣದಾಗಿ, ಅರಣ್ಯದಲ್ಲಿ ಜೀರುಂಡಿಯಂತೆ
ಕುಳಿತು
ಮಾನವನು ಯಮದೇವನ ಬರುವಿಗಾಗಿ ಕಾದಿದ್ದಾನೆ
ಕಾಣಿರೋ ...
ವಿಮೋಚನೆ, ವಿಮೋಚನೆಯೆಂದು!"

ಸೌಂದರ್ಯದ ನೆಲೆವೀಡಿನಲ್ಲಿ ಏನೆಂತಹ ದುರ್ದಶೆ! ಪಾವನ-ಕೃಷ್ಣೆಯ ಉಗಮಸ್ಥಾನದಲ್ಲಿ ಏನಿದು ಅನಾಹುತ! ಸಮಾಜದಲ್ಲಿ ಸ್ವಾಸ್ಥ್ಯವಿರದನಕ ಸೌಂದರ್ಯದ ಲೀಲಾವಿಲಾಸಕ್ಕೆ ಅವಕಾಶವೆಲ್ಲಿಂದ ಬಂದೀತು! ವ್ಯಕ್ತಿಯಲ್ಲಿ ಶಾಂತಿಯಿರದನಕ ಸೌಂದರ್ಯದೃಷ್ಟಿ ಹೇಗೆ ಅರಳೀತು, ಭಾರತೀಯ ಪರಮೋಚ್ಚ ಸಂಸ್ಕೃತಿಯಲ್ಲಿ ಬೆಳೆದ ಎಳೆಯ ಮಕ್ಕಳಿಂದು ಬಡತನದ ಬಳ್ಳಿಗೆ ಬಿಟ್ಟ ಹೂಗಳಂತಾಗಿದ್ದಾರೆ!

"ಕಪ್ಪಿಟ್ಟ ಮೊಗ, ಒಳಸಿಕ್ಕ ಕಣ್ಣುಗಳು, ಜೀವಿತದಾಶೆಯನ್ನು
ಎಂದೋ ಬಿಟ್ಟ ಜೀವ, ಜೀವನ್ಮೃತ ದೃಷ್ಟಿ, ಹೆಣವಿಡುವ
ಹೆಜ್ಜೆ!
ಓ ಮಗು! ಓ ಅಪಾರ ಕರುಣೆಯ ಕಣಿಯೇ!
ಏನಿದು ವಿಪರೀತ? ಇದಾವ ವಜ್ರಾಘಾತ?
ಸಚ್ಚಿದಾನಂದಕ್ಕೆ ಇದಕ್ಕೂ ಹೆಚ್ಚಿನ ಸೋಲಿಹುದೆ?
ಪರಾಪ್ರಕೃತಿಗೆ ಇದಕ್ಕಿಂತ ಘೋರತರ ವಿಕೃತಿಯೆ?"

ಇದು ಹಸುಗೂಸುಗಳ ಘೋರವಿಕೃತಿಯಾದರೆ, ಹಿರಿಯರ ಗತಿ-ಯೇನು? ಅಲ್ಲಿ ನೋಡಿ ಪೂಜಾರಿ! ಪವಾಡಗಳ ಪುಟಬಡಿದು, ನೂರೆಂಟು ಕೈಗಂಟಿನ ಕತೆಹೇಳಿ, ಯಾತ್ರಿಕರನ್ನು ಸುಲಿಯುತ್ತಿದ್ದಾನೆ! "ಪುರಾತನಕಾಲದ ಪುರಾಣ ಹೇಳಿ, ತಂಡುಲಕ್ಕೆ ದಾರಿ ಮಾಡಿಕೊಂಡ!" ಚೆಲುವಿನ ನೆಲೆಯನ್ನು ಕಾಣಲು ಪಾವನಕ್ಷೇತ್ರಕ್ಕೆ ಬಂದರೆ, ಹೊಲೆಯ-ತನದ ಸಾಕಾರಮೂರ್ತಿಯಂತಿದ್ದ ಪೂಜಾರಿ ಎದುರಿಗೆ ಬರುತ್ತಾನೆ. ಕೊಳೆತ ಮೈ! ಕೊಳಕು ಬಟ್ಟೆ! ಆತನ ಅಡುಗೆಯೊ! ಓಕರಿಕೆ ಬರುವಂತಹುದು! ಈತ ಧಾರ್ಮಿಕ! ಆದರೆ ಅಲ್ಲಿ ಹೋಟಲಿನ ಬಟ್ಲರನಿದ್ದಾನೆ, ಶುಭ್ರ ಬಟ್ಟೆಯ ಘನವ್ಯಕ್ತಿ! ಥಳ ಥಳ ಅಡುಗೆ ಆತನದು! ಯಾರು ಹೆಚ್ಚು?

ವ್ಯಕ್ತಿಯ ವಿಕೃತಿ ಈ ಪರಿಯಾದರೆ ನಮ್ಮ ರಾಷ್ಟ್ರದ ಗತಿಯೇನು? ಸತ್ಯವನ್ನರಸುವ ವ್ಯಕ್ತಿ ಗುಹೆ ಸೇರುತ್ತಾನೆ. ಅನ್ನಕ್ಕಾಗಿ ಹೊರಗೆ ಬಂದಾಗ, ತನ್ನ ದರ್ಶನವನ್ನು ಮಾರಾಟಕ್ಕಿಡುವ ದುಃಸ್ಥಿತಿ ಬಂದಿದೆ. "ಅನಃಭಾವಿಯಾಗ ಬಯಸಿದವ ಗೈಡ್ ಆಗಿ ಬದುಕಬೇಕು!'' ಇದು ಯಾರ ತಪ್ಪು? ವ್ಯಕ್ತಿ ಸ್ವಾರ್ಥಿಯಾಗಿದ್ದಾನೆ. ಸಮಾಜವು "ಬಳಸಂಚಿಗರ ಕಾರಸ್ಥಾನದ ಕಮ್ಮಟವಾಗಿ—ಅಸಹಾಯಿತರ ಸ್ಮಶಾನವಾಗಿ'' ನಿಂತಿದೆ. ಸತ್ಯ, ಸೌಂದರ್ಯ, ಕಲ್ಯಾಣಗಳನ್ನು ಮೂಲೆಗುಂಪಾಗಿಸಿದೆ. ಇಂತಹ "ಸಾಧಕನಿಲ್ಲದ ಸಮಾಜ"ದಿಂದ ರಾಷ್ಟ್ರದ ಉನ್ನತಿಯನ್ನು ಆಶಿಸಬಹುದೆ? ಸಮತೆಯ ಸಮಾಧಿ ಕಟ್ಟಿ, ಸಂಘ–ಸಂಸ್ಥೆಗಳ ಸಂಘರ್ಷಣೆಯ ತವರಾಗಿ, ಜಾತಿ–ಜಾತಿಗಳ ಕೋಳಿಯಾಟದ ನಾಟ್ಯರಂಗವಾಗಿ, ಸಮಾಜವೊಂದು ಮಹಾರೋಗಿಯಂತೆ ಬಿದ್ದುಕೊಂಡಿದೆ! ಆ ವಾದ! ಈ ವಾದ! ನೂರೆಂಟು ವಾದಗಳಲ್ಲಿ "ಸಂವಾದವೇ ಸಂಪುಷ್ಟಕ್ಕಿಳಿದಿದೆ. ಕಾಲಕೂಟ ವಿಷದಂತಿ ನೂರಾರ ಕೂಟಗಳು ನಮ್ಮ ಜೀವನದಲ್ಲಿ ಬೆರೆತಿವೆ!"

"ಒಂದೊಕ್ಕಲಿದ್ದಲ್ಲಿ ಎಂಟೊಕ್ಕಲು ಬಾಳುವೆ ಹೂಡಿ,
ಬೆರೆಯದಂತೆ ಸಿಡಿದೇನು ಸಾಧಿಸಲಿರುವೆವೊ ತಿಳಿಯದು!
........ ಮದ್ದಿಂದು ಸಿಡಿವುದ್ದಾಗಿ, ಅಮೃತವೇ ಹಾಲಾಹಲವಾಗಿದೆ."

ನಮ್ಮ ಭಾರತ ರಾಷ್ಟ್ರ ಇಂದು ಅದೆಂತಹ ಸ್ಫೋಟಕ ಸ್ಥಿತಿಯಲ್ಲಿದೆ!

"ಸ್ವಾತಂತ್ರ್ಯದ ಅಮೃತಸಮಯದಲ್ಲಿ ಇದಾವ ವಿಷ ಬೆರೆತಿತು?
ಯಾವ ಅಶ್ವಿನಿ ನಿನ್ನನುಪಚರಿಸಬಲ್ಲ?—"

ಪಂಚತಂತ್ರದ ಪ್ರಾಣಿಗಳ ಹಿಂಡಿನಂತಾದ ಜನಜಂಗುಳಿ ಕೂಡಿದರೆ ರಾಷ್ಟ್ರವಾದೀತೆ? "ಹಳ್ಳಿಗರ ಅಜ್ಞಾನತೈಲದಲ್ಲಿ ತಮ್ಮ ಗುಳ್ಳೋರಿಗೆಗಳನ್ನು ಕರಿಯುವ" ಗೌಡ-ಶಾನಭೋಗರಂಥ ಕುಟಿಲ ಜನ! ಬಡವನ ಒಡಲಿಗೆ ಬೆಂಕಿಯಿಕ್ಕುವ ಕಳ್ಳವ್ಯಾಪಾರಿ! ಅಧಿಕಾರಮದದಿಂದ ಉನ್ಮತ್ತರಾದ–ಮಹಿಷಾಸುರನಂಥ ಅಧಿಕಾರಿಗಳು! ತ್ಯಾಗದ ಸೋಗು ಹಾಕಿದ ದೇಶಭಕ್ತ! ಸ್ವಾಭಿಮಾನಶೂನ್ಯನಾಗಿ, ವಿಲಾಯತಿಯ ವ್ಯಾಮೋಹಕ್ಕೆ ಬಲಿಯಾದ ಮಾನ್ಯ ಸುಶಿಕ್ಷಿತರು! ವೈಗಳ್ಳರ ನೆಲೆವೀಡಾಗಿದೆ ನಾಡು!

"ಇಶ್ ಸಿ! ಥೂ! ಕಲ್ಪಿಸಲು ಕೂಡ ಅಸಹ್ಯ!"

ಇಂಥ ಸ್ಥಿತಿಯನ್ನು ಕಂಡು ತಾಯಿ ಭಾರತಿಯ ಗತಿಯೇನಾಗಿರಬೇಕು! ಅಲ್ಲಿ ದೇವಾಲಯದೆದುರು ಕಾಸಿಗೆಂದು ಕೈಯೊಡ್ಡಿ ಆ ತಾಯಿ ಕುಳಿತಿದ್ದಾಳೆ. ಸ್ತ್ರೀಜೀವನದ ವಿಕಾರ ದುರವಸ್ಥೆಯನ್ನು ಶ್ರೀ. ವಿನಾಯಕರು "ಮೊಲೆಗೂಸಿನ ತಾಯಿ'' ಎಂಬ ಕವನದಲ್ಲಿ ಇಡಿ ಭಾರತದ ಸ್ತ್ರೀಸಮುದಾಯದ ದಾರುಣಸ್ಥಿತಿಯನ್ನು ಸಾಂಕೇತಿಕವಾಗಿ ಚಿತ್ರಿಸಿದ್ದಾರೆ.

ಯಾರದೋ ಹೊಲಶೃಂಗಾರಕ್ಕೆ ಬಲಿಯಾಗಿ ಕ್ಷಯರೋಗದ ತವರಾದ ತನ್ನೊಡಲಿನ ರುಜಿನದಗ್ಧ ರಕ್ತದಿಂದೊಂದು ಕೂಳಕು ಕೂಸಿಗೆ ಜನ್ಮವಿತ್ತಿದ್ದಾಳೆ. ಅದು ಅವಳ ಮೊಲೆ ತಿನ್ನುವಾಗ "ಉರಿನಾಲಗೆಯಿಂದ ನೆಕ್ಕಿದಾಗ ಹಾಲೆಲ್ಲಿಂದ ಬರಬೇಕು?'' ಎಂದು ಕವಿಗಳು ಭೀಕರವಾದ ಚಿತ್ರವನ್ನು ಕಣ್ಣಮುಂದೆ ತಂದಿಡುತ್ತಾರೆ.

"ಸ್ತ್ರೀ ಜಾತಿಯ ಗತಿ ಇಲ್ಲಿಗೆ ಬಂತೆ?
ಮಹಾಮಾತೆ ಭಿಕಾರಿಯಾದಳೆ?''

ಮಾನವಜೀವನದ ಈ ಅದ್ಭುತ ಅಧಃಪತನದ ಸಮ್ಮುಖದಲ್ಲಿ ನಿಂತರೂ ಧೃತಿಗೆಡದೆ, ಅವನ ಅಂತಃಸತ್ತ್ವದ ಪ್ರಕಾಶವನ್ನು ಕವಿಗಳ ಕಂಡಿದ್ದಾರೆ "ಯುವಕ" ಕವನದಲ್ಲಿ ನಗರಜೀವನದ ಬಗೆಗೆ ಭ್ರಮನಿರಸನವಾಗಿ, ಸರಳ ಸುಂದರ ಸಹಜ ಜೀವನಕ್ಕೆ ಮರಳಿದ ಓರ್ವ ಯುವಕನ ತಿಳಿಬೆಳಕಿನ ಬಾಳನ್ನು ಚಿತ್ರಿಸಿದ್ದಾರೆ. ಮುಂಬಯಿಯ ಉದರಗೋದರದಿಂದ ಪಾರಾಗಿ, ಅಲ್ಲಿಯ ಅಡಕಿಲ-ಗಡಿಗೆಯಂತಹ ಸಂಸಾರಗಳಿಗೆ ಹೇಸಿ, ಹಳ್ಳಿಯ ಪ್ರಶಾಂತ ವಾತಾವರಣದಲ್ಲಿ ಸಂಸ್ಕೃತಿಯ ದೀಪವನ್ನು ಆ ಯುವಕ ಬೆಳಗುತ್ತಿದ್ದಾನೆ. "ಶಿವರಾಯ"ನಲ್ಲಿ ಸಹ್ಯಗಿರಿಯ ರಾಜಸಂಸ್ಕೃತಿ, ಶಿವರಾಯನಿಗೆ ಆಸರೆಯಾಗಿ ನಿಂತು ಭಾರತವನ್ನು ಸಂರಕ್ಷಿಸಿದ ಭೂತಕಾಲದ ದರ್ಶನವಿದೆ. ಅರಣ್ಯದಲ್ಲಿ ಸಿಕ್ಕ ಅಫಜುಲರು ಅಲ್ಲಿಯೇ ಅದೃಶ್ಯರಾಗಿ ಗುಡ್ಡಗುಡ್ಡದ ಸಂಜುಗಳು ಅಂಗಣಕ್ಕೆ ಅಗ್ನಿಸಂಸ್ಕಾರವಾಗಿ ಭಾರತೀಯರ ಜಾಗೃತಿಯ ಸಂಕೇತವಾಗಿ ಈ ಕವನ ರೂಪಗೊಂಡಿದೆ. "ಯುಗಾಂತರ'' "ಉಗಮದ ನಿಗಮಾಗಮ" ಎಂಬ ಕವನಗಳಲ್ಲಿ ಜೀವನದ ಪರಮಾಗಮದ, ಅದರ ಮೂಲರಹಸ್ಯದ ಪ್ರಕಾಶಕೇಂದ್ರಗಳ ಮಂಗಲದರ್ಶನವಿದೆ. ನಮ್ಮ ನಾಡಿನಲ್ಲಿ ಯುಗಾಂತರವಾಗಿದೆ. ಮೊದಲಿನ ದಾರಿದ್ರ್ಯ, ಪಾರತಂತ್ರ್ಯಗಳು ಪಡುವಣದ ಸಾಮ್ರಾಜ್ಯಸ್ಥಾಪನೆಗೆ ಅವಕಾಶವಿತ್ತರೂ ಅದು ಕೊನೆಗೊಮ್ಮೆ ಕುಪ್ಪಳಿಸಿ ನವಭಾರತ ನಿರ್ಮಾಣವಾಗಿದೆ. ಮಹಾಬಳೇಶ್ವರದ ಪ್ರಶಾಂತ ಗಿರಿಶೃಂಗಗಳಲ್ಲಿ ಇಂದು ಐರೋಪ್ಯರ ವಿಲಾಸ ಮರೆಯಾಗಿ, ಭಾರತೀಯರ ಸಾಂಸ್ಕೃತಿಕ ಸಮ್ಮೇಲನಗಳು ನೆರೆಯುತ್ತಿವೆ. ಈ ಯುಗಾಂತರದಲ್ಲಿ ಭಾರತದ ಅಂತಸ್ಸತ್ತ್ವದ ಪ್ರಕಾಶವು ಅಭಿವ್ಯಕ್ತವಾಗದಿದ್ದೀತೆ? ಅದು ಸಾಧ್ಯವಿದೆ!—ಈ ಎಲ್ಲ ಸ್ಥಿತ್ಯಂತರಗಳ ಮೂಲದಲ್ಲಿ ಅನಂತದ ಮುಖವಾಗಿ ನಿಂತ ಉಗಮವನ್ನು ಅರಿಯಬೇಕು. ಆಗ ಮಾತ್ರ ಭಾರತದ ಸಂಸ್ಕೃತಿಗೊಂದು ಭದ್ರ ತಳಹದಿ ಸಿಕ್ಕೀತು. ಭಾರತೀಯ ಜೀವನವಾಗಲಿ, ವಿಶ್ವಜೀವನವಾಗಲಿ, ಪಾವನಕೃಷ್ಣೆಯಂತೆ ಅನಂತದ ಗರ್ಭದಿಂದೊಗೆದು ಬಂದಿದೆ. ಕೃಷ್ಣೆ ಅಮೃತ ತರಂಗಿಣಿ! "ಘನನೇತ್ರ ಸಹ್ಯಾದ್ರಿಯ ಮಹಾಲಿಂಗದ ಜಡೆಯಿಂದ ಗಂಗೆಯಂತೆ" ಅವಳಿಳಿದು ಬಂದಿದ್ದಾಳೆ.

"ಅನಂತದ ಅರಸುಕರೆಬಂದು ಹೃದ್ದೇಶದಲ್ಲಿ ಅಲೆಯು-
ತ್ತಿರಲು
ಸರ್ವಾರ್ಪಣವೆಂದು ಸಂಚಿತ ಪುಣ್ಯವನ್ನೆಲ್ಲ
ಸಮುದ್ರರಾಜನಿಗರ್ಪಿಸಿ ಧಾರೆಯೆರೆದು" ಕೊಂಡಿದ್ದಾಳೆ.

ಇಲ್ಲಿ ಪರಾಪ್ರಕೃತಿಯು ಪರಮಾತ್ಮನ ನಿರ್ಗುಣಗರ್ಭದಿಂದ ಗುಣರೂಪ ತಾಳಿ, ಮಾನವನ ಮನೋವಲಯದಾಚೆಯ ಪ್ರಜ್ಞಾಪ್ರಾಂತ

ಜಯಂ

ಗಳಲ್ಲಿ ತನ್ನ ಚಿತ್ರಕಾಶರೂಪದಲ್ಲಿ ಅಭಿವ್ಯಕ್ತವಾಗುತ್ತ ದೃಶ್ಯರೂಪವನ್ನು ತಾಳಿ, ಕೊನೆಗೆ ಅನಂತನಲ್ಲಿ ಸಮರ್ಪಿತವಾಗಿ ಮುಕ್ತಳಾಗುವ ಬಗೆಯನ್ನು ಕವಿಗಳು ಸಾಂಕೇತಿಕವಾಗಿ ಹೇಳುತ್ತಾರೆ.

“ ನಿನ್ನ ನೆಲವನ್ನು ನೀನೆ ನಿರ್ಮಿಸಿಕೊಂಡು ಹರಿಯುತ್ತಿರುವ
ಬೆಳಕೆ, ವಿಶ್ವವಾಗಿ ಸಾಕ್ಷಾತ್ಕರಿಸಿರುವ ನಿನ್ನ ವಿರಾಟ್‌ರೂಪ-
ವನ್ನು ನೋಡಿ ಭಯಭಕ್ತಿಯಿಂದ ಮಣಿದು ನಿಂತಿಹೆವು;
ಆದರೆ ನಿನ್ನುಗಮವೆಲ್ಲಿ— ? ”

ಈ ‘ ಉಗಮ ’ ವನ್ನು ಕಾಣಲು ಮಾನವನು ನಾಲ್ಕು ಮುಖದಿಂದ ಪ್ರಯತ್ನಿಸುತ್ತಾನೆ. “ ನೆಲೆ ನಿಲುಕದಾಗ ” ಎಂಬ ಕವನದಲ್ಲಿ “ಭಿಕ್ಷು” “ವೀರ ” “ ಹರದ ” “ ಕಾರ್ಮಿಕ ” ಎಂಬ ನಾಲ್ಕು ವ್ಯಕ್ತಿಗಳು ಉಗಮವನ್ನು ಕಾಣಲು ಹೊರಟಿದ್ದಾರೆ. ಭಿಕ್ಷುವಿನದು ನಿಷ್ಕಾಮ ಸತ್ಯಸಂಶೋಧಕ ದೃಷ್ಟಿ. ವೀರನು ಸಾಹಸಭೀಮ:— ಹೊಸ ಸಾಹಸಕ್ಕೊಂದು ಹೊಸ ಪ್ರಪಂಚವು ಆ ಉಗಮದಲ್ಲಿ ತೆರೆಯಬಹುದೆಂದು ಆತ ಹೊರಡುತ್ತಾನೆ. ಗಿಡ-ಮೂಲಿಕೆಯನ್ನರಸಲು ಹರದನು ಸಪರನ್ನು ಕೂಡುತ್ತಾನೆ. ಕಾರ್ಮಿಕನು ಅನಸುಮಗನ ತೊಟ್ಟಿಲಕ್ಕೆ ತೀಗುಮರ ಹುಡುಕಲು ಸಾಗಿದ್ದಾನೆ. ಇವರೆಲ್ಲರೂ ಒಟ್ಟಾಗಿ ಸಾಗಿ ತನ್ನ ಗುರಿಕಾಣುತ್ತಾರೆ. ಇಲ್ಲಿ ಕವಿಗಳು ಚಾತುರ್ವರ್ಣ್ಯದ ಸಾಮರಸ್ಯದ ಆವಶ್ಯಕತೆಯನ್ನು ಈ ರೂಪಕಸೃಷ್ಟಿಯಲ್ಲಿ ಸುಂದರವಾಗಿ ರೂಪಿಸಿದ್ದಾರೆ. ಚಾತುರ್ವರ್ಣ್ಯದ ಸ್ವಚ್ಛಂದ ಸಾಮರಸ್ಯದಿಂದ ನಮ್ಮ ಸಮಾಜಕ್ಕೆ ಒಂದು ಸಂಸ್ಕೃತಿಯು ಪ್ರಾಪ್ತವಾಗುತ್ತದೆ. ಅದರಲ್ಲಿ ವ್ಯಷ್ಟಿ—ಸಮಷ್ಟಿಗಳು ಒಂದಕ್ಕೊಂದು ಪೂರಕ ಶಕ್ತಿಗಳಾಗಿ, ವ್ಯಕ್ತಿಯು ಪರಮಾರ್ಥವನ್ನು ಬಲ್ಲ ವಿವೇಕಿಯಾಗಿ, ವಿಶ್ವಕುಟುಂಬ ತೊಟ್ಟಿಲು ಹವಣಿಸಿ, ವೈರಾಗ್ಯಚಕ್ರವರ್ತಿಯಾಗಿ ಸಂಸಾರಸಾರೋದಯನಾಗಬೇಕು. ಅದರೊಡನೆ ಸಮಾಜವು:

“ ರಸಗಂಗೆಗೆ ವ್ಯೋಮಕೇಶವಾಗಿ
ಸಾಹಸಿಗರ ಮಹಾರಂಗವಾಗಿ
ಸಾಧಕರ ತಪೋವನವಾಗಿ
ಅಧಿಮಾನವನ ತೂಗುದೊಟ್ಟಿಲಾಗು — ”

ಎಂಬ ಅದ್ಭುತದರ್ಶನವನ್ನು ಕವಿಗಳು ಕಾಣುತ್ತಾರೆ.

ಇಂತಹ ಸಮಾಜದ ಕೇಂದ್ರಶಕ್ತಿಯೆಂದರೆ ಇಂದಿನ ತರುಣ. ಆತನಲ್ಲಿ ಕವಿಗಳು ಅದೊಂದು ದಿವ್ಯ ದರ್ಶನವನ್ನು ಕಂಡಿದ್ದಾರೆ.

“ ಎಲ್ಲ ಸ್ವಪ್ನದ ರಾಜಬೀಜ ನೀನು....
ಮನ್ವಂತರವು ಬರಲಿದೆ
ಈ ಯುಗದ ಧನ್ವಂತರಿಯಾಗು ! —”

ಈ ತರುಣನಲ್ಲಿ ಅನಂತದ ವಿರಾಟ್‌ಶಕ್ತಿಯು ತನ್ನ ಸಮಸ್ತ ಸೌಂದರ್ಯ-ಮಾಂಗಲ್ಯ, ಶಾಂತಿಪೂರ್ಣ, ಆನಂದಭರಿತ ಕಾಂತಿಯಿಂದೊಡಗೂಡಿ ಅಭಿವ್ಯಕ್ತವಾಗಲಿದೆ. ಅಂತೆಯೇ ಅವನಿಗೆ ಕರೆಯೀಯುತ್ತಿದ್ದಾರೆ:

“ ಪೂರ್ಣಜೀವನ ಸುಂದರಿ ಬಂದು
ಮಾಲೆ ಹಾಕಿ ಗೌರವಿಸುವಳು—
ಸ್ವಯಂವರಿಸುವಳು !
ಏಳು ! ಧನುಸ್ಸನ್ನು ಸಜ್ಜುಗೊಳಿಸು !! ”

ಇದೇನು ಸ್ವಪ್ನಸಾಮ್ರಾಜ್ಯವೆ ? ಮನ್ವಂತರದ ಕ್ರಾಂತಿದರ್ಶನವೆ ? ಬರಲಿರುವ ಜನಾಂಗ ಹೇಳಬೇಕು. ಆದರೆ ಆ ದರ್ಶನವಿಂದು ನವ್ಯ-ಕವಿತೆಯ ನವಛಂದಶ್ಶರೀರದಲ್ಲಿ ಅಭಿವ್ಯಕ್ತವಾಗಿದೆ. ಅದರ ಮಂಗಲ ಕಾಂತಿಯಲ್ಲಿ, ಉಗಮದ ನಿಗಮಾಗಮದ ರಹಸ್ಯ ತೆರೆಯುತ್ತದೆ:—

“ ನಿಮಿಷ ನಿಮಿಷಕ್ಕೂ ಉಗಮ !
ನಿಮಿಷ ನಿಮಿಷಕ್ಕೂ ಆಗಮ !
ನಿಮಿಷ-ನಿಮಿಷಕ್ಕೂ ಸಂಗಮ !
ಉಗಮದಿಂದ ಸಂಗಮದ ವರೆಗಿನ
ನಿನ್ನ ಅವಸ್ಥಾಂತರಗಳನ್ನು
ಹೇಗೆ ಅನುಭವಿಸಬಲ್ಲೆವು ?
ಓ ಪರಾಪ್ರಕೃತಿ !
ಆ ಕಣ್ಣನ್ನು ನೀಡು— ! ”

---

# ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಹಾವು' ಕತೆಯನ್ನು ವಿಮರ್ಶಿಸಿ ೩ ಜನರೂ '**ಮಾರಾಟ**' ಎಂಬ ನಗೆಯಾಟವನ್ನು ವಿಮರ್ಶಿಸಿ ಇಬ್ಬರಿಂದಲೂ ಲೇಖನಗಳು ಬಂದಿವೆ.

ಹೆಚ್ಚು ಜನರಿಂದ ವಿಮರ್ಶೆಗಳು ಬಾರದೇ ಇರುವುದಕ್ಕೆ ಕಾರಣ, ನಮ್ಮ ದೇಶದ ಉದ್ವೇಗ-ಕುತೂಹಲಕಾರಿಯಾದ ರಾಜಕೀಯ ಪರಿಸ್ಥಿತಿಯೇ—ಎಂದು ಭಾವಿಸುವಂತಿದೆ. ಪಂಡಿತ ಜವಾಹರಲಾಲರು ರಾಜ್ಯಪುನರ್ಘಟನಾ ಸಮಿತಿಯ ವರದಿಯನ್ನು ಬಹಿರಂಗಪಡಿಸುತ್ತಲೆ, ಬೆಳಗಾಂವಿ-ಮುಂಬಯಿ-ನಿಪ್ಪಾಣಿಗಳಲ್ಲಿದ್ದ ಪುಂಡಾಟಿಕೆಗಳೂ, ಬಳ್ಳಾರಿ ಪ್ರದೇಶದ ಸಂದಿಗ್ಧ ಪರಿಸ್ಥಿತಿಯೂ, ಕಾಸರಗೋಡಿನ ಕನ್ನಡಿಗರ ಹೃದಯದ ಮೇಲೆ ಬಿದ್ದ ವಜ್ರಾಘಾತವೂ ನಮ್ಮ ವಾಚಕರೆಲ್ಲರ ಚಿತ್ತಗಳನ್ನು ಚಂಚಲಗೊಳಿಸಿರಲೇ ಬೇಕು. ಪ್ರತಿದಿನದ ಪತ್ರಿಕೆಯಲ್ಲಿ ಪ್ರಕಟವಾಗಿ ಬರುತ್ತಿದ್ದ ಪ್ರಲಾಪ ವಾರ್ತೆಗಳನ್ನು ಓದುವುದು—ದಿನವಿಡೀ ಅದನ್ನೇ ಚರ್ಚಿಸುವುದು—ಈ ನೋಟ ಎಲ್ಲೆಲ್ಲಿಯೂ ಕಂಡುಬರುತ್ತಿತ್ತು. ಇಂತಹ ಸಂದರ್ಭದಲ್ಲಿ ಸಾಹಿತ್ಯವನ್ನೋದಿ ಅದನ್ನು ವಿಮರ್ಶಿಸುವ ಸಮತೂಕದ ಬುದ್ಧಿ ಯಾರಲ್ಲಿ ಉಳಿದೀತು?

## 'ಹಾವು' ಕತೆಯನ್ನು ವಿಮರ್ಶಿಸಿದವರು

೧. 'ಎಮ್ಮೆಸ್ಕೆ' ಕೆನರಾ ಕಾಲೇಜ, ಕುಮಟಾ ೨. ಶ್ರೀ. ಎಸ್. ಪಿ. ಹಿರೇಮಠ, ಡಿ. ಎ. ವಿ. ಕಾಲೇಜ, ಬನಾರಸ ೩. ಶ್ರೀ. ಸದಾಶಿವ, ಗದಗ.

## 'ಮಾರಾಟ' ನಗೆಯಾಟವನ್ನು ವಿಮರ್ಶಿಸಿದವರು

೧. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ೨. ಶ್ರೀ. ಎಸ್. ಪಿ. ಹಿರೇಮಠ, ಡಿ. ಎ. ವಿ. ಕಾಲೇಜ್, ಬನಾರಸ.

ವಿಮರ್ಶೆಗಳನ್ನೆಲ್ಲ ನಮ್ಮ ಸಂಪಾದಕ ಸಮಿತಿಯವರೇ ನೋಡಿ ನಿರ್ಣಯವನ್ನು ಕೊಟ್ಟಿದ್ದಾರೆ.

'ಹಾವು' ಕತೆಯ ವಿಮರ್ಶೆಗಳು ಸಾಮಾನ್ಯವಾಗಿವೆ. ಬಂದ ಮೂರು ಲೇಖನಗಳಲ್ಲಿ '**ಎಮ್ಮೆಸ್ಕೆ**' ಅವರ ಲೇಖನ ಚೆನ್ನಾಗಿದೆ.

'ಮಾರಾಟ' ನಗೆಯಾಟವನ್ನು ವಿಮರ್ಶಿಸಿದ ಇಬ್ಬರಲ್ಲಿ ಶ್ರೀ. ಕೆ. ಎಸ್. ಶರ್ಮಾ ಅವರ ಲೇಖನ ತುಂಬ ಚೆನ್ನಾಗಿದೆ. ಮತ್ತೊಂದು ತಕ್ಕಮಟ್ಟಿಗಿದೆ.

ಬರೀ ಕಥೆಯ ಸಾರಾಂಶವನ್ನು ಬರೆಯುವುದೆಂದರೆ ವಿಮರ್ಶೆಯೆನಿಸದು. ಅದರ ಗುಣಾವಗುಣಗಳನ್ನು ತೂಗಿ ನೋಡಿ, ಯುಕ್ತವಾದ ಮಾತಿನಲ್ಲಿ ಹೇಳುವುದು ವಿಮರ್ಶೆಯೆನಿಸಿಕೊಳ್ಳುವುದು.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ '**ಅಶೋಕ ಚಕ್ರ**' ಎಂಬ ಗೀತರೂಪಕವನ್ನಾಗಲಿ, '**ಇದೊಂದು ಕತೆ**' ಎಂಬ ಕತೆಯನ್ನಾಗಲಿ ವಿಮರ್ಶಿಸಿ ಕಳುಹಬೇಕು. ವಿಮರ್ಶೆ ಮಾಡಲು ಬೇಕಾಗುವಂತಹ ಶಾಂತ ಪರಿಸ್ಥಿತಿಯು ನಮ್ಮ ನಾಡಿನಲ್ಲಿ ತಲೆಯೆತ್ತಿಸಿಲ್ಲಲೆಂದು ನಮ್ಮ ಹಾರೈಕೆ.

**—ಸಂಪಾದಕರು**

# ‘ ಮಾರಾಟ ’

## ( ನಗೆಯಾಟದ ವಿಮರ್ಶೆ )

ಶ್ರೀ. ಕೆ. ಎಸ್. ಶರ್ಮಾ ವಾಣೀಮಂದಿರಂ, ಕಾಸರಗೋಡು

卐

ಜೀವನವಿಕಾಸಕ್ಕೆ, ವೈವಿಧ್ಯಕ್ಕೆ ರಸ-ಭಾವಗಳ ಪ್ರಚೋದನೆಯು ನೆರವಾಗುವುದೆಂದಾದರೆ, ಅಲ್ಲಿ ನಗೆಯ ಶಕ್ತಿಯು ಪ್ರಭಾವಾನ್ವಿತವಾದುದೆಂಬುದು ಅನುಭವೈಕವೇದ್ಯವಾಗಿದೆ. ಅರ್ಥಾತ್ ಎಂತಹ ಸತ್ವವನ್ನೂ ಸಮಸ್ಯೆಯನ್ನೂ ಒಳಹೊಕ್ಕು ವಿಮರ್ಶಿಸಿ ತೋರುವುದರಲ್ಲಿ, ಕೋರಿಕೆಯ ಮೃದು-ಮಧುರ ಗತಿಯಲ್ಲಿ ನಗೆಯು ಅತಿಶಯವಾದ ಸ್ಥಾನವನ್ನು ಹೊಂದಿದೆಯೆನ್ನಬೇಕು. ನಗೆಯು ಜೀವನದ ಪೂರ್ಣತೆಗೆ ನೆರವಾಗುವ ಒಂದು ವಿಶಿಷ್ಟವಸ್ತುವೆಂದಾದರೆ–ಅದನ್ನು ನುಡಿಗಳಲ್ಲಿ ಹೊಸೆಯುವಾಗ ಲೇಖಕನು ತನ್ನ ಪೂರ್ಣಶಕ್ತಿಯನ್ನು–ಮಧುರರಚನೆಯಿಂದ — ತೋರಗೊಡುತ್ತಾನೆ. ತುಂಬುನಗೆಯ ಮನೋವೃತ್ತಿಯೇ–ತುಂಬುನಗೆಯ ಇತಿವೃತ್ತವನ್ನು ಮಧುರವಚನ ನಿಚಯದಲ್ಲಿ ತೋರಗೊಡುವುದು. ಒಂದೆಡೆಯಲ್ಲೂ ಕುಸಿಯದೆ— ನಗೆಯ ಝರಿ ಮೆರೆದಾಡಬೇಕಾದರೆ ಲೇಖಕನು ಬಹು ಜಾಗರೂಕನಿರಬೇಕು; ರಸಿಕನಿರಬೇಕು; ಸ್ವತಃ ನಗೆಗಾರನಿರಬೇಕು. “ ನಗೆಯು ನಗೆಯನ್ನೆಬ್ಬಿಸುವುದು—ಅಳು ಅಳುವನ್ನೇ ಬಿಂಬಿಸುವುದು ” ಎಂಬುದಿದು ವಸ್ತುಸ್ಥಿತಿಯನ್ನು ಮೀರಿದ ವಿಚಾರವಲ್ಲ.

× × × ×

‘ ಮಾರಾಟ ’— ಇದೊಂದು ನಗೆಯಾಟ. ಲೇಖಕರು ಬ್ರಿಟಿಷ್ ಸತ್ತೆಯ ಕಾಲದಲ್ಲಿ–ಅಸಹಕಾರ ಆಂದೋಲನದ ಸಮಯದಲ್ಲಿ ನೆಲೆಗೊಂಡ ಒಂದು ಅಸಂಸ್ಕೃತ ದಲಿತವರ್ಗದ ಜೀವನವನ್ನು ಕಾಣಿಸಿದ್ದಾರೆ. ಜೀವನದ ತಾಕಲಾಟದಲ್ಲಿ— ಕುಡಿತದ ಜೀವನದಲ್ಲಿ— ನೆಲೆಗೊಂಡ ಕುಟುಂಬದ ಗತಿಯನ್ನು, ಸೊಗಸಾಗಿ ನಗೆಯ ಬುಗ್ಗೆಯಲ್ಲಿ ಬರಸೆಳೆದಿದ್ದಾರೆನ್ನಬೇಕು. ಅದ್ಭುತ ವಸ್ತುವಿನ ರೂಪರೇಷೆಗಳನ್ನು ಓರಣವಾಗಿ, ಒಪ್ಪವಾಗಿ ಸಮೆದು ಲೇಖಕರು ‘ ಮಾರಾಟ ’ ವನ್ನು ತುಂಬುನಗೆಯ ಕಡಲಲ್ಲಿ ಕೇಲಾಡಿಸಿ— ಕತೆಯ ತೀರ್ಮಾನವನ್ನು ಉಚಿತವಾದ ಉಪಸಂಹಾರದಲ್ಲಿ ಸಾಗಿಸಿ, ನಗೆಯಾಟವನ್ನು ಪೂರ್ಣವಾಗಿಸಿದ್ದಾರೆನ್ನಬೇಕು.

ಸೆರೆಗುಡುಕರಾದ ಮರ್‍ಯ್ಯಾ, ಮಾಯಾ ಇವರು ಸೆರೆಗಾಗಿ ಜೀವನಾರ್ಪಣಮಾಡಿದ ಜೀವಿಗಳು. ಒಂದು ದಿನ ಮಾಯಾನ ಮನೆಯಲ್ಲಿ ಗೆಳೆಯರಿಬ್ಬರೂ ಜತೆ ಸೇರಿ ಕುಡಿ-ಕುಡಿದು ಅಮಲೇರುವರು. ಉರುಳುತ್ತಿರುವ ನಿಮಿಷಗಳು ಅವರ ಜೀವನದಲ್ಲಿ ಹರಟೆಯನ್ನು ಮೊರೆವೇಳಿಸಿದರೆ, ಮುಂದದು ವೀರಾವೇಶದ ಹಂತಕ್ಕೇರುವುದು. ಭಾವಗತಿಗಳು ಗೊತ್ತುಗುರಿಯಿಲ್ಲದ ದಾರಿಯಲ್ಲಿ ಸಾಗಿ–ಸಾಗಿ ಸ್ವಜೀವನದ ಸುಖ-ದುಃಖಗಳ ಸಡಿದನಿಯನ್ನೆಬ್ಬಿಸುವುದು; ಮಾತ್ರವಲ್ಲ, ನೂತನವಾದ ಸಂಶೋಧನೆಯಲ್ಲಿ ಕರ್ತವ್ಯಜ್ಞಾನವನ್ನೇ ಮರೆಸುವುದು. ಮಾಯಾ–ಮರ್‍ಯ್ಯಾರು ಆಂದೋಲನದಲ್ಲಿ ಭಾಗವಹಿಸಿದ ಸ್ವದೇಶಬಾಂಧವರ ಗತಿಯನ್ನು ಟೀಕಿಸುತ್ತ, ಎಡೆಬಿಡದೆ ಕುಡಿಯಲೆಡೆಯಿತ್ತ ಆಂಗ್ಲ ಸರಕಾರವನ್ನು ಶ್ಲಾಘಿಸುತ್ತ, ಗೊತ್ತುಗುರಿಯಿಲ್ಲದೆ ಮಾತಿನ ಮಾಲೆಯನ್ನು ಹೆಣೆಯುವರು. ಸಂದರ್ಭವಶಾತ್ ಬಂದ ಹರಿಶ್ಚಂದ್ರನ ಜೀವನದಿಂದ ಬಿಕ್ಕಿ ಬಿಕ್ಕಿ ಅಳಲು ತೊಡಲು ಮಾಡಿದ ಮಾಯಾ, ತನಗೆ ಗಡಂಗದವನ ಸಾಲದಿಂದ ಬಂದಡಸಿದ ದುಃಖವನ್ನು ವಿವರಿಸಿ, ಮರ್‍ಯ್ಯಾನ ಅನುಭಾವವನ್ನು ಅನುಕೂಲವಾಗಿ ಸಂಪಾದಿಸಿ, ತನ್ನ ಹೆಂಡತಿಯನ್ನು ಮಾರಲು ಬಯಸುವನು. ಮಾರಾಟವು ಕೇವಲ ಮೊತ್ತದ ಶರ್ತವನ್ನು ಅವಲಂಬಿಸದೆ, ಅಳತೆಯ ಲೆಕ್ಕದಲ್ಲಿ ರೂಪುದೋರಿ, ಒಂದು ಹೊಸ ಅಧ್ಯಾಯವನ್ನು ತೆರೆಯುತ್ತದೆ. ಮಾಯಾನು ತನ್ನ ಹೆಂಡತಿಯನ್ನು ಪೀಪೆಯ ನೀರಲ್ಲಿ ತುಂಬಿಸಿಡುವುದೆಂದೂ, ಆಗ ಹೊರಚೆಲ್ಲಿದ ನೀರಿನ ಅಂಶವನ್ನು ಲೆಕ್ಕಹಾಕಿ ‘ ಪ್ರತಿಯೊಂದು ಮಗೀಗೆ ಹತ್ತುರೂಪಾಯಿಯ ದರವನ್ನು ’ ನಿಶ್ಚಯಿಸುವುದೆಂದೂ ದನಿಯೆತ್ತಿ, ತನ್ನ ನೂತನ ಸಂಶೋಧನೆಗೆ ಮರ್‍ಯ್ಯಾನು ಅನುಕೂಲನಾಗಿ ಬಲವಂತಾಗಿಸಿ, ಆ ಪ್ರಯತ್ನವನ್ನು ಉಪಾಯಾಂತರದಿಂದ ಹೆಂಡತಿಗೆ ಆಶೆ ತೋರಿಸಿ ಸಾಧಿಸುವನು. ಆದರೆ ಸಾಧನೆಯು ವಿಫಲತೆಗೆ ಗುರಿಯಾಯಿತು. ಮಾಯಾನ ಹೆಂಡತಿ ಕರೆವ್ವ, ತನ್ನ ಭೀಕರ ಪರಿಸ್ಥಿತಿಯನ್ನು ನೆನೆದು ಅಧೀರೆಯಾಗಿ, ತನ್ನಣ್ಣನ ಸಹಾಯದಿಂದ ಕೋರ್ಟಿನಲ್ಲಿ ದಾವೆ ಹೂಡುವಳು. ವಿಚಾರಣೆಯ ಕೊನೆಯಲ್ಲಿ ಮಾಯಾ ಮರ್‍ಯ್ಯಾರು ಕರೆವ್ವನನ್ನು ಕೊಲ್ಲಲು ಯತ್ನಿಸಲಿಲ್ಲವೆಂಬ ತಿಳಿವು ಮುಂದೆ ಬರುವುದು; ಅಂತೆಯೆ ಮಾಯಾನ ನೂತನ ಶೋಧನೆಗಾಗಿ ರಸಾವಹವಾದ ತೀರ್ಮಾನವೊಂದನ್ನಿತ್ತರೆ–ನಾಟಕವು ಮಾಯಾನಿಗೆ ಕರೆವ್ವನ ಮೇಲಿರುವ ಸೇಡಿನ-ಹಾಸ್ಯದ ತೆರೆಯಲ್ಲಿ ಪೂರ್ಣತೆಯನ್ನು ಹೊಂದುವುದು.

ನಗೆಯಾಟವಿದರಲ್ಲಿ ಕೇವಲ ಎರಡೇ ದೃಶ್ಯಗಳಿವೆ. ಒಂದನೆಯ ದೃಶ್ಯವು ಮಾಯಾ–ಮರ್‍ಯ್ಯಾರ ಕುಡಿತದ ವಿಲಾಸದಲ್ಲಿ—ವಿಲಾಸಾಯತ್ತವಾದ ಹರಟೆಯಲ್ಲಿ—ಹರಟೆಯಲ್ಲಿದ್ದ ಹೆಂಡತಿಯ ಮಾರಾಟದಲ್ಲಿ— ಮಾರಾಟದ ಬಗೆಯ ನೂತನ ಶೋಧನೆಯಲ್ಲಿ - ಶೋಧನೆಗೆ ಮೀಸಲಾದ ವಿವಿಧ ವಿಚಾರಸಂಘರ್ಷಣೆಯಲ್ಲಿ ಮುಗಿದರೆ, ಎರಡನೆಯ ದೃಶ್ಯವು ನ್ಯಾಯಾಸ್ಥಾನದ ಮುಂದೆ ನಡೆವ–ಕರೆವ್ವನ ಆತ್ಮವೃತ್ತಕಥನದಲ್ಲಿ–ವಿವಿಧಘಟನೆಗಳ ಪೂರ್ವನಿವೇದನೆಯಲ್ಲಿ–ತೀರ್ಮಾನದ ಮುಂದೆ ಕೊನೆಸಾಗುವುದು

ಕೇವಲ ಎರಡೇ ದೃಶ್ಯಗಳಾದರೂ, ನಗೆಯಾಟವಿದು ಜೀವನವನ್ನು, ತದಾಯತ್ತ ಪಾತ್ರಗಳನ್ನು ಪೂರ್ಣವಾಗಿಸಿದೆಯೆಂದರೆ ಲೇಖಕರ ಚತುರತೆಗೆ ಮೆಚ್ಚಬೇಕು. ಕಥಾನುಗುಣವಾದ ಘಟನೆಗಳನ್ನು ಹೊಂದಿಸಿಕೊಂಡು ಕಾಲಾನುಗುಣವಾದ ಸನ್ನಿವೇಶವನ್ನು ನೆಲೆಗೊಳಿಸಿ

ಅನುಗೊಳಿಸಿದ ನಗೆಯಾಟವಿದು, ಕ್ರಮಜೀವಿಗಳ—ಅಸಂಸ್ಕೃತವರ್ಗದ ಪೂರ್ಣಸ್ವರೂಪವನ್ನು ಕೊಟ್ಟಿದೆಯೆನ್ನಬೇಕು. ದೇಶಾನುಗುಣ-ವಾದ—ಪಾತ್ರಾನುಗುಣವಾದ ಭಾಷೆಯನ್ನು ರಸಾವಹವಾದ ಮಾತುಗಳಲ್ಲಿ ತುಂಬಿಕೊಂಡು ಸಾಗಿದ ಲೇಖಕರ ಸರ್ಗವಿದು—ಅಲ್ಲಲ್ಲಿ ನಗೆಯನ್ನೆಬ್ಬಿಸಿದಂತೆ, ಒಂದು ನಾವೀನ್ಯವನ್ನು ಒಳಗೊಂಡು ಬಂದಿದೆಯೆಂದು ಸ್ಪಷ್ಟವಾಗಿ ಹೇಳಬಹುದು. ಅನುವದಿಂದಲೇ ಈ ನಗೆಯಾಟ ಎಡವದೆ ಮುಂದೆ ಸಾಗಿದೆ.

ಇನು ಘಟಕಗಳು! ಅಲ್ಲಲ್ಲಿ—ಪಿರಿಕೆ-ತಿವ ಮನೋಗತಿಯು ಸಾಗುವ ನೂತನಾಕರ್ಷಣೆ. ಮೊದಲಾಗಿ ಮುಮ್ಮಾಯಿ ಪಟ್ಟಣದಲ್ಲಿ ನೆಲೆಗೊಂಡ-ನೀರಿನ ಪಟ್ಟಣ, ತಂತೀ ವಿಚಾರ ಅಗ್ಗಿನ ಗಾಡಿಗಳ ವಿಚಾರ ಇವು ಹರಿದು ಬಂದು. ಮಾಯಾ-ಮುರ್ಯ್ಯಾರ ಜೀವನದಲ್ಲಿ ಹೊಸತನವನ್ನು ಹುಟ್ಟಿಸಿ ಸಾಗುವುವು. ಈ ಸಾಗಿನ ಭರದಲ್ಲಿ ಅವ-ರಿಬ್ಬರೆತ್ತುವ ಮಾತಿನ ಕೊನೆಯು “ ಚಳವಳಿ ಮಾಡತಾರಲಾ.... ಇವರು ಬಿಡಿಸಿಗೋಬಾರದಂತ, ನಮ್ಮ ದೇಶಾನೆಲ್ಲ ತಾತೀಲೆ ಬಿಗೀ-ತಾರ ' ಎಂಬುದು ರಸಾವಹವಾಗಿದೆ. ಈ ಪ್ರವಾಹವು ಮತ್ತೊಂದೆಡೆ ಸಾಗುವುದು. ಅದುವೆ ಚಳವಳಿಗಾರರಲ್ಲಿ ಕಟ್ಟಿಟ್ಟ ಸೇಡು. ಈ ಸೇಡು ವಿಪರೀತ ಗತಿಯಲ್ಲಿ ಸಾಗುವುದು. ಈ ಘಟನೆಯಲ್ಲಿಯೂ ಸುಳಿ-ದಾಡುವ “ ಪಿಕೆಟಿಂಗ್ ಮಾಡತಾರಂತ ಪಿಕೆಟಿಂಗ್....ಕುಂತಾವಲಾ ಈಗ ಬಂದೀಖಾನ್ಯಾಗ! ಮಾಡನ್ನ ಪಿಕೆಟಿಂಗ್ ಅಲ್ಲೆ ಬೀಸೂಕಲ್ಲ ಮುಂದ..... ಹಿಡಿ ಹಿಡಿ, ಇನ್ನಕಟ ಸೆರೆ........ಅಲ್ಲೇನು ಸಿಗತೈತಿ ? ಸ್ವರಾಜ್ಯ ಅಂದ್ರೇನು ಹುಡಗಾಟಿಕೆಯೇನು ? ಅದು ಭಾಳ ಹಗರಂತ ತಿಳದಾರಿವರು ! ಅದೇನು ಬಿಳೀ ಟೊಪ್ಪಿಗೇನು....ನಾಕಾಣೆ ಕೊಟ್ರಾತು-ಅಂಗಡ್ಯಾಗ ಸಿಗತೈತಿ ಅನ್ನಾಕ ! ” ಎಂಬೀ ಮಾತುಗಳು, ಬೇಕಾದಷ್ಟು ಸೆರೆ ಕುಡಿಯಲು ಅವಕಾಶವೀಯುವ ಸರಕಾರದ ಮುಂದೆ ಭಕ್ತಿಯಿಂದ ನಿಂತ ಜನತೆ, ಕುಡಿತದ ನೆಲೆ,—ಅದನ್ನು ತಡೆವ ಮಂದಿಯ ಮುಂದಾಡುವುದು ಸ್ವಾಭಾವಿಕವಲ್ಲದೆ ಮತ್ತೇನು ? ಅವರ ನೆಲೆ ಕಾಣುವುದು ಸುಖವನ್ನು—ಸತ್ಯನ್ಯಾಯದ ನೆಲೆಯ ಹಂತವ-ನ್ನಲ್ಲ! ಈ ಘಟನೆಗನುವಾಗಿಯೆ ಮಾತಿನ ಸುಳಿಯು ಸುಳಿ-ಸುಳಿಯುತ್ತಾ, ಹರಿಶ್ಚಂದ್ರನ ಮಹಾತ್ಯಾಗದ ಮುಂದೆ ಬರುವುದು. ಈ ತ್ಯಾಗ-ಧರ್ಮವು ಕುಡಿತದ ಮುಂದೆ ನಗೆಯಾಗಿ ಸುಳಿದರೂ, ಕುಡಿದಮಲೇರಿದ ಮಾಯಾನ ಹೃದಯವನ್ನು ನೊರೆದೆಬ್ಬಿಸಿ ಕಣ್ಣೀರಿಳಿಸುವಂತೆ ಮಾಡುವುದು. ಹರಿಶ್ಚಂದ್ರನ ತ್ಯಾಗವು—ಮಾಯಾನನ್ನು ಗಡಂಗದ ಸಾಲವನ್ನು ಸಂದಾಯ ಮಾಡಲು—ಹೆಂಡತಿಯನ್ನು ಮಾರುವಂತೆ ಪ್ರೇರಿಸುವುದು. ಮಾಯಾನು ತನ್ನ ಮಗ ಇಲ್ಲವೆ ಹೆಂಡತಿಯನ್ನು ಮಾರುವ ಯೋಚನೆ ಮಾಡಿ ಮರ್ಯ್ಯಾನೊಡನೆ ಕೇಳಿದಾಗ, ಮರ್ಯ್ಯಾ ಹೇಳುವ “ ಹೇಣತಿನ್ನ ಮಾರತೀ ಏನು ಹೇಳು! ಕೊಂಡು ತೊಗೊಂಡು ಬಿಡತೀನಿ. ನನಗೂ ಹೇಣತಿ ಇಲ್ಲ ' ಈ ಮಾತು ಕುಡಿತದ ಪರಮಾವಧಿಯಲ್ಲಿ—ನೆಗೆದೋಡುವ ಭಾವನೆಗಳ ಸಂಭವನೀಯ ಘಟಕವಲ್ಲದಿನ್ನೇನು ? ಮಾತಿನ ಸರಪಳಿಯಲ್ಲಿ ಕೋದು ನಿಂತ ಯೋಚನೆಗಳು ಸಾಗುವಾಗ ‘ ಮಾರಾಟ ’ದ ಕ್ರಮದ ವಿಸ್ತಾರಕಥನವಾಗುವದು. ಇದು ನಗೆಯ ಬಗ್ಗೆ. ಘನಪದಾರ್ಥ-ವನ್ನು—ದ್ರವಪದಾರ್ಥದಂತೆ ಅಳೆಯುವ ಯತ್ನ. ಈ ವಿಚಾರವು ಗೆಳೆಯರಿಬ್ಬರ ಮುಂದೆ ಯಥಾರ್ಥ ಸ್ವರೂಪವನ್ನು ತಾಳಿ ನಿಂತಿದೆ. ಈ ಮಾತುಗಳ ಮಧ್ಯದಲ್ಲಿ ಕಾಣುವ ‘ ಕುಡದ್ಹಾಂಗ ಸೆರೆ ಗಪ್ಪಾಗಿ ಬಿಡತೈತಿ; ಅದರ ಹೇಣತಿ ಗಪ್ಪಾಗಿ ಬಿಡತಾಳ ಏನಲೆ ? .... ಹೇಣತಿ ಹಂಡ ಇವು ಹಳೆವಾದ್ಹಾಂಗ ಹೆಚ್ಚು ಪಾಡಪಾ ! ........ ಸೆರೆ ಕುಡ-ದವರ ಹಾಂಗ ಹಿಂಗ್ಯಾಕ ಮಾಡತೀ ಅಲೇ ? ... ಆಕಿನ್ನ ಕರಗಸ-ದವರ ಮುಂದ ಹೆಪ್ಪಗಟ್ಟಲಿಲ್ಲಾ ತೀಯೋ ಏನ ಮಣ್ಣ ! ಕರಗಿಸವರ ಮುಂದ ಹೆಪ್ಪಗಟ್ಟಲಿಲ್ಲಾ ಅಂದರ ಏನು ? ” ಈ ಮಾತುಗಳು ನಗೆಯ ರಸಝರಿಯೆಂದಾದರೆ, ಮಾಯಾನು ಸೂಚಿಸುವ ಅಳೆಯುವ ಕ್ರಮವು ನಗೆಯ ಏರಿಗೆ ಒಪ್ಪ-ವಾಗಿ ನಿಲ್ಲುವ ಒಂದು ಕಥಾಹೃದಯಘಟಕವೆನ್ನಬಹುದು. ಮುಂದೆ ಎರಡನೆಯ ದೃಶ್ಯ. ಈ ದೃಶ್ಯವು ವಿಚಾರಣೆಯ—ನ್ಯಾಯಸ್ಥಾನದ, ಹೋಲಬು. ಈ ಭಾಗದಲ್ಲಿ ನ್ಯಾಯಾಧಿಪತಿಗಳು ಕರಿಮ್ಮನನ್ನು ವಿಚಾರಿಸುತ್ತಿರುವುದು; ಕರಿಮ್ಮ ತನ್ನ ಗತಿಯನ್ನು ನಿವೇದಿಸುವುದು; ಮಧ್ಯೆ ಮಾಯಾನು ತಡೆಹಿಡಿದು ತನ್ನತನವನ್ನುಸುರುವುದು—ರಸಾ-ವಹವಾದ ಮಧುರಸಂಧಿಯೆನ್ನಬೇಕು. ಈ ಭಾಗದಲ್ಲಿ ಕಾಣುವ ಪ್ರತಿಯೊಂದು ಮಾತೂ ನಗೆಯಾಟದ ಚೆಲುವಿಗೆ ಸಾಕ್ಷಿಯಾಗಿವೆ. ಸಂದರ್ಭಕ್ಕನುಗುಣವಾಗಿ, ಹೊರಟುಬರುವ ಮಾತುಗಳೇ—ನಗೆ-ಯಾಟದ ಪೂರ್ಣತೆಗೆ ಸಾಕ್ಷಿ. ಅಲ್ಲದೆ ಕೊನೆಯದಾಗಿ ನ್ಯಾಯಾ-ಪತಿಗಳಿತ್ತ ತೀರ್ಮಾನ, ಈ ನಗೆಯಾಟವನ್ನು ಬೆಳಗಿನಿಂತಿದೆ. ಕೆಲವು ವರ್ಷಗಳ ಹಿಂದಿನ ಘಟನೆಯನ್ನು, ದಿನವನ್ನು, ನೀತಿಯನ್ನು ಎತ್ತಿ ತೋರುತ್ತಿದೆಯೆನ್ನಬೇಕು.

Mopasantರವರ ಕಥೆಯಿಂದ ಆಯ್ದು ತೆಗೆದ ವಸ್ತುವನ್ನು ಯೋಗ್ಯ ಘಟನೆಗಳೊಡನೆ ರೂಪಕವಾಗಿ ಬೆಳಕು ಕಾಣಿಸಿದ ಲೇಖಕರ ಈ ಯತ್ನವು ಸಫಲವಾಗಿದೆಯೆನ್ನಬೇಕು. ರುಚಿರವಾದ ದೇಶ್ಯ ಭಾಷಾಸಂಪ್ರದಾಯವೂ ರೂಪಕಕ್ಕೆ ಮೆರುಗಿತ್ತಿಯೆನ್ನಲೇಬೇಕು.

# ಸಾದರ ಸ್ವೀಕಾರ

೮೫. **ವಿನೋದಿನಿ:** (ಅನುವಾದಿತ ಕಾದಂಬರಿ) ಮೂಲ ಬಂಗಾಲಿ ಲೇಖಕರು ದಿವಂಗತ ಶ್ರೀರವೀಂದ್ರನಾಥ ಠಾಕೂರರು. ಅನುವಾದಕರು: ಶ್ರೀಮಾನ್ ಅಹೋಬಲ ಶಂಕರ ಅವರು. ಕಾವ್ಯಾಲಯ ಪ್ರಕಾಶಕರು, ಮೈಸೂರು. ಕ್ರೌ. ಅ. ೩೩೦ ಪುಟಗಳು. ಬೆಲೆ ೧—೮—೦.

೮೬. **ಮಮತೆಯ ಸುಳಿ:** (ಸ್ವತಂತ್ರ ಸಾಮಾಜಿಕ ಕಾದಂಬರಿ) ಬರೆದವರು: ಶ್ರೀ. ಶ್ರೀನಿವಾಸರಾವ ಕೊರಟಿ ಅವರು. ಕಾವ್ಯಾಲಯ ಪ್ರಕಾಶಕರು, ಮೈಸೂರು. ಕ್ರೌ. ಅ. ೨೧೬ ಪುಟಗಳು. ಬೆಲೆ ೧—೪—೦.

೮೭. **ನವ್ಯತೆ ಹಾಗೂ ಕಾವ್ಯಜೀವನ:** (ವಿಮರ್ಶಾತ್ಮಕ ಪ್ರಬಂಧಸಂಕಲನ) ಬರೆದವರು: ಶ್ರೀಮಾನ್ ವಿ. ಕೃ. ಗೋಕಾಕ ಅವರು. ಪ್ರಕಾಶಕರು: ಸುರುಚಿ ಪ್ರಕಾಶನ, ಮೈಸೂರು. ಕ್ರೌ. ಅ ೧೩೨ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೩—೪—೦, ಸಾಮಾನ್ಯ ಪ್ರತಿಗೆ ೨—೦—೦.

೮೮. **ಸೂತ್ರಧಾರಿ:** (ಪತ್ತೇದಾರಿ ಕಾದಂಬರಿ) ಬರೆದವರು: 'ಮಧುಕರ'. ಪ್ರಕಾಶಕರು: ಚಾತಕ ಪ್ರಕಾಶನ, ೪೨ ಜರ್ನ್ಯಾಲಿಸ್ಟ್ಸ ಕಾಲನಿ, ಶ್ರೀಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೨. ಕ್ರೌ ೧೬ ದ ೧೦೨ ಪುಟಗಳು. ಬೆಲೆ ೦—೫—೦.

೮೯. **ವೀರಶೈವ ಜನರಲ್ ಲಾಯಬ್ರರಿ, ಗದಗು:** (೩೬ನೆಯ ವರ್ಷದ ವರದಿ) ಗೌರವಕಾರ್ಯದರ್ಶಿಗಳು ಶ್ರೀ ವೀರಪ್ಪ ಕೊಟ್ರಪ್ಪ ನಾಲ್ವಾರದ, ಗದಗು. ಕ್ರೌ. ಅ. ೨೬ ಪುಟಗಳು.

೯೦. **ನವಚೇತನ:** (ಮಾಸಪತ್ರಿಕೆಯ ಕಾಸರಗೋಡು ವಿಶೇಷ ಸಂಚಿಕೆ.) ಸಂಪಾದಕರು: ಶ್ರೀ. ಕೆ. ಕೇಶವಭಟ್ಟ ಬಿ. ಎ. ಪ್ರಕಾಶಕರು: ಶ್ರೀ. ಕೊಳಾಯಿ ವೆಂಕಟರಮಣಭಟ್ಟರು, ನವಚೇತನ ಪ್ರಕಾಶನ, ಪೆರಡಾಲ (ದ. ಕ.). ಕ್ರೌ. ೪ ದ ೪೮ ಪುಟಗಳು. ಬೆಲೆ ೦—೬—೦.

೯೧. **ಭಾರತೀಯ ಸಂಸ್ಕೃತಿಯ ಹೃದಯ:** (ಭಾಷಣ-ಪ್ರಬಂಧ ಸಂಕಲನ) ಬರೆದವರು: ಶ್ರೀಮಾನ್ ಮಿರ್ಜಿ ಅಣ್ಣಾರಾಯರು. ಪ್ರಕಾಶಕರು: ಶಾಂತಿಸೇವಾಸದನ, ಸೇಡಬಾಳ; ಜಿಲ್ಲಾ ಬೆಳಗಾಂವಿ ಕ್ರೌ. ಅ. ೧೨೦ ಪುಟಗಳು. ಬೆಲೆ ೧—೮—೦.

೯೨. **ಮಾನವಪುತ್ರ ಜೀಸಸ್:** (ಅನುವಾದಿತ ವ್ಯಕ್ತಿಚಿತ್ರ) ಮೂಲ ಇಂಗ್ಲಿಷ್ ಲೇಖಕರು ಕಲ್ಲೀಲ್ ಜಿಬ್ರಾನ್. ಕನ್ನಡಿಸಿದವರು 'ದೇವದತ್ತ'. ಧಾರವಾಡದ ಮಿಂಚಿನಬಳ್ಳಿಯ ೧೮ನೆಯ ವರ್ಷದ ಮೊದಲ ಕುಡಿ. ಕ್ರೌ. ಅ. ೧೯೮ ಪುಟಗಳು. ಬೆಲೆ ಸಾದಾಪ್ರತಿ ೨—೦—೦. ಒಳ್ಳೆಯ ಪ್ರತಿಗೆ ೨—೮—೦.

೯೩. **ನಾರದವಿನೋದ ಮತ್ತು ಚಂದ್ರಾವಳಿ:** (ಎರಡು ಪೌರಾಣಿಕ ನಾಟಕಗಳು) ಬರೆದವರು: ವಿದ್ವಾನ್ ಪಿ. ಎಲ್. ರಾಘವೇಂದ್ರರಾವ, ಕರ್ನಾಟಕ ಪಂಡಿತ, ಪಡುಬಿದ್ರಿ (ದ. ಕ.). ಪ್ರಕಾಶಕರು: ಹಿಂದೀ ಪುಸ್ತಕ ಭಂಡಾರ, ಶ್ರೀರಾಮಾಂಜನೇಯ ಬಿಲ್ಡಿಂಗ್, ಉಡುಪಿ. ಕ್ರೌ. ಅ. ೬೨ ಪುಟಗಳು. ಬೆಲೆ ೦—೧೦—೦.

೯೪. **ಇಸೋಪನ ನೀತಿಯ ಕತೆಗಳು:** (ಸಂಕಲನ) ಲೇಖಕರು: ಶ್ರೀ. ರಾ. ನ. ಮಳಗಿಯವರು. ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೮೮ ಪುಟಗಳು. ಬೆಲೆ ೦—೧೨—೦.

೯೫. **ಪ್ರತಿಜ್ಞೆ:** (ಅನುವಾದಿತ ಕಾದಂಬರಿ) ಮೂಲ ಹಿಂದೀ ಲೇಖಕರು ದಿವಂಗತ ಪ್ರೇಮಚಂದರು. ಅನುವಾದಿಕೆ: ಶ್ರೀಮತಿ ಬಿ. ಕೆ. ಸುಬ್ಬಲಕ್ಷ್ಮಿ 'ರಾ. ಭಾ. ಪ್ರವೀಣೆ'. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೩ನೆಯ ವರ್ಷದ ೩ನೆಯ ಕಿರಣ. ಕ್ರೌ. ಅ. ೨೨೮ ಪುಟಗಳು. ಬೆಲೆ ೧—೮—೦.

೯೬. **ಮಾವನ ಆಸ್ತಿ:** (ಹಾಸ್ಯರಸ ಪ್ರಧಾನ ಕಾದಂಬರಿ) ಬರೆದವರು: ಶ್ರೀ. ಕೆ. ವೀರೇಶ. ಪ್ರತಿಭಾ ಗ್ರಂಥಮಾಲೆಯ ೧೩ನೆಯ ವರ್ಷದ ೪ನೆಯ ಕಿರಣ. ಕ್ರೌ. ಅ. ೨೩೬ ಪುಟಗಳು. ಬೆಲೆ ೧—೮—೦.

೯೭. **ಜನ್ಮಾಂತರ ವಿಜ್ಞಾನ:** (ತಾತ್ತ್ವಿಕ ಗ್ರಂಥ) ಬರೆದವರು ಡಾ. ಚಂದ್ರಶೇಖರ ಸ್ವಾಮಿಗಳು, ಇಳಕಲ್ಲ. ಲೇಖಕರೇ ಪ್ರಕಾಶಕರು. ಕ್ರೌ. ಅ. ೩೮ ಪುಟಗಳು. ಬೆಲೆ ೦—೮—೦.

೯೮. **ಪ್ರಸನ್ನ ರೇಣುಕ ಗೀತಾವಳಿಯು:** (ಪದ್ಯ ಸಂಕಲನ) ಬರೆದವರು: ಶ್ರೀ. ಬಸವರಾಜ ಅಂಗಡಿ, ಬಂಕಾಪುರ. ಪ್ರಕಾಶಕರು: ವೇ. ವಿ. ರು. ಹೊಸಮಠ, ಶ್ರೀ.ಮುಕ್ತಿಮಂದಿರ ಗುರುಕುಲ, ಕಳಸ, ಜಿ. ಧಾರವಾಡ. ಡೆ. ೧೬ ದ ೩೬ ಪುಟಗಳು. ಬೆಲೆ ?

೯೯. **ಕೆನೆಮೊಸರು:** (ಮಕ್ಕಳ ಕಥೆಗಳು) ಬರೆದವರು: ಶ್ರೀ. ಅನಂತರಾವ್ ಕೆ. ಭೋಸಗೇ. ಪ್ರಕಾಶಕರು: ಶಾಂತಿಸೇವಾ ಸದನ ಮಕ್ಕಳಮಂಟಪ, ಸೇಡಬಾಳ, ಜಿಲ್ಲಾ ಬೆಳಗಾಂವಿ. ಕ್ರೌ. ಅ. ೩೬ ಪುಟಗಳು ಬೆಲೆ ೦—೪—೦.

೧೦೦. **ಶ್ರೀ. ರಾಘವೇಂದ್ರ ವಾಚನಾಲಯ, ಮಂತ್ರಾಲಯ:** ಈ ಸಂಸ್ಥೆಯ ೯ನೆಯ ವಾರ್ಷಿಕ ವರದಿ. ಗೌರವ ಕಾರ್ಯದರ್ಶಿಗಳು ಶ್ರೀ. ಕುರಡಿ ರಾಘವೇಂದ್ರಾಚಾರ್ಯರು. ಡೆ. ೧೬ ದ ೧೬ ಪುಟಗಳು.

# ಜಯಂತಿಗೆ ಚಂದಾದಾರರಾಗಿರಿ!

**ಕರ್ನಾಟಕದಲ್ಲಿಯ ಎಲ್ಲ ಮಾಸಪತ್ರಿಕೆಗಳಲ್ಲಿಯೂ ಗಾತ್ರದಲ್ಲಿ ದೊಡ್ಡದು!**

**ಪ್ರತಿಯೊಂದು ಕುಟುಂಬದಲ್ಲಿಯೂ ಇರಬೇಕಾದ ಪತ್ರಿಕೆ 'ಜಯಂತಿ'**

ತನ್ನ ಹದಿನೆಂಟು ವರ್ಷಗಳ ಜೀವನದಲ್ಲಿ, ಒಂದು ಸಲವೂ ಸಂಯುಕ್ತಾಂಕವನ್ನು ಹೊರಡಿಸಿಲ್ಲ;
ತನ್ನ ಸಮಯನಿಷ್ಠೆಯ ಗುರಿಗೆ ಚ್ಯುತಿ ತಂದುಕೊಂಡಿಲ್ಲ!

ಸದಭಿರುಚಿಗೆ ಒಗ್ಗುವಂತಹ ಸಾಹಿತ್ಯವನ್ನು ಪ್ರಕಟಿಸುವುದೇ ಜಯಂತಿಯ ಆದರ್ಶ!

ಕನ್ನಡನಾಡಿನ ಪ್ರಮುಖಸಾಹಿತ್ಯಿಕರ ಕೃತಿಗಳ ದರ್ಶನವನ್ನು ಜಯಂತಿಯು ಮಾಡಿಸುವುದಲ್ಲದೆ, ಹೊಸ ಸಾಹಿತ್ಯಿಕರನ್ನು ಬೆಳಕಿಗೆ ತರುವ ಕಾರ್ಯವನ್ನೂ ಮಾಡುವುದು. ಜಯಂತಿಯಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನವೂ ನಾಡಿಗರ ದೃಷ್ಟಿಯನ್ನು ಜೀವನ ಸೌಂದರ್ಯದ ಕಡೆಗೆ ತಿರುಗಿಸುವಂತಹದಿರುವುದು. ವಿವಿಧ ವಿಷಯಗಳ ಪರಿಚಯಾತ್ಮಕ ಲೇಖನಗಳು ನಾಡಿಗರನ್ನು ಬಹುಶ್ರುತರನ್ನಾಗಿ ಮಾಡಬಲ್ಲುವು. ಕುಟುಂಬದಲ್ಲಿಯ ಹಿರಿಯರಿಗೂ ಕಿರಿಯರಿಗೂ ಜಯಂತಿ ಪ್ರಯೋಜನಕಾರಿ!

**ಕನ್ನಡನಾಡಿನ ಎಲ್ಲ ಶಾಲೆ-ಕಾಲೇಜುಗಳೂ ಜಯಂತಿಯನ್ನು ತರಿಸಿಕೊಳ್ಳಬೇಕು.**

ಮುಂಬಯಿ, ಮದರಾಸ, ಮೈಸೂರು, ಹೈದರಾಬಾದ್ ಇವೆಲ್ಲ ರಾಜ್ಯಗಳ
ಸರಕಾರಗಳಿಂದಲೂ ಜಯಂತಿ ಮನ್ನಣೆಯನ್ನು ಪಡೆದಿದೆ.

**ವಾರ್ಷಿಕ ಚಂದಾ ೫—೦—೦. ಆರು ತಿಂಗಳ ಚಂದಾ ೩—೦—೦**

# 'ಜಯಂತಿ' ಕಾರ್ಯಾಲಯ, ಧಾರವಾಡ


Printed by N. A. Hoskeri at the Vijaya Press, Dharwar and published for the Proprietors Jayanti publications, by K. S. Betgeri at the Jayanti Office, Dharwar

# ಜಯಂತಿ

ಮಾರ್ಚ

೧೯೫೬

ಬೆಲೆ:

೮ ಆಣೆಗಳು

## ಪುರಂದರದಾಸರ ವಚನರತ್ನ

೧

ಧಾಳೀಲಿ ಕುದುರಿ ವೈಹಾಳೀಲಿ ವಡೆಯಲು
ಧೂಳಿ ರವಿಗೆ ತಾನು ಮುಸುಕುವುದೆ?
ತಾಳಿದವಂಗೆ ವಿರುದ್ಧ ಲೋಕದೊಳುಂಟೇ
ಗಾಳಿಗೆ ಗಿರಿ ನಡುಗುವುದೇ ಹೇಳಲೊ ದೇವ!

೨

ತಾನು ಉಣ್ಣದ ದ್ರವ್ಯ ತಾಳ್ಯದ್ದ ಇದ್ದರೇನು?
ದಾನವಿಲ್ಲದ ಮನೆಯು ದೊಡ್ಡದಾದರೇನು?
ಹೀನಗುಣವುಳ್ಳವಗೆ ಹಿರಿಯತನ ಬಂದರೇನು?
ಶ್ವಾನನಾ ಮೊಲೆಯೊಳಗೆ ಹಾಲಿದ್ದರೇನು?

೩

ಪಾಪಿಬಲ್ಲನೆ ಪರರ ಸುಖದುಃಖವ....
ಕೋಪಿಬಲ್ಲನೆ ಸಹನೆ-ಶಾಂತಗುಣವ?

೪

ಮಾನವಜನ್ಮ ದೊಡ್ಡದು—ವ್ಯರ್ಥ
ಹಾನಿಮಾಡಲಿಬ್ಯಾಡಿ ಹುಚ್ಚಪ್ಪಗಳಿರಾ?

ಂಪುಟ
೧೯

JAYANTI

ಸಂಚಿ
೧೦

# ಈ ಸಂಚಿಕೆಯಲ್ಲಿ


**ಶ್ರೀಪುರಂದರದಾಸರ ಪುಣ್ಯತಿಥಿ** (ಸಂಪಾದಕೀಯ)
ಸಂಪಾದಕರು .... .... ೩೬೧

**ನಾಡನಡೆ** (ಸಾಂದರ್ಭಿಕ ಟಿಪ್ಪಣಿಗಳು)
'ಜಾಲಪ್ಪೈರನ್' .... .... .... ೩೬೩

ಹೆಸರು ನಾಸಿಂಹನಾಗಬೇಕು (ಸತ್ಯಕಥೆ)
ಶ್ರೀ. ನಾ. ನರಸಿಂಹಮೂರ್ತಿ, ಮೈಸೂರುನಗರ .... ೩೬೫

ಕಾಳಿದಾಸಕವಿಯ ಗಾನಕಲಾಭಿಜ್ಞತೆ
ಪ್ರೊ. ಪಿ. ಜಿ. ಹುಲಿಕವಿ, ಬಿ. ಎ., ಎಸ್. ಟಿ. ಸಿ. ಬೆಳಗಾಂವಿ ೩೬೯

ಪ್ರತ್ಯಾಗಮನ (ದೃಶ್ಯಕವನ)
ಶ್ರೀ. ಶಾಂತಿನಾಥ ದೇಸಾಯಿ, ಎಂ. ಎ., ಮುಂಬಯಿ ೩೭೩

ಕುರುಡುಕಣ್ಣು (ಸಣ್ಣಕತೆ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ (ಮೈಸೂರು) ೩೭೪

**ಹೂವ ಸಾನ್ನಿಧ್ಯದಲಿ** (ಕವನ)
ಶ್ರೀ. ಗುರುಲಿಂಗ ಕಾಪಸೆ, ಲಚ್ಯಾಣ .... ೩೮೦

**ಮನದ ಜಾಡ್ಯ ತೊಲಗಿಸೈ!** (ಕವನ)
ಶ್ರೀ. ಎಚ್. ಸೂರ್ಯದೇವ, ಬಯಲುಹೊಂಗಲ .... ೩೮೦

**ಜೋಗುಳ** (ಕವನ)
ಶ್ರೀ. ಕೆ. ಎಸ್. ಸುಬ್ರಾಯಭಟ್ಟ, ಕಾಸರಗೋಡು ೩೮೦

**ಮುಗಿಯದ ಯುದ್ಧ** (ನಗೆಯಾಟ)
ಶ್ರೀ. ಜಿ. ಎಸ್. ಆಮೂರ, ಎಂ. ಎ., ಕುಮಟಾ .... ೩೮೧

**ಮಥನದ ನಂತರ** (ಭಾವರೂಪಕ)
ಶ್ರೀ. ಎಚ್. ಎಂ. ನಾಗೇಶ, ಗುಲಬುರ್ಗಾ .... ೩೮೫

**ಜನಪದ ಜೀವನ** (ಪುಸ್ತಕ ವಿಮರ್ಶೆ)
ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ .... ೩೮೬

**ಶಿಶುದೇವತೆ** (ಅನುವಾದಿತ ಕಥೆ)
ಶ್ರೀ. ಬಳ್ಕೂರ ಸುಬ್ರಾಯ ಅಡಿಗ, ಗಂಗೊಳ್ಳಿ .... ೩೮೭

ದುರ್ಯೋಧನನು ಗೆದ್ದಿದ್ದರೆ (ಲಲಿತ ಪ್ರಬಂಧ)
ಶ್ರೀ. ಗೋವರ್ಧನಾಚಾರ್ಯ ಗಲಗಲಿ, ಎಂ. ಎ.; ಧಾರವಾಡ ೩೮೯

ಬೌದ್ಧಕ್ಷೇತ್ರ ಸಾರನಾಥ
ಶ್ರೀ. ಎಸ್. ಪಿ. ಹಿರೇಮಠ, ಡಿ. ಎ. ವ್ಹಿ. ಕಾಲೇಜ, ಬನಾರಸ ೩೯೨

**ಸಾಹಿತ್ಯವಿಮರ್ಶೆಯ ಶಿಕ್ಷಣರಂಗ** ('ಅಶೋಕಚಕ್ರ', 'ಇದೊಂದು ಕತೆ')
ಶ್ರೀ. ಆರ್. ಜಿ. ಕುಲಕರ್ಣಿ ಮತ್ತು ಶ್ರೀ. ಕೆ. ಎಸ್. ಶರ್ಮಾ ೩೯೪

ಸಾದರ ಸ್ವೀಕಾರ .... ಹೊದಿಕೆಯ ೩ನೆಯ ಪುಟದಲ್ಲಿ

# ಜಯಂತಿ

**ಸಂಪುಟ ೧೮ ಸಂಚಿಕೆ ೧೦**

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು :
**ಶ್ರೀ. ಬೆಟಗೇರಿ ಕೃಷ್ಣಶರ್ಮ**

●

**ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.**

卐

**ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

**ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.**

# ಸಂಪಾದಕೀಯ

●

## ಶ್ರೀಪುರಂದರದಾಸರ ಪುಣ್ಯತಿಥಿ

ಕಳೆದ ತಿಂಗಳ ೧೦–೧೧–೧೨ ದಿನಾಂಕಗಳಲ್ಲಿ, ಕನ್ನಡಿಗರ ಹಾಳು ರಾಜಧಾನಿಯಲ್ಲಿ, ಶ್ರೀಪುರಂದರದಾಸರ ಭಕ್ತಿಸಾಮ್ರಾಜ್ಯಧ್ವಜವು ತಲೆಯೆತ್ತಿ ನಿಂತಿದ್ದಿತು. ಕರ್ನಾಟಕದ ಎಲ್ಲ ಭಾಗಗಳಿಂದಲೂ ಬಂದ ಶ್ರೀಪುರಂದರದಾಸರ ಅಭಿಮಾನಿಗಳು ಎರಡುಸಾವಿರದಷ್ಟು ಜನ ಅಲ್ಲಿ ಸೇರಿದ್ದರು. ಬಂದವರಲ್ಲಿ ನಾಗರಿಕರು, ಹಳ್ಳಿಗರು, ಸಂಪ್ರದಾಯವಾದಿಗಳು, ಆಧುನಿಕ ಸುಶಿಕ್ಷಿತರು, ಹೆಂಗುಸರು, ಗಂಡುಸರು ಎಲ್ಲರೂ ಇದ್ದರು. ದಾಸದೀಕ್ಷೆಯನ್ನು ಪಡೆದ ಸಂಗೀತ-ಗಾರರೂ ಭಜನೆಯ ಕೂಟದವರೂ ಬಂದಿದ್ದರು.

ಪೌಷ್ಯ ಬಹುಳ ಅಮಾವಾಸ್ಯೆಯಂದು ಶ್ರೀಪುರಂದರದಾಸರ ಪುಣ್ಯತಿಥಿ. ಹಾಳುಹಂಪೆಯ ಪ್ರದೇಶದಲ್ಲಿ ಶ್ರೀಪುರಂದರದಾಸರ ಜೀವನಕ್ಕೆ ಸಂಬಂಧಿಸಿದ ಅನೇಕ ಸ್ಮಾರಕಗಳಿವೆ. ಎಲ್ಲ ಸ್ಮಾರಕಗಳಲ್ಲಿಯೂ, ತುಂಗಭದ್ರೆಯ ತಡಿಯಲ್ಲಿಯೆ ಇರುವ ಶ್ರೀಪುರಂದರದಾಸರ ಮಂಟಪವು ಮುಖ್ಯವಾದುದು. ಅಲ್ಲಿ ಅನೇಕ ದಿನಗಳಿಂದಲೂ ಶ್ರೀಪುರಂದರದಾಸರ ಪುಣ್ಯದಿನ ಮಹೋತ್ಸವವು ಸಣ್ಣ ಪ್ರಮಾಣದಿಂದ ಜರುಗುತ್ತಲೇ ಬಂದಿತ್ತು. ಆದರೆ ಇತ್ತೀಚೆಗೆ, ಹೊಸಪೇಟೆಯ ಕೆಲವು ಜನ ಹಿರಿಯರ ಪ್ರಯತ್ನದಿಂದ ಸಂಸ್ಥಾಪಿತವಾದ ಶ್ರೀಪುರಂದರದಾಸ ಸೇವಾಸಮಿತಿಯು, ಈ ಪುಣ್ಯತಿಥಿಯ ಮಹೋತ್ಸವಕ್ಕೆ ಹೆಚ್ಚು ಮಹತ್ತ್ವವನ್ನು ತಂದುಕೊಟ್ಟಿರುವುದು ತುಂಬ ಸಂತೋಷದ ಸಂಗತಿಯಾಗಿದೆ. ದಾಸರ ಪುಣ್ಯತಿಥಿಯ ಮಹೋತ್ಸವವು ಅಖಿಲಕರ್ನಾಟಕದ ಒಂದು ಸಾಂಸ್ಕೃತಿಕ ಹಬ್ಬವಾಗಿ ಪರಿಣಮಿಸಬೇಕೆಂದು, ಶ್ರೀಪುರಂದರದಾಸರ ಸೇವಾಸಮಿತಿಯ ಅಪೇಕ್ಷೆಯಾಗಿದೆ. ಆದರ ಅಪೇಕ್ಷೆಗೆ ಅನುಗುಣವಾಗಿ ಕಾರ್ಯವು ಪ್ರಾರಂಭವಾಗಿದೆಯೆಂಬುದನ್ನು ಈಗ ೨–೩ ವರ್ಷಗಳಿಂದಲೂ ಹಂಪೆಯಲ್ಲಿ ನಡೆಯುತ್ತಿರುವ ದಾಸರ ಪುಣ್ಯತಿಥಿಯ ಮಹೋತ್ಸ-ವವನ್ನು ನೋಡಿದವರು ಖಂಡಿತವಾಗಿ ಭಾವಿಸುವಂತಿದೆ.

ತುಂಗಭದ್ರೆಯ ತಿಳಿನೀರಿನ ಪ್ರವಾಹಕ್ಕೆ ಹೊಂದಿಯೇ ಶ್ರೀಪುರಂದರದಾಸರ ಭವ್ಯವಾದ ಮಂಟಪವಿದೆ. ಬರಿ ಕಗ್ಗಲ್ಲಿನ ಕಂಬ–ತೊಲೆಗಳನ್ನು ಏರಿಸಿ ರಚಿಸಿದ ಮಂಟಪವದು. ತುಂಬು-ನದಿಯು ಬಂದಾಗ, ಪ್ರವಾಹದಲ್ಲಿ ಅದು ಮುಳುಗಿ ಹೋಗುವುದು. ಮಿಕ್ಕ ದಿನಗಳಲ್ಲಿ ತುಂಗಭದ್ರೆ, ದಾಸರ ಮಂಟಪದ ಪಾವಟಿಗೆಗಳನ್ನು ತೊಳೆಯುತ್ತ ಮುಂದುವರಿಯುವಳು. ಮಂಟಪವಿದ್ದ ಸ್ಥಳವು ನಿಸರ್ಗದ ಗಂಭೀರ ಸೌಂದರ್ಯದಿಂದ ಕೂಡಿರುವುದು. ಕಲ್ಲು–ಬಂಡೆಗಳಲ್ಲಿ ಕುಣಿ-ಕುಣಿ-ಯುತ್ತ ಸಾಗುವ ತುಂಗಭದ್ರೆಯ ಕಲಕಲಗೀತ ಅವಿರತವಾಗಿ ಕೇಳುತ್ತಿರುವುದು. ನದಿಯಾಚೆ-ಗಿರುವ ಬಂಡೆಯ ಬೆಟ್ಟಗಳು ವೃದ್ಧತಪಸ್ವಿಗಳಂತೆ ಅಚಲವಾಗಿ ನಿಂತುಕೊಂಡಿರುವುವು. ಇಕ್ಕಡೆಯ ದಂಡೆಯ ಕಾಡು ಗಿಡ-ಗಂಟಿಗಳು, ಹಸುರು–ಹೂಗಳಿಂದ ತುಂಬಿರುವುವು.

ಮಂಟಪದ ಮಧ್ಯಭಾಗದಲ್ಲಿ ಒಂದು ಕಂಬವಿದೆ. ಅದು ಶ್ರೀಪುರಂದರದಾಸರು ತಮ್ಮ ಧ್ಯಾನಾನುಷ್ಠಾನಗಳಿಗಾಗಿ ಕುಳಿತುಕೊಳ್ಳುತ್ತಿದ್ದ ಎಡೆಯ ಕಂಬವಂತೆ. ಇದುವರೆಗೆ ಆ ಕಂಬದ ಪೂಜೆಯೆ ನಡೆಯುತ್ತಿತ್ತು; ಇತ್ತೀಚೆಗೆ ಅದರ ಮೇಲೆ ದಾಸರ ಮೂರ್ತಿಯನ್ನು ಕಂಡರಿಸಲಾಗಿದೆ. ನದಿಯ ಪ್ರವಾಹದ ಆಘಾತ ಮತ್ತು ಕಾಲನ ಆಘಾತಗಳಿಂದ ಶಿಥಿಲವಾಗಿದ್ದ ಮಂಟಪವನ್ನು, ಸೇವಾಸಮಿತಿಯವರು ಪುನರುದ್ಧಾರ ನಡೆಯಿಸಿದ್ದಾರೆ. ದಾಸರ ಪುಣ್ಯತಿಥಿಮಹೋತ್ಸವದ ಎಲ್ಲ ಕಾರ್ಯಕ್ರಮಗಳು ಮಂಟಪದ ಒಳಗೂ ಹೊರಗೂ ನಡೆಯುತ್ತವೆ.

ಶ್ರೀಪುರಂದರದಾಸರು ೧೫೬೪ನೆಯ ಇಸವಿಯಲ್ಲಿ ಪರಂಧಾಮಕ್ಕೆ ತೆರಳಿದರು: ಅದು ತಾಳಿಕೋಟೆ ಅಥವಾ ರಕ್ಕಸತಂಗಡಿಗೆಯ ಯುದ್ಧಕ್ಕೆ ಮೊದಲವರ್ಷ. ಕೃಷ್ಣದೇವರಾಯನ ವೈಭವಪೂರ್ಣ ಆಡಳಿತದ ಕಾಲದಿಂದಲೂ ಶ್ರೀಪುರಂದರದಾಸರು ವಿಜಯನಗರದಲ್ಲಿ ಬದುಕಿಬಾಳಿದವರು. ಸಾಮ್ರಾಜ್ಯದ ಜಾನಪದಜೀವನವನ್ನು ಆದರ್ಶವಾಪುದನ್ನಾಗಿ ಮಾಡಬೇಕೆಂದು, ಅವರು ತಮ್ಮ ಕಾವ್ಯ-ಸಾಹಿತ್ಯ-ಸಂಗೀತಗಳನ್ನು ಉಚಿತರೀತಿಯಲ್ಲಿ ಬಳಸಿಕೊಂಡವರು. ಆದರಿಂದ ರಾಜ-ಪ್ರಜೆಗಳಿಬ್ಬರಿಂದಲೂ ಮನ್ನಣೆಯನ್ನು ಪಡೆದವರು.

ಶ್ರೀಪಾದರಾಜರು, ಶ್ರೀವ್ಯಾಸರಾಯರು ಇವರಿಂದ ಪ್ರಚೋದಿತವಾಗಿ, ಶ್ರೀಪುರಂದರದಾಸರಿಂದ ಪರಿವೃದ್ಧಿಯನ್ನು ಪಡೆದ 'ದಾಸಕೂಟ' ಎಂಬ ಸಂಸ್ಥೆಯು, ಕನ್ನಡ ನಾಡಿನಲ್ಲಿ ಲೌಕಿಕ-ಪರಮಾರ್ಥಗಳ ಸಮನ್ವಯಜೀವನದ ಪಾಠವನ್ನು ಕಲಿಸಿತು. ಸಂಸಾರದುಃಖಕ್ಕೆ ಹೆದರಿ ಕಾಡಿಗೆ ಓಡಿಹೋಗುವ ನಿವೃತ್ತಿಮಾರ್ಗವನ್ನಲ್ಲ, ದಾಸರು ಹೇಳಿದುದು. 'ಈಸಬೇಕು ಇದ್ದು ಜಯಿಸಬೇಕು, ಹೇಸಿಕೆಯ ಸಂಸಾರ ಆಸೆ ಲೇಶವಿಲ್ಲದ್ಹಾಂಗೆ' ಎಂಬ ಆದರ್ಶಲೌಕಿಕಧರ್ಮವನ್ನವರು ಉಪದೇಶಿಸಿದರು. ತಮ್ಮ ಉಪದೇಶವು ಜನತೆಯ ಹೃದಯ-ಮನಸ್ಸುಗಳಿಗೆ ನೇರವಾಗಿ ತಲ್ಪುವಂತೆ ಸಾಹಿತ್ಯ-ಸಂಗೀತಗಳಂತಹ ಮಧುರಸಾಧನಗಳನ್ನು ಬಳಸಿಕೊಂಡು, ಪಂಡಿತ-ಪಾಮರರಿಬ್ಬರ ಮನಸ್ಸನ್ನೂ ಆಕರ್ಷಿಸಿದರು. ಪರಮಾರ್ಥ ಬೇಕಾದವರಿಗೆ ಪರಮಾತ್ಮನ ಭಕ್ತಿಯ ಮಾರ್ಗ ದೊರೆಯಿತು; ಲೌಕಿಕ ಆನಂದಬೇಕಾದವರಿಗೆ ಕಾವ್ಯ-ಸಂಗೀತಗಳ ರಸಾನಂದ ದೊರೆಯಿತು. ಎಂತಲೇ ಶ್ರೀಪುರಂದರದಾಸರು ತಮ್ಮ ಕಾಲದಲ್ಲಿ ಜನಮನವನ್ನು ಗೆದ್ದು, ಇಡಿ ದಕ್ಷಿಣ ಭಾರತದಲ್ಲೆಲ್ಲ ತಮ್ಮ ಭಕ್ತಿ-ಕಲೆಗಳ ವಿಜಯಧ್ವಜವನ್ನು ಮೆರೆಸಿದರು. ತಿರುಪೆಬೇಡುವ ದೀನ-ದರಿದ್ರರನ್ನು ಮೊದಲುಮಾಡಿಕೊಂಡು, ಮುಕ್ತಿಕಾಮಿಗಳಾದ ವಿದ್ಯಾವಂತರವರೆಗೆ ಎಲ್ಲರೂ, ಪುರಂದರದಾಸರ ಕೃತಿ-ಕುಸುಮಗಳನ್ನು ಮೆಚ್ಚಿದರು. ಎಲ್ಲರ ಬಾಯಲ್ಲಿಯೂ ದಾಸರ ಕೀರ್ತನೆ, ಉಗಾಭೋಗ, ಸುಳಾದಿ, ಸಾಂಗತ್ಯಗಳು ನಲಿದಾಡತೊಡಗಿದುವು. ಎಂತಲೇ 'ದಾಸರೆಂದರೆ ಪುರಂದರದಾಸರಯ್ಯಾ' ಎಂದು, ತಮ್ಮ ಗುರುಗಳಾದ ವ್ಯಾಸರಾಯರಿಂದ ಕೊಂಡಾಡಿಸಿಕೊಂಡರು ಪುರಂದರದಾಸರು.

ಪುರಂದರದಾಸರು ಕಣ್ಮರೆಯಾದರು. ಕಾಲವು ಗತಿಸಿದಂತೆ ದಾಸರ ವ್ಯಕ್ತಿಮಹಾತ್ಮ್ಯವೂ ಕಾರ್ಯಮಹತ್ತ್ವವೂ ಮರೆವಿನ ತೆರೆಯಹಿಂದೆ ಅಡಗತೊಡಗಿತು. ಆದರೆ ಸಂಗೀತಪ್ರಿಯರೂ ಸಾಮಾನ್ಯ ಜನರೂ ಪುರಂದರದಾಸರ ಸಾಹಿತ್ಯವನ್ನು ಬಿಟ್ಟುಕೊಡಲಿಲ್ಲ. ಅವರ ಸಾಹಿತ್ಯದಲ್ಲಿ ಹುದುಗಿದ ಜೀವನತತ್ತ್ವಜ್ಞಾನವು ವಂಶಾನುಗತವಾಗಿ ಜನತೆಯ ಬಾಯಲ್ಲಿ ಉಳಿಯುತ್ತಬಂದಿತು. ಇಂದಿನವರಿಂದ ಅಂಧ-ಪರಂಪರೆಯೆಂದು ಕರೆಸಿಕೊಂಡರೂ ಭಜನಾಮಂಡಲಿಗಳೂ, ಭಾವಿಕ ಜನಸಮುದಾಯವೂ ದಾಸರ ಕೃತಿ-ಕೀರ್ತನೆಗಳನ್ನು ಕರ್ಣಪರಂಪರೆಯಾಗಿ ಉಳಿಸಿಕೊಂಡು ಬಂದುವು.

ಪುರಂದರದಾಸರ ಸಾಹಿತ್ಯಸಂರಕ್ಷಣೆ ಸಾಮಾನ್ಯಜನರಿಂದಲೇ ಆದುದರಿಂದ, ಅವರ ಕೃತಿ-ಕೀರ್ತನೆಗಳು ಅನೇಕ ರೀತಿಯಿಂದ ವಿಕೃತಿಯನ್ನು ಪಡೆದಿವೆ. ಒಬ್ಬೊಬ್ಬನ ಬಾಯಲ್ಲಿ ಒಂದೊಂದು ಬಗೆಯ ಪಾಠಾಂತರಗಳನ್ನು ನಾವು ಕಾಣಬಹುದು. ಅರ್ಥ-ಭಾವಗಳ ಅರಿವಿಲ್ಲದೆ ಬರಿ ಭಾವುಕರಾಗಿ ಹಾಡುವ ಜನಸಾಮಾನ್ಯರ ಬಾಯಲ್ಲಿ, ದಾಸರ ಕೃತಿ-ಕೀರ್ತನೆಗಳು ಅರ್ಥಹೀನಪದಗಳ ಮಾಲೆಗಳಾಗಿ ಕುಳಿತಿವೆ. ಅರ್ಥಸಂಪಾದನೆಗಾಗಿ ದಾಸರ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸಿದ ಪುಸ್ತಕಪ್ರಕಾಶಕರು, ಸಾಹಿತ್ಯಸಂಪಾದನೆಯ ಕಡೆಗೆ ವಿಶೇಷ ಲಕ್ಷ್ಯಹಾಕಿರುವುದಿಲ್ಲ. ಇಷ್ಟೇ ಅಲ್ಲ. ಕೃತಿಸಂಪಾದಕರೆಂದು ಮುಂದೆ ಬಂದ ಕೆಲವರು ಮಹನೀಯರು, ದಾಸರ ಕೃತಿ-ಕೀರ್ತನೆಗಳನ್ನು, ತಮ್ಮ ಮೂಗಿನ ನೇರಕ್ಕೆ ತಿದ್ದಿ, ಅವುಗಳನ್ನು ಇನ್ನಿಷ್ಟು ಆಭಾಸಗೊಳಿಸಿಬಿಟ್ಟಿದ್ದಾರೆ. ಪುರಂದರದಾಸ ಸೇವಾಸಮಿತಿಯು, ಶ್ರೀಪುರಂದರದಾಸರ ಮಾಹಾತ್ಮ್ಯವನ್ನು ಮತ್ತೆ ಕನ್ನಡಜನತೆಯ ಸ್ಮರಣೆಗೆ ತಂದುಕೊಡಬೇಕೆಂದು, ಹಂಪೆಯಲ್ಲಿ ಪ್ರತಿವರ್ಷ ಪುಣ್ಯತಿಥಿ ಮಹೋತ್ಸವವನ್ನು ನಡೆಸುತ್ತಿರುವುದು ಸಂತೋಷದ ಸಂಗತಿಯೆ. ಮಹೋತ್ಸವದ ಅಂಗವಾಗಿ ಪೂಜೆ. ಭಜನೆ, ಪ್ರಸಾದ ಇವೆಲ್ಲ ನಡೆಯುತ್ತಲಿವೆ; ನಡೆಯಲಿ! ಈ ಮಂಡಲದವರು ಮಾಡಬೇಕಾದ ಇನ್ನೂ ಒಂದು ಮಹತ್ತ್ವದ ಕಾರ್ಯವೆಂದರೆ, ದಾಸಸಾಹಿತ್ಯದ ಸಂಶೋಧನೆ, ಪರಿಶೋಧನೆ, ಸಂಪಾದನೆ, ಪ್ರಕಟನೆ ಇವುಗಳಿಗೆ ಸಂಬಂಧಿಸಿದುದು. ಪುರಂದರದಾಸರ ಅಪಾರವಾದ ಕೃತಿ-ಕೀರ್ತನೆಗಳು ಎಲ್ಲೆಲ್ಲಿಯೋ ಹೇಗೋಹೇಗೋ ಚೆದರಿಬಿದ್ದಿವೆ. ಅವುಗಳನ್ನೆಲ್ಲ ಶುದ್ಧಸ್ವರೂಪದಲ್ಲಿ ಒಟ್ಟುಗೂಡಿಸಿ ಪ್ರಕಟಿಸಿದಾಗಲೇ, ದಾಸರ ಮಹಾತ್ಮ್ಯದ ಸಂಪೂರ್ಣಚಿತ್ರವನ್ನು ಜನತೆಯ ಕಣ್ಣೆದುರು ಇರಿಸಿದಂತಾಗುತ್ತದೆ. ಕಾಲವು ಹೋದಂತೆ ಜನಜೀವನದಲ್ಲಿ ಬದಲಾವಣೆಯಾಗಿ ಈಗ ಇದ್ದುವೂ ಅಲ್ಲಲ್ಲಿ ಅಡಗಿಹೋಗುವ ಸಂಭವ ಹೆಚ್ಚಾಗಿದೆ. ಹಾಗಾಗುವುದರ ಮೊದಲೇ, ದಾಸರ ಸಾಹಿತ್ಯಾಭಿಮಾನಿಗಳು ಜಾಗೃತರಾಗಬೇಕು. ಶಕಲಶಕಲವಾಗಿ ಹೋಗಿರುವ ಶ್ರೀಪುರಂದರದಾಸರ ಸಾಹಿತ್ಯಕಮೂರ್ತಿಯನ್ನು ಮತ್ತೆ ಸುಸಂಸ್ಕೃತರ ಹೃದಯಪೀಠದ ಮೇಲೆ ಕುಳ್ಳಿರಿಸಬೇಕು.

ಶ್ರೀಪುರಂದರದಾಸರು ವೈಯಕ್ತಿಕ ಜೀವನದಲ್ಲಿ ಮಾಧ್ವಮತಾನುಯಾಯಿಗಳಾಗಿ ಇರಬಹುದಾದರೂ, ಅವರು ಜೀವನದುದ್ದಕ್ಕೂ ಮಾಡಿದಕಾರ್ಯ ನಾಡಿನ ಜನರಿಗೆಲ್ಲ ಸುಸಂಸ್ಕೃತಿಯ ಅನ್ನವನ್ನೊದಗಿಸಿದುದು. ಅವರ ಹೃದಯ-ಮನಗಳನ್ನು ತಿದ್ದಿ ಮಾನವತೆಯ ಗುರಿಯನ್ನು ತೋರಿದುದು. ಆದುದರಿಂದ, ಪುರಂದರದಾಸರು ಎಲ್ಲ ಕನ್ನಡಿಗರಿಗೂ ಮಾನ್ಯರು; ಎಲ್ಲ ಜನರ ಆದರ-ವಿಶ್ವಾಸಗಳಿಗೂ ಪಾತ್ರರು.

—**ಸಂಪಾದಕರು**

# ನಾಡ ನಡೆ

●

## ಕವಿವರ್ಯ ಬೇಂದ್ರೆಯವರಿಗೆ ಷಷ್ಟ್ಯಬ್ದಿಪೂರ್ತಿ

ಕವಿಗಳಿಗೆ ವಿದ್ಯಾವಂತರಿಗೆ ನಿಜವಾದ ಮನ್ನಣೆಯನ್ನು ಸಲ್ಲಿಸುವ ಜನತೆ, ತನ್ನ ನಾಡಿನ ಸಂಸ್ಕೃತಿಯ ವಿಕಾಸವನ್ನು ವ್ಯಕ್ತಪಡಿಸಿದಂತೆ. ಸ್ವಾಭಾವಿಕವಾಗಿ ಕವಿಗಳಿಗೂ ವಿದ್ಯಾವಂತರಿಗೂ ಉಚಿತವಾದ ಮನ್ನಣೆ ದೊರೆಯುವುದು ಕಡಿಮೆ. ಏಕೆಂದರೆ ವಾಕ್‌ಶ್ರೀಯುತರು ನಿರ್ಮತ್ಸರಿಗಳಾಗಿ ಇರಲಾರರೆಂಬುದು ಬಹುದಿನದಿಂದ ನಡೆದುಕೊಂಡುಬಂದ ಅನುಭವೋಕ್ತಿಯಾಗಿದೆ. ಆದರಂತೆಯೆ ಸರಸ್ವತಿಯ ಉಪಾಸಕರಾದ ಕವಿಗಳು, ಐಹಿಕಜೀವನದ ಪೋಷಣೆಗಾಗಿ ಸಿರಿವಂತರನ್ನು ಅವಲಂಬಿಸಬೇಕಾಗಿ ಬರುವುದರಿಂದ, ಸಿರಿವಂತರು ಅವರನ್ನು ಔದಾರ್ಯದಿಂದ ಕಾಣುವುದು ಕಡಮೆ. ವಸ್ತುಸ್ಥಿತಿಯು ಹೀಗಿದ್ದರೂ, ಸಹೃದಯಿಗಳಾದ ಕನ್ನಡಿಗರು ಕವಿಯನ್ನು ಮನ್ನಿಸುವ ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸಿದುದು ಸಂತೋಷದ ಸಂಗತಿಯಾಗಿದೆ.

ಕವಿವರ್ಯ ಬೇಂದ್ರೆಯವರ ೫೯ನೆಯ ಹುಟ್ಟಿದ ಹಬ್ಬವನ್ನು ಧಾರವಾಡದ ಕನ್ನಡಿಗರು, ಎಲ್ಲ ಕನ್ನಡಿಗರ ನೆರವನ್ನು ಪಡೆದು ೧೯೫೬ರಲ್ಲಿ ವಿಜೃಂಭಣೆಯಿಂದ ನಡೆಸಿದರು. ಈಗ ಅವರಿಗೆ ಅರುವತ್ತು ವರ್ಷ ಪೂರ್ಣವಾದ ಸಂತೋಷಸಮಾರಂಭವನ್ನು ಸೊಲ್ಲಾಪುರ ನಗರದ ಕನ್ನಡಿಗರು, ಅಲ್ಲಿಯ ಮಹಾರಾಷ್ಟ್ರೀಯ ಮಿತ್ರರ ಸಹಕಾರದೊಂದಿಗೆ ಉತ್ಸವದಿಂದ ನೆರವೇರಿಸಿದರು.

ಯಾವುದೇ ವಿದ್ಯಾವಂತನಿಗೆ ಅಥವಾ ಸಮಾಜ ಕಾರ್ಯಕರ್ತನಿಗೆ ಜನತೆಯ ಉಪೇಕ್ಷಾ ಬುದ್ಧಿಯಂತಹ ಶಿಕ್ಷೆ ಇನ್ನೊಂದಿಲ್ಲ. ಮಾಡಿದ ಕಾರ್ಯವನ್ನು ಮೆಚ್ಚಿ ' ಭಲೆ ' ಎಂದು ಆಗಾಗ ಬೆನ್ನು ತಟ್ಟುತ್ತಿದ್ದರೆ ಅವರ ನಿರ್ಮಾಣಶಕ್ತಿ–ಕಾರ್ಯಶಕ್ತಿಗಳು ಇನ್ನಿಷ್ಟು ಬೆಳೆಯುವುವು. ಸಾಹಿತ್ಯಿಕ ಅಥವಾ ಸಮಾಜಕಾರ್ಯಕರ್ತ ಹೀಗೆ ಸಮಾಜದ ಮೆಚ್ಚಿಕೆಯನ್ನು ಅಪೇಕ್ಷಿಸುವುದು ಸ್ವಾರ್ಥವೂ ಅಲ್ಲ; ತಪ್ಪೂ ಅಲ್ಲ. ಅದೊಂದು ನಿಸರ್ಗಧರ್ಮ.

ಕವಿವರ್ಯ ಬೇಂದ್ರೆಯವರ ಕೃತಿನಿರ್ಮಿತಿ, ಸಾಂಸ್ಕೃತಿಕ ಕಾರ್ಯ ಇವುಗಳ ಬಗೆಗೆ ಇಲ್ಲಿ ಹೆಚ್ಚಾಗಿ ಬರೆಯುವುದು ತೀರ ಅನಾವಶ್ಯಕ. ಏಕೆಂದರೆ ಕನ್ನಡನಾಡಿನ ಪ್ರತಿಯೊಬ್ಬ ಸಾಕ್ಷರಿಯೂ ಶ್ರೀ. ಬೇಂದ್ರೆಯವರ ವ್ಯಕ್ತಿತ್ವವನ್ನೂ ಸಾಹಿತ್ಯನಿರ್ಮಿತಿಯನ್ನೂ ಚೆನ್ನಾಗಿ ಅರಿತಿರುವನು. ಶ್ರೀ. ಬೇಂದ್ರೆಯವರನ್ನು ಹತ್ತಿರದಿಂದ ಅರಿತವರಿಗೆ ' ಅವರೀಗ ಹೊರಗೆ ಹಾಕಿರುವ ಸಾಹಿತ್ಯಕ್ಕಿಂತ, ಭಾವನೆ-ಬುದ್ಧಿಗಳಲ್ಲಿ ಹುದುಗಿಸಿ ಇಟ್ಟುಕೊಂಡಿರುವ ಸಾಹಿತ್ಯ ಹೆಚ್ಚು ಇದೆ ' ಎಂಬುದು ಚೆನ್ನಾಗಿ ಗೊತ್ತು. ಅದು ಹೊರಗೆ ಬರಲು ಶ್ರೀ. ಬೇಂದ್ರೆಯವರಿಗೆ ಆರೋಗ್ಯಪೂರ್ಣವಾದ ಶಾಂತಜೀವನವು ಬೇಕು. ಕರ್ನಾಟಕದ ಭಾಗ್ಯವಿಧಾತ ಜನರು ಅವುಗಳನ್ನು ಅವರಿಗೆ ಒದಗಿಸಿಕೊಡಲೆಂದು ನಮ್ಮ ಹಾರಯಿಕೆ. ಶ್ರೀ. ಬೇಂದ್ರೆಯವರ ಕಾರ್ಯದ ಬೆಲೆಯನ್ನು ಸರಿಯಾಗಿ ಅರಿತುಕೊಂಡು, ಅವರಿಗೆ ಯೋಗ್ಯ ಮನ್ನಣೆಯನ್ನು ಸಲ್ಲಿಸಿದುದಕ್ಕಾಗಿ ಕನ್ನಡ ಜನತೆಗೆ ಧನ್ಯವಾದಗಳು.

## ಮರಾಠಿಗರು ಆತ್ಮಘಾತಕ ವೃತ್ತಿಯನ್ನು ಬಿಡಲಿ !

ಬೆಳಗಾಂವಿ, ಕಾರವಾರ ಜಿಲ್ಲೆಗಳ ಕೆಲವು ಭಾಗಗಳ ಬಗೆಗೆ ಮಹಾರಾಷ್ಟ್ರೀಯರು ಇನ್ನೂ ಹುಚ್ಚುಹಟವನ್ನು ಇರಿಸಿಕೊಂಡು ಅದಕ್ಕಾಗಿ ತಮ್ಮ ಚಳವಳಿಯನ್ನು ಮುಂದುವರೆಸುವ ಮಾತುಗಳನ್ನು ಮತ್ತೆ ಮತ್ತೆ ಆಡುತ್ತಿರುವುದು ವಿಷಾದದ ಸಂಗತಿಯಾಗಿದೆ. ತಲೆತಿರುಕರ ತಂಡದಂತಿರುವ ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ಜನರಂತೂ, ಬೇಗನೆ ಬೆಳಗಾಂವಿಯಲ್ಲಿ ' ಸತ್ಯಾಗ್ರಹ 'ವನ್ನೇ ಪ್ರಾರಂಭಿಸಲಿರುವರಂತೆ. ' ಸತ್ಯಾಗ್ರಹ ' ಎಂಬ ಮಾತು ಈಗ ತನ್ನ ಅರ್ಥಗಾಂಭೀರ್ಯವನ್ನೇ ಕಳೆದುಕೊಂಡು ಬಿಟ್ಟಿದೆ. ಎಂತಹ ಹುಚ್ಚುಹಟವಾದಿಯೂ ತನ್ನ ಆಕಾಂಕ್ಷೆಯನ್ನು ಪೂರಯಿಸಿಕೊಳ್ಳುವುದಕ್ಕಾಗಿ ನಡೆಸುವ ಸತ್ಯವಿರೋಧಕ ಕುಚೇಷ್ಟೆಗಳೆಲ್ಲ ' ಸತ್ಯಾಗ್ರಹ ' ಎಂದು ಕರೆಯಿಸಿಕೊಳ್ಳುತ್ತಲಿವೆ. ಇಂತಹ ಹುಚ್ಚು ' ಸತ್ಯಾಗ್ರಹ 'ಕ್ಕೆ ಉದ್ಯುಕ್ತರಾಗುವುದಕ್ಕಿಂತ, ಬೆಳಗಾಂವಿಯಲ್ಲಿ ವಾಸಿಸುತ್ತಿರುವ ಮಹಾರಾಷ್ಟ್ರೀಯರು, ತಮ್ಮ ಮುಂದಿನ ದಿನಗಳನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ಜಾಣರಾಗಿ ವರ್ತಿಸಿದರೆ ಒಳ್ಳೆಯದಾಗುವುದು.

ಕನ್ನಡಿಗರದೇ ಆಗಿರುವ ಬೆಳಗಾಂವಿ-ಕಾರವಾರ ಜಿಲ್ಲೆಗಳ ಪ್ರದೇಶವನ್ನು ಕನ್ನಡಿಗರು ಎಂದೂ ಬಿಡಲಾರರು. ಅವರು ಅನ್ಯಾಯದಿಂದ ಆ ಪ್ರದೇಶವನ್ನು ಆಕ್ರಮಿಸಬೇಕೆಂದು ಬಯಸುವುದಿಲ್ಲ. ವಿವೇಕಿಗಳಾದ ಯಾರಿಗೂ ಕನ್ನಡಿಗರ ಬೇಡಿಕೆ ನ್ಯಾಯವಾದುದೆಂಬುದು ಗೊತ್ತಾಗದಿರದು. ಸತ್‌ಪಕ್ಷವನ್ನು ಪುರಸ್ಕರಿಸುವುದಾದ ಕೇಂದ್ರ ಸರಕಾರ, ಕನ್ನಡಿಗರ ನ್ಯಾಯವಾದ ಹಕ್ಕುಗಳನ್ನು ಸಂರಕ್ಷಿಸದೆ ಇರಲಾರದು. ಕರ್ನಾಟಕಕ್ಕೆ ಸೇರಿದರೂ ಅಲ್ಲಿಯೆ ನೆಲೆನಿಂತ ಮಹಾರಾಷ್ಟ್ರೀಯರು, ತಮ್ಮ ಹಿತಸಂಬಂಧಗಳನ್ನು ಬಿಟ್ಟು ಬೇರೆ ಕಡೆಗೆ ಹೋಗಬೇಕಾದ ಸಂದರ್ಭವೇನೂ ಇಲ್ಲ. ಕರ್ನಾಟಕದಲ್ಲಿ ಇದ್ದು ನೌಕರಿ–ವ್ಯಾಪಾರ–ವ್ಯವಹಾರಗಳನ್ನು ನಡೆಸಬೇಕೆನ್ನುವ ಮರಾಠಿಗರು ಈಗಲೂ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಕಲಿಯಬೇಕಾಗುವುದು; ಮುಂದೆಯೂ ಕಲಿಯಬೇಕಾಗುವುದು. ಕನ್ನಡಿಗರಲ್ಲಿ ಮೂಡಿದ ಭಾಷೆ–ಸಂಸ್ಕೃತಿಗಳ ಜಾಗೃತಿಯನ್ನು, ಹಿಂದಿನಕಾಲದಂತೆ ಹತ್ತಿಕ್ಕುವುದಕ್ಕೆ ಇನ್ನು ಮಹಾರಾಷ್ಟ್ರೀಯವರಿಂದ ಸಾಧ್ಯವಿಲ್ಲ. ಅಲ್ಲದೆ, ಕರ್ನಾಟಕದಲ್ಲಿ ವಾಸಿಸುವ ಯಾವುದೇ ಪರಭಾಷೆಯವರಿಗೂ, ತಮ್ಮ ಮಾತೃಭಾಷೆಯನ್ನು ಸಂರಕ್ಷಿಸಿಕೊಂಡು ಹೋಗುವುದಕ್ಕೆ ಅಡ್ಡಿ-ಆತಂಕಗಳುಂಟಾಗಲಾರವು. ಬೆಳಗಾಂವಿಯ ಮರಾಠಿಗರು ಈ ವಾಸ್ತವ ಸಂಗತಿಗಳನ್ನು ಲಕ್ಷ್ಯದಲ್ಲಿ ತಂದುಕೊಳ್ಳಬೇಕು. ಕನ್ನಡಿಗರಿಗೂ ತಮಗೂ ಬಿಡಲಾರದ ಸಂಬಂಧವಿರುವ...

ದೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಕನ್ನಡಿಗರೊಂದಿಗೆ ಸ್ನೇಹ-ಸಹಾನುಭೂತಿಗಳು ಹೆಚ್ಚುವಂತಹ ವಾತಾವರಣವನ್ನು ನಿರ್ಮಿಸುವ ಯತ್ನ ಮಾಡಬೇಕು. ಅದನ್ನು ಬಿಟ್ಟು ದುರಾಗ್ರಹದಿಂದ ತಮ್ಮ ಮಹಾರಾಷ್ಟ್ರದ ಚಳವಳಿಯನ್ನೇ ಮುಂದುವರಿಸತೊಡಗಿದರೆ, ಕನ್ನಡಿಗರು ಸ್ವಲ್ಪ ತೊಂದರೆಗಳನ್ನು ಎದುರಿಸಬೇಕಾದೀತೇನೋ ಸರಿ; ಕನ್ನಡಿಗ–ಮರಾಠಿಗರಲ್ಲಿ ಹರಿಹಿಂಗದ ಪ್ರಾಂತೀಯ ದ್ವೇಷ-ಮತ್ಸರಗಳು ತಲೆದೋರಿ, ಜನತೆಯ ಆತ್ಮಘಾತಕ್ಕೆ ಅದು ಕಾರಣವಾದೀತು. ಬೆಳಗಾಂವಿಯ ಮರಾಠಿಗರು, ತಮ್ಮ ವಿವೇಕದ ಮೇಲೆ ಹಾಕಿದ ಪರದೆಯನ್ನು ತೆರೆಯಲಿ. ಶಾಂತಿ–ಸುಖಜೀವನದ ಕಾಲಕ್ಕಾಗಿ ಹವಣಿಸಲಿ!

## ಕರ್ನಾಟಕದಲ್ಲಿ ಇರುವ ಮರಾಠಿಗರು

ಉತ್ತರ ಕರ್ನಾಟಕದ ರಾಜಕೀಯ ಸಾಮಾಜಿಕ ಪರಿಸ್ಥಿತಿಯ ಮೂಲಕ, ಹಲವಾರು ಮಹಾರಾಷ್ಟ್ರೀಯರ ಕುಟುಂಬಗಳು ಬಂದು ಧಾರವಾಡ, ಹುಬ್ಬಳ್ಳಿ, ಗದಗು, ಬಾಗಿಲುಕೋಟೆ, ಬಿಜಾಪುರಗಳಂತಹ ನಗರಗಳಲ್ಲಿಯೂ ಚಿಕ್ಕ ಚಿಕ್ಕ ಪಟ್ಟಣಗಳಲ್ಲಿಯೂ ಮನೆಮಾಡಿಕೊಂಡು, ಸುಖಜೀವಿಗಳಾಗಿ ಬಾಳುತ್ತಿವೆ. ಇಲ್ಲಿಯೆ ಮನೆಮಾಡಿ ನೂರಾರು ವರ್ಷಗಳು ಕಳೆದಿದ್ದರೂ ಅವರು, ಕರ್ನಾಟಕದೊಂದಿಗೆ ಒಂದಾಗದೆ, ತಮ್ಮತನವನ್ನು ಕಾಯ್ದುಕೊಂಡು ಬಾಳುತ್ತಿರುವರು. ಇದು ಸಮಂಜಸವೋ ಅಸಮಂಜಸವೋ ಎಂಬ ವಿಚಾರವನ್ನೇನೂ ನಾವು ಹೇಳುತ್ತಿಲ್ಲ; ಆದರೆ ಅವರ ಎದುರು ಈಗ ಒಂದು ವಿಶಿಷ್ಟ ಕರ್ತವ್ಯವು ನಿಂತಿದೆಯೆಂಬುದನ್ನು ಎಚ್ಚರಕೊಡಲು ಬಯಸುವೆವು.

ಬೆಳಗಾಂವಿಯ ಮರಾಠಿಗರ ದುರಾಗ್ರಹದ ಮೂಲಕ ಪ್ರಾಂತೀಯ ದ್ವೇಷವು ತಲೆಯೆತ್ತಿ ನಿಂತರೆ, ಮಿಕ್ಕ ಕಡೆಯಲ್ಲಿರುವ ಮಹಾರಾಷ್ಟ್ರೀಯರಿಗೆ ನಿಶ್ಚಿಂತಜೀವನ ದೊರೆಯಲಾರದೆಂಬ ಭವಿಷ್ಯವನ್ನು ಅವರು ಅರಿತುಕೊಳ್ಳಬೇಕು. ‘ ಸೇಡಿಗೆ ಸೇಡು ’ ಎಂಬ ಬುದ್ಧಿ ಸಾಮಾನ್ಯಜನತೆಯ ಮನಸ್ಸಿನಲ್ಲಿ ಉಂಟಾಗುವುದು ಅಸ್ವಾಭಾವಿಕವೇನೂ ಅಲ್ಲ. ಕರ್ನಾಟಕದಲ್ಲಿರುವ ಅನೇಕ ಮರಾಠಿಗರ ದೃಷ್ಟಿ, ಈಗಲೂ ಮಹಾರಾಷ್ಟ್ರದ ಪಕ್ಷಪಾತಿಯಾಗಿ ಇರುವುದೇ ಬಹುಜನರ ಅನುಭವದ ವಿಷಯವಾಗಿದೆ. ಇದು ಶುಭಲಕ್ಷಣವೇನೂ ಅಲ್ಲ.

ಈಗ ಕರ್ನಾಟಕದಲ್ಲಿ ಅಲ್ಲಲ್ಲಿ ಇರುವ ಮರಾಠಿಗರು, ಬೆಳಗಾಂವಿಯ ಮರಾಠಿಗರ ಚಟುವಟಿಕೆಗಳನ್ನು ಮೌನಿಗಳಾಗಿಯೆ ನೋಡುತ್ತ ಕುಳಿತಿದ್ದಾರೆ. ಇದರ ದುಷ್ಪರಿಣಾಮದ ಕಲ್ಪನೆ ಬೇಗನೆ ಇವರಲ್ಲಿ ಮೂಡಬೇಕು. ಬೆಳಗಾಂವಿಯ ಮರಾಠಿಗರಿಗೆ ಬುದ್ಧಿ ಹೇಳುವುದಕ್ಕೆ ಅವರು ಬಾಯಿ ತೆರೆಯಬೇಕು. ಅಲ್ಲಲ್ಲಿ ಅವರು ಸಭೆಗಳನ್ನು ಸೇರಿಸಿ, ಬೆಳಗಾಂವಿಯ ಮರಾಠಿಗರಿಗೆ ಸರಿಯಾದ ಎಚ್ಚರಿಕೆಯನ್ನು ಕೊಡುವ ಗೊತ್ತುವಳಿಯನ್ನು ಪಾಸುಮಾಡಬೇಕು.

ಕರ್ನಾಟಕದಲ್ಲಿಯ ಪಟ್ಟಣಗಳಲ್ಲಿ ಮರಾಠಿಗರ –ಒಂದಿಲ್ಲೊಂದು ಬಗೆಯ—ಸುಸಂಘಟಿತ ಸಂಸ್ಥೆಗಳು ಇದ್ದೇ ಇವೆ. ಅವೆಲ್ಲ ಕನ್ನಡಿಗ–ಮರಾಠಿಗರಲ್ಲಿ ಶಾಶ್ವತವಾದ ದ್ವೇಷವು ನೆಲೆಗೊಳ್ಳದಂತೆ ಪೂರ್ವಜಾಗೃತಿಯನ್ನು ವಹಿಸಬೇಕು.

## ಪ್ರೊ. ಮುಗಳಿಯವರಿಗೆ ಡಿ. ಲಿಟ್, ಪ್ರಶಸ್ತಿ

ಸಾಂಗಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಕನ್ನಡಪ್ರಾಧ್ಯಾಪಕರೂ ಸದ್ಯ ಆ ಕಾಲೇಜಿನ ವ್ಹಾಯಿಸ್ ಪ್ರಿನ್ಸಿಪಾಲರೂ ಆಗಿರುವ ಶ್ರೀ. ರಂಗನಾಥ ಮುಗಳಿಯವರು, ಮಹಾರಾಷ್ಟ್ರ ವಿಶ್ವವಿದ್ಯಾನಿಲಯದಿಂದ ಡಿ. ಲಿಟ್. ಎಂಬ ಮನ್ನಣೆಯ ಬಿರುದನ್ನು ಪಡೆದುದು ಕನ್ನಡಿಗರಿಗೆಲ್ಲ ಸಂತೋಷ–ಅಭಿಮಾನಗಳ ಸಂಗತಿಯಾಗಿದೆ. ಅನೇಕರ ಅಭ್ಯಾಸ–ಪ್ರಯತ್ನಗಳಿಂದ ಸಾಧ್ಯವಾಗಬಹುದಾದ ಕನ್ನಡ ಸಾಹಿತ್ಯದ ವಿಸ್ತೃತ ಚರಿತ್ರೆಯನ್ನು, ಶ್ರೀ. ಮುಗಳಿಯವರು ತನ್ನೊಬ್ಬರ ಪ್ರಯತ್ನ–ಪರಿಶ್ರಮಗಳಿಂದಲೇ ಸಾಧ್ಯಮಾಡಿ ತೋರಿಸಿದರು. ಅವರ ಪರಿಶ್ರಮದ ಫಲವು ‘ ಏನೋ ಎಂತೋ ’ ಆಗಿ ನಿಲ್ಲಲಿಲ್ಲ. ಮಹಾರಾಷ್ಟ್ರ ವಿಶ್ವವಿದ್ಯಾನಿಲಯದಿಂದ ನಿಯಮಿಸಲ್ಪಟ್ಟ ಮೂವರು ಕನ್ನಡ ಸಾಹಿತ್ಯಪ್ರವೀಣರಿಂದ, ಸರಿಯಾದ ಪ್ರಶಂಸೆಯನ್ನು ಪಡೆಯಿತು. ಅವರ ಅಭಿಪ್ರಾಯದಂತೆ ಮಹಾರಾಷ್ಟ್ರ ವಿ. ವಿ. ನಿಲಯವು ಮುಗಳಿಯವರಿಗೆ ಮನ್ನಣೆಯ ಬಿರುದನ್ನು ದಯೆಪಾಲಿಸಿತು. ಮಹಾರಾಷ್ಟ್ರ ವಿ. ವಿ. ನಿಲಯವು ತನ್ನ ನೆರೆನಾಡಿನ ಭಾಷೆಯ ಅಭ್ಯಾಸಕ್ಕೂ ಒಂದು ಸ್ಥಾನವಿತ್ತು, ಆ ಭಾಷೆಯ ಸಾಹಿತ್ಯಜ್ಞರಿಗೆ ಮನ್ನಣೆ ಸಲ್ಲಿಸಿದ್ದಕ್ಕಾಗಿ, ವಿಶ್ವವಿದ್ಯಾನಿಲಯದ ಅಧಿಕಾರಿವರ್ಗಕ್ಕೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಒಬ್ಬರೇ ಹೊಕ್ಕು ತಿರುಗಾಡಿ, ಅದರ ಕೂಲಂಕಷ ಪರಿಚಯ ಮಾಡಿಕೊಂಡು, ಕನ್ನಡಿಗರ ಅಭ್ಯಾಸಕ್ಕಾಗಿ ಒಂದು ಒಳ್ಳೆಯ ಗ್ರಂಥವನ್ನು ಒದಗಿಸಿಕೊಟ್ಟುದಕ್ಕಾಗಿಯೂ, ತಜ್ಞಸಮಿತಿಯ ಸೂಕ್ಷ್ಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಡಿ. ಲಿಟ್. ಪ್ರಶಸ್ತಿಯನ್ನು ಪಡೆದುದಕ್ಕಾಗಿಯೂ ಡಾ. ಮುಗಳಿಯವರಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸುತ್ತೇವೆ.

## ಪಾಕಿಸ್ತಾನದ ಭಾರತ ವಿರೋಧಿ ಚಟುವಟಿಕೆ

ಇಷ್ಟೆಲ್ಲ ಅಧಿಕಾರದ ಕೈಗಳ ಬದಲಾವಣೆಯಾದ ಮೇಲಾದರೂ ಪಾಕಿಸ್ತಾನ್ ಸರಕಾರದ ಮನೋವೃತ್ತಿಯಲ್ಲಿ, ಭಾರತದ ವಿಷಯದ ಧೋರಣೆಯಲ್ಲಿ, ಏನಾದರೂ ಸಮಂಜಸತನವು ಉಂಟಾಗಿರಬಹುದೆಂದು, ಭಾರತದ ಸ್ನಿಗ್ಧಹೃದಯದ ಜನತೆ ಭಾವಿಸಿದ್ದಿತು; ಆದರೆ ‘ ಹಿಂದಿನ ಕಳ್ಳರೇ ವಾಸಿ! ’ ಎಂಬ ನ್ಯಾಯದಂತಾಗಿದೆ ಪಾಕಿಸ್ತಾನದ ಇಂದಿನ ರಾಜಕೀಯ ನೀತಿಯ ಪರಿಸ್ಥಿತಿ. ಹಿಂದಿನವರು ಕಾಶ್ಮೀರದ ಸಮಸ್ಯೆಯೊಂದಕ್ಕಾಗಿಯೆ ಭಾರತದೊಂದಿಗೆ ವಿರೋಧಭಾವವನ್ನು ಉಗ್ಗಡಿಸುತ್ತಲಿದ್ದರು. ಇಂದು ಭಾರತದ ಗಡಿಗಳನ್ನು ಆಕ್ರಮಿಸಿ, ಪಾಕಿಸ್ತಾನ್ ಸರಕಾರವು ಹೊಸ ಹೊಸ ಸಮಸ್ಯೆಗಳನ್ನು ನಿರ್ಮಿಸುತ್ತಲಿದೆ. ಪಶ್ಚಿಮ ಪಾಕಿಸ್ತಾನದ ಸೈನಿಕರು ಭಾಡಭೇಟವನ್ನು ಆಕ್ರಮಿಸಲು ಹವಣಿಸಿದುದೂ, ಪೂರ್ವಪಾಕಿಸ್ತಾನದ ಸೈನಿಕರು

( ೩೬೯ನೆಯ ಪುಟ ನೋಡಿರಿ )

# ಹೆಸರುವಾಸಿಯಾಗಬೇಕು!

( ನವ್ಯಕಥೆ )

ಶ್ರೀ. ನಾ. ನರಸಿಂಹಮೂರ್ತಿ, ಮೈಸೂರುನಗರ

卐

**'ಹೆಸರುವಾಸಿಯಾಗಬೇಕು!' ಇದು ಇಂದಿನ ಪ್ರತಿಯೊಬ್ಬ ತರುಣನ ಹಂಬಲ! ಈ ಹಂಬಲದಲ್ಲಿಯೆ ಅವನು ಹಲವಾರು ಮನಸಿನ ಮಂಡಿಗೆ ತಿನ್ನಲು ತೊಡಗುವನು. ನಿಶ್ಚಯ ಬುದ್ಧಿಯಿಲ್ಲದವನ ಎಲ್ಲ ಹಂಬಲಗಳೂ ಬಿಸಿಲುಗುದುರೆಗಳಾಗುವುವು. ಬುದ್ಧಿ ಕಳೆದು ಕೊಂಡಮೇಲೆ ಬಾಯಿಬಾಯಿಬಿಟ್ಟರೆ ಆಗುವುದೇನು?**

卐

ಹೌದು, ನಿನ್ನ ಅಂತಃಶಕ್ತಿ ಅಪಾರವಾಗಿದೆ. ನಿನ್ನ ಚೇತನ ಅಸಾಧಾರಣವಾಗಿದೆ. ನೀನು ಸಾಮಾನ್ಯನಲ್ಲ. ನೀನು ಹುಟ್ಟಿರುವುದು ಸಾಮಾನ್ಯನಾಗಿ ಬಾಳಲಲ್ಲ, ಹ್ನ! ಸಾಹಿತ್ಯ! ಕೇವಲ ಹದಿನೈದು ವರ್ಷಗಳೊಳಗೆ........?

ನೀನೊಬ್ಬ ದೊಡ್ಡ ಸಾಹಿತಿ. ನಿನಗೆ ಮೊದಲಿದ್ದ ಸಮಸ್ಯೆಗಳಿಲ್ಲ. ಹೊಟ್ಟೆ....? ಹ್ಹ, ಹ್ಹ, ಹ್ಹ! ಹೊಟ್ಟೆ ಅದರಷ್ಟಕ್ಕದೇ ತುಂಬುತ್ತದೆ. ನೀನೇನೂ ಅದನ್ನು ತುಂಬುವ ತೊಂದರೆ ತೆಗೆದುಕೊಳ್ಳಬೇಕಿಲ್ಲ. ಅಬ್ಬ! ನಿನ್ನ ಜೀವನ ಎಂತಹ ಆದರ್ಶವಾದುದು!

ನೀನೊಬ್ಬ ದೊಡ್ಡ ಸಂಗೀತಗಾರ! ನೀನೊಬ್ಬ ದೊಡ್ಡ ವೇದಾಂತಿ! ನೀನೊಬ್ಬ ದೊಡ್ಡ ವಿಮರ್ಶಕ! ಹ್ನ! ಮದರಾಸಿನಲ್ಲಿ ಸ್ವಂತದ ಮನೆ, ಪುಟ್ಟ—ಅಚ್ಚುಕಟ್ಟಾದ ಮನೆ! ಅಷ್ಟೇ ಅಚ್ಚುಕಟ್ಟಾದ ಹೆಂಡತಿ!

ನೀನು ಬಿಡುವೆ ಈಗಿನ ಹಾಳುಜೀವನವನ್ನು! ನಿನ್ನ ಅಪಾರವಾದ ಚೇತನ ನಿನ್ನನ್ನು ಈ ದಾರಿಯಲ್ಲಿ ಹೋಗಲು ಬಿಡುವುದಿಲ್ಲ. ಖಂಡಿತ ನೀನು ಡಾಕ್ಟರ್ ಆಗಲಾರೆ. ಅದು ಸಾಧ್ಯವಿಲ್ಲ. ನಿನ್ನ ಮನೆಯವರಿಗೆ ಅಪಾರವಾದ ನಿರಾಶೆಯುಂಟಾಗಬಹುದು; ಆದರೆ ನಿನ್ನ ನಿರಾಶೆ? ನಿಜ! ನೀನು ನಿನ್ನ ನಿರಾಶೆಯನ್ನು ಎಂದೆಂದಿಗೂ ತಾಳಲಾರೆ! ತಾಳಕೂಡದು. ಮೊದಲು ನೀನು, ಅನಂತರ ಮಿಕ್ಕವರು! ನಿನ್ನ ನಿರಾಶೆ! ಎಂತಹ ದೊಡ್ಡದು! ಅವರೆಲ್ಲರ ನಿರಾಶೆಗಳನ್ನು ಒಟ್ಟುಗೂಡಿಸಿದರೂ ನಿನ್ನ ನಿರಾಶೆಯ ಹತ್ತನೆಯ ಒಂದು ಪಾಲಾಗಬಹುದೇ? ಛೇ! ಅದೆಲ್ಲ ಅವರಿಗೆ ಅರ್ಥವಾಗುವಂತಿಲ್ಲ. ಅವರಿಗೆ 'ನೀನೊಬ್ಬ ಡಾಕ್ಟರಾಗಬೇಕು, ಅನಂತರ ಕಾರು ಇಡಬೇಕು.' ಕಾರು! ಬೇರೆ ಯಾವ ಕೆಲಸದಿಂದಲೂ ಕಾರನ್ನು ಇಡಲು ಸಾಧ್ಯವೇ ಇಲ್ಲವೇ? ದೊಡ್ಡ ಸಾಹಿತಿಯಾದರೆ, ದೊಡ್ಡ ಸಂಗೀತಗಾರನಾದರೆ, ಕಾರಿಡಲು ಸಾಧ್ಯವಿಲ್ಲವೇ? ಪಾಪ! ಡಾಕ್ಟರ್ ಆಗಿಯೇ ಕಾರು ಇಡಬೇಕು!

ಆದರೆ ಅದು ನಿನ್ನಿಂದಾಗದ ಕೆಲಸ. ನಿನ್ನ ಹಣೆಯಲ್ಲಿ ಅದು ಬರೆದಿಲ್ಲ. ಹಾಗೆಂದು ಜ್ಯೋತಿಷ್ಯರೊಬ್ಬರೇ ಹೇಳಿರಲಿಲ್ಲವೇ? ಮೆಡಿಕಲ್ ಕೋರ್ಸ್‌ನಲ್ಲಿ ಒಂದು ವರ್ಷ ಕಳೆದಾಕ್ಷಣ ಡಾಕ್ಟರೇ ಆದೆಯೆಂದು ತಿಳಿದೆಯೇನು? ಛೇ! ಅವರ ಜ್ಯೋತಿಷ್ಯ ಎಂದಿಗೂ ಸುಳ್ಳಾಗುವುದಿಲ್ಲ. ಹಾಗೆಂದು ಗಾಬರಿಬೀಳಬೇಡ. ನೀನು ಹುಟ್ಟಿರುವುದು ಬೇರೆಯ ಕೆಲಸಗಳಿಗಾಗಿ. ಅಲ್ಲಿ ನೋಡು, ಅಳುತ್ತ ಬಿದ್ದಿರುವ "Complete works of Wordsworth" ಅನ್ನು! ಅಲ್ಲಿ ನೋಡು, ಅಳುತ್ತ ಬಿದ್ದಿರುವ ವೀಣೆಯನ್ನು! ಅಲ್ಲಿ ನೋಡು ಗೋಳಿಡುತ್ತಿರುವ Metaphysics ಪುಸ್ತಕವನ್ನು! ಅವನ್ನೆಲ್ಲಾ ತಬ್ಬಲಿ ಮಾಡಲು ಸಿದ್ಧನಿರುವೆಯಾ? ಅವುಗಳ ಮೇಲಿನ ನಿನ್ನ ಪ್ರೇಮ ಅಷ್ಟು ಕ್ಷಣಿಕವಾದುದೇ? ಇಷ್ಟು ಬೇಗ ಅವು ನಿನ್ನಿಂದ ದೂರವಾದುವೇ?

ಇಲ್ಲ, ಇಲ್ಲ. ನೀನು ಅವನ್ನು ಬಿಡಲು ಯತ್ನಿಸಿದರೂ ಅವು ನಿನ್ನನ್ನು ಬಿಡಲಾರವು. ನಿನಗೆ ಉಜ್ವಲಭವಿಷ್ಯ ಕಾದಿರುವಾಗ ನೀನು ಹಾಗೆ ಅವನ್ನು ತ್ಯಜಿಸಲು ಸಾಧ್ಯವಿಲ್ಲ.

ಮುಂದೆ? ನಿನ್ನ ಅಂತಃಶಕ್ತಿಯು ಪ್ರವಾಹ. ಕೇವಲ ನಾಲ್ಕು ವರ್ಷಗಳಲ್ಲಿ ನೀನು ಎಲ್ಲವನ್ನೂ ಮೂಲೆಗೆ ತಳ್ಳಿ, ನಿನ್ನ ಅಳುತ್ತಿರುವ ವೀಣೆಯನ್ನು ಸಮಾಧಾನಪಡಿಸಲು ಪ್ರಾರಂಭಿಸುವೆ. ಗುರುಗಳೊಬ್ಬರಲ್ಲಿ ನೀನು ಕಲಿಯಲು ಪ್ರಾರಂಭಿಸುವೆ. ನಿನ್ನ ಅಗಾಧವಾದ ಹಸಿವಿಗೆ ಅವರು ಕಲಿತಿರುವ ವಿದ್ಯೆ, ಛೇ, ಪಾಪ! ಕೇವಲ ಎರಡು ಮೂರು ವರ್ಷಗಳಲ್ಲಿ ಅವರು ಹೇಳಿಕೊಡಬಲ್ಲುದೆಲ್ಲಾ ನಿನ್ನ ಹಸಿವಿಗೆ ಬಡಿಸಲ್ಪಡುವುದು. ಅನಂತರ ಅವರೇ ನಿನ್ನನ್ನು ಭಾರಿ ವಿದ್ವಾಂಸರೊಬ್ಬರಲ್ಲಿ ಸೇರಿಸುವರು. ಅವರೇನೋ ಭಾರಿ ವಿದ್ವಾಂಸರು ನಿಜ; ಆದರೆ ನಿನ್ನ ಹಸಿವು? ನಿನ್ನ ಚೇತನ? ಅವುಗಳ ಮುಂದೆ ಅವರೂ ಕೇವಲ ಮೂರುವರ್ಷಗಳಲ್ಲಿ ಬರಿದಾಗುವರು. ಅನಂತರ ಈ ದೇಶದಲ್ಲೇ ಅತ್ಯಂತ ಭಾರಿ ವಿದ್ವಾಂಸರಲ್ಲಿಗೆ ಹೋಗುವೆ. ಅವರು ನಿನ್ನ ಅಪಾರಪ್ರತಿಭೆಗೆ ಅಚ್ಚರಿಪಡುವರು. "ನಾನೇನು ನಿನಗೆ

ಹೆಚ್ಚಿಗೆ ಹೇಳಿಕೊಡುವುದು ಇಲ್ಲಪ್ಪ....ನಿನ್ನಲ್ಲೇ ನಾನು ಕಲಿಯುವುದು ಬೇಕಾದಷ್ಟಿದೆ" ಎಂದು ತಮ್ಮಲ್ಲಿಯ ಅಪೂರ್ವವಿದ್ಯೆಯನ್ನು ನಿನಗೆ ಹೇಳಿಕೊಡುವರು.

ಕೇವಲ ಒಂದು ವರ್ಷದಲ್ಲಿ! ನೀನೊಬ್ಬ ಭಾರಿ ವಿದ್ವಾಂಸ. ನಿನ್ನ ಸಮ ವೀಣೆ ಬಾರಿಸುವವರೇ ಇಲ್ಲ ಈ ದೇಶದಲ್ಲಿ! ನಿನ್ನ ಮೊದಲನೆಯ ಕಛೇರಿ, ರೇಡಿಯೋದಲ್ಲಿ. ಅಬ್ಬಾ! ಎಂತಹ ಕಛೇರಿ! ನಿಜವಾಗಿಯೂ ಭಾರಿ ಭಾರಿ ವಿದ್ವಾಂಸರೆಲ್ಲಾ ಮೂಕರಾಗಿ ಕುಳಿತು ಬಿಡುವರು. ಅನಂತರ ನಿನ್ನ ಶುಕ್ರದಶೆ ಪ್ರಾರಂಭ. ಮದ್ರಾಸಿನ ಸಂಗೀತ ಸಭೆಗಳಲ್ಲಿ, ಒಂದೊಂದರಲ್ಲಿ ಒಂದೊಂದು ದಿನದಂತೆ ಕಛೇರಿಗಳ ಸುರಿಮಳೆ! ಅಂತೆಯೇ ದುಡ್ಡಿನದೂ! ಎಲ್ಲೆಲ್ಲೂ ನಿನ್ನ ಹೆಸರೇ! ಕಡೆಗೆ......, ಕಡೆಗೆ, ಒಂದು ದಿನ ರಾಷ್ಟ್ರೀಯ ಕಾರ್ಯಕ್ರಮದಲ್ಲಿಯೂ ನಿನಗೆ ಅವಕಾಶ! ಸರಿ. ಸಂಪಾದಿಸಿದ ದುಡ್ಡಿನ ಸ್ವಲ್ಪ ಭಾಗದಲ್ಲಿಯೇ ಮದ್ರಾಸಿನಲ್ಲಿ ಒಂದು ಪುಟ್ಟ ಅಚ್ಚುಕಟ್ಟಾದ ಮನೆಯನ್ನೂ, ಒಂದಿಷ್ಟು ಹೊಲ-ಗದ್ದೆಗಳನ್ನೂ ಕೊಳ್ಳುವೆ. ಸರಿ. ಹೊಟ್ಟೆತುಂಬುವ ಸಮಸ್ಯೆ ನಿನಗೆಲ್ಲಿಯದು? ಮಿಕ್ಕ ದುಡ್ಡೆಲ್ಲಾ ಬಡಬಗ್ಗರಿಗೆ, ಅನಾಥಾಶ್ರಮಗಳಿಗೆ! ನಿಜಕ್ಕೂ ನಿನ್ನ ಔದಾರ್ಯ ನಿನ್ನ ಚೇತನದಷ್ಟೇ ಅಪಾರವಾದುದು.

ಅನಂತರ? ಮೂರು ಮೂರು ದಿನಕ್ಕೂ ಕಛೇರಿ! ದುಡ್ಡು! ಬರಿಯ ಸಂಜೆ ಹೊತ್ತು ನೀನು ದುಡಿಯಬೇಕಾದುದು! ದಿನದ ಮಿಕ್ಕ ಕಾಲವೆಲ್ಲಾ ನಿನ್ನ ಅಪಾರಚೇತನದ ಮಿಕ್ಕ ಪ್ರವಾಹಗಳಿಗಾಗಿ. ಅದು ಬರಿಯ ಸಂಗೀತದಿಂದ ತಣಿಯಬಲ್ಲುದೇ?

ಬೆಳಗ್ಗೆ ನಾಲ್ಕು ಗಂಟೆ ಹೊಡೆದ ಕೂಡಲೆ ನಿನ್ನ ಎಚ್ಚರ. ತತ್ಕ್ಷಣ ನಿನ್ನ ತಣ್ಣೀರಿನ ಸ್ನಾನ. ಐದು ಗಂಟೆಯಿಂದ ಏಳು ಗಂಟೆಯ ವರೆಗೆ ತತ್ತ್ವಶಾಸ್ತ್ರಾಭ್ಯಾಸ! ಎರಡು ಗಂಟೆಗಳು! ಮಿಕ್ಕವರು ದಿನಗಟ್ಟಲೆ ಓದಿ ಅರಗಿಸಿಕೊಳ್ಳುವುದನ್ನು ನೀನು ಕೇವಲ ಕೆಲವು ಗಂಟೆಗಳಲ್ಲಿ ಅರಗಿಸಿಕೊಳ್ಳಬಲ್ಲೆ. ಅಂತಹ ಶಕ್ತಿ ನಿನ್ನದು! ಅಂತಹುದರಲ್ಲಿ ದಿನವೂ ಎರಡು ಗಂಟೆಗಳ ಕಾಲ ಅಭ್ಯಾಸ! ಅದಕ್ಕಿಂತ ಹೆಚ್ಚೇನು ಬೇಕು?

ಅನಂತರ ಎಂಟುಗಂಟೆಯಿಂದ ಹತ್ತು ಗಂಟೆಯ ವರೆಗೆ ನಿನ್ನ ಬರೆವಣಿಗೆ! ಎರಡು ಗಂಟೆಗಳಲ್ಲಿ ಕಡಿಮೆಯೆಂದರೆ ಇಪ್ಪತ್ತು ಪುಟಗಳನ್ನು ಬರೆಯುವೆ. ದಿನಕ್ಕೆ ಇಪ್ಪತ್ತು ಪುಟಗಳು! ತಿಂಗಳಿಗೆ ಆರು ನೂರು ಪುಟಗಳು! ಮುನ್ನೂರು ಪುಟಗಳ ಎರಡು ಪುಸ್ತಕಗಳು! ವರ್ಷಕ್ಕೆ ಇಪ್ಪತ್ತುನಾಲ್ಕು ಪುಸ್ತಕಗಳು. ಪುನಃ ಅವುಗಳಿಂದ ದುಡ್ಡು. ಬಡಬಗ್ಗರು, ಅನಾಥಾಶ್ರಮ, ಭಿಕ್ಷುಕರ ಕಾಲೋನಿ, ಆಸ್ಪತ್ರೆ!

ಬಳಿಕ ಊಟ. ಹನ್ನೆರಡು ಗಂಟೆಯಿಂದ ನಾಲ್ಕು ಗಂಟೆಯ ವರೆಗೆ ಸಾಹಿತ್ಯಾಭ್ಯಾಸ, ವಿಜ್ಞಾನಾಭ್ಯಾಸ. ನಾಲ್ಕರಿಂದ ಐದರ ವರೆಗೆ ವಿಶ್ರಾಂತಿ. ಐದರಿಂದ ಏಳರ ವರೆಗೆ ನಿನ್ನ ಶಿಷ್ಯರಿಗೆ ಉಚಿತ ಸಂಗೀತಪಾಠ. ಹೌದು. ನಿನಗೆ ಎಂಟು ಹತ್ತು ಜನಶಿಷ್ಯರು ಸಿಕ್ಕುತ್ತಾರೆ. ನಿನ್ನ ಕಛೇರಿಗಳಿಂದ ಮರುಳಾಗಿ ನಿನ್ನಲ್ಲಿ ಪಾಠಕ್ಕಾಗಿ ಬರುವವರು ನೂರಾರು ಮಂದಿ. ನೂರಾರು ರೂಪಾಯಿಗಳನ್ನು ಕೊಡಲೂ ಅವರು ಸಿದ್ಧರು; ಆದರೆ ನಿನಗೆ ಬೇಕಾದುದು ದುಡ್ಡಲ್ಲ, ನಿಜವಾದ ಅರ್ಹತೆ. ಆದ್ದರಿಂದ ಎಂಟು ಹತ್ತು ಜನರನ್ನು ಮಾತ್ರ ಆರಿಸಿಕೊಳ್ಳುವೆ. ಕಡು ಬಡವರವರು! ಆದರೂ ಸಂಗೀತವೆಂದರೆ ಅವರಿಗೆ ಪ್ರಾಣ. ಅದನ್ನು ಕಲಿಯದೆ ಅವರಿಗೆ ಸಾಧ್ಯವಿಲ್ಲ. ಅವರಿಗೆ ಪಾಠ ಹೇಳಲು ನೀನು ಸಂತೋಷವಾಗಿ ಒಪ್ಪುವೆ.

ನೀನು ಪಾಠ ಹೇಳುವ ರೀತಿಯೇ ಬೇರೆ. ಒಬ್ಬರಿಗೆ ಕೇವಲ ಹತ್ತು ಹದಿನೈದು ನಿಮಿಷಗಳಲ್ಲಿ, ಮಿಕ್ಕವರು ಒಂದು ದಿನದಲ್ಲಿ ಹೇಳಿಕೊಡುವಷ್ಟನ್ನು ಕಲಿಸುವ ಶಕ್ತಿ ನಿನ್ನದು. ನೀನು ಹೇಳಿಕೊಟ್ಟಷ್ಟನ್ನು ಅವರು ಮಾರನೆಯ ಸಲ ನಿನ್ನಲ್ಲಿಗೆ ಬಂದಾಗ ಒಪ್ಪಿಸಲೇ ಬೇಕು. ಅದು ನಿನ್ನ ಕಟ್ಟಪ್ಪಣೆ. ಅಂತೆಯೇ ಅವರು ಗಂಟೆಗಟ್ಟಲೆ ಅಭ್ಯಸಿಸಿ ಮಾರನೆಯ ದಿನವೋ, ಅದರ ಮಾರನೆಯ ದಿನವೋ, ನಿನ್ನಲ್ಲಿಗೆ ಬರುವರು. ಅನಂತರ ನಿನ್ನ ಪಾಠ ಮುಂದುವರಿಯುವುದು.

ಅನಂತರ ಏಳು ಗಂಟೆಯ ಮೇಲೆ ಕಛೇರಿಗಳಿಗಾಗಿ ಮನೆಯನ್ನು ಬಿಡುವೆ. ಎಷ್ಟು ದುಡ್ಡು ಬಂದರೂ ಅದೆಲ್ಲ ಅದರ ಆವಶ್ಯಕತೆ ಇರುವವರ ಪಾಲು. ಕಾರು! ಕಾರಿನ ಅವಶ್ಯಕತೆ ನಿನಗಿಲ್ಲ. ಶುದ್ಧ ಪೆದ್ದುಕೆಲಸ ಮಾಡಿಕೊಂಡನೆಂದು ಹೀಯಾಳಿಸಿದ ನಿನ್ನ ಸಂಬಂಧಿಕರು, ಸ್ನೇಹಿತರು ಎಲ್ಲರಿಗೂ, ಆಗ ನೀನೊಬ್ಬ ಮಹಾಪುರುಷ! ನಿನ್ನ ಬಳಿಗೆ ಒಂದಲ್ಲ ಒಂದು ಕಾರಣದಿಂದ ಎಲ್ಲರೂ ಬರುತ್ತಲೇ ಇರುವರು.

ಒಂದು ದಿನ....ಆಗ ನಿನಗೆ ಮೂವತ್ತು ವರುಷ. ನಿನ್ನ ತಾಯಿ ನಿನ್ನ ಬಳಿಯೇ ವಾಸವಾಗಿರುವರು. ನಿಮ್ಮ ತಂದೆ ಮೈಸೂರಿನಲ್ಲಿರುವರು. ಆಗ, ನೀನು ಸಂಗೀತಕಛೇರಿಯನ್ನು ಮುಗಿಸಿಕೊಂಡು ಮನೆಗೆ ಬಂದಾಗ....ಮನೆಯಲ್ಲಿ ಒಬ್ಬಾಕೆ, ಅವರ ಮಗಳು! ಸರಿ. ಅವರೇ ಅಲ್ಲವೇ ನಿನಗೆ ಹಿಂದೆ ಹೆಣ್ಣು ಕೊಡಲು ಬಂದಿದ್ದವರು? ನಿನ್ನ 'ಪೆದ್ದುತನ'ದಿಂದ ಮಾತನಾಡದೆ ಹಿಂತಿರುಗಿದ್ದವರು? ಈಗ ಪುನಃ ನಿನ್ನಲ್ಲಿಗೆ! ನಿನ್ನ ಹೆಸರು ಎಲ್ಲರಿಗೂ ಮೋಡಿಹಾಕಿದೆ. ನಿನ್ನ ತಾಯಿ, ಅವರು, ಎಲ್ಲರೂ ಬಲವಂತ ಮಾಡುವರು. ಕಡೆಗೆ ನೀನು ಒಪ್ಪಿಕೊಳ್ಳುವೆ, ಆ ಹುಡುಗಿಯನ್ನು ಮದುವೆಯಾಗಲು. ನಿಜಕ್ಕೂ ಆ ಹುಡುಗಿ ಸುಂದರಿ. ಬಹಳ ಗುಣವಂತೆ. ನಿನ್ನ ಕೈ ಹಿಡಿದುದು ತನ್ನ ಭಾಗ್ಯವೆಂದು ತಿಳಿದುಕೊಳ್ಳುವಳು.

ಸರಿ, ನಿಮ್ಮ ಸಂಸಾರ ಪ್ರಾರಂಭ! ಒಂದು ದಿನ ಇದ್ದಕ್ಕಿದ್ದ ಹಾಗೆ, ಹೊಟ್ಟೆಗಿಲ್ಲದ ವಿಧವೆಯೊಬ್ಬಳು ನಿನ್ನ ಮನೆಗೆ ಬರುವಳು. ಅವಳಿಗೆ ನೀವು ಆಶ್ರಯ ನೀಡುವಿರಿ. ಸರಿ, ಅಂದಿನಿಂದ ಆ ಮುದುಕಿ ನಿಮ್ಮ ಮನೆಯವಳೇ. ಅಡಿಗೆಯ ಕೆಲಸವೆಲ್ಲವೂ ಅವಳದೇ. ಅಂತೆಯೇ ಒಬ್ಬ ಬಂದು ನಿಮ್ಮ ಮನೆಯ ಜವಾನನಾಗುವನು. ಹೀಗೆ ಎಲ್ಲರಿಗೂ ಆಶ್ರಯದಾತರಾಗುವಿರಿ....

ಅನಂತರ ನಿನ್ನ ಅಪಾರ ಚೇತನ, ಅದ್ಭುತ ಚೇತನ ಸುಮ್ಮನಿರುವುದೇ? ಪುಸ್ತಕಗಳ ಮೇಲೆ ಪುಸ್ತಕಗಳನ್ನು ಬರೆಯುವೆ. ನಿನ್ನ ಹೆಂಡತಿ ಅವನ್ನೆಲ್ಲಾ ಇಂಗ್ಲಿಷಿಗೆ ಭಾಷಾಂತರಿಸುವಳು. ಸರಿ

ಜಯಂ!

ಒಂದುಸಲ ನಿನ್ನ ಅಮೋಘವಾದ ಕಾದಂಬರಿಯೊಂದಕ್ಕೆ ನೋಬೆಲ್ ಪಾರಿತೋಷಕ! ಅದಕ್ಕಿಂತ ಇನ್ನೇನು? ಹತ್ತಾರು ಪುಸ್ತಕಗಳು ಇಂಗ್ಲಿಷಿನಲ್ಲಿ ಪ್ರಕಟವಾಗುವುವು. ಮತ್ತೆ ದುಡ್ಡು: ಭಿಕ್ಷುಕರ ಶಾಲೋಪಿ, ಅನಾಥಾಶ್ರಮ........

ತತ್ತ್ವ ಶಾಸ್ತ್ರದಲ್ಲಿ? ನಿನ್ನದೇ ಆದ ಒಂದು ವಿಶಿಷ್ಟವಾದ ತತ್ತ್ವವನ್ನು ಪ್ರತಿಪಾದಿಸುವೆ. ನಿನ್ನ ಸಮಕಾಲೀನ ತತ್ತ್ವಶಾಸ್ತ್ರಜ್ಞರಿಗೆ ಒಂದು ಹೊಸ ಹಾದಿಯನ್ನೇ ಕಲ್ಪಿಸುವೆ. ಎಲ್ಲರೂ ನಿನ್ನನ್ನು ಗೌರವಿಸುವವರೇ. ಆಗ ನೀನೊಂದು ವಿಶ್ವವ್ಯಕ್ತಿ. ಅದ್ಭುತಶಕ್ತಿ!

ಬೆಳಗಿನ ಜಾವದ ತಂಪು ಗಾಳಿ ಬೀಸಿ ಶ್ರೀನಿವಾಸನಿಗೆ ಜೊಂಪು ಹತ್ತಿತು.

× × × ×

ಬೆಳಗಿನ ಜಾವದ ತಂಪು ಗಾಳಿ ಬೀಸಿ ಶ್ರೀನಿವಾಸನಿಗೆ ಜೊಂಪು ಹತ್ತಿತು. ಈಗ ಅವನು ಎಷ್ಟು ಹೊತ್ತು ಮಲಗಿದ್ದರೂ ಕೇಳುವವರಿಲ್ಲ. ಈ ಜೊಂಪು! ಪಾಪ! ಎಷ್ಟೋ ದಿನಗಳ ನಂತರ ದೊರೆತಿದ್ದ ವರವಿದು. ಆದರೆ ಕೂಡಲೇ........?

ಛೀ! ನೀನು ಏನೇ ಆದರೂ ಅಂತಹ ಪೆಚ್ಚುಕೆಲಸ ಮಾಡಬಾರದಾಗಿತ್ತು. ಕೈಯಲ್ಲಿರುವುದನ್ನು ಬಿಟ್ಟು ಕನ್ನಡಿಯಲ್ಲಿರುವುದನ್ನು ಆಶಿಸಿದವನು ನೀನು ಎಂತಹ ಹುಚ್ಚ! ಹೆಸರುವಾಸಿಯಾಗಬೇಕು! ಹ್ಹ, ಹ್ಹ, ಹ್ಹ! ಎಂತಹ ಹುಚ್ಚು ಆಶೆ! ಹೆಸರು ಬಂದು ಏನಾಗಬೇಕಾಗಿತ್ತು? ಸತ್ತಮೇಲೆ ಎಲ್ಲವೂ ಒಂದೇ. ಹೆಸರು ಬಂದಿದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ಸತ್ತಮೇಲೆ ನೀನೇನನ್ನೂ ಅನುಭವಿಸಲಾರೆ. ಸತ್ತಮೇಲಿನ ಜೀವನವೆಲ್ಲ ಬರಿಯ ಭ್ರಾಂತಿ. ಸ್ವರ್ಗ, ಅಪ್ಸರೆಯರು! ಹ್ಹಿ, ಹ್ಹಿ, ಹ್ಹಿ! ಇದಕ್ಕಿಂತ ಹುಚ್ಚುಕಲ್ಪನೆಗಳುಂಟೇ? ದೇವರು ನಿನಗೆ ಸೂಕ್ಷ್ಮಬುದ್ಧಿಯನ್ನೇನೋ ಕೊಟ್ಟ. ಆದರೆ ಲೌಕಿಕಬುದ್ಧಿ? ಯಾವುದು ಮುಖ್ಯ ಸುಖವಾಗಿರುವುದಕ್ಕೆ?

ಅಂದು ನೀನು ಆ ಮಾರಕವಾದ ನಿರ್ಧಾರಕ್ಕೆ ಬಾರದಿದ್ದರೆ? ಎಲ್ಲರೂ ಹೇಳಿದ ಹಾಗೆ ಕೇಳಿದ್ದರೆ? ನೀನು ಈ ಸ್ಥಿತಿಗೆ ಬರುತ್ತಿದ್ದೆಯಾ? ಅವರೆಲ್ಲ ನಿನ್ನಿಂದ ದೂರವಾಗುತ್ತಿದ್ದರೇ?

ಅಬ್ಬಾ! ಎಷ್ಟು ಹುಚ್ಚಾಟಗಳನ್ನಾಡಿದೆ ನೀನು! ಹುಚ್ಚಾಟಕ್ಕೂ ಮಿತಿಯಿಲ್ಲವೇ? ಒಂದೇ, ಎರಡೇ? ನಿನ್ನ ಅಪಾರಚೇತನ! ಹ್ಹಿ, ಹ್ಹಿ, ಹ್ಹಿ! ಅಪಾರಚೇತನ. ಅದನ್ನೇ ಒಂದೇ ಕಡೆ ಬಳಸಿದ್ದರೆ? ಎಂತಹ ಉಪಯೋಗವಾಗುತ್ತಿತ್ತು! ಹುಚ್ಚುಹುಚ್ಚಾಗಿ ಅದನ್ನು ಹರಿಯಬಿಟ್ಟೆ. ಸಂಗೀತ, ಸಾಹಿತ್ಯ, ವಿಜ್ಞಾನ, ವೇದಾಂತ, ಕಡೆಗೆ ನಾಟ್ಯವೂ! ಹ್ಹಿ, ಹ್ಹಿ, ಹ್ಹಿ! ನೀನು, ನಾಟ್ಯ ಕಲಿಯುವುದು! ಅದಕ್ಕಿಂತ ಇನ್ನು ಬೇರೆ ತಮಾಷೆಯುಂಟೇ?

ಅಂದು ನೀನು ಆ ಹಾಳು ನಿರ್ಧಾರಕ್ಕೆ ಬಾರದಿದ್ದರೆ ಎಷ್ಟು ಚೆನ್ನಾಗಿತ್ತು! ನೀನೂ ಎಲ್ಲರಂತೆ ಮನುಷ್ಯನಾಗಿರುತ್ತಿದ್ದೆ. ಎಷ್ಟು ಜನ ಎಷ್ಟು ವಿಧವಾಗಿ ಹೇಳಿದರು! ಆದರೆ ನಿನ್ನ "ಅಪಾರ ಚೇತನ," ನಿನ್ನ "ತಡೆಯಲಾರದ ಹಸಿವು" ನಿನ್ನನ್ನು ಕಿವುಡನನ್ನಾಗಿ ಮಾಡಿತ್ತು. ಮೂಢನನ್ನಾಗಿ ಮಾಡಿತ್ತು. ಕಡೆಗೆ ಎಲ್ಲರ ಮನಸ್ಸನ್ನೂ ನೋಯಿಸಿ ಬಿಟ್ಟುಬಿಟ್ಟೆ ಅದನ್ನು, ಮೆಡಿಕಲ್ ಕೋರ್ಸನ್ನು. ಅದನ್ನು ಮುಂದುವರಿಸಿದ್ದಿದ್ದರೆ? ಅದು ಬೇರೆ ರೀತಿ ಇತ್ತು. ಆಗ ನಿನ್ನ "ಅಪಾರಚೇತನ"ಕ್ಕೆ, ನಿನ್ನ "ಅಂತಃಶಕ್ತಿ"ಗೆ ಸ್ವಲ್ಪವಾದರೂ ಮಾರ್ಗ ದೊರೆಯುತ್ತಿತ್ತೇನೋ. ನೀನಾಗಿ ಕೈಗೆ ಬಂದ ಭಾಗ್ಯವನ್ನು ದೂಡಿದೆ. ಗಾಳಿಗೋಪುರಕ್ಕಾಗಿ ಆಶಿಸಿದೆ. ಸರಿಯಾಗಿ ಆಯಿತು ಶಾಸ್ತಿ.

ನೀನು ಸಂಗೀತ ಕಲಿಯುತ್ತೇನೆಂದು ಹೊರಟಾಗ! ಹ್ಹು. ಇನ್ನೂ ನಗುಬರುತ್ತಿದೆ. ಮನೆಯಲ್ಲೇನೋ ನಿನ್ನ ಯಾವ ಹುಚ್ಚಾಟಕ್ಕೂ ಪ್ರತಿಭಟನೆಯನ್ನು ತೋರಿಸಲಿಲ್ಲ. "ಅವನಿಷ್ಟ ಬಂದಂತೆ ಮಾಡಲಿ. ನಾವು ತಾನೇ ಇನ್ನೇನು ಮಾಡಲು ಸಾಧ್ಯ?" ಎಂದು ಸುಮ್ಮನಿದ್ದರು. ಸರಿ. ಅದೇ ಒಂದು ಭಾರಿ ತಪ್ಪಾಯಿತು. ಹ್ಹು! ಕೇವಲ ಐದಾರು ತಿಂಗಳಲ್ಲಿ ನಿನ್ನ ಹಸಿವು, "ಅಪಾರ ಹಸಿವು" ಎಲ್ಲಿ ಹೋಯಿತು? ಯಾವಾಗ ನೀನೊಬ್ಬ ಸಾಧಾರಣನೆಂದೂ, ಸಂಗೀತದಲ್ಲಿ ಅಸಾಧಾರಣನಾಗಲಾರೆನೆಂದೂ ನಿನಗೆ ಎನ್ನಿಸಿತೋ, ಕೂಡಲೇ ಅದನ್ನು ಬಿಟ್ಟುಬಿಟ್ಟೆ. ಎಂತಹ ದೃಢನಿರ್ಧಾರ! ಹ್ಹ, ಹ್ಹ, ಹ್ಹ! ಅದೊಂದನ್ನೇ ಪೂರ್ತಿಯಾಗಿ ಆಶ್ರಯಿಸಿದ್ದರೆ? ಆದರೆ ನಿನ್ನ 'ಅಪಾರಚೇತನ?' ಹೇಗೆ ಅದು ನಿನ್ನನ್ನು ಸಾಹಿತ್ಯದೆಡೆಗೆ ಎಳೆಯಿತು! ಸರಿ. ಸಾಹಿತ್ಯಸಾರ್ವಭೌಮನಾಗುವುದು ಮಾತ್ರ ಉಳಿದಿತ್ತು. ಏನು ಹುಚ್ಚು ಉತ್ಸಾಹ ನಿನಗೆ! ಎಷ್ಟು ರೀಮು ಪೇಪರನ್ನು ತಂದೆ, ಎಷ್ಟು ಶಾಯಿಯನ್ನು ಸುರಿದೆ, ಎಷ್ಟು ಪೆನ್ನುಗಳನ್ನು ಕೊಂಡೆ! ನಿನ್ನ ಕತೆಯೊಂದಕ್ಕೆ ಕಟುವಿಮರ್ಶೆ ಬಂದಕೂಡಲೆ........ಹ್ಹ, ಹ್ಹ, ಹ್ಹ! ನಿನ್ನ ಅಪಾರ ಚೇತನ! ಅದೆಲ್ಲ ಎಲ್ಲಿ ಇಂಗಿ ಹೋಯಿತೋ. ಸರಿ. ಸಾಹಿತ್ಯಕ್ಕೆ ತಿಲಾಂಜಲಿಯನ್ನು ಕೊಟ್ಟದ್ದಾಯಿತು

ಅಬ್ಬ! ತತ್ತ್ವಶಾಸ್ತ್ರ! ಅದರಲ್ಲಿ ಪ್ರವೀಣನಾಗಬೇಕು! ಅದರಲ್ಲಿಯಾದರೂ ಒಂದು ಹೆಸರನ್ನು ಪಡೆದು ಹೆಸರುವಾಸಿಯಾಗಬೇಕು. ಚರಿತ್ರೆಯ ಹಾಳೆಗಳಲ್ಲಿ ನಿನ್ನ ಹೆಸರು ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡಬೇಕು! ನಿಜ. ತತ್ತ್ವಶಾಸ್ತ್ರ ನಿನಗೆ ಸರಿಯಾದ ವಿಷಯ. ಪಾಪ. ಅದನ್ನು ಹುಡುಕಲು ಅಷ್ಟು ಪ್ರಯಾಸಪಡಬೇಕಾಯಿತು. ಇನ್ನು ಮೇಲಿಂದ ಭಯವಿಲ್ಲ. ಇನ್ನು ನಿರಾಶೆಗಳಿಲ್ಲ, ಸೋಲುಗಳಿಲ್ಲ. ಇನ್ನು ಮುಂದೆ ಬರಿಯ ಕೀರ್ತಿ........!

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಹಲ್ಲುಗಳಿಗೆ ನಂಜನಗೂಡು ಹಲ್ಲಿನ ಪುಡಿ ಉಪಯೋಗಿಸಿರಿ

ಆದರೆ......? ನಿನ್ನ ತತ್ತ್ವಶಾಸ್ತ್ರದ ಮೇಲಿನ ಒಂದು ಲೇಖನ ಪ್ರಕಟವಾದಾಗ, ಅದಕ್ಕೆ ಉಗ್ರಟೀಕೆಗಳ ಸುರಿಮಳೆಗಳಾದಾಗ, ನಿನ್ನ ಮುಖ, ಛೆ, ಛೆ, ಛೆ! ಎಷ್ಟು ತಮಾಷೆಯಾಗಿತ್ತು! ಅದನ್ನು ಯಾರು ಮರೆಯಲು ಸಾಧ್ಯ? ನಿನ್ನ "ಅಪಾರಚೇತನ" ತಕ್ಷಣ ಬೇರೆಯ ಕಡೆಗೆ ತಿರುಗಿತು! ಅದಕ್ಕಿನ್ನೂ ಸರಿಯಾದ ಮಾರ್ಗ ದೊರೆತಿರಲಿಲ್ಲ! ಅದು ಕೂಡಲೇ ದೊರೆತಿತು! ಅದು ನಾಟ್ಯ! ಹ್ಹ, ಹ್ಹ! ಆ ವಿಷಯವನ್ನು ಮನೆಯಲ್ಲಿ ಎತ್ತಿದಾಗ, ನಿನ್ನ ತಂದೆ-ತಾಯಿಗಳಿಗೆ, ತಮ್ಮ, ತಂಗಿಯರಿಗೆ, ಅಂತಹ ಚಿಂತೆಯಲ್ಲೂ, ತಮ್ಮ ಹುಡುಗ ಹೀಗಾಗುತ್ತಿದ್ದಾನಲ್ಲಾ ಎಂಬ ಚಿಂತೆಯಲ್ಲೂ, ಎಂತಹ ನಗು ಬಂತು! ಪಾಪ! ನಿನ್ನ ಮುಖವನ್ನು ಆಗ ನೋಡಬೇಕಿತ್ತು! ಎಷ್ಟು ಪೆದ್ದುಪೆದ್ದಾಗಿತ್ತು! ಪಾಪ! ಆಗಲೂ ಅವರು ಅದಕ್ಕೆ ಪ್ರತಿಭಟಿಸಲಿಲ್ಲ. ನಾಟ್ಯಕ್ಕೆ ಸೇರಲು ಅನುಮತಿ ಕೊಟ್ಟರು.

ನಿನ್ನ ಮೊದಲನೆಯ ನಾಟ್ಯಪ್ರದರ್ಶನದಲ್ಲಿ ಹೇಗೆ ನಿನ್ನ 'ಅಪಾರಚೇತನ' ಹೊರಹೊಮ್ಮಿತು! ಎಷ್ಟು ಜನ ಕೇಕೆಹಾಕಿ ನಕ್ಕರು! ಎಷ್ಟು ಜನ ಕೂಗಿಕೊಂಡರು! ಸರಿ. ನಿನ್ನ ಮೊದಲನೆಯ ಪ್ರದರ್ಶನಕ್ಕೇ ನಿನಗೆ ನಂಬಿಕೆ ಬಂದಿತು: ಅದು ನಿನ್ನ ಚೇತನ ಹರಿಯಲು ಸರಿಯಾದ ಮಾರ್ಗವಲ್ಲವೆಂದು. ಪಾಪ! ಆಗ ನಿನ್ನ ಗುರುಗಳು ಎಷ್ಟು ಸಮಾಧಾನ ಮಾಡಿದರು. "ಮೊದಮೊದಲು ಎಲ್ಲರಿಗೂ ಹಾಗೆ. ಸ್ವಲ್ಪ ತಾಳ್ಮೆ ತೆಗೆದುಕೊಳ್ಳಿ. ಇಂದು ಕೇಕೆ ಹಾಕಿದವರೇ ನಾಳೆ ದುಡ್ಡುಕೊಟ್ಟು ಬರುತ್ತಾರೆ. ಯಾವುದಕ್ಕೂ ಕಾಯಬೇಕು." ಎಂದೆಲ್ಲ ಎಷ್ಟು ಹೇಳಿದರು! ಆದರೆ ನಿನ್ನ ಚೇತನ! ನಿನ್ನನ್ನು ಕಿವುಡನನ್ನಾಗಿ ಮಾಡಿತ್ತು. ಗೆಜ್ಜೆಗಳನ್ನು ಆ ಗಳಿಗೆಯಲ್ಲೇ ಕಿತ್ತೆಸೆದೆ. ಹ್ಹ, ಹ್ಹ! ಎಂತಹ ಚೇತನ ನಿನ್ನದು! ಪಾಪ! ಅದಕ್ಕೆ ಇನ್ನೂ ಸರಿಯಾದ ಮಾರ್ಗವೇ ದೊರೆತಿಲ್ಲ! ಹೆಸರುವಾಸಿಯಾಗಬೇಕು! ಛೆ, ಛೆ, ಛೆ! ಎಂತಹ ಹುಚ್ಚು ಆಶೆ!

ಶ್ರೀನಿವಾಸ ಪೂರ್ತಿ ಬೆವರಿದ್ದ. "ನಿಜ. ನಾನು ಹೆಸರುವಾಸಿಯಾಗಲೇಬೇಕು. ಚರಿತ್ರೆಯ ಪುಟಗಳಲ್ಲಿ ನನ್ನ ಹೆಸರಿಗೆ ಸ್ಥಾನ ದೊರಕಲೇಬೇಕು." ಎಂದು ಹಲ್ಲುಮುಡಿಕಚ್ಚಿ ಮೇಲಕ್ಕೆದ್ದ. ತಲೆದಿಂಬಿಗೆಂದು ಇಟ್ಟುಕೊಂಡಿದ್ದ ಕೆಲವು ತತ್ತ್ವಶಾಸ್ತ್ರದ ಪುಸ್ತಕಗಳನ್ನು ಕೈಗೆತೆಗೆದುಕೊಂಡ. ಅವೆಲ್ಲ ಏಕಕಾಲದಲ್ಲಿ ಕೂಗಿಕೊಂಡುವು, "ನೀನು ಹೆಸರುವಾಸಿಯಾಗಲೇ ಬೇಕು. ನಿನ್ನ ಹೆಸರು ಅಮರವಾಗಬೇಕು." ಆ ಪುಸ್ತಕಗಳ ಮಧ್ಯೆ ಇದ್ದ ಭಾರವಾದ ಕಬ್ಬಿಣದ ವಸ್ತುವೊಂದನ್ನು ತೆಗೆದುಕೊಂಡು ಸೊಂಟಕ್ಕೆ ಸಿಕ್ಕಿಸಿಕೊಂಡ. "ಹೌದು. ನನ್ನ ಹೆಸರು ಅಮರವಾಗಬೇಕು. ನಾನು ಹೆಸರುವಾಸಿಯಾಗಬೇಕು."

ಬೀದಿಯಲ್ಲಿದ್ದ ನಲ್ಲಿಯೊಂದರಲ್ಲಿ ಶ್ರೀನಿವಾಸ ಮುಖವನ್ನು ತೊಳೆದುಕೊಂಡ. ತನ್ನ ಹರಕಲು ಷರಟಿನಿಂದ ತನ್ನ ಗಡ್ಡವನ್ನು ಒರಸಿಕೊಂಡ. ಪುಸ್ತಕಗಳನ್ನು ದೂರ ಎಸೆದ.

ಊರಿನ ಮೈದಾನದಲ್ಲಿ ಸಭೆ ಸೇರಿತ್ತು. ದೇಶದ ಧುರೀಣ ರಾಜಕಾರಣಿಯೊಬ್ಬರ ಭಾಷಣ ಅಲ್ಲಿ ಏರ್ಪಾಡಾಗಿತ್ತು. ಭಾಷಣ ಬಲು ಸ್ವಾರಸ್ಯವಾಗಿ ಸಾಗುತ್ತಿತ್ತು. ಜನರೆಲ್ಲ ಅತ್ಯಂತ ಏಕಾಗ್ರತೆಯಿಂದ ಭಾಷಣವನ್ನು ಕೇಳುತ್ತಿದ್ದರು. ಭಾಷಣದ ಮಧ್ಯೆ......?

"ನಿಜ. ನಾನು ಹೆಸರುವಾಸಿಯಾಗಬೇಕು. ನನ್ನ ಹೆಸರು ಅಮರವಾಗಬೇಕು. ಚರಿತ್ರೆಯ ಪುಟಗಳಲ್ಲಿ ದಪ್ಪ ಅಕ್ಷರಗಳಲ್ಲಿ ನನ್ನ ಹೆಸರು ಬರೆಯಲ್ಪಡಬೇಕು......"

ಫಟ್, ಫಟ್, ಫಟ್! ಮೂರು ಗುಂಡುಗಳು ಹಾರಿದುವು. ದೇಶದ ಅತ್ಯಂತ ಪ್ರಸಿದ್ಧ ರಾಜಕಾರಣಿಗಳು ಉರುಳಿಬಿದ್ದಿದ್ದರು. ಕ್ಷಣದಲ್ಲೇ ಅವರ ಪ್ರಾಣ ಹಾರಿಹೋಗಿತ್ತು. ಜನ ಏನೂ ಅರ್ಥವಾಗದೆ ನೋಡುತ್ತಿದ್ದರು. ಅನಂತರ......

ಫಟ್! ಮತ್ತೊಂದು ಗುಂಡುಹಾರಿದ ಶಬ್ದ! ಜನರ ಮಧ್ಯದಲ್ಲಿದ್ದ ಶ್ರೀನಿವಾಸ ಉರುಳಿಬಿದ್ದಿದ್ದ. ಗುಂಡು ನೇರವಾಗಿ ಅವನ ಎದೆಯನ್ನು ಹೊಕ್ಕಿತ್ತು. ಪಕ್ಕದಲ್ಲಿ ರಿವಾಲ್ವರು ಬಿದ್ದಿತ್ತು.

"ನಿಜ. ಇಂದು ನನ್ನ ಹೆಸರು ಅಮರವಾಯಿತು."

ಶ್ರೀನಿವಾಸ ಕಡೆಯ ಉಸಿರನ್ನು ಎಳೆದ.


## ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

| | |
|---|---|
| **ಜೈನಧರ್ಮ** — ಶ್ರೀ. ಮಿರ್ಜಿ ಅಣ್ಣಾರಾಯರು | ೧೫-೦-೦ |
| **ಹಾಲು-ಹಣ್ಣು** ( ಕವನ ಸಂಗ್ರಹ ) — ಶ್ರೀ. ಭುಜೇಂದ್ರ ಮಹಿಷವಾಡಿ | ೧-೮-೦ |
| **ಮೂಲಶಿಕ್ಷಣದ ಮೌಲ್ಯಮಾಪನ** — ಶ್ರೀ. ಮಿರ್ಜಿ ಅಣ್ಣಾರಾಯರು | ೦-೧೨-೦ |
| **ಬಾಳ-ಬಂಡಿ** ( ಕವನ ಸಂಗ್ರಹ ) — ಶ್ರೀ. ಬಾಳ ದಿ. ಉಪಾಧ್ಯೆ | ೦-೮-೦ |
| **ಭರತೇಶನ ನಾಲ್ಕು ಚಿತ್ರಗಳು** — ಶ್ರೀ. ಮಿರ್ಜಿ ಅಣ್ಣಾರಾಯರು | ೧-೪-೦ |

ಅಚ್ಚಿನಲ್ಲಿ:

**ಸಂಸ್ಕೃತಿಯ ಹೃದಯ**

**ಭಾರತದ ಬೆಳಕು**

ಪ್ರತಿಗಳಿಗಾಗಿ ಬರೆಯಿರಿ:

**ಶಾಂತಿ ಸೇವಾಸದನ, ಸೇಡಬಾಳ**

ಪೋ. : ಸೇಡಬಾಳ ( ಜಿಲ್ಲಾ ಬೆಳಗಾಂವಿ )

# ಕಾಲಿದಾಸಕವಿಯ ಗಾನಕಲಾಭಿಜ್ಞತೆ

( ಉತ್ತರಾರ್ಧ )

ಪಂಡಿತ ಭೀ. ಜಿ. ಹುಲಿಕವಿ ಬಿ. ಎ., ಎಸ್. ಟಿ. ಸಿ. ಬೆಳಗಾಂವಿ

卐

**ಪೂರ್ವಾರ್ಧದಲ್ಲಿ ಪ್ರಸ್ತಾವನೆ—ನೃತ್ಯವಿಚಾರದ ವಿವರಣೆ ಇದ್ದುವು. ಈ ಭಾಗದಲ್ಲಿ ವಾದ್ಯ-ಗಾಯನ ವಿಚಾರಗಳ ವಿವರಣೆಯನ್ನು ನೋಡಬಹುದು.**

卐

## ವಾದ್ಯ ವಿಚಾರ

ಶಬ್ದಾಯಂತೇ ಮಧುರಮನಿಲೈಃ ಕೀಚಕಾಃ ಪೂರ್ಯಮಾಣಾಃ
ಸಂರಕ್ತಾಭಿಸ್ತ್ರಿಪುರವಿಜಯೋ ಗೀಯತೇ ಕಿನ್ನರೀಭಿಃ
ನಿರ್ಹ್ರಾದೀತೇ ಮುರಜ ಇವ ಚೇತ್ ಕಂದರೇಷು ಧ್ವನಿಃಸ್ಯಾತ್
ಸಂಗೀತಾರ್ಥೋ ನನು ಪಶುಪತೇಸ್ತತ್ರ ಭಾವೀ ಸಮಸ್ತಃ ||

ಕಾಲಿದಾಸನು ಮೇಘದೂತದಲ್ಲಿ ಸಂಗೀತದ ಸರ್ವಸಾಧನಗಳ ಮೇಲನವನ್ನು ಬಲು ಸುಂದರವಾಗಿ ಬಣ್ಣಿಸಿದ್ದಾನೆ. "ಕಿನ್ನರಿಯರು ಮಾಡುವ ಶಿವವಿಜಯಪರವಾದ ಗಾನ, ಬಿದಿರಿನ ತೂತಿನೊಳಗಿಂದ ಮಂಜುಲಸ್ವರವನ್ನು ಹುಟ್ಟಿಸಿ, ವಾಯುವು ಕೊಡುವ ಧ್ವನಿಸಂಗತಿ ಮೇಘಗರ್ಜೆಯು ದರಿಯೊಳಗಿಂದ ಪ್ರತಿಧ್ವನಿತವಾಗಿ ಅನುಕೂಲಿಸುವ ಮೃದಂಗತಾಲ...." ಇತ್ಯಾದಿ ಸಾಮಗ್ರಿಯು ಅಲ್ಲಿ ಉಕ್ತವಾಗಿದೆ. ಮಾಲವಿಕೆಯ ನೃತ್ಯಪರೀಕ್ಷೆಯ ಸಂದರ್ಭದಲ್ಲಿಯೂ ಮೃದಂಗ-ಧ್ವನಿಯ ಉಲ್ಲೇಖವಿದೆ. ರಘುವಂಶದ ಕೊನೆಯ ಅರಸನಾದ ಅಗ್ನಿವರ್ಣನ ಅರಮನೆಯು "ಮೃದಂಗಧ್ವನಿಯಿಂದ ನಿನಾದಿತ-ವಾಗಿತ್ತು." ಎಂದು ಹೇಳಿದೆ. ಕಾಲಿದಾಸನು 'ಮುರಜ' ಮತ್ತು 'ಪುಷ್ಕರ' ಶಬ್ದಗಳನ್ನು ಮೃದಂಗವಾಚಕವಾಗಿ ಪ್ರಯೋಗಿಸುತ್ತಾನೆ. ಅಗ್ನಿವರ್ಣನು "ನರ್ತಕಿಯ ನರ್ತನಸಮಯದಲ್ಲಿ ಸ್ವತಃ ಪುಷ್ಕರ-ವನ್ನು ಬಾರಿಸುತ್ತಿದ್ದನು." ಎಂದು ರಘುವಂಶದಲ್ಲಿದೆ. "ಪುಷ್ಕರ-ವಾದನದಿಂದ ಉತ್ಪನ್ನವಾಗುವ ಮಾಯೂರಿಯೆಂಬ ಮಾರ್ಜನೆಯ-ಎಂದರೆ ಗತ್ತು ಮನಸ್ಸನ್ನು ಉತ್ಸುಕಗೊಳಿಸುತ್ತದೆ" ಎಂಬ ವರ್ಣ-ನವು ಮಾಲವಿಕೆಯ ನೃತ್ಯಾರಂಭಕ್ಕಿಂತ ಮೊದಲಿನ ಸಂದರ್ಭದಲ್ಲಿದೆ. ಮುರಜ-ಪುಷ್ಕರಗಳ ಧ್ವನಿಯು ಮೇಘಗರ್ಜನೆಯಂತೆ ಗಂಭೀರವಾಗಿ ರುತ್ತದೆಂದು ಕಾಲಿದಾಸನು ಆಗಾಗ ಬಣ್ಣಿಸುತ್ತಾನೆ. "ಮೃದಂಗ-ಧ್ವನಿಯೊಡನೆ ಮಯೂರಗಳು ನರ್ತಿಸುವು"ದನ್ನೂ ಕಾಲಿದಾಸನು ಅಲ್ಲಲ್ಲಿ ಉಲ್ಲೇಖಿಸುತ್ತಾನೆ. "ಯಕ್ಷನ ಪ್ರಾಸಾದವು ಸಂಗೀತದ ಮುರಜಧ್ವನಿಯಿಂದ ಮೇಘಸದೃಶವಾಗಿತ್ತು." "ಕೈಲಾಸದ ನೆರೆ-ಯಲ್ಲಿಯ ಗುಹೆಗಳಲ್ಲಿ ಮೇಘವು ಮುರಜದಂತೆ ಧ್ವನಿಮಾಡುತ್ತಿತ್ತು." "ಪುಷ್ಕರದಿಂದ ಹೊರಹೊಮ್ಮುವ ಮಾಯೂರೀಮಾರ್ಜನೆಯನ್ನು ಮೇಘಗರ್ಜನೆಯೆಂದು ಭಾವಿಸಿ, ಮಯೂರಗಳು ಮೇಲ್ಮೊಗದಿಂದ ನಿಂತುವು." "ಎಲೈ ಮೇಘವೇ, ನಿನ್ನಂತಹ ಗಂಭೀರಧ್ವನಿಯಿಂದ ಪುಷ್ಕರವಾದನವು ಆರಬ್ಧವಾದರೆ—" "ತಾಲಬದ್ಧವಾದ ಗತ್ತಿನಿಂದ ಇದು ಮೃದಂಗಧ್ವನಿಯೇ ಹೊರತು, ಮೇಘದ ಗುಡುಗುಡಾಟವಲ್ಲ-ಎಂದು ತಿಳಿಯುತ್ತಿತ್ತು." ಇತ್ಯಾದಿ ವರ್ಣನೆಗಳು ಮೇಘದೂತದಲ್ಲಿವೆ. ಇದರಿಂದ ಕಾಲಿದಾಸನು ಹೇಳುವ ಮೃದಂಗ-ಪುಷ್ಕರ ವಾದ್ಯಗಳ ಧ್ವನಿಗೂ ಮೇಘಧ್ವನಿಗೂ ಇರುವ ಸಾಮ್ಯವು ಪ್ರತೀತ-ವಾಗುತ್ತದೆ.

ಕಾಲಿದಾಸನು ಮೃದಂಗಧ್ವನಿಯನ್ನು ಕ್ರೀಡಾಸರೋವರ ದೊಳಗಿನ ಜಲಾಸ್ಫಾಲನದ ಧ್ವನಿಗೂ ಹೋಲಿಸಿದ್ದಾನೆ. ರಾಜಧಾನಿ-ತ್ವವನ್ನು ಕಳೆದುಕೊಂಡ ಅಯೋಧ್ಯೆಯ ಬಣ್ಣನೆಯು ಹೀಗಿದೆ:

ಆಸ್ಫಾಲಿತಂ ಯತ್ ಪ್ರಮದಾ ಕರಾಗ್ರೈಃ
ಮೃದಂಗ ಧೀರಧ್ವನಿಯನ್ವಗಚ್ಛತ್ ।
ವನ್ಯೈರಿದಾನೀಂ ಮಹಿಷೈಸ್ತದಂಭಃ
ಶೃಂಗಾಹತಂ ಕ್ರೋಶತಿ ದೀರ್ಘಿಕಾಣಾಮ್ ||

"ಮೊದಲು ಕ್ರೀಡಾಸರೋವರದೊಳಗಿನ ನೀರು ಹೆಂಗಳೆಯರ ಹಸ್ತಾಘಾತದಿಂದ ಮೃದಂಗಧ್ವನಿಯನ್ನು ಹುಟ್ಟಿಸುತ್ತಿತ್ತು. ಆದರೆ ಈಗ ಅದೇ ನೀರು, ಕಾಡುಕೋಣಗಳ ಕೋಡುಗಳ ತಾಕಲಾಟದಿಂದ 'ಖಳ್ ಖಳ್' ಆಕ್ರೋಶವನ್ನು ಹುಟ್ಟಿಸುತ್ತದೆ" ಮುಂದೆ ಕುಶ-ರಾಜನು ಅಯೋಧ್ಯೆಗೆ ಬಂದ ಬಳಿಕ ಅಲ್ಲಿಯ ಸ್ಥಿತಿಯು ಮಾರ್ಪ-ಟ್ಟಿತು. ಅದನ್ನು ಕಾಲಿದಾಸನು ಹೀಗೆ ಬಣ್ಣಿಸುತ್ತಾನೆ:—

ತೀರಸ್ಥಲೀ ಬರ್ಹಿಭಿರುತ್ಕಲಾಪೈಃ
ಪ್ರಸ್ನಿಗ್ಧಕೇಕೈರಭಿನಂದ್ಯಮಾನಂ ।
ಶ್ರೋತ್ರೇಷು ಸಂಮೂರ್ಛತಿ ರಕ್ತಮಾಸಾಂ
ಗೀತಾನುಗಂ ವಾರಿ ಮೃದಂಗವಾದ್ಯಂ ||

"ಸರಯೂ ನದಿಯಲ್ಲಿ ಕ್ರೀಡಿಸುತ್ತಿದ್ದ ಸ್ತ್ರೀಯರು ಎರಡೂ ಕೈಗಳಿಂದ ಪೆಟ್ಟು ಹಾಕಿ ಪ್ರವಾಹವನ್ನು ಮೃದಂಗವನ್ನು ಮಾಡುತ್ತಿದ್ದರು. ಆ ಧ್ವನಿಯು ತಮ್ಮ ಗೀತಕ್ಕೆ ಅನುಕೂಲವಾಗಿರುವುದನ್ನು ತಿಳಿದು ಭ್ರಾಂತವಾದ ತೀರಮಯೂರಗಳು ಗರಿಗೆದರಿ ಮಧುರಕೇಕೆಗಳಿಂದ ಸಂತೋಷವನ್ನು ವ್ಯಕ್ತಮಾಡುತ್ತಿದ್ದುವು."

ಕಾಲಿದಾಸನು ತೂರ್ಯವೆಂಬ ಮತ್ತೊಂದು ವಾದ್ಯವನ್ನು ಹೇಳುತ್ತಾನೆ. ಇದು ತುತೂರಿ ಮತ್ತು ಬಜಂತ್ರಿ ಇವುಗಳಂತೆ ಬಾಯಲ್ಲಿ ಹಿಡಿದು ಊದತಕ್ಕ ವಾದ್ಯವು. ಪಾರ್ವತಿಯ ಮದುವೆ, ರಘುರಾಜನ ಜನನ, ಅತಿಥಿಯ ರಾಜ್ಯಾರೋಹಣ ಮತ್ತು ಇಂದುಮತಿಯ ಸ್ವಯಂವರ ಈ ಪ್ರಸಂಗಗಳಲ್ಲಿ ಮಂಗಲತೂರ್ಯದ ಉಲ್ಲೇಖವಿದೆ. ಇಂದುಮತಿಯ ಸ್ವಯಂವರವು ಮುಗಿದು, ವಿವಾಹ ಸಮಾರಂಭವು ಸಮಾಪ್ತವಾಗಿ, ಅಜನು ಅಯೋಧ್ಯೆಗೆ ಹೊರಡಲನುವಾಗಲು, ನಿರಾಶರಾದ ರಾಜರು ಅವನನ್ನು ಅಭಿಯೋಗಿಸುವರು. ಈ ಪ್ರಸಂಗದಲ್ಲಿ ಕಾಲಿದಾಸನು ತೂರ್ಯವನ್ನು ಯುದ್ಧವಾದ್ಯವೆಂದೂ ಹೇಳಿದ್ದಾನೆ. ಮದುವೆಗಿಂತ ಮೊದಲು ಪಾರ್ವತಿಯನ್ನು "ಮೌಕ್ತಿಕ ಖಚಿತವಾದ ಪಂಚರತ್ನದ ಪಲ್ಲಂಗದ ಮೇಲೆ ಕುಳ್ಳಿರಿಸಿ ಅಭ್ಯಂಗಸ್ನಾನ ಮಾಡಿಸಿದರು. ಆಗ ತೂರ್ಯಘೋಷವು ನಡೆದಿತ್ತು." ಶಂಕರನು ನಂದಿಯ ಮೇಲೆ ಕುಳಿತು ಮದುವೆಯ ಮಂಟಪಕ್ಕೆ ನಡೆದಾಗ "ಗಣಗಳು ಮಂಗಲತೂರ್ಯವನ್ನು ಊದಿದರು. ಆಗ ಶಂಕರನ ಸೇವೆಮಾಡಲು ಒಳ್ಳೆಯ ಸಮಯವೆಂದು ವಿಮಾನಸ್ಥ ದೇವತೆಗಳು ತಿಳಿದರು." ಈ ವರ್ಣನೆಗಳು ಕುಮಾರಸಂಭವದಲ್ಲಿವೆ. ಇಂದುಮತಿಯ ಸ್ವಯಂವರಕ್ಕೆ ಆಗಮಿಸಿದ ರಾಜರೆಲ್ಲ ಉಚಿತಾಸನಗಳಲ್ಲಿ ಮಂಡಿಸಿದ ಬಳಿಕ "ಪಟ್ಟಣದ ಸಮೀಪದ ಉಪವನದಲ್ಲಿರುವ ನವಿಲುಗಳಿಗೆ ಕುಣಿತವನ್ನು ಕಲಿಸುವ ಶಂಖ-ತೂರ್ಯಗಳ ಮಂಗಲ ಧ್ವನಿಯು ಆರಬ್ಧವಾಯಿತು. ಆ ಸಮಯದಲ್ಲಿ ಮದುವೆಯ ಉಡುಪನ್ನು ತೊಟ್ಟ ಇಂದುಮತಿಯು ವಿವಾಹಮಂಟಪವನ್ನು ಪ್ರವೇಶಿಸಿದಳು." ರಘುವಿನ ಜಾತಕರ್ಮಪ್ರಸಂಗದಲ್ಲಿ "ವಾರಾಂಗನೆಯರ ಸುಂದರನೃತ್ಯವೂ ಮಂಗಲತೂರ್ಯಗಳ ನಿನಾದವೂ ದಿಲೀಪನ ಅರಮನೆಯಲ್ಲಿಷ್ಟೇ ಅಲ್ಲದೆ, ದೇವಲೋಕದಲ್ಲಿ ಕೂಡ ಪ್ರತಿಧ್ವನಿತವಾದುವು." ಇವೆಲ್ಲ ವರ್ಣನೆಗಳಲ್ಲಿ ತೂರ್ಯವಾದ್ಯದ ಉಲ್ಲೇಖವು ಬಂದಿದೆ.

ಕಾಲಿದಾಸನು ಮುರಲಿಯನ್ನು ವಂಶ, ವೇಣು ಎಂದು ಕರೆಯುತ್ತಾನೆ. ಅಗ್ನಿವರ್ಣರಾಜನ ಆಶ್ರಯದಲ್ಲಿದ್ದ ನರ್ತಕಿಯರು ವೇಣುವನ್ನು ಬಾರಿಸಬಲ್ಲವರಿದ್ದರೆಂದು ಹೇಳಿದೆ. ಕಾಲಿದಾಸನಿಗೆ ಕೃತ್ರಿಮವೇಣುವಾದ್ಯಕ್ಕಿಂತ ನಿಸರ್ಗದ ವೇಣುವಾದ್ಯವು ಹೆಚ್ಚು ಪ್ರಿಯಕರವಾಗಿದೆ. ಕುಮಾರಸಂಭವದಲ್ಲಿ ಹಿಮಾಲಯವನ್ನು ಬಣ್ಣಿಸುತ್ತ ಅವನು ಹೀಗೆ ಹೇಳುತ್ತಾನೆ: "ಹಿಮಾಲಯದ ದರಿಗಳಿಂದ ಹೊರಟ ವಾಯುವು ಬಿದುರಿನ ರಂಧ್ರಗಳಲ್ಲಿ ಸೇರಿ ಸುಮಧುರ ಧ್ವನಿಯನ್ನು ಹುಟ್ಟಿಸುವುದು. ಆ ಧ್ವನಿಯು ಕಿನ್ನರಿಯರಿಗೆ ಹಾಡುವ ಉತ್ಸುಕತೆಯನ್ನು ಹುಟ್ಟಿಸಿ ಸ್ವರಸಂಗತಿಯನ್ನು ಕೊಡುವುದು."




ಶಂಕರನ ಸಂಗೀತಸಾಮಗ್ರಿಯನ್ನು ಬಣ್ಣಿಸುವಾಗ ಮೇಘದೂತದಲ್ಲಿ "ಗಾಳಿಯಿಂದ ತುಂಬಿದ ವೇಣುಗಳು ಮಧುರ ದನಿಯನ್ನು ಮಾಡುವುವೆಂ"ದು ಹೇಳಿದೆ. ದಿಲೀಪರಾಜನು ಏಕನಿಷ್ಠೆಯಿಂದ ಅಡವಿಯಲ್ಲಿ ಗೋಸೇವೆಯನ್ನು ಮಾಡುತ್ತಿದ್ದಾಗ "ವನವಾತವು ಬಿದುರಿನಲ್ಲಿ ಸೇರಿ ಮುರಲಿಯ ಮಧುರನಿನಾದವನ್ನು ಹುಟ್ಟಿಸುತ್ತಿತ್ತು; ತನ್ಮೂಲಕ ವನದೇವತೆಯು ತನ್ನ ಯಶೋಗಾನಮಾಡುತ್ತಿದ್ದುದನ್ನು ಅವನು ಕೇಳಿದನು." ಈ ವರ್ಣನೆಗಳು ಕಾಲಿದಾಸನ ನಿಸರ್ಗಪ್ರಿಯತೆಯನ್ನು ವ್ಯಕ್ತಮಾಡುತ್ತವೆ.

ಸಂಗೀತಶಾಸ್ತ್ರದಲ್ಲಿ ವೀಣೆಯ ಮಹತ್ತ್ವವು ಬಹಳ. ವೀಣೆಯನ್ನು ನುಡಿಸುತ್ತ ಹಾಡುವುದಕ್ಕೆ ಕಾಲಿದಾಸನು "ಉಪವೀಣಯ" ಎಂಬ ಕ್ರಿಯಾವಾಚಕನನ್ನು ಪ್ರಯೋಗಿಸುತ್ತಾನೆ. ನಾರದಮುನಿಯು ಗೋಕರ್ಣಸ್ಥ ಶಂಕರನನ್ನು ಸ್ತುತಿಸುತ್ತ ಆಕಾಶಮಾರ್ಗದಲ್ಲಿ ನಡೆದಿದ್ದನೆಂಬುದನ್ನು ಬಣ್ಣಿಸುವಾಗ, ಈ ಪ್ರಯೋಗವು ಬಂದಿದೆ. ವೀಣಾವಾದನದಲ್ಲಿ ಕುಶಲನಾದವನು ಎಂಬರ್ಥದಲ್ಲಿ ಕಾಲಿದಾಸನು "ಪ್ರವೀಣ" ಎಂಬ ಶಬ್ದವನ್ನು ಉಪಯೋಗಿಸಿದ್ದಾನೆ. ವಿವಾಹಾನಂತರದಲ್ಲಿ ಶಿವನು ಸ್ವಸ್ಥಾನಾಭಿಮುಖನಾಗಿ ನಡೆದಾಗ "ವಿಶ್ವಾವಸು ಪ್ರಮುಖರಾದ ಪ್ರವೀಣಗಂಧರ್ವರು ಮುಂದೆ ಮುಂದೆ ಸಾಗಿದ್ದಾರೆ"ಂದು ವರ್ಣನೆಯಿದೆ. "ಅಗ್ನಿವರ್ಣನ ಆಸ್ಥಾನದಲ್ಲಿದ್ದ ಗಾಯಕಿಯರಿಗೆ ತೊಡೆಗೆ ನೋವಾದದ್ದರಿಂದ—ವೀಣೆಯನ್ನಿಟ್ಟುಕೊಳ್ಳಲು ಬರುತ್ತಿಲ್ಲವೆಂ"ದು ರಘುವಂಶದಲ್ಲಿಯೂ, "ಯಕ್ಷಸ್ತ್ರೀಯು ತೊಡೆಯ ಮೇಲೆ ವೀಣೆಯನ್ನಿಟ್ಟುಕೊಂಡು ಹಾಡಲು ಪ್ರಯತ್ನಿಸುತ್ತಿದ್ದಳು" ಎಂದು ಮೇಘದೂತದಲ್ಲಿಯೂ ಹೇಳಿದೆ. ವೀಣೆಗೆ "ವಲ್ಲಕಿ" ಎಂಬ ಮತ್ತೊಂದು ಹೆಸರನ್ನೂ ಕಾಲಿದಾಸನು ಹೇಳಿದ್ದಾನೆ. "ಹೃದಯಂಗಮಸ್ವನಾ ವಲ್ಲಕಿ"ಯು ಅಗ್ನಿವರ್ಣರಾಜನ ತೊಡೆಯ ಮೇಲೆ ಯಾವಾಗಲೂ ಇರುತ್ತಿತ್ತಂತೆ. "ಸುತಂತ್ರಿಗೀತ" ಎಂದರೆ ಸುಂದರವಾದ ವೀಣೆಯನ್ನು ನುಡಿಸುತ್ತ ಇಂಪಾದ ಗಾನವನ್ನು ಮಾಡುವುದು. ಇದರ ಉಲ್ಲೇಖವು ಋತುಸಂಹಾರದಲ್ಲಿ ಬಂದಿದೆ. "ಕೋಕಿಲೆಯ ಧ್ವನಿಯು" ಮಧುರವೇ ಸರಿ; ಆದರೆ ಪಾರ್ವತಿಯ ಕಂಠಧ್ವನಿಗೆ ಹೋಲಿಸಿದರೆ, ಅದು ದನಿಗೂಡದ

ವೀಣೆಯ ತಂತಿಗಳ ಅಪಸ್ವರದಂತೆ ಕೇಳಿಸುತ್ತದೆ. ” ಈ ವರ್ಣನೆಯು ಕುಮಾರಸಂಭವದಲ್ಲಿದೆ. ಅದೇ ಕಾವ್ಯದಲ್ಲಿ “ಶಂಕರನು ಮದುವೆ ಮಾಡಿಕೊಂಡು ಮನೆಗೆ ಬಂದು ಮಲಗಿಕೊಂಡು, ಮೂರ್ಛನೆಯೊಡನೆ ತಂತಿಗಳನ್ನು ಮೀಟುವ ಕಿನ್ನರರ ಗಾನದಿಂದ ಎಚ್ಚತ್ತನು.” ಎಂದು ಹೇಳಿದೆ.

“ಆತೋದ್ಯ” ಎಂಬುದು ಕಾಲಿದಾಸನ ಸಾಮಾನ್ಯವಾದ್ಯ-ವಾಚಕವಾದ ಶಬ್ದವು. “ಭರತರಾಜನು ಸಿಂಧುದೇಶದಲ್ಲಿ ಗಂಧರ್ವರನ್ನು ಸೋಲಿಸಿದ್ದರಿಂದ, ಅವರು ಆಯುಧಗಳನ್ನು ಬಿಟ್ಟು ಆತೋದ್ಯವನ್ನು ಹಿಡಿಯಬೇಕಾಯಿತು.” ಎಂದು ರಘುವಂಶದಲ್ಲಿದೆ. ಅದೇ ಕಾವ್ಯದಲ್ಲಿ “ನಾರದಮುನಿಯ ಆತೋದ್ಯದ ಶಿರೋಭಾಗದಲ್ಲಿದ್ದ ಪುಷ್ಪಮಾಲೆಯನ್ನು ಗಾಳಿಯು ಹಾರಿಸಿತು.” ಎಂಬ ವರ್ಣನೆಯಿದೆ. ವೀಣೆ ಮೊದಲಾದ ತಂತುವಾದ್ಯಗಳು, ಮುರಜ ಮೊದಲಾದ ಚರ್ಮಮುಖ ವಾದ್ಯಗಳು, ವೇಣು ಮೊದಲಾದ ರಂಧ್ರವಾದ್ಯಗಳು ಮತ್ತು ಕಾಂಸ್ಯತಾಲ ಮೊದಲಾದ ಘನವಾದ್ಯಗಳು ಇವೆಲ್ಲ ಆತೋದ್ಯದಲ್ಲಿ ಸೇರುತ್ತವೆಂದು ಅಮರಕೋಶವು ಹೇಳುತ್ತದೆ.

## ಗಾನವಿಚಾರ

ಹಾಡುವುದನ್ನು ಆರಂಭಮಾಡುವುದಕ್ಕಿಂತ ಮೊದಲು ಸ್ವರವನ್ನು ಕೂಡಿಸಿಕೊಳ್ಳಬೇಕಾಗುತ್ತದೆ. ಈ ಪದ್ಧತಿಗೆ ಕಾಲಿದಾಸನು “ಉಪವಹನ” ಎಂದು ಹೇಳಿದ್ದಾನೆ.

ಉತ್ಸಂಗೇವಾ ಮಲಿನವಸನೇ ಸೌಮ್ಯ ನಿಕ್ಷಿಪ್ಯ ವೀಣಾಂ
ಮದ್‌ಗೋತ್ರಾಂಕಂ ವಿರಚಿತಪದಂ ಗೇಯಮುದ್ಗಾತುಕಾಮಾ ।
ತಂತ್ರೀರಾರ್ದ್ರಾ ನಯನಸಲಿಲೈಃ ಸಾರಯಿತ್ವಾ ಕಥಂಚಿ-
ದ್ಭೂಯೋ ಭೂಯಃ ಸ್ವಯಮಧಿಕೃತಾಂ ಮೂರ್ಛನಾಂ
ವಿಸ್ಮರಂತಿ ॥

“ಮಲಿನ ವಸ್ತ್ರವನ್ನುಟ್ಟು, ತೊಡೆಯಮೇಲೆ ವೀಣೆಯನ್ನಿಟ್ಟುಕೊಂಡು ನನ್ನ ವಂಶಾವಲಿಯ ಗೀತವನ್ನು ಅನ್ನುವ ಇಚ್ಛೆಯುಳ್ಳ ನನ್ನ ಪ್ರಿಯೆಯು ಕಣ್ಣೀರಿನಿಂದತೊಯ್ದ ತಂತಿಗಳನ್ನು ಒರೆಸುತ್ತ, ಸ್ವರಚಿತರಾಗಸ್ವರಗಳ ಆರೋಹಣಾವರೋಹಣರೂಪವಾದ ಆಲಾಪ ಮಾಡುವುದನ್ನು ಮರೆಯುತ್ತಾಳೆ.” ಎಂಬ ವರ್ಣನವು ಮೇಘದೂತದಲ್ಲಿ ಬಂದಿದೆ; ಮತ್ತು “ಸ್ಪಷ್ಟಸ್ವರಗಳುಳ್ಳ ಮಧುರಗೀತದ ಸ್ವರಸಂಯೋಗವು ಕೇಳಬರುತ್ತಿದೆ; ಹಂಸಪದಿಕಾರಾಜ್ಞಿಯು ವರ್ಣಪರಿಚಯವನ್ನು, ಮಾಡುತ್ತಿದ್ದಾಳೆ.” ಎಂಬ ಮಾತು ಶಾಕುಂತಲದಲ್ಲಿದೆ. ಸಂಗೀತಶಾಸ್ತ್ರದಲ್ಲಿಯ ಸ್ವರಕ್ಕೆ ಕಾಲಿದಾಸನು “ವರ್ಣ” ಎಂಬ ಹೆಸರನ್ನೂ ಕೊಟ್ಟಿದ್ದಾನೆ.

ಸಪ್ತಸ್ವರಗಳೊಳಗಿನ ಷಡ್ಜ ಮತ್ತು ಮಧ್ಯಮ ಈ ಎರಡು ಸ್ವರಗಳ ಉಲ್ಲೇಖವು ಮಾತ್ರ ಕಾಲಿದಾಸನ ಗ್ರಂಥಗಳಲ್ಲಿ ಕಂಡುಬರುತ್ತದೆ. ದಿಲೀಪರಾಜನು ರಾಜ್ಞಿಯನ್ನೊಡಗೊಂಡು ವಸಿಷ್ಠಾಶ್ರಮಕ್ಕೆ ಹೋಗುತ್ತಿದ್ದಾಗ “ಉಭಯಪಾರ್ಶ್ವಗಳಲ್ಲಿಯೂ ನವಿಲುಗಳು ಮಾಡುತ್ತಿದ್ದ ಕೇಕಾರವವು ಷಡ್ಜಸಂವಾದಿಯಾಗಿತ್ತು,” ಎಂದು ರಘುವಂಶದಲ್ಲಿದೆ; ಮತ್ತು “ಸ್ವರವನ್ನು ಮಧ್ಯಮಕ್ಕೆ ಇಟ್ಟು ಮಾಯೂರೀಮಾರ್ಜನೆಯಿಂದ ಮೃದಂಗವನ್ನು ಬಾರಿಸುತ್ತಿದ್ದ” ವರ್ಣನವು ಮಾಲವಿಕಾಗ್ನಿಮಿತ್ರದಲ್ಲಿದೆ. ಕಾಲಿದಾಸನು ಮಾಯೂರೀಮಾರ್ಜನೆಗೂ ಮೇಘಧ್ವನಿಗೂ ಸಾಮ್ಯವನ್ನು ಹೇಳುತ್ತಾನೆ. “ದಿಲೀಪರಾಜನ ರಥದ ಧ್ವನಿಯನ್ನು ಕೇಳಿ, ಮೇಘಗರ್ಜನೆಯ ಭ್ರಾಂತಿಯಿಂದ ಮಯೂರಗಳು ಆನಂದದಿಂದ ಮನೋಭಿರಾಮವಾದ ಕೇಕೆಗಳನ್ನು ಹೊಡೆದುವು.” ಎಂದು ರಘುವಂಶದಲ್ಲಿದೆ. ಮಯೂರಸಂಬಂಧದಿಂದ ಮಾಯೂರೀಮಾರ್ಜನೆಯು ಸಾರ್ಥವಾಗಿದೆ. ಷಡ್ಜ-ಮಧ್ಯಮಗಳನ್ನುಳಿದು ಇತರ ಸ್ವರಗಳನ್ನು ಕಾಲಿದಾಸನು ಪ್ರತ್ಯಕ್ಷವಾಗಿ ಉಲ್ಲೇಖಿಸದೆ ಹೋದರೂ ಕೋಕಿಲ, ಕಿನ್ನರ, ಸಾರಸ, ಭೃಂಗ ಈ ಪ್ರಾಣಿಗಳ ಸ್ವರಗಳನ್ನು ಅವನು ಹೇಳಿದ್ದಾನೆ. ಸಪ್ತಸ್ವರಗಳೊಳಗಿನ ಒಂದೊಂದಕ್ಕೆ ಒಂದೊಂದು ಪ್ರಾಣಿಯ ಧ್ವನಿಯನ್ನು ಹೋಲಿಸುವುದುಂಟು. ಕೋಕಿಲದ ಸ್ವರವು ಪಂಚಮವೆಂದೂ, ಕಿನ್ನರರ ಸ್ವರವು ಗಾಂಧಾರವೆಂದೂ ಪ್ರಸಿದ್ಧಿಯಿದೆ. ಆದದ್ದರಿಂದ ಕಾಲಿದಾಸನು ಇತರ ಸ್ವರಗಳನ್ನಾದರೂ ಪರ್ಯಾಯದಿಂದ ಹೇಳಿದ್ದಾನೆಂದು ತಿಳಿಯಬಹುದಾಗಿದೆ.

ಪಾರ್ವತಿಯ ವಿವಾಹಸಮಯದ ನಾಟ್ಯ–ನಾಟಕಗಳ ಉಲ್ಲೇಖವು ಈ ಮೊದಲೇ ಬಂದಿದೆ. ಅವರಲ್ಲಿ ವೃತ್ತಿ, ರಾಗ, ರಸ ಇತ್ಯಾದಿಗಳ ಪ್ರಕ್ರಿಯೆಯನ್ನು ಸಾಮಾನ್ಯವಾಗಿ ಹೇಳಿದೆ. ಕಾಲಿದಾಸನು ವಿಕ್ರಮೋರ್ವಶೀಯದಲ್ಲಿಯೂ ರಾಗಗಳ ಕೆಂಚಿದುಲ್ಲೇಖವನ್ನು ಮಾಡುತ್ತಾನೆ. ಊರ್ವಶಿಯ ವಿರಹದಿಂದ ದುಃಖಿತನಾಗಿ ಅಡವಿಯಲ್ಲಿ ಅಲೆಯುತ್ತ ತಾನು ನೋಡಿದ ಪ್ರತಿಯೊಂದು ಪ್ರಾಣಿಗೂ ತನ್ನ ಪ್ರಿಯತಮೆಯ ಸುದ್ದಿಯನ್ನು ಕುರಿತು ಪ್ರಶ್ನೆ ಮಾಡುತ್ತಾನೆ.


**ದಿ ನ್ಯಾಶನಲ್ ಮ್ಯುಜಿಕಲ್ ಹಾಲ್**

**ಧಾರವಾಡ**

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೊನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

**ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ**

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**

ಈ ಸಂದರ್ಭದಲ್ಲಿ ಜಂಭಾಲಿಕಾ, ಖಂಡಧಾರಾ, ದ್ವಿಪದಿಕಾ, ಚರ್ಚರೀ, ಭಿನ್ನಕ, ಖಂಡಕ, ಖುರಕ, ಚಲಿಕಾ, ಕುಟಿಲಿಕಾ, ಮಲ್ಲಘಟೀ, ದ್ವಿಲಯಾ, ಖಂಡಿಕಾ ಎಂಬ ರಾಗನಾಮಗಳು ಉಕ್ತ-ವಾಗಿವೆ. ಇವೆಲ್ಲವುಗಳ ಸಾಧಕಬಾಧಕ ಚರ್ಚೆಯನ್ನು ಮಾಡು-ವುದು ಕಾಲಾಭಾವದ ಮೂಲಕ ಅಶಕ್ಯವಾಗಿದೆ. ಇರಲಿ.

ಹಂಸಪದಿಕೆಯು ಸಪ್ತಸ್ವರಗಳ ಆಲಾಪದೊಡನೆ "ಅಭಿನವ ಮಧೂಲೋಲುಪೋ ಭವಾನ್" ಎಂಬ ಗೀತಿಯನ್ನು ಹಾಡಿದ ಕೂಡಲೆ. ದುಷ್ಯಂತನು "ಈ ಗೀತಿಯೊಳಗಿಂದ ರಾಗವು ಹರಿದುಬರುತ್ತಿದೆ." ಎಂದು ಉದ್ಗರಿಸುತ್ತಾನೆ. ಸ್ವರ ಮತ್ತು ರಾಗ ಇವು ಹಾಡಿನ ಅರ್ಥ-ದಲ್ಲಿ ಸಮರಸವಾಗಿ ಶ್ರೋತೃಗಳನ್ನು ತಲ್ಲೀನ ಮಾಡುತ್ತವೆಂಬುದು ದುಷ್ಯಂತನ ಮಾತಿನ ತಾತ್ಪರ್ಯವು. ಅದೇ ಸಂದರ್ಭದಲ್ಲಿ ಮತ್ತೆ ದುಷ್ಯಂತರಾಜನು "ಮಧುರಶಬ್ದಗಳನ್ನು ಕೇಳಿಯೂ ಮನುಷ್ಯನ ಚಿತ್ತವು ಅಸ್ವಸ್ಥವಾಗಬೇಕಾದರೆ, ಪೂರ್ವಜನ್ಮದ ಯಾವುದೇ ಒಂದು ಘಟನೆಯ ಸ್ಮರಣವು ಅದಕ್ಕೆ ಕಾರಣವಾಗಿರುತ್ತದೆ." ಎಂದು ಹೇಳು-ತ್ತಾನೆ. ಹಂಸಪದಿಕೆಯು ಅರಸಿಯು. ಆದರೆ ಅರಸನ ಲಕ್ಷ್ಯವು ಅವಳ ಕಡೆಗೆ ಅಷ್ಟೊಂದು ಇದ್ದಿಲ್ಲ. ಅದು ಕಾರಣ ಅವಳು ತನ್ನ ಅಂತಃಕರಣದ ಕಸಿವಿಸಿಯನ್ನು ಈ ಗೀತಿಯ ಮೂಲಕ ವ್ಯಕ್ತಮಾಡಿ-ದಳು. ಆ ಹಾಡಿನ ಆಲಾಪಯುಕ್ತವಾದ ರಾಗವನ್ನು ಶ್ರವಣ ಮಾಡಿ, ರಾಜನ ಅಂತಃಕರಣವೂ ಕಸಿವಿಸಿಗೊಂಡಿತೆಂಬುದು ಸ್ಪಷ್ಟವಿದೆ. ಅದೇ ನಾಟಕದ ಆರಂಭದಲ್ಲಿ ಸೂತ್ರಧಾರನು "ಈ ಗ್ರೀಷ್ಮಋತುವನ್ನು ಕುರಿತು ಪರಿಷತ್ತಿನ ಶ್ರುತಿಪ್ರಸಾದನವಾಗುವಂತೆ ಗಾನಮಾಡು." ಎಂದು ನಟಿಯನ್ನು ಆಜ್ಞಾಪಿಸುತ್ತಾನೆ; ಮತ್ತು ಅವಳ ಗಾನವು ಮುಗಿದ ಬಳಿಕ—"ಉತ್ತಮವಾಗಿ ಹಾಡಿದೆ; ನಿನ್ನ ರಾಗಾಲಾಪ-ಗಳಿಂದ ಶ್ರೋತೃವೃಂದವು ಪ್ರತಿಬದ್ಧಚಿತ್ತವೃತ್ತಿಯುಳ್ಳದ್ದಾಗಿ ಚಿತ್ರ-ದಂತೆ ಸ್ತಬ್ಧವಾಗಿದೆ." ಎಂದು ಪ್ರಶಂಸಿಸುತ್ತಾನೆ; ಅದೂ ಅಲ್ಲದೆ, "ವೇಗದಿಂದ ಓಡುವ ಹರಿಣವು ಈ ದುಷ್ಯಂತನನ್ನು ಎಳೆದುಕೊಂಡು ಬಂದಂತೆ, ನಿನ್ನ ಮನೋಮೋಹಕ ಗೀತವು ನನ್ನನ್ನಾದರೂ ಎಳೆ-ಯಿತು." ಎಂದು ಉದ್ಗಾರ ತೆಗೆಯುತ್ತಾನೆ.

ವಾಲ್ಮೀಕಿಯ ಆಶ್ರಮದಲ್ಲಿ ಲವಕುಶರು ವೀಣೆಯ ಸ್ವರದೊಡನೆ:

ರಾಮಸ್ಯ ಮಧುರಂ ವೃತ್ತಂ ಗಾಯಂತೌ ಮಾತುರಗ್ರತಃ
ತದ್ವಿಯೋಗವ್ಯಥಾಂ ಕಿಂಚಿತ್ ಶಿಥಿಲೀಚಕ್ರತುಃ ಸುತೌ ॥

"ರಾಮಚರಿತ್ರವನ್ನು ಮಧುರವಾಗಿ ಹಾಡುತ್ತಿದ್ದದ್ದನ್ನು ಕೇಳಿ ಸೀತಾದೇವಿಯು ಪತಿವಿರಹದುಃಖವನ್ನು ಕಿಂಚಿತ್ಕಾಲ ಮರೆಯು-ತ್ತಿದ್ದಳು; ಮತ್ತು ಆಶ್ರಮದೊಳಗಿನ ಮೃಗಗಳು ಆ ಗಾನವನ್ನು ಕೇಳಿ ಸ್ತಬ್ಧವಾಗಿ ನಿಂತುಬಿಡುತ್ತಿದ್ದುವು." ಎಂಬ ವರ್ಣನೆಯು ರಘುವಂಶದಲ್ಲಿದೆ:

ವೃತ್ತಂ ರಾಮಸ್ಯ ವಾಲ್ಮೀಕೇಃ ಕೃತಿಸ್ತೌ ಕಿನ್ನರಸ್ವನೌ
ಕಿಂತದ್ಯೇನ ಮನೋಹರ್ತುಮಲಂ ಸ್ಯಾತಾಂ ನಶೃಣ್ವತಾಮ್
ತದ್ಗೀತ ಶ್ರವಣೈಕಾಗ್ರಾ ಸಂಸದಶ್ರುಮುಖೋಬಭೌ ॥

"ಕಥೆಯು ರಾಮನದು; ಕವಿಯು ವಾಲ್ಮೀಕಿಯು. ಗಾಯಕರು ಕಿನ್ನರಕಂಠದ ಕುವರರು. ಈ ತರದ ಜೋಡಣೆಯಾದ ಬಳಿಕ ಶ್ರೋತೃಗಳ ಚಿತ್ತಾಕರ್ಷಣಕ್ಕೆ ಇನ್ನೇನು ಹೆಚ್ಚಿನದು ಬೇಕು?" ಎಂದು ಕಾಳಿದಾಸನು ಯಜ್ಞಶಾಲೆಯಲ್ಲಿ ನಡೆದ ಲವ-ಕುಶರ ಗಾನ ವನ್ನು ಕೇಳಿ ಸಂಪೂರ್ಣ ಪರಿಷತ್ತು ಏಕಾಗ್ರಚಿತ್ತವಾಗಿ ಆನಂದ ಬಾಷ್ಪಗಳನ್ನು ಸುರಿಸಿತು." ಎಂದು ಬಣ್ಣಿಸಿದ್ದಾನೆ. ತ್ರಿಪುರ-ವಿಜಯದಿಂದ ಆನಂದಿತಳಾದ ಪಾರ್ವತಿಯು ಸಗದ್ಗದ ಕಂಠದಿಂದ ಗಾನ ಮಾಡುವುದನ್ನು ಕೇಳಿ "ವನದಲ್ಲಿದ್ದ ಕಿನ್ನರಿಯರು ಅನೇಕ ಸಾರೆ ಆನಂದಬಾಷ್ಪಗಳನ್ನು ಅಭಿವರ್ಷಿಸಿದರು." ಎಂಬ ವರ್ಣನೆಯು ಕುಮಾರಸಂಭವದಲ್ಲಿದೆ. ಈ ವರ್ಣನೆಗಳಿಂದ ಕಾಲಿದಾಸನು ಶ್ರೋತೃಗಳ ಮನಸ್ಸಿನ ಮೇಲಾಗುವ ಸಂಗೀತದ ಪರಿಣಾಮವನ್ನು ಸ್ಪಷ್ಟಪಡಿಸಿದ್ದಾನೆ.

ಇಲ್ಲಿಯ ವರೆಗೆ ಕಾಲಿದಾಸನ ದೃಶ್ಯ-ಶ್ರವ್ಯಕಾವ್ಯಗಳಲ್ಲಿ ಕಂಡು ಬರುವ ಸಂಗೀತ ವಿಷಯಕ್ಕೆ ಸಂಬಂಧಪಟ್ಟ ಉಲ್ಲೇಖಗಳ ಆಧಾರ-ದಿಂದ, ಆ ಮಹಾಕವಿಯ ಗಾನಕಲಾಭಿಜ್ಞತೆಯನ್ನು ತೋರ್ಪಡಿಸುವ ಸಾಹಸವನ್ನು ಯಥಾಮತಿಯಾಗಿ ಮಾಡಿದ್ದೇನೆ. ಗಾನಕಲೆಯಲ್ಲಿ ಯಾವ ಯಾವ ಅವಾಂತರ ವಿಷಯಗಳು ಅಡಕವಾಗುವುವೆಂಬುದನ್ನು ಆರಂಭದಲ್ಲಿ ವಿದಿತಪಡಿಸಿದ್ದೇನೆ. ಅದಕ್ಕನುಸರಿಸಿ ಮೊದಲು ನಾಟ್ಯ-ನಾಟಕ ವಿಚಾರವನ್ನು ಪ್ರಸ್ತಾಪಿಸಿದ್ದೇನೆ. ಆ ವಿಚಾರದಲ್ಲಿ ಸಂಗೀತ ಶಾಲೆ ಅಥವಾ ಪ್ರೇಕ್ಷಾಗಾರ, ನರ್ತನ, ಸಾಭಿನಯಗಾನ, ವಾದ್ಯದ ಜೋಡಣೆ, ಹಾಡಿನ ಶೈಲಿ, ರಾಗ, ರಸಭಾವಾವಿಷ್ಕರಣ, ನಟವರ್ಗ ಮತ್ತು ಪ್ರೇಕ್ಷಕವರ್ಗ ಇವುಗಳ ಸಂಬಂಧದಲ್ಲಿ ಕಾಲಿದಾಸನು ಹೇಳಿದ್ದನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಅದಾದ ಬಳಿಕ ವಾದ್ಯ ವಿಚಾರವನ್ನು ಆರಂಭಿಸಿ ಮೃದಂಗ, ಮುರಜ, ವಂಶ, ವೇಣು, ಮುರಲಿ, ವೀಣೆ ಮತ್ತು ಆತೋದ್ಯ ಈ ವಾದ್ಯಗಳನ್ನು ಕುರಿತು ಕಾಲಿದಾಸನು ಮಾಡಿದ ಉಲ್ಲೇಖಗಳನ್ನು ಕ್ರೋಡೀಕರಿಸಿ, ತಮ್ಮ ಅವಗಾಹನೆಗೆ ತಂದಿದ್ದೇನೆ. ಕೊನೆಯಲ್ಲಿ ಗಾನವಿಚಾರವನ್ನು ಕೈಕೊಂಡು ಸಪ್ತಸ್ವರಗಳು, ರಾಗಗಳು, ಗಾನ, ಗಾನವು ಶ್ರೋತೃಗಳ ಮನಸ್ಸಿನ ಮೇಲೆ ಮಾಡುವ ಪರಿಣಾಮ ಈ ವಿಷಯಗಳಲ್ಲಿ ಕಾಲಿದಾಸನ. ವ್ಯಕ್ತಪಡಿಸಿದ ಅಭಿಪ್ರಾಯವನ್ನು ತಮ್ಮ ಪ್ರತ್ಯಯಕ್ಕೆ ತಂದುಕೊಟ್ಟಿದ್ದೇನೆ. ಇಷ್ಟೆಲ್ಲ ವಿವೇಚನೆಯನ್ನು ಮಾಡಿದ ಬಳಿಕ 'ಕಾಲಿದಾಸನು ಗಾನಕಲಾಭಿಜ್ಞನಾಗಿದ್ದನು.' ಎಂದು ಹೇಳಿದರೆ, ತಪ್ಪಾಗಲಿಕ್ಕಿಲ್ಲವೆಂದು ನಾನು ನಂಬಿದ್ದೇನೆ.*

---

* ಪ್ರಸ್ತುತ ಲೇಖಕರು ತಾ॥ ೪-೧೨-೧೯೫೫ನೆಯ ದಿವಸ ಧಾರವಾಡ "ಆಕಾಶವಾಣಿ"ಯಲ್ಲಿ ಇದೇ ವಿಷಯವನ್ನು ಕುರಿತು ಮಾಡಿದ ಭಾಷಣ ಈ ಲೇಖದ ಸಂಕ್ಷಿಪ್ತ ರೂಪವು. ಯಾವದೇ ರೂಪದಲ್ಲಿ ಇದನ್ನು ಮುದ್ರಿಸಿ ಪ್ರಸಿದ್ಧಿಸಲು ಅನುಮತಿಯನ್ನು ಕೊಟ್ಟದ್ದಕ್ಕಾಗಿ ಲೇಖಕರು ಧಾರವಾಡ 'ಆಕಾಶವಾಣಿ'ಯ ಅಧಿಕಾರಿಗಳಿಗೆ ಕೃತಜ್ಞರಾಗಿದ್ದಾರೆ.

# ಪುತ್ರಾಗಮನ

(ನವ್ಯಕವನ)

ಶ್ರೀ. ಶಾಂತಿನಾಥ ದೇಸಾಯಿ, ಎಂ. ಎ. ಮುಂಬಯಿ

ನೀ ಬಂದೆ
ಧ್ವನಿ ತೆಗೆದೆ—
ಎಲಲಲಲ ಕೀ....ಹೂ....ಹಾ....ಹೂ....ಹೀ---ಹೂ
ಕತ್ತಲೆಯ ಗವಿಯಿಂದ ರಾಕ್ಷಸನ ಕೂಗು!
'ಅವ್ವಾ---ಅವ್ವಾ....ಅವ್ವಾ'.... ಅಹಾ!
ಅಯ್ಯೋ, ನಾ ತಂದ, ನನ್ನಂಥ ಜೀವಾ!
ಯಾಕಪ್ಪ ಈ ಜೀವ?
ಶೂನ್ಯತೆಯ, ಪೂರ್ಣತೆಯ, ಪರಬ್ರಹ್ಮನ
ಒಡಲಿಂದ ಯಾಕಪ್ಪ ನೀ ಬಂದೆ?
ಕೋಟ್ಯವಧಿಯ ಅಂಗುಳಿಯಲಿ
ಹನಿಯಾಗಲು ಬಂದಿರುವೆ.
ಯುಗಯುಗಗಳ ಒದ್ದಾಟದ
ಮುಗಿಯದ ಮರುಭೂಮಿಯಲಿ
ಕಣವಾಗಲು ಬಂದಿರುವೆ.
ಒಂದಿಲ್ಲ ಒಂದು ದಿನ
ಶೂನ್ಯತೆಯ. ಪೂರ್ಣತೆಯ
ಪರಬ್ರಹ್ಮನ ಒಡಲೊಳಗೆ
ಮರೆಯಾಗಲು ಬಂದಿರುವೆ.
ಯಾಕಪ್ಪ ನೀ ಬಂದೆ?
ಈ ಜೀವದ ದೈವಕ್ಕೆ
ಹಾ, ನಾನೇ
ಕಾರಣನೇ?
ಕಣ್ಣಿದ್ದೂ
ಕುರುಡಾದೆನೆ, ಕುರುಡಾದೆನೆ, ಕುರುಡಾದೆನೆ?

* * * *

ಕುರುಡು!
ಕುರುಡು ಜೀವಶಕ್ತಿಯೊಂದು
ದೇಹವನ್ನು ಯಂತ್ರಮಾಡಿ
ಕೊಂಚ ಅಮೃತಲಂಚ ನೀಡಿ
ಮಾಟ ಮಾಡಿತಯ್ಯ ಮಾಟ!
ಮಾಟ! ಮಾಯ! ನೋಡು ಆಹಾ
ಏನು ಇಂದ್ರಜಾಲವಹ ...
ಆಶ್ಚರ್ಯದ ಅಮರಾವತಿ—
(ಜಯತು ಜಯತು ಜೀವಶಕ್ತಿ!)
ನೋಡು ಎರಡು ಕಂಗಳರಳಿ
ಚಿಕ್ಕೆಯಂತೆ ಮಿಣುಕುತಿಹವು!

ಪುಟ್ಟ ಬಾಯಿ, ಪುಟ್ಟ ದೇಹ
ಪುಟ್ಟ ಕಾಲು ಕೈಗಳು!
('ಜೀವದುಂಬಿ ತೋಂತನನೆನು-
ತಿರಲು ಮೃದುಮೃದಂಗವು')
ಎನಿತು ಇದು ವಿಚಿತ್ರವು!
"ನಲ್ಲೆ, ಏಕೆ
ಏಕೆ ನಕ್ಕೆ ನಸುಕು-ನಗೆ?
ಕೂಸು ನೋಡು ಅಳುತಲಿದೆ!
ಪಾಪ!
ಪುಟ್ಟ ಜೀವ ಹಸಿದಿಹುದೆ?
ಉಣಿಸು ನಿನ್ನ ತಾಯ ಮೊಲೆ...."
ನನ್ನ ಅವಳ ರಕ್ತದಿಂದ
ನನ್ನ ಅವಳ ಜ್ವಾಲೆಯಿಂದ
ಜೀವಶಕ್ತಿ ಮಥಿಸಿ ತಂದ
ನನ್ನ-ಅವಳ-ಅದರ ಕಂದ!
ಬಾ, ಬಂದೆಯಾ, ಕಂದ
ನೀನು ಬಂದೆ; ನಾನು ತಂದೆ—
ಅವಳ ಕಣ್ಣ ಬೆಳಕು ತಂದೆ—
ವಿಶ್ವ ತುಂಬಿ ಹರಿಯುವಂಥ
ಜೀವನಕ್ಕೆ ಬಂಧ ತಂದೆ,
ಯಾಕೆ ಎಂದು ಕೇಳಲಾರೆ,
ಫಲವ ಕೊಡುವ ಮರಗಳಂತೆ
ಹೂವು ಬಿಡುವ ಬಳ್ಳಿಯಂತೆ
ರವಿಯ ತರುವ ನಸುಕಿನಂತೆ
ಯಾಕೆ ಎಂದು ಕೇಳಲಾರೆ.
ವಿಶ್ವಗಾಳಿ ಸುಳಿಯುವಲ್ಲಿ
ನಾನು ಹುಲ್ಲು-ಸುಳಿವು ಮಾತ್ರ
'ಯಾಕೆ' ಎಂದು ಕೇಳದೇ
ಮಾಡಿ ಮಡಿವುದೇ ಸುಸೂತ್ರ!
ಬಾ, ಭವಿಯೆ, ಬಂದೆಯಾ-
ನಿನ್ನ ದಾರಿ ಭದ್ರವಿರಲಿ.
ನನ್ನ-ನಿನ್ನ ಪ್ರೀತಿಯಿರಲಿ.
ತಂದೆಯೊಲುಮೆ ಚುಂಬನಾ!
ಇಕೋ ನಿನ್ನ ಹೂವು-ತುಟಿಗೆ
"ನಲ್ಲೆ, ನಿನ್ನ ತಾಯಿ-ನಗೆಯು
ನನ್ನ ಹೃದಯ ಮಿಡಿಯುತಿದೆ.
('ಮಾತೃದೇವೋ ಭವ!')
ನಿನ್ನ ದಿವ್ಯ ಮೊಗಕೆ ನನ್ನ
ನವ್ಯ-ಪ್ರೀತಿಚುಂಬನಾ
ಇನ್ನು ನಾನು--ನೀನು-ಅವನು
ಇನ್ನು ನವ್ಯ-ರಿಂಗಣಾ!"

# ಕುರುಡು ಕಣ್ಣು

( ಸಣ್ಣ ಕತೆ )

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

卐

**ಸುಪ್ತ ಚಿತ್ತದ ವೇದನೆ-ಸಂವೇದನೆಗಳು ಮನುಷ್ಯನ ದೇಹದ ಮೇಲೆ ಪರಿಣಾಮ ಮಾಡದಿರವು. ನಮ್ಮ ಎಷ್ಟೋ ರೋಗಗಳಿಗೆ ಕಾರಣ ಕೇವಲ ದೇಹದ ವಿಕೃತಿಯಲ್ಲ; ಮನೋವಿಕೃತಿಯೇ ಮುಖ್ಯ ಕಾರಣ. ಆದರೆ ಆ ವಿಕೃತಿಯ ಮೂಲವನ್ನು ಕಂಡುಹಿಡಿಯಲು ಡಾ. ಜಯರಾಜರಂತಹರ ಅಗತ್ಯ ತುಂಬ ಇದೆ.**

卐

ಅದು ಡಾಕ್ಟರ್ ಜಯರಾಜರವರ ಪ್ರೈವೇಟ್ ನರ್ಸಿಂಗ್ ಹೋಮ್.

ಜನಾರ್ದನ ಮಂಚದ ಮೇಲೆ ಮಲಗಿದ್ದ. ಅವನಿಗೆ ನಿದ್ದೆಯ ಝಂಪು. ಮಧ್ಯೆ ಎಚ್ಚರವಾದಂತಾಯಿತು. ತುಂಬ ಬಾಯಾರುತ್ತಿತ್ತು. ನೀರಿಗಾಗಿ ಮತ್ತೆ ನರ್ಸನ್ನು ಕರೆಯಬೇಕಲ್ಲಾ,—ಎಂದು ಸಂಕೋಚ. ಕೈಯಿಂದ ನೀರಿನ ಲೋಟಕ್ಕಾಗಿ ತಡಕಾಡಿದ. ಗ್ಲಾಸ್-ಕಪ್ ಕೆಳಗೆ ಬಿದ್ದು 'ಫಳ್' ಎಂದಿತು.

ಶಬ್ದ ಕೇಳಿ ನರ್ಸ್ ಬೇಗ ಬಂದಳು. ಜನಾರ್ದನ ಪೂರ್ಣ ಎಚ್ಚತ್ತ. ಜನರಲ್ ಆಸ್ಪತ್ರೆಯಾದ ಪಕ್ಷದಲ್ಲಿ ಏನೆನ್ನುತ್ತಿದ್ದರೋ ಏನೋ! ಆದರೆ ನರ್ಸ್ ಹತ್ತಿರ ಬಂದು ಮೃದುವಾಗಿ :

" ಏನು ಬೇಕಾಗಿತ್ತು ಸಾರ್ ? ಏಕೆ ತೊಂದರೆ ತೆಗೆದುಕೊಳ್ಳೀರಿ? ನರ್ಸ್ ಎಂದು ಕೂಗಿದರೆ ಸಾಕು; ನಿಮ್ಮ ಆವಶ್ಯಕತೆಗೆ ಗಮನ ಕೊಡ್ತೇನೆ. " ಎಂದಳು.

" ಥ್ಯಾಂಕ್ಸ್, ಸ್ವಲ್ಪ ನೀರು ಬೇಕಾಗಿತ್ತು, ಅಷ್ಟೆ! ನಾನೇ ತೆಗೆದುಕೊಳ್ಳೋಣ ಅಂತ ಹೋದೆ. ಕೈತಪ್ಪಿ ಬಿದ್ದುಬಿಡ್ತು. ಕ್ಷಮಿಸಿ. ಗಂಟೆ ಎಷ್ಟು? ಡಾಕ್ಟರ್ ಯಾವಾಗ ಬರ್ತಾರೆ ? "

" ಗಂಟೆ ಎರಡೂವರೆ. ಡಾಕ್ಟರ್ ಇನ್ನು ಕಾಲುಗಂಟೆಯಲ್ಲಿ ಬರ್ತಾರೆ. "

" ಓ, ಆಗಲೇ ಎರಡೂವರೆ ಆಯಿತೇ ? " ದುಗುಡದಿಂದ ಕೇಳಿದ ಜನಾರ್ದನ.

" ಎರಡೂವರೆಯ ಮೇಲೆ ಎರಡು ನಿಮಿಷ, ಏಕೆ ? " ನರ್ಸ್ ಹೇಳಿದಳು.

ಜನಾರ್ದನ ಅದಕ್ಕೆ ಉತ್ತರ ಕೊಡಲಿಲ್ಲ. ಕ್ಷಣ ಬಿಟ್ಟು ತನಗೆ ತಾನೇ—

" ಹುಂ, ಇನ್ನು 'ಅವಳು' ಬೇರೆ ಬಂದು ಬಿಡ್ತಾಳೆ, ನನ್ನ ಕಾಡೋದಕ್ಕೆ " ಎಂದು ಗೊಣಗಿಕೊಂಡ.

ನರ್ಸ್ ಚಕಿತಳಾಗಿ ದಿಟ್ಟಿಸಿದಳು. ಆದರೆ ಜನಾರ್ದನ ಅವಳ ಚಕಿತ ದೃಷ್ಟಿಯನ್ನು ನೋಡುವಂತಿರಲಿಲ್ಲ. ಅವನ ಕಣ್ಣುಗಳೆರಡೂ ಕಾಣುತ್ತಿರಲಿಲ್ಲ.

ಡಾ. ಜಯರಾಜರು ಎರಡೂಮುಕ್ಕಾಲು ಗಂಟೆಗೆ ಸರಿಯಾಗಿ ಬಂದರು. ಪ್ರತಿಯೊಬ್ಬ ರೋಗಿಯ ಬಳಿಯಲ್ಲಿಯೂ ನಿಂತು ಸಮಾಧಾನದಿಂದ ವಿಚಾರಿಸಿಕೊಂಡರು.

ಡಾ. ಜಯರಾಜರು ವೈದ್ಯವೃತ್ತಿಗೆ ಗೌರವ ತರುವಂತಹ ವ್ಯಕ್ತಿ. ಅವರ ಭವ್ಯವಾದ ನಿಲುವು, ಶಾಂತವಾದ ನಗುಮೊಗ, ಮಾತುಗಳಲ್ಲಿ ಹೊರಸೂಸುತ್ತಿದ್ದ ಆತ್ಮೀಯತೆ, ವಿಶ್ವಾಸ, ರೋಗಿಗಳು ಹೇಳಿದ್ದನ್ನೆಲ್ಲ ಸಮಾಧಾನವಾಗಿ ಕೇಳುವ ತಾಳ್ಮೆ—ರೋಗಿಗಳಿಗೆ ಅವರಲ್ಲಿ ನಂಬಿಕೆ-ಭರವಸೆಗಳನ್ನು ಮೂಡಿಸುತ್ತಿದ್ದುವು. 'ಡಾ. ಜಯರಾಜರವರಿಗೆ ತೋರಿಸಿದರೆ ಸಾಕು; ತಮಗೆ ಗುಣವಾಗಿಬಿಡುವುದು!' ಎಂದು ಎಷ್ಟೋ ಮಂದಿ ರೋಗಿಗಳು ಭಾವಿಸುತ್ತಿದ್ದರು.

" ಹಲೋ ಜನಾರ್ದನ್, ಹೇಗಿದ್ದೀರಿ? ಸ್ವಲ್ಪ ಉತ್ತಮ ಎನ್ನಿಸುತ್ತಿದೆಯೇ ? "

" ನನಗೆ ತಿಳಿಯೋದಿಲ್ಲ ಡಾಕ್ಟರ್! ನೀವು ಏನು ದೋಷ ಇದೆ ಹೇಳ್ಬೇಕು. ನನಗೆ ಕಣ್ಣು ಮತ್ತೆ ಬರುತ್ತದೆಯೋ ಇಲ್ಲವೋ—ಇಷ್ಟು ಮೊದಲು ತಿಳಿಸಿ ಬಿಡಿ. ನನ್ನ ದುರದೃಷ್ಟ ಹೀಗಿತ್ತು—ಎಂದುಕೋತೀನಿ. "

" ಇದೇಕೆ ಇಷ್ಟು ನಿರಾಶಾವಾದಿಗಳಾಗಿ ಬಿಟ್ಟಿದ್ದೀರಿ ಮಿಸ್ಟರ್? ಖಂಡಿತ ಕಣ್ಣಿಗೆ ಅಪಾಯವಿಲ್ಲ. ಸ್ವಲ್ಪ ಸಮಾಧಾನ ತಾಳಿ. ನಿಮಗೆ ಬೇಸರವಾದರೆ ನರ್ಸ್‌ಗೆ ಹೇಳಿ; ಕತೆ-ಕಾದಂಬರಿ ಓದಿ ಹೇಳ್ತಾರೆ. ಅಥವಾ ನಿಮ್ಮ ಪತ್ನಿಯವರಿಗೆ ಇಲ್ಲೇ ಇದ್ದು ನಿಮ್ಮ ಸಂಗಡ ಮಾತನಾಡುವಂತೆ ಏರ್ಪಾಡು ಮಾಡೋಣ! "

" ಪತ್ನಿ " ಎಂಬ ಮಾತು ಕೇಳಿದೊಡನೆ, ಅಸಮಾಧಾನದಿಂದ ಅವನ ಹುಬ್ಬು ಗಂಟಾದುದನ್ನು ಡಾಕ್ಟರ್ ಗಮನಿಸಿದರು.

" ಬೇಡ ಸಾರ್! ಯಾರೂ ಇಲ್ಲಿರಬೇಕಾಗಿಲ್ಲ. ನನಗೆ ಬೇಸರವೇನೂ ಇಲ್ಲ. "

" ದೂರದಲ್ಲಿ ರೇಡಿಯೋ ಹಾಡೋದು ನಿಮಗೆ ಕೇಳ್ತಾನೇ ಇರುತ್ತೆ. ಓಹೋ, ನೀವೋ, ಬನ್ನಿ ಅಮ್ಮಾ! " ಎಂದು ಡಾಕ್ಟರು ಬಾಗಿಲ ಕಡೆ ತಿರುಗಿದರು.

" ಯಾರು ಬಂದಿದ್ದು ? "

" ನಿಮ್ಮ ಪತ್ನಿ ಮಿಸ್ಟರ್, ಪಾಪ ಉರಿಯುವ ಬಿಸಿಲಲ್ಲಿ ಮೂರು ಮೈಲಿ ನಡೆದು ಬಂದಿದ್ದಾರೆ. "

ಜನಾರ್ದನನ ಮುಖ ಅರಳಲಿಲ್ಲ. " ಈ ಬಿಸಿಲಿನಲ್ಲಿ ಬರದಿದ್ದರೆ ಏನು ಸೂರೆಹೋಗುತ್ತೋ ಇವಳಿಗೆ! " ಎಂದು ಗೊಣಗಿಕೊಂಡ.

ಜಯ

ನಳಿನಾ ಯುವತಿ. ಬಿಸಿಲಿನ ಕಾವಿಗೆ ಅವಳ ಕೆನ್ನೆಗಳು ರಕ್ತ-ವರ್ಣ ತಾಳಿದ್ದುವು. ಜನಾರ್ದನನನ್ನು ಅವಳು ನೋಡುತ್ತಿದ್ದ ಆ ದೃಷ್ಟಿಯಲ್ಲೇ ಅವಳ ಶ್ರದ್ಧೆ, ಪ್ರೇಮಗಳು ವ್ಯಕ್ತವಾಗುತ್ತಿದ್ದುವು.

"ನಮಸ್ತೇ ಡಾಕ್ಟರ್. ಹೇಗಿದೆ ಇವರಿಗೆ? ನಾನು ಇವರನ್ನು ನೋಡಿಕೊಳ್ಳುತ್ತಾ ಇಲ್ಲೇ ಇರಬಹುದೋ?"

ಜನಾರ್ದನ ಮಧ್ಯೆ ಬಾಯಿಹಾಕಿದ: "ಬೇಡ, ನನಗಿಲ್ಲಿ ಏನೂ ತೊಂದರೆ ಇಲ್ಲ. ನಾನು ಸುಖವಾಗಿದ್ದೇನೆ. ಮನೇಲಿ ಇನ್ನಾರೂ ಇಲ್ಲ. ನೀನು ಮನೆ ನೋಡಿಕೋ!"

"ನಿಮ್ಮಿಷ್ಟ. ಡಾಕ್ಟರ್, ಇವರಿಗೆ ಇಷ್ಟವಾದ ತಿಂಡಿ ತಂದು ಕೊಡಬಹುದೇ?

"ಓಹೋ, ಅದಕ್ಕೇನಮ್ಮಾ, ಅಗತ್ಯವಾಗಿ ಕೊಡಿ."

ನಳಿನಾ ಜನಾರ್ದನನ ಮಂಚದ ಬಳಿಗೆ ಹೋದಳು. ಸಣ್ಣ ಟಿಫಿನ್‌ಕ್ಯಾರಿಯರ್‌ನಲ್ಲಿ ತಾನು ತಂದಿದ್ದ ತಿಂಡಿಯನ್ನು ತೆಗೆದು ಪ್ಲೇಟಿನಲ್ಲಿ ಹಾಕಿ ಅವನ ಕೈಗೆ ಕೊಟ್ಟಳು.

"ಈ ದಿನ ಜಾಮೂನು-ಜಹಾಂಗೀರ್‌ಗಳನ್ನು, ನಾನೇ ತುಪ್ಪದಲ್ಲಿ ಮಾಡಿಕೊಂಡು ತಂದಿದ್ದೇನೆ. ನಿಮಗೆ ಇನ್ನೇನು ಮಾಡಿಕೊಂಡು ಬರಲಿ, ಹೇಳಿ." ಎಂದಳು ಒಲುಮೆ ತುಂಬಿದ ಧ್ವನಿಯಲ್ಲಿ.

ಜನಾರ್ದನ ಸಂಕೋಚಪಡುತ್ತಾ, "ಇಷ್ಟೆಲ್ಲಾ ತೊಂದರೆ ಏಕೆ, ನಳಿನಾ? ಅಜೀರ್ಣವಾದರೆ ಕಷ್ಟ. ಇಲ್ಲಿ ನನಗೆ ಏನೂ ಬೇಡ ಮನೆಗೆ ತೆಗೆದುಕೊಂಡು ಹೋಗಿಬಿಡು!" ಎಂದು ಪ್ಲೇಟನ್ನು ಸುಮ್ಮನೆ ಮಂಚದ ಮೇಲಿಟ್ಟ.

ನಳಿನಾ ಮುಖ ಚಿಕ್ಕದು ಮಾಡಿಕೊಂಡಳು. ಅವಳ ಕಣ್ಣಲ್ಲಿ ನೀರಾಡಿತು. ಡಾಕ್ಟರ್ ಅದನ್ನು ಕಂಡರು. "ಪಾಪ, ಈ ದಿನ ತಂದೇಬಿಟ್ಟಿದ್ದಾರೆ. ಈ ದಿನ ಸ್ವಲ್ಪ ತೆಗೆದುಕೊಂಡುಬಿಡಿ ಮಿಸ್ಟರ್! ನೀವು ಹೀಗೆ ತೊಂದರೆ ತೆಗೆದುಕೊಳ್ಳಬೇಡಿರಮ್ಮಾ. ಅವರೇನು ಇಷ್ಟಪಟ್ಟರೆ ಅದನ್ನು ನಾವು ತರಿಸಿಕೊಡ್ತೇವೆ." ಎಂದರು.

"ಇದರಲ್ಲಿ ತೊಂದರೆ ಏನ್ಬಂತು ಡಾಕ್ಟರ್? ಅವರಿಗಾಗಿ ಹಗಲಿರುಳು ದುಡಿದರೂ ನನಗೆ ದಣಿವಾಗೋದಿಲ್ಲ."

"ಹೌದಮ್ಮಾ, ತಿಂಗಳಿಂದ—ನಿತ್ಯವೂ ಮಧ್ಯಾಹ್ನ ಈ ಉರಿಬಿಸಿಲಿನಲ್ಲಿ ನಡೆದು ಬರ್ತಿದೀರಿ."

"ಅದೇನು ಮಹಾ! ಆದರೆ ನನಗೆ ಏನು ಮಾಡ್ಬೇಕೂ ತೋಚೋದಿಲ್ಲ ಡಾಕ್ಟರ್. ಅವರಿಗೆ ಬೇಗ ಗುಣಮಾಡಿಬಿಡಿ. ಬೇಕಾದರೆ ನನ್ನ ಕಣ್ಣು ಕಿತ್ತುಕೊಡೋಕೆ ಸಿದ್ಧವಾಗಿದ್ದೇನೆ. ಡಾಕ್ಟರ್, ನಿಮ್ಮಲ್ಲೇ ಪೂರ್ಣ ಭರವಸೆ ಇಟ್ಟಿದೀನಿ. ನಿಮ್ಮನ್ನೇ ನಂಬಿದೇನೆ, ಡಾಕ್ಟರ್!"

ಜನಾರ್ದನನು ಉಗುಳುನುಂಗಲು ಹೋಗಿ ಉಸಿರುಸಿಕ್ಕಿಸಿ-ಕೊಂಡು ಕೆಮ್ಮಲಾರಂಭಿಸಿದ. ನಳಿನಾ ತುಂಬಿದ ಸಾನುಭೂತಿ-ಯಿಂದ ಅವನ ಬೆನ್ನು ಸವರಿದಳು. "ಬಿಡು, ಬಿಡು. ಎಲ್ಲಾ ಸರಿ-ಹೋಯಿತು, ಎಲ್ಲಾ ಸರಿಹೋಯಿತು!" ಎಂದ ಜನಾರ್ದನ.

ಡಾಕ್ಟರರ ಸೂಕ್ಷ್ಮದೃಷ್ಟಿಗೆ, ಜನಾರ್ದನ ಆದಷ್ಟು ಬೇಗ ನಳಿನಿಯ ಸಾಮೀಪ್ಯದಿಂದ ದೂರವಾಗಬೇಕೆಂದು ಯತ್ನಿಸುವುದು ಗಮನಕ್ಕೆ ಬಂದಿತು. ಅವರಿಗೆ ಸ್ವಲ್ಪ ಆಶ್ಚರ್ಯವೂ ಆಯಿತು.

"ಎಲ್ಲದಕ್ಕೂ ದೇವರಿದಾನೆ. ಹೆದರಬೇಡಿರಮ್ಮಾ. ಮನೆಗೆ ಹೋಗುವ ಮುನ್ನ ನನ್ನ ಕಂಡು ಹೋಗಿ!" ಎಂದು ಮುಂದಕ್ಕೆ ಹೋದರು.

ಜನಾರ್ದನ ಮಂಕನಂತೆ ಸುಮ್ಮಗಿದ್ದ. ನಳಿನಿಯೊಡನೆ ಆಸಕ್ತಿಯಿಂದ ಯಾವ ಮಾತನ್ನೂ ಆಡಲಿಲ್ಲ. ತಿಂಡಿಯನ್ನು ತಿಂದ ಶಾಸ್ತ್ರಮಾಡಿದ, ಅಷ್ಟೇ. ನಳಿನಿ ಮಾರನೆಯ ದಿನ ಬರುವುದಾಗಿ ಹೇಳಿ ಡಾಕ್ಟರನ್ನು ಕಾಣಲು ಹೋದಳು.

ಡಾಕ್ಟರ್ ಬರೆಯುತ್ತ ಮೇಜಿನ ಮುಂದೆ ಕುಳಿತಿದ್ದರು.

"ಡಾಕ್ಟರ್, ಸತ್ಯ ಹೇಳಿ. ಅವರ ಕಣ್ಣಲ್ಲಿ ಏನು ದೋಷವಿದೆ?"

"ಏನು ದೋಷವೆಂದು ಗೊತ್ತಾಗುವಂತಿಲ್ಲವಮ್ಮಾ; ಅವರಿಗೆ ಯಾವಾಗ ಹಾಗಾಯಿತು, ಹೇಳಿ!"

"ಈಗ ತಿಂಗಳಾಯಿತು ಹೀಗಾಗಿ. ಅದರ ಹಿಂದೆ ಅವರ ಕಣ್ಣು ಚೆನ್ನಾಗಿಯೇ ಇತ್ತು. ಅವರ ಕಣ್ಣು ಹಾಗಾದ ದಿನ ರಾತ್ರಿ ಹತ್ತು-ವರೆಯ ತನಕ ರೇಡಿಯೋ ಕೇಳುತ್ತಿದ್ದೆವು. ನಿತ್ಯದಂತೆ ನಾನು ಮಲಗುವ ಮುನ್ನ ದೇವರ ಪ್ರಾರ್ಥನೆ ಮಾಡಿದೆ. 'ಅಯ್ಯೋ ನಿನ್ನ ದೇವರೇ!' ಎಂದು ಹಾಸ್ಯಮಾಡಿದರು. ಬೆಳಗ್ಗೆ ನಾಲ್ಕುಗಂಟೆಯ ಸಮಯ. ಅವರ ರೂಮಿನಲ್ಲಿ ಅಲಾರಂ ಒಂದೇಸಮನೆ ಹೊಡೆದು-ಕೊಳ್ತಾ ಇತ್ತು. ರೂಮಿನ ದೀಪ ಹಾಕಿತ್ತು. ನಾನು ಬೇಗ ಎದ್ದು ಹೋದೆ. ಗೋಡೆ ಹಿಡಿದುಕೊಂಡು ತಡಕಾಡ್ತಾ ಇದ್ದರು. 'ನನ-ಗೇನೋ ಆಗಿದೆ. ಕಣ್ಣೇ ಕಾಣೋದಿಲ್ಲ. ಬರಿಯ ಕತ್ತಲೆ! ಬರಿಯ ಕತ್ತಲೆ!" ಎಂದು ಕೂಗಿಕೊಂಡರು. ನಾನು ಸಹ ಅವರ ಕಣ್ಣಿಗೆ ಬೀಳಲಿಲ್ಲ. ಮಾರನೆಯ ದಿನವೇ ಇಲ್ಲಿಗೆ ಕರೆದುಕೊಂಡು ಬಂದೆವು."

"ಹುಂ. ಇಷ್ಟೇನೆಯೇ?"

"ಇಷ್ಟೇ ಡಾಕ್ಟರ್! ಮಂತ್ರ ತಂತ್ರ ಎಲ್ಲಾ ಮುಗಿಯಿತು. ಯಾವುದರಿಂದಲೂ ಪ್ರಯೋಜನವಾಗಲಿಲ್ಲ. ನೀವೇ ಕಾಪಾಡಬೇಕು ಡಾಕ್ಟರ್. ಕುಯ್ಯಿಲಿಗಾಲ ಬೇರೆ. ನಾನೊಬ್ಬಳೇ ಏನು ಮಾಡಲಿ?

ನರ್ಸ್ ಬಂದು ಡಾಕ್ಟರನ್ನು ಕರೆದಳು. "ಒಂದು ಕ್ಷಣ ಹೊರಗೆ ಬನ್ನಿ ಡಾಕ್ಟರ್!"

"ಕೂತುಕೊಂಡಿರಿ ಅಮ್ಮಾ? ಬರ್ತೇನೆ" ಎಂದು ಡಾಕ್ಟರ್ ಹೊರಗಡೆಗೆ ಬಂದರು.

"ಆ ಪೇಷಂಟ್, ಈಕೆ ಬಂದ ಕೂಡಲೆ ತುಂಬಾ ರಿಲೀಫ್ ಆದವರಂತೆ ಮಲಗಿದರು—ಈ ಮಹಾರಾಯಿತಿ ಎಲ್ಲರಿಗೂ ಪ್ರದರ್ಶನ ಮಾಡೋಕೆ ಬರ್ತಾಳೆ ಇಲ್ಲಿಗೆ—ಮನೇಲಿ ತಿಂದು ಕೂತಿರೋದಕ್ಕೆ ಇವಳಿಗೇನು ಕಷ್ಟವೋ—ಎಂದು ಮೆಲ್ಲಗೆ ಅಂದುಕೊಂಡರು. ಈಕೆ ಬರೋದು ಅವರಿಗೆ ಇಷ್ಟವಿಲ್ಲ. ಈಕೆ ಇದ್ದರೆ ಅವರು ತುಂಬಾ ಸಂಕೋಚಪಡ್ತಾರೆ."

"ಸರಿ. ಈಕೆಗೆ ನಾನು ಹೇಳಿಕಳುಹುತ್ತೇನೆ" ಎಂದು ಡಾಕ್ಟರ್ ಒಳಕ್ಕೆ ಬಂದರು.

"ನೀವು ಮಧ್ಯಾಹ್ನ ಇಷ್ಟು ಕಷ್ಟತೆಗೆದುಕೊಂಡು ಬರಬೇಡಿ-ರಮ್ಮಾ. ನಿಮ್ಮ ಪತಿಪ್ರೇಮ ಭವ್ಯವಾದುದು. ಅಸಾಮಾನ್ಯವಾದುದು! ಆದರೆ ಈ ಬಿಸಿಲಲ್ಲಿ ನೀವು ನಡೆದುಬರೋದು, ಇಷ್ಟು ಕಷ್ಟಪಡೋದು, ಇದನ್ನೆಲ್ಲಾ ಕಂಡು ನಿಮ್ಮ ಯಜಮಾನರಿಗೆ ತುಂಬಾ ಸಂಕಟ, ಸಂಕೋಚ ಆಗುತ್ತೆ. ತಮ್ಮಿಂದ ಇಷ್ಟೆಲ್ಲಾ ತ್ರಾಸವಾಗ್ತಿದೆಯಲ್ಲಾ ಎಂದು ಮನಸ್ಸಿನಲ್ಲೇ ಕುದೀತಾರೆ. ಆದ್ದರಿಂದ ನೀವು ಬೆಳಗ್ಗೆ ಮಾತ್ರ ಬಂದು ಹೋಗಿ, ಸಾಕು."

"ಇದೇನು ಡಾಕ್ಟರ್ ಹೀಗಂತೀರಿ? ಈ ಕಷ್ಟದಲ್ಲಿ ನನ್ನ ಬಿಟ್ಟು ಅವರಿಗೆ ಬೇರೆ ಯಾರು ದಿಕ್ಕು? ನಾನು ಬರದೆ ಇದ್ದರೆ ಉತ್ತಮ ಅಂತೀರಲ್ಲಾ!" ಎಂದು ಕಣ್ಣೀರು ತುಂಬಿಕೊಂಡಳು.

"ನೋಡೀಮ್ಮಾ. ರೋಗಿಗಳ ಮನಸ್ಥಿತೀನ ವರ್ಣಿಸೋದು ಕಷ್ಟ. ನಾನು ಅನುಭವದಿಂದ ಹೇಳ್ತಿದ್ದೇನೆ. ನನ್ನಲ್ಲಿ ನಂಬಿಕೆ ಇಡಿ. ಅವರಿಗೆ ಕಷ್ಟವಾಗದಂತೆ ನೋಡಿಕೊಳ್ಳೋದು ನಮ್ಮ ಜವಾ-ಬ್ದಾರಿ. ನೀವು ಬೆಳಗ್ಗೆ ಮಾತ್ರ ಬನ್ನಿ; ಒಂದೆರಡು ದಿನ ನೀವು ಬಾರದೆ ಇದ್ದರೂ ಚಿಂತೆಯಿಲ್ಲ."

"ಆಗಲಿ ಡಾಕ್ಟರ್. ಅವರ ಮನಸ್ಸು ಸಂತೋಷವಾಗಿದ್ದರೆ ಸಾಕು. ನಾಳೆಯಿಂದ ಬೆಳಗ್ಗೆ ಮಾತ್ರ ಬರ್ತೇನೆ. ಬರದೇ ಇರಲು ಹೇಗೆ ಸಾಧ್ಯ ಡಾಕ್ಟರ್? ನನ್ನ ಮನಸ್ಸು ನಿಲ್ಲುವುದಿಲ್ಲವಲ್ಲಾ!"

ನಳಿನಿ ಮನೆಗೆ ಹೋದಳು. ಡಾಕ್ಟರ್ ನರ್ಸನ್ನು ಒಳಕ್ಕೆ ಕರೆದರು.

"ಈ ಪೇಷಂಟ್ ವಿಷಯದಲ್ಲಿ ನನಗೆ ಅನುಮಾನವಾಗ್ತಾ ಇದೆ. ಅವರ ಕಣ್ಣುಗಳಲ್ಲಿ ಯಾವ ದೋಷವೂ ಇಲ್ಲ. ಎಲ್ಲವೂ ಸಹಜವಾಗಿದೆ. ಆಪ್ಟಿಕ್ ನರ್ವಿಗೆ ಜಖಂ ಆಗಿರಬಹುದು ಎಂದು-ಕೊಂಡಿದ್ದೆ. ಆದರೆ ಈ ದಿನ ನನಗೆ ಅನುಮಾನವಾಯಿತು. ಬಹುಶಃ ಮಾನಸಿಕವಾದ ಕಾರಣದಿಂದ ಹೀಗಾಗಿರಬಹುದೋ ಏನೋ!"

"ಇರಬಹುದು. ಪೇಷಂಟಿಗೂ ಆತನ ಪತ್ನಿಗೂ ಅಷ್ಟು ಸರಿಯಿಲ್ಲವೆಂದು ಕಾಣುತ್ತೆ. ನಾನು ಹತ್ತಿರದಲ್ಲಿರುವುದನ್ನು ತಿಳಿಯದೇ ಆತ ಮಾತಾಡಿದರು. ಆಗಲೇ ನಿಮಗೆ ಹೇಳಿದೆನಲ್ಲಾ!"

"ಸರಿ. ಪೇಷಂಟನ್ನು ನನ್ನ ಕನ್‌ಸಲ್ಟಿಂಗ್ ರೂಮಿಗೆ ಕರೆದು-ಕೊಂಡು ಬನ್ನಿ."

ನರ್ಸ್ ಜನಾರ್ದನನನ್ನು ಡಾಕ್ಟರರ ರೂಮಿಗೆ ಕರೆದುಕೊಂಡು ಬಂದಳು.

"ಕೂತುಕೊಳ್ಳಿ, ಮಿಸ್ಟರ್ ಜನಾರ್ದನ್. ನರ್ಸ್, ರೂಮಿನ ಬಾಗಿಲು ಹಾಕಿಕೊಂಡು ಹೋಗಿ. ನಾನು ಇವರ ಸಂಗಡ ಆತ್ಮೀಯ-ವಾಗಿ ಮಾತನಾಡಬೇಕು. ಬೇರೆ ಯಾರನ್ನೂ ಬಿಡಬೇಡಿ!"

"ಆಗಲಿ ಸರ್!"

ಜನಾರ್ದನ ಮೆತ್ತನೆಯ ಕುರ್ಚಿಯ ಮೇಲೆ ಕುಳಿತುಕೊಂಡ.

"ನಿಮ್ಮ ಪತ್ನಿಗೆ ಹೇಳಿ ಕಳುಹಿದ್ದೇನೆ. ನಾಳೆಯಿಂದ ಮಧ್ಯಾಹ್ನ, ಸಂಜೆ ಬರಬೇಡಿ....ಬೇಕಾದರೆ ಬೆಳಗ್ಗೆ ಮಾತ್ರ ಬನ್ನಿ ಎಂದು."

"ಹಾದೇ ಡಾಕ್ಟರ್? ಬಹಳ ಸಂತೋಷ. ನಾನಾಗಿಯೇ ಅವಳಿಗೆ ಹೇಗೆ ಹೇಳೋದು ಎಂದು ಯೋಚನೆ ಮಾಡ್ತಾ ಇದ್ದೆ. ನಾನು ಬೇಡ ಅಂದರೂ ಅವಳು ಕೇಳೋದಿಲ್ಲ."

ಜನಾರ್ದನನ ಮುಖ ಸಂತೋಷದಿಂದ ಅರಳಿತ್ತು.

ಡಾಕ್ಟರ್ ಜನಾರ್ದನನ ಬಳಿಗೆ ತಮ್ಮ ಕುರ್ಚಿಯನ್ನೆಳೆದು-ಕೊಂಡರು; ಆತ್ಮೀಯ ವಿಶ್ವಾಸದಿಂದ ಅವನ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು.

"ಜನಾರ್ದನ್, ನೀವು ನನ್ನನ್ನು ನಂಬುತ್ತೀರಾ?"

ಯಾರಿಗಾದರೂ ವಿಶ್ವಾಸ ಹುಟ್ಟಿಸುವ ನಡೆವಳಿಕೆ ಅದು.

"ಖಂಡಿತವಾಗಿ, ಡಾಕ್ಟರ್! ಹಾಗಿಲ್ಲದೆ ಇದ್ದರೆ ನಾನು ನರ್ಸಿಂಗ್ ರೂಮಿಗೆ ಸೇರುತ್ತಿದ್ದೆನೇ?"

"ಹಾಗಾದರೆ ಸರಿ. ನಿಮ್ಮ ಮನಸ್ಸಿನಲ್ಲಿರುವುದನ್ನೆಲ್ಲಾ ಮರೆ-ಮಾಚದೆ ಹೇಳಿ. ನನ್ನ ವೃತ್ತಿಯ ಪ್ರಮಾಣವಚನ ನಿಮಗೆ ಗೊತ್ತಿರ-ಬಹುದು. ರೋಗಿಯ ವಿಷಯದ ಯಾವ ಗುಟ್ಟನ್ನೂ ನಾವು ಬಹಿ-ರಂಗಪಡಿಸುವುದಿಲ್ಲ."

"ಆದರೆ, ನನ್ನಲ್ಲಿ ಅಂತಹ ಗುಟ್ಟೇನಿಲ್ಲ, ಡಾಕ್ಟರ್!"

"ಇರಲಿ. ನಿಮ್ಮ ಕಣ್ಣುಗಳ ವಿಷಯಕ್ಕೆ ಬರೋಣ. ಹೀಗೆ ಕಾಣದಂತಾಗಲು ಏನು ಕಾರಣ? ಯಾವಾಗ, ಹೇಗೆ ಪ್ರಾರಂಭ-ವಾಯಿತು? ಎಲ್ಲಾ ಹೇಳ್ತೀರಾ?"

ಜನಾರ್ದನನ ಮೈ ಹುರಿಗಟ್ಟಿತು. ಯಾವುದೋ ಕಹಿನೆನಪು ಬಂದಾಗಿನಂತೆ ಮುಖವನ್ನು ಒಗರು ಮಾಡಿಕೊಂಡ.

"ನಿದಾನವಾಗಿ ಯೋಚಿಸಿ ಹೇಳಿ, ಆತುರವಿಲ್ಲ." ಡಾಕ್ಟರರ ಧ್ವನಿಯಲ್ಲಿಯ ವಿಶ್ವಾಸ, ಒತ್ತಾಯ, ಜನಾರ್ದನನನ್ನು ಪ್ರಚೋದ-ಗೊಳಿಸಿತು.

"ನಮ್ಮ ಮಾತು ಇನ್ನಾರಿಗಾದರೂ ಕೇಳುವುದೇ?....ನರ್ಸ್?" ಎಂದು ಆತಂಕದಿಂದ ಅತ್ತಿತ್ತ ನೋಡಿದ.

"ಛೇ. ಯಾರೂ ಇಲ್ಲ. ನಾವಿಬ್ಬರೇ........ನಿಮ್ಮ ಪತ್ನಿ ಈಗಾಗಲೇ ಮನೆ ತಲುಪಿರಬಹುದು."

"ಅದೊಂದು ದೊಡ್ಡ ಕತೆ ಡಾಕ್ಟರ್. ನನ್ನ ಹೃದಯಾನೇ ನಿಮ್ಮ ಮುಂದೆ ಬಿಚ್ಚಿಬಿಡ್ತೇನೆ. ನನಗೂ ನಳಿನಿಗೂ ಮದುವೆಯಾಗಿ ಹತ್ತು ವರ್ಷಗಳಾದುವು. ಆದರೆ ನಮ್ಮದು ಆದರ್ಶಸುಖಸಂಸಾರ-ವೇನೂ ಇಲ್ಲ. ನಮ್ಮಿಬ್ಬರಿಗೂ ಆಗಾಗ ಸ್ವಲ್ಪ ಸ್ವಲ್ಪ ಮನಸ್ತಾಪ ಇರ್ತಾ ಇತ್ತು. ನನಗೇನೋ ತುಂಬಾ ಅತೃಪ್ತಿಯಿತ್ತು. ಅದೇಕೆ ಎಂದು ನನಗೆ ವಿವರಿಸಲಾಗುತ್ತಿರಲಿಲ್ಲ. ನಳಿನಿಯಲ್ಲಿ ಇಂತಹ ತಪ್ಪಿದೆಯೆಂದು ತೋರಿಸುವುದಕ್ಕೂ ನನಗೆ ಸಾಧ್ಯವಿರಲಿಲ್ಲ. ನಳಿನಿ ವಿಧೇಯಳು. ಮನೆಗೆಲಸದಲ್ಲಿ ಅಚ್ಚುಕಟ್ಟು. ಯಾವುದಕ್ಕೂ ಆಸೆ ಪಟ್ಟವಳಲ್ಲ. ಆದರೆ ನನ್ನ ಈ ಅತೃಪ್ತಿ, ಅಸಮಾಧಾನ ಬೆಳೆಯುತ್ತಲೇ ಇತ್ತು. ನಾನು ಅಡಗಿಸಲು ಯತ್ನಿಸಿದಷ್ಟೂ ಅದು ಹೆಚ್ಚುತ್ತಿತ್ತು.

"ಎಷ್ಟೋ ಸಂಸಾರದಲ್ಲಿ ಹಾಗೆ ಉಂಟು. ಮುಂದೆ?" ಡಾಕ್ಟರ್ ಉತ್ತೇಜನ ಕೊಡಲು ಹೇಳಿದರು.

ಜಯ

“ ನಳಿನಿ....ನಾನು ಏನು ಅನ್ನಲಿ, ಏನು ಮಾಡಲಿ, ತಲೆತಗ್ಗಿಸಿ ಮೌನದಿಂದ ನಡೆಯುವಳು. ಇದರಿಂದ ನನ್ನ ಸಿಟ್ಟು ಇನ್ನೂ ಹೆಚ್ಚುವುದು. ಅವಳಿಗೆ ದೇವರಲ್ಲಿ ತುಂಬಾ ನಂಬಿಕೆ. ಆ ನಂಬಿಕೆ-ಯಿಂದಲೋ ಏನೋ, ಸದಾ ಶಾಂತಳಾಗಿ ತೃಪ್ತಳಾಗಿ ಇರುವಳು. ಅವಳ ಮನಸ್ಸು ಕಲಕುವಂತೆ ನಾನೆಷ್ಟು ಅಂದು—ಆಡಿದರೂ, ಅವಳು ಶಾಂತಳಾಗಿಯೇ ಇರುವಳು. ”

ಜನಾರ್ದನ ಅಷ್ಟು ಹೇಳಿ ನಿಲ್ಲಿಸಿದ. ಮುಂದಿನ ವಿಷಯ ಹೇಳುವುದಕ್ಕೆ ಅನುಮಾನಿಸುತ್ತಿದ್ದ.

“ ಸರಿ. ಮುಂದೆ ? ”

“ ನಮ್ಮ ಮನೆಯ ಮುಂದಿನ ಬೀದಿಗೆ ರಂಗರಾವ್ ಅಂತ ಒಬ್ಬ ಓವರ್‌ಸೀರ್ ಬಂದರು ಅವರು ನನ್ನ ಸಹಪಾಠಿ. ಅವರ ಮನೆಗೆ ನಾನು ಆಗಾಗ ಹೋಗಿ ಬರ್‍ತಾ ಇದ್ದೆ. ಆತನಿಗೆ ಹೆಂಡತಿ ಇಲ್ಲ. ಮನೆತಪ್ಪಿದ ತಂಗಿಯೇ ಮನೆಯ ವಹಿವಾಟನ್ನೆಲ್ಲಾ ನೋಡಿಕೊಳ್ತಾ ಇದ್ದರು. ಆಕೆ ತುಂಬಾ ರೂಪವಂತೆ. ಮಾತಿನಲ್ಲಿಯೂ ತುಂಬಾ ಚತುರೆ. ನನಗೂ ಆಕೆಗೂ ಸ್ನೇಹ ಬೆಳೆಯಿತು.

ನಳಿನಿಗೆ ವಿರುದ್ಧ ಆಕೆಯ ಸ್ವಭಾವ. ನಳಿನಿಯಂತೆ ಮಾತ-ನಾಡಲು ಸಂಕೋಚಪಡುವವಳಲ್ಲ. ದೇವರು ಗೀವರು ಎಂದು ನಂಬುವವಳಲ್ಲ. ನಾನು ಅವಳೊಡನೆ ಮಾತನಾಡುತ್ತಿದ್ದರೆ, ಗಂಟೆ-ಗಳು ಹೋದದ್ದೇ ತಿಳಿಯುತ್ತಾ ಇರಲಿಲ್ಲ.

ಅವಳ ಹೆಸರು ಜಲಜಾ. ನಾನು ಅವಳನ್ನು ಮನಃಪೂರ್ತಿ ಪ್ರೀತಿಸಿದೆ. ಅವಳೂ ಸಹ ನನ್ನನ್ನು ಪ್ರೀತಿಸಿದಳು. ನನ್ನೊಡನೆ ಪ್ರಪಂಚದ ಯಾವ ಭಾಗಕ್ಕಾದರೂ ಬರಲು ಸಿದ್ಧಳಾದಳು.

ಜಲಜಳ ಪ್ರೇಮದೊಡನೆ ಹೋಲಿಸಿದರೆ ನಳಿನಿಯ ಪ್ರೇಮ—ಸೂರ್ಯನ ಮುಂದಿನ ಸೊಡರಿನಂತೆ ನನಗೆ ತೋರುತ್ತಿತ್ತು. ಅಲ್ಲದೆ ಜಲಜಾ ಸುಂದರಿ. ಸ್ವಲ್ಪ ನೀಳವಾದ ಮುಖ. ತಿದ್ದಿದ ಹುಬ್ಬುಗಳು. ಸದಾ ನಗುವ ಕಣ್ಣುಗಳು—ಬಹಳ ಆಕರ್ಷಕ ವ್ಯಕ್ತಿತ್ವ ಅವಳದು. ನಳಿನಿ ಸ್ವಲ್ಪ ಮಲಕು. ಅವಳ ತುಟಿ ದಪ್ಪ. ಕೂದಲು ಕುರುಚಲು. ಸರಸವಾಗಿ ಮಾತನಾಡಲು ಅವಳಿಗೆ ಬರುವುದಿಲ್ಲ.

ಜಲಜಳಿಗಾಗಿ ನಾನು ಎಲ್ಲ ತ್ಯಾಗಕ್ಕೂ ಸಿದ್ಧನಾದೆ. ಯಾವ ಅಡ್ಡಿ-ಆತಂಕವೂ ಇಲ್ಲದೆ ಪ್ರೇಮಪಕ್ಷಿಗಳಂತೆ ಎಲ್ಲಾದರೂ ಕಾಲ ಕಳೆಯಬೇಕೆಂದು ನಾವು ಯೋಚಿಸಿದೆವು. ನಾವಿಬ್ಬರೂ ತಲೆ ಮರಸಿ-ಕೊಂಡು ಮುಂಬಯಿಗೆ ಹೋಗಿ, ಅಲ್ಲಿ ಏನಾದರೂ ಕೆಲಸಮಾಡಿ-ಕೊಂಡಿರೋಣವೆಂದು ಪ್ಲಾನ್ ಮಾಡಿದೆವು.

ಬೆಳಗಿನ ಝಾವದ ಟ್ರೈನಿಗೆ ನಾನು, ಜಲಜಾ ಊರು ಬಿಡುವುದನ್ನು ನಿರ್ಧರಿಸಿದೆವು.

ರಾತ್ರಿ ನಾನು ಮನೆಗೆ ಬಂದಾಗ ಹತ್ತುಗಂಟೆ. ನಳಿನಾ ಊಟಮಾಡದೆ ಕಾದುಕೊಂಡಿದ್ದಳು. ನಾಳೆಯಿಂದ ಏನು ಮಾಡು-ವಳು—ಎನ್ನಿಸಿತು ನನಗೆ. ಅಂತೂ ಅವಳ ಶಾಂತಿಗೆ ಭಂಗಬರುವು-ದಲ್ಲಾ—ಎಂದು ನನಗೆ ಸಂತೋಷವೂ ಆಯಿತು. ಹತ್ತೂವರೆಗೆ ನಾನು ಆಫೀಸ್ ರೂಮಿನಲ್ಲಿ ಮಲಗಲು ಹೋದೆ. ಆಫೀಸಿನ ಕೆಲಸ ತುಂಬಾ ಇದ್ದ ದಿನ, ನಾನು ಆಫೀಸ್ ರೂಮಿನಲ್ಲೇ ಮಲಗುತ್ತಿದ್ದೆ. ನಳಿನಾ ದೇವರ ಪ್ರಾರ್ಥನೆ ಮಾಡುತ್ತಿದ್ದಳು. ನನಗೆ ತುಂಬಾ ನಗು ಬಂದಿತು. ಅವಳನ್ನು ಹಾಸ್ಯ ಮಾಡಿದೆ. ನನ್ನ ಮನಸ್ಸಿನಲ್ಲಿರುವ ಯೋಚನೆ ಅವಳಿಗಾಗಲಿ, ಅವಳ ದೇವರಿಗಾಗಲಿ ಗೊತ್ತಿಲ್ಲ—ಎಂದು ಬೀಗಳೆದೆ. ರೂಮಿನಲ್ಲಿ ಒಂದು ಬ್ಯಾಗಿನೊಳಕ್ಕೆ ಹಣ ಕಾಸು, ಅತ್ಯಗತ್ಯವಾದ ಬಟ್ಟೆಬರೆ ಹಾಕಿಟ್ಟೆ. ಮೂರು ಗಂಟೆಗೆ ಸರಿಯಾಗಿ ಅಲಾರಮ್ ಇಟ್ಟೆ.

ಮೂರು ಗಂಟೆ ಇರಬೇಕು. ಜೋರಾಗಿ ಅಲಾರಂ ಹೊಡೆದಾಗ ಎಚ್ಚರವಾಯಿತು. ಗಾಬರಿಯಿಂದ ಬೇಗ ಎದ್ದೆ ! ಎಷ್ಟು ಹೊತ್ತಿ-ನಿಂದ ಹೊಡೆಯುತ್ತಿದೆಯೋ, ನಳಿನಿಗೆ ಎಚ್ಚರವಾಯಿತೋ ಏನೋ ! ಎಂದು ಗಡಿಯಾರಕ್ಕೆ ಹುಡುಕಾಡಿದೆ ಕೈಗೆ ಸಿಕ್ಕಲಿಲ್ಲ. ದೀಪ ಹಾಕಿ ನೋಡೋಣ ಎಂದು ಬೇಗ ಎದ್ದು ಸ್ವಿಚ್ ಆನ್ ಮಾಡಿದೆ. ಆದರೆ....ನನ್ನ ಕಣ್ಣಿಗೆ ಏನೂ ಕಾಣಲಿಲ್ಲ. ಬರೀ ಕಗ್ಗತ್ತಲು. ಕರೆಂಟ್ ಹೋಗಿರಬಹುದು ಎಂದುಕೊಂಡು ಕಿಟಕಿಯ ಬಾಗಿಲನ್ನು ತೆರೆಯಲು ನೋಡಿದೆ. ಕಿಟಕಿಯ ಬಾಗಿಲು ತೆರೆದೇ ಇತ್ತು. ಚಂದ್ರ, ನಕ್ಷತ್ರ-ಗಳಾದರೂ ಕಾಣದಲ್ಲಾ....ಎಂದು ಬೆದರಿದೆ. ನಳಿನಾ ಬಾಗಿಲು ನೂಕಿಕೊಂಡು ಬಂದಳು.

“ ಇದೇಕೆ ದೀಪ ಹಾಕಿದೀರಿ? ಏನು ಹುಡುಕ್ತಾ ಇದೀರಿ ? ” ಎಂದು ಅಲಾರಮ್ ನಿಲ್ಲಿಸಿದಳು.

ನನಗೆ ಅವಳೂ ಕಾಣಲಿಲ್ಲ. ಕರೆಂಟು ಹೋಗಿರಲಿಲ್ಲ. ಕಿಟಕಿ ತೆರೆದೇ ಇತ್ತು. ಆದರೂ ನನಗೆ ಯಾವುದೂ ಕಾಣಲಿಲ್ಲ. ನನ್ನ ಕಣ್ಣು ಇದ್ದಕ್ಕಿದ್ದಂತೆ ಕುರುಡಾಗಿತ್ತು. ಇಷ್ಟೇ ಡಾಕ್ಟರ್ ನನ್ನ ಕತೆ.

“ ಪಾಪ, ತುಂಬಾ ನೊಂದಿದ್ದೀರಿ, ನೀವು. ”

“ ಆ ನಳಿನಿಯ ಶಾಪದಿಂದ ನನಗೆ ಹೀಗಾಯಿತೋ ಏನೋ ! ನನ್ನ ಅವಸ್ಥೆ ಹೀಗಾಯಿತಲ್ಲಾ ಎಂದು ಸುಮ್ಮನಿರೋದಿಲ್ಲ; ನನ್ನ ಕೆಣಕೋದಕ್ಕೆ ನಿತ್ಯಾ ಬರ್‍ತಾಳೆ. ತನ್ನ ಪ್ರೇಮದ ತೋರಿಕೆಯಿಂದ ನನ್ನ ಹಾಸಿ ಮಾಡ್ತಾಳೆ. ಅವಳ ಮಾತುಗಳು ವ್ಯಂಗ್ಯವಾಗಿ ನನ್ನನ್ನು ಹೇಗೆ ಇರಿಯುತ್ತವೆ ಅಂತ ! ನೀವು ಅವಳಿಗೆ ಬರಬೇಡ ಅಂತ ಹೇಳಿದ್ದು ತುಂಬಾ ಉಪಕಾರವಾಯಿತು, ಡಾಕ್ಟರ್. ”

ಜನಾರ್ದನನ ಮುಖದಲ್ಲಿ ನಿರಾಶೆ, ನೋವು ತುಂಬಿತ್ತು.

“ ನಾನು ಜನ್ಮಪೂರ್ತಿ ಹೀಗೆಯೇ ಕುರುಡನಾಗಿ ನಳಿನಿಯ ಸೈ ಕಾಯ್ಬುವಂತಾಗುತ್ತೋ ಏನೋ ! ಹಾಗೇನಾದರೂ ಆದ ಪಕ್ಷದಲ್ಲಿ ನಾನು ಜೀವ ಇಟ್ಟುಕೊಂಡಿರುವುದಿಲ್ಲ. ”

“ ಹಾಗೆ ಚಿಂತಿಸಬೇಡಿ. ಖಂಡಿತ ನಿಮಗೆ ಗುಣವಾಗುತ್ತೆ. ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರಕೊಡಿ. ನಳಿನಿಯವರನ್ನು ನೀವು ಪ್ರೀತಿಸುವುದಿಲ್ಲವೇ ? ”

“ ಇಲ್ಲ. ಅವಳು ಇಲ್ಲಿ ಬಂದರೆ, ನನ್ನ ಮನಸ್ಸಿಗೆ ತುಂಬಾ ಕಿರಿಕಿರಿಯಾಗುತ್ತೆ ! ”

“ ಜಲಜಾ ಬಂದರೆ ? ”

"ಛೆ, ಆ ಮಾತೇಕೆ ಡಾಕ್ಟರ್! ಅವಳು ಬರುವಂತೆಯೇ ಇಲ್ಲವಲ್ಲಾ!"

"ಹೋಗಲಿ, ನೀವು ನಳಿನಿಯವರನ್ನು ಇಷ್ಟೇ ತೀವ್ರವಾಗಿ ಪ್ರೀತಿಸುತ್ತಿರಲಿಲ್ಲವೇ? ಯೋಚಿಸಿ ಹೇಳಿ."

ಜನಾರ್ದನ ನಿಧಾನವಾಗಿ ಉತ್ತರಕೊಟ್ಟ: "ಇರಬಹುದು ಡಾಕ್ಟರ್. ಮದುವೆಯಾದ ಹೊಸದು. ನಳಿನೀನ ಸಿನಿಮಾಕ್ಕೆ ಕರೆದು-ಕೊಂಡು ಹೋಗಬೇಕಾಗಿತ್ತು. ಟಾಂಗಾ ಗೊತ್ತುಮಾಡಿ ಸೈಕಲ್‌ನಲ್ಲಿ ಮುಂದೆ ಹೊರಟೆ. ನಳಿನಿಯನ್ನು ನೋಡಬೇಕೆಂಬ ಆತುರದಲ್ಲಿ ಒಂದೇ ಉಸುರಿನಲ್ಲಿ ಸೈಕಲ್ಲನ್ನೋಡಿಸಿಕೊಂಡು ಮನೆಗೆ ಬಂದೆ. ಟಾಂಗಾದವನು ಬರಲೇ ಇಲ್ಲ. ಅವನಿಗೆ ನನ್ನ ಹಾದಿ ಗೊತ್ತಾಗಲಿಲ್ಲ. ಎಲ್ಲರೂ ನನ್ನ ಆತುರ, ನನ್ನ ಪ್ರೇಮ ಕುರಿತು ಹಾಸ್ಯ ಮಾಡಿದರು."

"ಸರಿ. ನಳಿನಾರವರ ಮೇಲೆ ನಿಮ್ಮ ಪ್ರೇಮ ಕಡಿಮೆಯಾಗಿ, ತಿರಸ್ಕಾರ ಹುಟ್ಟಿ ಎಷ್ಟು ಕಾಲವಾಯಿತು—ಯೋಚಿಸಿ; ಜಲಜಾರವರ ಪರಿಚಯವಾದ ಮೇಲಲ್ಲವೇ?"

"ಇರಬಹುದು. ಜಲಜಳ ಉತ್ಸಾಹ, ಚತುರತೆ ಕಂಡಮೇಲೆ ನನಗೆ ನಳಿನಾ ಮೂಕಬಸವನಂತಿರುವುದನ್ನು ಕಂಡರೆ ಮೈ ಉರಿಯುತ್ತಿತ್ತು."

"ಮಿಸ್ಟರ್, ನಾನು ನನಗೆ ತಿಳಿದ ಒಂದೆರಡು ಮಾತು ಹೇಳ್ತೀನೆ. ದಯವಿಟ್ಟು ಕೇಳಿ. ನಿಜವಾಗಿಯೂ ನೀವು ನಳಿನಾ-ದೇವಿಯವರನ್ನು ಆಳವಾಗಿ ಪ್ರೀತಿಸಿದ್ದೀರಿ. ಈಗಲೂ ಪ್ರೀತಿಸು-ತ್ತಿದ್ದೀರಿ. ಜಲಜಳ ಮೇಲಿನ ನಿಮ್ಮ ಪ್ರೇಮ ತೀವ್ರವಾಗಿರಬಹುದು; ಆದರೆ ಅದು ಅಷ್ಟು ಆಳವಾದದ್ದಲ್ಲ. ಆದರೂ ಸಹ ನೀವು ಆ ತೀವ್ರ ಪ್ರೇಮದ ವೇಗವನ್ನು ತಡೆಯಲಾರದೆ ಹೋದಿರಿ."

"ಇರಬಹುದೇನೋ."

"ನೀವು ಈ ಮಧ್ಯೆ ಎಂದಾದರೂ ದಾರಿ ತಪ್ಪಿದ್ದಿರಾ? ನಳಿನಿ-ಯವರನ್ನು ವಂಚಿಸಿದ್ದೀರಾ?"

"ಛೀ. ಇಲ್ಲ! ನಾನು ಪರಸ್ತ್ರೀಯನ್ನು ಕಣ್ಣೆತ್ತಿ ನೋಡಿದವ-ನಲ್ಲ. ಆದರೆ ಜಲಜಾ ನನಗೆ ಪರಸ್ತ್ರೀ ಎನ್ನಿಸಲಿಲ್ಲ. ಅವಳ ಬಗ್ಗೆ ನನ್ನ ಪೂರ್ಣ ಸಹಾನುಭೂತಿ, ಪ್ರೇಮ ಇದ್ದಿತು. ನಳಿನಿಗಿಂತ ಹೆಚ್ಚು ಆತ್ಮೀಯಳಾಗಿದ್ದಳು ಅವಳು."

"ಆದರೆ ಆ ರಾತ್ರಿ ನೀವು ಜಲಜಳೊಡನೆ ಬೊಂಬಾಯಿಗೆ ಹೋಗಬೇಕೆಂದಿದ್ದಾಗ, ನಳಿನಿಯವರಿಗೆ ಮೋಸ ಮಾಡುತ್ತಿದ್ದೇ-ನೆಂದು ನಿಮಗೆನ್ನಿಸಲಿಲ್ಲವೇ?"

ಜನಾರ್ದನ ತಲೆ ತಗ್ಗಿಸಿದ. "ಆ ವಿಷಯ ನಾನು ಯೋಚಿ-ಸಲೇ ಇಲ್ಲ, ಡಾಕ್ಟರ್!"

ಡಾಕ್ಟರರು ಮೇಲೆದ್ದರು. ತಮ್ಮ ಕರವಸ್ತ್ರದಿಂದ ಅವನ ಕಣ್ಣುಗಳನ್ನು ಕಟ್ಟಿದರು.

"ಇನ್ನು ಒಂದು ವಾರ ಇದನ್ನು ಬಿಚ್ಚಬೇಡಿ; ಅಷ್ಟು ಹೊತ್ತಿಗೆ ಪೂರ್ಣ ವಾಸಿಯಾಗಿರುತ್ತೆ." ಎಂದರು.

"ಆಗಲಿ ಡಾಕ್ಟರ್!"

"ನಿಮ್ಮನ್ನು ಆಕ್ಷೇಪಿಸುತ್ತಿದ್ದೇನೆ ಎಂದು ಭಾವಿಸಬೇಡಿ. ನನಗೆ ತಿಳಿದ ಮಾತ್ರನ್ನು ಹೇಳಿದ್ದೇನೆ. ಪ್ರೇಮ ಬಹಳ ಆಳವಾದ ರಾಗಭಾವ. ಕ್ಷಣಿಕ ಮೋಹವನ್ನು ಪ್ರೇಮವೆಂದು ಭಾವಿಸಿ, ಎಷ್ಟೋ ಅನರ್ಥಗಳನ್ನು ನಾವು ಮಾಡುತ್ತೇವೆ."

ಜನಾರ್ದನ ಅನನುಕೂಲತೆಯಿಂದ ಅತ್ತಿತ್ತ ಅಲುಗಾಡಿದ.

"ಆತ್ಮೀಯಬಂಧುವಿನಂತೆ ನಾನು ಹೇಳುತ್ತಿದ್ದೇನೆ. ನನ್ನ ಮಾತಿನ ಸತ್ಯಾಸತ್ಯತೆಯನ್ನು ನೀವೇ ವಿವೇಚನೆಮಾಡಿ! ನಳಿನಾದೇವಿಯವರನ್ನು ನೀವು ಆಳವಾಗಿ ಪ್ರೀತಿಸಿದ್ದೀರಿ. ನಿಮ್ಮ ಒಳಮನಸ್ಸು ಅವರ ಶ್ರದ್ಧಾ ಭಕ್ತಿ, ಪ್ರೀತಿ ವಿಶ್ವಾಸಗಳಿಗೆ ಮಾರುಹೋಗಿದೆ. ಜಲಜಾರವರ ಮೇಲಿನ ಮೋಹದಲ್ಲಿ ನೀವು ನಿಮ್ಮ ಒಳಮನಸ್ಸಿನ ಎಚ್ಚರಿಕೆಯ ಧ್ವನಿಗೆ ಗಮನಕೊಡಲಿಲ್ಲ. ನೀವು ಬೊಂಬಾಯಿಗೆ ಓಡಿಹೋಗುವ ನಿರ್ಧಾರ ಮಾಡಿದಾಗ, ನಿಮ್ಮ ಒಳಮನಸ್ಸು ವ್ಯಗ್ರ-ವಾಯಿತು. 'ಇದು ದ್ರೋಹ, ನಳಿನಾಗೆ ವಂಚನೆ' ಎಂದು ವಿರೋಧಿಸಿತು."

"ನನಗೆ ತಿಳಿಯದು ಡಾಕ್ಟರ್! ಏನೋ ಒಂದು ಬಗೆಯ ಕಳವಳ, ಅಳುಕು ಇದ್ದಿತು."

"ಮೋಹದ ಮತ್ತಿನಲ್ಲಿ ನೀವು ಅದಕ್ಕೆ ಗಮನಕೊಡಲಿಲ್ಲ. ನೀವು ಸದಾಚಾರಿಗಳಾಗಿದ್ದವರು. ನಿಮ್ಮ ಮನಸ್ಸು ಶುಭ್ರವಾಗಿತ್ತು. ಶುಭ್ರವಸ್ತ್ರದ ಮೇಲೆ ಸ್ವಲ್ಪ ಕೊಳೆ ಇದ್ದರೂ ಎದ್ದುಕಾಣುತ್ತೆ. ಮಲಿನ ಬಟ್ಟೆಯ ಮೇಲೆ ಮತ್ತಷ್ಟು ಕೊಳೆಕೂತರೂ ಕಾಣುವುದಿಲ್ಲ. ಸದಾಚಾರಿಗಳಾಗಿದ್ದು, ಉಚ್ಚದಾಂಪತ್ಯದ ಆದರ್ಶವನ್ನು ಪಾಲಿಸುತ್ತಿ-ರುವವರು, ಹೀಗೆ ಕ್ಷಣಿಕ ವ್ಯಾಮೋಹಕ್ಕೆ ಬಲಿಯಾಗಿ ದಾರಿತಪ್ಪಿದರೆ, ಅವರ ಮನಸ್ಸಿನ ಮೇಲೆ ವಿಪರೀತ ಪರಿಣಾಮಗಳಾಗುತ್ತವೆ. ಈ ಪರಿಣಾಮವು ದೈಹಿಕವಾಗಿಯೂ ವ್ಯಕ್ತವಾಗಬಹುದು. ದಾರಿತಪ್ಪಿ-ದ್ದಕ್ಕೆ ದೊಡ್ಡ ಶಿಕ್ಷೆಯನ್ನೇ ವಿಧಿಸುತ್ತದೆ ನಿಮ್ಮ ಒಳಮನಸ್ಸು. ಸ್ವಭಾವತಃ ಕೆಲವರು ಕೊಲೆಗಡುಕರಾಗಿರುತ್ತಾರೆ. ಅವರಿಗೆ ಕೊಲೆ ಎಂದರೆ ನೀರುಕುಡಿದಂತೆ. ಆದರೆ ಸಾಮಾನ್ಯಮನಸ್ಸು ಮೊತ್ತ ಮೊದಲು ಕೊಲೆಮಾಡೋದಕ್ಕೆ ಹೋದರೆ, ಅವನನ್ನು ಅವನ ಒಳಮನಸ್ಸೇ ವಿರೋಧಿಸುತ್ತದೆ. ನಿಮಗೂ ಹೀಗೇ ಆಗಿದೆ. ಸ್ವಲ್ಪ ಯೋಚಿಸಿ. ನಳಿನಾದೇವಿಯವರ ಪ್ರೇಮ, ನಿಮ್ಮ ನಡತೆಯಿಂದ ಆಕೆಗಾಗುತ್ತಿದ್ದ ಅಪಾರಸಂಕಟ—ಎಲ್ಲಾ ಯೋಚಿಸಿ; ನಿಮ್ಮ ಬಗೆಗಣ್ಣು ಕುರುಡಾಗಿದೆ—ಎಂದು ಒಳಮನಸ್ಸು ಎಚ್ಚರಿಸಿತು. ನೀವು ಕಿವಿಗೊಡಲಿಲ್ಲ. ನಿಮ್ಮ ಒಳಮನಸ್ಸು ಪ್ರತಿಭಟಿಸಿ ಶಿಕ್ಷೆ ಕೊಟ್ಟಿತು. ನಿಮ್ಮ ಉದ್ದೇಶಕ್ಕೆ ಭಂಗ ಬರುವಂತೆ, ಅಕಸ್ಮಾತ್ ನಿಮಗೆ ಕಣ್ಣು ಕಾಣದಿರುವಂತೆ ಶಿಕ್ಷೆ ಕೊಟ್ಟಿತು."

ಜನಾರ್ದನ ಅವರ ಮಾತನ್ನು ನಂಬಲು ಅನುಮಾನಿಸುತ್ತ ಯೋಚನಾಪರನಾದ.

ಜಯಂತಿ

"ನಿಮ್ಮ ಕಣ್ಣುಗಳಲ್ಲಿ ಯಾವ ಬಗೆಯ ದೋಷವೂ ಇಲ್ಲ. ಆದುದರಿಂದಲೇ ನನಗೆ ಅನುಮಾನವಾಗಿ ಪೂರ್ವೋತ್ತರಗಳನ್ನೆಲ್ಲಾ ವಿಚಾರಿಸಿದೆ. ನಿಮ್ಮ ಮಾನಸಿಕ ಪ್ರತಿಕ್ರಿಯೆ ಇದು. ನಳಿನಿಯವರು ಬಂದು ಪ್ರೀತಿ-ವಿಶ್ವಾಸದಿಂದ ಮಾತನಾಡಿಸಿದರೆ ನೀವು ಅಸಮಾಧಾನ ಪಡಲು ಇದೇ ಕಾರಣ. ತಪ್ಪಿತಸ್ಥನೆಂಬ ಭಾವನೆ ಜಾಗೃತವಾಗಿ, ನಿಮಗೆ ಸಂಕೋಚವಾಗುತ್ತದೆ. ಅವರ ಪ್ರೇಮ, ನಿಮ್ಮ ವಂಚನೆ-ಗಳನ್ನು ಮನಸ್ಸು ತೂಗಿ ನೋಡುತ್ತದೆ. ಆದ್ದರಿಂದಲೇ ಆದಷ್ಟು ಬೇಗ ಅವರ ಸಾಮೀಪ್ಯದಿಂದ ದೂರವಿರಲು ಯತ್ನಿಸುತ್ತೀರಿ."

"ಹ್ಞ! ನಿಜವೇ ಡಾಕ್ಟರ್?"

"ಯೋಚಿಸಿ ನೋಡಿ! ನಿಮಗೇ ಇದೆಲ್ಲ ನಿಜವೆಂದು ತಿಳಿಯುತ್ತದೆ. ನಾನು ಆಗಲೇ ಹೇಳಲಿಲ್ಲವೇ? ಪ್ರೇಮ ಬಹಳ ಆಳವಾದ ರಾಗಭಾವ ಎಂದು. ಕ್ಷಣಿಕ ಮೋಹದಿಂದ ಅಚಾತುರ್ಯ ಮಾಡಿ-ಕೊಂಡವರು, ಭಯಂಕರ ಪ್ರಾಯಶ್ಚಿತ್ತ ಅನುಭವಿಸಿದ್ದಾರೆ. ನನ್ನ ಪೇಷಂಟುಗಳ ಪೈಕಿ ಒಬ್ಬರು, ಇದೇ ಕಾರಣದಿಂದ ಷಂಢರಾಗಿದ್ದರು. ನಾವು ಸೋಲುವಂತಿದ್ದರೆ ಒಳ್ಳೆಯತನಕ್ಕಾಗಿ ಸೋಲುವುದೇ ಉತ್ತಮ. ಆಗ ನಮ್ಮ ಮನಸ್ಸಿಗೆ ಅಹಿತವಾದರೂ, ಅನಂತರ ಹಿತವಾಗುತ್ತೆ. ಆದರೆ ಚಂಚಲತೆಗೇ ಮನಸ್ಸನ್ನು ಹರಿಯಬಿಟ್ಟರೆ, ಆ ಕ್ಷಣಕ್ಕೆ ಹಿತವಾಗಿ ಕಂಡರೂ ಮುಂದೆ ತುಂಬಾ ಹಾನಿ."

ಜನಾರ್ದನ ದೀರ್ಘಯೋಚನೆಯಲ್ಲಿದ್ದ. "ನೀವು ಹೇಳುವುದೆಲ್ಲ ಹೊಸದು. ಆದರೂ ನಿಜವಿರಬಹುದು."

ಡಾಕ್ಟರ್ ಜನಾರ್ದನನ ಬೆನ್ನು ತಟ್ಟಿದರು. "ನೀವೇ ಯೋಚಿಸಿ ನೋಡಿ. ನಿಮಗೇ ಎಲ್ಲಾ ಅರ್ಥವಾಗುತ್ತೆ."

ಜನಾರ್ದನ ಡಾಕ್ಟರರ ಮಾತುಗಳನ್ನು ಮೆಲುಕುಹಾಕುತ್ತಿದ್ದ.

ಮಾರನೆಯ ದಿನದಿಂದ ನಳಿನಾ ಬೆಳಗ್ಗೆ ಮಾತ್ರ ಬರುತ್ತಿದ್ದಳು. ಡಾಕ್ಟರರ ಸಲಹೆಯಂತೆ ಜನಾರ್ದನನ ಎದುರಿಗೆ ಅವಳು ಮಾತನಾಡುತ್ತಿರಲಿಲ್ಲ. ಇದರಿಂದ ಜನಾರ್ದನ ಅವಳು ಬರಲಿಲ್ಲವೆಂದೇ ತಿಳಿದ. ಡಾಕ್ಟರರು ಹಾಗೆ ಸಲಹೆಕೊಟ್ಟಿರುವುದೂ ಅವನಿಗೆ ನೆನಪಾಯಿತು.

ಡಾಕ್ಟರ್ ನಿತ್ಯವೂ ಅವನ ಕಣ್ಣುಗಳು ದೋಷರಹಿತವೆಂಬುದನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ಅವನ ರೋಗಮೂಲವನ್ನು ಅವನಿಗೆ ಅರಿವಾಗುವಂತೆ ತಿಳಿಸುತ್ತಿದ್ದರು.

ಮೂರನೆಯ ದಿನ ಜನಾರ್ದನ ತಾನೇ, ನಳಿನಿ ಏಕೆ ಬರಲಿಲ್ಲವೆಂದು ಕೇಳಿದ. ನಳಿನಿಯನ್ನು ಕಂಡರೆ ಬೆಚ್ಚುತ್ತಿದ್ದವನು, ನಳಿನಿಯ ಸಾಮೀಪ್ಯಕ್ಕಾಗಿ ಇಚ್ಛಿಸಲಾರಂಭಿಸಿದ. ನಳಿನಿಯ ಮೂರ್ತಿಯನ್ನು ನೋಡಲು ಹಂಬಲಿಸಲಾರಂಭಿಸಿದ.

ಎಂಟನೆಯ ದಿನ ಡಾಕ್ಟರರವರು, ಅವನ ಕಣ್ಣಿಗೆ ಕಟ್ಟಿದ್ದ ಬಟ್ಟೆ ಬಿಚ್ಚಿದರು.

"ಈಗ ನೋಡಿ, ನಿಮ್ಮ ಮುಂದೆ ನಳಿನಿಯವರ ಫೋಟೋ ಇದೆ!" ಎಂದರು.

ಜನಾರ್ದನ ಕಣ್ಣನ್ನು ಮುಚ್ಚಿಮುಚ್ಚಿಬಿಟ್ಟ. ಮೊದಲು ಮಂಜುಮಂಜಾಗಿ, ಅನಂತರ ಅವನ ಮನಸ್ಸಿನಲ್ಲಿದ್ದಂತೆ ಸ್ಪಷ್ಟವಾಗಿ ಗೋಚರವಾಯಿತು ನಳಿನಿಯ ಸ್ಮಿತಮುಖ.

"ನಳಿನಾ!" ಎಂದ, ಉದ್ವೇಗ-ಪ್ರೇಮಭರಿತ ಧ್ವನಿಯಲ್ಲಿ.

"ಸ್ವಾಮಿ!" ಎಂದಳು ನಳಿನಾ,....ಅವನ ಕಣ್ಣಿನಲ್ಲಿಯ ಪ್ರೇಮದ ದಿವ್ಯಪ್ರಭೆ ಕಂಡು ಹರ್ಷದಿಂದ.

ಫೋಟೋ ಅಲ್ಲ:–ಪ್ರತ್ಯಕ್ಷ ನಳಿನಳೇ ಎಂದು ತಿಳಿದು ಜನಾರ್ದನನ ಎದೆ ತುಂಬಿಬಂದಿತು.

"ನನ್ನನ್ನು ಕ್ಷಮಿಸು, ನಳಿನಾ!" ಎಂದು ನಳಿನಳ ಕೈ ಹಿಡಿದುಕೊಂಡ.

"ಇಲ್ಲೇ ಸ್ವಲ್ಪ ಕಾಲ ವಿಶ್ರಮಿಸಿಕೊಳ್ಳಿ. ಅನಂತರ ಮನೆಗೆ ಹೋಗುವಿರಂತೆ" ಎಂದು ಡಾ. ಜಯರಾಜರವರು ಕೃತಕೃತ್ಯರಾದವರಂತೆ ತಮ್ಮ ರೂಮಿನಿಂದ ಹೊರಗಡೆಗೆ ಬಂದರು.

———

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

**ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್**
**ಗಾಂಧಿಚೌಕ, ಧಾರವಾಡ**

# ‘ಹೂ’ವ ಸಾನ್ನಿಧ್ಯದಲಿ

**ಶ್ರೀ. ಗುರುಲಿಂಗ ಕಾಪಸೆ, ಲಚ್ಯಾಣ**

ಕುಸುರು-ಕುಸುರಾಗಿರುವ ಚೆಲುವ ಹೂದೋಟದಲಿ
ಹಸುರು-ಹಸುರಾಗಿರುವ ಹುಲ್ಲುಗದ್ದೆ,
ಉಸಿರುಸಿರಿಗೂ ಕಂಪ ಸೂಸುತಿಹ ಹೂಗಳವು
ರಸ-ರಸದ ಬಿಂಬವಿಹ ಜೇನಿನೊದ್ದೆ. ೧

ಎಂಥ ಚೆಲುವಿನ ಸೃಷ್ಟಿ, ಸೂರೆಗೊಂಡಿಹುದಿಲ್ಲಿ
ವಿವಿಧವರ್ಣಗಳಿಂದ ಎರಕಗೊಂಡು!
ಪಕಳೆ–ಪಕಳೆಯು ಮೇಲೆ ಲಾಸ್ಯವಾಡಿದೆ ಭಾವ
ಅಂತರಂಗದ ಬಯಕೆ ರೂಪುಗೊಂಡು ೨

ಚಿಕ್ಕ ಕಂಟಿಯು ಮೇಲೆ ಚುಕ್ಕಿಯಂತಹ ಹೂವು
ಮಿಳ್ಳಿಳನೆ ಕಣ್ದೆರೆದು ನೋಡುತಿಹುದು,
“ನನ್ನ ನೀ ಕೈಗೆತ್ತು, ಮೆಲನೆ ನಾಸಿಕಕೊತ್ತು
ನನ್ನೆದೆಯ ಸವಿಯುನರಿ” ಹೇಳುತಿಹುದು. ೩

ಮುಳ್ಳಿನಾಸರೆಯಲ್ಲಿ ಬೆಳೆದ ಚೆಲುಗುಲ್ಲಾಬಿ
ಒನಪಿನೊಯ್ಯಾರದಲಿ ಬಳುಕುತಿಹುದು–
“ನನ್ನ ಚೆಲುವಿಕೆ ನೋಡು ಚೆಂದುಟಿಯ ಮುತ್ತನಿಡು
ನಿನ್ನತನ ಮರೆತುಬಿಡು” ಎನ್ನುತಿಹುದು. ೪

ಅಲ್ಲಿ ದೂರದೊಳಿಂದೆ ಜಾಜಿ, ಸಂಪಗೆ, ಬಕುಲ
“ಬಾ ಮುಂದೆ ಬಾ ಇಲ್ಲಿ ನಮ್ಮ ಬಳಿಗೆ”
ಎನಿತೊಂದು ಒಲವಿನಲಿ ನಲವಿನಲಿ ಕರೆಯುತಿವೆ,
ಒಂದು ಚಣ ತಡೆಯಲಿಕೆ ಆಗದೆನಗೆ. ೫

ಎಲ್ಲ ಹೂವುಗಳೊಂದೆ ಭಾವದಲಿ, ರಾಗದಲಿ,
ಆತ್ಮಾನುರಾಗವನು ತೋರುತಿಹವು,
ಪರಿಮಳದ ಕಂಪನ್ನು ತಂಗಾಳಿಯಲಿ ಹರಡಿ
ಅಲ್ಲಿ ಹೋಗುವರನ್ನು ಕರೆಯುತಿಹವು. ೬

ನಿರಪೇಕ್ಷ ಭಾವದಲಿ ಸೌರಭವನುಣಬಡಿಸಿ
ಮನದ ದಂದುಗವನ್ನು ಅಳಿಸುತಿಹವು–
‘ಹೂ’ವ ಸಾನ್ನಿಧ್ಯದಲಿ ಬೆರೆತುಕೊಂಡಾ ಮನದಿ
ಆನಂದದೂರ್ಮಿಗಳು ಏಳುತಿಹವು. ೭

ಸೌಂದರ್ಯದನುಭವವು, ಔದಾರ್ಯದನುಭೂತಿ
ಒಂದೊಂದು ಹೂವಿನಲಿ ನೇತಿ-ನೇತಿ
ಅಂದವಹ ಚೆಂದವಹ ರೂಪ-ಭಾವಗಳಿರಲು
ತನ್ನ ತಾ ಜನಿಸುವುದು ಸತ್ಯ ಪ್ರೀತಿ. ೮

---

# ಮನದ ಜಾಡ್ಯ ತೊಲಗಿಸ್ಯೆ!

**ಶ್ರೀ. ಎಚ್. ಸೂರ್ಯದೇವ, ಬಯಲುಹೊಂಗಲ**

ನರರು ನರರು ಬೆರೆಯುವಾ ಕಾಲವೆಂದು ಬರುವುದು?
ಪರರ ದುಃಖವರಿತು ನಡೆವ ದಿನವದೆಂದು ಬರುವುದು?

ಇಂದು ನಮ್ಮ ಬಾಳಿನಲ್ಲಿ ಕರುಣೆಯೆಂಬುದಿಲ್ಲವು!
ಹಿಂದಿನಂಥ ಶ್ರದ್ಧೆಗಳೋ ಇನ್ನು ನುಳಿಯಲೊಲ್ಲವು!
ನಾವು ತುಳಿವುದೊಂದೆ ನೆಲವು; ಜಲವದೊಂದೆ ಕುಡಿವುದು
ನಾವು ನೆನೆವ ದೇವರೊಂದೆ ಒಬ್ಬನನ್ನೆ ಬೇಳ್ಪುದು,
ಎನಿತೊ ಸೆಲೆಗಳಿಂದ ಹರಿದು ನೀರು ಒಟ್ಟುಗೂಡುತ
ಘನಪ್ರವಾಹದೊಡನೆ ತಾನು ಸೇರಿ ಸೇರಿ ಹರಿಯುತ–
ಕಟ್ಟಕಡೆಗೆ ಒಟ್ಟುಗೂಡಿ ಮುಂದೆ ಮುಂದೆ ಹರಿವುದು!
ಇಂತು ನಮ್ಮ ಬಾಳಿನಲ್ಲಿ ನಾವು ಒಂದೆಯಾದರೂ
ಸಂತೆಗಾಗಿ ಬಂದು ಕಲೆವ ಸಾವಿರಾರು ಜನದೊಲು,
ನರರು ನರರು ತಾವ್ ಬೆರೆಯದೆ ಬಾಳ ನೂಕುತಿರುವರು!
ಪರರ ದುಃಖ ಕಂಡೆನಿತೂ ಕಣ್ಣ ನೀರ ಕರೆಯರು!
ಇಂಥ ಕಾಲವನ್ನು ಸರಿಸಿ, ನಮ್ಮ ಬಾಳನಂದಗೊಳಿಸು
ವಂಥ ಕಾಲವೆಂದೊ ದೇವ? ಕಾಯೊ ತಂದೆ ಕರುಣಿಸಿ!
ನಿನ್ನ ಮರೆವೆ; ನಿನ್ನ ಸ್ಮರಿಪೆನೆಂದು ನುಡಿವ ನಮ್ಮ ಜನದ–
ಮನದ ಜಾಡ್ಯ ತೊಲಗಿಸ್ಯೆ....ನಮ್ಮ ಬಾಳ ಹಸನಗೊಳಿಸಿ!

# ಜೋಗುಳ

**ಶ್ರೀ. ಕೆ. ಎಸ್. ಸುಬ್ರಾಯಭಟ್, ಕಾಸರಗೋಡು**

ಬಾಳ ಬಳ್ಳಿಯ ಹೂವೆ ನಾನೋಡಿ ನಲಿವೆ
ಬಾಳ ಬೇಗೆಯ ನಿನ್ನ ಒಡನಾಡಿ ಮರೆವೆ ‖ ಜೋಜೋ ‖

ಮರೆಮೋಸ ಮತ್ಸರ ಮನಸೋಂಕದಿರಲಿ
ಜರೆ-ರುಜೆ ನಿನ್ನೆದೆ ಬಲಹೀರದಿರಲಿ ‖
ಗುರಿ ಋಜು ಜೀವನವಿದು ನೆನಪಿರಲಿ
ಹಿರಿಯರ ಹರಕೆಯು ಕಾಯುತಲಿರಲಿ ‖ ೧

ಅನುಭವ ದಾರಿಯ ತೋರುವ ಸೊಡರು
ವಿನಯದೆ ವಿದ್ಯೆಯ ಪಾಲಿಸ ತವರು ‖
ಅನ್ಯಾಯದಧಿಕಾರ ಬಲಕೆ ಬಾಗದಿರು
ಮನ್ನಿಸು ತಾರ್ಯನೀತಿಯ ಪೆರ್ಮೆದೋರು ‖ ೨

ಸಿರಿಸಂಪದಕೆ ನಿನ್ನ ಮನಸೋಲದಿರಲಿ
ಅರಿವಿನಾಸರೆಯಲ್ಲಿ ಬಾಳ್ಬೆಳಗಿರಲಿ ‖
ಕರಣತ್ರಯವು ನಿತ್ಯ ನಿರ್ಮಲವಿರಲಿ
ಭಾರತಿಸೇವೆಗೆ ತನು ಮೀಸಲಿರಲಿ ‖ ೩

# ಮುಗಿಯದ ಯುದ್ಧ

## ( ಒಂದು ನಗೆಯಾಟ )

**ಶ್ರೀ. ಜಿ. ಎಸ್. ಆವಟೂರ ಎಮ್. ಎ. ಕುಮಟಾ**

[ ಸ್ವತಂತ್ರ ಸ್ತ್ರೀಸಂಘದ ವಾರ್ಷಿಕ ಸ್ನೇಹಸಮ್ಮೇಲನಕ್ಕಾಗಿ ನೆರೆದ ಸಭೆ. ಸಭಿಕರು ತಮ್ಮತಮ್ಮೊಳಗೆ ಮಾತನಾಡಿಕೊಳ್ಳುತ್ತಿರುವುದು ಕೇಳಬರುತ್ತದೆ. ]

**ನಿರೂಪಕ**

ಸ್ವತಂತ್ರ ಸ್ತ್ರೀಸಂಘದ ವಾರ್ಷಿಕ ಸ್ನೇಹಸಮ್ಮೇಲನಕ್ಕಾಗಿ ಸಂಘದ ಕಟ್ಟಡದಲ್ಲಿ ಅಭಿಮಾನಿಗಳು ನೆರೆದಿದ್ದಾರೆ: ಅಧ್ಯಕ್ಷಿಣಿಯವರನ್ನು ಕರೆತರಲು ಕಾರು ಕಳುಹಿಸಿಕೊಟ್ಟು, ಆದಾಗಲೆ....[ಕಾರಿನ ಹಾರ್ನು ಕೇಳಬರುವುದು ] ಅದೋ, ಅಧ್ಯಕ್ಷಿಣಿಯವರು ಬಂದರೆಂದು ಕಾಣುತ್ತದೆ. [ಸಭೆಯಲ್ಲಿ ಗಡಿಬಿಡಿ.... ಅಧ್ಯಕ್ಷಿಣಿಯವರ ಆಗಮನ. ಅನಂತರ ನಿಯಮಿತವಾದ ಚಪ್ಪಾಳೆ ಒಂದೆರಡು ನಿಮಿಷ ನಡೆದು ಸ್ತಬ್ಧವಾಗುತ್ತದೆ. ಚಿಕ್ಕದಾದ ಸ್ವಾಗತಗೀತೆಯೊಂದಿಗೆ ಸಭೆಯು ಪ್ರಾರಂಭವಾಗುವುದು. ]

ಕಾರ್ಯದರ್ಶಿನಿ:—(ಸ್ವಾಗತಗೀತೆ ಹಾಡಿ ಮುಗಿದನಂತರ) ಭಗಿನಿಯರೇ, ಸಂಘದ ಸ್ನೇಹಸಮ್ಮೇಲನಕ್ಕೆ ತಮ್ಮೆಲ್ಲರಿಗೂ ಹಾರ್ದಿಕ ಸ್ವಾಗತವನ್ನು ಬಯಸುತ್ತೇನೆ. ನಮ್ಮ ಸಂಘ ತನ್ನ ಎರಡು ವರುಷದ ಚಿಕ್ಕ ಅವಧಿಯಲ್ಲಿ, ಕರ್ನಾಟಕದ ಮಹಿಳಾಲೋಕದಲ್ಲಿ ಎಂತಹ ಕ್ರಾಂತಿಯನ್ನುಂಟುಮಾಡಿದೆ ಎನ್ನುವುದನ್ನು ತಾವೆಲ್ಲರೂ ಚೆನ್ನಾಗಿ ಅರಿತಿದ್ದೀರಿ. ನಮ್ಮ ಸಂಘದ ಕಾರ್ಯಕರ್ತರು ಸಂಗ್ರಹಿಸಿದ ಅಂಕಿ–ಸಂಖ್ಯೆಗಳನ್ನು ಈಗಾಗಲೇ ನಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ. ಆದರೂ ತಮ್ಮ ಅವಗಾಹನೆಗಾಗಿ ಮುಖ್ಯಾಂಶಗಳನ್ನು ಇಲ್ಲಿ ಎತ್ತಿ ಹೇಳುತ್ತೇನೆ. "೧೯೫೪–೫೫ ನೆಯ ವರುಷದಲ್ಲಿ, ಸಂಘದ ಪ್ರಯತ್ನದಿಂದ ಸಾಧ್ಯವಾದ ಘಟಸ್ಫೋಟಗಳು ೧೨೦. ಈ ಸಂಬಂಧದಲ್ಲಿ ನಾವು ಅಭಿಮಾನದಿಂದ ಹೇಳಬಹುದಾದ ವಿಷಯವೆಂದರೆ, ಇಪ್ಪತ್ತು ವರುಷಗಳಿಗಿಂತ ಮೇಲ್ಪಟ್ಟು, ವೈವಾಹಿಕ ಜೀವನದ ಸಮಸ್ಯೆಗಳಲ್ಲಿ ತೊಳಲಾಡುತ್ತಿದ್ದ ಮಹಿಳೆಯರಿಗೂ ನಾವು ಸ್ವಾತಂತ್ರ್ಯವನ್ನು ದೊರೆಕಿಸಿಕೊಟ್ಟಿದ್ದೇವೆ. (ಚಪ್ಪಾಳೆ) ಇದಲ್ಲದೆ ಸಂಘದ ಪ್ರಚಾರದ ಫಲವಾಗಿ, ೮೦ ವಿದ್ಯಾವತಿಯರಾದ ಮಹಿಳೆಯರು, ವಿವಾಹದ ವಿಚಾರವನ್ನು ಬಿಟ್ಟುಕೊಟ್ಟು ಸ್ವತಂತ್ರ-ವೃತ್ತಿಗಳನ್ನು ಕಲ್ಪಿಸಿಕೊಂಡಿದ್ದಾರೆ. ಪ್ರಚಾರಶಾಖೆಯವರು ಸ್ಥಾಪಿಸಿದ ಇನ್ನೊಂದು ಮಹತ್ತ್ವದ ಕೆಲಸವೆಂದರೆ, ಸಂಘದ ಮುಖಪತ್ರವಾದ "ಮುನಿದರೆ ಮಾರಿ" ಎಂಬ ಪತ್ರಿಕೆಯನ್ನು ಸಂಸ್ಥಾಪಿಸಿದ್ದುದು. ಈ ಪತ್ರಿಕೆಯ Circulationಉ ಈಗಾಗಲೆ ನಮ್ಮ ಎಣಿಕೆಗೆ ಮೀರಿ ಬೆಳೆದಿದೆ. (ಚಪ್ಪಾಳೆ)

ಮತ್ತೆ, ನಮ್ಮ ಸಂಘದ ಮಧ್ಯಸ್ಥಿಕೆಯ ಪರಿಣಾಮವಾಗಿ ೧೦೮, ಕುಟುಂಬಗಳಲ್ಲಿಯ ದಾಂಪತ್ಯಜೀವನದ ಸಮಸ್ಯೆಗಳು ಬಗೆಹರಿದು ಅವರ ಜೀವನ ಸುಖಮಯವಾಗುವುದು ಸಾಧ್ಯವಾಗಿದೆ. (ಚಪ್ಪಾಳೆ)

ಇನ್ನು, ಇಂದಿನ ಮಹೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಮಿಸ್. ಮೋಹಿನಿ ಎಮ್. ಎ. ಅವರು ಸಿಕ್ಕಿದ್ದುದು ನಮ್ಮ ಸುದೈವ. (ಚಪ್ಪಾಳೆ) ಮಹಿಳೆಯರ ಉದ್ಧಾರದಲ್ಲಿ ಇವರು ಸಾಧಿಸಿದ ಕಾರ್ಯ ತಮಗೆ ಸುಪರಿಚಿತವಿದೆ. ಅವರ 'Come out of the kitchens ಅಡುಗೆಮನೆಗಳಿಂದ ಹೊರಬೀಳಿರಿ–ಎನ್ನುವ ಪುಸ್ತಕವನ್ನೋದದ ಸ್ತ್ರೀ ಕರ್ನಾಟಕದಲ್ಲಿಲ್ಲವೆಂದು ನನ್ನ ನಂಬುಗೆ. (ಚಪ್ಪಾಳೆ) ಮಿಸ್. ಮೋಹಿನಿಯವರು ನಮ್ಮ ಮಹಿಳಾಸಮಾಜಕ್ಕೇ ಒಂದು ಉನ್ನತವಾದ ಆದರ್ಶ. ಕನ್ನಡನಾಡಿನ ಸ್ತ್ರೀಯರ ಪರವಾಗಿ, ನಮ್ಮ ಸಂಘದ ಪರವಾಗಿ ಈ ಮಾಲೆಯನ್ನವರಿಗೆ ಅರ್ಪಿಸಿ (ಚಪ್ಪಾಳೆಗಳು) ನಮಗೆ ಒಂದೆರಡು ಉಪದೇಶದ ಮಾತುಗಳನ್ನು ಹೇಳಿ ಮಾರ್ಗ-ದರ್ಶನ ಮಾಡಲು ಅವರನ್ನು ಬೇಡಿಕೊಳ್ಳುತ್ತೇನೆ. (ಚಪ್ಪಾಳೆಗಳು)

ಮಿಸ್ ಮೋಹಿನಿ:—ಗೆಳತಿಯರೆ, ಕರ್ನಾಟಕದ ಏಕಮೇವಾದ್ವಿತೀಯವಾದ ನಮ್ಮ ಈ ಸ್ವತಂತ್ರ ಸ್ತ್ರೀಸಂಘ, ಈಗಾಗಲೆ ಸಾಕಷ್ಟು ಕಾರ್ಯ ಸಾಧಿಸಿದೆ. ಪುರುಷರ ಆಟದ ಬೊಂಬೆಗಳಂತೆ, ಆಳುಗಳಂತೆ ಇದ್ದ ನಮ್ಮ ಭಗಿನಿಯರನೇಕರಲ್ಲಿ ಸ್ವಾಭಿಮಾನವನ್ನು ಜಾಗ್ರತಗೊಳಿಸಿ, ಅವರನ್ನು ಮನುಷ್ಯರನ್ನಾಗಿ ಮಾಡಿದೆ ಈ ಸಂಘ; ಆದರೆ ಇದು ಸಾಧಿಸದೇಕಾದ ಕಾರ್ಯ ಇನ್ನೂ ಬೇಕಾದಷ್ಟಿದೆ. ಸ್ತ್ರೀಯರು ತಮ್ಮ ಅಭಿಪ್ರಾಯಗಳನ್ನು, ವಿಚಾರಗಳನ್ನು, ಎನಿಸಿಕೆಗಳನ್ನು— ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ—ನಿರ್ಭಯವಾಗಿ ಸಮರ್ಥಿಸಿಕೊಳ್ಳಬಲ್ಲ ಒಂದು ವಾತಾವರಣವನ್ನು ನಾಡಿನಲ್ಲಿ ನಾವಿಂದು ಕಲ್ಪಿಸಬೇಕಾಗಿದೆ. ಇದಕ್ಕಾಗಿ ನಮ್ಮಲ್ಲಿ ಒಂದು ತೀವ್ರ ನಿಷ್ಠುರತೆ ಬೆಳೆದು ಬರಬೇಕು. ನಮ್ಮ ಭಗಿನಿಯರು ಪಾಲಿಗೆ ಬಂದದ್ದು ಪಂಚಾಮೃತವೆನ್ನುವ ತತ್ತ್ವವನ್ನು ಬಿಟ್ಟುಕೊಟ್ಟು, ಸಮಾಜದ ಹಿತಕ್ಕಾಗಿ ದುಡಿಯುವ ಸಂದರ್ಭ ಬಂದೊದಗಿದೆ. ನಾನು ಎರಡುವರುಷಗಳ ಹಿಂದೆ Come out of the kitchens ಚಳವಳಿ ಪ್ರಾರಂಭಮಾಡಿದಾಗಿನಷ್ಟು ಕಠಿಣ ಪರಿಸ್ಥಿತಿ ಇಂದು ಉಳಿ-

ದಿಲ್ಲವೆನ್ನುವುದೇನೋ ನಿಜ; ಆದರೆ ನಮ್ಮ ಯುದ್ಧ, ಮುಗಿಯದ ಯುದ್ಧ. ಹೆಂಡತಿ ಗಂಡನೊಂದಿಗೆ, ಮಗಳು ತಂದೆಯೊಡನೆ, ತಂಗಿ ಅಣ್ಣನೊಟ್ಟಿಗೆ ತನ್ನ ಹಕ್ಕು-ಬಾಧ್ಯತೆಗಳಿಗಾಗಿ ಹೋರಾಡಬೇಕು ಅಂತಹ ನಿಸ್ಸೀಮ ಹೋರಾಟಕ್ಕಾಗಿ ಈ ಸಂಘದ ಬೆಂಬಲ ಯಾವಾಗಲೂ ಇದೆ—ಎಂದು ನಾನು ಎಲ್ಲರಿಗೂ ತಿಳಿಸಬಯಸುತ್ತೇನೆ. (ಚಪ್ಪಾಳೆ)

ನನಗೆ ಮಾತಿಗಿಂತಲೂ ಕೃತಿಯಲ್ಲಿ ಹೆಚ್ಚು ನಂಬುಗೆ. ಕನ್ನಡ ನಾಡಿನ ಸ್ತ್ರೀಯರಲ್ಲಿ ಹೊಸ ಜಾಗೃತಿಯನ್ನುಂಟು ಮಾಡಲು ಇಂದು ನಮಗೆ ದುಡಿಯುವವರು ಬೇಕು; ಮಾತನಾಡುವವರಲ್ಲ! ಇಂದಿನ ಈ ಶುಭಮುಹೂರ್ತದಲ್ಲಿ ಮತ್ತೊಂದು ಚಳವಳಿಯನ್ನು ಪ್ರಾರಂಭಿಸುವ ನಿರ್ಧಾರದೊಂದಿಗೆ ನಾನಿಲ್ಲಿ ಬಂದಿದ್ದೇನೆ 'Share our responsibilities' ನಮ್ಮ ಹೊಣೆಗಳಲ್ಲಿ ನೀವೂ ಪಾಲುಗೊಡಲೇಬೇಕು—ಎಂದು ಪುರುಷರನ್ನು ನಾವಿಂದು ಆಹ್ವಾನಿಸಬೇಕಾಗಿದೆ. ಅದಕ್ಕಾಗಿ ಈ ಬರುವ ವಾರವನ್ನು "Share our responsibilities' ವಾರವನ್ನಾಗಿ ಆಚರಿಸಬೇಕೆಂದು ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. (ಚಪ್ಪಾಳೆಗಳ ಸುರಿಮಳೆ)

## ನಿರೂಪಕ

ಮಿಸ್ ಮೋಹಿನಿಯವರ ಭಾಷಣ ಮುಗಿಯಿತು. ಕಾರ್ಯದರ್ಶಿನಿಯವರ ಆಭಾರಮನ್ನಣೆಯೊಂದಿಗೆ ಸಭೆಯೂ ಚೆದರಿತು. ಆದರೆ ಮಿಸ್ ಮೋಹಿನಿಯವರ ಆಹ್ವಾನ, Share our responsibilities ಎನ್ನುವ ಅವರ ಅಧಿಕಾರವಾಣಿ, ಕನ್ನಡನಾಡಿನ ಮೂಲೆ-ಮೂಲೆಗಳಲ್ಲಿಯೂ ಯಾವ ರೀತಿ ಪ್ರತಿಧ್ವನಿಸಿ ದಾಂಪತ್ಯ-ಜೀವನವನ್ನು ಕಲಕಿತು ಎನ್ನುವುದನ್ನು ನೋಡುವ ಮನಸ್ಸಿದೆಯಲ್ಲವೆ ? ನಡೆಯಿರಿ ಹಾಗಾದರೆ ನಾಯಕ ನಾರಾಯಣರಾಯರ ಮನೆಗೆ.

(ಮಗುವೊಂದು ಜೋರಿನಿಂದ ಅಳುವ ದನಿ. ಇನ್ನು ನಡೆಯುವ ನಾರಾಯಣರಾಯರ ಮತ್ತು ಅವರ ಪತ್ನಿಯ ನಡುವಿನ ಸಂಭಾಷಣೆಯ ಮಧ್ಯಮಧ್ಯೆ ಮಗು ಅಳುವುದು ಕೇಳಿಸಬೇಕು.)

ನಾರಾಯಣರಾಯ:—(ಅದೇ ಮನೆಯಲ್ಲಿ ಕಾಲಿಡುತ್ತ) ಏ ಮನೆಯೊಳಗ ಇದ್ದೀಯೋ ಇಲ್ಲೋ ? ಎಷ್ಟು ಕತ್ತಲು ಇಲ್ಲಿ !.... (ಬೇಸರ-ಸಿಟ್ಟುಗಳಿಂದ) ಇಡೀ ದಿವಸ ಆಫೀಸಿನೊಳಗ ದುಡಿದು ದುಡಿದು ಮನೆಗೆ ಬಂದರ, (ಕೂಸು ಜೋರಾಗಿ ಅಳುತ್ತದೆ) ನಡೆದದ ಇಲ್ಲಿ ಯಮಧರ್ಮರಾಯನ ದರ್ಬಾರು ! (ಸಿಟ್ಟು ಹೆಚ್ಚಿ) ಏ....ಇದ್ದೀಯೋ, ಏನು.... ?

ಲಕ್ಷ್ಮೀಬಾಯಿ:—(ಅಸಹನೆಯಿಂದ) ಇಕಾ ಇಲ್ಲೇ ಇದ್ದೀನಿ ನಿಮ್ಮ ಎದುರಿಗೆ! ಕತ್ತಲೆ, ಕತ್ತಲೆ ಅಂತ ಕೂಗತೀರೇ ಹೊರತು, ಅಲ್ಲೇ ಇದ್ದ ಸ್ವಿಚ್ಚು ಒತ್ತಬೇಕು-ಅನ್ನುವ ಬುದ್ಧಿ ಬರೋದಿಲ್ಲ ನಿಮಗ. ಕೂಸು ಅಳೋದು ನನಗೂ ಕೇಳತೈದ. ನಾನೇ ಎತ್ತಿಕೊಳ್ಳಬೇಕೂ ಅಂತ ಏನು ಬರಕೊಟ್ಟೇದs ? ಎತ್ತಿಕೊಂಡು ಸಮಾಧಾನಮಾಡಿದರೆ ಕೈ ಏನು ಮುರಿದು ಬೀಳೋದಿಲ್ಲ ! (ದನಿ ಏರಿಸಿ) ಬಾಯಿಗೆ ಬಂದದ್ದು ಒದರಿಸಿಕೊಳ್ಳಲಿಕ್ಕೆ, ನಾ ಏನು ನಿಮ್ಮ ಆಫೀಸಿನ ಸಿಪಾಯಿ ಅಂತ ತಿಳಿದೀರೋ ಏನು ?

ನಾರಾಯಣರಾಯ:—(ಆಶ್ಚರ್ಯ-ಹೆದರಿಕೆಗಳಿಂದ) ಆ ? ಏನಂದಿ? (ದೀಪ ಹಚ್ಚುತ್ತ) ನಾನೇ ದೀಪ ಹಚ್ಚಬೇಕು! ನಾನೇ ಕೂಸಿನ್ನ ಸಮಾಧಾನ ಮಾಡಬೇಕು ! (ಒಮ್ಮೆಲೆ ಸಿಟ್ಟಿನಿಂದ) ಯಾಕ ? ತಲೀ ಸಮಾ ಆದನೋ ಇಲ್ಲೋ ?

ಲಕ್ಷ್ಮೀಬಾಯಿ:—ದೀಪಾ ಹಚ್ಚಿದರs, ಕೂಸಿನ್ನ ಎತ್ತಿಕೊಂಡರs ಮಿಸೀನೇ ಉದುರಿ ಬೀಳತಾವ ಅನ್ನೋ ಹಾಂಗ ಮಾತಾಡತೀರಲ್ಲ ! (ಕೂಸು ಮತ್ತಷ್ಟು ಅಳಲು) ಸಿಟ್ಟು ಮೂಲೆಯೊಳಗ ಕಟ್ಟಿಟ್ಟು, ಕೂಸಿನ್ನ ಎತ್ತಿಕೊಳ್ಳಿರಿ....ಸಂಜೆಯ ಊಟಾ ಕಾಣಬೇಕೂ ಅಂತ ಮನಸ್ಸಿದ್ದರ !

ನಾರಾಯಣರಾಯ:—ಲಗ್ನ ಆಗಿ ಹನ್ನೆರಡು ವರುಷ ಆಯಿತು. ಒಂದು ದಿವಸನೂ ನನಗ ತಿರುಗಿ ಮಾತನಾಡಿದವಳಲ್ಲ ನೀನು ! ಈಗ ಒಮ್ಮೆಲೇ....ಖರೇ ಹೇಳು, ನಿನ್ನ ಸ್ವಂತ ಬುದ್ಧಿಯಲ್ಲ ಇದು. ಯಾರೋ ನಿನ್ನ ತಲೆಯೊಳಗ ಇಲ್ಲದ್ದು ತುಂಬಿದ್ಹಾಂಗ ಕಾಣತ್ಯದ; (ಒಮ್ಮೆಲೆ ಹೊಳೆದವನಂತೆ) ಆ ಮೋಹಿನೀ ಭಾಷಣಾ ಕೇಳಲಿಕ್ಕೆ ಹೋಗಿದ್ದೆ ಏನು ಮತ್ತೆ? (ಒಮ್ಮೆಲೆ ಸಿಟ್ಟುತಂದುಕೊಂಡು) ಇದೆಲ್ಲಾ ನಡೆಯೋದಿಲ್ಲ ಇಲ್ಲಿ. ನಾ ಹೇಳಿದ್ಹಾಂಗ ಕೇಳಿಕೊಂಡು ಇದ್ದಿಯೋ ಒಳ್ಳೇದಾಯ್ತು; ಇಲ್ಲಾಂದ್ರ ಗಂಟು ಕಟ್ಟು ನಿಮ್ಮಪ್ಪನ ಮನಿಗೆ ! (ಕೂಸು ಜೋರಾಗಿ ಅಳಹತ್ತಲು) ಏನು ? ಕೂಸಿನ್ನ ಎತ್ತಿಕೊಳ್ಳತೀಯೋ ಇಲ್ಲೊ ?

ಲಕ್ಷ್ಮೀಬಾಯಿ:—ಇಲ್ಲ ! ಮನೆಯೊಳಗ ಇರಬ್ಯಾಡ ಅಂತೀರಲ್ಲ, ಇದೋ ಹೊರಟೆ ನಾನು ! ನನ್ನ ಹೊಟ್ಟೆಯ ಪಾಡು ನಾನು ನೋಡಿಕೋತೀನಿ, ನೋಡಿಕೊಳ್ಳಿರಿ ನಿಮ್ಮ ಮನೀನ್ನ, ನಿಮ್ಮ ಮಕ್ಕಳನ್ನ ! (ಕೂಸು ಮತ್ತೆ ಅಳುವುದು.)

ನಾರಾಯಣರಾಯ:—(ಸೋಲಿನ ದನಿಯಲ್ಲಿ) ಏ....ಒಮ್ಮೆಲೆ ವಿಕೋಪಕ್ಕೆ ಒಯ್ಯಬೇಡ ! (ಮೆತ್ತನ್ನ ದನಿಯಲ್ಲಿ) ಯಾಕ? ಮೈಯೊಳಗ ನೆಟ್ಟಗಿಲ್ಲೇನು ? ಹೇಳಲ್ಲ ಹಾಂಗ (ಹುಸಿನಗೆಯೊಡನೆ) ಕೂಸನ್ನೆತ್ತಿಕೊಳ್ಳೋದಿಷ್ಟೇ ಯಾಕ....ಅಡಗೀನೂ ನಾನೇ ಮಾಡ್ತೀನಿ !

ಲಕ್ಷ್ಮೀಬಾಯಿ:—ನನಗೇನಾಗೇದ ? ಆರಾಮ ಇದ್ದೀನಿ (ನಿರ್ಧಾರದಿಂದ) ಆದರೂ ಎತ್ತಿಕೊಳ್ಳೋದಿಲ್ಲ ಕೂಸಿನ್ನ (ಕೂಸು ಕೇಸರು ಬಾಸರವಿಡಲು)

ನಾರಾಯಣರಾಯ:—ಎಲಾ ರಾಕ್ಷಸೀ ! ಎಷ್ಟು ಮೀರಿ ಬಿಟ್ಟೆಲ್ಲ! (ಉಪಾಯವಿಲ್ಲದೆ ಸಿಟ್ಟುನುಂಗಿ) ಇರಲಿ ! ನಾನೇ ಎತ್ತಿಕೊಳ್ಳತೀನಿ (ಕೂಸನ್ನೆತ್ತಿಕೊಂಡು ಬಂದು ಸಮಾಧಾನಮಾಡುತ್ತ) ಈ ಸುಡುಗಾಡು Bigamy Law ಇದ್ದಿರಲಿಲ್ಲಾಂದ್ರ ತೋರಿಸ್ತಿದ್ದೆ ನಿನಗ!

ಲಕ್ಷ್ಮೀಬಾಯಿ:—ಬಾಯಿ-ಕಿವಿ ಲಾ ಅಂದ್ರ ಹೆದರ್ತೀನಿ ಅಂತ ತಿಳಿದೀರೋ ಏನು ! ನೀವು ಓದಿದ್ದ ಇಂಗ್ಲಿಷೂ ಅಷ್ಟರಲ್ಲೇ ಅದ !

ಪ್ಯಾಟ್ರಿಕಿನೊಳಗ ನಾಲ್ಕು ಸಲ ನಪಾಸಾದದ್ದು ಇಂಗ್ಲಿಷಿನೊಳಗs ಅಂತ ನೀವs ಹೇಳ್ತಿದ್ದಿರಲ್ಲ !

ನಾರಾಯಣರಾಯ: —ಬಾಯಿ-ಕಿವಿ ಅಂತ, ಮಣ್ಣು ! (ಗಟ್ಟಿಯಾಗಿ) Bigamy Law....ದ್ವಿಪತ್ನೀವಿವಾಹ ವಿರೋಧ ಕಾಯಿದೆ !

ಲಕ್ಷ್ಮೀಬಾಯಿ:—(ನಗೆಯೊಡನೆ) ಚೆಲೋನೇ ಆಗ್ತಿತ್ತು. ಇಬ್ಬರೂ ಕೂಡಿಯೇ ಪಾಠ ಕಲಿಸತಿದ್ದೇವಿ ನಿಮಗ. ಒಂದು ಕೂಸಿನ್ನ (ಕೂಸು ಅಳಲು) ಸಮಾಧಾನ ಮಾಡೋದಾಗೋದಿಲ್ಲ ನಿಮಗ; ಇಬ್ಬರು ಹೆಂಡಂದಿರನ್ನೇನು ಆಳ್ತಿದ್ದಿರಿ !

ನಾರಾಯಣರಾಯರು:- ಆ ಕುರ್ಚಿ ಬಿಟ್ಟೆದ್ದು ಅಡುಗೆ ಮಾಡತೀಯೋ ಅಥವಾ ಉಪವಾಸ ಸಾಯಿಸ್ತಿಯೋ ನಮ್ಮನ್ನೆಲ್ಲಾ ?

ಲಕ್ಷ್ಮೀಬಾಯಿ:—(ಏಳುತ್ತ) ಕೂಸಿಗೆ ಹಾಲು ಹಾಕಿ ಮಲಗಿಸಿರಿ ನೀವು; ನಾ ಅಡಿಗೀ ಮಾಡ್ತೀನಿ "ನಮ್ಮ ಹೊಣೆಗಳಲ್ಲಿ ಪಾಲು ಗೂಡಿರಿ !"

ನಿರೂಪಕ

ಪರಿಸ್ಥಿತಿಗೆ ತಲೆಬಾಗಿ ನಾರಾಯಣರಾಯರು ಹೆಂಡತಿಯ ಮಾತನ್ನು ಕೇಳಲೇಬೇಕಾಯಿತು. ಆದರೆ ಅವರ ಅಭಿಮಾನ ಇದ ರಿಂದ ಮತ್ತಿಷ್ಟು ಜಾಗೃತವಾಯಿತಲ್ಲದೆ, ಮತ್ತಾವ ಪರಿಣಾಮವೂ ಆಗಲಿಲ್ಲ. ಇಡೀ ರಾತ್ರಿಯೆಲ್ಲವೂ ವಿಚಾರಮಾಡಿದರೂ ಪ್ರಶ್ನೆ ಬಗೆಹರಿಯದ್ದರಿಂದ ನಾರಾಯಣರಾಯರು, ಮರುದಿನ ಸಂಜೆ ಕ್ಲಬ್ಬಿನಲ್ಲಿ ತಮ್ಮ ಆಪ್ತಮಿತ್ರನಾದ ಕಿಟ್ಟಣ್ಣನನ್ನು ಮೊರೆಹೊಕ್ಕರು.

ನಾರಾಯಣರಾಯರು:—ಅಲ್ಲೋ ಕಿಟ್ಟು, ಒಂದು ದಿವಸ ಹ್ಯಾಂಗಾ ದರೂ ನಡೆಯಿತು ಅನ್ನು. ಆದರೆ ದಿನಾ ಇದೇ ರೀತಿ ಆದರ ಹ್ಯಾಂಗಪಾ ? ನನಗ ನೋಡು, ಬೇಕಾದರ ಆಫೀಸಿನೊಳಗ ಇನ್ನೂ ಒಂದು ತಾಸು ಹೆಚ್ಚು ದುಡೀ ಅಂದರs ದುಡಿದೇನು. ಆದರೆ ಈ ಕೂಸಿನ್ನೆತ್ತಿಕೊಳ್ಳುವ ಕೆಲಸ ನನ್ನ ಕೈಯಿಂದಾಗದ್ದು ಹೀಂಗಾ ಗ್ತsದ ಅಂತ ಮೊದಲೇ ತಿಳಿದಿದ್ರ....

ಕಿಟ್ಟಣ್ಣ:—ಏನ ಮಾಡ್ತಿದ್ದಿ ?

ನಾರಾಯಣರಾಯ:—ಮಾಡೋದೇನು ? ಲಗ್ನಾನೇ ಮಾಡಿಕೊಳ್ತಿ ದ್ದಿಲ್ಲ.

ಕಿಟ್ಟಣ್ಣ:—ಜಗತ್ತಿನಲ್ಲಿ ಇಂತಹ Retrospective Budha ಏ ಜಾಸ್ತಿ ! (ಸಮಾಧಾನ ಪಡಿಸುವ ದನಿಯಲ್ಲಿ) ಅಲ್ಲೋ ನಾಣಿ, ಇಷ್ಟು ಸಣ್ಣ ವಿಷಯಕ್ಕೆ ನೀ ಎಷ್ಟು ಹೆದರಿಬಿಟ್ಟೀದಿ ?

ನಾರಾಯಣರಾಯ:—The wearer knows where the shoe pinches ! ಸಂಸಾರದ ಸುಖ-ದುಖದ ಗಂಧ ಕೂಡಾ ಇಲ್ಲದ ಬ್ಯಾಚಲರ್ ಗೂಳಿ ನೀನು. ನಿನ್ನೆದುರು ನನ್ನ ಕಷ್ಟ ತೋಡಿ ಕೊಂಡಿದ್ದು ನನ್ನವೇ ತಪ್ಪು ! ಏನಾದರೂ ಉಪಾಯ ಹೇಳೋ ಅಂದರs, ಬಂಡವಾಳಿಲ್ಲದ ಬಡಾಯಿ ಶುರುವು ಮಾಡಿದೆಯಲ್ಲ ?

ಕಿಟ್ಟಣ್ಣ:—ನೀನು ಮಾತನಾಡೋ ರೀತೀ ನೋಡಿದರ, ನಿನಗಾದ ಶಿಕ್ಷಾನೇ ಯೋಗ್ಯ-ಅಂತ ಅನಸ್ತsದ. ಆದರೆ ನಮ್ಮದು ನಿಮ್ಮದು ಗೆಳೀ ಗೆಳೆತನ, ಕೈ ಬಿಡಲಿಕ್ಕೆ ಆಗೊದಿಲ್ಲ.

ನಾರಾಯಣರಾಯ:—(ಏಳುತ್ತ) Good by ! ತಿಳಿಧಾಂಗಾಯ್ತು ನಿನ್ನ ಪೌರುಷ !

ಕಿಟ್ಟಣ್ಣ:—(ನಾ.ನ ಕೈಹಿಡಿದು ಕುಳ್ಳಿರಿಸುತ್ತ) ಕೂತುಕೊಳ್ಳೋ, ಈ ಪ್ರಶ್ನೆ ಬಗೆಹರಿಸಿ ಕೊಟ್ಟರಾಯ್ತು ಇಲ್ಲೋ ನಿನಗ ? ನಡೀ, ನನ್ನ ಜೊತೆಗೆ; ನಾ ಹೇಳಿದ್ಹಾಂಗ ನಡೆಯುವಷ್ಟಾದರೂ ಬುದ್ಧಿ ನಿನಗ ಅದsನೋ ಇಲ್ಲೋ ನೋಡೋಣ!

ನಿರೂಪಕ

ನಾರಾಯಣರಾಯರ ಮನೆ. ಕಿಟ್ಟಣ್ಣ ನಾರಾಯಣರಾಯರನ್ನು ಸಂಭಾಳಿಸುತ್ತ ಒಳಸೇರುತ್ತಲಿದ್ದಾನೆ. ಅಲ್ಲಿಯೇ ಕುಳಿತುಕೊಂಡಿದ್ದ ಲಕ್ಷ್ಮೀಬಾಯಿ ಈ ದೃಶ್ಯವನ್ನು ನೋಡಿ ಕೈಕಾಲುಬಿಡುತ್ತಾಳೆ.

ಲಕ್ಷ್ಮೀಬಾಯಿ:—(ಕುಳಿತಲ್ಲಿಂದ ಎದ್ದು, ಹೆದರಿಕೆ ತುಂಬಿದ ದನಿ ಯಲ್ಲಿ) ಯಾಕ್ರೀ ಕಿಟ್ಟಣ್ಣಾ! ಏನಾಗೇದ ಅವರಿಗೆ ? (ಕಿಟ್ಟಣ್ಣ ನಾರಾಯಣರಾಯನನ್ನು ಆರಾಮಕುರ್ಚಿಯೊಂದರಲ್ಲಿ ಕುಳ್ಳಿರಿ ಸುತ್ತಾನೆ.) ಯಾಕ ? ಮಾತೇ ಆಡೋದಿಲ್ಲಲ್ಲ ನೀವು ?

ನಾರಾಯಣರಾಯ:—(ಆರ್ತಧ್ವನಿಯಲ್ಲಿ) ನೀರು....ನೀರು.... !

ಕಿಟ್ಟಣ್ಣ: –(ಕಣ್ಣೀರನ್ನೊರೆಸುತ್ತ ಅಳುದನಿಯಲ್ಲಿ) ಲಕ್ಷ್ಮೀಬಾಯೀ, ಸ್ವಲ್ಪ ನೀರು ಕೊಡಿರಿ. (ನಾರಾಯಣರಾಯನು ನೀರುಕುಡಿಯ ಹತ್ತಲು) ಯಾಕೋ ನಾಣೀ, ಈಗ ಹ್ಯಾಗ ಅನಿಸ್ತsದ ?

ನಾರಾಯಣರಾಯ:—(ಕಿಟ್ಟಣ್ಣನತ್ತ ನೋಡುತ್ತ, ಕಂಗಾಲು ಸ್ಥಿತಿ ಯಲ್ಲಿ) ಅಲ್ಲೋ ಕಿಟ್ಟಣ್ಣ, ನೌಕರೀ ಕಳಕೊಂಡು ಮರ್ಯಾದೆ ಕಳಕೊಂಡು, ಇನ್ಹ್ಯಾಂಗ ಇರಲೆಪಾ ನಾನು ?

ಕಿಟ್ಟಣ್ಣ:—ನಾಣೀ, ಧೈರ್ಯತಂದುಕೊ ! ಕೇಳಿಲ್ಲವೇ ಹಿರಿಯರು ಹೇಳೋದನ್ನ: ಧೈರ್ಯಂ ಸರ್ವತ್ರ ಸಾಧನಂ–ಅಂತ

ಲಕ್ಷ್ಮೀಬಾಯಿ:—ಏನು ?.... ನೌಕರಿ ಹೋಯಿತು ? ಅಯ್ಯೋ ದೇವರೇ ! ಇನ್ನೇನು ಗತಿ ! (ಅಳುವಿನ ದನಿಯಲ್ಲಿ) ನಾ ಎಷ್ಟು ತ್ರಾಸು ಕೊಟ್ಟೆನಲ್ಲ ! ನಿಮಗ....ಏನಾದರೂ ಮಾಡೋಣಂತ, ಧೈರ್ಯ ತಂದುಕೊಳ್ಳಿರಿ.

ನಾರಾಯಣರಾಯ:—(ಹುಚ್ಚನಂತೆ ಅತ್ತಿತ್ತ ನೋಡುತ್ತ) ಏನು ? ಏನದು ? ನಾ ಎಲ್ಲಿ ಇದ್ದೀನಿ ! (ಲಕ್ಷ್ಮೀಬಾಯಿಯು ಬಿಕ್ಕಿ ಬಿಕ್ಕಿ ಅಳಹತ್ತುವಳು.)

ನಿರೂಪಕ

ಕಿಟ್ಟಣ್ಣನ ಉಪಾಯ ನಿರೀಕ್ಷೆಗೂ ಮೀರಿ ಫಲಿಸಿತು. ಲಕ್ಷ್ಮೀಬಾಯಿ ತನ್ನ ಗಂಡನ ಮಾತನ್ನು ಚಾಚೂ ತಪ್ಪದೆ ಕೇಳಲಾರಂಭಿಸಿದಳು. ನಾರಾಯಣರಾಯರು ಕಳವಿನಲ್ಲಿ ಆಫೀಸಿಗೆ ರಜೆಯ ಚೀಟಿ ಯನ್ನು ಕಳುಹಿಸಿ, ಮನೆಯಲ್ಲಿ ಸ್ವಸ್ಥವಾಗಿದ್ದು ಬಿಟ್ಟರು. ಹೀಗೆಯೇ ಐದಾರು ದಿನಗಳು ಕಳೆದುವು. ಆದರೆ ಒಂದು ದಿನ ಲಕ್ಷ್ಮೀ- ಬಾಯಿಯು ಮುಂದಿನ ಮಾರ್ಗ ನಿರ್ಧರಿಸಲೆಂದು ಸ್ತ್ರೀಸಂಘದ ಕಚೇರಿಗೆ ಬಂದು, ಮಿಸೆಸ್ ಮೋಹಿನಿಯವರನ್ನು ಕಂಡಳು. ಅದೋ ಮಿಸ್. ಮೋಹಿನಿಯರೊಟ್ಟಿಗೆ ಲಕ್ಷ್ಮೀಬಾಯಿ ಮಾತನಾಡುತ್ತಿ ದ್ದಾಳೆ.

ಲಕ್ಷ್ಮೀಬಾಯಿ:—ನೋಡಿರಿ ಮೋಹಿನೀ, ನೀವು ಹೇಳಿದ್ಹಾಂಗ ಕೇಳಲಿಕ್ಕೆ ಹೋದರ ಎಂಥಾ ಅನರ್ಥ ಆಗಿ ಹೋಗೇದ! ಮನೆಯ ಕೆಲಸ ಮುಗಿಸಿ 'ಆಫೀಸಿಗೆ' ಹೋಗೋದು ತಡಾ ಆದದ್ದಕ್ಕೆ, ನಮ್ಮನೀಯವರ ನೌಕರಿನೇ ಕಳೆದುಹೋಯಿತು. (ಅಳುದನಿಯಲ್ಲಿ) ಯಾವ ಕೆಟ್ಟ ಮುಹೂರ್ತದಲ್ಲಿ ನಾನವರಿಗೆ ಮನೆಗೆಲಸ ಮಾಡಲಿಕ್ಕೆ ಹಚ್ಚಿದೆನೋ; ಅದೇ ಕೆಲಸ ಕಾಯಂ ಆಯ್ತು ಅವರಿಗೆ !

ಮೋಹಿನಿ:—ಹೆದರಬೇಡಿರಿ ಲಕ್ಷ್ಮೀಬಾಯಿ, ಯಾವ ಆಫೀಸಿನಲ್ಲಿ ಕೆಲಸ ಮಾಡತಿದ್ರು ನಿಮ್ಮ ಮನೆಯವರು ?

ಲಕ್ಷ್ಮೀಬಾಯಿ:—ಕಲೆಕ್ಟರ ಆಫೀಸಿನಲ್ಲಿ.

ಮೋಹಿನಿ:—ಏನೂ ಹೆದರ ಬೇಡಿರಿ....ನನಗೆ ಕಲೆಕ್ಟರರ ಪರಿಚಯ ನಾಕಷ್ಟು ಉಂಟು....ತಡೆಯಿರಿ ಈಗಲೇ ಫೋನು ಮಾಡ್ತೀನಿ ಅವರಿಗೆ (ಫೋನಿನಲ್ಲಿ) Halloo Collector's office please.... yes. yes. I want the collector.... Halloo good morning Mr. Desai....ಏನಿಲ್ಲಾ....ತಮ್ಮ ಹತ್ತರ ಒಂದು ವಿಷಯ ಕೇಳಬೇಕಾಗಿತ್ತು. No No ಅಷ್ಟೇನೂ, important ಅಲ್ಲ. Oh thanks.... ನಾರಾಯಣರಾವ ಕುಲಕರ್ಣಿ....ಹುಂ.... N. B. Kulkarni....ಅವರೇ ನಿಮ್ಮ ಆಫೀಸಿನ ಕ್ಲಾರ್ಕ. ಅವರಿಗೆ ಡಿಸ್‌ಮಿಸ್ ಆಗಿನೆಯಂತಲ್ಲ ! Beg your pordon ಏನು False rumoar ಅಂತೀರಾ ? ರಜೆಯ ಮೇಲಿದ್ದಾರೆಯೇ ? ಓಹೋ.... Exuse me....thanks....thank you very much....yes.... yes tennis ಗೆ ಬರ್ತೀನಿ; ತಪ್ಪಿಸೋದಿಲ್ಲ.

(ಲಕ್ಷ್ಮೀಬಾಯಿಯತ್ತ ಮುಖ ಹೊರಳಿಸಿ)

ಲಕ್ಷ್ಮೀಬಾಯಿ, ನಿಮ್ಮ ಪತಿದೇವರು ಕಡಿಮೆಯವರಲ್ಲ ಅಂತ ಕಾಣತದ. ದೊಡ್ಡ ನಾಟಕಾನೇ ಹೂಡ್ಯಾರವರು ! ಅವರ ನೌಕರಿ ಗಟ್ಟಿಆದ (ನಿರ್ಧಾರ ದನಿಯಲ್ಲಿ) ಈ ಗಂಡಸರಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕು. ಬನ್ನಿರಿ ನಮ್ಮ ಮನೆಗೆ ಹೋಗೋಣ ಸ್ವಲ್ಪ; ನಿಮಗೊಂದು ಪ್ಲ್ಯಾನು ಹೇಳಿಕೊಡ್ತೀನಿ.

### ನಿರೂಪಕ

ನಾರಾಯಣರಾಯರ ಮನೆ. ಲಕ್ಷ್ಮೀಬಾಯಿ ಇದೇ ಮೋಹಿನಿಯವರನ್ನು ಕಂಡು ಮರಳಿ ಬಂದಿದ್ದಾಳೆ. ಮಧ್ಯಾಹ್ನದ ಒಂದು ಗಂಟೆಯಾಗಿರಬಹುದು.

ನಾರಾಯಣರಾಯ:—(ಬೇಸರೋದುತ್ತ ಕುಳಿತವನು) ಎಲ್ಲಿ ಹೋಗಿದ್ದೆ ಮಹಾರಾಣಿಯೇ ? ಮೊದಲೇ ನೌಕರೀ ಹೋದದ್ದು ದುಃಖ; ಮೇಲೆ ಈ ಕೂಸಿನ ಕಿರಿಚಾಟ....ಒಳಗೆ ಹಸಿವೆಯ ಉರಿ; ಛೆ, ಛೆ.... ಸಂಸಾರ ಬೇಸರ ಬಂತು....ಹೀಂಗಿರೋದಕ್ಕಿಂತ ದೇಶಾಂತರ ಹೋಗೋದು ಒಳ್ಳೆಯದೂ ಅಂತ ಅನಿಸ್ತದ.

ಲಕ್ಷ್ಮೀಬಾಯಿ:—ನಿಮ್ದಂತೂ ನೌಕರೀ ಹೋಯಿತು. ಹೊಟ್ಟೆ-ತುಂಬುವ ಉಪಾಯ ಹುಡುಕಬೇಕಾಯಿತಲ್ಲ. ನೌಕರೀ ಹುಡುಕಲಿಕ್ಕೆ ಹೋಗಿದ್ದೆ.

ನಾರಾಯಣರಾಯ:—(ನಗುತ್ತ) ನೀನು ನೌಕರೀ ಮಾಡ್ತೀಯಾ ? ಕಲೆಕ್ಟರ್ ಆಗ್ತೀಯೋ, ಕಮಿಷನರ್ ಆಗ್ತೀಯೋ ?

ಲಕ್ಷ್ಮೀಬಾಯಿ:—ನಮ್ಮಪ್ಪ ನಿಮಗ ನಾಲ್ಕು ಸಾವಿರ ರೂಪಾಯಿ ದಂಡ ತೆರೋದರ ಬದಲು....ಇಂಗ್ಲೀಷು ಸಾಲೆ ಕಾಲೇಜು ಕಲಿಸಿದ್ದಾ ಅಂದರ, ಕಲೆಕ್ಟರ್ ಆಗ್ತಿದ್ದೆ; ನಿಮ್ಹಾಂಗ ಕಾರಕೂನಿಕಿಯೊಳಗೇನೇ ಜೀವನಾ ತಗೀತಿದ್ದಿಲ್ಲ. ಇದ್ದದ್ದು ನೌಕರೀ ಕಾಯ್ದುಕೊಳ್ಳಲಿಕ್ಕೆ ಆಗದಿದ್ದರೂ, ಬಡಾಯಿ ಮಾತ್ರ ಕಡಿಮೆ ಇಲ್ಲ ನಿಮ್ಮದು.

ನಾರಾಯಣರಾಯ:—ನೀಯೇನು ಕಡಿಮೆ ಮಾತನಾಡುವಾಕೀ ಅಂತ ತಿಳಿದಿಯೋ ಹ್ಯಾಂಗ? ಇದಿರ್ಲಿ, ಎಲ್ಲಿ ಹೋಗಿದ್ದಿ ಹೇಳಲೇ ಇಲ್ಲಲ್ಲ ?

ಲಕ್ಷ್ಮೀಬಾಯಿ:—ಹೇಳಿದ್ನೆಲ್ಲಾ ನೌಕರೀ ಹುಡಕಲಿಕ್ಕೆ ಅಂತ ! ಆ ಕನ್ನಡ ಹುಡುಗಿಯರ ಸಾಲಿಯೊಳಗ ಶಿಕ್ಷಕೀ ಅಂತ ನೇಮಿಸಿಕೊಳ್ಳಲಿಕ್ಕೆ ಒಪ್ಪ್ಯಾರ ನನ್ನ. ತಿಂಗಳಿಗೆ ಐವತ್ತು ರೂಪಾಯಿ ಪಗಾರ ಸಿಗ್ತದ. ಒಪ್ಪಿಕೊಂಡು ಸಹೀ ಹಾಕೀ ಬಂದುಬಿಟ್ಟೀನಿ. ಮನೆಯ ಕೆಲಸ ಎಲ್ಲಾ ನಿಮ್ಮದು ಇನ್ನ!

ನಾರಾಯಣರಾಯ:—ಅದು ನನ್ನ ಕೈಲಿ ಆಗೋದಿಲ್ಲ.

ಲಕ್ಷ್ಮೀಬಾಯಿ:—ಆಗೋದಿಲ್ಲಾಂದ್ರ, ಉಪಜೀವನಕ್ಕ ಬ್ಯಾರೇ ವ್ಯವಸ್ಥಾ ಮಾಡಿಕೊಳ್ಳಿರಿ....ನಿಮಗಂತೂ ಇನ್ನೇನು ನೌಕರೀ ಸಿಗೋಹಾಂಗಿಲ್ಲ....ಕೇಸ್ ಬ್ಯಾರೇ ನಡೆಯೋದದ ಅಂತಿದ್ರು ಕಲೆಕ್ಟರರು. ನನಗ್ಯಾಕ ಬೇಕು ಇಲ್ಲದ ಪೀಕಲಾಟ....

ನಾರಾಯಣರಾಯ:—(ಧೈರ್ಯಗುಂದಿ) ಏನಂದಿ ? ಕೇಸು ? ಕಲೆಕ್ಟರು ನಿನಗೆ ಹೇಳಿದರ ? ನೀ ಯಾವಾಗ ಭೆಟ್ಟಿ ಆದಿ ಅವರ್ನ !

ಲಕ್ಷ್ಮೀಬಾಯಿ:—ನಿಮ್ಮನ್ನ ತಿರುಗಿ ನೌಕರೀ ಮ್ಯಾಲೆ ತೊಗೊಳ್ರಿ ಅಂತ ಅವರಿಗೆ ಹೇಳಿಕೊಳ್ಳಲಿಕ್ಕೆ ಹೋಗಿದ್ದೆ ಮುಂಜಾನೆ....ನನ್ನ ನೌಕರೀನೂ ಅವರ ಹೆಂಡತಿಯೇ ಹಚ್ಚಿಕೊಟ್ಟರು.

ನಾರಾಯಣರಾಯ:—(ನಡುಗುವ ದನಿಯಲ್ಲಿ) ಎಲ ! ಇದೇನಾಗಿ ಹೋಯಿತು ! ಯಾರದೋ ಕಂತ್ರಾಟ ಇರಬೇಕು ಇದರೊಳಗ! ನಾನು ರಜಾ ತಗೊಂಡು ಮನ್ಯಾಗ ಕೂತಿದ್ದೇ ತಪ್ಪಾಯ್ತು

ಲಕ್ಷ್ಮೀಬಾಯಿ:—(ಆಶ್ಚರ್ಯವನ್ನು ನಟಿಸುತ್ತ) ಆಂ ?....ರಜಾ

ನಾರಾಯಣರಾಯ:—ಹೌದೇ ! ರಜಾ ! ಒಂದು ಮಾಡಲಿಕ್ಕೆ ಹೋದರ ಇನ್ನೊಂದು ಆಯ್ತು. ಇನ್ನ ಕೇಸು ಬೇರೆ ನಡೆಯೋದ (ಪಶ್ಚಾತ್ತಾಪದ ದನಿಯಲ್ಲಿ) ನಾ ಬ್ಯಾಡೋ ಅಂದರ ಕೇಳಲಿಕ್ಕೆ ಆವನ ಮನೆ ಹಾಳಾಗ....ಕಿಸೆಯೊಳಗ ಇಟ್ಟೇಬಿಟ್ಟ ನೋಟು! ಗುಂಡಪ್ಪ, ನೋಡಿದನೋ ಏನೋ....ಕಲೆಕ್ಟರರ ತನಕ ಹೋಗೇದ ಪ್ರಕರಣ. (ಅಧೈರ್ಯದಿಂದ) ಇನ್ನೇನು ಗತಿ !

ಲಕ್ಷ್ಮೀಬಾಯಿ:—ನಾ ಹೇಳಿದ್ಹಾಂಗ ಕೇಳೋದೇ ಗತಿ ನಿಮಗೆ ನಮ್ಮ ಮೋಹಿನೀ ಇದ್ದಾರಲ್ಲ. ಅವರಿಗೂ ಕಲೆಕ್ಟರರಿಗೂ ಬಹಳ ಸ್ನೇಹ. ಅವರು ಒಂದು ಮಾತು ಕಲೆಕ್ಟರರಿಗೆ ಹೇಳಿದರ, ಎಲ್ಲಾ ಸರೀ ಹೋದೀತು. ನಾನು ಮೋಹಿನೀ ಅವರ ಹತ್ತರ ಹೋಗಿದ್ದೆ

ಜಯಂ

# ಮಥನದ ನಂತರ

(ಒಂದು ಭಾವರೂಪಕ)

ಶ್ರೀ. ಎಚ್. ವಿ. ನಾಗೇಶ, ಗುಲ್‍ಬುರ್ಗಾ

ದೇವತೆಗಳ ಸಮುದ್ರಮಂಥನವನ್ನು ಅವನು ಓದಿಕೇಳಿದ್ದನು. ಅಮೃತದೊಂದಿಗೆ ಹಾಲಾಹಲವೂ ಹೊರಡುವುದೆಂಬುದನ್ನೂ ಆತ ತಿಳಿದಿದ್ದನು. ಹಾಲಾಹಲ ಹೊರಹೊಮ್ಮಿದಾಗ ಕುಡಿದು ಜೀರ್ಣಿಸುವೆನೆಂಬ ನೀಲಕಂಠನ ಸ್ಥೈರ್ಯವೂ ಅವನಲ್ಲಿತ್ತು. ಆದರೆ ಅಮೃತವೇನೆಂಬುದೇ ಅವನಿಗೆ ಗೊತ್ತಿರಲಿಲ್ಲ. ಆದರೂ ಆತ ಅಮೃತಮಂಥನಕ್ಕಾಗಿ ನಡೆದಿದ್ದ!

ದೇವಗಣದ ಸಕಲಸಾಮರ್ಥ್ಯವೂ ಅವನಲ್ಲಿತ್ತು. ಅವನು ಸಮುದ್ರವನ್ನು ಮಥಿಸುತ್ತಿದ್ದ. ಕರಾಳ ವಿಷವನ್ನು ಕುಡಿದು ಜೀರ್ಣಿಸಿ ಮತ್ತೆ ಮತ್ತೆ ಕಡೆಯುತ್ತಿದ್ದ. ಕ್ಷಣಕ್ಷಣವೂ ಆತ ಅಮೃತದ ಬರುವಿಕೆಗಾಗಿಯೇ ಕಾಯುತ್ತಿದ್ದ. ಒಮ್ಮೆ ಆಶೆ, ಮತ್ತೆ ನಿರಾಶೆ. ತಿರುಗಿ ತಿರುಗಿ ಅದೇ ಮಂಥನ. ಕೊಟ್ಟಕೊನೆಗೆ ಕಣ್ಣು ಕೋರೈಸುವ ರತ್ನರಾಶಿಗಳು ಹೊರಹೊಮ್ಮಿದುವು. ವಜ್ರ–ವೈಡೂರ್ಯ–ಮಾಣಿಕ್ಯಾದಿ ನವರತ್ನಗಳು ಹೊರಬಂದುವು ಅವನ ಸಂತೋಷಕ್ಕೆ ಮೇರೆಯೇ ಇದ್ದಿಲ್ಲ. ಅವನು ಹಿರಿಹಿರಿ ಹಿಗ್ಗಿಹೋದ. ತನ್ನ ಇಷ್ಟಾರ್ಥ ಇದಲ್ಲವೆಂದು ತಿಳಿಯಲು ಆತ ಅಸಮರ್ಥನಾಗಿದ್ದ. ತಾನು ಬಯಸಿದ ಸಿದ್ಧಿ, ಆ ಇಷ್ಟಾರ್ಥ ಇನ್ನೂ ಬರುವುದರಲ್ಲಿದೆ—ಎಂದು ಆತ ತಿಳಿಯಬಾರದ ತಾನಾವ ಮಹತ್ಸಂಪಾದನೆಗಾಗಿ ಕಾರ್ಯೋನ್ಮುಖನಾಗಿದ್ದೇನೆಂಬ ಅರಿವೂ ಆತನಿಗಿದ್ದಿಲ್ಲ.........ಅವನಿಗೆ ಆಗಲೇ ಲೋಭಿಯ ಅತ್ಯವಸರ ಪ್ರಾಪ್ತಿಯಾಗಿ ಬಿಟ್ಟಿತು ಕತ್ತಲಲ್ಲಿ ಕೈಗೆ ಸಿಕ್ಕಿದ್ದನ್ನೇ ದೋಚಿಕೊಂಡು ಹೋಗುವ ಕಳ್ಳನಂತೆ, ಆತ ಆ ನವರತ್ನ ರಾಶಿಯನ್ನೆತ್ತಿಕೊಂಡು ಓಟಕಿತ್ತಿದ........

ನವರತ್ನರಾಶಿಯಿಂದ ಅವನು ಕುಬೇರನಿಗೂ ಮರಿಮಿಗಿಲಾಗಿ ಬಾಳಲು ಸಾಧ್ಯವಾಯಿತು. ಲೋಕವೇ ಅವನನ್ನು ತನ್ನ ಒಡೆಯನೆಂದು ಮನ್ನಿಸಿತು. ಅವನೂ ಬಹು ಸಂತೃಪ್ತನಾಗಿದ್ದ. ಆದರೆ ಪ್ರತಿಕ್ಷಣ ಅವನು ಅಲೌಕಿಕವಾದ ಯಾವುದೋ ತೃಪ್ತಿಯ ಹಾದಿ ಕಾಯುತ್ತ ಕುಳಿತಿದ್ದ. ಅಮೃತವು ಕರುಣಿಸುವ ಅಜರಾಮರತ್ವವನ್ನೂ ಆತ ನಂಬುತ್ತಿದ್ದ. ಆದರೆ ಎಲ್ಲರಂತೆ ತಾನೂ ಮುಪ್ಪಿನ ಅಧೀನನಾಗುತ್ತ ಹೋಗುವುದನ್ನು ನೋಡಿ, ಆತ ಅಮೃತದಲ್ಲಿ ಅಡಗಿರುವ ತತ್ತ್ವವನ್ನೇ ಶಂಕಿಸಿದ. ಅಂದರೂ ದೇವತೆಗಳ ಸಮುದ್ರಮಂಥನದ ಮೇಲೆ, ಅಮೃತದ ಅಜರಾಮರತ್ವದ ಮೇಲೆ ಇರುವ ನಂಬುಗೆಯನ್ನು ಆತ ಸುಲಭವಾಗಿ ಬಿಟ್ಟುಕೊಡುವಂತಿರಲಿಲ್ಲ ........

ದಿನಗಳೆದಂತೆ ತಾನು ಪಡೆದ ಇಷ್ಟಾರ್ಥದ ಮೇಲೇ ಆತ ಅನುಮಾನ ಪಟ್ಟ: ಅದು ಅಮೃತವೇ ಇರದಿರಬಹುದು ತಾನೇನೊ ಈ ತನಕ ಕುಬೇರನಿಗಿಂತ ಧನಾಢ್ಯನಾಗಿ ಬಾಳುವುದೇನೋ ಸಾಧಿಸಿತು; ಆದರೆ ಅಮೃತ ಕರುಣಿಸುವ ಆ ಸ್ವರ್ಗೀಯ ಸಂತೃಪ್ತಿಯಿಲ್ಲ, ಆ ಚಿರಂಜೀವಿತ್ವವಿಲ್ಲ–ಎಂದ ಮೇಲೆ, ನಾನು ಅಮೃತವನ್ನೇ ಪಡೆಯಲಿಲ್ಲ. ಅದು ತನ್ನ ಹಾದಿಯಲ್ಲಿತ್ತು ಆದರೆ ತೀರ ಲೋಭಿಯಂತೆ ಅರ್ಧ–ದಲ್ಲೇ ಸಿಕ್ಕಿದುದನ್ನು ದೋಚಿಕೊಂಡು ಬಂದು ಸರ್ವಾಪರಾಧ ಮಾಡಿದೆ. ಕಾರ್ಯಸಿದ್ಧಿಯ ಮಾರ್ಗದಲ್ಲಿಯ ಕ್ಷುಲ್ಲಕ ಆಮಿಷಗಳಿಗೇ ಬಲಿಬಿದ್ದೆ....– ಆತ ಎಲ್ಲವನ್ನೂ ಗ್ರಹಿಸಿದ.

ಇನ್ನೂ ಆತನಲ್ಲಿ ಬಲವಿತ್ತು; ಆಕಾಂಕ್ಷೆಯಿತ್ತು. ತಿರುಗಿ ಆತ ಸಮುದ್ರಮಂಥನಕ್ಕಾಗಿ ಧಾವಿಸಿದ ಆದರೆ ಅಲ್ಲಿ ಎಲ್ಲವೂ ಬರಿದಾಗಿತ್ತು. ಯಾರೋ ಎಲ್ಲ ಅಮೃತವನ್ನು ಆಗಲೇ ದೋಚಿಕೊಂಡು ಹೋಗಿಬಿಟ್ಟಿದ್ದರು!

---

(೩೮೪ನೆಯ ಪುಟದಿಂದ ಮುಂದೆ ಸಾಗಿದ್ದು)

ಬಂದೀನಿ ಆದರ ಅವರ ಕರಾರು ಬಹಳ ಅವೆ; ನೀವು ಒಪ್ಪತೀರೋ ಇಲ್ಲೋ ?

ನಾರಾಯಣರಾಯ:–ಎಷ್ಟೇ ಇರಲಿ ಮಹಾರಾಯತಿ! ಒಪ್ಪಿಕೋತೀನಿ ಹೇಳು.

ಲಕ್ಷ್ಮೀಬಾಯಿ:—ಮೊದಲನೆಯದು ನೀವು ನನ್ನ ಮನೆಗೆಲಸಕ್ಕೆ ಸಹಾಯಮಾಡಬೇಕು. ಎರಡನೆಯದು....ಕ್ಲಬ್ಬಿನಲ್ಲಿ ಇಸ್ಪೀಟಾಡೋದು ಬಿಟ್ಟುಕೊಟ್ಟು, ಹೆಂಡತಿ–ಮಕ್ಕಳನ್ನು ಸಿನೀಮಾಕ್ಕೋ ವಾಕಿಂಗಿಗೊ, ಗೆಳೆಯರ ಮನೆಗಳಿಗೊ ಕರೆದುಕೊಂಡು ಹೋಗಬೇಕು. ಮೂರನೆಯದು ನಮ್ಮಪ್ಪನ ಕಡಿಂದs ನೀವು ಕಸಿದುಕೊಂಡ ವರದಕ್ಷಿಣೆಯಲ್ಲಿ ಅರ್ಧದಷ್ಟಾದರೂ ಅವನಿಗೆ ವಾಪಸ್ ಮಾಡ್ಬೇಕು! ಯಾಕೆ? ಮಾತಾಡೋದೇ ಇಲ್ಲಲ್ಲ ?

ನಾರಾಯಣರಾಯ:—ಅಲ್ಲs ! ಇವೆಲ್ಲಾ ನಿನ್ನ ಕರಾರೇ ಇದ್ಹಾಂಗ ಕಾಣತಾವಲ್ಲ !

ಲಕ್ಷ್ಮೀಬಾಯಿ:—ನನ್ನವಿರಲಿ ಮತ್ತೊಬ್ಬರವಿರಲಿ; ನಿಮಗ ಒಪ್ಪಿಗೆ ಅದನೋ ಇಲ್ಲೋ, ಅದನ್ನು ಹೇಳಿರಿ!

ನಾರಾಯಣರಾಯ:—(ಅವಸರದಿಂದ) ಒಪ್ಪಿಗೆ. ಒಪ್ಪಿಗೆ.

ಲಕ್ಷ್ಮೀಬಾಯಿ:—ಕಾಗದಕ್ಕೆ ಸಹೀ ಹಾಕಬೇಕಾಗ್ತದ ಮತ್ತ !

ನಾರಾಯಣರಾಯ:—ಸಹೀ ಹಾಕತೀನಿ ಅಷ್ಟೇ ಅಲ್ಲ; ಬೇಕಾದರ ಆ ಸಹೀ ಹಾಕೋ ಬೆರಳುಗಳನ್ನೆಲ್ಲಾ ಕತ್ತರಿಸಿ Present ಮಾಡಿಬಿಡ್ತೀನಿ.... ಆ ನಿಮ್ಮ ಮಾಯಾವಿನಿಗೆ; ಅಲ್ಲ, ಮೋಹಿನಿಗೆ–ಗುರುದಕ್ಷಿಣೆಯಂತ–ನಡೆ–ಲಗು ನಡೆ!

ಲಕ್ಷ್ಮೀಬಾಯಿ:—ಕೂಸಿನ್ನ ಎತ್ತಿಕೊಂಡು ಬನ್ನಿರಿ ಹಾಗಾದರೆ ಹೋಗೋಣ

(ನಾರಾಯಣರಾಯರು 'ಆ' ಎಂದು ಬೆಚ್ಚಿ ಬೀಳುವಾಗ ನಾಟಕ ಮುಗಿಯುವುದು.)

# ಜನಪದ ಜೀವನ

## ( ಪುಸ್ತಕವಿಮರ್ಶೆ )*

**ಶ್ರೀ ಮಿರ್ಜಿ ಅಣ್ಣಾರಾಯರು, ಸೇಡಬಾಳ**

ಸಾಹಿತ್ಯವು ಜೀವನಕ್ಕೊಂದು ಕನ್ನಡಿ. ಈ ಕನ್ನಡಿಯಲ್ಲಿ ಜೀವನವು ಸುಂದರವಾಗಿ ಕಾಣುವುದು. ಮೇಲಾಗಿ ಸ್ವಚ್ಛದರಲ್ಲಿ ಜನಪದಜೀವನದ ಪೂರ್ಣಪ್ರಜ್ಞೆಯನ್ನು ಒದಗಿಸುವುದು; ರಸಾತ್ಮಕವಾಗಿ ಪ್ರಕಟಿಸುವುದು. ಆದರಿಂದ ಸಾಹಿತ್ಯವು ಜೀವನದ ಕೇವಲ ಪ್ರತಿಬಿಂಬವೆನಿಸದೆ ಪ್ರತಿಸೃಷ್ಟಿಯೆನಿಸುವುದು. ಈ ಸೃಷ್ಟಿ ಮಾನವ-ಜೀವನದ ಒಂದು ಅಪೌರುಷ್ಯ ಸಿಧಿ. ಪರಂಪರಾಗತವಾಗಿ ಒದಗುವ ಜನತೆಗೆ ಸಂಪತ್ತು; ಸಂಸ್ಕೃತಿಯ ಸೆಲೆಗೊಂದು ಪ್ರಕೃತಿ.

ಮಾನವನು ಸಾಹಿತ್ಯಾವಲೋಕನದಿಂದ ತನ್ನ ನಾಡಿನ ಸಂಸ್ಕೃತಿಯ ಸಂಪತ್ತನ್ನು ಅನಾಯಾಸವಾಗಿ ಸೂರೆಗೊಳ್ಳುವನು. ಹಾಗೆ ಸಾಹಿತ್ಯವು ವಿವಿಧಕಾಲಗಳ ಜೀವನಧರ್ಮಗಳಿಗೆಲ್ಲ ಸುಸಂಗತಿಯನ್ನು ಒದಗಿಸುವುದು; ಒಂದು ಪರಂಪರೆಯನ್ನು ರೂಪಿಸುವುದು. ಅದಕ್ಕೆ ಸಾಹಿತಿಯ ಮನೋಧರ್ಮವೇ ಕಾರಣವಾಗಿರುತ್ತದೆ. ಸಾಹಿತಿಯ ನಿಡುನೋಟವು ಸೂಕ್ಷ್ಮಗ್ರಾಹಿಯೂ ಸತ್ಯಸ್ಪರ್ಶಿಯೂ ಸಾಕಲ್ಯವೂ ಆಗಿರುವುದಲ್ಲದೆ, ಭೂತ-ಭವಿಷ್ಯತ್-ವರ್ತಮಾನಗಳಲ್ಲಿಯ ಕಾರ್ಯ—ಕಾರಣಪರಂಪರೆಯನ್ನು ಗುರುತಿಸುವುದು; ಜೀವನ-ನಿರ್ಮಾಣದ ಸತ್ಯವನ್ನು ಕಂಡು ಸಾರುವುದು. ಈ ಮಹತ್ ಕಾರ್ಯಕ್ಕಾಗಿ, ಸಾಹಿತಿಯು ತಾನು ಜೀವಿಸುತ್ತಿರುವ ಕಾಲದ ಪ್ರತಿನಿಧಿಯಾಗಿರುವ ಜೊತೆಗೆ, ಪೂರ್ವಕಾಲವು ತನ್ನ ವರ್ತಮಾನ ಕಾಲವನ್ನು ಹೇಗೆ ರೂಪಿಸಿತು? ಅಲ್ಲಿಯ ಸೌಂದರ್ಯವೇನು ? ಇಲ್ಲಿಯ ವಿಕೃತಿ ಏನು? ಅದಕ್ಕಿರುವ ಕಾರಣಗಳೇನು ? ಇವೆಲ್ಲ ಸೇರಿ ನಾಳೆಯ ಜೀವನವನ್ನು ರೂಪಿಸುವ ರೀತಿಯಾವುದು ? ಅವುಗಳಿಗೆ ತಾನು ಕೊಡಲಿರುವ ಸುದರ್ಶನ ಎಂಥದು ?—ಇವೇ ಮೊದಲಾದ ಪ್ರಶ್ನೆಗಳನ್ನು ವಿಚಾರಿಸಿ, ತನ್ನ ಕೃತಿಗಳಲ್ಲಿ ಉತ್ತರಿಸುವನು, ಉದ್ಧರಿಸುವನು.

ಈ ಸಾಹಿತ್ಯ-ಸತ್ತ್ವದ ಒರೆಗಲ್ಲಿಗೆ ಇಟ್ಟು, ನಮ್ಮ ಹೊಸಗನ್ನಡ ಸಾಹಿತ್ಯನಿರ್ಮಿತಿಯನ್ನು ಅವಲೋಕಿಸುವುದು ಈಗ ಅತ್ಯವಶ್ಯವಾಗಿದೆ. ಈ ಕಾರ್ಯದಲ್ಲಿಯ ಒಂದು ಸಣ್ಣ ಪ್ರಯತ್ನವೆಂದು ಇಲ್ಲಿ ಶ್ರೀ. 'ಆನಂದಕಂದ' ರ 'ಜನಪದ ಜೀವನ' ವನ್ನು ನಿರೀಕ್ಷಿಸಲು ಯತ್ನಿಸೋಣ.

ಈ ವೈಜ್ಞಾನಿಕಯುಗದ ಅವಸರದ ಜೀವನದಲ್ಲಿ, ದೇಶ-ವಿದೇಶಗಳ ಪರಸ್ಪರ ಕೊಡು—ಕೊಳ್ಳುವ ಸಂಸ್ಕೃತಿಯ ವಿನಿಯೋಗದ ಸಂದರ್ಭದಲ್ಲಿ, ಒಂದು ತಲೆಮಾರಿನಲ್ಲಿಯವರಲ್ಲಿಯೇ ತೀರ ಭಿನ್ನಾಭಿಪ್ರಾಯಗಳೂ ವಿವಿಧ ರುಚಿಭೇದಗಳೂ ಕಂಡುಬರುತ್ತಿರುವುದು ಸ್ವಾಭಾವಿಕವಾಗಿದೆ. ಹಿಂದಿನ ಕಾಲದ ಶಾಂತ, ಸ್ಥಿರಜೀವನವು ಇಂದು ಕಾಣದಂತಾಗಿ, ಅಶಾಂತಿ-ಅಸ್ಥಿರತೆಗಳೇ ಎಲ್ಲೆಡೆಗೂ ಗೋಚರಿಸುತ್ತಿವೆ. ಒಂದು ಸ್ವಲ್ಪ ತಡೆದು ನಿಂತು, ಸ್ವಲ್ಪ ನಿಧಾನವಾಗಿ ವಿಚಾರಿಸುವ ಅವಕಾಶವೂ ನಮಗೆ ಇಲ್ಲವಾಗಿದೆ. ಎಲ್ಲದರಲ್ಲೂ ವಿದ್ಯುತ್ತಿನ ವೇಗವನ್ನೂ ಚುರುಕನ್ನೂ ಬಯಸುತ್ತಿದೆ ಜನಾಂಗ. ಈ ಬಯಕೆಯನ್ನೇನೋ ಈ ಕಾಲದ ಸಾಹಿತಿಯಾದವನು ಗುರುತಿಸಬಹುದು; ಅದನ್ನು ಪೋಷಿಸಿಯೇ ತೀರಬೇಕೆಂಬ ಬಂಧನವನ್ನು ಅವನ ಮೇಲೆ ಯಾರೂ ಹಾಕಬಾರದು. ಯಾಕೆಂದರೆ ಅವರವರ ಜೀವನಪ್ರಜ್ಞೆಯು ಅವರ ಸಾಹಿತ್ಯಕೃತಿಗಳಿಗೆ ಪ್ರಮಾಣವಾಗಿರುವುದು. ಅದಕ್ಕೆ ಅವನು 'ಪ್ರಾಮಾಣಿಕನಾಗಿರುವನು. ಅದಿಲ್ಲದವನ ಕೃತಿ, ವಿಕೃತಿ. ಇದನ್ನು ಮೊದಲು ಸಾಹಿತಿ-ವಿಮರ್ಶಕ ಅರಿತುಕೊಳ್ಳಬೇಕು, ಅಂತು ವರ್ತಿಸಬೇಕು.

ಇಂಥ ಹಾರಯಿಕೆಯನ್ನು ಇಟ್ಟುಕೊಂಡು, ಆನಂದಕಂದರು ಈ 'ಜನಪದ ಜೀವನ'ದ ಕಥೆಗಳನ್ನು ನಿರ್ಮಿಸಲು ಹೊರಟಿದ್ದಾರೆ. ಈ ಮಾತಿಗೆ ಅವರ ಮೊದಲ ನುಡಿಯಲ್ಲಿಯ "ಸಾಹಿತ್ಯವು ಯಾವಾಗಲೂ ಜೀವನದ ಸೌಂದರ್ಯವನ್ನೇ ಚಿತ್ರಿಸಬೇಕೆಂಬುದು ನನ್ನ ಹಾರಯಿಕೆ. ವಿಕೃತಿಯ ಚಿತ್ರ ಮನುಷ್ಯನ ಮನಸ್ಸನ್ನು ಇನ್ನಿಷ್ಟು ವಿಕೃತಗೊಳಿಸಬಹುದೇ ಹೊರತು, ಸಂಸ್ಕೃತಿಯ ಆನಂದವನ್ನು ಉಂಟು ಮಾಡಲಾರದು. ಜೀವನವನ್ನು ತಿದ್ದಿಕೊಳ್ಳಬೇಕಾದವನ ಕಣ್ಣಮುಂದೆ ಆದರ್ಶ ಸೌಂದರ್ಯದ ಚಿತ್ರಗಳಿರಬೇಕಲ್ಲದೆ, ವಾಸ್ತವ ವಿಕಾರಗಳ ಪ್ರತಿಬಿಂಬಗಳು ಇರಬಾರದು....ಈ ಮಾತು ಸಾಕ್ಷ್ಯವಾಗಿದೆ. ಅಲ್ಲದೆ ಈ ದೃಷ್ಟಿಕೋಣವೊಂದನ್ನು ಓದುಗರಿಗೆ ಅವರು ಸೂಚಿಸಿದ್ದಾರೆ. ಇದನ್ನು ಮೊದಲು ವಿಮರ್ಶೆಯಲ್ಲಿ ವಿಮರ್ಶಕ ಮನ್ನಿಸಬೇಕು.

ವಿಮರ್ಶನಕಾರ್ಯವು, ತನಗೆ ಬೇಕಾದುವೆಲ್ಲ ಕೃತಿಯಲ್ಲಿ ಇದೆಯೆ ? ತನ್ನ ರುಚಿಯನ್ನು ಇದು ಪೋಷಿಸುತ್ತಿದೆಯೆ ? ಎಂಬ ದೃಷ್ಟಿಯಿಂದ ಸಮಾಲೋಚಿಸುವುದಿರುವುದಿಲ್ಲ; ಸಾಹಿತಿಯು ತಾನಿಟ್ಟುಕೊಂಡ ಮಾರ್ಗದಲ್ಲಿ ಯಶಸ್ವಿಯಾಗಿ ಮುನ್ನಡೆದಿದ್ದಾನೆಯೋ ಇಲ್ಲವೋ ? ಅದರಲ್ಲಿ ಅವನ ಸೌಂದರ್ಯನಿರ್ಮಿತಿ, ರಸಸೃಷ್ಟಿಗೆ ಪೋಷಕವಾಗಿರುವುದೆಂತು, ಎಲ್ಲಿ ಆಗಲಿಲ್ಲ-?ಎಂಬವುಗಳನ್ನು ಸಹೃದಯತೆಯಿಂದ ಅವಲೋಕಿಸಿ, ಸಾಹಿತ್ಯದ ಸವಿಯನ್ನು ಜನತೆಯು ಅನುಭವಿಸಲು ಮಾರ್ಗದರ್ಶನ ಮಾಡುವುದಾಗಿರುತ್ತದೆ. ಸಾಹಿತಿಯ ಆತ್ಮನಿರೀಕ್ಷಣೆಗೂ ಮುನ್ನಡೆಗೂ ವಿಮರ್ಶಕ ಸಹಾಯಕನಾಗಬೇಕಾಗಿರುವುದೂ ಅವನ ಕರ್ತವ್ಯದ ಇನ್ನೊಂದಂಗವಾಗಿದೆ.

'ಸಾಹಿತ್ಯವು ಆದರ್ಶ-ಸೌಂದರ್ಯಗಳ ಚಿತ್ರವಾಗಿರಬೇಕು' ಎಂಬ ಸೂತ್ರವನ್ನು ಇಟ್ಟುಕೊಂಡಾಗ, ಸಾಹಿತ್ಯದಲ್ಲಿ ವಾಸ್ತವಿಕತೆಯನ್ನೇ ಅಲ್ಲಗಳೆದರಲ್ಲ !—ಎಂದು ತಟ್ಟನೆ ಉದ್ಗಾರ ತೆಗೆದು ಒಂದು ನಿರ್ಣಯಕ್ಕೆ ಬರಬೇಕಾಗಿಲ್ಲ ವಿಮರ್ಶಕ. ಆದರ್ಶ ಸೌಂದರ್ಯಗಳನ್ನು ಜನತೆಯ ಎದುರಿಗೆ ಇಡಲು ಹಂಬಲಿಸುವ ಲೇಖಕರು, ಯಾವುದು ಆದರ್ಶವಲ್ಲ- ಯಾವುದು ಸುಂದರವಲ್ಲ-ಎಂಬುದನ್ನು ಸೂಚಿಸದೆ, ಕೃತಿ ನಿರ್ಮಾಣವಾಗುವಂತಿಲ್ಲ. ಆದರೆ ಅವರು ಒಂದನ್ನು ಇಡುವರು ಇನ್ನೊಂದನ್ನು ಸೂಚಿಸುವರೆಂಬುದನ್ನು ನಾವು ಮರೆಯಕೂಡದು

* ಶ್ರೀ ಬೆಟಗೇರಿ ಕೃಷ್ಣಶರ್ಮರ ಕಥಾಸಂಗ್ರಹದ ವಿಮರ್ಶೆ. ಪ್ರಕಾಶಕರು: ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿ. ಧಾರವಾಡ. ಪ್ರಥಮಪುಷ್ಪ ಕ್ರಯ ೧-೮

# ಶಿಶುದೇವತೆ

[ ‘ಆಸ್ಕರ್ ವೈಲ್ಡ್’ನ ಕತೆ]

**ಶ್ರೀ. ಬಳ್ಕೂರು. ಸುಬ್ರಾಯ ಅಡಿಗ, ಗಂಗೊಳ್ಳಿ.**

ಶಾಲೆಯಿಂದ ಹಿಂದಿರುಗುವಾಗ ನಿತ್ಯವೂ ಹುಡುಗರು ಮಾಟಗಾರನ ತೋಟಕ್ಕೆ ಹೋಗಿ ಆಡುತ್ತಿದ್ದರು.

ಬಹು ಸುಂದರವಾದ ಉದ್ಯಾನವದು. ಜಮಖಾನೆಯಂತೆ ಹುಲ್ಲು ಹಾಸಿದೆ. ಹುಲ್ಲಿನಲ್ಲಿ ಅಲ್ಲಲ್ಲಿ ತಾರೆಗಳಂತೆ ಬಣ್ಣಬಣ್ಣದ ಹೂಗಳು ಅರಳಿವೆ; ಅಲ್ಲದೆ ವಸಂತಕಾಲದಲ್ಲಿ ಮುತ್ತಿನ ಚಿಗುರುಗಳನ್ನೂ ಹೇಮಂತದಲ್ಲಿ ರಸಭರಿತ ಫಲಗಳನ್ನೂ ಕೊಡುವ ಹನ್ನೆರಡು ಮರಗಳಿದ್ದುವು. ಕೊಂಬೆಗಳ ಮೇಲೆ ಕುಳಿತ ಹಕ್ಕಿಗಳ ಹಾಡನ್ನು ಕೇಳಿ ಮಕ್ಕಳು ತಮ್ಮ ಆಟವನ್ನೂ ಮರೆತುಬಿಡುತ್ತಿದ್ದರು.

ಒಂದು ದಿನ ಮಾಟಗಾರನು ಪರದೇಶದಿಂದ ತನ್ನೂರಿಗೆ ಮರಳಿದ. ಅವನು ಪರದೇಶದಲ್ಲಿ ತನ್ನ ಗೆಳೆಯನನ್ನು ನೋಡಹೋಗಿ ಏಳು ವರ್ಷ ಅಲ್ಲೇ ಕಳೆದಿದ್ದ. ಗೆಳೆಯನೊಡನೆ ಸ್ವಲ್ಪವೇ ಮಾತುಕತೆ ನಡೆಸುತ್ತ ನಡೆಸುತ್ತ ಏಳು ವರ್ಷಗಳು ಸಂದುಹೋಗಿದ್ದುವು. ಅವನು ಮರಳುವಾಗ ತೋಟದಲ್ಲಿ ಮಕ್ಕಳ ಗದ್ದಲವನ್ನು ಕೇಳಿದ.

‘ ಏ ! ನೀವಿಲ್ಲಿ ಏನುಮಾಡುತ್ತಿದ್ದೀರಿ ’— ಗರ್ಜಿಸುತ್ತಾ ಅವನು ಕೇಳಿದ. ಹುಡುಗರೆಲ್ಲರೂ ಹೆದರಿ ಓಡಿಹೋದರು.

‘ನನ್ನ ಈ ತೋಟ ನನಗೇ ಸೇರಿದುದು; ಇದರಮೇಲೆ ಬೇರಾರ ಅಧಿಕಾರವೂ ಇಲ್ಲ’— ಹೀಗೆ ಯೋಚಿಸಿ,-ಅವನು ಅದರ ಸುತ್ತಲೂ ಉತ್ತಮವಾದ ಒಂದು ಪ್ರಾಕಾರ ಹಾಕಿದ; ಮತ್ತು ಬಾಗಿಲಿನಲ್ಲೇ ‘ಸಾರ್ವಜನಿಕ ಹಾದಿಯಲ್ಲ’ ಎಂಬ ಬೋರ್ಡು ತಗಲಿಸಿದ.

ಈಗ ಬಡಪಾಯಿ ಹುಡುಗರಿಗೆ ಆಡಲು ಸ್ಥಳವೇ ಇದ್ದಿಲ್ಲ. ಅವರು ರಸ್ತೆಯ ಮೇಲೆ ಆಡತೊಡಗಿದರು. ಆದರೆ ರಸ್ತೆಯ ಮೊನಚು ಕಲ್ಲುಗಳಿಂದ ಪೆಟ್ಟಾದಾಗ, ಅವರೆಲ್ಲರೂ ಆ ಪ್ರಾಕಾರದ ಸುತ್ತಲೂ ತಿರುಗಾಡತೊಡಗಿದರು.

ವಸಂತಮಾಸ ಕಾಲಿಟ್ಟಿತು. ಎಲ್ಲ ಉದ್ಯಾನಗಳಲ್ಲಿ ಸಣ್ಣ ಸಣ್ಣ ಹಕ್ಕಿಗಳು ಚಿಲಿಪಿಲಿಗುಟ್ಟಲಾರಂಭಿಸಿದುವು. ಆದರೆ ಈ ಮಾಟಗಾರನ ತೋಟದಲ್ಲಿ ಈಗಲೂ ಚಳಿಗಾಲವು ತಾಂಡವಮಾಡುತ್ತಿತ್ತು. ಅದರಲ್ಲಿ ಮಕ್ಕಳ ಕಲರವವಿಲ್ಲದುದರಿಂದ ಹಕ್ಕಿಗಳೂ ಹಾಡಬಯಸುತ್ತಿರಲಿಲ್ಲ. ಮರಗಳು ಹೂಬಿಡುವುದನ್ನು ಮರೆತುಬಿಟ್ಟಿದ್ದುವು. ಒಮ್ಮೆ ಹೂವೊಂದು ಹುಲ್ಲಿನೊಳಗಿಂದ ತಲೆಯೆತ್ತಿ ಮೇಲಿಣಿಕಿತು; ಆದರೆ ಬಾಗಿಲಲ್ಲಿ ತೂಗಾಡುತ್ತಿದ್ದ ಬೋರ್ಡನ್ನು ಕಂಡು, ಇಬ್ಬನಿಯ ಕಣ್ಣೀರನ್ನು ಸುರಿಸುತ್ತ ಅದು ಮರಳಿ ನಿದ್ದೆಯಲ್ಲೊರಗಿತು. ಹಿಮ—ಮಂಜುಗಳು ಮಾತ್ರ ಹಿರಿ ಹಿರಿ ಹಿಗ್ಗುತ್ತಿದ್ದುವು. ‘ವಸಂತನು ಬಹುಶಃ ಈ ಉದ್ಯಾನ

---

(೩೮೬ ನೆಯ ಪುಟದಿಂದ ಮುಂದೆ ಸಾಗಿದ್ದು)

ಈ ಸೂಚನೆಯೆಂಬುದು ಅವರ ಸಾಹಿತ್ಯಕ್ಕೆ ವಾಸ್ತವಿಕತೆಯ ಸತ್ತ್ವವನ್ನು ಒದಗಿಸುವುದು. ಇಲ್ಲಿ ‘ಅರಳಿದ ಜೀವ’ದೊಳಗಿನ ಮಲಕಪ್ಪ, ಮಲಕಪ್ಪನ ತಂದೆಯ ಜೀವನ ಚಿತ್ರಗಳು ವಾಸ್ತವಜೀವನದ ವಿಕೃತಿಗಳನ್ನು ಮೂಡಿಸುತ್ತಿದ್ದರೆ, ಮೇಲಗಿರಿ ಸೆಟ್ಟರು-ಅಯ್ಯನವರ ಜೀವನಗಳು ಆದರ್ಶಜೀವನದ ಮಾದರಿಯನ್ನು ನಮ್ಮ ಮುಂದಿಡುತ್ತಿವೆ. ಇವರಂತೆಯೇ ‘ಹುಳು ಹತ್ತಿದ ಹಳ್ಳಿ’ಯ ಚೆನ್ನಪ್ಪ—ನೀಲಪ್ಪರು ಆಯಾ ಜೀವನ ಮುಖಗಳನ್ನು ಪ್ರತಿನಿಧಿಸುವರು. ‘ದೆವ್ವದ ಸಂಸಾರ’ವು ನಾಡಿನೊಳಗಿನ ಇಂದಿನ ಜೀವನದ ವಿಕಾರಮಯತೆಯನ್ನು ಅದರ ವಿವಿಧ ಸ್ವರೂಪದ ಹಿನ್ನೆಲೆಯೊಡನೆ ಒಂದು ಕಲಾತ್ಮಕ ರೀತಿಯಲ್ಲಿ ನಮ್ಮ ಮುಂದೆ ಇಡುವುದು. ‘ನೆತ್ತರ ಕೊಡುಗೆ’ಯ ಮಾರಿಗೊಂಡ ಮಾನವಜೀವನದ ವಿಕೃತಿಯನ್ನು ಸೂಚಿಸುತ್ತಿದ್ದರೆ ಮುತ್ತಣ್ಣನ ಸೇವೆ, ತ್ಯಾಗಗಳು ಜೀವನಾದರ್ಶವನ್ನು ನಮಗೆ ಒದಗಿಸುತ್ತವೆ. ‘ಮೂರನೆಯ ವರ್ಗದ ಪ್ರಯಾಣ’ವು ಇಂದಿನ ಥಳಕುಬೆಳಕಿನ ಪದವೀಧರರ ಜೀವನದ ವಾಸ್ತವಿಕ ವಿಕೃತಿಯ ತೆರೆಯ ಮೇಲೆ ಮಾನವಹೃದಯದ ಆದರ್ಶದ ಚಿತ್ರವನ್ನು ಇಟ್ಟು ತೋರಿಸುತ್ತದೆ. ‘ಬೀದಿಯ ಹಾಡುಗಾರರು’ ‘ನಂದನೂರಿನ ಜಾತ್ರೆ’ಗಳೂ ಕೂಡ ಕಲಾಭಿರುಚಿ ಎಂದರೇನು, ಅದಕ್ಕೂ ಸಹೃದಯತೆಯುಳ್ಳ ಸೇವೆಯ ಆವಶ್ಯಕತೆ ಎಷ್ಟಿದೆ, ಆ ಅಭಿರುಚಿ ವಿಕೃತಿಗೊಂಡರೆ—ವಿಕಾರವಶವಾದರೆ; ಏನಾಗುವುದು ಎಂಬ ಮಾತುಗಳನ್ನು ಬಿಡಿಸಿ ಹೇಳುವುವು. ಚಿಕ್ಕಪ್ಪನ ಸಹೃದಯತೆ, ಕಲೆಯ ಬಗ್ಗೆ ಇರುವ ತಾತ್ತ್ವಿಕ ವಿಚಾರಗಳು ಸೌಂದರ್ಯದ ಪ್ರತೀಕಗಳಾದರೆ, ಸೋಮಪ್ಪ ದೇಸಾಯರ ವಿಕಾರವು ಜೀವನದ ವಿಕೃತಿಯನ್ನು ಪ್ರತಿನಿಧಿಸುತ್ತಿದೆ.

ಸಾಹಿತ್ಯದಲ್ಲಿ ಜೀವನದ ಈ ಎರಡು ಮುಖಗಳನ್ನು ಚಿತ್ರಿಸುವುದರ ಜೊತೆಗೆ ಇನ್ನೊಂದು ಮಹತ್ತ್ವದ ಕಾರ್ಯವನ್ನು ಮಾಡಬೇಕಾಗಿರುತ್ತದೆ. ಸಾಮಾನ್ಯ ದೃಷ್ಟಿಗೆ ವಿಕೃತಜೀವನವೆಂದು ತೋರುತ್ತಿರುವುದರಲ್ಲಿಯೂ ನಿಜವಾದ ಸೌಂದರ್ಯದ ಹೃದಯ ಹೇಗೆ ಹುದುಗಿರುತ್ತದೆ—ಎಂಬುದನ್ನು ತೆರೆದು ತೋರಿಸುವುದು. ಇಂತಹ ಕುಶಲತೆಯನ್ನು ಸಹ ಇಲ್ಲಿಯ ಗಂಗಾಸಾನಿಯಂಥ ಪಾತ್ರನಿರ್ಮಿತಿಯಲ್ಲಿ ನಾವು ಕಾಣಬಹುದು. ಅದರಂತೆ ನಮ್ಮ ಹಳ್ಳಿಯ ಜೀವನದ ಸೌಂದರ್ಯ, ಸಾಹಿತ್ಯಿಕ ಅಭಿರುಚಿ, ಹಿಂದಿನ ಜೀವನದ ಸಮೃದ್ಧಿ, ಇಂದಿನ ಬಾಳಿನ ನೀರಸತೆಗಳನ್ನೆಲ್ಲ ಇಲ್ಲಿ ಸಮಯಕ್ಕೆ ತಕ್ಕಂತೆ, ತಕ್ಕಷ್ಟು, ಲೇಖಕರು ಚಿತ್ರಿಸಿದ್ದಾರೆ. ‘ಆನಂದಕಂದ’ರ ಕಥನಕಲೆ-ಭಾಷೆಗಳ ಬಗ್ಗೆ ಬೇರೆಯಾಗಿ ಇಲ್ಲಿ ವಿವರಿಸಬೇಕಿಲ್ಲ. ವಸ್ತುವಿಗೆ ಅಳವಡುವ ಕಥನತಂತ್ರ, ಭಾವವನ್ನು ರಸೋತ್ಪತ್ತಿಯಾಗುವಂತೆ ಮೂಡಿಸುವ ಶೈಲಿಗಳು—ಈ ಲೇಖಕರ ವೈಶಿಷ್ಟ್ಯಗಳಾಗಿವೆ.

ಜೀವನಸೌಂದರ್ಯ, ಅದನ್ನು ಚಿತ್ರಿಸಲು ಇಟ್ಟುಕೊಂಡ ಸಾಹಿತ್ಯಸೂತ್ರ, ಸೌಂದರ್ಯವನ್ನು ಮೀರಿ ವಿಕೃತಿಯೇ ತಾ ಮುಂದೆ ಎಂದು ತೋರಗೊಡದ ತೂಕ ಸಂಯಮಗಳಿಂದ ಈ ‘ಜನಪದ ಜೀವನ’ದ ಏಳು ಕತೆಗಳೂ ಸುಂದರವಾಗಿ ಮೂಡಿಬಂದಿವೆ. ಕನ್ನಡ ವಾಗ್ದೇವಿಗೆ ಇಂದ್ರಧನುಷ್ಯದ ಭಾಮಂಡಲದಂತೆ ಶೋಭಿಸುತ್ತಿವೆ.

ವನ್ನು ಮರೆತುಬಿಟ್ಟಿದ್ದಾನೆ. ನಾವಿನ್ನು ಒಂದು ವರ್ಷದ ವರೆಗೆ ನಿರಾತಂಕವಾಗಿ ಕಾಲಕಳೆಯಬಲ್ಲೆವು'–ಎಂಬುದೇ ಆ ಹಿಗ್ಗಿಗೆ ಕಾರಣವಾಗಿತ್ತು. ಅವು ಉತ್ತರ ಧ್ರುವದ ಕೊರೆಗಾಳಿಯನ್ನು ಆಮಂತ್ರಿಸಿದುವು. 'ಆಃ, ಎಷ್ಟು ಉತ್ತಮಸ್ಥಳವಿದು! ಇಲ್ಲಿ ಹಿಮಗಡ್ಡೆಗಳನ್ನೂ ಬರಿಸಿದರೆ ಎಷ್ಟು ಉತ್ತಮವಾದೀತು!' ಎಂದ ಗಾಳಿಯ ಮಾತನ್ನು ಅನುಮೋದಿಸಿ ಹಿಮಗಡ್ಡೆಯನ್ನೂ ಆಹ್ವಾನಿಸಲಾಯಿತು.

'ಇನ್ನೂ ವಸಂತ ಮಾಸವೇಕೆ ಬರಲಿಲ್ಲ?'—ಸ್ವಾರ್ಥೀ ಮಾಟಗಾರನು ಕಿಟಕಿಯಿಂದ ಹೊರಗಿಣಿಕಿ ನೋಡಿದ. 'ಋತುವೀಗ ಬದಲಾಗಬೇಕಿತ್ತು!

ಆದರೆ ವಸಂತ ಬರಲೂ ಇಲ್ಲ; ಗ್ರೀಷ್ಮವೂ ಕಾಲಿಡಲಿಲ್ಲ. ಹೇಮಂತದಲ್ಲಿ ಉದ್ಯಾನವೆಲ್ಲ ಸುವರ್ಣ ಪುಷ್ಪಗಳಿಂದ ಶೋಭಿಸುತ್ತಿದ್ದಾಗ ಮಾಟಗಾರನ ತೋಟದ ಮರಗಳು ಮಾತ್ರ ಬರಿದಾಗಿದ್ದುವು. 'ಅವನು ಮಹಾಸ್ವಾರ್ಥಿ; ಆದ್ದರಿಂದ ಅಲ್ಲಿ ಯಾವಾಗಲೂ ಚಳಿ, ಗಾಳಿ, ಮಂಜುಗಳು ತುಂಬಿರುತ್ತವೆ'—ಹೇಮಂತವೆಂದಿತು

ಒಂದು ದಿನ ಬೆಳಿಗ್ಗೆ ಮಾಟಗಾರನು ಎದ್ದಾಗ ಅವನಿಗೊಂದು ಮೋಹಕ ಸಂಗೀತವು ಕೇಳಿಬಂತು. ಅದರ ಸವಿಯನ್ನು ಕೇಳಿ 'ರಾಜನ ಚಾರಣರು ಹಾಡುತ್ತ ಹೋಗುತ್ತಿರಬೇಕೆ'ಂದು ಮಾಟಗಾರ ಊಹಿಸಿದ. ಆದರೆ ವಾಸ್ತವವಾಗಿ ಅವನ ಕಿಟಕಿಯ ಬಳಿ ಒಂದು ಕೊಂಬೆಯಮೇಲೆ ಕುಳಿತ ಹಕ್ಕಿಯೊಂದು ಹಾಡುತ್ತಿತ್ತು. ಪಕ್ಷಿಯ ಇಂಚರವನ್ನು ಕೇಳದೆ ತುಂಬಾ ದಿನಗಳಾಗಿದ್ದವು. ಅವನದನ್ನು ಸ್ವರ್ಗೀಯ ಸಂಗೀತವೆಂದು ಭಾವಿಸುತ್ತಿದ್ದ. ಆಸಮಯ ಮಂಜು ಕರಗಿತ್ತು ಆಕಾಶ ಸ್ವಚ್ಛವಾಗಿತ್ತು. ಬಿರುಗಾಳಿ ನಿದ್ದೆಹೋಗಿತ್ತು. ಮತ್ತು ಸುಗಂಧಲಹರಿಗಳು ಅವನನ್ನು ಆವರಿಸುತ್ತಿದ್ದವು 'ಓ! ವಸಂತ ಬಂದಿರಬೇಕೆಂದು ಕುಣಿಯುತ್ತ ಮಾಟಗಾರನು ಹಾಸಿಗೆಯಿಂದೆದ್ದು ಹೊರಗಿಣುಕತೊಡಗಿದ.

ಅವನೊಂದು ಆಶ್ಚರ್ಯಕರ ದೃಶ್ಯವನ್ನು ಕಂಡ—ಗೋಡೆಯ ಸಣ್ಣ ತೂತಿನೊಳಗಿಂದ ಮಕ್ಕಳೆಲ್ಲ ಒಳನುಗ್ಗಿದ್ದಾರೆ ಮತ್ತು ಮರಗಳ ಕೊಂಬೆಗಳಮೇಲೆ ಕುಳಿತಿದ್ದಾರೆ. ಮಕ್ಕಳನ್ನು ಸ್ವಾಗತಿಸುವುದಕ್ಕೆಂದು ಮರಗಳೆಲ್ಲ ಹೂಗಳಿಂದ ತುಂಬಿಹೋಗಿದ್ದವು; ಮತ್ತು ಹೂಗಳು ಎಲೆಗಳ ಮರೆಯಿಂದ ಇಣಿಕಿ ನಗುತ್ತಿದ್ದವು.

ಆದರೂ ಒಂದು ಮೂಲೆಯಲ್ಲಿ ಇನ್ನೂ ಶಿಶಿರಋತುವಿನ ಸಾಮ್ರಾಜ್ಯವಿತ್ತು. ಅಲ್ಲೊಂದು ಸಣ್ಣಮಗು ನಿಂತಿತ್ತು. ಅದು ಬಹಳ ಸಣ್ಣದಿದ್ದುದರಿಂದ ಕೊಂಬೆ ಅದರ ಕೈಗೆ ಎಟಕುತ್ತಿರಲಿಲ್ಲ. ಮರವು ಹಿಮದಿಂದ ಮುಚ್ಚಿ ಹೋಗಿತ್ತು ಮತ್ತು ಅದರ ಮೇಲೆ ಉತ್ತರದ ಗಾಳಿ ಬೀಸುತ್ತಿತ್ತು. 'ಮಗು; ಮೇಲೇರು' - ಎನ್ನುತ್ತಾ ಮರವು ತನ್ನ ಕೊಂಬೆಗಳನ್ನು ಬಾಗಿಸಿತು. ಆದರೆ ಆ ಮಗು ಬಹಳ ಕಿರಿದಾಗಿತ್ತು.

ಈದೃಶ್ಯವನ್ನು ನೋಡಿ ಮಾಟಗಾರನ ಹೃದಯ ಕರಗಿ ನೀರಾಯಿತು. 'ನಾನೆಷ್ಟು ಸ್ವಾರ್ಥಿಯಾಗಿದ್ದೆ! ಇದಕ್ಕಾಗಿಯೇ ಇದುವರೆಗೆ ನನ್ನ ತೋಟದಲ್ಲಿ ವಸಂತಕಾಲವು ಬರಲಿಲ್ಲವೆ? ನಾನೀ ಮಗುವನ್ನು ಮೇಲೇರಿಸುತ್ತೇನೆ; ಮತ್ತು ಈ ಅಡ್ಡಗೋಡೆಯನ್ನು ಕೆಡಹಾಕುತ್ತೇನೆ. ಆಗ ನನ್ನ ಈ ಉಪವನವು ಎಂದೆಂದಿಗೂ ಮಕ್ಕಳ ಕ್ರೀಡಾರಂಗವಾಗಿ ಮೆರೆಯುವುದು.'

ಅವನು ಕೆಳಗಿಳಿದು ಬಾಗಿಲು ತೆರೆದು ಉದ್ಯಾನಕ್ಕೋಡಿದ ಮಕ್ಕಳು ಅವನನ್ನು ಕಂಡು ಭಯದಿಂದ ಓಡಿಹೋದವು. ಕೂಡಲೇ ಉದ್ಯಾನದಲ್ಲಿ ವಸಂತ ಮಾಯವಾಗಿ ಚಳಿಗಾಲ ಕಾಲಿಟ್ಟಿತು. ಆದರೆ ಆ ಕಿರುಹುಡುಗನ ಕಂಗಳಲ್ಲಿ ನೀರು ತುಂಬಿದುದರಿಂದ ಮಾಟಗಾರನ ಬರುವಿನ ಅರಿವು ಅವನಿಗಾಗಿರಲಿಲ್ಲ. ಮಾಟಗಾರನು ಮಾತಾಡದೆ ಹಿಂದಿನಿಂದ ಹೋಗಿ ಆ ಮಗುವನ್ನೆತ್ತಿ ಮರದ ಮೇಲೆ ಕುಳ್ಳಿರಿಸಿದ. ಮರದಲ್ಲಿ ಚಿಗುರುಗಳು ಮೂಡಿದವು. ಹಕ್ಕಿಗಳು ಹಾರಿಬಂದು ಹಾಡತೊಡಗಿದುವು. ಆ ಕಿರುಬಾಲನು ತನ್ನ ಕೋಮಲ ಭುಜಗಳನ್ನು ಚಾಚಿ ಆ ಮಾಟಗಾರನನ್ನು ಚುಂಬಿಸಿದ ಇತರ ಹುಡುಗರೂ ಇದನ್ನು ನೋಡಿದರು. ಅವರಿಗೆ ಮಾಟಗಾರನ ನಿಷ್ಠುರತನವು ಮಾಯವಾಗಿದೆಯೆಂದು ತಿಳಿದಾಗ, ಅವರೂ ಹಿಂದಿರುಗಿ ಬಂದರು; ಮತ್ತು ಅವರೊಟ್ಟಿಗೆ ಮಧುಮಾಸವೂ ಮರುಳಿತು 'ಈ ತೋಟವಿನ್ನು ನಿಮ್ಮದು.' ಹೀಗೆಂದು ಮಾಟಗಾರನು ಆ ಗೋಡೆಯನ್ನು ಕೆಡೆದುರುಳಿಸಿದ.

ಹಗಲಿಡಿ ಹುಡುಗರು ಆಡುತ್ತಿದ್ದು ಸಂಜೆಯಾಗುತ್ತಲೇ ಆ ಮಾಟಗಾರನನ್ನು ಬೀಳ್ಕೊಳ್ಳಲು ಬಂದರು. 'ನಾನು ಮರವೇರಿಸಿದ್ದ ಆ ಕಿರುಬಾಲನೆಲ್ಲಿ?'– ಮಾಟಗಾರನು ಪ್ರಶ್ನಿಸಿದ.

'ನಾವರಿಯೆವು; ಅವನಿಂದು ಮೊದಲಬಾರಿ ಇಲ್ಲಿಗೆ ಬಂದಿದ್ದ'– ಅವರೆಂದರು. ಮಾಟಗಾರನು ತುಂಬಾ ದುಃಖಿತನಾದ.

ದಿನಾಲೂ ಆ ಹುಡುಗರು ಶಾಲೆ ಬಿಟ್ಟೊಡನೆ ಮಾಟಗಾರನೊಟ್ಟಿಗೆ ಆಡುತ್ತಿದ್ದರು. ಆದರೆ ಆ ಸಣ್ಣ ಹುಡುಗ ಮತ್ತೆಂದೂ ಕಾಣಸಿಗಲಿಲ್ಲ. ಅವನು ಎಲ್ಲ ಮಕ್ಕಳನ್ನೂ ಬಯಸುತ್ತಿದ್ದ. ಆದರೆ ಆ ಕಿರುಬಾಲನನ್ನು ಅತಿಯಾಗಿ ಪ್ರೀತಿಸುತ್ತಿದ್ದ.

ಎಷ್ಟೋ ವರ್ಷಗಳುರುಳಿದವು. ಮಾಟಗಾರನು ಮುದುಕನಾದ. ಈಗ ಅವನು ಒಂದು ಆರಾಮ ಕುರ್ಚಿಯಲ್ಲಿ ಕುಳಿತು ಮಕ್ಕಳಾಟವನ್ನು ನೋಡುತ್ತಿದ್ದ. 'ನನ್ನ ತೋಟದಲ್ಲಿ ಎಷ್ಟೋ ಹೂಗಳಿದ್ದರೂ ಈ ಜೀವಂತ ಪುಷ್ಪಗಳು ನನಗೆ ತುಂಬಾ ಪ್ರಿಯವೆನಿಸುತ್ತಿವೆ'–ಅವನೆನ್ನುವನು.

ಚಳಿಗಾಲದೊಂದು ಬೆಳಗಿನ ವೇಳೆ ಅವನು ಕಿಟಕಿಯಿಂದ ಹೊರಗಿಣಿಕಿದ ವಿಚಿತ್ರದೃಶ್ಯವನ್ನು ಕಂಡು ಅವನು ಬೆರಗಾಗಿಬಿಟ್ಟ ದೂರದ ಮೂಲೆಯೊಂದರಲ್ಲಿ ಮರವೊಂದು ಬಿಳಿಹೂಗಳಿಂದ ಮುಚ್ಚಿ ಹೋಗಿತ್ತು. ಅದರ ಚಿನ್ನದ ಗೊಂಬೆಗಳಿಂದ ಬೆಳ್ಳಿಯ ಹೂಗಳು ತೂಗಾಡುತ್ತಿದ್ದವು. ಮತ್ತು ಅದರ ಕೆಳಗೆ ತಾನು ಎಂದೆಂದೂ ಅಧಿಕವಾಗಿ ಪ್ರೀತಿಸುತ್ತಿದ್ದ ಆ ಕಿರುಬಾಲಕನು ನಿಂತುಕೊಂಡಿದ್ದ.

ಮಾಟಗಾರನು ಸಂತೋಷದಿಂದ ಮತ್ತನಾಗಿ ಆ ಮಗುವಿನತ್ತ ಓಡಿದ. ಆದರೆ ಹತ್ತಿರ ಹೋದೊಡನೆಯೇ ಸಿಟ್ಟಿನಿಂದ ಒದರಿಬಿಟ್ಟ....

'ನಿನ್ನನ್ಯಾರು ಈ ರೀತಿ ಗಾಯಗೊಳಿಸಿದವರು?'

ಏಕೆಂದರೆ ಮಗುವಿನ ಕೈಕಾಲುಗಳಲ್ಲಿ ಕ್ರಾಸಿನ ಕೀಲುಗಳು ಜಡಿದ ಗುರುತುಗಳಿದ್ದವು.

'ಯಾರೀ ದುಃಸಾಹಸವನ್ನು ಮಾಡಿದವರು? ಹೇಳು, ನಾನೀಗಲೇ ಅವರಿಗೆ ತಕ್ಕ ಬುದ್ಧಿಗಲಿಸುತ್ತೇನೆ.'—ಮಾಟಗಾರನೆಂದ.

'ಅಲ್ಲ; ಇವು ಪ್ರೇಮದ ಗಾಳಿಗಳು!'

ಮಾಟಗಾರ ಸ್ತಂಭಿತನಾದ. 'ಯಾರು ನೀನು?'–ಭಯಭರಿತ ಭಕ್ತಿಯಿಂದ ತಲೆ ತಗ್ಗಿಸಿ ಅವನು ಕೇಳಿದ.

'ನಾನು ಹಿಂದೊಮ್ಮೆ ನಿನ್ನ ತೋಟದಲ್ಲಿ ಆಡಿದ್ದೆ. ಈಗ ನೀನು ಸ್ವರ್ಗವೆಂದು ಕರೆಯಲ್ಪಡುವ ನನ್ನ ತೋಟದಲ್ಲಿ ಆಡಲು ಬಾ'—ಮಗು ನಕ್ಕು ಹೇಳಿತು.

ಸಂಜೆ ಹುಡುಗರು ಆಡಲೆಂದು ಬಂದಾಗ ಮುದಿ ಮಾಟಗಾರನು ಆ ಮರದ ಕೆಳಗೆ ಬಿಳಿಹೂಗಳ ಒಟ್ಟಿಯನ್ನು ಹೊದೆದು ಅನಂತ ನಿದ್ರೆಯಲ್ಲಿ ಮಲಗಿರುವುದನ್ನು ಕಂಡರು.

ಜಯಂತಿ

# ದುರ್ಯೋಧನನು ಗೆದ್ದಿದ್ದರೆ!

( ಲಲಿತಪ್ರಬಂಧ )

ಶ್ರೀ. ಗೋವರ್ಧನಾಚಾರ್ಯ ಗಲಗಲಿ, ಎಂ. ಎ., ಬಿ. ಟಿ. ಧಾರವಾಡ

卐

**ಸಾಹಿತ್ಯಿಕರದೊಂದು ವಿಶಿಷ್ಟ ಸ್ವಭಾವ: ಹೀಗೆ ನಡೆಯದೆ ಹಾಗೆ ನಡೆದಿದ್ದರೆ ಏನಾಗುತ್ತಿತ್ತು?— ಎಂಬ ಕೊಡಕನು ಒಡ್ಡಿಕೊಂಡು ಅದನ್ನು ಅವರು ಬಿಡಿಸುವರು. ಈ ಕೊಡಕು ಬಿಡಿಸುವ ಅವರ ಕಾರ್ಯವು ಮನೋರಂಜಕವೂ ಆಗಿರುವುದು; ಬೋಧಕವೂ ಆಗಿರುವುದು.**

卐

ಮೊನ್ನೆ ರನ್ನಕವಿಪ್ರಶಸ್ತಿಯನ್ನು ತೆಗೆದುಕೊಂಡು ಓದಿ ಮುಗಿಸಿದೆನು. ನನಗೆ ದಿಗಿಲೇ ಬಿದ್ದಿತು. ಈ ಕಾವ್ಯದಲ್ಲಿ ಖಲನಾಯಕನಾರು, ಭಲೇನಾಯಕನಾರು? ಮಹಾನುಭಾವನಾರು ಅಲ್ಪಾನುಭಾವನಾರು? ಗೆದ್ದವನಾರು, ಸೋತವನಾರು? ಇದೊಂದೂ ತಿಳಿಯಲೇ ಇಲ್ಲ. ಒಬ್ಬರಂತೂ ಬರೆದಿದ್ದರು: "ಭೀಮ ಗೆದ್ದು ಸೋತ, ದುರ್ಯೋಧನ ಸೋತು ಗೆದ್ದ," ಎಂದು. ಹೀಗೆ ಟೇನಿಸ್ ಚೆಂಡು ಅತ್ತ ಹೋಗಿ ಇತ್ತ ಬರುವಂತೆ, ಭೀಮ-ದುರ್ಯೋಧನರಿಬ್ಬರೂ ಸೋಲು-ಗೆಲವುಗಳ ನಡುವೆ ಎಡತಾಕಿವೆ, ನಿಂತಲ್ಲಿಯೇ ನಿಂತು, ಭೀಮನು ಸೋತೇ ಸೋತುಬಿಟ್ಟಿದ್ದರೆ, ದುರ್ಯೋಧನನೆ ಗೆದ್ದೇ ಗೆದ್ದುಬಿಟ್ಟಿದ್ದರೆ, ಏನಾಗುತ್ತಿತ್ತು—ಎಂಬ ವಿಚಾರ ತಲೆದೋರಿ ಸಮಸ್ಯೆ ಬಿಡುವವರೆಗೆ ಮನಕ್ಕೆ ಶಾಂತಿಯೇ ದೊರೆಯಲಿಲ್ಲ. ಅದನ್ನೇ ಇಲ್ಲಿ ಕೊಟ್ಟಿದ್ದೇನೆ.

ಒಟ್ಟಿನಲ್ಲಿ, ರಾಜಕೀಯ, ಸಾಮಾಜಿಕ, ಆರ್ಥಿಕ, ಅಧ್ಯಾತ್ಮಿಕ ............ಹಾಂ, ತಡೆಯಿರಿ, ಈ ಶಬ್ದಗಳು ಉಚ್ಚರಿತವಾದ ಕೂಡಲೆ, ವಾಚಕವೃಂದವಾಗಲಿ, ಶ್ರೋತೃಸಮುದಾಯವಾಗಲಿ 'ಲೇಖಕನು ಅಥವಾ ಭಾಷಣಕಾರನು ತನ್ನ ವಿಷಯದ ಸುರುಳೀಸುತ್ತಹತ್ತಿದ್ದಾನೆ ಇನ್ನೇನು ಪಾರಾದೆವು' ಎಂದು ಬಿಡುಗಡೆಯ ಸೂಸ್ಕಾರ ಹಾಕುವುದು ಸ್ವಾಭಾವಿಕ. ಇನ್ನು ಈ ಮಟ್ಟಕ್ಕೆ ಬಂದ ಮೇಲೂ, ಎಷ್ಟೋ ಭಾಷಣಕಾರರು ತಾಸೆರಡು ತಾಸು ಹಾಗೆಯೆ ಭಾಷಣ ( ತೌಡು ) ಕುಟ್ಟಬಹುದು, ಲೇಖಕರು ನಾಲ್ಕೈದು ಪುಟ ಗೀಚಬಹುದು, ಆ ಮಾತು ಬೇರೆ. ಹಾಗೆ ತಿಳಿದು ನೀವು ಇದನ್ನು ಇಲ್ಲಿಯೇ ನಿಲ್ಲಿಸಿ, ಆಭಾರಮನ್ನಣೆಯ ಸುಮಾರಿಗೆ ಸಭೆ ಬಿಟ್ಟು, ಎದ್ದು ಹೋಗುವಂತೆ, ಮುಂದಿನ ಲೇಖನದ ಹಾಳೆಗಳನ್ನು ತಿರುವಿ ಹಾಕಬಾರದಾಗಿ ಸವಿನಯ ಪ್ರಾರ್ಥನೆ. ಹಾಗೆ ನೋಡಿದರೆ, ಸಮಾಪ್ತಿಯಿಂದ ಸುರುವು ಮಾಡಿ ಪ್ರಾರಂಭಕ್ಕೆ ಬಂದರೂ, ಭರತವಾಕ್ಯವನ್ನು ಮೊದಲು ಹೇಳಿ, ಕೊನೆಗೆ ನಾಂದೀಪದ್ಯದಿಂದ ಮಂಗಲಮಾಡಿದರೂ, ಈ ವಿಷಯದ ಮಟ್ಟಿಗೆ ವ್ಯತಿಕ್ರಮವಾಗಲಾರದು. ಯಾಕೆಂದರೆ, ವಿಷಯಕ್ಕನುಗುಣವಾಗಿ ವಿವರಣೆ! ವಿಷಯವೇ ತಲೆ ಕೆಳಗೆಮಾಡಿ ನಿಂತಮೇಲೆ ವಿವರಣೆಯೂ ಶೀರ್ಷಾಸನ ಹಾಕಿದರೆ ತಪ್ಪೇನು?

ಈ ಘಟನೆಯ ಸಾಹಿತ್ಯಿಕ ಪರಿಣಾಮವೇನಾಗುತ್ತಿತ್ತು ಎಂಬುದರ ಉತ್ತರ ಸರಳವಿದೆ. ಅದನ್ನು ಒಂದೇ ವಾಕ್ಯದಲ್ಲಿ ಹೇಳಹೇಳಬಹುದು: "ಭೀಮ ಸೋತು ಗೆಲ್ಲುತ್ತಿದ್ದ, ದುರ್ಯೋಧನ ಗೆದ್ದು ಸೋಲುತ್ತಿದ್ದ" ಇಷ್ಟೇ! ಯಾಕೆಂದರೆ ಸಾಹಿತ್ಯ–ವಸ್ತುಸ್ಥಿತಿಯ ಮೇಲೆ ಬಹಳಷ್ಟು ಅವಲಂಬಿಸಿರುವುದಿಲ್ಲ. ಅದನ್ನು ಹೇಗೆ ಬೇಕು ಹಾಗೆ ಹೊರಳಿಸಿಕೊಳ್ಳಲೂ ಅದಕ್ಕೆ ಸ್ವಾತಂತ್ರ್ಯವಿದೆ. ಇಲ್ಲದಿದ್ದರೆ, ಚಾತಕ, ಚಕೋರ, ಚಕ್ರವಾಕಗಳು ಇಷ್ಟೆಲ್ಲಿ ಹಾವಳಿ ಹಾಕುತ್ತಿದ್ದುವು? ಇತಿಹಾಸದಲ್ಲಿ ಹೀಗೆ ಆಗುವುದು ಸಾಧ್ಯವಿಲ್ಲ. ಒಂದ ಘಟನೆ ಮತ್ತೊಂದರ ಮೇಲೆ ಬಹಳ ಅವಲಂಬಿಸಿರುತ್ತದೆ. ತ್ರಿಲೋಕಸುಂದರಿ ಕ್ಲಿಯೊಪಾತ್ರಾಳ ಮೂಗು ಒಂದು ದಶಾಂಶ ಇಂಚಿನಷ್ಟು ನೊಟ್ಟ ಅಥವಾ ಹ್ರಸ್ವವಾಗಿದ್ದರೆ, ಜಗತ್ತಿನ ಇತಿಹಾಸವೇ ಪಲ್ಲಟವಾಗುತ್ತಿತ್ತಂತೆ. ಎಂದ ಮೇಲೆ, ಇಂಥ ದೊಡ್ಡ ಘಟನೆಯು ಪರಿಣಾಮ ಮಾಡದೆ ಬಿಟ್ಟೀತೇ? ಮೊದಲು ಕೌರವರು ಸೋತು ಪಾಂಡವರು ಗೆದ್ದುದರ ಪರಿಣಾಮವೇನಾಯಿತು?—ಎಂಬುದನ್ನು ವಿಚಾರಿಸುವ; ಅನಂತರ ದುರ್ಯೋಧನನೇ ಗೆದ್ದಿದ್ದರೆ ಏನಾಗುತ್ತಿತ್ತು?—ಎಂಬುದನ್ನು ಊಹಿಸಲು ಸುಲಭವಾಗುವುದು.

ಸ್ವಲ್ಪ ವಿಚಾರ ಮಾಡಿದರೆ 'ಇದೇನು ಅಷ್ಟು ಅಸಂಭಾವ್ಯ ಸಂಗತಿಯಲ್ಲ' ಎಂದು ಎನಿಸದೆ ಇರಲಾರದು. ಇಬ್ಬರ ಬಲಾಬಲಗಳನ್ನೂ ಗಣನೆಯಲ್ಲಿ ತೆಗೆದುಕೊಂಡರೆ, ದುರ್ಯೋಧನನಿಗೇ ಜಯವಾಗುವುದು ಸ್ವಾಭಾವಿಕ. ಇವರ ಕಡೆಗೆ ಹನ್ನೊಂದಕ್ಷೋಹಿಣಿ ಸೈನ್ಯ, ವಿರುದ್ಧಪಕ್ಷದಲ್ಲಿ ಕೇವಲ ಏಳು ಅಕ್ಷೋಹಿಣಿ. ಇತ್ತ ಭೀಷ್ಮ–ದ್ರೋಣ–ಕೃಪಾಶ್ವತ್ಥಾಮರಂಥ ನುರಿತ ಸೇನಾನಿಗಳು; ಅತ್ತ ಎಲ್ಲರೂ ಹೊಸಬರೇ. ಮೇಲಾಗಿ ಹದಿನಾಲ್ಕು ವರುಷ ವನವಾಸದಲ್ಲಿದ್ದಾಗ, ಪಾಂಡವರ ಶಸ್ತ್ರಾಸ್ತ್ರಗಳೆಲ್ಲ ಜಂಗುತಿಂದು ಹೋಗಿರಬಹುದು; ಯುದ್ಧಕಲೆ ಮರೆತಿರಬಹುದು. ಇನ್ನು ಪಾಂಡವಪಕ್ಷ ಸತ್ಯದ್ದು, ನ್ಯಾಯದ್ದು,

ಆದ್ದರಿಂದ, "ಯತೋ ಧರ್ಮಸ್ತತೋ ಜಯಃ" ಎಂಬ ಸಿದ್ಧಾಂತದಂತೆ, ಅವರಿಗೇ ಜಯ ಕಟ್ಟಿಟ್ಟದ್ದು—ಎಂದೆನ್ನಬೇಕು. ಜಗತ್ತಿನ ಪ್ರಸಿದ್ಧ ರಣಾಂಗಣಗಳ ಇತಿಹಾಸವನ್ನು ಪರೀಕ್ಷಿಸಿದರೆ, ಈ ನಂಬುಗೆ ಕೇವಲ ಒಂದು ಭ್ರಮೆ ಎಂದೆನಿಸದೆ ಇರಲಾರದು. ಸತ್ಪಕ್ಷಕ್ಕೆ ಸಮರದಲ್ಲಿ ಎಂದೂ ಜಯ ದೊರೆತಿಲ್ಲ. ಸತ್ಯ ಧರ್ಮಗಳು ಗಝನೀ ಮಹಮ್ಮದನ ಕಡೆಗೊ, ಸೋಮನಾಥದೇವಾಲಯದ ರಕ್ಷಕರ ಕಡೆಗೊ? ಅಕಬರನ ಕಡೆಗೊ, ಪ್ರತಾಪನ ಕಡೆಗೊ? ಔರಂಗಜೇಬನ ಕಡೆಗೊ, ದಾರಾನ ಕಡೆಗೊ? ಪೇಶವೆ ನಾನಾಸಾಹೇಬನ ಕಡೆಗೊ, ಕಂಪನಿ ಸರಕಾರದ ಕಡೆಗೊ? ನಮ್ಮ ದೇಶದಲ್ಲಷ್ಟೇ ಅಧರ್ಮಕ್ಕೆ ಜಯವಾಗಿದೆ ಎಂದಲ್ಲ. ಎಲ್ಲ ಕಡೆಗೂ ಇದೇ ಹಾಡೇ! ಕ್ರೈಸ್ತನ ಗತಿ ಏನಾಯಿತು? ಜೋನ್ ಆಫ್ ಆರ್ಕಳು ಎಂತಹ ಬವಣೆಪಡಬೇಕಾಯಿತು?

ಕ್ರೈಸ್ತನ ಜನ್ಮಭೂಮಿಯನ್ನು ಮುಸಲ್ಮಾನರು ಆಕ್ರಮಿಸಿದಾಗ, ಯುರೋಪದ ರಾಜರೆಲ್ಲ ಒಟ್ಟುಗೂಡಿ Crusades ಎಂದರೆ ಧರ್ಮಯುದ್ಧ ಹೂಡಿದರು. ಅಲ್ಲಿ ಸಂಪೂರ್ಣ ಹತಾಶರಾಗಿ, ತಮ್ಮ ದೃಷ್ಟಿಯನ್ನು ಪೂರ್ವ ಹಾಗೂ ಪಶ್ಚಿಮದ ಕಡೆಗೆ ಹೊರಳಿಸಿದರು. ಹಿಂದಿನ ಅನುಭವದಿಂದ ಜಾಣರಾಗಿ ಅಲ್ಲಿ ಅಧರ್ಮಯುದ್ಧ ನಡೆಸಿದರು; ಸರ್ವತ್ರ ವಿಜಯಿಗಳಾದರು. ಅಮೇರಿಕೆಯಲ್ಲಿ ರೆಡ್ ಇಂಡಿಯನ್ನರ ನಿರ್ನಾಮವಾಯಿತು. ತಮ್ಮ ನಾಡಿನಲ್ಲಿಯೇ ನಿಗ್ರೋಜನರು ಪರಕೀಯರಾದರು. ಭಾರತವು ಗಿಳಂಕೃತವಾಯಿತು. ಸ್ವತಃ ಮುಸಲ್ಮಾನರಲ್ಲಿ ಧರ್ಮಮೂರ್ತಿಗಳಾದ ಹಸನ್–ಹುಸೇನ್ ಇವರ ಪಾಡೇನಾಯಿತು? ಹೀಗಿದ್ದು ಪಾಂಡವರಿಗೆ, ಅರ್ಥಾತ್ ಸತ್ಯ-ನ್ಯಾಯಗಳಿಗೆ ಜಯ ದೊರೆತದ್ದು ನಿಸರ್ಗನಿಯಮಕ್ಕೆ ವಿರುದ್ಧವಾದ ಅಪವಾದವೆಂದೇ ತಿಳಿಯಬೇಕು. ಇನ್ನು 'ಕೃಷ್ಣಪರಮಾತ್ಮನೇ ಅವರ ಕಡೆಗಿದ್ದನು; ಆದುದರಿಂದ ಅವರಿಗೆ ಜಯ ದೊರೆಕಿತು' ಎಂದು ಹೇಳಬೇಕು. ಇದು ಮಾತ್ರ ಎಲ್ಲರೂ ಒಪ್ಪತಕ್ಕ ಮಾತು. ಕರ್ತುಂ ಅಕರ್ತುಂ, ಅನ್ಯಥಾಕರ್ತುಂ ಶಕ್ತಿಯುಳ್ಳ ಪರಮಾತ್ಮನ ಎದುರು ಯಾರ ಆಟ ಸಾಗುವುದು? ನಿಸರ್ಗನಿಯಮಗಳೆಲ್ಲ ಅಲ್ಲಿ ತಲೆಬಾಗುವುವು. ಅವನ ಆಜ್ಞೆಯ ಎದುರು ಸೂರ್ಯನು ಪಶ್ಚಿಮಕ್ಕೆ ಮೂಡಬಹುದು, ಚಂದ್ರನು ಉರಿಬಿಸಿಲು ಕಾರಬಹುದು, ಮಾರುತನು ನಿಶ್ಚಲನಾಗಿ ನಿಲ್ಲಬಹುದು. ಈ ಸಂಗತಿಯೇ ಭಾರತದ ಮುಂದಿನ ಇತಿಹಾಸದ ಮೇಲೆ ಬಲವಾದ ಪರಿಣಾಮ ಮಾಡಿತು. 'ಪರಮಾತ್ಮನೊಬ್ಬ ನಮ್ಮ ಕಡೆಗಿದ್ದರೆ ಸಾಕು; ಬೇಕಾದ ಅದ್ಭುತಗಳನ್ನು ಮಾಡಿ ತೋರಿಸಬಹುದು. ಸತ್ಯಾಸತ್ಯ, ನ್ಯಾಯಾನ್ಯಾಯ ಇವುಗಳ ವಿಚಾರ ಕೂಡ ಮಾಡುವ ಕಾರಣವಿಲ್ಲ' ಎಂದು ಅವರು ಅದ್ಭುತಪ್ರಿಯರಾದರು. ಇನ್ನು ಪರಮಾತ್ಮನನ್ನು ಒಲಿಸುವ ಬಗೆ ಹೇಗೆ? ಪರಮ ಆತ್ಮನಿರಬಹುದು—ಆದರೆ ಅವನು ಆತ್ಮನಿರುವುದೇನು ಸುಳ್ಳಲ್ಲ. ಆದುದರಿಂದ ಉಳಿದ ಆತ್ಮಗಳಿಗೆ ಯಾವ ವಸ್ತುಗಳಿಂದ, ಸಂಗತಿಗಳಿಂದ, ಪ್ರೀತಿಯಾಗುವುದೋ, ಅವೇ ಅವನ ಸಂತೋಷಕ್ಕೂ ಕಾರಣವಾಗುವುವು. ಯೋಗೀಶ್ವರ ಕೃಷ್ಣನ ಆರಾಧನೆ ಹೋಗಿ ಭೋಗೀಶ್ವರ ಕೃಷ್ಣನ ಆರಾಧನೆ ಸುರುವಾಯಿತು. ಧನುರ್ಧಾರಿಯಾದ ಅರ್ಜುನ ಮನಶ್ಚಕ್ಷುವಿನಿಂದ ಮಾಯವಾದ; ಸುಭದ್ರಾಪಹರಣದ ಅರ್ಜುನನೇ ಪುರಾಣ–ಕೀರ್ತನಗಳ ವಿಷಯವಾದ.

ಇದೇ ಸಮಯಕ್ಕೆ ಸೋತ ದುರ್ಯೋಧನನ ಆತ್ಮ ಸೇಡಿಗಾಗಿ ಹಾತೊರೆಯುತ್ತಿತ್ತು. ಶೇಕ್ಸಪೀಯರನ Julius Caesar ನಾಟಕದಲ್ಲಿ ಒಂದು ವಾಕ್ಯ ಬರುವುದು. ಪ್ರಜಾಸತ್ತೆಗೆ ಗಂಡಾಂತರಕಾರಿ ಎಂದು Caesar ನ ಕೊಲೆ ಮಾಡಲಾಯಿತು. ಆದರೆ ಅವನ ಪಕ್ಷಪಾತಿಗಳು ಎದ್ದು, ಸೈನ್ಯಸಂಗ್ರಹ ಮಾಡಿ ಒಳಸಂಚುಗಾರರನ್ನು ಎದುರಿಸಿದಾಗ, ಅವರ ಮುಖ್ಯಸ್ಥ Cassius ಎನ್ನುತ್ತಾನೆ: "Caesar, thou are avenged.. .........Caesar's spirit walks abroad" "ಸೀಝರನೆ, ನೀನು ಸೇಡು ತೀರಿಸಿಕೊಂಡೆ.... ....... ...ಸೀಝರನ ಭೂತವು ಎಲ್ಲೆಡೆ ಸಂಚರಿಸುತ್ತಿದೆ," ಅವನೊಂದು ಐತಿಹಾಸಿಕಭವಿಷ್ಯವನ್ನು ನುಡಿದ. ಅಂದಿನಿಂದ ಪ್ರಜಾಸತ್ತೆ ಪೃಥ್ವೀತಲದಿಂದ ಮಾಯವಾಯಿತು; ಯುರೋಪದ ಈ ಎರಡು ಸಾವಿರ ವರುಷಗಳ ಇತಿಹಾಸವೆಂದರೆ, ಈ ಸೀಝರ್ ಭೂತದ ಸಂಚಾರ. ಸ್ವತಃ ರೋಮದಲ್ಲಿ ಸೀಝರರ—ಚಕ್ರವರ್ತಿಗಳ—ಪಂಕ್ತಿ ಅನೇಕ ಶತಮಾನಗಳ ವರೆಗೆ ಅನಿಯಂತ್ರಿತ ಸತ್ತೆ ನಡೆಸಿತು. ಇದೇ ಅನಂತರ ಈ ಕೂಗನ್ನು ಇತರ ರಾಷ್ಟ್ರಗಳು ಎತ್ತಿ ಹಿಡಿದುವು. "ಸೀಝರ್" ಜರ್ಮನಿಯಲ್ಲಿ "ಕೈಸರ್" ಆದ, ರಷಿಯದಲ್ಲಿ "ಝಾರ್" ಆದ. ಅವನ ಮತ್ತೊಂದು ಬಿರುದಾದ "Imperator" (ಹುಕುಮ್ ಶಹಾ) ಇದು ಇಂಗ್ಲಂಡಿನಲ್ಲಿ "Emperor" ಆಯಿತು. ಈ ಸೀಝರನ ಭೂತ ಇನ್ನೂ ಮಾಯವಾದಂತೆ ತೋರುವುದಿಲ್ಲ. ಮತ್ತೊಂದು ಶಕ್ತಿ ಈ ರಂಗವನ್ನು ಪ್ರವೇಶಿಸಿ, ಮೊದಲು ಶಸ್ತ್ರಾಸ್ತ್ರಗಳ ಠಣತ್ಕಾರದಿಂದ ಸಾಧಿಸಬಹುದಾದುದನ್ನು, ಈಗ ಡಾಲರುಗಳ ಝಣತ್ಕಾರದಿಂದ ಸಾಧಿಸಲು ಹವಣಿಸುತ್ತಿದೆ. ಹೀಗೆ ಕೊಲೆಯಾಗಿ ಸೀಝರ್ ಮಡಿದರೂ, ಅವನ ಭೂತ ಇನ್ನೂ ಜೀವಂತ ಇರುತ್ತದೆ. ಅನ್ಯರನ್ನು ಪ್ರೇರಿಸುತ್ತಿದೆ.

ಇದರಂತೆ ದುರ್ಯೋಧನ ಸೋತರೂ, ರಣದಲ್ಲಿ ಹತನಾದರೂ, ಇನ್ನೂ ಜೀವಂತನಿರುವನೆಂದು ಹೇಳಬಹುದು. ಇಷ್ಟೇ ಏಕೆ, ಸೂಕ್ಷ್ಮರೂಪ ತಾಳಿ, ಪಾಂಡವಪಕ್ಷಪಾತಿಗಳಾದ ಎಲ್ಲ ಭಾರತೀಯರ ಅಂತರಂಗದಲ್ಲಿ ನೆಲೆಸಿರುವನು. ಭೀಮನ ಗದೆ ಅವನನ್ನು ಸಂಹರಿಸಿತು; ಆದರೆ ನಮ್ಮ ಏಡಿ ಅವನಿಗೆ ಪುನಃ ಜೀವದಾನ ಮಾಡಿತು. ಅಣ್ಣತಮ್ಮಂದಿರು ಬಡಿದಾಡುವುದು ಯೋಗ್ಯವಲ್ಲ. "ವಯಂ ಪಂಚೋತ್ತರಂ ಶತಂ" ಪರಕೀಯರೆದುರು ನಾವು "ನೂರೂ ಅಲ್ಲ, ಐವರೂ ಅಲ್ಲ ನೂರಾ ಐದು" ಎಂಬುದು ಪಾಂಡವರ ವಾದ; ಆದರೆ ದುರ್ಯೋಧನನ ಹಟ "ನಾನು ನಾಶವಾದರೂ ಚಿಂತೆ ಇಲ್ಲ, ಶತ್ರುಗಳ ಮೇಲುಗೈ ಆಗಲಿ, ಪರವಾ ಇಲ್ಲ! ಆದರೆ ನನ್ನ ಬಾಂಧವರ ಅಭ್ಯುದಯ ಸಹಿಸೆನು" ಎಂಬುದು. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಆಧ್ಯಾತ್ಮಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಇದಾಯಿತು, ದುರ್ಯೋಧನ ರಣದಲ್ಲಿ ಸೋತು ಜನರ ಮನದಲ್ಲಿ ಗೆದ್ದುದರ ಪರಿಣಾಮ. ಇನ್ನು ಅವ

ಯುದ್ಧಭೂಮಿಯಲ್ಲಿ ವಿಜಯಿಯಾದರೆ ಏನಾಗುತ್ತಿತ್ತು— ನೋಡುವ! ಪಾಂಡವರಂತೆ ಅವ ಧರ್ಮದಿಂದ ನ್ಯಾಯದಿಂದ ರಾಜ್ಯವಾಳಿ ಕೊನೆಗೆ ಶಾಂತರೀತಿಯಿಂದ ಸ್ವರ್ಗಕ್ಕೆ ಪ್ರಯಾಣವನು ಎಂದೂ ಬೆಳೆಸುತ್ತಿರಲಿಲ್ಲ. ಮೊದಲೇ ಅವನದು ದುಷ್ಟಚೇತನ; ವಿಜಯವಾರುಣಿಯು ಅವನನ್ನು ಮತ್ತಷ್ಟು ಮದಾಂಧನನ್ನಾಗಿ ಮಾಡಿದರೆ ಆಶ್ಚರ್ಯವಲ್ಲ. ವಿಷಯವಾಸನೆಗೆ ನಿಸರ್ಗವೇ ಒಂದು ಮಿತಿಯನ್ನು ಕಲ್ಪಿಸಿದೆ; ಧನಲೋಭಕ್ಕೂ ಒಂದು ವಿರಾಮಚಿಹ್ನವುಂಟು; ಆದರೆ, ಸತ್ತಾಲಾಲಸೆಗೆ ಮರ್ಯಾದೆಯೇ ಇಲ್ಲ. ಎಷ್ಟು ಗೆದ್ದರೂ ಅಲೆಕ್ಝಾಂಡರನಿಗೆ ತೃಪ್ತಿಯಾಗಲಿಲ್ಲ. ಇನ್ನೂ ಹೆಚ್ಚಿಗೆ ಗೆಲ್ಲಲು ಜಗತ್ತೇ ಉಳಿಯಲಿಲ್ಲವಲ್ಲ— ಎಂದು, ಮೋರೆಗೆ ಮುಸುಕು ಹಾಕಿಕೊಂಡು ಅತ್ತನಂತೆ. ನೆಪೋಲಿಯನ್ನನು ಯುರೋಪದ ಚಕ್ರವರ್ತಿಗಳೆಲ್ಲ ತನಗೆ ಬಾಗುವಂತೆ ಮಾಡಿದನು; ಸಮಾಧಾನವಾಗಲಿಲ್ಲ. ರಶಿಯದ ಝಾರನನ್ನೂ ಬಗ್ಗಿಸಲು ಹೊರಟನು. ವಿನಾಶದ ಹಾದಿ ಹಿಡಿದನು. ದುರ್ಯೋಧನನ ಗತಿಯಾದರೂ ಹೀಗೆಯೇ ಆಗುತ್ತಿತ್ತು. ಚೀನಾದೇಶವನ್ನು ಗೆಲ್ಲಲು ಹೋಗಿ ಟಿಬೇಟದ ಹಿಮವಿಸ್ತಾರದಲ್ಲಿ ತನ್ನ ಸೈನ್ಯದೊಂದಿಗೆ ನಾಶಹೊಂದುತ್ತಿದ್ದನು. ಇದಕ್ಕಿಂತ ಮೊದಲು ಅವನು ಭಾರತದಲ್ಲಿಯ ತನ್ನ ಪ್ರಜೆಗಳಿಗೇ ಬೇಸರ ಉಂಟಾಗುವಂತೆ ಮಾಡುತ್ತಿದ್ದನು. ಅವನ ಪ್ರಜಾವಾತ್ಸಲ್ಯ, ಭೀಷ್ಮ–ದ್ರೋಣ–ಕೃಪ ಮೊದಲಾದ ಸಜ್ಜನರಿಗೆ ಅವ ಕೊಟ್ಟ ಆಶ್ರಯ ಇದೆಲ್ಲ ಒಂದು ಉದ್ದೇಶ ಈಡೇರಿಸುವುದಕ್ಕಾಗಿ ಹೊರತು, ಇವರ ಮೇಲೆ ಅವನ ಪ್ರೀತಿ ಇತ್ತೆಂದಲ್ಲ. ಇವರ ನಿಜವಾದ ಪ್ರೀತಿ ಪಾಂಡವರ ಮೇಲೆ; ಏನೋ, ಅನ್ನದ ಋಣ ತೀರಿಸಲು ತನ್ನ ಪಕ್ಷ ವಹಿಸಿ ಯುದ್ಧಮಾಡಿದರು— ಎಂದು ಅರಿಯದಷ್ಟು ಅವ ಮೂರ್ಖನಲ್ಲ. ಸಮರದಲ್ಲಿ ವಿಜಯ ದೊರೆಯುತ್ತಲೇ ಈ ಸಜ್ಜನರ ಮೇಲೆ ಸೇಡುತೀರಿಸಲು ಸುರುವುಮಾಡುತ್ತಿದ್ದ. ಅವನನಂತರ ಪಟ್ಟಕ್ಕೆ ಬರಬಹುದಾಗಿದ್ದ ದುರ್ಮುಖ, ದುಷ್ಟಬುದ್ಧಿ, ದುರಾರಾಧ್ಯ, ದುಶ್ಶೀಲ, ದುರಹಂಕಾರೀ ಮೊದಲಾದವರು, ತಮ್ಮ ಈ ಪ್ರಸಿದ್ಧ ಪೂರ್ವಜನ ಧೋರಣೆಯನ್ನೇ ಮುಂದುವರಿಸುತ್ತಿದ್ದರು— ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇದರಿಂದ ( ಸಾಧು-ಸಜ್ಜನ ) ಪರೀಕ್ಷಿತ, ಜನಮೇಜಯ ಮೊದಲಾದ ಪಾಂಡವವಂಶಜರ ಆಳಿಕೆಯಲ್ಲಿ ನಿಶ್ಚಿಂತರಾಗಿ ಪುರಾಣಕೇಳುತ್ತ ಕುಳಿತಂತೆ ಕೂಡುತ್ತಿರಲಿಲ್ಲ. ಪುರಾಣಶ್ರವಣ ಬಿಟ್ಟು, ಇತಿಹಾಸನಿರ್ಮಾಣಕ್ಕೆ ಕೈಹಾಕುತ್ತಿದ್ದರು. ( ಸತ್ಯ–ನ್ಯಾಯಗಳಿಗೆ ಸಮರಾಂಗಣದಲ್ಲಿ ಸೋಲಾದರೂ, ಮಾನುಷ್ಯನ ಹೃದಯಾಂಗಣದಲ್ಲಿ ಗೆಲವು ಕಟ್ಟಿಟ್ಟದ್ದೇ. ಸಮರದಲ್ಲಿಯ ಸೋಲು ಹೃದಯದಲ್ಲಿಯ ಗೆಲವಿಗೆ ಕಾರಣವೇನೋ! ) ರಾಮದಾಸ, ವಿದ್ಯಾರಣ್ಯರಂತೆ ಅನ್ಯಾಯಕ್ಕೆ ವಿರೋಧವನ್ನು ಸಂಘಟಿಸುತ್ತಿದ್ದರು. ಸತ್ಯನ್ಯಾಯಗಳ ಸೊತ್ತಾದಸೋಲನ್ನು ಲಕ್ಷಾನುಭವಿಸಬೇಕಾಗುತ್ತಿತ್ತು. ರಕ್ತದ ಕಾಲುವೆಗಳು ಹರಿಯುತ್ತಿದ್ದುವು. ಲಕ್ಷಾವಧಿ ನಿರಪರಾಧಿ ಜನರು ಸಿಲುಬೆಗೇರುತ್ತಿದ್ದರು. ಆದರೆ ಈ ವಿರೋಧ ಮಾತ್ರ ಅಡಗುತ್ತಿರಲಿಲ್ಲ. ಕೊನೆಗೆ ಈ ದುಷ್ಟಪೀಳಿಗೆಯನ್ನೇ ಕಿತ್ತೊಗೆಯುತ್ತಿದ್ದರು. ಎಷ್ಟೇ ಒಳ್ಳೆಯವನಿದ್ದರೂ, ಯಾವನೂ ಎರಡನೆಯವರನ್ನು ಆಳುವಷ್ಟು ಒಳ್ಳೆಯವನಲ್ಲ. ( No man is good enough to rule over another ) ಎಂಬ ತತ್ತ್ವವು, ಏನು ಬೇಕಾದ್ದು ಮಾಡಲಿ, "ನಾ ವಿಷ್ಣುಃ ಪೃಥಿವೀಪತಿಃ" "ಅರಸನೆಂದರೆ ಸಾಕ್ಷಾತ್ ವಿಷ್ಣುವೇ" ಎಂಬ ತತ್ತ್ವದ ಸ್ಥಾನವನ್ನು ತೆಗೆದುಕೊಳ್ಳುತ್ತಿತ್ತು. ಪ್ರಜಾಸತ್ತೆ ಪ್ರಸ್ಥಾಪಿತವಾಗುತ್ತಿತ್ತು. ಇಂಥ ಪ್ರಜಾಸತ್ತೆಗಳು ಭಾರತದಲ್ಲಿ ಇರಲಿಲ್ಲವೆಂದಲ್ಲ. 'ಲಿಚ್ಛವಿ', ಕ್ಷುದ್ರಕ ಮೊದಲಾದ ಪ್ರಜಾಸತ್ತಾತ್ಮಕ ರಾಜ್ಯಗಳು ಇದ್ದುವೆಂದು ಕೌಟಿಲೀಯ ಅರ್ಥಶಾಸ್ತ್ರದಲ್ಲಿ ಉಲ್ಲೇಖ ಬರುತ್ತವೆ. ಸ್ವತಃ ಯಾದವರಲ್ಲಿಯೇ ಆ ಪದ್ಧತಿ ಇದ್ದಿತೆಂದು ಮಹಾಭಾರತದಲ್ಲಿ ಹೇಳಲಾಗಿದೆ. ಆದರೆ ಪರೀಕ್ಷಿತ್ ಜನಮೇಜಯರಂತಹರು ಒಳ್ಳೆಯ ರಾಜರೇ ಆಗಿ ಹೋದದ್ದರಿಂದ, ಆ ಪ್ರಜಾಸತ್ತೆಗಳು ಬೇರೂರಲಿಲ್ಲ. ತಂದೆಯಂತೆ ಪಿತೃವಾತ್ಸಲ್ಯದಿಂದ ಪಾಲಿಸುವ ಸಾರ್ವಭೌಮನಿರುವಾಗ, ಭಾರತದ ಪ್ರಜೆಗಳಿಗೆ, ಬಾಲರಾಗಿ ಉಳಿಯುವುದೇ ಒಳಿತೆನಿಸಿತು. ಆದರೆ ದುಷ್ಟ ದುರ್ಯೋಧನನ ದುಷ್ಟತರ ಸಂತಾನದಾಳಿಕೆಯಲ್ಲಿ ಪ್ರಜೆಗಳಿಗೆ ಹೀಗೆ ನಿಶ್ಚಿಂತರಾಗಿ ಕೂಡಲು ಅವಕಾಶ ದೊರೆಯುತ್ತಿರಲಿಲ್ಲ. ಬೆಳೆದು ದೊಡ್ಡವರಾಗಿ ರಾಜ್ಯಭಾರದ ಹೊಣೆಗಾರಿಕೆಯನ್ನು ಹೊರಲು ಮುಂದೆ ಬರುತ್ತಿದ್ದರು ಆದರೆ ಇದೆಲ್ಲ ಒಮ್ಮೆಲೇ ಸಾಧ್ಯವಾಗುತ್ತಿರಲಿಲ್ಲ. ಅನೇಕ ಏರಿಳಿತ ತಿರುವು ಮುರುವುಗಳೊಂದಿಗೆ, ಭಾರತದಲ್ಲಿ ಪ್ರಜಾಸತ್ತೆಯು ವಿಕಾಸ ಹೊಂದುತ್ತಿತ್ತು. ಈಗ ಶ್ವೇತದ್ವೀಪದ ಪಾರ್ಲಿಮೆಂಟು ಜಗತ್ತಿನಲ್ಲಿಯ ಎಲ್ಲ ಲೋಕಸಭೆಗಳಿಗೆ ಮಾತೃಸ್ಥಾನದಲ್ಲಿ ಇರುವಂತೆ, ಈ ಜಂಬುದ್ವೀಪದಲ್ಲಿಯ "ಸಂಸತ್" ಎಲ್ಲ ಪ್ರಜಾರಾಜ್ಯಗಳ ತೊಟ್ಟಿಲವಾಗುತ್ತಿತ್ತು.

ಆದರೆ, ಪೂರ್ವದಲ್ಲಿಯೇ ಆಗಲಿ, ಪಶ್ಚಿಮದಲ್ಲಿಯೇ ಆಗಲಿ, ಮನುಷ್ಯಸ್ವಭಾವವು ಒಂದೇ. ಅದನ್ನು ಬದಲಿಸುವುದು ಸಾಧ್ಯವಿಲ್ಲ. ತಾನು ಪ್ರಜಾಸತ್ತೆಯ ಸವಿಯನ್ನು ಆಸ್ವಾದಿಸುತ್ತಿದ್ದರೂ ಇಂಗ್ಲಂಡವು ಎಲ್ಲ ಖಂಡಗಳಲ್ಲಿಯೂ ಸಾಮ್ರಾಜ್ಯವನ್ನು ಪ್ರಸ್ಥಾಪಿಸಿದಂತೆ, ಭರತಖಂಡವೂ ಪ್ರಸ್ಥಾಪಿಸಿದ್ದರೆ, ಆಶ್ಚರ್ಯವಲ್ಲ. ಭೌಗೋಲಿಕವಾಗಿ ಇಂಗ್ಲಂಡಿಗೆ ಇರುವ ಎಲ್ಲ ಅನುಕೂಲತೆಗಳು ಇದಕ್ಕೂ ಇರುವುವು. ಅದು ದ್ವೀಪವಿರುವಂತೆ, ಇದೂ ದ್ವೀಪಕಲ್ಪವಾದರೂ ದ್ವೀಪವೇ. ಬ್ರಿಟಿಶ ಚಾನೆಲ್ ಒಂದನ್ನು ಸಂರಕ್ಷಿಸುವಲ್ಲಿ ಅವರು ಜಾಗರೂಕರಿದ್ದಂತೆ, ನಮ್ಮ ಪೂರ್ವಜರು ಖೈಬರ್ ಕಣಿವೆಯೊಂದನ್ನು ರಕ್ಷಿಸಿದ್ದರೆ, ಸಾಕಾಗಿತ್ತು. ಊರು ಸುಟ್ಟರೂ ಹನುಮಪ್ಪ ಹೊರಗೇ ಎಂಬಂತೆ ಉಳಿದ ಜಗತ್ತಿನಲ್ಲಿ ಕೈ ಹಾಕಿ ಕಾರಭಾರ ಮಾಡುತ್ತ, ಅದರ ಝಳದಿಂದ ಅಲಿಪ್ತನಾಗಿ ಉಳಿಯಲು ಬರುತ್ತಿತ್ತು. Democracy at home and imperialism abroad, "ಮನೆಯಲ್ಲಿ ಪ್ರಜಾಸತ್ತೆ, ಹೊರಗೆ ಸಾಮ್ರಾಜ್ಯಸತ್ತೆ"ಯ ಚದುರಂಗದಾಟವನ್ನು ಆಡುತ್ತಿತ್ತು, ಇತಿಹಾಸದಲ್ಲೆಲ್ಲ. ದಕ್ಷಿಣ ಪೂರ್ವ ದಿಶೆಗಳತ್ತ ಬೌದ್ಧಧರ್ಮ–ಸಂಸ್ಕೃತಿಗಳನ್ನೂ, ಪಶ್ಚಿಮದ ಕಡೆಗೆ ಕೂಲಿಗಳನ್ನೂ ಕಲಾವಸ್ತುಗಳನ್ನೂ ರಫ್ತು ಮಾಡುತ್ತಲೂ, ಪಶ್ಚಿಮೋತ್ತರದಿಂದ

( ೪೯೩ನೆಯ ಪುಟ ನೋಡಿರಿ )

# ಬೌದ್ಧಕ್ಷೇತ್ರ ಸಾರನಾಥ

( ಪ್ರವಾಸಪ್ರಬಂಧ )

ಶ್ರೀ. ಎಸ್. ಪಿ. ಹಿರೇಮಠ, ಡಿ. ಎ. ವಿ. ಕಾಲೇಜ್, ಬನಾರಸ

卐

**ಇಂದು ಭಾರತರಾಷ್ಟ್ರದ ಅಂಗಾಂಗಗಳ ಪರಿಚಯವು, ಭಾರತೀಯನೆನ್ನಿಸಿಕೊಳ್ಳುವ ಪ್ರತಿಯೊಬ್ಬನಿಗೂ ಆಗಲೇಬೇಕು. ಆದುದರಿಂದ ಬರೆಯಲು ಬಲ್ಲ ಕನ್ನಡಿಗರು, ತಾವು ಕಂಡ ಪ್ರದೇಶದ ಪರಿಚಯವನ್ನು ಬರೆದು ಪ್ರಕಟಿಸುತ್ತಿರಬೇಕು. ಸುಪ್ರಸಿದ್ಧ ಬೌದ್ಧಕ್ಷೇತ್ರ ಸಾರನಾಥದ ಪರಿಚಯವನ್ನು ಈ ಲೇಖನ ಮಾಡಿಕೊಡುವುದು.**

卐

ಭಾರತೀಯರಿಗೆ ಪುಣ್ಯಕ್ಷೇತ್ರವಾದ ಬನಾರಸ ಪಟ್ಟಣವು ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಪಡೆದಿರುತ್ತದೆ. ಅದರ ಸಮೀಪದಲ್ಲಿರುವ ಸಾರನಾಥವು ಬೌದ್ಧಧರ್ಮಿಗಳ ಪುಣ್ಯಕ್ಷೇತ್ರವಾಗಿದೆ. ಕಾಶೀಕ್ಷೇತ್ರವನ್ನು ಸಂದರ್ಶಿಸಲು ಬಂದ ಯಾತ್ರಿಕರು, ಶಾಂತವಾತಾವರಣದಿಂದ ತುಂಬಿತುಳುಕುವ ಸಾರನಾಥವನ್ನು ನೋಡದೆ ಹಿಂದಿರುಗಲಾರರು.

ಕಾಶೀಕ್ಷೇತ್ರದಿಂದ ಆರು ಮೈಲು ಆಚೆಗಿರುವ ಸಾರನಾಥವು, ಒಂದಾನೊಂದು ಕಾಲದಲ್ಲಿ ಅರಣ್ಯವಾಗಿತ್ತು. ಆ ಬೌದ್ಧಕ್ಷೇತ್ರವನ್ನು ನೋಡಬೇಕೆಂದು ನನ್ನ ಮನಸ್ಸು ಕುತೂಹಲಪಡುತ್ತಿತ್ತು. ಕೆಲವು ಮಿತ್ರರು ಕೂಡಿ ಫಲಾಹಾರ ಕಟ್ಟಿಕೊಂಡು, ಸಾಯ್‌ಕಲ್ ಸವಾರೀ ಮಾಡಿದೆವು. ಉಷಃಕಾಲ, ನಿಶ್ಶಬ್ದ-ನೀರವತೆ ಎಲ್ಲೆಲ್ಲೂ ತಾಂಡವವಾಡುತ್ತಿತ್ತು. ಹಾದಿಯ ಪಕ್ಕದಲ್ಲಿಯ ತೋಟಗಳ ಗುಂಪಿನಲ್ಲಿ ಕೋಕಿಲೆಗಳು ಸ್ವರವೆತ್ತಿ ಹಾಡುತ್ತಿದ್ದುವು. ಪಶು-ಪಕ್ಷಿಗಳೆಲ್ಲ ತಮ್ಮ ಗೂಡುಗಳಿಂದ ತಂಡೋಪತಂಡವಾಗಿ ಹೊರಹೊರಟಿದ್ದುವು. ಆ ಪ್ರಶಾಂತಸಮಯದಲ್ಲಿ ಎಲ್ಲೆಲ್ಲೂ ಹೊಸ ಕಳೆ, ಹೊಸ ಜೀವನ ಹೊರಹೊಮ್ಮುತ್ತಿತ್ತು.

ಬೀದಿಯ ಮಧ್ಯದಲ್ಲಿ ಆನೆಗಳ ಗುಂಪೊಂದು ದಿನಕರನ ಸ್ವಾಗತಕ್ಕೆ ಹೊರಟಂತೆ ಕಾಣುತ್ತಿತ್ತು. ಸಾಯ್‌ಕಲ್ ವೇಗ ಹೆಚ್ಚಿಸಿ ಮುನ್ನಡೆದೆವು. ಸ್ವಲ್ಪ ಸಮಯದಲ್ಲಿ ಸಾರನಾಥಕ್ಷೇತ್ರವನ್ನು ತಲ್ಪಿದೆವು. ಅಲ್ಲಿ ಸೋಮನಾಥ ಮತ್ತು ಸಾರನಾಥ ದೇವರುಗಳ ದೇವಾಲಯವು ಒಂದಿದೆ. ಈ ಸಾರನಾಥ ದೇವರಿಂದಲೇ ಆ ಪ್ರದೇಶಕ್ಕೆ ಸಾರನಾಥವೆಂದು ನಾಮಕರಣವಾಗಿರಬೇಕೆಂದು ನನ್ನ ಊಹೆ. ಬುದ್ಧಗಯೆಯಲ್ಲಿ ಜ್ಞಾನೋದಯವಾದ ಬುದ್ಧನು ಈ ಪ್ರದೇಶಕ್ಕೆ ಬಂದಾಗ, ಅವನಿಂದ ಪರಿತ್ಯಾಗ ಮಾಡಲ್ಪಟ್ಟ ಐದು ಜನ ಶಿಷ್ಯಂದಿರು ಪುನಃ ಇಲ್ಲಿ ಭೆಟ್ಟಿಯಾಗಿ ಅವನ ಶಿಷ್ಯರಾದರು. ಇಲ್ಲಿ ಬುದ್ಧನು ಅನೇಕ ಕಾಲ ತಪಸ್ಸು ಮಾಡಿದನೆಂದು ತಿಳಿದು ಬರುತ್ತದೆ. ಚೀನಾ ದೇಶದ ಯಾತ್ರಿಕನಾದ ಹ್ಯೂಯೆನ್‌ತ್ಸಾಂಗನು ಏಳನೆಯ ಶತಮಾನದಲ್ಲಿ ಕಾಶೀಕ್ಷೇತ್ರಕ್ಕೆ ಬಂದಾಗ, ಸಾರನಾಥವನ್ನೂ ಸಂದರ್ಶಿಸಿದ್ದನು. ಆಗ ಇಲ್ಲಿ ೩೦೦ ಬೌದ್ಧಾಲಯಗಳೂ, ಮೂರುಸಾವಿರ ಸಂನ್ಯಾಸಿಗಳೂ, ನೂರರಷ್ಟು ಹಿಂದೂ ದೇವಾಲಯಗಳೂ ಇದ್ದುವೆಂದು ಬರೆದಿಟ್ಟಿದ್ದಾನೆ. ಆದರೆ ಈಗ ಅವುಗಳನ್ನು ನೋಡಿ ಆನಂದಪಡುವ ಸುಯೋಗ ನಮಗಿಲ್ಲವಾಗಿದೆ.

ಘಜ್ನಿಮಹಮ್ಮದನು ೧೧ನೆಯ ಶತಮಾನದಲ್ಲಿ ದಾಳಿ ಮಾಡಿ, ಇಲ್ಲಿಯ ಅನೇಕ ಗುಡಿಗಳನ್ನು ಹಾಳು ಮಾಡಿದನು. ಪೂರ್ವಾರ್ಜಿತ ಪುಣ್ಯವೋ ಏನೋ, ಎರಡು ಮೂರು ಗುಡಿಗಳು ಮಾತ್ರ ಉಳಿದಿವೆ. ಇಲ್ಲಿ ಅಶೋಕನು ಎರಡು ದೊಡ್ಡ ಸ್ತೂಪಗಳನ್ನು ಕಟ್ಟಿಸಿದ್ದನೆಂದು ಇತಿಹಾಸದಿಂದ ತಿಳಿದು ಬರುತ್ತದೆ. ೧೯ನೆಯ ಶತಮಾನದಲ್ಲಿ ಈ ಪ್ರದೇಶವನ್ನು ಸಂಶೋಧಿಸಿದಾಗ, ಅನೇಕ ಪ್ರಾಚೀನವಸ್ತುಗಳೂ, ಶಾಸನಗಳೂ, ವಿಗ್ರಹಗಳೂ ದೊರೆತಿರುತ್ತವೆ. ಆಗ ದೊರೆತ ಎಲ್ಲ ವಸ್ತುಗಳನ್ನೂ ಸ್ಥಳೀಯ ಸಂಗ್ರಹಾಲಯದಲ್ಲಿ, ಪ್ರೇಕ್ಷಕರ ಅವಗಾಹನೆಗೆಂದು ಇರಿಸಿದ್ದಾರೆ.

ಸಾರನಾಥ ದೇವಾಲಯದೆದುರಿಗೊಂದು ಚಿಕ್ಕ ಕೆರೆ ಇದೆ. ಶಿವದೇವಾಲಯದ ಕೆಲವೇ ಗಜಗಳ ಅಂತರದಲ್ಲಿ ಚೀನೀ ಬೌದ್ಧದೇವಾಲಯವು ವಿಸ್ತಾರವಾಗಿದೆ. ಗುಡಿಯ ಸುತ್ತಲೂ ಹೂದೋಟ ರಮಣೀಯವಾಗಿ ಮೆರೆಯುತ್ತಿದೆ. ಇಲ್ಲಿ ಬೌದ್ಧಭಿಕ್ಷುಗಳು ಇದ್ದಾರೆ. (ಚೀನೀ ಭಿಕ್ಷುಗಳೂ ಇದ್ದಾರೆ). ಗರ್ಭಗುಡಿಯಲ್ಲಿ ಬುದ್ಧವಿಗ್ರಹವು ರಾರಾಜಿಸುತ್ತದೆ. ಆಸನ ಹಾಕಿಕೊಂಡು ಕುಳಿತಿರುವ ಆ ವಿಗ್ರಹವನ್ನು ನಾಲ್ಕು ಅಡಿ ಎತ್ತರವಾದ ಸಂಗಮವರೀ ಕಲ್ಲಿನಿಂದ ಕೆತ್ತಿದ್ದಾರೆ. ಒಳಭಾಗದ ಗೋಡೆಗಳಲ್ಲಿ, ಬುದ್ಧನ ತಾಯಿಯ ಕನಸಿನಲ್ಲಿ ಬಿಳಿ ಆನೆ ಬಂದದ್ದು, ಬುದ್ಧನ ಜೀವನ, ಯೌವನ, ಮಮತೆಯ ಮಡದಿಮಕ್ಕಳನ್ನು ತೊರೆದು ಅರಣ್ಯಕ್ಕೆ ಹೊರಟದ್ದು—ಮೊದಲಾದ ಅನೇಕ

( ೪೯ನೆಯ ಪುಟದಿಂದ ಬಂದುದು )

ಕ್ರಮವಾಗಿ ಕೊಲೆ-ಸುಲಿಗೆಗಳನ್ನು ಆಮದು ಮಾಡುತ್ತಲೂ ಕೂಡುತ್ತಿರಲಿಲ್ಲ. ಸೂರ್ಯ ಚಂದ್ರರು, ಮುಳುಗದಂಥ ಸಾಮ್ರಾಜ್ಯವನ್ನು ಸ್ಥಾಪಿಸುತ್ತಿತ್ತು. ಇಲ್ಲಿ "ಚಲೇಜಾವ್" ಚಳವಳಿ ಸುರುವಾದಂತೆ ಅಲ್ಲಿಯೂ "Quit England" ಚಳವಳಿ ಪ್ರಾರಂಭವಾಗುತ್ತಿತ್ತು. ಇಷ್ಟೆಲ್ಲ ಮುಗಿದು ೧೯೫೬ರ ಸುಮಾರಿಗೆ "ಇದ್ದಲ್ಲಿ ಇರೋ ಸಿದ್ದೇಶ್ವರ" ಎಂಬಂತೆ, ಜಗತ್ತಿನ ಎಲ್ಲ ಭಾಗಗಳಿಂದಲೂ ಹಿಂದೆ ಸರಿದು ರಾಜ್ಯ ಪುನರ್ರಚನೆಯು ಭಾಷಾನುಗುಣವಾಗಿರಬೇಕೊ, ರೋಷಾನುಗುಣವಾಗಿರಬೇಕೊ—ಎಂಬ ಸಮಸ್ಯೆಗೆ ಬಂದು ನಿಲ್ಲುತ್ತಿತ್ತು.

---

ದೃಶ್ಯಗಳ ಫೋಟೋಗಳನ್ನು ಹಾಕಿದ್ದಾರೆ. ಇಲ್ಲಿ ನಂದಾದೀವಿಗೆಯು ತ್ರಿಕಾಲದಲ್ಲಿಯೂ ಪ್ರಜ್ವಲಿಸುತ್ತಿರುತ್ತದೆ. ಗುಡಿಯಿಂದ ಹೊರಗೆ ಬಂದೊಡನೆ, ಎದುರಿಗೆ ವಿಶಾಲವಾದ ಕಟ್ಟಡವೊಂದು ಕಂಗೊಳಿಸುತ್ತದೆ. ಅದು ಟ್ರೇನಿಂಗ್ ಕಾಲೇಜು. ಅಲ್ಲಿ ಶಿಕ್ಷಕರ ಅಧ್ಯಯನ ನಡೆಯುತ್ತದೆ.

ಟ್ರೇನಿಂಗ್‌ಕಾಲೇಜಿನಿಂದ ಸ್ವಲ್ಪ ದೂರದಲ್ಲಿ ಬುದ್ಧವಿಹಾರವೊಂದು ಗೋಚರಿಸುತ್ತದೆ. ದಿನಕರನ ಹೊಂಗಿರಣಗಳಿಂದ ಆ ಗುಡಿಯು ಹೊಳೆಯುತ್ತಿತ್ತು. ಭವ್ಯವಾಗಿ—ಸುಂದರವಾಗಿರುವ ಆ ಮಂದಿರವು ಪ್ರೇಕ್ಷಕರ ಕಣ್-ಮನಗಳನ್ನೇ ಸೂರೆಗೊಳಿಸುತ್ತದೆ ಏನು ಕಲೆ! ಎಷ್ಟು ಮಾಟ !! ಎಂತಹ ಸೌಂದರ್ಯ !!!. ಗುಡಿಯೊಳಗೆ ಹೊಂಬಣ್ಣದ ಬುದ್ಧಮೂರ್ತಿ ಕಳೆದುಂಬಿ ವಿರಾಜಿಸುತ್ತಿದೆ. ಆ ಮೂರ್ತಿಯನ್ನು ನೋಡಿದಾಗ, ಶಾಂತಿ-ಅಹಿಂಸಾ ತತ್ತ್ವಗಳೇ ಮೂರ್ತಿಗೊಂಡಂತೆ ಭಾಸವಾಗುತ್ತದೆ. ಈ ದೇವಾಲಯದ ಒಳಭಾಗದ ಗೋಡೆಗಳಲ್ಲಿ ಜಪಾನೀ ಚಿತ್ರಕಾರರು ಬುದ್ಧನ ಜೀವನಚರಿತ್ರೆಯನ್ನು ಅಂದವಾಗಿಯೂ, ಸಜೀವವಾಗಿಯೂ ಚಿತ್ರಿಸಿರುತ್ತಾರೆ. ಪ್ರಶಾಂತ ವಾತಾವರಣದಲ್ಲಿ ಕಟ್ಟಲ್ಪಟ್ಟ ಈ ಗುಡಿಗೆ ಮೂಲಗಂಧಕುಟಿವಿಹಾರವೆಂದೂ ಅನ್ನುತ್ತಾರೆ.

ಈ ದೇವಾಲಯದೆದುರಿಗೆ ಮಾವಿನ ತೋಟವೊಂದು ಪ್ರಶಾಂತ ಪ್ರದೇಶದಲ್ಲಿ ಶಾಂತಿಕುಟೀರವಿದ್ದಂತಿದೆ. ಅಲ್ಲಿ ಮೌನದೇವತೆಯು ರಾಜ್ಯವಾಳುತ್ತಿರುವಂತೆ ಭಾಸವಾಗುತ್ತದೆ. ಆ ತೋಟದ ಪಕ್ಕದಲ್ಲಿಯೇ ಒಂದು ವಿಶಾಲವಾದ ಅಶ್ವತ್ಥ ಇದೆ. ಅಲ್ಲಿಂದ ಮುಂದೆ ಸಾಗಲು, ರಸ್ತೆಯ ಬಲಭಾಗಕ್ಕೆ ಒಂದು ದೊಡ್ಡ ಸ್ತೂಪವು, ದೂರದಿಂದ ಕೋಟೆಯಂತೆ ಗೋಚರಿಸುತ್ತದೆ ಅದು ದಾಮಂಕಸ್ತೂಪವು; ೧೩೦ ಫೂ. ಎತ್ತರವಾಗಿಯೂ, ೧೦೦ ಫೂ. ಸುತ್ತಳತೆಯುಳ್ಳದ್ದಾಗಿಯೂ ಇದೆ. ಅಲ್ಲಿಂದ ಐವತ್ತು ಅಡಿಗಳ ಅಂತರದಲ್ಲಿ ಜೈನ ದೇವಾಲಯವೊಂದಿದೆ. ಆ ಗುಡಿಯ ಪ್ರಾಂಗಣದಲ್ಲಿ ಹೂಬಳ್ಳಿಗಳ ವನವೇ ಹಬ್ಬಿದೆ. ಗರ್ಭಗುಡಿಯಲ್ಲಿ ಜೈನಮೂರ್ತಿ ಇದೆ. ಗೋಡೆಯ ಮೇಲೆ ಮಹಾವೀರ ಮೊದಲಾದ ತೀರ್ಥಂಕರರ ಜೀವನಚರಿತ್ರೆಯನ್ನು ಬಹು ರಮಣೀಯವಾಗಿ ಚಿತ್ರಿಸಿದ್ದಾರೆ. ಗುಡಿಯಿಂದ ಹೊರಬಂದೊಡನೆ ಎದುರಿಗೆ, ವಿಶಾಲವಾಗಿ ಬೆಳೆದಿರುವ ಬೋಧಿವೃಕ್ಷ ಕಾಣುವುದು. ಅದನ್ನು ಸಿಲೋನಿನ ಬೋಧಿವೃಕ್ಷದಿಂದ ೧೯೩೧ರಲ್ಲಿ ತಂದು ಹಚ್ಚಿದ್ದಾರೆ.

ದಿನಮಣಿಯು ಗಗನದ ನಿಚ್ಚಣಿಕೆಯನ್ನು ಏರುತ್ತ ಹೊರಟಿದ್ದ. ಬಿಸಿಲು ಸ್ವಲ್ಪ ಬಿರುಸಾಯಿತು. ಬೋಧಿವೃಕ್ಷದಡಿಯಲ್ಲೇ ಫಲಾಹಾರ ಮುಗಿಸಿದೆವು. ಆಯಾಸವಾದುದರಿಂದ ಬೋಧಿವೃಕ್ಷವನ್ನೇ ಆಶ್ರಯಿಸಬೇಕಾಯ್ತು. ನನ್ನನ್ನಂತೂ ನಿದ್ರಾದೇವಿ ಪೂರ್ಣವಾಗಿ ಆವರಿಸಿದಳು. ಬುದ್ಧನಿಗೆ ಜ್ಞಾನದಾನ ಮಾಡಿದ ಬೋಧಿವೃಕ್ಷದಡಿಯಲ್ಲಿ "ಜ್ಞಾನಭಿಕ್ಷೆ" ದಯಪಾಲಿಸೆಂದು ಕಣ್ಮುಚ್ಚಿದೆ. ಸ್ವಲ್ಪ ಹೊತ್ತಿನಲ್ಲಿಯೆ "ಸಂಗ್ರಹಾಲಯದಲ್ಲಿ ನಡೆ, ಅಲ್ಲಿ ಬುದ್ಧವಿಗ್ರಹಗಳ ದರ್ಶನದಿಂದಲೂ, ಭಗ್ನಾವಶೇಷಗಳ ದರ್ಶನದಿಂದಲೂ ನಿನಗೆ ಜ್ಞಾನೋದಯವಾಗುವುದು'' ಎಂದು ಅಂತರಾತ್ಮನ ಅಮರವಾಣಿ ನುಡಿಯಿತು. ಕೂಡಲೆ ತಡವರಿಸುತ್ತ ಎದ್ದು ಕುಳಿತೆ. 'ನಾನು ಕಾಣುತ್ತಿದ್ದುದು ಹಗಲುಗನಸೋ?' ಎಂದು ಸಂಶಯ ಉದ್ಭವಿಸಿತು. ಇದನ್ನು ಖಚಿತ ಮಾಡಿಕೊಳ್ಳಲು ಸಂಗ್ರಹಾಲಯದತ್ತ ಮನಸ್ಸು ಹಾತೊರೆಯತೊಡಗಿತು.

ಸುಂದರವಾಗಿಯೂ ಅಚ್ಚುಕಟ್ಟಾಗಿಯೂ ಇರುವ ಭವ್ಯವಾದ ಉಪವನದ ಮಧ್ಯದಲ್ಲಿಯೇ ಸಂಗ್ರಹಾಲಯವು ಸಾಲ್ಗೊಂಡಿದೆ. ಸಂಗ್ರಹಾಲಯದ ಹೊರಮುಗ್ಗಲ ಭಾವಣಿಯಲ್ಲಿಯೆ ಅಲ್ಲಿ ದೊರೆತ ಅವಶೇಷಗಳನ್ನು ಇರಿಸಿದ್ದಾರೆ. ಅವನ್ನು ನೋಡಿ ಮತ್ತಷ್ಟು ಮನ ಕೆರಳಿತು. ಪ್ರತಿಯೊಬ್ಬರೂ ಎರಡಾಣೆ ಟಿಕೇಟು ಪಡೆಕೊಂಡು ಒಳಗೆ ಹೊರಟೆವು. ಎದುರಿಗೆ ಭವ್ಯವಾದ, ಬೃಹದಾಕಾರದ, ಥಳಥಳ ಹೊಳೆಯುವ ಅಶೋಕಸ್ತಂಭವಿದೆ. ಆ ಸ್ತಂಭದಲ್ಲಿ ನಾಲ್ಕು ದಿಕ್ಕಿಗೂ ನಾಲ್ಕು ಸಿಂಹಗಳ ವಿಗ್ರಹಗಳಿವೆ. ಅವುಗಳ ಕೆಳಗೆ ನಾಲ್ಕು ಧರ್ಮಚಕ್ರಗಳಿವೆ. ಅಶೋಕಸ್ತಂಭದ ಧರ್ಮಚಕ್ರವೇ ಇಂದು ಸ್ವತಂತ್ರಭಾರತದ ಪವಿತ್ರಧ್ವಜದಲ್ಲಿ ರಾರಾಜಿಸುತ್ತದೆ. ಸ್ತಂಭದ ಪಕ್ಕದಲ್ಲೇ ಹತ್ತು ಅಡಿ ಎತ್ತರವುಳ್ಳ ಬುದ್ಧವಿಗ್ರಹವಿದೆ. ಮತ್ತೊಂದೆಡೆ ಸಮ್ರಾಟ್ ಚಂದ್ರಗುಪ್ತನ ಧರ್ಮಛತ್ರವು ವಿರಾಜಿಸುತ್ತಿದೆ. ಅದು ಹದಿನೈದು ಅಡಿ ಸುತ್ತಳತೆಯುಳ್ಳ ಕಲ್ಲಿನ ಛತ್ರ. ಆ ಕೋಣೆಯಲ್ಲಿ ಇನ್ನೂ ಅನೇಕ ಪ್ರೇಕ್ಷಣೀಯ ವಸ್ತುಗಳಿವೆ.

ಎರಡನೆಯ ಕೋಣೆಯಲ್ಲಿ ಸ್ತೂಪಗಳ ಗೋಪುರಗಳು, ಶಿಖರಗಳು ಮತ್ತು ಆರನೆಯ ಶತಮಾನದ ತಾಮ್ರದ, ಹಿತ್ತಾಳೆಯ ಸಾಮಾನುಗಳು ಇರುತ್ತವೆ. ಮತ್ತೊಂದು ಕಪಾಟಿನಲ್ಲಿ ಬುದ್ಧನ ಹಸ್ತಗಳಿವೆ. ಅಂಗೈರೇಖೆಗಳು ಇಂದಿಗೂ ಅಚ್ಚಳಿಯದೆ ಸ್ಪಷ್ಟವಾಗಿವೆ. ಅತೀ ಸಣ್ಣ ವಿಗ್ರಹಗಳೂ ಇಲ್ಲಿ ನೋಡಲು ಸಿಗುವುವು.

ಮೂರನೆಯ ಕೋಣೆಯಲ್ಲಿ ಆರನೆಯ ಶತಮಾನದ ದೊಡ್ಡ ಮಡಕೆಗಳು ಇರುತ್ತವೆ. ಹೆಬ್ಬಾಗಿಲ ತೋರಣಗಳೂ, ಅಶ್ವಾರೋಹಿಯ ಮೂರ್ತಿಗಳೂ ಇವೆ. ಒಂದು ಕಪಾಟಿನಲ್ಲಿ ಶಿಲಾಲಿಪಿಗಳುಂಟು. ಅವು ಸಂಸ್ಕೃತ ಮತ್ತು ಪಾಲೀ ಭಾಷೆಗಳಲ್ಲಿವೆ ಐದನೆಯ ಶತಮಾನದಲ್ಲಿ ರಾಜರು ಉಪಯೋಗಿಸುತ್ತಿದ್ದ ಶಿಕ್ಕಾಗಳೂ

( ೯೭ನೆಯ ಪುಟ ನೋಡಿ )

# ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಅಶೋಕಚಕ್ರ' ಗೀತರೂಪಕವನ್ನು ಕುರಿತು ಆರುಜನರಿಂದಲೂ 'ಇದೊಂದುಕಥೆ'ಯನ್ನು ಕುರಿತು ಐದುಜನರಿಂದಲೂ ವಿಮರ್ಶೆಗಳು ಬಂದಿವೆ.

**'ಅಶೋಕಚಕ್ರ'ವನ್ನು ವಿಮರ್ಶಿಸಿದವರು :**

೧. ಕುಮಾರಿ ಚಂದ್ರಿಕಾ ಕೊಪ್ಪರ, ಹಳಿಯಾಳ. ೨. ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ), ಧಾರವಾಡ. ೩. ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು ೪. ಶ್ರೀ. ಸೀತಾರಾಮ ಎಸ್. ಜಾಹಗೀರ್‌ದಾರ್, ಹೈದರಾಬಾದ್, ೫. ಶ್ರೀ. ಎನ್. ಭೀಮಭಟ್ಟ, ಸಾಹಿತ್ಯಶಿರೋಮಣಿ, ಕನ್ಯಾನ (ದ. ಕ.). ೬. ಕೆ. ವಿ. ಆಚಾರ್ಯ ಎಸ್. ಎಂ. ಎಸ್. ಪಿ. ಎಸ್. ಕಾಲೇಜ್, ಉಡುಪಿ.

**'ಇದೊಂದು ಕಥೆ'ಯನ್ನು ವಿಮರ್ಶಿಸಿದವರು :**

೧. ಶ್ರೀ. ಜಿ. ಮಲ್ಲಾರಿಭಟ್ಟ, ಹೊಸಪೇಟೆ. ೨. 'ವಾಣಿ' ಹುಬ್ಬಳ್ಳಿ. ೩. ಶ್ರೀ. ಯಲ್ಲಣ್ಣ ಸುಲ್ತಾನ್‌ಪುರ, ಗೋಗಿ: ೪. ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು. ೫. ಶ್ರೀ. ಆರ್. ವಿ. ಭಟ್ಟ, ಮಂಚಿಕೇರಿ (ಉ. ಕ.)

'ಅಶೋಕಚಕ್ರ'ದ ವಿಮರ್ಶೆಗಳನ್ನು ಶ್ರೀಮಾನ್ ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ. ಟಿ. ಅವರ ಕಡೆಗೆ ನಿರ್ಣಯಕ್ಕಾಗಿ ಒಪ್ಪಿಸಲಾಗಿದ್ದಿತು. 'ಇದೊಂದುಕಥೆ'ಯ ವಿಮರ್ಶೆಗಳನ್ನು ನಮ್ಮ ಸಂಪಾದಕಸಮಿತಿಯು ನೋಡಿ ನಿರ್ಣಯವನ್ನು ಕೊಟ್ಟಿದೆ 'ಅಶೋಕಚಕ್ರ'ದ ವಿಮರ್ಶೆಗಳ ಬಗೆಗೆ ಪರೀಕ್ಷಕರು ಹೀಗೆ ತಮ್ಮ ತೀರ್ಮಾನವನ್ನು ಇತ್ತಿದ್ದಾರೆ·

"ಆರೂ ವಿಮರ್ಶೆಗಳು ಒಳ್ಳೆಯವಾಗಿವೆ. ಪ್ರತಿಯೊಬ್ಬ ವಿಮರ್ಶಕನೂ ಗೀತರೂಪಕದ ವೈಶಿಷ್ಟ್ಯವನ್ನೂ ಪಾತ್ರಗಳ ಗುಣ·ಧರ್ಮಗಳನ್ನೂ ಚೆನ್ನಾಗಿ ಅರಿತುಕೊಂಡಿದ್ದಾನೆ. ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ), ಮತ್ತು ಶ್ರೀ. ಕೆ. ಎಸ್. ಶರ್ಮಾ ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ. (ಸಾಧ್ಯವಿದ್ದರೆ ಎರಡನ್ನೂ ಪ್ರಕಟಿಸಬೇಕು.) ಶ್ರೀ. ಎನ್. ಭೀಮಭಟ್ಟ, ಶ್ರೀ. ಕೆ. ವಿ. ಆಚಾರ್ಯ, ಕುಮಾರಿ ಚಂದ್ರಿಕಾ ಕೊಪ್ಪರ ಇವರ ವಿಮರ್ಶೆಗಳು ಉತ್ತಮವಾಗಿವೆ. ನಮ್ಮ ತರುಣಕನ್ನಡಿಗರು ಇಷ್ಟೊಂದು ಒಳ್ಳೆಯ ರೀತಿಯಿಂದ ಸಾಹಿತ್ಯವಿಮರ್ಶೆ ಮಾಡಿದುದನ್ನು ನೋಡಿ, ನನಗೆ ತುಂಬ ಅಭಿಮಾನವೆನಿಸಿತು."

ಕಥೆಯ ವಿಮರ್ಶೆಗಳಲ್ಲಿ ಶ್ರೀಮಾನ್ ಕೆ. ಎಸ್. ಶರ್ಮಾ ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಯಲ್ಲಣ್ಣ ಸುಲ್ತಾನ್‌ಪುರ, ಶ್ರೀ. ಆರ್. ವಿ. ಭಟ್ಟ ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕವು ಸಾಮಾನ್ಯವಾಗಿವೆ

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ 'ಕುರುಡುಕಣ್ಣು' ಎಂಬ ಕತೆಯನ್ನಾಗಲಿ, 'ಮುಗಿಯದ ಯುದ್ಧ' ಎಂಬ ನಗೆಯಾಟವನ್ನಾಗಲಿ ವಿಮರ್ಶಿಸಿ ಲೇಖನಗಳನ್ನು ಕಳುಹಬೇಕು. ಈ ಸಲದ ನಿರ್ಣಯಕಾರ್ಯದಲ್ಲಿ ಸಹಕಾರ ನೀಡಿದುದಕ್ಕಾಗಿ, ಶ್ರೀ. ಗಲಗಲಿ ಗೋವರ್ಧನಾಚಾರ್ಯರಿಗೆ ನಮ್ಮ ಧನ್ಯವಾದಗಳು.

—ಸಂಪಾದಕ

# ‘ ಅಶೋಕ ಚಕ್ರ ’

## ( ಗೀತರೂಪಕದ ವಿಮರ್ಶೆ )

ಶ್ರೀ. ಆರ್. ಜಿ. ಕುಲಕರ್ಣಿ, ( ಬೆನಕಟ್ಟಿ )

“ಅಶೋಕಚಕ್ರ”ವು ಶ್ರೀ. ಕೃಷ್ಣಶರ್ಮರ ವ್ಯಕ್ತಿತ್ವದ ಪಡಿನೆಳಲಾಗಿ ಬಂದಿದೆ. ಸ್ಫುಟವಾದ ವಿಚಾರ, ಪಾಂಡಿತ್ಯಪೂರ್ಣ ರಸದೃಷ್ಟಿ, ಇಡಿಯನ್ನೂ ಬಿಡಿಯನ್ನೂ ಸಮನ್ವಯದೃಷ್ಟಿಯಿಂದ ಕಾಣುವ ಬಗೆ, ಇವುಗಳ ಹಿಂದೆ ನಿಂತ ಅನುಭವದ ಆಳ, ಇವೆಲ್ಲವೂ ಒಂದು ತಿಳಿಯಾದ ಶೈಲಿಯಲ್ಲಿ ಜನಸಾಮಾನ್ಯರಿಗೂ ಅರ್ಥವಾಗುವಂಥ ಗೀತರೂಪಕವಾಗಿ ಮೂಡಿನಿಂತಿವೆ.

‘ಅಶೋಕಚಕ್ರ’ವು ಶ್ರಾವ್ಯಕಾವ್ಯ. ಬಾನುಲಿಯ ರೂಪಕಗಳ ತಂತ್ರ ಕನ್ನಡಕ್ಕೆ ಹೊಸದೆನ್ನಬಹುದು. ಇಲ್ಲಿ ಶ್ರೋತೃವಿನ ಅಂತರಂಗವನ್ನು ಕರ್ಣಬಂಧುರ ವಾಣಿಯಿಂದ ಸೆರೆಹಿಡಿದು, ಅವನ ಕಲ್ಪನಾಶಕ್ತಿಯನ್ನು ಕೆರಳಿಸಿ ರಸದೂಟವನ್ನುಣಿಸಬೇಕಾಗುತ್ತದೆ. ನಾಲ್ವತ್ತೈದು ನಿಮಿಷಗಳ ಚಿಕ್ಕ ಅವಧಿಯಲ್ಲಿ, ಅಶೋಕನ ವ್ಯಕ್ತಿತ್ವವಲ್ಲದ ಮಹಾಪರಿವರ್ತನೆಯ ಚಿತ್ರವನ್ನು ಚಿತ್ರಿಸುವಲ್ಲಿ ‘ಅಶೋಕಚಕ್ರ’ವು ತುಂಬಾ ಯಶಸ್ವಿಯಾಗಿದೆ. ನಾಲ್ಕು ದೃಶ್ಯಗಳ ಈ ಗೀತರೂಪಕದಲ್ಲಿ ಈ ಚಿತ್ರದ ನಾಲ್ಕು ಮುಖಗಳು ಪರಿಸ್ಫುಟವಾಗಿ ಮೂಡಿನಿಂತಿವೆ. ಅಶೋಕನು ಒಂದು ವ್ಯಕ್ತಿಮಾತ್ರವಲ್ಲ; ಭಾರತೀಯ ಜನಮನದ ಪ್ರಾರ್ಥನೆಯೆ ಒಂದು ರೂಪವನ್ನು ತಾಳಿ ಅಭಿವ್ಯಕ್ತವಾಗುವುದರ ಪ್ರತೀಕನಾಗಿದ್ದಾನೆ. ಆ ಸಾಮಾನ್ಯ ವ್ಯಕ್ತಿಯಲ್ಲಿ ಅಸಾಮಾನ್ಯವಾದ ವಿಶ್ವಕಲ್ಯಾಣದೃಷ್ಟಿ ಅಭಿವ್ಯಕ್ತವಾಗಲು ಕಾರಣವಾದ ಹಿನ್ನೆಲೆ, ಪರಿಸರ ಹಾಗೂ ಅದರ ಪರಿಣಾಮವಾಗಿ, ವ್ಯಷ್ಟಿಗತವಾದ ಅಶೋಕತತ್ವವು ಸಮಷ್ಟಿರೂಪ ತಾಳಿನಿಂತ ಬಗೆ ಇವೆಲ್ಲವೂ ಈ ಚಿಕ್ಕ ರೂಪಕದಲ್ಲಿ ಹೂವಿನಂತೆ ಅರಳುತ್ತವೆ.

ಮೊದಲನೆಯ ದೃಶ್ಯದಲ್ಲಿ ಅಶೋಕನ ವ್ಯಕ್ತಿತ್ವವನ್ನು ಕುರಿತ ಗುಣಗಾನ, ಜನಮನದ ಪ್ರಾರ್ಥನೆ—ನವಯುಗದ ಪೂರ್ವಸೂಚನೆಗಳು ಹಿಮ್ಮೇಳದವರಿಂದ ಹಾಡಾಗಿ ಬರುತ್ತವೆ. ಅಶೋಕನು ಪರಾಕ್ರಮಿ; ಆದರೆ ಅವನಿಗೆ ಆ ಶಕ್ತಿಯಿಂದು ವಿಶ್ವಕಲ್ಯಾಣದ ಸಾಧನವಾಗಿ ಉಪಯೋಗವಾಗುತ್ತಿಲ್ಲ. ಅವನೀಗ ದಿಗ್ವಿಜಯದ ಭ್ರಮೆಯಲ್ಲಿದ್ದಾನೆ. ಎಲ್ಲೆಲ್ಲಿಯೂ ರಕ್ತದ ಕೋಡಿ ಹರಿಯುತ್ತಿದೆ. ಅದೇ ಒಂದು ಸಂಭ್ರಮದ ಸಾಧನೆಯಾಗಿದೆ. ಅದನ್ನು ಕಂಡು ಅಶೋಕನ ಪತ್ನಿಯಾದ ಸುಭದ್ರಾಂಗಿ, ಅವಳ ಮಗಳು ಸಂಘಮಿತ್ರೆ, ಅಶೋಕನ ಅಣ್ಣನ ಮಗ ನ್ಯಗ್ರೋಧ, ಅಶೋಕನ ಮಗನಾದ ಮಹೇಂದ್ರಕುಮಾರ—ಎಲ್ಲರೂ ಚಿಂತಿಸುತ್ತಿದ್ದಾರೆ. ಮನೆಮಾರು, ನಾಡುಗಳ ಗಡಿಯನ್ನು ಮೀರಿ ಜೀವಕಾರುಣ್ಯವು ವಿಶ್ವವ್ಯಾಪಿಯಾಗಲಾರದೆ ? ಧರ್ಮರಂಗದಲ್ಲಿ ಹಿರಿದಾದ ಸ್ಥಾನ ಪಡೆದ ದಯಾಭಾವವು ಕ್ಷಾತ್ರರಂಗವನ್ನು ವ್ಯಾಪಿಸಬಾರದೆ ?—ಅದು ಅವರ ಕೊರಗು ! ಪ್ರಾರ್ಥನೆ.

ಮಹೇಂದ್ರಕುಮಾರನು ೧೭-೧೮ರ ವರುಷದ ಕುಮಾರ. ಅವನಲ್ಲಿ ಧರ್ಮಾಧರ್ಮದ ದ್ವಂದ್ವವಿದೆ. ಸುಭದ್ರಾಂಗಿಯಲ್ಲಿ ಜೀವಕಾರುಣ್ಯದ ಅಮೃತಸಂಗೀತವು ಎಂದಿಗೆ ಜನಮನದ ಹಾಡಾದೀತೆಂಬ ಕೊರಗಿದೆ; ಆದರೆ ನ್ಯಗ್ರೋಧನಲ್ಲಿ ಅದು ಬರಲಿರುವ ಬಾಳಿನ ಮಂತ್ರವೆಂದೂ, ಅದು ಬಂದೇ ತೀರಲಿದೆಯೆಂದೂ ಆತ್ಮಸಂತೃಪ್ತಿಯಿದೆ. ತಾಳ್ಮೆಯಿದೆ. ಸೇವಾಭಾವವಿದೆ. ಅಶೋಕನ ರಕ್ತರಂಜಿತ ವಿಜಯೋತ್ಸಾಹವನ್ನು ಕಂಡು ಇವರೆಲ್ಲ ಖಿನ್ನರಾಗಿದ್ದರೆ. ಕಹಿಯಾಗಿಲ್ಲ. ಯಾವುದೋ ಒಂದು ಅನಂತ ಕಾರುಣ್ಯಭಾವ ಮಧುರಮಧುರವಾಗಿ ದಿವ್ಯಸಂಗೀತವಾಗಿ ಅವರ ಅಂತರಂಗದಿಂದುಕ್ಕಿ ಅಶೋಕನನ್ನು ಸುತ್ತುವರಿಯುತ್ತಿದೆ. ಅದರ ಪ್ರಭಾವದಿಂದ ಅಶೋಕನ ಅಂತರಂಗವು ಅವನಿಗರಿಯದಂತೆಯೇ ಕಂಪಿಸುತ್ತಿದೆ. ಆದರೆ ಆ ಕಂಪನದ ಅರ್ಥ ಅವನಿಗೀಗ ಸಂಪೂರ್ಣವಾಗಿ ಆಗುತ್ತಿರುವುದಿಲ್ಲ. ರಾಧಾಗುಪ್ತನಂತಹ ಪ್ರಧಾನಸಚಿವರ ರೂಪದಲ್ಲಿ—ಇಲ್ಲಿಯ ವರೆಗೆ ನಡೆದುಬಂದ ಕ್ಷಾತ್ರವೃತ್ತಿ ಆ ಮೂಕಕಂಪನವನ್ನು ಪ್ರತಿಭಟಿಸುತ್ತಲಿದೆ:

“ ದಯೆಯ ಬೆಂಬಳಸಿದರೆ ವೈರಿಗಳ ಅಳಿವೆಂತು ?
ಹಿಂಸೆಯಿಲ್ಲದೆ ವೈರಿಬಲವು ವಶವಹುದೆಂತು ? ”

ಭಾರತೀಯ ಜನಮನದಿಂದಲೇ ಮೂಡಿಬಂದ ಬೌದ್ಧದರ್ಶನದ ಜೀವಕಾರುಣ್ಯಕ್ಕೆ ಈ ಪ್ರಶ್ನೆ ಎದುರಾಗಿ ನಿಂತಿದೆ. ತಾನು ಬದುಕಬೇಕು; ನಾಲ್ಕು ಜನರಲ್ಲಿ ಗಣ್ಯನಾಗಿ, ಪ್ರಭಾವಶಾಲಿಯಾಗಿ ಬಾಳಬೇಕೆಂಬ ದೃಷ್ಟಿಗೆ—ಈ ಆತ್ಮತ್ಯಾಗದ ಪ್ರಚಂಡ ಕಲ್ಪನೆ ಸಹಿಸಲು ಅಶಕ್ಯವಾಗುತ್ತದೆ. ಆದರೆ ಹೊಸಯುಗದ ಬೆಳಕು ಈ ಎಲ್ಲ ಸಮಸ್ಯೆಗಳನ್ನು ಕೊಚ್ಚಿಕೊಂಡು ಹೋಗಿ, ಹೊಸ ಉತ್ತರವನ್ನೇ ಕೊಡುತ್ತದೆ:

“ ಅರಸರೆಲ್ಲರು ವೈರ ತೊರೆದಹಿಂಸೆಗೆ ಮನ-
ವೆರಸಿದರೀ ಧರೆ ಧರ್ಮನಾಕ ! ”

ಎಂಬುದು ನವಯುಗದ ಕನಸು—ನ್ಯಗ್ರೋಧನಲ್ಲಿ ಮೂಡಿದೆ.

ಎರಡನೆಯ ದೃಶ್ಯದಲ್ಲಿ ಈ ಕನಸು ನನಸಾಗುವುದರ ಮುಂಗತ್ತಲು ಇದೆ. ಸಮನ್ವಯ — ಶಾಂತಿ— ಪ್ರೇಮಗಳ ವಿಧಾಯಕ ಪ್ರಪಂಚದ ಸೃಷ್ಟಿಯಾಗುವುದರ ಪೂರ್ವದಲ್ಲಿ ರುದ್ರಲೀಲೆ ನಡೆಯಬೇಕಲ್ಲವೆ ! ಯುದ್ಧವನ್ನು ತಡೆಯುವುದು ಹೇಡಿತನವೆಂದು ಅಶೋಕನು ಭಾವಿಸಿದ್ದಾನೆ. ಅವನ ವಿಜಯಮಾಲಿಕೆಯಲ್ಲಿ ಕಲಿಂಗದ ಸ್ಮಶಾನಪುಷ್ಪವೂ ಸೇರಬೇಕಾಗಿದೆ. ಅದಕ್ಕೆ ರಾಧಾಗುಪ್ತನು ಪ್ರೋತ್ಸಾಹ ನೀಡುತ್ತಿದ್ದಾನೆ. ಅದರ ಸಂಗಡ ಮೈಯಲ್ಲಿ ಉತ್ಸಾಹ, ಪರಾಕ್ರಮ ! ಕೈಯಲ್ಲಿ ಪ್ರಚಂಡ ಸೈನ್ಯಬಲ ! ಅದರಲ್ಲಿ ಸಂಘಮಿತ್ರೆ, ಸುಭದ್ರಾಂಗಿ–ನ್ಯಗ್ರೋಧರ ಅಮೃತವಾಣಿ ಸ್ಪಷ್ಟವಾಗಿ ಕೇಳದಂತಾಗಿದೆ. ಆದರೂ ಎಲ್ಲಿಂದಲೋ ದೂರದ ಲೋಕದಿಂದ ಧ್ವನಿಯೊಂದು ಬಂದಂತೆ—ಅವನ ಅಂತರಾಳದಲ್ಲಿ ತುಸು ಗಲಿಬಿಲಿಯುಂಟಾಗುತ್ತದೆ. ಆದರೆ ಕಾಲವಿನ್ನೂ ಪಕ್ವವಾಗಿಲ್ಲ. ಅದು ಪಕ್ವವಾದುದು ಕಲಿಂಗದ ಮಹಾಸಂಗರದನಂತರ.

" ತನ್ನ ರಾಜ್ಯದಲ್ಲಿ ತಾನು ಶಾಂತಿ-ಸುಖದಲಿರುವನು,
ನಮ್ಮನೇನು ಮಾಡಿರುವನು ಆ ಕಲಿಂಗರಾಜನು ?"

ಎಂದು ಸಂಘಮಿತ್ರೆ ಅಶೋಕನ ಆವೇಶವನ್ನು ಪ್ರಶ್ನಿಸುತ್ತಾಳೆ. 'ಅನಾವಶ್ಯಕ ಕಗ್ಗೊಲೆಯಿಂದ ಬರುವ ಕೀರ್ತಿಗೆ ಹಂಬಲಿಸುವುದೇಕೆ?' ಎಂದು ಕೇಳಿದಾಗ, ಅಶೋಕನ ಬಳಿ ಉತ್ತರವಿಲ್ಲ. ರಾಧಾಗುಪ್ತನಿಗಾದರೋ ಇದೊಂದು ಹೊಸಯುಗದ ಗಾಳಿಮಾತಾಗಿ ಕಾಣುತ್ತದೆ. ನಾವು ಬಾಳಬೇಕು. ಬಾಳಬೇಕಾದರೆ ನಮ್ಮ ಶತ್ರುಗಳ ಧ್ವಂಸವಾಗಬೇಕು. 'ಯಾರು ಶತ್ರುಗಳು?' ಎಂದು ಕೇಳಿದರೆ ಅದಕ್ಕೂ ಚಿಂತಿಸುವಂತಿಲ್ಲ. 'ನಮಗೆ ತಲೆಬಾಗದವರೆಲ್ಲ ಶತ್ರುಗಳು !' ಇದು ಆ ಪ್ರಧಾನಸಚಿವನ—ಅದೇಕೆ ಸಮಸ್ತ ರಾಜನೀತಿಜ್ಞರ ಅಂದಿನ ವಿಚಾರಪ್ರಣಾಲಿ. ಅದಕ್ಕೆ ಪ್ರತಿಯಾಗಿ ಬೌದ್ಧದರ್ಶನ ನಿಂತಿದೆ. ಮೊದಲು ಬಾಳುವುದೇ ಬಾಳಿನ ಅಂತಿಮ ಗುರಿಯಲ್ಲ. ಬಾಳನ್ನು ಆಹುತಿ ಕೊಟ್ಟು ಶತ್ರುತ್ವದ-ಶತ್ರುಭಾವದ ನಾಶಮಾಡಬೇಕೆಂಬುದು ಅವರ ಮಂತ್ರ. ಇದು ವೀರ ಅಶೋಕನಿಗೆ ಹೇಗೆ ಹಿಡಿಯಬೇಕು ? ಸರಿ, ಯುದ್ಧ ಪ್ರಾರಂಭವಾಗಿಯೇ ಬಿಟ್ಟಿತು. ಗೆಲವೂ ಆಯಿತು ! ಆದರೆ ಎಂಥ ಗೆಲವು ?

ಮೂರನೆಯ ದೃಶ್ಯದಲ್ಲಿ—ಆ ಗೆಲವಿನಲ್ಲಡಗಿದ ಮಹಾ ಸೋಲು ತನ್ನ ವಿಕಾರಮುಖವೆತ್ತಿ ನಿಲ್ಲುತ್ತದೆ.

"ಎಂಥ ಯುದ್ಧವಿದು, ಎಂಥ ಯುದ್ಧವೋ, ಅಂತ ಆದಿಯಿಲ್ಲದ ಮರಣ....ಸಂಥಕಾರ ಮಗಧೇಶನಾದನೋ ವಿಜಯದೇವಿಗೊಂದಾಭರಣ–" ಆದರೆ ಈ ಆಭರಣದ ವೈಭವದಲ್ಲಿ ಆನಂದವಿಲ್ಲ. ಈ ಸಲ ಅಶೋಕನಿಗೆ ಏನಾಗಿದೆ ? ಆತನಿಗೇ ಅರ್ಥವಾಗದು. ಸಾವಿನ ದವಡೆಯಲ್ಲಿ ನುಚ್ಚುನೂರಾಗಿ ನರಳುತ್ತಿರುವ ನಿರಪರಾಧಿ ಸೈನಿಕರಲ್ಲಿ ಆತನಿಗಿಂದು ಶತ್ರು-ಮಿತ್ರರೆಂಬ ಭೇದ ಕಾಣುತ್ತಿಲ್ಲ. ಜನಸಾಮಾನ್ಯರಿಗೆ ಬೇಕಾದುದೇನು ? ಇದೇನೆ ? ಯಾವನೋ ಮಗಧರಾಜ ! ಆತನ ಹಾಳು ವಿಜಯೋತ್ಸವಕ್ಕಾಗಿ ಇವರೆಲ್ಲ ಏಕೆ ಸಾಯಬೇಕು ? ಎಷ್ಟು ಜನ ಆತನನ್ನಿಂದು ಶಪಿಸುತ್ತಿದ್ದಾರೆ ! ರಣರಂಗದಲ್ಲಿ ಖಿನ್ನಮನಸ್ಕನಾಗಿ ಮಹಾಚಕ್ರವರ್ತಿ ತಿರುಗಾಡುತ್ತಿದ್ದಾನೆ ! ಅಲ್ಲಿ ಆತ ಕಂಡುದೇನು ? ಸಾವಿನ ಸಂಕಟದಲ್ಲಿ—ನೀರಿಲ್ಲದೆ ಬಳಲಿ ಬಳಲಿ ಸಾಯುತ್ತಿದೆ ಒಂದು ಜೀವ ! ಇನ್ನೊಂದು ಜೀವ ನಲ್ಲೆಯನ್ನು ನೆನೆದು ನರಳುತ್ತಿದೆ. ಮಗುದೊಂದು ಜೀವ, ತನ್ನ ಮಗಳನ್ನು ವಿಧವೆಯಾಗಿಸಿದ ಸಂಕಟದಿಂದ ಕೊನೆಯ ಉಸಿರೆಳೆಯುತ್ತದೆ. ತಂದೆಯಿಲ್ಲ! ಗಂಡನಿಲ್ಲ ! ಆ ಸುಕುಮಾರಜೀವದ ಎದೆಗಿಚ್ಚು ಹೇಗೆ ಶಾಂತವಾದೀತು ! ಓ ಸಾವೆ ! ಇದನ್ನೆಲ್ಲ ತಂದವರಾರು ? ಇದು ಅವಶ್ಯವೆ ? ಎಷ್ಟೊಂದು ತಾಯ್ಗರುಳುಗಳು ಅಶೋಕಚಕ್ರವರ್ತಿಗೆ ಶಾಪ ಹಾಕಿ ಮಣ್ಣುಸೇರುತ್ತಿರಬಹುದು !

" ಹಾಳಾಗಲಿ ಮಗಧರಾಜ್ಯ. ಹಾಳಾಗಲಿ ಆ ದೊರೆ—
ನನ್ನಂತೆಯೆ ಮಗನನಗಲಿ ಮುಗಿಲಿಗಿಡಲಿ ಅವ ಮೊರೆ ! "

ಸುತ್ತಲೂ ಶಾಪ ! ಆರ್ತನಾದ ! ಧಿಕ್ಕಾರ !! ಇದೇ ಗೆಲವಿನ ಕೀರ್ತನೆಯೆ ? ಅಶೋಕನೆಂದರೆ ಈ ದುಃಖಿಗಳ ದೃಷ್ಟಿಯಲ್ಲಿ ಒಬ್ಬ ರಾಕ್ಷಸ ! ಕರುಳಿಲ್ಲದ ಕಲ್ಲುಬಂಡೆ ! ಕರುಣಾಹೀನ ಪಶು ! ಇದೆಂಥ ಗೆಲವು! ಅಶೋಕನ ಅಂತರಂಗದಲ್ಲಿಂದು ಮಹಾ ಕೋಲಾಹಲವೆದ್ದಿದೆ. ರಾಧಾಗುಪ್ತನು ಈ ಸನ್ನಿವೇಶಗಳಿಗೆಲ್ಲ ಕಣ್ಣುಮುಚ್ಚಲು ಹೇಳುತ್ತಾನೆ. ಇದೆಲ್ಲ ಸ್ವಾಭಾವಿಕವೆಂದು ಹೇಳುತ್ತಾನೆ. ಸ್ವಾಭಾವಿಕವೆಂದು ಹೇಳಿದಾಕ್ಷಣ ಇದೆಲ್ಲಾ ಅನಿವಾರ್ಯವೆನ್ನಬೇಕೆ ? ಕಣ್ಣುಮುಚ್ಚಿ, ಈ ಅನ್ಯಾಯವನ್ನು ಹೀಗೆಯೆ ನಡೆಯಗೊಡಬೇಕೆ ? ಅಶೋಕ ಮಾತನಾಡಲಾರದವನಾಗಿದ್ದಾನೆ; ಅವನ ಅಂತರಂಗದಲ್ಲಿ ಮಹಾ ಮೌನದ ಕಿಚ್ಚು ಹೊತ್ತಿದೆ !

ನಾಲ್ಕನೆಯ ದೃಶ್ಯದ ಪ್ರಾರಂಭದಲ್ಲಿ ಕಾಣುವುದು ಈ ಮೂಕ ಚಿಂತನೆ ! ಮೌನಕ್ರಂದನ ! —

" ಏನಿದಚ್ಚರಿ ! ಏನಿದಚ್ಚರಿ, ಮೌನವಾತವು ಸುಳಿಯಿತೋ
ಸೇನೆಯುಳಿದಾ ಪಾಳ್ಪಾಳ್ಯದಿ ಮೌನವೇ ಬಂದಿಳಿಯಿತೋ !"

ಈ ಮೌನವು ಬರಿ ದಿಙ್ಮೂಢತೆಯಲ್ಲ. ಮಾನವನ ಸಂಕಲ್ಪವು ತನ್ನ ಅನಿವಾರ್ಯವಾದ ಅಭಿವ್ಯಕ್ತಿ ಪಡೆಯುವುದರ ಪೂರ್ವಸೂಚನೆ. ಅಶೋಕನಲ್ಲಿ ಆ ನವದರ್ಶನದ ಅರುಣೋದಯವಾಗಿದೆ. ಆತನೀಗ ತನ್ನ ಸಮಸ್ತಶಕ್ತಿಯನ್ನು–ತನ್ನ ತನವೆಂಬುದನ್ನೆಲ್ಲವನ್ನೂ—ಸ್ವೀಕರಿಸಿ ದಾರಿ ತೋರಬಲ್ಲ ಸದ್ಗುರುವಿಗಾಗಿ ಹಂಬಲಿಸುತ್ತಿದ್ದಾನೆ ? ಈ ಮಾನವೀ ನಿಷ್ಕರುಣೆಯ ಪ್ರತೀಕದಂತಿರುವ ಯುದ್ಧದ ಕಿಚ್ಚನ್ನು–ಶತ್ರುಭಾವವನ್ನು–ನಾಶಮಾಡಲು ಸಾಧ್ಯವೇ ?—ಎಂದು ಧ್ಯಾನಿಸುತ್ತಿದ್ದಾನೆ. ಈ ಸಲ ಸಾಧ್ಯಾಸಾಧ್ಯತೆಯ ಸಂಶಯವಿಲ್ಲ. ನಿಶ್ಚಿತ ದಾರಿ ಕಾಣುವ ದೃಢಪ್ರಯತ್ನವಿದೆ. ಆಗ ನ್ಯಗ್ರೋಧನ ಅಮೃತವಾಣಿ ಕೇಳಬರುತ್ತದೆ: —

" ಅರಸರೆಲ್ಲರು ವೈರ ತೊರೆದಹಿಂಸೆಗೆ ಮನ-
ವೆಂಸಿದರೇ ಧರೆ ಧರ್ಮನಾಕ !
ಕಾಯುವ ಮಾನವನವನೇ ದೇವ–
ಈಯುವ ಮಾನವನವನೇ ದೇವ "

ಅಶೋಕ ಇದೇ ಹಾಡನ್ನು ಹಲವು ಸಲ ಕೇಳಿದ್ದ; ಆದರೆ ಇಂದು ಅದ ಹೊಸತಾಗಿ ಕೇಳಿದಂತೆ ಎನ್ನಿಸುತ್ತಿದೆ. ಅದರ ಒಂದೊಂದು ನುಡಿಯಲ್ಲಿ ಒಂದೊಂದು ದಿವ್ಯದರ್ಶನವಡಗಿದೆ. ಅಶೋಕನಿಗೆ ತಾನ ಇಲ್ಲಿಯ ವರೆಗೆ ಮಾಡಿದ ಕೃತಿಯ ಬಗೆಗೆ ಬಹು ಆಳವಾದ ಪಶ್ಚಾತ್ತಾಪವಾಗಿದೆ. ಆದರೆ ಆ ಪಶ್ಚಾತ್ತಾಪ ಆತ್ಮತಾತ್ಸಾರವಾಗದಿರಲಿ ಅದು ವಿಶ್ವಕಲ್ಯಾಣದ ಸಾಧನವಾಗಲಿ !—ಎಂದು, ಉಪಗುಪ್ತರೆಂಬ ಬೌದ್ಧಗುರುಗಳು ನ್ಯಗ್ರೋಧನ ಮುಖಾಂತರ ಹೇಳಿಕಳಿಹಿದ್ದಾರೆ :

" ಪಾತಕಿ ನೀವಲ್ಲ; ಪಶ್ಚಾತ್ತಾಪದಿ ಬೆಂದು
ಪೂತರಾಗಿಹಿರೀಗ ದೊರೆಯೆ—!

× × × ×

ನಿನ್ನಿಂದಲೆ ಯುದ್ಧ-ಹಿಂಸೆಗಂತ್ಯವಾಗಬೇಕು.
ನಿನ್ನಿಂದಲೆ ಮಾನವತೆಯ ಗುರಿಯು ಕಾಣಬೇಕು.
ನಿನ್ನಿಂದಲೆ ಸಕಲ ಜನವು ಶಾಂತಿಯೊಂದಬೇಕು.
ಜ್ಞಾನ-ದಾನ-ಅಭಯಂಗಳ ಧ್ವಜವು ಮೆರೆಯಬೇಕು!"

ಆ ಹರಕೆ ಅಶೋಕನ ಜೀವನಮಂತ್ರವಾಗುತ್ತದೆ; ಅಂದಿಗೆ ಆ ಮಹಾ ಚಕ್ರವರ್ತಿಯು ಜನಮನದ ಶೋಕನಿವಾರಣೆಯ ಮೂರ್ತಿಮಂತ ಸ್ವರೂಪನಾಗಿ ನಿಲ್ಲುತ್ತಾನೆ. ಆ ಅಶೋಕಭಾವದ ಪ್ರತೀಕವಾಗಿ ಅಶೋಕಚಕ್ರವು ರಾಜಸಂಕೇತವಾಗಿ ಬರುತ್ತದೆ.

"ವಿಶಾಲಭಾವದ ಪುಣ್ಯಾಕಾಶದಿ
ಮೂಡಿ ಮಿರುಗುತಿಹ ನಕ್ಷತ್ರ" ವದು!

ಅಂದಿಗೆ ಭಾರತದ ಜನಮನದ ಪ್ರಾರ್ಥನೆ, ಸಮಷ್ಟಿಯ ಸಂಕಲ್ಪಗಳು ಈ ರಾಜರ್ಷಿಯಲ್ಲಿ ಪ್ರಕಾಶಗೊಂಡವು. ಇಂದಿಗೂ ಆ ಪ್ರಕಾಶದ ಬಿಂಬರೂಪದಂತೆ ಅಶೋಕಚಕ್ರವು ನಮ್ಮ ರಾಷ್ಟ್ರೀಯಸಂಕೇತವಾಗಿ ಬಂದಿದೆ. ಶ್ರೀಕೃಷ್ಣಶರ್ಮರು ತಮ್ಮ ಗೀತರೂಪಕದ ಮುಖಾಂತರ ಈ ಸಂಕೇತದ ಮರ್ಮವನ್ನು ರಸಪೂರ್ಣವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

"ಅಶೋಕಚಕ್ರ"ದಲ್ಲಿ ಅಭಿವ್ಯಕ್ತವಾದ ಅಶೋಕನ ವ್ಯಕ್ತಿತ್ವವನ್ನು ರೂಪಿಸುವಾಗ, ಲೇಖಕರು ಕೇವಲ ಐತಿಹಾಸಿಕ ದೃಷ್ಟಿಯನ್ನಿಟ್ಟುಕೊಂಡಿಲ್ಲವೆಂಬುದು ಸ್ಪಷ್ಟವಿದೆ. ಅವರ ಕಣ್ಣೆದುರು ಸಮಕಾಲೀನ ಪ್ರಪಂಚದ ರಾಜಕೀಯ ಘಟನೆಗಳು ನಿಂತಿವೆ. ಅಶೋಕನ ಕಾಲದಲ್ಲಿ ಮೂಡಿಬಂದ ವಿಶ್ವಮಾನವ ದೃಷ್ಟಿ ಸರ್ವಮಾನ್ಯವಾಗಲು ಎರಡು ಸಾವಿರ ವರುಷದ ವರೆಗೆ ಜಗತ್ತು ದಾರಿಕಾಯಬೇಕಾಯಿತು. ಅದಿನ್ನೂ ಸಂಪೂರ್ಣ ಯಶಸ್ವಿಯಾಗಿಲ್ಲ ಆದರೂ ಇಂದು ಭಾರತದ ಸಹಜೀವನದ ವಿಚಾರ-ನೆಹರೂವಿಚಾರಪ್ರಣಾಲಿಗಳು ಪ್ರಪಂಚದ ಮನಸ್ಸನ್ನು ಆಕರ್ಷಿಸುತ್ತಲಿವೆ. ಈ ಮಹಾತತ್ತ್ವಪ್ರಣಾಲಿಯ ಹಿಂದೆ ನಮ್ಮ ರಾಜಕೀಯ ಸಂಸ್ಕೃತಿ ಹೇಗೆ ನಿಂತಿದೆ, ಅದು ಅಶೋಕನಂಥ ಒಂದು ವ್ಯಕ್ತಿಯಲ್ಲಿ ಎರಡುಸಾವಿರ ವರುಷಗಳ ಪೂರ್ವದಲ್ಲಿಯೇ ಹೇಗೆ ಮೂರ್ತಿಗೊಂಡಿತು, ಈ ವಿಶಾಲವಾದ ಜೀವಕಾರುಣ್ಯಭಾವವು ಕೇವಲ ಒಂದು ವ್ಯಕ್ತಿಯ ಕನಸಾಗಿರದೆ, ಆ ಕಾಲದ ಜನಮನದ ಸಂಕಲ್ಪವಾಗಿದ್ದುದು ಹೇಗೆ?— ಇದೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ, ಎದೆಮುಟ್ಟುವಂತೆ "ಅಶೋಕಚಕ್ರ"ವು ಚಿತ್ರಿಸುತ್ತದೆ. ನಮ್ಮ ಈ ರಾಜಕೀಯ ಸಂಸ್ಕೃತಿಯ ಅಖಂಡ ಪ್ರವಾಹವನ್ನು ನಿರ್ವಿಕಾರ ದೃಷ್ಟಿಯಿಂದ ನೋಡುವ ಲೇಖಕರ ವ್ಯಕ್ತಿತ್ವ ಈ ಗೀತರೂಪದಲ್ಲಿ ಕಂಡುಬರುತ್ತದೆ. ಸರಳ ಛಂದಸ್ಸಿನ ಲಲಿತ ನಡಿಗೆ, ತಿಳಿನುಡಿಗಳ ಗಡಣ, ಸ್ಫಟಿಕದಂಥ ಅರ್ಥಗರ್ಭಿತ ಸ್ಪಷ್ಟವಿಚಾರಸರಣಿ— ಇವುಗಳಿಂದ "ಅಶೋಕಚಕ್ರ"ವು ಒಂದು ರಸಪೌತಣವಾಗಿದೆ. ಇಲ್ಲದ ಅತಿಶಯೋಕ್ತಿಗೆಡೆಗೊಡದಂತೆ ಅಶೋಕನ ವ್ಯಕ್ತಿತ್ವದಲ್ಲಿ ರೂಪುಗೊಂಡ ವಿಶ್ವಮಾನವನ ಭಾವನೆಗಳನ್ನು ಚಿತ್ರಿಸುವ ಆವಶ್ಯಕತೆ ಈಗ ಬಹಳ ಉಂಟು. ಆ ಕಾರ್ಯವನ್ನು ಸರಸ ಶೈಲಿಯಿಂದ ನಿರ್ವಹಿಸಿದ ಶ್ರೀ. ಬೆಟಗೇರಿ ಕೃಷ್ಣಶರ್ಮರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

(೩೯೩ನೆಯ ಪುಟದಿಂದ ಬಂದುದು)

ಮೋಹರುಗಳೂ ಉಂಟು. ಮತ್ತೊಂದೆಡೆಯಲ್ಲಿ ಶಿವನು ಅಂಧಕಾಸುರನ ವಧೆ ಮಾಡುತ್ತಿರುವ ಮೂರ್ತಿಯು ೨೨-೧೩ ಫೂಟು ಎತ್ತರ ಇರುತ್ತದೆ. ಆ ಸಂಗ್ರಹಾಲಯದಲ್ಲಿ ಸಾಧಾರಣ ೫ರಿಂದ ೧೦ನೆಯ ಶತಮಾನದ ವರೆಗಿನ ವಿಗ್ರಹಗಳನ್ನು ಕಾಣಬಹುದು. ಸಂಗ್ರಹಾಲಯದಲ್ಲಿ ಲಿಪಿಗಳೂ, ವಿಗ್ರಹಗಳೂ, ಒಟ್ಟು ೪೦೦ರಷ್ಟಿವೆ. ಸಂಗ್ರಹಾಲಯದಲ್ಲಿ ನಮ್ಮ ಪ್ರಾಚೀನ ಸಂಸ್ಕೃತಿ, ಕಲೆ, ಮೊದಲಾದ ಜ್ಞಾನ ಸಂಪಾದಿಸಿಕೊಂಡು ಮನದಲ್ಲೇ ಬೋಧೀ ವೃಕ್ಷಕ್ಕೂ, ಬುದ್ಧದೇವನಿಗೂ ನಮಸ್ಕರಿಸಿದೆ.

ಪ್ರಶಾಂತ ವಾತಾವರಣದ ಪ್ರದೇಶವು ಧರ್ಮಸಂಕೇತವಾಗಿದೆ. ಪ್ರಪಂಚಕ್ಕೆ ಶಾಂತಿ, ಅಹಿಂಸೆಯ ಅಮರತತ್ತ್ವ ಬೋಧಿಸಿದ ಬುದ್ಧನ ತಪೋಭೂಮಿಯಾದ ಸಾರನಾಥ ಪುಣ್ಯಕ್ಷೇತ್ರದ ದರ್ಶನ ಪಡೆಯಲು ದಿನಾಲು ದೇಶವಿದೇಶಗಳಿಂದ ನೂರಾರು ಜನರು ಬರುತ್ತಾರೆ. ಪ್ರತಿಯೊಬ್ಬರೂ ಪುಣ್ಯಕ್ಷೇತ್ರದ ಸಂದರ್ಶನ ಪಡೆದು ಪುನೀತರಾಗಬೇಕು. ಸಾರನಾಥ ಪುಣ್ಯಕ್ಷೇತ್ರವನ್ನು ಉತ್ತರಹಿಂದುಸ್ಥಾನದಲ್ಲಿ ನೋಡದವರೇ ಇಲ್ಲ. ಶಾಂತಮಯ ಸಾರನಾಥ ಕ್ಷೇತ್ರವು ಹಿಂದುಗಳಿಗೆ ಶಾಂತಿಯನ್ನೊದಗಿಸಲು ಸ್ಫೂರ್ತಿದಾಯಕವಾಗಲಿ.

# ಇದೊಂದು ಕತೆ

(ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

ಒಂದು ಸಂಸಾರದ ಇಲ್ಲವೆ ಒಂದು ಜೀವನದ ಇತಿವೃತ್ತವನ್ನು ವಿವಿಧಘಟನೆಗಳ ಸಮಾವೇಶದಲ್ಲಿ ಹೊಂದಿಸಿಕೊಂಡು ಹೃದಯಸ್ಪರ್ಶಿಯಾಗಿ ರೂಪಿಸುವುದು ಕತೆಗಾರನ ಹೊಣೆಯೆಂದಾದರೆ, ನಾವದರಲ್ಲಿ ಕತೆಗಾರನ ಅನುಭವ ಸಂಪತ್ತನ್ನು ಲಕ್ಷ್ಯಿಸುವುದು ಅತ್ಯವಶ್ಯವಾದ ವಿಚಾರವಾಗಿದೆ. ಅನುಭವವಿಲ್ಲದ ಬರೆಹ ಏನನ್ನೂ ಸಾಧಿಸದು. ಉಪಾತ್ತ ವಸ್ತುವಿನ ಪರಿಚಯವಿಲ್ಲದ, ದೇಶಕಾಲಯುತ್ತಸ್ಥಿತಿಜ್ಞಾನವಿಲ್ಲದ ಲೇಖಕನ ಲೇಖನಿ ಓದುಗನನ್ನು ಸೆರೆಹಿಡಿಯದೆಂಬುದಿದು ಖಂಡಿತ ಮಾತು. ಅದುದರಿಂದಲೆ ಸಮಾಜವನ್ನು ಚಿತ್ರಿಸುವವಗೆ ಅನುಭವವಿರಬೇಕು, ಉಪಾತ್ತವಸ್ತುವಿನ ಪೂರ್ಣ ಪರಿಚಯವಿರಬೇಕೆನ್ನುವುದು.

ಹಾಗೆಂದಾದರೆ "ಇದೊಂದು ಕತೆ"ಯ ಹೃದಯವೇನು? ಇದೊಂದು ಹೃದಯಸ್ಪರ್ಶಿಯಾದ ಕಥೆ; ಮಾತ್ರವಲ್ಲ, ಆಕರ್ಷಕ ಘಟನೆಗಳೊಡನೆ ಕೂಡಿಕೊಂಡು, ಭಾವಪೂರ್ಣ ಭಾಷಾಹೃದಯದೊಡನೆ ನಲಿದುಕೊಂಡು ಬಂದ ಕಥೆ. ಲೇಖಕರು ಬಹು ಚತುರತೆಯಿಂದೀ ಕಥೆಯನ್ನು ಹೆಣೆದಿದ್ದಾರೆ; ಮಾತ್ರವಲ್ಲ ಸಮಾಜದಲ್ಲಿ ಬಂದೊದಗಬಹುದಾದ ಒಂದು ದುರಂತಜೀವನದ ಇತಿವೃತ್ತವನ್ನಿಲ್ಲಿ ಸಾರಿದ್ದಾರೆ. ಈ ಘಟನೆಯು ಸಂಭಾವ್ಯವಾಗಿದೆ. ಮಾತ್ರವಲ್ಲ ಸಮಾಜಕ್ಕೆ ದಾರಿತೋರುವ ಪಥದೀಪಿಕೆಯಾಗಿದೆ. ನಾಗರಿಕ ತರುಣರು-ಈ ಮುಂದುವರಿದ ದಿನದಲ್ಲಿ ತಮ್ಮ ಜೀವನವನ್ನು ಸುರಕ್ಷಿತವಾಗಿರಿಸಿಕೊಳ್ಳಬೇಕಾದರೆ- ವಿದ್ಯೆಯನ್ನಷ್ಟೇ- ಧೀರತೆಯನ್ನಷ್ಟೆ ನೋಡಿದರೆ ಸಾಲದು. ಕವಿದು ಬಂದ ಸಮಸ್ಯೆಯನ್ನು-ಬಂದಡಸಿದ ಸಂಭವವನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಎಂದರೆ ಮಾತ್ರ ಕ್ರಾಂತಿ ಜೀವನದಲ್ಲೂ ಶಾಂತಿಯನ್ನು ಪಡೆಯಬಹುದು. ಸಮಾಜದಲ್ಲಿ ಮುಖವೆತ್ತಿ ನಡೆಯಬಹುದು. ಇಲ್ಲವಾದರೆ ತಮ್ಮನ್ನು ತಾವೇ ಗರ್ತಕ್ಕೆ ತಳ್ಳಿ ಕೆಡಿಸಿಕೊಳ್ಳುವರು. ಇದು ಮಥಿತಾರ್ಥ.

ಇದು ಕ್ರಾಂತಿಯ ವಾತಾವರಣ. ಸಮಾಜದ ಒಂದೊಂದು ಘಟಕವೂ ಚಿತ್ರ-ವಿಚಿತ್ರ ಘಟನೆಗಳನ್ನು ಒದಗಿಸಿಕೊಡುತ್ತದೆ. ಆದರ್ಶವಾದಿಯೂ-ನಾಗರಿಕನೂ—ಸಾಂಪ್ರದಾಯಿಕ ಬುದ್ಧಿಯವನು ಕೆಲವೊಂದು ಬಾರಿ ದುರಂತಕ್ಕೆರವಾಗಿಸಿಕೊಳ್ಳುವನು. ಅಂತೆಯೆ ವಿದ್ಯಾವಂತನಾದ, ಸಂಪ್ರದಾಯಶರಣನಾದ ಆನಂದ ಕ್ರಾಂತಿ-ಜೀವನಕ್ಕೆ ಬಲಿಯಾಗಿ ತನ್ನ ಜೀವಿತದಲ್ಲಿ ದುಃಖವನ್ನು ಬರಸೆಳೆದುಕೊಂಡನು. ಹಾಗಾದರೆ?

ಹೌದು, ಆನಂದ ಪದವೀಧರನಾಗಿದ್ದು – ಉದ್ಯೋಗಕ್ಕಾಗಿ ಬೊಂಬಾಯಿ ಸೇರಿದ. ಅಲ್ಲೊಂದು ಆಫೀಸಿನಲ್ಲಿ ಉದ್ಯೋಗವನ್ನು ದೊರೆಕಿಸಿಕೊಂಡ. ಒಂದು ದಿನ ಚರ್ಚ್‌ಗೇಟ್ ಸ್ಟೇಶನಿನಲ್ಲಿ ತರುಣಿಯೊಬ್ಬಳಿಗೆ ಸಹಾಯ ನೀಡಲು ಹೋಗಿ, ಆಕೆಯನ್ನು ಪ್ರಥಮ ಬಾರಿಯೆ ಮೆಚ್ಚುವಂತಾದ. ಮುಂದೆ ಅದುವೆ ಸಲುಗೆಯು. ಅವರಿಬ್ಬರನ್ನು "ಸ್ಯಾಮ್ಸನ್ಸ್ ಅಂಡ್ ಡಿಲೈಲಾ" ಪಿಕ್ಚರಿಗೆ ಕರೆದೊಯ್ದುದು ನಾಗರಿಕ ಜೀವನದ ಮುಂದೆ ಹೊಸತಲ್ಲ. ಬೊಂಬಾಯಿಯಂತಹ ನಗರದಲ್ಲಿ ಇದರ ಕುರಿತು ಮಾತೆತ್ತುವರಾರು? ಆದರೆ ಆನಂದನು ತನ್ನ ಜೀವನದಲ್ಲಿ ನೂತನವಾಗಿ ದೊರೆತ ಈ ಸಂದರ್ಭವನ್ನು ಮುಂದೊತ್ತಿ, ಒಂದು ದಿನ ಅವಳಿತ್ತ ಚಹಾ ಸತ್ಕಾರಕ್ಕೆ ಅವಳ ಮನೆಗೆ ತೆರಳಿ–ತಿಂದು ಕುಡಿದು ಕೊನೆಗೆ ಅವಳ ಕೆನ್ನೆಯಲ್ಲಿ ಮುತ್ತಿನ ಸುರಿಮಳೆಯನ್ನು ಸುರಿದರೆ, ಯಾರೂ ಮನೆಯಲ್ಲಿಲ್ಲವೆಂದು ನೆನೆದ ಆನಂದನಿಗದು ಹೊಸತಲ್ಲ. ಆದರೆ ಆನಂದ ನೆನೆದಂತೆ ಈ ಘಟನೆ ಅವ್ಯಕ್ತವಾಗಲಿಲ್ಲ. ವಿಷಮಯವಾಯಿತು. ಚತುರೆಯ (ಆನಂದನ ಪ್ರೇಯಸಿ) ತಂದೆ ಮತ್ತು ಸಹೋದರರು ಬಂದು, ಬಲಾತ್ಕಾರದಿಂದ ಆನಂದನನ್ನು ವಿವಾಹವಾಗುವಂತೆ ಕೇಳಿಕೊಂಡಾಗಲೆ- ಆನಂದನಿಗೆ ಎಚ್ಚರವಾದುದು. ನಿರುಪಾಯನಾದ ಆನಂದ ಆಕೆಯನ್ನು ಮದುವೆಯಾಗಿ–ಆರು ತಿಂಗಳಲ್ಲೇ ಚತುರೆಯ ತಾಯ್ತನವನ್ನು ಕಂಡು—ಸಮಾಜದ ಮುಂದೆ ಹೇಡಿಯಾಗಿ ಬಾಳಿದನು. ಆನಂದನು ಮದುವೆಯಾದ ಆರು ತಿಂಗಳಿಂದ ಮನೆಯೆಡೆಗೂ ಸಾಗದೆ, ತನ್ನನ್ನೇ ನಂಬಿದ ಸಹೋದರನ ವಿದ್ಯೆಗೂ ಕೊಡಲಿಯೇಟು ಹಾಕಿ, ತಾಯಿಯ ಹೃದಯವನ್ನೂ ದುರಂತ ದುಃಖಕ್ಕೆರವಾಗಿಸಿದನು. ಅಣ್ಣನ ಬರುವಿಕೆಯನ್ನೇ ಹಾಕಿದ ಶ್ರೀಕಾಂತ, (ತಮ್ಮ) ತನ್ನ ಮಿತ್ರನಾದ, ಪುಣೆಯಲ್ಲಿ ಶಿಕ್ಷಕನಾಗಿದ್ದ ವಸಂತನಿಗೊಂದು ದೀರ್ಘಪತ್ರವನ್ನು ಬರೆದು, ಆನಂದನೆಡೆ ಹೋಗುವಂತೆ ಮಾಡಿದ. ವಸಂತ ಬೊಂಬಾಯಿಗೆ ಬಂದು ಆನಂದನನ್ನು ಕಂಡು, ಪತ್ರವನ್ನು ತೋರಿಸಿ-ಆತನ ದುರಂತ ಜೀವನವನ್ನು ಆತನಿಂದಲೇ ಕೇಳಿ-ಅಂತರ್ಜಾತೀಯ ವಿವಾಹವನ್ನೂ ಒಂದು ಆಶ್ವಾಸನೆಯ ಉಸಿರನ್ನೆಳೆದರೂ, ಕೊನೆಗವಳ ತಾಯ್ತನವನ್ನು ಕೇಳಿ ಮರುಗುವಲ್ಲಿಗೆ ಕತೆಗೊಂದು ಮೌನವಾತಾವರಣದ ಚುಕ್ಕಿಯನ್ನೆಳೆಯುವರು. ಏನೊಂದು ದುರಂತ ಚಿತ್ರ; ಎಷ್ಟೊಂದು ಮಾರ್ಮಿಕ ಭಾವತರಂಗಗಳು! ಎಷ್ಟೊಂದು ಹೃದಯಸ್ಪರ್ಶಿ ಘಟನೆ! ಅದೆಷ್ಟು ಮಧುರವಾದ ಭಾಷಾಪ್ರವಾಹ!

ಕಥೆಯ ಆರಂಭವನ್ನೇ ಮಧುರವಾಗಿ ರೂಪಿಸಲಾಗಿದೆ. ವಸಂತನು ನೇರವಾಗಿ ಬಂದು ಆನಂದನನ್ನು ಕಾಣುವನು. ವಸಂತನ ಬರುವಿಕೆಯಲ್ಲೇ ತಬ್ಬಿಬ್ಬಾದ ಎಲುಬಿನ ಹಂದರವದು ಬೆರಗಾಗುವುದು. ಎಂತಹವನೂ ಕಂಬನಿದುಂಬಿದ ಕಣ್ಣುಗಳಿಂದ ಕಾಣಬೇಕಾದ ಪ್ರಸ್ತಾಪನೆಯದು. ಇದರ ಮುಂದೆ ಸಂದರ್ಭವಶಾತ್ ಶ್ರೀಕಾಂತನ ಪತ್ರದ ಪ್ರಸ್ತಾಪವು ಬರುವುದು. ಆನಂದನು ಲಗುಬಗೆಯಿಂದಾ ಪತ್ರವನ್ನೋದುವನು. ಬಹು ದೀರ್ಘವಾಗಿ ನೆಲೆನಿಂತ ಆ ಪತ್ರವನ್ನು ಆನಂದನು ಓದುವುದು ಅಸಾಧ್ಯವಾದರೂ, ಆ ಸಂದರ್ಭವು ಅವನನ್ನು ಓದಿಸುವಂತೆ ಮಾಡದಿರಲಾರದು. ಆ ಪತ್ರವು ಇಡೀ ಕತೆಯ ಜೀವನಾಡಿ! ಎಷ್ಟೊಂದು ವಿಚಾರಗಳನ್ನು ಲೇಖಕರದರಲ್ಲಿ ತುಂಬಿದ್ದಾರೆ! ಆನಂದನ ಇಡಿಯ ಸಂಸಾರದ ಕಥೆ; ಆನಂದನ ಜೀವನ; ಅವನೆತ್ತಿದ ಆದರ್ಶ ಮಾತ್ರವಲ್ಲ, ಆನಂದನ ತಮ್ಮ ಶ್ರೀಕಾಂತನ ಸುಪುಷ್ಟ ಸುಂದರ ವಿಧೇಯಹೃದಯ, ಆನಂದನ ತಾಯಿಯ ಪುತ್ರಪ್ರೇಮ-ಇವೀ ಕಥೆಯಲ್ಲಿ ಸ್ಫುಟವಾಗಿ ತೋರಿಬರುತ್ತಿವೆ. ವಸಂತನಿಗೆಂದು ಬರೆದ ಶ್ರೀಕಾಂತನ ಕಾಗದವು ಸಹೋದರಪ್ರೇಮದ, ಸಮಾಜಹೃದಯದ ಭಾವನಾಪೂರ್ಣ ಲೇಖ. ಒಂದು ಜೀವನಚಿತ್ರರೂಪಾತ್ಮಕವಾದ ಬರೆಹಕ್ಕೆ ಈ ಬಗೆಯ ಘಟಕಗಳು ಹಿರಿಮೆಯನ್ನೀಯುತ್ತಿವೆ. ಜೀವನದ ಪೂರ್ಣ ಪರಿಚಯವನ್ನು ನೀಡುತ್ತಿವೆ. ಇಲ್ಲಿರುವ ಪ್ರತಿಯೊಂದು ಮಾತೂ ಸುಂದರವಾಗಿದೆ. ಅಲ್ಲೂ ಪತ್ರದ ಕೊನೆಯಲ್ಲಿ ತನ್ನ ಅಶಕ್ತಿಯನ್ನು ರೂಪಿಸಿದ ಶ್ರೀಕಾಂತನ ಚಿತ್ರವು ಕಣ್ಣಮುಂದೆ ತಂದಿರಿಸಿದಂತೆ ಈ ಪತ್ರದ ಹಿರಿಮೆಯಲ್ಲಿ "ತಂದೆಯವರನ್ನು ಕಳೆದುಕೊಂಡು...... ಇಂದು ವಯಸ್ಸಿಗೆ ಬಂದ ನಾನು, ವ್ಯತಿರೇಕವಾಗಿ ಏನಾದರೂ ನಡೆದುಕೊಂಡಿದ್ದರೆ, ತಿಳಿಸಿ ದಂಡಿಸಿದ್ದರೂ ನಾನು ಉಸಿರೆತ್ತುತ್ತಿರಲಿಲ್ಲ,–ಹೊತ್ತು ಹೆತ್ತ ಮಾತೆಯ ಬಗ್ಗೆ ಇಷ್ಟು ಕೇಳಿಕೊಳ್ಳುತ್ತಿದ್ದೇನೆ.

ಇಂದು-ನಾಳೆ ಒಂದೊಂದೂ ನನ್ನನ್ನು ಕಾಡುತ್ತಿವೆ. ಈ ನನ್ನ ಅಸಹಾಯತೆ ಅಮ್ಮನನ್ನು ಆದಷ್ಟು ಬೇಗ ಕಳೆದುಕೊಳ್ಳುವುದಕ್ಕೆ ಅನುಕೂಲವಾಗಿಯೇ ಇದೆ. ನನ್ನಂಥ ದುರ್ದೈವೀ ಮಗನನ್ನು ಹೆತ್ತ ತಪ್ಪಿಗೆ ಇದು ಅವಳು ಒಪ್ಪಿಸಿಕೊಳ್ಳುವ ಶಿಕ್ಷೆಯಲ್ಲದೆ ಮತ್ತೇನು ?"— ಈ ಮಾತುಗಳೆಲ್ಲ ಅಲ್ಲಲ್ಲಿ ಬರುವ ಸಂದರ್ಭಗಳನ್ನು ಕೆದಕಿ ತೋರುತ್ತಿವೆ. ಓದುಗನ ಹೃದಯದಲ್ಲಿ ತಳಮಳವೆಬ್ಬಿಸುತ್ತಿವೆ. ಅಲ್ಲಿಂದ ಮುಂದೆ ಆನಂದನು ತನ್ನ ಕೋಣೆಗೆ ಸಾಗಿ—ಚತುರೆಯೊಡನೆ ತನ್ನ ಪಾಲಿಗೆ ಬಂದೊದಗಿದ ದುರಂತವನ್ನು ಹೇಳುತ್ತ ಹೋಗುವನು. ನಾಗರಿಕ ತರುಣನಾದರೂ—ಸ್ವಭಾವಸಿದ್ಧವಾದ ಚಾಪಲ್ಯಕ್ಕೆ ರವಾಗಿ, ತನ್ನನ್ನು ತಾನೇ ಗರ್ತಕ್ಕೆ ತಳ್ಳುವುದು ವಿಚಿತ್ರವಲ್ಲವೆಂಬುದಿದ್ದರೆ, ಆತ್ಮನಿವೇದನೆ ಸಾಕ್ಷಿಯಾಗಿದೆ. ಗಂಡುಬೀರಿಯಾದ ಹೆಣ್ಣೊಬ್ಬಳು ತನ್ನ ಮುಂದೆ ಬಂದು ನಿಂತಾಗ ಆನಂದ ಸೋಲಬಾರದಿತ್ತು. ನಿಜ. ಆದರೆ. ಕಾಲೇಜುಜೀವನದಲ್ಲಿದ್ದ, ಮುಂಬಯಿಯಂತಹ ನಗರಜೀವನದಲ್ಲಿ ಬೆರೆತಿದ್ದ ಅನಂದ ಈ ಕುರಿತು ವಿಶೇಷವಾಗಿ ಯೋಚಿಸಬೇಕಾಗಿಲ್ಲ. ಚತುರೆಯಂತಹ ತರುಣಿಯ ಧೀರಪ್ರವೃತ್ತಿ, ಪುರುಷಪ್ರವೃತ್ತಿ ಬೊಂಬಾಯಿಯ ಮುಂದೆ ತಪ್ಪು ತಿಳವಿಗೆ ಕಾರಣವಾಗದು. ಅಲ್ಲಿಯ ಲೋಕ ಹಾಗಿದೆ. ಸಂಪ್ರದಾಯ ಹಾಗಿದೆ. ಎಂದಮೇಲೆ ಆನಂದ ಆಕೆಗೆ ಸಹಾಯಮಾಡಿ, ಆಕೆಯೊಡನೆ ಮನರಂಜನೆಗೆ ಸಿನೇಮಾ ನೋಡಿ, ತಿರುಗಾಡಿ, ಆಕೆಯಿತ್ತ ಸತ್ಕಾರಕೂಟಕ್ಕೆ ತೆರಳಿ ತನ್ನತನವನ್ನು ಮಾರಿದುದರಲ್ಲಿ ವಿಚಿತ್ರವಿಲ್ಲ. ತರುಣನ ನಡತೆಗೆ ಒಪ್ಪಿದ ದಾರಿಯಲ್ಲಿಯೆ ಆನಂದನ ಪ್ರೇಮದ ಬೇಟೆ ಸಾಗಿದೆ. ಲೋಕಾನುಭವವಿಲ್ಲದೆ, ದೇಶಕಾಲಾನುಭವವಿಲ್ಲದೆ ಅನಂದನು ವಂಚನೆಗೆರವಾಗಿ—ಬಳಲಿ ಬೆಂಡಾಗಿ ಎಲುಬಿನ ಹಂದರವಾದ. ಚತುರೆಯ ಚಾತುರ್ಯ, ಆಕೆಯ ವ್ಯಭಿಚಾರದ ಒಳನೋಟ—ಇವುಗಳೆಂವು ಸ್ತ್ರೀಲೋಕದ ಅನುಭವದ ಮುಂದೆ ಹೊಸಬನಾದ ಆನಂದನಿಗೆ ತಿಳಿಯದ್ದುದು ವಿಚಿತ್ರವಲ್ಲ! ಆಕೆಯ ಸ್ವಾತಂತ್ರ್ಯವನ್ನು ಕಂಡಾಗಲೆ—ಆನಂದನು ತನ್ನನ್ನು ತಾನು ರಕ್ಷಿಸಬಹುದಿತ್ತು. ಆದರೆ ವಿಧಿಹೀನನಾದ ಆನಂದ, ಪ್ರೇಮದ ಬಲೆಯಲ್ಲಿ ಸೆರೆಸಿಕ್ಕುಹೋದ ನಾಗರಿಕ ತರುಣನಾದುದರಿಂದಲೆ ಆಕೆಯ ಮುಂದೆ ತನ್ನನ್ನು ತಾನು ಪೂರ್ಣವಾಗಿ ಕೆಡಿಸಲಿಲ್ಲ. ಹಾಗೆ ಕೆಡಿಸದಿದ್ದರೂ ಅವನು ಸುಲಭವಾಗಿ ಅವಳ ಪ್ರಿಯರ ಬಲೆಗೆ ಬಿದ್ದ. ಅರ್ಥಾತ್, ಇವನಿತ್ತ ಪ್ರೇಮದ ಮುತ್ತು ಕನ್ನಡಿಯಲ್ಲಿ ಬಿಂಬಿಸಿತ್ತು. ಅಷ್ಟೆ! ಈ ಪರಿಸ್ಥಿತಿಯನ್ನು ಚತುರೆಯ ತಂದೆ-ತಮ್ಮರಿಂದರಿತಾಗಲೆ ಆನಂದನು ತನ್ನ ಕಣ್ಣನ್ನು ತೆರೆದುದು. ಅಲ್ಲಿಯವರೆಗೂ ಚತುರೆಯ ವಿವಾಹವನ್ನವನು ನೆನೆದಿರಲಿಲ್ಲ. ತಾತ್ಕಾಲಿಕವಾದೊಂದು ಪ್ರೇಮಕಥೆಯೆಂದಾತ ತಿಳಿದಿದ್ದನಲ್ಲದೆ ಬೇರೇನೂ ಅಲ್ಲ.

ಆನಂದನು ತನ್ನ ಇತಿವೃತ್ತವನ್ನು ಹೇಳುವಾಗ ನಾವು ನಿಜವಾಗಿ ಅರಿಯುವುದಿಲ್ಲ. ನಾಗರಿಕ ಸಂಪ್ರದಾಯದ ಬಗೆಯಲ್ಲಿ ಆತನ ಅನುಬಂಧವು ಸಾಗುತ್ತಿದೆ; ಕಳವಳವಿಲ್ಲದೆ ವಸಂತನದನ್ನು ಕೇಳುತ್ತಾನೆ. ಕಥೆ ಮುಗಿಯುತ್ತದೆ. ಮುಗಿತಾಯದ ಕೊನೆಯಲ್ಲಿ

( ೩೬೪ನೆಯ ಪುಟದಿಂದ ಬಂದುದು )

ಆಸಾದಮದ ಗಡಿಯಲ್ಲಿ ನುಗ್ಗಿ ಜನರ ಮೇಲೆ ಗುಂಡಿನ ಮಳೆಯನ್ನು ಸುರಿಸತೊಡಗಿದುದೂ ಆಶ್ಚರ್ಯದ ಸಂಗತಿಗಳೇ ಆಗಿವೆ. ಅಮೇರಿಕೆಯಿಂದ ದೊರೆತ ಯುದ್ಧೋಪಕರಣಗಳ ರಾಶಿಯು ಪಾಕಿಸ್ತಾನ್ ಸರಕಾರದ ಮತ್ತು ಸೈನಿಕರ ಮನಸ್ಸಿನಲ್ಲಿ ಇಲ್ಲದ ಹುಚ್ಚುಹುರುಪನ್ನು ತುಂಬುತ್ತಲಿರಬಹುದು; ಆದರೆ ಆ ಹುಚ್ಚುಹುರುಪು ಪಾಕಿಸ್ತಾನದ ರಾಜಕೀಯ ನಾಯಕರ ಹುಂಬತನದ ದ್ಯೋತಕವಾಗಿ ನಿಲ್ಲಬಹುದೆಂಬ ಎಚ್ಚರಿಕೆ ಅವರಿಗೆ ಇದ್ದಂತಿಲ್ಲ. ಪ್ರಸಂಗ ಬಿದ್ದಮೇಲೆ ಬಂದಿತೆಂದರೆ, ಯುದ್ಧೋಪಕರಣಗಳನ್ನು ಕೊಟ್ಟ ಅಮೇರಿಕನರೇ ತಮ್ಮನ್ನು ಛೀಹಾಕಬಹುದೆಂಬುದನ್ನು ಪಾಕಿಸ್ತಾನಿಗಳು ಮರೆಯದಿದ್ದರೆ ಚೆನ್ನು. ಸಿಂಹದ ಮೈಮೇಲೆ ಇಲಿಯು ಓಡಾಡಿದಂತೆ, ಪಾಕಿಸ್ತಾನವು ಭಾರತವಿರೋಧಿ ಚಟುವಟಿಕೆಗಳನ್ನು ನಡೆಸಿದೆ. ಸಿಂಹವು ಸಹಜವಾಗಿ ತನ್ನ ಪಂಜರದಿಂದ ಜಾಡಿಸಿದರೂ ಇಲಿಯ ಜೀವಕ್ಕೆ ಸಂಚಕಾರವಿದೆಯೆಂಬುದನ್ನು ಹುಂಬಗುರುಡ ಪಾಕಿಸ್ತಾನಿಗಳು ಲಕ್ಷ್ಯದಲ್ಲಿರಿಸಿಕೊಳ್ಳಬೇಕು.

---

ಕೋಣೆಯಲ್ಲಿದ್ದ ಸೀರೆಯನ್ನು ಕಂಡು—ಆಕೆಯ ಉದ್ಯೋಗವನ್ನು ವಸಂತನು ಕೇಳುವಾಗ—ಆನಂದನು ತನ್ನ ಚರಿತ್ರೆಗೊಂದು ದುರಂತವಾದ ತೆರೆಯನ್ನಿಳಿಸಿ ಮೌನವನ್ನು ಹೊಂದುತ್ತಾನೆ. ಎಷ್ಟು ಆಕರ್ಷಕವಾಗೀ ಭಾಗ ಸೆಳೆದು ಬಂದಿದೆ. ಉಪಸಂಹಾರದ ಮೊದಲು ವಸಂತನೀಯುವ ಕೆಲವು ಮಾತುಗಳು ಆನಂದನ ಹೃದಯವನ್ನು ಸುಟ್ಟು ಭಸ್ಮಮಾಡಿರಬೇಕು. ಈ ಭಾಗದಲ್ಲಿ ವಸಂತ ಗಂಡು-ಹೆಣ್ಣಿನ ಸಮಸ್ಯೆಯೆತ್ತಿ, ಸಮಾಜಧರ್ಮದ ವಿಚಾರವೆತ್ತಿ ಆಡಿದ ಮಾತುಗಳು ಲೇಖಕರ ವಿಶಾಲವಾಗಿ ನೆಲೆನಿಂತ ಅನುಭವಕ್ಕೆ ಸಾಕ್ಷಿಯಾಗಿವೆ.

ಅಂತೂ ಲೇಖಕರೀ ಕಥೆಯನ್ನು ಜಾಗರೂಕತೆಯಿಂದ ಬರೆದಿದ್ದಾರೆ. ಘಟನೆಗಳನ್ನು ಮಾರ್ಮಿಕವಾಗಿ ಜೋಡಿಸಿದ್ದಾರೆ. ಸುಸ್ಪಷ್ಟ ಹಾಗೂ ರಸಾವಹ ಭಾಷಾಶೈಲಿಗಳಿಂದ ಕಥೆಯನ್ನು ಸುಂದರವಾಗಿ ಹೆಣೆದಿದ್ದಾರೆ. ಸಮಾಜದಲ್ಲಿ ನೆಲೆಗೊಂಡ ಒಂದು ದುರಂತವೃತ್ತವನ್ನು ಓರಣವಾಗಿ ಕೊಟ್ಟು ಕ್ರಾಂತಿಯ ರುದ್ರಪರಿಣಾಮವನ್ನು ಸಾರಿದ್ದಾರೆ. ಸೊಗಸಾದ ಕಥೆಯಿದು. ಆದರದ ಸ್ವಾಗತವು!

### 'ಅಶೋಕಚಕ್ರದ'ದ ವಿಮರ್ಶಕರ

## ಕೊನೆಯ ಮಾತುಗಳು

"ಗೀತರೂಕಪಕ್ಕೆ ಬಳಸಿಕೊಂಡ ತಂತ್ರ, ಪಾತ್ರಗಳ ಸೃಷ್ಟಿ, ಕಾವ್ಯಶೈಲಿ, ಕಲ್ಪನಾವಿಲಾಸಗಳು ಆನಂದಕಂದರ ಸಮರ್ಥ ಲೇಖನಿಯಿಂದ ಹೊರಬಿದ್ದುವೆಂಬುದಕ್ಕೆ ರುಜುವಾತುಗಳಾಗಿವೆ."

**ಸಿತಾರಾಮ ಎಸ್. ಜಾಹಗೀರದಾರ್**

"ರೂಪಕದ ಭಾಷೆ ಲಲಿತವೂ, ನಿರ್ದುಷ್ಟವೂ, ಸಾಂದರ್ಭಿಕವೂ ಆಗಿದೆ. ತಾತ್ತ್ವಿಕ ವಿಚಾರಗಳು ತುಂಬಿಕೊಂಡಿವೆ. ಅಲಂಕಾರಗಳು ಸಾಕಷ್ಟು ಬಂದಿವೆ....ಸಂಭಾಷಣೆಯ ಶೈಲಿ ಸಮರ್ಪಕವಾಗಿದೆ.

ವಾಕ್ಯಗಳ ಆನುಪೂರ್ವಿಯಲ್ಲಿ ಕೃತಕತೆ ಕಾಣುವುದಿಲ್ಲ. ಒಟ್ಟಿನಲ್ಲಿ ಇದೊಂದು ಉತ್ತಮವೂ ಸ್ವಾಗತಾರ್ಹವೂ ರಾಷ್ಟ್ರೀಯವೂ ಆದ ಗೀತರೂಪಕವಾಗಿ ಜನಾದರಕ್ಕೆ ಪಾತ್ರವಾಗುವುದರಲ್ಲಿ ಸಂಶಯವಿಲ್ಲ."

**ಎನ್. ಭೀಮಭಟ್ಟ 'ಸಾಹಿತ್ಯಶಿರೋಮಣಿ'**

"ಅಶೋಕಚಕ್ರವು ಪದ್ಯರೂಪವಾಗಿದ್ದು, ಗದ್ಯರೂಪಕ್ಕಿಂತ ಹೆಚ್ಚು ಪರಿಣಾಮವುಂಟು ಮಾಡುವುದು. ಅಶೋಕನ ಮನಸ್ಸು ಕ್ರಮವಾಗಿ ಪರಿವರ್ತನೆಗೊಳ್ಳಲು ಲೇಖಕರು ಯೋಜಿಸಿದ ಘಟನೆ-ಗಳು ಸ್ವಾಭಾವಿಕವಾಗಿವೆ. ಸರಳವಾದ ಭಾಷೆ, ಹಿತಮಿತವಾದ ಶೈಲಿ, ಪಾತ್ರಗಳ ಮನೋಭಾವವನ್ನು ಪ್ರಕಟಿಸಲು ಸಮರ್ಥವಾಗಿವೆ. ಕೊನೆಯಲ್ಲಿ ಅಶೋಕಭೂಪತಿಯಾಡುವ ಮಾತುಗಳು, ದೇಶ-ಕಾಲ–ಸ್ಥಿತಿಗಳ ಮೇರೆ ಮೀರಿ, ಸದಾ ಸರ್ವರಿಗೂ ಅನ್ವಯಿಸುವಂತಿವೆ. 'ಅಶೋಕಚಕ್ರ'ವು ಸುಪರಿಣಾಮವನ್ನು ಉಂಟುಮಾಡುವ ಸಾರ್ಥಕ ಗೀತರೂಪಕ.

**ಕುಮಾರಿ ಚಂದ್ರಿಕಾ ಕೊಪ್ಪರ**

"ಮುಗಿತಾಯದ ಸನ್ನಿವೇಶವೂ ಔಚಿತ್ಯಪೂರ್ಣವಾಗಿದೆ. ಸರಳಗನ್ನಡದಲ್ಲಿ ವಿಷಯ ಗಾಂಭೀರ್ಯವನ್ನು ಸುಲಭವಾಗಿ ಅರು-ಹುವ ಶಕ್ತಿಯು ಸಂಪೂರ್ಣ ಸಫಲವಾಗಿದೆಯೆನ್ನಬೇಕು. ಧಾಟಿ-ಬದ್ಧವಾದ ವಾಕ್ಯವು ಓದುವಾಗಲೇ ಸ್ಫೂರ್ತಿಯಾಯುತ್ತದೆ. ಕನ್ನಡದ ಕಸ್ತೂರಿಯ ಕಂಪು, ಮಂದಗಾಳಿಯ ಸುಳಿವಿನಿಂದ ಈ ರೂಪಕದಲ್ಲಿ ವಿಹರಿಸುತ್ತಿದೆಯೆಂದು ಹೇಳಿದರೆ ಅತಿಶಯವಾಗದು,

**ಕೆ. ಶ್ರೀ. ಆಚಾರ್ಯ**


## ಕ್ರೀಡಾಂಗಣ

(ಕವನ ಸಂಕಲನ)

卐

ಬರೆಹಗಾರರು :

**ಎನ್. ಎಸ್. ಗದಗಕರ**

ಇದರಲ್ಲಿ ವಿವಿಧವಿಷಯಗಳನ್ನು ವಸ್ತುವನ್ನಾಗಿ ಇರಿಸಿಕೊಂಡು ಬರೆದ ೩೬ ಕವನಗಳಿರುವವು.

ಶ್ರೀ. ಆನಂದಕಂದರ ಮುನ್ನುಡಿಯುನ್ನೊಳಗೊಂಡಿದೆ.

**ಕ್ರೌ. ೮. ೬೦ ಪುಟ**

**ಬೆಲೆ ೧ ರೂಪಾಯಿ**

**ಮುಖ್ಯ ಮಾರಾಟಗಾರರು :—**

**ಮನೋಹರ ಗ್ರಂಥಭಾಂಡಾರ, ಧಾರವಾಡ**

## ಜಯಂತಿಯ ೧೬–೧೭ನೆಯ ಸಂಪುಟಗಳು

## ಕೆಲವೇ ಪ್ರತಿಗಳು ಉಳಿದಿವೆ!

**ಒಂದೊಂದು ಸಂಪುಟವೆಂದರೆ ಒಂದೊಂದು ಜ್ಞಾನಕೋಶದ ವಿಭಾಗವಿದ್ದಂತೆ.**

**ವಾಚನಾಲಯಗಳವರು ಈ ಯೋಗವನ್ನು ಕಳೆದುಕೊಳ್ಳಲಾಗದು !**

೪ ರೂ. ೮ ಆಣೆಗಳನ್ನು M. O. ಮೂಲಕ ಕಳುಹಿಸಿದರೆ, ಅಂಚೆಯ ವೆಚ್ಚವನ್ನು ನಾವೇ ವಹಿಸಿ
೧೨ ಸಂಚಿಕೆಗಳನ್ನು ಕಳುಹಿಸುವೆವು.
ಬೇಕಾದವರು ಬೇಗನೇ ತರಿಸಿಕೊಳ್ಳಿರಿ.

ವ್ಯವಸ್ಥಾಪಕ **'ಜಯಂತಿ' ಧಾರವಾಡ**

# ಸಾದರ ಸ್ವೀಕಾರ

೧೦೧ **ಕನ್ನಡ ನಿಘಂಟು:** (ಮಾದರಿಯ ಪುಟಗಳು) ಪ್ರಸಂಪಾದಕರು ಶ್ರೀ. ಡಿ. ಎಲ್. ನರಸಿಂಹಾಚಾರ್ಯ ಎಂ. ಎ. (ಸಂಪಾದಕ ಸಮಿತಿಯ ಪರವಾಗಿ) ಪ್ರಕಾಶಕರು, ಕನ್ನಡ ಸಾಹಿತ್ಯಪರಿಷತ್ತು ಚಾಮರಾಜಪೇಟೆ, ಬೆಂಗಳೂರು ೨. ಡೆ. ೧/೮ ದ ೮ ಪುಟಗಳು.

ಮುಂದೆ ಪ್ರಕಟವಾಗಲಿರುವ ಕನ್ನಡ ನಿಘಂಟಿನ ಮಾದರಿಯ ಪುಟಗಳಿವು. ಸಂಪಾದಕ ಸಮಿತಿಯವರು ತಾವು ಅನುಸರಿಸಿದ ರೀತಿ ಪದ್ಧತಿಗಳನ್ನು, ಕನ್ನಡ ವಿದ್ವಾಂಸರ ಮುಂದೆ ಇರಿಸಿ, ಅವರ ಸಲಹೆ-ಸೂಚನೆಗಳನ್ನು ಪಡೆಯುವುದಕ್ಕಾಗಿ ಈ ಮಾದರಿಪುಟಗಳನ್ನು ಪ್ರಕಟಿಸಿ ಅಲ್ಲಲ್ಲಿ ಕಳುಹಿದ್ದಾರೆ.

೧೦೨ **ಭಾವಜೀವಿ:** (ಖಂಡಕಾವ್ಯ- ೨ನೆಯ ಆವೃತ್ತಿ) ಬರೆದವರು, ಶ್ರೀ. ಚೆನ್ನವೀರ ಕಣವಿ. ಪ್ರಕಾಶಕರು, ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ. ಕ್ರಾ. ಅ ೧೬+೨೦ ಪುಟಗಳು. ಬೆಲೆ ೦—೮—೦.

೧೦೩ **ಹರಿಹರನು ಚಿತ್ರಿಸಿದ ಕೆಲವು ಶರಣರು** (ಶರಣರ ಕಥೆಗಳು) ಬರೆದವರು, ಶ್ರೀಮಾನ್ ಪ. ಶ್ರೀಕಂಠಯ್ಯ ಎಂ. ಎ. ರಾಯಚೂರಿನ ಕರ್ನಾಟಕಸಂಘದ ಪ್ರಕಾಶನ. ಕ್ರಾ. ಅ. ೫೨ ಪುಟಗಳು. ಬೆಲೆ ೦—೧೦—೦

೧೦೪ **ಉಯ್ಯಾಲೆ** (ಶಿಶುಗೀತಗಳ ಸಂಕಲನ) ಬರೆದವರು, ಶ್ರೀಮಾನ್ ಕೆ. ತಿಮ್ಮಣ್ಣ ಆಳ್ವರು. ಪ್ರಕಾಶಕರು, ಶ್ರೀ. ಮನ್ರಪ್ಪಾಡಿ ವಿಶ್ವನಾಥ ಸೆಟ್ಟಿಯವರು, ಮಾಯಿಪ್ಪಾಡಿ (ದ. ಕ.) ಕ್ರಾ. ಅ. ೪೪ ಪುಟಗಳು. ಬೆಲೆ ೦—೬—೦.

೧೦೫ **ಕನ್ನಡನುಡಿ** (ಮಾಸಪತ್ರಿಕೆಯ ಸಾಹಿತ್ಯಸಮ್ಮೇಳನಾಂಕ) ಸಂಪಾದಕರು ಶ್ರೀಮಾನ್ ವಿ. ಸೀತಾರಾಮಯ್ಯ ಎಂ. ಎ. ಪ್ರಕಾಶಕರು, ಕನ್ನಡ ಸಾಹಿತ್ಯಪರಿಷತ್ತು, ಚಾಮರಾಜಪೇಟೆ, ಬೆಂಗಳೂರು. ಕ್ರಾ. ೧/೮ ದ ೧೬೪ ಪುಟಗಳು.

ಇದರಲ್ಲಿ, ಕಳೆದ ಡಿಸೆಂಬರು ತಿಂಗಳಲ್ಲಿ ನಡೆದ ರಾಯಚೂರಿನ ಕನ್ನಡ ಸಾಹಿತ್ಯಸಮ್ಮೇಳನ ಕಾಲದಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳ ವಿವರವಾದ ವರದಿಯೂ, ಸ್ವಾಗತಾಧ್ಯಕ್ಷ-ಅಧ್ಯಕ್ಷರ ಸಂಪೂರ್ಣ ಭಾಷಣಗಳೂ, ಸಮ್ಮೇಳನದಲ್ಲಿ ಪಾಸಾದ ಗೊತ್ತುವಳಿಗಳೂ ಪ್ರಕಟವಾಗಿವೆ. ಅಲ್ಲದೆ ಬೇರೆ ಬೇರೆ ಗೋಷ್ಠಿಗಳಲ್ಲಿ ಮಾಡಿದ ವಿದ್ವಾಂಸರ ಭಾಷಣಗಳು ಕೆಲವೂ ಬಂದಿವೆ. ಸಂಗ್ರಹಿಸಿ ಇರಿಸಬೇಕಾದ ಸಂಚಿಕೆ.

೧೦೬ **ಚಂದ್ರಿಕೆಯ ಚೆಲುವಿನಲ್ಲಿ** (ಐತಿಹಾಸಿಕ ಕಾದಂಬರಿ) ಬರೆದವರು, ಶ್ರೀಮಾನ್ ಚಿ. ಉದಯಶಂಕರ. ಪ್ರಕಾಶಕರು: ಸುಧಾ ಪ್ರಕಾಶನ, ೨೦೧, ೫ನೆಯ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು-೨ ಕ್ರಾ. ಅ. ೧೭೬ ಪುಟಗಳು. ಬೆಲೆ ೧—೨—೦.

೧೦೭ **ಜಾನಪದ ಸಾಹಿತ್ಯ** (೩ ಚಿಕ್ಕಲೇಖನಗಳ ಸಂಕಲನ) ಬರೆದವರು: ಶ್ರೀಮಾನ್ ಪಡಾರು ಮಹಾಬಲೇಶ್ವರಭಟ್ಟ, ಕೊಳನಾಡು (ದ. ಕ.). ಪ್ರಕಾಶಕರು: ಒಂದಾಣೆಮಾಲೆ, ಪ್ರಭಾತ ಕಾರ್ಯಾಲಯ, ಮಂಗಳೂರು. ಕ್ರಾ. ಅ. ೧೬ ಪುಟಗಳು. ಬೆಲೆ ೦—೧—೦.

೧೦೮ **ಕೀಟಕ-ಪಿಡುಗುಗಳ ಸಮೀಕ್ಷಣೆ** (ಪ್ರಾಣಿವಿಜ್ಞಾನ ಸಸ್ಯವಿಜ್ಞಾನಗಳಿಗೆ ಸಂಬಂಧಿಸಿದ ಕಿರುಹೊತ್ತಿಗೆ) ಬರೆದವರು: ಶ್ರೀಮಾನ್ ಕಟಗೀಹಳ್ಳಿಮಠ ಎಂ. ಎಸ್‌ಸಿ. ಅವರು. ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಫೂಲ್ಸ್‌ಕ್ಯಾಪ್ ಅಷ್ಟಪತ್ರದ ೮೬ ಪುಟಗಳು. ಬೆಲೆ ೦—೪—೦.

೧೦೯ **ರಾಜ್ಯ ಪುನರ್ನಿರ್ಮಾಣ ಸಮಿತಿಯಿಂದ ಕರ್ನಾಟಕಕ್ಕಾದ ಅನ್ಯಾಯಗಳು** (ರಾಜಕೀಯ ವಿಚಾರಗ್ರಂಥ) ಬರೆದವರು: ಶ್ರೀಮಾನ್ ಕೃಷ್ಣಕುಮಾರ ಕಲ್ಲೂರ ಅವರು. ಪ್ರಕಾಶಕರು: ಭಾರತೀ ಪ್ರಕಾಶನಮಂದಿರ, ಬೊಂಬಾಯಿ-೨೫. ಡೆ. ಅ. ೮೦ ಪುಟಗಳು. ಬೆಲೆ ೦—೮—೦.

೧೧೦ **ಕನಸಿನ ಕನ್ನಡಿ** (ಕಥಾಸಂಕಲನ) ಬರೆದವರು: ಶ್ರೀಮಾನ್ ವೆಂ. ಮು. ಜೋಶಿಯವರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ಪ್ರಕಟನೆ. ಕ್ರಾ. ಅ. ೧೪೪ ಪುಟಗಳು. ಬೆಲೆ ೧—೪—೦

೧೧೧ **ಸುದರ್ಶನ** (ಪತ್ರಿಕೆಯ ಪರ್ಯಾಯ ವಿಶೇಷ ಸಂಚಿಕೆ) ಸಂಪಾದಕರು: ಶ್ರೀಮಾನ್ ಬನ್ನಂಜೆ ರಾಮಾಚಾರ್ಯರು. ಪ್ರಕಾಶಕರು: ಶ್ರೀಮಾನ್ ಕೆ. ರಾಘವೇಂದ್ರರಾವ್, ಮೆಜೆಸ್ಟಿಕ್ ಪ್ರೆಸ್, ಉಡುಪಿ (ದ. ಕ.). ಕ್ರಾ. ೧/೮ ದ ೫೨ ಪುಟಗಳು. ಬೆಲೆ ೦—೪—೦

೧೧೨ **ದೀಪನಿರ್ವಾಣ** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್ ಕೊಟ್ಟಲಗಿ ರಾಮಚಂದ್ರ. ಧಾರವಾಡದ ಲಲಿತ ಸಾಹಿತ್ಯಮಾಲೆಯ ೪೧ನೆಯ ಕುಡಿ. ಕ್ರಾ. ಅ. ೧೭೦ ಪುಟಗಳು, ಬೆಲೆ ಉತ್ತಮ ಪ್ರತಿಗೆ ೨—೮—೦, ಸಾಮಾನ್ಯಪ್ರತಿಗೆ ೧—೮—೦.

೧೧೩ **ರಾಯಭಾರಿ** (ವಾರಪತ್ರಿಕೆಯ ಪರ್ಯಾಯ ವಿಶೇಷಾಂಕ) ಪ್ರಧಾನ ಸಂಪಾದಕರು: ಶ್ರೀ. ಪಿ ರವೀಂದ್ರ ನಾಯಕ ಎಂ. ಎಸ್‌ಸಿ. ಅವರು. ಸಂಪಾದಕರು: ಶ್ರೀಮಾನ್ ಎಸ್. ಎಲ್. ನಾರಾಯಣಭಟ್ಟರು, ರಾಯಭಾರಿ ಕಾರ್ಯಾಲಯ, ಉಡುಪಿ (ದ. ಕ). ಕ್ರಾ. ೧/೮ ದ ೧೧೨ ಪುಟಗಳು. ಬೆಲೆ ೦—೮—೦.

೧೧೪ **ಕಲ್ಯಾಣ** (ಹಿಂದೀ ಮಾಸಪತ್ರಿಕೆಯ ಸಚಿತ್ರ ಸತ್-ಕಥಾಂಕ) ಸಂಪಾದಕರು: ಶ್ರೀಮಾನ್ ಹನುಮಾನ್‌ಪ್ರಸಾದ ಪೋದ್ದಾರ್ ಮತ್ತು ಶ್ರೀಮಾನ್ ಚಿಮ್ಮನಲಾಲ್ ಗೋಸ್ವಾಮಿ ಎಂ. ಎ., ಶಾಸ್ತ್ರಿ. ಗೀತಾಪ್ರೆಸ್, ಗೋರಖಪುರ. ಕ್ರಾ. ೧/೮ ದ ೭೦೪ ಪುಟಗಳಲ್ಲದೆ ಚಿತ್ರದ ಪುಟಗಳು ಬೇರೆ. ಬೆಲೆ ೭—೮—೦.

# ಜಯಂತಿಗೆ ಚಂದಾದಾರರಾಗಿರಿ!

## ಕರ್ನಾಟಕದಲ್ಲಿಯ ಎಲ್ಲ ಮಾಸಪತ್ರಿಕೆಗಳಲ್ಲಿಯೂ ಗಾತ್ರದಲ್ಲಿ ದೊಡ್ಡದು!

## ಪ್ರತಿಯೊಂದು ಕುಟುಂಬದಲ್ಲಿಯೂ ಇರಬೇಕಾದ ಪತ್ರಿಕೆ 'ಜಯಂತಿ'

**ತನ್ನ ಹದಿನೆಂಟು ವರ್ಷಗಳ ಜೀವನದಲ್ಲಿ, ಒಂದು ಸಲವೂ ಸಂಯುಕ್ತಾಂಕವನ್ನು ಹೊರಡಿಸಿಲ್ಲ;**
**ತನ್ನ ಸಮಯನಿಷ್ಠೆಯ ಗುರಿಗೆ ಚ್ಯುತಿ ತಂದುಕೊಂಡಿಲ್ಲ!**

ಸದಭಿರುಚಿಗೆ ಒಗ್ಗುವಂತಹ ಸಾಹಿತ್ಯವನ್ನು ಪ್ರಕಟಿಸುವುದೇ ಜಯಂತಿಯ ಆದರ್ಶ!

ಕನ್ನಡನಾಡಿನ ಪ್ರಮುಖಸಾಹಿತ್ಯಿಕರ ಕೃತಿಗಳ ದರ್ಶನವನ್ನು ಜಯಂತಿಯು ಮಾಡಿಸುವುದಲ್ಲದೆ, ಹೊಸ ಸಾಹಿತ್ಯಿಕರನ್ನು ಬೆಳಕಿಗೆ ತರುವ ಕಾರ್ಯವನ್ನೂ ಮಾಡುವುದು. ಜಯಂತಿಯಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನವೂ ನಾಡಿಗರ ದೃಷ್ಟಿಯನ್ನು ಜೀವನ ಸೌಂದರ್ಯದ ಕಡೆಗೆ ತಿರುಗಿಸುವಂತಹದಿರುವುದು. ವಿವಿಧ ವಿಷಯಗಳ ಪರಿಚಯಾತ್ಮಕ ಲೇಖನಗಳು ನಾಡಿಗರನ್ನು ಬಹುಶ್ರುತರನ್ನಾಗಿ ಮಾಡಬಲ್ಲುವು. ಕುಟುಂಬದಲ್ಲಿಯ ಹಿರಿಯರಿಗೂ ಕಿರಿಯರಿಗೂ ಜಯಂತಿ ಪ್ರಯೋಜನಕಾರಿ!

**ಕನ್ನಡನಾಡಿನ ಎಲ್ಲ ಶಾಲೆ-ಕಾಲೇಜುಗಳೂ ಜಯಂತಿಯನ್ನು ತರಿಸಿಕೊಳ್ಳಬೇಕು.**

ಮುಂಬಯಿ, ಮದರಾಸ, ಮೈಸೂರು, ಹೈದರಾಬಾದ್ ಇವೆಲ್ಲ ರಾಜ್ಯಗಳ
ಸರಕಾರಗಳಿಂದಲೂ ಜಯಂತಿಯು ಮನ್ನಣೆಯನ್ನು ಪಡೆದಿದೆ.

**ವಾರ್ಷಿಕ ಚಂದಾ ೫-೦-೦. ಆರು ತಿಂಗಳ ಚಂದಾ ೩-೦-೦**

# 'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti publications, by K. S. Betgeri at the Jayanti Office, Dharwar




ಏಪ್ರೀಲ್

೧೯೫೬

ಬೆಲೆ:

೮ ಆಣೆಗಳು

# ಉಲ್ಲಸ ಮೆರೆಯಿತು ಜಗದೊ

೧

'ಕಾಮನ ಜಯಿಸಿದೆ, ಕಾಮನ ದಹಿಸಿದೆ
ಎಂದುಗ್ಗಡಿಸಿದ ಮುಕ್ಕಣ್ಣ—
'ಮುಂದೆ ನನ್ನ ಗತಿಯೇನು?—ಎನುತಲೊಂ.
ದಿದಳು ಸೃಷ್ಟಿ ಭೀತಿಯ ಬಣ್ಣ.

೨

ಕಾಮನನ್ನು ಸುಟ್ಟುರಿದ ಯೋಗಿವರ
ಮುಚ್ಚಿದ ಕಂಗಳ ಬಿಚ್ಚಿದನು-
ಮುಂಗಡೆಯೊಳಿ ನಿಂದಿರುವಾ ಗೌರಿಯ
ಹರಯದ ಚೆಲುವನು ನೋಡಿದನು.

೩

ಕಾಮನ ದಹಿಸಿದ ತಪ್ಪೆಂತಹದದು!—
ಯೋಗೀಶ್ವರನಿಗೆ ಗೊತ್ತಾಯ್ತು....
ಕಾಮನಿರದ ಹೆಣ್-ಗಂಡಿನ ಬಾಳಲಿ
ಹುರುಳೇನಿದೆ—ಎಂಬರಿವಾಯ್ತು!

೪

ಬಾರೈ ಕಾಮಾ, ಪ್ರೇಮಸುಧಾಮಾ—
ಎಂದು ಕೂಗಿದನು ಹೃದಯದಲಿ....
ಕುಸುಮಬಾಣಗಳನೆಸೆಯುತ ಕಾಮನು
ಮೈದೋರಿದನಲ್ಲಿಯೆ ಮರಳಿ!

೫

ಸೃಷ್ಟಿದೇವತೆಯ ಭೀತಿಯು ಬೀತುದು
ಮುಖದೊಳಗಾಡಿತು ಮುಗುಳುನಗೆ....
ಮಲ್ಲಿಗೆಯರಳಿತು ಮಾಮರಕೆರಳಿತು
ಉಲ್ಲಸ ಮೆರೆಯಿತು ಜಗದೊಳಗೆ!

ಂಪುಟ
೧೮

JAYANTI

ಸಂಚಿ
೧೧

# ಈ ಸಂಚಿಕೆಯಲ್ಲಿ

●


**ಹೊರಗುಳಿದ ಕನ್ನಡಿಗರ ಗತಿಯೇನು? ( ಸಂಪಾದಕೀಯ )**
ಸಂಪಾದಕರು .... .... .... ೪೦೧

**ನಾಡನಡೆ ( ಸಾಂದರ್ಭಿಕ ಟಿಪ್ಪಣಿಗಳು )**
' ಕಾಲಭೈರವ ' .... .... ೪೦೩ ಮತ್ತು ೪೪೦

**ರಾಜವಂಚಕ ( ತರಂಗರೂಪಕ )**
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ .... .... ೪೦೫

**ಸಾಹಿತ್ಯದಲ್ಲಿ ಶೃಂಗಾರ ( ಚರ್ಚೆ )**
ಶ್ರೀ. ಎಸ್. ಭೀಮಭಟ್ಟ, ವಿದ್ವಾನ್, ಕಣ್ಯಾನ ದ. ಕ. .... ೪೧೧

**ಕಾಮನಹುಣ್ಣಿವೆ ( ಕವನ )**
' ಆನಂದಕಂದ ' ಧಾರವಾಡ .... .... ೪೧೬

**ಬಾಳ್-ಬಿಲ್ಲು**
ಶ್ರೀ. " ನಾರಂಗಿ " ಭಟ್ಟ. ಮುಂಬಯಿ .... .. ೪೧೬

**ಭಾಷಾನುಗುಣ ರಾಜ್ಯಘಟನೆಯ ಕಲ್ಪವೃಕ್ಷ ( ವಿಚಾರವಿಶ್ಲೇಷಣ )**
ಶ್ರೀ. ಶಂ. ವಿ. ಜೋಶಿ, ಧಾರವಾಡ .... .... ೪೧೭

**ಕಾಮದಹನ ( ಸಣ್ಣ ಕತೆ )**
ಶ್ರೀ. ಎಲ್. ಡಿ. ಸಭಾಹಿತ, ಮುಂಬಯಿ .... .... ೪೧೯

**ಶಿಲಾವಚನ ( ದೃಶ್ಯಕವನ )**
ಶ್ರೀ. ಅರವಿಂದ ನಾಡಕರ್ಣಿ, ಬಿ.ಎಸ್‌ಸಿ ಎಲ್.ಎಲ್.ಬಿ ಮುಂಬಯಿ ೪೨೫

**ಭಾರತೀಯ ತತ್ತ್ವವಿದುಷಿಯರು– ಗಾರ್ಗಿ ಮತ್ತು ಮೈತ್ರೇಯಿ (ಪರಿಚಯ)**
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ .... .... ೪೨೬

**ಸಂಕ್ರಾಂತಿಯ ಉಡುಗೊರೆ ( ಜೀವನ ಚಿತ್ರ )**
ಶ್ರೀಮತಿ ಇಂದಿರಾ ಲಕ್ಷ್ಮೀನರಸಿಂಹರಾವ್ ಎಂ. ಎ. ಜಬಲಪುರ ೪೩೦

**ಸುಪಂಥಾ ( ಕವನಸಂಗ್ರಹ ವಿಮರ್ಶೆ )**
ಶ್ರೀ. ಆರ್. ಜಿ. ಕುಲಕರ್ಣಿ ( ಬೆನಕಟ್ಟಿ ), ಧಾರವಾಡ .... ೪೩೩

**ಈ ಸಂದರ್ಶನಕೆ ( ಕವನ )**
ಶ್ರೀ. ಮುದೇನೂರ ಸಂಗಣ್ಣ, ಬೆಗಟೇರಿ .... .... ೪೩೫

**ಸುಳ್ಳು ( ಕವನ )**
ಅನುವಾದ ... .... .... ೪೩೫

**ಸಾಹಿತ್ಯವಿಮರ್ಶೆಯ ಶಿಕ್ಷಣರಂಗ**
( ' ಕುರುಡು ಕಣ್ಣು ' ' ಮುಗಿಯದ ಯುದ್ಧ ' )
ಶ್ರೀ. ಕೆ. ಎಸ್. ಶರ್ಮಾ ಮತ್ತು ಶ್ರೀ. ' ಮಹೇಶ ' .... ೪೩೬

**ಸಾದರ ಸ್ವೀಕಾರ ( ಹೊದಿಕೆಯ ೩ನೆಯ ಪುಟದಲ್ಲಿ )**

# ಜಯಂತಿ

**ಸಂಪುಟ ೧೮ ಸಂಚಿಕೆ ೧೧**

ಕುಟುಂಬದಲ್ಲಿಯ ಎಲ್ಲರೂ ಜ್ಞಾನವನ್ನೂ ರಸಾನಂದವನ್ನೂ ಪಡೆಯಬಹುದಾದ ಮಾಸಪತ್ರಿಕೆ

●

ಸಂಪಾದಕರು:
**ಶ್ರೀ. ಬೆಟಗೇರಿ ಕೃಷ್ಣಶರ್ಮ**

●

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

卐

**ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.**

⁂

ಜಾಹೀರಾತು ಕೊಡಬಯಸುವವರು ದರಗಳಿಗಾಗಿ ಬರೆದು ಕೇಳಬೇಕು.

●



**ಅನೇಕ ಊರುಗಳಲ್ಲಿ ಜಯಂತಿ ಮಾರುವ ಏಜಂಟರು ಬೇಕಾಗಿದ್ದಾರೆ.**


# ಸಂಪಾದಕೀಯ

●

## ಹೊರಗುಳಿದ ಕನ್ನಡಿಗರ ಗತಿಯೇನು?

ಯಾವುದೇ ಹೆಸರಿನದಾಗಲಿ, ಕನ್ನಡಿಗರಿಗೊಂದು ಸ್ವತಂತ್ರರಾಜ್ಯ ದೊರೆಯಿತೆಂದು ಅನೇಕ ಜನರು ಸಂತೋಷ-ಸಮಾಧಾನದ ಮಾತುಗಳನ್ನು ಆಡುತ್ತಲಿದ್ದಾರೆ. ಮಹಾರಾಷ್ಟ್ರದ ನಾಯಕರು ಮುಂಬಯಿ ಅಸೆಂಬ್ಲಿ ಸಭೆಯಲ್ಲಿ ಮೊನ್ನೆ ಮೊನ್ನೆ ಆಡಿದ ಮಾತುಗಳನ್ನು ಕೇಳಿದರೆ, ಕನ್ನಡಿಗರಿಗೆ ತಮ್ಮ ನಿರೀಕ್ಷೆ-ಅಪೇಕ್ಷೆಗಳಿಗಿಂತ ಹೆಚ್ಚಾಗಿಯೇ ದೊರೆತಿದೆಯೆಂದು ಅವರ ಭಾವನೆಯಾದಂತಿದೆ. ಇದು ಆಶ್ಚರ್ಯದ ಸಂಗತಿಯೇ ಸರಿ!

ಏಕೀಕೃತ ಕರ್ನಾಟಕದಲ್ಲಿ ಅಧಿಕೃತವಾಗಿ ಸೇರಬೇಕಾದ ಸುಮಾರು ೧೦೦೦೦ ಚದರು ಮೈಲುಗಳಷ್ಟು ಪ್ರದೇಶವು ಬೇರೆ ಬೇರೆ ಭಾಷಾರಾಜ್ಯಗಳಲ್ಲಿ ಸೇರಿಹೋಗಲಿದೆ. ಸುಮಾರು ೩೫ ಲಕ್ಷದಷ್ಟು ಕನ್ನಡಿಗರು ತಮ್ಮ ಭಾಷೆ-ಸಂಸ್ಕೃತಿಗಳಿಂದ ಅಗಲಿ ಹೋಗಲಿದ್ದಾರೆ. ಈ ಪ್ರದೇಶ-ಪ್ರಾದೇಶಿಕರನ್ನು ಕಳೆದುಕೊಂಡು, ಕರ್ನಾಟಕ-ಅಲ್ಲಲ್ಲ—ಮೈಸೂರು ರಾಜ್ಯವು ರಚನೆಗೊಳ್ಳಲಿದೆ. ಕನ್ನಡಿಗರಿಗೆ ಇದು ಸಮಾಧಾನ ಪಡಬಹುದಾದ ಸಂಗತಿಯೇ? ಕನ್ನಡಿಗರಿಗೆ ಬೇಡಿದುದಕ್ಕಿಂತಲೂ ಹೆಚ್ಚಾಗಿ ದೊರೆತಿದೆಯೆಂದು ಹೇಳುವ ಮಹಾರಾಷ್ಟ್ರೀಯರ ಸ್ವಭಾವ ಯಾವಬಗೆಯದೆಂದು ಹೇಳಬಹುದು?

ಪುನರ್ಘಟಿತ ಪ್ರಾಂತ್ಯಗಳ ರಚನೆಯೆಂದರೆ, ಯಾವುದೇ ಬಗೆಯ ತತ್ತ್ವದ ತಳಹದಿಯಿಲ್ಲದುದೆಂದು ಮತ್ತೆ ಮತ್ತೆ ಹೇಳಬೇಕಾಗುವುದು. ಮೇಲೆ ಮೇಲೆ ನೋಡಿದರೆ ಭಾಷೆಗಳನ್ನು ಅನುಸರಿಸಿಯೆ ರಾಜ್ಯಗಳನ್ನು ರಚಿಸಲಾಗಿದೆಯೆಂದು ಎನಿಸುವಂತಿದೆ. ಆದರೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳು ಅನ್ಯಭಾಷಾರಾಜ್ಯಗಳಲ್ಲಿ ಸೇರಿಹೋಗಲಿರುವುದನ್ನು ನೋಡಿದರೆ, ಕರ್ನಾಟಕದ ಮಟ್ಟಿಗೆ ಭಾಷಾನುಗುಣರಾಜ್ಯತತ್ತ್ವವನ್ನು ಅನುಸರಿಸಿಯೇ ಇಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುವುದು. ಬಲಿಷ್ಠರಾಜ್ಯಗಳು, ಅಲ್ಲಿಯ ನಾಯಕರು—ಇವರ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು, ಕನ್ನಡಿಗರಿಗೆ ಮಾಡಿದ ಅನ್ಯಾಯವು ಇದರಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ.

ಬಳ್ಳಾರಿ ಜಿಲ್ಲೆಯ ಮೂರುವರೆ ತಾಲೂಕುಗಳನ್ನು—ಅಚ್ಚಕನ್ನಡ ಪ್ರದೇಶಗಳನ್ನು—ಆಂಧ್ರಸಿಂಹನ ಬಾಯೊಳಗಿಂದ ಉಳಿಸಿಕೊಳ್ಳಬೇಕಾದರೆ, ಕನ್ನಡಿಗರ ಹಿಂದು-ಮುಂದಿನ ಪುಣ್ಯವೆಲ್ಲ ವೆಚ್ಚವಾಯಿತು. ನಮ್ಮದೇ ಆದ ನೆಲವು ನಮಗೆ ದೊರೆಯಬೇಕಾದರೂ, ನಾವು ಆರೇಳು ತಿಂಗಳ ಕಾಲ ಸಂದೇಹದ ಉಯ್ಯಾಲೆಯನ್ನಾಡಿ ತಲೆಕೆಡಿಸಿಕೊಳ್ಳಬೇಕಾಯಿತು. ಕಾಸರಗೋಡಿನ ಕನ್ನಡಿಗರು ತಾವು ಕನ್ನಡನಾಡನ್ನು ಬಿಟ್ಟು ಹೋಗಲಾರೆವೆಂದು ಗೋಗರೆಯುತ್ತಲಿದ್ದರೂ, ಕನ್ನಡಿಗರ ನಾಯಕನಿಷ್ಠೆ ಅವರನ್ನು ಮಲೆಯಾಳಕ್ಕೆ ಕಳುಹಲು ಒಪ್ಪಿಕೊಂಡು ಬಿಟ್ಟಂತಿದೆ. ಕಾಸರಗೋಡು ತಾಲೂಕಿನಲ್ಲಿ ಹೊರತು, ಕರ್ನಾಟಕದ ಮಿಕ್ಕಭಾಗದಲ್ಲಿಯ ನಾಯಕರು, ಕಾಸರಗೋಡಿನ ವಿಚಾರದಲ್ಲಿ ಬಾಯನ್ನೇ ಬಿಚ್ಚದಿರುವುದು ವಿಷಾದದ ಸಂಗತಿಯಾಗಿದೆ. ಕಾಸರಗೋಡು ಸಾಮಾನ್ಯ ಪ್ರದೇಶವಲ್ಲ; ಅದು ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಆಗರವಾಗಿದ್ದೆ ಅಲ್ಲಿಯವರನ್ನೆಲ್ಲ ಮಲೆಯಾಳ ದೇಶಕ್ಕೆ ಮಾರಿ, ಸ್ವತಂತ್ರರಾಜ್ಯದ ಸುಖವನ್ನು ಉಣ್ಣಬೇಕೇ ನಾವು?

ಇನ್ನು ಪೂರ್ವೋತ್ತರ ಗಡಿಯ ಕನ್ನಡಿಗರ ವಿಚಾರ. ಈ ಪ್ರದೇಶಗಳಲ್ಲಿಯ ಕಲಿತವರು ಅನ್ಯಭಾಷೆ-ಸಂಸ್ಕೃತಿಗಳ ಬೆನ್ನುಹತ್ತಿ ಮನಗೆಟ್ಟುಹೋಗಿದ್ದಾರೆ. ಕಲಿಯದ ಬಹುಸಂಖ್ಯಾಕರು ಅಚ್ಚಕನ್ನಡಿಗರಾದರೂ, ಅವರಿಗೆ ತಮ್ಮ ಭಾಷೆ-ಸಂಸ್ಕೃತಿಗಳ ಕಲ್ಪನೆಯಿಲ್ಲ. ಆದುದರಿಂದಲೇ ತಮ್ಮ ಕನ್ನಡತನದ ಹಕ್ಕು-ಬಾಧ್ಯತೆಗಳಿಗಾಗಿ ಅವರು ಚಳವಳಿಯನ್ನು ಮಾಡಲಾರರು.

ಗಡಹಿಂಗ್ಲಜ ಹತ್ತಿಕಣಗಲಿ, ತಾಸಗಾಂವಿ, ಜತ್ತ, ಅಕ್ಕಲಕೋಟಿ, ಸೊಲ್ಲಾಪುರ ಮೊದಲಾದ ತಾಲೂಕುಗಳ ಹಳ್ಳಿ-ಹಳ್ಳಿಗಳಲ್ಲಿ ತಿರುಗಾಡಿನೋಡಿದರೆ, ಅಲ್ಲಿ ವಾಸಿಸುವ ಬಹುಸಂಖ್ಯಾಕರಾದ ಅಚ್ಚ ಕನ್ನಡಿಗರೆಲ್ಲ ಮಹಾರಾಷ್ಟ್ರರಾಜ್ಯದಲ್ಲಿ ಸೇರ್ಪಡೆ ಹೊಂದಲಿರುವರೆಂಬುದನ್ನು ಕಂಡು, ಯಾವ ಅಭಿಮಾನಿ ಕನ್ನಡಿಗನ ಕರುಳು ಕುದಿಯದೆ ಇರಬಹುದು? ಇನ್ನೂ ಒಂದು ವಿಷಯವೆಂದರೆ, ಈ ಪ್ರದೇಶಗಳು ಈ ಮೊದಲು ಬೇರೆ ಬೇರೆ ಮಹಾರಾಷ್ಟ್ರೀಯ ಸಂಸ್ಥಾನಿಕರ ವಶದಲ್ಲಿ ಇದ್ದುವಾದುದರಿಂದ, ಇಲ್ಲಿಯ ಜನಸಾಮಾನ್ಯರಿಗೆ, ಕನ್ನಡ ಭಾಷೆಗೆ ತಮ್ಮ ಜೀವನದಲ್ಲಿ ಕೊಡಬೇಕಾಗಿದ್ದ ಮಹತ್ತ್ವವೇ ಮರೆತುಹೋದಂತಾಗಿದೆ ಮನೆಯಲ್ಲಿ ಮಾತನಾಡುವುದೆಷ್ಟೋ ಅಷ್ಟೆ! ಇವರೆಲ್ಲ ಅನ್ಯಭಾಷಾರಾಜ್ಯದಲ್ಲಿ ಸೇರಿಕೊಂಡರೆ, ಕನ್ನಡ ಭಾಷೆ-ಸಂಸ್ಕೃತಿಗಳ ಜಾಗೃತಿ ಉಳಿದೀತೆ? ಇಂತಹ ಉದಾಸೀನ ಕನ್ನಡಿಗರು ಸಹಜವಾಗಿ ಅನ್ಯಭಾಷೆ ಸಂಸ್ಕೃತಿಗಳಿಗೆ ಶರಣುಹೋಗಬಹುದಲ್ಲವೆ? ಇಂತಹ ಜನಶಕ್ತಿಯನ್ನು ಕರ್ನಾಟಕವು ಕಳೆದುಕೊಳ್ಳಬೇಕೆ? ಈ ಉತ್ತರದ ಗಡಿಯ ಕನ್ನಡಿಗರಂತೆಯೇ ಪೂರ್ವ-ದಕ್ಷಿಣಗಳ ಗಡಿಯ ಕನ್ನಡಿಗರ ಅವಸ್ಥೆಯಾಗಿದೆ.

ಆಲೂರು, ಆದವಾನಿ, ಶಿರಗುಪ್ಪೆ ತಾಲ್ಲೂಕುಗಳಲ್ಲಿ ಅಚ್ಚಕನ್ನಡ ಹಳ್ಳಿಗಳು ಬೇಕಾದಷ್ಟು ಇವೆ. ಅದರಂತೆಯೆ ಅನಂತಪುರ, ಸೇಲಂ ಜಿಲ್ಲೆಗಳಲ್ಲಿ ಕನ್ನಡಿಗರೇ ಬಹುಸಂಖ್ಯಾಕರಾಗಿರುವ ಕೆಲವು ತಾಲ್ಲೂಕುಗಳಿವೆ. ಅಲ್ಲಿಯ ಜನರಿಗೆಲ್ಲ ಕರ್ನಾಟಕದಲ್ಲಿಯೆ ತಾವು ಸೇರಬೇಕೆಂದು ತುಂಬ ಅಪೇಕ್ಷೆಯಿದೆ. ಅವರಿಗಾಗಿ ನಮ್ಮ ಕನ್ನಡನಾಯಕರು ಏನ ಮಾಡುತ್ತಲಿದ್ದಾರೆ? ಕರ್ನಾಟಕ ರಾಜ್ಯವು ಕನ್ನಡನಾಯಕರ ಆಳಿಕೆಗಾಗಿ ಬೇಕಾಗಿಲ್ಲ; ಕನ್ನಡಿಗರೆಲ್ಲರ ಒಗ್ಗೂಟದ ಬಾಳಿಕೆಗಾಗಿ ಬೇಕಾಗಿದೆಯೆಂಬುದನ್ನು ಯಾರೂ ಮರೆತುನಡೆಯಲಾಗದು.

ಅಧಿಕಾರದ ದುರ್ಲೋಭದ ನಮ್ಮ ಕೆಲವು ನಾಯಕಬುವರು, ಈಗ ರಚನೆಯಾಗಲಿರುವ ಮೈಸೂರುರಾಜ್ಯವನ್ನೂ ಸ್ನೇಹ-ಸೌಹಾರ್ದಗಳ ತಳಹದಿಯ ಮೇಲೆ ಕಟ್ಟಿಗೊಡಲಿಲ್ಲ. 'ಯಾರು ಬಂದರೂ ಬರಲಿ, ಉತ್ತರಕರ್ನಾಟಕದ ಜನರು ಮಾತ್ರ ನಮಗೆ ಬೇಡ!' ಎಂದು ನುಡಿದು ಕರ್ನಾಟಕದ ಹೃದಯವನ್ನು ಒಡೆಯುವಂತಹ ರಾಕ್ಷಸಕಾರ್ಯವನ್ನೂ ಅವರು ಮಾಡಿದರು. ಆ ಅಧಿಕಾರಲೋಭಿಗಳಿಗೆ ಸಮಗ್ರಕರ್ನಾಟಕದ ಸೌಂದರ್ಯದೃಷ್ಟಿ ಇನ್ನೂ ಉದಿಸಿದಂತಿಲ್ಲ. ಅವರಿಗೆ ಕರ್ನಾಟಕದ ಯಾವ ಭಾಗ ಬಂದರೇನು; ಯಾವ ಭಾಗ ಹೋದರೇನು? ತಮ್ಮ ವೈಯಕ್ತಿಕ ಸ್ವಾರ್ಥಸಾಧಿಸಲಿಕ್ಕೆ— ತಮ್ಮ ಬುದ್ಧಿ-ಶಕ್ತಿಗಳ ಅಳವಿಗೆ ಮೀರದಷ್ಟು—ಆಳುವ ಪ್ರದೇಶವು ದೊರೆತರೆ ಸಾಕು. ಕನ್ನಡ ಸಾಹಿತ್ಯ-ಸಂಸ್ಕೃತಿಗಳು ಹಾಳಾಗಿ ಹೋಗಲಿ, ಅವು ಯಾರಿಗೆ ಬೇಕಾಗಿವೆ?

ಈಗ ಅನ್ಯಭಾಷಾಪ್ರದೇಶಗಳಲ್ಲಿ ಸೇರಲಿರುವ ಕನ್ನಡಿಗರ ಗತಿಯೇನು? ಅಲ್ಲಿ ಅವರ ಮಾತೃಭಾಷಾವಿಷಯಕವಾದ ಹಕ್ಕು-ಬಾಧ್ಯತೆಗಳನ್ನು ಸಂರಕ್ಷಿಸುವವರು ಯಾರು? ಅನ್ಯಭಾಷಾ-ರಾಜ್ಯಗಳಲ್ಲಿಯಂತೆಯೆ ಕರ್ನಾಟಕ ರಾಜ್ಯದಲ್ಲಿಯೂ ಮರಾಠಿ, ತೆಲುಗು, ತಮಿಳು ಭಾಷೆಯನ್ನಾಡುವ ಜನರು ಕೆಲವರು ಉಳಿಯಬಹುದು. ಹೀಗೆ ಉಳಿಯುವ ಆ ಜನರಲ್ಲಿ ಸುಶಿಕ್ಷಿತ, ಅಶಿಕ್ಷಿತ ಇಬ್ಬಗೆಯ ಜನರೂ ಇರಬಹುದು. ಈ ಅನ್ಯಭಾಷಾ ಸುಶಿಕ್ಷಿತರು ಚಳವಳಿ ನಡೆಯಿಸಿ, ಕರ್ನಾಟಕದಲ್ಲಿ ತಮ್ಮ ಮಾತೃಭಾಷಾವಿಷಯಕವಾದ ಹಕ್ಕು-ಬಾಧ್ಯತೆಗಳನ್ನು ಸಂರಕ್ಷಿಸಿಕೊಂಡು ಹೋಗಬಹುದು. ಆದರೆ ಅನ್ಯಭಾಷಾ ರಾಜ್ಯಗಳಲ್ಲಿ ಸೇರಲಿರುವ ಕನ್ನಡಿಗರೆಂದರೆ ಎಲ್ಲರೂ ಸಾಮಾನ್ಯಜನರು; ಅಶಿಕ್ಷಿತರು; ಅವರೊಂದಿಗಿರುವ ಸುಶಿಕ್ಷಿತರು, ಈ ಮೊದಲೇ ಆ ಆ ಭಾಷೆಗಳಿಗೆ ಶರಣುಹೋದವರೇ ಆಗಿರುವರು. ಆದುದರಿಂದ ಆ ಕನ್ನಡ ಜನತೆಗೆ ನಾಯಕರಾಗಿ ಅಲ್ಲಿಯೂ ತಮ್ಮ ಕನ್ನಡತನವನ್ನು ಉಳಿಸಿಕೊಳ್ಳುವಂತೆ ಹೇಳುವವರು ಯಾರು? ತಮ್ಮ ತಮ್ಮ ಪ್ರಾದೇಶಿಕ ಭಾಷೆಗಳನ್ನೇ ಎತ್ತಿ ಹಿಡಿಯುವ ರಾಜ್ಯಸರಕಾರಗಳು, ತಮ್ಮಲ್ಲಿಯ ಕನ್ನಡಿಗರ ಭಾಷಾವಿಷಯಕವಾದ ಹಕ್ಕು-ಬಾಧ್ಯತೆಗಳನ್ನು ಸಂರಕ್ಷಿಸಲಾರವೆಂಬುದು ಖಂಡಿತವಾದ ಮಾತು. ಹಾಗಾದರೇನು, ಅಷ್ಟು ಜನ ಕನ್ನಡಿಗರನ್ನು ಕಳೆದುಕೊಂಡು ಬಿಡಬೇಕೇ ನಾವು?

ಬರಲಿರುವ ಕನ್ನಡರಾಜ್ಯದ ಅಧಿಕಾರದ ಕುರ್ಚಿಗಳ ಕಡೆಗೆ ದೃಷ್ಟಿಯಿರಿಸಿಕೊಂಡು, ಅದೇ ಯೋಚನೆಯಲ್ಲಿ ಕಾಲಕಳೆಯುತ್ತಿರುವ ನಮ್ಮ ನಾಯಕರ ಮನಸ್ಸಿನಲ್ಲಿ, ಈ ವಿಚಾರವೇ ಮೂಡಿರಲಿಕ್ಕಿಲ್ಲ. ಅವರು ಮೊದಲೇ ಈ ವಿಚಾರವನ್ನು ಮಾಡದಿರುವುದು ಕರ್ನಾಟಕ ದ್ರೋಹವೆನಿಸುವುದು ನಿಜವಾದ ಕರ್ನಾಟಕದ ಹಿತಚಿಂತಕನು ಕರ್ನಾಟಕದ ಒಂದು ಅಡಿ ಭೂಮಿಯನ್ನೂ ಕಳೆದುಕೊಳ್ಳಲಾಗದು. ಒಬ್ಬ ಕನ್ನಡಿಗನನ್ನೂ ಕಳೆದುಕೊಳ್ಳಲಾಗದು. ಆಡಳಿತದ ಅನುಕೂಲತೆಗಾಗಿ ಕೆಲವೊಂದು ಕನ್ನಡ ಪ್ರದೇಶ ಅನ್ಯಭಾಷಾರಾಜ್ಯದಲ್ಲಿ ಸೇರಿಕೊಂಡಿದ್ದರೂ, ಅದು ಅಲ್ಲಿ ಕನ್ನಡಿಗರ ಪ್ರದೇಶವಾಗಿಯೆ ಉಳಿಯುವಂತೆ ಎಚ್ಚರು ತೆಗೆದುಕೊಳ್ಳಬೇಕು. ಪರರ ಆಡಳಿತದ ಪರಾಧೀನ ಜೀವನದಲ್ಲಿ, ಅಜ್ಞಾನದಿಂದಲೇ ನಮ್ಮ ಹಿರಿಯರು ಎಷ್ಟೋ ಕನ್ನಡ ಪ್ರದೇಶವನ್ನು ಕಳೆದುಕೊಂಡರು. ಇಂದಿನ ಸ್ವಾತಂತ್ರ್ಯಜೀವನದಲ್ಲಿಯೂ ಅಂತಹ ತಪ್ಪು ನಮ್ಮಿಂದ ನಡೆಯದಂತೆ ಪೂರ್ಣಜಾಗ್ರತಿಯನ್ನು ವಹಿಸಬೇಕು.

---


# ಬಡತನದ ಬಾಳು

( ಕಥಾಸಂಕಲನ )

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರಾಂ. ಅ. ೧೨೦ ಪುಟಗಳು. ಬೆಲೆ ೧-೪-೦

**'ಜಯಂತಿ' ಕಾರ್ಯಾಲಯ, ಧಾರವಾಡ**

# ನಾಡ ನಡೆ

●

## ಪುತ್ತಿಗೆ ಶ್ರೀಗಳವರ ಶತಮಾನೋತ್ಸವ :

ಒಂದುನೂರು ವರ್ಷದ ಶಾಂತಜೀವನವನ್ನು ಅನುಭವಿಸುವುದೂ ಸತ್ತ್ವಯುಕ್ತಜೀವಿಯ ಲಕ್ಷಣವಾಗಿದೆ. ನಮ್ಮ ನಾಡಿನಲ್ಲಿ ನೂರು ವರ್ಷಕಾಲ ಬಾಳಿದವರು ಇಂದಿನ ಕಾಲದಲ್ಲಿ ಲಕ್ಷಕ್ಕೊಬ್ಬರಾದರೂ ದೊರೆಯುತ್ತಾರೋ ಇಲ್ಲವೋ ! ಹಾಳಿಯುಹದ್ದಿನಂತೆ ನೂರು ನೂರು ವರ್ಷ ಬದುಕುವ ಸಂಸ್ಕೃತಿರಹಿತ ಜೀವಿಯ ಬಾಳಿನಿಂದ ಸಮಾಜಕ್ಕೆ, ದೇಶಕ್ಕೆ ಯಾವ ಉಪಕಾರವಾದೀತು ? ಸಮಾಜಕಲ್ಯಾಣ-ದೃಷ್ಟಿಯ ವಿಕಸಿತ ಸಂಸ್ಕೃತಿಯ ಮಹನೀಯರು ಬಹುಕಾಲ ಬಾಳುವುದು ದೇಶಕ್ಕೆ ಒಳ್ಳೆಯದು.

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಪುತ್ತಿಗೆ ಮಠದ ಹಿರಿಯ ಶ್ರೀಗಳಾದ ಶ್ರೀ ಶ್ರೀಸುಧೀಂದ್ರತೀರ್ಥ ಶ್ರೀಪಾದಂಗಳವರು ಒಂದುನೂರು ವರ್ಷಗಳ ಮಹಾಜೀವನವನ್ನು ಅನುಭವಿಸಿದ್ದಾರೆ. ಕಳೆದ ಫಾಲ್ಗುಣ ವದ್ಯ ತ್ರಯೋದಶಿ (೨೧-೩-೫೬) ಶನಿವಾರಕ್ಕೆ ಅವರಿಗೆ ೧೦೧ನೆಯ ವರ್ಷ ಪ್ರಾರಂಭವಾಯಿತು. ಅಂದು ಉಡುಪಿಯಲ್ಲಿ ಸಾರ್ವಜನಿಕವಾಗಿ ಅವರ ಜೀವನದ ಶತಮಾನೋತ್ಸವ ನಡೆಯಿತು. ಉತ್ಸವದ ಅಂಗವಾಗಿ ಅನೇಕ ಧಾರ್ಮಿಕ—ಲೌಕಿಕ—ಕಾರ್ಯಕ್ರಮಗಳು ಜರುಗಿದುವು. ಉಡುಪಿಯ ಅಷ್ಟಮಠದ ಶ್ರೀಗಳವರೂ, ಅಲ್ಲಿಯ ಸಾರ್ವಜನಿಕರೂ ಕೂಡಿ, ಮಹಾವ್ಯಕ್ತಿಯ ಸ್ಥಾನ ಮಹತಿಗೆ ತಕ್ಕಂತೆ ವಿಜೃಂಭಣೆಯಿಂದ ಈ ಉತ್ಸವವನ್ನು ನೆರವೇರಿಸಿದರು. ಶ್ರೀಗಳವರ ರಜತ ತುಲಾಭಾರವು ನಡೆದು, ಆ ಬೆಳ್ಳಿಯನ್ನು ಶ್ರೀಕೃಷ್ಣ ದೇವಸ್ಥಾನಕ್ಕೆ ಸಮರ್ಪಿಸಲಾಯಿತು.

ಶ್ರೀ. ಸುಧೀಂದ್ರತೀರ್ಥ ಶ್ರೀಪಾದಂಗಳವರು ಬರಿ ಒಂದು ಮಠದ ಸಂನ್ಯಾಸಿಯೆನಿಸಿಕೊಂಡವರಲ್ಲ; ಸನಾತನ ಧರ್ಮಜ್ಯೋತಿಯನ್ನು ಶ್ರದ್ಧೆಯಿಂದ ಬೆಳಗಿಸಿಕೊಂಡು ಬಂದವರು. ಸ್ವತಃ ಕೂಲಂಕಷ ತತ್ತ್ವಾಭ್ಯಾಸಿಗಳಲ್ಲದೆ, ತತ್ತ್ವಾಭ್ಯಾಸಿಗಳಿಗೆ ಪ್ರತ್ಯಕ್ಷ ಸಹಕಾರಿಗಳಾಗಿದ್ದವರು. ತಮ್ಮ ಜ್ಞಾನದ ನಂದಾದೀಪದಿಂದ ಅನೇಕ ಜನರ ಹೃದಯವನ್ನು ಬೆಳಗಿದವರು. ಅಂತಹರ ಕಾರ್ಯದ ಮಹತ್ತ್ವವನ್ನು, ಇಂದಿನಂತಹ ಧರ್ಮದ ಉಪೇಕ್ಷಾ-ಉದಾಸೀನ ಕಾಲದಲ್ಲಿಯೂ ನಮ್ಮ ಜನತೆ ಮರೆಯದೆ, ತನ್ನ ಕರ್ತವ್ಯವನ್ನು ಮಾಡಿದುದು ಸಂತೋಷದ ಸಂಗತಿಯೇ ಆಗಿದೆ. ಜೀವಾನುಭವ ಮೂರ್ತಿಗಳಾದ ಶ್ರೀಗಳವರಿಗೆ ಈ ವಿಜೃಂಭಣೆಯ ಉತ್ಸವವು ಇಷ್ಟವಿರದಿರಬಹುದಾದರೂ, ಉಡುಪಿಯ ಅಷ್ಟಮಠದ ಶ್ರೀಗಳವರೂ ಸಾರ್ವಜನಿಕರೂ ಉತ್ಸವ ನಡೆಸಿ ತಮ್ಮ ಕರ್ತವ್ಯವನ್ನು ಪೂರ್ಣಗೊಳಿಸಿದುದಕ್ಕಾಗಿ ಅವರಿಗೆಲ್ಲ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಹಿರಿಯ ಶ್ರೀಗಳವರಾದ ಶ್ರೀ. ಸುಧೀಂದ್ರಸ್ವಾಮಿಗಳವರು ಇನ್ನೂ ಬಹುಕಾಲ ಜೀವಿಸಿ, ಸಮಾಜಕ್ಕೆ ತಮ್ಮ ಜ್ಞಾನಲಾಭವನ್ನು ಒದಗಿಸುತ್ತಿರಲೆಂದು, ಪರಮಾತ್ಮನಲ್ಲಿ ನಮ್ಮ ಹಾರಯಿಕೆ.

## ಶ್ರೀ. ಅರವಿಂದ ಜೋಶಿಯವರು ದಿಲ್ಲಿಗೆ :

ಬೆಳಗಾಂವಿಯ ಒಬ್ಬ ನಿಸ್ಸ್ವಕಾರ್ಯಕರ್ತರಾದ ಶ್ರೀಮಾನ್ ಅರವಿಂದ ಜೋಶಿಯವರು. ಕೇಂದ್ರ ಮಂತ್ರಿಗಳಾಗಿರುವ ಮಾನ್ಯ ಶ್ರೀ. ಬಿ ಎನ್. ದಾತಾರವರ ಆಪ್ತಕಾರ್ಯದರ್ಶಿಗಳಾಗಿ ದಿಲ್ಲಿಗೆ ಹೊರಟು ಹೋದರೆಂಬುದನ್ನು ಕೇಳಿ, ಆನಂದಪಡಬೇಕೋ ವಿಷಾದ ಪಡಬೇಕೋ ತಿಳಿಯದಂತಾಗಿದೆ. ವೈಯಕ್ತಿಕವಾಗಿ ಅರವಿಂದ ಜೋಶಿಯವರು ಉನ್ನತಸ್ಥಾನಕ್ಕೆ ಏರಿ ಹೋದುದು ಅವರ ಅಭಿಮಾನಿವರ್ಗಕ್ಕೆಲ್ಲ ಆನಂದದ ಸಂಗತಿಯೇ ಸರಿ. ಆದರೆ ಬೆಳಗಾಂವಿಯ ಸಾರ್ವಜನಿಕ ಜೀವನಕ್ಕೆ ಶ್ರೀ ಅರವಿಂದ ಜೋಶಿಯವರ ಅಭಾವವು ಒಂದು ದೊಡ್ಡ ಕೊರತೆಯಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಆದುದರಿಂದಲೇ ಅವರ ಜೊತೆಯ ಕಾರ್ಯಕರ್ತರು ಅರವಿಂದ ಜೋಶಿಯವರ ಅಭಾವದ ಮೂಲಕ ಒಳಗೊಳಗೆ ಹಳಿಹಳಿಪಡುತ್ತಿರುವುದೂ ಸ್ವಾಭಾವಿಕವಾಗಿದೆ.

ಶ್ರೀ. ಅರವಿಂದ ಜೋಶಿಯವರ ವ್ಯಕ್ತಿತ್ವ ಸಕೃದ್ದರ್ಶನಕೆ ಜನರ ಕಣ್ಮನಗಳನ್ನು ಆಕರ್ಷಿಸುವಂತಹದಲ್ಲ. ಆದರೆ ಅವರು ತಮ್ಮ ಕಾರ್ಯದ ಮೂಲಕ ಸಂಪಾದಿಸಿದ ಶ್ರೇಯಸ್ಸು ಜನರೆಲ್ಲರನ್ನೂ ಬೆರಗಾಗಿಸುವಂತಹದಾಗಿದೆ.

ಇನ್ನೂ ವಿದ್ಯಾರ್ಥಿಯಾಗಿರುವಾಗಲೇ ಶ್ರೀ. ಅರವಿಂದ ಜೋಶಿಯವರಲ್ಲಿ ಕನ್ನಡದ ಅಭಿಮಾನವು ಪುಟಿಯತೊಡಗಿತು. ಏಕೈಕ ವೀರರಾಗಿ ಅವರು, ತಮ್ಮ ವಿದ್ಯಾರ್ಥಿದಶೆಯಲ್ಲಿಯೇ, ಕನ್ನಡದ ಬಗೆಗೆ ಉಪೇಕ್ಷೆಯಿಂದಿದ್ದ ತಮ್ಮ ಕುಟುಂಬದ ಜನರಲ್ಲಿ ಕನ್ನಡತನವನ್ನು ತುಂಬಿದರು.

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅವರು ಅಭ್ಯಾಸ ಮಾಡುತ್ತಿರುವಾಗ—'ಕರ್ನಾಟಕ ಕಾಲೇಜು' ಎಂದು ಹೆಸರಿದ್ದರೂ ಅಲ್ಲಿ ನಡೆದ ಅನ್ಯಭಾಷೆ-ಸಂಸ್ಕೃತಿಗಳ ಹಾವಳಿಗಳನ್ನು ವಿರೋಧಿಸಿ, ಚಳವಳಿಯನ್ನು ಸಂಘಟಿಸಿದರು. ಆ ಕಾಲದಲ್ಲಿದ್ದ ಕರ್ನಾಟಕ ಕಾಲೇಜಿನ ಅನೇಕಜನ ಪ್ರಾಧ್ಯಾಪಕರು, ಶ್ರೀ. ಅರವಿಂದ ಜೋಶಿಯವರ ಹೆಸರನ್ನು ಕೇಳಿದರೆ ಸಿಡಿಮಿಡಿಗೊಳ್ಳುತ್ತಿದ್ದರು.

ಪದವೀಧರರಾದ ಮೇಲೆ ಇವರು ಬೆಳಗಾಂವಿಯನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಕನ್ನಡ, ಕರ್ನಾಟಕಗಳ ಬಗೆಗೆ ಬೆಳಗಾಂವಿಯ ಧುರೀಣರಲ್ಲಿಯೂ ಔದಾಸೀನ್ಯ, ಜನಸಾಮಾನ್ಯರಲ್ಲಿಯೂ ಔದಾಸೀನ್ಯ. ಶ್ರೀ. ಅರವಿಂದ ಜೋಶಿಯವರು ಶಿಕ್ಷಕ ವೃತ್ತಿಯಲ್ಲಿ ಇದ್ದರಾದರೂ, ಅದಕ್ಕಿಂತ ಕರ್ನಾಟಕ-ಕಾಂಗ್ರೆಸ್ಸುಗಳ ರಾಜಕೀಯ ಚಟುವಟಿಕೆಗಳನ್ನೇ ಅವರು ಹೆಚ್ಚು ಪ್ರೀತಿಸುತ್ತಿದ್ದರು.

ಬೆಳಗಾಂವಿ ನಗರದ ಮೇಲೆ ಅಲ್ಲಿಯ ಮಹಾರಾಷ್ಟ್ರೀಯರು ಸ್ಥಾಪಿಸಿದ ಪ್ರಭಾವವನ್ನು ಕಿತ್ತೊಗೆದು, ಅಲ್ಲಿ ಕನ್ನಡ ಭಾಷೆ-ಸಂಸ್ಕೃತಿಗಳಿಗೆ ತಕ್ಕ ಸ್ಥಾನವನ್ನು ದೊರೆಕಿಸಿಕೊಡುವುದೆಂದರೆ ಸುಲಭವಾದ

ಮಾತಾಗಿರಲಿಲ್ಲ. ಅಂತಹ ವಿರೋಧಕ ಪರಿಸ್ಥಿತಿಯಲ್ಲಿಯೆ ಅರವಿಂದ ಜೋಶಿಯವರು ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ಕನ್ನಡದ ಸ್ವಾನಭಿಮಾನಭಿವೃತ್ತಿಗಾಗಿ ಈ ತರುಣ ಹಿರಿ-ಹಿರಿಯ ಧುರೀಣರೊಂದಿಗೂ ಜಗಳ ಹೂಡಿ, ಅವರ ಕೋಪ-ತಾಪಗಳಿಗೆ ಗುರಿಯಾದರು. ಆದರೂ ಇವರು ತಮ್ಮ ನಿಷ್ಠೆಯನ್ನು ಬಿಡಲಿಲ್ಲ. ಇವರ ಕಾರ್ಯದ ಪರಿಣಾಮವಾಗಿ ಬೆಳಗಾಂವಿಯ ಕೆಲವು ರಾಜಕೀಯ ಧುರೀಣರೇ ಇವರತ್ತ ತಿರುಗಿದರು. ಬೆಳಗಾಂವಿಯ ಮರಾಠಿಗರಿಗೆ ಅರವಿಂದ ಜೋಶಿಯವರು ಕನಸಿನಲ್ಲಿಯೂ ಕಾಣತೊಡಗಿದರು. ಆದುದರಿಂದಲೇ ಕೆಲವೊಂದು ಸಂದರ್ಭಗಳಲ್ಲಿ ಶ್ರೀ. ಜೋಶಿಯವರು ಮರಾಠಿಗರಿಂದ ಏಟುಗಳನ್ನೂ ತಿನ್ನಬೇಕಾಯಿತು.

ಕೇಂದ್ರ ಸರಕಾರದವರು ರಾಜ್ಯ ಪುನರ್ಘಟನೆಯ ಆಯೋಗ ನಿಯಮಿಸಿದ ತರುವಾಯ, ಆಯೋಗದವರು ಬೆಳಗಾಂವಿಗೆ ಬಂದಾಗ, ಬೆಳಗಾಂವಿ ನಗರ ಮತ್ತು ಜಿಲ್ಹೆ ಕರ್ನಾಟಕಕ್ಕೇ ಸೇರಬೇಕಾದುವುಗಳೆಂದು ಅವರೆದುರು ಸಪ್ರಮಾಣವಾಗಿ ಸಿದ್ಧಮಾಡುವ ಕಾರ್ಯದಲ್ಲಿ ಶ್ರೀ. ಅರವಿಂದ ಜೋಶಿಯವರು ತಮ್ಮ ಜೊತೆಯ ಕಾರ್ಯಕರ್ತರೊಂದಿಗೆ ತುಂಬ ಪರಿಶ್ರಮ ವಹಿಸಿದರು. ಅವರೆಲ್ಲರ ಪರಿಶ್ರಮವು ಕರ್ನಾಟಕಕ್ಕೆ ಯಶಸ್ಸನ್ನು ದೊರಕಿಸಿಕೊಟ್ಟಿತು.

ಶ್ರೀ. ಅರವಿಂದ ಜೋಶಿಯವರು ನಿಷ್ಕ್ರಿಯ ವೃತ್ತಿಯ ಮಾತುಗಾರರಲ್ಲ. ರಾಜಕಾರ್ಯದ ಸೂಕ್ಷ್ಮ ನೆಲೆಯನ್ನರಿತ ಕಾರ್ಯಕರ್ತರು. ಇವರ ಅಭ್ಯಾಸ-ಅನುಭವಗಳು ಆಳವಾದುವು. ಇವರ ಕಾರ್ಯದರ್ಶಿತ್ವ ಮಾನ್ಯ ಶ್ರೀ. ದಾತಾರ ಅವರಿಗೆ ಸಹಾಯಕಾರಿಯಾಗದಿರದು. ಶ್ರೀ. ಅರವಿಂದ ಜೋಶಿಯವರ ಜೀವನವು ಸ್ವತಂತ್ರ ಕರ್ನಾಟಕದಲ್ಲಿಯೂ ಸ್ವತಂತ್ರ ಭಾರತದಲ್ಲಿಯೂ ಉನ್ನತೋನ್ನತ ಸಂಘದಿಂದ ಸಾಗಲಿ.

## ಆಕಾಶವಾಣಿ ಕೇಂದ್ರಗಳಲ್ಲಿ ಕಾರ್ಯಕ್ರಮ ನಿರ್ಮಾತೃಗಳು

ಭಾರತದ ಆಕಾಶವಾಣಿಯ ಹೊಸ ವರ್ಷದ ವ್ಯವಸ್ಥೆಯಲ್ಲಿ ಹೊಸದೊಂದು ಏರ್ಪಾಡಾದುದು ಸಮಾಧಾನದ ಸಂಗತಿಯಾಗಿದೆ. ಪ್ರತಿಯೊಂದು ಕೇಂದ್ರದಲ್ಲಿಯೂ ಸಂಗೀತ ಸಾಹಿತ್ಯ ವಿಭಾಗಗಳಿಗಾಗಿ ಬೇರೆ ಬೇರೆ ಕಾರ್ಯಕ್ರಮ ನಿರ್ಮಾತೃಗಳನ್ನು ನಿಯಮಿಸಿದ್ದಾರೆ. ಆಕಾಶವಾಣಿ ಕೇಂದ್ರಗಳಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮವು ಅಧಿಕೃತವೂ ಲೋಕಪ್ರಿಯವೂ ಆಗಬೇಕೆಂಬುದು ಸರಕಾರದ ಅಪೇಕ್ಷೆಯಾಗಿದೆ. ಆದರೆ ಇದುವರೆಗಿನ ವ್ಯವಸ್ಥೆಯಲ್ಲಿ ಕಾರ್ಯಕ್ರಮಗಳ ಪರಿಶುದ್ಧತೆ, ಲೋಕಪ್ರಿಯತೆಯ ವಿಷಯಕವಾದ ಸರಕಾರದ ಅಪೇಕ್ಷೆ ಸಂಪೂರ್ಣವಾಗಿ ನೆರವೇರುತ್ತಿರಲೇ ಇಲ್ಲವೆಂದು ಹೇಳಬಹುದು.

ಭಾರತದಲ್ಲಿ ಬೇರೆ ಬೇರೆ ಪ್ರಾದೇಶಿಕ ಭಾಷೆಗಳಿಗಾಗಿ ಬೇರೆ ಬೇರೆ ಕೇಂದ್ರಗಳಿರುವುವು. ಕೇಂದ್ರಾಧಿಕಾರಿಗಳಾಗಿ ಇರುವವರಿಗೆ ಪ್ರತಿಯೊಂದು ಪ್ರಾದೇಶಿಕ ಭಾಷೆಯ ಪರಿಚಯವಿರುವುದು ಸಾಧ್ಯವಿರುವುದಿಲ್ಲ. ಕೇಂದ್ರಾಧಿಕಾರಿಗಳು ಆಡಳಿತದ ವಿಚಾರದಲ್ಲಿ ಎಷ್ಟೇ ಸಮರ್ಥರಾಗಿದ್ದರೇನು? ಕಾರ್ಯಕ್ರಮಗಳ ಭಾಷೆಯೆ ಅರ್ಥವಾಗದುದರಿಂದ, ಅವರಿಗೆ ತಮ್ಮ ಕೇಂದ್ರಗಳಲ್ಲಿಯೆ ನಡೆಯುವ ಕಾರ್ಯಕ್ರಮಗಳ ಮೇಲು-ಕೀಳುಗಳು ತಮಗೇ ಅರ್ಥವಾಗುತ್ತಿರಲಿಲ್ಲ. ಕೇಂದ್ರಾಧಿಕಾರಿಗಳಂತೆಯೆ ಕಾರ್ಯಕ್ರಮಾಧಿಕಾರಿಗಳ ಹಾಡು. ಅವರಲ್ಲಿಯೂ ಪ್ರಾದೇಶಿಕ ಭಾಷೆಗಳ ಪರಿಚಯವಿಲ್ಲದವರೇ ಬಹಳ ಜನರು. ಕಾರ್ಯಕ್ರಮ ಸಾಹಾಯ್ಯಕರ ಸಾಮರ್ಥ್ಯ ಪ್ರಾಮಾಣಿಕತನಗಳನ್ನು ಅವಲಂಬಿಸಿಯೇ ಇದುವರೆಗೆ ಆಕಾಶವಾಣಿ ಕಾರ್ಯಕ್ರಮಗಳು ನಡೆಯುತ್ತಿದ್ದುವು. ಅವರು ಅಸಮರ್ಥರಿದ್ದಲ್ಲಿ—ಅಪ್ರಾಮಾಣಿಕರಿದ್ದಲ್ಲಿ—ನಡೆಯುತ್ತಿದ್ದ ಕಾರ್ಯಕ್ರಮಗಳು ಬೇಸರದ ಕಂತೆಗಳಾಗುತ್ತಿದ್ದವೆಂಬುದು ಅನೇಕ ಜನರಿಗೆ ಬಂದ ಅನುಭವ.

ಈಗ ಆ ಆ ಭಾಷೆ. ವಿಷಯಗಳಲ್ಲಿ ತಜ್ಞರಾಗಿ ಇರುವವರನ್ನೇ ಕಾರ್ಯಕ್ರಮ ನಿರ್ಮಾತೃಗಳನ್ನಾಗಿ ನಿಯಮಿಸಲಾಗುವುದೆಂದು ನಂಬಬಹುದಾಗಿದೆ. ನಮ್ಮ ಧಾರವಾಡ ಕೇಂದ್ರದಲ್ಲಿ ಶ್ರೀಮಾನ್ ದ. ರಾ. ಬೇಂದ್ರೆಯವರು ಮುಖ್ಯ ಕಾರ್ಯಕ್ರಮ ನಿರ್ಮಾತೃಗಳಾಗಿಯೂ ಡಾ. ಎಚ್. ಕೆ. ರಂಗನಾಥ ಎಂ. ಎ., ಪಿಎಚ್. ಡಿ ಅವರು ಸಾಹಾಯ್ಯಕ ನಿರ್ಮಾತೃಗಳಾಗಿಯೂ ನೇಮಕ ಹೊಂದಿದ್ದಾರೆಂಬ ಸಂತೋಷದ ವರ್ತಮಾನವು ಬಂದಿದೆ. ಇಬ್ಬರ ಸಾಮರ್ಥ್ಯ, ಪ್ರಾಮಾಣಿಕತೆಗಳ ಬಗೆಗೆ ಯಾರೂ ಸಂದೇಹ ತಳೆಯಲಾರರು. ಅವರ ಕಾರ್ಯಕುಶಲತೆಯಿಂದ ಧಾರವಾಡ ಕೇಂದ್ರದಿಂದ ಬಿತ್ತರಗೊಳ್ಳುವ ಕಾರ್ಯಕ್ರಮಗಳೆಲ್ಲ ಸರ್ವತೋಮುಖವಾದ ಜನಪ್ರೀತಿಗೆ ಪಾತ್ರವಾಗುವುವೆಂದು ನಾವು ನಿರೀಕ್ಷಿಸುತ್ತೇವೆ.

## ಪಾಕಿಸ್ತಾನದ ಪ್ರತಿಗಾಮಿವೃತ್ತಿ

ಪಾಕಿಸ್ತಾನದ ನಿರ್ಮಿತಿಯೆಂದರೆ ಭಾರತದ ವಿಷಯದಲ್ಲಿ ಭಸ್ಮಾಸುರನ ನಿರ್ಮಿತಿಯಾದಂತಿದೆ. ಭಾರತೀಯರ ಶೀಘ್ರ ಸ್ವಾತಂತ್ರ್ಯ ಸಂಪಾದನಾಪ್ರೀತಿ, ಆ ಅಸುರನ ಅವತಾರಕ್ಕೆ ಕಾರಣವಾದಂತಾಯಿತು. ನಿರ್ಮಾಣಗೊಂಡು ನಿಂತಾಗಿನಿಂದಲೂ ಪಾಕಿಸ್ತಾನ ಭಾರತದ ಮನಸ್ಸು-ಹೃದಯಗಳನ್ನು—ತನ್ನ ಅವಿವೇಕದ ಕಾರ್ಯಗಳಿಂದ ಕೆರಳಿಸುತ್ತಲಿದೆ, ಎಂತಹ ಸಂಯಮಿಯ ಮನಸ್ಸೂ ಪಾಕಿಸ್ತಾನಗಳ ದುಡುಕಿಗಾಗಿ ಸಂತಾಪಗೊಳ್ಳುವಂತಿದೆ.

ಕಳ್ಳನಿಂದ ಹುಲಿಯನ್ನು ಹೊಡೆಯಿಸಬೇಕೆನ್ನುವ ಪಶ್ಚಿಮ ರಾಷ್ಟ್ರಗಳ ಕುಟಿಲ ರಾಜಕಾರಣ, ಪಾಕಿಸ್ತಾನಿಗಳ ದುಡುಕನ್ನು ಪರ್ಯಾಯದಿಂದ ಪ್ರಚೋದನೆಗೊಳಿಸುತ್ತಲಿದೆ. ಮೂರ್ಖತನ-ದೌಷ್ಟ್ಯಗಳು ಒಂದೆ ಎಡೆಯಲ್ಲಿ ಸೇರಿದರೆ, ಅದಕ್ಕೆ ತನ್ನ ಹಿತದ ಪರವೆಯೂ ಇರುವುದಿಲ್ಲ; ಅನ್ಯರ ಹಿತದ ಪರವೆಯೂ ಇರುವುದಿಲ್ಲ.

ಪಾಕಿಸ್ತಾನಿಗಳಿಗೆ ಸ್ವಾತಂತ್ರ್ಯ, ರಾಜ್ಯದ ಆಡಳಿತ ಇವು ಆಟದ ಬೊಂಬೆಯನ್ನು ಸುಲಭವಾಗಿವೆ. ಏಕೆಂದರೆ ಭಾರತೀಯರಂತೆ

# ರಾಜವಂಚಕ

(ಐತಿಹಾಸಿಕ ತರಂಗರೂಪಕ)

**ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ**

卐

## ಪಾತ್ರಗಳು

**ಕೃಷ್ಣದೇವರಾಜ** (ವಿಜಯನಗರದ ದೊರೆ)
**ನಾಗನಾಯಕ** (ವಿಜಯನಗರದ ಒಬ್ಬ ಸೇನಾಪತಿ)
**ಚಿನ್ನಾದೇವಿ** (ಕೃಷ್ಣದೇವರಾಯನ ಕಿರಿಯರಾಣಿ)
**ಅಪ್ಪಾಜಿ** (ವಿಜಯನಗರದ ಮಂತ್ರಿ)
**ವಿರೂಪಾಕ್ಷ** (ನಾಗನಾಯಕನ ಮಗ)
**ಉಮಾ** (ವಿರೂಪಾಕ್ಷನ ಹೆಂಡತಿ)

ಅಲ್ಲದೆ ಸೇವಕ-ಸೇವಕಿಯರು, ನರ್ತಕಿಯರು, ಸಂಗೀತಗಾರ.

[ ವಿಜಯನಗರಾಧೀಶನಾದ ಕೃಷ್ಣದೇವರಾಯನು ತನ್ನ 'ಮಲಯ ಊಟ' ಅರಮನೆಯಲ್ಲಿ, ಒಬ್ಬನೇ ಕುಳಿತು 'ಜಾಂಬವತೀ ಕಲ್ಯಾಣ' ಎಂಬ ಒಂದು ಸಂಸ್ಕೃತ ನಾಟಕದ ರಚನೆಯಲ್ಲಿ ತೊಡಗಿದ್ದಾನೆ. ಅದರಲ್ಲಿಯ ಒಂದು ಪದ್ಯ ಆಗತಾನೇ ಬರೆದು ಸಿದ್ಧವಾಗಿದೆ. ಒಂದೊಂದು ನುಡಿಯನ್ನು ತನ್ನ ಷ್ಟಕ್ಕೇ, ಗಟ್ಟಿಯಾಗಿ ಎರಡೆರಡು ಸಲ ಹಾಡಿಕೊಳ್ಳುತ್ತಿದ್ದಾನೆ ]

**ಕೃಷ್ಣ**— ಮಮ ಮನ ಇವ ಪದ್ಮಂ ಮ್ಲಾನಮಭ್ಯೇತಿ ಕಾಂತಾ।
ವಿರಹಮಹವಿಷಾದಾಯಂ ಯಾತಿಷಾ ಚಕ್ರವಾಕಃ ॥
ರವಿರಪರಪಯೋಧೇರಂತರೇ ರೂಢರಾಗಃ ।
ಪತತಿ ಮಹತಿಮೋಹೇ ಮಾಮಕೇನೊ ಯಥಾತ್ಮಾ॥

ಸರಿಯಾಗಿದೆ. ಇದರಲ್ಲಿ ಇನ್ನಾವ ವ್ಯತ್ಯಾಸ ಮಾಡುವುದೂ ಬೇಡ. ಶಬ್ದಯೋಜನೆ ಅರ್ಥಕ್ಕೂ ಭಾವಕ್ಕೂ ಸಮರ್ಪಕವಾಗಿದೆ.

**ಚಿನ್ನಾದೇವಿ**— ನಾಥಾ!

**ಕೃಷ್ಣ**— ಓ! ಚಿನ್ನಾ, ಬಾ ನನ್ನ ಮುದ್ದಿನ ಕಣಿ!

**ಚಿನ್ನಾ**— ನಾನು ಬರುವುದರಿಂದ, ತಮ್ಮ ಲೇಖನಕ್ಕೆ ತಡೆಯಾಯಿತೆ?

**ಕೃಷ್ಣ**— ಹಾಗೆ ತಿಳಿದರೆ ಆಯಿತು! ಆದರೆ ನೀನು ನನ್ನ ಕಾವ್ಯಕ್ಕೆ ಸ್ಫೂರ್ತಿದೇವತೆ! ನಾನು ಬರೆಯುತ್ತಿರುವ ಈ ನವೀನ ನಾಟಕದಲ್ಲಿ ನಮ್ಮಿಬ್ಬರ ಜೀವನಾನುಭವದ ಅನೇಕ ಮಾತುಗಳಿವೆ. ಅದಿರಲಿ. ನಾನು ಲೇಖನದಲ್ಲಿ ತೊಡಗಿದಾಗ ನೀನು ಎಂದೂ ಹೀಗೆ ಬಂದವಳಲ್ಲ. ಇಂದು ಏನೋ ಅಂತಹದೊಂದು ವಿಶೇಷ ಕಾರಣವಿರಬೇಕು. ಯಾರ ವಿಷಯದಲ್ಲಿಯೊ ಖತಿಗೊಂಡು ಬಂದಿರುವೆಯಾಗಿ ನಿನ್ನ ಮುಖಭಾವ ಸೂಚಿಸುತ್ತಿದೆ. ಅಹುದೆ?

**ಚಿನ್ನಾ**— ಪರಕಾಯಪ್ರವೇಶದ ವಿದ್ಯೆಯನ್ನು ಕವಿಗಳು ಬಲ್ಲರು—ಎಂದು ನೀವೇ ಒಮ್ಮೆ ಹೇಳಿದ್ದಿರಲ್ಲ ನೀವು ಕವಿ! ಅಷ್ಟೇ ಅಲ್ಲ, ನನ್ನ ಪತಿದೇವ. ನನ್ನ ಮನಸ್ಸು ನಿಮಗೆ ಕೈಗನ್ನಡಿ; ಆದರೆ ಅದೀಗ ಒಡೆದು ಛಿದ್ರವಾಗಿದೆ. ಅಂತೆಯೆ ನಿಮ್ಮ ಬಳಿಗೆ ಧಾವಿಸಿಬಂದೆ.

**ಕೃಷ್ಣ**— ಬೇಗನೆ ಹೇಳು ನನ್ನ ಚಿನ್ನಾ, ರಾಜ್ಯದಾಡಳಿತದಷ್ಟೆ ನನಗೆ ಅದೂ ಮಹತ್ತ್ವದು. ಅಂತಃಪುರದ ಅಗ್ನಿಜ್ವಾಲೆಗಳು ರಾಜ್ಯಗಳನ್ನೇ ರಸಾತಳಕ್ಕಿಳಿಸಿವೆಯೆಂಬುದನ್ನು ನೀನು ಕೇಳಿಲ್ಲವೆ? ತಿರುಮಲಾದೇವಿ ಪಟ್ಟಮಹಿಷಿಯಾದರೂ, ನೀನೇ ನನಗೆ ಅಚ್ಚುಮೆಚ್ಚಿನವಳು. ಅಂತೆಯೆ ಮಹಾಮಂತ್ರಿ ಅಪ್ಪಾಜಿಯವರ ವಿರೋಧವನ್ನೂ ಲೆಕ್ಕಿಸದೆ, ನಿನ್ನನ್ನು ವಾಟಿಕೆಯಿಂದೆತ್ತಿ ನನ್ನ ವಾಮಭಾಗದಲ್ಲಿರಿಸಿದೆ. ಹೇಳು, ಬೇಗನೆ ಹೇಳು. ನಿನ್ನ ಇಳಿಮೊಗವನ್ನು ನೋಡಿ ನಾನು ಸಹಿಸಲಾರೆ. ನಿನ್ನ ದುಗುಡಕ್ಕೆ ಅದೇನು ಕಾರಣ?

**ಚಿನ್ನಾ**— 'ಜಕ್ಕಿ' ಎಂದು ನನ್ನ ನಂಬಿಗೆಯ ದಾಸಿಯೊಬ್ಬಳಿದ್ದಿಲ್ಲವೆ?

**ಕೃಷ್ಣ**— ಓ ಅವಳು! ನಿನ್ನ ಜೊತೆಗೇ ಅರಮನೆಗೆ ಬಂದವಳು!

**ಚಿನ್ನಾ**— ಅವಳನ್ನು ನಿಮ್ಮ ಪಟ್ಟಮಹಿಷಿ ಎಂಬವಳು, ತನ್ನ ಸೇವೆಗೆ ಇರಿಸಿಕೊಂಡಿದ್ದಾಳೆ.

**ಕೃಷ್ಣ**— ಯಾರು ತಿರುಮಲಾದೇವಿಯೆ? ಆದರೆ ಇವಳೇಕೆ ಹೋದಳು? ಯಾವುದೋ ಆಶೆಗೆ ಮರುಳಾಗಿರಬೇಕು.

**ಚಿನ್ನಾ**— ಇದ್ದರೂ ಇದ್ದೀತು. ನಿಮ್ಮ ಪಟ್ಟಮಹಿಷಿಯೆನಿಸಿಕೊಳ್ಳುವವಳು ಹೀಗೆ ಮಾಡುವುದು ಸರಿಯೆ? ನಾನು ಈ ಅರಮನೆಯಲ್ಲಿ ಕಾಲಿಟ್ಟಂದಿನಿಂದಲೂ, ಆ ದೇವಿ ನನ್ನೊಡನೆ ಮತ್ಸರಭಾವದಿಂದಲೇ ನಡೆದುಕೊಳ್ಳುತ್ತಾಳೆ. ಜಕ್ಕಿ ನನ್ನ ತೊತ್ತು; ಅವಳನ್ನು ತಾನೇಕೆ ಸೇವೆಗೆ ಇರಿಸಿಕೊಳ್ಳಬೇಕು? ಇದು ಅವಳ ದುಷ್ಟಬುದ್ಧಿಯಲ್ಲವೆ?

**ಕೃಷ್ಣ**— ಅವಳ ದುಷ್ಟಬುದ್ಧಿ ಎನ್ನುವುದಕ್ಕಿಂತ, ನಿನ್ನ ತೊತ್ತಿನ ದುಷ್ಟಬುದ್ಧಿಯೆನ್ನಬಾರದೆ? ಇವಳನ್ನೇ ಮೊದಲು ಶಿಕ್ಷಿಸಬೇಕು.

ಚಿನ್ನಾ— ಅದೇನನ್ನಾದರೂ ಮಾಡಿರಿ; ನನ್ನ ಹಕ್ಕಿಯನ್ನು ನನಗೆ ತಂದುಕೊಡಿರಿ! ಅವಳು ಹೋದಾಗಿನಿಂದ ನನ್ನ ಜೀವಕ್ಕೆ ಚಡಪಡಿಕೆ ಉಂಟಾಗಿದೆ.

ಕೃಷ್ಣ— ಅವಳಿಗಾಗಿ ಇಷ್ಟೊಂದು ಮೋಹವೇಕೆ? ಒಬ್ಬ ತೊತ್ತು ಹೋದರೆ ಇನ್ನೊಬ್ಬಳು!

ಚಿನ್ನಾ— ನನ್ನನ್ನು ಚಿಕ್ಕಂದಿನಿಂದಲೂ ಲಾಲಿಸಿ ಬೆಳೆಸಿದವಳು; ನೆರಳಿನಂತಿದ್ದು ನನ್ನನ್ನು ಕಾಯ್ದವಳು!

ಕೃಷ್ಣ— ಈಗ ನಿನ್ನನ್ನು ಕಾಯಲು ನನ್ನಂತಹ ಸಾರ್ವಭೌಮನಾದ ಪತಿಯೇ ಇರುವಾಗ....

ಚಿನ್ನಾ— ನನ್ನ ಸಂರಕ್ಷಣೆಗಾಗಿ ನಾನೆಲ್ಲಿ ಚಿಂತಿಸುತ್ತಿದ್ದೇನೆ? ಅವಳು ವಂಚಿಸಿ ಹೋದಳಲ್ಲಾ—ಎಂದು ಸಂತಾಪ.

ಕೃಷ್ಣ— ದುರಾಶೆಗೆ ಒಳಗಾದರೆ ಎಂತಹ ನಂಬುಗೆಯ ಸೇವಕರೂ ವಂಚಕರಾಗುವುದುಂಟು.

( ಸೇವಕನು ಒಳಗೆ ಬರುವನು ).

ಸೇವಕ— ಅಮ್ಮಾಜಿಯವರೆ, ತಿಮ್ಮರಸುಮಂತ್ರಿಗಳು ಪ್ರಭುಗಳನ್ನು ಕಾಣಲು ಬಂದಿದ್ದಾರೆ.

ಚಿನ್ನಾ— ನಾಥಾ, ಅಪ್ಪಾಜಿಯವರನ್ನು ಒಳಗೆ ಬರಮಾಡಲು ಹೇಳಲೆ?

ಕೃಷ್ಣ— ಬೇಡ ಚಿನ್ನಾ, ನಾನು ಕೇವಲ ವಿಶ್ರಾಂತಿಗಾಗಿಯೇ ಇಲ್ಲಿರುವುದನ್ನು ಅರಿತಿದ್ದರೂ—ಅಪ್ಪಾಜಿಯವರು ಬರಬೇಕಾದರೆ, ಏನೋ ಅಂಥ ಮಹತ್ತ್ವದ ರಾಜಕಾರ್ಯವಿರಬೇಕು. ನಾನೇ ಅವರನ್ನು ರಂಗಸಜ್ಜೆಯಲ್ಲಿ ಕಾಣುತ್ತೇನೆ.

ಚಿನ್ನಾ— ಯಾವಾಗಲೂ ನಿಮ್ಮ ರಾಜಕಾರ್ಯ ಇದ್ದದ್ದೆ! ಅದಕ್ಕೆ ಹೊತ್ತಿಲ್ಲ, ವೇಳೆ ಇಲ್ಲ!

ಕೃ— ಮುನಿಸುಗೊಳ್ಳಬೇಡ, ನಿನ್ನ ಹಕ್ಕಿಯನ್ನು ತರಿಸಿಕೊಡುತ್ತೇನೆ.

× × × ×

( ಅರಮನೆಯ ರಂಗಸಜ್ಜೆಯಲ್ಲಿ ಕೃಷ್ಣದೇವರಾಯ ಮ, ಮಂತ್ರಿ ಅಪ್ಪಾಜಿ ಮಾತನಾಡುತ್ತಲಿದ್ದಾರೆ ).

ಅ— ಮಹಾರಾಜ, ನಿಮ್ಮ ಮನಶ್ಶಾಂತಿಯನ್ನು ಕೆದಕುವ ಒಂದು ವಾರ್ತೆ ಬಂದಿದೆ ಅದಕ್ಕೆ ಕೂಡಲೆ ಉಪಾಯ ಕೈಕೊಳ್ಳುವುದು ಅಗತ್ಯ—ಎಂದು ಸೂಚಿಸಲು ಬಂದೆ.

ಕೃ— ಅದೇನು, ಅಂಥ ದುರ್ವಾರ್ತೆ ಅಪ್ಪಾಜಿಯವರೆ?

ಅ— ಯುವರಾಜ ಸುಂದರಪಾಂಡ್ಯನು ತನ್ನ ತಂದೆಯನ್ನು ಸೆರೆಯಿಂದ ಬಿಡಿಸಲು ನಮ್ಮ ನೆರವನ್ನು ಕೇಳಲು ಬಂದಿದ್ದಾನೆ.

ಕೃ— ಯಾರು? ಮದುರೆಯ ಅರಸನಾದ ಚಂದ್ರಶೇಖರನ ಮಗನೆ? ಎಲ, ಇದೇನಾಶ್ಚರ್ಯ! ನಾವು ನಾಗನಾಯಕನನ್ನು ಸೈನ್ಯಸಮೇತವಾಗಿ ಅವರ ಸಹಾಯಕ್ಕೆಂದು ಕಳುಹಿಸಿರಲಿಲ್ಲವೆ?

ಅ— ಅಹುದು. ಚಂದ್ರಶೇಖರನ ಸಹಾಯಕ್ಕಾಗಿ ಹೋದ ನಾಗನಾಯಕ, ಈಗ ಚಂದ್ರಶೇಖರನನ್ನೇ ಕಾರಾಗೃಹದಲ್ಲಿರಿಸಿ, ತಾನು ಮದುರೆಯ ಅರಸನಾಗಿದ್ದಾನಂತೆ!

ಕೃ— ಅಪ್ಪಾಜಿಯವರೆ, ಇದೇನು? ಕೇಳಿದಂತೆಲ್ಲ ಒಂದೊಂದು ಸೋಜಿಗದ ಸಂಗತಿಗಳೇ ಇವೆ. ಎಲ್ಲ ವೃತ್ತಾಂತವನ್ನೂ ನನಗೆ ವಿಶದವಾಗಿ ಹೇಳಿರಿ.

ಅ— ನಮ್ಮ ಆಜ್ಞೆಯಂತೆ ಇಲ್ಲಿಂದ ಹೋದ ನಾಗನಾಯಕ, ಚೋಳರಾಜನನ್ನು ಯುದ್ಧದಲ್ಲಿ ಸೋಲಿಸಿ, ಅವನನ್ನು ಮದುರೆಯಿಂದ ತಳ್ಳಿ ಹಾಕಿದ.

ಕೃ— ಅಷ್ಟು ನಾಗನಾಯಕ ಮಾಡಲೇಬೇಕಿತ್ತು. ಅದು ಸರಿಯಾಯ್ತು, ಮುಂದೆ?

ಅ— ಚಂದ್ರಶೇಖರಪಾಂಡ್ಯನಿಗೆ ತನ್ನ ಮದುರೆಯ ರಾಜ್ಯ ತನಗೆ ದೊರಕುವಂತಾಯಿತಲ್ಲ—ಎಂದು ಸಂತೋಷವಾಯಿತು. ವಿಜಯಶ್ರೀಯೊಡನೆ ಪುರಪ್ರವೇಶದ ಸಿದ್ಧತೆ ನಡೆಯಿತು. ಆದರೆ ಅಷ್ಟರಲ್ಲಿ ನಾಗನಾಯಕನ ವೃತ್ತಿ ಪಲ್ಲಟಿಸಿತು. ಅವನ ಮನಸ್ಸಿನಲ್ಲಿ ರಾಜ್ಯದಾಶೆಯ ಭೂತ ಸಂಚರಿಸಿತು ಕೇವಲ ತನ್ನ ಪರಾಕ್ರಮದಿಂದಲೇ ಮದುರೆ ತನ್ನ ಕೈವಶವಾದಾಗ, ಅದನ್ನು ಚಂದ್ರಶೇಖರನಿಗೆ ಪುನಃ ಕೊಡುವುದೇತಕ್ಕೆ?—ಎಂದು, ಆ ದುಷ್ಟ ಯೋಚಿಸಿದ. ಸರಿ, ಚಂದ್ರಶೇಖರನನ್ನು ಪಟ್ಟದ ಮೇಲೆ ಕುಳ್ಳಿರಿಸುವುದರ ಬದಲಾಗಿ ಅವನನ್ನು ಕಾರಾಗೃಹದಲ್ಲಿರಿಸಿ, ತಾನೇ ರಾಜನೆಂದು ಸಾರಿದ ಆ ಘಾತಕ!

ಕೃ— ಅಪ್ಪಾಜಿಯವರೆ, ನನಗೆ ಈ ಮಾತಿನಲ್ಲಿ ಇನ್ನೂ ನಂಬಿಕೆಯಾಗಲೊಲ್ಲದು! ನಾಗನಾಯಕನೆಂದರೆ ನಮ್ಮ ರಾಜ್ಯದ ಮುಖ್ಯ ಆಧಾರಸ್ತಂಭ! ಅವನಂಥ ಕಡುಗಲಿ, ಪರಾಕ್ರಮಶಾಲಿಯಾದ ದಳಪತಿಯು—ಅಷ್ಟೇ ಅಲ್ಲ, ನನ್ನ ಸಂಪೂರ್ಣ ವಿಶ್ವಾಸಕ್ಕೆ ಪಾತ್ರನಾದವನು—ಬೇರೊಬ್ಬನಿಲ್ಲವೆಂದೇ ಹೇಳಬೇಕು. ಇಂಥವನೂ ಹೀಗೆ ಮಾಡಿದನೆ?

ಅ— ರಾಜ್ಯದಾಶೆ, ಅಧಿಕಾರದಾಶೆ ಸಜ್ಜನರೆನ್ನುವವರ ಮನಸ್ಸನ್ನೂ ಕೆಡಿಸುತ್ತವೆ. ಲೋಭವೆಂಬುದೇ ಹೀಗಿದೆ—

ಕೃ ಈಗ ಮುಂದೇನುಪಾಯ ಅಪ್ಪಾಜಿಯವರೆ?

ಅ— ನಾಗನಾಯಕನು ಚಂದ್ರಶೇಖರನನ್ನು ಬಂಧಿಸಿ ಇಟ್ಟಂತೆ ಅವನ ಮಗ ಸುಂದರನನ್ನೂ ಬಂಧಿಸಿಟ್ಟಿದ್ದರೆ, ನಮಗೆ ಈ ಸಂಗತಿ ತಿಳಿಯಲು ಬಹಳ ಕಾಲ ಹಿಡಿಯಬಹುದಾಗಿತ್ತು. ಈಗ ಸುಂದರನು ಹೇಗೋ ತಪ್ಪಿಸಿಕೊಂಡು, ತಮ್ಮನ್ನು ಉಳಿಸಿರಿ ಎಂದು ಕೇಳಲು ಬಂದಿದ್ದಾನೆ.

ಕೃ— ಅಪ್ಪಾಜಿ, ರಾಜ್ಯದ ಸೇವಕರಾಗಿ ನಿಯಮಿತರಾದವರು, [illegible] ತಾವೇ ರಾಜರಾಗುವ ಹೊಂಚುಹಾಕಿದರೆ ಗತಿ ಏನು?

ಅ— ಗತಿಯೇನು? ರಾಜರಾದವರು, ಇದಕ್ಕೆ ಕೂಡಲೆ ತಡೆಹಾಕಬೇಕು.

ಕೃ— ಇದಕ್ಕೆ ನೀವೇ ಉಪಾಯವನ್ನು ಸೂಚಿಸಿರಿ.

ಅ— ನಾಗನಾಯಕನನ್ನು ಬಂಧಿಸಿ ತರಬೇಕು.

ಕೃ— ಅವನೇನು ಸಾಮಾನ್ಯನೆ, ಅಪ್ಪಾಜಿಯವರೆ? ಅವನನ್ನು ಬಂಧಿಸಿ ತರುವುದೆಂದರೆ, ಅವನೊಡನೆ ಘೋರಸಂಗ್ರಾಮವನ್ನೇ ಮಾಡಬೇಕಾದೀತು.

ಅ— ಅದಕ್ಕೆ ನಾವು ಸಿದ್ಧರಾಗಲೇಬೇಕು. ಬೇರೆ ಮಾರ್ಗವಿಲ್ಲ.

ಕೃ— ಅವನನ್ನು ಮೀರಿಸುವ ಬಂಟರಾದರೂ ಯಾರಿರುವರು, ನಮ್ಮ ರಾಜ್ಯದಲ್ಲಿ? ನಾವು, ಕೇಳಿದಷ್ಟು ಸೈನ್ಯಸನ್ನಾಹವನ್ನು ಸಹಾಯಕ್ಕೆ ಕೊಡಬಹುದು; ಆದರೆ ಈ ಸಾಹಸವನ್ನು ಕೈಕೊಳ್ಳುವ ವೀರಾಗ್ರಣಿ ನನ್ನ ದೃಷ್ಟಿಯಲ್ಲಂತೂ ಯಾರೂ ಕಾಣುವುದಿಲ್ಲ. ಅಂತಹ ಹೊತ್ತು ಬಂದರೆ ನಾನೇ—!

ಅ— ಕಾರಣವಿಲ್ಲ ಮಹಾರಾಜ! ಗುಬ್ಬಿಯನ್ನು ಹೊಡೆಯುವುದಕ್ಕೆ ಬ್ರಹ್ಮಾಸ್ತ್ರವೇಕೆ? ನಾಳೆ ಎಲ್ಲ ಮಂತ್ರಿ-ಮನ್ನೆಯರನ್ನೂ, ಸೇನಾನಾಯಕರನ್ನೂ, ರಾಜಪ್ರತಿನಿಧಿಗಳನ್ನೂ ಒಡ್ಡೋಲಗದಲ್ಲಿ ನೆರೆಯಿಸೋಣ; ನಮ್ಮ ಆಹ್ವಾನಕ್ಕೆ ಯಾರಾದರೂ ಸಿದ್ಧರಾಗುವರೇನೋ ನೋಡುವ.

ಕೃಷ್ಣ— ನಾಗನಾಯಕನ ಮಗ ವಿರೂಪಾಕ್ಷ ರಾಜಧಾನಿಯಲ್ಲಿಯೇ ಇರುವನಲ್ಲವೆ?

ಅ— ಹೌದು! ಅವನು ಚಿಕ್ಕವನಾದರೂ ಬಹಳ ಸುಶೀಲ; ಅದರಂತೆಯೆ ಅಷ್ಟೇ ಶೂರನೂ ಇದ್ದಾನೆ.

ಕೃ— ಅವನನ್ನೂ ನಾಳೆಯ ಓಲಗಕ್ಕೆ ಕರೆಯಿಸಿರಿ!

ಅ— ಅಪ್ಪಣೆ.

* * * *

(' ಭುವನವಿಜಯ 'ದಲ್ಲಿ ರಾಜಸಭೆ ನೆರೆದಿದೆ. ಮಂತ್ರಿ-ಮನ್ನೆಯರು, ದಳಪತಿಗಳು, ಮಾಂಡಲಿಕರು, ದಂಡನಾಯಕರು, ಶರಣಾಗತರಾಜರು, ರಾವುತರು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತಿದ್ದಾರೆ. ಬಿರುದವರು ಶ್ರೀಕೃಷ್ಣಭೂಪಾಲನ ಬಿರುದಾವಳಿಯನ್ನು ಸಾರುತ್ತಾರೆ! " ಜಯ ವಿಜಯೀ ಭವ ಕೃಷ್ಣದೇವರಾಯರಿಗೆ, ಜಯವಾಗಲಿ! ವಿಜಯನಗರಾಧೀಶನಿಗೆ ಜಯವಾಗಲಿ! ಕರ್ನಾಟಕ ರಾಜ್ಯರಮಾರಮಣನಿಗೆ ಜಯವಾಗಲಿ! " )

(ಕೃಷ್ಣದೇವರಾಯನು ಬಂದು ಆಸನದಲ್ಲಿ ಕುಳಿತುಕೊಳ್ಳುವನು)

ಕೃ— ಮಂತ್ರಿ-ಮನ್ನೆಯರೆ, ದಳಪತಿಗಳೆ, ವೀರರೆ! ಒಂದು ಉದ್ವೇಗಕಾರಕವಾದ ಸಂಗತಿ ಜರುಗಿದೆ. ಅತ್ಯಂತ ಶೂರನೂ ರಾಜನಿಷ್ಠನೂ ಎನಿಸಿಕೊಂಡ ನಾಗನಾಯಕ, ಕರ್ನಾಟಕ ಸಿಂಹಾಸನಕ್ಕೆ ವಂಚನೆ ಮಾಡಿದ್ದಾನೆ. ಇಂತಹ ಕೃತಘ್ನನನ್ನು ಬಂಧಿಸಿ, ನಮ್ಮೆದುರಿನಲ್ಲಿ ತರುವ ಸಾಹಸವನ್ನು ಯಾರಾದರೂ ಕೈಕೊಳ್ಳುವರೆ? ಅಂಥ ಪರಾಕ್ರಮಶಾಲಿಯು ಈ ಸಭೆಯಲ್ಲಿದ್ದರೆ ನನ್ನೆದುರು ಬನ್ನಿರಿ.

( ಅರೆ ನಿಮಿಷ ಸ್ತಬ್ಧತೆ )

ಯಾಕೆ? ಯಾರೂ ಮಾತನಾಡುವುದಿಲ್ಲವಲ್ಲ! ಅಂತಹ ಕೆಚ್ಚೆದೆಯ ವೀರ ನಮ್ಮ ರಾಜ್ಯದಲ್ಲಿ ಒಬ್ಬನೂ ಇಲ್ಲವೆ? ಒಂದು ತಿಂಗಳ ಅವಧಿ! ಇದು ಕಡಿಮೆ ಎನಿಸುತ್ತಿದ್ದರೆ ಎರಡು ತಿಂಗಳ ಅವಧಿ! ಆ ವಂಚಕನನ್ನು ಸೆರೆಹಿಡಿದು ತರಲೇಬೇಕು; ಅಥವಾ ಅವನನ್ನು ಅಲ್ಲಿಯೆ ಮುಗಿಸಿದರೂ ಒಳ್ಳೆಯದೆ! ನಮಗೆ ದುಃಖವೆನಿಸುವುದಿಲ್ಲ. ಇದರಿಂದ ಉಳಿದವರಾದರೂ ಪಾಠ ಕಲಿಯಲಿ!

(ಪುನಃ ಅರೆನಿಮಿಷ ಸ್ತಬ್ಧತೆ)

ಅಪ್ಪಾಜಿಯವರೆ, ಈ ಸಂದರ್ಭದಲ್ಲಿ ಯಾರೂ ಧೈರ್ಯ ತೋರುವಂತೆ ಕಾಣುವುದಿಲ್ಲ. ನಮ್ಮ ರಾಜ್ಯವು — ಇಂತಹ ಹೇಡಿಗಳ ಬೀಡಾಗಿರುವುದೆಂದು ನಾವು ಎಣಿಸಿರಲಿಲ್ಲ! ನಾಗನಾಯಕನನ್ನು ಬಂಧಿಸಿ ತರಲು ಯಾರೂ ಮುಂದೆ ಬಾರದಿದ್ದರೆ ನಾವೇ ಸಿದ್ಧರಾಗುತ್ತೇವೆ. ಅಪ್ಪಾಜಿಯವರೇ, ನಾಳೆಗೇ ನಾವು ಹೊರಡಲು ಸಿದ್ಧತೆ ಇಡಿರಿ! ನಮ್ಮನ್ನು ಹಿಂಬಾಲಿಸಲು ಸಕಲ ಸೇನಾಸನ್ನಾಹವು ಸಜ್ಜುಗೊಳ್ಳಲಿ.

ವಿರೂಪಾಕ್ಷ — ( ದೂರದಲ್ಲಿ ನಿಂತು ) ಬೇಡ ಮಹಾಪ್ರಭೊ, ಇಂತಹ ಕ್ಷುಲ್ಲಕ ಕಾರ್ಯಕ್ಕಾಗಿ ತಾವು ಕೈಹಾಕುವುದು ಬೇಡ! ನನಗೆ ಅಪ್ಪಣೆಯಾದರೆ ..........ನಾನು..........

ಕೃ— ಯಾರು ಹೀಗೆ ನುಡಿಯುವವರು; ಅಪ್ಪಾಜಿಯವರೆ?

ಅ— ನಾಗನಾಯಕನ ಮಗ ವಿರೂಪಾಕ್ಷ, ಮಹಾರಾಜರೆ!

ಕೃ - ಓಹೋ, ನೀನು ನಾಯಕನ ಮಗನೆ?

ವಿ— ಅಹುದು ಪ್ರಭೊ, ಹೀಗೆಂದು ಹೇಳುವುದಕ್ಕೆ ನಾಚಿಕೆಯಾಗುತ್ತದೆ.

ಕೃ— ಕಾರಣವಿಲ್ಲ. ನಿಮ್ಮ ತಂದೆ ಈ ನಮ್ಮ ರಾಜ್ಯಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದ್ದಾನೆ. ಆದರೆ, ಈ ಕಾಲಕ್ಕೆ ಅವನಿಗೆ ಇಂಥ ದುರ್ಬುದ್ಧಿ ಉಂಟಾದುದು ದೈವದ ವಿಚಿತ್ರಲೀಲೆ! ಈ ಸರಗತಿಯನ್ನು ಕೇಳಿ ನಮಗೂ ಹೇಳತೀರದಷ್ಟು ವ್ಯಸನವಾಗಿದೆ. ನೀನು ಅವನ ಮಗನು. ನಮ್ಮ ರಾಜ್ಯದಲ್ಲಿ ಮೇಲಿನ ಅಧಿಕಾರದಲ್ಲಿರುವೆ— ಎಂದು ಕೇಳಿದ್ದೇನೆ. ಸಂತೋಷ—ನಿನ್ನ ತಂದೆಯನ್ನು ನೀನೇ ಎದುರಿಸುವ ಧೈರ್ಯಮಾಡಬಲ್ಲೆಯಾ? ಈ ಸಾಹಸದ ಕಜ್ಜವನು ಕೈಕೊಂಡು ನೆರವೇರಿಸುವೆಯಾ?

ವಿ— ತಮ್ಮ ಕೃಪೆಯಿದ್ದರೆ ಸಹಜವಾಗಿ ಮಾಡಬಲ್ಲೆ. ಮಹಾಪ್ರಭುಗಳ ಅಪ್ಪಣೆಯಾದರೆ ನಾಳೆಗೇ ಹೊರಡುತ್ತೇನೆ.

ಕೃ— ಇನ್ನೊಂದು ಸಲ ಯೋಚನೆ ಮಾಡಿ ಹೇಳು. ಅವನು ನಿನ್ನ ತಂದೆ ಎಂಬುದನ್ನು ಸಂಪೂರ್ಣವಾಗಿ ಮರೆತೇ ಹೋಗಬೇಕಾದೀತು.

ವಿರೂಪಾಕ್ಷ - ಪವಿತ್ರ-ಸಂಪ್ರದಾಯದ ಧರ್ಮಸಿಂಹಾಸನಕ್ಕೆ ದ್ರೋಹ ಬಗೆದವನನ್ನು ನನ್ನ ತಂದೆಯೆಂದು ಭಾವಿಸಲೆ? ಮಹಾಪ್ರಭೋ, ತಮ್ಮ ಪಾದಸಾಕ್ಷಿಯಾಗಿ ಹೇಳುತ್ತೇನೆ—ನಾನು ಈ

ಸಿಂಹಾಸನದ ಏಕನಿಷ್ಠ ಸೇವಕ. ತಂದೆ-ಮಗನ ಬಾಂಧವ್ಯ ಇದರಲ್ಲಿ ಅಡ್ಡ ಬರಲಾರದು!

**ಕೃ—** ಸಂತೋಷ! ನಿನ್ನ ಜೊತೆಗೆ, ಕೆಚ್ಚೆದೆಯ—ನುರಿತ—ವೀರಭಟರನ್ನು ಕೊಡುತ್ತೇನೆ. ಅಪ್ಪಾಜಿಯವರೆ, ಇದರ ಯೋಜನೆಯಾಗಲಿ!

**ಅ—** ಪ್ರಭುಗಳ ಚಿತ್ತ!

× × × ×

( ವಿರೂಪಾಕ್ಷನ ಪ್ರಾಸಾದ. ವಿರೂಪಾಕ್ಷನು ರಾಜಾಜ್ಞೆಯನ್ನು ತನ್ನ ಹೆಂಡತಿ ಉಮೆಗೆ ಅರುಹುತ್ತಾನೆ ).

**ವಿ—** ಉಮಾ, ಒಂದು ಅತಿ ಮಹತ್ತ್ವದ ರಾಜಕಾರ್ಯ ನನ್ನ ಪಾಲಿಗೆ ಬಂದಿದೆ. ಅದು ಸ್ವಾಮಿಯ ಕೃಪೆಯಿಂದ ಕೈಗೂಡಿದರೆ ...

**ಉಮಾ—** ಬರುವ ಶ್ರೇಯಸ್ಸಿನಲ್ಲಿ ನನ್ನರ್ಧ ಪಾಲು ಇದ್ದೇ ಇದೆ.

**ವಿ—** ಅದು....ಆ ಕಾರ್ಯ ಕೈಗೂಡಿದ ಮೇಲೆ! ಮೊದಲು ಅದನ್ನು ನೆರವೇರಿಸುವುದರ ಸಂಪೂರ್ಣ ಹೊಣೆ ನನ್ನ ಮೇಲಿದೆ.

**ಉಮಾ—** ನನ್ನನ್ನೂ ಅದರಲ್ಲಿ ಸೇರಿಸಿಕೊಳ್ಳಿರಿ!

**ವಿ—** ನೀನಂತೂ ಬೇಕೇಬೇಕು. ಅದು ಒಪ್ಪಿಗೆ ಕೊಡುವ ಮಟ್ಟಿಗೆ! ನಾಳೆಯ ದಿನ ನಾನು ಮದುರೆಗೆ ಹೊರಡುತ್ತೇನೆ.

ಉಮಾ— ಮಾವನವರನ್ನು ಕಾಣುವುದಕ್ಕಾಗಿದ್ದರೆ ನಾನೂ ಬರುತ್ತೇನೆ.

**ವಿ—** ಅವರನ್ನು ಕಾಣುವುದಕ್ಕಾಗಿಯೆಂದೇ ಹೋಗುತ್ತಿದ್ದೇನೆ. ಆದರೆ ಕಾಣುವುದು ಮನೆಯಲ್ಲಿ ಅಲ್ಲ; ಯುದ್ಧಭೂಮಿಯ ಮೇಲೆ! ತಂದೆಯೆಂದಲ್ಲ, ಸಿಂಹಾಸನದ್ರೋಹಿಯೆಂದು!

**ಉಮಾ—** ಇದೇನು? ಮಾವನವರ ವಿಷಯದಲ್ಲಿ ಇಂಥ ಕಟುನುಡಿ?

**ವಿ—** ಅಹುದು ಉಮಾ. ಅವರಿಂದ ಅಂಥ ಅಪರಾಧವೇ ಜರುಗಿದೆ. ಪಾಂಡ್ಯರಾಜನ ಸಹಾಯಕ್ಕಾಗಿಯೆಂದು ಮದುರೆಗೆ ಹೋದವರು, ತಾವೇ ಅಲ್ಲಿಯ ರಾಜರೆಂದು ಸಾರಿದ್ದಾರೆ!

**ಉಮಾ—** ಹಾಗಾದರೆ ಒಳಿತಾಯಿತಲ್ಲವೆ? ಅವರು ರಾಜರು; ನೀವು ಯುವರಾಜರು; ನಾನು ಯುವರಾಜ್ಞಿ!

**ವಿ—** ಸುಡು ಆ ಯುವರಾಜ ಪದವಿಯನ್ನು! ಸಾಮ್ರಾಜ್ಯ ಸಿಂಹಾಸನಕ್ಕೆ ದ್ರೋಹ ಬಗೆದು ಯಾವ ವೈಭವ ಬಂದರೂ ಅದು ನರಕಕ್ಕೆ ಸಮ! ಆ ಪಾಪ ನನ್ನಿಂದಾಗದು. ನಾನು ಮಹಾರಾಜರೆದುರು ಪ್ರತಿಜ್ಞೆ ಮಾಡಿದ್ದೇನೆ—ತಂದೆಯವರನ್ನು ಸೆರೆಹಿಡಿದು ತರುತ್ತೇನೆ—ಎಂದು. ಈ ಕಾರ್ಯದಲ್ಲಿ ತಂದೆಯವರು ಮಡಿದರೂ ಸರಿ, ನಾನು ಮಡಿದರೂ ಸರಿ!

**ಉಮಾ—** ಛೆ, ಛೆ, ಈ ಅಮಂಗಲ ನುಡಿಯಾಡಬೇಡಿರಿ. ಆ ಕಾರ್ಯ ಅಷ್ಟು ಗಂಡಾಂತರದ್ದಾಗಿದ್ದರೆ, ನೀವು ಹೋಗುವುದೇ ಬೇಡ. ಹೋಗಲೇಬೇಕಾಗಿದ್ದರೆ, ನನ್ನನ್ನೂ ಕರೆದೊಯ್ಯಿರಿ! ಏನಾಗುವುದೆಲ್ಲ ನನ್ನ ಕಣ್ಣೆದುರಿನಲ್ಲೇ ನಡೆಯಲಿ!

**ವಿರೂ—** ಉಮಾ, ನೀನು ವೀರಪತ್ನಿ! ಅಂಜಿಕೆಗೆ ಎಡೆಗೊಡಬೇಡ. ಪಂಪಾಪತಿಯೇ ನನ್ನನ್ನು ಕಾಯುತ್ತಾನೆ. ಅವನ ಕಾರಣ್ಯದಲ್ಲಿ ವಿಶ್ವಾಸವಿಟ್ಟು, ನನ್ನ ಪ್ರಯಾಣದ ಸಿದ್ಧತೆ ಮಾಡು.

**ಉಮಾ—** ನಾಥಾ, ಈ ಅಪ್ರಿಯವಾದ ಕಾರ್ಯವನ್ನು ನೀವೇಕೆ ಕೈಕೊಂಡಿರಿ? ಬೇರೆಯವರಾರೂ ಇರಲಿಲ್ಲವೆ ಆಸ್ಥಾನದಲ್ಲಿ? ತಂದೆಯನ್ನು ಬಂಧಿಸಿ ತರಲು ಮಗನೇ ಹೋಗಬೇಕೆ? ಇದು ಯಾವ ಕಾಲದಲ್ಲಿಯೂ ನಡೆಯದಿದ್ದ ವಿಚಿತ್ರ! ನಿಮ್ಮ ಆತ್ಮಕ್ಕಾದರೂ ಈ ಮಾತು ಸುಖ ಕೊಟ್ಟೀತೆ? ಇದರಿಂದ ನಮಗೇನು ಕ್ಷೇಮ?

**ವಿ—** ವ್ಯಕ್ತಿಯ ಕಲ್ಯಾಣಕ್ಕಿಂತ ದೇಶದ ಕಲ್ಯಾಣ ಹಿರಿಯದಲ್ಲವೆ? ನಮ್ಮಂಥ ಕೋಟ್ಯವಧಿ ಜನರಿಂದ ದೇಶವಾಗುತ್ತದೆ. ಈ ಕಾರ್ಯ ನನ್ನಿಂದಲೇ ಆಗಬೇಕೆಂದು ವಿಧಿಸಂಕಲ್ಪವಿದ್ದಂತಿದೆ. ಎಂತಲೆ ಯಾರೂ ಈ ಎದೆಗಾರಿಕೆಯನ್ನು ತೋರಲು ಮುಂದೆ ಬರಲಿಲ್ಲ.

**ಉಮಾ—** ನಾಥಾ, ನನಗೆ ಏನೂ ತೋಚದು. ನಿಮಗೆ ಅನುಕೂಲೆಯಾಗಿ ನಡೆಯುವುದೊಂದೇ ನನಗೆ ಗೊತ್ತು. ಆಗಲಿ, ಸತ್ಯವು ಕಹಿಯಾಗಿದ್ದಂತೆ ಕರ್ತವ್ಯವೂ ಕಹಿಯಾಗಿಯೇ ಇರುವುದೆಂದಾಯಿತು.

**ವಿ—** ಸಂಶಯವೇನು? ನಡೆ. ಇಂದು ಸೋಮವಾರ. ಪಂಪಾಪತಿಯ ಆಶೀರ್ವಾದ ಪಡೆದು ಪುನೀತರಾಗೋಣ.

* * * * *

[ ಯುದ್ಧದ ಕೋಲಾಹಲ. ವಿರೂಪಾಕ್ಷನ ಸೇನಾಧಿಪತ್ಯದಲ್ಲಿ, ವಿಜಯನಗರದ ಸೈನ್ಯವು ಮದುರೆಗೆ ಹೋಗಿ ಮುತ್ತಿಗೆಯನ್ನು ಹಾಕಿದೆ. ನಾಗನಾಯಕನು ತನ್ನ ಬಲವನ್ನೆಲ್ಲ ಕೂಡಹಾಕಿ ವಿಜಯನಗರದ ಸೈನ್ಯವನ್ನು ಎದುರಿಸಿದ್ದಾನೆ. ಖಾಡಾಖಾಡಿಯಾಗಿ ಯುದ್ಧ ನಡೆದಿದೆ. ತನ್ನ ಸೈನಿಕರ ಧೈರ್ಯವು ಕುಗ್ಗುತ್ತ ನಡೆದುದನ್ನು ನೋಡಿ ನಾಗನಾಯಕನು, ತಾನೇ ಆಯುಧಪಾಣಿಯಾಗಿ ಸೈನ್ಯದ ಮುನ್ನುಗ್ಗಿ ಸೈನಿಕರನ್ನು ಹುರಿದುಂಬಿಸುತ್ತಿದ್ದಾನೆ ].

**ನಾಗ—** ಮುನ್ನುಗ್ಗಿರಿ. ಜೀವದ ಮೇಲಿನ ಆಸೆ ತೊರೆದು ಕಾದಾಡಿದಿರಿ! ಕೈಗೆ ಸಿಕ್ಕ ಶತ್ರುಸೈನಿಕರನ್ನು ಧ್ವಂಸಮಾಡಿರಿ! ನಿಮ್ಮ ಧಮನಿಯಲ್ಲಿ ರಕ್ತದ ಕೊನೆಯ ತೊಟ್ಟು ಇರುವವರೆಗೆ ಶತ್ರುವನ್ನು ತಡೆಹಿಡಿಯಿರಿ!

**ವಿ —** ( ಆಶ್ಚರ್ಯ-ರೋಷಗಳಿಂದ ) ಶತ್ರು! ಯಾರು ಯಾರಿಗೆ ಶತ್ರು! ಸ್ವಲ್ಪ ಎಚ್ಚರವಿಟ್ಟುಕೊಂಡು ಮಾತನಾಡಿರಿ!

**ನಾಗ—** ಆಂ! ಇದೇನು? ಗುರುತಿನ ಧ್ವನಿಯಂತೆ ತೋರುವುದಲ್ಲ! ನನ್ನನ್ನುದ್ದೇಶಿಸಿ ಯಾರು ಹೀಗೆ ನುಡಿದವರು?

**ವಿ—** ನಾನೇ! ನಿಮ್ಮ ಪರಿಚಯದವ—ತೀರ ಹತ್ತಿರದವ!

**ನಾಗ—** ಯಾರು? ವಿರೂಪಾಕ್ಷ! ನನ್ನ ಮಗ ವಿರೂಪಾಕ್ಷ! ನೀನು....ನನ್ನೊಡನೆ ಕಾದಲು ಬಂದೆಯಾ?

**ವಿ—** ಹೌದು, ಅದಕ್ಕಾಗಿಯೇ ಬಂದಿರುವೆ! ನೀವು ಈಗ ಪಾಂಡ್ಯರಾಜರಲ್ಲವೆ? ಮದುರೆಯ ರಾಜಾಧಿರಾಜರು!

**ನಾಗ—** ವಿರೂಪಾಕ್ಷ, ನನ್ನ ನಿನ್ನ ಸಂಬಂಧವನ್ನು ಮರೆಯಬೇಡ. ಪ್ರತ್ಯಕ್ಷ ತಂದೆಯನ್ನು ಹೀಯಾಳಿಸಿ ಮಾತನಾಡುತ್ತೀಯಾ?

**ವಿ—** ಯಾರು ತಂದೆ? ನೀವೆ? ಮದುರೆಯ ಸಿಂಹಾಸನವನ್ನು ಕಾಪಟ್ಯ-ಬಲಾತ್ಕಾರಗಳಿಂದ ಏರಿಹಾಕಿದವರು! ಇಂಥ ದೇಶದ್ರೋಹಿಯನ್ನು ತಂದೆಯೆಂದು ನಾನು ಮನ್ನಿಸುವುದಿಲ್ಲ!

**ನಾಗ—** ವಿರೂಪಾಕ್ಷ! ನಿನ್ನ ತುಂಟ ನಾಲಗೆಯನ್ನು ಹರಿಬಿಡಬೇಡ, ಯಾರೆದುರು ನಿಂತು ಈ ಮಾತನಾಡುತ್ತಿರುವೆ? ಉದ್ಧಟ ಪೋರ!

**ವಿ—** ನಾಗನಾಯಕರೆ! ಅಲ್ಲ, ಅಲ್ಲ, ಪಾಂಡ್ಯರಾಜರೆ! ಅಲ್ಲ ಮದುರೆಯ ಸಿಂಹಾಸನಾಧೀಶರೆ! ನೀವಾದರೂ ನಾನು ಮಗ ಎಂಬುವನ್ನು ಮರೆತೇ ಮಾತನಾಡಿರಿ. ಈಗ ನಿಮ್ಮ ಮಗನೆಂದು ನಾನು ಬಂದಿಲ್ಲ; ವಿಜಯನಗರದ ಸಿಂಹಾಸನಕ್ಕೆ ದ್ರೋಹ ಬಗೆದ ಒಬ್ಬ ನರಾಧಮನನ್ನು ಹೆಡಮುರಿಗೆ ಬಿಗಿದೊಯ್ಯಲು ದಳಪತಿಯಾಗಿ ಬಂದಿದ್ದೇನೆ.

**ನಾಗ—** ಯಾರು ನರಾಧಮ? ಯಾರು ದ್ರೋಹಿ? ಸ್ವಪರಾಕ್ರಮದಿಂದ ಚೋಳರಾಜನನ್ನು ಗೆದ್ದು, ಮದುರೆಯನ್ನು ಸ್ವತಂತ್ರಗೊಳಿಸಿದ ವೀರ! ಚಂದ್ರಶೇಖರಪಾಂಡ್ಯನು ಅಂಥ ಪರಾಕ್ರಮಶಾಲಿಯಾಗಿದ್ದರೆ, ತಾನೇ ಚೋಳರಾಜನನ್ನು ಸೋಲಿಸಿ ತನ್ನ ರಾಜ್ಯವನ್ನು ಗೆದ್ದುಕೊಳ್ಳಬಹುದಾಗಿತ್ತು. ಆ ಹೇಡಿ ನನ್ನ ಸಹಾಯವನ್ನೇಕೆ ಕೋರಿದ? ಯಾವನಿಗೆ ತನ್ನ ರಾಜ್ಯವನ್ನು ಉಳಿಸಿಕೊಳ್ಳುವ ಸಾಮರ್ಥ್ಯವಿಲ್ಲವೊ, ಅವನಿಗೆ ಸಿಂಹಾಸನವೇತಕ್ಕೆ? ರಾಜತ್ವವೇತಕ್ಕೆ? **ಯೋಗ್ಯತೆ ಇದ್ದವನೇ ಯೋಗ್ಯತೆ ಪಡೆಯುತ್ತಾನೆ!**

**ವಿ—** ಆ ಯೋಗ್ಯತೆಯನ್ನು ನ್ಯಾಯವಾದ ರೀತಿಯಲ್ಲಿ ಬಳಸಬೇಕಾಗುತ್ತದೆ ನಾಯಕರೆ! ನೀವು ಕೃಷ್ಣದೇವರಾಜಪ್ರಭುಗಳ ಪ್ರತಿನಿಧಿಯೆಂದು ಇಲ್ಲಿಗೆ ಬಂದಿರಿ; ಸ್ವಂತದ ಇಚ್ಛೆಯಿಂದಲ್ಲ! ನಿಮಗೆ ಮಹಾರಾಜರು ಒಪ್ಪಿಸಿದ ಕರ್ತವ್ಯವೇನು?.... ನೀವು ಇಲ್ಲಿ ಮಾಡಿದುದೇನು? ವಿಶ್ವಾಸವಿಟ್ಟು ನಿಮ್ಮನ್ನು ಕಳುಹಿದ್ದಕ್ಕೆ ಈ ಬಗೆಯ ಮೋಸವೆ? ನಂಬಿದವರನ್ನು ಘಾತಿಸುವುದೆ? ಚಂದ್ರಶೇಖರ ನಿಮಗೆ ಏನು ಅನ್ಯಾಯ ಮಾಡಿದ್ದ? ಅವನು ಅಲ್ಲಿ ಕಾರಾಗೃಹದಲ್ಲಿ ಕಣ್ಣೀರು ಸುರಿಸುತ್ತಿರುವಾಗ, ನೀವು ಅವನ ಸಿಂಹಾಸನವನ್ನೇರಿ ಚಕ್ಕಂದ ನಡೆಸಿರುವಿರಲ್ಲವೆ? ನಿಮಗೆ ಇದು ನ್ಯಾಯವೆನಿಸುವುದೆ? ಸತ್ಯ ನೆನೆದು ಹೇಳಿ!

**ನಾಗ—** ವಿರೂಪಾಕ್ಷ, ನೀನು ಆಡಿದುದೆಲ್ಲ ಸತ್ಯ ಎಂದು ಒಪ್ಪಿದರೂ, ಮದುರೆಯ ರಾಜ್ಯವನ್ನು ನಾನು ಗೆದ್ದುದು ಕೇವಲ ನನಗಾಗಿಯಲ್ಲ! ನಾನು ರಾಜನಾದರಲ್ಲವೇ ನೀನು ಯುವರಾಜನಾಗುವುದು? ನನ್ನ ತರುವಾಯ ನೀನೇ ಅದರ ಅಧಿಪತಿ.

**ವಿರೂ—** ಸುಡಿರದನ್ನು! ಇಂಥ ಅನ್ಯಾಯದ ರಾಜತ್ವ ನಿಮ್ಮ ಮಟ್ಟಿಗೆ ಇರಲಿ. ಕಾಲತ್ರಯದಲ್ಲೂ ಈ ಆಶೆ ನನಗೆ ಬೇಡ! ನಾನೀಗ ಬಂದುದು ನಿಮ್ಮನ್ನು ಬಂಧಿಸಿ ಒಯ್ಯುವುದಕ್ಕಾಗಿ! ಮಹಾರಾಜರ ಈ ಆಜ್ಞೆಯನ್ನು ಅಕ್ಷರಶಃ ಪಾಲಿಸುವುದು ನನ್ನ ಪರಮ ಕರ್ತವ್ಯವಾಗಿದೆ. ಇದನ್ನು ನೆರವೇರಿಸುತ್ತಿರುವಾಗ, ನಮ್ಮಿಬ್ಬರಲ್ಲಿ ಯಾರು ಪ್ರಾಣಕ್ಕೆರವಾದರೂ ನಾನು ಲೆಕ್ಕಿಸುವುದಿಲ್ಲ.

**ನಾಗ—** ಎಂದರೆ? ನನ್ನ ಮಗನೊಡನೆಯೇ ನಾನು ಸಮರಕ್ಕೆ ನಿಂತಂತಾಯಿತು! ವಿರೂಪಾಕ್ಷಾ, ನಿನ್ನ ಕೈಯಿಂದ ನಾನು ಸಾಯುವ ಮಾತಂತೂ ಅಶಕ್ಯಕೋಟಿಯೊಳಗಿನದೆ; ಆದರೆ ನೀನು ಮಾತ್ರ ನನ್ನ ಕೈಯಿಂದ ಮರಣಕ್ಕೆ ಗುರಿಯಾಗುವೆ! ಅದನ್ನು ನಾನು ಮಾಡಬೇಕೆ? (ಪುತ್ರಮೋಹದಿಂದ ಮನಸ್ಸು ವ್ಯಾಕುಲವಾಗಿ) ವಿರೂಪಾಕ್ಷ, ಮಗು, ನನ್ನ ಏಕೈಕಪುತ್ರನಾದ ನೀನು ಮಡಿದ ಮೇಲೆ, ಈ ರಾಜ್ಯವನ್ನು ಪಡೆದಾದರೂ ನಾನು ಮಾಡುವುದೇನು? ನಿನ್ನ ಮೇಲಿನ ಮಮತೆಗಾಗಿ ನಾನು ಇಂಥ ಮಹತ್ವಾಕಾಂಕ್ಷೆಗೆ ಮನಸೋತೆ.

**ವಿರೂ—** ತಂದೆ, ಹೌದು, ಅದನ್ನು ನಾನು ಎಷ್ಟೇ ನಿರಾಕರಿಸಿದರೂ, ನೀನು ತಂದೆಯೆಂಬುದು ಸುಳ್ಳಾಗಲಾರದು. ತಾತ ಇದು ವಂಚನೆಯಿಂದ ಗಳಿಸಿದ ರಾಜ್ಯವಲ್ಲವೆ? ಇದರಲ್ಲಿ ನಿನಗೆ ಸಮಾಧಾನವಿದೆಯೆ? ಮಹಾರಾಜರ ನಚ್ಚಿನ ಸೇವಕರೆಂದೆನಿಸಿಕೊಂಡ ನಿಮ್ಮಂಥವರು ಈ ದುರಾಶೆಗೆ ಮನಸೋಲುವುದು ನಿಮ್ಮ ಕೀರ್ತಿಗೇ ಕಲಂಕವಲ್ಲವೆ? ಸಾಮ್ರಾಜ್ಯದ ವಿಸ್ತಾರಕ್ಕಾಗಿ, ನೀವು ಎಷ್ಟು ಯುದ್ಧಗಳನ್ನು ಗೆದ್ದು ಮಹಾರಾಜರಿಗೆ ಸೇವೆಯನ್ನು ಸಲ್ಲಿಸಿಲ್ಲ? ಇಂದು ಅದೆಲ್ಲ ಏನಾಯಿತು? ರಾಜಾಜ್ಞೆಯೆಂದು ನನಗೊಪ್ಪಿಸಿದುದನ್ನು ನಾನು ಮಾಡಲೇಬೇಕು. ಆದರೆ ನೀವು—ವಿಜಯನಗರದ ಕೀರ್ತಿಧ್ವಜವನ್ನು ದಿಗಂತದಲ್ಲಿಯೇ ಮೆರೆಯಿಸಿದ ವೀರಾಗ್ರಣಿಗಳಾದ ನೀವು—ಒಂದು ಹೀನ ಸ್ವಾರ್ಥಕ್ಕಾಗಿ ಸ್ವಾಮಿಗೆ ದ್ರೋಹ ಬಗೆದ ಅಪಕೀರ್ತಿಗೆ ಗುರಿಯಾದಿರಲ್ಲ! ತಂದೆ, ವಿಚಾರಮಾಡಿರಿ, ಇದರಿಂದಾಗುವ ಅನರ್ಥವನ್ನು ಗಮನಿಸಿರಿ.

**ನಾಗ—** ವಿರೂಪಾಕ್ಷ, ಯುದ್ಧಮಾಡಬೇಕೆಂದು ಈ ಶಸ್ತ್ರವನ್ನು ಕೈಯಲ್ಲಿ ಹಿಡಿದೆ. ನಿನ್ನನ್ನು ನೋಡಿ ಮುಂಗೈಯ ಬಲವೇ ಸತ್ತಿತು ಶಸ್ತ್ರವನ್ನು ಧರಿಸುವ ತ್ರಾಣವೂ ಅದರಲ್ಲಿ ಉಳಿದಿಲ್ಲ. ನಿಜ, ವಿರೂಪಾಕ್ಷ, ನಾನು ತಪ್ಪಿದೆ! ನನ್ನನ್ನು ನೀನು ಎಷ್ಟು ಹಳಿದರೂ ಕಡಿಮೆಯೆ! ನಾನು ಅಪರಾಧಿ, ಮಹಾಪರಾಧಿ! ನನ್ನನ್ನು ಕ್ಷಮಿಸು ವಿರೂಪಾಕ್ಷ!

**ವಿರೂ—** ಅಪ್ಪಾ, ನಿಮ್ಮನ್ನು ಕ್ಷಮಿಸಲು ನಾನೆಷ್ಟರವನು? ಎಲ್ಲರನ್ನೂ ಕ್ಷಮಿಸುವವರು ಆ ದಯಾಸಮುದ್ರರಾದ ಮಹಾರಾಜರು. ಅವರೆಡೆಗೆ ಹೋಗೋಣ. ,ಶರಣಾಗತ ರಕ್ಷಕರು ಎಂದು ಬಿರುದು ಪಡೆದ ಮಹಾರಾಜರು ನಿಮ್ಮನ್ನು ಕಾಯುವರು.

**ನಾಗ—** ನಡೆ ವೀರ, ನನ್ನನ್ನು ಬಂಧಿಸು. ಇಗೋ, ಈ ಶಸ್ತ್ರವನ್ನು ಕೆಳಗಿರಿಸಿದೆ. ಮಹಾರಾಜರ ಸೆರೆಯಾಳಾಗುವುದರಲ್ಲಿಯೇ

ನನಗೆ ಗೌರವವಿದೆ. ನನ್ನನ್ನು ಪ್ರಭುಗಳ ಸಮ್ಮುಖದಲ್ಲಿ ನಿಲ್ಲಿಸು. ಅವರು ವಿಧಿಸುವ ಶಿಕ್ಷೆಗೆ ನಾನು ಪಾತ್ರನೇ ಇದ್ದೇನೆ.

**ವಿರೂ**— ಅಪ್ಪಾ, ರಾಜಾಜ್ಞೆಯಂತೆ, ನಿಮ್ಮನ್ನು ಬಂಧಿಸುವ ಕರ್ತವ್ಯವನ್ನು ನೆರವೇರಿಸುತ್ತಿದ್ದೇನೆ, ಕ್ಷಮಿಸಿರಿ.

**ನಾಗ**— ತಥಾಸ್ತು.

× × × ×

( ಮೊದಲಿನಂತೆಯೆ 'ಭುವನವಿಜಯ'ದಲ್ಲಿ ಒಡ್ಡೋಲಗ ಸೇರಿದೆ. ಕೃಷ್ಣಭೂಪತಿ ರತ್ನಸಿಂಹಾಸನದಲ್ಲಿ ವಿರಾಜಮಾನನಾಗಿದ್ದಾನೆ. ಮಂತ್ರಿಗಳು, ಮನ್ನೆಯರು, ಕವಿಗಳು, ವಿನೋದಿಗಳು, ಕರಣಿಕರು, ಬಲ್ಲವರು, ದಳಪತಿಗಳು, ಮಾಂಡಲಿಕರು, ಗಾಯಕರು, ನೃತ್ಯಾಂಗನೆಯರು ಮೊದಲಾದ ಎಲ್ಲ ಪರಿವಾರದವರು, ಔಚಿತ್ಯವನ್ನರಿತು ತಮ್ಮ ತಮ್ಮ ಸ್ಥಾನದಲ್ಲಿ ಮಂಡಿಸಿರುವರು. ಚಾಮರ, ಕುಂಚ, ಕಾಳಂಜಿ, ಹಾವಡೆ, ಮೊದಲಾದುವುಗಳನ್ನು ಹಿಡಿದುಕೊಂಡು 'ಊಳಿಗದವರ' ಬಳಗವು ಸಾಲುಗೊಂಡು ನಿಂತಿದೆ. ರಾಜಧಾನಿಗೆ ತಂದಿಟ್ಟ ನಾಗನಾಯಕನನ್ನು ಕಾರಾಗೃಹದಲ್ಲಿ ಇರಿಸಲಾಗಿದೆ. ಇಂದಿನ ರಾಜಸಭೆಯಲ್ಲಿ ಅವನ ಅಪರಾಧ ವಿಚಾರಣೆಯಾಗಿ ಶಿಕ್ಷೆ ವಿಧಿಸಲ್ಪಡಬೇಕಾಗಿದೆ. ಎಲ್ಲ ಸಭಿಕರು ಆನಂದದಲ್ಲಿದ್ದಾರೆ. ಸಂತೋಷಸೂಚಕ ನೃತ್ಯ ಹಾಗೂ ವಾದ್ಯಮೇಳಗಳ ಧ್ವನಿ ಕೇಳಬರುತ್ತದೆ. ನೃತ್ಯ, ತರುವಾಯ ವೀಣಾವಾದನ. )

**ಅಪ್ಪಾಜಿ**— ಮಹಾರಾಜರೆ, ನಾಗನಾಯಕನನ್ನು ದ್ವಾರದಲ್ಲಿ ತಂದು ನಿಲ್ಲಿಸಲಾಗಿದೆ. ಅಪ್ಪಣೆಯಾದರೆ ಸಮ್ಮುಖದಲ್ಲಿ ಬರುವಂತೆ ಹೇಳುತ್ತೇನೆ.

**ಕೃಷ್ಣ**— ಆಗಲಿ. ಮಂತ್ರಿಗಳೇ, ( ಕೈದಿಬರುವ ಸದ್ದು— ತರುವಾಯ )

( 'ರಾಜಾಧಿರಾಜ ರಾಜ ಪರಮೇಶ್ವರ, ಸಕಲಕಲಾ ಭೋಜ ರಾಜ ವಿಭವ, ಮೂರು ರಾಯರ ಗಂಡ, ಶ್ರೀಮತ್ ಕೃಷ್ಣದೇವರಾಯ ಮಹಾಪ್ರಭೊ!' ಎಂಬ ಪಾಠಕರ ಹೊಗಳಿಕೆ ).

**ಅಪ್ಪಾಜಿ**— ಮಹಾರಾಜರೆ, ನಾಗನಾಯಕನು ಸಮ್ಮುಖದಲ್ಲಿ ನಿಂತಿದ್ದಾನೆ.

**ಕೃಷ್ಣ**— ನಾಗನಾಯಕ, ರಾಜಾಜ್ಞೆಯನ್ನುಲ್ಲಂಘಿಸಿ ನೀನ ನಮಗೆ ದ್ರೋಹವನ್ನು ಬಗೆದಿರುವೆ. ನಿನ್ನಿಂದ ಮಹಾಪರಾಧವಾಯಿತು ಎಂಬುದನ್ನು ಒಪ್ಪುತ್ತೀಯಾ ?

**ನಾಗ**— (ಅತಿ ದೀನಸ್ವರದಲ್ಲಿ) ಒಪ್ಪುತ್ತೇನೆ, ಮಹಾಪ್ರಭೊ.

**ಕೃಷ್ಣ**— ನಾವು ಯಾವ ಶಿಕ್ಷೆಯನ್ನು ವಿಧಿಸಬೇಕು. ಎಂದು ನಿನ್ನ ಅಪೇಕ್ಷೆ ?

**ನಾಗ**— ಪ್ರಭೋ, ನಾನಪೇಕ್ಷಿಸುವುದು ಒಂದೇ !

**ಕೃಷ್ಣ**— ಅದಾವುದು ?

**ನಾಗ**— ಮರಣ ! ಸ್ವಾಮಿದ್ರೋಹಿಯಾದ ನನಗೆ ಅದೇ ತಕ್ಕ ಶಿಕ್ಷೆ ! ನನ್ನನ್ನು ಜೀವದಿಂದ ಇರಿಸಬೇಡಿರಿ; ಮರಣಕ್ಕೇ ನಾನು ಯೋಗ್ಯ ! (ಪಶ್ಚಾತ್ತಾಪದಿಂದ ವಿಹ್ವಲನಾಗಿ ದುಃಖಿಸುತ್ತಾನೆ)

**ಕೃಷ್ಣ**— ನಾಗ, ನಿನ್ನನ್ನು ದೇಹಾಂತ ಪ್ರಾಯಶ್ಚಿತ್ತ ಶಿಕ್ಷೆಗೆ.... ( ವಿರೂಪಾಕ್ಷ ಬಿಕ್ಕಿ ಬಿಕ್ಕಿ ಅಳುತ್ತಿರುವುದು ಕೇಳಬರುತ್ತದೆ) ಇಲ್ಲಿ ಬೇರೆ ಯಾರು ದುಃಖಿಸುತ್ತಿರುವವರು ?....ಓ ವಿರೂಪಾಕ್ಷ ! ಅವನಲ್ಲಿ ಪಿತೃಪ್ರೇಮವು ಜಾಗೃತವಾಗಿದೆ. ವಿರೂಪಾಕ್ಷ, ನಿನಗೆ ಒಪ್ಪಿಸಿದ ಕಾರ್ಯವನ್ನು ಯೋಗ್ಯವಾಗಿ ನೆರವೇರಿಸಿದೆ. ನಿನ್ನ ಅಪೇಕ್ಷೆಯನ್ನೂ ವಿಚಾರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ಹೇಳು, ನಿನ್ನ ಅಪೇಕ್ಷೆಯೇನು ?

**ವಿರೂ**— ಸ್ವಾಮಿ, ನನ್ನದೇನೂ ಅಪೇಕ್ಷೆ ಇಲ್ಲ. ತಮ್ಮ ಆಜ್ಞೆಯಂತೆ ನಾನು ನಡೆದೆ; ಎಲ್ಲವೂ ತಮಗೆ ವೇದ್ಯವೇ ಇದೆ. ನಾನೇನು ಹೇಳಲಿ ?

**ಕೃಷ್ಣ**— ಮಂತ್ರಿ ಅಪ್ಪಾಜಿಯವರೆ, ಇಲ್ಲಿ ನೆರೆದವರೆಲ್ಲರ ಮುಖದ ಮೇಲೆ ಅಸಮಾಧಾನದ ಚಿಹ್ನೆಗಳು ಒಡೆದುಕಾಣುತ್ತಿವೆ. ನಾಗನಾಯಕನನ್ನು ದೇಹಾಂತಶಿಕ್ಷೆಗೆ ಗುರಿಮಾಡುವುದು ಯಾರಿಗೂ ತೃಪ್ತಿಯನ್ನುಂಟುಮಾಡುವಂತಿಲ್ಲ. ನಮಗೂ ಹಾಗೆಯೆ ಎನಿಸಿದೆ. ತಪ್ಪಿ ನಡೆಯುವುದು ಮಾನವಸಹಜ ಪ್ರವೃತ್ತಿ. ಅದರಂತೆ ವೀರ ನಾದವನಲ್ಲಿ ಮಹತ್ವಾಕಾಂಕ್ಷೆಯೂ ಇರತಕ್ಕದ್ದೆ. ನಾಗನಾಯಕನು ಈಗ ಪಶ್ಚಾತ್ತಾಪದಿಂದ ಪರಿಶುದ್ಧನಾಗಿದ್ದಾನೆ. ಅವನಿಂದ ಕರ್ನಾಟಕ ಸಿಂಹಾಸನಕ್ಕೆ ಎಷ್ಟೋ ಸೇವೆ ಸಂದಿದೆ....ಸಲ್ಲಬೇಕಾಗಿದೆ. ಅವನ ಮನಸ್ಸನ್ನು ಕವಿದಿದ್ದ ಮೋಡ ಅಶ್ರುರೂಪದಿಂದ ಸುರಿದು ಅದು ನಿಚ್ಚಳವಾಗಿದೆ. ನಾಗನಾಯಕ, ನಿನ್ನ ಅಪರಾಧವನ್ನು ಕ್ಷಮಿಸಿದ್ದೇವೆ. ನೀನು ಮೊದಲಿನಂತೆಯೇ ನಮ್ಮ ಸೇವೆಯಲ್ಲಿರತಕ್ಕದ್ದು.

**ನಾಗ**— ( ದೀನ, ಕಂಪಿತ ಸ್ವರದಲ್ಲಿ ) ದಯಾಶಾಲಿಗಳಾದ ಪ್ರಭು, ಇಂದು ನೀವು ನನ್ನ ಆತ್ಮಕ್ಕೆ ಬೆಳಕನ್ನು ಕೊಟ್ಟಿರಿ. ನಾನ ಧನ್ಯನಾದೆ !

**ಕೃಷ್ಣ**— ಮಂತ್ರಿಗಳೇ, ಈ ಆನಂದಸಮಯದಲ್ಲಿ ಆಸ್ಥಾನ ಗಾಯಕರ ಸಂಗೀತ ಜರುಗಲಿ.

( ಸಂಗೀತವು ಪ್ರಾರಂಭವಾಗುವುದು ).

**ಸಂಗೀತಗಾರರು :**

ನಿನ್ನ ಎಂಜಲನುಂಡು, ನಿನ್ನ ಬೆಳ್ಪುಡೆಯುಟ್ಟು, ಮುನ್ನ ಮಾಡಿದ ಕಾರ್ಯ ಬೆನ್ನಬಿಡದಿದ್ದರೆ ನಿನ್ನ ಒಲ್ಲೆಸಲೇಕೋ ಕೃಷ್ಣ ! ಸಂಚಿತವನುಂಡು ಪ್ರಪಂಚದೊಳಗೆ ಬಿದ್ದು ನಿನ್ನ ಒಲ್ಲೆಸಲೇಕೋ ಕೃಷ್ಣ ! ದಿನಕರನುದಿಸಿ ಕತ್ತಲೆ ಪೋಗದಿದ್ದರೆ ಹಗಲೇನೋ ಇರುಳೇನೋ ಕುರುಡರಿಗೆ ಕೃಷ್ಣಾ ! ನಿನ್ನ ಒಲ್ಲೆಸಲೇಕೊ ಕೃಷ್ಣ !—

( ಸಂಗೀತದ ಕೊನೆಯೊಂದಿಗೆ ನಾಟಕದ ಕೊನೆ. )

# ಸಾಹಿತ್ಯದಲ್ಲಿ ಶೃಂಗಾರ

ಶ್ರೀ. ಎನ್. ಭೀಮಭಟ್ಟ 'ಸಾಹಿತ್ಯಶಿರೋಮಣಿ' 'ವಿಶಾರದ' ಕನ್ಯಾನ ದ. ಕ.

卐

**ಇಂದು ಲಲಿತಸಾಹಿತ್ಯವನ್ನು ನಿರ್ಮಿಸಬೇಕೆನ್ನುವ ನವಸಾಹಿತ್ಯಿಕರು, ನಮ್ಮ ಪರಂಪರೆಯ ರಸವಿಚಾರವನ್ನೂ ಅರಿತುಕೊಳ್ಳಬೇಕು; ಪಾಶ್ಚಿಮಾತ್ಯ ಸಾಹಿತ್ಯವಿಮರ್ಶಾ ಪರಂಪರೆಯ ಮನೋವಿಜ್ಞಾನವನ್ನೂ ಅವಗತಮಾಡಿಕೊಳ್ಳಬೇಕು. ಇವುಗಳ ಅಭ್ಯಾಸವು ನವಸಾಹಿತ್ಯಿಕನ ನಿರ್ಮಾಣಕಾರ್ಯದಲ್ಲಿ ತುಂಬ ನೆರವನ್ನು ಕೊಡುವುವು.**

卐

ಜಗತ್ತಿನಲ್ಲಿ ಶೃಂಗಾರದ ಪರಿಚಯವಿಲ್ಲದವರಿಲ್ಲ. ಶೃಂಗಾರ ಶಬ್ದಕ್ಕೆ ಅಷ್ಟು ಆಕರ್ಷಣೆ, ಆನಂದದಾಯಿತ್ವ, ಸಾರ್ವತ್ರಿಕವ್ಯಾಪ್ತಿ ಇರುವುದೇ ಅದರ ಜನಪ್ರಿಯತೆಯ ರಹಸ್ಯವೂ ಹೆಗ್ಗುರುತೂ ಆಗಿದೆ. ಸಾಹಿತ್ಯಕ್ಕೂ ಜನಜೀವನಕ್ಕೂ ಇರುವ ಗಾಢಸಂಪರ್ಕವನ್ನೊಪ್ಪಿಕೊಂಡಾಗ, ಜನಜೀವನದ ನಿಕಟಪರಿಚಯ ಪಡೆದಿರುವ ಶೃಂಗಾರಕ್ಕೆ ಸಾಹಿತ್ಯದಲ್ಲಿರುವ ಸ್ಥಾನಮಾನ, ಸಾಮಂಜಸ್ಯ, ನಿರೂಪಣಾಕ್ರಮದಲ್ಲಿ ಇರತಕ್ಕ ಔಚಿತ್ಯ, ಸಾಮಾನ್ಯನಿಯಮ, ಸಹೃದಯಪ್ರಿಯತೆಗಳನ್ನು ವಿವೇಚಿಸುವುದು ಅಪ್ರಕೃತವೆನಿಸದು.

ರಸವೇ ಕಾವ್ಯಸಾಹಿತ್ಯಗಳ ಜೀವಾಳವಷ್ಟೆ! ಅಂತಹ ಕಾವ್ಯವನ್ನು ಒಂಬತ್ತು ವಿಧವಾಗಿ ವಿಂಗಡಿಸಲಾಗಿದೆ. ನವರಸಗಳಲ್ಲಿ ಶೃಂಗಾರವು ಪ್ರಥಮವಾಗಿ ಪರಿಗಣಿಸಲ್ಪಟ್ಟಿದೆ. ಗಣನೆಯಲ್ಲಲ್ಲದೆ, ಗುಣದಲ್ಲೂ ಮಾಧುರ್ಯದಲ್ಲೂ ಅದು ಉತ್ಕೃಷ್ಟವಾಗಿದ್ದು ತನ್ನ ಪ್ರಾಥಮ್ಯ, ಪ್ರಾಶಸ್ತ್ಯಗಳನ್ನು ಕಾದುಕೊಂಡಿದೆ. ಶೃಂಗಾರವನ್ನು "ರಸರಾಜ"ನೆಂದು ಸಹೃದಯರು ಕೊಂಡಾಡಿದ್ದಾರೆ. "ಶೃಂಗಾರ ಏವ ಮಧುರಃ ಪರಃ ಪ್ರಹ್ಲಾದನೋ ರಸಃ" (ಧ್ವನ್ಯಾಲೋಕ) ಶೃಂಗಾರವೇ ಮನಸ್ಸನ್ನರಳಿಸುವ ಮಧುರವಾದ ಉತ್ತಮ ರಸವೆಂದು ಧ್ವನಿಕಾರರು ಪ್ರಶಂಸಿಸಿದ್ದಾರೆ. "ಸಮಸ್ತದೇವತಿರ್ಯಙ್ನರಾದಿ ಜಾತಿಗಳಿಗೂ ರತಿಯಲ್ಲಿ ಅವಿಚ್ಛಿನ್ನವಾದ ವಾಸನೆಯಿದೆ. ಅಲ್ಲಿ ಹೃದಯಸಂವಾದಮಯವಲ್ಲದ ಅಂಶವು ತುಸುವಾದರೂ ಇಲ್ಲ. ಯತಿಗಳಲ್ಲೂ ಈ ರಸಚಮತ್ಕೃತಿಯನ್ನು ಕಾಣಲು ಸಾಧ್ಯವಿದೆ. ಆದುದರಿಂದಲೇ ಅದು ಮಧುರವಾದ ರಸವಾಗಿದೆ. ಸಕ್ಕರೆ ಮೊದಲಾದ ಸಿಹಿಪದಾರ್ಥಗಳು ನಾಲಗೆಗೆ ಬಿದ್ದೊಡನೆ ವಿವೇಕಿ, ಅವಿವೇಕಿ, ಸ್ವಸ್ಥ, ರೋಗಿ ಎಂಬ ಭೇದವಿಲ್ಲದೆ–ತರತಮತೆಯಿಲ್ಲದೆ–ಪ್ರತಿಯೊಬ್ಬರಿಗೂ ಅನಾಯಾಸವಾಗಿ ರಸಚರ್ವಣೆ ಉಂಟಾಗುತ್ತದೆ." ಎಂಬುದಾಗಿ ಲೋಚನಕಾರರು ಅಭಿಪ್ರಾಯಪಡುತ್ತಾರೆ.

ಕಾವ್ಯದಲ್ಲಿ ರಸಚರ್ವಣೆ, ಕಾವ್ಯಾನಂದ, ಎಂಬುದೆಲ್ಲಾ ಸಹೃದಯ ಹೃದಯಾನುಭವಮಾತ್ರ ಗೋಚರವಾಗಿರುತ್ತದೆ. ರಸಪಾರವಶ್ಯ, ಆನಂದಲಾಭ, ರಸಚರ್ವಣೆಯ ವಿಧಾನ ಒಂದೇ ಆದರೂ, ಕಾವ್ಯಗಳಲ್ಲಿ ವಿವಿಧ ರಸಗಳನ್ನು ವರ್ಣಿಸಲಾಗುತ್ತಿದೆ. ಕಬ್ಬು, ಹಾಲು, ಬೆಲ್ಲ, ಸಕ್ಕರೆ, ಜೇನು ಮೊದಲಾದುವುಗಳೆಲ್ಲಾ ಸಿಹಿಪದಾರ್ಥಗಳೇ. ಇವುಗಳನ್ನೆಲ್ಲಾ ಆಸ್ವಾದಿಸಿದಾಗಲೂ ಸಿಹಿಯ ಅನುಭವವಾಗುತ್ತದೆ. ಆದರೆ ಇವುಗಳಲ್ಲಿ ಯಾವುದು ಶ್ರೇಷ್ಠ? ಅವುಗಳಲ್ಲೇನು ತಾರತಮ್ಯ?—ಎಂಬುದನ್ನು ಗುರುತಿಸುವುದು ಕಷ್ಟ, "ನ ತದಾಖ್ಯಾತುಂ ಸರಸ್ವತ್ಯಾಪಿ ಶಕ್ಯತೇ" ಎಂದಿದ್ದಾರೆ ದಂಡ್ಯಾಚಾರ್ಯರು. ಆದರೂ ಶೃಂಗಾರರಸವನ್ನು ರಸಗಳಲ್ಲಿ ಸರ್ವೋತ್ತಮ ಎನ್ನಲು ಸಹೃದಯನಿಗೆ ಯಾವ ಬಗೆಯ ಸಂಕೋಚವೂ ಹೆದರಿಕೆಯೂ ಇರುವುದಿಲ್ಲ.

ರಸದ ಸ್ವರೂಪವು "ಇದಮಿತ್ಥಂ" ಎಂಬ ಸಿದ್ಧಾಂತಕ್ಕೊಳಪಡುವ, 'ಏವಂರೂಪಃ' ಎಂಬ ಆಕಾರಸಂಸ್ಥಾನ ನಿರೂಪಣೆಗಾಗಲಿ, ಪ್ರತ್ಯಕ್ಷ ದೃಷ್ಟಿಗಾಗಲಿ ಗಮ್ಯವಲ್ಲ. ರಸವು ಆಸ್ವಾದನಾಗಮ್ಯವಾಗಿದೆ. ಆಸ್ವಾದದಿಂದಲೇ ಹೃದಯದಲ್ಲಿ ರಸವು ಪ್ರತಿಷ್ಠಿಸುತ್ತದೆ. ಆ ರಸಪ್ರತಿಷ್ಠೆಯ ಹಿನ್ನೆಲೆಯಾಗಿ ಅಖಂಡಭಾವವೊಂದು ನೆಲೆಸಿರುತ್ತದೆ. ಒಂದು ರಸವು ಚರ್ವಣಾವಿಷಯವಾಗುವುದಕ್ಕೆ, ಅಖಂಡಭಾವದ ಆಸ್ವಾದಕ್ಕೆ ನಾನಾಭಾವ, ವಿಭಾವಾನುಭಾವಗಳು ಬೇಕಾಗುತ್ತವೆ. ಈ ವಿಭಾವಾದಿಗಳು ರಸದ ಆದ್ಯಂತ 'ಏಕಮೇವಾದ್ವಿತೀಯ'ವಾಗಿರುವುದಿಲ್ಲ. ಸಾಗರದಲ್ಲಿ ತೆರೆಗಳು ಬಂದುಹೋದಂತೆ, ಚಲಚ್ಚಿತ್ರದಲ್ಲಿ 'ರೀಲ್' ಓಡಾಡಿದಂತೆ ಅವುಗಳ ಗತಿವಿಧಾನವಿರುತ್ತದೆ. ಆದರೆ ರಸಚರ್ವಣೆಯ ಹಿನ್ನೆಲೆಯಾಗಿ ಕಾವ್ಯದಲ್ಲಿ ಆದ್ಯಂತ ನೆಲೆಸುವ ವಿಶಿಷ್ಟ ಅಖಂಡ, ಪ್ರಮುಖಭಾವವೊಂದಿರುತ್ತದೆ. ಅದೇ ಸ್ಥಾಯಿಭಾವ. ಶೃಂಗಾರರಸದಲ್ಲಿ ಓತಪ್ರೋತವಾಗಿ ಯಾವಪ್ರಸ-

ಸ್ಥಾಯಿಯಾಗಿ ರತಿಯಿರುತ್ತದೆ. ಪ್ರೇಮ, ಪ್ರೀತಿ, ರತಿ ಮುಂತಾದುವುಗಳೆಲ್ಲಾ ಒಂದೇ ಅರ್ಥದ ಬೇರೆಬೇರೆ ಶಬ್ದಗಳಷ್ಟೆ. ರತಿಯು ಶೃಂಗಾರರಸದ ಸಂಪೂರ್ಣ ಜೀವಾಳವಾಗಿದೆ.

ಮಹಾಕವಿ ಭವಭೂತಿಯು 'ಏಕೋ ರಸಃ ಕರುಣ ಏವ' ಎಂಬುದಾಗಿ ಕರುಣದ ಪ್ರಕೃಷ್ಟತೆಯನ್ನು ವರ್ಣಿಸಿದರೆ, ಕವಿಭೋಜರಾಜನು ಶೃಂಗಾರವೊಂದೇ ರಸವೆಂದಿದ್ದಾನೆ. ಅವನು ರಸಗಳಲ್ಲಿ ಭೇದವನ್ನೊಪ್ಪುವದಿಲ್ಲ. "ಶೃಂಗಂ+ರೀಯತೇ" ತುದಿಯನ್ನು ಮುಟ್ಟಿಸುತ್ತದೆ.'' ಎಂಬರ್ಥದ ನಿಷ್ಪತ್ತಿಯನ್ನು ಹೇಳಿಕೊಂಡು, ಅಹಂಕಾರ, ಅಖಂಡತೃಪ್ತಿಗಳನ್ನೇ ಪರ್ಯಾಯವಾಗಿ ಪರಿಭಾವಿಸಿ, 'ಶೃಂಗಾರ'ವೆಂದರೆ ಕಾವ್ಯದಲ್ಲಿ ರಸವೆಂದು ಸಿದ್ಧಾಂತಿಸಿದ್ದಾನೆ. ಭರತಮುನಿಯಿಂದ ಇತ್ತೀಚಿಗಿನ ವರೆಗೂ ಪ್ರಚಾರದಲ್ಲಿರುವ ಶೃಂಗಾರ ಮೊದಲಾದ ರಸಗಳನ್ನು 'ರತಿಶೃಂಗಾರ' 'ವೀರಶೃಂಗಾರ' 'ಕರುಣ ಶೃಂಗಾರ' ಇತ್ಯಾದಿಯಾಗಿ ಆತನು ಹೇಳಿದ್ದಾನೆ. ಅವನ ಅರ್ಥ, ನಿರೂಪಣೆಗಳ ಮೇರೆಗೆ ಶೃಂಗಾರದ ವ್ಯಾಪ್ತಿ ವಿಸ್ತಾರವಾಗಿದೆ. ಶೃಂಗಾರದ ಜನಪ್ರಿಯತೆ ಪ್ರಕೃಷ್ಟತೆಗಳನ್ನು ನಾವೊಪ್ಪಬಹುದಾದರೂ, ಆತನ ನಿರ್ಧಾರಕ್ಕಿಂತ ನಾವು ಸರ್ವಥಾ ಭಿನ್ನಮತದವರಾಗಿದ್ದೇವೆ. ಆತನು 'ಶೃಂಗಾರ' ಶಬ್ದನಿಷ್ಪತ್ತಿಯ ಬಗ್ಗೆ ಕೊಟ್ಟ ಯುಕ್ತಿಯನ್ನು ನಾವು ಸಂಕೋಚವಿಲ್ಲದೆ ಆದರದಿಂದ ಸ್ವೀಕರಿಸಬಹುದು. ಆನಂದದ ಪರಾಕಾಷ್ಠೆಯನ್ನು ಪಡೆಯುವುದರಿಂದಲೇ 'ಶೃಂಗಾರ'ದ ಮಹತ್ತ್ವ ಹೆಚ್ಚುತ್ತದೆ. ಭೋಜರಾಜನ ಈ ಮಾತನ್ನು ನಾವು ವಿಶೇಷತಃ ಗಮನಿಸೋಣ. ಮಾತ್ರವಲ್ಲದೆ, "ಶೃಂಗಾರಮೇವ ರಸನಾದ್ರಸಮಾಮನಾಮಃ" – ಶೃಂಗಾರವನ್ನೇ ರಸವೆಂದೊಪ್ಪಿಕೊಳ್ಳೋಣ – ಎಂಬ ಆತನ ಅಭಿಪ್ರಾಯವನ್ನೂ ನಮಗನುಕೂಲವಾಗಿ ಅಂಗೀಕರಿಸಿಕೊಳ್ಳಬಹುದು.

ಶೃಂಗಾರದ ವಿಷಯವೇನು? ಎಂಬುದನ್ನಿನ್ನು ಚರ್ಚಿಸಬೇಕಾಗಿದೆ. ಅನುರೂಪನಾಯಿಕಾ–ನಾಯಕನಿಷ್ಠವಾದ ರತಿಯೇ ಶೃಂಗಾರದ ವಿಷಯವಾಗುತ್ತದೆ. ಅನುರೂಪತೆಯು ಸೌಂದರ್ಯ, ಸಂಸ್ಕೃತಿ, ಅಭಿಜಾತ್ಯಗಳಿಂದ ಉಂಟಾಗುತ್ತದೆ. ನಾಯಿಕ–ನಾಯಿಕೆಯರಿಬ್ಬರಲ್ಲೂ ಸಮಾನಾನುರಾಗ, ಸಮಾನಧರ್ಮ, ಸಮಾನ ಚಿತ್ತವೃತ್ತಿ, ಸಮಾನ ಪ್ರೇಮ ತುಂಬಿರಬೇಕು. ಆಗ ರತಿಗೆ ಕಳೆಯೇರುತ್ತದೆ. ಶೃಂಗಾರದ ನಿರೂಪಣೆಗೆ ಸಹಕಾರಿಯಾಗುತ್ತದೆ.

ಶೃಂಗಾರದಲ್ಲಿ ರತಿಯು ಮುಖ್ಯವಾದ ಸ್ಥಾನವನ್ನು ಪಡೆದಿದ್ದರೂ, ಆ ರತಿಯ ಪರಿಪೋಷಕ್ಕಾಗಿ ವಿವಿಧ ಭಾವಗಳು ಬೇಕಾಗುತ್ತವೆ. ರಸೋತ್ಪತ್ತಿಗೆ ಆಲಂಬನವಿಭಾವವು ಕಾರಣ. ಅದು ರಸಸಮವಾದ ಕಾರಣ, ರತಿಯನ್ನು ಪರಿಪೋಷಿಸಲು ವಿಭಾವಗಳು ವಿಶೇಷ ಸಹಕಾರಿಗಳಾಗುತ್ತವೆ. ಯೌವನೋದ್ಭೂತ ಹಾವ-ಭಾವಾದಿ ಚೇಷ್ಟೆಗಳು, ನೂಪುರಾದಿ ಅಲಂಕಾರಗಳು, ಮಲಯಾನಿಲ, ಚಂದ್ರ, ಕೋಕಿಲೆಯ ಹಾಡು ಮೊದಲಾದುವುಗಳು ಉದ್ದೀಪನವಿಭಾವಗಳಾಗಿಯೂ ಇರುತ್ತವೆ. ಇವುಗಳು ರತಿಯ ಬೆಳೆವಣಿಗೆಗೆ ಅಖಂಡ ಚರ್ವಣೆಗೆ ಸುತರಾಂ ಸಹಕಾರಿಗಳಾಗಿರುತ್ತವೆ. ಅನುಭಾವಗಳು ರತಿಯ ಹೃದಯಾನುಭವಬಲದಿಂದ ಪರಸ್ಪರರಿಂದ ಹೊರಹೊಮ್ಮುವ ಕಟಾಕ್ಷವಿಕ್ಷೇಪಾದಿಗಳು. "ಗಾಢಂ ನಿಖಾತ ಇವ ಮೇ ಹೃದಯೇ ಕಟಾಕ್ಷಃ" ಎನ್ನುವ ನಾಯಕನ ಮೂಲಕ ಭವಭೂತಿಯು ರತಿಗೆ ಅನುಭಾವದ ಬಲವನ್ನು ವ್ಯಕ್ತಪಡಿಸಿರುವುದು ಹೃದಯಂಗಮವಾಗಿದೆ. ಇನ್ನು ವಿವಿಧ ವ್ಯಭಿಚಾರಿಭಾವಗಳೂ ರಸವನ್ನು ಪದೇ ಪದೇ ಸಂಪೋಷಿಸುತ್ತಾ ಇರುತ್ತವೆ. ಇವುಗಳನ್ನು ಮೂವತ್ತುಮೂರು ಹೆಸರುಗಳಿಂದ ಭರತಮುನಿಯು ನಿರೂಪಿಸಿದ್ದಾನೆ. ವ್ಯಭಿಚಾರಿಭಾವಗಳು ಅವುಗಳ ಅನ್ವರ್ಥವಾದ ಹೆಸರು. ಅವುಗಳು ಅಲ್ಲಲ್ಲಿ ಆಗಾಗ ತಲೆದೋರಿ ತಮ ಕೆಲಸ ಸಾಧಿಸುತ್ತವೆ; ರತಿಯನ್ನು ಮತ್ತಷ್ಟು ಕಳೆಗೂಡಿಸುತ್ತವೆ. ನಾಟಕದಲ್ಲಿ ಪ್ರಧಾನಪಾತ್ರಗಳ ವ್ಯಕ್ತಿತ್ವದ ಬೆಳೆವಣಿಗೆಗೆ ಬೇಕಾಗುವ ಉಪಪಾತ್ರಗಳಂತೆ, ಇವುಗಳು ರತಿಗೆ ಸಹಕಾರಿಗಳಾಗುತ್ತವೆ. ಎಂಟು ಸಾತ್ತ್ವಿಕಭಾವಗಳನ್ನು ರಸಪ್ರಕರಣದಲ್ಲಿ ವಿಶೇಷವಾಗಿ ವಿವರಿಸಲಾಗಿದೆ. ಇವುಗಳೂ ರತಿಯ ಪರಿಪೋಷಕಗಳಾಗಿರುತ್ತವೆ. ಲೋಕದಲ್ಲೂ ಕಾವ್ಯಗಳಲ್ಲೂ ನಾವು ಇದನ್ನು ಪ್ರತ್ಯಕ್ಷಪ್ರಮಾಣಗಳಿಂದ ಗುರುತಿಸಬಹುದು. ಭಾವಗಳ ಉದಯ, ಶಾಂತಿ, ಪ್ರಾಚುರ್ಯ-ಸಂಧಿಯೇ ಮೊದಲಾದ ವಿವಿಧಪ್ರಸಂಗಗಳೂ ರಸದಲ್ಲಿ ಕೂಡಿ ಬರುತ್ತವೆ. ಇನ್ನು ರಸದ ಆಸ್ವಾದನಾವಸರದಲ್ಲಿ ಸಂಭವಿಸುವ ಶೃಂಗಾರಚೇಷ್ಟೆಗಳನ್ನು ಲಾಕ್ಷಣಿಕರು ಹದಿನೆಂಟು ವಿಧವಾಗಿ ಹೇಳಿದ್ದಾರೆ. ಇದು ಶೃಂಗಾರರಸಕ್ಕೆ ಮಾತ್ರ ಮೀಸಲಾದುದು. ಭಾವ, ವಿಭಾವಾನುಭಾವಗಳು ಪ್ರತಿರಸದಲ್ಲೂ ಬರಲೇಬೇಕು. ಶೃಂಗಾರಚೇಷ್ಟೆಗಳಾದರೆ ಕೇವಲ ಶೃಂಗಾರರಸದ ಸ್ವಂತ ಸೊತ್ತು. ಹೀಗೆಯೇ ಶೃಂಗಾರರಸದ ಹನ್ನೆರಡು ಅವಸ್ಥೆಗಳನ್ನೂ ರಸಜ್ಞರು ನಿರೂಪಿಸಿದ್ದಾರೆ. ಒಟ್ಟಿನಲ್ಲಿ ಒಂದು ಶೃಂಗಾರರಸದ ದರ್ಶನ ನಮಗಾಗುವಾಗ ಅದರ ಹಿಂದೆ ಎಷ್ಟೋ ವಿಭಾವಾನುಭಾವ-ವ್ಯಭಿಚಾರಿ-ಸಾತ್ತ್ವಿಕ ಭಾವಗಳು, ವಿವಿಧ ಚೇಷ್ಟೆಗಳು ಕೂಡಿಪ್ಪ ಸ್ಥಾಯಿಭಾವವಾದ ರತಿಯನ್ನು ಪೋಷಿಸಿ ರಸತ್ತ್ವವನ್ನು ಹೊಂದಿದುವೆಂದು ಸ್ಪಷ್ಟವಾಗುತ್ತದೆ. "ವಿಭಾವಾನುಭಾವವ್ಯಭಿಚಾರಿಸಂಯೋಗಾದ್ರಸನಿಷ್ಪತ್ತಿಃ" ಎಂದು ಭರತಮುನಿಯ ಮೂಲಸೂತ್ರವಿದೆ.

ಸಂಭೋಗ, ವಿಪ್ರಲಂಬವೆಂದು ಶೃಂಗಾರವನ್ನು ಎರಡುಪ್ರಕಾರವಾಗಿ ಹೇಳಿದ್ದಾರೆ. ಪರಸ್ಪರ ದರ್ಶನ, ಆಲಿಂಗನ, ಚುಂಬನ, ಸಂಭಾಷಣಾದಿಗಳೆಲ್ಲಾ ಸಂಭೋಗಶೃಂಗಾರದ ವರ್ಗವನ್ನು ಸೇರಿರುತ್ತವೆ. ಅಗಲುವಿಕೆಯೇ ವಿಪ್ರಲಂಭದ ವಸ್ತು. ಶೃಂಗಾರತಿಲಕದಲ್ಲಿ "ಸಂಯುಕ್ತಯೋಸ್ತು ಸಂಯೋಗಃ, ವಿಪ್ರಲಂಭೋ ವಿಯುಕ್ತಯೋಃ" ಎಂದು ಹೇಳಲಾಗಿದೆ. ನಾಯಕ–ನಾಯಿಕೆಯರು ಸೇರಿದ್ದರೆ ಸಂಭೋಗಶೃಂಗಾರವೆಂದೂ, ಆಗಲಿದ್ದರೆ ವಿಪ್ರಲಂಭವೆಂದೂ ಮೇಲಿನ ಪದ್ಯದ ಅಭಿಪ್ರಾಯ. "ಸೇರುವುದು" ಎಂದರೆ ಏಕಾಧಿಕರಣದಲ್ಲಿ ಕೂಡಿರುವುದೆಂದು ಅರ್ಥವಿಸುವುದು ಸರಿಯಲ್ಲವೆಂದು ಪ್ರಸಿದ್ಧ ವಿಮರ್ಶಕರೂ, ಲಕ್ಷಣಶಾಸ್ತ್ರಕಾರರೂ, ಕವಿಶ್ರೇಷ್ಠರೂ ಆದ ಪಂಡಿತರಾಜ ಜಗನ್ನಾಥರು ಸಯುಕ್ತಿಕವಾಗಿ ನಿರೂಪಿಸಿದ್ದಾರೆ. ನಾಯಕ–ನಾಯಿಕೆಯರು ಸಂಯುಕ್ತರಾದರೆ ತತ್ಕಾಲಾವಚ್ಛಿನ್ನವಾಗಿಸಂಭೋಗ

ವೆಂದೂ, ಅನ್ಯಥಾ ವಿಪ್ರಲಂಭವೆಂದೂಹೇಳಿದರೆ, ದಂಪತಿಗಳು ಇಲ್ಲವೇ ಪ್ರೇಮಿಗಳಿನ್ನಿ, ಒಂದೇ ಕೋಣೆಯಲ್ಲಿ ಒಂದೇ ಹಾಸಿಗೆಯಲ್ಲಿ ಪವಡಿಸಿದ್ದರೂ ಪರಸ್ಪರ ಮುನಿಸು, ಕಿನಿಸು, ಪ್ರಣಯಕಲಹಗಳಿದ್ದಲ್ಲಿ ಅದನ್ನು ಸಂಭೋಗಶೃಂಗಾರವೆಂದು ಒಪ್ಪಬೇಕಾದೀತು. ವಸ್ತುತಃ ಅದು ವಿಪ್ರಲಂಭವೇ ಆಗಿದೆ. ಹೀಗೆಯೇ ಬೇರೆ ಬೇರೆ ಅಧಿಕರಣಗಳನ್ನಾಶ್ರಯಿಸಿದ್ದರೂ ಪರಸ್ಪರ ಪ್ರೇಮ ಬಲಿತು ಅವರ ದರ್ಶನ,ಸಂಭಾಷಣ, ಸಮಾಗಮಗಳು ಅನುಕೂಲವಿದ್ದಲ್ಲಿ ಅದು ವಿಪ್ರಲಂಭವಲ್ಲ; ಸಂಭೋಗಶೃಂಗಾರವೇ ಆಗುತ್ತದೆ. ಒಟ್ಟಿನಲ್ಲಿ ಪ್ರೇಮವು ಅಂತಃಕರಣದ ಧರ್ಮ. ಸ್ತ್ರೀಪುರುಷರಲ್ಲಿ ಅನ್ಯೋನ್ಯ ಅವಲಂಬಿಸಿಕೊಂಡಿರುವ ಪ್ರೇಮವೆಂಬ ಚಿತ್ತವೃತ್ತಿ ವಿಶೇಷವೇ ರತಿ. ಅದೇ ಶೃಂಗಾರದ ಸ್ಥಾಯಿಭಾವ. ವಿಪ್ರಲಂಭದಲ್ಲಿ ರತಿಯು ವಿಚ್ಛಿನ್ನವಾಗಿರುವುದಿಲ್ಲ ಪ್ರಿಯಸಮಾಗಮದ ನಿರೀಕ್ಷೆ, ಕಾತರತೆ ಬಲವಾಗಿರುವುದರಿಂದ ಅದು ರತಿಯ ಧರ್ಮವೇ. ವಿಪ್ರಲಂಭ ಹೊಂದಿದ ನಾಯಿಕಾ-ನಾಯಿಕರಲ್ಲಿ ಪರಸ್ಪರ ಯಾರಾದರೊಬ್ಬರು ಮೃತರಾಗಿ ಬಿಟ್ಟರೆ, ರತಿಯು ವಿಚ್ಛೇದವು ಶೃಂಗಾರನಿರಾಶಕ್ಕೆ ಕಾರಣ ಮತ್ತು ಕರುಣರಸದ ವಿಷಯವಾಗುತ್ತದೆ. ಮರಣಾನಂತರವೂ ದೈವಬಲದಿಂದ ಪುನಸ್ಸಮಾಗಮ ಸಾಧ್ಯವಿದ್ದಲ್ಲಿ, ದೀರ್ಘಪ್ರವಾಸ ವಿಪ್ರಲಂಭವೆಂದು ಕೆಲವರು ಹೇಳಿದ್ದಾರೆ. ಇದಕ್ಕೆ ಕಾದಂಬರಿಯ ಮಹಾಶ್ವೇತಾ-ಚಂದ್ರಾಪೀಡರ ವರ್ಣನೆಯನ್ನು ನಿದರ್ಶನವಾಗಿ ಕೊಟ್ಟಿದ್ದಾರೆ. ಇಂಥ ಕಡೆಗಳಲ್ಲಿ ಕರುಣವಿಪ್ರಲಂಭವೆಂದೂ ಕೆಲವರು ಹೇಳಿದ್ದಾರೆ. ಆದರೆ ಈ ಮಾತುಗಳಿಗೆ ಅಂಥ ಗುರುತರವಾದ ಪ್ರಾಮಾಣ್ಯವಾವುದೂ ಸಹೃದಯರಿಂದ ಲಭಿಸಿಲ್ಲ. ಇಂದಿನ ದಿನಗಳಲ್ಲಂತೂ ಇದು ಚರ್ಚೆಗೆ ಅರ್ಹವಾದ ವಿಷಯವೇ ಅಲ್ಲ.

ಶೃಂಗಾರವು ನಾಯಿಕಾ-ನಾಯಕರ ಪ್ರೇಮವ್ಯಾಪಾರದ ರಸವತ್ತಾದ ಚಿತ್ರಣವೇ ಆಗಿದೆ. ಪರಸ್ಪರ ದರ್ಶನದಿಂದ ಕ್ರಮವಾಗಿ ಬೆಳೆಯುತ್ತಾ ಪರಿಪೋಷಗೊಳ್ಳುತ್ತಾ ಬಂದ ರತಿಯೇ ಶೃಂಗಾರರಸರೂಪವನ್ನು ಪಡೆಯುತ್ತದೆ. ಅಭಿಜ್ಞಾನಶಾಕುಂತಲದ ಪ್ರಥಮಾಂಕದಲ್ಲಿ, ದುಷ್ಯಂತ-ಶಕುಂತಲೆಯರ ಪ್ರಥಮದರ್ಶನವಾಗಿ ಪ್ರೇಮೋದಯವಾಗುತ್ತದೆ. ಕ್ರಮೇಣ ಬೆಳೆದು ಹೆಮ್ಮರವಾಗಿ ಮೂರನೆಯ ಅಂಕದಲ್ಲಿ ಫಲರೂಪವಾಗಿ ಸಮಾಗಮಚಿತ್ರಣ ವರ್ಣಿತವಾಗಿದೆ. ಈ ಮಧ್ಯೆ ವಿವಿಧ ಭಾವಗಳು ಬಲಿತು ರಸಪರಿಪೋಷಗೊಳಿಸಿವೆ. ವಿಭಾವಗಳೂ ತಮ್ಮ ಪ್ರಭಾವವನ್ನು ಬೀರಿವೆ. ಮಲಯಾನಿಲ-ಚಂದ್ರಾದಿಗಳು ಸಾಕಷ್ಟು ಪ್ರೇಮೋದ್ದೀಪನಗೊಳಿಸಿವೆ. ಸಮಾಗಮಾನಂತರ ವಿರಹ-ಶಾಪವೊದಗಿ ಬಲವಾಗುತ್ತದೆ. ಐದು ಆರನೆಯ ಅಂಕಗಳಲ್ಲಿ ವಿಪ್ರಲಂಭಾತಿಶಯವು ವರ್ಣಿತವಾಗಿ ಏಳನೆಯ ಅಂಕದ ಕೊನೆಗೆ ಪುನಃ ಸಮಾಗಮವಾಗಿ ಶೃಂಗಾರರಸದ ಪೂರ್ಣತೆಯನ್ನು ನಿರೂಪಿಸಲಾಗಿದೆ. ಕೇವಲ ಸಂಭೋಗವನ್ನು ಇಲ್ಲವೇ ವಿಪ್ರಲಂಭವನ್ನು ನಿರೂಪಿಸುವುದರಿಂದ, ಶೃಂಗಾರದ ಪೂರ್ಣಚಿತ್ರಣವಾಗಲಾರದು. ಸಮಾಗಮ-ವಿರಹಗಳೆರಡನ್ನೂ ಒಂದೇ ನಾಣ್ಯದ ಎರಡು ಮೈಗಳೆಂಬಂತೆ ಚಿತ್ರಿಸುವುದರಿಂದ ಕಾವ್ಯದ ಸೊಗಸು ಹೆಚ್ಚಬಹುದು. "ಸುಖಂಹಿ ದುಃಖಾನ್ಯನುಭೂಯ ಶೋಭತೇ" ಎಂಬಂತೆ ವಿರಹದಿಂದ ರತಿಗೆ ಮತ್ತಷ್ಟು ಮೆರುಗು ಬರುತ್ತದೆ. ವಿಪ್ರಲಂಭವನ್ನು ವರ್ಣಿಸಿ ಸಂಭೋಗವನ್ನು ನಿರೂಪಿಸಿದಾಗ ಚಮತ್ಕಾರ ಹೆಚ್ಚುತ್ತದೆ. ಯಾವಾಗಲೂ ಚಕ್ರವಕ್ಕಿಗಳಂತೆ ನಲ್ಲ–ನಲ್ಲೆಯರು ಜೊತೆಯಾಗಿರುವಂತೆ, ಶೃಂಗಾರವನ್ನು ವರ್ಣಿಸಿದರೆ ಸಾಲದು. ಒಟ್ಟಿಗಿದ್ದು ತರುವಾಯ ದೂರವಾಗಿ ಪುನಃ ಜೊತೆಗೂಡಿದಾಗ ಆಗುವ ಆನಂದಾತಿಶಯವೇ ಬೇರೆ. ಅದರ ಅಂದವೇ ಅಷ್ಟು! ಹೀಗಿರುವುದರಿಂದ ಶೃಂಗಾರದ ಎರಡೂ ಮುಖಗಳನ್ನು ಪೂರ್ಣವಾಗಿ ಚಿತ್ರಿಸಿದರೆ, ರಸದ ಸಮಗ್ರಪರಿಚಯ, ಆಸ್ವಾದನಾಯೋಗವುಂಟಾಗುತ್ತದೆ.

ಶೃಂಗಾರರಸದಲ್ಲಿ ಮಾಧುರ್ಯದ ಅಂಶ ಹೆಚ್ಚೆಂದು ಎಲ್ಲರ ಅನುಭವದ, ಒಮ್ಮತದ ಅಭಿಪ್ರಾಯ. "ಶೃಂಗಾರ ಏವ ಮಧುರಃ ಪ್ರಹ್ಲಾದನೋ ರಸಃ। ತನ್ಮಯಂ ಕಾವ್ಯಮಾಶ್ರಿತ್ಯ ಮಾಧುರ್ಯಂ ಪ್ರತಿತಿಷ್ಠತಿ ॥" ಎಂದು ಧ್ವನಿಕಾರಿಕೆ ತಿಳಿಸುತ್ತದೆ. ಶೃಂಗಾರದ ಸಮಗ್ರ ಜೀವನಾಡಿಯು ಮಾಧುರ್ಯವನ್ನು ಹೊಂದಿಕೊಂಡಿದೆ. ಅದರಲ್ಲೂ ವಿಪ್ರಲಂಭ ಶೃಂಗಾರವು ಅತ್ಯಂತ ಮಧುರತರವಾಗಿದ್ದು ಹೃದಯವನ್ನು ವಿಶೇಷ ಆದರ್ಶಗೊಳಿಸುವುದೆಂದು ಧ್ವನಿಕಾರರ ಅಭಿಪ್ರಾಯವಿದೆ. ವಿಪ್ರಲಂಭವು ಅಷ್ಟು ಸುಕರವಾದ ರಸ. ವಿಪ್ರ–ಲಂಭ ನಿರೂಪಣೆಯಲ್ಲಿ ಕವಿಯೆಷ್ಟು ಲಕ್ಷ್ಯ ವಹಿಸಿದರೂ ಸಾಲದು.


ಕ್ರೀಡಾಂಗಣ

( ಕವನ ಸಂಕಲನ )

卐

ಬರೆಹಗಾರರು :

ಎನ್. ಎಸ್. ಗದಗಕರ

ಇದರಲ್ಲಿ ವಿವಿಧವಿಷಯಗಳನ್ನು ವಸ್ತುವನ್ನಾಗಿ
ಇರಿಸಿಕೊಂಡು ಬರೆದ ೭೬ ಕವನಗಳಿರುವವು.

ಶ್ರೀ. ಆನಂದಕಂದರ ಮುನ್ನುಡಿಯನ್ನೊಳಗೊಂಡಿದೆ.

ಕ್ರಾ. ಅ. ೭೦ ಪುಟ

ಬೆಲೆ ೧ ರೂಪಾಯಿ

ಮುಖ್ಯ ಮಾರಾಟಗಾರರು :—

ಮನೋಹರ ಗ್ರಂಥಭಾಂಡಾರ, ಧಾರವಾಡ

ಕವಿಯು ಯಾವ ರೀತಿಯ ವಿಕಾರಕ್ಕೂ ಒಳಗಾಗದೆ ಅದನ್ನು ಚಿತ್ರಿಸಬೇಕು. ಅದು ಅತಿ ಮೃದು-ಮಧುರವಾದ ರಸ. "ಕುಸುಮಾದಪಿ ಮೃದು" ಎಂದ ಈ ರಸದಲ್ಲಿ ಕಠಿನಪದಗಳನ್ನಾಗಲಿ, ಅಲಂಕಾರ ವೈಚಿತ್ರ್ಯವನ್ನಾಗಲಿ, ಇನ್ನಾವುದೇ ಬಗೆಯ ಒಂಟುಬುದ್ಧಿಯನ್ನಾಗಲಿ ಕವಿಯು ನಿರ್ದೇಶಿಸಹೊರಟರೆ, ಅದಕ್ಕಿಂತ ಮಿಗಿಲಾದ ಅನ್ಯಾಯವಿಲ್ಲ. ಅಂತಹ ಅಪರಾಧಕ್ಕೆ ಯಾವ ನೀತಿಶಾಸ್ತ್ರದಲ್ಲೂ, ಯಾವ ಮಹರ್ಷಿಗಳೂ ಕ್ಷಮೆ ಹೇಳಿಲ್ಲ. ಯಾವ ರೀತಿಯ ಪಶ್ಚಾತ್ತಾಪ-ಪ್ರಾಯಶ್ಚಿತ್ತಗಳನ್ನೂ ಯಾವುದೇ ವೈದಿಕಸಂಸ್ಕಾರ ವಿಧಿಸಿಲ್ಲ. ಪುರೋಹಿತರಾರೂ ಈ ಬಗ್ಗೆ ಉತ್ತರ ಹೇಳಲಾರರು ಹೀಗಾಗಿ ವಿಪ್ರಲಂಭದ ಸೌಕುಮಾರ್ಯಾತಿಶಯವನ್ನು ಗಮನಿಸಿ ಕೂದಲೆಳೆಯಷ್ಟಾದರೂ ಅವಧಾನ ತಪ್ಪದೆ, ರಸನಿರೂಪಣೆಯನ್ನು ಕವಿಯು ಸುಂದರವಾಗಿ ಮಾಡಬೇಕು.

ಇನ್ನು ಶೃಂಗಾರಾಭಾಸದ ಕಡೆಗೆ ತಿರುಗೋಣ. ಆಭಾಸವೆಂದರೆ ವಸ್ತುತಃ ರಸವಲ್ಲ. ರಸದ ಅನುಕರಣೆ! ತೋರಿಕೆ! ಆಭಾಸ, ತುಸು ತೋರಿಕೆ ಮೂಲದ ಪ್ರತಿಬಿಂಬವಲ್ಲ. ಹೋಲಿಕೆಯಷ್ಟೇ ಇದೆಯೆನ್ನಬಹುದು. ಈ ಆಭಾಸವು ಪ್ರತಿರಸಕ್ಕೂ ಅನ್ವಯಿಸುತ್ತದೆ. ಒಬ್ಬನು ಕೇವಲ ಬಡಕಲು ಪ್ರಾಣಿ. ಮಾತ್ರವಲ್ಲದೆ ಹೇಡಿ! ಅವನು ಯುದ್ಧರಂಗದಲ್ಲಿ ವೀರಾವೇಶದಿಂದ ಕನಲಿ ಮುಂದುವರಿದಂತೆ ಬಣ್ಣಿಸಿದರೆ ಅದು ವೀರನ ಧರ್ಮವೆನಿಸೀತೇ? ಹೇಡಿಯಲ್ಲಿ ವೀರ್ಯವನ್ನಾರೋಪಿಸುವುದು ಆಭಾಸವೇ ಅಲ್ಲವೆ? ಹೀಗೆಯೇ ಶೃಂಗಾರದ ನಿರೂಪಣೆಯನ್ನು ಗಮನಿಸಿಕೊಳ್ಳಬೇಕು. ಪುರುಷನಿಗೆ ಪ್ರೇಮವಿದೆ, ಸ್ತ್ರೀಗಿಲ್ಲ. ಉದಾಹರಣೆಗೆ, ರಾವಣನಿಗೆ ಸೀತೆಯಲ್ಲಿ ಪ್ರೇಮವಿದೆ. ಆಕೆಗೆ ಅವನಲ್ಲಿ ಪ್ರೇಮವಿಲ್ಲ. ಹೀಗಿದ್ದಲ್ಲಿ ಇದು ಶೃಂಗಾರವೆನಿಸದು. ಇದನ್ನು ಆಭಾಸವೆಂದೇ ಹೇಳಬೇಕು. ರಾಮಾಯಣದಲ್ಲಿ ಆಭಾಸವಿದೆಯೆ? ಎಂದು ಅಚ್ಚರಿಪಡಬೇಕಾಗಿಲ್ಲ. ಆಭಾಸವು ಮುಖ್ಯ ರಸವಲ್ಲ; ಅದು ರಸಾಂತರದ ಅಂಗವಾಗಿ ಬರಬಹುದಷ್ಟೆ. ರಾಮಾಯಣದಲ್ಲೂ ಹಾಗೆ ಬಂದಿದೆ. ಅಷ್ಟು, ಇರಲಿ. ಆಭಾಸದ ವ್ಯಾಪ್ತಿಯನ್ನು ವಿವರಿಸುತ್ತಾ ಏಕತ್ರಮಾತ್ರಾನುರಾಗ, (ನಾಯಿಕಾನಿಷ್ಠ) ತಿರ್ಯಕ್ಪ್ರಾಣಿ,ಮ್ಲೇಚ್ಛಾದಿಗತ ಶೃಂಗಾರವರ್ಣನೆ, ಸ್ತ್ರೀಯ ಅತ್ಯಾಸಕ್ತಿ ಮೊದಲಾದುವುಗಳೆಲ್ಲಾ ಶೃಂಗಾರಾಭಾಸಗಳೆನ್ನಲ್ಪಡುತ್ತವೆ—ಎನ್ನಲಾಗಿದೆ.

ನಮ್ಮಲ್ಲಿಂದು ಆಭಾಸವನ್ನೂ ಅಶ್ಲೀಲವನ್ನೂ ಸಮಾನಾರ್ಥಕವಾಗಿ ವ್ಯವಹರಿಸುವವರಿದ್ದಾರೆ. ಮೂಲತಃ ಆಭಾಸಕ್ಕೂ ಅಶ್ಲೀಲಕ್ಕೂ ವ್ಯತ್ಯಾಸವಿದೆ. ಕಾವ್ಯ-ಸಾಹಿತ್ಯಗಳಲ್ಲಿ ಅಶ್ಲೀಲವು ದುಷ್ಟವೂ ಸರ್ವಥಾ ವರ್ಜ್ಯವೂ ಆಗಿದೆ. ಅನುಚಿತವರ್ತನೆ, ಶಬ್ದಾದಿಗಳ ವಾಚ್ಯನಿರೂಪಣೆ, ಅಸಂಬದ್ಧ ಕಥನ, ಭಂಡುಮಾತುಗಳೇ ಅಶ್ಲೀಲದ ಭಂಡವಾಳ. ಅಶ್ಲೀಲವು ಆಗಿಂದಾಗ ಬದಲಾಗುವ ಸಮಾಜದ ನಡೆವಳಿಕೆಯಲ್ಲಿ ಕಾಣಿಸಬಹುದು. ಒಂದು ಸಮಾಜದ ನಡೆವಳಿಕೆ ಮತ್ತೊಂದು ಸಮಾಜಕ್ಕೆ ಅಶ್ಲೀಲವೆನಿಸಬಹುದು. ಆಂಗ್ಲರ ಬಹಿರಂಗ ಚುಂಬನಾಲಿಂಗನಾದಿಗಳು ಭಾರತೀಯರ ದೃಷ್ಟಿಯಲ್ಲಿ ಅಶ್ಲೀಲ. ಆದರೆ ಅದು ಆಂಗ್ಲರ ಸಂಸ್ಕೃತಿ. ಒಂದು ಭಾಷೆಯಲ್ಲಿ ಒಂದು ಶಬ್ದವು ಚೆಂದವೆನಿಸಿದರೆ, ಮತ್ತೊಂದರಲ್ಲಿ ಅಶ್ಲೀಲವೆನಿಸಬಹುದು. ಪೇಲವ, ಹೇಲಾ ಇತ್ಯಾದಿ ಶಬ್ದಗಳು ಸಂಸ್ಕೃತದಲ್ಲಿ ಬಹಳ ಮೃದು, ಸುಂದರಪದಗಳಾದರೂ ದೇಶಭಾಷೆಯ ದೃಷ್ಟಿಯಲ್ಲಿ ಅವು ಅಶ್ಲೀಲವೆನಿಸಬಹುದು. ಅಶ್ಲೀಲವನ್ನು ಶೃಂಗಾರದಲ್ಲಿ ನಿರೂಪಿಸಲೇಬಾರದು. ಮಾತಾ-ಪಿತೃಗಳ ಸಂಭೋಗವರ್ಣನೆ, ಮೊದಲಾದುವುಗಳು ಶುದ್ಧ ಅಶ್ಲೀಲಜಾತಿಗೆ ಸೇರಿದುವುಗಳು. ಅನುರೂಪ ನಾಯಿಕಾ ನಾಯಕರ ಪ್ರೇಮಚಿತ್ರಣದಲ್ಲೂ ನಡೆ, ನುಡಿಗಳ ವರ್ಣನೆಯಲ್ಲೂ ಔಚಿತ್ಯ ಮೀರಕೂಡದು. ಅನುಚಿತ ಶಬ್ದಗಳು, ಸರ್ವಥಾ ವರ್ಜ್ಯಗಳಾಗಿವೆ. ಹೀಗೆ ಅಶ್ಲೀಲಗಳನ್ನು ಪರಿಹರಿಸಬೇಕು. ಆಭಾಸವು ಅಶ್ಲೀಲಕ್ಕಿಂತ ಬೇರೆ ಎಂದಿದ್ದೇನೆ. ಆಭಾಸವು ಪ್ರಕೃತರಸದಲ್ಲಿ ವರ್ಜವಾಗಿದ್ದರೂ, ರಸಾಂತರಕ್ಕೆ ಅಂಗವಾಗಿ ಕವಿಚಮತ್ಕೃತಿ-ವರ್ಣನಾವಿಷಯವಾಗಬಹುದು. ಅಶ್ಲೀಲವು ಸರ್ವಥಾ ಸರ್ವದಾ ಸರ್ವತ್ರ, ವರ್ಜ್ಯವೇ ಸರಿ!

ನಮ್ಮಲ್ಲಿ ಶೃಂಗಾರನಿರೂಪಣೆ ಎಂದ ಮಾತ್ರಕ್ಕೆ 'ಅಶ್ಲೀಲ'ವೆಂದು ಮೂಗುಮುರಿಯುವ 'ಮಡಿವಂತಿಕೆ' 'ಪಂಡಿತಂಮನ್ಯ'ರಲ್ಲಿ ಸ್ವಾಭಾವಿಕವಾಗಿದೆ. ಶೃಂಗಾರವು ಅತ್ಯವಶ್ಯ. ಶೃಂಗಾರ ಬೇಡವೆನ್ನುವುದು ಅರಸಿಕರ ಮತ. ಆದರೆ ಶೃಂಗಾರನಿರೂಪಣೆಯಲ್ಲಿ


## ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

| | |
|---|---|
| **ಜೈನಧರ್ಮ** | ೧೫-೦-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |
| **ಹಾಲು-ಹಣ್ಣು ( ಕವನ ಸಂಗ್ರಹ )** | ೧-೮-೦ |
| ಶ್ರೀ. ಭುಜೇಂದ್ರ ಮಹಿಷವಾಡಿ | |
| **ಮೂಲಶಿಕ್ಷಣದ ಮೌಲ್ಯಮಾಪಣ** | ೦-೧೨-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |
| **ಬಾಳ-ಬಂಡಿ ( ಕವನ ಸಂಗ್ರಹ )** | ೦-೮-೦ |
| ಶ್ರೀ. ಬಾಳ ಬಿ. ಉಪಾಧ್ಯೆ | |
| **ಭರತೇಶನ ನಾಲ್ಕು ಚಿತ್ರಗಳು** | ೧-೪-೦ |
| ಶ್ರೀ. ಮಿರ್ಜಿ ಅಣ್ಣಾರಾಯರು | |

ಅಚ್ಚಿನಲ್ಲಿ:

**ಸಂಸ್ಕೃತಿಯ ಹೃದಯ**

**ಭಾರತದ ಬೆಳಕು**

ಪ್ರತಿಗಳಿಗಾಗಿ ಬರೆಯಿರಿ:

**ಶಾಂತಿ ಸೇವಾಸದನ, ಸೇಡಬಾಳ**

ಪೋ. : ಸೇಡಬಾಳ ( ಜಿಲ್ಲಾ ಬೆಳಗಾಂವಿ )

ಮರ್ಯಾದೆ ಮೀರಬಾರದು. ಶೃಂಗಾರವು ವಾಚ್ಯವಾಗಿರಲೇಬಾರದು. ಆಗ ಅದು ಅಶ್ಲೀಲವಾಗುತ್ತದೆ. ಧ್ವನಿಯೇ ಕಾವ್ಯದ ಆತ್ಮ. ರಸವು ವ್ಯಜ್ಯಮಾನವಾಗಿಯೇ ಇರಬೇಕು. ರಸವು ಸ್ವಶಬ್ದವಾಚ್ಯವಾಗಿದ್ದಲ್ಲಿ ಕೂಡ ರಸಭಂಗ, ಅಶ್ಲೀಲ ದೋಷಗಳುಂಟಾಗುತ್ತವೆಯೆಂದು ರಸಜ್ಞರು ಸಾರಿದ್ದಾರೆ. ಹೀಗೆ ಶೃಂಗಾರ ನಿರೂಪಣೆಯಲ್ಲಿ ಕವಿಯು ಎಷ್ಟು ಅವಹಿತನಾಗಿದ್ದರೂ ಸಾಲದು. ಸಂಸ್ಕೃತದಲ್ಲಿ ಮಹಾಕವಿ ಕಾಳಿದಾಸನು ಶೃಂಗಾರರಸದ ನಿರೂಪಣೆಯಲ್ಲಿ ಕುಶಲನೂ ಸಿದ್ಧಹಸ್ತನೂ ಆದ ಮಹಾನುಭಾವನೇ ಸರಿ. ಆತನು ತನ್ನ ಬೇರೆ ಬೇರೆ ನಾಟಕಗಳಲ್ಲೂ, ಮೇಘದೂತ (ವಿಪ್ರಲಂಭ)–ಕುಮಾರಸಂಭವಗಳಲ್ಲೂ ಶೃಂಗಾರದ ಸಮಗ್ರರೂಪವನ್ನೂ ಮಹತ್ತ್ವವನ್ನೂ ತೋರಿಸಿದ್ದಾನೆ. ಆತನು ಕರುಣಾದಿ ರಸಗಳನ್ನು ಹೃದಯವಿದ್ರಾವಕವಾಗಿ ವರ್ಣಿಸಬಲ್ಲವನಾದರೂ, ವಿವಿಧರಸನಿರೂಪಣಾಪ್ರವೀಣನೆನಿಸಿದರೂ, ಶೃಂಗಾರದಲ್ಲಿ ಆತನಿಗೆ ಲೋಕೋತ್ತರ ಮಹತ್ತ್ವಪೂರ್ಣಸ್ಥಾನವಿದೆ. ಭವಭೂತಿ, ಶ್ರೀಹರ್ಷ, ದಂಡಿ, ಬಾಣಭಟ್ಟ, ಭಾಸ, ಮಾಘ, ಮೊದಲಾದವರೂ ತಮ್ಮ ಕಾವ್ಯಗಳಲ್ಲಿ ಶೃಂಗಾರವನ್ನಾದರಿಸಿರುವುದನ್ನು ಕಾಣಬಹುದು. ಹೆಚ್ಚೇಕೆ? ಆದಿಕವಿ ವಾಲ್ಮೀಕಿಮಹರ್ಷಿ, ವ್ಯಾಸರು ಕೂಡ ಶೃಂಗಾರವನ್ನು ಸುಂದರವಾಗಿ ಅಲ್ಲಲ್ಲಿ ನಿರೂಪಿಸಿಲ್ಲವೆ? ಹೀಗಿದ್ದರೂ ಶೃಂಗಾರರಸದ ನಿರೂಪಣೆಯಲ್ಲಿ ಆಚಾರ್ಯಸ್ಥಾನ ಕಾಳಿದಾಸನಿಗೆ ಬಂದುಬಿಟ್ಟಿದೆ. ಅಮರುಶತಕದ ಕವಿ ಅಮರುಕನ ಶೃಂಗಾರವು ಕಾಳಿದಾಸನನ್ನು ಸಾಕಷ್ಟು ಹೋಲುತ್ತದೆ; ಆದರೂ ಶೃಂಗಾರದ ಮರ್ಮವನ್ನು ಕಾಳಿದಾಸನಷ್ಟು ಅಮರುಕವಿಯೂ ಅರಿತಂತಿಲ್ಲ. ಜಗನ್ನಾಥ ಪಂಡಿತರ 'ಭಾಮಿನೀವಿಲಾಸ' ಶೃಂಗಾರಪರಕಾವ್ಯವಾಗಿದೆ. ಜಗನ್ನಾಥಪಂಡಿತರ ಶೃಂಗಾರನಿರೂಪಣೆ, ಕಾಳಿದಾಸ ಅಮರುಕರ ವರ್ಣನೆಯಂತೆ ಪ್ರಕೃಷ್ಟವಾಗಿದೆ. ಜಗನ್ನಾಥಪಂಡಿತರು ಶೃಂಗಾರದಲ್ಲಿ ಕಾಳಿದಾಸನನ್ನು ಕೆಲವೆಡೆ ಹೋಲುತ್ತಾರೆ. ಜಯದೇವ ಕವಿಯು ರಾಧಾ-ಮಾಧವರ ವಿಲಾಸಶೃಂಗಾರವನ್ನು ವರ್ಣಿಸಿ ವಿಶೇಷಸ್ಥಾನ ಪಡೆದಿದ್ದಾನೆ. ದೇವಾದಿ ವಿಷಯಕ ರತಿವರ್ಣನೆಯು ಆಭಾಸವೆಂದು ಕೆಲವರು ಹೇಳಿದ್ದಾರೆ; ಕೆಲವರು ತಪ್ಪು ಎಂದು ಖಂಡಿಸಿದ್ದಾರೆ. ಆದರೆ ಜಯದೇವನು ಅಂತಹ ಸಂಪ್ರದಾಯ ಶೃಂಖಲೆಯನ್ನು ಮತ್ತ-ಗಜದಂತೆ ಮುರಿದಿದ್ದಾನೆಂದು ಜಗನ್ನಾಥ ಪಂಡಿತರೊಂದೆಡೆ ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲಿ ಕವಿಯು ಸಾಮರ್ಥ್ಯಾತಿಶಯದಿಂದ ಅಶ್ಲೀಲಾಭಾಸಗಳು ತಲೆದೋರದಂತೆ ರಸಧ್ವನಿಯನ್ನು ಹರಿಸಿದ್ದಾನೆ. ಕುಮಾರಸಂಭವದಲ್ಲಿ ಕಾಳಿದಾಸನು ವರ್ಣಿಸಿದ ಗೌರೀಶಿವವಿಷಯಕ ಶೃಂಗಾರವು ಅಸಭ್ಯವೆಂಬ ಆಕ್ಷೇಪಕ್ಕೆಡೆಯಾಗಬಹುದಿತ್ತು; ಆದರೆ ಅಲ್ಲಿ ಆಭಾಸವು ಕವಿಶಕ್ತಿತಿರಸ್ಕೃತವಾಗಿದೆ. ಹೀಗೆ ಅನೌಚಿತ್ಯ, ಅಶ್ಲೀಲಕ್ಕೆಡೆಗೊಡದಂತೆ ಸಂಸ್ಕೃತದಲ್ಲಿ ಪ್ರಾಚೀನಕವಿಗಳು ಶೃಂಗಾರವನ್ನು ನಿರೂಪಿಸಿದ್ದಾರೆ.

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ನೀಲಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿ

ಕನ್ನಡದಲ್ಲೆಷ್ಟೋ ಕವಿಗಳು ಶೃಂಗಾರವನ್ನು ವರ್ಣಿಸಿದ್ದಾರೆ. ಶೃಂಗಾರಾಭಾಸವನ್ನು ಪ್ರತಿಪಾದ್ಯ ಧರ್ಮಕ್ಕನುಗುಣವಾಗಿ ಜನ್ನ ಪ್ರಭೃತಿಗಳು ವರ್ಣಿಸಿದ್ದಾರೆ. ಇತ್ತೀಚಿಗಿನವರಾದ ರತ್ನಾಕರವರ್ಣಿ ಮೊದಲಾದವರೂ ಶೃಂಗಾರವನ್ನು ವಿಶೇಷವಾಗಿ ಆದರಿಸಿದ್ದಾರೆ. ಕಾವ್ಯಪ್ರಕಾರದಲ್ಲಿ ಶೃಂಗಾರದ ಪ್ರಾಶಸ್ತ್ಯ, ಜನಪ್ರಿಯತೆ ಅಷ್ಟಿದೆ ಎಂತಲೇ ಅದರ ನಿರೂಪಣೆಗೆ ಪ್ರಾಶಸ್ತ್ಯ ಬಂದಿದೆ.

ಕಾವ್ಯಕ್ಕೆ ಕಾಂತಾಸಮ್ಮಿತತ್ತ್ವವನ್ನು ಕೊಡಲಾಗಿದೆ. ಕಾವ್ಯವು ರಾಜನಂತೆ ಅಪ್ಪಣೆ ಕೊಡುವುದಿಲ್ಲ ಅದೇನೂ ವೇದವಿಧಿಯಲ್ಲ. ಪುರಾಣಗಳು ಮಿತ್ರನ ಮಾತಿನಂತೆ ಅಪ್ರಿಯಸತ್ಯವಾಗಿರಬಹುದು. ಆದರೆ ಕಾವ್ಯವು ಕಾಂತೆಯಂತೆ ಸರಸವಾಗಿ 'ಪ್ರಿಯಸತ್ಯ'ವೆಂಬ ಮಹಾಕಾರ್ಯವನ್ನು ಸಾಧಿಸುತ್ತದೆ. ಓದುಗರನ್ನಾನಂದಗೊಳಿಸಿ ಕರ್ತವ್ಯದ ಕಡೆಗೆ ಎಚ್ಚರಿಕೆ ಕೊಟ್ಟು ಅಕರ್ತವ್ಯದಿಂದ ದೂರವಾಗುವಂತೆ ಮಾಡುತ್ತದೆ. ರಸವೇ ಕಾವ್ಯದ ಸರ್ವಸ್ವ. ರಸದಿಂದಲೇ ಕಾವ್ಯಕ್ಕೆ ಕಾಂತಾಸಾದೃಶ್ಯ ಲಭಿಸಿತು. ಕಾವ್ಯಪ್ರಕಾರಕ್ಕೆ ಕಾಂತಾ-ಸಮ್ಮಿತತ್ತ್ವದ ವೈಶಿಷ್ಟ್ಯ ಶೃಂಗಾರದಲ್ಲಿ ವಿಶೇಷ ಕಾಣಿಸುತ್ತದೆ. ಕಾಂತೆಯ ಶೃಂಗಾರಕ್ಕೆ ಕಾಂತನು ವಶನಾಗುವಂತೆ, ಸಹೃದಯರು ಶೃಂಗಾರವನ್ನು ಕುರಿತು ವಿಶೇಷ ಸೋತುಬಿಡುತ್ತಾರೆ. ಇದೇ ಶೃಂಗಾರದ ಪ್ರಾಶಸ್ತ್ಯ—ಜನಪ್ರಿಯತೆಯ ಕಾರಣವೆನ್ನಬಹುದು.

ಶೃಂಗಾರವು ಪ್ರಕೃಷ್ಟವಾದ ರಸ. "ಧ್ವನ್ಯಾತ್ಮಭೂತೇ-ಶೃಂಗಾರೇ" ಎಂದು ಧ್ವನಿಕಾರರು ಶೃಂಗಾರವನ್ನು ಧ್ವನಿಯ ಆತ್ಮ ಎಂದು ಎರಡೆರಡು ಬಾರಿ ಒತ್ತಿ ಹೇಳಿದ್ದಾರೆ. ಅಂತಹ ಶೃಂಗಾರದ ನಿರೂಪಣೆಯಲ್ಲಿ ಕವಿಗೆ ವಿಶೇಷ ಪ್ರತಿಭೆ, ಔಚಿತ್ಯ ಪರಿಜ್ಞಾನಬೇಕು. ಅನೌಚಿತ್ಯ, ಅಭಾಸ, ಅಶ್ಲೀಲತೆಗಳು ತಲೆದೋರದಂತೆ, ಧ್ವನ್ಯಾತ್ಮಕವಾಗಿ ಶೃಂಗಾರವನ್ನು ನಿರೂಪಿಸಿದರೆ, ಅದು ಸಹೃದಯ ಹೃದಯಾ-ಹ್ಲಾದಿಯಾಗುತ್ತದೆ. ಅಂತಹ ಶ್ರೇಷ್ಠವೂ ಸುಂದರವೂ ಆದ ಶೃಂಗಾ-ರವು ಸಾಹಿತ್ಯ–ಕಾವ್ಯಗಳಲ್ಲಿ ಅಪೇಕ್ಷಣೀಯವಾಗಿದೆ. ಇಷ್ಟನ್ನು ಗಮ-ನಿಸಿಕೊಂಡಲ್ಲಿ, ಸಾಹಿತ್ಯದಲ್ಲಿ ಶೃಂಗಾರನಿರೂಪಣೆಯ ಮಟ್ಟಿಗೆ ವಾದ-ವಿವಾದ, ತರ್ಕವಿತರ್ಕ, ಕಲಹ-ಕೋಲಾಹಲಗಳಿಗೆ ಎಡೆಯೇ ಇಲ್ಲ.

# ಕಾಮನ ಹುಣ್ಣಿವೆ

‘ ಆನಂದಕಂದ ’

೧

ಮೂಡಿದುದು ಬಾನ ಪಡುವಣದಿ ಫಾಲ್ಗುಣದ
ಬಿದಿಗೆಯ ಚಂದ್ರನ ಕೋರೆ....
ನೋಡಿದರು ಹಿರಿ-ಕಿರಿಯರೆಲ್ಲ ಹಿಗ್ಗಿದರು
ಗೊಂದಣ ಮಿಾರಿತು ಮೇರೆ!

೨

ಕಣಿಹಲಗೆ-ತಮಟೆಗಳ ಉಲುಹು ಎಲ್ಲಕಡೆ
ಕೈ ಬಾಯ್ಗಳ ಬಲುಗುಲ್ಲು....
ಒಣಕುರುಳು-ಕಟ್ಟಿಗೆಯ ಕಳವಿನ ಕೂಗೇ
ಕೇಳತೊಡಗಿತೆಲ್ಲೆಲ್ಲು.

೩

ಅದೊ, ಕೊರಡು-ಕುರುಳುಗಳ ರಾಶಿ ಕಾಣುತಿದೆ
ಕಾಮನಗಸಿ ಬಯಲಲ್ಲಿ....
ರತಿದೇವಿಯೊಡನೆ ಕಾಮಣ್ಣ ಕುಳಿತಿಹನು
ಬೆಡಗಿನ ಮಂಟಪದಲ್ಲಿ !

೪

ಬಂತಿಂದು ಹೋಳಿಹುಣ್ಣಿವೆಯು ಕೇಳಿ ಕಾ-
ಮಣ್ಣನದಾಯಿತು ದಹನ....
ಕಳವಿಂದ ತಂದ ಕಟ್ಟಿಗೆಯ ಕುರುಳುಗಳ
ಉರಿಗೆ ಉರಿದ ಕಾಮಣ್ಣ !

೫

ಉರಿದಳಿದ ಕಾಮನವ ಅರೆಗಳಿಗೆಯೊಳೇ
ಮೂಡಿನಿಂತ ಮನ-ಮನದಿ....
ನೆರೆನೆರೆದು ಜನವು ಕಾಮನ ಗುಡಿ ಮೆರೆಸಿತು—
ಓಕುಳಿ ನನೆಸಿತು ಬೀದಿ.

೬

ಮನೆ-ಮನೆಗಳಲ್ಲಿ ಸವಿಹೋಳಿಗೆ-ಹುಗ್ಗಿಯು
ಹೊಸಬಟ್ಟೆಯ ಸಿಂಗಾರ ...
ಜನಮನದಿ ತುಂಬಿತಿದು ಕಾಮನ ಹುಣ್ಣಿವೆ
ಹುರುಪು-ಬಯಕೆ ಬಂಗಾರ!

# ಬಾಳ್-ಬಿಲ್ಲು

ಶ್ರೀ. “ ನಾರಂಗಿ ” ಭಟ್ಟ, ಮುಂಬಯಿ

ಹೆದೆಯನೇರಿಸಿ ನಿಲ್ಲು
ಬದುಕುವುದೆ ನಿನ್ನ ಗುರಿ
ಬಾಳೆ ನಿನ್ನಯ ಬಿಲ್ಲು
ದೂರ ಕ್ಷಿತಿಜದ ಬದಿಯೆ ಹಾಡಿ ಹಾರಿದೆ ಹಕ್ಕಿ
ಅದುವೆ ನಿನ್ನಯ ಬೇಟೆ, ಅದರ ಹೆಸರೇ “ ಬದುಕು ”
ಅತ್ತಿತ್ತ ಚಲಿಸೀತು, ಜೋಕೆ ಹೂಡಿರು ಗುರಿಯ
ಕಂಡುದೆಲ್ಲವು ಸತ್ಯ ಬರಿಸುಳ್ಳು ಕಾಣದದು
ನಂಬಿದನು ( ನಂಬಿ ಕೆಟ್ಟವರಾರು ? )

ನಿಂತು ನೋಡುವಿಯೇನು ದೂತ ? ಹೆದರಿಕೆಯೇನು—
ಇತ್ತ ಹರಿದಿದೆ ಹಳ್ಳ ಹಸುರ ಬಸಿರಿನ ಕೊಳ್ಳ
ತೂಗಲಾಡಿದೆ ಜೇನು ಬೀಗಿಯರಳಿವೆ ಹೂವು
ಕಣ್ಣುಸೆಳೆಯುವರಲ್ಲಿ ವಿಷಯವಿಷಕನ್ನೆಯರು
ಹೋದೀಯೆ ನೀ ಜೋಕೆ, ಬಾರೆ ನೀ ತಿರುಗಿ—

ಅತ್ತ ಇಳಿದಿದೆ ಹಿಮದ ಕಂದರ
ಸುತ್ತುಮುತ್ತಲು ಕತ್ತಲೆ
ಬೀಸಿಬಂದಿಹ ಕುಳಿರಗಾಳಿಗೆ
ಗೂಗೆ ಕೆತ್ತಿದೆಯುತ್ತರ

ನೋಡಿತ್ತ ಸೌಂದರ್ಯ, ನೋಡತ್ತ ನೈರಾಶ್ಯ
ಎರು ಇಳಿವಿನ ನಡುವೆ ನೀ ನಿಂತ ಕುಸುಮಶರ
ಬಾಗಿ ಮೂಸದಿರಯ್ಯ; ದೌರ್ಬಲ್ಯ ಹೇಡಿತನ
ಆತುಕೊತಿಹ ಬದುಕು-ಓತು ಬಂದಿಹ ಬಾಳು
ಒಂದನೊಂದನು ಕೂಡೆ
ಬಲಿಸಿಕೊಳ್ಳೆ, ಕಣ್ ತೆರೆಸೆ
ಹೂಡಿ ಹೊಡೆ, ನೋಡಿ ನಡೆ
ಇದುವೆ ಮಂಗಲಕಾಲ, ಹರಕೆಯಕ್ಷತೆ ಸೇಸೆ
ಅಳುಕದಿರು ಬಳುಕದಿರು
ನೇರದಾರಿಯೆ ದಾರಿ
ಬದುಕುವುದೆ ನಿನ್ನ ಗುರಿ
ಬಾಳೆ ನಿನ್ನಯ ಬಿಲ್ಲು
ಹೆದೆಯನೇರಿಸಿ ನಿಲ್ಲು !

# ಭಾಷಾನುಗುಣ ರಾಜ್ಯರಚನೆಯ ಕಲ್ಪವೃಕ್ಷ

( ಒಂದು ವಿಚಾರವಿಶ್ಲೇಷಣೆ )

ಶ್ರೀ. ಶಂ. ಬಾ. ಜೋಶಿ, ಧಾರವಾಡ

卐

**ಭಾಷೆ–ಸಂಸ್ಕೃತಿಗಳ ಅಭಿವೃದ್ಧಿಯ ಆದರ್ಶವನ್ನಿರಿಸಿಕೊಂಡು ಹೊರಟ ಭಾಷಾನುಗುಣ ಪ್ರಾಂತ ರಚನೆಯ ಬೇಡಿಕೆ, ಇಂದಿನ ಆಡಳಿತದ ಅಧಿಕಾರದಾಶೆಯ ಭಾಷಾನುಗುಣರಾಜ್ಯರಚನೆಯ ಬೇಡಿಕೆ—ಇವೆರಡರ ಹಿಂದೆ ಇರುವ ಮನೋಭಾವಗಳ ವಿಶ್ಲೇಷಣೆ ಈ ಬರೆಹದಲ್ಲಿದೆ.**

卐

ಭಾಷಾನುಗುಣ ರಾಜ್ಯರಚನೆಯ ತತ್ತ್ವವನ್ನು ಮೊತ್ತ-ಮೊದಲು ಕಂಡುಹಿಡಿದವನು ದೇವರಿಗಿಂತಲೂ ದೊಡ್ಡವನೆನ್ನ-ಬಹುದೆ? ಏಕೆಂದರೆ, ಜಾತಿಗಳನ್ನು ದೇವರೇ ಹುಟ್ಟಿಸಿದನೆಂದು ಕೆಲವರು ನಂಬುವರು. ಇದು ನಿಜವಿದ್ದರೆ, ಭಾಷಾನುಗುಣ 'ರಾಜ್ಯ'ಗಳನ್ನು ರಚಿಸುವ ಕಲ್ಪನೆಯನ್ನು ಹುಡುಕಿ ತೆಗೆದವನು ದೇವರಿಗಿಂತ ಎಷ್ಟೋ ಮಟ್ಟಿಗೆ ಬಲ್ಲಿದನೆಂದು ಹೇಳಬಹುದು. ಜಾತೀಯತೆಯು ಭಾರತದ ಅವನತಿಗೆ ಕಾರಣವಾಗಿದೆ. ಅದನ್ನು ಹೋಗಲಾಡಿಸುವ ಪ್ರಯತ್ನವು ದೇಶದಲ್ಲಿ ಅನೇಕ ಬಗೆಯಲ್ಲಿ ನಡೆದಿದೆ. 'ಜಾತೀಯತೆ'ಯನ್ನು ನಷ್ಟಪಡಿಸಿ, ಎಲ್ಲ ಜನರನ್ನೂ ಒಟ್ಟುಗೂಡಿಸಲು ಅನುಕೂಲ ಒದಗಿಸಿ ಕೊಡಲು ಭಾಷಾಬಂಧುತ್ವವೇ ಒಂದು ದೊಡ್ಡ ತತ್ತ್ವ. ಭಾಷಾನು-ಗುಣ 'ಪ್ರಾಂತ'ವಿರಚನೆಯು ಈಗ ಹಿಂದೆ ಬಿದ್ದು, ಭಾಷಾನುಗುಣ 'ರಾಜ್ಯ' ರಚನೆಯು ಸ್ವರಾಜ್ಯದಲ್ಲಿ ತಲೆದೋರಿದೆ. ಸ್ವರಾಜ್ಯ ಸಿಗುವುದಕ್ಕೆ ಮೊದಲು 'ಪ್ರಾಂತ'ರಚನೆಯ ತತ್ತ್ವವು ಕಿವಿಗೆ ಬೀಳುತ್ತಿತ್ತು. ಆದರೆ ಆ ಮಹಾತತ್ತ್ವವು ಈಗ 'ವಿಕಾಸ' ಹೊಂದುತ್ತ ನಡೆದಿದೆ. ಭಾಷಾನುಗುಣ 'ರಾಜ್ಯ'ರಚನೆಗೆ ತಳಹದಿಯಾದ ತತ್ತ್ವವಾವುದು? ಭಾಷಾಬಂಧುತ್ವವೇ ಆ ತತ್ತ್ವವು! ಅದೇ ಅದರಲ್ಲಿ ಅಡಗಿದ ಸೂತ್ರವು! ಒಂದು ಭಾಷೆಯನ್ನು ಆಡುವವರೆಲ್ಲರೂ ಅಣ್ಣ–ತಮ್ಮಂದಿರು. ಒಂದೇ ತಾಯಿಯ ಮಕ್ಕಳು. ಕನ್ನಡ ಮಾತಾ-ಡುವವರೆಲ್ಲರೂ ಕನ್ನಡ ತಾಯಿಯ ಮಕ್ಕಳು. ಮರಾಠಿ ಮಾತನಾಡು-ವವರೆಲ್ಲರೂ 'ಮರಾಠಿ' ತಾಯಿಯ ಮಕ್ಕಳು! ಕನ್ನಡ ಮಾತೃ-ಭಾಷೆಯುಳ್ಳವರೆಲ್ಲರೂ ಕನ್ನಡಿಗರು. ಬ್ರಾಹ್ಮಣ, ಬ್ರಾಹ್ಮಣೇತರ ಮುಂತಾದ ಜಾತೀಯತೆಯು ಭಾಷಾಬಂಧುತ್ವದ ತತ್ತ್ವದಿಂದ ಅಳಿಯಲಿದೆ (ಅಂತೆ)! ಇದು ನಮ್ಮವರು ಯಾರು, ಪರರು ಯಾರು ಎಂಬುದನ್ನುಗೊತ್ತುಪಡಿಸುವ ಹೊಸ ತತ್ತ್ವವು! ಕನ್ನಡ ಮಾತಾಡುವ ಬ್ರಾಹ್ಮಣರು, ಕನ್ನಡ ಮಾತಾಡುವ ಲಿಂಗಾಯತರು, ತಮ್ಮ 'ಜಾತಿ' ಭೇದವನ್ನು ಮರೆತು, ಪ್ರೇಮದಿಂದ ಭಾಷಾ'ಬಂಧು'ಗಳೆಂದು ಒಂದೇ ತಾಯಿಯ ಮಕ್ಕಳೆಂದು ಒಕ್ಕಟ್ಟಾಗಿ ಬಾಳುತ್ತಿದ್ದಾರೆ ಎಂದು ನನ್ನ ನಂಬುಗೆ. ಭಾಷಾಬಂಧುತ್ವ ಮತ್ತು ಭಾಷಾನುಗುಣರ 'ರಾಜ್ಯ' ಇವುಗಳ ಅಡಿಗಲ್ಲಾದ 'ಭಾಷಿಕತೆಯು' 'ತಾರ್ಕಿಕ ಕೊನೆ' ಯನ್ನು ಮುಟ್ಟಿ, ಅದರ ಫಲಿತವಾತ ಅತ್ಯಂತ ಸ್ವಾಗತಾರ್ಹವಾದ ಹೊಸ ಕಲ್ಪನೆಯೊಂದು ಈಗ ವಿಚಾರಕ್ಷೇತ್ರದಲ್ಲಿ ಒಡಮೂಡಲಿದೆ. "ನನ್ನ ನುಡಿ ಕನ್ನಡ", "ನನ್ನ ನಾಡು ಕನ್ನಡ" ಈ ಭಾವಬೋಧಕ ಕೂಗನ್ನು ನಾವು ಎಷ್ಟೋ ವರ್ಷಗಳಿಂದಲೂ ಸ್ವಾಭಿಮಾನಿಗಳಾದ ಕನ್ನಡಿಗರ ಬಾಯಿಂದ ಕೇಳುತ್ತಾ ಬಂದಿದ್ದೇವೆ; ಆದರೆ ಇದು ಹಳೆಯ ಕಲ್ಪನೆ! ಬರಿ ನನ್ನ 'ನುಡಿ' ಕನ್ನಡ ನನ್ನ 'ನಾಡು' ಕನ್ನಡ—ಎಂದು ಎನ್ನುವುದರಲ್ಲಿ, ಸಾಕಷ್ಟು 'ಸ್ವಾಭಿಮಾನ' ಕಂಡು ಬರುವುದಿಲ್ಲ. ಇದಕ್ಕೂ ಹಿರಿಯ ಸತ್ಯ ಸುದೈವದಿಂದ ಈಗ ನಮಗೆ ಕನ್ನಡಿಗರಿಗೆ ಹೊಳೆದಿದೆ. "ನನ್ನ 'ನಾಡು' ಕನ್ನಡ; ನನ್ನ 'ನುಡಿ' ಕನ್ನಡ" ಇಷ್ಟನ್ನೇ ಯಾವನು ನಿಜವಾಗಿ ಅನ್ನಬಲ್ಲನೋ ಅವನು 'ಅಚ್ಚ' ಕನ್ನಡಿಗನಾಗಲಾರನು. ಇವೆರಡರ ಜೊತೆಗೆ 'ನನ್ನ ರಕ್ತ ಕನ್ನಡ'* ಎಂದು ಯಾವನು ಎನ್ನಬಲ್ಲನೋ, ಅವನೇ ನಿಜವಾದ ಅಚ್ಚ ಕನ್ನಡಿಗನು. ಯಾರ ರಕ್ತವು 'ಕನ್ನಡ ರಕ್ತ'ವಿದೆಯೋ ಅವರೇ

* ಯಾವುದೇ ಚಳವಳಿಯನ್ನು ನಡೆಸುವ ಜನರು, ಜನಸಾಮಾನ್ಯರಲ್ಲಿ ಒಂದು ಬಗೆಯ ರಾಜಕವೃತ್ತಿಯನ್ನು ಹುಟ್ಟಿಸುವಾಗ, ಈ ಬಗೆಯ ಆಭಾ-ಸಾತ್ಮಕ ಮಾತುಗಳನ್ನು ಆಡುತ್ತಿರುವುದು, ಎಲ್ಲ ಕಡೆಗೂ ಕಂಡುಬರುವ ಸಂಗತಿ. ತತ್ತ್ವದ ಒರೆಗಲ್ಲಿಗೆ ಹಚ್ಚಿ ನೋಡಿದಾಗ, ಈ ಮಾತುಗಳ ಪೊಳ್ಳು-ತನವು ವ್ಯಕ್ತವಾಗಬಹುದಾದರೂ, ಪ್ರಚಾರಕಾರ್ಯಕ್ಕೆ ಇವು ಸಹಕಾರಿ-ಗಳಾಗಿರುವುವು. ಕರ್ನಾಟಕ ಪ್ರಾಂತದಲ್ಲಿಯೆ ಕೊನೆಯ ವರೆಗೂ ಇದ್ದು, ಈ ನಾಡಿನ ಹಿತಸಂಬಂಧಗಳೇ ತಮ್ಮ ಹಿತಸಂಬಂಧಗಳೆಂದೂ, ಈ ನಾಡಿನ ಅಭ್ಯುದಯವೇ ತಮ್ಮ ಗುರಿಯೆಂದೂ ತಿಳಿದು ನಡೆಯುವವರು, ತಮ್ಮ ಮನೆ-ಗಳಲ್ಲಿ ಯಾವ ಭಾಷೆಗಳನ್ನು ಆಡಿದರೇನು, ಅವರು ಹದಿನಾರಾಣೆ ಕನ್ನಡಿಗರೆ! ಕರ್ನಾಟಕದಲ್ಲಿಯೇ ಇದ್ದು, ಕನ್ನಡ ನಾಡಿನ ಕಷ್ಟ–ನಷ್ಟಗಳ—ಸುಖ-ಸಮಾಧಾನಗಳ—ಸಂಬಂಧವು ತಮಗೆ ಸ್ವಲ್ಪವೂ ಇಲ್ಲದಂತೆ ನಡೆದುಕೊಳ್ಳು-ವವರು, ಮನೆಯಲ್ಲಿ ಯಾವ ಮಾತನ್ನಾಡಿದರೂ ಅವರು ಕರ್ನಾಟಕ ದ್ರೋಹಿಗಳು.

—ಸಂಪಾದಕ 'ಜಯಂತಿ'.

ನಿಜವಾದ ಕನ್ನಡಿಗರು. ಕನ್ನಡ ಮಾತೃಭಾಷೆಯಿದ್ದವರೆಲ್ಲರ ರಕ್ತವು ಕನ್ನಡರಕ್ತ! ಕನ್ನಡ ಮಾತೃಭಾಷೆ ಇದ್ದವರು ಬ್ರಾಹ್ಮಣರೇ ಇರಲಿ, ಲಿಂಗಾಯತರೇ ಇರಲಿ, ಅವರೆಲ್ಲರ ರಕ್ತವು ಒಂದೇ! ಅವರು "ರಕ್ತ ಕನ್ನಡಿಗರು"! ಕನ್ನಡೇತರ ಯಾವುದೇ ಭಾಷೆಯು ಮಾತೃಭಾಷೆಯಿದ್ದವರು ನಿಜವಾದ ಕನ್ನಡಿಗರಲ್ಲ! ಅವರು 'ರಕ್ತ' ಕನ್ನಡಿಗರಲ್ಲ! ಸುಪ್ರಸಿದ್ಧ ಕನ್ನಡಸಾಹಿತಿಗಳಾದ ಶ್ರೀಮಾನ್ ಮಾಸ್ತಿ, ಶ್ರೀಮಾನ್ ಬೇಂದ್ರೆ ಇವರು ರಕ್ತಕನ್ನಡಿಗರಲ್ಲ! ಅವರು ಒಂದು ವೇಳೆ ಕನ್ನಡದ ಸೇವೆಯನ್ನು ಮಾಡಿದರೂ, ಅದು ನಿಜವಾದ ಸೇವೆಯಲ್ಲ. 'ರಕ್ತ' ಕನ್ನಡಿಗರೇ ನಿಜವಾದ ಕನ್ನಡಿಗರು! ಅವರೇ ಅಚ್ಚಕನ್ನಡಿಗರು! ಬೇರೆಯವರೆಲ್ಲರೂ ಹೊಟ್ಟೆಹೊರಕೊಳ್ಳಲಿಕ್ಕೆ ಪರಪ್ರಾಂತದಿಂದ ಬಂದ 'ಪರಕೀಯ ಜನರು'! ಅವರು ಕರ್ನಾಟಕದಲ್ಲಿ ಇರುವುದು ಕನ್ನಡಿಗರ ಸಹಿಷ್ಣುತೆಯಿಂದಲೆ!

ನಿಜವಾಗಿ ನೋಡಿದರೆ 'ರಕ್ತ' ಕನ್ನಡಿಗರೇ ಕರ್ನಾಟಕಪ್ರಾಂತದ ಒಡೆಯರು. ಕರ್ನಾಟಕವು ಕನ್ನಡಿಗರ 'ರಾಜ್ಯ.' ಕರ್ನಾಟಕವು ಒಂದು 'ಪ್ರಾಂತ'ವೆಂಬ ಕಲ್ಪನೆ ಹಳೆಯದು. ಅದನ್ನು ನಾವು ಈಗ ಬಿಟ್ಟುಬಿಡಬೇಕು. ನಮ್ಮ ಘಟನೆಯಲ್ಲಿ ಕೂಡ ಪ್ರಾಂತಗಳಿಗೆ 'ರಾಜ್ಯ' ಎಂದು ಹೆಸರಿದೆ ಅಲ್ಲವೇ? ಇದರಿಂದ ಸಿದ್ಧವಾಗುವ ಮಾತು ಕೂಡ ಇರುವುದು. ರಾಜ್ಯವೆಂದರೆ 'ಪ್ರಾಂತ'ವಲ್ಲ; ರಾಜ್ಯವೆಂದರೆ 'ರಾಷ್ಟ್ರ'! ಭಾರತದ ರಾಜ್ಯಘಟನೆಗೆ 'ಯೂನಿಯನ್' ಎಂದು ಹೆಸರಿದ್ದುದು ಇದನ್ನೇ ಸೂಚಿಸುವುದು.

ಭಾರತವು 'ರಾಜ್ಯ'ಗಳ 'ಯೂನಿಯನ್' ಇರುವುದು. ಭಾಷಾಬಂಧುತ್ವದ ಕಲ್ಪನೆಯೇ ಭಾಷಾನುಗುಣ ರಾಜ್ಯರಚನೆಯ ತಳಹದಿಯು. ಇದು ನಮ್ಮವರಾರು ಹೆರವರಾರು—ಎಂಬುದನ್ನು ನಿರ್ಣಯಿಸುವ 'ಸ್ವಪರ'ಭಾವದ ಹೊಸತತ್ತ್ವ. ಕನ್ನಡಿಗರು ಬೇರೆ ಬೇರೆ ಜಾತಿಯವರಿದ್ದರೂ ಸಹ, ಹೊಸಯುಗದ ಈ 'ಸ್ವ-ಪರ'ಭಾವದ ತತ್ತ್ವದ ಮೂಲಕ ಅಣ್ಣ-ತಮ್ಮಂದಿರಂತೆ ಒಬ್ಬರನ್ನೊಬ್ಬರು ಬಗೆಯುತ್ತಿರುವುದು, ಇದು ಜಗತ್ತಿನ ಇತಿಹಾಸದಲ್ಲಿಯೇ ಅಪೂರ್ವವಾದ ಸಂಗತಿ! ಈಪೊತ್ತಿನ ಕರ್ನಾಟಕ 'ಪ್ರಾಂತ'ವು, ನಾಳೆಯ ಕರ್ನಾಟಕ 'ರಾಜ್ಯ'ವು! ಅದರಲ್ಲಿ 'ರಕ್ತ' ಕನ್ನಡಿಗರಷ್ಟೆ ವಾಸಿಸಲು ಅರ್ಹರು; ಉಳಿದವರೆಲ್ಲರೂ ಇಲ್ಲಿ ವಾಸಿಸಬೇಕಾದರೆ 'ರಕ್ತ' ಕನ್ನಡಿಗರ ಅನುಮತಿಯಿಂದಲೇ ಹೊರತು ಅವರಿಗೆ ಇಲ್ಲಿ ವಾಸಿಸಲು 'ಹಕ್ಕು' ಇಲ್ಲ. 'ರಕ್ತ'ಕನ್ನಡಿಗರೆಲ್ಲರೂ 'ಅನಾದಿ'ಕಾಲದಿಂದ ಕರ್ನಾಟಕ 'ರಾಷ್ಟ್ರ'ದ ನಾಗರಿಕರು. ಒಂದು ಬಗೆಯಲ್ಲಿ ಅವರೇ ಕರ್ನಾಟಕದ 'ಆದಿವಾಸಿ'ಗಳು!

ಈ ಹೊಸ ಭಾಷಾಬಂಧುತ್ವದ ಕಲ್ಪವೃಕ್ಷವು ಮಹಾರಾಷ್ಟ್ರದಲ್ಲಿಯೂ ಕೂಡ ಬೆಳೆಯುತ್ತಿದ್ದು, ಬ್ರಾಹ್ಮಣರು ಮತ್ತು ಮರಾಠಾ-ಬ್ರಾಹ್ಮಣರು, ಮತ್ತು ಜೈನರು ಇವರೆಲ್ಲರೂ 'ಮರಾಠಿ' ರಕ್ತದ ಮೂಲಕ ಎಷ್ಟು ಪ್ರೇಮದಿಂದ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ನೋಡಿ, ದೇವರಿಗೂ ಕೂಡ ಸಕೌತುಕ ಆನಂದವಾಗದಿರದು. ಅವನು ನಿರ್ಮಿಸಿದ 'ಜಾತಿ'ಗಳನ್ನು ನಷ್ಟಪಡಿಸಿ ಜಾತಿಭೇದದ ಆಚೆಗೆ ಬೇರೆ ಬೇರೆ ರಾಷ್ಟ್ರಗಳನ್ನು ನಿರ್ಮಿಸಲು ಅನುಕೂಲವನ್ನು ಒದಗಿಸಿಕೊಟ್ಟ ದೊಡ್ಡತತ್ತ್ವವಿದು! ಇದು ಈಶ್ವರನಿರ್ಮಿತ ಜಾತಿಗಳ ಮೇಲೆ ಮನುಷ್ಯನಿರ್ಮಿತ ಜಾತಿಯ ಗೆಲವು! ಮಹಾರಾಷ್ಟ್ರಕ್ಕೆ ಭಾಷಾನುಗುಣ ರಾಜ್ಯತತ್ತ್ವದ ಮೇರೆಗೆ ಬೇರೆ ರಾಜ್ಯವು ಏಕೆ ಬೇಕು?—ಎಂಬುದನ್ನು ಸವಿಸ್ತರವಾಗಿ ತಿಳಿಸಿ ಹೇಳುವ 'ಕೈಫಿಯತ್ತು'ನಲ್ಲಿ ಕಾಣಿಸಿದ ಎಲ್ಲ ಕಾರಣಗಳನ್ನು ನೋಡಿದರೆ, 'ಮಹಾರಾಷ್ಟ್ರವೆಂದರೆ ಒಂದು ಬೇರೆ ರಾಷ್ಟ್ರವೆಂದು ಅಲ್ಲಿಯ ಜನರು ಭಾವಿಸುತ್ತಿರುವರು' ಎಂಬುದರಲ್ಲಿ ಎಳ್ಳಷ್ಟೂ ಸಂದೇಹವುಳಿಯುವುದಿಲ್ಲ. ಭಾಷಿಕತೆಯ ಕಲ್ಪವೃಕ್ಷದ ಅತ್ಯಂತ ಸಿಹಿಯಾದ ಫಲವಿದು! ಈ ಕಲ್ಪವೃಕ್ಷವನ್ನು ಹಚ್ಚಿದವನಿಗೆ ನಾವು ಭಾರತೀಯರು ಎಷ್ಟು ಧನ್ಯವಾದಗಳನ್ನು ಸಲ್ಲಿಸಿದರೂ ಸಾಲದು.

ಕೆಲವು ದಿನಗಳ ಹಿಂದೆ, ಸುಮಾರು 'ಹತ್ತು' ವರ್ಷಗಳ ಹಿಂದೆ ಪ್ರಸಿದ್ಧವಾದ ಒಂದು ಶಾಲೆಯ ಪಠ್ಯಪುಸ್ತಕವು ಸಹಜವಾಗಿ ಕಣ್ಣಿಗೆ ಬಿತ್ತು. ಪುಟ ತಿರುವುವಾಗ 'ನಮ್ಮ ದೇಶ' ಎಂಬ ಒಂದು ಪಾಠದಲ್ಲಿ ಓದಿದೆ. ಅದರಲ್ಲಿದ್ದ ಈ ವಿಷಯವನ್ನು ಓದಿ ಮೆಚ್ಚಿದೆ:—

"ಕನ್ನಡನಾಡು ಹಿಂದುಸ್ಥಾನದ ಒಂದು ಭಾಗ. ಹಿಂದುಸ್ಥಾನದಲ್ಲಿ ನಮ್ಮ ಸಹೋದರರಾದ ತೆಲುಗರು ತಮಿಳರು ಮರಾಠಿಯವರು ಗುಜರಾಥಿ-ಬಂಗಾಳಿಗಳು ಮೊದಲಾದವರೂ ಇರುವರು. ಆಡುವ ಮಾತಿನಲ್ಲಿ ಭೇದವಿದ್ದರೂ, ನಮ್ಮೆಲ್ಲರ ನಾಡಿಯಲ್ಲಿಯ ರಕ್ತ ಒಂದೇ; ಮನದ ರೀತಿ ಒಂದೆ"

ಆದರೆ ಈ ವಿಚಾರ ಹಳೆಯದಾಯಿತು. ಸ್ವರಾಜ್ಯದಲ್ಲಿಯ ಹೊಸ ಕಲ್ಪನೆಗಳ ಬಿರುಗಾಳಿಯಲ್ಲಿ ಆರಿ ಹೋಗಲಿರುವ 'ಹಳೆ ವಿಚಾರದ ಜ್ಯೋತಿಯೇ ಇದು?

ಇದೆಲ್ಲವೂ ಒಂದು ದೊಡ್ಡ ಭ್ರಮೆ. ಒಂದು ಭಾಷೆಯನ್ನಾಡುವವರು ಎಲ್ಲರೂ ನಿಜವಾಗಿಯೂ ಒಂದು—ಎಂಬುದು ಸತ್ಯವೂ ಅಲ್ಲ; ಧ್ಯೇಯವೂ ಅಲ್ಲ. ಪ್ರಾಂತದಿಂದ ಹೊರಗೆ ಹೋದ ಜನರಲ್ಲಿ ಕೆಲಮಟ್ಟಿಗೆ ಕೆಲಕಾಲ ಮರ್ಯಾದಿತ ಅರ್ಥದಲ್ಲಿ ಕಂಡುಬರುವ ಸಂಗತಿ ಇದು. ಈ ಸಾಪೇಕ್ಷ(Relative)ವಾಗಿದ್ದ ತತ್ತ್ವವನ್ನು ಪೂರ್ಣ ನಿರಪೇಕ್ಷ ತತ್ತ್ವವೆಂದು ಅದನ್ನು ಎತ್ತರದ ಮಟ್ಟದಲ್ಲಿ ನಾವು ಏರಿಸಿಕುಳ್ಳಿರಿಸಿದ್ದೇವೆ.

ಭಾಷಾಬಂಧುತ್ವವೇ ಪೂರ್ಣ 'ಸತ್ಯವಾಗಿದ್ದರೆ' ಉತ್ತರ ಕರ್ನಾಟಕದವರನ್ನು ಕುರಿತು ಮೈಸೂರವರ ವೃತ್ತಿ ಈಗಿನಂತೆ ಇರುತ್ತಿರಲಿಲ್ಲ. ನಮ್ಮ ದೇಶದಲ್ಲಿ ಭಾಷಾಬಂಧುತ್ವ ಒಂದು ಭ್ರಮೆ; ಜಾತಿಯತೆಯೇ ಕಟುಸತ್ಯ. ರಾಷ್ಟ್ರೀಯತೆ—ಎಲ್ಲಿಯೋ ದೂರದಲ್ಲಿದ್ದ ಆದರ್ಶ.

# ಕಾಮದಹನ

( ಸಣ್ಣಕತೆ )

ಶ್ರೀ. ಎಲ್. ಡಿ. ಸಭಾಹಿತ, ಮುಂಬಯಿ

卐

**ಸಮಾಜದ ಸುವ್ಯವಸ್ಥೆಗಾಗಿ ವ್ಯಕ್ತಿ ತನ್ನ ಕಾಮವನ್ನು ದಹನಮಾಡುವುದು ಸಂಸ್ಕೃತಿಯ ಲಕ್ಷಣ. ವೈಯಕ್ತಿಕ ಕಾಮಲಾಲಸೆಯ ಬೆನ್ನುಹತ್ತಿ, ಸಮಾಜದ ಅವ್ಯವಸ್ಥೆಗೆ ಕಾರಣವಾಗುವುದು ಅಸಂಸ್ಕೃತಿಯ ಲಕ್ಷಣ. ಶಶಿಕಲೆ, ಅನಂತ ಇವರು ಈ ಎರಡೂ ಲಕ್ಷಣಗಳ ಎರಡು ಮಾದರಿಗಳಾಗಿದ್ದಾರೆ.**

卐

ನಡೆದುಬಂದ ದಾರಿಯನ್ನು ಹಿಂದೆ ಹಾಕುತ್ತ, ದೇವೀಮನೆ-ಘಟ್ಟವನ್ನು ಇಳಿಯುತ್ತಿದ್ದ ಮೋಟಾರು ವೇಗದಿಂದ ಸಾಗುತ್ತಿದ್ದರೂ, ಅದರಲ್ಲಿ ಕುಳಿತಿದ್ದ ಅನಂತನ ಮನೋವೇಗದೊಂದಿಗೆ ಅದು ಸ್ಪರ್ಧಿಸಲಾರದಾಗಿತ್ತು. ಆ ಡ್ರಾಯ್ವರನ ಮೇಲೆ ಸಿಟ್ಟು ಬರುತ್ತಿದ್ದರೂ ಅದನ್ನವನು ಕಾರಿಕೊಳ್ಳಲಾರ. ಅನಂತನ ಅಂತರಂಗದಲ್ಲಿ ಅಸ್ಟು ಉರಿಯೆದ್ದಿತ್ತು. ಆದರೆ ಹೊಗೆ ಕಾರುತ್ತಿದ್ದ ಆ ಮೋಟಾರು, ಉರಿಯುವ ಬೆಂಕಿಗೆ ಗಾಳಿಹಾಕಿದಂತೆ ಸಾಗಿದ್ದ ಆ ಮೋಟಾರು, ದಾರಿಯಧೂಳವನ್ನು ಒಳಗೆಲ್ಲ ತುಂಬಿಸಿ, ಮುಂದಿನ ಸೀಟಿನಲ್ಲಿದ್ದ ಅನಂತನಿಗೆ ಉಸಿರುಗಟ್ಟಿಸಿ ಇನ್ನಷ್ಟು ಅವನ ಸಿಟ್ಟನ್ನು ಹೆಚ್ಚಿಸುತ್ತಿತ್ತು. ಆದರೆ ಅವನು ಬಾಯಿಬಿಡಲಾರ. ಸಾಮಾಜಿಕನಾದವನು ಶಿಷ್ಟಾಚಾರಗಳನ್ನಾದರೂ ಪಾಲಿಸಬೇಕಲ್ಲ! ಆ ಮೋಟಾರಿಗೆ ಉಪಕಾರಮಾಡಲು ಅವನು ಪ್ರಯಾಣ ಬೆಳೆಸಿದ್ದಾನೆಯೆ? ಅವನಿಗೆ ಬೇಕಾದದ್ದು ಅದರ ಉಪಕಾರ. ಅದನ್ನು ಅವನೂ ಬಲ್ಲ. ಅವನ ಆಕ್ಷೇಪವೇನಿದ್ದರೂ, ತನ್ನ ಬಯಕೆಯ ವೇಗಕ್ಕೆ ಅದು ನಡೆಯುತ್ತಿಲ್ಲವಲ್ಲ—ಎಂಬುದಷ್ಟೇ. "ಹಾಳು ಮೋಟಾರು" ಎಂದು ಅವನು, ಮನದಲ್ಲಿ ಎಷ್ಟೇ ಅದನ್ನು ಶಪಿಸಿದರೂ, ಅವನಿಗಿದ್ದ ಆತುರ ಆ ಮೋಟಾರಿಗೇನು ಬರಬೇಕು? ಪ್ರಿಯಾರಾಧಕನ ಮಿಲನದ ಆತುರ ಬಡ ಮೋಟಾರಿಗೆಲ್ಲಿಂದ ಬರಬೇಕು?

ಎರಡು ದಿನಗಳ ಹಿಂದೆ ಇದೇ ಮೋಟಾರು ಅವನನ್ನು ಹೊನ್ನಾವರದಿಂದ ಶಿರಸಿಗೆ ಹೊತ್ತು ತಂದಿತ್ತು. ನಾಳೆಯ ಮಿಲನದ ಆನಂದದ ಸ್ಮೃತಿಯಲ್ಲಿ ಆ ಅಗಲಿಕೆ ಅವನಿಗಾಗ ಅಷ್ಟು ಎನಿಸಿರಲಿಲ್ಲ. ಅನಿವಾರ್ಯತೆಯಿಂದ ಈ ಎರಡು ದಿನ ಹೇಗೋ ಅದನ್ನು ಮರೆಸಿಕೊಂಡವನಂತಿದ್ದ. ಹಾಗೆ ಅವನು ತೋರಿಸಿಕೊಳ್ಳಲೇಬೇಕಾಗಿತ್ತು. ಹೆಂಡತಿಯೆಂಬವಳ ಎದುರು, ಮತ್ತೊಬ್ಬ ಹೆಣ್ಣನ್ನು ನೆನೆಸಿಕೊಳ್ಳುವ ಎದೆ ಯಾವ ಗಂಡಿಗೆ ಇದೆ?

ತೊಟ್ಟಿಲು ಸಂಭ್ರಮಕ್ಕೆ ಹೆಂಡತಿಯನ್ನು ತವರಿಗೆ ಕಳುಹಿಸುವಾಗ "ಲಲಿತಾ, ಇನ್ನೇನು ನಿನ್ನ ಕೈಯಲ್ಲಿ ಒಬ್ಬ ಪೋರ ಬರುತ್ತಾನೆ. ಆ ಸಂಭ್ರಮದಲ್ಲಿ ನಿನಗೆ ನನ್ನ ನೆನಪಾದರೂ ಆಗುವುದೋ ಇಲ್ಲವೊ!" ಎಂದು ಅವನು ನುಡಿದಾಗ "ನಾನು ದೂರವಾದಮೇಲೆ ನೀವೇ ನನ್ನನ್ನು ಮರೆಯುತ್ತೀರೇನೋ? ಆ ಮಗುವನ್ನು ನೋಡಿದಾಗಲೆಲ್ಲ, ಅದರ ತಂದೆಯ ನೆನಪು ನನಗೆ ಆಗದೇ ಇರುತ್ತದೆಯೇ? ನೀವು ಅಂದಂತೆ ಗಂಡೇ ಆಗಲಿ—ಎಂದು ಆಶೀರ್ವದಿಸಿರಿ" ಎಂದು ಅವಳು ಉತ್ತರಿಸಿದ್ದಳು—ತನ್ನಬೇಕು-ಬೇಡಗಳೆರಡನ್ನೂ ಬೆರೆಸಿ.

ಗಂಡೇ ಜನಿಸಿದಾಗ ಲಲಿತಳಿಗೆ ನಿಜಕ್ಕೂ ಹೆಮ್ಮೆಯೆನಿಸಿತ್ತು. ಯಜಮಾನರ ಅಪೇಕ್ಷೆಯನ್ನು ತಾನು ಪೂರಯಿಸಿದೆನೆಂಬ ಸಂತಸ-ಭಾವ ಅದರಲ್ಲಿ ಪೂರ್ಣ ಬೆರೆತಿತ್ತು. ಅದೇ ಆನಂದ ಹಂಚಿಕೊಡುವುದಕ್ಕೆಂದೇ ಅವಳು ತಂದೆಯಿಂದ—ಒತ್ತಾಯಿಸಿ—ಕಾಗದ ಬರೆಯಿಸಿದ್ದಳು. ತಾನು ಮೈಲಿಗೆ ಕಳೆದು ಒಳಗೆ ಬರುವ ದಿನವೇ ಇಲ್ಲಿಗೆ ಬಂದು, ತಲ್ಪಿ, ಮಗುವಿಗೆ ನಾಮಕರಣ ಮಾಡಿ, ತೊಟ್ಟಿಲು ತುಂಬಿಸುವ ಸಂಭ್ರಮ ಮುಗಿಸಿಕೊಂಡು ಹೋಗಬೇಕು—ಎಂದು.

ಅವಳನ್ನು ತವರಿಗೆ ಕಳುಹುವಾಗಿನ ಮನಃಸ್ಥಿತಿಯಲ್ಲೇ ಇದ್ದಿದ್ದರೆ, ಆ ಕರೆಯಲ್ಲಿದ್ದ ಕಾವು—ಕಾತರ ಎರಡೂ ಅನಂತನಿಗೆ ಸಾಕಷ್ಟು ವೇದ್ಯವಾಗುತ್ತಿದ್ದುವೆಂಬುದರಲ್ಲಿ ಅನುಮಾನವಿರಲಿಲ್ಲ. ತಾನು ಒಂದು ಗಂಡುಮಗುವಿನ ತಂದೆಯಾದೆನೆಂಬುದು ಪ್ರಿಯವಾದಷ್ಟೇ ಹೆಮ್ಮೆಯ ಮಾತಾಗಿದ್ದರೂ, ಇಲ್ಲಿಂದ ಈಗ ಹೊರಡುವುದು ಅವನಿಗೆ ಬೇಕಾಗಿರಲಿಲ್ಲ. ಅವಳು ಅಂದು ಹೊರಟುನಿಂತಾಗ ಯಾವ ಅಪೇಕ್ಷೆಯನ್ನವನು ವ್ಯಕ್ತಪಡಿಸಿದ್ದನೋ ಅದೀಗ ಫಲಿಸಿತ್ತು. ಆದರಂತೆಯೇ ಅವಳು ಅಪೇಕ್ಷಿಸದ ಮಾತೂ ನಿಜವಾಗಿತ್ತು.

ಲಲಿತಾ ಇಲ್ಲಿ ಇದ್ದಾಗಲೂ, ಶಶಿಕಲೆಯನ್ನವನು ದಿನವೂ ಕಾಣುತ್ತಿದ್ದ. ಅವನು ವಾಸವಾಗಿದ್ದುದೇ ಅವಳ ಮನೆಯಾಗಿದ್ದು, ನೆರೆಯಾಗಿದ್ದ ಮೇಲೆ ಕಾಣದೆ ಇರಲು ಸಾಧ್ಯವೆ? ಆದರೆ ಅಂದಿಗೆ-ಇಂದಿಗೆ ಎಷ್ಟೊಂದು ಅಂತರ!

ಶಶಿಕಲಾ ಲಲಿತಳಿಗಿಂತ ಒಂದೆರಡು ವರ್ಷಗಳ ಮಟ್ಟಿಗೆ ಹಿರಿಯಳಾಗಿರಬಹುದು. ತನ್ನವರು ಎನ್ನುವುದಕ್ಕೆ ಅವಳಿಗಿದ್ದವಳು ವನಿತಾ ಒಬ್ಬಳೇ—ಮೂರು ವರ್ಷದ ಮಗಳು! ಶ್ರೀಧರ ಸಾಯುವಾಗ ವನಿತಾ ಇನ್ನೂ ತೊಟ್ಟಿಲ ಕೂಸು. "ಶಶೀ, ನನ್ನೊಂದಿಗೆ ನೀನು ದಾಂಪತ್ಯ ನಡೆಸಿದ ತಪ್ಪಿಗೆ ಇದೂ ಒಂದು ಶಿಕ್ಷೆಯನ್ನು ನಿನಗೆ ನಾನು ಕೊಟ್ಟು ಹೋಗುತ್ತಿದ್ದೇನೆ" ಎಂದು ಕಟುವಾದ ಸತ್ಯವನ್ನು, ಅವನು ತುಟಿಮೀರಿ ಆಡಿದ್ದ. ಗಂಡುಸಾದ ಅವನಿಗೇ ಬದುಕು ಒಂದು ಹೋರಾಟವಾಗಿದ್ದಾಗ, ಹೆಣ್ಣಾದವಳು ತನ್ನ ಬದುಕಿನ ಹೋರಾಟದೊಂದಿಗೆ ಇನ್ನೊಂದು ಜೀವದ ಹೊಣೆ ಹೊರಬೇಕಾಗಿ ಬಂದರೆ, ಎಷ್ಟೊಂದು ಕಷ್ಟ ಸಹಿಸಬೇಕಾದೀತು—ಎಂದು ಊಹಿಸಿಯೇ ಅವನು ಹಾಗೆ ನುಡಿದಿದ್ದ. ಮೈಯಲ್ಲಿ ಸುಡುತ್ತಿದ್ದ ಜ್ವರವನ್ನೂ ಮೀರಿದ ನೋವು ಅದೇ ಆಗಿತ್ತು ಅವನಿಗೆ. "ನಿಮ್ಮ ದಮ್ಮಯ್ಯ, ಹೀಗೆಲ್ಲಾ

ಹಲುಬಬೇಡಿ" ಎಂದು ಅಧೀರತೆಯಲ್ಲೇ ಅವನ ಬಾಯನ್ನವಳಾಗ ತನ್ನ ಎರಡೂ ಕೈಗಳಿಂದ ಮುಚ್ಚಿದ್ದರೂ, ಅವಳ ಅಂತರಂಗ ನೊರೆಯುತ್ತಿತ್ತು: "ವಿಧಿ ಅವರವರ ಹಣೆಯಲ್ಲಿ ಬರೆದಿರುವುದನ್ನು ಯಾರಿಂದ ತಪ್ಪಿಸಲು ಸಾಧ್ಯ ?" ಎಂದು.

'ನಾರೀಜೀವನದ ಸೌಭಾಗ್ಯ ಗಂಡುಸಿನ ಆಯುಸ್ಸು' ಎಂದು ತನ್ನ ಸುತ್ತಲಿನ ಆವರಣದಿಂದ ಅವಳು ಪಡೆದ ಸಂಸ್ಕಾರವಾಗಿತ್ತು. ಆದರಿಂದ ಅವಳು ತನ್ನ ಮಾಂಗಲ್ಯವನ್ನು ಉಳಿಸಿಕೊಡಬೇಕೆಂದು ಎಷ್ಟೊಂದು ದೇವರುಗಳಿಗೆ ಮೊರೆಯಿಟ್ಟಿರಲಿಲ್ಲ?

ಶ್ರೀಧರ ಅಲ್ಪಾಯುಷಿಯೇ ಆಗಿರಬೇಕು. ಯಮನಿಗೊಂದು ನೆವವೆನ್ನುವಂತೆ ಜ್ವರ ಒಂದು ನಿಮಿತ್ತವಾಗಿದ್ದೀತು ಅವನ ಸಾವಿಗೆ.

ಬದುಕನ್ನು ನೇರವಾಗಿ ಅವಳೀಗ ಎದುರಿಸಲೇ ಬೇಕಾಯಿತು. ಯಾವ ಆಧಾರವೂ ಇಲ್ಲ, ವಾಸವಾಗಿದ್ದ ಹಂಚಿನ ಮನೆಯೊಂದನ್ನು ಬಿಟ್ಟರೆ! ಆವಶ್ಯಕತೆ ಯೋಚನೆಯಲ್ಲಿ ಕೆಡಹಿದಾಗ, ಪರಿಹಾರದ ಕುರಿತು ಚಿಂತಿಸಲೇಬೇಕಾಗಿತ್ತು. "ನಮ್ಮಿಬ್ಬರ ವಾಸ್ತವ್ಯಕ್ಕೆ ಮನೆಯ ಹಿಂಭಾಗವನ್ನಷ್ಟು ಇಟ್ಟುಕೊಂಡರೆ ಸಾಕು. ಹೇಗೂ ಓಡಾಟಕ್ಕೆ ಮತ್ತೆ ಬಾಗಿಲು ತೆಗೆಸಬೇಕಾದದ್ದೂ ಇಲ್ಲ. ಮುಂದಿನ ಅರ್ಧಭಾಗ ಸಣ್ಣ ಬಿಡಾರದ ವಾಸಕ್ಕೆ ಸಾಕು. ಬಾಡಿಗೆಗೆ ಒಳ್ಳೆಯ ಜನ ಯಾರಾದರೂ ಸಿಕ್ಕುತ್ತಾರೆಯೋ, ನೋಡಬೇಕು!" ಎಂದು ಅವಳು ಯೋಚಿಸುತ್ತಿದ್ದಾಗಲೇ ಅನಂತ ಹೈಸ್ಕೂಲ್ ಶಿಕ್ಷಕನಾಗಿ—ಊರಿಗೆ ಹೊಸಬನಾಗಿ—ಬಂದಿದ್ದ. ಅಷ್ಟರಲ್ಲೇ ಅವನಿಗೆ ಹೆಣ್ಣೂ ನಿಶ್ಚಯ-ವಾಗಿ ಹೋಗಿತ್ತಾದುದರಿಂದ, 'ಈಗಲೇ ಒಂದು ಸಣ್ಣ ಬಿಡಾರ ಹಿಡಿದುಕೊಂಡಿರುವುದು ಒಳಿತು' ಎಂದು ಅವನು ಯೋಚಿಸಿ, ವಿಚಾ-ರಿಸಿದಾಗ ತಿಳಿಯಿತು:— ಹೀಗೆ ಒಂದು ಮನೆಯಿದೆ ಎಂದು, ಶಶಿಕಲೆಯ ನೆರೆಮನೆಯ ಹುಡುಗ ಶಾನು ಅನಂತನ ವಿದ್ಯಾರ್ಥಿಯಾಗಿದ್ದುದರಿಂದ. ಸ್ಕೂಲಿನಿಂದ ಒಂದೇ ಫರ್ಲಾಂಗಿನ ಅಂತರದಲ್ಲೇ ಮನೆ ದೊರಿತದ್ದು ಅನಂತನಿಗೂ ಆನಂದದ ವಾತಾಗಿತ್ತು.

ಬಾಡಿಗೆಯಿಂದ ತಿಂಗಳಿಗೆ ಬರುವ ೧೫ ರೂ. ಇಬ್ಬರ ಜೀವನಕ್ಕೆ ಹೇಗೆ ಸಾಲುವುವು? 'ಏನೂ ಇಲ್ಲದಿದ್ದಾಗ ಇದ್ದುದರಲ್ಲೇ ಅಷ್ಟು ಆಯಿತು' ಎಂದು ಅವಳು ಸಮಾಧಾನ ತಂದುಕೊಂಡಳು. ಮತ್ತೆ ಊರವರಿಗೇನಾದರೂ ಬೇಕಾದ ಹಪ್ಪಳ-ಉಪ್ಪಿನಕಾಯಿ ಮುಂತಾದ ದಿನದ ಸಾಮಾನು ತಯಾರಿಸಿ ಕೊಡುವುದರಿಂದ ಆಗೀಗ ಸಿಗುವ ಚಿಲ್ಲರೆಯಿಂದ ಹೇಗೂ ದಿನ ದೂಡಬಹುದು— ಎಂದು ಶಶಿಕಲಾ ಧೈರ್ಯತಂದುಕೊಂಡಳು.

ಮದುವೆಯ ಪ್ರಶ್ನೆಯನ್ನು ಗಂಡು ಎಷ್ಟು ಮುಂದೂಡಬಹುದು! ಹೆಣ್ಣು ಗೊತ್ತಾದ ಮೇಲಂತೂ ಅವಸರ ಹೆಚ್ಚು. ಬಿಡಾರ ಸಿಕ್ಕ ಕೆಲ ದಿನಗಳಲ್ಲೇ ಅನಂತ ಮದುವೆಯಾಗಿ, ಮಡದಿಯನ್ನು ಕರೆತಂದ. ಅದುವರೆಗೆ ಅವನ ಮನ ತುಂಬಿಸಿದ ಹೆಣ್ಣು ಈಗ ಮನೆತುಂಬಿಸಿ-ದಳು. ಆ ದಾಂಪತ್ಯದ ಮೊದಲ ಕಾವಿನಲ್ಲಿ, ಹೆಂಡತಿಯ ಹೊರತು ಮತ್ತೆಲ್ಲಿ ಹರಿಯಬೇಕು ಅವನ ಮನಸ್ಸು!

ಹೆಂಗ-ಹೆಂಗುಸರಲ್ಲಿ ಬಳಕೆ ಬಹು ಬೇಗ. ಲಲಿತೆ ಬಂದಮೇಲೆ ಶಶಿಕಲೆಗೆ ತನ್ನ ಏಕಾಕಿತನವನ್ನು ಮರೆಸಲು ಒಂದು ಜೊತೆ ಸಿಕ್ಕಂತಾ-ಗಿತ್ತು. ಲಲಿತಳಿಗಾದರೂ ಅಷ್ಟೆ: ಅನಂತನಿಲ್ಲದಾಗ, ಮನೆಯಲ್ಲಿ ಒಬ್ಬಳೇ ಆದಾಗ, ಶಶಿಕಲಾ ಗೆಳತಿಯಾದಳು. ದಿನ ಕಳೆದಂತೆ ಆ ಸಲುಗೆ ಒಡಹುಟ್ಟಿದವರಂತೆ ರೂಪುಗೊಳ್ಳುತ್ತಿತ್ತು. ಯಾರ ಮನೆ-ಗಾದರೂ ಉಪ್ಪಿನಕಾಯೋ ಹಪ್ಪಳವೋ ಅಥವಾ ಇನ್ನೇನಾದರೂ ತಿನಿಸೋ ತಯಾರಿಸಿಕೊಡಬೇಕಾಗಿ ಬಂದಾಗ, ನಂಜಿಕೊಳ್ಳುವುದಕ್ಕೆಂ-ದಾಗಲಿ, ರುಚಿ ನೋಡುವುದಕ್ಕೆಂದಾಗಲಿ, ಶಶಿಕಲಾ ಲಲಿತಳಿಗೆ ಸ್ವಲ್ಪ ಮುಟ್ಟಿಸಿದರೆ, ಅದೇ ಬಗೆಯಾಗಿ ತಮ್ಮಲ್ಲಿ ತಂದ ತರಕಾರಿಯಲ್ಲಾಗಲಿ, ಹಣ್ಣು-ಹಂಪಲಿನಲ್ಲಾಗಲಿ, ಲಲಿತಳಿಂದ ಅವಳಿಗೆ ಒಂದು ಪಾಲು ದೊರೆಯುತ್ತಿತ್ತು. ಇದೇ ರೀತಿ ಒಂದಲ್ಲ ಒಂದು ವಿಧದಲ್ಲಿ ಸ್ನೇಹದ ವಿನಿಮಯ ವಾಡಿಕೆಯಾಗಿಬಿಟ್ಟಿತ್ತೀಗ. ಮುದ್ದು ವನಿತಾ ಎರಡೂ ಬಿಡಾರಗಳಿಗೆ ಸ್ನೇಹತಂತುವಾಗಿದ್ದಳು.

ಮೊದ-ಮೊದಲು ಸಂಕೋಚವೆನ್ನಿಸಿದರೂ, ಈಗೀಗ ಅನಂತ-ನಿರುವಾಗಲೂ ಶಶಿಕಲಾ ಲಲಿತಳಲ್ಲಿಗೆ ಹೋಗಿಬರಬೇಕಾಗಿ ಬಂದಿತ್ತು. ಲಲಿತಳಿಗೆ ಬಯಕೆ ಆರಂಭವಾದಾಗ, ಗರ್ಭಿಣಿಯರಿಗೆ ಬೇಕಾದ ಊಟ-ಉಪಚಾರಗಳ ಕುರಿತು ಅನಂತನಿಗೆ ಶಶಿಕಲೆಯೇ ಹೇಳಿ ತಿಳಿಸ ಬೇಕಾಯಿತು. ಆದರಿಂದ ಪರಸ್ಪರರಲ್ಲಿ ಸಾಮಾಜಿಕಸಲುಗೆ ಬೆಳೆ-ಯುವುದಕ್ಕೆ ಕಾರಣವಾಯಿತು.

ಲಲಿತಾ ತವರಿಗೆ ಹೊರಟುನಿಂತಾಗ ಅವಳನ್ನು ಕಾಡುತ್ತಿದ್ದ ಯೋಚನೆ ಒಂದೆ: "ನಾನು ಬರುವ ವರೆಗೆ ಇವರಿಗೆ ಇಲ್ಲಿ ಮತ್ತೆ ಹೋಟೆಲ್ಲೇ ಗತಿಯಾಯಿತಲ್ಲ. ಆ ಕೂಳು ತಿಂದು, ಇವರು ಆರೋಗ್ಯ-ವಾಗಿ ಇದ್ದಾರೆಯೆ ?" ಎಂದು. ಅನಂತ ಈ ಮೊದಲು ಎಷ್ಟು ಬಾರಿ ಹೊಟೆಲ್ಲಿನ ಕೂಳನ್ನೆ ತಿಂದಿರಲಿಲ್ಲ? ಆಗಿನ ಮಾತು ಬೇರೆ. ಈಗ ಕೈ ಹಿಡಿದವಳಿಗೆ ಸರಿಬರಬೇಕಲ್ಲವೇ? ಉಂಡ ಅನ್ನ ತನ್ನವರ ಮೈಗೆ ಹಿಡಿಯಬೇಕು ಎಂದು ಯಾವ ಹೆಣ್ಣು ಚಿಂತಿಸುವುದಿಲ್ಲ? ಅದಕ್ಕಾ-ಗಿಯೇ ಅವಳು ಈಗ ಈ ಕುರಿತು ಪರಿಹಾರವನ್ನು ಯೋಚಿಸು-ತ್ತಿರುವುದು.

ಲಲಿತೆಯ ಸ್ನೇಹದ ಒತ್ತಾಯಕ್ಕೆ 'ಆಗದು' ಎಂದು ಶಶಿಕಲೆ ಹೇಗೆ ಹೇಳಬಲ್ಲಳು? ನೆರೆ ಎಂದ ಮೇಲೆ ನಮ್ಮ ಜನಕ್ಕೆ ಆಗಲೆ ಬೇಕು ಎಂದು ಅವಳು 'ಹೂಂ' ಅಂದದ್ದು. ಪರಸ್ಪರರು ಸ್ವಜಾತಿ ಆಗಿದ್ದುದು ಇಂಥ ಆತ್ಮೀಯತೆಗೆ ಹೆಚ್ಚು ಕಾರಣವಾದದ್ದು.

ಲಲಿತಾ ಹೊರಟುಹೋದ ಮೇಲೆ, ಆ ಮಾತನ್ನು ನಡೆಸ ಬೇಕಾದಾಗ ಮೊದಲು ಸ್ವಲ್ಪ ಸಂಕೋಚವೆನ್ನಿಸಿದರೂ, ಒಪ್ಪಿಕೊಂಡ ಮಾತಿಗೆ ಶಶಿಕಲಾ ತಪ್ಪುವಂತಿರಲಿಲ್ಲ. ಅವಳಂಥ ಬಡವಿಗೆ ಇಂಥ ಸ್ನೇಹ ಒಂದು ಬಗೆಯಲ್ಲಿ ಸಹಾಯವೂ ಹೌದು. ಅನಂತ ಹೊತ್ತು-ಹೊತ್ತಿಗೆ ಸರಿಯಾಗಿ ಬಂದು ಉಂಡು ಹೋಗುತ್ತಿದ್ದ.

ಒಂಟಿಯಾದ ಹೆಣ್ಣಿನ ಮನೆಗೆ ವಯಸ್ಕನಾದ ಗಂಡು ಯಾವ ಕಾರಣದಿಂದಲೇ ಪ್ರವೇಶಿಸಿರಲಿ — ಪರಸ್ಪರರು ಎಷ್ಟೇ ಸದಾಚಾರಿ

ಗಳಾಗಿದ್ದರೂ—ಅಪವಾದ ಆ ಹೆಣ್ಣಿನ ಪಾಲಿಗೆ ತಪ್ಪಿದ್ದಲ್ಲ. ಈ ಕಲ್ಪನೆ ಮೊದಲೇ ಇದ್ದಿದ್ದರೆ, ಲಲಿತಳ ಎಂತಹ ದಾಕ್ಷಿಣ್ಯವನ್ನೂ ಶಶಿಕಲಾ ಒಪ್ಪುತ್ತಿದ್ದಳೇ? ಲಲಿತಳಿಗಾದರೂ ಈ ಮಾತು ತಿಳಿದಿದ್ದರಲ್ಲವೆ?

ಆಡಿದ ಮಾತಿಗೆ ಅಧೀನಳಾಗಿದ್ದ ಶಶಿಕಲಾ, ಈಗ ತಪ್ಪಿಸಿಕೊಳ್ಳುವಂತೆಯೂ ಇರಲಿಲ್ಲ. ಊರ ಪುಂಡ-ಪೋಕರಿಗಳು ಈಗೀಗ ಅವಳಿಗೆ ಕೇಳಿಸುವಂತೆಯೇ, ಅನಂತನ ಹೆಸರು ತೆಗೆದುಕೊಂಡು ಅವಳಿಗೆ ಗೇಲಿ ಮಾಡುತ್ತಿದ್ದಾಗ, ಅವರ ಮೋರೆಯ ಮೇಲೆ ಉಗಿದು ಬಿಡಬೇಕು—ಎನ್ನುವಷ್ಟು ಹೇಸಿಕೆ ಅವಳಿಗೆ, ಅವರ ಮೇಲೆ ಉಂಟಾಗುತ್ತಿತ್ತಾದರೂ, ಆ ಅಪಮಾನವನ್ನು ಅವಳು ಸಹಿಸಲೇಬೇಕಾಗಿತ್ತು. ತನ್ನ ಮರ್ಯಾದೆಗಾದರೂ ಮಾನವತಿಯಾದ ಹೆಣ್ಣು, ಇಂತಹ ಸಂದರ್ಭದಲ್ಲಿ ನಾಲಗೆ ಬಿಗಿಹಿಡಿಯಬೇಕಷ್ಟೇ? ಹರಯದಲ್ಲಿ ಗಂಡಿನ ರಕ್ಷೆ ಇಲ್ಲದಿದ್ದರೆ ಹೆಣ್ಣು ಎಷ್ಟು ಹಗುರಾಗಿ ಕಾಣಲ್ಪಡುತ್ತಾಳೆ! ಒಂಟಿಹೆಣ್ಣಿನ ಶೀಲವನ್ನು ನಂಬುವಷ್ಟು ಸಜ್ಜನಿಕೆ ನಮ್ಮ ಜನರಲ್ಲಿ ಇದ್ದರಲ್ಲವೆ? ಹೆಣ್ಣಾಗಿ ಹುಟ್ಟಿದ ತಪ್ಪಿಗೆ ಮಾನವಾಗಿ ಬದುಕುವುದಕ್ಕೂ ಅಧಿಕಾರವಿಲ್ಲವೆ?— ಎಂದು ಶಶಿಕಲಾ ದುಃಖಿಸಿದಳು.

ಆ ವ್ಯಾಕುಲತೆಯಲ್ಲಿ 'ಹೇಗಾದರೂ ಮಾಡಿ ಅನಂತನಿಗೆ ಬೇರೆ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಚಿಸುವುದೇ ಒಳಿತು' ಎಂದು ಎಷ್ಟು ಬಾರಿ ತೀರ್ಮಾನಿಸಿದರೂ, 'ಹೇಗೆ ಹೇಳುವುದು?'—ಎಂಬುದು ಅವಳಿಗೆ ಹೊಳೆಯಲಿಲ್ಲ; ಅದೂ ಅವನ ಯಾವ ತಪ್ಪೂ ಇಲ್ಲದಿರುವಾಗ. ತಾನು ಕೇಳುವ ಯಾವ ಮಾತೂ ಅವನಿಗೆ ತಿಳಿದುಬಂದಿರುವಂತೆ ಅವನ ನಡೆನುಡಿಗಳಿಂದ ಅವಳಿಗೇನೂ ತಿಳಿದುಬರಲಿಲ್ಲ. 'ಜನ ಏನು ಹೇಳಿಕೊಂಡರೇನು? ಹರಕು ಬಾಯುಳ್ಳ ಜನ ತಮ್ಮ ನಾಲಗೆಯ ಚಪಲ ತೀರಿಸಿಕೊಳ್ಳುವುದು ನನ್ನಂತಹ ಅಸಹಾಯ ಹೆಣ್ಣಿನ ಮೇಲೆಯೇ ಆಗಿರಬೇಕು. ಈ ಜನರ ಡೊಂಕುಬುದ್ಧಿಗೆ ನಾನೇನು ಮಾಡಲು ಸಾಧ್ಯ? ಇವನು ನನ್ನೊಂದಿಗೆ ಮರ್ಯಾದೆಯಿಂದ ನಡೆದುಕೊಳ್ಳುತ್ತಾನಲ್ಲ— ಅಷ್ಟಿದ್ದರೆ ಸಾಕು' ಎಂದು ತನಗೆ ತಾನೇ ಸಮಾಧಾನ ತಂದುಕೊಂಡಳು.

ಒಂಟಿಯಾಗಿದ್ದ ಅನಂತನ ಮನಸ್ಸು ಶೂನ್ಯವಾಗಿದ್ದಾಗ, ಸುತ್ತಲಿನ ವಿಚಾರ ಅವನಿಗೇನು ತಿಳಿದುಬರಬೇಕು? ಮೊದಲಬಾರಿ ಹೆಂಡತಿಯನ್ನು ಅಗಲಿ ಇರುವುದು, ಯಾವ ತರುಣನಿಗೆ ಸಹನವೆನಿಸುತ್ತದೆ? ಅದೇ ವಿಮನಸ್ಕತೆಯಲ್ಲಿ ತಿಂಗಳೊಂದು ಕಳೆವಷ್ಟರಲ್ಲಿ, ಅವನ ಅಂತರ್ಮುಖತೆಯನ್ನು ಹರಿಸುವ ಘಟನೆಯೊಂದು ನಡೆಯಿತು.

ಆ ರಾತ್ರಿ ಅವನು, ಅದೇ ತನ್ನ ಹೆಂಡತಿಯ ಸವಿನೆನಪು ನೆನೆದುಕೊಳ್ಳುತ್ತ ಒಂಟಿಯಾಗಿ ಹಾಸಿಗೆಯಲ್ಲಿ ಹೊರಳುತ್ತಿದ್ದಾಗ, ಯಾರೋ ಹತ್ತಿರದಲ್ಲಿ- ಸಣ್ಣಗೆ ಹಾಡಿಕೊಳ್ಳುತ್ತಿದ್ದ ಹಾಗೆ ಕೇಳಿಸಲು, ಹಗುರಾಗಿ ಎದ್ದು ಕಿಟಕಿಯಿಂದ ಹೊರಗೆ ಇಣುಕಿದಾಗ ಅವನು ಕಂಡಿದ್ದು, ವನಿತಾಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಏನೋ ತನ್ನಲ್ಲೇ, ಹಾಡು ಗುಣುಗುಡುತ್ತ ಅಂಗಳದಲ್ಲಿ ಕುಳಿತ ಶಶಿಕಲೆಯನ್ನು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
**ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ**
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿವೆ.

ಮಾಲಕರು: ಬಿ. ಜೆ. ಮುತ್ತಗಿ

ಶುಕ್ಲಪಕ್ಷದ ಚಂದ್ರ ತುಂಬುಕಳೆಯಿಂದ ಪ್ರಶಾಂತ ಇಳೆಯ ಮೇಲೆ ಬೆಳುದಿಂಗಳ ಸುಧೆಯನ್ನು ಸೂಸುತ್ತಿದ್ದ. ಅದುವರೆಗೆ ಆ ಚಂದ್ರಿಕೆಗೆ ಕುರುಡಾಗಿ ಕುಳಿತಿದ್ದ ಅನಂತನಿಗೆ, ಹೆಂಡತಿಯ ಸ್ಮೃತಿಯೇ ಈಗ ಹಾರಿಹೋಗಿತ್ತು. ಆ ಸ್ನಿಗ್ಧಚಂದ್ರಿಕಾಧಾವಳ್ಯ ಶಶಿಕಲೆಯ ತುಂಬುಮೈಗೆ ಕನಕಾಭಿಷೇಕ ಮಾಡಿಸಿದ ಹಾಗಿತ್ತು. ಅವಳ ಹೆಸರೂ ಸಾರ್ಥಕವಾದಂತಾಗಿತ್ತು. 'ಇವಳು ಇಷ್ಟೊಂದು ಚೆಲುವೆಯೆ?' ಎಂದು ಅನಂತ ಬೆರಗಾಗಿ ನೋಡುತ್ತಿದ್ದ. ಅವನೀಗ ಸಂಪೂರ್ಣ ಬಹಿರ್ಮುಖನಾಗಿದ್ದ. ಚೆಲುವರಿದ ಚಂದ್ರಿಕೆ ಯಾವ ವಿರಹಿಯನ್ನು ಕೆಣಕುವುದಿಲ್ಲ?

ಹಾಗೇಯೆ ನಿಂತು 'ಇವಳು ನನ್ನ ಲಲಿತೆಗಿಂತಲೂ ಚೆಲುವೆ' ಎಂದು ಅವನು ಅಂದುಕೊಳ್ಳುತ್ತಿದ್ದಾಗಲೆ, ಅವಳು ತನ್ನ ತೊಡೆಯ ಮೇಲೆ ನಿದ್ದೆಹೋದ ಮಗುವನ್ನು ಎತ್ತಿಕೊಂಡು, ಒಳಗೆ ಹೋಗಿ ಅಗಳಿ ಹಾಕಿಕೊಂಡ ಮೇಲೆಯೆ ಅವನು ಮತ್ತೆ ಹಾಸಿಗೆ ಹಿಡಿದುದು. ಮಲಗಿದಲ್ಲೇ ಹೇಳಿಕೊಳ್ಳುತ್ತಿದ್ದ: 'ಇವಳು ಚೆಲುವೆ. ತುಂಬಾ ಚೆಲುವೆ' ಎಂದು. ಮದುವೆಯಾದ ಮೇಲೆ ತನ್ನ ಹೆಂಡತಿಯೊಬ್ಬಳನ್ನು ಬಿಟ್ಟರೆ ಸಾಮಾನ್ಯವಾಗಿ ಪ್ರತಿಯೊಬ್ಬ ತರುಣಿಯೂ ಸುಂದರಿಯಂತೆ ಯಾವ ಗಂಡಸಿಗೆ ಕಾಣಿಸುವುದಿಲ್ಲ! ಅದು ಒಂಟಿಯಾಗಿ, ಹೆಂಡತಿಯ ನೆನಪಿನಿಂದ ವಿಮುಖನಾಗಿದ್ದಾಗ, ಆ ಚೆಲುವು ಇನ್ನೂ ಹೆಚ್ಚು. ಆದರೆ ಶಶಿಕಲೆಗೆ ಇದೆಲ್ಲಾ ಏನು ತಿಳಿದಿರಬೇಕು?

ಆ ಮೇಲೆ ಅನಂತ ಬೇಕಾದ ಹಾಗೆ ಶಶಿಕಲೆಯನ್ನು ಹತ್ತಿರದಿಂದ ಎಚ್ಚರದಿಂದ ಅವಲೋಕಿಸಿ 'ಇವಳು ನಿಃಶಂಕ್ಯ ಸುಂದರಿ' ಎಂದುಕೊಂಡಷ್ಟೂ, ಸಭ್ಯತೆ ಅವನ ವಿವೇಕವನ್ನು ಎಚ್ಚರಿಸಬೇಕಾಯಿತು.

ಶಶಿಕಲೆ ಸುಂದರಿಯೆಂಬುದೇನೋ ನಿಜ. ಆದರೆ ಅದು ಅವಳು ವೇಷ-ಭೂಷಣದಿಂದ ತಂದುಕೊಳ್ಳುವುದಲ್ಲ; ಯಾವ ಸೌಭಾಗ್ಯಕ್ಕಾಗಿ ಅವಳು ಅವನ್ನು ಧರಿಸಬೇಕು? ಅವಳ ನಿರಾಭರಣ ಸೌಂದರ್ಯಕ್ಕೆ

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಬಿಪೀನಿ
ದಿ ಸದ್ವೈದ್ಯಶಾಲಾ ಲಿ. ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಹಲ್ಲುಪುಡಿ ಟೂತ್ ಪೌಡರ್ ಉಪಯೋಗಿಸಿರಿ

ಪುಟಕೊಡುತ್ತಿದ್ದುದು ಅವಳ ಕೊಂಕಾದ ಕಪ್ಪು ನಿಡುಗೂದಲು. ಆ ಹುಟ್ಟು ಚೆಲುವೆಯ ಗೌರವರ್ಣದ ತೆಳುಮೈಗೆ, ಅದು ಇನ್ನಷ್ಟು ಮೆರುಗು ಕೊಡುತ್ತಿತ್ತು. ಸಾಮಾಜಿಕ ಸಂಪ್ರದಾಯದಂತೆ ವೈಧವ್ಯ ಅವಳ ಕುಂಕುಮ ಕಸಿದುಕೊಂಡರೂ, ಉಳಿದ ಕಡ್ಡಾಯವಾದ ಆಚರಣೆಯನ್ನು ಅವಳು ಒಪ್ಪಿರಲಿಲ್ಲ. ತನ್ನ ಹುಟ್ಟುಕೂದಲ ಮಮತೆ ಯಾವ ಹೆಣ್ಣಿಗೆ ಇರುವುದಿಲ್ಲ?

ಹೆಣ್ಣಿನ ವಿಚಾರ ತಲೆಯಲ್ಲಿ ಹೊಕ್ಕರೆ ಗಂಡು ಎಷ್ಟೊಂದು ಅಸ್ಥಿರಚಿತ್ತನಾಗುತ್ತಾನೆ? ಅನಂತನಿಗೆ ಪ್ರತಿಯೊಂದರಲ್ಲೂ ಬೇಸರ. ಯಾವುದರಲ್ಲೂ ಉತ್ಸಾಹವಿಲ್ಲ. ಶಶಿಕಲೆಯ ನೆನಪು ಮರುಕಳಿಸಿದಷ್ಟೂ ತಲೆ ಕಾದುಹೋಗುವಷ್ಟು ವಿಚಾರ ಅವನನ್ನು ಕಾಡುತ್ತಿತ್ತು. ಅವನು ಈ ಅವಸ್ಥೆಯಲ್ಲಿ ಬಿದ್ದುಕೊಂಡಿದ್ದಾಗ, ಎಷ್ಟೋ ಬಾರಿ ಹಗಲ ಹೊತ್ತಿನಲ್ಲಿ "ಮಾಮಾ" ಎಂದು ತನ್ನ ತೊದಲುನುಡಿಗಳಿಂದ— ಅಷ್ಟೇ ತನ್ನ ಪುಟ್ಟ ಕೈಗಳಿಂದ – ಅವನಿಗೆ ಕಚಕುಳಿಯಿಟ್ಟು ವನಿತಾ ಅವನ ಮೈಮನಗಳನ್ನು ಹುರುಪಾಗಿಸಿದ್ದಳು. ತನ್ನದೇ ಮಗುವಾಗಿದ್ದರೆ ಹೇಗೋ ಅದೇ ಮಮತೆಯಿಂದ ಅವನು ಅವಳನ್ನು ಎತ್ತಿ ಮುದ್ದಿಸುತ್ತಿದ್ದ. ಅವಳಿಗೆ ಏನೇನೋ ಆಟಿಗೆಗಳನ್ನೋ ತಿಂಡಿ-ತಿನಿಸುಗಳನ್ನೋ ಕೊಟ್ಟು, ಅವಳು ನಲಿವಿನಿಂದ ನಕ್ಕಾಗ ಸಂತೋಷ ಪಡೆಯುತ್ತಿದ್ದ. ಶಶಿಕಲೆಯನ್ನೇ ಹೋಲುತ್ತಿದ್ದ ಆ ಮಗು ಹತ್ತಿರವಿದ್ದರೂ ಅವನಿಗೆಷ್ಟೋ ಸಮಾಧಾನ

ತಾಯಾದವಳಿಗೆ, ತನ್ನ ಮಗು ಮುದ್ದು— ಆದರಿಂದ ಆ ಮಗುವನ್ನು ಮುದ್ದಿಸುವವರೆಲ್ಲ ಅವಳಿಗೆ ಆತ್ಮೀಯರೇ ಆಗಿ ಕಾಣುತ್ತಾರೆ. ಅದಕ್ಕೂ ಹೆಚ್ಚಿನ ಸಂಬಂಧ ಅನಂತನೊಂದಿಗೆ ಶಶಿಕಲೆಗೆ ಮತ್ತೇನಿದೆ? ತನ್ನವರೆಂದು ದಿಕ್ಕಿಲ್ಲದಿದ್ದಾಗ, ಈ ಸಲುಗೆಯಿಂದ ಅನಂತನೇ ಅವಳಿಗೆ ಹತ್ತಿರದ ಬಂಧುವಾಗಿ ಕಾಣುವುದೂ ಸಹಜ.

ತನ್ನೊಂದಿಗೆ ಶಶಿಕಲೆ ತುಂಬ ಸಲುಗೆಯಿಂದ ವರ್ತಿಸುವುದನ್ನೂ ಕಂಡಾಗಲೆಲ್ಲ, ಅನಂತ "ಇವಳ ಒಲವು ತನ್ನತ್ತ ಒಲಿದಿದೆ— ಇವಳನ್ನು ತಾನು ಗೆಲ್ಲಬಲ್ಲೆ" ಎಂದು ಭಾವಿಸಿಕೊಳ್ಳುತ್ತಿದ್ದ. ಕಾಮಿಗೆ ಕಾಣಿಸುವುದೆಲ್ಲವೂ ತನ್ನತನವೇ! ಅನಂತನ ಮನಃಸ್ಥಿತಿಯಲ್ಲಿದ್ದ ಪ್ರತಿಯೊಂದು ಗಂಡೂ, ಇದೇ ಬಗೆಯಾಗಿ ಹೆಣ್ಣಿನ ಸಂಪರ್ಕ ದೊರೆತರೆ ಭಾವಿಸಿಕೊಳ್ಳುವ ಮಾತು ಅದು.

ವನಿತಾ ಅವನಿಗೆ ಶಶಿಕಲೆಯ ಸಂಪರ್ಕವನ್ನು ಹೆಚ್ಚಿಸಿಕೊಟ್ಟಿದ್ದರೂ, ಅವನು ಅವಳೊಂದಿಗೆ ಬಯಸುವ ಏಕಾಂತಕ್ಕೆ ಆ ಕೂಸು ಭಂಗತರುತ್ತಿದ್ದುದರಿಂದ, ಅವನಿಗೆಷ್ಟೋ ಬಾರಿ ಆ ಅರಿಯದ ಹಸುಳೆಯಮೇಲೆ ಸಿಟ್ಟೂ ಬೇಸರವೂ ಉಂಟಾಗುತ್ತಿತ್ತು. ಆದರೆ ಅವನು ಅವಳನ್ನು ದಂಡಿಸಬಲ್ಲನೆ? ಹಾಗೆ ಮಾಡಲು ಕೂಸಿನ ಮೇಲೆ ಅವನಿಗೆ ಯಾವ ಅಧಿಕಾರವಿದೆ? ಹಾಗೆ ಮಾಡುವುದರಿಂದ ತನಗೇ ತೊಂದರೆಯೆಂಬ ಅರಿವಾದರೂ ಅವನಿಗಿಲ್ಲದಿಲ್ಲ. "ಇದೇ ಸಲುಗೆ ನಡೆದುಬಂದರೆ, ಶಶಿಕಲೆಯ ಒಲವಿಗೆ ನಾನು ಪಾತ್ರನಾಗುವುದರಲ್ಲಿ ಸಂದೇಹವಿಲ್ಲ" ಎಂದು ಅವನು ಸಮಾಧಾನ ತಂದುಕೊಳ್ಳುತ್ತಿದ್ದ

ಈ ಬಗೆಯ ಮನಃಸ್ಥಿತಿಯಲ್ಲಿ ಇದ್ದಾಗಲೇ ಅವನಿಗೆ ಪತ್ರ ಬಂದದ್ದು. ಎರಡು ದಿನಗಳ ಮಾತಿಗೆಂದಮೇಲೆ 'ಹೋಗಿ ಬಂದರಾಯಿತು' ಎಂದು ನಿಶ್ಚಯಿಸಿದ ಮನಸ್ಸಿಲ್ಲದ ಮನಸ್ಸಿನಿಂದ. ಈಗ ಹೆಂಡತಿಯ ಸಾಮೀಪ್ಯದಲ್ಲಿ ಅವನಿಗೆ ಯಾವ ಆಕರ್ಷಣೆಯಿದೆ? ಯಾವ ಸಂತೋಷ ಸಿಗಲಿದೆ? ಆದರೂ ಹೆಂಡತಿಯಾದವಳನ್ನು ಅಸಮಾಧಾನಗೊಳಿಸುವುದರಿಂದ ಮುಂದೆ ತನ್ನ ಸಮಾಧಾನಕ್ಕೇ ಭಂಗ— ಎಂದು ಅರಿತೇ ಅವನು ಈ ನಿಶ್ಚಿತಕ್ಕೆ ಬಂದಿದ್ದ.

ಆ ದಿನ, ತಾನು ಮಾವನ ಮನೆಗೆ ಹೊರಡಲಿರುವ ವಿಚಾರವನ್ನು ಅವನೇ ಶಶಿಕಲೆಗೆ ಹೇಳಿದ್ದ. ಅದರಿಂದ ಅವನಿಗೆ ನೋಟಾರಿಗೆ ತೊಂದರೆಯಾಗದಿರಲೆಂದು ಅವಳು ಬೇಗನೆ ಅಡಿಗೆ ಮಾಡಿದ್ದಳು. ಎಂದಿನ ಹೊತ್ತಿಗೇ ಅಡಿಗೆ ಮಾಡುವುದಾಗಿದ್ದರೆ, ಒಲೆಗೆ ಉರಿಹಚ್ಚುವ ಮೊದಲು ಮಗಳನ್ನು ಹೊತ್ತುಕೊಂಡು ಸರಕಾರೀ ಆಸ್ಪತ್ರೆಗೊಮ್ಮೆ ಹೋಗಿ ಬಾರದಿರುತ್ತಿರಲಿಲ್ಲ. ಅಂದು ಬೆಳಗಿನಿಂದ ವನಿತಾ ಎದ್ದೇ ಇರಲಿಲ್ಲ. ಇವಳಂಥ ಜನವಲ್ಲದೆ ಸರಕಾರೀ ಆಸ್ಪತ್ರೆಯ ಬಿಟ್ಟೀ ನೀರನ್ನು ಮದ್ದಿಗಾಗಿ ಯಾರು ದಿನ ಹಾಳುಮಾಡಬೇಕು? ಹಿಂದಿನ ರಾತ್ರಿ ವನಿತಾ ಏನೇನೋ ತುಂಬಾ ಕನವರಿಸುತ್ತಿದ್ದಳು. ಒಂದೂ ಅರ್ಥವಾಗುವುದಲ್ಲ. ಬೆಳಗಾಗುವಾಗ ಮೈ ಕಾದುಹೋಗಿತ್ತು. ಈ ವಿಚಾರ ಅನಂತನಿಗೆ ತಿಳಿಸಿ, ಅವನ ಪ್ರಯಾಣದ ಉತ್ಸಾಹಕ್ಕೆ ಭಂಗ ತರಬಾರದು ಎಂದುಕೊಂಡು, ಶಶಿಕಲಾ ಸುಮ್ಮನಿದ್ದಳು. ಅನಂತ ಅವಳ ಕುರಿತು ತಾನಾಗಿ ಏನನ್ನೂ ಪ್ರಶ್ನಿಸಲಿಲ್ಲ. ಆ ಮನಸ್ಥಿತಿಯಲ್ಲಿ ಅವನು ಇದ್ದದ್ದಲ್ಲವೆ? ಮತ್ತೆ ಶಶಿಕಲಾ ತಾನಾಗಿ ಏನು ಹೇಳಬೇಕು? ಆ ಮಗುವಿನ ಕುರಿತಾದ ಅವನ ವಾತ್ಸಲ್ಯವೇನಾದರೂ ಇದ್ದುದಾದರೆ, ಅದು ಅವನ ವಾಂಛಿತದ ಪ್ರಾಪ್ತಿಗಾಗಿ, ಅಷ್ಟೆ!

ಹೊರಡಲಿದ್ದಾಗ, ಹೋಗಿಬರುತ್ತೇನೆ—ಎಂದು ಮತ್ತೊಮ್ಮೆ ಶಶಿಕಲೆಗೆ ಹೇಳಿಹೋಗಲು ಅವನು ಬಂದದ್ದು—ಇನ್ನು ಎರಡು ದಿನ ತಾನವಳನ್ನು ನೋಡುವುದು ಸಾಧ್ಯವಿಲ್ಲದ್ದರಿಂದ, ಈಗಲೇ ಮತ್ತೊಮ್ಮೆ ನೋಡಿಕೊಂಡು ಹೋದಹಾಗಾಯಿತು—ಎಂದುಕೊಂಡು. ದುರ್ಬಲ ಮನಸ್ಸು ಇಳುಕಲಿನಲ್ಲಿ ಹರಿಯುವ ನೀರಿನಷ್ಟೇ ಸೆಳೆತವುಳ್ಳದ್ದಾಗಿರುತ್ತದೆ.

ಹಿಂಬಾಗಿಲಿನಿಂದ ಅವನು ಒಳಗೆ ಬಂದಾಗ, ಶಶಿಕಲಾ ಅವಿಮನಸ್ಕಳಾಗಿ ಕುಳಿತು, ಹಿಡಿತಕ್ಕೆ ಬಾರದಷ್ಟು ಹುಲುಸಾಗಿ ಬೆಳೆದಿದ್ದ

ತನ್ನ ಕಪ್ಪುಕೂದಲನ್ನು ಹಿಕ್ಕಿಕೊಳ್ಳುತ್ತಿದ್ದಳು. ಬಾಗಿಲಿಗೆ ಸ್ವಲ್ಪ ಅಡ್ಡಾಗಿ ಒಳಗೆ ಕುಳಿತಿದ್ದ ಅವಳಿಗೆ ಅನಂತ ಬಂದ ಅರಿವು ಆಗಿರಲಿಲ್ಲ. ಮುಗಳ ಅಸ್ಪಷ್ಟತೆಯಿಂದ ವ್ಯಗ್ರಳಾಗಿ ಕುಳಿತಿದ್ದ ಅವಳಿಗೆ, ತನ್ನ ಅರಿವಾದರೂ ಇದ್ದರಲ್ಲವೆ? ಎದೆಯಮೇಲಿನ ಸೆರಗು ನೆಲಕ್ಕೆ ಉರುಳಿತ್ತು.

ಒಳಗೆ ಕಾಲಿಟ್ಟ ಅನಂತ ಅವಳನ್ನು ಆ ಸ್ಥಿತಿಯಲ್ಲಿ ಕಂಡಾಗ, ಎಂದಿಗಿಂತಲೂ ಹೆಚ್ಚು ವಿವಶನಾಗಿದ್ದ. ಯಾವಾಗಲೂ ಸವಿಯನ್ನು ಉಂಡವನಿಗೆ ಆ ಬಗ್ಗೆ ಚಪಲ ಹೆಚ್ಚು. 'ವನಿತಾ ಇಲ್ಲೇ ಎಲ್ಲಾದರೂ ಇದ್ದಾಳೆಯೇ?' ಎಂದು ಸುತ್ತಲೂ ಒಮ್ಮೆ ದೃಷ್ಟಿ ಹರಿಯಿಸಿದ. ಅವಳು ಕಾಣಿಸಲಿಲ್ಲವೆಂಬ ತೃಪ್ತಿಯೇ ಅವನಿಗೆ ಪ್ರೋತ್ಸಾಹವಾಯಿತು. ಬಯಸಿದ ಹೆಣ್ಣಿನೊಂದಿಗೆ ಸಿಕ್ಕ ಏಕಾಂತದಲ್ಲಿ, ಸಂಯಮ ಕಳೆದುಕೊಳ್ಳುವುದು, ಅನಂತನ ಅವಸ್ಥೆಯಲ್ಲಿದ್ದ ಪ್ರತಿಯೊಂದು ಗಂಡಿಗೂ ಸಹಜ.

ಅಡಗಿದ ದನಿಯಲ್ಲಿ "ಶಶೀ" ಎಂದು ಮೊದಲ ಬಾರಿಗೆ ಅವನು ಅವಳ ಹೆಸರು ಹಿಡಿದು, ಜಾರಿದ ಅವಳ ಸೆರಗನ್ನು ಹಿಡಿದು ಎಳೆದಾಗ ಅವಳು ಬೆಚ್ಚಿ ಎದ್ದುನಿಂತಳು. ಈ ದಾಳಿ ಅವಳಿಗೆ ಅನಪೇಕ್ಷಿತವಾಗಿತ್ತು. ಅನಂತ ಈ ರೀತಿ ವರ್ತಿಸಬಹುದು ಎಂದು ಅವಳು ಊಹಿಸಿದ್ದರಲ್ಲವೆ? ಈಗ ಯೋಚಿಸುವುದಕ್ಕೆ ವ್ಯವಧಾನವೇ ಉಳಿದಿರಲಿಲ್ಲ. ಎವೆ ಮುಚ್ಚದೆ ಅವಳು ಅವನನ್ನೇ ನಿಟ್ಟಿಸುತ್ತಿದ್ದಂತೆ, ಅವನು ಅವಳ ಕೈಯ್ಯನ್ನು ಮೃದುವಾಗಿ ಹಿಡಿದು ತನ್ನ ತುಟಿಗೆ ಒತ್ತಿಕೊಂಡ.

ತನ್ನ ಈ ಧೈರ್ಯದ ಬಗ್ಗೆ ಅವನಿಗೆ ನಂಬಿಕೆ ಇರಲಿಲ್ಲ. ಅವನ ಮೈಯೆಲ್ಲ ಯಾವುದೋ ಅವ್ಯಕ್ತಭೀತಿಯಿಂದ ನಡುಗುತ್ತಿತ್ತು. ಆದರೆ ವಿರೋಧಿಸುವ ಯಾವ ಪ್ರತಿಕ್ರಿಯೆಯೂ ಅವಳಿಂದ ಕಂಡುಬಾರದಿದ್ದಾಗ, ಸ್ವಲ್ಪ ಸ್ವಲ್ಪವಾಗಿಯೇ ಅವನು ಧೈರ್ಯತಂದುಕೊಳ್ಳುತ್ತಿದ್ದ. ಅವನು ಎದುರಿಸುತ್ತಿದ್ದ ಅವಳ ನೋಟದಲ್ಲಿ ಏನು ಅಡಗಿದೆಯೆಂದು ಅವನೇನು ಊಹಿಸಬಲ್ಲ?

ಅದೇ ಹೊತ್ತಿಗೆ, ಒಳಗಿನಿಂದ ವನಿತಾ ಅಳುವ ದನಿ ಕೇಳಿಸಿತು. ಆಗ ಅವನ ಕೈಹಿಡಿತ ತಾನಾಗಿ ಸಡಿಲಿಸಿಹೋಗಿತ್ತು. ಅವಳು ಆ ನಿರ್ವಿಕಾರತೆಯಲ್ಲೇ, ಮತ್ತೆ ಅವನನ್ನು ನೋಡದೆಯೇ ಒಳಗೆ ನಡೆದಳು. ಅವನು ಅಲ್ಲಿಂದ ಹೊರಬಿದ್ದ. "ಎಂದಾದರೂ ಇದು ನನ್ನ ಕೈತುತ್ತು" ಎಂಬ ತೃಪ್ತಿಯನ್ನು ಅವನೀಗ ಪಡೆದಂತಾಗಿತ್ತು.

ಮೋಟಾರು ಚಲಿಸುತ್ತಿದ್ದಂತೆ ಆ ಚಿತ್ರವನ್ನೆಲ್ಲ ಅವನು ಮತ್ತೊಮ್ಮೆ ಸ್ಮರಿಸಿಕೊಂಡ: "ಶಶಿಕಲೆಗೆ ನನ್ನ ಅಂತರಂಗದ ಅರಿವೂ ಆಗದಿದೆಯೆ? ಅವಳ ಒಪ್ಪಿಗೆಯೂ ಇದೆ. ಇಲ್ಲದಿದ್ದರೆ ಅವಳಾಗ ಸುಮ್ಮನಿರುತ್ತಿದ್ದಳೇಕೆ? ಅವಳೇನು ಹರಯ ಸರಿದವಳಲ್ಲ. ತಾರುಣ್ಯ ಎಲ್ಲರಿಗೂ ಒಂದೇ!" ಎಂದು ಅವನು ಏನೇನೋ ಅಂದುಕೊಳ್ಳುತ್ತಿದ್ದಾಗಲೇ, ಮೋಟಾರು ಸ್ಟೆಂಡಿಗೆ ಬಂದು ನಿಂತಿತ್ತು. ಪ್ರಯಾಣ ಮುಗಿದಿತ್ತು. ಆಗಲೇ ಅವನ ವಿಚಾರವೂ ನಿಂತಿತ್ತು.

ಇದುವರೆಗಿನ ಬೇಸರವನ್ನೆಲ್ಲ ಕಳೆದು, ಕೈಚೀಲವನ್ನು ಹಿಡಿದುಕೊಂಡು ಮೋಟಾರಿನಿಂದ ಇಳಿದು, ಉತ್ಸಾಹದಿಂದ ಅವನು ಬಿಡಾರಕ್ಕೆ ಮುಟ್ಟಿದಾಗ ರಾತ್ರಿ ಮೂರು ತಾಸಾದರೂ ಕಳೆದಿರಬೇಕು. "ಇದೇ ಈಗ ಬಾಗಿಲು ತೆರೆದು ಒಳಗೆ ಬಂದ ಸದ್ದಿಗೆ, ಆಚೆಗೇ ಇರುವ ಶಶಿಕಲೆಗೆ ನಾನು ಬಂದಿರುವುದು ಗೊತ್ತಾಗದಿರಲು ಸಾಧ್ಯವೇ ಇಲ್ಲ. ನನ್ನನ್ನು ವಿಚಾರಿಸುವುದಕ್ಕೆಂದು ಅವಳೇ ಬರುತ್ತಾಳೆ, ಬರಲಿ." ಎಂದು ಅವನು ಹಾಗೇ ಬಾಗಿಲನ್ನು ತೆರೆದಿಟ್ಟು, ಕತ್ತಲಲ್ಲೇ ಆರಾಮಖುರ್ಚಿಯನ್ನು ತಡಕಿ ಅದರಲ್ಲಿ ಬಿದ್ದುಕೊಂಡ.

ಕಳೆದ ಎರಡು ದಿನಗಳಿಂದ ಅವನ ಮೆದುಳಿಗೆ ವಿಶ್ರಾಂತಿಯಿರಲಿಲ್ಲ. ಪ್ರಯಾಣದ ಆಯಾಸ ಬೇರೆ. ತಾನು ಬಿದ್ದುಕೊಂಡಿದ್ದಷ್ಟೇ ಅವನಿಗೆ ಗೊತ್ತು. ಅಲ್ಲೇ ನಿದ್ದೆಹೋದ ಅವನನ್ನು ಎಚ್ಚರಿಸಿದ್ದು ರಾತ್ರಿಯ ತಂಗಾಳಿ. ಅವನು ಕಣ್ಣು ಬಿಟ್ಟಾಗ ಕಂಡಿದ್ದು, ತೆರೆದ ಬಾಗಿಲಿನಿಂದ ಒಳಗೆ ನುಗ್ಗಿ ಬರುತ್ತಿದ್ದ ಬೆಳುದಿಂಗಳು. ಆಗ ಅವನು ನೆನಸಿಕೊಂಡ: ಇಂದು ಮತ್ತೆ ಅದೇ ಹುಣ್ಣಿವೆ—ಎಂದು.

ಅವನು ಪೂರ್ಣ ಎಚ್ಚರಗೊಂಡಾಗ ಮತ್ತೆ ಅವನ ಮೊದಲಿನ ವಿಚಾರ ಮುಂದುವರಿದಿತ್ತು. "ಎಷ್ಟಾದರೂ ಅವಳು ಹೆಣ್ಣು! ನಾಚಿಕೆ ಸಹಜ!! ನಾನೇ ಬರಲಿ ಎಂದು ಕಾದುಕೊಂಡಿರಬೇಕು. ಇವಳೂ ತುಂಬ ಹುಡುಗಾಟಿಕೆಯವಳಿರಬೇಕು." ಎಂದುಕೊಳ್ಳುತ್ತ ಎದ್ದು ಹೊರಟ. ಹೊರಬಾಗಿಲನ್ನು ಸರಿಸಿಕೊಂಡು, ಅಂಗಳವನ್ನಿಳಿದು, ಹಗುರಾಗಿ ಹೆಜ್ಜೆಯಿಡತೊಡಗಿದ್ದ ಹಿಂಬಾಗಿಲಿನೆಡೆಗೆ. ಹಸಿವು ಅವನಿಗೆ ಪೂರಾ ಮರೆತುಹೋಗಿತ್ತೀಗ.

ಶಿಶಿರದ ಚಂದ್ರ ಪೂರ್ಣಕಳೆಯಿಂದ ಹಾಲುನಗೆಯನ್ನು ಹೊರಸೂಸುತ್ತಿದ್ದ. ಯಾರನ್ನೂ ಹುಚ್ಚುಹಿಡಿಸುವಂತಹ ಬೆಳದಿಂಗಳು ಅದು. ಮೊದಲೇ ಹುಚ್ಚನಾಗಿದ್ದ ಅನಂತ, ಅಂಗಳವನ್ನೆಲ್ಲ ಹುಡುಕುವ ನೋಟದಿಂದ ಒಂದು ಬಾರಿ ನಿಟ್ಟಿಸಿದ "ಅಂದು ಕುಳಿತಂತೆಯೇ ಇಂದೂ ಶಶಿಕಲೆ ಇಲ್ಲೇ ಎಲ್ಲಾದರೂ ಬೆಳುದಿಂಗಳನ್ನು ಸೇವಿಸುತ್ತ ನನ್ನ ನಿರೀಕ್ಷೆಯಲ್ಲಿ ಕುಳಿತಿರಬಹುದೆ? ಈ ರಸಿಕತೆ ಅವಳ ವಯಸ್ಸಿಗೆ ಸಹಜ." ಎಂದು. ಬರಿದಾದ ಅಂಗಳವನ್ನು ತಿಂಗಳ ಬೆಳಕಷ್ಟೇ ತುಂಬಿಕೊಂಡಿರುವುದನ್ನು ನೋಡಿ "ಇಲ್ಲ. ನಾನು ಬರುವುದನ್ನು


ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

**ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್**

**ಗಾಂಧಿಚೌಕ, ಧಾರವಾಡ**

ಕಂಡು ಚಿನ್ನಾಟಕ್ಕಾಗಿ ಅವಳು ಒಳಸೇರಿಕೊಂಡಿರಬೇಕು" ಎಂದುಕೊಳ್ಳುತ್ತ ಅವನು ಮುಂದಡಿಯಿಟ್ಟ.

ತನ್ನ ಕೈಗಳಿಂದೊಮ್ಮೆ ಬಾಗಿಲನ್ನು ನೂಕಿದಾಗ, ಒಳಗಿನಿಂದ ಅಗಳಿಹಾಕಿದೆಯೆಂದು ಅವನಿಗೆ ಗೊತ್ತಾಯಿತು. "ಬಂದು ಇಷ್ಟು ಹೊತ್ತಾಗಿದ್ದರೂ ತನ್ನಲ್ಲಿಗೆ ಬರಲಿಲ್ಲವೆಂಬ ನನ್ನ ಮೇಲಿನ ಸಿಟ್ಟಿಗೆ ಅವಳು ಹೀಗೆ ಮಾಡಿದ್ದಾಳೆ. ನನಗೆ ಗೊತ್ತಿಲ್ಲವೆ ಹೆಂಗುಸಿನ ಹುಸಿ-ಮುನಿಸು? ನನ್ನ ದನಿ ಕೇಳುತ್ತಲೇ ಅವಳು ಬಾಗಿಲನ್ನು ತೆರೆದೇ ತೆರೆ-ಯುತ್ತಾಳೆ. ಪ್ರಿಯನಾದವನಿಂದ ಬಾಯಿತುಂಬಾ ತನ್ನ ಹೆಸರು ಹಿಡಿದು ಒಲವಿನಿಂದ ಕರೆಸಿಕೊಳ್ಳಬೇಕು—ಎಂದು ಯಾವ ತರುಣಿ ಬಯಸುವುದಿಲ್ಲ? ಇದನ್ನೆಲ್ಲ ಸಿನೆಮಾದಲ್ಲಿ ಎಷ್ಟು ಬಾರಿ ಕಂಡಿಲ್ಲ? ಇರುವ ಮಾತೇ ಹೀಗಿದ್ದ ಮೇಲೆ ಮತ್ತೇನು? ಪಾಪ! ಹಾಗೆ ಕರೆಯುವುದಕ್ಕೆ ಶಶಿಕಲೆಗೆ ಇದ್ದವರು ಮತ್ತೆ ಯಾರು?" ಎಂದು ತನ್ನ ಎಣಿಸಿಕೆಯನ್ನು ಸಮರ್ಥಿಸಿಕೊಳ್ಳುತ್ತ ಅವನು ಒಂದು ಬಾರಿ "ಶಶೀ" ಎಂದು ಹಗುರಾಗಿ ಕರೆದ. ಆ ಹೆಸರು ಅವನಿಗೆಷ್ಟು ಮಾದಕವಾಗಿತ್ತೋ ಅಷ್ಟೇ ಆ ಕರೆಯಲ್ಲಿ ಅವನ ಮಮತೆಯೆಲ್ಲವೂ ಬೆರೆತಿತ್ತು. ಇದೇ ರೀತಿ ಅವನು ಮೊದಲ ಬಾರಿ ಅವಳನ್ನು ಕರೆದಿರಲಿಲ್ಲವೆ.... ಅಂದು ಹೋಗುವ ಮೊದಲು? ಆಗ ಅವಳು ಉತ್ತರ ಕೊಡದಿದ್ದರೂ ಆ ಕರೆ ತನಗೆ ಅಪ್ರಿಯವೆಂದೇನೂ ಹೇಳಿರಲಿಲ್ಲ.

"ಇನ್ನೇನು, ಬಂದು ಬಾಗಿಲನ್ನು ತೆರೆಯುತ್ತಾಳೆ" ಎಂದು ಒಂದುಕ್ಷಣ ನಿಂತ. ಒಳಗಿನಿಂದ ಯಾವ ಸದ್ದೂ ಕೇಳಿಸಲಿಲ್ಲ ಅವನಿಗೆ. "ನನ್ನಂತೆಯೇ ಅವಳಿಗೂ ಸ್ವಲ್ಪ ಜಂಪುಹತ್ತಿರಬೇಕು. ಎಚ್ಚರಿಸಿದರಾಯಿತು" ಎಂದುಕೊಂಡು, ಮತ್ತೊಮ್ಮೆ "ಶಶೀ" ಎಂದು ಸ್ವಲ್ಪ ದೊಡ್ಡ ಧ್ವನಿಯಲ್ಲಿ ಕರೆದು, ಬಾಗಿಲನ್ನು ಎರಡು ಬಾರಿ ಅವನು ಕಾಲಿನಿಂದ ತುಳಿದಾಗ, ನಿಶ್ಚಿಂತೆಯಿಂದ ನಿದ್ದೆ ಹೋದ ಅವಳು ಎಚ್ಚತ್ತಿದ್ದಳು. ಅಷ್ಟರಲ್ಲೇ ಮತ್ತೆರಡು ಬಾರಿ ಅವನು ಅವಳ ಹೆಸರುಹಿಡಿದು ಕರೆದಿದ್ದ. ಆಗಲೇ ಅವಳಿಗೆ ತಿಳಿದದ್ದು—ಅವನು ಅನಂತನೇ ಎಂದು. ನಿಧಾನವಾಗಿ ಎದ್ದು, ಕತ್ತಲಲ್ಲೇ ಬಂದು ಬಾಗಿಲನ್ನು ತೆರೆದವಳೇ ಮತ್ತೆ ಒಳಸೇರಿಕೊಂಡಳು. ಅನಂತ ಅವಳನ್ನೇ ಅನುಸರಿಸಿ ಬರುತ್ತಿದ್ದಂತೆ, ತನ್ನ ಹಾಸಿಗೆಯ ಪಕ್ಕದಲ್ಲಿ ಇಟ್ಟುಕೊಂಡಿದ್ದ, ಸಣ್ಣಗೆ ಮಿನುಗುತ್ತಿದ್ದ ಕಂದೀಲನ್ನು ದೊಡ್ಡದಾಗಿ ಮಾಡಿದಳು. ಆ ದೀಪ ಪ್ರಕಾಶವನ್ನು ಹರಡಿದಾಗ, ಅನಂತ ತನ್ನ ಎದುರಿಗೆ ಕಂಡ ಆಕೃತಿ, ಅವನನ್ನು ದಿಗ್ಭ್ರಾಂತಗೊಳಿಸಿತ್ತು. "ಶಶಿಕಲೆಯ ಮನೆಯಲ್ಲಿ ಇದಾವ ಮುದಿಯ ಹೆಂಗುಸು ಬಂದಿದ್ದಾಳೆ? ಇಂತಹ ಹೊತ್ತಿನಲ್ಲಿ ನಾನಿಲ್ಲಿ ಪ್ರವೇಶಿಸಿ ಎಂತಹ ಹೀನಾಯಕ್ಕೆ ಗುರಿಯಾದೆ!" ಎಂದುಕೊಳ್ಳುತ್ತ ಅವನು, ಬೆದರಿದ ಕಣ್ಣುಗಳಿಂದ ಎದುರು ನಿಂತಿದ್ದ ಆಕೃತಿಯನ್ನೇ ನಿಟ್ಟಿಸು-ತ್ತಿದ್ದ. ಮೊದಲ ನೋಟಕ್ಕೆ ಅವನಿಗೆ ಗುರುತು ಹತ್ತಿರದಿದ್ದರೂ ಮರುಕ್ಷಣದಲ್ಲೇ ಅವಳು ಶಶಿಕಲೆಯೇ ಎಂದು ತಿಳಿದಾಗ, ನಿಂತ ನೆಲವೇ ಕುಸಿದುಹೋದರೆ ಆಗುವಷ್ಟು ಅವನು ಬೆಚ್ಚಿಬಿದ್ದ. ಒಮ್ಮೆಲೇ ಅವನು ಆಕಾಶದಿಂದ ನೆಲಕ್ಕೆ ಉರುಳಿದಹಾಗಿತ್ತು. ಕಲ್ಪನಾವಿಲಾಸ ಸಂಪೂರ್ಣವಾಗಿ ಕರಗಿಹೋಗಿತ್ತೀಗ. ಎಂತಹ ಪ್ರತಿಕ್ರಿಯೆ ಅವನನ್ನು ಕಾದಿತ್ತು! ಅವನ ಅಸ್ತಿತ್ವವನ್ನೇ ಅದು ಅಲುಗಿಸಿಬಿಟ್ಟಿತ್ತು.

ಮೈಯ ಮುಚ್ಚಿದ್ದ ಬಿಳಿಯ ಸೀರೆಯ ಸೆರಗು ಅವಳ ನುಣುಪಾದ ತಲೆಯನ್ನು ಮುಚ್ಚಿತ್ತು. ನಿರ್ವಿಕಾರಳಾಗಿ ನಿಂತ ಅವಳು, ಯಾವನೋ ಅಪರಿಚಿತನನ್ನು ನೋಡುವಂತೆ ಅವನನ್ನೇ ನಿಟ್ಟಿಸುತ್ತಿದ್ದಳು. ಆ ನೋಟವನ್ನು ಎದುರಿಸುವ ಸಾಹಸ ಅವನಲ್ಲೀಗ ಉಳಿದಿರಲಿಲ್ಲ. ತೆರೆದ ಬಾಗಿಲಿನಿಂದ ಒಳಗೆ ನುಗ್ಗಿಬರುತ್ತಿದ್ದ ತಂಗಾಳಿಗೆ ಅವನ ಮೈ ಕೊರೆಯುತ್ತಿದ್ದರೂ, ಅನಂತನ ಮೈ ಅಡಿಯಿಂದ ಮುಡಿಯ ವರೆಗೂ ಬೆವೆತುಹೋಗಿತ್ತು. ಮತ್ತೆ ಅವನಿಂದ ಅಲ್ಲಿ ನಿಲ್ಲುವುದಾಗಲಿಲ್ಲ. ಅಷ್ಟು ಶಕ್ತಿಯೂ ಅವನಲ್ಲೀಗ ಉಳಿದಿರಲಿಲ್ಲ. ಬರುವಾಗಿನ ಹುರುಪು ಹಾರಿಹೋಗಿತ್ತೀಗ. ಹೇಗೋ ಸಾವರಿಸಿ-ಕೊಂಡು ಅವನು ಅಲ್ಲಿಂದ ಹೆಜ್ಜೆ ಕೀಳುತ್ತಿದ್ದಂತೆಯೇ, ಊರ ಅಗಸೆ-ಯಲ್ಲಿ ನೆರೆದ ಜನ ನಡೆಸಿದ 'ಕಾಮದಹನ'ದ ಕೂಗು ಆ ರಾತ್ರಿಯ ನೀರವತೆಯನ್ನು ಕಲಕಿಸಿತ್ತು.

ಅದುವರೆಗೂ ಕಲ್ಲಾಗಿನಿಂತ ಶಶಿಕಲೆ, ಆ ಕೂಗಿಗೆ ಎಚ್ಚತ್ತಾಗ ಅನಂತ ಅಲ್ಲಿ ಇರಲಿಲ್ಲ. ಅದೇ ನಿರ್ವಿಕಾರತೆಯಲ್ಲಿ ಮತ್ತೆ ಬಾಗಿಲ-ನ್ನಿಕ್ಕಿಕೊಂಡು, ಹಾಸಿಗೆಯನ್ನು ಕಾಣುತ್ತಲೇ ಅಲ್ಲೇ ನಿದ್ದೆಹೋಗಿದ್ದ ತನ್ನ ಕೂಸನ್ನು ಕಂಡಾಗ, ಅವಳಿಗರಿಯದಂತೆಯೇ ಕಣ್ಣೀರ ಕೋಡಿಯೇ ಒತ್ತರಿಸಿಬಂದಿತ್ತು. "ಮಗಳೇ, ಯಾವ ಪಾಪಮಾಡಿದೆ-ವೆಂದು ಹೆಣ್ಣಾಗಿ ಹುಟ್ಟಿ ಬಂದೆವು?" ಎಂದು ಅಳುತ್ತಲೇ ಅವಳು, ಮಗಳು ನಿದ್ದೆಹೋಗಿದ್ದಾಳೆಂಬುದನ್ನೂ ಮರೆತು ಬಾಚಿ ತಬ್ಬಿ-ಕೊಂಡಾಗ, ಬೆದರಿದ ಆ ಕೂಸೂ ಅಳತೊಡಗಿತ್ತು.... ತಾಯ ದುಃಖದಲ್ಲಿ ತಾನೂ ಪಾಲುಗೊಂಡವಳಂತೆ.

---

(೪೨೮ನೆಯ ಪುಟದಿಂದ ಮುಂದುವರಿದುದು.)

ಮನನ, ನಿಧಿಧ್ಯಾನಗಳನ್ನು ಮಾಡಬೇಕು. ಅದರ ದರ್ಶನ, ಶ್ರವಣ, ಮನನ ಮತ್ತು ಯಥಾರ್ಥ ಜ್ಞಾನದಿಂದ ಎಲ್ಲ ಸತ್ಯತತ್ತ್ವವೂ ಅವ-ಗತವಾಗುವುದು.'

ಮುಂದೆ ಯಾಜ್ಞವಲ್ಕ್ಯನು ಬಗೆಬಗೆಯ ತರ್ಕಗಳಿಂದಲೂ ಉದಾಹರಣೆಗಳಿಂದಲೂ ಮೈತ್ರೇಯಿಗೆ ತತ್ತ್ವಜ್ಞಾನದ ಉಪದೇಶ-ವನ್ನು ಮಾಡಿ "ಮೈತ್ರೇಯಿ, ನೀನಿದನ್ನು ಸ್ಥಿರಬುದ್ಧಿಯಿಂದ ನಂಬು! ಇದೇ ಅಮೃತತ್ವ" ಎಂದು, ತತ್ತ್ವಸಮಸ್ಯೆಗಳನ್ನೆಲ್ಲ ಬಿಡಿಸಿ ಬಿಡಿಸಿ ಹೇಳಿದನು. ಯಾಜ್ಞವಲ್ಕ್ಯನ ಈ ಅಮೃತಮಯ ಉಪದೇಶದಿಂದ, ಮೈತ್ರೇಯಿ ತತ್ತ್ವರಹಸ್ಯವನ್ನು ಅರಿತುಕೊಂಡು ಕೃತಾರ್ಥಳಾಗಿ ಬಾಳಿದಳು. ಯಾಜ್ಞವಲ್ಕ್ಯರು ಸಂನ್ಯಾಸಿಗಳಾಗಿ ಅರಣ್ಯಕ್ಕೆ ಹೋದರು. ಮೈತ್ರೇಯಿ ತತ್ತ್ವಚಿಂತನೆಯಲ್ಲಿಯೆ ತೊಡಗಿ, ಸಿದ್ಧಿಯನ್ನು ಪಡೆದು, ಭಾರತೀಯ ತತ್ತ್ವವಿದುಷಿಯರ ಮಾಲಿಕೆ-ಯಲ್ಲಿ, ಒಂದು ಜ್ಞಾನರತ್ನವಾಗಿ ಮೆರೆಯತೊಡಗಿದಳು.

---



ಜಯಂತಿ

# ಶಿಲಾವಚನ

( ದೃಶ್ಯಕವನ )

ಶ್ರೀ. ಅರವಿಂದ ನಾಡಕರ್ಣಿ, ಬಿ. ಎಸ್ಸಿ., ಎಲ್ ಎಲ್. ಬಿ. ಮುಂಬಯಿ

卐

[ಹಿನ್ನೆಲೆ:- ರಂಗದ ಮೇಲೆ ಶುಭ್ರವಾದ ಬೆಳಕು. ಅಲ್ಲಲ್ಲಿ ಹಸುರಿನ ಛಾಯೆ. ಸಮಯ ವಸಂತಋತುವಿನಾರಂಭ. ಒಂದೆಡೆ ವೃದ್ಧಪುರುಷ ನಿಂತಿದ್ದಾನೆ. ಬಳಿಯಲ್ಲಿ ಚಿಕ್ಕ ಬಾಲಕ. ಬಾಲಕನ ಕಳೆಗೊಂಡ ಮುಖ ನೋಡಿದರೆ, ಭವಿಷ್ಯದಲ್ಲಿ ಪಡೆವ ಗುಣಗಳ ಚಿಹ್ನ ತೋರುವುವು. ಬಾಲಕನನ್ನು ಹತ್ತಿರ ಬರಮಾಡಿಸಿ ವೃದ್ಧನು ವಿಚಾರಮಗ್ನನಾಗಿ, ಆತ್ಮಸಂತೋಷದಿಂದ ಉಸುರುವನು.]

**ವೃದ್ಧ:— ಇತ್ತ ಬಾ ಮಗು!**

ಅದೋ ನೋಡು ನಿರಭ್ರಗಗನದಿ ನಿರಂತರ ಬೆಳಗುವ
ಮಹಾದೀಪ! ಸುತ್ತಲೂ ನೋಡು.
ತೊರಗಿದ ಗಿಡಬಳ್ಳಿಗೆ ಚಿಗುರಿದುವು ಎಲೆಯಲೆ ಹಿಂಡಾಗಿ.
ನಡುನಡುವೆ ಚಿಗುರಿ ಅರಳಿದುವು ಹೂಹೂವು ಗೊಂಚಲಾಗಿ.
ಅಲ್ಲಲ್ಲಿ ಮೂಡಿ ಪುಟಿದುವು ಮಿಡಿಮಿಡಿ.
ಅನಂತರ ಮಾಗುವುವು ಹಣ್ಣು ಹಣ್ಣು ಜೊಂಪವಾಗಿ.
ನೀನಿನ್ನೂ ಎಳೆಯ ಸಸಿ.
ಗೊಂಬೆಯಾಟದಲಿ ವ್ಯಮರೆತ ಉದಯರವಿ.
ಇನ್ನು ಮುಂದುಂಟು ನಿನ್ನ ಪ್ರತಾಪ.
ಶಾಲೆ-ಕಾಲೇಜುಗಳಲಿ ಮೊದಲನೆಯ ನಂಬರು ಹೊಡೆದು
ಮನೆಯ ಮುದ್ದಾಗುವೆ ದೇವನಾಗುವೆ.
ಮನವೊಲಿದು 'ಲೈನು' ಹಿಡಿದು ತಳವೂರುವೆ ಪ್ರಶಾಂತ-
ಬ್ಲಾಕಿನಲಿ.
ಬಳಿಕ ಓಡಿ ಬರುವಳು ಪ್ರೇಮದೇವತೆ ವಸಂತಹಾಸದಲಿ ನಕ್ಕು.
ಮುಂದೇನು ಕೇಳುವೆಯಂತೀ!
ಏರಿದ್ದೆಲ್ಲ ಹಿಮಾಚಲ ಶೃಂಗ!
ನುಡಿದದ್ದೆಲ್ಲ ವೇದಾಂಗ!
ಮಳೆಹಾಸುವುದು ಹುಲ್ಲುಹಾಸಿಗೆ.
ವಸಂತ ಸುರಿಯುವುದು ಹೂಮಳೆ ಹಣ್ಣುಕಾಣಿಕೆಯಿತ್ತು.
ಸೂರ್ಯ ಚಂದ್ರ ಹಚ್ಚುವರು ವಿದ್ಯುದ್ದೀಪ.
ಮಾರುತ ಒತ್ತುವನು 'ಫೆನಿನ' ಸ್ವಿಚ್ಚು ಸರ್ವದಾ.
ಅದುವೇ ಜೀವನ ಶತ್ರುಯುಕ್ತ ಬಾಳುವೆ. ಅಹಾಹಾ.......

[ಪ್ರೇಮದಿಂದ ಬಾಲಕನನ್ನು ತಬ್ಬಿಕೊಳ್ಳುವನು. ಇಬ್ಬರೂ ಪ್ರಾಮಾಣಿಕತೆಯಿಂದ ನಗುವರು.]

## ೨ನೆಯ ಪ್ರವೇಶ

[ಹಿನ್ನೆಲೆ:— ರಂಗದ ಮೇಲೆ ನಸುಗತ್ತಲು. ಹೊಗೆಹೊಗೆಯಾದ ವಾತಾವರಣ. ಮಿಂಚು-ಗಾಳಿಗಳ ಹೊಡೆತದ ಗುರುತು. ಒಂದೆಡೆ ಇಳಿವಯಸ್ಸಿಗೆ ಕಾಲಿಡುವ ಮೊದಲನೆಯ ತರುಣ ನಿಂತಿದ್ದಾನೆ ಶೂನ್ಯದೃಷ್ಟಿ ಬೀರುತ್ತ. ಇನ್ನೊಂದೆಡೆಯಿಂದ ೨ನೆಯ ತರುಣ ಚಿಂತಾಮಗ್ನನಾಗಿ ಬರುವನು. ಇಬ್ಬರದೂ ದೃಷ್ಟಿ ಕೂಡುವುವು.]

**೨ನೆಯ ತರುಣ:—** ( ಬೇಸರದ ಧ್ವನಿಯಲ್ಲಿ )
ಮುಗಿಲು ಹೊಡೆಯುತಿದೆ ಸಿಡಿಲ ತುಬಾಕಿ
ಮೋಡದ ಮರೆಯಾಚೆಯಿಂದ.
ಭುಸುಗುಟ್ಟುವ ಗಾಳಿಗಳು ಹಾರಿಸುತಿವೆ
ಅದೇ ಕಟ್ಟಿದ ಗುಡಿಯ ಮಾಡನ್ನು,
ನೆಗಸೇರಿದ ಹಳ್ಳ ಮಣ್ಣುಗೂಡಿಸಿತು
ಹಾಗೂ ಹೀಗೂ ನಿಲಿಸಿದ ಚಿಕ್ಕ ಗಿರಣಿ... .. ಹಾ.. ....

( ನಿಟ್ಟುಸಿರ ಬಿಡುವನು. )

**೧ನೆಯ ತರುಣ:—** ( ಗಂಭೀರಧ್ವನಿಯಲ್ಲಿ )
ಎದೆಗುಂದಬೇಡ ಅಜೇಯ ಶಕ್ತಿಯು ಮಗುವೇ.

**೨ನೆಯ ತರುಣ:—** ( ಬೇಸರದ ಧ್ವನಿಯಲ್ಲಿ )
ಕಾಲಕಳೆಯಿತು ಸ್ವಾಮಿ ಈ ಮಾತಿಗೆ.

**೧ನೆಯ ತರುಣ:—** ಏನಾಗಿದೆ ನಿನಗೆ ಏನಾಯಿತು ಹೇಳು!

**೨ನೆಯ ತರುಣ:—** ಹೇಳಲೆಂದರೆ ಚಿಕ್ಕಂದಿನಿಂದಲೂ ರಾಮಾಯಣ!
ಒಳ್ಳೆಯ ಸ್ಥಳದಲ್ಲಿ ಹುಟ್ಟಿಯೂ ಆಟಿಕೆಗಾಗಿ
ಅಳುಮೋರೆಯಲಿ ಮೂಲೆ ಸೇರಿದೆ.

**೧ನೆಯ ತರುಣ:—**(ಗಂಭೀರವಾಗಿ)
ಅಂತೆಯೇ ಸಂತೈಸಿಕೋ ಮಗುವೇ.

**೨ನೆಯ ತರುಣ:—** ನಾ ಹಾಡಬಲ್ಲೆನಾದರೂ
ತಿಳಿಯದ ಅಣ್ಣ-ತಮ್ಮಂದಿರಿಂದ ಹಾಡಿಸಿ
ಹೊಗಳಿದರವರನ್ನು ನನ್ನ ಹಿರಿಯರು.

**೧ನೆಯ ತರುಣ:—** ನೀನೂ ಸೇರಿ ಅವರನ್ನು ಹೊಗಳು.

**೨ನೆಯ ತರುಣ:—** ಉಚ್ಚಶಿಕ್ಷಣದಲ್ಲಿ ನಾ ಹಂಬಲಿಸಿದ ದಾರಿ.
ತೊರೆದೆ ನನ್ನವರೆಂಬವರನು ತಣಿಸಲೆಂದು.

**೧ನೆಯ ತರುಣ:—** ಅದೇ ನಿನ್ನ ಭಾಗ್ಯ!

**೨ನೆಯ ತರುಣ:—** ಈಗ ನನಗೂ ನೌಕರಿಗೂ ದ್ವಂದ್ವ.

**೧ನೆಯ ತರುಣ:—** ಅದೇ ನಿನ್ನ ಗಟ್ಟಿಗತನದ ಗುರುತು.

**೨ನೆಯ ತರುಣ:—** ಬೇಡಾದಲ್ಲಿ ಬೇಡಾದವರೊಡನೆ ವಾಸಿಸಿದೆ.

**೧ನೆಯ ತರುಣ:—** ಹಾಗೇ ನಿನ್ನ ಮನ ಕಬ್ಬಿಣವಾಗಲಿ.

( ೪೨೯ನೆಯ ಪುಟಕ್ಕೆ ಮುಂದುವರಿದಿದೆ.)

# ಭಾರತೀಯ ತತ್ತ್ವವಿದುಷಿಯರು

## ಗಾರ್ಗಿ ಮತ್ತು ಮೈತ್ರೇಯಿ

(ವ್ಯಕ್ತಿತ್ವ ಪರಿಚಯ)

**ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ**

●

**ತತ್ತ್ವಾನ್ವೇಷಣೆ, ಜ್ಞಾನಸಾಧನೆ ಇವು ಕೇವಲ ಪುರುಷರ ಕರ್ತವ್ಯಗಳೆಂದು ನಮ್ಮ ಸನಾತನತತ್ತ್ವ-ಚರಿತ್ರೆ ಒಪ್ಪುವುದಿಲ್ಲ. ಗೃಹಿಣಿಯರಾಗಿ ಇರಬೇಕೆನ್ನುವವರಿಗೆ ಅವುಗಳ ಆವಶ್ಯಕತೆಯಿಲ್ಲವೆಂದು ಹೇಳಿರಬಹುದು. ಇದು ಗೃಹಿಣೀತ್ವಕ್ಕೆ ದೂಷಣವೇನೂ ಅಲ್ಲ; ಭೂಷಣವೇ ಆಗಿದೆ.**

●

ಭಾರತದ ಅತಿ ಪ್ರಾಚೀನ ತತ್ತ್ವಗ್ರಂಥಗಳೆಂದರೆ ವೇದಗಳು; ಅವುಗಳ ಭಾಗಗಳೇ ಎನಿಸಿಕೊಳ್ಳುವ ಉಪನಿಷತ್ತುಗಳು. ಇವು ಅಪೌರುಷೇಯ ಗ್ರಂಥಗಳೆಂದೂ ಅನಾದಿಕಾಲದುವೆಂದೂ ನಮ್ಮ ಜನರು ನಂಬುಗೆಯಿರಿಸಿಕೊಂಡು ಬಂದಿದ್ದಾರೆ. ವೇದದ ಸೂಕ್ತ-ಗಳನ್ನೂ ಉಪನಿಷದ್ವಾಣಿಗಳನ್ನೂ ಬೇರೆ ಬೇರೆ ಋಷಿಗಳು 'ಕಂಡು ಹಿಡಿದಿದ್ದಾರೆ' ಎಂದು ಹೇಳುವರಲ್ಲದೆ, ಅವರೇ ರಚನಾಕಾರರೆಂದು ನಮ್ಮ ಸಾಂಪ್ರದಾಯಿಕ ಭಾವನೆಯವರು ಒಪ್ಪುವುದಿಲ್ಲ. ಇಂದಿನ ವೈಜ್ಞಾನಿಕ ಪ್ರಗತಿಯ ಕಾಲದಲ್ಲಿ ಬಾಳುತ್ತಿರುವ ನವೀನ ವಿಚಾರ-ದವರು ವೇದ, ಉಪನಿಷತ್ತು ಮೊದಲಾದ ತತ್ತ್ವಗ್ರಂಥಗಳು ನಮ್ಮ ಪ್ರಾಚೀನರ 'ಕೃತಿ'ಗಳೆಂದು ಹೇಳುವರು; ಅವುಗಳ ನಿರ್ಮಿತಿಯ ಕಾಲವನ್ನೂ ನಿರ್ಣಯಿಸುತ್ತಿರುವರು. ನಿರ್ಮಿತಿಯ ಕಾಲದ ಬಗೆಗೆ ಇನ್ನೂ ಸಂಶೋಧಕರಲ್ಲಿ ಏಕವಾಕ್ಯತೆಯು ಇಲ್ಲವೇನೋ ಸರಿಯೆ; ಆದರೆ ವೇದೋಪನಿಷತ್ತುಗಳು ಒಂದುಕಾಲದಲ್ಲಿ ತತ್ತ್ವಸಂಶೋಧಕ ಋಷಿ-ಮುನಿಗಳಿಂದ ನಿರ್ಮಿತವಾದುವೆಂಬುದನ್ನು ಎಲ್ಲರೂ ಒಪ್ಪುವರು.

ಭಾರತದ ಪೌರಾಣಿಕ—ಐತಿಹಾಸಿಕ ಕಾಲದಲ್ಲಿ, ಆಧ್ಯಾತ್ಮಿಕ-ಆಧಿಭೌತಿಕಗಳ ಸತ್ಯ ತತ್ತ್ವದ ಸಂಶೋಧನೆ ಕಡಮೆಯಾಯಿತು. ಲೌಕಿಕ ವ್ಯವಹಾರನೀತಿ, ಪರಮಾತ್ಮ ವಿಷಯಕವಾದ ಭಕ್ತಿ ಇವು-ಗಳಿಗೇ ಪ್ರಾಶಸ್ತ್ಯ ಬಂದು ಕುಳಿತಿತು. ಈ ಅವಧಿಯಲ್ಲಿ ಭಕ್ತರು, ಮತ-ಪಂಥಗಳ ನಿರ್ಮಾಪಕರು ಇವರೇ ಹೆಚ್ಚಾಗಿರುವರು ಹೊರತು, ಶುದ್ಧ ತತ್ತ್ವಸಂಶೋಧಕರಾಗಿ ಹೊರಟವರ ಸಂಖ್ಯೆ ತೀರ ಕಡಮೆ. ಸ್ತ್ರೀಯು ಪತಿವ್ರತೆಯೂ ಪರಮಾತ್ಮಭಕ್ತೆಯೂ ಆದರೆ ಸಾಕು; ತನ್ನ ಜೀವನದ ಆದರ್ಶವನ್ನು ಅವಳು ಸಂಪೂರ್ಣವಾಗಿ ಸಾಧಿಸಿದಂತೆ—ಎಂಬ ವಿಚಾರಪ್ರಣಾಲಿ ಬೆಳೆಯಿತು. ಎಂತಲೇ ಈ ಕಾಲದಲ್ಲಿ ಹೆಸರುಪಡೆದ ಸ್ತ್ರೀಯರೆಂದರೆ, ಪತಿವ್ರತಾಶಿರೋಮಣಿಗಳೇ ಹೆಚ್ಚಾಗಿ ಕಾಣುವರು. ದೇವಭಕ್ತೆಯರೆಂದು ಹೆಸರು ಪಡೆದವರ ಸಂಖ್ಯೆ ಈ ಕಾಲದಲ್ಲಿ ತೀರ ಕಡಿಮೆ. ಸ್ತ್ರೀ-ಪುರುಷರ ಜೀವನದ ಆದರ್ಶಗಳೇ ಈ ಕಾಲದಲ್ಲಿ ಬೇರೆ ಬಗೆಯವಾದುವು; ಆದುದರಿಂದಲೇ ಭಾರತೀಯ ತತ್ತ್ವವಿದುಷಿಯರ ಹೆಸರುಗಳನ್ನು ಹುಡುಕಿ ಹೇಳಬೇಕಾದರೆ, ನಾವು ವೇದ-ಉಪನಿಷತ್ತುಗಳ ಕಡೆಗೇ ದೃಷ್ಟಿಗಳನ್ನು ಹೊರಳಿಸ-ಬೇಕಾಗುವುದು.

ಋಗ್ವೇದದಲ್ಲಿಯ ಕೆಲವು ಮಂತ್ರಗಳನ್ನು ಕಂಡುಹಿಡಿದವರು ಸ್ತ್ರೀಯರು: ಘೋಷಾ, ಅಪಾಲಾ, ವಿಶ್ವವಾರಾ, ವಾಕ್, ಸೂರ್ಯಾ, ರೋಮಶಾ ಇವರೆಲ್ಲರು ವೈದಿಕ ಮಂತ್ರದ್ರಷ್ಟ್ಯಾರವಿದುಷಿ-ಯರು. ಇವರ ಜ್ಞಾನಸಾಧನೆ, ಜೀವನದ ರೀತಿ ಇವುಗಳ ಬಗೆಗೆ ಹೆಚ್ಚಿನ ವಿಷಯಗಳಾವುವೂ ನಮಗೆ ಗೊತ್ತಾಗುವುದಿಲ್ಲ. ಇವರಂತೆಯೆ ಗಾರ್ಗಿ, ಮೈತ್ರೇಯಿ, ಸುಲಭಾ, ಮಮತಾ, ಉಶೀಜ ಮೊದ-ಲಾದವರು ಉಪನಿಷತ್ಕಾಲದ ಬ್ರಹ್ಮತತ್ತ್ವವಾದಿನಿಯರು. ಇವರ ಜೀವನಗಳ ಕಥೆಯೂ ನಮಗೆ ಪ್ರತ್ಯೇಕವಾಗಿ ದೊರೆಯುವುದಿಲ್ಲ. ಬೇರೆ ಬೇರೆ ಉಪನಿಷತ್ತುಗಳನ್ನು ಅಭ್ಯಾಸ ಮಾಡಿದವರು, ಅಲ್ಲಿ ಇಲ್ಲಿ ಬರುವ ಕೆಲವು ಮಾತುಗಳನ್ನು ಹೊಂದಿಸಿ ಅರ್ಥ ಮಾಡಿಕೊಂಡು, ಇವರ ಜೀವನಕ್ಕೂ ತತ್ತ್ವಸಿದ್ಧಿಗೂ ಸಂಬಂಧಿಸಿದ ಕೆಲವು ಸಂಗತಿ-ಗಳನ್ನು ಸಂಗ್ರಹಿಸಿ ಹೇಳಿದ್ದಾರೆ. ಇಲ್ಲಿ ಹೇಳಬೇಕಾಗಿರುವ ಗಾರ್ಗಿ, ಮೈತ್ರೇಯಿ ಇವರ ಜೀವನ-ತತ್ತ್ವವಿಷಯಗಳ ವಿಚಾರವು 'ಬೃಹ-ದಾರಣ್ಯಕ' ಎಂಬ ಹೆಸರಿನ ಉಪನಿಷತ್ತಿನಲ್ಲಿ ಬರುತ್ತದೆ. ಮೊದಲು ಗಾರ್ಗಿಯ ಪರಿಚಯವನ್ನು ಮಾಡಿಕೊಳ್ಳೋಣ.

ಉಪನಿಷತ್ ಋಷಿಗಳ ಕಾಲದಲ್ಲಿ, ವಿದೇಹದೇಶದಲ್ಲಿ ಜನಕ ಎಂಬ ಹೆಸರಿನ ರಾಜನಿದ್ದನು. ಇವನು ಆ ಕಾಲದ ಒಬ್ಬ ದೊಡ್ಡ ತತ್ತ್ವಜ್ಞಾನಿ. ತತ್ತ್ವಸಿದ್ಧಿಯನ್ನು ಪಡೆದ ಋಷಿ-ಮುನಿಗಳಿಗೆ ಜನಕರಾಜನಿಂದ ಎಲ್ಲ ಬಗೆಯ ನೆರವೂ ದೊರೆಯುತ್ತಿತ್ತು. ಆಗಾಗ ಅವನು ಯಜ್ಞಮಾಡುವನು; ತತ್ತ್ವವಿದ ಋಷಿಗಳ ಪರಿಷತ್ತನ್ನು

ಸೇರಿಸುವನು. ತತ್ತ್ವಜ್ಞಾನದ ಬಗೆಗೆ ಚರ್ಚೆ-ವಿಚರ್ಚೆಗಳನ್ನು ನಡೆಸಿ, ಬಂದ ತತ್ತ್ವವಿದರಿಗೆಲ್ಲ ಯಥೋಚಿತವಾದ ಮಾನ-ಮನ್ನಣೆ, ದಕ್ಷಿಣೆ–ಸಂಭಾವನೆಗಳನ್ನು ಕೊಡುವನು.

ಹೀಗೆಯೆ ಜನಕರಾಜನು ಮಾಡಿದ ಒಂದು ಯಜ್ಞಸಂದರ್ಭದಲ್ಲಿ, ಅನೇಕ ಜನ ತತ್ತ್ವವಿದರೂ, ತತ್ತ್ವವಿದುಷಿಯರೂ ಸೇರಿದ್ದರು. ಇವರಲ್ಲಿ ಅತ್ಯಂತ ಶ್ರೇಷ್ಠನಾದ ತತ್ತ್ವವಿದನು ಯಾರು ?– ಎಂಬುದನ್ನು ತಿಳಿದುಕೊಳ್ಳಬೇಕೆಂದು ಜನಕರಾಜನಲ್ಲಿ ಕುತೂಹಲವು ತಲೆದೋರಿತು. ಆಗ ಅವನು ಒಂದು ಸಾವಿರ ಉತ್ತಮ ಆಕಳುಗಳನ್ನು ತರಿಸಿದನು; ಅವೆಲ್ಲವುಗಳ ಪ್ರತಿಯೊಂದು ಕೋಡಿಗೂ ಹತ್ತು ಹತ್ತು ಸುವರ್ಣಮುದ್ರಿಕೆಗಳನ್ನು ಕಟ್ಟಿಸಿದನು. ಬಳಿಕ ಅಲ್ಲಿ ಸೇರಿದ ಋಷಿ-ಮುನಿಗಳಿಗೆ ಹೇಳಿದನು :

" ಎಲೈ ಬ್ರಾಹ್ಮಣಶ್ರೇಷ್ಠರೆ, ನಿಮ್ಮಲ್ಲಿ ನಿಜವಾದ ಬ್ರಹ್ಮಜ್ಞಾನವನ್ನು ಪಡೆದವರು ಯಾರಾದರೂ ಇದ್ದರೆ, ಅವರು ಈ ಆಕಳುಗಳನ್ನು ತೆಗೆದುಕೊಂಡು ಹೋಗಬೇಕು. "

ರಾಜನ ಮಾತುಗಳನ್ನು ಕೇಳಿ, ಸಭೆಯಲ್ಲಿದ್ದ ಬ್ರಾಹ್ಮಣರೆಲ್ಲ ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು. ಒಬ್ಬರಿಗೂ ಎದ್ದು ಆಕಳುಗಳನ್ನು ತೆಗೆದುಕೊಳ್ಳುವ ಧೈರ್ಯವಾಗಲಿಲ್ಲ. ಆಗ ಯಾಜ್ಞವಲ್ಕ್ಯ ಎಂಬ ಋಷಿಯು ಎದ್ದುನಿಂತ; ತನ್ನ ಶಿಷ್ಯನನ್ನು ಕರೆದು ಆಕಳುಗಳನ್ನೆಲ್ಲ ಆಶ್ರಮಕ್ಕೆ ಹೊಡೆದುಕೊಂಡು ಹೋಗಬೇಕೆಂದು ಆಜ್ಞೆಯಿತ್ತ. ಅದರಂತೆಯೆ ಶಿಷ್ಯನು ಅವುಗಳನ್ನು ಹೊಡೆದುಕೊಂಡು ನಡೆದ. ಆಗ ಮಿಕ್ಕ ತತ್ತ್ವವಿದರಿಗೆಲ್ಲ ಕೋಪ ಬಂದಿತು. 'ಇವನೊಬ್ಬನೇ ನಿಜವಾದ ಬ್ರಹ್ಮವಿದನೇ ?' ಎಂದು ಅವರು ತಮ್ಮತಮ್ಮೊಳಗೆ ಮಾತನಾಡಿದರು. ಅಶ್ವಲನೆಂಬ ಋಷಿಯಂತೂ ಕೇಳಿಯೇ ಬಿಟ್ಟ:

" ಏನು ಯಾಜ್ಞವಲ್ಕ್ಯರೆ, ನಮ್ಮೆಲ್ಲರೊಳಗೆ ನೀವು ಒಬ್ಬರೇ ಬ್ರಹ್ಮಜ್ಞಾನಿಗಳೆಂದು ತಿಳಿದುಕೊಂಡಿದ್ದೀರಾ ? "

ಆಗ ಯಾಜ್ಞವಲ್ಕ್ಯಮುನಿಯು ಅತನಿಗೆ ಸಹಜ ವಿನಯಭಾವದಲ್ಲಿಯೇ ಉತ್ತರಕೊಟ್ಟ :

" ಹಾಗೇನೂ ಇಲ್ಲ ಸ್ವಾಮಿ ! ಬ್ರಹ್ಮಜ್ಞಾನಿಗಳಿಗೆಲ್ಲ ನಾನು ತಲೆಬಾಗುವೆನು. ನನಗೆ ಆಕಳುಗಳ ಆಶೆಯುಂಟಾಯಿತು; ಅದಕ್ಕೆಂದು ನಾನು ಅವುಗಳನ್ನು ತೆಗೆದುಕೊಂಡೆ ! "

ಹೀಗೆ ಹೇಳಿದರೂ ಅಲ್ಲಿದ್ದ ತತ್ತ್ವವಿದರು ಯಾಜ್ಞವಲ್ಕ್ಯನನ್ನು ಸುಮ್ಮನೆ ಬಿಡಲಿಲ್ಲ. ಅವನೊಬ್ಬನೇ ಶ್ರೇಷ್ಠ ಬ್ರಹ್ಮಜ್ಞಾನಿಯಲ್ಲವೆಂಬುದನ್ನು ರಾಜನಿಗೆ ತಿಳುಹುವ ಉದ್ದೇಶದಿಂದ, ಯಾಜ್ಞವಲ್ಕ್ಯನೊಡನೆ ತತ್ತ್ವಚರ್ಚೆಯನ್ನು ಆರಂಭಿಸಿದರು. ಮೊದಲು ಅಶ್ವಲನು ಬೇರೆ ಬೇರೆ ಪ್ರಶ್ನೆಗಳನ್ನು ಕೇಳಿ, ಯಾಜ್ಞವಲ್ಕ್ಯನಿಂದ ತಕ್ಕ ಉತ್ತರವನ್ನು ಪಡೆದು, ತಣ್ಣಗೆ ಕುಳಿತನು. ಅವನಂತೆಯೆ ಆರ್ತಭಾಗ, ಭುಜ್ಯು, ಉಷಸ್ತ, ಕಹೋಲ ಎಂಬ ಋಷಿಗಳು ಅನುಕ್ರಮವಾಗಿ ಚರ್ಚೆ ನಡೆಯಿಸಿ, ಸೋತು ಮೆತ್ತಗಾಗಿ ಕುಳಿತರು.

ಆಗ ಗಾರ್ಗಿಯು ಮುಂದೆ ಬಂದು ಯಾಜ್ಞವಲ್ಕ್ಯರೊಡನೆ ವಾದವನ್ನು ಪ್ರಾರಂಭಿಸಿದಳು. ಇವಳು ವಚಕ್ನು ಎಂಬ ಋಷಿಯ ಮಗಳು. ಗಾರ್ಗ್ಯ ಎಂಬ ಋಷಿಯ ಗೋತ್ರದಲ್ಲಿ ಹುಟ್ಟಿದವಳಾದುದರಿಂದ, ಇವಳಿಗೆ 'ಗಾರ್ಗಿ' ಎಂಬ ಹೆಸರು ಬಂದಿರಬಹುದು. ವಚಕ್ನು ಎಂಬ ಬ್ರಾಹ್ಮಣನ ಮಗಳಾದುದರಿಂದ, ಇವಳನ್ನು 'ಗಾರ್ಗೀ ವಾಚಕ್ನವೀ' ಎಂಬ ಹೆಸರಿನಿಂದ ಕರೆಯಲಾಗಿದೆ. ಯಾಜ್ಞವಲ್ಕ್ಯರೊಡನೆ ನಡೆಸಿದ ತತ್ತ್ವಚರ್ಚೆಯ ಮಾತುಗಳನ್ನು ಕೇಳಿದರೆ, ಇವಳು ಎಂತಹ ಮೇಲುಮಟ್ಟದ ತತ್ತ್ವವಿದುಷಿಯಿರಬಹುದೆಂಬುದು ಒಡೆದು ಕಾಣುವುದು. ಕಣ್ಣಿಗೆ ಕಾಣುವ ಆಧಿಭೌತಿಕ ವಸ್ತುಗಳನ್ನು ಮೊದಲುಮಾಡಿ, ಬ್ರಹ್ಮಲೋಕದ ವರೆಗೂ ಅವಳು ಯಾಜ್ಞವಲ್ಕ್ಯರಿಗೆ ಬೇರೆ ಬೇರೆ ಪ್ರಶ್ನೆ ಕೇಳಿದಳು. ಪ್ರತಿಯೊಂದಕ್ಕೂ ಯಾಜ್ಞವಲ್ಕ್ಯನು ಸರಿಯಾದ ಉತ್ತರಕೊಟ್ಟ. ಕೊನೆಗೆ ಗಾರ್ಗಿಯು 'ಕಸ್ಮಿನ್ನು ಖಲು ಬ್ರಹ್ಮಲೋಕಾ ಓತಾಶ್ಚ ಪ್ರೋತಾಶ್ಚ ?" ಎಂದರೆ 'ಬ್ರಹ್ಮಲೋಕವು ಯಾತರಲ್ಲಿ ಓತಪ್ರೋತವಾಗಿರುವುದು ?' ಎಂದು ಕೇಳಿದಳು. ಆಗ ಯಾಜ್ಞವಲ್ಕ್ಯನು 'ಗಾರ್ಗೀ, ಮಾತಿಪ್ರಾಕ್ಷೀರ್ಮಾತೇ ಮೂರ್ಧಾ ವ್ಯಪಪ್ತದನತಿಪ್ರಶ್ನ್ಯಾಂ ವೈ ದೇವತಾಮತಿಪೃಚ್ಛಸಿ ಗಾರ್ಗಿ ಮಾತಿ ಪ್ರಾಕ್ಷೀಃ" ಎಂದರೆ—'ಹೆಚ್ಚು ಕೇಳಬೇಡ ಗಾರ್ಗಿ ! ಯಾವ ದೇವತೆಯನ್ನು ಕುರಿತು ನೀನು ಕೇಳಕೂಡದೊ, ಆ ದೇವತೆಯ ಬಗೆಗೆ ನೀನು ಪ್ರಶ್ನಿಸುತ್ತಿರುವೆ. ಕೇಳಬೇಡ ಗಾರ್ಗಿ, ಇನ್ನು ಮುಂದೆ ಕೇಳಬೇಡ !' ಎಂದು ಯಾಜ್ಞವಲ್ಕ್ಯನು ಉತ್ತರಕೊಡಲು, ಆಗ ಗಾರ್ಗಿ ಸುಮ್ಮನೆ ಕುಳಿತಳು.

ಆಗ ಸುಮ್ಮನೆ ಕುಳಿತಳಾದರೂ ಗಾರ್ಗಿ, ಮುಂದೆ ಯಾಜ್ಞವಲ್ಕ್ಯನನ್ನು ಸುಮ್ಮನೆ ಬಿಡಲಿಲ್ಲ. ಉದ್ದಾಲಕ-ಆರುಣಿಯು ವಾದ ಮಾಡಿ ತಣ್ಣಗಾದಾಗ, ಗಾರ್ಗಿಯು ಮತ್ತೆ ಹುರುಪಿನಿಂದ ವಾದಕ್ಕೆ ಸಿದ್ಧಳಾಗಿ ಬಂದಳು; ಅಲ್ಲಿ ಸೇರಿದ ಪಂಡಿತರಿಗೆಲ್ಲ ಹೇಳಿದಳು :

" ಪೂಜ್ಯರಾದ ಬ್ರಾಹ್ಮಣರೆ, ನಾನು ಈ ಯಾಜ್ಞವಲ್ಕ್ಯನೆದುರು ಎರಡು ಪ್ರಶ್ನೆಗಳನ್ನು ಒಡ್ಡುತ್ತೇನೆ. ಅವುಗಳಿಗೆ ಇವನಿಂದ ಸರಿಯಾದ ಉತ್ತರಗಳು ದೊರೆತರೆ, ಬ್ರಹ್ಮಚರ್ಚೆಯಲ್ಲಿ ನಿಮ್ಮೊಳಗಿನ ಯಾರೂ ಅವನನ್ನು ಜಯಿಸಲಾರಿರಿ ! "

ಗಾರ್ಗಿಯದು ಎಂತಹ ಆತ್ಮವಿಶ್ವಾಸ ! ಅಲ್ಲಿಯ ಬ್ರಾಹ್ಮಣರೆಲ್ಲ ಅವಳ ತತ್ತ್ವವೈದುಷ್ಯದ ಮೇಲೆ ನಂಬುಗೆಯಿರಿಸಿ, 'ಆಗಲಿ, ಕೇಳು !' ಎಂದು ಒಪ್ಪಿಗೆಯಿತ್ತರು. ಆಗ ಗಾರ್ಗಿಯು ಯಾಜ್ಞವಲ್ಕ್ಯನಿಗೆ ಹೇಳಿದ ಮಾತುಗಳು, ಅವಳ ತತ್ತ್ವಸಿದ್ಧಿಯನ್ನು ಪ್ರಕಟಿಸುವಂತಹವಾಗಿವೆ :

" ಅಹಂ ವೈ ತ್ವಾ ಯಾಜ್ಞವಲ್ಕ್ಯ, ಯಥಾ ಕಾಶ್ಯೋ ವಾ
ವೈದೇಹೋ ವೋಗ್ರಪುತ್ರ ಉಜ್ಜ್ಯಂ ಧನುರಧಿಜ್ಯಂ ಕೃತ್ವಾ
ದ್ವೌ ಬಾಣವಂತೌ ಸಪತ್ನಾತಿವ್ಯಾಧಿನೌ ಹಸ್ತೇ ಕೃತ್ವೋಪೋತ್ತಿಷ್ಠೇದೇವಮ್ ಏವಾಹಂ ತ್ವಾ ದ್ವಾಭ್ಯಾಂ ಪ್ರಶ್ನಾಭ್ಯಾಂ
ಉಪೋದಸ್ಥಾಂ; ತೌ ಮೇ ಬ್ರೂಹಿ ! "

ಎಂದರೆ 'ಎಲೈ, ಯಾಜ್ಞವಲ್ಕ್ಯನೆ! ಕಾಶೀದೇಶದ ಇಲ್ಲವೆ ವಿದೇಹ ದೇಶದ ವೀರನೊಬ್ಬನು, ಇಳಿಸಿದ ಬಾಣಕ್ಕೆ ಮತ್ತೆ ಹೆದೆಯೇರಿಸಿ, ಶತ್ರುಪೀಡಾಕಾರಿಯಾದ ಎರಡು ಬಾಣಗಳನ್ನು ಹೂಡಿ ಹೊಡೆಯಲು ಸಿದ್ಧನಾಗಿ ನಿಂತಂತೆ, ನಾನು ನನ್ನ ಎರಡು ಪ್ರಶ್ನೆಗಳನ್ನು ನಿನ್ನೆದುರು ಹೂಡಿ ನಿಂತಿದ್ದೇನೆ. ಇವುಗಳಿಗೆ ನೀನು ಸರಿಯಾದ ಉತ್ತರವನ್ನು ಕೊಡು!'

ಎಂತಹ ಬಲ್ಲಿದಳು ಗಾರ್ಗಿ! ಮುಂದೆ ಅವರಿಬ್ಬರಲ್ಲಿ ತತ್ತ್ವಚರ್ಚೆ ನಡೆಯುವುದು. ಗಾರ್ಗಿಯ ಎರಡೂ ಪ್ರಶ್ನೆಗಳಿಗೆ ಯಾಜ್ಞವಲ್ಕ್ಯನಿಂದ ಸಮಾಧಾನಕರವಾದ ಉತ್ತರಗಳು ದೊರೆತೊಡನೆಯೆ, ಗಾರ್ಗಿಯು ಎಲ್ಲ ತತ್ತ್ವಜ್ಞಾನಿಗಳ ಕಡೆಗೆ ನೋಡುತ್ತ ಖಂಡಿತ ಧ್ವನಿಯಲ್ಲಿ ಹೇಳಿದಳು:

"ಎಲೈ, ಪೂಜ್ಯ ಬ್ರಾಹ್ಮಣರೆ, ಬ್ರಹ್ಮಚರ್ಚೆಯಲ್ಲಿ ನೀವು ಯಾರೂ ಇವನನ್ನು ಸೋಲಿಸಲಾರಿರಿ! ಸುಮ್ಮನೆ ಇವನಿಗೆ ತಲೆಬಾಗಿ ಪಾರಾಗಿರಿ!"

ಗಾರ್ಗಿ ಹೇಳಿದಂತೆಯೇ ನಡೆಯಿತು. ಮುಂದೆ ಮತ್ತೆ ಕೆಲವು ಋಷಿಗಳು ಯಾಜ್ಞವಲ್ಕ್ಯನೊಂದಿಗೆ ಬ್ರಹ್ಮಚರ್ಚೆಯನ್ನು ನಡೆಸಿದರಾದರೂ, ಒಬ್ಬರಿಂದಲೂ ಅವನನ್ನು ಸೋಲಿಸಲಿಕ್ಕೆ ಆಗಲಿಲ್ಲ. ಈ ಸಭೆಯಲ್ಲಿ ಗಾರ್ಗಿ ನಡೆಸಿದ ತತ್ತ್ವಚರ್ಚೆಯನ್ನು ಓದಿಕೊಂಡು, ಅವಳ ತತ್ತ್ವವೈದುಷ್ಯದ ಘನತೆಯನ್ನು ಯಾರೂ ಅರಿತುಕೊಳ್ಳಬಹುದು.

ನಾನೀಗ ತಮಗೆ ಪರಿಚಯ ಮಾಡಿಕೊಡಬೇಕಾದ ಇನ್ನೊಬ್ಬ ತತ್ತ್ವವಿದುಷಿಯೆಂದರೆ ಮೈತ್ರೇಯಿ. ಮೈತ್ರೇಯಿ ಯಾಜ್ಞವಲ್ಕ್ಯ ಋಷಿಯ ಹೆಂಡತಿ. ಆ ಋಷಿಗೆ ಇಬ್ಬರು ಹೆಂಡಿರು. ಹಿರಿಯವಳು ಮೈತ್ರೇಯಿ; ಕಿರಿಯವಳ ಹೆಸರು ಕಾತ್ಯಾಯಿನಿ. ಮೈತ್ರೇಯಿಯು ಬ್ರಹ್ಮವಾದಿನಿಯಾಗಿದ್ದಳು. ತತ್ತ್ವಜ್ಞಾನದ ಕಡೆಗೇ ಅವಳ ಹೆಚ್ಚಿನ ಒಲವು. ಕಾತ್ಯಾಯನಿಯು ಮಾತ್ರ ಮಿಕ್ಕ ಗೃಹಿಣಿಯರಂತೆ ಲೌಕಿಕದಲ್ಲಿಯೆ ಸಂಬುಗೆಯಿಟ್ಟುಕೊಂಡು ನಡೆದವಳು.

ಒಂದು ದಿನ ಯಾಜ್ಞವಲ್ಕ್ಯಋಷಿಯು ಇಬ್ಬರೂ ಹೆಂಡಿರನ್ನು ಬಳಿಯಲ್ಲಿ ಕರೆದು ಹೇಳತೊಡಗಿದ:

"ನಾನಿನ್ನು ಸಂನ್ಯಾಸವನ್ನು ಸ್ವೀಕರಿಸಿ, ಈ ಮನೆಯನ್ನು ಬಿಟ್ಟು ವನಕ್ಕೆ ತೆರಳಬೇಕೆಂದು ವಿಚಾರಮಾಡಿದ್ದೇನೆ. ಇದಕ್ಕೆ ನಿಮ್ಮಿಬ್ಬರ ಸಮ್ಮತಿಯ ಅಗತ್ಯವಿದೆ. ಅಲ್ಲದೆ, ಇನ್ನೂ ಒಂದು ನನ್ನ ಬಯಕೆಯೆಂದರೆ, ಮನೆಯಲ್ಲಿರುವ ಸಂಪತ್ತನ್ನು ನಿಮ್ಮಿಬ್ಬರಿಗೂ ಸಮಾನವಾಗಿ ಹಂಚಿಕೊಟ್ಟುಬಿಡಬೇಕು—ಎಂದು. ನಾನು ಹೋದ ಮೇಲೆ, ಸಂಪತ್ತಿಗಾಗಿ ನಿಮ್ಮಲ್ಲಿ ವಾದವುಂಟಾಗಬಾರದೆಂದು ನನ್ನ ಅಪೇಕ್ಷೆ."

ಪತಿಯ ನುಡಿಗಳನ್ನು ಕೇಳಿ ಕಾತ್ಯಾಯಿನಿ ಸುಮ್ಮಗಿದ್ದುಬಿಟ್ಟಳು. ಮೈತ್ರೇಯಿ ಸುಮ್ಮಗಿರದೆ, ಜಿಜ್ಞಾಸುಬುದ್ಧಿಯಿಂದ ಪತಿಯನ್ನು ಕೇಳಿದಳು:

"ಯನ್ನು ಮ ಇಯಂ ಭಗೋಃ ಸರ್ವಾ ಪೃಥಿವೀ ವಿತ್ತೇನ
ಸ್ಯಾತ್ ಕಥಂ ತೇನ ಅಮೃತಾಸ್ಯಾಂ?" ಎಂದರೆ—"ಭಗವನ್ ಈ ಸಂಪತ್ತಿಯಿಂದ ಪೂರ್ಣವಾದ ಪೃಥ್ವಿಯೆಲ್ಲವೂ ನನಗೆ ದೊರಕಿದರೆ, ನಾನು ಅಮೃತಳಾಗಬಲ್ಲೆನೆ?"

ಈ ಮಾತನ್ನು ಕೇಳಿ ಯಾಜ್ಞವಲ್ಕ್ಯ ಹೇಳಿದ:

"ಛೀ, ಅಮೃತಳು ಎಂದೂ ಆಗಲಾರೆ! ಎಲ್ಲ ಲೌಕಿಕ ಸುಖಸಾಧನಗಳಿಂದ ಯುಕ್ತರಾಗಿದ್ದವರ ಜೀವನದಂತೆ, ನಿನ್ನ ಜೀವನವೂ ನಡೆಯಬಹುದಿಷ್ಟೇ! ಸಂಪತ್ತಿನಿಂದ ಅಮೃತತ್ವ ದೊರೆಯುವುದೆಂದು ತಿಳಿಯುವುದು ಹುಚ್ಚುತನವೇ ಸರಿ!"

ಆಗ ಮೈತ್ರೇಯಿ ನುಡಿದಳು:

"ಯೇನ ಅಹಂ ನ ಅಮೃತಾಸ್ಯಾಂ ಕಿಮಹಂ ತೇನ ಕುರ್ಯಾಂ
ಯದೇವ ಭಗವಾನ್ ವೇದ ತದೇವ ಮೇ ಬ್ರೂಹಿ!" ಎಂದರೆ:– 'ಯಾವುದರಿಂದ ನಾನು ಅಮೃತಳಾಗಲಾರೆನೊ, ಅಂತಹ ಸಂಪತ್ತನ್ನು ತೆಗೆದುಕೊಂಡು ನಾನೇನು ಮಾಡಲಿ? ಆದುದರಿಂದ ಪೂಜ್ಯರೆ, ತಾವು ಅರಿತಿರುವ ತತ್ತ್ವಜ್ಞಾನವನ್ನು ನನಗೆ ಹೇಳಿಕೊಡಿರಿ!'

ಮೈತ್ರೇಯಿಯ ಈ ಮಾತಿನಿಂದ ಯಾಜ್ಞವಲ್ಕ್ಯನಿಗೆ ತುಂಬ ಸಂತೋಷವಾಯಿತು. ಆಗ ಅವನು ನುಡಿದ:

"ಮೈತ್ರೇಯಿಯಾ, ನೀನು ನನಗೆ ಮೊದಲೇ ಪ್ರಿಯಳು! ಈಗ ನನಗೆ ಪ್ರಿಯವಾದ ವಿಷಯವನ್ನೇ ನುಡಿಯುತ್ತಿರುವೆ. ಸರಿ! ಇಲ್ಲಿ ಬಾ, ಕುಳಿತುಕೊಳ್ಳು! ನಾನು ನಿನಗೆ ಸತ್ಯದ ಜ್ಞಾನವನ್ನು ಹೇಳಿಕೊಡುವೆನು. ನಾನು ಹೇಳುವ ಮಾತುಗಳನ್ನು ಲಕ್ಷ್ಯಕೊಟ್ಟು ಕೇಳು; ಚೆನ್ನಾಗಿ ಅರಿತುಕೊಳ್ಳು!"

ಎಂದು ಹೇಳಿ ಯಾಜ್ಞವಲ್ಕ್ಯನು ತತ್ತ್ವಜ್ಞಾನವನ್ನು ಉಪದೇಶಿಸತೊಡಗಿದ:

"ಮೈತ್ರೇಯಿಯಾ, ಹೆಂಡತಿ ಗಂಡನನ್ನೂ ಗಂಡ ಹೆಂಡತಿಯನ್ನೂ ಏತಕ್ಕಾಗಿ ಪರಸ್ಪರರು ಪ್ರೀತಿಸುವರೆಂಬುದು ನಿನಗೆ ಗೊತ್ತಿದೆಯೆ? ಇದರ ಬಗೆಗೆ ನೀನು ಎಂದಾದರೂ ವಿಚಾರಮಾಡಿರುವೆಯಾ? ಇಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುವುದು 'ಪತಿ' 'ಪತ್ನಿ' ಎಂಬ ತಿಳಿವಳಿಕೆಯ ಕಾರಣದಿಂದಲ್ಲ. ಒಬ್ಬರಿಂದ ಇನ್ನೊಬ್ಬರ ಆತ್ಮವು ಸಂತೃಪ್ತಿ ಹೊಂದುವುದೆಂದು! ಇದರಂತೆಯೆ ಮಕ್ಕಳು, ಸಂಪತ್ತು, ಬ್ರಾಹ್ಮಣ, ಕ್ಷತ್ರಿಯ, ಲೋಕಗಳು, ದೇವತೆಗಳು, ಎಲ್ಲ ಪ್ರಾಣಿಗಳು, ಜಗತ್ತಿನೊಳಗಿನ ಎಲ್ಲ ವಸ್ತುಗಳು ಆತ್ಮನಿಗೆ ಸಂತೃಪ್ತಿಯನ್ನುಂಟುಮಾಡುವುದರಿಂದಲೇ ಅವೆಲ್ಲ ಪ್ರಿಯವಾಗಿ ತೋರುವುವು. ಆದುದರಿಂದ

'ಆತ್ಮಾವಾ ಅರೇ ದೃಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿ-
ಧ್ಯಾಸಿತವ್ಯೋ ಮೈತ್ರೇಯಿಯಾ! ಆತ್ಮನೋವಾ ಅರೇ ದರ್ಶನೇನ
ಶ್ರವಣೇನ ಮತ್ಯಾ ವಿಜ್ಞಾನೇದಂ ಸರ್ವಂ ವಿದಿತಂ!'

ಎಂದರೆ 'ಮೈತ್ರೇಯಿಯಾ, ನೀನು ಆತ್ಮವಸ್ತುವಿನ ದರ್ಶನ, ಶ್ರವಣ,

(೪೨೪ನೆಯ ಪುಟ ನೋಡಿರಿ)

( ೪೨೫ನೆಯ ಪುಟದಿಂದ ಮುಂದುವರಿದುದು. )

**೨ನೆಯ ತರುಣ:**— ಮೈಯಲಿದ್ದ ಕಲಾಬೀಜಗಳು ಕರಟಿ
ಸತ್ತುಹೋದುವು ಈ ಘರ್ಷಣದ ಕಾವಿಗೆ.

**೧ನೆಯ ತರುಣ :**— ಇನ್ನೂ ಸೊಂಟಕಟ್ಟಿ ನೀರೆರೆಯಬಹುದಲ್ಲಾ ಮಗುವೇ.
ಇಲ್ಲದಿರೆ ಬರಿಯ ಬಾಯಿಕಟ್ಟಿಕೋ ಅಂದರಾಯ್ತು!

**೨ನೆಯ ತರುಣ :**— ಅಲ್ಪನೌಕರಿಯಲ್ಲಿ ಕಿಸೆತೂತುಬಿದ್ದು ಒಂಟಿಗನಾಗುಳಿದೆ.
ಎಷ್ಟೋ ಕಾಲ, ಸಪ್ತಪದಿಯ ಸಪ್ತಾಶ್ವಾರೋಹಣಸುಖಕಳೆದು.

**೧ನೆಯ ತರುಣ :**— ಅದೇ ಸಾರ್ಥಕವಾಯಿತೆನ್ನು ಮಗುವೇ.

**೨ನೆಯ ತರುಣ :**— ನಿರಾಶೆಯಾಳದಿಂದುಕ್ಕಿದ ಒಂದೆರಡು ಕವನ-
ಬುಗ್ಗೆಗಳೂ ಸಹಸಂಪಾದಕರ ಹಸ್ತಸ್ಪರ್ಶದಲ್ಲಿ ಜೀರ್ಣೋ-
ದ್ಧಾರವಾಗಿ
ಹಿಂದಕ್ಕೆ ಬಂದುವು ಕತ್ತಲಹೊಗಲು!

**೧ನೆಯ ತರುಣ :**— ಅಷ್ಟೇ ಅಲ್ಲವೇ ?
ದೇವನೆದುರು ಕುಳಿತು ಓದುತ್ತ ತೋಡಿಕೋ
ನಿನ್ನ ಕರ್ಣಾಖ್ಯಾನವನ್ನು
ಅವನಿಗೇ ಮುಡಿಪಾಗಿರಲಿ ಕವನ ಕಾಣಿಕೆ, ಅವನನ್ನೇ ನಂಬು!

**೨ನೆಯ ತರುಣ :**— ಹೋರಾಟದಲ್ಲೇ ನುಗ್ಗಾದ ಮನ; ಧಿಕ್ಕರಿಸಿ
ನನ್ನ ತೊರೆದು ನಡೆದಳು ಪ್ರೇಮದೇವತೆ.
ಆಕೆಯ ಮೈ ಸಿಂಗರಿಸಲು ಸಾಮರ್ಥ್ಯ ನನ್ನಲ್ಲಿಲ್ಲವೆಂದು
ಹೇಳಿದು,
ನನ್ನ ಕೊನೆಯಾಸೆಯಾದ ಧರ್ಮಪತ್ನಿ.

**೧ನೆಯ ತರುಣ:**— ನೆಲಮೆಟ್ಟಿ ಗುಡುಗುತ ನಡೆವ ಆ ಸುಶೀಲ-
ಯಕ್ಷಿಣಿಯ
ಬೆನ್ನ ನೋಡಿ ನಿಟ್ಟುಸಿರ ಬಿಡು ತಲೆಭಾರದಿಳಿತದಲಿ.

**೨ನೆಯ ತರುಣ:**—ಮಹಾಸ್ವಾಮೀ, ಭೂಗರ್ಭದಲಿ ಚಿಗುರಿ ಬೆಳೆದ
ಈ ನನ್ನ ಕೊನೆಯಾಶೆ
ಹುಡಿಹುಡಿಯಾಗಿ ನೆಲಹೊಕ್ಕಿತಲ್ಲ!

**೧ನೆಯ ತರುಣ:**— ಹಾ! ಹಾ! ಹಾ! ಮಗುವೇ—
ಭೂತಳ ಹೊಕ್ಕಿದ್ದ ಮನದ ಬೇರುಗಳನು ಕಡಿದೊಗೆ ಕರಕರನೆ.
ಕೆಚ್ಚು ಹೆಪ್ಪುಗಟ್ಟಿದ ಕರ್ರಗಿನ ಕಲ್ಲುಕಲ್ಲಿನ ಮೇಲೆ ಕುಳಿತುಕೋ
ದೂರ ಕ್ಷಿತಿಜದ ವರ್ಣರಹಿತ ರೇಖೆಯ ಮೇಲೆ ಕಣ್ಗಳನು ನೆಡು.
ಸುತ್ತಲಿನ ಗುಜ್ಜುಗುಂಡಿನ ಬಿತ್ತರ ನೆನೆ.
ಹಸುರು ಹಸುರಿನ ಹಂಬಲದಿ ಹಾರಾಡಬೇಡ ಅರಗಿಣಿ
ನನಗೆ ನಿನಗಾಗಿ ಕಟ್ಟಿಟ್ಟಿಲ್ಲ ಹಸುರಿನ ಬುಟ್ಟಿ
ಅಜ್ಜ-ಮಾವಂದಿರುಗಳು.
ಮುಗಿಲು ಹಣೆಗಣ್ಣಿನ ಹೊಡೆತಕೆ
ಸುಟ್ಟು ಬೂದಿಯಾಗಿದೆ ಹಸುರಿನ ಜೊಂಪ.
ಹಸುರೆಂಬುದೇನೂ ಉಳಿದಿಲ್ಲ ಇನ್ನು ನಮಗಾಗಿ.
ಯಾರೋ ಕೆಲವರು ಕಾಣುವರು ಟೆಲಿಸ್ಕೋಪು ಕಣ್ಗಳಿಂದ
ನಗ್ನ ನೇತ್ರಕೆ ನಿಲುಕದಾ ಹಸುರು ಹಸುರೆಂಬುದದೇನೋ.
ಆದರೆ ಪಡೆದು ಬರಬೇಕು ಮಗುವೇ.

**೨ನೆಯ ತರುಣ:**— ಸರಿ ಸ್ವಾಮಿ, ಇದು ಸಾಸಿರ ಸತ್ಯ.
ಇಗೋ ಬೆಳಕು ಬಿದ್ದಂತಾಯ್ತು.

[ ನಸುಗತ್ತಲು ಹರಿದು ಶುಭ್ರವಾದ ಬೆಳಕು ಬೀಳುವುದು. ಇಬ್ಬರ ಮೊಗಗಳು ಕಳೆಯೇರುವವು ನವೋನ್ಮಾದದಿ. ]

**೧ನೆಯ ತರುಣ:**— ಇತ್ತ ಬಾ ಹಸ್ತಲಾಘವ ಮಾಡು ನನ್ನೊಡನೆ-
ನನ್ನ ಅರಗಿಣಿಯವಸ್ಥೆಯಲಿ ನನ್ನಜ್ಜ ಹೇಳಿದ್ದ
ಈ ಹಸುರು-ಹಸುರಿನ ಕತೆ.
ಆದರೇ ಅಡ್ಡನಿಂತ ಗೋಡೆ ಗೋಡೆ ಕೊಟ್ಟುವು ನನಗೆ
ಜೋಕಾಲಿಯ ಹುಗಿದ ಮಹಾಜ್ಞಾನ.
ಮುಗಿಲು ಹೊಡೆದರೆ ಸಿಡಿಲತುಬಾಕಿ
ಈಗ ನಾ ನಗುವೆ ವಿಜಯೋನ್ಮಾದದಿ.
ಗಾಳಿ ಹಾರಿಸಿದರೆ ಗುಡಿಮಾಡನು
ಗಹಗಹಿಸಿ ನಕ್ಕು ಗಾಳಿಯನೇ ಹಾರಿಸಿಬಿಡುವೆ.
ನೆಗಸುಹಳ್ಳ ಹಾಯ್ದರೆ ಏರಿಸುತಿದೆ ಹತ್ತಾರು ಗಿರಣಿ.
ಹಸುರು ಕಂಡರೆ ಉಗುಳುವೆ ಸೀನುವೆ
ಔಡಲೆಣ್ಣೆಯ ವೋರೆ ಮಾಡಿ.
ಪುಷ್ಪವೀಥಿಯಲಿ ಸೊರಗಿದ ಪ್ರಾಣಕೆ
ವೀರ್ಯವರ್ಧಕ ಪಾಕ ಸಿಕ್ಕಿತು, ಆಹಹಾ,
ಈ ಗುಜ್ಜುಗುಂಡಿನ ಕಲ್ಗಾದಿಯಲಿ
ಹಸುರಿನ ಛಾಯೆ ಅರಿಸಿದ ನೇತ್ರದ ಜ್ಯೋತಿಯನು
ಮತ್ತೆ ಹೊತ್ತಿಸಿತು ಕರ್ರಗಿನ ಶಿಲಾಸನ.
ಹೆಪ್ಪುಗಟ್ಟಿದ ಪ್ರಾಣದಿಂದುಕ್ಕಿ ಚಿಮ್ಮುತಿದೆ
ನಿರಂತರ ಬುಗ್ಗೆ ಬುಗ್ಗೆ.
ಹಾಗೆ ನಾ ಮಾನವನಾದೆ, ಅಜೇಯ ಶಕ್ತಿಯ ಮಗುವೇ!
ನೀನೂ ಮಾನವನಾಗು ಈ ಶಿಲಾವಚನ ಕೊಂಡು.

**೨ನೆಯ ತರುಣ::**— ಧನ್ಯನಾದೆ ಅಣ್ಣಾ ಇದೇ ಸತ್ತ್ವಯುಕ್ತ
ಬಾಳಿನ ಹಾದಿ. ಇಗೊ—

[ ಹಸ್ತಲಾಘವದಲ್ಲೇ ತೆರೆ ಬೀಳುವುದು.]

---

# ಸಂಕ್ರಾಂತಿಯ ಉಡುಗೊರೆ

( ಒಂದು ಜೀವನಚಿತ್ರ )

ಶ್ರೀಮತಿ ಇಂದಿರಾ ಲಕ್ಷ್ಮೀನರಸಿಂಹರಾವ್, ಎಂ. ಎ. ಜಬಲಪುರ

卐

ಊಹಾ ಪ್ರಪಂಚ ತುಂಬ ವಿಚಿತ್ರವಾದುದು. ಅದು ಶೇಖ್‌ಮಹಮ್ಮದನನ್ನು ಸಿಂಹಾಸನದ ಶಿಖರದ ಮೇಲೆ ಕುಳ್ಳಿರಿಸಿತ್ತು. ವಾಸ್ತವ ಪ್ರಪಂಚ ಬಲು ನಿಷ್ಠುರ; ಅವನನ್ನು ಆ ಶಿಖರದ ಮೇಲಿಂದ ಒಮ್ಮೆಲೆ ಕೆಳಗೆ ಉರುಳಿಸಿ ನಗಿಗೀಡು ಮಾಡಿತು. ಸುಶೀಲಮ್ಮನ ಊಹಾಪ್ರಪಂಚವೂ ಹೀಗೆಯೇ ಆಯಿತು.

卐

" ಅಮ್ಮಾ, ಹಬ್ಬಕ್ಕೆ ನಿಂಗೆ ಹೊಚಾ ನಂಗಾ ಬೇಕು. "

" ಅಮ್ಮಾ, ನಂಗೆ ಹಬ್ಬಕ್ಕೆ ಹೊಸ ಶರ್ಟು ಹೊಲಿಸಬೇಕು. "

ಮೂರು ವರುಷದ ಆಶಾ ಮತ್ತು ಆರು ವರುಷದ ಅರುಣ ಇಬ್ಬರೂ ಸೇರಿ, ಅವರಮ್ಮ ಸುಶೀಲಮ್ಮನ ಸೆರಗು ಹಿಡಿದುಕೊಂಡು, ಅಮ್ಮನನ್ನು ಅಡಿಗೆಯ ಮನೆಯಲ್ಲಿ ಪೀಡಿಸುತ್ತಿದ್ದರು.

" ರಗಳೆ ಮಾಡಬೇಡಿರಿ; ಎಲ್ಲಾ ಹೊಲಿಸ್ತೀನಿ. ಮೊದಲು ಮಾರ್ಕೆಟ್ಟಿಗೆ ಹೋಗಬೇಕು. ತಲೆ ಬಾಚಿಕೊಂಡು, ಮುಖ ತೊಳ-ಕೊಂಡು ರೆಡಿ ಆಗಿರಿ ಬೇಗ........ಎಲ್ಲಾ ತರೋಣಂತೆ ! " ಎಂದು ಮಕ್ಕಳನ್ನು ಸಮಾಧಾನಪಡಿಸಿದರು ಸುಶೀಲಮ್ಮ.

ಸಂಕ್ರಾಂತಿಯ ಹಬ್ಬ ಹತ್ತಿರ ಬರುತ್ತಿತ್ತು. ಉತ್ತರಾಯಣ-ಪರ್ವಕಾಲದ ಹಬ್ಬ, ಸ್ವರ್ಗದ ಬಾಗಿಲನ್ನು ತೆಗೆಯುವ ಹಬ್ಬ. ಬೇಸಗೆಯು ಹೆಜ್ಜೆಯಿಕ್ಕಿ, ಚಳಿಯನ್ನು ಕೈಕುಲುಕಿ, ಕ್ರಮೇಣ ಓಡಿ-ಸುವ ಕಾಲ. ಹಳ್ಳಿಗರಿಗೆ ಸುಗ್ಗಿಯ ಸಂತಸದ ಕಾಲ. ಎಳ್ಳು-ಬೆಲ್ಲವ ತಂದು, ದೇವರಿಗೆ ಎಡೆಮಾಡಿ, ಎಳ್ಳುಬೆಲ್ಲವನ್ನು ಕೊಡು-ಕೊಳ್ಳುವ ಸವಿಗಾಲ. 'ಪರಸ್ಪರರ ಸ್ನೇಹ ಎಳ್ಳಿನಲ್ಲಿಯ ಸ್ನಿಗ್ಧತೆಯಂತೆ, ಬೆಲ್ಲದಲ್ಲಿಯ ಸಿಹಿಯಂತೆ ವೃದ್ಧಿಂಗತವಾಗಲಿ' ಎಂದು ಒಬ್ಬರಿ-ಗೊಬ್ಬರು ಹೇಳುತ್ತಾ, ಎಳ್ಳು, ( ಮೈಸೂರು ಕಡೆಯವರು ಮಾಡುವ ಎಳ್ಳು- ) ಕುಸುರೆಳ್ಳುಗಳನ್ನು ಅರ್ಪಿಸುವ ಕಾಲ. ಇಂತಹ ಹಬ್ಬ ಹತ್ತಿರ ಬರುತ್ತಿರುವಾಗ, ಸುಶೀಲಮ್ಮನ ಮನೆಯಲ್ಲಿ ಗಲಾಟೆ ಇಲ್ಲದೆ ಹೇಗಾದೀತು ?

ಹಬ್ಬಕ್ಕಾಗಿ ಅದೇನೇನೋ ತುಂಬ ಸಾಮಾನುಗಳನ್ನು ಕೊಂಡು-ಕೊಳ್ಳಬೇಕೆಂಬ ಹುಮ್ಮಸದಲ್ಲಿದ್ದರು ಸುಶೀಲಮ್ಮ. ಯಜಮಾನರಾದ ಶ್ರೀನಿವಾಸರಾಯರಿಂದ Budget ಕೂಡ Sanction ಆಗಿತ್ತು. ಮಕ್ಕಳಿಗೆ ಬಟ್ಟೆ-ಬರೆತೊಡಿಸಿ ಸಿದ್ಧಮಾಡಿದರು; ಸುಶೀಲಮ್ಮನೂ ಹೊಸ ಸೀರೆ ಉಟ್ಟುಕೊಂಡು ಹೊರಡಬೇಕೆನ್ನುವಷ್ಟರಲ್ಲಿ, ಎದುರು ಮನೆಯ ವೆಂಕಮ್ಮನವರು ಬಂದು ಬಾಗಿಲಲ್ಲಿಯೇ ನಿಂತು " ನೋಡೇ ಸುಶೀಲಾ, ವಿಮಲಮ್ಮನ ಯಜಮಾನರು ಮದ್ರಾಸಿನಿಂದ ಬಂದಿದ್ದಾರಂತೆ. ನಿಮ್ಮಮ್ಮನ ಮನೆಗೂ ಹೋಗಿದ್ದರಂತೆ. ಅದೇನೋ ನಿನಗಾಗಿ ಸಾಮಾನು ಕೊಟ್ಟಿದ್ದಾರಂತೆ. ವಿಮಲಮ್ಮನೇ ನಿಮ್ಮ ಮನೆಗೆ ಬಂದು ಸಾಮಾನು ತಂದು ಕೊಡುತ್ತಾರಂತೆ. ನಾನಿನ್ನು ಹೊರಡ್ತೀನಿ " ಎಂದು ಹೇಳಿದರು.

" ಕೂತ್ಕೊಳ್ಳಿ ವೆಂಕಮ್ಮನವರೇ .. ...." ಸುಶೀಲಾ ಚಾಪೆಯ ಸುರುಳಿಯನ್ನು ಬಿಚ್ಚುತ್ತಾ ಹೇಳಿದಳು.

" ಈಗ ಹೊತ್ತಿಲ್ಲ ಹಬ್ಬದ ಕೆಲಸ ಬಿದ್ದಿದೆ. ಇದನ್ನು ಹೇಳೋಕೇ ಅಂತಲೇ ಓಡಿಬಂದೆ. ಬರ್ತೀನಿ " ಎನ್ನುತ್ತಲೆ ಅವಸರ-ವಸರದಲ್ಲಿ ಹೊರಟುಹೋದರು ವೆಂಕಮ್ಮ.

ಸುಶೀಲೆಯ ಮುಖ ತಳಿಗೆಯಷ್ಟು ಅಗಲವಾಯಿತು. ತವರು-ಮನೆಯಿಂದ ಸಾಮಾನು ಬಂದಿದೆಯೆಂದು ಹೇಳಿದರೆ, ಯಾವ ಸುವಾ-ಸಿನಿಗೆ ಸಂತೋಷವಾಗಲಿಕ್ಕಿಲ್ಲ ? ಸುಶೀಲೆಯ ಊಹೆಗೆ ಪ್ರಾರಂಭ-ವಾಯಿತು : ' ಅಮ್ಮ ಏನು ಸಾಮಾನು ಕಳಿಸಿರಬೇಕು ? ' ಎಂದು ಯೋಚನೆ ಮಾಡತೊಡಗಿದಳು.

ಸುಶೀಲಾ ಅವರಮ್ಮನ ಒಬ್ಬಳೇಒಬ್ಬ ಅಚ್ಚುಮೆಚ್ಚಿನ ಮಗಳು. ಯಾರಾದರೂ ಪರಿಚಯದವರು ಮದ್ರಾಸಿನಿಂದ ಜಬಲ್ಪುರಕ್ಕೆ ಹೋಗುವವರು ಸಿಕ್ಕಿದರೆ ಸಾಕು. ಅವರನ್ನು ಕಂಡು, ಮಗಳಿಗೆಂದು ಏನಾದರೂ ಕಳಿಸಿಯೇ ಕಳಿಸುವುದು ಅವರಮ್ಮ ಲಕ್ಷ್ಮಮ್ಮನ ರೂಢಿ. ಈ ಸಲವೂ ಏನು ಕಳಿಸಿರಬಹುದೆಂದು ಸುಶೀಲಾ ಊಹಿಸತೊಡಗಿ-ದಳು : ಹಬ್ಬ ಹತ್ತಿರ ಬರುತ್ತಿದೆ. ತನಗಾಗಿ ಹಬ್ಬಕ್ಕೆಂದು ಹೊಸ ಸೀರೆ ಕಳಿಸಿರಬಹುದೇ........ಇಲ್ಲವೆ............ಮಕ್ಕಳಿಗಾಗಿ ಲಂಗ, ಶರ್ಟು,............ಕಳಿಸಿರಬಹುದೇ............ಯಜಮಾನರಿಗೆ ಶರ್ಟಿನ ಬಟ್ಟೆಯನ್ನು ಕಳಿಸಿರಬಹುದೇ ...ಎಳ್ಳುಮಾಡಿ ಕಳಿಸಿರಬಹುದೇ.... ತರತರದ ತಿಂಡಿಗಳನ್ನು ಕಳಿಸಿರಬಹುದೇ .......? ಹೀಗೆ ಒಂದೇ

ಎರಡೇ–ಹತ್ತಾರು ಯೋಚನೆಗಳಲ್ಲಿ ಮಗ್ನಳಾದಳು ಸುಶೀಲೆ. ಹೊರಗೆ ಹೊರಡುವ ಮೊದಲು ಟೀ ಮಾಡಬೇಕೆಂದು ಒಲೆಯ ಮೇಲೆ ನೀರು ಇಟ್ಟಿದ್ದಳು. ನೀರು ಎಸರು ಬಂದು ಇಂಗಿ ಹೋಗುತ್ತಿದ್ದರೂ ಅವಳಿಗೆ ಅದರ ಪರವೆಯೇ ಇರಲಿಲ್ಲ. ಏನೋ ಯೋಚನೆಯಲ್ಲಿ ಇದ್ದಾಗ, ಕಿಟಕಿಯ ಬಾಗಿಲು ತಲೆಗೆ ಬಲವಾಗಿ ತಾಕಿತು. ಆಗ ಸುಶೀಲಳಿಗೆ ಬಾಹ್ಯಲೋಕದ ಅರಿವುಂಟಾಗಿ, ನೀರು ಇಂಗುತ್ತಿರುವುದನ್ನು ಕಂಡು, ಬೇಗ ಬೇಗ ಟೀ ಮಾಡಲು ತೊಡಗಿದಳು. ಚಿತ್ತವು ಸ್ಥಿರವಾಗಿರಲಿಲ್ಲ. ಕೈಯಲ್ಲಿಯ ಲೋಟಗಳು, ಚಮಚೆ ಪಾತ್ರೆಗಳು ದಡಬಡನೆ ಬೀಳತೊಡಗಿದುವು. ಈ ‘ಧಡಾರ್ ಬಡಾರ್’ ಶಬ್ದ ಕೇಳಿ, ಹೊರಗಡೆಯ ಕೋಣೆಯಲ್ಲಿ ಕುಳಿತಿದ್ದ ಶ್ರೀನಿವಾಸರಾಯರು, “ಏನೇ, ಏನು ಶಬ್ದ ಅದು..........” ಎನ್ನುತ್ತ ಅಡಿಗೆಯ ಮನೆಗೆ ಬಂದರು. ಸುಶೀಲಾ ನಗುತ್ತ, ವೆಂಕಮ್ಮನವರು ಬಂದು ಹೇಳಿದ ಸಮಾಚಾರವನ್ನು ಹೇಳಿದಳು. ಆಯ್ತು. ಶ್ರೀನಿವಾಸರಾಯರೂ ಸುಶೀಲೆಗೆ ಜೊತೆಯಾದರು ಊಹೆಯ ಮಾಲೆಯನ್ನು ಪೋಣಿಸುವುದಕ್ಕೆ! ಮಕ್ಕಳೂ ಬಂದು ಸೇರಿದರು. “ನಾನಿಮಾ ಏನು ಕಳಿಸಿರಬಹುದು?” ಎಂದು ಮಕ್ಕಳೂ ಊಹಿಸತೊಡಗಿದುವು. ಹಿಂದೀ ‘ನಾನಿ’ (ಅಮ್ಮನ ಅಮ್ಮ) ಕನ್ನಡ “ಅಮ್ಮ” ಸೇರಿ, ಲಕ್ಷ್ಮಮ್ಮ ಆಶಾ-ಅರುಣರಿಗೆ ‘ನಾನಿಮಾ’ ಆಗಿದ್ದರು. ಆಶಾ-ಅರುಣರು ಆಲೋಚಿಸತೊಡಗಿದರು :

“ನಾನಿಮಾ ನಂಗೆ ಹೊಚಾ ನಂಗಾ, ಡುಬ್ಬನ್ನು (ರಿಬ್ಬನ್) ಕಳಿಸ್ಯಾಳೆ!” ಆಶಾ ತನ್ನಾಶೆಯನ್ನು ಉಸುರಿದಳು.

“ನಾನಿಮಾ ನಂಗೆ ಶರ್ಟು, ಹ್ಯಾಟು ಕಳಿಸಿರಬೇಕು” ಅರುಣ ಹಿಗ್ಗಿ ನುಡಿದ.

“ನಂಗೆ ಬಿಚಕತ್ತು, ಮಿಠಾಯಿ, ಕಳಿಚಿರಬೇಕು.” ಎಂದಳು ಆಶಾ.

“ಹೋದ ಸಲ ಅಲ್ಲಿಗೆ ಹೋದಾಗ, ನಾನು ನನ್ನ ದಿಂಬು ಮರೆತು ಬಂದಿದ್ದೆ. ನನ್ನ ದಿಂಬು ಕಳಿಸಿರಬಹುದು.” ಎಂದರು ಶ್ರೀನಿವಾಸರಾಯರು.

“ನನಗೆ ಹೊಸ ಸೀರೆ ಕಳಿಸಿರಬಹುದು” ಎಂದಳು ಸುಶೀಲಮ್ಮ.

ಹೀಗೆ ಮನೆಯವರೆಲ್ಲ ಯೋಚನಾಸಾಗರದಲ್ಲಿ ಈಜಾಡತೊಡಗಿದರು. ಮಕ್ಕಳು ‘ಹೊಚಾ ನಂಗಾ, ಹೊಸಾ ಶರ್ಟು’ ಎಂದು ಕುಣಿದಾಡತೊಡಗಿದುವು. ಒಟ್ಟೆ ಬರೆ ಶೂಜ್ ಹಾಕಿಕೊಂಡು ಮಾರ್ಕೆಟ್ಟಿಗೆ ಹೋಗಲು ಸಿದ್ಧವಾಗಿದ್ದ ಮಕ್ಕಳಿಗೆ, ಮಾರ್ಕೆಟ್ಟಿಗೆ ಹೋಗುವುದೇ ಮರೆತುಹೋಯಿತು. ‘ನಾನಿಮಾ’ ಎಲ್ಲ ಕಳಿಸಿರುತ್ತಾರೆ; ಇನ್ನೇಕೆ ಮಾರ್ಕೆಟ್ಟಿಗೆ ಹೋಗಿ ದಣಿಯಬೇಕೆಂದು ದಂಪತಿಗಳಿಬ್ಬರೂ, ಮಾರ್ಕೆಟ್ಟು programme ರದ್ದುಗೊಳಿಸಿಬಿಟ್ಟರು.

ತಿಂಡಿಯೂ ಬಂದಿರಬಹುದೆಂದು ಸುಶೀಲೆ ಅಂದು ತಿಂಡಿಯನ್ನು ಮಾಡಲಿಲ್ಲ. ‘ಇವತ್ತಿನ ದಿನವಾದರೂ ತಿಂಡಿಯ ಯೋಚನೆ ತಪ್ಪಿತಲ್ಲ’ ಎಂದು ಸುಶೀಲೆ ತೆಪ್ಪಗೆ ಇದ್ದುಬಿಟ್ಟಳು. ಶ್ರೀನಿವಾಸರಾಯರೂ “ಟೀಯೊಂದೇ ಸಾಕು, ತಿಂಡಿ ಆಮೇಲೆ ಬರುತ್ತಲ್ಲಾ; ಈಗೊಂದೂ ಬೇಡ.” ಎಂದು ಸುಶೀಲೆಗೆ ಹೇಳಿ, ಟೀಯೊಂದನ್ನೇ ಕುಡಿದು ತಮ್ಮ ಕೋಣೆಗೆ ಹೊರಟುಹೋದರು.

ವಿಮಲಮ್ಮನ ದಾರಿಕಾಯುತ್ತ ಮಕ್ಕಳಿಬ್ಬರೂ ಕಿಟಕಿಯಲ್ಲಿ ನಿಂತುಕೊಂಡುಬಿಟ್ಟರು. ಗಾಳಿಯಿಂದ ಬಾಗಿಲು ಶಬ್ದ ಮಾಡಿದರೂ, ವಿಮಲಮ್ಮ ಬಂದರೆಂದು ಮಕ್ಕಳೆರಡೂ ಬಾಗಿಲ ಬಳಿ ಓಡುತ್ತಿದ್ದುವು. ‘ಮೆಟ್ಟಿಲುಗಳನ್ನು ಏರುವ ಶಬ್ದ ಕೇಳೀತೇ’ ಎಂದು ಸುಶೀಲಾ ಮೈತುಂಬ ಕಿವಿಯಾಗಿ ಕೇಳುತ್ತಿದ್ದಳು. ಆಯ್ತು, ಮನೆಯವರಿಗೆಲ್ಲ ವಿಮಲಮ್ಮನ ದಾರಿ ನೋಡುವುದೊಂದೇ ಕೆಲಸವಾಗಿ ಹೋಯಿತು. ಗಂಟೆ ಮೂರಾಯಿತು....... ನಾಲ್ಕಾಯಿತು....... ಗಂಟೆಯ ಮುಳ್ಳು ಐದಂಕಿಯನ್ನೂ ತೋರಿಸಿತು. ಮುಸುರೆ ತಿಕ್ಕುವವಳು ಬಂದಳು. ಹಾಲಿನವ ಬಂದ. ಪೋಸ್ಟ್‌ಮನ್ ಬಂದ. ಆದರೆ ವಿಮಲಮ್ಮ ಬರಲೇ ಇಲ್ಲ. ಎಲ್ಲರಿಗೂ ತಾಳ್ಮೆ ಮೀರಿತು. ಹೊಟ್ಟೆ ತಾಳ ಹಾಕತೊಡಗಿತು. ಬರೀ ಟೀಪಾನದಿಂದ ಹಸಿವೆ ಹೇಗೆ ಅಡಗೀತು?

ವಿಮಲಮ್ಮನ ಮನೆ ಹತ್ತಿರವಿದ್ದರೂ, ಅವರೇ ಬರುತ್ತಾರೆಂದ ಮೇಲೆ ತಾನೇಕೆ ಹೋಗುವುದೆಂದು, ಸುಶೀಲಾ ದಾರಿ ಕಾಯುತ್ತಲೇ ಕುಳಿತುಕೊಂಡುಬಿಟ್ಟಳು. ಮಕ್ಕಳು ‘ಹಸಿವು ಹಸಿವು’ ಎಂದು ಹಾತೊರೆಯತೊಡಗಿದುವು. ಮನೆಯಲ್ಲಿಯ ಬಿಸ್ಕತ್ತು, ಉಂಡಿ, ಯಾವುದನ್ನು ಕೊಟ್ಟರೂ ಅವರಿಗೆ ಬೇಕಾಗಿರಲಿಲ್ಲ. ‘ನಾನಿಮಾ’ ಕಳಿಸಿದ “ಬಿಚಕತ್ತೇ” ಬೇಕಾಗಿತ್ತು. ಕೊನೆಗೆ ಸುಶೀಲಾ ಎಲ್ಲರಿಗೂ ಹಸಿವಾಗಿರಬೇಕೆಂದು ಒಲೆ ಹೊತ್ತಿಸುವ ಕಾರ್ಯಕ್ಕೆ ತೊಡಗಿದಳು. ಬಟಾಣಿಕಾಳು ಹಾಕಿ, ಬಿಸಿ ಬಿಸಿಯಾಗಿ ಉಪ್ಪಿಟ್ಟು ಮಾಡಿ, ಎಲ್ಲರ ಜಠರಾಗ್ನಿಯನ್ನು ಶಾಂತಗೊಳಿಸಬೇಕೆಂದು ಬೇಗ ಬೇಗ ಮಾಡತೊಡಗಿದಳು.

ಗಂಟೆ ಇನ್ನೂ ಆರಾಗಿರಲಿಲ್ಲ. ಹೊರಗೆ ಬೆಳಕು–ಕತ್ತಲೆ ಲಾಸ್ಯವಾಡುತ್ತಿತ್ತು. ಎಲ್ಲರ ಗಮನವೂ ಈಗ ಉಪ್ಪಿಟ್ಟಿನ ಕಡೆಗೆಯೆ! ಮಕ್ಕಳೆರಡೂ ಅಮ್ಮನ ಅಕ್ಕಪಕ್ಕದಲ್ಲಿ ಕುಳಿತಿದ್ದುವು. ಶ್ರೀನಿವಾಸರಾಯರು ತಮ್ಮ ಕೋಣೆಯಲ್ಲಿಯೇ. ಉಪ್ಪಿಟ್ಟು ಯಾವಾಗ ಬಂದೀತೆಂದು ಎಣಿಕೆ ಹಾಕುತ್ತ, ಅತ್ತಿತ್ತ ತಿರುಗಾಡುತ್ತಿದ್ದರು.

ವಿಮಲಮ್ಮ ಮೆಟ್ಟಲೇರಿ ಬಂದೇಬಿಟ್ಟರು. ಅವರು ‘ಸುಶೀಲಾ, ಸುಶೀಲಾ!’ ಎಂದು ಎರಡು ಬಾರಿ ಕೂಗಿದರೂ ಯಾರಿಗೂ ಕೇಳಿಸಲಿಲ್ಲ. ಈಗ ಮೆಟ್ಟುಗಳ ಶಬ್ದ, ಕೂಗುವ ಶಬ್ದ ಯಾವುದೂ ಯಾರಿಗೂ ಬೇಕಾಗಿರಲಿಲ್ಲ. ಎಲ್ಲರಿಗೂ ಉಪ್ಪಿಟ್ಟು ಬೇಕಾಗಿತ್ತು. ಮೂರನೆಯ ಸಲ ವಿಮಲಾ ಕೊಂಚ ಗಟ್ಟಿಯಾಗಿಯೇ ಕೂಗಿದಳು. ಚಿಕ್ಕ ಆಶಾ “ಇಮಲಮ್ಮ ಬಂದರು.” ಎಂದು ಕುಣಿದಾಡತೊಡಗಿದಳು. ಸುಶೀಲೆಯೂ “ಬನ್ನಿ ಬನ್ನಿ” ಎನ್ನುತ್ತ, ಕೈಯಲ್ಲಿ ಸೌಟು ಹಿಡಿದುಕೊಂಡೇ ಹೊರಗೆ ಬಂದಳು. ಎಲ್ಲರೂ ವಿಮಲಮ್ಮನ ಕೈಯಲ್ಲಿರುವ ಚೀಲವನ್ನೇ ನೋಡುತ್ತಿದ್ದರು. ಆ ಚಿಕ್ಕ ಚೀಲವನ್ನು ಕಂಡು ಸುಶೀಲೆಯ ಹೊಟ್ಟೆ ತಣ್ಣಗಾಗಿಹೋಯಿತು. ಮುಖ ಚಿಕ್ಕ

ದಾಯಿತು. ಯಾವುದನ್ನೂ ಹೊರಗೆ ತೋರಿಸಿಕೊಳ್ಳದೆ, ವಿಮಲಮ್ಮ ನನ್ನು ಕರೆದು ಅಡಿಗೆಯ ಮನೆಯಲ್ಲಿ ಮಣೆಹಾಕಿ ಕುಳ್ಳಿರಿಸಿ-ಕೊಂಡಳು. 'ನಾನಿಮಾ ಏನು ಕಳಿಚಿದ್ದಾರೆ?' ಎನ್ನುತ್ತಲೆ ಆಶಾ ಹೋಗಿ ವಿಮಲಮ್ಮನ ಪಕ್ಕದಲ್ಲಿ ಕುಳಿತುಕೊಂಡಿತು.

"ನಿಮ್ಮಮ್ಮ ನಮ್ಮ ಮನೆಯವರ ಜೊತೆಗೆ ಈ ಸಾಮಾನು ಕೊಟ್ಟುಕಳಿಸಿದ್ದಾರೆ." ಎಂದು ಹೇಳುತ್ತ ವಿಮಲಾ ಎರಡು ಡಬ್ಬಿ-ಗಳನ್ನು ಚೀಲದಿಂದ ಹೊರಗೆ ತೆಗೆದು ಇಟ್ಟಳು. ಸುಶೀಲಾ ಆತುರ ದಿಂದ ಓಡಿಬಂದು, ದೊಡ್ಡ ಡಬ್ಬದ ಮುಚ್ಚಳವನ್ನು ತೆಗೆಯಲು ಹೋದಳು. ಅದು ಗಟ್ಟಿಯಾಗಿ ಕುಳಿತಿದ್ದುದರಿಂದ ಬೇಗ ಬರಲೇ ಇಲ್ಲ. ಏನಿರಬೇಕಿದರಲ್ಲಿ ಎಂದು ಧ್ಯಾನಿಸುತ್ತ, ಒಂದು ಚಮಚೆ ಯನ್ನು ತಂದು ಬೇಗ ಬೇಗ ಮುಚ್ಚಳ ತೆಗೆದಳು. ಆ ಡಬ್ಬದ ತುಂಬ "ಮೆಣಸಿನ ಪುಡಿ" (ಹುಳಿಗೆ ಹಾಕುವ ಹುಡಿ) ಇತ್ತು! ನಗು ಬರುತ್ತಿದ್ದರೂ ನಗಲಿಲ್ಲ ಸುಶೀಲೆ. ಇನ್ನೊಂದು ಡಬ್ಬದ ಮುಚ್ಚಳ ತೆಗೆದಳು. ಡಬ್ಬದ ತುಂಬ ಬಟ್ಲಡಿಕೆ! ಎರಡರಲ್ಲಿಯೂ 'ತಿಂಡಿ' ಎನ್ನುವುದು ಇರಲಿಲ್ಲ. "ನಾನಿಮಾ ಕಳಿಚಿದ್ದು" ಬೇಕು ಎಂದು ಆಶಾ ರಗಳೆ ಮಾಡುತ್ತಲೇ ಇದ್ದಳು. "ಸುಮ್ಮನಿರೆ" ಎಂದು ಗದರಿಸುತ್ತ, ಸಿಟ್ಟಿನಿಂದ ಆ ಅಡಿಕೆಯನ್ನು ಒಂದು ತಟ್ಟೆಗೆ ಸುರಿಯು ತ್ತಿರುವಾಗ, ಡಬ್ಬದಿಂದ ಒಂದು ಚಿಕ್ಕ ಪೊಟ್ಟಣ ಕೆಳಗೆ ಬಿತ್ತು. ಬಿಚ್ಚಿ ನೋಡಿದರೆ ಅದರಲ್ಲಿ ಹತ್ತು ಹನ್ನೆರಡು ನೈಸೂರುಪಾಕದ ಬಿಲ್ಲೆಗಳು! ಸಂತೋಷದಿಂದ ಮಕ್ಕಳ ಕೈಗೆ ಕೊಟ್ಟಳು. ಎಲ್ಲವನ್ನೂ ನೋಡು ತ್ತಿದ್ದ ವಿಮಲಾ :

"ನಿಮ್ಮಮ್ಮನ ಮನೆಗೆ ನಮ್ಮವರು ಹೋಗಿದ್ದರಂತೆ. ಎಲ್ಲರೂ ಸೌಖ್ಯವಾಗಿದ್ದಾರಂತೆ. ಮೊದಲು ತಿಳಿಸದೆಯೇ ಅನಿರೀಕ್ಷಿತವಾಗಿ ಹೋಗಿದ್ದುದರಿಂದ, ನಿಮ್ಮಮ್ಮನಿಗೆ ಇನ್ನೇನೂ ಕಳಿಸಲಿಕ್ಕಾಗಲಿಲ್ಲ. ಮನೆಯಲ್ಲಿದ್ದುದನ್ನೇ ಕಳಿಸಿದ್ದಾರೆ" ಎಂದಳು.

ಸುಶೀಲಾ ಮುಖದಲ್ಲಿ ಯಾವ ಭಾವವನ್ನೂ ತೋರಿಸದೆ, ವಿಮಲಮ್ಮನ ಮುಂದೆ ಉಪ್ಪಿಟ್ಟಿನ ತಟ್ಟೆಯನ್ನಿಟ್ಟಳು. "ಇವೊತ್ತಿ ನಲ್ಲಿ ಯಾಕೆ ಉಪ್ಪಿಟ್ಟು ಸುಶೀಲಾ? ಇವತ್ತು ಗುರುವಾರವೂ ಅಲ್ಲ, ಶನಿವಾರವೂ ಅಲ್ಲ!" ಎಂದು ಕೇಳಿದಳು ವಿಮಲಮ್ಮ. "ಸುಮ್ಮನೆ" ಎಂದು ಸುಶೀಲೆ ನಕ್ಕುಬಿಟ್ಟಳು.

"ಮನೆಗೆಲಸದಲ್ಲಿ ಬೇಗ ಬರಲಿಕ್ಕಾಗಲಿಲ್ಲ. ಕತ್ತಲಾಯಿತು, ಬರ್ತೀನಿ ಸುಶೀಲಾ" ಎಂದು ಹೇಳಿ ವಿಮಲಾ ಉಪ್ಪಿಟ್ಟು ತಿಂದು, ಕೈತೊಳೆದುಕೊಂಡು, ಕುಂಕುಮ ತೆಗೆದುಕೊಂಡು ಹೊರಟುಬಿಟ್ಟಳು. ಅವರ ಮನೆಯಲ್ಲಿ ಮದ್ರಾಸಿನಿಂದ ಬಂದ "ಸಾಮಾನಿಗಾಗಿ" ನಡೆದ ಪುರಾಣ ಅವಳೇನು ಬಲ್ಲಳು?

ವಿಮಲಾ ಹೋದುದೇ ತಡ. ಸುಶೀಲಮ್ಮನ ಮನೆಯವರೆಲ್ಲರೂ ಗೊಳ್ಳೆಂದು ನಕ್ಕುಬಿಟ್ಟರು. ಸುಶೀಲಾ-ಶ್ರೀನಿವಾಸರಾಯರು ತಮ್ಮ ಊಹಾಮಾಲೆಯನ್ನು ನೆನಿಸಿಕೊಂಡು ನಕ್ಕಿದ್ದೇ ನಕ್ಕಿದ್ದು! ಮರು-ದಿನ ಅವರ ಜೊತೆಗೆ ನಗುವುದಕ್ಕೆ ವಿಮಲಮ್ಮನೂ ಸೇರಿದರು.

ಅಂತೂ ಈ ಸಲದ "ಸಂಕ್ರಾಂತಿಯ ಉಡುಗೊರೆಯು" ಸುಶೀಲೆಗೆ ಎಂದಿಗೂ ಮರೆಯದ ಪಾಠವನ್ನು ಕಲಿಸಿತು. ಮೆಣಸಿನ ಪುಡಿ, ಬಟ್ಲಡಿಕೆಯ ಡಬ್ಬಿಗಳನ್ನು ನೋಡಿದಾಗಲೆಲ್ಲ, ಸುಶೀಲೆಗೆ ಆ ಡಬ್ಬಿಗಳು "ಎಷ್ಟು ದೊರಕಿದರು ಮತ್ತಿಷ್ಟು ಬೇಕೆಂಬಾಸೆ.... ನಷ್ಟಜೀವನದಾಶೆ...." ಎಂಬ ಪುರಂದರದಾಸರ ಹಿತೋಕ್ತಿಯನ್ನು ಸಾರಿ ಹೇಳುವಂತೆ ತೋರುತ್ತಿದ್ದುವು.

---


ಜಯಂತಿಯ ೧೬-೧೭ನೆಯ ಸಂಪುಟಗಳು

ಕೆಲವೇ ಪ್ರತಿಗಳು ಉಳಿದಿವೆ!

ಒಂದೊಂದು ಸಂಪುಟವೆಂದರೆ ಒಂದೊಂದು ಜ್ಞಾನಕೋಶದ ವಿಭಾಗವಿದ್ದಂತೆ.

ವಾಚನಾಲಯಗಳವರು ಈ ಯೋಗವನ್ನು ಕಳೆದುಕೊಳ್ಳಲಾಗದು!

೪ ರೂ. ೮ ಆಣೆಗಳನ್ನು M. O. ಮೂಲಕ ಕಳುಹಿಸಿದರೆ, ಅಂಚೆಯ ವೆಚ್ಚವನ್ನು ನಾವೇ ವಹಿಸಿ ೧೨ ಸಂಚಿಕೆಗಳನ್ನು ಕಳುಹಿಸುವೆವು.

ಬೇಕಾದವರು ಬೇಗನೇ ತರಿಸಿಕೊಳ್ಳಿರಿ.

ವ್ಯವಸ್ಥಾಪಕ, 'ಜಯಂತಿ' ಧಾರವಾಡ

# "ಸುಪಂಥಾ"

( ಕವನಸಂಗ್ರಹದ ವಿಮರ್ಶೆ )

**ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ), ಧಾರವಾಡ**

卐

"ಮೌನಗಿರಿ ಸಂಜಾತೆ
ಗಾನಗಂಗಾ ಸ್ತ್ರೋತೆ
ಬಾಳ ಬೆಳಗಿಪ ಪುಣ್ಯ
ಭಾವಗೀತೆ......... ..." ( ಸುಪಂಥಾ )

ಶ್ರೀ. ಪಾಂಡೇಶ್ವರ ಗಣಪತಿರಾಯರ ಕವನಗಳ ಅಂತಸ್ಸತ್ತ್ವವೇ ಈ ಸಾಲುಗಳಲ್ಲಿ ವ್ಯಕ್ತವಾಗಿದೆಯೆನ್ನಬಹುದು. ಛಂದಸ್ಸೌಂದರ್ಯ, ನಾದಬಂಧುರತೆ, ರಾಗರಮ್ಯತೆ, ಹಾಗೂ ಸಂಸ್ಕೃತಶಬ್ದಗಳ ವಜ್ರ-ಕಾಂತಿ, ಇವು ಅವರ ಕಾವ್ಯದ ಮುಖ್ಯ ಲಕ್ಷಣಗಳಾಗಿವೆ. ಜೀವನದ ಕಹಿ-ಸಿಹಿಯ ದ್ವಂದ್ವದಲ್ಲಿ, ಕಹಿಯನ್ನು ಹೆಚ್ಚಾಗಿ ನುಂಗಿ ನೊಂದ ಹೃದಯ ಅವರದು. ಆ ವಿಷಕುಂಡದ ಮಧ್ಯದಲ್ಲಿಯೇ ಏಕಾಂಗಿ-ಯಾಗಿ ನಿಂತು, ಯಾವುದೋ ಆಂತರಿಕ ಬೆಳಕನ್ನರಸಿಕೊಂಡು ನಡೆ-ದಿರುವ ಅವರ ವ್ಯಕ್ತಿತ್ವದಲ್ಲಿ ಒಂದು ತೇಜಃಪೂರ್ಣ ಕಾಂತಿಯಿದೆ. ಹೊರಗಡೆಗೆ ಕಾಣದ ಆ ಅಂತಸ್ಸತ್ತ್ವವು ಅವರ ಕಾವ್ಯದಲ್ಲಿ ಅಭಿ-ವ್ಯಕ್ತವಾಗುತ್ತದೆ. ಅವರ ಪುಟ್ಟಗಿನ ವಾಮನಮೂರ್ತಿಯನ್ನು ನೋಡಿದಾಗ, ಈ ಕಾವ್ಯದ ಬೃಹತ್‌ಕಾಂತಿಯ ಕಲ್ಪನೆಕೂಡ ನಮ-ಗಾಗುವುದಿಲ್ಲ. ಒಂದು ವ್ಯಕ್ತಿಯ ಆಂತರಿಕ ಬೆಳಕು, ಬಾಳಿನ ಸಂಕಷ್ಟಗಳ ಮೂಲಕ—ಸಮಾಜದ ಅಲಕ್ಷ್ಯದ ಮೂಲಕ—ನಿತ್ಯಜೀವನದಲ್ಲಿ ಸ್ಪಷ್ಟವಾಗಿ ಮೂಡದೆ, ಕೇವಲ ಕಾವ್ಯದಲ್ಲಿ ಅಭಿವ್ಯಕ್ತವಾಗುತ್ತಿರುವುದು ನಮ್ಮ ನಾಡಿನದೊಂದು ವಿಶಿಷ್ಟ ಪರಿ-ಸ್ಥಿತಿಯ ಪ್ರತೀಕವಾಗಿದೆ. ಶ್ರೀ. ಪಾಂಡೇಶ್ವರರ ಕವನಗಳನ್ನು ಓದಿದಾಗ, ಅವುಗಳನ್ನು ಕನ್ನಡದ ಇಂದಿನ ಯಾವ ಕವಿಗಳ ಕವನಗಳೊಡನೆ ತೂಗಬೇಕೋ ನನಗೆ ತಿಳಿಯದಾಗುತ್ತದೆ. ಅವುಗಳಲ್ಲಿ ಕಂಡ ಪ್ರಕಾಶಪೂರ್ಣ ಉಜ್ವಲತೆ, ಆ ಉಜ್ವಲತೆ-ಯಲ್ಲಿ ತುಂಬಿದ ಒಂದು ನಯವಾದ ಸೌಕುಮಾರ್ಯ ಇವು ನನಗೆ ಹೊಸಬಗೆಯವಾಗಿಯೆ ಕಂಡುವು. ಅದು ಪು. ತಿ. ಯವರ ಚಂದ್ರ-ಕಾಂತಿಯಲ್ಲ; ಪುಟ್ಟಪ್ಪನವರ ಮಹೋನ್ನತ ಶ್ರೀಮದ್ಗಾಂಭೀರ್ಯ-ವಲ್ಲ; ಬಿ. ಎಂ. ಶ್ರೀಯವರ ತುಂಗಾಸಲಿಲವಲ್ಲ; ಬೇಂದ್ರೆಯವರ ದೇಶೀಯ ಬೆಡಗಲ್ಲ; ಬೆಟಗೇರಿ ಕೃಷ್ಣಶರ್ಮರ ಸಹಜ ನಿರಂಗಳತೆ-ಯಲ್ಲ. ಇವೆಲ್ಲವುಗಳಿಗಿಂತ ಬೇರೆ ಬಗೆಯ ಒಂದು ಅರುಣೋಜ್ವಲ-ಕಾಂತಿ ಅವರ ಶೈಲಿಯಲ್ಲಿದೆ. ಶ್ರೀಮಾನ್ ಗೋವಿಂದ ಪೈಯವರು ಹೇಳುವಂತೆ, ಪಾಂಡೇಶ್ವರರ ಕವಿತಾಶಕ್ತಿಯ ತೇಜಸ್ಸು "ನಡು-ಹಗಲ ಕಡೆ ಬೆಳೆವಂತೆ ಕಾಣುತ್ತದೆ."

"**ಸುಪಂಥಾ**" ಎಂಬ ಅವರ ಐವತ್ತೆರಡು ಕವನಗಳ ಸಂಗ್ರಹ-ವನ್ನು ಓದಿ ನೋಡಿದಾಗ, ಹಾಡಿ ನಲಿದಾಗ, ಈ ಮಾತುಗಳು ಕೇವಲ ಅತಿಶಯೋಕ್ತಿಯವಲ್ಲವೆಂಬುದು ಸ್ಪಷ್ಟವಾಗುತ್ತದೆ. "ಸುಪಂಥಾ"ದಲ್ಲಿ ಹೆಸರಿಗೆ ತಕ್ಕಂತೆ ಸನ್ಮಂಗಲಜೀವಿಗಳ ಅಂತಃಪ್ರಕಾಶವನ್ನು ತೆರೆದು ತೋರಿಸುವ ಕವನಗಳಿವೆ. ಶ್ರೀಅರವಿಂದರು, ರವೀಂದ್ರರು, ಗಾಂಧೀಜಿ ಮೊದಲಾದ ವಿಶ್ವಮಾನ್ಯರೂ, ಶ್ರೀ. ಬೇಂದ್ರೆ, ಶ್ರೀ. ಸಾಲಿ ಹಾಗೂ ಕುವೆಂಪು ಮೊದಲಾದ ಕನ್ನಡದ ಕವಿಶ್ರೇಷ್ಠರೂ ಇದರಲ್ಲಿ ವರ್ಣಿತ-ರಾಗಿದ್ದಾರೆ. ಉಳಿದ ಕವನಗಳಲ್ಲಿ ಶ್ರೀಕೃಷ್ಣ ಸ್ತುತಿ, ದೇವೀಸ್ತವನ ಇತ್ಯಾದಿ ಸುಂದರ ಭಕ್ತಿಗೀತಗಳಿವೆ. ನಾಡಿನ ಸುಖ ದುಃಖಗಳೊಡನೆ ಒಂದಾಗಿ ಬರೆದ "ಜಯಭಾರತ ಜನನಿ" "ಪ್ರಕೃತಿಯ ರುದ್ರಲೀಲೆ" "ನಿಜಸ್ವರಾಜ್ಯವ ಮುಟ್ಟ" "ಪಂಜಾಬ ಕಾಶ್ಮೀರ" ಮೊದಲಾದ ಕವನಗಳು, ಅವರ ಸಾಮಾಜಿಕಪ್ರಜ್ಞೆಯನ್ನು ಎತ್ತಿ ತೋರಿಸುತ್ತವೆ. "ವಿಶ್ವಶಾಂತಿ" ಕವನದಲ್ಲಿ, ಇಂದಿನ ಮಹಾರಾಷ್ಟ್ರಗಳು ಶಾಂತಿಯ ಬಕಧ್ಯಾನ ನಡೆಸಿ, ಕೋರಿಯಾದಂತಹ ಅಸಹಾಯ ರಾಷ್ಟ್ರಗಳನ್ನು ಧ್ವಂಸಮಾಡುತ್ತಿರುವುದನ್ನು ಕಂಡು ರೋಷಗೊಂಡಿದ್ದರೆ, ಉಳಿದ ಕವನಗಳಲ್ಲಿ ಅವರ ಆಂತರಿಕ ನೋವು, ನಲಿವು, ಆರ್ತತೆ, ಧ್ಯಾನ, ಮೌನ, ಅನುಭಾವ ದೃಷ್ಟಿಗಳು ಅರಳಿವೆ. "ಭಾವಗೀತ" "ಕವಿನೋಟಕೆ" "ಸುಪಂಥಾ" "ಗದ್ಯ-ಪದ್ಯ" ಕವನಗಳಲ್ಲಿ ಪಾಂಡೇಶ್ವರರ ಕಾವ್ಯ ದೃಷ್ಟಿಯೆಂತಹದು—ಎಂಬುದು ವ್ಯಕ್ತವಾಗಿದೆ.

ಈ ಎಲ್ಲ ಕವನಗಳ ಯೋಗ್ಯತೆಯನ್ನು ಅಳೆಯಬೇಕಾದರೆ, ಅವುಗಳಲ್ಲಿ ಕವಿಗಳು ಬಳಸಿದ ಪ್ರತಿಮಾಸೃಷ್ಟಿಯನ್ನು ಕಾಣಬೇಕು. ಕವಿಯ ಮಂತ್ರಮಯ ಮೌನವನ್ನು ಬಣ್ಣಿಸುತ್ತ ಅವರು ಹೀಗೆ ಹೇಳುತ್ತಾರೆ:—

"ಕಿರುತಂತಿ ಗಾನಶರಧಿಯ ಧರಿಸಿದಂತೆ
ಮೋಡ ಮಿಂಚಿಸೆನಂತೆ ಚಿಂತೆ ನಕ್ಕಂತೆ"

ಅದು ಕಂಗೊಳಿಸುತ್ತಿತ್ತಂತೆ. ಇಲ್ಲಿ "ಚಿಂತೆ ನಕ್ಕಂತೆ" ಎಂಬ ಪ್ರತಿಮೆ ಅದೆಷ್ಟು-ಹೃದಯವಿದಾರಕ ಅರ್ಥಪೂರ್ಣತೆಯಿಂದ ತಳೆ-ಯುತ್ತಿದೆಯೆಂಬುದನ್ನು ಗಮನಿಸಬೇಕು.

ಖಿನ್ನಭಾವದ ನೀರವವಿಸ್ತಾರದಲ್ಲಿ ಅದೊಂದು ಕ್ಷೀಣಪ್ರಕಾಶ-ಕಿರಣ ಬಂದಂತೆ, ಕವಿಯ ಕಟು ಅನುಭವಗಳ ಚಿಂತಾಗರ್ಭದಿಂದ ಕಾವ್ಯಕಾಂತಿ ತುಳುಕಿ ಬರುವ ಕಲ್ಪನೆ ಕರುಣಸಿಂಚಿತವೂ, ಅದ್ಭುತರಮ್ಯವೂ ಆಗಿದೆ. ಇದರಂತೆಯೆ "ಕಿರುತಂತಿ ಗಾನಶರಧಿಯ ಧರಿಸಿದಂತೆ" ಎನ್ನುವಲ್ಲಿಯೂ, ಅನಂತವು ಸಾಂತದಲ್ಲಿ ಅಭಿವ್ಯಕ್ತ-ವಾಗುವುದರ ಭವ್ಯಕಲ್ಪನೆಯಿದೆ. ರವೀಂದ್ರನಾಥರು, ಪುನಃ ಪುನಃ ಅನಂತಗುಣನಿಧಿಯಾದ ಪರಮಾತ್ಮನು ಪರಿಮಿತ ಜೀವಿಗಳಲ್ಲಿ ಅಭಿ-ವ್ಯಕ್ತವಾಗುವ ಬಗೆಯನ್ನು ಚಿಂತಿಸುತ್ತ, ಇಂತಹದೇ ಒಂದು ಕಲ್ಪನೆ ಮಾಡಿ ಧ್ಯಾನಮಗ್ನರಾಗುತ್ತಾರೆ. 'ಕನ್ನಡಿಯಲ್ಲಿ ಆನೆಯ ಪ್ರತಿ ಬಿಂಬ ಮೂಡಿದಂತೆ' ಎಂದು ಬಸವಣ್ಣನವರು ಹೇಳುವ ನುಡಿ-ಯಲ್ಲಿಯೂ ಇದೇ ಭಾವ ತುಂಬಿದೆ. ಹೀಗೆ ಒಂದು ಭಾವದ

ಅಂತರಂಗವನ್ನೇ ತೆರೆದು ತೋರಿಸುವ ಪ್ರತಿಮಾಸೃಷ್ಟಿಯು ಶ್ರೇಷ್ಠ ಕವಿಯ ಲಕ್ಷಣವಾಗಿದೆ. ಇದು ಬರಿ ಅಲಂಕಾರಪ್ರಿಯತೆಯಲ್ಲ; ನಾವ-ಭಾವಗಳ ಆಂತರಿಕ ಐಕ್ಯದರ್ಶನದ ಫಲವಿದು.

ಇದೇ ರೀತಿಯಾಗಿ ಶ್ರೀ. ಬೇಂದ್ರೆಯವರ ಕವಿಹೃದಯವನ್ನೂ ಧ್ಯಾನಗಂಭೀರನಾದಶಕ್ತಿಯನ್ನೂ, ಭಾವಕಾಂತಿಯನ್ನೂ ವರ್ಣಿಸುವ ಬಗೆ ಇಲ್ಲಿದೆ:—

“ ಮೌನ ಕರಗಿ
ನಾದವಾಯ್ತು
ಭಾವದ ಮೈ–
ಮಿಂಚಿ ಹೋಯ್ತು ”

ಸಹ್ಯಾದ್ರಿಯ ಮೌನಗುಂಭದಿಂದಲೇ ತೂರಿಬಂದು ಮೌನವಾಗಿಯೇ ಹಾರಾಡುವ ಹಕ್ಕಿಗಳನ್ನು ಚಿತ್ರಿಸುವಾಗ, ಕಾಡಮೌನದ ನುಂಡ ಹಾಡು ಹಕ್ಕಿಯ ತಂಡ, ಗಾಥಾನಂದದ ನಾದಮಾಧುರ್ಯದ ಪಿಂಡ.......... ” ಇತ್ಯಾದಿಯಾಗಿ ಬರುತ್ತದೆ. ಇವೆಲ್ಲವುಗಳಲ್ಲಿ ಕಾಣುವುದು ಬರಿ “ ಮೌನ, ಭಾವ, ಕಾಡು-ಹಕ್ಕಿ ” ಇತ್ಯಾದಿ ಶಬ್ದಗಳಲ್ಲ. ಶೆಲ್ಲಿಯ ‘ ಬಾನಾಡಿ ’ (skylark) ಯ ಅವ್ಯಕ್ತ ಸಂಗೀತದಂತೆ, ಈ ಕವಿಗಳ ಅಂತರಂಗದಲ್ಲಿ ಯಾವುದೋ ಅಗಮ್ಯಭಾವವು ಕಂಚುಮಿಂಚಾಗಿ ಸುಳಿದಾಡುತ್ತಿರುವಂತೆ ಕಾಣುತ್ತದೆ. ಅಗ್ನಿವರ್ಷದಂತೆ ಸುರಿಯುತ್ತಿರುವ ಸಂಕಷ್ಟಗಳ ಮಧ್ಯದಲ್ಲಿ, ನಿರಾಶೆಯ ರಣರಣ ಮಳಲುಗಾಡಿನಲ್ಲಿ ಬೆಂಡಾಗಿ ಅಂಡಲೆಯುತ್ತಿರುವ ಒಂದು ಜೀವದಲ್ಲಿ ಪ್ರಾರ್ಥನೆಯ ಚಂಡಮಾರುತವೆದ್ದಂತೆ, ದೈವೀಕರುಣೆಯ ಮಿಂಚು ಸೆಳೆದಂತೆ ಈ ಕವನಗಳಲ್ಲಿ ಕ್ಷಣಕ್ಷಣಕ್ಕೆ ಕಾಣುತ್ತದೆ. ಭೂಕಂಪದ ರುದ್ರತಾಂಡವವನ್ನು ವರ್ಣಿಸುವಾಗ, ಶಬ್ದಗಳು ಬೆಂಕಿಯ ಪ್ರವಾಹದಂತೆ ಬರುತ್ತವೆ :

“ ಪ್ರಳಯರುದ್ರಮೌಳಿಯಿಂದ
ಅಗ್ನಿಗಂಗೆ ಇಳಿದಳೆ ?
ಮನುಜಕುಲದ ಪಾಪವೃಂದ
ಬೆಂಕಿಯಿಂದ ತೊಳೆದಳೆ ?
....ನವಸೃಷ್ಟಿಯನೆರಕಹೊಯ್ಯೆ
ಮೂಲ ಪ್ರಕೃತಿ ಬಯಸಿತೆ ? ”

ಬಾಳಿನ ಆಘಾತದಿಂದ ಮಹಾ ಕಡಲೊಂದು ಹುಚ್ಚೆದ್ದು ಮೊರೆಯುವಂತೆ, ವ್ಯಕ್ತಿಯ ಅಂತರಂಗದಲ್ಲಿ ಮಹಾಕೋಲಾಹಲವೇಳುತ್ತದೆ. ಆದರೂ ಈ ಪ್ರಲಯದ ಗರ್ಭದಲ್ಲಿ ಹುದುಗಿದ ಒಂದು ಸಾಮರಸ್ಯದ ಸೌಂದರ್ಯಸೃಷ್ಟಿಯ ಲೀಲಾಶಕ್ತಿ–ಹೊಸಬಾಳ್ಕಟ್ಟುವ ವಿದ್ಯುತ್‌ಶಕ್ತಿಯ ಕಲ್ಪನೆ, ಕವಿಯ ಶ್ರದ್ಧೆಗೆ ಹೊಳೆಯುತ್ತದೆ. ಪಂಚಭೂತಗಳ ಜಡದ ಗರ್ಭದಿಂದೊಂದು ಚೈತನ್ಯಲೀಲೆಯ ಆವಿರ್ಭಾವವಾಗುತ್ತದೆ—

“ ತಾಮ್ರ ಕಬ್ಬಿಣ, ಬೆಳ್ಳಿ ಬಂಗಾರಗಳ ತೆಯ್ದು
ಹುಟ್ಟುವಡೆದಿದೆ ವಜ್ರಪಿಂಡ ವಿದ್ಯುತ್ಸತ್ತ್ವ ”

ಇಲ್ಲಿಯ “ ವಜ್ರಪಿಂಡ ವಿದ್ಯುತ್ಸತ್ತ್ವ ” ಎಂಬ ಪದಸಮುಚ್ಚಯದಲ್ಲಿರುವ ದರ್ಶನದ ಪ್ರಖರತೆ, ಭಾವದ ರಭಸವನ್ನು ನೋಡಿದರೆ ದಿಗ್ಭ್ರಮೆಯಾಗುತ್ತದೆ. ಇಂತಹ ರುದ್ರತೇಜಸ್ಸನ್ನು ನೋಡಿ ತಾಳುವ ಹೃದಯದಲ್ಲಿಯೇ ಒಂದು ಸಮರಸದೃಷ್ಟಿ ಅನಿವಾರ್ಯವಾಗಿ ಬರುತ್ತದೆ :

ನವರಾತ್ರಿಯೊ ಶಿವರಾತ್ರಿಯೊ
ಶರ–ಶಿಶಿರಗಳೊಂದೇ
ಕವಿನೋಟಕೆ ನಿಜದಾಟಕೆ
ಹಸನೆಲ್ಲವು ತಂದೆ !

ಕವಿಯ ಅಂತರಂಗದ ಕೋಲಾಹಲವು ಶ್ರದ್ಧಾಬಲದಿಂದ ಶಾಂತವಾದಾಗ, ಬಾಳಿನ ಸುಕುಮಾರ–ಸುಂದರ ಲೀಲಾವಿಲಾಸವು ತನ್ನ ವರ್ಣರಂಗವನ್ನು ತೆರೆದು ತೋರಿಸುತ್ತದೆ. ಆಗ ಹೇಗೋ ಈ ಎಲ್ಲ ಲೀಲೆಗಳ ಹಿಂದೆ ಒಂದು ಮಾತೃಶಕ್ತಿಯ ವಾತ್ಸಲ್ಯಪೂರ್ಣ ಹೃದಯವಿದೆಯೆಂಬ ಅರಿವೂ ಜಾಗೃತವಾಗುತ್ತದೆ. ಅದರಲ್ಲಿ ಒಂದು ತನ್ಮಯ ಪ್ರಾರ್ಥನಾ ಸಂಗೀತವಿರುವುದು. ಇಲ್ಲಿ ಶ್ರೀ. ಪಾಂಡೇಶ್ವರರವರ ಆಂತರಿಕ ತನ್ಮಯತೆಯ ಬಂಧುರಭಾವವು ತರಂಗ-ತರಂಗವಾಗಿ ತನಗನುರೂಪವಾದ ಪದಗತಿಯಲ್ಲಿ ತುಂಬಿಹರಿಯುತ್ತಿದೆ.

“ಮಹಾಕಾಶ ಮೌನಾಂಬರೆ,
ಅಸಂಖ್ಯಾತ ವಿಶ್ವಂಭರೆ
ಮಹಾಕಾವ್ಯ ಮಹೋದರೆ
ಕಲ್ಪನಾವಿದೂರ........ .. ....
ಮಮದುರಿತ ಕ್ಷಯಕಾರಿಣಿ
ಭವಸಾಗರ ಸಂತಾರಿಣಿ
ಸುಖಾನಂದ ಸಂವರ್ಧಿನಿ
ಮೂಕಾಸುರ ದಳಿನೀ...........”

ಈ ಗೀತಗಳ ಛಂದಶ್ಶರೀರವನ್ನು ನೋಡಿದಾಗ, ಸಂಸ್ಕೃತ ಶ್ಲೋಕಗಳನ್ನು ಅಂದುಕೊಂಡಂತೆ, ಆ ಗಂಭೀರನಾದವು ನಮ್ಮ ಅಂತರಂಗವನ್ನು ತುಂಬಿದಂತಾಗುತ್ತದೆ. ಕನ್ನಡದಲ್ಲಿ ಜನಮನದ ಬಾಯಲ್ಲಿ ಭಕ್ತಿಗೀತಗಳಂತೆ, ಧ್ಯಾನಶ್ಲೋಕಗಳಂತೆ, ರಾಗಪೂರ್ಣವಾಗಿ ಅಂದುಕೊಳ್ಳಲು ಅತ್ಯಂತ ಯೋಗ್ಯವಾದ ಕೆಲವೇ ಕವನಸಂಗ್ರಹಗಳಲ್ಲಿ ಶ್ರೀ. ಪಾಂಡೇಶ್ವರರ ಸುಪಂಥಾ ಒಂದಾಗಿದೆ. ಮುಖ್ಯವಾಗಿ ಸಂಸ್ಕೃತ ಪದಪುಂಜಗಳ ಶುಕ್ರಕಾಂತಿಯನ್ನು ಕಾಣಬೇಕಾದರೆ, ಸಂಗೀತದ ಮಾಧುರ್ಯ-ಸೌಕುಮಾರ್ಯಗಳನ್ನು ಒಂದೇ ಕಡೆಗೆ ನೋಡಬೇಕಾದರೆ, ಈ ಸುಪಂಥಾದಲ್ಲಿಯ ಸ್ತುತಿಪರ ಪದ್ಯಗಳನ್ನು ನೋಡಬೇಕು. ಅದರಲ್ಲಿಯೂ ಹೆಣ್ಣುಮಕ್ಕಳು ಹಾಡಿ ಆನಂದಿಸಬೇಕು.

ಕೆಳಗಿನ ಶ್ರೀಕೃಷ್ಣನ ಸ್ತುತಿಯಲ್ಲಿಯ ಶಾಂತಿಮಯ ಸಂಗೀತವನ್ನು ಕೇಳಿದರೆ ಈ ಮಾತು ಸ್ಪಷ್ಟವಾಗುವುದು.

" ಗೀತಾಮೃತಸಂ—
ಗೀತವಿಲಾಸಂ
ಮಧುರಸುಹಾಸಂ
ಹೃದಯವಿಕಾಸಂ—"

ಇಂತಹದೊಂದು ಕಾವ್ಯಸಂಪತ್ತುಳ್ಳ ಶ್ರೀ. ಪಾಂಡೇಶ್ವರರು ಕನ್ನಡಿಗರಿಗೆ ಹೊಸಬರಲ್ಲ. ಆದರೆ ದುರ್ದೈವದಿಂದ ಬಹುಜನ ಕನ್ನಡಿಗರಿಗೆ ಅವರಿಂದು ಇನ್ನೂ ಅಪರಿಚಿತರಿದ್ದಂತೆ ಇದ್ದಾರೆ. ಇಂದಿನ ಕನ್ನಡದ ಮಹಾಕವಿಗಳೊಡನೆಯೇ ಕಾವ್ಯರಂಗದಲ್ಲಿ ಕಾಲಿಟ್ಟು ಶಾಂತಿಯುತ ಕವನಗಳನ್ನು ಸುಮಾರು ೧೯೩೮ರಷ್ಟೊತ್ತಿಗೇ ಪ್ರಕಟಿಸಿದರು. ಆದರೆ ಅವರನ್ನು ಬಾಳು ತನ್ನ ಅಗ್ನಿಪರೀಕ್ಷೆಗೊಳಪಡಿಸಿದೆ. ತನ್ನ ಸುತ್ತಲಿನ ಜನರ ಸಾಂಸ್ಕೃತಿಕಜೀವನವನ್ನು ರೂಪಿಸಬೇಕಾದ ಕವಿಹೃದಯವು, ಇಂದು ಬಾಳಿನ ಬವಣೆಗಳನ್ನು ಎದುರಿಸುವಲ್ಲಿ ತನ್ನ ಶಕ್ತಿಯನೂ ವ್ಯಯಮಾಡುತ್ತಿದೆ. ಆದರೂ ಈ ಅಗ್ನಿಕುಂಡದ ಮಧ್ಯದಲ್ಲಿಯೇ ಒಂದು ಪಾವನಶಕ್ತಿಯನ್ನೂ, ಶಾಶ್ವತಸುಖವನ್ನೂ ಕಾಣುವ " ಪುಣ್ಯದ ಕಣ್ " ಅವರಿಗೆ ಉಂಟು. ಅಂತೆಯೇ ಅವರ ಜೀವನದ ಸಂಕಷ್ಟಗಳ ಮರುಳುಗಾಡಿನಿಂದ ಕೂಡ ಇನ್ನೂ ಕಾವ್ಯ-ಗಂಗೆ ಸೂಸಿ ಬರುತ್ತಿದ್ದಾಳೆ! ಕನಿಷ್ಟ ಅದನ್ನು ಸವಿಯುವ ಅಭಿರುಚಿಯಾದರೂ ನಮ್ಮಲ್ಲಿ ಜಾಗೃತವಾದೀತೆ ?

---

## ಈ ಸಂದರ್ಶನಕೆ

**ಶ್ರೀ. ಮುದೇನೂರ ಸಂಗಣ್ಣ, ಹಿಗಟೇರಿ**

( ಅಷ್ಟಷಟ್ಪದಿ )

ಶಿಶಿರದೀ ಪ್ರಸವವೇದನೆಯುಂಡು ಭೂದೇವಿ
ಪಡೆದಳಿದೊ ಪುತ್ರನಂ ಶುಭಚೈತ್ರನಂ ದಿಟಂ
ರುದಿತ ಮನಕೊದವಿದುದಿದೋ ಸಿರಿಸೊಗಂ ಸ್ಫುಟಂ

ಸಂತಸವಸಂತನವ ಬಂದ ಪೇಂಪಂ ತೀವಿ!
ಭಾವಪಿಕ ಕೂಜನದೊಳೆಲ್ಲವುಂ ತನ್ಮಯಂ;
ಪಾಡುತಿರೆ ತುಂಬಿಗಳ್ ಬಯಕೆಗಳ ಜೋಗುಳಂ
ಪೊಲ್ಲಮೆಯ ಸೊಲ್ಲಳಿದು ಜಗಕೆ ಸನ್ಮಂಗಳಂ!
ರಸಯೋಗದಿಂ ಚರಾಚರವು ತಾನ್ ಚಿನ್ಮಯಂ!

ಬನದ ನುಣ್ಗದಪಿನೆಳದಳಿರ ಕೆಂಪೇರ್ದಪುದು
ಚುಂಬಿಸಲ್ ಹರ್ಷದೊಳುಳಿಯ ಋತುರಿಂಗಣಂ
ಪೇಳ್ ನಂದನಂ ನಾಚ್ಚದೇನ್ ?—ಶಿವಂ ಕಣಕಣಂ

ಚೈತ್ರನೀ ಸಂದರ್ಶನಕೆ ನೋಡರಳ್ದಪುದು—
ಕವಿಮಾನಸದ ಪುಣ್ಯಪದ್ಮದೀ ಕಾವ್ಯಾಕ್ಷಿ
ಭೂದೇವಿ ಶ್ರುತದೇವಿ—ಋತುರಾಜ ಸಾಕ್ಷಿ!

## ಸುಳ್ಳು

( ಅನುವಾದಿತ ಕವನ )*

ಕುಸುಮಿತೋದ್ಯಾನದಲಿ ಕೋಮಲಾಂಗಿಯ ಕಾಯ
ಬಳ್ಳಿಯೆನೆ ಬಳುಕುವುದ ಬಣ್ಣಿಸುವ ಕವಿರಾಯ!
ಹಸಿವು ಕಸವಿಸಿಗಾಗಿ ತುಣುಕುರೊಟ್ಟಿಯ ಮಾಯೆ
ತನುವನೇ ಮಾರಿಸಿದ ಬಗೆಯನ್ನು ಬಣ್ಣಿಸೆಯೆ ?
ಸ್ವಾರ್ಥದೇಕಾಂತದಲಿ ಜಗದಳಲಿನಿಂ ಸಿಡಿದು
ಸ್ವರ್ಣಸಂಧ್ಯಾತಪವು ಕಂಕುಮಿಪ ಗಿರಿಶಿಖರ-
ವೀಕ್ಷಿಸುವೆ ವಿಸ್ಮಯದಿ—ಅನರತ ದುಡಿದುಡಿದು
ನಿದ್ದಿಗೆಟ್ಟವರ ಕಣ್ಗೆಂಡವನು ಕಂಡಿಹೆಯ....?
ನವಕೋಟಿ ನಕ್ಷತ್ರ ಮಣಿಮುಕುಟದಾಭರಣ
ಶಶಿಯು ಮುಖ ನಿಶೆಗೆಂದು ಕಲ್ಪಿಸುವ ಕನಸುಣಿಯೆ,
ಕ್ಷುಧೆಯಿಂದ ಬಳಲುವವಗಾ ತಾರೆಗಳ ಗಡಣ
ಹಿರಿಬೇನೆಗನ ಮೈಯ ವ್ರಣಕೋಟಿಯಿದ್ದಂತೆ....
ಯಾಮಿನಿಯ ಮುಖವಲ್ಲ ಆ ಪೂರ್ಣಶಶಿಬಿಂಬ
ಜಗಕೊಂದು ಕೀವ ಬಸಿಯುವ ಗಾಯವಿದ್ದಂತೆ.

---

* ಹರೀಂದ್ರನಾಥ ಚಟ್ಟೋಪಾಧ್ಯಾಯ ಅವರ ' The Lie ' ಎಂಬ ಕವನದ ಅನುವಾದ ಇದು. —ಲೇ.

# ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಕುರುಡು ಕಣ್ಣು' ಕತೆಯನ್ನು ಕುರಿತು ೭ ಜನರಿಂದಲೂ 'ಮುಗಿಯದ ಯುದ್ಧ' ನಗೆಯಾಟವನ್ನು ಕುರಿತು ೪ ಜನರಿಂದಲೂ ವಿಮರ್ಶೆಗಳು ಬಂದಿವೆ.

## 'ಕುರುಡು ಕಣ್ಣು' ಕತೆಯ ವಿಮರ್ಶಕರು:

೧. ಶ್ರೀ. ಕಟ್ಟಿಣ್ಣಾ, ಹೊಸಪೇಟೆ. ೨ ಶ್ರೀ. ಕೆ. ವಿ. ಫಡಣೀಸ್, ಶಿರಹಟ್ಟಿ, ೩. ಶ್ರೀ. ಸೀತಾರಾಮ ಎಸ್. ಜಾಹಗೀರದಾರ್, ಹೈದರಾಬಾದ್ ೪. ಶ್ರೀ ಕೆ. ವಿ. ಆಚಾರ್ಯ ಎಸ್. ಎಂ. ಎಸ್. ಪಿ ಎಸ್. ಕಾಲೇಜು ಉಡುಪಿ. ೫. ಶ್ರೀ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ಕಾಸರಗೋಡು, ೬. ಶ್ರೀ. ಎನ್. ಎಸ್. ಗುರುಸುಣಗಿ ೭. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

## 'ಮುಗಿಯದ ಯುದ್ಧ' ನಗೆಯಾಟದ ವಿಮರ್ಶಕರು:

೧. ಶ್ರೀ. ಕೆ. ಆರ್. ಭಟ್ಟ, ಉಡುಪಿ, ೨. ಶ್ರೀ. ಸೀತಾರಾಮ ಎಸ್. ಜಾಹಗೀರದಾರ್, ಹೈದರಾಬಾದು, ೩. ಶ್ರೀ. 'ಮಹೇಶ' ಸುಲ್ತಾನಪುರ, ಗೋಸಿ, ೪. ಶ್ರೀ. ಎಂ ಮುಕುಂದರಾವ, ಕೊಯಿಮುತ್ತೂರು.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯವರೇ ಓದಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ. 'ಕುರುಡುಗಣ್ಣು' ಕತೆಯನ್ನು ಕುರಿತು ಬರೆದವರಲ್ಲಿ ಶ್ರೀ. ಕೆ. ಎಸ್. ಶರ್ಮಾ ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಪುಂಡೂರು ವೆಂಕಟರಾಜ, ಶ್ರೀ. ಎನ್. ಎಸ್. ದುರುಸುಣಗಿ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ಕೆ. ವಿ. ಆಚಾರ್ಯರದು ಚೆನ್ನಾಗಿದೆ. ಮಿಕ್ಕುವು ಸಾಮಾನ್ಯ.

'ಮುಗಿಯದ ಯುದ್ಧ' ನಗೆಯಾಟದ ವಿಮರ್ಶಕರಲ್ಲಿ ಶ್ರೀ. 'ಮಹೇಶ' ಸುಲ್ತಾನಪುರ ಅವರ ವಿಮರ್ಶೆ ಉತ್ತಮವಾಗಿದೆ. ಶ್ರೀ. ಸೀತಾರಾಮ ಎಸ್. ಜಾಹಗೀರ್‌ದಾರರ ವಿಮರ್ಶೆ ಚೆನ್ನಾಗಿದೆ ಮಿಕ್ಕುವೆಲ್ಲ ಸಾಮಾನ್ಯವಾಗಿವೆ.

ಮುಂದಿನ ಸಂಚಿಕೆಗಾಗಿ '**ರಾಜಮಂಚಕ**' ಎಂಬ ಐತಿಹಾಸಿಕ ರೂಪಕವನ್ನಾಗಲಿ '**ಕಾಮದಹನ**' ಎಂಬ ಕತೆಯನ್ನಾಗಲಿ ವಿಮರ್ಶಿಸಿ ಬರೆಹಗಳನ್ನು ಕಳುಹಬೇಕು.

—**ಸಂಪಾದಕ**

## "ಕುರುಡುಕಣ್ಣು"

(ಸಣ್ಣ ಕತೆ)

**ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡ**

●

ಅಂತರ್ಬಾಹ್ಯ ವಿಚಾರಸಂಘರ್ಷಣೆಯ ನಿಲುವೆ-ಜೀವನದ ವಿಶಾಲಕ್ಷೇತ್ರವೆಂದಾದರೆ, ಈ ಸಂಘರ್ಷಣೆಯಲ್ಲಿ ನೆಲೆನಿಂತ ಕೆಲ. ವೊಂದು ಸುಪ್ತಭಾವಗಳು ದೈಹಿಕ ಹಾಗೂ ಮಾನಸಿಕ ಪರಿವರ್ತನೆ ಗಿರುವ ಪರಿಣಾಮಕಾರಿಯಾದ ಘಟಕಗಳೆಂಬುದನ್ನರಿಯಲು ಮರೆ ಬಾರದು. ಜೀವನದಲ್ಲಿ ಬಂದೊದಗುವ ಹಲವಾರು ದುರಂತಗಳ ಮಾನಸಿಕ ರೋಗಗಳಿಗೆ, ತದಾಯತ್ತ ದೈಹಿಕ ರೋಗಗಳಿಗೆ ಸು ಚಿತ್ತದ ವೇದನೆ-ಸಂವೇದನೆಗಳು ಅದೆಷ್ಟು ಕಾರಣಗಳಾಗಿ ಬರು ವೆಂಬುದನ್ನು ಮನಶ್ಶಾಸ್ತ್ರಜ್ಞರು ಬಹು ಮಾರ್ಮಿಕವಾಗಿ ಸಾರಿದ್ದಾ ಆ ಸಾರುವಿಕೆಯಲ್ಲಿ ವಿಶಾಲವಿಶ್ವದ ಜೀವನವನ್ನು ತೆರೆದು ತೋರಿದ್ದಾರೆ.

ದೈಹಿಕವಾದ ಹಲವಾರು ರೋಗಗಳಿಗೆ ವ್ಯಕ್ತಿನಿಷ್ಠ ದೈಹಿಕ

ಮಾತ್ರವಲ್ಲ ಕಾರಣ; ಕೆಲವೊಮ್ಮೆ ಮನಸ್ಸಿನ ಮೇಲೆ ಬಂದೊದಗಿದ ವಜ್ರಾಘಾತಗಳೂ ಕಾರಣವಾಗಿದೆಯೆಂಬುದನ್ನು–ಜೀವನಗತಿಯನ್ನೂ ಕೂಲಂಕಷವಾಗಿ ಪರಿಶೀಲಿಸಿದರೆ ನಾವರಿಯಬಹುದು. ಆದುದ. ರಿಂದಲೆ ರೋಗಿಗಳ ಪರೀಕ್ಷೆಯಲ್ಲಿ ಮುಂದಾದ ಡಾಕ್ಟರರು, ವ್ಯಕ್ತಿಗತ ಜೀವನವನ್ನು ಪರಿಶೀಲಿಸುವುದು ಅವಶ್ಯಂಭಾವ್ಯವಾಗಿದೆ ಈ ಪರೀ. ಕ್ಷಣೆಯು ಫಲಕಾರಿಯಾಗಬೇಕಾದರೆ ಮನಶ್ಶಾಸ್ತ್ರದ ವಿವಿಧಾಂಗಗಳ ಪರಿಚಯವು ಡಾಕ್ಟರಿಗಿರಬೇಕಾಗಿದೆ. ಅಂತಹ ಒಬ್ಬ ಡಾಕ್ಟರರ ಶುಶ್ರೂಷೆಗೊಳಗಾಗಿ ನಿಂತ ವ್ಯಕ್ತಿಯ ಜೀವನ ಪರೀಕ್ಷೆಯೆ ಪ್ರಸ್ತುತ ಕಥಾಭಾಗವಾಗಿದೆ.

“ಜನಾರ್ದನ ಒಬ್ಬ ಸಂಸಾರಿ. ತನ್ನ ಕೈಹಿಡಿದು ಮನೆಯ ದೀಪವನ್ನು ಬೆಳಗಿದ ಆದರ್ಶಸತಿ ನಳಿನಾಳಲ್ಲಿ ಅದೇಕೋ—ಏನೋ ಕಾರಣವಿಲ್ಲದಿದ್ದರೂ ಅಂತರ್ನಿಗೂಢಭಾವ ವಿಶ್ಲೇಷಣೆಯಲ್ಲಿ ವಿರ. ಕ್ತಿಯನ್ನು ತಾಳಿದವನು. ಆದರೆ ಜನಾರ್ದನನ ಎಲ್ಲ ಅವಹೇಳನೆ. ಯನ್ನು ಸಹಿಸಿ ನಿಂತ ನಳಿನಾನಲ್ಲಿ ಅದೇಕೋ ಇನ್ನಷ್ಟು ವಿರಕ್ತಿಯು ಜನಾರ್ದನನ ಮನಃಪಟಲದಲ್ಲಿ ಬೇರೂರಿತ್ತು. ಈ ವಿರಕ್ತಿಯ ಪ್ರಭಾವಕ್ಕೆ ನೆರೆಮನೆಯಲ್ಲಿ ವಾಸಿಸುತ್ತಿದ್ದ ರಂಗರಾಯರ ತಂಗಿ ಜಲಜಾಳ— ಮನೆ ತಪ್ಪಿ ಅಣ್ಣನಲ್ಲೆ ನೆಲೆನಿಂತ ಯುವತಿಯ ಆಕ. ರ್ಷಣೆಯು ಕಾರಣವಾಯಿತು. ಒಂದು ದಿನ ಜನಾರ್ದನ ಜಲಜಾ ನೊಂದಿಗೆ ಮುಂಬಯಿಗೆ ತೆರಳಲು ಯೋಚಿಸಿದನು. ತೆರಳುವ ಮುನ್ನಾ. ದಿನ ರಾತ್ರಿ ನಳಿನಾಳನ್ನು ಕೆಣಕಿ—ಬೆಳಿಗ್ಗೆ ಏಳಲನುವಾಗುವಂತೆ ಅಲಾರಂ ಇಟ್ಟು ಮಲಗಿದ. ನಿಶ್ಚಿತಕಾಲದಲ್ಲಿ ಅಲಾರಂ ಬಡಿಯಿತು. ಆದರೇನು, ಕುರುಡುಕಣ್ಣನ್ನು ಕೊಂಡುವಂತಾದ ಜನಾರ್ದನ ತನ್ನ ಯತ್ನದಲ್ಲಿ ವಿಫಲನಾಗಿ ಆಸ್ಪತ್ರೆ ಸೇರುವಂತಾದ. ಡಾ. ಜಯರಾಜರು ಕುರುಡು ಕಣ್ಣಿನ ಶುಶ್ರೂಷೆಯಲ್ಲಿ ಆಸಕ್ತರಾಗಿ ಜನಾರ್ದನನ ಹೃದಯವನ್ನೆ ತೆರೆದು ನೋಡಿದರು. ಇದಕ್ಕೆ ಜನಾರ್ದನನು ತನ್ನನ್ನು ಕಾಣಬರುತ್ತಿದ್ದ ನಳಿನಾನಲ್ಲಿ ಕಾಣಿಸಿದ ಜುಗುಪ್ಸೆಯೇ ಕಾರಣ. ವಾಯಿತು. ಡಾಕ್ಟರರು ನಳಿನಾಳ ಮೂಲಕದಿಂದಲೂ, ಜನಾರ್ದನನ ಮೂಲಕದಿಂದಲೂ ಅವರಿಬ್ಬರ ದಾಂಪತ್ಯಜೀವನದ ವಿಚಾರವನ್ನರಿತು, ಜನಾರ್ದನನ ಕುರುಡುಕಣ್ಣಿಗೆ ಸುಪ್ತಚಿತ್ತದ. ಸಂವೇದನೆಯೆ ಕಾರಣ. ವೆಂದರಿತು, ತನ್ನ ಮನಶ್ಶಾಸ್ತ್ರಾನುಭವ ಪೂರ್ಣ ಚೇತಸ್ಸಂಪತ್ತಿನಿಂದ, ದಂಪತಿಗಳಲ್ಲಿ ನೆಲೆ ನಿಂತ ಚಿತ್ತಕಾಲುಷ್ಯದನ್ನು ತೊಡೆದು ವಿಜಯಿ. ಗಳಾಗುವರು. ಕುರುಡುಕಣ್ಣೂ—ಸರಿಯಾದ ಬೆಳಕನ್ನರಿಸಿ ಸ್ವಸ್ಥ. ವಾಯಿತು.

ಇದಿಷ್ಟು ಕಥಾವಸ್ತು!

ಇದೊಂದು ನೂತನ ಮಾರ್ಗವನ್ನು ಅವಲಂಬಿಸಿ ನಿಂತ ಕಥೆ ಮನಶ್ಶಾಸ್ತ್ರದ ತಳಹದಿಯಲ್ಲಿ–ವಿಶ್ಲೇಷಣೆಯ ಮೂಲಕವಾಗಿ ಹರಿದು ನಿಂತ ಸುರಸ ಕಥಾ ಸನ್ನಿವೇಶ. ಈ ಬಗೆಯ ಕಥೆಯನ್ನು ರಚಿಸು. ವಾಗ ಲೇಖಕನು ಬಹು ಜಾಗರೂಕನಿರಬೇಕು. ತಾನೆತ್ತಿದ ಕಥಾ ಘಟಕಗಳ ಸುರಸ ಸಮಾವೇಶವನ್ನು ಮಾತ್ರ ಕಂಡರೆ ಸಾಲದು. ಜೀವನನಿಷ್ಠಭಾವಸಂಧಿಗಳನ್ನೂ, ಕಥಾನುಗತ ಆ ಕರ್ಷಕ, ಚಿತ್ತ- ವಿಶ್ಲೇಷಕ, ಚಿತ್ತವಿಶ್ಲೇಷಕಜೀವನ ಸಂವೇದನೆಯನ್ನು ಅನುಗೊಳಿ ಸುವಲ್ಲಿ ಭಾವುಕನಿರಬೇಕು. ಅನುಭಾವಿಯಿರಬೇಕು. ಈ ಎಲ್ಲ ಗುಣಗಳನ್ನು ಲೇಖಕರೀಭಾಗದಲ್ಲಿ ತುಂಬಿದ್ದಾರೆಂಬುವರಿಂದಲೆ ಕಥೆ ಯಿದು ಬಹು ಮಾರ್ಮಿಕವಿದೆ; ಓದುಗನ ಕುತೂಹಲವನ್ನು ಕೆರಳಿ. ಸುತ್ತಿದೆ.

ಕಥೆಯ ಆರಂಭವು ಆಸ್ಪತ್ರೆಯಲ್ಲಿ ನೆಲಸಿದ ಜನಾರ್ದನನ ಮಂಚದ ಬಳಿಯಿಂದ ಸಾಗುತ್ತಿದೆ. ಮಂಚದಲ್ಲಿ ಮಲಗಿದ್ದ ಜನಾ. ರ್ದನ ನೀರಿಗಾಗಿ ತಡವಿ–ಕೈತಪ್ಪಿ ಬಿದ್ದುಹೋದ ಗ್ಲಾಸಿನ ಶಬ್ದದಿಂದ ನರ್ಸನ್ನು ಬರಮಾಡಿಕೊಳ್ಳುತ್ತಾನೆ. ಅವರಿಬ್ಬರೊಳಗೆ ನಡೆದ ಸಂಭಾಷಣೆಯಿಂದ “ನಳಿನಾಳ ಬರುವಿಕೆ” ರೋಗಿಗೆ ಸೊಗಸುವು ದಿಲ್ಲವೆಂಬರಿವಾಗುತ್ತಿದೆ. ಇದುವೆ ಮಾತಿನ ಝರಿ ಡಾಕ್ಟರರ ಮುಂದೆಯೂ ಸುಳಿಯುವುದು. ಆಗಲೇ ನಳಿನಾಳು ಬರುವಳು. ನಳಿನಾಳೆತ್ತಿದ ಮಾತುಗಳಿಂದ ಲೇಖಕರು ಆಕೆಯ ಪೂರ್ಣ ಹೃದಯ- ವನ್ನು ಪತಿಭಕ್ತಿಯ ನಿಷ್ಠೆಯನ್ನು ತೋರಿ ನಮ್ಮ ಮುಂದೆ ಒಂದು ಬಗೆಯ ವಿಚಾರಕ್ರಾಂತಿಯನ್ನು ತಂದಿಳಿಸುತ್ತಾರೆ. ಈ ಕ್ರಾಂತಿ ನಮ್ಮನ್ನು ಯೋಚನೆಗೀಡುಮಾಡಿದಂತೆ ಡಾಕ್ಟರರ ಮನವನ್ನು ಕೆರಳಿಸುವುದು. ಡಾಕ್ಟರರು ಈ ಪರಿಸ್ಥಿತಿಯಲ್ಲಿ ನಳಿನಾಳನ್ನು ವಿಚಾರಿ- ಸಿದರೆ, ಆಕೆ ತನ್ನರಿವಿಗೆ ನಿಲುಕಿದ ಪತಿಯ ವಿರಕ್ತಿಯನ್ನು ನಿವೇದಿಸಿ– ಅಲಾರಂ ಬಳಿಕ ನಡೆದಿದ್ದ ಸಂಭವವನ್ನು ವಿವರಿಸಿ ಕಣ್ಣೀರಿಳಿಸುವಳು. ವಿಚಾರದ ಪ್ರವಾಹಕ್ಕೆ ಬಲಿಯಾದ ಡಾಕ್ಟರರು ಆ ಮಾತುಗಳಿಂದ ತಣಿಯದೆ ಪುನಃ–ಆಕೆ ತೆರಳಿದ ಬಳಿಕ—ಜನಾರ್ದನನನ್ನೆ ವಿಚಾರಿ- ಸುವರು. ಡಾಕ್ಟರರ ಮಾತುಗಳಿಂದ ಮಾರುಹೋದ ಜನಾರ್ದನ ತನ್ನ ಇತಿವೃತ್ತವನ್ನು ಸಾರುತ್ತಾ ತೆರಳುವನು. ಈ ಭಾಗವೂ— ಇದಕ್ಕೆ ಆಧಾರವಾಗಿ ನೆಲೆನಿಂತ ಪೂರ್ವಭಾಗವೂ ಬಹು ಮಾರ್ಮಿಕ- ವಿದೆ. ಓದುಗನಲ್ಲಿ—“ಜನಾರ್ದನನ ವಿರಕ್ತಿಗೆ ನಳಿನಾಳ ನಡತೆಯ ದೋಷವು ಕಾರಣವಾಗಿರಬಹುದೇ” ಎಂಬ ಸಂದೇಹಕ್ಕೆ ಸಹಜವಾಗಿ ಒಳಗಾಗಿ, ಒಂದು ಬಗೆಯ ಸಾಮಾನ್ಯ ಕಥೆಯ ಭಾವದಲ್ಲಿ ಮುಂದೆ ಬರುವನು. ಆದರೆ ಲೇಖಕರ ನಿಲುವು ಬೇರೆ! ಕಥೆಯ ಓರಣ ಬೇರೆ—ಓವರಿ ಬೇರೆ! ಕಥೆಯು ನಮ್ಮನ್ನೊಂದು ನೂತನ ಮಾರ್ಗ- ದಲ್ಲಿ ನಡೆಸುವುದೆಂದರೆ ಅದಾ ಭಾವಸಮಾವೇಶದ ರುಚಿರ ಘಟನೆ. ಯೆನ್ನಬೇಕು. ಜನಾರ್ದನನು ರಂಗರಾಯರ ತಂಗಿಯ ಪ್ರೇಮ ವಿಚಾರದಲ್ಲಿ ನೆಲಸಿದ ತನ್ನ ಜೀವನವನ್ನು ರೂಪಿಸುವಾಗಲೆ ನಾವಿದರ ಗತಿಯನ್ನು ಕಾಣುತ್ತೇವೆ; ನಳಿನಾಳ ಜೀವಿತಕ್ಕಾಗಿ ಕೊರಗುತ್ತೇವೆ. ಗಂಡನ ಜೀವನದಲ್ಲಿ ಮುಸುಕಿನಿಂತ ಮತ್ತೊಂದು ತೆರೆಯನ್ನು ಸರಿಸಲಾಗದೆ, ಗಂಡನ ಕಣ್ಣಿಗಾಗಿ ಕೊರಗಿನಿಂತ, ಪತಿಪರಾಯಣೆ ನಳಿನಾಳ ಜೀವಿತಕ್ಕಾಗಿ ಮರಗುತ್ತೇವೆ. ಈ ಮರುಕದ ನಿಟ್ಟಿನಲ್ಲೇ ಲೇಖಕರ ಸಾಮರ್ಥ್ಯವನ್ನು ಹೊಗಳಲು ಮರೆಯುವಂತಿಲ್ಲ ಜನಾ. ರ್ದನನ ಕಥೆಯನ್ನರಿತ ಡಾಕ್ಟರರು ಅದುವೆ ಕಾಲದಲ್ಲಿ ಹಲವಾರು ಪ್ರಶ್ನೆಗಳನ್ನು–ಮಾನಸಿಕವಾದ ಪರಿಧಿಯಲ್ಲೇ ಕೇಳಿ ಉತ್ತರವನ್ನು ಪಡೆದು, ಆಗಲೇ ಅವನ ಕಣ್ಣಿಗೆ ಬಟ್ಟೆ ಕಟ್ಟುವರು. ಮರುದಿನದಿಂದ

ಜನಾರ್ದನನ ಬಳಿಗೆ ಬರುತ್ತಿರುವ ನಳಿನಾಳ ಆಗಮನ ಕಾಲವನ್ನು ವ್ಯತ್ಯಾಸಪಡಿಸಿದಂತೆ, ಬಂದ ವರ್ತಮಾನವನ್ನು ತಿಳಿಸದೆ, ಆಗಾಗ ಅವನ ಮನಸ್ಸಿಗೆ ನಾಟುವಂತೆ ಬೋಧನೆಯನ್ನೀಯುವರು. ಡಾಕ್ಟರರ ಈ ಬಗೆಯ ವರ್ತನೆಯಿಂದ, ಒಂದು ದಿನ ಜನಾರ್ದನ ತಾನು–ತಾನಾಗಿ ನಳಿನಾಳ ಆಗಮನವನ್ನು ಅಪೇಕ್ಷಿಸುವನು. ಆ ದಿನದ ಮುಂದೊಂದು ದಿನವೇ ಡಾಕ್ಟರರು—ನಳಿನಾಳ ಭಾವಚಿತ್ರವನ್ನು ನೋಡುವ ನೆಲೆಯಲ್ಲೇ ಆಕೆಯನ್ನೇ ತಂದು ನಿಲ್ಲಿಸಿ ಕಣ್ಣಿಗೆ ಕಟ್ಟಿದ ಬಟ್ಟೆಯನ್ನು ಬಿಚ್ಚುವರು; ನಳಿನಾಳ ಭಾವಚಿತ್ರವನ್ನು ನೋಡಲು ಹೇಳುವರು. ಮನಶ್ಶಾಂತಿಯನ್ನು ಹೊಂದಿದ ಜನಾರ್ದನ, ತನ್ನ ಹೃದಯದ ಮಾಲಿನ್ಯವನ್ನು ತೊಡೆದು ನಿಂತ ಜನಾರ್ದನ, ಅಂತರ್ನಿಲೀನ ಅಶಾಂತಿಯನ್ನು ದೂರವಿರಿಸಿ ನಳಿನಾಳಲ್ಲಿ ಪ್ರೇಮಸ್ವರೂಪವನ್ನು ಕಂಡ ಜನಾರ್ದನ, ಒಲವಿನ ಓಸರಿನಲ್ಲಿ ನಳಿನಾಳನ್ನು ದನಿಗೂಡುವನು. ಈ ದನಿಯು ಆ ಎರಡು ಜೀವನಗಳ ದ್ವಿಮುಖ ಧಾರೆಯನ್ನು ಒಂದಾಗಿಸಿತು; ಅರಳಿಸಿ ಪರಿಮಳಿಸಿತು—

ಈ ಕಥೆಯು ಆದಿಯಲ್ಲಿ ನೆಲೆನಿಂತ "ನಳಿನಾಳ, ಮುಂದೆ ಜನಾರ್ದನನ ಮಾತುಗಳು"— "ಮರುಕದ ಸೆಲೆಯಲ್ಲಿ ನೆಲೆನಿಂತ ನಳಿನಾಳನ್ನು ಸಮಾಧಾನಪಡಿಸುವ ಡಾಕ್ಟರರ ಮಾತುಗಳು"— "ಜನಾರ್ದನನ ಹೃದಯವನ್ನು ಸೂರೆಗೊಳ್ಳಲು ಯತ್ನಿಸಿ ನಿಂತ ಡಾಕ್ಟರರ ಸಾಮರ್ಥ್ಯ"— "ಅವರಿಬ್ಬರ ಸಂಭಾಷಣೆ"— "ಜನಾರ್ದನನ ವಿಮುಖತೆಯ ಮುಂದೆ ಡಾಕ್ಟರರು ಹೇಳಿದ ಮಾತುಗಳು–" ರಸಾವಹವಾಗಿವೆ ಮಾತ್ರವಲ್ಲ; ಮನಶ್ಶಾಸ್ತ್ರದ ಅನುಭವವನ್ನು ಚೆಲುವಾಗಿ ರೂಪಿಸುತ್ತಿದೆಯೆಂದಾಡಬೇಕು. ಒಂದೆಡೆ ನಳಿನಾಳನ್ನು "ನನ್ನ ಕಣ್ಣು ಕಿತ್ತು ಕೊಡೋಕೆ ಸಿದ್ಧವಾಗಿದ್ದೇನೆ, 'ಈ ಕಷ್ಟದಲ್ಲಿ ನನ್ನ ಬಿಟ್ಟು ಅವರಿಗೆ ಬೇರೆ ಯಾರು ದಿಕ್ಕು ?'— ಈ ಮಾತುಗಳೂ—ಜನಾರ್ದನನು ತನ್ನ ಪತ್ನಿ ಮತ್ತು ತಾನು ಬಯಸಿದ ಜಲಜಾಳ ಗುಣವಿಮರ್ಶೆ ಮಾಡುವ ಮಾತುಗಳೂ ಮಾನಸಿಕ ವಿಶ್ಲೇಷಣೆಯ ಪ್ರತೀಕವಾಗಿದೆಯೆಂಬುದನ್ನರಿಯಲು ಮರೆಯಬಾರದು. ಈ ಮಾತುಗಳಿಗೆಲ್ಲ ಮೂಲವಾಗಿ ನಿಂತ ಡಾಕ್ಟರರ ಮಾತುಗಳು ಬಹು ಮಾರ್ಮಿಕವಿವೆ. ಅಲ್ಲೂ "ನಳಿನಾದೇವಿಯರನ್ನು ನೀವು ಆಳವಾಗಿ ಪ್ರೀತಿಸಿದ್ದೀರಿ, ನಿಮ್ಮ ಒಳಮನಸ್ಸು ಅವರ ಶ್ರದ್ಧಾಭಕ್ತಿ, ಪ್ರೀತಿವಿಶ್ವಾಸಗಳಿಗೆ ಮಾರು ಹೋಗಿದೆ ಜಲಜಾರವರ ಮೇಲಿನ ಮೋಹದಲ್ಲಿ ನೀವು ನಿಮ್ಮ ಒಳಮನಸ್ಸಿನ ಎಚ್ಚರಿಕೆಯ ಧ್ವನಿಗೆ ಗಮನಕೊಡಲಿಲ್ಲ. ವ್ಯಗ್ರವಾದ ಒಳಮನಸ್ಸು "ಇದು ದ್ರೋಹ–ನಳಿನಾಗೆ ವಂಚನೆ" ಎಂದು ಪ್ರತಿರೋಧಿಸಿತು—"ಉಚ್ಚ ದಾಂಪತ್ಯದ ಆದರ್ಶವನ್ನು ಪಾಲಿಸುತ್ತಿರುವವರು ಹೀಗೆ ಕ್ಷಣಿಕ ವ್ಯಾಮೋಹಕ್ಕೆ ಬಲಿಯಾಗಿ ದಾರಿ ತಪ್ಪಿದರೆ ಅವರ ಮನಸ್ಸಿನ ಮೇಲೆ ವಿಪರೀತ ಪರಿಣಾಮಗಳಾಗುತ್ತವೆ. ಈ ಪರಿಣಾಮ ದೈಹಿಕವಾಗಿಯೂ ವ್ಯಕ್ತವಾಗಬಹುದು"— ಎಂಬೀ ಮಾತುಗಳು ಕುರುಡು ಕಣ್ಣಿನ ಸತ್ಯತೆಗೆ ನೆಲೆನಿಂತ ಸತ್ಯದ ನುಡಿಗಳು. ಡಾಕ್ಟರರ ಮಾತುಗಳನ್ನು ಗಮನವಿಟ್ಟು ಓದಿದರೆ ನಾವು ಈ ಬಗೆಯ ಕುರುಡು ಕಣ್ಣನ್ನು ಖಂಡಿತವಾಗಿ ನಂಬುತ್ತೇವೆ. ಈ ನಂಬಿಕೆಗೆ ಅನುವಾಗುವ ರೀತಿಯಲ್ಲಿ ಲೇಖಕರು ಸಾಂದರ್ಭಿಕ ವಚನಗಳನ್ನು ನೆಲೆಗೊಳಿಸಿದ್ದಾರೆ; ಆಕರ್ಷಕ ಘಟನೆಗಳನ್ನು ಹೊಂದಿಸಿದ್ದಾರೆ. ಅಲ್ಲೂ ಕೊನೆಗೆ ಡಾಕ್ಟರರು ಭಾವಚಿತ್ರದ ನೆಲೆಯಲ್ಲಿ ನಳಿನಾಳನ್ನು ಕಾಣಿಸಿದುದು, ವರ್ತಮಾನವನ್ನರಿತ ಬಳಿಕ ಕಣ್ಣಿಗೆ ಬಟ್ಟೆಯನ್ನು ಕಟ್ಟಿದುದು ಮನಶ್ಶಾಸ್ತ್ರಾನುಗುಣ ಘಟನಾಯುಕ್ತ ಘಟಕಗಳೆಂದರೆ ಈ ಬಗೆಯ ನೈಪುಣ್ಯವನ್ನು ಮೆಚ್ಚದವರಾರು ?

ಅಂತೂ ಉತ್ತಮ ಭಾಷಾಸಂಪತ್ತು, ಅನಾದೃಶಘಟನಾಯೋಜನೆ, ನೂತನ ಮಾರ್ಗಾನುಸರಣೆ – ಇವುಗಳಿಂದೀ ಕಥೆಯು ಭಾವಮಧುರವಾಗಿದೆ; ಸ್ವಭಾವಸುಂದರವಾಗಿದೆ.

---

# ಮುಗಿಯದ ಯುದ್ಧ

## ( ನಗೆಯಾಟದ ವಿಮರ್ಶೆ )

"ಮಹೇಶ" ಸುಲ್ತಾನಪೂರ, ಗೋಗಿ

ಘನವಾದ ವಿಷಯ ಎತ್ತಿಕೊಂಡು ಲಘುವಾಗಿ ಬರೆಯುವುದೂ ಲಘುವಾದ ವಿಷಯ ಎತ್ತಿಕೊಂಡು ಘನವಾಗಿಬರೆಯುವುದೂ ಹರಟೆಯ ಲಕ್ಷಣ. ನಾಣ್ಯಕ್ಕೆ ಎರಡು ಮುಖಗಳಿರುವಂತೆ ಹರಟೆಯ ಇನ್ನೊಂದು ಭಾಗ, ನಗೆಯಾಟ. ಜೀವನದಲ್ಲಿ ಹಾಸ್ಯದ ಹೊನಲು ಹರಿದಾಗ ಅದು ಮನುಷ್ಯನನ್ನು ರಸ ನಿಮಿಷಗಳಲ್ಲಿ ರಸಲೀನನನ್ನಾಗಿ ಮಾಡುತ್ತದೆ. ಸಮಾಜದ, ವ್ಯಕ್ತಿಯ ಓರೆ-ಕೋರೆಗಳನ್ನು ಹಾಸ್ಯಗಾರ ವ್ಯಂಗ್ಯಚಿತ್ರಕಾರನಂತೆ ರೂಪಿಸುತ್ತಾನೆ. ಅವನ ಮಾತಿನಲ್ಲಿ ಸತ್ಯ ತುಂಬಿರುತ್ತದೆ; ಆದರೆ ಉತ್ಪ್ರೇಕ್ಷೆ ಅವನ ಪರಮಾಯುಧ. 'ನಕ್ಕು ನಗಿಸುವ ನಗೆಗಾರನೇ' ನಿಜವಾದ ನಗೆಗಾರ. ಸಮಾಜ, ವ್ಯಕ್ತಿಗಳ ಬಗ್ಗೆ ಅವನ ನೋಟ, ವಕ್ರನೋಟ; ಆದರೆ ಅದು ಅಂತಃಕರಣ ರಹಿತವಾಗಿರುವುದಿಲ್ಲ ಜೀವನಸಝರಿಯ ಮೇಲೇಳುವ ಸಣ್ಣ ಸಣ್ಣ ಗುಳ್ಳೆಗಳನ್ನು ನಗೆಸೂಜಿಯಿಂದ ಕೆಣಕುತ್ತಾನೆ. ಲೋಕವೃತ್ತಿಯ ಡಂಭಾಚಾರವನ್ನು ಅಪಹಾಸ್ಯಮಾಡುತ್ತಾನೆ. ಹೀಗೆ ಆತನಿಂದ ಉದ್ಭವಿಸುವ ಪ್ರತಿಯೊಂದು ಕೃತಿಗಳೂ ಜನರ ಮನೋಭಿತ್ತಿಯಲ್ಲಿ ಅಚ್ಚೊತ್ತಿದಂತೆ ಮೂಡುವವು. ಅವನ ಮಾತುಗಳು ಮನಸ್ಸನ್ನು ತಿಳಿಯದ ಲೋಕಕ್ಕೆಳೆದೊಯ್ಯುವವು. ಯಾರನ್ನೂ ಚುಚ್ಚಿ ನೋಯಿಸುವ ಉದ್ದೇಶ ಅವನಿಗಿರುವುದಿಲ್ಲ. ಅವನ ನಗೆ ರಸಿಕತೆಯ ಸ್ಪಷ್ಟ್ಯೋತಕ ನಗೆಯಿಂದ ಬಾಳು ಅರಳುವುದು. ಅದಕ್ಕಾಗಿಯೇ "Life without laughing is a dreary blank" ಎಂದು Thackerey ಹೇಳಿರಬೇಕು.

ಹೊಸದು ಹಳೆಯದರ ತಿಕ್ಕಾಟ ಬಹಳ ಕಾಲದಿಂದ ಅವ್ಯಾಹತವಾಗಿ ನಡೆದುಬರುತ್ತದೆ. ಜನಜೀವನದ ಪ್ರತಿಯೊಂದು ಅಂಗದಲ್ಲೂ ಇದನ್ನು ಮೆಚ್ಚಿಯೇ ಅದನ್ನು ಮೆಚ್ಚಿಯೇ ವಾದಮಾಡುವವರು ಎಲ್ಲಾ

ಕಾಲಗಳಲ್ಲೂ ಇದ್ದೇ ಇರುತ್ತಾರೆ. ನಮ್ಮ ದೇಶಕ್ಕೆ ಅದನ್ನು ಅನ್ವಯಿಸಿ ನೋಡಿದರೆ ಹಳೆಯುದರ ಪಕ್ಷಪಾತಿಗಳೇ ಹೇರಳ. ಹಳೆಯುದೆಂದರೆ ಹೊನ್ನು ಹೊಸದೆಂದರೆ ಹಿತ್ತಾಳೆ ಅವರಿಗೆ.

ಇಲ್ಲಿಯ ನಗೆಯಾಟದ ನೈಜ ವಸ್ತು, ಪ್ರಗತಿಗೆ ಕ್ರಾಂತಿಯೇ ಬೀಜವೆಂಬುದು.

ಕಲೆಕ್ಟರ ಆಫೀಸಿನಲ್ಲಿದ್ದ ನಾರಾಯಣರಾವರು ಹನ್ನೆರಡು ವರ್ಷಗಳಿಂದಲೂ ತಮ್ಮ ಬಾಳಬಂಡಿಯನ್ನು ಸರಾಗವಾಗಿ ಸಾಗಿಸಿ-ಕೊಂಡೇ ಬಂದಿದ್ದರು. ಒಂದು ದಿನ ಸಾಯಂಕಾಲ ಮನೆಗೆ ಬಂದಾಗ ದೀಪವಿನ್ನೂ ಹಚ್ಚಿರದೇ ಇದ್ದುದನ್ನು ಕಂಡು ಹೆಂಡತಿ ಲಕ್ಷ್ಮೀಬಾಯಿಯವರನ್ನು ಬೆದರಿಸಲೂ ಅವರು ಸ್ವಲ್ಪವೂ ಅಳುಕದೇ ಇನ್ನು ಮೇಲೆ ತಮ್ಮ ಪ್ರತಿಯೊಂದು ಕೆಲಸದಲ್ಲಿ ಭಾಗಿಯಾಗಬೇಕೆಂದು ಹೇಳುವರು. ಇಂತಹ ಪರಿಸ್ಥಿತಿಯ ಪ್ರಭಾವ ಸ್ತ್ರೀಸ್ವಾತಂತ್ರ್ಯವಾದಿಯಾದ ಮಿಸ್ ಮೋಹಿನಿಯವರದೇ ಆಗಿದೆಯೆಂದು ಭಾವಿಸಿ, ಅಂಜಿ ಅನಿವಾರ್ಯಕ್ಕೆ ಒಪ್ಪಿಕೊಳ್ಳುತ್ತಾರೆ. ಮರುದಿನ ಹೆಂಡತಿಯ ಗೊಂಜಾಟದಲ್ಲಿ ಸಿಕ್ಕಿದ ಅವರು ಆಫೀಸಿಗೆ ಹೊತ್ತಾಗಿಯೇ ಹೋಗುತ್ತಾರೆ. ಆಫೀಸಿನಿಂದ ತೀವ್ರವೇ ಹಿಂದಿರುಗಿ ಕೆಲಸದಿಂದ ತೆಗೆದುಹಾಕಿದರೆಂದು ತಿಳಿಸುತ್ತ ಅದಕ್ಕೆ ಕಾರಣ ಹೆಂಡತಿಯೇ ಎಂದು ಸುಳ್ಳು ಹೇಳುವರು. ಅವರ ನಟನೆ ನಿಜವೆಂದೇ ನಂಬಿ ಲಕ್ಷ್ಮೀಬಾಯಿಯವರು ತಮ್ಮಲ್ಲಿ ತಾವೇ ಮರುಗುವರು. ಕೆಲವು ದಿವಸಗಳುರುಳಿದ ನಂತರ ಮಿಸ್ ಮೋಹಿನಿಯವರು ಭೆಟ್ಟಿಯಾಗಲು ತಮ್ಮ ಪರಿಸ್ಥಿತಿಯನ್ನು ಚಾ-ಚೂ ತಪ್ಪದೆ ವಿವರಿಸಲು ಅವರು ಆಫೀಸಿಗೆ ಫೋನ ಮಾಡಿದಾಗ ನೌಕರಿ ಹೋಗಿಲ್ಲವೆಂದು ತಿಳಿಯುತ್ತದೆ. ಮನೆಗೆ ಬಂದವರೇ ಲಕ್ಷ್ಮೀಬಾಯಿಯವರು ಕಲೆಕ್ಟರರ ಕೇಸು ಹೂಡಿದ್ದುದರಿಂದ ತಾನೊಂದು ಕೆಲಸಮಾಡುತ್ತೇನೆಂದೂ ತಮ್ಮ ಗೃಹ ಕರ್ತವ್ಯಗಳನ್ನೆಲ್ಲ ನೋಡಿಕೊಳ್ಳಬೇಕೆಂದೂ ಪತಿಗೆ ತಿಳಿಸುವರು. ಮಾತಿನ ಮಧ್ಯದಲ್ಲಿ ಅವರ ಸತ್ಯ ಹೊರಬೀಳುತ್ತದೆ. ಆದರೇನು? ಕೊನೆಯುವರೆಗೂ ಹೆಂಡತಿಯು ಆಳಿಗನಂತೆಯೇ ಇರಬೇಕಾಗುತ್ತದೆ.

ಇದು ನಗೆಯಾಟದ ಇತಿವೃತ್ತ. ಲೇಖಕರು ಆಟದ ಆರಂಭದಿಂದ ಹಿಡಿದು ಮುಕ್ತಾಯದ ತುತ್ತ ತುದಿಯವರೆಗೂ ಎಳೆದಿರುವ ರೂಪರೇಷೆ ರಮ್ಯವಾಗಿ ರಂಜಿಸಿದೆ. ಮೊದಲಿನ ಭಾಗದಲ್ಲಿಯ ಮಹಿಳೆಯರ ಭಾಷಣಗಳು ಓದುಗನ ಹೃದಯವನ್ನು ಪಟ್ಟು ಹಿಡಿಯುವಂಥವಾಗಿವೆ. ಭಾಷಣಗಳ ನಡುನಡುವೆ ಇರುವ ಕರತಾಡನಗಳಿಂದ ಭಾಷಣಕಾರರು ಹೇಗೆ ಉತ್ತೇಜನ, ಸ್ಫೂರ್ತಿಗೊಳ್ಳುವರೋ ಅದರಂತೆಯೇ ಕರತಾಡನಗಳು ಓದುಗನ ಕುತೂಹಲವನ್ನು ಕೆರಳಿಸಿ ಮುಂದೆ ಮುಂದೆ ಓಡುವಂತೆ ಮಾಡುತ್ತವೆ. ಎರಡನೇ ಭಾಗದಲ್ಲಿ ನಾರಾಯಣರಾವರ ಸಂಸಾರದ ತೆರೆಯನ್ನು ತಿಳುವಾಗಿ ತೋರಿಸಿದ್ದಾರೆ. ಹೆಂಡತಿ ಮತ್ತು ಗಂಡ ಇವರೀರ್ವರ ನಡುವೆ ನಡೆದ ಸಂಭಾಷಣೆಗಳು ನೀರಸ ಜೀವಿಯ ಹೃದಯದ ಅನಗುಂಠನವನ್ನು ತೆರೆಯುತ್ತವೆ. ಅವರ ವಿರಸ ಪ್ರಣಯ ಓದುಗನಿಗೆ ಹರುಷ ಪ್ರಣಯ. ಹುಲ್ಲು ಮನುಷ್ಯನಿಗೆ ಅಮೃತಧಾರೆಯಾಗಿದೆ. ಅವರ ಕಾದಾಟದ ಉಪ್ಪಿಕ್ಕೂ ಹೋಗುವ ಕೂಸಿನ ಕಿರಿಕಿರಿ ಮುದ್ದಾಗಿ ರೂಪುಗೊಂಡಿದೆ. ಅದರ ಅಳುವು ತಂದೆತಾಯಿಗಳ ಕಲಹಾಗ್ನಿಗೆ ಉತ್ತೇಜನ ಕೊಡುವುದು ಸೊಗಸಾಗಿದೆ ಇಲ್ಲಿಯ ಭಾಗ ಓದಿ ಅನುಭವಿಸುವುದಾಗಿದೆ. ನಾರಾಯಣರಾವರು ಮನೆಗೆ ಬಂದಕೂಡಲೇ ನೋಡಿದಾಗ, ಕಾಲಚಕ್ರ ವಿಭ್ರಮಣದಿಂದುಂಟಾದ ಪರಿಸ್ಥಿತಿಯನ್ನು ಅರ್ಥಾತ್ ಮಿಸ್ ಮೋಹಿನಿಯವರ ಚಾತುರ್ಯದ ಪ್ರಭೆಯನ್ನು ಅನುಭವಿಸುವ ನೋಟ ವಾಷಿಂಗ-ಟನ್ನನ (Washington), " Liberty when it begins to take root, is a plant of rapid growth " ಎಂಬ ವಾಣಿಯನ್ನು ನೆನಪಿಗೆ ತರುತ್ತದೆ. ತಮ್ಮ ಕಲಹದಲ್ಲಿ ನಾರಾಯಣರಾವರು, "........ನಾನೇ ದೀಪ ಹಚ್ಚಬೇಕ! ನಾನೇ ಕೂಸಿನ್ನ ಎತ್ತಿಕೊಳ್ಳಬೇಕ! ಯಾಕ ತಲೀ ಸನು ಅದನೋ ಇಲ್ಲೊ?" ಎಂದು ಕೇಳಿದಾಗ ಪತ್ನಿ ಪ್ರತಿಯಾಗಿ, "...... ದೀಪಾ ಹಚ್ಚಿದರ್ತ ಕೂಸಿನ್ನ ಎತ್ತಿಕೊಂಡರ್ತ ಮೀಸೀನೇ ಉದುರಿ ಬೀಳತಾವ ಅನ್ನೋಹಾಂಗ ಮಾತಾಡತೀರಲ್ಲ! ಸಿಟ್ಟು ಮೂಲೆಯೊಳಗ ಕಟ್ಟಿಟ್ಟು ಕೂಸಿನ್ನ ಎತ್ತಿಕೊಳ್ಳಿರಿ.......ಸಂಜೆಯ ಊಟಾ ಕಾಣಬೇಕೂ ಅಂತ ಮನಸಿದ್ದರ್ತ" ಎಂಬ ಮಾತುಗಳು ಯಾವನನ್ನು ನಿರ್ಮಲ ನಗೆಯ ಸ್ವಚ್ಛೋದಕದ ಮಡುವಿನಲ್ಲಿಳಿಸದು! ಇಲ್ಲಿ ಓತಪ್ರೋತವಾಗಿ ಹಾಸ್ಯರಸ ಉಕ್ಕಿ ಹರಿದಿದೆಯೆಂದು ಹೇಳಿದರೆ ಅತಿಶಯೋಕ್ತಿಯೇನೂ ಆಗಲಾರದು! ಮೂರನೆಯ ಭಾಗದಲ್ಲಿ ನಾರಾಯಣರಾವರು ತಮಗಾದ ನಿಕೃಷ್ಟ ಪ್ರಸಂಗದಿಂದ ಜಾರುವ ಹಂಚಿಕೆಯಿದೆ. ನಾಲ್ಕನೆಯ ಭಾಗದಲ್ಲಿ ಅವರು ಹಾಕಿಕೊಂಡ ಹಂಚಿಕೆಯ ಸಾಫಲ್ಯತೆ ಇದೆ. ಮನೆಗೆ ಬಂದವರೇ ದಿಗಿಲುಗೊಂಡವರಂತೆ ನಟಿಸಿ, ತಮ್ಮ ನೌಕರಿ ಹೋಯಿತೆಂದು ಹೇಳಿ ಅದಕ್ಕೆ ಲಕ್ಷ್ಮೀಬಾಯಿಯವರೇ ಕಾರಣರೆಂದು ಹೇಳುವ ದೃಶ್ಯ ದಿವ್ಯವಾಗಿದೆ. ಇಂತಹ ಪರಿಸ್ಥಿತಿಗೆ ಪ್ರಚೋದಕರಾದ ಮಹಿಳಾಸಂಘದವರನ್ನು ಹಳಿಯುವುದೂ, ತನ್ನವರ ಗತಿ ತನ್ನ ದುರ್ಬುದ್ಧಿಯಿಂದಲೇ ಆಯಿತಲ್ಲಾ ಎಂದು ಮರುಗುವುದೂ—ಇವುಗಳನ್ನೆಲ್ಲ ಓದುತ್ತ ಹೋದಂತೆ ಅನುಕಂಪ ಅರಳದಿರದು. ಹೆಂಗರುಳಿನ ವೇದನೆ-ಸಂವೇದನೆಯ ಅರಿವು ಅಚ್ಚು ಹಾಕಿದಂತಾಗುತ್ತದೆ. ಲಕ್ಷ್ಮೀಬಾಯಿಯವರ ಮರುಕ, ಗೋಳು ನಮಗೆ ನಗು ತರುವುದಾದರೂ ತಕ್ಷಣವೇ ಅವರ ಕೋಮಲತೆ ನಗುವುದನ್ನು ಕಡಿದಿಕ್ಕುತ್ತದೆ. ನಿಸ್ಸೀಮ ಅಂತಃಕರುಣೆಯ ಹೊಗರು ಇಲ್ಲಿ ಕಲಾತ್ಮಕವಾಗಿದೆ ೫ನೇ ಭಾಗದಲ್ಲಿ ಮಿಸ್ ಮೋಹಿನಿಯವರ ಹಾಗೂ ಲಕ್ಷ್ಮೀಬಾಯಿಯವರ ಸಂಭಾಷಣೆಯಿದೆ. ಅದರಲ್ಲಿ ಲಕ್ಷ್ಮೀಬಾಯಿಯವರು ತಮಗುಂಟಾದ ದುರಂತೆಯನ್ನು ತೋಡಿಕೊಳ್ಳುವ ನೋಟ ಹಾರ್ದಿಕವಾಗಿ ಹೆಣೆಯಲ್ಪಟ್ಟಿದೆ. ಮುಕ್ತಾಯದ ಭಾಗದಲ್ಲಿ ಅವರ ಪತಿಯ ಸತ್ಯ ಹೊರಬೀಳುವ ಚಿತ್ರ ಸೊಗಸಾಗಿದೆ. ಈ ಭಾಗದಲ್ಲಿಯ ಪ್ರತಿಯೊಂದು ತೆರೆ ಸಫಲ ಜೀವನದ ಹಿಂದೆ ಹುದುಗಿದ ಎರಡನೇ ನೋಟದ ನಿಲುವಿದೆ. ಉದಾತ್ತ ಬಾಳಿನಲ್ಲಿ ಸ್ತ್ರೀಸ್ವಾತಂತ್ರ್ಯದ ನೆರಳು ಬಿದ್ದಾಗಿನ ಪೂರ್ತಿ ಪರಿಣಾಮದ ಪ್ರತಿ ಇದೆ ಇಲ್ಲಿಯ ನಗೆಯಾಟ ನಿತ್ಯ ನಿರಾಶಾವಾದಿಗೆ ನಿಸರ್ಗಳವಾಗಿ ನೀಡುವ ರಸದೂಟ!

# ನಾಡ ನಡೆ

[ ೪೨೪ನೆಯ ಪುಟದಿಂದ ಮುಂದುವರಿದುದು ]

ಸ್ವಾತಂತ್ರ್ಯಪ್ರಾಪ್ತಿಗಾಗಿ ಸಂಕಟಗಳನ್ನು ಅನುಭವಿಸಬೇಕಾಗಲಿಲ್ಲ. ನರಿಯ ತಂತ್ರದ ಬ್ರಿಟಿಷ್ ರಾಜಕಾರಣಿಗಳ ಕೃಪೆಯಿಂದ, ಪಾಕಿಸ್ತಾನಿಗಳಿಗೆ ಸ್ವಾತಂತ್ರ್ಯ, ರಾಜ್ಯಪ್ರಭುತ್ವಗಳು, ಆಕಾಶದಿಂದ ಬಿದ್ದಂತಾಗಿವೆ. ಎಂತಲೇ ಅವರು ತಮ್ಮ ಸ್ವಾತಂತ್ರ್ಯವನ್ನೂ ಇತರರ ಸ್ವಾತಂತ್ರ್ಯವನ್ನೂ ಲಘುದೃಷ್ಟಿಯಿಂದಲೇ ಕಾಣುತ್ತಿದ್ದಾರೆ. ಪಾಕಿಸ್ತಾನದಲ್ಲಿ ಇಂದು ಹೆಚ್ಚಾಗಿ ಯಾವುದಾದರೂ ಬೆಳೆಯುತ್ತಲಿದ್ದರೆ, ಭಾರತದ ವಿಷಯಕವಾದ ದ್ವೇಷ ತ್ವೇಷಗಳು. ವೈಯಕ್ತಿಕ ಸ್ವಾರ್ಥ ಸಾಧನೆಯ ಕಡೆಗೇ ದೃಷ್ಟಿಯಿರುವ ಪಾಕಿಸ್ತಾನದ ರಾಜಕೀಯ ಧುರೀಣರು, ಅಜ್ಞಾನಿಗಳಾದ ಜನಸಾಮಾನ್ಯರ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವುದಕ್ಕಾಗಿ, ಭಾರತದ ವಿಷಯಕವಾದ ದ್ವೇಷ-ಪ್ರಸಾರ ಕಾರ್ಯವನ್ನೇ ತಮ್ಮ ಪ್ರಮುಖ ಸಾಧನವನ್ನಾಗಿ ಮಾಡಿಕೊಂಡಿದ್ದಾರೆ. ಅವರೆಲ್ಲರೂ ತಮ್ಮ-ತಮ್ಮೊಳಗೆ ಬೇಕಾದಷ್ಟು ಹೊಡೆದಾಡುತ್ತಲಿದ್ದರೂ, ಎಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಭಾರತ-ವಿಷಯಕ ದ್ವೇಷವನ್ನೇ ಹಬ್ಬಿಸುತ್ತಲಿದ್ದಾರೆ. ಭಾರತಕ್ಕೆ ಬೇಡವಾದುದನ್ನೆಲ್ಲ ಇವರು ಮಾಡುತ್ತಲಿದ್ದಾರೆ.

ಮೊನ್ನೆ ಮೊನ್ನೆಯೆ ಪಾಕಿಸ್ತಾನ ರಾಷ್ಟ್ರದ ಸಂಪೂರ್ಣ ಸ್ವಾತಂತ್ರ್ಯದ ಮಹೋತ್ಸವ ನಡೆಯಿತು. ಜಾತೀಯ ಭಾವನೆಯು ತಳಹದಿಯ ಮೇಲೆಯೆ ಆ ರಾಷ್ಟ್ರ ನಿಂತುಕೊಂಡಿತು. ಉತ್ಸವಕ್ಕಾಗಿ ಭಾರತರಾಷ್ಟ್ರದ ಪ್ರತಿನಿಧಿಗಳನ್ನು ಔತಣ ಕೊಟ್ಟು ಕರೆಯಿಸಿ, ತನ್ನ ಜನತೆಯ ಕಡೆಯಿಂದ ತುಂಬಿದ ಸಭೆಯಲ್ಲಿ ಭಾರತದ ಪ್ರತಿನಿಧಿಗೆ ಅವಮಾನವನ್ನು ಮಾಡಿಸಿತು. ಯಾವ ನಾಗರಿಕ ರಾಷ್ಟ್ರದಲ್ಲಿಯೂ ನಡೆಯದಂತಹ ಘಟನೆಯಿದು.

ಈಗ ಅಮೇರಿಕೆಯಿಂದ ತನಗೆ ದೊರೆತ ಶಸ್ತ್ರಾಸ್ತ್ರಗಳ ಬಲದ ಹುಮ್ಮಸಿನಿಂದ, ಭಾರತದ ಗಡಿಗಳನ್ನು ಆಕ್ರಮಿಸಲು ತನ್ನ ಸೈನಿಕರನ್ನು ಪ್ರೋತ್ಸಾಹಿಸುತ್ತಲಿದೆ. ಎದ್ದು ನಿಂತಾಗ ಅವಿವೇಕಿಗಳಿಂದ, ತಮಗೆ ಬೇಕಾದ ಕಾರ್ಯಗಳನ್ನು ಮಾಡಿಸಿಕೊಳ್ಳುವ ಕುಟಿಲ ರಾಜಕಾರಣಿಗಳು, ಬಿದ್ದಾಗ ಮಾತು ಕೂಡ ಆಡಿಸದೆ, ತಾವೂ ಒಂದೇಟು ಒದ್ದು ಹೋಗುವರೆಂಬುದನ್ನು, ಮುನ್ನೋಟವಿಲ್ಲದ ಪಾಕಿಸ್ತಾನಿಗಳು ಚೆನ್ನಾಗಿ ಅರಿತುಕೊಳ್ಳಬೇಕು. ನಾಯಿ ಬೊಗಳುತ್ತಲೆ ಇರುವುದು; ಆನೆ ಗಂಭೀರವಾಗಿ ತನ್ನ ಹೆಜ್ಜೆಯನ್ನು ಮುಂದೆ ಇಡುತ್ತಲೇ ಇರುವುದು.

---

ನಗೆಯಾಟದಲ್ಲಿ ಪಾತ್ರಗಳ ಸುಳ್ಳಿನ ಕಂತೆ ಕಾಣಿಸಿದರೂ ಪಾತ್ರಗಳ ಚಿತ್ರ ತುಂಬ ಜೀವಂತದಿಂದ ಮೆರೆದಾಡಿವೆ- ವಸ್ತು ಮತ್ತು ನಿರೂಪಣೆಯಲ್ಲಿ ಕಾಣಿಸುವ ಇಲ್ಲಿಯ ನಾವೀನ್ಯವು ಮುಖ್ಯ ಮತ್ತು ಪ್ರಸಂಶನಾರ್ಹವಾಗಿದೆ. ಉಪಸಂಹಾರದಲ್ಲಿ ಲಕ್ಷ್ಮೀಬಾಯಿಯವರು ಹೇಳುವ ಮಾರ್ಮಿಕ ಮಾತುಗಳು ಅಂದರೆ ಪತಿಗೆ ಕೂಸನ್ನೆತ್ತಿಕೊಳ್ಳೆಂದು ಹೇಳುವ ಧೀರತೆಯಲ್ಲಿ, ಕಾರ್ಪಣ್ಯತೆಯಲ್ಲಿ ಕಾಣುವ ಚಿತ್ರ ಸ್ತ್ರೀಯರಿಗೆ ಸಹಜವಾಗಿ ಸಿಟ್ಟು ಬರುವಂಥದಿದೆಯೆನ್ನಬೇಕು. ಏಕೆಂದರೆ, ಹೆಣ್ಣಿನ ಬಾಳಿನ ಮಹತ್ವದ ಆಸೆಯೆಂದರೆ ಮಗುವಿನ ತಾಯಾಗಿ ಅದನ್ನು ಲಾಲಿಸಿ, ಪಾಲಿಸಬೇಕೆಂಬುದು ಬಂಜೆತನದ ದುಃಖಕ್ಕಿಂತ ಹಿರಿದಾದ ದುಃಖ, ಯಾತನೆ ಹೆಣ್ಣುಬಾಳಿಗೆ ಬೇರೊಂದಿಲ್ಲ. ತನ್ನ ಮಗುವಿನ ಮುಖಾರವಿಂದವನ್ನು ನೋಡಿ ತಾಯಿ ಯಾವ ದುಃಖ ಬೇಕಾದರೂ ಮರೆಯಬಲ್ಲಳು. ಇಲ್ಲಿಯ ಪ್ರಸಂಗ ವಿಪರೀತವೆಂದು ತೋರುವುದೇನೋ ನಿಜ. ಆದರೆ ತಕ್ಷಣ, ನಗೆಗಾರನು ನಗೆಗಡಲಿಗೆ ತನ್ನ ದೋಣಿ ಬಿಟ್ಟಿದ್ದಾನೆಂಬ ಭಾವನೆ ಬರುವುದಿಲ್ಲ. ಆತನ ಉದ್ದೇಶ ಯಾರನ್ನೂ ಚುಚ್ಚಿ ನೋಯಿಸುವುದಾಗಿರುವುದಿಲ್ಲವೆಂದು ಮೊದಲೇ ಕಾಣಿಸಿದೆಯಷ್ಟೆ! ಭರತಖಂಡದಲ್ಲಿ ಸ್ತ್ರೀಸ್ವಾತಂತ್ರ್ಯದ ಸಮಸ್ಯೆ ಯಾವ ಗತಿ ಸೇರುವುದು ಎಂದು ಇನ್ನೂ ಯಾರೂ ಹೇಳಲು ಬರುವಂತಿಲ್ಲ. ಆದರೆ, ಡಾ. ಜಾನ್ಸನ್ನನ (Johnson), "Liberty is to the lowest rank of every nation little more than the choice of working or starving" ಎಂಬ ಉದ್ದೇಶವೇ ನಮ್ಮ ದೇಶಕ್ಕೆ ಒಗ್ಗುತ್ತದೆ. ಇಲ್ಲಿಯ ನಗೆಯಾಟದ ನಿಜರೂಪದ ನಿರೂಪಣೆಯೂ ಅದೇ ಆಗಿದೆ.

ನಗೆಗಾರರ ನಗೆಯಾಟದ ಹಾಸ್ಯಸ್ಪಂದನ ಓದಿ ಮುಗಿಸಿದ ಮೇಲೂ ಕಿವಿಯಲ್ಲಿ ಹಾಗೆಯೇ ಲಾಸ್ಯವಾಡುತ್ತಿರುತ್ತದೆ. ಮತ್ತೆ ಮತ್ತೆ ಮನಸ್ಸು ಮರುಕಳಿಸಿ ಮುದವನ್ನನುಭವಿಸುವ ಜೀವಂತ ಕೃತಿಯನ್ನು ಕುದುರಿಸಿದ್ದಾರೆ. ಮೋಡ ಮುಸುಕಿದ ಮುಗಿಲಲ್ಲಿ ಒಮ್ಮೊಮ್ಮೆ ಬೆಳ್ಳಿಯ ಬೆಳಕು ಸುಳಿದು ಮಾಯವಾಗುವ ರೂಪ ಇದಲ್ಲ! ಚಿರಕಾಲವೂ ಚಿತ್ರಫಲಕದ ಮೇಲೆ ಮೂಡಿರುವ ಚಿತ್ರವಿದು! ನಗೆಯಾಟದ ಉದ್ದಕ್ಕೂ ಹೋಗುವ ನಾಡಿಗ ಭಾಷೆ ಕೃತಿಗೆ ಕುಂದನ್ನು ತರದೇ ಮೆರಗು ಕೊಟ್ಟಿದೆ. ವಸ್ತು, ತಂತ್ರ ಮತ್ತು ನಿರೂಪಣೆಯ ಕ್ಷೇತ್ರದಲ್ಲಿ ಹೊಸದೆನಿಸಬಹುದಾದ ಈ ನಗೆಯಾಟವನ್ನು ಕನ್ನಡಿಗರಿಗೆ ಒದಗಿಸಿಕೊಟ್ಟ ಸಂಪಾದಕರ ಉತ್ಸಾಹ ಅಭಿನಂದನೀಯ, ಕೃತಿಯ ಕರ್ತೃಗಳಿಗೆ ಆದರದ ಮನ್ನಣೆ.

# ಸಾದರ ಸ್ವೀಕಾರ

೧೧೫ **ಕತೆಗಾರ:** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ) ಸಂಪಾದಕರು ಶ್ರೀ. ಜಿ. ಎ. ನರಸಿಂಹಮೂರ್ತಿ ಬಿ. ಎಸ್‌ಸಿ. ಪ್ರಕಾಶಕರು ಶ್ರೀ. ಜೆ. ಟಿ. ಶ್ರೀಕಂಠಯ್ಯ, ಕತೆಗಾರ ಕಾರ್ಯಾಲಯ, ಚಿಕ್ಕಪೇಟೆ, ಬೆಂಗಳೂರು ೨. ಡೆ. ೮. ೧೫೨ ಪುಟಗಳು. ಬೆಲೆ ೦—೧೨—೦.

ಎಂದಿನಂತೆ ಈ ವಾರ್ಷಿಕ ಸಂಚಿಕೆಯು ವಾಚನೀಯ ಕಥೆ-ಲೇಖನಗಳಿಂದ ಕೂಡಿದೆ.

೧೧೬ **ಅದೃಷ್ಟಚಕ್ರ:** (ಭವಿಷ್ಯ ವಿಷಯಕ ಕಿರುಹೊತ್ತಗೆ). ಬರೆದವರು 'ಲಿಬ್ರಾ' ಪ್ರಕಾಶಕರು ಜಾತಕ ಪ್ರಕಾಶನ, ೪೨ ಜನ್ಯಾರ್‌ಲಿಸ್ಟ್ ಕಾಲನಿ, ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು. ಚಿಕ್ಕ ಪುಟಗಳು ೧೫೨. ಬೆಲೆ ೦-೮-೦

ಇದರಲ್ಲಿ ಪಾಶ್ಚಿಮಾತ್ಯ ಪದ್ಧತಿಯ ರಾಶಿ ಭವಿಷ್ಯವನ್ನೂ ಅದೃಷ್ಟಸಂಖ್ಯಾ ವಿಚಾರವನ್ನೂ ವಿವರಿಸಲಾಗಿದೆ.

೧೧೭ **ಅಸ್ಪೃಶ್ಯತೆ ನಿವಾರಣೆ:** (ಸಾಮಾಜಿಕ ಸಂಗೀತ ನಾಟಕ). ಬರೆದವರು ಶ್ರೀಮಾನ್ ಎಂ. ಪಿ. ವೃಷಭೇಂದ್ರಪ್ಪ ಬಿ. ಎ. ಆಲೂರು. ಲೇಖಕರೇ ಪ್ರಕಾಶಕರು. ಕ್ರೌ. ೮. ೧೧೫ ಪುಟಗಳು. ಬೆಲೆ ೧ ೮—೦.

೧೧೮ **ಚಲೋ ಗೋವಾ:** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ವಾಸುದೇವ ರಾಣೇ. ಪ್ರಕಾಶಕರು ಶಾಂತವೀರ ಪ್ರಕಾಶನ, ಕಲಘಟಗಿ, ಜಿಲ್ಲಾ ಧಾರವಾಡ. ಕ್ರೌ. ೮. ೧೨೪ ಪುಟಗಳು. ಬೆಲೆ ೦—೧೨—೦.

೧೧೯ **ಗೃಹಪಂಚಮಿ:** (ಶಿಶುಗೀತಸಂಕಲನ). ಬರೆದವರು ಶ್ರೀ. ಬಿ. ಎ. ಸನದಿ. ಪ್ರಕಾಶಕರು ಸ್ನೇಹ ಪ್ರಕಾಶನ, ಶಮನೇವಾಡಿ, ಜಿ. ಬೆಳಗಾಂವಿ. ಕ್ರೌ. ೮. ೩೬ ಪುಟಗಳು ಬೆಲೆ ೦—೫—೦.

೧೨೦ **ಜೂಜು:** (ಅನುವಾದಿತ ಸಾಮಾಜಿಕ ನಾಟಕ). ಮೂಲ ಮರಾಠೀ ಲೇಖಿಕೆಯರು ಶ್ರೀಮತಿ ಮುಕ್ತಾಬಾಯಿ ದೀಕ್ಷಿತ ಅನುವಾದಕರು ಶ್ರೀ. ಲಕ್ಷ್ಮಣರಾವ ಬೇಂದ್ರೆ, ಧಾರವಾಡ. ಪ್ರಕಾಶಕರು ಜೀವನ ಕಾರ್ಯಾಲಯ. ಬಸವನಗುಡಿ—ಬೆಂಗಳೂರು. ಕ್ರೌ. ೮. ೯೪ ಪುಟಗಳು. ಬೆಲೆ ೧—೮—೦.

೧೨೧ **ಪ್ರಭಾತ** (ವಾರ ಪತ್ರಿಕೆಯ ಪ್ರಜಾರಾಜ್ಯ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಕುಡ್ಪಿ ವಾಸುದೇವ ಶೆಣೈ ಅವರು, ಪ್ರಭಾತ ಕಾರ್ಯಾಲಯ, ರಥಬೀದಿ. ಮಂಗಳೂರು. ಕ್ರೌ. ೭ದ ೪೮ ಪುಟಗಳು. ಬೆಲೆ: ೦—೪—೦.

೧೨೨ **ಭಾರತದ ಬೆಳಕು:** (ವ್ಯಕ್ತಿಚಿತ್ರ ಸಂಕಲನ) ಬರೆದವರು ಶ್ರೀಮಾನ್ ಮಿರ್ಜಿ ಅಣ್ಣಾರಾಯರು, ಪ್ರಕಾಶಕರು ಶಾಂತಿಸೇವಾಸದನ, ಸೇಡಬಾಳ, ಜಿ. ಬೆಳಗಾಂವಿ. ಕ್ರೌ. ೮. ೯೨ ಪುಟಗಳು ಬೆಲೆ: ೧—೦—೦.

೧೨೩ **ಹಳ್ಳಿಯ ಗ್ಯಾನಪ್ಪ:** (ಶಿಕ್ಷಣಿಪ ದೃಶ್ಯ. ಸಂಕಲನ). ಬರೆದವರು ಶ್ರೀಮಾನ್ ಟಿ. ಕೆ ಪಾಟೀಲ ಬಿ. ಎ. ಬಿ. ಟಿ. ಹೆಡ್‌ಮಾಸ್ತರ್ ಬೇಡಕೀಹಾಳ, ಶಮನೇವಾಡಿ ಹೈಸ್ಕೂಲ್. ಪ್ರಕಾಶಕರು ಶಾಂತಿಸೇವಾಸದನ, ಸೇಡಬಾಳ, ಕ್ರೌ. ೮. ೫೦ ಪುಟಗಳು. ಬೆಲೆ: ೦—೬—೦.

೧೨೪ **ಭಗವಾನ್ ಮಹಾವೀರ** (ಜೀವನದ ಪರಿಚಯ) ಬರೆದವರು ಶ್ರೀಮಾನ್ ಮಿರ್ಜಿ ಅಣ್ಣಾರಾಯರು. ಪ್ರಕಾಶಕರು ಶ್ರೀ. ಎಚ್. ವಿ. ಕೌಜಲಗಿ, ಅಧ್ಯಕ್ಷ ಪ್ರಾದೇಶಿಕ ಸಮಾಜಶಿಕ್ಷಣ ಸಮಿತಿ, ಬೆಳಗಾಂವಿ. ಕ್ರೌ. ೮. ೨೨ ಪುಟಗಳು. ಬೆಲೆ: ೦—೪—೦.

೧೨೫ **ಬಾಳಬಟ್ಟೆ** (ಜೀವನತತ್ತ್ವ ವಿವೇಚನಾತ್ಮಕ ಪುಸ್ತಕ) ಬರೆದವರು ಶ್ರೀಮಾನ್ ಸಿಂಪಿ ಲಿಂಗಣ್ಣ, ಚಡಚಣ. ಪ್ರಕಾಶಕರು ಶ್ರೀ. ಎಸ್. ವಿ. ಕಡೂರ ಎಂ. ಎ. ಕಾರ್ಯದರ್ಶಿ, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್, ಧಾರವಾಡ. ಕ್ರೌ. ೮. ೨೦೨ ಪುಟಗಳು. ಬೆಲೆ: ೧—೪—೦.

೧೨೬ A Village Plan (ಯೋಜನಾವಿಷಯಕ ಪ್ರಚಾರ ಪುಸ್ತಕ). ಪ್ರಕಾಶಕರು ಆಲ್ ಇಂಡಿಯಾ ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಜ್ ಬೋರ್ಡ್, ಪಿ. ಜಿ. ೪೮೨, ಮುಂಬೈ ೧. ಡೆ. ೭ದ ೧೬೪ ಪುಟಗಳು. ಬೆಲೆ: ೧—೦—೦.

೧೨೭ Why decentralization? (ಪರಿಚಯಾತ್ಮಕ ಇಂಗ್ಲಿಷ್ ಪುಸ್ತಕ). ಬರೆದವರು ಶ್ರೀ. ವೈಕುಂಠ ಎಲ್. ಮೆಹತಾ. ಪ್ರಕಾಶಕರು ಆ. ಇಂ. ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಜ್ ಬೋರ್ಡ್, ಮುಂಬಯಿ. ಡೆ. ೮. ೫೪ ಪುಟಗಳು. ಬೆಲೆ: ೦—೪—೦.

೧೨೮ Create your own jobs (ವಿವೇಚನಾತ್ಮಕ ಗ್ರಂಥ). ಬರೆದವರು ಶ್ರೀಮಾನ್ ಸಿ. ಕೆ. ನಾರಾಯಣ ಸ್ವಾಮಿ. ಪ್ರಕಾಶಕರು ಮೇಲೆ ಹೇಳಿದ ವಿಲೇಜ್ ಇಂಡಸ್ಟ್ರೀಜ್ ಬೋರ್ಡಿನವರೆ. ಡೆ. ೮. ೪೮ ಪುಟಗಳು. ಬೆಲೆ ೦—೪—೦.

೧೨೯ The Ambar Charkha (ಪರಿಚಯಾತ್ಮಕ ಪುಸ್ತಕ). ಇದರ ಪ್ರಕಾಶಕರೂ ಮೇಲಿನ ಸಂಸ್ಥೆಯವರೆ. ಡೆ. ೮. ೧೬ ಪುಟಗಳು. ಬೆಲೆ ೦—೪—೦.

# ಜಯಂತಿಗೆ ಚಂದಾದಾರರಾಗಿರಿ!

**ಕರ್ನಾಟಕದಲ್ಲಿಯ ಎಲ್ಲ ಮಾಸಪತ್ರಿಕೆಗಳಲ್ಲಿಯೂ ಗಾತ್ರದಲ್ಲಿ ದೊಡ್ಡದು!**

## ಪ್ರತಿಯೊಂದು ಕುಟುಂಬದಲ್ಲಿಯೂ ಇರಬೇಕಾದ ಪತ್ರಿಕೆ 'ಜಯಂತಿ

**ತನ್ನ ಹದಿನೆಂಟು ವರ್ಷಗಳ ಜೀವನದಲ್ಲಿ, ಒಂದು ಸಲವೂ ಸಂಯುಕ್ತಾಂಕವನ್ನು ಹೊರಡಿಸಿಲ್ಲ;**
**ತನ್ನ ಸಮಯನಿಷ್ಠೆಯ ಗುರಿಗೆ ಚ್ಯುತಿ ತಂದುಕೊಂಡಿಲ್ಲ!**

ಸದಭಿರುಚಿಗೆ ಒಗ್ಗುವಂತಹ ಸಾಹಿತ್ಯವನ್ನು ಪ್ರಕಟಿಸುವುದೇ ಜಯಂತಿಯ ಆದರ್ಶ!

ಕನ್ನಡನಾಡಿನ ಪ್ರಮುಖಸಾಹಿತ್ಯಿಕರ ಕೃತಿಗಳ ದರ್ಶನವನ್ನು ಜಯಂತಿಯು ಮಾಡಿಸುವುದಲ್ಲದೆ, ಹೊಸ ಸಾಹಿತ್ಯಿಕರನ್ನು ಬೆಳಕಿಗೆ ತರುವ ಕಾರ್ಯವನ್ನೂ ಮಾಡುವುದು. ಜಯಂತಿಯಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನವೂ ನಾಡಿಗರ ದೃಷ್ಟಿಯನ್ನು ಜೀವನ ಸೌಂದರ್ಯದ ಕಡೆಗೆ ತಿರುಗಿಸುವಂತಹದಿರುವುದು. ವಿವಿಧ ವಿಷಯಗಳ ಪರಿಚಯಾತ್ಮಕ ಲೇಖನಗಳು ನಾಡಿಗರನ್ನು ಬಹುಶ್ರುತರನ್ನಾಗಿ ಮಾಡಬಲ್ಲುವು. ಕುಟುಂಬದಲ್ಲಿಯ ಹಿರಿಯರಿಗೂ ಕಿರಿಯರಿಗೂ ಜಯಂತಿ ಪ್ರಯೋಜನಕಾರಿ!

**ಕನ್ನಡನಾಡಿನ ಎಲ್ಲ ಶಾಲೆ-ಕಾಲೇಜುಗಳೂ ಜಯಂತಿಯನ್ನು ತರಿಸಿಕೊಳ್ಳಬೇಕು.**

ಮುಂಬಯಿ, ಮದರಾಸ, ಮೈಸೂರು, ಹೈದರಾಬಾದ್ ಇವೆಲ್ಲ ರಾಜ್ಯಗಳ
ಸರಕಾರಗಳಿಂದಲೂ ಜಯಂತಿ ಮನ್ನಣೆಯನ್ನು ಪಡೆದಿದೆ.

**ವಾರ್ಷಿಕ ಚಂದಾ ೫—೦—೦. ಆರು ತಿಂಗಳ ಚಂದಾ ೩—೦—೦**

# 'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors, Jayanti publications, by K. S. Betgeri at the Jayanti Office, Dharwar

ಜಯಂತಿ

ಮೇ ೧೯೫೬

ಬೆಲೆ:
೮ ಆಣೆಗಳು

# ಪ್ರೇಮಬೀಜ

卐

ಇಳೆಯ ಮಕ್ಕಳೆಲ್ಲ ಬನ್ನಿ
ತಾಯ ತವರುಮನೆಗೆ —
ಭೇದ ಬಲಿಸಿ ಬಳಲಬೇಡಿ
ಎಂದು 'ನನಗೆ ನಿನಗೆ'

ಇದು ಬಿಳಿವೂ ಇದು ಕರಿವೂ
ಹಗಲ ಇರುಳ ಬಣ್ಣ —
ಕೆಂಪನಿವಾ ಹಳದಿಯವಾ
ಅಂದಚೆಂದವಣ್ಣಾ !

ಎದೆಯಾಳದ ರಕ್ತದಲ್ಲಿ
ಭಾವದ ಅನುರಕ್ತಿಯಲ್ಲಿ
ಕಾವಿನ ಚಿತ್‌ಶಕ್ತಿಯಲ್ಲಿ
ಕಂಡ ಶಾಂತಿಗೀತ —

ಕರೆದು ಜನ್ಮ-ಮರಣಗಳಿಗೆ
ತಾರಕರಾ ಚರಣಗಳಿಗೆ
ಜೀವಾಂತಃಕರಣಗಳಿಗೆ
ನೀಡಿತು ಸುಪ್ರೀತ

ಪ್ರೇಮಬೀಜ ಮೂಲ ನನಗೆ
ಪ್ರೇಮಬೀಜ ಫಲದ ಗೊನೆಗೆ.

— ಅಂಬಿಕಾತನಯದತ್ತ

ಸಂಪುಟ ೧೮ JAYANTI ಸಂಚಿಕೆ ೧೨

# ಈ ಸಂಚಿಕೆಯಲ್ಲಿ:


ಹದಿನೆಂಟು ವರ್ಷಗಳು ತುಂಬಿದುವು ( ಸಂಪಾದಕೀಯ )
ಸಂಪಾದಕರು ೪೪೧

ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೪೪೩

ರೋವಾ ( ಅನುವಾದಿತ ಕಥೆ )
ಶ್ರೀ. ಎಸ್. ವಿ. ಎಲ್. ಎನ್. ಶರ್ಮಾ, ಪೆರಡಾಲ ೪೪೫

ಮಹಾತ್ಮಾ ಕಬೀರದಾಸ ( ಜೀವನಮಹತ್ತ್ವ )
ಕುಮಾರಿ ಚಂದ್ರಿಕಾ ಅನಂತರಾವ ಕೊಪ್ಪರ, ಹಳಿಯಾಳ ೪೫೨

ಒಲವು ಅಳಿದಾಗ ( ನವ್ಯಕವನ )
ಶ್ರೀ. ಶಾಂತಿನಾಥ ದೇಸಾಯಿ ಎಂ. ಎ., ಮುಂಬಯಿ ೪೫೪

ನವಭಾರತ ( ಕವನ )
ಶ್ರೀ. ಎಚ್ ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೪೫೫

ಆವುದನು ಬೇಡುವೆನೊ ದೇವ ( ಗೀತ )
ಶ್ರೀ. ಕೆ. ಜಿ. ಕೃಷ್ಣಭಟ್ಟ, ಪೆರಡಾಲ ೪೫೭

ದಂಪತಿಧರ್ಮ ( ಸಂಸ್ಕೃತಿವಿಚಾರ )
ಶ್ರೀ. ಕೆ. ವೆಂಕಟರಾಯಾಚಾರ್ಯ 'ವಿದ್ವಾನ್' ಸುರತ್ಕಲ್ಲು ೪೬೦

ಬೆಳಕಿನ ಕಣ್ಣುಗಳಿಂದ ( ಕವನ )
ಶ್ರೀ. ಜ. ಶ್ರೀ. ದೇಸಾಯಿ, ಜರಕುಂಟಿ ಬಿ ಎ, ಬಿ ಟಿ ಶಹಾಪುರ ೪೬೧

ಮುತ್ತಿನಹಾರ (ಯುದ್ಧಕಾಲದ ಕಥೆ)
ಶ್ರೀ. ವೇ. ಮು. ಜೋಶಿ, ಧಾರವಾಡ ೪೬೩

ರೈಲುನಿಲ್ದಾಣ ( ಲಘುಪ್ರಬಂಧ )
ಶ್ರೀ. ಎನ್. ಎಸ್. ಗದಗಕರ ಬಿ. ಎ ಧಾರವಾಡ ೪೬೬

ಕಣ್ಣೀರ ಕಾಣಿಕೆ (ಸಣ್ಣಕತೆ)
ಶ್ರೀ. ಚಿತ್ರಿಗೆ ರಾಮನ್, ಗೋಕರ್ಣ ೪೬೯

ಹಿಂದೂ ಮಹಿಳೆಯರ ಬಾಳನೋಟ ( ಕನ್ಯಾಜೀವನ )
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೪೭೩

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. 'ಎಮ್ಮೆಸ್ಕೆ' ಮತ್ತು ಶ್ರೀ. ಕೆ. ಎಸ್. ಶರ್ಮಾ ೪೭೬

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

# ಜಯಂತಿ

**ಸಂಪುಟ ೧೮ ಸಂಚಿಕೆ ೧೨**

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
**ಶ್ರೀ. ಬೆಟಗೇರಿ ಕೃಷ್ಣಶರ್ಮ**

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

**ವಾರ್ಷಿಕ ವರ್ಗಣಿ ೫ ರೂ.**
**ಬಿಡಿ ಸಂಚಿಕೆಗೆ ೮ ಆಣೆ.**



ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

**ಅನೇಕ ಊರುಗಳಲ್ಲಿ**
**ಜಯಂತಿ ಮಾರುವ**
**ಏಜಂಟರು**
**ಬೇಕಾಗಿದ್ದಾರೆ.**


# ಸಂಪಾದಕೀಯ

●

## ಹದಿನೆಂಟು ವರ್ಷ ತುಂಬಿದುವು.

ಇದೀಗ ಜಯಂತಿಯ ಹದಿನೆಂಟನೆಯ ವರ್ಷದ ಕೊನೆಯ ಸಂಚಿಕೆ. ಜಯಂತಿ ತನ್ನ ಆಯುಷ್ಯದ ಹದಿನೆಂಟು ವರ್ಷಗಳನ್ನು ಕಳೆಯಿತೆಂದು, ಒಂದು ಬಗೆಯ ಸಮಾಧಾನದ ನಿಟ್ಟುಸಿರುಗಳನ್ನು ಇಕ್ಕುತ್ತಲೇ ಹೇಳಬೇಕಾಗಿದೆ. ಸಂಚಾಲಕರಲ್ಲಿ ಬಂಡವಾಳದ ಬಲವಿಲ್ಲ. ಸರಕಾರ-ಸಂಸ್ಥೆಗಳಿಂದ ಸಹಾಯವಿಲ್ಲ. ಜನತೆಯಿಂದಲೂ ತೃಪ್ತಿಕರವಾದ ನೆರವು ದೊರೆಯುತ್ತಿಲ್ಲ. ಜಯಂತಿಯಂತಹ ಕನ್ನಡ ಪತ್ರಿಕೆಯೊಂದು ನಾಡಿನಲ್ಲಿ ಬದುಕಿ ಕಾರ್ಯ ಮಾಡುತ್ತಿರಬೇಕೆಂಬ—ಕೆಲವು ಜನ ಹಿತಚಿಂತಕರ ಅಭಿಲಾಷೆಯೂ, ಸಂಪಾದಕರ ದೃಢನಿಷ್ಠೆಯೂ ಜಯಂತಿಯನ್ನು ಇದುವರೆಗೆ ಬದುಕಿಸಿವೆ. ಮುಂದೆ ಕೂಡ ಇದನ್ನು ಬದುಕಿಸುವುವೆಂದು ವಿಶ್ವಾಸಪಡುವಂತಿದೆ.

## ಸಹಾಯಧನ.

ನಷ್ಟದ ಹೊರೆಯನ್ನು ಸಂಪಾದಕರೊಬ್ಬರ ಮೇಲೆಯೆ ಹೊರಿಸಬಾರದೆಂದು, ಜಯಂತಿ ಸಹಾಯಧನಕ್ಕಾಗಿ ಕನ್ನಡ ಜನತೆಯೆದುರು ನೊರೆಯಿಟ್ಟಿತು. ಅದನ್ನು ಕೇಳಿ ಕರುಳು ಕರಗಿದ ಕೆಲವು ಜನ ಮಹನೀಯರು, ಸಹಾಯಧನವನ್ನು ಸಲ್ಲಿಸಿದರು. ಸುಮಾರು ೩೦೦ ರೂಪಾಯಿಗಳಷ್ಟು ಸಹಾಯಧನವು ಕಳೆದ ಒಂದು ವರ್ಷದಲ್ಲಿ ದೊರೆಯಿತು. ಸಂಪಾದಕರ ತಲೆಯಮೇಲೆ ಬಿದ್ದಿರುವ ನಷ್ಟದ ಹೊರೆಯಲ್ಲಿ ಸ್ವಲ್ಪವಾದರೂ ಹಗುರಾದಂತಾಯಿತು. ಹೊಸ ವರ್ಷದಲ್ಲಿಯೂ ಜಯಂತಿಯ ಹಿತಚಿಂತಕರು, ಹೆಚ್ಚು ಹೆಚ್ಚಾಗಿ ಸಹಾಯಧನವನ್ನಿತ್ತು, ಈ ಪತ್ರಿಕೆಯ ಬಲವನ್ನು ಬೆಳೆಯಿಸಬೇಕೆಂದು ಬೇಡಿಕೊಳ್ಳುವೆವು.

## ಚಂದಾದಾರರು.

ಜಯಂತಿಯಂತಹ ಸಂಸ್ಕೃತಿ ಸಂವರ್ಧಕ ಮಾಸಪತ್ರಿಕೆಗೆ, ಸದ್ಯ ಇರುವ ಚಂದಾದಾರರ ಸಂಖ್ಯೆಯೆಷ್ಟೆಂದು ಯಾರಾದರೂ ಕೇಳಿದರೆ, ಪರಪ್ರಾಂತಗಳಲ್ಲಿರುವ ಈ ಬಗೆಯ ಪತ್ರಿಕೆಗಳಿಗಿರುವ ಚಂದಾದಾರರ ಸಂಖ್ಯೆಯ ದೃಷ್ಟಿಯಿಂದ, ನಾವು ನಾಚಿಕೆಯಿಂದ ತಲೆಬಾಗಿಸಬೇಕಾಗುವುದು. ಅದಕ್ಕೆ ಕಾರಣ ಕರ್ನಾಟಕದ ವಿಚ್ಛಿನ್ನತೆಯ ಪರಿಸ್ಥಿತಿಯೂ, ನಮ್ಮ ಜನರ ಇತ್ತೀಚಿನ ವಾಚನಾಭಿರುಚಿಯ ಬಗೆಯೂ ಕಾರಣವೆಂದು ಹೇಳಬಹುದಾದರೂ, ಈ ಸಮಾಧಾನದಿಂದ ಜಯಂತಿಗೆ ಬೇಕಾದ ಪೋಷಣೆ ದೊರೆಯಲಾರದು.

ಬೆಳಗಾಂವಿಯ ಶ್ರೀಮಾನ್ ಬಿ. ಬಿ. ಕುಲಕರ್ಣಿ ಮೊದಲಾದ ಕೆಲವು ಜನ ಮಿತ್ರರು, ಜಯಂತಿಯ ಚಂದಾದಾರರ ಸಂಖ್ಯೆಯನ್ನು ಹೆಚ್ಚಿಸಲು ಆತ್ಮೀಯಭಾವದಿಂದ ಮುಂದೆ ಬಂದರು. ಹೈದರಾಬಾದ್ ಸರಕಾರವೂ ತನ್ನಲ್ಲಿಯ ಕೆಲವು ಹೈಸ್ಕೂಲು-ಮಿಡಲ್‌ಸ್ಕೂಲುಗಳಿಗೆ ಜಯಂತಿಯನ್ನು ಬರಮಾಡಿಕೊಂಡಿತು. ಇಷ್ಟಾದರೂ ಚಂದಾದಾರರ ಸಂಖ್ಯೆಯ ಪ್ರಗತಿ ಇರುವೆಯ ನಡಿಗೆಯದೇ ಆಗಿದೆಯೆಂದು ಹೇಳಬಹುದು.

## ರಾಜ್ಯ ಸರಕಾರಗಳು, ಜಯಂತಿ.

ಮುಂಬಯಿ, ಮದ್ರಾಸ್, ಮೈಸೂರು, ಹೈದರಾಬಾದ್ ರಾಜ್ಯ ಸರಕಾರಗಳ ವಿದ್ಯಾಭ್ಯಾಸದ ಇಲಾಖೆಯವರು ಜಯಂತಿಗೆ ಮನ್ನಣೆ ಕೊಟ್ಟು, ಎಲ್ಲ ಶಾಲೆ-ಕಾಲೇಜುಗಳಿಗೂ ವಾಚನಾಲಯಗಳಿಗೂ ಜಯಂತಿಯನ್ನು ತರಿಸಿಕೊಳ್ಳಬಹುದೆಂದು ಹೇಳಿರುವುವು. ಆದರೆ ಈ ಹೇಳಿಕೆಯ ಉಪಯೋಗವನ್ನು ಮಾಡಿಕೊಂಡ ಶಾಲೆ-ಕಾಲೇಜುಗಳ ಸಂಖ್ಯೆ ಆ ಆ ರಾಜ್ಯಗಳಲ್ಲಿ ತೀರ

ಕಡಮೆಯೆಂದೇ ಹೇಳಬಹುದು. ಸಂಪೂರ್ಣ ಕನ್ನಡಿಗರ ಪ್ರದೇಶವೇ ಎಂದು ಹೇಳಿಸಿಕೊಳ್ಳುವ ಮೈಸೂರುರಾಜ್ಯದಲ್ಲಿ, ಜಯಂತಿಯನ್ನು ಸ್ವಾಗತಿಸುವವರು ತೀರ ಕಡಮೆಯಿರುವುದು ವಿಷಾದದ ಸಂಗತಿಯಾಗಿದೆ.

## ಬರಲಿರುವ ಕರ್ನಾಟಕರಾಜ್ಯದಲ್ಲಿ :

ಜಯಂತಿಯಿಗ ಒಂದು ಆಶೆಯಿಂದ ಸ್ವಲ್ಪ ಧೈರ್ಯಗೊಂಡಿದೆ. ಬೇಗನೆ ಕನ್ನಡಿಗರೆಲ್ಲ ಒಂದೇ ರಾಜ್ಯದ ಆಡಳಿತದಲ್ಲಿ ಒಂದುಗೂಡಲಿರುವರು. ಇದುವರೆಗೆ ಉತ್ತರಕರ್ನಾಟಕದ ಪತ್ರಿಕೆಯೆನಿಸಿಕೊಳ್ಳುತ್ತಿದ್ದ ಜಯಂತಿ, ಇನ್ನು ಅಖಿಲಕರ್ನಾಟಕದ ಪತ್ರಿಕೆಯಾಗಲಿದೆ. ಆಗ ಜಯಂತಿಯ ಕಾರ್ಯಕ್ಷೇತ್ರ ವ್ಯಾಪಕವಾಗುವುದು. ಜಯಂತಿಯ ವಾಚಕವರ್ಗ ಆಗ ಹೆಚ್ಚಬಹುದೆಂದು ಒಂದು ದೂರದ ಆಶೆಯಿದೆ. ಆ ಆಶೆ ಫಲಿಸಿದರೆ, ಜಯಂತಿಯ ಬಲವು ಬೆಳೆದೀತು. ಇದೊಂದು ನಮ್ಮ ನಾಡಿನ ಆದರ್ಶಪತ್ರಿಕೆಯಾಗಿ ನಿಂತೀತು.

## ಜಿಲ್ಲಾ ವಿದ್ಯಾಧಿಕಾರಿಗಳಲ್ಲಿ ಕೋರಿಕೆ

ಜಯಂತಿ ಶಾಲೋಚಿತವಾದ ದೃಷ್ಟಿಯನ್ನಿರಿಸಿಕೊಂಡು, ನಾಡಿನಲ್ಲಿ ವಿಧಾಯಕವಿಚಾರಗಳನ್ನೂ ಜ್ಞಾನ–ವಿಜ್ಞಾನಗಳ ನವೀನ ಸಂಶೋಧನೆಗಳನ್ನೂ ಹರಡುವ ಪತ್ರಿಕೆಯಾಗಿದೆ. ನಮ್ಮ ನಾಡಿನಲ್ಲಿರುವ ಪ್ರತಿಯೊಂದು ಶಾಲೆಯ ಶಿಕ್ಷಕರೂ ವಿದ್ಯಾರ್ಥಿಗಳೂ ಜಯಂತಿಯನ್ನು ಓದುವುದು ಎಷ್ಟು ಆಗತ್ಯವಿದೆಯೆಂಬುದನು, ನಮ್ಮ ನಾಡಿನ ಎಲ್ಲ ಜಿಲ್ಲೆಗಳ ವಿದ್ಯಾಧಿಕಾರಿಗಳು ಮನವರಿಕೆ ಮಾಡಿಕೊಳ್ಳಬೇಕು. ಪ್ರತಿಯೊಂದು ಹಳ್ಳಿಯ ಶಾಲೆಗೂ ಒಂದು ಜಯಂತಿಯ ಪ್ರತಿಯು ಹೋಗುವಂತೆ ಏರ್ಪಾಡು ಮಾಡಿಕೊಡಬೇಕು. ಈ ಏರ್ಪಾಡಿನಿಂದ ಕರ್ನಾಟಕದಲ್ಲಿಯ ಒಂದು ಒಳ್ಳೆಯ ಪತ್ರಿಕೆಗೆ ಪೋಷಣೆ ದೊರೆದಂತಾಗುವುದು; ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಒಳ್ಳೆಯ ವಾಚನಸಾಮಗ್ರಿಯನ್ನು ಒದಗಿಸಿಕೊಟ್ಟಂತಾಗುವುದು. ನಮ್ಮ ನಾಡಿನ ಎಲ್ಲ ಜಿಲ್ಲೆಯ ವಿದ್ಯಾಧಿಕಾರಿಗಳೂ ನಮ್ಮ ಈ ಬಿನ್ನಹವನ್ನು ಕುರಿತು ತಕ್ಕ ವಿಚಾರಮಾಡುವರೆಂದು ನಮ್ಮ ಹಾರಯಿಕೆಯಾಗಿದೆ.

## ವಾಚನಾಲಯಗಳಲ್ಲಿ ಜಯಂತಿಯ ಸ್ಥಾನ

ಇತ್ತೀಚೆಗೆ ರಾಜ್ಯಸರಕಾರಗಳ ಪ್ರೇರಣೆ ಸಹಕಾರಗಳ ಫಲವಾಗಿ, ಹಳ್ಳಿ-ಹಳ್ಳಿಗಳಲ್ಲಿಯೂ ವಾಚನಾಲಯ, ಓದುಮನೆಗಳು ತಲೆಯೆತ್ತುತ್ತಲಿವೆ. ಪ್ರತಿಯೊಂದು ವಾಚನಾಲಯದಲ್ಲಿಯೂ ಜಯಂತಿಗೊಂದು ಸ್ಥಾನವಿರಬೇಕೆಂದು ನಮ್ಮ ಬಯಕೆಯಿದೆ ಏಕೆಂದರೆ ಜಯಂತಿ ವಾಚಕರ ಬುದ್ಧಿ-ಹೃದಯಗಳ ವಿಕಾಸದ ಕಡೆಗೆ ದೃಷ್ಟಿಯಿರಿಸಿ, ಸಾರಯುಕ್ತವಾದ ಸಾಹಿತ್ಯವನ್ನೇ ಕೊಡುತ್ತಲಿದೆ. ಹೊರಮಿಂಚು, ಬುದ್ಧಿ-ಮನಸ್ಸುಗಳನ್ನು ಕೆರಳಿಸಿ ಮಾನವತೆಯ ಮಟ್ಟದಿಂದ ಕೆಳಗಿಳಿಸುವ ಕೀಳುವಿಚಾರ ಇವುಗಳಿಂದ ನಮ್ಮ ವಾಚಕವರ್ಗ ದೂರವಿರಬೇಕು. ಸುಸಂಸ್ಕೃತಿಯನ್ನೇ ಸಾಮಾಜಿಕರಲ್ಲಿ ಹರಡುವ ಉದ್ದೇಶವನ್ನಿರಿಸಿಕೊಂಡಿರುವ ಜಯಂತಿಯಂತಹ ಪತ್ರಿಕೆಗಳನ್ನೇ ನಮ್ಮ ವಾಚನಾಲಯಗಳು ಜನತೆಗೆ ಒದಗಿಸಬೇಕು.

## ಈ ವರ್ಷ ಜಯಂತಿ ಸಲ್ಲಿಸಿದ ವಾಙ್ಮಯಸೇವೆ

ಡೆಮಾಯಿ ಅಳತೆಯ ಸುಮಾರು ೫೦೦ ಪುಟಗಳನ್ನು ಜಯಂತಿ ಈ ವರ್ಷ ಸಲ್ಲಿಸಿರುವುದು. ಪ್ರತಿಯೊಂದು ಪುಟವೂ ವಾಚನಾರ್ಹವಾದ ವಿಷಯದಿಂದ ತುಂಬಿರುವುದೆಂಬುದು ನಮ್ಮ ವಾಚಕರಿಗೆ ಅನುಭವದ ವಿಷಯವಾಗಿದೆ. ಕನ್ನಡ ಸಣ್ಣಕತೆಗಳ ಪ್ರಪಂಚದಲ್ಲಿ ಮೇಲಿನ ಮಟ್ಟದಲ್ಲಿ ನಿಲ್ಲಬಹುದಾದ ಅನೇಕ ಸಣ್ಣಕಥೆಗಳು, ಈ ವರ್ಷ ಪ್ರಕಟವಾಗಿವೆ. ಏಕಾಂಕನಾಟಕಗಳೂ ತರಂಗರೂಪಕಗಳೂ ತಮ್ಮ ರಸಪ್ರಭಾವವನ್ನು ಚೆನ್ನಾಗಿ ಬೀರಿವೆಯೆಂಬುದಕ್ಕೆ, ಅಲ್ಲಲ್ಲಿ ಅವು ರಂಗಭೂಮಿಯ ಮೇಲೆ ಪ್ರದರ್ಶಿತವಾದುದು ಪ್ರತ್ಯಕ್ಷ ಸಾಕ್ಷಿಯಾಗಿದೆ. ಜಯಂತಿಯಲ್ಲಿ ಪ್ರಕಟವಾದ ವೈಜ್ಞಾನಿಕ ಲೇಖನಗಳೂ ವಿಜ್ಞಾನಿಗಳ ಪರಿಚಯಗಳೂ ವಿಜ್ಞಾನದ ಅಭ್ಯಾಸಿಗಳಿಗೆ ಸಹಕಾರ ನೀಡುವಂತಹವಾಗಿವೆ. ಸಂಪಾದಕೀಯ, ನಾಡನಡೆಗಳಲ್ಲಿಯ ವಿಚಾರವಿವೇಚನೆ, ಪಂಡಿತ–ಪಾಮರರ ಪ್ರೀತಿಯನ್ನೂ ಪಡೆದುಕೊಂಡಿವೆ: ‘ ವಿಮರ್ಶೆಯ ಶಿಕ್ಷಣರಂಗ’ ಎಂಬ ವಿಭಾಗವು ಅತ್ಯಂತ ಅವಶ್ಯಕವಾದುದೂ ಹೊಸ ಬಗೆಯದೂ ಇದೆಯೆಂಬುದನ್ನು ಹಲವಾರು ಜನರು ಒಪ್ಪಿ ಬರೆದಿದ್ದಾರೆ. ಆದರೆ ತರುಣ ವಿಮರ್ಶಕರ ಹಿಂಜರಿಕೆಯ ಮೂಲಕ, ಈ ವಿಭಾಗ, ಇದುವರೆಗೂ ಅಷ್ಟೊಂದು ತೃಪ್ತಿಕರವಾಗಿ ನಡೆದಿಲ್ಲವೆಂದು ನಮ್ಮ ಎಣಿಕೆ

## ಅಭಿನಂದನೆಗಳು.

ಜಯಂತಿಯ ಸಾಹಿತ್ಯಪ್ರಚಾರದ ಮಟ್ಟವನ್ನು ಮೆಚ್ಚಿ ಅನೇಕ ಲೇಖಕರು, ನಿರಪೇಕ್ಷಾಭಾವದಿಂದಲೇ ತಮ್ಮ ಬೆಲೆಬಾಳುವ ಲೇಖನಗಳನ್ನು, ಜಯಂತಿಗೆ ಒದಗಿಸಿಕೊಡುವರು. ಕೇವಲ ಕೃತಜ್ಞತೆಯ ವಂದನೆಗಳಲ್ಲದೆ ಅವರಿಗೆ ನಮ್ಮಿಂದ ಬೇರೆ ಯಾವ ಪ್ರತಿಫಲವೂ ದೊರೆಯದಿರುವುದು ವಿಷಾದದ ಸಂಗತಿಯಾಗಿದೆ.

ನಮ್ಮ ಧನಸಹಾಯಕರು, ಚಂದಾದಾರರು, ಜಾಹೀರಾತುಗಳನ್ನು ಕೊಡುವ ವ್ಯಾಪಾರಿಗಳು ಇವರಿಗೆಲ್ಲ ನಮ್ಮ ಹಾರ್ದಿಕ ಅಭಿನಂದನೆಗಳು. ಮುದ್ರಣಾಲಯದವರು, ಕಾಗದ ಮೊದಲಾದ ಉಪಕರಣಗಳನ್ನು ಒದಗಿಸುವವರು ಇವರೆಲ್ಲರ ಸಹಾನುಭೂತಿಪೂರ್ಣವಾದ ಸಹಕಾರವು ಜಯಂತಿಗೆ ದೊರೆಯದೆ ಹೋಗಿದ್ದರೆ, ಅದರ ದಾರಿ ತುಂಬ ತೊಡಕಿನದಾಗುತ್ತಿತ್ತು. ಈ ಬಗೆಯ ಸಹಕಾರಗಳನು ಕೊಟ್ಟವರಿಗೆಲ್ಲ ನಮ್ಮ ಹಾರ್ದಿಕ ಅಭಿನಂದನೆಗಳು.

ಜಯಂತಿಯ ೧೯ನೆಯ ವರ್ಷ ಎಲ್ಲರಿಗೂ ಸುಖ-ಸಮಾಧಾನಗಳನ್ನು ಒದಗಿಸಲಿ.

—ಸಂಪಾದಕರು

# ನಾಡ ನಡೆ

●

## ಮುಂಬಯಿ ಸರಕಾರದಿಂದ ಸಾಹಿತ್ಯಿಕರಿಗೆ ಬಹುಮಾನ

ಕಲಾಜೀವಿಗಳು ಒಂದು ರೀತಿಯಿಂದ ಪರಪುಷ್ಟರೆಂದೇ ಹೇಳಬೇಕಾಗುವುದು. ಅವರು ತಮ್ಮ ಹೊಟ್ಟೆಯ ಬೆನ್ನುಹತ್ತಿ ಹೊರಟರೆ ಕಲಾಸಿದ್ಧಿಯನ್ನೂ ಪಡೆಯಲಾರರು; ಅದರ ಸಂಪೂರ್ಣ ಸೌಂದರ್ಯ-ಪ್ರತಿಮೆಗಳನ್ನೂ ನಿರ್ಮಿಸಲಾರರು. ಆದುದರಿಂದಲೇ ನಮ್ಮ ರಾಷ್ಟ್ರದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಕಲಾವಿದರನ್ನು ರಾಜ-ಮಹಾರಾಜರು ಉತ್ತಮರೀತಿಯಿಂದ ಪೋಷಿಸುತ್ತ ಬಂದಿರುವ-ರೆಂಬುದು ಐತಿಹಾಸಿಕ ಸತ್ಯವಾಗಿದೆ. ಕನ್ನಡನಾಡಿನ ಕವಿಗಳು, ಚಿತ್ರಕಾರರು, ಶಿಲ್ಪಿಗಳು, ಸಂಗೀತಗಾರರು, ನರ್ತಕ-ನಟರು—ಇವರೆಲ್ಲ ರಾಜಾಶ್ರಯದಲ್ಲಿದ್ದುಕೊಂಡೇ ನಾಡಿಗೆ ತಮ್ಮ ಕಲಾಸಿದ್ಧಿಯ ಪ್ರಯೋಜನವನ್ನು ಒದಗಿಸಿದರು. ಆದರೆ ಭಾರತ ಸ್ವಾಧೀನ ರಾಷ್ಟ್ರವಾದಾಗ, ಭಾರತೀಯ ಕಲಾವಿದರನ್ನು ಕೇಳುವವರೇ ಇರಲಿಲ್ಲ.

ಇಂದಿನ ಸ್ವತಂತ್ರಭಾರತದಲ್ಲಿ ಕೇಂದ್ರಸರಕಾರವೂ ರಾಜ್ಯ-ಸರಕಾರಗಳೂ ಕಲಾವಿದರ ಕಡೆಗೆ ಕಣ್ಣುತೆರೆದು ನೋಡತೊಡಗಿ-ರುದು ಸಂತೋಷದ ಸಂಗತಿಯಾಗಿದೆ. ಮಾನವಜೀವನದಲ್ಲಿ ಹೊಟ್ಟೆಯ ಹಸಿವು ಒಂದು ಪ್ರಮುಖವಾದ ಬಾಧೆ. ಎಲ್ಲರಂತೆಯೆ ಕಲಾವಿದನೂ ಈ ಬಾಧೆಯನ್ನು ನಿವಾರಿಸುವುದಕ್ಕಾಗಿ ಧಡಪಡಿಸ-ಬೇಕಾಗುತ್ತಿರುವುದರಿಂದ, ಇದುವರೆಗೆ ನಮ್ಮ ಕಲಾವಿದರಿಗೆ ತಮ್ಮ ಕಲೆಯ ಸಂಪೂರ್ಣ ನೈಪುಣ್ಯದ ಪ್ರದರ್ಶನ ಮಾಡುವುದೆಂದರೆ ಅಶಕ್ಯಕೋಟಿಯೊಳಗಿನ ಮಾತಾಗಿದ್ದಿತು. ಇಂದು ಸರಕಾರಗಳು ಕಲಾವಿದರನ್ನು ಪೋಷಿಸುವುದಕ್ಕೂ ಪ್ರೋತ್ಸಾಹಿಸುವುದಕ್ಕೂ ಸಿದ್ಧ-ವಾಗಿ ನಿಂತುದು ಶುಭಭವಿಷ್ಯದ ಲಕ್ಷಣವಾಗಿದೆ.

ಸಾಹಿತ್ಯವು ಒಂದು ಶ್ರೇಷ್ಠವಾದ ಕಲೆ. ಒಳ್ಳೆಯ ಸಾಹಿತ್ಯದ ನಿರ್ಮಾಣವು ರಾಷ್ಟ್ರದ ಸುಸಂಸ್ಕೃತಿಯ ದ್ಯೋತಕವಾಗಿದೆ. ಈ ಸತ್ಯವನ್ನರಿತು ಮುಂಬಯಿ ರಾಜ್ಯಸರಕಾರವು ಒಳ್ಳೆಯ ಸಾಹಿತ್ಯ ನಿರ್ಮಾಪಕರಿಗೆ ಬಹುಮಾನ ಕೊಡುವುದನ್ನು ಈ ವರ್ಷದಿಂದ ಪ್ರಾರಂಭಿಸಿ, ಅದನ್ನು ಆಚರಣೆಯಲ್ಲಿಯೂ ತಂದುಬಿಟ್ಟಿದೆ. ಈ ಸಮಂಜಸ ಕಾರ್ಯವನ್ನು ಆರಂಭಿಸಿದುದಕ್ಕಾಗಿ, ಮುಂಬಯಿ ಸರಕಾರದ ವಿದ್ಯಾವಿಭಾಗದ ಸಚಿವರನ್ನು ನಾವು ಮನವಾರೆ ಅಭಿನಂದಿಸು-ತ್ತೇವೆ. ಭಾರತದ ಎಲ್ಲ ರಾಜ್ಯಸರಕಾರಗಳೂ ಮುಂಬಯಿ ಸರಕಾರದ ಈ ಮಾದರಿಯನ್ನು ಅನುಸರಿಸುವುದು ಒಳ್ಳೆಯದೆಂದು ಸೂಚಿಸು-ತ್ತೇವೆ.

## ಬಹುಮಾನ ಪಡೆದ ಗ್ರಂಥಗಳು.

ಕಳೆದ ೧೯೫೦-೫೧-೫೨ ವರುಷಗಳಲ್ಲಿ ಮುಂಬಯಿ ರಾಜ್ಯದ ಸಾಹಿತ್ಯಿಕರು ಬರೆದು ಪ್ರಕಟಿಸಿದ ಬೇರೆ ಬೇರೆ ಭಾಷೆಯ ಗ್ರಂಥಗಳನ್ನು ಮುಂಬಯಿ ಸರಕಾರ ತರಿಸಿಕೊಂಡಿತು. ಮುಂಬಯಿ ರಾಜ್ಯದ ಮೂರು ಮುಖ್ಯ ಭಾಷೆಗಳಾದ ಗುಜರಾಥಿ, ಮರಾಠಿ, ಕನ್ನಡ ಈ ಮೂರೂ ಭಾಷೆಯ ಗ್ರಂಥಕರ್ತರಿಗೂ ಯೋಗ್ಯ ಬಹುಮಾನವನ್ನು ಸಲ್ಲಿಸಿತು.

ಕಾದಂಬರಿ, ಕಥಾಸಂಕಲನ, ಕಾವ್ಯ ಕವನಸಂಕಲನ, ಪ್ರಬಂಧ, ಐತಿಹಾಸಿಕ ಗ್ರಂಥ, ಜೀವನಚರಿತ್ರೆ, ಬಾಲಸಾಹಿತ್ಯ ಇತ್ಯಾದಿಯಾಗಿ ವಿಭಾಗಗಳನ್ನು ಕಲ್ಪಿಸಿ, ಪ್ರತಿಯೊಂದು ವಿಭಾಗಕ್ಕೂ ಎರಡೆರಡು ಬಹುಮಾನಗಳನ್ನು ಇರಿಸಲಾಗಿದ್ದಿತು. ೧ನೆಯ ಬಹು-ಮಾನ ೨೦೦೦ ರೂ. ಗಳದು. ೨ನೆಯ ಬಹುಮಾನ ಒಂದು ಸಾವಿರ ರೂ. ಗಳದು.

ಮೇಲೆ ಹೇಳಿದ ವರ್ಷತ್ರಯದಲ್ಲಿ ಪ್ರಕಟವಾದ—ಬಹುಮಾನ-ಕ್ಕಾಗಿ ಬಂದ—ಗ್ರಂಥಗಳನ್ನು ಪರೀಕ್ಷಿಸುವುದಕ್ಕಾಗಿ, ಮುಂಬಯಿ ಸರಕಾರ ಆ ಆ ಭಾಷೆಯ ತಜ್ಞರನ್ನೊಳಗೊಂಡ ಪರೀಕ್ಷಾಮಂಡಲ-ವನ್ನು ನಿರ್ಮಿಸಿತ್ತು. ಆ ತಜ್ಞಮಂಡಲಿಯ ನಿರ್ಣಯದಂತೆ ಬಹು-ಮಾನವನ್ನು ಸಲ್ಲಿಸಿತು.

ಕನ್ನಡ ಭಾಷಾಸಾಹಿತ್ಯದಲ್ಲಿ, ಕಾದಂಬರಿಯ ಮೊದಲನೆಯ ಬಹುಮಾನ 'ಆನಂದಕಂದ'ರ 'ಮಗಳ ಮದುವೆ' ಎಂಬ ಸಾಮಾ-ಜಿಕ ಕಾದಂಬರಿಗೆ ದೊರೆಯಿತು. ಕಾವ್ಯವಿಭಾಗದ ಮೊದಲನೆಯ ಬಹುಮಾನ ಶ್ರೀ. ದಿನಕರ ದೇಸಾಯಿಯವರ ಕವನಸಂಕಲನಕ್ಕೆ ದೊರೆಯಿತು. ಮಿಕ್ಕವಿಭಾಗಗಳಲ್ಲಿ ಮೊದಲನೆಯ ಬಹುಮಾನ ಕನ್ನಡ ಲೇಖಕರಿಗೆ ದೊರೆಯದಿರುವುದು ವಿಷಾದದ ಸಂಗತಿಯಾಗಿದೆ. ಪ್ರಬಂಧವಿಭಾಗದ ೨ನೆಯ ಬಹುಮಾನ ಶ್ರೀ. ಸಿಂಪಿ ಲಿಂಗಣ್ಣನವರ 'ಸ್ವರ್ಗದ ಓಲೆಗಳು' ಎಂಬ ಸಂಕಲನಕ್ಕೂ, ಕಾವ್ಯವಿಭಾಗದ ೨ನೆಯ ಬಹುಮಾನ ಶ್ರೀ. ಪಿ. ವೆಂಕಟರಮಣಾಚಾರ್ಯರ 'ನವನೀರದ' ಎಂಬ ಕವನಸಂಕಲನಕ್ಕೂ, ಬಾಲಸಾಹಿತ್ಯವಿಭಾಗದ ೨ನೆಯ ಬಹುಮಾನ ಪಂಡಿತ ಕವಲಿಯವರ 'ಶ್ರೀವಿವೇಕಾನಂದರ ಜೀವನ ಚರಿತ್ರೆ' ಎಂಬ ಗ್ರಂಥಕ್ಕೂ ದೊರೆತಿವೆ. ಸಣ್ಣಕಥೆಗಳ ವಿಭಾಗದ ಎರಡನೆಯ ಬಹುಮಾನವನ್ನು ಶ್ರೀ. ವೆಂ. ಮು. ಜೋಶಿ ಮತ್ತು ಶ್ರೀ. ವರಗಿರಿ ಮಾರ್ತಾಂಡರಾಯರು ಇವರಲ್ಲಿ ವಿಭಾಗಿಸಲಾಗಿದೆ. ಕಾದಂಬರಿ ವಿಭಾಗದ ೨ನೆಯ ಬಹುಮಾನವನ್ನು ಶ್ರೀ. ಬಸವರಾಜ ಕಟ್ಟೀಮನಿಯವರ 'ಮೋಹದ ಬಲೆಯಲ್ಲಿ' ಮತ್ತು ಶ್ರೀ. ಬಿಂದು-ಮಾಧವ ಕುಲಕರ್ಣಿಯವರ 'ಕೆರಿಗೆ ಹಾರ' ಎಂಬ ಎರಡು ಕಾದಂ-ಬರಿಗಳಿಗೂ ಸರಿಯಾಗಿ ಹಂಚಿಕೊಡಲಾಗಿದೆ. ಬಾಲಸಾಹಿತ್ಯದ ಕಾವ್ಯ—ಕವನ ವಿಭಾಗದ ೨ನೆಯ ಬಹುಮಾನ, ಶ್ರೀ. ದಿನಕರ ದೇಸಾಯಿಯವರ ಮತ್ತು ಶ್ರೀ. ಕರ್ಕಿ, ಶ್ರೀ. ಇಂಚಲ ಅವರ ಕವನ-ಸಂಕಲನಗಳಿಗೆ ದೊರೆತಿದೆ. ಬಹುಮಾನಪಡೆದ ಎಲ್ಲ ಸಾಹಿತ್ಯಿಕ-ರನ್ನೂ ನಾವು ಮನವಾರೆ ಅಭಿನಂದಿಸುತ್ತೇವೆ.

## ಕೂಲಿಕೊಟ್ಟು ನಡೆಸಿದ ಸತ್ಯಾಗ್ರಹ.

ಬೆಳಗಾಂವಿಯ ಕೆಲವು ಅತಿವಾದಿ ಮರಾಠಿಗರಿಂದ, ಅಲ್ಲಿ 'ಸತ್ಯಾಗ್ರಹ' ಎಂಬ ಹೆಸರಿನಿಂದ ಹುಚ್ಚಾಟವೊಂದು ನಡೆದಿದೆ. ಈ

## ಚಂದಾದಾರರಲ್ಲಿ ಬಿನ್ನಹ

ಈಗ ಅಂಚೆಯ ದರಗಳು ಏರಿದುದರಿಂದ, ವ್ಹಿ. ಪಿ. ಮೂಲಕ ಜಯಂತಿಯನ್ನು ತರಿಸಿಕೊಳ್ಳುವವರು ೦-೧೨-೦ ವ್ಯರ್ಥವಾಗಿ ಹೆಚ್ಚಿನ ವೆಚ್ಚವನ್ನು ಹೊರಬೇಕಾಗುತ್ತದೆ. ಆದುದರಿಂದ ನಮ್ಮ ಚಂದಾದಾರರು ತಮ್ಮ ವಾರ್ಷಿಕ ಚಂದಾ ಹಣವನ್ನು ಮನಿಆರ್ಡರಿನ ಮೂಲಕವಾಗಿ ಕಳುಹುವುದು ಒಳ್ಳೆಯದು. ಜೂನ್ ಸಂಚಿಕೆಯಿಂದ ಜಯಂತಿಯ ಹೊಸ ವರ್ಷ ಪ್ರಾರಂಭವಾಗುವುದು. ಆದುದರಿಂದ ಹೊಸ ವರ್ಷದಲ್ಲಿ ಚಂದಾದಾರರಾಗಿ ಉಳಿಯಲು ಬಯಸುವವರೆಲ್ಲ ದಯೆಯಿಟ್ಟು, ಈ ತಿಂಗಳ ಕೊನೆಯೊಳಗಾಗಿ ತಲ್ಪುವಂತೆ, ತಮ್ಮ ಚಂದಾಹಣವನ್ನು ಎಮ್. ಓ. ಮೂಲಕ ಕಳುಹಬೇಕು.

ವ್ಯವಸ್ಥಾಪಕ 'ಜಯಂತಿ'

'ಸತ್ಯಾಗ್ರಹಿ'ಗಳೆನಿಸಿಕೊಳ್ಳುವವರೆಲ್ಲ ಹಳ್ಳಿಗಳಿಂದ ಹಿಡಿದು ತಂದ ನಿರುದ್ಯೋಗಿಗಳಾದ ಕೂಲಿಯಾಳುಗಳು. ಇವರಿಗೆ ಸತ್ಯಾಗ್ರಹವೆಂದರೇನೆಂಬುದೂ ಗೊತ್ತಿಲ್ಲ. ಏತಕ್ಕಾಗಿ ತಾವು ಸತ್ಯಾಗ್ರಹಮಾಡುತ್ತೇವೆಂಬುದೂ ಗೊತ್ತಿಲ್ಲ. ಹಣದ ಆಶೆ, ಪುಂಡ ಧುರೀಣರ ಭೀತಿ, ಹುಚ್ಚು ವಿಚಾರಗಳ ಪ್ರಚೋದನೆ ಇವುಗಳಿಗೆ ಒಳಗಾಗಿ, ಪಾಪ, ಆ ತರುಣರು ಬೆಳಗಾಂವಿಗೆ ಬಂದು ಬಂದು ಸೆರೆಮನೆ ಸೇರುತ್ತಿದ್ದಾರೆ. ಬೆಳಗಾಂವಿಯಲ್ಲಿ ನಡೆದ ಸತ್ಯಾಗ್ರಹದಲ್ಲಿ ಬೆಳಗಾಂವಿಯವರೂ ಸುಶಿಕ್ಷಿತರೂ ಇರದೆ ಇರುವುದು ಆಶ್ಚರ್ಯದ ಸಂಗತಿಯಾಗಿದೆ. ಕೆಲವೊಂದು ಹಳ್ಳಿಗಳಲ್ಲಿಯ ಮುಂದಾಳುಗಳೆನಿಸಿಕೊಳ್ಳುವ ಪುಂಡರು, ಹಳ್ಳಿಯ ಜನರಲ್ಲಿ ಹೆದರಿಕೆ ಹುಟ್ಟಿಸಿ, ಬೇಕಾದ ಹಾಗೆ ಹಣವನ್ನು ಸುಲಿದುಕೊಳ್ಳುವ ಅಕ್ರಮಕಾರ್ಯಗಳನ್ನೂ ನಡೆಸಿದ್ದಾರೆ. ಜನತೆಯ ಸುರಕ್ಷಿತತೆಯ ಹೊಣೆಹೊತ್ತ ಸರಕಾರದ ಜಿಲ್ಹಾಧಿಕಾರಿಗಳು, ಇದರ ಕಡೆಗೆ ಉಪೇಕ್ಷಾಭಾವದಿಂದ ನೋಡುತ್ತಿರುವುದು ಇದೆಲ್ಲಿಯ ರೀತಿ? ಬೆಳಗಾಂವಿಯ ಮರಾಠಿಗರಲ್ಲಿಯ ಕೆಲವು ಜನ ಧೂರ್ತರು, ಅಬ್ಬರ ಸಬ್ಬರ ಪ್ರಚಾರ ಮಾಡುವುದರಲ್ಲಿ ಜರ್ಮನಿಯ ಗೊಬೆಲ್ಸ್‌ನನ್ನೂ ಮೀರಿಸುತ್ತಲಿದ್ದಾರೆ. ಮರಾಠಿಗರ ಮನೆಯಲ್ಲಿ ಒಂದು ಬೆಕ್ಕು ಬೇನೆ ಬಂದು ಸತ್ತರೂ, ಅದರ ಹೊಣೆಯನ್ನು ಬೆಳಗಾಂವಿಯ ಕನ್ನಡಿಗರ ಮೇಲೂ ಅಲ್ಲಿಯ ಸಂರಕ್ಷಕ ಪೋಲೀಸರ ಮೇಲೂ ಹೊರಿಸುತ್ತಲಿದ್ದಾರೆ. ಮುಂಬಯಿ-ಪುಣೆಗಳಲ್ಲಿಯ ಕೆಲವು ಮರಾಠಿಪತ್ರಿಕೆಗಳು ಅವರ ಪ್ರಚಾರವೃತ್ತಗಳನ್ನು ಇನ್ನಿಷ್ಟು ಉಪ್ಪುಖಾರ ಹಚ್ಚಿ ಪ್ರಕಟಿಸಿ, ಜನರನ್ನು ಕೆರಳಿಸುತ್ತಲಿವೆ. ಜಿಲ್ಹಾಧಿಕಾರಿಗಳು ಆ ಮೇಲೆ, ಅಗತಿಕಭಾವದವರಾಗಿ, ಆ ಪ್ರಚಾರವೃತ್ತಗಳು ಸುಳ್ಳೆಂದು ಸಾಧಿಸಲು ಹೆಣಗುತ್ತಲಿದ್ದಾರೆ.. ಇದೆಂತಹ ಹೇಡಿತನದ ಆಡಳಿತ? ಇಷ್ಟೆಲ್ಲ ಕುತಂತ್ರಗಳಿಗೂ ಮೂಲಕಾರಣರಾದವರು ಯಾರೆಂಬುದು ಜಿಲ್ಹಾಧಿಕಾರಿಗಳಿಗೆ ಗೊತ್ತಿಲ್ಲದೆ ಇಲ್ಲ. ಅವರೆಲ್ಲರನ್ನೂ ಬೇಕಾದ ಹಾಗೆ ಪುಂಡು-ಪ್ರಚಾರಗಳನ್ನು ನಡೆಸಲು ಹೊರಗೇ ಇರಿಸಿ, ಈ ಕೂಲಿಯ ಆಸೆಯಿಂದ ಬರುವ ಹಳ್ಳಿಗರನ್ನು ಸೆರೆಮನೆಗೆ ಕಳುಹಿಸುವುದರಲ್ಲಿ ಯಾವ ಪುರುಷಾರ್ಥವನ್ನು ಸಾಧಿಸಿದಂತಾದೀತು?

### ಮೈಸೂರಿನ ಮುಖ್ಯ ಮಂತ್ರಿಗಳ ಮಾತುಗುಳಿತನ

ಮೈಸೂರಿನ ಮುಖ್ಯಮಂತ್ರಿಗಳಾದ ಮಾನ್ಯ ಹನುಮಂತಯ್ಯನವರು ಒಳ್ಳೆಯವರೂ ಇರಬಹುದು; ಪ್ರಾಮಾಣಿಕರಾಗಿಯೂ ಇರಬಹುದು. ಆದರೆ ಇತ್ತೀಚೆಗೆ ಅವರು ಅಲ್ಲಲ್ಲಿ ಆಡುತ್ತಿರುವ ಮಾತುಗಳನ್ನು ನೋಡಿದರೆ, ಪ್ರಜಾಪ್ರಭುತ್ವವೆಂದರೇನೆಂಬುದು ಅವರಿಗೆ ಸರಿಯಾಗಿ ಗೊತ್ತಿಲ್ಲವೆಂದು ತೋರುವುದು. ಮಾನ್ಯ ಹನುಮಂತಯ್ಯನವರು ಭವಿಷ್ಯತ್ ಕರ್ನಾಟಕರಾಜ್ಯದ ಆಡಳಿತದ ಬಗೆಗೆ ಆಡುವ ಮಾತುಗಳು ಅವರ ಸರ್ವಾಧಿಕಾರೀ ಮನೋವೃತ್ತಿಯನ್ನು ಸೂಚಿಸುವಂತಹವಾಗಿವೆಯೆಂದು ಬಹಳ ಜನರು ಭಾವಿಸತೊಡಗಿದ್ದಾರೆ. ಇಂದಿನ ಪ್ರಜಾಪ್ರಭುತ್ವದಲ್ಲಿ ಕನ್ನಡಿಗರೆಲ್ಲರ ಮನ್ನಣೆಗೂ ಪಾತ್ರರಾದ ಮೈಸೂರಿನ ದೊರೆಗಳ ವೈಯಕ್ತಿಕ ಮಾತುಗಳಿಗೂ ಬೆಲೆಯಿಲ್ಲದಿರುವಾಗ, ಜನತೆಯಿಂದಲೇ ನಿಯೋಜಿತರಾಗಿರುವ ಮಾನ್ಯ ಹನುಮಂತಯ್ಯನವರ ವೈಯಕ್ತಿಕ ವಿಚಾರಗಳಿಗೆ ಯಾವ ಬೆಲೆ ದೊರೆತೀತು? ಮುಂಬರಲಿರುವ ಕರ್ನಾಟಕ ರಾಜ್ಯದ ಜನತೆಯೆಲ್ಲ ಒಪ್ಪಿದರೆ, ಮಾನ್ಯ ಹನುಮಂತಯ್ಯನವರಿಗೆ ಆಡಳಿತದಲ್ಲಿ ಒಂದು ಸ್ಥಾನ ದೊರೆತೀತು. ಒಪ್ಪದೆ ಹೋದರೆ, ಮನೆಯಲ್ಲಿ ಮೂಲೆಯ ಮಾವಾಗಿ ಕುಳಿತುಕೊಳ್ಳಬೇಕಾದೀತು. ಆದುದರಿಂದ ಹನುಮಂತಯ್ಯನವರು, ಪ್ರಜಾಪ್ರಭುತ್ವದ ನೀತಿ ತತ್ತ್ವಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು, ಹೊಣೆಗಾರಿಕೆಯಿಂದ ಮಾತನಾಡಬೇಕು ಒಂದು; ಇಲ್ಲವಾದರೆ ಬಾಯಿಗೆ ಬಂದಂತೆ ಮಾತನಾಡುವುದನ್ನು ನಿಲ್ಲಿಸಬೇಕು ಒಂದು. ಇದನ್ನು ಕಡೆಗಣಿಸಿ ಈಗಿನಂತೆಯೇ ನಾಲಗೆಯನ್ನು ಕುಣಿಸುತ್ತ ನಡೆದರೆ, ಜನತೆಯ ಸಂದೇಹಕ್ಕೆ ಅವರು ಪಾತ್ರರಾಗುವುದು ಖಂಡಿತವಾದ ಮಾತು.

### ಮರಾಟಿಗರ ಕಾರವಾರದ ಬೇಡಿಕೆ

ದುರಾಗ್ರಹಿಗಳಾದ ಮಹಾರಾಷ್ಟ್ರ ಏಕೀಕರಣವಾದಿಗಳು, ಕಾರವಾರ ಜಿಲ್ಲೆಯ ಕೆಲವು ಪ್ರದೇಶವನ್ನು ಬೇಡುವ ಕೂಗು ಇನ್ನೂ ಕೇಳುತ್ತಲೇ ಇದೆ. ಮುಂಬಯಿ ಅಸೆಂಬ್ಲಿಯಲ್ಲಿ ಕಾರವಾರ ಜಿಲ್ಲೆಯ ಸದಸ್ಯರು, ಕಾರವಾರ ಜಿಲ್ಲೆಯ ಒಂದು ಅಡಿಯಗಲದ ಭಾಗವೂ ಮಹಾರಾಷ್ಟ್ರಕ್ಕೆ ಸೇರಲಾರದೆಂಬುದನ್ನು ಸಪ್ರಮಾಣವಾಗಿ ಸಾರಿ ಹೇಳಿದ್ದಾರೆ. ಕಾರವಾರ ನಗರದಲ್ಲಿಯ ಒಂದು ಸಂಗಡದ ಹತ್ತಿಪ್ಪತ್ತು ಜನರನ್ನು ಬಿಟ್ಟರೆ, ಕಾರವಾರಕ್ಕೂ ಮರಾಠೀ ಭಾಷೆಗೂ ಯಾವ

( ಹೊದಿಕೆಯ ೩ನೆಯ ಪುಟ ನೋಡಿರಿ )

# ರೋಮಾ

( ಸಣ್ಣ ಕತೆ )*

ಶ್ರೀ. ಎಸ್. ವಿ. ಎಲ್. ಎನ್. ಶರ್ಮಾ, ಪೆರಡಾಲ

卐

**ಲೋಕಾನುಭವವಿಲ್ಲದ ತರುಣರು ಪ್ರೇಮವ್ಯವಹಾರದಲ್ಲಿ, ಬೆಳ್ಳಗೆ ಕಂಡುದೆಲ್ಲವೂ ಹಾಲೆಂದು ಭ್ರಮಿಸುವರು. ತಾವು ಕಂಡುದು ಹಾಲಲ್ಲ, ಸುಣ್ಣದ ನೀರೆಂಬುದರ ಪ್ರತ್ಯಕ್ಷ ಅನುಭವವಾದಾಗ ಬಾಯಿ ಬಾಯಿ ಬಿಡತೊಡಗುವರು. ಪಾಪ, ವಿನಯನೂ ಅನುಭವವಿಲ್ಲದ ಹೊಸ ತರುಣ!**

卐

ಮೇರಠ್ ಸ್ಟೇಶನ್ನಿನ ಪ್ಲೇಟ್‌ಫಾರ್ಮಿನ ಮೇಲೆ ಜೀವನ ಅಡ್ಡಾಡುತ್ತಲಿದ್ದ. ಗಾಡಿ ಹೊರಡಲು ಇನ್ನೂ ಸಮಯವಿತ್ತು.

ಜೀವನ ಮೇರಠ್ ಜಿಲ್ಲೆಯ ಸುಪ್ರಸಿದ್ಧ ವಕೀಲರ ಮಗ. ಪ್ರವಾಸಕ್ಕಾಗಿ ಮುಂಬಯಿಗೆ ಹೋಗುತ್ತಲಿದ್ದ. ಎಂ. ಎ. ಪರೀಕ್ಷೆ ಮುಗಿಸಿದಾಗ ಯಾತ್ರೆಗೆ ಮನಸ್ಸಾಯಿತು. ಮುಂಬಯಿಯಲ್ಲಿ ಅವನ ಚಿಕ್ಕಪ್ಪ ವಾಸವಾಗಿದ್ದರು.

ಮುಂಬಯಿಯಲ್ಲಿ ವಿಲಾಸವಸ್ತುಗಳಿಗೆ ಕಡಮೆಯಿಲ್ಲವೆಂದು ಜೀವನನ ಅಂಬೋಣ. ದೊಡ್ಡ ನಗರ, ಸ್ಟೂಡಿಯೋಗಳು, ನಟನಟಿಯರು, ಸಿನೆಮಾ ಕೇಂದ್ರಗಳು, ಸಮುದ್ರ ಮತ್ತು ಅದರಲ್ಲಿನ ತೆರೆಗಳು! ಅಹುದು. ಸಮುದ್ರವನ್ನು ನೋಡುವುದು ಜೀವನನ ಬಹುದಿನದ ಬಯಕೆಯಾಗಿತ್ತು.

ವಿಪರೀತ ಚಳಿಯಿದ್ದುದರಿಂದ, ಜೀವನ ತನ್ನ ಸ್ವೆಟ್ಟರಿನ ಕಿವಿಯನ್ನು ಮೇಲೆ ಮಾಡಿದ. ಬಹಳ ಅಭಿಮಾನದಿಂದ ಸಿಗರೇಟು ಹೊತ್ತಿಸಿದ. ಮನೆಯಲ್ಲಿದ್ದಾಗ ತಂದೆಯ ಹೆದರಿಕೆಯಿಂದ ಸಿಗರೇಟು ಸೇದುವ ಧೈರ್ಯವಿರಲಿಲ್ಲ.

ಈ ತನಕವೂ 'ದೊಡ್ಡ ಸಾಬಿ'ಯೆಂದೇ ಜೀವನನನ್ನು ಕರೆಯುತ್ತಿದ್ದ ಅವನ ಮನೆಯ ಹಳೆಯ ಡ್ರೈವರ್ ರಾಮಚರಣ, ಆತನನ್ನು ಸ್ಟೇಶನಿನ ತನಕ ತಲುಪಿಸಿ ಹಿಂದಿರುಗಿದ್ದ. ಜೀವನ ಸುತ್ತಿ ಸುತ್ತಿ ಬೇಸತ್ತ. ಬಳಿಕ ಕೂಲಿಯನ್ನು ಕರೆದು ತನ್ನ ಸಾಮಾನುಗಳನ್ನು ಗಾಡಿಯಲ್ಲಿಡಿಸಿದ. ಖಾಲಿ ಸೀಟಿನ ಮೇಲೆ ಹಾಸಿಗೆಯನ್ನು ಹಾಸಿ, ಹಣ ಪಡೆದುಕೊಂಡು ಕೂಲಿಯಾಳು ಹೊರಟುಹೋದ. ಜೀವನ ಕಿಟಕಿಯ ಬಳಿ ಕುಳಿತುಕೊಂಡ.

ಪ್ಲೇಟಫಾರ್ಮಿನ ಮೇಲೆ ಮೆಲ್ಲಮೆಲ್ಲನೆ ಗಲಭೆ ಗುಲ್ಲು ಹೆಚ್ಚತೊಡಗಿತು. ಸಿಗರೇಟಿನ ಹೊಗೆಯ ನೀಳವಾದ ಸುರುಳಿಯನ್ನು ಬಿಡುತ್ತಾ ಜೀವನ, ತಾನು ಏಕಾಕಿಯಾಗಿರುವುದನ್ನು ನೆನೆದು, ರಸಿಕರಾದವರಾರಾದರೂ ಜತೆಯಲ್ಲಿದ್ದರೆ ಯಾತ್ರೆಯು ಇನ್ನಷ್ಟು ಸೊಗಸಾಗುತ್ತಿತ್ತು—ಎಂದೆಣಿಸಿದ. ಗಾಡಿ ಆಗ ತಾನೇ ಹೊರಡುವುದರಲ್ಲಿತ್ತು.

ಅಷ್ಟರಲ್ಲಿ ಒಬ್ಬಾಕೆ ಯುವತಿ ಉಸಿರುಗಟ್ಟುತ್ತಾ ಓಡಿಬಂದಳು. ಕೂಲಿಯವನಿಂದ ಸಾಮಾನುಗಳನ್ನು ಒಳಗಿಡಿಸಿ, ಒಂದು ಸೀಟಿನ ಮೇಲೆ ಕುಳಿತುಕೊಂಡಳು.

ಜೀವನ ಚಂಚಲವಾದ ನೋಟದಿಂದ ಆಕೆಯನ್ನು ನೋಡಿದಾಗ ಆತನಿಗೆ ಸಂದೇಹವಾಯ್ತು. ಆಕೆ ಹೆದರಿದವಳಂತೆ ತೋರುತ್ತಿದ್ದಳು ಆದರೆ ಗಾಡಿ ಹೊರಟೊಡನೆ, ನೆಮ್ಮದಿಯಾದವಳಂತೆ ಸಮಾಧಾನದ ಉಸಿರ ಕರೆದು, ಸರಿಯಾಗಿ ಕುಳಿತುಕೊಂಡಳು. ಅಲ್ಲದೆ ಅವಳ ಕಂಪಾರ್ಟ್‌ಮೆಂಟಿನಲ್ಲಿ ಪರಕೀಯನೊಬ್ಬನಿರುವನೆಂದು ಪತ್ತೆಹಚ್ಚಿದವಳಂತೆ ಅವನ ಕಡೆಗೆ ದೃಷ್ಟಿ ಹರಿಯಿಸಿದಳು. ಬಳಿಕ ಕಿಟಕಿಯ ಮೂಲಕ ಹೊರಗೆ ನೋಡತೊಡಗಿದಳು.

ಅವಳು ಹೊರಗೆ ನೋಡುತ್ತಿದ್ದ ಸಮಯ ಸಾಧಿಸಿ ಜೀವನ, ಅವಳ ವೇಷ-ಭೂಷಣಗಳ ಕಡೆಗೆ ದೃಷ್ಟಿಯಿಟ್ಟ. ಬೆಳ್ಳಗಿನ ರೇಷ್ಮೆಯ ಸೀರೆ ಮತ್ತು ಕಡುಕೆಂಬಣ್ಣದ ಕೋಟು ಅವಳ ಶರೀರವನ್ನು ಆವರಿಸಿತ್ತು. ಕಾಲುಗಳಿಗೆ ಪಂಜಾಬೀ ಕ್ರಮದ ಕೆಂಪು ಪಾದರಕ್ಷೆಗಳು. ಕೂದಲಿನ ಭಾರವಾದ ಜಡೆ ಹೆಗಲಿನ ಮೇಲೆ ಜೋತಾಡುತ್ತಲಿತ್ತು. ಉಡಿಗೆ–ತೊಡಿಗೆಯಿಂದ ಆಕೆ ಒಬ್ಬ ಬಂಗಾಲೀ ಪರಿವಾರದವಳಂತೆ ತೋರಿಬಂದಳು. ಮುಖ ತಿರುಗಿಸಿ ಕೂತಿದ್ದುದರಿಂದ, ಅವಳ ಮುಖವನ್ನು ಆತ ಸರಿಯಾಗಿ ಕಂಡಿರಲಿಲ್ಲ. ಹೇಗಾದರೂ ಆಕೆಯೊಡನೆ ಮಾತನ್ನು ಪ್ರಾರಂಭಿಸಬೇಕೆಂದು ಮನಸ್ಸಿನಲ್ಲಿಯೇ ಯೋಚಿಸಿದ. ಹೀಗೆ ತಾನೇ ಪ್ರೇಮದ ಕತೆ ಪ್ರಾರಂಭವಾಗುವುದು! ಅದರಲ್ಲೂ ಒಬ್ಬ ಯುವತಿ ಮತ್ತು ಯುವಕ ಒಂದೇ ಕಂಪಾರ್ಟ್‌ಮೆಂಟಿನಲ್ಲಿ....! ಜೀವನ ಭಾವಜೀವಿಯಾದ ಯುವಕನಾಗಿ ಯೋಚಿಸಿದ.

ಅಕಸ್ಮಾತ್ತಾಗಿ ಯುವತಿಯು ಜೀವನನ ಕಡೆಗೆ ಮುಖ ತಿರುಗಿಸಿ "ತಾವು ಎಲ್ಲಿ ಹೋಗುತ್ತಿರುವಿರಿ?" ಎಂದಳು. ಜೀವನನ ತೊಂದರೆಯನ್ನು ಆಕೆ ಪರಿಹರಿಸಿದ್ದಳು. ಆದುದರಿಂದ "ನಾನು ಮುಂಬಯಿಗೆ ಹೋಗುತ್ತಲಿದ್ದೇನೆ. ತಾವು...." ಎಂದನು.

ಜೀವನನೂ ಅದೇ ಪ್ರಶ್ನೆ ಕೇಳಬಹುದೆಂದು ಆ ಯುವತಿ ಯೋಚಿಸಿರಲಿಲ್ಲ. ಮರೆಮಾಚುತ್ತ ಆಕೆ "ನಾನು....ನಾನು....ನನ್ನಲ್ಲಿ ಮುಂಬಯಿಯ ತನಕದ ಟಿಕೇಟಿದೆ. ಆದರೆ...." ಎನ್ನುತ್ತಾ ಅರ್ಧದಲ್ಲೇ ತಡೆದಳು.

ಜೀವನನಿಗೆ ಅತ್ಯಂತ ಆಶ್ಚರ್ಯವಾಯಿತು. ಈ ತನಕ ಎಲ್ಲಿಗೆ ಹೋಗಬೇಕೆಂಬುದನ್ನೇ ನಿರ್ಧರಿಸದವಳಂತೆ ಆಕೆಯ ಮಾತಿನ ಅರ್ಥವಾಗಿತ್ತು. ಮಾತಿನ ಶೈಲಿಯು ಬಂಗಾಳಿಯದಾದರೂ, ಆಕೆಯ ಹಿಂದುಸ್ತಾನೀ ಶುದ್ಧವಾಗಿತ್ತು. ಜೀವನನ ಉತ್ಸಾಹ ಕೆರಳಿತು.

* ಮೂಲ ಶ್ರೀಮತಿ ಪುಷ್ಪಾ ಬಯೋಜಾ ಅವರ ಹಿಂದಿನ ಕಥೆಯ ಅನುವಾದ.

ಹುಡುಗಿಯ ವರ್ಚಸ್ಸು ಅವನಿಗೆ ಅತ್ಯಂತ ಪ್ರಿಯವಾಯಿತು. ಅನಂತರ ಅವಳು ಅವನಲ್ಲಿ ಮಾತನ್ನೇ ಆಡದೆ, ಮುಖ ತಿರುಗಿಸಿ ಕುಳಿತುಬಿಟ್ಟಳು. ಜೀವನ ಕೈಯಲ್ಲೊಂದು ವೃತ್ತಪತ್ರಿಕೆಯನ್ನು ಹಿಡಿದು ಆಗಾಗ ಅವಳೆಡೆಗೆ ನೋಡತೊಡಗಿದ.

ಸ್ವಲ್ಪ ಸಮಯದ ಬಳಿಕ ಯುವತಿಯು ಕೋಟಿನ ಜೇಬಿನಿಂದ ಕರವಸ್ತ್ರವನ್ನು ತೆಗೆದು, ಕಣ್ಣುಗಳನ್ನು ಉಜ್ಜುತ್ತಿದ್ದಳು. ಮರುಕ್ಷಣದಲ್ಲಿ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಳಿಸತೊಡಗಿದಳು. ಗಾಡಿಯ ಶಬ್ದದೊಡನೆ ಆಕೆಯ ಬಿಕ್ಕಳಿಕೆಯ ದನಿ ಕೇಳಿಸದಿದ್ದರೂ, ನಡುಗುವ ಕೈಗಳನ್ನು ನೋಡಿದಾಗ ಆಕೆ ಅಳುತ್ತಿದ್ದಳೆಂದು ಸ್ಪಷ್ಟವಾಗುತ್ತಿತ್ತು. ಆ ಅಜ್ಞಾತ ಯುವತಿಗಾಗಿ ಮನಸ್ಸಿನಲ್ಲೇ ಅತ ಮರುಗತೊಡಗಿದ. "ಯಾವುದಾದರೂ ಕಷ್ಟಕ್ಕೆ ಸಿಲುಕಿರುವಳೆ? ಗಂಡನ ದುರ್ವರ್ತನೆಗಳಿಂದ ಹಿಂಸೆಗೊಳಗಾಗಿ ಮನೆಬಿಟ್ಟು ಓಡುತ್ತಿರುವಳೆ?........" ಜೀವನ ಹಲವು ರೀತಿಯಾಗಿ ಹಂಬಲಿಸತೊಡಗಿದ. ಹೆಚ್ಚೇನೂ ತಿಳಿದುಬಾರದಿದ್ದಾಗ, ಎದ್ದುನಿಂತು ಮೆಲ್ಲನೆ ಆಕೆಯ ಬಳಿಸಾರಿ "ಕ್ಷಮಿಸಿರಿ. ತಾವೇಕೆ ದುಃಖಿಸುವಿರೆಂಬುದನ್ನು ಆತ್ಮೀಯನಾಗಿ ನಾನು ಕೇಳಬಹುದೆ?" ಎಂದನು.

ಯುವತಿಯ ಬಿಕ್ಕಳಿಕೆ ಇನ್ನಷ್ಟು ಹೆಚ್ಚಿತು. ಸಹಾನುಭೂತಿಯನ್ನು ಪ್ರಕಟಗೊಳಿಸಿ ಜೀವನ "ಅಳುವುದರಿಂದ ನಿಮ್ಮ ಕಷ್ಟಗಳು ಹೇಗೆ ತಾನೆ ಪರಿಹಾರವಾಗಬೇಕು? ನಾನು ನಿಮಗೇನಾದರೂ ಸಹಾಯ ಮಾಡಲೆ?" ಎಂದನು.

ಬಾಡಿಹೋದ ಕಣ್ಣುಗಳಿಂದ ಜೀವನನ ಕಡೆಗೆ ನೋಡುತ್ತ ಯುವತಿಯು ತಲೆಯೆತ್ತಿದಳು. ಕಣ್ಣುಗಳನ್ನುಜ್ಜುತ್ತಾ ಸ್ನಾನಾಗಾರಕ್ಕೆ ಹೋದಳು. ಐದು ನಿಮಿಷಗಳ ಬಳಿಕ ಹಿಂದಿರುಗಿ ಬಂದಾಗ, ಆಕೆ ಸಾಕಷ್ಟು ಶಾಂತಳಾಗಿದ್ದಳು. ಜೀವನನ ಕಡೆಗೆ ನೋಟ ಬೀರಿ ತನ್ನ ಸ್ಥಾನದಲ್ಲಿ ಕುಳಿತುಬಿಟ್ಟಳು.

ಜೀವನ ಈ ತನಕ ನಿಂತೇ ಇದ್ದ. ಯುವತಿಯು ಅವನೊಡನೆ "ಕೂತುಕೊಳ್ಳಿ. ನಿಂತುಕೊಂಡೇ ಏಕೆ ಕಷ್ಟಪಡುವಿರಿ?" ಎಂದಳು. ಜೀವನ ಆಕೆಯ ಸಮೀಪ ಕುಳಿತುಕೊಂಡ. ಮೆಲ್ಲಮೆಲ್ಲನೆ ಯುವತಿಯು ತನ್ನ ಕತೆ ಹೇಳತೊಡಗಿದಳು. ಆಕೆಯ ಹೆಸರು ರೋಮಾ ಎಂಬುದು ಜೀವನನಿಗೆ ತಿಳಿದುಬಂತು. ಚಿಕ್ಕಂದಿನಲ್ಲೇ ಆಕೆಯ ತಂದೆ-ತಾಯಿಯರು ತೀರಿಕೊಂಡಿದ್ದರು. ಮಾವನು ಸಾಕಿ ಸಲಹಿದ. ಈಗ ಆಕೆ ಮನೆಯಲ್ಲೇ ಬಿ. ಎ. ಗೆ ಓದುತ್ತಿದ್ದಳು. ಆಕೆಯನ್ನು ಬಲಾತ್ಕಾರವಾಗಿ ಒಬ್ಬ ಜಮೀನ್ದಾರನೊಡನೆ ಮದುವೆ ಮಾಡಿಬಿಡಬೇಕೆಂದು ಮಾವ ಯೋಚಿಸಿದ್ದ. ಅವಳು ಈ ಮದುವೆಗೆ ಒಪ್ಪುವುದಾದರೂ ಹೇಗೆ ಸಾಧ್ಯ? ಮಾವನು ಶ್ರೀಮಂತನಾದ ಆ ಜಮೀನ್ದಾರನಿಂದ ರೂಪಾಯಿ ಗಿಟ್ಟಿಸಿಕೊಂಡು ಸೊಸೆಯ ಸುಖಕ್ಕೆ ಭಂಗ ತರುವುದರಲ್ಲಿದ್ದ. ರೋಮಾ ಬಹಳವಾಗಿ ಕೈಕಾಲು ಬಡಿದುಕೊಂಡರೂ ಅವಳ ಮದುವೆಯ ತಾರೀಖನ್ನು ನಿಶ್ಚಯಿಸಿ, ಆಕೆಯನ್ನು ಕೋಣೆಯಲ್ಲಿ ಬಂಧಿಸಿಟ್ಟರು. ಆದರೆ ತನ್ನ ಗೆಳತಿಯೊಬ್ಬಳ ಸಹಾಯಪಡೆದು ಆಕೆ ತಪ್ಪಿಸಿ ಬಂದಿದ್ದಳು. ಇಷ್ಟು ಹೇಳಿದ ರೋಮಾ ತನ್ನ ಮಾತುಗಳನ್ನು ಮುಗಿಸಿ ಶೇಖರವಾಗಿದ್ದ ಕಣ್ಣೀರನ್ನು ಒರೆಸತೊಡಗಿದಳು. ಜೀವನನ ಮನಸ್ಸು ಕರಗಿತು. ಇನ್ನೇನು? ಆತ ಯುವತಿಗೆ ಸಹಾಯ ಮಾಡುವುದು ಸಾಧ್ಯ! ಆದುದರಿಂದ

"ಈಗ ನೀವೇನು ಮಾಡುವಿರಿ?" ಎಂದನು.

"ಸ್ಥಿರಳಾಗಿ ಆಕೆಯೆಂದಳು: "ಮುಂಬಯಿಗೆ ಹೋಗಲು ತುಂಬಾ ಮನಸ್ಸಿದೆ. ಅಲ್ಲಿ ನನ್ನೊಬ್ಬ ಗೆಳತಿಯಿರುವಳು. ಅವಳೊಡನೆ ಇದ್ದು ಏನಾದರೂ ಕೆಲಸ ಹುಡುಕುತ್ತೇನೆ. ಅಲ್ಪಸಲ್ಪ ಹಾಡಲೂ ಬಲ್ಲೆನಾದುದರಿಂದ, ಫಿಲ್ಮಿನಲ್ಲಿ ಕೆಲಸ ದೊರೆತರೂ ದೊರೆಯಬಹುದು ........ಸರಿ. ಮಧ್ಯದಲ್ಲೇ ಮಥುರೆಯಲ್ಲೊಮ್ಮೆ ಕೆಲವು ಗಂಟೆಗಳ ಕಾಲ ತಂಗುತ್ತೇನೆ. ಅಲ್ಲಿ ಸ್ವರ್ಗಸ್ಥಳಾದ ನನ್ನ ತಾಯಿಯ ತಂಗಿ ಇರುವಳು. ಅವಳನ್ನು ಕಂಡು ಮತ್ತಿನ ಗಾಡಿಯಲ್ಲಿ ಮುಂಬಯಿ ಸೇರುತ್ತೇನೆ." ಎನ್ನುತ್ತಾ ಕಿಟಕಿಗೆ ಒರಗಿ ಆಯಾಸಗೊಂಡವಳಂತೆ ಕುಳಿತುಬಿಟ್ಟಳು.

ಜೀವನನು ಮುಗ್ಧನಾಗಿ ಆಕೆಯ ಮುಖವನ್ನು ನಿಟ್ಟಿಸುತ್ತಿದ್ದ. ಮುದ್ದುಮುಖ, ಸುಂದರವಾದ ಕಣ್ಣುಗಳು, ಚಳಿಯಿಂದ ಮುದುಡಿಕೊಂಡ ತುಟಿಗಳು, ಉದಾಸೀನ ಮುಖಮುದ್ರೆ. ಈ ವಯಸ್ಸಿನಲ್ಲೇ ಇಷ್ಟು ದೊಡ್ಡ ಕಷ್ಟ ಆ ಬಡವಿಯ ಮೇಲೆ ಬಿದ್ದಿತ್ತು. ಜೀವನ ದುಃಖಿಸತೊಡಗಿದ. ಶ್ರೀಮಂತರ ಮನೆಯ ಒಬ್ಬನೇ ಮಗನಾದುದರಿಂದ ಆತ ಕಷ್ಟಗಳಿಂದ ಬಹಳ ದೂರವಾಗಿದ್ದ. ಚಿಕ್ಕಂದಿನಲ್ಲಿ ದಾದಿಯ ಮನೆಯಲ್ಲಿ ಬೆಳೆದಿದ್ದ. ದೊಡ್ಡವನಾದೊಡನೆ ಟ್ಯೂಟರಿನ ಸಲಹೆಯಿತ್ತು. ತಾಯಿಯು ಸಮೀಪದಲ್ಲೇ ಕುಳಿತು ಉಣಬಡಿಸುತ್ತಿದ್ದಳು. ಗಂಟೆಗಂಟೆಗಳ ಕಾಲ ತಂದೆಯಿಂದ ವಿದ್ಯಾವಿಷಯಕ ಭಾಷಣಗಳಿರುತ್ತಿದ್ದುವು. ಅಲ್ಲದೆ ಕೋಣೆಯ ಯಾವತ್ತೂ ಸಾಮಾನುಗಳ ವ್ಯವಸ್ಥೆಗೆ ಚಾಕರಿಯವನಿದ್ದ. ಕಾಲೇಜು ವಠಾರದಲ್ಲಿ, ಹೋಟೆಲಿನಲ್ಲಿ ಇಲ್ಲವೆ ಸಿನೆಮಾಮಂದಿರದಲ್ಲಿ ಅವನಿಗೆ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯವಿರುತ್ತಿತ್ತು. ಕಾಲೇಜಿನಲ್ಲಿ ತನ್ನ ಬೇರಿಸ್ಟರ್ ತಂದೆಯ ಗೆಳೆಯರು ಹಲವು ಮಂದಿಯಿದ್ದರು. ಬ್ಯಾರಿಸ್ಟರ್ ಮಹಾಶಯರು ಸೂಚಿಸಿದ್ದಂತೆ ಪ್ರಿನ್ಸಿಪಾಲರೇ ಸ್ವತಃ ಜೀವನನನ್ನು ಕಣ್ಣಿಟ್ಟು ನೋಡುತ್ತಿದ್ದರು. ಜೀವನನಿಗೆ ಇದರಿಂದ ಅಸಮಾಧಾನವೇ ಆಗುತ್ತಿತ್ತು. ಅವನು ಇಪ್ಪತ್ತೆರಡು ವರ್ಷದ ಯುವಕನಾದ ಬಳಿಕವೂ, ಅವನ ತಂದೆ ಆತನನ್ನು ಮಗುವೆಂದೇ ತಿಳಿದಿದ್ದರು. ಜೀವನನ ಆಧುನಿಕ ಮನಸ್ಸು ಪ್ರೇಮಮಯವಾಗಿದ್ದು, ಆತ ಭಾವಜೀವಿಯಾಗಿದ್ದ. ಆದರೆ ಈ ಸುದ್ದಿ ತಂದೆಗೆ ತಿಳಿಯದಿರಲೆಂದು ಆತ ಕಾಲೇಜಿನ ಹುಡುಗಿಯರೊಡನೆ ಹೆಚ್ಚು ಸ್ವಾತಂತ್ರ್ಯದಿಂದ ಬೆರೆಯುತ್ತಿರಲಿಲ್ಲ. ಎಂ. ಎ. ಯಲ್ಲಿದ್ದಾಗ ಪರಮಾತ್ಮನು ಆರಿಸಿ ಕಳುಹಿಸಿದಂತಿದ್ದ ಇಬ್ಬರು ಹುಡುಗಿಯರು ಜೀವನನ ಕ್ಲಾಸಿನಲ್ಲಿದ್ದರು. ದಪ್ಪಗಿನ ಶರೀರದವಳೊಬ್ಬಳು, ಬೆಕ್ಕಿನಂತಹ ಕಣ್ಣುಗಳಿಗೆ ದಪ್ಪ ಕನ್ನಡಕವಿಡುತ್ತಿದ್ದಳು. ಇನ್ನೊಬ್ಬಳ ಮುಖದಲ್ಲಿ ಪರಕೀಯರನ್ನು ದಂಗುಬಡಿಸುವ ಲಕ್ಷಣಗಳಿದ್ದುವು. ಬೇರೆ ಕ್ಲಾಸಿನಲ್ಲಿ ಕೆಲವು ಒಳ್ಳೆಯ ಹುಡುಗಿಯರಿದ್ದರೂ, ಅಲ್ಲಿಯ ತನಕ ಜೀವನನ ದೃಷ್ಟಿ ಓಡುವುದು

ಸುಲಭವಾಗಿರಲಿಲ್ಲ. ಈದಿನ ಮೊತ್ತಮೊದಲಾಗಿ ಅವನು ಏಕಾಂತದಲ್ಲಿ ಒಬ್ಬ ಸುಂದರಿಯನ್ನು ಕಂಡಿದ್ದ. ಅವನ ಎದೆ ಜೋರಾಗಿ ಡಬಡಬನೆ ಬಡಿದುಕೊಳ್ಳುತ್ತಿತ್ತು. "ರೋಮಾ, ರೋಮಾ," ಎಂದು ಹಲವು ಬಾರಿ ಆತ ಮನಸ್ಸಿನಲ್ಲಿಯೇ ಎಂದುಕೊಂಡ. ಅಕಸ್ಮಾತ್ತಾಗಿ ಒಬ್ಬ ಬಂಗಾಲೀ ಮಹಿಳೆಯೊಡನೆ ತನಗೆ ಪ್ರೇಮನಾಯಿತೆಂದು ಆತ ಭಾವಿಸಿದ. ಪಂಜಾಬೀ ಹುಡುಗಿಯರೊಡನೆ ಆತನಿಗೆ ಆದರವಿರಲಿಲ್ಲ. ಅವರಲ್ಲಿ ಸೌಂದರ್ಯವೇನೋ ಇತ್ತು; ಆದರೆ ಅವರ ಅಂತರ್ಯದಲ್ಲಿ ಎಂತಹ ಮೋಸ ಹುದುಗಿದೆಯೆಂದು ತಿಳಿಯುವುದು ಆತನಿಗೆ ಕಷ್ಟವಾಗಿತ್ತು. ಯಾರಾದರೂ ಸಂಧಿಸಿದರೆ ಥಕ್ಕನೆ ದೃಷ್ಟಿ ತಿರುಗಿಬಿಡುತ್ತಿತ್ತು. ಹೆಗಲಮೇಲೆ ಶಾಲುಹೊದ್ದುಕೊಂಡ ಪಂಜಾಬೀ ಹುಡುಗಿಯರು ಕೆಲವರು, ಕಾಲೇಜಿನಲ್ಲಿ ಸ್ವೇಚ್ಛೆಯಿಂದ ತಿರುಗಾಡುತ್ತಿದ್ದರು. ಆದರೆ ಜೀವನ ಅವರ ಕಡೆಗೆ ಒಮ್ಮೆಯಾದರೂ ನೋಡುವ ಮನಸ್ಸು ಮಾಡಿರಲಿಲ್ಲ. ಭಾವುಕಹೃದಯವಾಗಲಿ ಚಿತ್ರಗಾರನ ಸೂಕ್ಷ್ಮ ಬುದ್ಧಿಯಾಗಲಿ ಇಲ್ಲದ ಪಂಜಾಬೀ ಹುಡುಗಿಯರು, ಪ್ರೇಮ ವ್ಯಾಪಾರಗಳಿಗೆ ಯೋಗ್ಯರಲ್ಲವೆಂಬುದು ಆತನ ನಂಬುಗೆಯಾಗಿತ್ತು. ಬಂಗಾಲೀ ಯುವತಿಯರ ನಡಿಗೆಯಲ್ಲಿ ಅಪೂರ್ವ ಲಾವಣ್ಯ ಮತ್ತು ಶರೀರದಲ್ಲಿ ಅಜಂತಾದ ಕಲೆಯ ದರ್ಶನವಿತ್ತು. ಆದುದರಿಂದ ಅವರು ಜೀವನನಿಗೆ ಹೆಚ್ಚು ಪ್ರಿಯರಾಗಿದ್ದರು. ಅವರು ಮಾತಾಡಿದರೆ ಹೂಗಳು ಉದುರಿದಂತೆ! ಕಾಲೇಜಿನಲ್ಲಿ ಸುಷುಮಾ ಎಂಬ ಒಬ್ಬಳು ಬಂಗಾಲೀ ಯುವತಿಯಿದ್ದಳು. ಅವಳ ಕಡೆಗೆ ಎಲ್ಲಾ ಹುಡುಗರ ದೃಷ್ಟಿಯಿರುವುದನ್ನು ಜೀವನ ಕಂಡುಕೊಂಡಿದ್ದ. ಮನಸ್ಸಿನಲ್ಲೇ ಅವನೂ ಆಕೆಯನ್ನು ಪ್ರೀತಿಸಿದ್ದ. ಆದರೆ ಅಷ್ಟರಲ್ಲೇ ಜೀವನ ಅಭಿಮಾನದಿಂದ ರೋಮಾಳ ಕಡೆ ನೋಡಿ, ಸುಷುಮೆಗಿಂತಲೂ ರೋಮಾ ಹೆಚ್ಚು ಸ್ಫುರದ್ರೂಪಿಯೆಂದು ಭಾವಿಸಿದ. ಜೀವನ ಶುದ್ಧ ಹಿಂದುಸ್ತಾನಿಯವನಾದರೂ, ಅವನು ಮನಸ್ಸಿನಲ್ಲಿ ಪ್ರೇಯಸಿಯ ಕಲ್ಪನೆ ಮಾಡಿಕೊಂಡಾಗಲೆಲ್ಲ ಆಕೆ ಒಬ್ಬಳು ಬಂಗಾಲೀ ಸುಂದರಿಯಾಗಿಯೇ ತೋರುತ್ತಿದ್ದಳು. ಈ ದಿನ ಆ ಕಲ್ಪನೆ ಮೂರ್ತೀಭವಿಸಿ ನಿಂತಿತ್ತು. ಅವನ ಜೀವನದಲ್ಲಿ ರೋಮಾಳೊಡನೆ ಸಂಧಿಸುವುದಕ್ಕಾಗಿಯೇ ಪರಮಾತ್ಮನು ಈ ಮುಂಬಯಿ ಪ್ರವಾಸದ ಇಚ್ಛೆಯನ್ನು ಮಾಡಿಸಿದಂತಿತ್ತು. ಜೀವನನ ಮನಸ್ಸಿನಲ್ಲಿ ಕೊಂಚ ತಳಮಳವಾಯಿತು.

ಬಹಳ ಹೊತ್ತಿನಿಂದ ಮೂಕಳಾಗಿದ್ದ ರೋಮಾ "ತಾವೇನು ಯೋಚಿಸುತ್ತಿರುವಿರಿ?" ಎಂದಳು.

"ಇಂತಹ ಪರಿಸ್ಥಿತಿಯಲ್ಲಿ ತಾವೇನು ಮಾಡುವಿರೆಂಬುದೇ ನನ್ನ ಚಿಂತೆ. ಮುಂಬಯಿಯಲ್ಲಿ ಕೆಲಸ ದೊರಕಿಸಿಕೊಳ್ಳುವುದು ಬಹಳ ಕಷ್ಟದ ಕೆಲಸ. ಅಲ್ಲದೆ ಸಿನೆಮಾ ಪ್ರಪಂಚದಲ್ಲಿ ಅಷ್ಟೇನೂ ಉತ್ತಮ ಸ್ಥಾನ ದೊರೆಯುವುದು ಸುಲಭವಲ್ಲ. ಮುಂಬಯಿಯಂತಹ ಪಟ್ಟಣದಲ್ಲಿ ತಾವು ಏಕಾಂಗಿನಿಯರಾಗಿ ಎಲ್ಲಿ ಸುತ್ತಾಡುವಿರಿ?" ಎನ್ನುತ್ತಾ ಜೀವನ ಬೆರಳು ಮುರಿದುಕೊಂಡ.

"ಇದನ್ನು ಯೋಚಿಸಿ ನಾನು ಸೋತು ಹೋಗಿದ್ದೆ. ಬಾಲ್ಯದಿಂದಲೇ ನಾನು ಭೀರುಪ್ರಕೃತಿಯವಳು. ಎಲ್ಲಿ ಹೋಗಲಿ? ಏನು

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ನೀಲಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು. ಮೈಸೂರು. ಮಂಗಳೂರು. ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಹಲ್ಲಿನ ಪೌಡರ್ ಉಪಯೋಗಿಸಿ

ಮಾಡಲಿ? ತಿಳಿಯದಾಗಿದೆ. ಆತ್ಮಹತ್ಯೆ ಮಾಡಿಕೊಳ್ಳಲೇ ಎಂಬ ಯೋಚನೆ ಬರುತ್ತಲಿದೆ. ತಂದೆ-ತಾಯಿಗಳು ನನ್ನನ್ನು ಬಿಟ್ಟು ಏಕೆ ತೀರಿಕೊಂಡರು?" ನೋವನ್ನನುಭವಿಸುವವಳಂತೆ ಹೇಳಿದಳು.

"ಛೆ, ಛೆ. ನೀವು ಹಾಗೆ ಭಾವಿಸಲಾಗದು." ಎನ್ನುತ್ತಾ ಜೀವನ ಆಕೆಯ ದೊಡ್ಡ ಎರಡು ಟ್ರಂಕು-ಪೆಟ್ಟಿಗೆಗಳ ಕಡೆಗೆ ನೋಡಿದ.

ಆತನ ಕಣ್ಣು ಆಕಡೆ ಹೊರಳಿದುದನ್ನು ಕಂಡು ರೋಮಾ—"ಓಡಿಬರುವಾಗ ಈ ಪೆಟ್ಟಿಗೆಗಳನ್ನು ನಾನು ಹೇಗೆ ತಂದೆನೆಂಬುದರ ಬಗ್ಗೆ ಬಹುಶಃ ತಾವು ಯೋಚಿಸುತ್ತಿರಬಹುದು. ನಾನು ನನ್ನ ಮತ್ತು ನನ್ನ ತಾಯಿಯಲ್ಲಿದ್ದ ಬೆಲೆಬಾಳುವ ಸಾಮಾನುಗಳನ್ನೆಲ್ಲಾ ಇವುಗಳಲ್ಲಿ ತುಂಬಿಸಿ, ಮೊದಲಾಗಿಯೇ ಒಬ್ಬಳು ಸಖಿಯಲ್ಲಿಗೆ ಕಳುಹಿಸಿಕೊಟ್ಟಿದ್ದೆ. ಆಗ ನನ್ನ ಮಾವ ನನ್ನನ್ನು ಬಂಧಿಸಿರಲಿಲ್ಲವಾದರೂ, ಈ ಪರಿಸ್ಥಿತಿ ಮುಂದೆ ಬರುವ ಲಕ್ಷಣ ನನಗಾಗಲೇ ತಿಳಿದಿತ್ತು."

"ಬಹಳ ಸರಿಯಾದುದನ್ನೇ ಮಾಡಿದಿರಿ." ಎನ್ನುತ್ತಾ ತನ್ನ ಕೈ ಬೆರಳಲ್ಲಿದ್ದ ಬಿಳಿಯ ಮುತ್ತಿನುಂಗುರವನ್ನು ತಿರುಗಿಸುತ್ತ, ಅದನ್ನು ರೋಮಾ ಸ್ವೀಕರಿಸಲಾರಳೆ—ಎಂದು ಯೋಚಿಸತೊಡಗಿದ. "ಮುಂಬಯಿಯಲ್ಲಿ ಆಕೆ ಕಷ್ಟಪಡುವಳು. ಸಿನೆಮಾ ಪ್ರಪಂಚದ ಮಾಲಿಕರನ್ನು ಸಂತೋಷಪಡಿಸುವಳು ಆಗ ಒಂದಲ್ಲ ಒಂದು ಕೆಲಸ ದೊರೆಯುವುದು. ಆದರೇನು? ಅವಳ ಜೀವನ ಹಾಳಾಗಿ ಹೋಗುವುದು! ಆದರೆ ಆತ ಹಿಂದುಸ್ತಾನೀ, ಈಕೆ ಬಂಗಾಳಿ! ತಂದೆ ಒಪ್ಪಿದರೂ ತಾಯಿ ಗಲಭೆಯೆಬ್ಬಿಸುವಳು. ರೋಮಾ ಬಂಗಾಲೀ ಹುಡುಗಿಯೆಂಬ ಸುದ್ದಿಯನ್ನೇ ಎತ್ತದಿದ್ದರೆ ಆ ತೊಂದರೆ ಹೋಗಬಹುದು. ಆದರೆ ಇದು ಹೇಗೆ ಸಾಧ್ಯ? ಮೀರತ್‌ನಲ್ಲಿಯೇ ಈ ಹುಡುಗಿಯ ಮಾವ ವಾಸವಾಗಿದ್ದರು. ಆದುದರಿಂದ ಒಂದಲ್ಲ ಒಂದು ದಿನ ಗುಟ್ಟು ರಟ್ಟಾಗುವುದು. ಅಲ್ಲದೆ ತಂದೆ-ತಾಯಿಯರು 'ಹುಡುಗಿಯ ಮನೆಯೆಲ್ಲಿ?' ಎಂದು ಕೇಳದಿರಲಾರರು. ಆದರೆ ರೋಮಾ—ಇದಕ್ಕೊಪ್ಪದಿದ್ದರೆ? ಹೀಗೆಲ್ಲ ಅಮಂಗಲವನ್ನೇಕೆ ಊಹಿಸಬೇಕೆಂದು ತಟಸ್ಥನಾಗಿ ಕುಳಿತು ಬಳಿಕ ಕೈಗಡಿಯಾರವನ್ನು ನೋಡುತ್ತ "ದಿಲ್ಲಿ ತೀರಸಮೀಪದಲ್ಲಿದೆ." ಎಂದ.

ಯುವತಿಯು ಸಮ್ಮತಿಸಿದವಳಂತೆ ತಲೆಯಾಡಿಸಿ, ಈ ತನಕ ತೆರೆದುಕೊಂಡಿದ್ದ ಕೋಟಿನ ಗುಂಡಿಗಳನ್ನು ಸಿಕ್ಕಿಸಿಕೊಂಡಳು.

“ಕಂಬಳಿ ಹೊದ್ದುಕೊಳ್ಳಿರಿ. ತಮಗೆ ಚಳಿಯಾಗುತ್ತಲಿದೆ.” ಜೀವನ ಸಲಹೆಯಿತ್ತ.

ರಮೆಯು ಕುಳಿತಲ್ಲಿಂದಲೇ ಪಾದರಕ್ಷೆಗಳ ಸಮೇತ ಕಾಲು ಮೇಲಕ್ಕೆಳೆದು ಹೆಗಲಿನತನಕ ಕಂಬಳಿಯನ್ನು ಮೇಲಕ್ಕೆಳೆದುಕೊಟ್ಟ. ಅವಳೇನೂ ಹೇಳದೆ ಚಿಂತೆಯ ಮುಖದಿಂದ ಕುಳಿತುಕೊಂಡಳು.

ಥಕ್ಕನೆ ಜೀವನನಿಗೆ ತನ್ನ ಥರ್ಮಸ್ ಫ್ಲಾಸ್ಕಿನಲ್ಲಿರಿಸಿದ್ದ ಚಾದ ನೆನಪಾಯಿತು. ಎದ್ದು ಹೋಗಿ ತನ್ನ ಸೀಟಿನ ಮೇಲೆ ಇರಿಸಿದ್ದ ಚಾದಾನಿಯನ್ನೆತ್ತಿಕೊಂಡ. ಬಿಸಿ ಬಿಸಿ ಚಾವನ್ನು ಕಂಚಿನ ಗ್ಲಾಸಿಗೆ ಬಸಿಯುತ್ತ “ಸ್ವಲ್ಪ ಚಾ ಕುಡಿದುಬಿಡಿ. ಚಳಿಯೆಲ್ಲ ದೂರ ಹೋಗುತ್ತದೆ” ಎಂದ. ಕೃತಜ್ಞತೆಯೊಡನೆ ಆಕೆ ಗ್ಲಾಸ್ ತೆಗೆದು ಕೊಂಡಳು. ಜೀವನ ತನಗಾಗಿ ಥರ್ಮಸ್ ಫ್ಲಾಸ್ಕಿನ ಮುಚ್ಚಳದಲ್ಲಿ ಚಾ ಸುರಿದುಕೊಂಡ. ರೋಮಾ ಕುಡಿದು ಮುಗಿಸಿದ ಬಳಿಕ, ಆಕೆಯ ಕೈಯಿಂದ ಗ್ಲಾಸ್ ತೆಗೆದುಕೊಳ್ಳುತ್ತಾ, ತೊಳೆಯುವುದಕ್ಕಾಗಿ ಸ್ನಾನ-ಗೃಹಕ್ಕೆ ಹೊರಡುವಷ್ಟರಲ್ಲಿ, ರೋಮಾ ಅಸಮಾಧಾನದ ಉಸಿರುಕರೆದು “ಛೆ, ನಾನೇ....” ಎಂದಳು.

“ನೀವು ಕುಳಿತಿರಿ. ಅದರಲ್ಲೇನು ಮಹಾ !....” ಎನ್ನುತ್ತಾ ಸ್ನಾನಗೃಹದ ಒಳಗೆ ಹೋದ. ಅಲ್ಲಿ ಗ್ಲಾಸ್ ತೊಳೆಯುತ್ತ ಯಾವುದೋ ಪ್ರೇಮಗೀತವನ್ನು ಗುಣುಗುಟ್ಟತೊಡಗಿದ. ಬಳಿಕ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿ ಮುಗುಳುನಗು ನಕ್ಕ. ಅವನು ನೋಡಲು ಚೆನ್ನಾಗಿದ್ದ. ಐದು ಅಡಿ ಎಂಟಂಚು ಎತ್ತರ. ಅಗಲವಾದ ಹಣೆ. ಮೋಹಕ ವರ್ಣ. ಸುಂದರವಾದ ಕಣ್ಣು-ಮೂಗುಗಳು. ರೋಮಾ ಮತ್ತು ಆತನ ಸಂಬಂಧ ಎಂದಿಗೂ ಹಾಳಾಗದು. ಆಚೀಚೆ ನೋಡಿ ತಿರುಗಿ ಆತ ತನ್ನ ಮುಖವನ್ನು ನಿರೀಕ್ಷಿಸಿಕೊಂಡ. ಬಳಿಕ ಸಂತೋಷದಿಂದ ಹೊರಗೆ ಬಂದು, ಥರ್ಮಸ್‌ಫ್ಲಾಸ್ಕ್ ಮತ್ತು ಗ್ಲಾಸುಗಳನ್ನು ಯಥಾಸ್ಥಾನದಲ್ಲಿರಿಸಿ, ತನ್ನ ಆಸನದಲ್ಲಿ ಕುಳಿತು ಪತ್ರಿಕೆಯ ಪುಟ ಮಗುಚತೊಡಗಿದ.

ಸ್ವಲ್ಪ ಸಮಯದಲ್ಲಿ ದಿಲ್ಲಿಯ ಬೆಳಕು ಕಾಣಬಂತು. ಪತ್ರಿಕೆಯನ್ನು ಬಿಟ್ಟು ಹೊರಗೆ ನೋಡುತ್ತ—

“ತಾವು ದಿಲ್ಲಿಯನ್ನು ನೋಡಿರುವಿರಷ್ಟೇ ?” ಎಂದ.

“ನೋಡಿರುವೆನಾದರೂ ಸಂಪೂರ್ಣ ನೋಡಿಲ್ಲ” ಎನ್ನುತ್ತಾ ರೋಮಾ ಹೊರಗೆ ನೋಡಿದಳು.

“ದಿಲ್ಲಿ ನೋಡಲು ಸುಂದರವಾಗಿದೆ.” ಜೀವನನೆಂದ.

ಲೈನುಗಳನ್ನು ಹಾದುಕೊಂಡು ಗಾಡಿ ದಿಲ್ಲಿ ಸ್ಟೇಶನ್ನಿಗೆ ಬಂತು.

ಜೀವನ ಗಡಿಯಾರವನ್ನು ನೋಡಿದಾಗ ಏಳುವರೆ ಗಂಟೆಯಾಗಿತ್ತು. ಹೊರಗೆಲ್ಲ ಕತ್ತಲು ಕವಿದಿತ್ತು. ಗಾಡಿಯು ಮೂರು ಗಂಟೆಗಳ ಕಾಲ ಅಲ್ಲಿ ತಂಗುವುದಿತ್ತು. ರೋಮಾಳಿಗೆ ಹೇಳದೆ ಜೀವನ ಕೆಳಗಿಳಿದು, ಎರಡು ಊಟಕ್ಕೆ ಹೇಳಿಬಂದ.

ಈ ತನಕ ಆ ಡಬ್ಬಿಯಲ್ಲಿ ಯಾರೂ ಬಂದಿರಲಿಲ್ಲ. ಗಾಡಿ ಮೂರು ಗಂಟೆಗಳ ತನಕ ಅಲ್ಲಿ ನಿಲ್ಲುವುದರಿಂದ, ಪ್ಲೇಟ್‌ಫಾರಮ್ಮಿನಲ್ಲಿ ಬಹಳ ಕಡಮೆ ಮಂದಿಯಿದ್ದರು. ಜೀವನ ಪ್ಲೇಟ್‌ಫಾರ್ಮಿನ ಮೇಲೆಯೇ ನಿಂತಿದ್ದ. ರೋಮಾ ಕಿಟಕಿಯ ಬಳಿ ಕುಳಿತಿದ್ದಳು. ಉದ್ದೇಶ-ಪೂರ್ವಕವಾಗಿ ಆಗಾಗ ಜೀವನ ರೋಮಾನ ಕಡೆಗೆ ನೋಡುತ್ತಲಿದ್ದ. ಅವಳು ಅವನನ್ನು ನೋಡುತ್ತಿದ್ದರೂ ಅವಳ ಮುಖವು ಮಾತ್ರ ವಿಷಾದದಲ್ಲಿ ಮುಳುಗಿದಂತಿತ್ತು.

ಸ್ವಲ್ಪ ಸಮಯದಲ್ಲೇ ಹೋಟೆಲುಮಾಣಿ ಊಟ ತಂದಾಗ, ಜೀವನ ಸನ್ನೆ ಮಾಡಿ ಒಳಗಿಡುವಂತೆ ಆಜ್ಞಾಪಿಸಿದ. ಆತ ಎರಡೂ ಊಟಗಳನ್ನು ರೋಮಾನ ಇದಿರಲ್ಲಿದ್ದ ಸೀಟಿನ ಮೇಲಿರಿಸಿ ಹೊರಟು-ಹೋದ.

ಆಯಾಸಗೊಂಡ ದೃಷ್ಟಿಯಿಂದ ಊಟದ ಕಡೆಗೆ ನೋಡಿ, ಜೀವನ-ನೊಡನೆ ರೋಮಾ “ನನಗೆ ಊಟ ಬೇಕಾಗಿಯೇ ಇರಲಿಲ್ಲ. ತಾವು ಅನಗತ್ಯವಾಗಿ ತೊಂದರೆಪಟ್ಟಿರಿ!” ಎಂದಳು.

ಕಿಟಕಿಯ ಬಳಿ ಬಂದು ಜೀವನ “ಇದರಲ್ಲಿ ತೊಂದರೆಯೇನು ? ಊಟವನ್ನಂತೂ ತಾವು ಮಾಡಲೇ ಬೇಕಾಗುವುದು.” ಎಂದನು. ರೋಮಾ ಒಂದು ನಿಮಿಷ ಆತನ ಕಡೆಗೆ ನೋಡುತ್ತಿದ್ದು, ಬಳಿಕ ಸಂಕೋಚಗೊಂಡವಳಂತೆ ಕಣ್ಣುಗಳನ್ನು ಇನ್ನೊಂದು ಬದಿಗೆ ತಿರುಗಿಸಿ ಬಿಟ್ಟಳು. ಜೀವನ ಸ್ವಲ್ಪ ಸಮಯ ಹಾಗೆಯೇ ನಿಂತುಕೊಂಡ. ಅಷ್ಟರಲ್ಲಿ ರೋಮಾ ಆತನನ್ನು ಕರೆದು “ಬನ್ನಿರಿ. ಊಟವನ್ನು ತಣಿ-ಸುತ್ತಿರುವಿರೇಕೆ ?” ಎಂದಳು. ಜೀವನ ಒಳಗೆ ಹೋದ. ಇಬ್ಬರೂ ತಮ್ಮ ತಮ್ಮ ಊಟ ಉಣ್ಣತೊಡಗಿದರು. ಆಕೆ ಬಹಳ ಕಡಮೆ ಉಣ್ಣುತ್ತಿರುವುದನ್ನು ಕಂಡು ಜೀವನ ಒತ್ತಾಯಪಡಿಸಿದ.

“ನೋಡಿ, ರೋಮಾಬಾಯಿಯವರೇ, ನೀವು ಇದನ್ನೆಲ್ಲಾ ಮುಗಿಸಬೇಕಾಗುವುದು. ಹೀಗೆ ಮಾಡಿದರಾಗದು.”

ಆಕೆ ಮೆಲ್ಲನೆ ಮುಗುಳ್ನಕ್ಕಳು. ಬಳಿಕ ಸರಿಯಾಗಿ ಊಟ-ಮಾಡುತ್ತ “ತಾವು ಇಂತಹ ಸೋಲಿನಲ್ಲಿದ್ದಾಗ ಮಾತ್ರ ತಮಗೆ ನನ್ನ ಕಷ್ಟ ತಿಳಿಯಬಹುದು.” ಎಂದಳು.

“ನಿಮಗಿಂತ ಹೆಚ್ಚು ನಿಮ್ಮ ಕಷ್ಟಗಳನ್ನು ನಾನು ತಿಳಿದು-ಕೊಂಡಿದ್ದೇನೆ. ಊಟ-ಪಾನೀಯಗಳನ್ನು ಬಿಡುವುದರಿಂದ ಪ್ರಯೋ-ಜನವೇನು ?” ಚಮಚದಲ್ಲಿ ಆಹಾರವನ್ನು ಹಿಡಿದುಕೊಂಡೇ ಆತ ಮಾತಾಡಿದ. ಅವಳು ಮರುನುಡಿಯದೆ ಉಣ್ಣತೊಡಗಿದಳು.

ಸ್ನಾನಗೃಹದಲ್ಲಿ ಕೈಬಾಯಿ ತೊಳೆದು ಕೈಒರಸುತ್ತಾ ರೋಮಾ ಹೊರಬಂದಾಗ, ಜೀವನ ನಿಟ್ಟಿಸಿ ನೋಡಿ, ಆಕೆ ಐದು ಅಡಿ ಎರಡಿಂಚು ಉದ್ದ ಇರಬಹುದೆಂದೂ ಶರೀರವು ಕೃಶವಾಗಿದ್ದು ಶೋಭಾಯಮಾನ-ವಾಗಿದೆಯೆಂದೂ ಕಂಡುಕೊಂಡ. ತೆಳ್ಳಗಿನ ಉಡುಗೆಯೊಳಗಿಂದ ಆಕೆಯ ಅಂಗರೇಖೆಗಳು ಸ್ಪಷ್ಟವಾಗಿ ತೋರಿಬರುತ್ತಿದ್ದುವು.

ಮೆಲ್ಲಮೆಲ್ಲನೆ ಪ್ಲೇಟ್‌ಫಾರಮ್ಮಿನಲ್ಲಿ ಜನಸಂದಣಿ ಹೆಚ್ಚಿತು. ತನ್ನ ಡಬ್ಬಿಗೆ ಯಾರೂ ಬಾರದಿರಲೆಂದೇ ಜೀವನನ ಪ್ರಾರ್ಥನೆ-ಯಾಗಿತ್ತು. ಆ ದಾರಿಯಾಗಿ ಯಾರಾದರೂ ಬಂದಾಗ, ಅದರೊಳಗೇ

ಬಂದುಬಿಡುವರೇ ಎಂಬ ಸಂದೇಹ ಆತನಿಗೆ ಬರುತ್ತಿತ್ತು. ಒಬ್ಬರು ಸೇಟ್‌ಮಹಾಶಯರು ಬಾಗಿಲಿನ ತನಕ ಬಂದು ನಿಂತೂ ಬಿಟ್ಟರು. ಆದರೆ ಅದೇನೋ ಕಾರಣದಿಂದ ಹಿಂದಕ್ಕೆ ಹೋಗಿಬಿಟ್ಟರು. ಜೀವನ ಅದಕ್ಕಾಗಿ ದೇವರಿಗೆ ವಂದನೆ ಸಲ್ಲಿಸಿದ.

ರೋಮಾ ಮೊದಲಿನಂತೆಯೇ ಕಿಟಕಿಯ ಬಳಿ ಕುಳಿತಿದ್ದಳು. ಗಾಡಿ ಹೊರಡುವ ವೇಳೆಯಾಗಿತ್ತು. ಹೋಟೆಲಿನ ಮಾಣಿ ಬಿಲ್ ತಂದು ಕೊಟ್ಟಾಗ, ಜೀವನ ಹಣಕೊಟ್ಟು ಕಳುಹಿಸಿದ. ರೋಮಾ ಆಕ್ಷೇಪಿಸುವ ನೋಟದಿಂದ ಜೀವನನ ಕಡೆಗೆ ನೋಡಿದಳು. ಪ್ರತಿಯಾಗಿ ಜೀವನ ದೃಷ್ಟಿಯಿಂದಲೇ ಏನನ್ನೋ ತಿಳಿಸುವವನಂತೆ ರೋಮಾಳನ್ನು ನೋಡಿದ. ಇಬ್ಬರೂ ಒಬ್ಬರನ್ನೊಬ್ಬರು ನೋಡುತ್ತಿದ್ದರು. ಗಾಡಿ ಸಿಳ್ಳು ಹಾಕಿತು. ಇಬ್ಬರೂ ಸ್ತಬ್ಧರಾದರು. ರೋಮಾ ಸಂಕೋಚಗೊಂಡಳು. ಆಕೆ ತನ್ನಡೆಗೆ ಸೆಳೆಯಲ್ಪಟ್ಟಳೆಂದು ಜೀವನ ಭಾವಿಸಿದ. ಗಾಡಿ ಹೊರಟಿತು. ಜೀವನ ಸಮಾಧಾನದ ಉಸಿರು ಕರೆದ. ಅವರ ಡಬ್ಬಿಗೆ ಯಾರೂ ಬಂದಿರಲಿಲ್ಲ.

ರೋಮಾನ ಬಳಿ ಕುಳಿತುಕೊಳ್ಳುತ್ತಾ ಜೀವನ ಪ್ರಶ್ನಿಸಿದ:

" ಮುಂಬಯಿಯಲ್ಲಿ ತಾವೆಲ್ಲಿ ತಂಗುವಿರಿ ? "

" ನಾನು ತಂತಿಕಳುಹಿಸಿದ್ದೇನೆ. ಯಾರಾದರೂ ಕರೆದೊಯ್ಯಲು ಬರಬಹುದು. ನನ್ನ ಗೆಳತಿಯೊಬ್ಬಳು ಫೋರ್ಟ್ ಏರಿಯಾದಲ್ಲಿ ವಾಸವಾಗಿರುವಳು. " ಎಂದಳು ರೋಮಾ.

ಜೀವನ ತನ್ನ ಮನೋಗತವನ್ನು ತಿಳಿಸಿಬಿಡಲೆ — ಎಂದು ಯೋಚಿಸತೊಡಗಿದ. ಆದರೆ ರೋಮಾ ಮೋಸ ಕೊಟ್ಟರೆ ? ಮೊದಲ ಬಾರಿಗೇ ಪ್ರಣಯದ ಪ್ರಸ್ತಾಪಕ್ಕೆ ಆತ ಕೈಹಚ್ಚಿದ್ದ. ರೋಮಾ ಒಂದು ಬಾರಿ ತಿರಸ್ಕರಿಸಿ ಬಿಟ್ಟರೆ ಅವನ ಹೃದಯವೇ ಒಡೆದು ಹೋಗುವುದು. ಗಾಡಿಯು ಭರ್ ಭರ್ ಶಬ್ದದೊಡನೆ ಮುಂದೋಡಲು, ಜೀವನನ ಮನಸ್ಸಿನಲ್ಲೂ ಗಲಭೆಯೆದ್ದಿತು. " ಹೇಳಲೆ ? ಹೇಳಲೆ ? " ಅವ್ಯಕ್ತವಾದೊಂದು ಶಕ್ತಿ ಅವನನ್ನು ತಡೆಯುತ್ತಿತ್ತು.

ರೋಮಾ " ತಾವೇನು ಯೋಚಿಸುತ್ತಿರುವಿರಿ ? " ಎಂದಳು ಆತ ಅಪ್ರತಿಭನಾದ. ರೋಮಾ ಮತ್ತು ಜೀವನರ ಪರಸ್ಪರ ಪರಿಚಯವು ಬಹಳ ಹಿಂದಿನದೆಂಬಂತೆ ಆತ ಭಾವಿಸಿಕೊಂಡ. ಅವಳು ಕೂಡ ಜೀವನನ ಹೇಳಿಕೆಯನ್ನು ಕೇಳಲು ಇದಿರು ನೋಡುತ್ತಿರುವಳೆಂದು ತಿಳಿದ. ಆತನಿಗೆ ಸ್ವಲ್ಪ ಹೇಳುವುದಕ್ಕಿತ್ತು. ಆದರೆ ಅರ್ಧದಲ್ಲೇ ತಡೆದುಹೋದ.

ಕೊನೆಗೆ ರೋಮಾ ಪ್ರಶ್ನಸೂಚಕವಾದ ದೃಷ್ಟಿಯಿಂದ ಆತನನ್ನು ನೋಡಿದಾಗ, ತನ್ನಲ್ಲಿದ್ದ ಸರ್ವಶಕ್ತಿಯನ್ನು ಒಂದುಗೂಡಿಸಿ.

" ರೋಮಾದೇವಿಯವರೇ, ನಿಮ್ಮ ಸ್ಥಾನದಲ್ಲಿ ನಾನಿರುತ್ತಿದ್ದರೆ ಯಾರದಾದರೂ ಸಹಾಯಪಡೆಯುತ್ತಲಿದ್ದೆ " ಎಂದನು.

ರೋಮಾ ಕರುಣರಸಭರಿತಳಾಗಿ " ಅದು ನನಗೆ ತಿಳಿದಿರಲಿಲ್ಲ. ಸಹಾಯ, ನನಗಾರು ಸಹಾಯ ಮಾಡುವರು ? " ಎಂದಳು.

ಜೀವನನ ಹೃದಯದ ಕಟ್ಟು ಒಡೆದುಹೋಯಿತು. ಭಾವುಕತೆಯಿಂದ ಆತ ಹೇಳಿದ: " ನಾನು ಸಹಾಯ ನೀಡಬಲ್ಲೆ. ಜೀವನದ


ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ಮುತ್ತಗಿ


ಕೊನೆಯ ವರೆಗೆ........ಬಹಳ ಕಾಲದ ವರೆಗೆ... ...... " ಎನ್ನುತ್ತಾ ಕಣ್ಣುಗಳನ್ನು ತಗ್ಗಿಸಿ ಸುಮ್ಮನಾದ.

ರೆಪ್ಪೆಯಿಕ್ಕದೆ ರೋಮಾ ಆತನೆಡೆಗೆ ನೋಡಿ ಇಳಿದನಿಯಲ್ಲಿ " ತಾವು ನನ್ನೊಡನೆ ಹಾಸ್ಯಮಾಡುತ್ತಿಲ್ಲವಷ್ಟೆ ? " ಎಂದಳು.

" ಹಾಸ್ಯವೆ ? ಛೆ, ಛೆ, ಹಾಗಿಲ್ಲ. ರೋಮಾಬಾಯಿಯವರೇ, ನಾನು ಗಂಭೀರವಾಗಿಯೇ ಹೇಳುತ್ತಲಿದ್ದೇನೆ. ಈ ರಾತ್ರಿಯು ವಿನೋದಕ್ಕೆ ಸಮಯವೆ ? ಇಂತಹ ಪರಿಸ್ಥಿತಿಯಲ್ಲಿ ತಮ್ಮನ್ನು ಹಾಸ್ಯ ಮಾಡುವುದೆ ? ಅಯ್ಯೋ ! ಯಾರು ತಾನೇ ಅಷ್ಟು ನಿಷ್ಠುರರಾಗುವರು ! " ಎನ್ನುತ್ತಾ ಜೀವನ ಗಾಡಿಯ ಹೊರಗಿನ ಕತ್ತಲೆಯನ್ನು ನಿಟ್ಟಿಸಿದ. ಚಳಿಗಾಳಿಯ ಹೊಡೆತದಿಂದ ನಡುಗುತ್ತ ರೋಮಾ— " ನನಗೆ ವಿಶ್ವಾಸ ಉಂಟಾಗುವುದಿಲ್ಲ " ಎಂದಳು.

" ರೋಮಾಬಾಯಿಯವರೇ, ಪೂರ್ಣವಿಶ್ವಾಸವಿಡಿರಿ. ಅದು ತಾನಾಗಿ ತಮ್ಮ ಮೇಲೆ ಬಿದ್ದಿದೆ. ಯಾವ ಕ್ಷಣದಲ್ಲಿ ನಾನು ತಮ್ಮನ್ನು ಈ ಡಬ್ಬಿಯಲ್ಲಿ ನೋಡಿದೆನೋ, ಆ ಕ್ಷಣವೇ ನಾನು ತಮ್ಮ ಪರಿಚಿತ ವ್ಯಕ್ತಿಯೆಂಬ ಭಾವನೆ ಬಂತು. ಮತ್ತೇನೆನ್ನಲಿ ?...ಹೇಳಿ. " ಎನ್ನುತ್ತಾ ಜೀವನನ ಸ್ವರ—ಚಳಿಯಿಂದಲ್ಲವಾದರೂ ಭಾವುಕತೆಯಿಂದ—ನಡುಗತೊಡಗಿತು. ರೋಮಾ ಕಣ್ಣಿಟ್ಟು ಆತನನ್ನು ನೋಡಿದಳು. ಮತ್ತು ನೋಡಿದಳು. ಬಳಿಕ ನಾಚುತ್ತಾ ಆಕೆ ತನ್ನ ಎರಡೂ ಕೈಗಳನ್ನು ಆತನ ಕಡೆ ನೀಡಿದಳು.

ಜೀವನ ತನ್ನ ಎರಡು ಕೈಗಳಿಂದಲೂ, ಆಕೆಯ ತಣ್ಣಗಿನ ಕೈಗಳನ್ನು ಅದುಮಿ ಹಿಡಿದ. ಆಕೆ ತಲೆತಗ್ಗಿಸಿ ಕುಳಿತಿದ್ದಳು ಜೀವನ ತನ್ನ ಕಿರುಬೆರಳಲ್ಲಿದ್ದ ಬಿಳಿಯಾದ ಮುತ್ತಿನ ಉಂಗುರವನ್ನು ಕಳಚಿ ರೋಮಾನ ಪವಿತ್ರ ಬೆರಳಿಗೆ ತೊಡಿಸಿದ. ಅದೇ ಬೆರಳಿಗಾಗಿ ರಚಿತವಾಗಿದ್ದಂತೆ ಆ ಉಂಗುರವು ಅವಳ ಬೆರಳಲ್ಲಿ ಒಪ್ಪಿತು. ಜೀವನ ಆಕೆಯ ಕೈಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಕುಳಿತುಬಿಟ್ಟ. ಆಕೆಯು ಮೊದಲಿನಂತೆ ತಲೆತಗ್ಗಿಸಿ ಸುಮ್ಮಗೆ ಕುಳಿತುಕೊಂಡಳು. ಸ್ವಲ್ಪ ಸಮಯದ ಒಳಗೆ ಭಾವನೆಯು ಅಮಲಿಳಿದು, ಜೀವನ ತನ್ನ

ಹುನೆಯ ಕುರಿತು ಹೇಳತೊಡಗಿದ: ತಂದೆಯನ್ನು ಒಪ್ಪಿಸುವ ಬಗೆ ಹೇಗೆ? ತಾಯಿಯನ್ನು ಹೇಗೆ ಸಮಾಧಾನಪಡಿಸಬಹುದು? ಇತ್ಯಾದಿ ವಿವರಿಸಿದ ಬಳಿಕ "ಈಗ ಮುಂಬಯಿಗೆ ಹೋಗುವೆವು. ಅಲ್ಲಿಂದ ತಂದೆಯವರಿಗೆ ಪತ್ರ ಬರೆಯುವೆ" ಎಂದ.

ಅಷ್ಟರಲ್ಲಿ ರೋಮಾ "ಆದರೆ, ನನಗೆ ಮಾತ್ರ ಕೆಲವು ಗಂಟೆಗಳ ಮಟ್ಟಿಗೆ ಮಥುರೆಯಲ್ಲಿ ಇಳಿಯುವ ಕೆಲಸವಿದೆ." ಎಂದು ನೆನಪು ಮಾಡಿದಳು.

"ಅದೇನೂ ದೊಡ್ಡ ವಿಷಯವಲ್ಲ. ನಾವಿಬ್ಬರೂ ಮಥುರೆಯಲ್ಲಿ ಇಳಿದುಬಿಡೋಣ. ನೀನು ಚಿಕ್ಕತಾಯಿಯನ್ನು ಕಂಡು ಬೇಗನೆ ಬಂದುಬಿಡು. ನಾವು ಬೆಳಗಿನ ಫ್ರಂಟೀಯರ್ ಮೈಲು ಹತ್ತಿ ಹೋಗೋಣ." ಎಂದು ಜೀವನ ಆಶ್ವಾಸನೆಯಿತ್ತ.

ರೋಮಾ ಬರೀ ತಲೆಯಲ್ಲಾಡಿಸಿದಳು. ಜೀವನ ಆಕೆಯ ಹೆಗಲ ಮೇಲೆ ಕೈಯಿಟ್ಟು "ರೋಮಾ, ಸ್ವಲ್ಪ ಮಾತಾಡು. ಈ ದಿನ ನಮ್ಮ ಹೊಸ ಜೀವನ ಪ್ರಾರಂಭವಾಗುತ್ತಲಿದೆ." ಎಂದ. ಆದರೆ ಅವಳೇನೂ ಮಾತಾಡಲಿಲ್ಲ. ಜೀವನನ ಎದೆಯ ಮೇಲೆ ತನ್ನ ತಲೆಯಿಟ್ಟು ಕಣ್ಮುಚ್ಚಿ ಕುಳಿತುಕೊಂಡಳು. ಆಯಾಸವಾಗಿದ್ದುದರಿಂದ ಅವಳಿಗೆ ನಿದ್ದೆ ಬರುತ್ತಿರಬಹುದೆಂದು ಆತನೆಣಿಸಿದ. ಆತ ಬಾಯ್ಮುಚ್ಚಿ ಕುಳಿತು ಯೋಚಿಸಿದ. ಹನ್ನೆರಡುವರೆ ಗಂಟೆಗೆ ಮಥುರೆಯ ನಿಲ್ದಾಣ ಬಂತು. ಜೀವನ ಮೆಲ್ಲಗೆ ರೋಮಾಳನ್ನು ಅಲ್ಲಾಡಿಸಿದ. ಆಕೆ ಬೆಚ್ಚಿದಳು. ಇಬ್ಬರೂ ಬೇಗಬೇಗನೆ ಹಾಸಿಗೆಯನ್ನು ಸುತ್ತಿ ಕೂಲಿಯನ್ನು ಕರೆದು ಸಾಮಾನು ಹೊರಿಸಿಕೊಂಡು ವೈಟಿಂಗ್‌ರೂಮಿಗೆ ಹೋದರು. ಜೀವನ ಉದ್ದವಾದ ಬೆಂಚಿನ ಮೇಲೆ ರೋಮಾನ ಹಾಸಿಗೆಯಿಟ್ಟು, ತನಗಾಗಿ ಆರಾಮಾಸನದೊಡನೆ ಒಂದು ಕುರ್ಚಿಯನ್ನು ಜೋಡಿಸಿ ಕಂಬಳಿ ಹಾಸಿದ.

ರೋಮಾ ನಿದ್ದೆತೂಗುತ್ತಾ ನಿಂತಿದ್ದಳು. ಜೀವನ ಆಕೆಯ ಕೈಗಳನ್ನು ಹಿಡಿದು ಹಾಸಿಗೆಯ ಮೇಲೆ ಮಲಗಿಸಿ, ಆಕೆಯ ಹಣೆಯನ್ನು ಕೈಯಿಂದ ಮೆಲ್ಲನೆ ಸವರುತ್ತಾ "ನಿದ್ದೆ ಮಾಡು. ರಾತ್ರಿಯಲ್ಲಿ ಗಾಬರಿಯಾಗುವ ಅಗತ್ಯವಿಲ್ಲ. ಬೆಳಗ್ಗೆದ್ದು ಚಿಕ್ಕತಾಯಿಯನ್ನು ಕಂಡು ಬಾ. ಫ್ರಂಟೀಯರ್ ಮೈಲ್ ಹತ್ತುಗಂಟೆಗೆ ಬರುವುದಷ್ಟೆ!" ಎಂದನು.

ಕತ್ತಲೆಯಲ್ಲಿ ಆಕೆ ಮುಗುಳ್ನಕ್ಕು ಮಲಗಿಕೊಂಡಳು. ಜೀವನ ಆರಾಮಾಸನದ ಮೇಲೆ ಮಲಗಿಕೊಂಡೇ ಹಲವಾರು ಸುಂದರ ಸ್ವಪ್ನಗಳನ್ನು ಕಾಣುತ್ತ ಎಚ್ಚರವಾಗಿದ್ದ. ಬಳಿಕ ಗಾಢನಿದ್ರೆಯಲ್ಲಿ ಮುಳುಗಿಬಿಟ್ಟ. ಅವನಿಗೆ ಯಾವುದೇ ವಿಷಯದ ಪರವೆಯಿರಲಿಲ್ಲ

ಬೆಳಗ್ಗೆ ಜೀವನ ಕಣ್ಣುತೆರೆದಾಗ ಹೊರಗೆ ಬಿಸಿಲು ಕಾದಿತ್ತು. ಗಡಿಯಾರ ನೋಡಿದಾಗ ಎಂಟುಗಂಟೆಯಾಗಿತ್ತು. ರೋಮಾನ ಹಾಸಿಗೆಯು ಖಾಲಿಯಾಗಿದ್ದುದನ್ನು ಕಂಡು ಆತನ ಕಣ್ಣುಗಳು ಸೋತುಕೊಂಡುವು. ಸ್ನಾನಗೃಹಕ್ಕೆ ಹೋಗಿರಬಹುದೆಂದೆಣಿಸಿದ. ಸ್ವಲ್ಪ ಸಮಯ ಆಲಸ್ಯ ಹಿಡಿದವರಂತೆ ಬಿದ್ದುಕೊಂಡ. ಅರ್ಧಗಂಟೆ ಕಳೆದರೂ ರೋಮಾ ಬಾರದಿರಲು, ಕಂಬಳಿಯನ್ನು ಬದಿಗೆಸೆದು ಎದ್ದು ಕುಳಿತ. ಸ್ನಾನಗೃಹಕ್ಕೆ ಹೋದಾಗ ಅಲ್ಲಿ ಯಾರೂ ಇರಲಿಲ್ಲ. ಪ್ಲೇಟ್‌ಫಾರಮ್‌ನ ಮೇಲೂ ರಮೆಯನ್ನು ಕಾಣದಿರಲು ಜೀವನ ತಾನು ನಿದ್ದೆಯಲ್ಲಿದ್ದಂತೆಯೇ ಆಕೆ ಚಿಕ್ಕತಾಯಿಯನ್ನು ಕಾಣಲು ಹೋಗಿರಬಹುದೆಂದು ಯೋಚಿಸಿದ. ನಿಶ್ಚಿಂತನಾಗಿ ಸ್ನಾನಗೃಹದೊಳಗೆ ಪ್ರವೇಶಿಸಿದ. ಕೈಬಾಯಿ ತೊಳೆದು ಆತ ಸಿದ್ಧನಾದ. ರೋಮಾ ಬಾರದಿರುವುದನ್ನು ಕಂಡು ಹಾಸಿಗೆಯನ್ನು ಮಡಿಚತೊಡಗಿದ. ವೈಟಿಂಗ್‌ರೂಮಿನಲ್ಲಿ ವಿಚಿತ್ರವಾದೊಂದು ವಾಸನೆ ಬರುತ್ತಿತ್ತು. ಆದರೆ ಅದರೆಡೆಗೆ ಲಕ್ಷ್ಯವಿಡದೆ, ಆಕೆ ಬಂದೊಡನೆ ಚಾ ಕುಡಿಯುವುದೆಂದು ಆಲೋಚಿಸಿದ. ವೈಟಿಂಗ್‌ರೂಮಿನಿಂದ ಹೊರಟು ಹೊರಗೆ ಬಿಸಿಲಿನಲ್ಲಿ ಬಂದು ನಿಂತುಕೊಂಡ. ಒಂಬತ್ತುವರೆ ಗಂಟೆ ಹೊಡೆದಿತ್ತು. ಜೀವನ ಬಿಸಿಲಲ್ಲಿ ಕಾದಿದ್ದ. ಈ ತನಕ ರೋಮಾನ ಸುಳಿವಿರಲಿಲ್ಲ. ನಿರಾಶನಾಗಿ ಚಹದಂಗಡಿಯಿಂದ ಎರಡು ಕಪ್ ಚಾ ತರಿಸಿ ಕುಡಿದ.

ಹತ್ತುಗಂಟೆ ಹೊಡೆಯುವುದರಲ್ಲಿತ್ತು. ಟ್ರೈನಿನ ಸಮಯ ಸಮೀಪಿಸುತ್ತಿತ್ತು. ಜೀವನ ಕೂಲಿಯವನನ್ನು ಕರೆದು ಎಲ್ಲಾ ಸಾಮಾನುಗಳನ್ನು ಪ್ಲೇಟ್‌ಫಾರಮ್ಮಿನ ಮೇಲೆ ಇಡಿಸಿದ. ರೋಮಾ ಸಮಯಕ್ಕೆ ಸರಿಯಾಗಿ ಬಂದುಬಿಟ್ಟರೆ ಥಕ್ಕನೆ ಗಾಡಿ ಹತ್ತಿಬಿಡಬಹುದೆಂದು ಆತನ ಆಶೆಯಾಗಿತ್ತು.

ಪ್ಲೇಟ್‌ಫಾರಮ್ಮಿನಲ್ಲಿ ಜನಸಂದಣಿ ಹೆಚ್ಚುತ್ತಿತ್ತು. ರೋಮಾ ಸಮಯಕ್ಕೆ ಸರಿಯಾಗಿ ಬಂದೇಬರುವಳೆಂಬ ನಂಬಿಕೆ ಜೀವನನಿಗಿತ್ತು.

ಯಾರೋ ಸಾಕಿದ ಸಣ್ಣ ನಾಯಿಯೊಂದು ಸಮೀಪದಲ್ಲೇ ಸುಳಿದಾಡಿತು. ಹತ್ತಿರದಲ್ಲೇ ಬೆಂಚಿನ ಮೇಲೆ ಕುಳಿತಿದ್ದ ಪೋಲಿಸ್ ಇನ್ಸ್‌ಪೆಕ್ಟರರೊಬ್ಬರು ಬಿಸಿಲಿನ ಸವಿಯನ್ನು ಉಣ್ಣುತ್ತಿದ್ದರು. ನಾಯಿಯು ಆಗಾಗ ಬಂದು ಜೀವನನ ಸಾಮಗ್ರಿಗಳನ್ನು ಮೂಸಿದಾಗಲೆಲ್ಲ ಆತ ಅದನ್ನು ಓಡಿಸುತ್ತಿದ್ದ. ನಾಯಿಯು ಪೋಲೀಸಿನವನದಾಗಿತ್ತೆಂಬುದನ್ನು ಅದರ ಕುತ್ತಿಗೆಯಲ್ಲಿದ್ದ ಪಟ್ಟಿಯು ತಿಳಿಸುತ್ತಿತ್ತು. ಅದು ಓಡೋಡಿ ಬಂದು ಸುತ್ತುತ್ತಾ ಪೆಟ್ಟಿಗೆಯನ್ನು ಮೂಸಿಕೊಂಡು ನಿಲ್ಲುತ್ತಿತ್ತು. ಅದರ ಚೇಷ್ಟೆಗಳನ್ನು ಕಂಡು ಜೀವನನಿಗೆ ಸಿಟ್ಟು ಬರುತ್ತಿತ್ತು. ರೋಮಾ ಬಾರದಿದ್ದ ಬೇಸರವೂ ಆತನನ್ನು ಆವರಿಸಿಕೊಂಡಿತ್ತು.

ನಾಯಿಯು ಕೊನೆಗೆ ಇನ್ಸ್‌ಪೆಕ್ಟರನ ಅಗಲಿಸಿಟ್ಟ ಕಾಲುಗಳ ಬಳಿಗೆ ಹೋಗಿ ನಿಂತು, ನಾಲಗೆಯನ್ನು ಹೊರಗೆ ಹಾಕುತ್ತ ತಿರುಗಿ ಪೆಟ್ಟಿಗೆಯ ಬಳಿಗೆ ಬಂತು. ಜೀವನನಿಗೆ ಆ ವಿಚಿತ್ರವಾದ ನಾಯಿಯನ್ನು ಕಂಡು ಅಸಮಾಧಾನವಾಯಿತು. ಕಣ್ಣು ಕೆರಳಿಸಿ ನಾಯಿಯ ಯಜಮಾನನ ಕಡೆಗೆ ನೋಡಿದ.

ಇನ್ಸ್‌ಪೆಕ್ಟರನು ನಾಯಿಯ ಈ ವಿನೋದವನ್ನು ನೋಡುತ್ತಿದ್ದ. ಕರೆದ ಕೂಡಲೇ ನಾಯಿಯು ಅವನ ಸಮೀಪದಲ್ಲಿ ಹೋಗಿ ನಿಂತಿತು. ಆದರೆ ಜೀವನನ ಸಾಮಾನುಗಳ ಕಡೆಗೆ ಮುಖಮಾಡಿ ಬೊಗಳತೊಡಗಿತು. ಅದೇಕೋ ಏನೋ, ಇನ್ಸ್‌ಪೆಕ್ಟರನು ಎದ್ದು ಜೀವನನ ಬಳಿಗೆ ಬಂದು ಇಂಗ್ಲೀಷಿನಲ್ಲಿ "ಈ ಟ್ರಂಕುಗಳಲ್ಲಿ ಏನಿದೆ?" ಎಂದ.

ಜೀವನ ದಿಟ್ಟತನದಿಂದ "ಬಟ್ಟೆಗಳಿವೆ. ಮತ್ತೇನು ?" ಎಂದು ಉತ್ತರಿಸಿದ.

ಇನ್ಸ್‌ಪೆಕ್ಟರನು ರೋಮಾಯ ಟ್ರಂಕುಗಳನ್ನು ಕಾಲಿನಿಂದ ಒದೆದು "ಇವುಗಳಲ್ಲೇನಿದೆ ? " ಎಂದ. ಜೀವನ ಸಂಕೋಚಗೊಳ್ಳದೆ "ನನ್ನ ಹೆಂಡತಿಯ ಬಟ್ಟೆಗಳಿವೆ" ಎಂದನು.

ಇನ್ಸ್‌ಪೆಕ್ಟರನ ನಾಯಿಯು ತನ್ನ ಯಜಮಾನನ ಕಾಲ ಬುಡದಲ್ಲಿ ನಿಂತಿತ್ತು. ಅದು ಪುನಃ ಟ್ರಂಕುಗಳನ್ನು ಮೂಸಿ ಕುಂಯು ಕುಂಯು ಎನ್ನತೊಡಗಿತು. ಇನ್ಸ್‌ಪೆಕ್ಟರನು ಜೀವನನೊಡನೆ "ನನಗೀ ಪೆಟ್ಟಿಗೆಗಳನ್ನು ತೆರೆದು ನೋಡಬೇಕಾಗಿದೆ." ಎಂದನು.

ಮನಸ್ಸಿನಲ್ಲೇ ಜೀವನ ಸಿಡಿಮಿಡಿಗೊಂಡ. 'ಪೋಲೀಸರು ಎಂತಹ ಉಪದ್ರವದವರಪ್ಪ' ಎಂದು ಯೋಚಿಸುತ್ತ "ಇವುಗಳ 'ಕೀ' ಆಕೆಯ ಬಳಿಯಲ್ಲಿವೆ. ಅವಳೀಗ ತಾನೇ ಬರುವಳು." ಎಂದನು. ಇನ್ಸ್‌ಪೆಕ್ಟರನು ಸಂಶಯದ ನೋಟದಿಂದ ಜೀವನನ ಕಡೆಗೆ ನೋಡಿದ.

ಜೀವನ ಅವನ ಶಂಕಾಬುದ್ಧಿಯನ್ನು ಕಂಡು ನಗಾಡಿದ. ಆಗಾಗ ಗಡಿಯಾರವನ್ನು ನೋಡುತ್ತ ಪ್ಲೇಟ್‌ಫಾರ್ಮಿನ ಮೇಲೆ ಕಣ್ಣೋಡಿಸುತ್ತಿದ್ದ. ಗಾಡಿ ಬರುತ್ತಲಿತ್ತು. ರೋಮಾ ಬರುವ ತನಕ ಆತ ಗಾಡಿಯೇರುವುದು ಸಾಧ್ಯವಿರಲಿಲ್ಲ. ಗಾಡಿಯೇರಿದರೂ ರೋಮಾನ ಸಾಮಾನುಗಳಿಗಾರು ಗತಿ? ಹೀಗಾಗಿ ಜೀವನ ಈಗ ಸೋತು ಹೋಗಿದ್ದ.

ಅಡ್ಡಾಡುತ್ತಾ ಆಚೆ ಹೋಗಿದ್ದ ಇನ್ಸ್‌ಪೆಕ್ಟರರು ಆಗಲೇ ತಿರುಗಿ ಬಂದರು. ಈಗ ಅವರೊಡನೆ ಒಬ್ಬ ಕಾನ್ಸ್ಟೇಬಲನೂ ಇದ್ದನು. ಇನ್ಸ್‌ಪೆಕ್ಟರರು :

"ಮಿಸ್ಟರ್, ಈ ಟ್ರಂಕು ತೆರೆಯಿರಿ." ಎಂದರು. ಜೀವನ ಗಡಿಯಾರವನ್ನು ನೋಡುತ್ತಾ "ನನ್ನ ಹೆಂಡತಿ ಬರುವ ತನಕ ಕಾಯುವಿರಾ ?" ಎಂದ. ಇನ್ಸ್‌ಪೆಕ್ಟರರು ಸ್ವಲ್ಪ ತೀವ್ರಸ್ವರದಲ್ಲಿ "ನಾನು ನಿಮ್ಮ ಹೆಂಡತಿಯ ಬರವನ್ನು ಕಾಯುತ್ತಾ ಸುಮ್ಮನಿರಲಾರೆ. ನಾನೀಗ ತಾನೇ ಈ ಗಾಡಿಯಲ್ಲಿ ಹೋಗಬೇಕು" ಎಂದರು.

"ಹಾಗಾದರೆ ತಾವು ಬೀಗವನ್ನೇ ಮುರಿದು ಬಿಡಿರಿ. ನಿಮ್ಮ ವಿಷಯವೂ ತಿಳಿದ ಹಾಗಾಯಿತು" ಜೀವನನ ಕಟುವಾದ ಉತ್ತರ ಹೊರಟಿತು.

ಇನ್ಸ್‌ಪೆಕ್ಟರರು ಸಿಪಾಯಿಗೆ ಸನ್ನೆ ಮಾಡಿದರು. ಎರಡು ಮೂರು ನಿಮಿಷಗಳಲ್ಲಿ ಆತ ಎರಡೂ ಬೀಗಗಳನ್ನು ಮುರಿದುಬಿಟ್ಟ. ಇನ್ಸ್‌ಪೆಕ್ಟರರು ತಮ್ಮ ಕೈಯಿಂದಲೇ ಒಂದು ಕರಡಿಗೆಯ ಮುಚ್ಚಳ ತೆಗೆದರು. ಥಕ್ಕನೆ ದುರ್ಗಂಧವೊಂದು ಹೊರಹೊರಟಿತು ! ಇನ್ಸ್‌ಪೆಕ್ಟರರು ಜೀವನನ ಕಡೆಗೆ ನೋಡಿದರು. ಆತನಿಗೆ ಆಗಲೇ ಪಿಶಾಚಿ ಬಡಿದಂತಿತ್ತು. ಅವನಿಗೆ ತನ್ನ ಕಣ್ಣುಗಳ ಮೇಲೆ ನಂಬಿಕೆ ಬರಲಿಲ್ಲ.


ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ

● ಉತ್ತಮ ಚಿತ್ರಗಳ ಮೂಲಕ

● ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್

ಗಾಂಧಿಚೌಕ, ಧಾರವಾಡ


ಇನ್ಸ್‌ಪೆಕ್ಟರರು ಇನ್ನೊಂದು ಪೆಟ್ಟಿಗೆಯನ್ನು ತೆರೆದರು. ಆ ಪೆಟ್ಟಿಗೆಯಿಂದಲೂ ಅದೇ ವಾಸನೆ !! ಟ್ರಂಕುಗಳಲ್ಲಿ ಒಬ್ಬ ಮನುಷ್ಯನ ಹೆಣದ ತುಂಡುಗಳಿದ್ದುವು !!! ಇನ್ಸ್‌ಪೆಕ್ಟರರು ಸಿಟ್ಟಿನಿಂದ "ಇದೇ ತಾನೇ ನಿಮ್ಮ ಹೆಂಡತಿಯ ಬಟ್ಟೆಗಳು ?" ಎಂದರು.

ಜೀವನನನ್ನು ತಂತುಮಾಡಿದರೂ ಆಗ ರಕ್ತ ಬರುವಂತಿರಲಿಲ್ಲ. ಹಣೆಯಲ್ಲಿ ಬೆವರಿಳಿಯುತ್ತಿತ್ತು. ಬುದ್ಧಿ ಗರ್ರನೆ ತಿರುಗುತ್ತಿತ್ತು. ಆತ ಅಪರಾಧಿಯಂತೆ ಸುಮ್ಮಗೆ ನಿಂತ. ಅಚೀಚೆಗಿನ ಜನರು ಒಟ್ಟಾಗಿದ್ದರು. ಯಾರೋ ಒಬ್ಬ ಹೇಳುತ್ತಿದ್ದ:

"ಈ ದಿನ ಏನೊ ಕೇಳಬೇಡಿ. ಸೂಟ್ ಪೇಂಟ್ ಧರಿಸಿದ ಮಹಾನುಭಾವರವರು !"

ಜೀವನ ಇನ್ಸ್‌ಪೆಕ್ಟರರಲ್ಲಿ ಇಂಗ್ಲಿಷ್‌ನಲ್ಲಿ

"ಇವು ನನ್ನ ಹೆಂಡತಿಯ ಟ್ರಂಕುಗಳಲ್ಲ !" ಎಂದನು. ಇನ್ಸ್‌ಪೆಕ್ಟರರು ಮುಗುಳು ನಗುತ್ತ

"ಈಗ ಹೇಗೆ ತಾನೇ ಅವುಗಳು ನಿಮ್ಮ ಹೆಂಡತಿಯ ಪೆಟ್ಟಿಗೆಗಳಾದಾವು ?" ಎಂದರು.

ಜೀವನ ಇಳಿದನಿಯಲ್ಲಿ "ತಾವು ನನ್ನ ಮಾತುಗಳನ್ನು ಸಂಪೂರ್ಣ ಕೇಳುವಿರಾ ?" ಎಂದನು.

"ಮೊದಲು ತಮ್ಮ ನಂಬ್ರವನ್ನು ನ್ಯಾಯಸ್ಥಾನದಲ್ಲಿ ದಾಖಲು ಪಡಿಸಬೇಕಾಗಿದೆ." ಇನ್ಸ್‌ಪೆಕ್ಟರರು ವ್ಯಂಗ್ಯವಾಗಿ ಮಾತಾಡಿ ಟ್ರಂಕನ್ನು ಎತ್ತಿಹಿಡಿದರು.

ಜೀವನ ಅವರ ಸಂಗಡ ಹೋದನು. ತಾನು ಹುಚ್ಚನಾಗಿ ಬಿಡುವೆನೆಂಬಂತೆ ಆತನಿಗೆ ತೋರಿತು. ಅವನ ಹಿಂದಿನಿಂದ ಗುಂಪುಗುಂಪಾಗಿ ಬರುತ್ತಿದ್ದ ಜನರು

"ಕೊಲೆಪಾತಕಿಯೆಂದು ತೋರುವುದು. ನೋಡೋಣ. ಮುಂದೆ ಏನೇನು ಸಂಗತಿಗಳು ಹೊರಬೀಳುವವೋ ನೋಡೋಣ !" ಎನ್ನುತ್ತಿದ್ದರು.

# ಮಹಾತ್ಮಾ ಕಬೀರದಾಸ

( ಜೀವನಮಹತ್ತ್ವ )

ಕು. ಚಂದ್ರಿಕಾ ಅನಂತರಾವ ಕೊಪ್ಪರ, ಹಳಿಯಾಳ

卐

**ಭಾರತದ ಚರಿತ್ರೆಯಲ್ಲಿ ಮತ-ಮತಗಳಲ್ಲಿ ಮಸಗಿದ ಕಲಹಗಳನ್ನೂ ಕಾಣುವೆವು; ಅವುಗಳನ್ನು ಅಡಗಿಸಲು ಹೆಣಗಿದ ಮಹಾತ್ಮರ ಉದಯಗಳನ್ನೂ ಕಾಣುವೆವು. ಮಹಾತ್ಮಾ ಕಬೀರರೂ ಅಂತಹ ಶಾಂತಿಸ್ಥಾಪಕರಲ್ಲಿ ಒಬ್ಬರು.**

卐

'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂಬ ಪರಮಾತ್ಮನ ವಚನವನ್ನು ನಾವು ಇಂದಿನವರೆಗೆ ಸತ್ಯವಾಗಿ ಕಾಣುತ್ತಿದ್ದೇವೆ. ಇದಕ್ಕೆ ಕಾರಣ, ದೇಶದಲ್ಲಿ ಯಾವುದೊಂದು ಬಗೆಯ ಕೋಲಾಹಲವುಂಟಾದಾಗ ಮಹಾಪುರುಷರು ಜನ್ಮತಾಳಿ, ಎದುರುಗೊಂಡ ಸಮಸ್ಯೆಗಳನ್ನು ಪವಾಡದಂತೆ ನಿವಾರಿಸಿ, ಈ ವಚನದ ಸತ್ಯತೆಯನ್ನು ಮನಗಾಣಿಸಿರುವರು. ಯಾವುದೊಂದು ಮತಧರ್ಮವು ಸ್ಥಾಪನವಾದಾಗ ಅದು ಉಚ್ಚವಿಚಾರ, ಉಚ್ಚಧ್ಯೇಯ, ವ್ಯಾಪಕ ದೃಷ್ಟಿಕೋನವನ್ನಿಟ್ಟುಕೊಂಡೇ ಪ್ರಾರಂಭವಾಗುತ್ತದೆ. ಆದರೆ ಹರಿಯುವ ನಿರ್ಮಲ ನೀರು ನಿಂತಾಗ ಕೊಳೆಯುವಂತೆ, ಮತಧರ್ಮದಲ್ಲಿ ಕಾಲಕ್ಕನುಸಾರವಾಗಿ ಸುಧಾರಣೆಯಾಗದಿದ್ದಾಗ, ಅನೇಕ ಸ್ವಾರ್ಥಸಾಧುಗಳು ಅದನ್ನು ತಮ್ಮ ಉಪಜೀವನದ ಸಾಧನೆಯನ್ನಾಗಿ ಮಾಡಿಕೊಳ್ಳುತ್ತಾರೆ. ಆಗಲೇ ಆ ಮತಧರ್ಮವು ಅಪವಿತ್ರವಾಗುವುದು. ಶುಭ್ರವಸ್ತ್ರವನ್ನು ಮೇಲಿಂದಮೇಲೆ ಶುಚಿಗೊಳಿಸುವುದು ಅವಶ್ಯಕವಾಗುವಂತೆ, ಮತಧರ್ಮದಲ್ಲಿ ಕಂಡೋ ಕಾಣದೆಯೋ ಬೆರೆತ ಅಶುದ್ಧಿಗಳನ್ನು ಹೋಗಲಾಡಿಸಿ, ಜನತೆಗೆ ಸನ್ಮಾರ್ಗದರ್ಶನ ಮಾಡಿಸಲು ಕಾಲಕಾಲಕ್ಕೆ ಮಹಾತ್ಮರ ಉದಯವಾಗುವುದು ಅನಿವಾರ್ಯವಾಗುತ್ತದೆ.

ದಕ್ಷಿಣದಲ್ಲಿ ರಾಮಾನುಜಾಚಾರ್ಯರ ವೈಷ್ಣವಧರ್ಮದ ಪ್ರಚಾರ ಭರದಿಂದ ನಡೆದಾಗ, ಅವರ ಅನುಯಾಯಿಯಾದ ರಾಮಾನಂದರು ಉತ್ತರದಲ್ಲಿ ಅದೇ ಪಂಥವನ್ನು ಮುಂದುವರಿಸಿದರು. ಆದರೆ ಅವರು ಮುರಲೀಧರ ಕೃಷ್ಣನ ಬದಲು ಪುರುಷೋತ್ತಮ ರಾಮನನ್ನು ಅಧಿದೇವತೆಯನ್ನಾಗಿಟ್ಟುಕೊಂಡರು. ಅವರ ಉದಾರತೆ-ವಿಶಾಲದೃಷ್ಟಿಕೋನಗಳಿಂದ ವೈಷ್ಣವಧರ್ಮವು ಉಚ್ಛ್ರಾಯಗೊಂಡಿತು.

ಅಂದಿನ ಆಚಾರ್ಯರೆಲ್ಲ ಉಚ್ಚವರ್ಣದ ಜನರನ್ನೇ ತಮ್ಮ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಿದ್ದರು; ಆದರೆ ರಾಮಾನಂದರು ಮಾತ್ರ ಮಾನವಜಾತಿಗೆಲ್ಲ ಭಕ್ತಿಮಾರ್ಗವು ಮುಕ್ತವಾಗಿರುವುದೆಂದು ಸಾರಿದರು. ಇವರಿಂದ ಎಷ್ಟೋ ಸತ್ಪುರುಷರು ಪ್ರಭಾವಿತರಾಗಿ, ತಮ್ಮ ಅನುಪಮವಾಣಿಯಿಂದ ಭಾರತೀಯ ಸಾಹಿತ್ಯವನ್ನು ಅಜರಾಮರವಾಗಿ ಮಾಡಿದರು.

ಮುಸಲ್ಮಾನರ ಸತ್ತೆಯ ಪ್ರಭಾವ ಕ್ರಮೇಣ ಹಿಂದುಗಳ ಧರ್ಮದ ಮೇಲೂ ತೋರಿಬಂದಿತು. ಧರ್ಮವನ್ನೇ ಪ್ರಾಣಕ್ಕಿಂತ ಪ್ರಿಯವೆಂದು ತಿಳಿದ ಹಿಂದುಗಳು ಇದರಿಂದ ಕ್ರುದ್ಧರಾದರು. ಸರಿ, ಇಬ್ಬರಲ್ಲಿಯೂ ವೈಮನಸ್ಯವುಂಟಾಗಲು ತಡವಾಗಲಿಲ್ಲ. ಇದರಿಂದ ದೇಶದಲ್ಲೆಲ್ಲ ಅಲ್ಲೋಲ ಕಲ್ಲೋಲವುಂಟಾಯಿತು. 'ಬಲವಂತನೇ ಜಯವಂತ' ಎಂಬಂತೆ, ಸತ್ತಾಧೀಶರ ದಬ್ಬಾಳಿಕೆ ಪ್ರಾರಂಭವಾಯಿತು.

ಮಳೆ ಬಾರದೆ ದೇಶದಲ್ಲೆಲ್ಲ ಹಾಹಾಕಾರವುಂಟಾದಾಗ ಪರ್ಜನ್ಯವೃಷ್ಟಿಯಾದಂತೆ, ದೇಶದ ಅಶಾಂತಿಯನ್ನು ಹರಿಸಿ ಸರ್ವರ ಉನ್ನತಿಗಾಗಿ ಅಹರ್ನಿಶ ಶ್ರಮಿಸಲು ತೇಜಃಪುಂಜವಾದ ಜೀವಿಯೊಂದು ಭೂಮಿಗೆ ಅವತರಿಸಿತು. ಪರಮಾತ್ಮನೊಬ್ಬನೇ ಅಖಿಲಪ್ರಾಣಿಯ ಪಾಲನಕರ್ತನೆಂದು ತಿಳಿದದ್ದಕ್ಕೋ ಸ್ಕರ ಮಾತಾಪಿತರು ಮನಸಿನಿಂದ ಅಗಲಿದರೋ ಎಂಬಂತೆ, ಶಿಶು ಕಣ್ಣುಬಿಟ್ಟು ನೋಡಿದಾಗ ಕೊಳದ ತಡಿಯಲ್ಲಿದ್ದುದು ಕಂಡುಬಂದಿತು. ಆದರೆ ಭಗವಂತನು ರಕ್ಷಿಸಬೇಕೆಂದು ಒಮ್ಮೆ ನಿಶ್ಚಯಿಸಿದಾಗ, ಅವನನ್ನು ಯಾರೂ ಹಾನಿಗೀಡು ಮಾಡಲಾರರು. ಜಗತ್ತೇ ಮುನಿದರೂ ಅವನ ಶೀತಲಛಾಯೆಯಲ್ಲಿರುವವನಿಗೆ ಎಂದೂ ತಾಪದ ಅರಿವಾಗದು. ಮಗುವಿನ ರೋದನಸ್ವರ ಕೇಳಿ ನೀರೂ ಮತ್ತು ನೀಮಾ ಧಾವಿಸಿ ಬಂದು, ಅತ್ಯಾನಂದದಿಂದ ದೇವರ ಕೊಡುಗೆಯೆಂದು ಕೂಸನ್ನು ಮನೆಗೊಯ್ದರು.

ಬಾಲಕ ಕಬೀರ ತನ್ನ ಸಮವಯಸ್ಕರಿಗಿಂತ ಹೆಚ್ಚು ಜಾಣನಿರುವುದನ್ನು ಕಂಡು ತಾಯಿಗೆ ಆನಂದವೆನಿಸುತ್ತಿದ್ದರೂ, ಅವನು ಗಂಭೀರವಾಗಿ ವಿಚಾರಮಾಡುತ್ತ ಕುಳಿತಿರುವುದನ್ನು ಕಂಡು ಅವಳು ದುಃಖಿತಳಾಗುತ್ತಿದ್ದಳು. ಕಬೀರ ತನ್ನ ಪ್ರಾಮಾಣಿಕತೆ, ನಿರ್ಭೀತವೃತ್ತಿ, ದಯೆ, ಸುವಿಚಾರಗಳಿಂದ ಎಲ್ಲರಿಗೂ ಅಚ್ಚುಮೆಚ್ಚಾಗಿದ್ದ.

ಆ ಕಾಲಕ್ಕೆ ಕಾಶಿಯಲ್ಲಿ ರಾಮಾನಂದರ ಭಕ್ತಿಭಾಗೀರಥಿ ಎಲ್ಲರನ್ನೂ ಪಾವನವಾಗಿ ಮಾಡುತ್ತಿತ್ತು. ಕ್ರಮೇಣ ಇದರ ಪ್ರಭಾವ

ಕಬೀರನ ಮೇಲಾಯಿತು. ಅವನು ರಾಮಾನಂದರನ್ನು ಕಾಣಲು ಎಷ್ಟೋ ಸಲ ಪ್ರಯತ್ನಿಸಿದ. ಆದರೆ ಮೂಢ ನಂಬಿಕೆಯ ಶಿಷ್ಯರು ಅವನನ್ನು ಒಳಗೆ ಬಿಡಲಿಲ್ಲ. ಮುಂದೆ, ತನ್ನ ಜೀವನವನ್ನೇ ಒಂದು ಮಹಾಸಾಧನೆಯನ್ನಾಗಿ ಮಾಡಿದವನಿಗೆ ರಾಮಾನಂದರ ದರ್ಶನ-ವಾಗುವುದು ಅಸಾಧ್ಯವಾಗಲಿಲ್ಲ. ಯುಕ್ತಿಯಿಂದ ಅವರ ದರ್ಶನ ಪಡೆದು, ರಾಮನಾಮದ ಮಹಾಮಂತ್ರವನ್ನು ಕಲಿತು, ಆನಂದ-ದಿಂದ ಮನೆಗೆ ಮರಳಿದ. ಅಂದಿಗೆ ಕಬೀರನ ಜೀವನನಾಟಕದ ಒಂದಂಕ ಮುಗಿಯಿತು.

ಕಬೀರನ ತಂದೆ-ತಾಯಿಗಳಿಗೆ ಅವನ ರಾಮಧ್ಯಾನ ಕೊಂಚವೂ ಸೇರುತ್ತಿರಲಿಲ್ಲ. ಮಗನಿಂದ ತಮ್ಮ ವಂಶಕ್ಕೆ ಕಲಂಕ ತಗುಲಿತೆಂದು ಶೋಕಗೊಂಡು, ಅನೇಕ ಪ್ರತಿಬಂಧಕೋಪಾಯಗಳನ್ನು ಕೈಕೊಂಡರು. ಆದರೆ ಯಾವನಿಗೆ ಪರಮಾತ್ಮನ ಪ್ರೇರಣೆಯಾಗಿದೆಯೋ ಅವನನ್ನು ತಡೆಗಟ್ಟಲು ಯಾರಿಗೆ ತಾನೇ ಸಾಧ್ಯ ? ಕೊನೆಗೆ ಹತಾಶರಾಗಿ, ಬೆಳೆದು ದೊಡ್ಡವನಾದಂತೆ ಈ ಹುಚ್ಚು ಕಲ್ಪನೆಗಳು ಕಣ್ಮರೆಯಾಗಬಹುದೆಂದು ಸುಮ್ಮನಾದರು.

ಪರಂಪರಾಗತವಾದ ನೇಯ್ಗೆಯ ವೃತ್ತಿಯನ್ನೇ ಕಬೀರ ಕೈಕೊಂಡರೂ, ಅವರ ಮನಸ್ಸಿನ ಅಸ್ವಸ್ಥತೆ ಕಡಿಮೆಯಾಗಲಿಲ್ಲ. ಪ್ರತಿ ನಿತ್ಯ ತನ್ನೆದುರಿಗೆ ನಡೆಯುವ ಹಿಂದು-ಮುಸ್ಲಿಮರ ಕಲಹ ಅವರ ಮೃದುಮನಸ್ಸನ್ನು ಗಾಯಗೊಳಿಸಿತು. ಪರಮಾತ್ಮನೊಬ್ಬನೇ ಆದರೂ ಕೇವಲ ಅವನ ಹೆಸರಿನ ಭಿನ್ನತೆಗಾಗಿ ಪರಸ್ಪರ ವೈರಭಾವದಿಂದಿರುವುದನ್ನು ಕಂಡು, ಅವರ ಹೃದಯ ವ್ಯಾಕುಲಗೊಂಡಿತು. ಈಗಲೇ ಇದರ ಪ್ರತಿಬಂಧವಾಗದಿದ್ದರೆ ಮುಂದೆ ಭೀಕರಪರಿಣಾಮವುಂಟಾಗಬಹುದೆಂದು ಅವರು ಅರಿತು ಉಪಾಯ ಕೈಕೊಂಡರು.

ಕಬೀರ ನಿರಕ್ಷರಿಯಿದ್ದರು; ಹಾಗೆಂದು ಅವರ ಜ್ಞಾನಭಾಂಡಾ-ರಕ್ಕೆ ಕೊರತೆಯಿದ್ದಿಲ್ಲ. 'ಕೆಲವಂ ಬಲ್ಲವರಿಂದ ಕಲ್ತು' ಎಂಬ ಉಕ್ತಿಯಂತೆ, ಕಂಡುಕೇಳಿದ—ಅನುಭವಿಸಿದ ಪ್ರತಿಯೊಂದು ವಿಷಯವನ್ನೂ ಸಂಪೂರ್ಣವಾಗಿ ಮನನಮಾಡಿಕೊಂಡು, ತಮ್ಮ ಅಮೃತ-ವಾಣಿಯಿಂದ ಪರರಿಗೆ ಶಾಂತಿಯನ್ನೀಯುತ್ತಿದ್ದರು. ಗುರುವಿನಲ್ಲಿ ಅವರಿಗೆ ಅಗಾಧಭಕ್ತಿಯಿತ್ತು. ಸ್ಪರ್ಶಮಣಿ ಕಬ್ಬಿಣವನ್ನು ಚಿನ್ನದ್ದಾಗಿ ಮಾಡುವಂತೆ, ಗುರುಕೃಪೆಯಿಂದ ಎಂಥ ಅಜ್ಞಾನಿಯೂ ಜ್ಞಾನಿಯಾಗುವನೆಂದು ಅವರು ನಂಬಿದ್ದರು.

ತಮ್ಮ ಧರ್ಮದಲ್ಲಿಯೇ ಅನೇಕ ಕುಂದು-ಕೊರತೆಗಳಿರುವಾಗ, ನ್ಯಾಯವಾಗಿ ವಿಚಾರಮಾಡಿ ಅವುಗಳನ್ನು ಸುಧಾರಿಸುವುದನ್ನು ಬಿಟ್ಟು ಪರಮತದೂಷಣೆ ಕೈಕೊಂಡವರ ಕೀಳು ಮನೋವೃತ್ತಿಯನ್ನು ಕಂಡು ಕಬೀರನ ಕೋಪ ಎಲ್ಲೆಮೀರಿತು. ರೋಗಿಗೆ ಕಹಿಯಾದ ಔಷಧಿ ಕೊಟ್ಟು ಗುಣಪಡಿಸುವಂತೆ, ಇಂತಹ ಮನೋವೃತ್ತಿಯುಳ್ಳ ಜನರಿಗೆ ಪಾಠ ಕಲಿಸಲು ತೀಕ್ಷ್ಣವಾದ ವಾಣಿಯನ್ನೇ ಉಪಯೋಗಿಸಬೇಕೆಂದು ನಿಶ್ಚಯಿಸಿದರು, ಹಿಂದು ಮುಸ್ಲಿಮರ ಮೂಢ ನಂಬಿಕೆಗಳನ್ನು ಅಂದಿನಿಂದ ನಿರ್ಭಯರಾಗಿ ಟೀಕಿಸಲು ಆರಂಭಿಸಿದರು. ಇದರಿಂದ ದಿನದಿನಕ್ಕೆ ಅವರ ವೈರಿಗಳ ಸಂಖ್ಯೆ ಬೆಳೆಯತೊಡಗಿತು.

ಸಮಾಜರಕ್ಷಕರೆನಿಸಿಕೊಂಡಿದ್ದ ಆಚಾರ್ಯರು ಮತ್ತು ಮುಲ್ಲಾಗಳು, ಕ್ರಮೇಣ ಸಮಾಜಶೋಷಕರಾದುದನ್ನು ಕಂಡ ಕಬೀರ, ಅವರ ಗೊಡ್ಡುಬೆದರಿಕೆಗೆ ಸೊಪ್ಪು ಹಾಕಲಿಲ್ಲ. ತಮ್ಮ ವಾಣಿಯ ಸತ್ಯತೆ ಎಂದಾದರೊಮ್ಮೆ ಜನತೆಗೆ ಮನದಟ್ಟಾಗಬಹುದೆಂದು ತಮ್ಮ ಕಾರ್ಯವನ್ನು ಮುಂದುವರಿಸಿದರು.

ಹಿಂದುಗಳ ಧರ್ಮಾಚರಣೆಯನ್ನು ಟೀಕಿಸುತ್ತ ಅವರೆಂದಿದ್ದಾರೆ: "ವರ್ಷದಲ್ಲಿ ಅನೇಕ ದೇವತೆಗಳನ್ನು ಪೂಜಿಸುತ್ತ ಹಿಂದುಗಳು ನಿಜ-ವಾದ ಏಕೈಕ ಪರಮಾತ್ಮನನ್ನು ಮರೆತುಬಿಟ್ಟಿದ್ದಾರೆ. ಅನೇಕ ದೇವರುಗಳ ಉಪಾಸಕರಾಗಿರುವುದರಿಂದ ಅವರ ಮನಸ್ಸು ಚಂಚಲವಾಗಿ ಅವರಲ್ಲಿ ನಿಜವಾದ ಭಕ್ತಿ ಮಾಯವಾಗಿದೆ. ಕೇವಲ ಬಾಹ್ಯಾಡಂಬರ-ದಿಂದ ಪೂಜೆಮಾಡುವುದೇ ಪರಮಾತ್ಮನನ್ನು ಪ್ರಸನ್ನಗೊಳಿಸುವ ಸಾಧನವೆಂದು ಅವರು ತಿಳಿದಿದ್ದಾರೆ. ಜಪಸರವನ್ನು ಕೈಯಲ್ಲಿ ಹಿಡಿದು ಬಾಯಿಂದ ರಾಮನಾಮೋಚ್ಚಾರ ಮಾಡುವುದೇ ಸರ್ವಶ್ರೇಷ್ಠ ಧ್ಯಾನ-ವೆಂದು ಅವರು ಅರಿತಂತಿದೆ. ಆದರೆ ಆಗ ತಮ್ಮ ಮನಸ್ಸು ಎಲ್ಲೆಲ್ಲಿ ಅಲೆಯುತ್ತಿರುವುದೆಂಬ ಪರವೆ ಅವರಿಗಿರುವುದಿಲ್ಲ. ಅವರಲ್ಲಿಯ ಉಚ್ಚ-ನೀಚ ಭೇದದಿಂದಾಗಿ ಎಲ್ಲೆಲ್ಲಿಯೂ ಬಿಕ್ಕಟ್ಟುಂಟಾಗಿದೆ."

ಮುಸಲ್ಮಾನರ ಧರ್ಮಾಂಧತೆಯನ್ನು ಕಬೀರ ಬಲವಾಗಿ ವಿರೋಧಿಸಿದರು. ಅವರ ಪ್ರಾಣಿವಧೆಯನ್ನು ಕಟುವಾಗಿ ಟೀಕಿಸಿದರು. ಇದರ ಫಲವಾಗಿ ಆಗಿನ ಸುಲ್ತಾನನ ಅವಕೃಪೆಗೆ ಪಾತ್ರರಾಗಿ ಅನೇಕ ಕಷ್ಟಗಳನ್ನನುಭವಿಸಿದರು. ಕಬೀರನ ಈ ಬಗೆಯ ಜೀವನದಿಂದ ಅವರ ಕುಟುಂಬದ ಜನರಿಗೆ ಬಹಳ ತೊಂದರೆಯಾಗುತ್ತಿತ್ತು. ಆದರೂ ಆ ಮಹಾತ್ಮ ಇದರಿಂದ ಎಳ್ಳಷ್ಟೂ ವಿಚಲಿತರಾಗದೆ, ಧೀರಭಾವದಿಂದ ಜೀವನ ಸಾಗಿಸಿದರು. 'ಪ್ರತಿಯೊಬ್ಬರೂ ತಮ್ಮ ಉಪಜೀವನಕ್ಕಾಗಿ ಸ್ವಾವಲಂಬಿಯಾಗಿರಬೇಕು, ಪರರನ್ನು ಯಾಚಿಸುವುದೆಂದರೆ ಮರಣ-ಹೊಂದಿದಂತೆ' ಎಂದು ಅವರ ಅಭಿಪ್ರಾಯವಾಗಿತ್ತು.

ಪ್ರತಿಯೊಬ್ಬರೂ ತಮ್ಮ ತಮ್ಮ ದೇವರ ಹೆಸರಿನಿಂದ ಪರಸ್ಪರ ಜಗಳವಾಡುವುದನ್ನು ಕಂಡು ಬೇಸತ್ತ ಕಬೀರ, ನಿರಾಕಾರನಾದ ರಾಮನನ್ನು ಭಜಿಸತೊಡಗಿದರು. ಅಣುರೇಣುತೃಣಕಾಷ್ಠಗಳಲ್ಲೆಲ್ಲ ವಾಸಿಸುವ ಭಗವಂತನು ಒಂದು ಚಿಕ್ಕ ವಸ್ತುವಿನಲ್ಲಿರುವನೆಂದು ನಂಬುವುದೆಂದರೆ ಅಸಾಧ್ಯ—ಎಂದವರ ಅಭಿಪ್ರಾಯವಾಗಿತ್ತು.

ಕಬೀರ ತಮ್ಮ ಜೀವಮಾನವಿರುವ ವರೆಗೆ ಹಿಂದು-ಮುಸ್ಲಿಮರ ವೈರತ್ವವನ್ನು ನಂದಿಸಿ ಅವರನ್ನು ಸ್ನೇಹದಿಂದ ಬಂಧಿಸಲು ಪ್ರಯತ್ನಿ-ಸಿದರು. ಆದರೆ ತಾವು ಮರಣಹೊಂದಿದ ಮೇಲೂ ಅವರಲ್ಲಿ ತಮಗಾಗಿ ಪರಸ್ಪರ ಕಲಹವಾಗಬಾರದೆಂದು ಅವರ ಇಚ್ಛೆಯಿತ್ತು. ಅದಕ್ಕಾಗಿ ಅವರು, ತಮ್ಮ ಮರಣಕಾಲ ಸಮೀಪಿಸಲು, ಇನ್ನು ಯಾರ ದರ್ಶನವೂ ಬೇಡವೆಂದು ಮುಸುಕು ಹಾಕಿಕೊಂಡು ಮಲಗಿಬಿಟ್ಟರು. ಬದುಕಿರು-ವಷ್ಟು ಕಾಲವೂ ಅವರನ್ನು ರಾಹು-ಕೇತುಗಳಂತೆ ಪೀಡಿಸಿದ ಹಿಂದು-ಮುಸ್ಲಿಮರು ಈಗ ವಿಚಾರಮಾಡಲಾರಂಭಿಸಿದರು: ಕಬೀರನ ದಯಾಳುಸ್ವಭಾವ, ಬಡವ-ಬಲ್ಲಿದರಲ್ಲಿ ಸಮಭಾವ ಮತ್ತು ರಾಮ-ನಾಮೋಪಾಸನೆ ಇವುಗಳಿಂದ ಹಿಂದುಗಳು ಆ ಮಹಾತ್ಮನ ಶ್ರೇಯಸ್ಸು

ತಮ್ಮ ಮತಕ್ಕೆ ಬೇಕೆಂದೂ, ಅವರ ದೇಹವನ್ನು ತಾವು ಅಗ್ನಿಗರ್ಪಿಸುವದಾಗಿಯೂ ಹಟಹಿಡಿದರು. ಅದರೆ ಕಬೀರನ ಪೋಷಣೆ ಮುಸಲ್ಮಾನ ಕುಟುಂಬದಲ್ಲಿ ಆದದ್ದರಿಂದ, ಮುಸಲ್ಮಾನರು ಅವರ ಯಶಸ್ಸಿಗೆ ತಾವು ನ್ಯಾಯವಾದ ಭಾಗಿಗಳಾಗಿರುವುದಾಗಿ ಸಾರಿದರು. ಆದರೆ ಆ ವೇಳೆಗೆ ಆ ಮಹಾತ್ಮನ ಮುಸುಕನ್ನು ತೆಗೆದು ನೋಡಿದಾಗ, ಅಲ್ಲಿ ಕೇವಲ ಕೆಲವು ಹೂವುಗಳಿದ್ದುವೆಂದು ಭಾವುಕರ ಕಥೆಯಿದೆ. ಎಲ್ಲರೂ ಸ್ತಂಭಿತರಾದರು! ಆದರೂ ಅವರನ್ನು ಸ್ವಮತಾಭಿಮಾನ ಬಿಡಲಿಲ್ಲ. ಹಿಂದುಗಳು ಕೆಲ ಹೂಗಳನ್ನು ದಹನಮಾಡಿ ಕಾಶಿಯಲ್ಲಿ ಮಠವನ್ನು ಸ್ಥಾಪಿಸಿದರಂತೆ. ಮುಸಲ್ಮಾನರು ಕೆಲ ಹೂಗಳನ್ನು ತೆಗೆದುಕೊಂಡು ಹೋಗಿ ಸಮಾಧಿಯನ್ನು ಮಾಡಿದರಂತೆ.

ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿದ್ದರೂ ಮನುಷ್ಯ ನಿರ್ಧಾರದಿಂದ ಹೇಗೆ ತನ್ನ ಆತ್ಮೋನ್ನತಿಗೆ ಕಾರಣನಾಗುತ್ತಾನೆಂಬುದಕ್ಕೆ ಕಬೀರನ ಉಜ್ವಲ ಚರಿತ್ರೆಯೇ ಉದಾಹರಣೆಯಾಗಿದೆ!

---

## ಒಲವು ಅಳಿದಾಗ

ಶ್ರೀ. ಶಾಂತಿನಾಥ ದೇಸಾಯಿ ಎಂ. ಎ. ಮುಂಬಯಿ

ಮರಣದ ಬಿಳುಪೇರಿದೆ
ಈ ಬೆಳುದಿಂಗಳಕೆ
ಅಳಿದಿದೆ ತನಿಗಿರಣದ
ಸುಕುಮಾರತೆ....
ಏಕೆ?
( ನಕ್ಕೆ! )

ರುಗ್ಣವಾದ ವ್ಯೋಮಪಟಲ-
ದಲ್ಲಿ ಚಂದ್ರ ಬೆಳಗುವ
ಅಹಾ, ಬೆಳಗುವ!
ಇತ್ತ ಜಗದ ಶಯ್ಯೆಯಲ್ಲಿ
ಗಂಡು ಹೆಣ್ಣು ತೊಳಲುತ
ಬಳಲುತಿಹರು ಹಾಡುತ.
ಕಾಮಮತ್ತ! ಕರಗಳೆಲ್ಲ
ಕೈಕೈಗಳ ಬಾಚುತಿವೆ.
ಪಾಪಯುಕ್ತ ಕಂಗಳೆಲ್ಲ
ಜೊನ್ನ ಜೇನ ಸವಿಯುತಿವೆ.

ಪೃಥ್ವಿ ತಿರುಗಿ ತಿರುಗುತಿಹಳು
ಚಂದ್ರ ತೊಳಗಿ ತೊಳಗುತಿಹನು
ರಾತ್ರಿಯಲ್ಲಿ ರಾತ್ರಿಯೆಲ್ಲ
ಅಂಧನಾಗಿ
ವೃದ್ಧನಾಗಿ!

ಇನ್ನು ಮೇಲೆ
ಕಂಡ ಕಂಡ ಕಂಗಳಲ್ಲಿ ವಿಶ್ವರೂಪಿ ಜ್ವಾಲೆ-
ಯನ್ನು ಅರಸಲಾರೆ,
ಕೈಕೈಗಳ ಕುಲುಕಿದಾಗ
ಎದೆಯ ಬಡಿತ ಎಣಿಸಲಾರೆ.
ಇನ್ನು ಅವರ ಕಂಕುಳೊಳಗೆ ಕೈಯನಿಟ್ಟು ನಗಿಸಲಾರೆ.
ಚಂದ್ರ ಜೊನ್ನ ತೊಳಗುವವು
ಚಿಕ್ಕೆ ಕಣ್ಣು ಕುಣಿಸುವವು
ತೆರೆಗಳೆದ್ದು ಸಿಡಿಯುವವು
ಗಾಳಿ ಬೀಸಿ ಕರೆಯುವವು
ರಾತ್ರಿಯಲ್ಲಿ
ರಾತ್ರಿಯೆಲ್ಲ
( ವ್ಯರ್ಥ ಎಲ್ಲ! )
ಈ ಚಂದ್ರ ಈ ಚಿಕ್ಕೆ
ಮೊದಲಿನಂತೆ ಮುಗ್ಧ ಚೊಕ್ಕ
ಚಮತ್ಕೃತಿಗಳಲ್ಲ;
ಈ ಗಾಳಿ ತೆರೆಗಳಿನ್ನು
ನೂರು ಆಶೆ–ಹಂಬಲುಗಳ
ಸಂಕೇತಗಳಲ್ಲ.
ಬಯಲು–ಮಳಲ–ತೀರದಲ್ಲಿ
ಏಕಾಂಗಿಯಾಗಿ ನಾನು
ಹಾಡುತ್ತ ನಡೆಯುವೆ,
ತೆರೆಯನೇರಿ ಅಲೆಯುವಂಥ
ಸುರಾಂಗನೆಯ ನೋಡುವೆ—
ಬಯಕೆ ಮೀರಿ ನೋಡುವೆ
ಆನಂತರ ಮಲಗುವೆ
ಮುಕ್ತನಾಗಿ....ಮತ್ತೆ ನಿಶ್-
ಚಿಂತನಾಗಿ, ಅರ್-
ಹಂತನಾಗಿ!

# ನವಭಾರತ

ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ., ಹೈದರಾಬಾದ್

ಇದೋ ನೋಡ: ಬೆಳಗುತಿಹುದು ನವಜೀವನ ಸುಪ್ರಭಾತ,
ಅದೋ ನೋಡು ತೊಲಗಿ ಹೋಯ್ತು ಶತಮಾನದ ಜಾಡ್ಯಭೂತ.
ಹೊಸ ನಸುಕಿಗೆ ಚೇತರಿತೊ ಸಚರಾಚರ ಜೀವಜಾತ,
ಹೊಸ ಬಾಳಿಗೆ ಒಸೆದೊಲಿದಿತೊ ಜಾಗೃತ ನವಭಾರತ.

ಬೆಳಗಿದುವಿದೊಭುವಿ ಸು ಬಾನು– ಉದಿಸೆ ಪ್ರಜಾರಾಜ್ಯ ಭಾನು,
ಇರುಳ ಸೆರೆಯು ಹರಿಯಿತೇನು – ನಲಿದುಲಿದಿವೆ ಭೃಂಗ ತಾನು,
ನವಜಾಗೃತಿಯೂಡಲು – ನವಪ್ರಗತಿಯ ಹಾಡಲು.

ನವಚೇತನ ಹೊಮ್ಮುತಿದೋ ನವಜೀವನವರಳಿದೆ,
ನವಯೋಗವು ಕೈಗೂಡಿತೊ ನವಭಾಗ್ಯವು ಬರಲಿದೆ,
ನವತತ್ತ್ವವು ಫಲಿಸಿತಿದೋ ನವಶಾಂತಿಯು ತರಲಿದೆ,
ನವರಾಷ್ಟ್ರವು ಉದಿಸಿತಿದೋ ನವಯುಗವದು ಬರಲಿದೆ.

ನವಜೀವನ ನವಚೇತನ ನವಶ್ರೀಯುತ ಭಾರತ,
ನವಯೋಗದ ನವಭೋಗದ ನವಭಾಗ್ಯದ ಭಾರತ,
ನವತತ್ತ್ವದ ನವಸತ್ತ್ವದ ನವಧೀಯುತ ಭಾರತ,
ನವತುಷ್ಟಿಯ ನವಪುಷ್ಟಿಯ ನವನಂದನ ಭಾರತ.

ನವವಧುವಿನ ಹಾಸದಂತೆ ಮಧುರ ಸುರಸ ಭಾರತ,
ನವಮಾಧವಿಮಾಸದಂತೆ ಸರಸ ಸಫಲ ಭಾರತ,
ನವಜೀವನ ಕಾಂತಿಯಂತೆ ಸುಭಗ ಸುಖದ ಭಾರತ,
ನವಭಾವದ ಸ್ಫುರಣದಂತೆ ನವೋನವವು ಭಾರತ.

ನವಮಾನವ ಧ್ಯೇಯದಂತೆ ನವನೀತಿಯ ಬೋಧನೆ,
ನವಜೀವನ ತತ್ತ್ವದಂತೆ ನವಆರ್ಥಿಕ ಯೋಜನೆ,
ಸಕಲರ ಸುಖ ಸಂಪಾದನೆ ನಮ್ಮ ಮಹಾಸಾಧನೆ,
ಅದಕೆ ಮೂಲ ಅರ್ಥ ಸಮತೆ, ಅದೇ ಧ್ಯೇಯ ಧೋರಣೆ.

ವ್ಯಕ್ತಿಯ ಹಿತ ಸಂಪೋಷಣೆ ನವರಾಷ್ಟ್ರದ ಘೋಷಣೆ,
ರಾಷ್ಟ್ರದ ಬಲಸಂವರ್ಧನೆ ಪ್ರತಿವ್ಯಕ್ತಿಯ ಚಿಂತನೆ.
ನವಜಾಗೃತಿ ಸ್ಫುರಿಸಿತಿದೋ ನಡೆದಿವೆ ನವಯೋಜನೆ,
ನವನವೀನ ಉಪಕರಣವೆ ಆಗಿವೆ ಬಹು ಸಾಧನೆ
ಸಿರಿಯ ಬಿತ್ತಿ ಸಿರಿ ಬೆಳೆವುದೆ ಅರ್ಥನೀತಿಸಾಧನೆ,
ಸಿರಿಯ ಸಮದ ಹಂಚುವಿಕೆಯೆ ಪ್ರಜಾರಾಜ್ಯ ಧೋರಣೆ.

ಎಡೆಯೆಡೆಯಲಿ ನಡೆದಿವೆ ನೀರಾವರಿಗಳ ಯೋಜನೆ,
ಕಾಲುವೆ ಕೆರೆ ಕೊಳಗಳಿಂದೆ ಅಮಿತ ಜಲವಿಮೋಚನೆ,
ಲಕ್ಷಾವಧಿ ಕ್ಷೇತ್ರಗಳಿಗೆ ಅಮೃತರಸದ ಸೇಚನೆ,
ಸಸ್ಯಪೂರ್ಣ ಪ್ರತಿಕ್ಷೇತ್ರ, ಧಾನ್ಯಪೂರ್ಣ ಮನೆ ಮನೆ,
ನೂರು ಮಡಿಗೆ ಹೆಚ್ಚಲಿಹುದು ಧಾನ್ಯದುತ್ಪಾದನೆ,
ಆಗಲಿಹುದು ಕೃಷಿಕಕುಲದ ಹೀನ ಗತಿನಿವಾರಣೆ.

ಭೀಮಜಲ ಪ್ರಪಾತದಿಂದೆ ವಿದ್ಯುದ್ಭಾವ ಯೋಜನೆ,
ವಿದ್ಯುಚ್ಛಕ್ತಿ ಸಂಚಯದೆ ವಿವಿಧಯಂತ್ರ ಚಾಲನೆ,
ವಿವಿಧ ವಿದ್ಯುನ್ನಿಲಯದಲ್ಲಿ ವಿದುಚ್ಛಕ್ತಿ ಪೂರಣೆ,
ದೇಶವೆಲ್ಲ ಕಡೆಗು ರಮ್ಯ ವಿದ್ಯುದ್ದೀಪ ಸಾರಣೆ.

ಪಂಚ ವರ್ಷದವಧಿಯಲ್ಲಿ ಕೋಸಿ-ಕೃಷ್ಣೆ ಕೋಯನೆ,
ಮುಗಿಯಲಿಹವು ರೀಹಂದ ಚಂಬಳದಾ ಯೋಜನೆ,
ಉತ್ತರದಲಿ ನಾನಗಲ—ಹೀರಾಕುಡದ ಯೋಜನೆ,
ಜಮ್ಮು ಕಾಶ್ಮೀರದಲ್ಲಿ ಸಿಂಧುಕೊಳದ ಯೋಜನೆ,
ಆಂಧ್ರದಲ್ಲಿ ನಂದಿಕೊಂಡ ನಾಗಾರ್ಜುನ ಯೋಜನೆ,
ಕರ್ನಾಟದ ತುಂಗೆ ಶಿಂಶೆ ಘಟಪ್ರಭೆಯ ಯೋಜನೆ,
ಹಿರಿಯ ಬಂಗಾಲದಲ್ಲಿ ಮಯೂರಾಕ್ಷಿ ಯೋಜನೆ,
ಮಹಾರಾಷ್ಟ್ರದಲ್ಲಿ ಜೋಗಗೋದೆ ತಾಪಿ ಯೋಜನೆ,
ನಡೆಯಲಿಹವು ದೇಶದಲ್ಲಿ ನೂರು ವಿಧದ ಯೋಜನೆ,
ಆಗಲಿಹುದು ಎಡೆಯೆಡೆಗೂ ಭಾಗ್ಯಲಕ್ಷ್ಮಿ ಪೂಜನೆ.

ಭಾಕರದಣೆಕಟ್ಟು ಭವ್ಯ ನೋಡಲೆನಿತು ವಿಸ್ಮಯಂ,
ಅದರ ಶಿಖರ ದಣಿದ ಮೇಘಮಂಡಲಕ್ಕೆ ಆಶ್ರಯಂ,
ಇಹುದೆ ಮನುಜ ಸಾಹಸಕ್ಕೆ ಅಡ್ಡಿ, ಎಡರು, ವ್ಯತ್ಯಯಂ,
ಕೋಟಿ ಜನರು ರಚನೆಯಲ್ಲಿ ಹಗಲು ಇರುಳು ತನ್ಮಯಂ.

ತುಂಗಭದ್ರೆಯಣೆಕಟ್ಟದು ನೋಡಲೆನಿತು ಸುಂದರಂ,
ನಿಂದಿಹವೋ ವೈಕುಂಠದ ಕೈಲಾಸದ ಮಂದಿರಂ,
ತಂದಿಹವು ಜನದ ಮನಕೆ ಅಪಾರ ಆನಂದವಂ,
ತುಷ್ಟಿ ಪುಷ್ಟಿ ಶಾಂತಿ ಕಾಂತಿ ವೈಭವಕ್ಕೆ ಆಗರಂ.

ನಾಗಾರ್ಜುನ ಸಾಗರವಿದು ಎನಿತು ಭವ್ಯ ಸುಂದರಂ,
ಸಾಗರೆಂಬ ಹೆಸರು ಇದಕೆ ಆಗಲಿಹುದು ಸಾರ್ಥಕಂ,
ತೋರಲಿಹಳು ಪ್ರಕೃತಿ ಇಲ್ಲಿ ತನ್ನ ರೂಪಸುಂದರಂ,
ದಣಿದ ಜೀವಲೋಕಕಿದುವೆ ಶಾಂತಿ ಸೌಖ್ಯಮಂದಿರಂ.
ಚಿತ್ತರಂಜನದಲಿ ವಿವಿಧ ಯಂತ್ರನಿರ್ಮಾಪನೆ,
ರೇಲು ಟ್ರಕ್ಕು ವ್ಯೋಮಯಾನ ವಿವಿಧಯಂತ್ರ ಜೋಡಣೆ,
ಸಿದ್ಧವಾದ ಸರಕು ತಲುಪೆ ದೇಶದೆಲ್ಲ ಮೂಲೆಗೆ
ಆಗ ಬರಲಿ ರಾಜಮಾರ್ಗ ರೇಲು ಟ್ರಕ್ಕು ಸಾಗಿಗೆ.

ನಡೆದು ಬರಲಿ ಅಂಚೆ ತಂತಿ ಬಾನುಲಿ ಪ್ರಸಾರಣೆ,
ಅಡಗಿ ಬರಲಿ ಹಳ್ಳಿ ದಿಲ್ಲಿಯೆಂಬ ಭೇದಭಾವನೆ.
ಬೆಳೆದು ಬರಲಿ ಗ್ರಾಮಗಳಲಿ ಕುಶಲ ಕೈಗಾರಿಕೆ,
ಮೆಚ್ಚಿ ಬರಲಿ ಮತ್ತೆ ಲೋಕ ನಯದ ಕೈಗೆಲಸಕೆ.

ನಾಟ್ಯಗಾನ ಚಲಚ್ಚಿತ್ರ ಚಿತ್ರಕರ್ಮ ಸತ್ಕೃತಿ,
ಬೆಳೆದು ಬರಲಿ ಜನದ ಮನದಿ ಲಲಿತ ಕಲೆಯೊಳಭಿರುಚಿ.
ಬೆಳೆಯುತಿಹುದು ಪ್ರಜರ ಸಂಖ್ಯೆ ಮೀರಿ ಮನುಜಕಲ್ಪನೆ,
ನಡೆದು ಬರಲಿ ಮಿತಪ್ರಜರ ನವಕುಟುಂಬ ಯೋಜನೆ.

ಕಲ್ಲಿದ್ದಲು, ಲೋಹ, ಮ್ಯಾಂಗನೀಜು, ಉಕ್ಕು, ಗಂಧಕ,
ಅಲ್ಯೂಮಿನಂ, ತಾಮ್ರ, ಸೀಸ, ಸತುವು, ಗಾಜು, ಅಭ್ರಕ,
ಉದ್ಯಮಗಳ ಬೆಳೆಯಲಿಹವು ವಿವಿಧ ಖನಿಜ ಸಂಪದ,
ಹೆಚ್ಚಲಿಹವು ಸಿಂಧ್ರಿ ಪಿಂಪ್ರಿ ಕಾರಖಾನೆ ಬಹುವಿಧ.

ಬೇಡ ಕಪಟ ಕುಟಿಲರಾಜಕಾರಣಕ್ಕೆ ಮನ್ನಣೆ,
ಸತ್ಯ, ಸಮತೆ, ಸ್ನೇಹ, ಶಾಂತಿ, ರಾಷ್ಟ್ರಕಾರ್ಯ ಪ್ರೇರಣೆ
ಒಳಿತುಕೊಂಡು ಒಳಿತುಕೊಟ್ಟು ಒಳಿತು ಬೆಳೆವ ಧೋರಣೆ,
ಜಗದ ಒಳಿತಿಗಾಗಿ ಬೇಕು ಸಹಜೀವನಭಾವನೆ.

ಭಾರತಪ್ರಪಂಚವಿಂದು ಅದ್ಭುತ ಪ್ರಯೋಗಶಾಲೆ,
ತೋರಲಿಹವು ವಿಜ್ಞಾನ ಭೂದಾನ ತಮ್ಮ ಲೀಲೆ;
ಘನ್ನ ಜಲಾಶಯದಿ ಹರಿವ ಕಾಲುವೆಗಳ ದೀರ್ಘಮಾಲೆ,
ಅನ್ನಪೂರ್ಣೆ ಭರತಮಾತೆ ಸಜಲೆ ಸಸ್ಯಶ್ಯಾಮಲೆ.

ತ್ರೇತಾಕೃತದ್ವಾಪರಗಳು ಸರಿದುವಿದೋ ಹಿಂದಕೆ
ಬೆರಗುಗೊಂಡು ನವ್ಯ ಭವ್ಯ ಭಾರತಪ್ರಪಂಚಕೆ
ಅನುಪಮವಿದು ಭಾರತದೀ ನವಜೀವನಯೋಜನೆ,
ಸಕಲರ ಸುಖ-ಶಾಂತಿಗಿದುವೆ ಪರಮ ಸಫಲ ಸಾಧನೆ.

---

# ಆವುದನು ಬೇಡುವೆನೊ ದೇವ!

(ಗೀತ)

ಶ್ರೀ. ಕೆ. ಜಿ. ಕೃಷ್ಣಭಟ್ಟ, ಪೆರಡಾಲ — ದ. ಕ.

ಆವುದನು ಬೇಡುವೆನೊ? ದೇವ! ನಿನ್ನಲಿ ನಾನು!
ಭಾವನೆಯೆ ಮನಕಿಂದು ಹೊಳೆಯದಿಹುದು!
ತವ ಸನ್ನಿಧಿಯೊಳಿಂದು ಕರಮುಗಿದು, ಭಕ್ತವೃಂ-
ದವು ಕೇಳ್ವುದಂ ನೆನೆಯೆ, ನಗುವೆ ಬಹುದು! ೧

"ಕರುಣಿಸೈ! ಧನ, ಕನಕ, ಸಂಪದವನೆಮಗೆ"ಂದು
ಹರನೆ! ನಿನ್ನಲಿ ಕೆಲರು ಕೇಳರೇನೊ?
ಕರದೊಳು ಕಪಾಲಪಿಡಿಯುತೆ, ದಿಗಂಬರನಾಗಿ
ತಿರುಪೆಯೆತ್ತುವೆ ನೀನು! ಅವರ್ಗೀವುದೇನೋ! ೨

"ಸತಿ-ಸುತರ ಪಾಲಿಸೈ! ಮನೆಯ ಬೆಳಗಿಸು!" ಎಂದು
ರತಿಪತಿಧ್ವಂಸಕನೆ! ಕೇಳ್ವರಿಂತು!
ಸತಿಗೌರಿ ನಿನ್ನವಳನುಳಿಸದಿಹೆ ನೀನಂದು;
ಹಿತವಿರೆ ಸ್ಮಶಾನವಾಸವು; ಈವೆಯೆಂತು? ೩

"ಕಷ್ಟಗಳು ಬರದಿರಲಿ! ಸುಖವೆ ಎಮಗಿರಲೆ"ಂದು
ಅಷ್ಟಮೂರ್ತಿಯೆ ಕೇಳ್ವರಿನ್ನು ಕೆಲರಿಂತು!
ಭ್ರಷ್ಟರನು ನಿರ್ಮೂಲಗೈಯೆ ಸತತವು ನೀನೆ
ಕಷ್ಟಗಳನನುಭವಿಪೆ! ಸುಖವೀವೆಯೆಂತು? ೪

ಕೇಳಿಹೆನು ಓ! ದೇವ! ನಿನ್ನ ಕಥೆಗಳ ಹಲವ
ತಾಳಿರುವೆನಚ್ಚರಿಯನೊಂದನ್ನೆ ನೆನೆದು
ತಾಳ್ಮೆಯಿಂ, ಬಂದಿಹ ವಿಪತ್ಪರಂಪರೆಗಳನು
ಲೀಲೆಯಿಂ ಸಹಿಸುವತಿ ಶಕ್ತಿ ನಿನಗಿಹುದ. ೫

"ಕರುಣಿಸೆನಗಿನ್ನು ಸುಖಸಂತಸಗಳನೆ" ಎಂದು
ಪರಮಾತ್ಮ! ನಿನ್ನಲ್ಲಿ ನಾ ಕೇಳಲೊಲ್ಲೆ;
"ಕರುಣಿಪುದು ಕಷ್ಟಗಳ ಸಹಿಸುವಾ ಶಕ್ತಿಯನು."
ಕರಮುಗಿದು ಬೇಡುವೆನು ದೇವ ನಿನ್ನಲ್ಲಿ. ೬

---

# ಹಗಲುಗನಸು

ಶ್ರೀ. ಎಲ್. ಆರ್. ಹೆಗಡೆ, ಎಂ. ಎ.
ಲೆಕ್ಚರರ್, ಕೆನರಾ ಕಾಲೇಜ, ಕುಮಟಾ

●

**ಮಾನವನ ಅತೃಪ್ತ ಕಾಮನೆಗಳು, ಅನೇಕ ಹಗಲುಗನಸುಗಳನ್ನು ಸೃಷ್ಟಿಸುತ್ತವೆ. ಈ ಹಗಲುಗನಸುಗಳು ಲೋಕಕ್ಕೆ ಕಾರಕವೂ ಆಗಬಲ್ಲವು; ಮಾರಕವೂ ಆಗಬಲ್ಲವು. ಕಾರಕವೆನಿಸುವ ಹಗಲುಗನಸುಗಳು ಸೌಂದರ್ಯ-ಕೃತಿಗಳಾಗಿ ಚಿರಕಾಲ ಬಾಳಬಲ್ಲವು.**

●

" I hunt for the golden stag .... ....
I seek what I cannot get; I get what I do not seek "

— Tagore

" ನಾನು ಕಾಂಚನಮೃಗವನ್ನು ಹಿಡಿಯಲು ಬೇಟೆಯಾಡುತ್ತೇನೆ...
ಹೊಂದಲಾರದುದನ್ನು ಬಯಸುತ್ತೇನೆ. ಬಯಸಲಾರದುದನ್ನು ಹೊಂದುತ್ತೇನೆ. "

—ಟಾಗೋರ.

ಪರಮಾತ್ಮನ ಇಚ್ಛಾಶಕ್ತಿಯಿಂದ ಆತನು ಬಯಸಿದಂತೆ ಜಗತ್ತು ಸೃಷ್ಟವಾಯಿತು. ಆದರೆ ಆತನ ಸೃಷ್ಟಿಯಲ್ಲಿ ಮನುಷ್ಯನು ಬಯಸಿದುದೆಲ್ಲವೂ ಕೈಗೂಡುವುದಿಲ್ಲ. ಮನುಷ್ಯನ ಬಯಕೆಗಳಲ್ಲಿ ಬಹಳಷ್ಟು ಅವನ ಕೈಗೂಡದಿರುವುವು. ಕೈಗೂಡಿದ ಬಯಕೆಗಳಲ್ಲಿ ಸಹ ಏನೋ ಒಂದು ಅಸಂತೃಪ್ತಿ, ಏನೋ ಒಂದು ಕೊರತೆ, ಕಾರ್ಯ ಕೈಗೂಡಿದುದರ ಮೇಲೆಯೂ ಹಾಗೆ ಕೈಗೂಡಿದುದರ ಕುರಿತು ಒಂದು ಬಗೆಯ ಅಸಮಾಧಾನ. ಅದರೊಡನೆ ಬೇಡವಾದ ಅನೇಕ ಸಂಗತಿಗಳ ಜನನ. ತಪ್ಪಿಸಿಕೊಳ್ಳಲಾರದ ಸಂಕಷ್ಟಗಳು. ನಿಮಿತ್ತ–ಅನಿಮಿತ್ತ ವೈರಗಳು; ಬಯಕೆಯಲ್ಲಿಯ ಸಂತಸ ಅದರ ಫಲದಲ್ಲಿರದಿರುವುದು.

ಮನುಷ್ಯನ ಆಸೆ ಪರಮಾತ್ಮನ ಸೃಷ್ಟಿಯಂತೆ ಅಪಾರವಾಗಿದೆ. ಅದಕ್ಕೆ ಗಡಿಕಲ್ಲುಗಳನ್ನು ಹಾಕುವುದು ಸಾಧ್ಯವಿಲ್ಲ. ಆಸೆಗಳು ಅನೇಕ ವಿಧ. ಅವನ್ನು ತೀರಿಸಲು ಮಾಡುವ ಪ್ರಯತ್ನಗಳಲ್ಲಿಯೇ ಮನುಷ್ಯ ಹಣ್ಣಾಗುತ್ತಾನೆ. ರಾಜರತ್ನಂ ಅವರ 'ಹನಿಗಳು' ಎಂಬ ಕಿರುಗತೆಯ ಸಂಗ್ರಹದಲ್ಲಿ, ಪರಮಾತ್ಮನಿಗಾಗಿ ಉಪವಾಸ ಕುಳಿತವನನ್ನು ವೇಷದ ಪರಮಾತ್ಮ ಬಂದು ಏನು ಬೇಕೆಂದು ಕೇಳಿದರೆ, ಹಸಿವಿನಿಂದ ಕಂಗಾಲಾದ ಆತ 'ಏನೂ ಬೇಡ, ಒಂದು ತೋಟ ಲಿಂಬೆಹಣ್ಣಿನ ಪಾನಕ' ಎಂದಂತೆ ಗ್ರೀಕರ ಪುರಾಣದಲ್ಲಿ 'ಪೆಂಡೋರಾಳ ಪೆಟ್ಟಿಗೆ' ಎಂಬ ಕತೆಯೊಂದಿದೆ. ಪೆಂಡೋರಾಳಿಗೆ, ದೇವತೆಗಳು ಒಂದು ಪೆಟ್ಟಿಗೆಯಲ್ಲಿ ಏನೇನನ್ನೆಲ್ಲಾ ತುಂಬಿ, ಅದನ್ನು ಒಡೆದು ನೋಡಕೂಡದೆಂದು ಆದೇಶ ಮಾಡಿಕೊಟ್ಟಿದ್ದರಂತೆ. ತನ್ನ ಕುತೂಹಲ ತಡೆಯಲಾರದೆ ಆಕೆ ಪೆಟ್ಟಿಗೆ ಒಡೆದಾಗ ಆರೋಗ್ಯ, ಸಂಪತ್ತು, ಮೊದಲಾದ ಎಲ್ಲ ಮಹತ್ತ್ವದ ವಸ್ತುಗಳು ಹಾರಿಹೋದ ಮೇಲೆ, ಅವಳಿಗೆ ತನ್ನ ತಪ್ಪು ತಿಳಿದು ಮುಚ್ಚಳ ಹಾಕಿದಳಂತೆ. ನಂತರ ಒಂದೇ ಒಂದು ವಸ್ತು ಉಳಿಯಿತಂತೆ; ಅದೇ ಆಸೆ. ಮನುಷ್ಯ ಇಂದಿನ ವರೆಗೂ ಅದನ್ನೇ ಅವಲಂಬಿಸಿದ್ದಾನೆ. ಆಸೆಯೇ ಮಾನವಕುಲದ ಊರುಗೋಲಾಗಿದೆ.

ಇಂದಿನ ಹೈಡ್ರೋಜನ್ ಬಾಂಬಿನ ಯುಗದಲ್ಲಿ, ಮನುಷ್ಯನ ನಾಗರಿಕತೆ ಸಂಪೂರ್ಣ ಲಯವಾಗುವ ಭೀತಿಯುಂಟಾಗಿದೆ. ಅಟಂ ಬಾಂಬು, ಹೈಡ್ರೋಜನ್ ಬಾಂಬುಗಳ ಉತ್ಪಾದನೆಯೇನೂ ಈ ಹೆದರಿಕೆಯಿಂದ ಕಡಿಮೆಯಾಗಿಲ್ಲ. ಆದರೆ ಅವುಗಳ ಉತ್ಪಾದನೆಯಾದರೂ, ಮಾನವಕುಲದ ಪರಸ್ಪರ ನಾಶದ ಹೆದರಿಕೆಯಿಂದ 'ಯಾರೂ ಅವುಗಳನ್ನು ಯುದ್ಧದಲ್ಲಿ ಉಪಯೋಗಿಸಲಾರರು' ಎಂಬ ಆಸೆಯೇನೋ ಜಗತ್ತಿನ ಬಹು ಮಂದಿಗಳಿಗಿದೆ.

ಶ್ರೀನಿವಾಸರ 'ಹೇಮಕೂಟದಿಂದ ಬಂದ ಮೇಲೆ' ಎಂಬ ಕತೆಯಲ್ಲಿ, ಶಕುಂತಲೆ ಕಣ್ವರ ಆಶ್ರಮಕ್ಕೆ ಮರಳಿದಾಗ "ಆಸೆಯರಿಯದ ಸುಖವೇ ಸುಖ" ಎಂದು ತಿಳಿದಳಂತೆ. ರಾಜಧಾನಿಗೆ ಮರಳುವಾಗ ನಿಜವಾದ ಸುಖವನ್ನು ಹಿಂದೆ ಉಳಿಸಿಹೋಗುವೆನೆಂದು ತಿಳಿದೇ ಕಣ್ವಋಷಿಯ ಸಾಕುಮಗಳು ರಥವನ್ನೇರಿದಳೆಂದು ಶ್ರೀನಿವಾಸರು ವರ್ಣಿಸಿದ್ದಾರೆ. ಕಷ್ಟಗಳನ್ನುಂಡು ನಂತರದ ಸುಖದ ವಿಷಯದಲ್ಲಿಯೇ ಅಪನಂಬಿಕೆ ಪ್ರಾರಂಭವಾದ ಮನೋಭೂಮಿಕೆಯಲ್ಲಿ ಬಂದ ಮಾತದು. ಆದರೂ ಆ ಸುಖದ ಆಸೆಯೇ ಶಕುಂತಳೆಯ ಮಧುಜೀವನವನ್ನು ನಂದನವನದಲ್ಲಿ ವಿಹರಿಸುವಂತೆ ಮಾಡಿದುದು. ಪತಿಯಿಂದ ಪರಿತ್ಯಕ್ತಳಾಗಿ ಪರ್ವತದಲ್ಲಿ ಕಾಲ ಕಳೆಯುತ್ತಿದ್ದಾಗ, ಆ ಆಸೆಯೇ ಪ್ರಾಣಧಾರಣೆ ಮಾಡಿಕೊಂಡಿರಲು ಆಕೆಯನ್ನು ಪ್ರೇರೇಪಿಸಿದುದು. ಆ ಆಸೆಯೇ ಭರತನ ಮುಂದಿನ ಚಕ್ರವರ್ತಿತ್ವದ ಕನಸನ್ನು ನನಸಾಗಿ ಮಾಡಿದುದು.

ಪ್ರಪಂಚದ ಸುಖ-ಸೌಂದರ್ಯಗಳಿಗೆ ಪರಿಮಿತಿಯಿರುತ್ತದೆ. ಆದರೆ ಮಂಗಳಲೋಕದ ಅಂಗಳಕೇರಬಲ್ಲ, ಇಲ್ಲದ ಲೋಕವನ್ನು ಉಂಟುಮಾಡಬಲ್ಲ ಮನಸ್ಸು ಕಾಲ-ದೇಶಗಳನ್ನು ಮೀರಿ ಸೀಮಾತೀತವಾಗಿರಬಲ್ಲುದು. ಆನಂದದ ಸತತಾನ್ವೇಷಣದಲ್ಲಿ ಮನುಷ್ಯನ ಮನಸ್ಸಿಗೆ ಪರಿಮಿತಿಯಿಲ್ಲ. ಜಾಗ್ರತ್ – ಸುಪ್ತ ಅವಸ್ಥೆಗಳೆರಡರಲ್ಲಿಯೂ ಮನಸ್ಸನ್ನು ಆಸೆಯು ತುಂಬಿರುತ್ತದೆ. ಜಾಗ್ರದವಸ್ಥೆಯಲ್ಲಿ ಮನುಷ್ಯನ ಆಸೆ ಒಂದು ರೀತಿಯಲ್ಲಿ ಮನಸ್ಸನ್ನಾವರಿಸಿದರೆ, ಸ್ವಪ್ನದಲ್ಲಿ ಇನ್ನಾವುದೋ ವಿಚಿತ್ರರೀತಿಯಲ್ಲಿ ಮಾನವನ ಆಕಾಂಕ್ಷೆಗಳು ಸಫಲವಾಗುತ್ತವೆ.

'From my heart comes and dances the image of my own desire !–' ನನ್ನ ಹೃದಯದಿಂದ ನನ್ನದೇ ಆಕಾಂಕ್ಷೆಯ ಬಿಂಬವು ಬಂದು ನನ್ನ ಮುಂದೆ ಕುಣಿಯುತ್ತದೆ'

ಎಂದು ಟಾಗೋರರು ಬಹು ಸುಂದರವಾಗಿ ತಮ್ಮ ಹಗಲುಗನಸಿನ ವರ್ಣನೆಯನ್ನು ಮಾಡುತ್ತಾರೆ. ಆದರೆ ಕಲ್ಪನಾರಮ್ಯವಾದ ಆ ಆಸೆ ವಾಸ್ತವಿಕ ಪ್ರಪಂಚಕ್ಕೆ ಸೇರಿರುವುದಿಲ್ಲ. ಕಾಂಚನಮೃಗ ಕಲ್ಪನೆಗೆ ಬಹು ರಮ್ಯ; ಆದರೆ ವಾಸ್ತವಿಕ ಜಗತ್ತಿನಲ್ಲಿ ಅದಕ್ಕೆ ಅಸ್ತಿತ್ವವಿರುವುದಿಲ್ಲ. [ಕಾಂಚನಮೃಗ ಆಶಾಸೃಷ್ಟಿಯದೆಂದು ಧ್ವನಿಸುವುದರಿಂದ, ರಾಮಾಯಣಕಾಲದ ಸನ್ನಿವೇಶದ ನೆನಪು ಬಂದು ಆಗಿನ ಸೀತೆಯ ಮನಸ್ಸಿನಲ್ಲಿ ಸುಪ್ತವಾಗಿದ್ದ ಸ್ತ್ರೀಸಹಜವಾದ ಪ್ರಸಾಧನಾಕಾಂಕ್ಷೆ, ಚಿನ್ನದ ಆಭರಣಗಳ ಆಸೆಗಳು, ಮಾಯಾಮೃಗದ ರೂಪವು ಸೀತೆಯ ಆಶಾಪೂರಿತ ಕಣ್ಣುಗಳಿಗೆ ಚಿನ್ನದ ಜಿಂಕೆಯು ಹಾಗೆ ಕಾಣುವಂತೆ ಎಸಗಿದ್ದಿರಬೇಕೆಂದು ಬಹು ಮಾರ್ಮಿಕವಾಗಿ ಟಾಗೋರರು ಸೂಚಿಸಿದರೆಂದು ಎನಿಸುತ್ತದೆ. ತನ್ನ ಸುಪ್ತಚೇತನದಲ್ಲಿ ಚಿನ್ನದ ಆಸೆ, ಬಣ್ಣದ ಉಡುಪಿನ ಆಕಾಂಕ್ಷೆಯಿದ್ದುದರಿಂದಲೇ ಸ್ವರ್ಣಮೃಗವಿರುವುದು ಅಶಕ್ಯ, ಇದು ರಾಕ್ಷಸರ ಮಾಯಾಜಾಲ—ಎಂದು ರಾಮನು ಎಷ್ಟು ಹೇಳಿದರೂ ಕೇಳದೆ, ನೋಟದಂತೆ ಮಾಟ ಎಂಬ ಮಾತಿನಂತೆ ಸೀತೆ ತನ್ನ ಮನಸ್ಸನ್ನು ಮಾಯಾಲೋಭದಿಂದ ಹಿಂತಿರುಗಿಸಲಾರದೆ ಹೋದುದು. ಅಸಾಧ್ಯವಾದ ಆಸೆಯು, ಅಸಾಧ್ಯವಾದ ವಿಷಯಗಳ ಆಕರ್ಷಣೆ ಪ್ರತಿಯೊಬ್ಬರಲ್ಲಿಯೂ ಇರುತ್ತದೆ. ನಾಗಚಂದ್ರ ಹೇಳಿದಂತೆ 'ಅಪ್ರಾಪ್ತಿರಸಂಬಡೆಗುಂ ವೈಷಯಿಕ ಸುಖದೊಳಿದು ವಿಸ್ಮಯಮೇ? 'ಸಾಧ್ಯವಾಗುವಂಥದಾಗಲಿ, ಸಾಧ್ಯವಾದುದಾಗಲಿ ಜಾಗ್ರದವಸ್ಥೆಯಲ್ಲಿಯೇ ತನ್ನ ಆಸೆಯ ಚಿತ್ರಣದಲ್ಲಿ ಮೈಮರೆತಿರುವುದನ್ನೇ ಹಗಲುಗನಸೆಂದು ಹೇಳಬಹುದು. ಮುಪ್ಪಿನ ಷಡಕ್ಷರಿಯ 'ತಿರುಕನ ಕನಸು' ನಿದ್ರೆಯಲ್ಲಿ ಬಿದ್ದುದಾದರೂ, ಆ ತಿರುಕ ಎಚ್ಚರಿರುವಾಗಲೂ ಇಂಥ ಹಗಲುಗನಸನ್ನೇ ಕಂಡಿದ್ದನೆಂದೂ ಅದೇ ಆಸೆ ಆತನ ಕನಸಿನಲ್ಲಿ ಸಫಲವಾಯಿತೆಂದೂ ತಿಳಿಯಬಹುದಾಗಿದೆ.

ಇಂಥ ಹಗಲುಗನಸು ಎಳೆಯ ಬಾಲಕರಲ್ಲಿ ಅತ್ಯಧಿಕವಾಗಿರುವುದು. 'Male belive' 'ನಂಬಿ ನಟಿಸು' ಎಂದು ಮಾನಸಶಾಸ್ತ್ರಜ್ಞರು ಕರೆಯುವ ರೀತಿಯಲ್ಲಿ, ತಮ್ಮ ಆಸೆ ಎಷ್ಟು ವಿಚಿತ್ರ ಅಸಂಭಾವ್ಯವಾಗಿದ್ದರೂ ಅದು ನಡೆದಂತೆಯೇ ಕಲ್ಪಿಸಿಕೊಂಡು ನಟಿಸುವ ವೃತ್ತಿ, ಅದರಿಂದ ಆನಂದಪಡೆಯುವ ಶಕ್ತಿ ಬಾಲಕರಲ್ಲಿರುವುದು. ಅವರು ಬಯಸಿದರೆ ಖುರ್ಚಿ ಕುದುರೆಯಾಗುವುದು, ಕೋಲು ಖಡ್ಗವಾಗುವುದು. ಮೋಟರು ಅದರ ಡ್ರಾಯವರ್ ಒಬ್ಬರೇ ಆಗಿ ಕೂಗಿ ಓಡಿ ತೋರಿಸಬಲ್ಲರು. ತಾವು ದೊಡ್ಡವರ ವೇಷ-ಭೂಷಣ ಧರಿಸಿ ದೊಡ್ಡವರೇ ಆಗಿದ್ದೇನೆಂದು ನಟಿಸುವುದು ಚಿಕ್ಕ ಹುಡುಗರ ಪ್ರವೃತ್ತಿ. ಟಾಗೋರರ 'Crescent Moon' 'ಬಿದಿಗೆಯ ಚಂದ್ರ' ಎಂಬ ಕವನಸಂಕಲನದಲ್ಲಿ, ಚಿಕ್ಕ ಬಾಲನ ಹಗಲುಗನಸಿನ ಚಿತ್ರ ಸುಂದರವಾಗಿ ಬಂದಿದೆ. ಇಂಥವೆಲ್ಲದರಲ್ಲಿ ಅನುಕರಣಪ್ರವೃತ್ತಿಯಿದ್ದರೂ, ಬಾಲಕರ ಸುಪ್ತ ಆಕಾಂಕ್ಷೆಗಳ ಮೂಲಕ ಹಗಲುಗನಸಿನ ಸ್ವರೂಪ ಇಂಥ ವರ್ತನೆಗೆ ಪ್ರಾಪ್ತವಾಗುತ್ತದೆ. ಅದು ಕೌಮಾರ್ಯದಲ್ಲಿ ಸ್ವಲ್ಪ ಕಡಿಮೆಯಾದಂತೆ ಕಂಡರೂ, ಯೌವನದ ಪ್ರಥಮದಲ್ಲಿ ವಿಶೇಷವಾಗಿ ಸುಕುಮಾರಭಾವದಿಂದ ತುಂಬುವುದು. ಈ ಭಾವದ ಹುಚ್ಚುಹೊಳೆ


## ಬಡತನದ ಬಾಳು

( ಕಥಾಸಂಕಲನ )

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರಾ. ಅ. ೧೨೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ


ಸಾಮಾನ್ಯವಾಗಿ ಸ್ತ್ರೀರೂಪದ ಪಾತ್ರೆಯಲ್ಲಿ ಪ್ರವಹಿಸುವುದೂ ಉಂಟು. ಇಲ್ಲವೆ ಅದಕ್ಕೇ ವಿವಿಧ ಆದರ್ಶಗಳ, ಕಲೆಯ, ಸಾಹಿತ್ಯಗಳ ಆಸೆಯ ಕಾಲುವೆಗಳು ಹೊರಟು, ವಿವಿಧಕ್ಷೇತ್ರಗಳಲ್ಲಿ ವಿವಿಧ ಕೃಷಿಗಳಿಗೆ ನೆರವಾಗುವುದೂ ಉಂಟು. ತನ್ನ ಮೆಚ್ಚಿನ ಅಪ್ಸರೆಯನ್ನೋ, ಅಥವಾ ಸಿನಿಮಾ ನಟಿಯನ್ನೋ ತನ್ನ ಜೀವನದ ಆದರ್ಶದ ಪೂರ್ಣಪಾತ್ರೆಯೆಂದು ತಿಳಿದು ಸುಖಿಸುವವರೂ ಉಂಟು. ಸಮಗ್ರ ಜೀವನದ ತುಂಬುನದಿಯ ಪೂರ್ಣಪಾತ್ರೆಯಲ್ಲಿ ತಮ್ಮ ಜೀವನದ ನೀರಿನ ಕಣಗಳನ್ನು ಬೆರಸಿ ಸುಖಪಡುವವರೂ ಉಂಟು.

ಮನುಷ್ಯರಲ್ಲಿ ಎಲ್ಲರಿಗಿಂತ ಹೆಚ್ಚಿನ ಹಗಲುಗನಸುಗಾರರೆಂದರೆ ಕವಿಗಳು—ದಾರ್ಶನಿಕರು. ಅಪೂರ್ಣವಾದ ಜೀವನದ ನಾನಾ ಮುಖಗಳನ್ನು ಸಾಧ್ಯವಾದ ಮಟ್ಟಿಗೆ ಪೂರ್ಣತೆಗೊಯ್ಯುವ ಕೆಲಸವನ್ನು ಮಾಡಲು, ಈ ಮಹನೀಯರು ತಮ್ಮ ತಮ್ಮ ಕನಸು ಕಾಣುವ ಶಕ್ತಿಯನ್ನು ಉಪಯೋಗಿಸುವರು. ಹೊಸ ಸೃಷ್ಟಿಯನ್ನು ಕಾಣುವ ಮೊದಲು, ಇದ್ದ ಸೃಷ್ಟಿಯನ್ನೇ ಇನ್ನಷ್ಟು ವಿಕಾರ ಮಾಡಿ ಕಾಣುವವರು ಕೆಲವರು. ಸೃಷ್ಟಿಯ ಆಕಾರ-ವಿಕಾರ ಇವೆರಡನ್ನು ಕಂಡೂ ಅದರ ಹೊಸ ಪ್ರಕಾರವನ್ನು ಸೃಜಿಸಲು ನೋಡುವವರು ಕೆಲವರು. ಸ್ವರ್ಗ-ನರಕ-ಮೋಕ್ಷಗಳ ಕಲ್ಪನೆಗಳೆಲ್ಲಾ ಈ ಪ್ರತ್ಯಕ್ಷ ಸೃಷ್ಟಿಯನ್ನು ದೃಷ್ಟಿಸಿ ಬಂದ, ಅನುಭವದ ಅಂತರ್‌ಗೋಚರದಿಂದ ಬಂದ ಬಹಿರ್‌ರೂಪಗಳು ಮಾತ್ರ. ಶ್ರೀಮಾನ್ ಕುವೆಂಪು ವ್ಯಕ್ತಗೊಳಿಸಿದಂತೆ 'ಸ್ವರ್ಗವೇ ಭೂಮಿಗಿಳಿಯದಿರೆ, ಸ್ವರ್ಗವು ಬೇರೆಲ್ಲಿಯೂ ಇಲ್ಲಾ, ಇಲ್ಲಾ, ಇಲ್ಲಾ.' ಆ ಸ್ವರ್ಗವು ಕವಿಗಳ ಹಗಲುಗನಸಿನ ದೃಷ್ಟಿಯಲ್ಲಿ ಸ್ಪಷ್ಟವಾಗಿ ಕಾವ್ಯದಲ್ಲಿ ಮೂರ್ತಸ್ವರೂಪವನ್ನು ಪಡೆದಿರುವುದು

ವೈಕುಂಠವನ್ನು ಕಂಡು ವರ್ಣಿಸಿದ ದಾಸವರ್ಯರೂ ಸ್ವರ್ಗ-ನರಕಗಳನ್ನು ಕಂಡು ವರ್ಣಿಸಿದ ಡಾಂಟೆ ಮಹಾಕವಿಯೂ ಕಂಡ ರೀತಿಗಳಲ್ಲಿ ಹೆಚ್ಚು ಕಡಮೆಗಳಿದ್ದರೂ ನೋಟ ಒಂದೇ--ಅದು ಹಗಲುಗನಸಿನ ನೋಟ. ಪರಮಾತ್ಮನನ್ನು ಪ್ರತ್ಯಕ್ಷ ನೋಡಿದೆನೆಂದು

ವರ್ಣಿಸುವ ನಂತರ ಆ ದರ್ಶನ ಹಗಲುಗನಸಿನ ನೋಟ. ಚಿಕ್ಕ ಬಾಲಕರು ಅಂಬೆಗಾಲಿಡುತ್ತ ಹರಿಯುತ್ತಿರುವುದನ್ನು ನೋಡಿ, ಕೃಷ್ಣನೆಂದು ಕಲ್ಪನೆ ಮಾಡುತ್ತಿದ್ದ ರಾಮಕೃಷ್ಣ ಪರಮಹಂಸರದು ಭಾವಸಮಾಧಿಯು ಹಗಲುಗನಸೇ ಸರಿ. 'ದೃಷ್ಟಿಯಂತೆ ಸೃಷ್ಟಿ' ಎನ್ನುವುದು ಹಗಲುಗನಸಿನ ನೋಟಕ್ಕೆ ಅಕ್ಷರಶಃ ಹೊಂದುತ್ತದೆ.

ಇದೇ ಹಗಲುಗನಸು ಪ್ರಾಕೃತಿಕ ಘಟನೆ, ಜೀವನದ ವ್ಯಕ್ತಿಗಳ ಮಸುಕಾದ ನೆನಪುಗಳ ಮೂಲಕ ಇನ್ನೂ ಎಷ್ಟೋ ದೇವತೆಗಳ ಸೃಷ್ಟಿಗೆ ಕಾರಣವಾಗಿದೆ. 'ಈ ಜಗತ್ತೇ ಒಂದು ದೊಡ್ಡ ಹಗಲುಗನಸು' ಎಂದು ಮಾಯಾವಾದಿಗಳು ಹೇಳುವರು. ಗ್ರೀಕರ ಜ್ಯೂಸ್, ಅಥೀನಾ, ಅಪೋಲೋ—ಆರ್ಯರ ಇಂದ್ರ, ವರುಣ, ಅಗ್ನಿ, ಗಣಪತಿ, ಶಿವ, ವಿಷ್ಣು, ಸರಸ್ವತಿ ಈ ದೇವ-ದೇವತೆಗಳೆಲ್ಲಾ ಮನುಷ್ಯನ ಹಗಲುಗನಸಿನ ರಚನೆಗಳೇ ಎಂದೇ ಹೇಳಬಹುದಲ್ಲವೇ? ಬೈಬಲ್ಲಿನಲ್ಲಿ 'ದೇವರು ಮನುಷ್ಯನನ್ನು ನಿರ್ಮಿಸಿದ ತನ್ನದೇ ಪ್ರತಿರೂಪದಲ್ಲಿ' ಎಂದಿದೆ. ಮನುಷ್ಯನೇ ದೇವತೆಗಳನ್ನು ನಿರ್ಮಿಸಿದನೆಂದು ಹೇಳುವವರೂ ಇದ್ದಾರೆ.

ಪರಮಾತ್ಮನನ್ನು ಅರಸುತ್ತ ತಪಸ್ಸು ಮಾಡುವವರದು ಒಂದು ರೀತಿಯ ಹಗಲುಗನಸು. ಸಾಮಾನ್ಯನೊಬ್ಬನನ್ನು ಮದುವೆಯಾಗಿ ತಾನು ರಾಣಿಯೆಂದು ತಿಳಿದು ಮೈಮರೆತು ಕನಸು ಕಾಣುವ ಹೆಂಗುಸಿನದು ಇನ್ನೊಂದು ರೀತಿಯ ಹಗಲುಗನಸು. ತಾನು ಕರಣಿಕನಾಗಿದ್ದರೂ ವರಿಷ್ಠನಾದ ಆಸೆಯ ಚಿತ್ರ ಕಾಣುವುದು ಇನ್ನೊಂದು ತರದ ಹಗಲುಗನಸು. ಕಾದಂಬರಿಯ ನಾಯಕನೊಡನೆ ವಿಹರಿಸುತ್ತಾ ಆವನ ಸಾಹಸ, ಸುಖ-ದುಃಖಗಳಲ್ಲಿ ತನ್ನ ತಾದಾತ್ಮ್ಯವನ್ನು ಕಾಣುವುದು ಮತ್ತೊಂದು ರೀತಿಯ ಹಗಲುಗನಸು. ಹೊಸ ಹೊಸ ವಸ್ತುಗಳನ್ನು, ಯಂತ್ರಗಳನ್ನು ನಿರ್ಮಿಸಲು ಯತ್ನಿಸುವ ವಿಜ್ಞಾನಿಗಳೂ ಒಂದು ರೀತಿಯ ಹಗಲುಗನಸುಗಾರರೇ. ಒಂದು ದಿನದ ಹಗಲುಗನಸು ಇನ್ನೊಂದು ದಿನಕ್ಕೆ ನನಸಾಗಲಾರದೆಂತಲ್ಲ. ಆದರೆ ಅಷ್ಟು ಸಮಯಕ್ಕೆ ಅದು ಹಗಲುಗನಸಲ್ಲದೆ ಇನ್ನೇನಲ್ಲ. ಬೀದಿಯ ಶಿಲಾತಲದ ಮೇಲೆ ತಲೆಯಿಟ್ಟು ಮಲಗಿದ ಭಿಕ್ಷುಕ, ಶ್ರೀಮಂತರ ಸಾಧನ ಸುಖದ ಸುಪ್ಪತ್ತಿಗೆಯ ಕನಸನ್ನು ಎಚ್ಚರಿನಲ್ಲಿಯೂ ಕಾಣುವುದಿಲ್ಲವೆಂದು ಆದಾರು ಹೇಳಬಲ್ಲರು? ಶೇಖಮಹಮ್ಮದನಂತೂ ತನ್ನ ಹಗಲುಗನಸಿನ ಸಲುವಾಗಿಯೇ ಪ್ರಸಿದ್ಧನಾಗಿ ಹೋಗಿದ್ದಾನೆ. ತಾನು ಪ್ರೀತಿಸಿದ ತರುಣಿಯನ್ನು ಮದುವೆಯಾಗಲಾರದೆ ಅವಳನ್ನು ಮದುವೆಯಾಗಿ ಅವಳ ಜೊತೆ ವಿಹರಿಸುತ್ತಿದ್ದೇನೆಂದು ಹಗಲುಗನಸು ಕಂಡವರ ಸಂಖ್ಯೆಗೆ ಮಿತಿಯಿಲ್ಲ.

ಹಗಲುಗನಸನ್ನೇ ಸಂಪೂರ್ಣ ಹಚ್ಚಿಕೊಂಡು ಅದು ಪೂರೈಸದಿರಲು ನಿರಾಶೆಯಿಂದ ಹುಚ್ಚರಾದವರಿದ್ದಾರೆ. ತಮ್ಮ ದುಃಖವನ್ನು ಇನ್ನಿಷ್ಟು ಹೆಚ್ಚಿಸಿಕೊಂಡವರಿದ್ದಾರೆ. ಮತ್ಸರದ ಬೆಂಕಿಗೆ ತುಪ್ಪ ಹೊಯ್ದವರಿದ್ದಾರೆ. ಬಾಳನ್ನು ಅಸಹನೀಯವಾಗಿ ಮಾಡಿಕೊಂಡವರಿದ್ದಾರೆ ಹೇಗಿದ್ದರೂ ಬಹುಸಂಖ್ಯೆಯ ಜನ ಹಗಲುಗನಸು ಹಗಲುಗನಸೆಂದೇ ತಿಳಿದು ಸುಖವನ್ನು ಹೊಂದುತ್ತಾರೆ. ಮನುಷ್ಯನ ಇಚ್ಛೆಯೆಲ್ಲವೂ ಆತ ಬಯಸಿದಂತೆಯೇ ಕೈಗೂಡುವುದು ಹಗಲುಗನಸಿನಲ್ಲಿ ಮಾತ್ರವೇ. ಇರುಳಿನ ಕನಸು ಮನುಷ್ಯನ ಆಸೆಯಿಂದ ಬಣ್ಣ ಪಡೆದಿದ್ದರೂ, ಆತ ಬಯಸಿದ ಹಾಗೆಯೇ ಕನಸು ಬೀಳುವುದೆಂಬ ನಿಯಮವಿಲ್ಲ. ಆದರೆ ಪ್ರತಿಯೊಬ್ಬನೂ ತನ್ನ ಹಗಲುಗನಸಿನ ರಾಜ್ಯದ ಅರಸನಾಗಿದ್ದಾನೆ. ತನ್ನ ದೇಶದಲ್ಲಿ ತನ್ನ ಅಧಿಕಾರವನ್ನೊಪ್ಪದ ಅಸಂಖ್ಯ ಜನರ ಬಾಹ್ಯ ಆಚಾರದ ಮೇಲೆ, ತನ್ನ ಶಕ್ತಿಯ ನಿಯಂತ್ರಣ ಹೇರಿದ ಸರ್ವಾಧಿಕಾರಿ, ಅವರ ಗುಪ್ತ-ಸುಪ್ತ ಆಕಾಂಕ್ಷೆಗಳನ್ನು ತನ್ನ ಪಾಶವೀ ಬಲದಿಂದ ನಾಶಮಾಡಬಲ್ಲನೇ? ತನ್ನನೊಲ್ಲದ ಹೆಂಡತಿಯ ಮೇಲೆ, ಅಥವಾ ಗಂಡನ ಮೇಲೆ ಎಷ್ಟೇ ದಬ್ಬಾಳಿಕೆ ನಡಿಸಿದವನೂ (ಳೂ) ತನ್ನ ಪತ್ನಿಯ (ಪತಿಯ) ಹಗಲುಗನಸಿನ ಸವಿಗಾರನನ್ನು (ಳನ್ನು) ಆಕೆಯ (ಆತನ) ಹೃದಯದಿಂದ ಓಡಿಸಲಾರನು (ಳು). ಹಗಲುಗನಸು ಕಾಣುವ ಶಕ್ತಿಯಿಲ್ಲದಿದ್ದರೆ ಜೀವನವು ಎಷ್ಟು ನಿಸ್ಸಾರವಾಗುವುದು ನೋಡಿ! ಎಳೆಯನ ಕನಸು ಆತನ ಬೆಳವಣಿಗೆಗೆ ಸಹಾಯಕ. ತರುಣನ ಕನಸು ಆತನ ಮುಂದಿನ ಬಾಳಿನ ಕೈಗಂಬ. ವೃದ್ಧನ ಕನಸು ಆತನ ದಾರಿಯ ಬುತ್ತಿ. ವಯಸ್ಸು ಮುಪ್ಪಾದರೂ ನೆನಪು ಮುಪ್ಪೆ? ಬಹುದೂರ ಕಳೆದುಹೋದ ದಿನಗಳು ಮುಪ್ಪಿನಲ್ಲಿ ಬಹು ವಿವರವಾಗಿ ಕಾಣುವುವು. ಮುಪ್ಪಿನ ಹಣ್ಣುಮುದುಕ ತನ್ನ ಮನೋರಾಜ್ಯದಲ್ಲಿ ತನ್ನ ಬಾಲ್ಯ, ಕೌಮಾರ್ಯ, ವೈವಾಹಿಕ ಜೀವನಗಳನ್ನು ಮರಳಿ ಅನುಭವಿಸುತ್ತಾನೆ. ಕೆಲ ಬಾರಿ ನಡೆದಂತೆಯೇ, ಅನೇಕ ಬಾರಿ ನಡೆಯಬೇಕಾಗಿರುವಂತೆ, ಮುಪ್ಪಿನ ತೀರ ಅರಳು ಮರುಳು ಸ್ಥಿತಿಯಲ್ಲಿ ನಡೆಯದಿರುವ ಘಟನೆಗಳನ್ನೂ ಊಹಿಸುವುದುಂಟು. ಒಬ್ಬ ಸೇನಾಪತಿ ತನ್ನ ಮುಪ್ಪಿನಲ್ಲಿ ತಾನು ಹಿಂದೆ ಸೋತ ಯುದ್ಧದಲ್ಲಿ ಗೆದ್ದಿದ್ದೆನೆಂದೇ ತಿಳಿದುಬಿಟ್ಟಿದ್ದನಂತೆ. ಎಲ್ಲರಿಗಿಂತ ಹೆಚ್ಚಾಗಿ ಹುಚ್ಚರು ತಮ್ಮ ಹಗಲುಗನಸಿನ ರಾಜ್ಯದಲ್ಲಿ ಸುತ್ತಾಡುವುದು ಹೆಚ್ಚು. ಗಾಳಿಯ ಯಂತ್ರವನ್ನು ಕಂಡು ರಾಕ್ಷಸರೆಂದು ಏರಿ ಹೋದ ವೀರ ಹಗಲುಗನಸುಗಾರ ಡಾನ್ ಕಿಹೋಟೆಯ ಹಗಲುಗನಸಿನ ಶಕ್ತಿ ಹುಚ್ಚರಲ್ಲಿ ವಿಕಾರೀತವಾಗಿದೆ. ಏನನ್ನೋ ಊಹಿಸಿ ನಗುವುದು, ಅಳುವುದು, ಇವುಗಳಲ್ಲಿ ಅವರು ತಮ್ಮ ಬಾಹ್ಯ ಜಗತ್ತಿನಿಂದ ಬಹು ದೂರ ಹೋಗಿರುತ್ತಾರೆ. 'ಮನಸ್ಸಿನಲ್ಲಿ ಮಂಡಿಗೆ ತಿಂದರೆ ಗೋದಿಯ ರೊಕ್ಕವನ್ನು ಕೊಡುವವರಾರು?' ಎಂಬ ಗಾದೆಯ ಪ್ರಶ್ನೆಗೆ 'ಗೋದಿಯ ರೊಕ್ಕ ಮನಸ್ಸಿನಲ್ಲಿಯೇ ಹೇಗೋ ತಾನಾಗಿಯೇ ಸಂದಿರುತ್ತದೆ' ಎಂಬುದೇ ಉತ್ತರ.

ಸ್ವಪ್ನಲೋಕವ ಜಾಗ್ರತಂ ಸುಳ್ಳೆನುವನಲ್ತೆ? ।
ಸುಪ್ತಂಗೆ ಜಾಗ್ರತನ ಲೋಕಮುಂ ಸುಳ್ಳೇ ॥

ಎಂದು ಮಂಕುತಿಮ್ಮನೆಂದಂತೆ ಹಗಲುಗನಸು ಕಾಣುವವನಿಗೂ ಸಹ ಅಷ್ಟು ಹೊತ್ತು ನಿಜವಾದ ಜಗತ್ತು ಸುಳ್ಳಾಗಿ ಕಾಣುವುದೆಂದು ಹೇಳಬಹುದಲ್ಲವೇ?

# ದಂಪತಿಧರ್ಮ

ಶ್ರೀ. ಕೆ. ವೆಂಕಟರಾಯಾಚಾರ್ಯ, ವಿದ್ವಾನ್, ಸುರತ್ಕಲ್ಲು

卐

**ಪ್ರಾಚೀನ ಭಾರತಸಂಸ್ಕೃತಿಯಲ್ಲಿ ದಾಂಪತ್ಯದ ವಿಷಯದಲ್ಲಿ ಅದೆಷ್ಟು ಸೂಕ್ಷ್ಮ ವಿಚಾರವಾದ-ಲಾಗಿದೆಯೆಂಬುದನ್ನು, ಇಂದಿನವರಲ್ಲಿ ಸರಿಯಾಗಿ ಅರಿತವರು ಕಡಮೆ. ಅದನ್ನು ಅರಿಯದವರೇ ಈಗ ಭಾರತೀಯ ವಿವಾಹಪದ್ಧತಿಯಲ್ಲಿ ಕ್ರಾಂತಿಯಾಗಬೇಕೆಂದು ಕೂಗುತ್ತಲಿದ್ದಾರೆ!**

卐

ಸ್ತ್ರೀಪುರುಷರು ಮದುವೆಯಾಗಿ ತಮ್ಮ ಸಂಸಾರ ಹಾಗೂ ಜೀವನವನ್ನು ಸಾಗಿಸುವರು. ಮದುವೆಯಾಗುವುದು ಕೇವಲ ಇಂದ್ರಿಯಸುಖಕ್ಕಾಗಿ ಅಲ್ಲ; ಸ್ತ್ರೀಯು ಪುರುಷನನ್ನು, ಪುರುಷನು ಸ್ತ್ರೀಯನ್ನು ಹೊಂದಿ ಬಾಳುವುದೇ ಗುರಿಯೆಂದು ಬಲ್ಲವರು ಹೇಳುವರು.

**೧. ದಂಪತಿ**: ಗಂಡ-ಹೆಂಡಿರಿಗೆ 'ದಂಪತಿ' ಯೆಂಬ ಹೆಸರು ಇದೆ. ಗಂಡಾಗಲೀ, ಹೆಣ್ಣಾಗಲೀ ಒಂಟಿಯಾಗಿ ಬಾಳುವುದು ತರವಲ್ಲ, ಪರಸ್ಪರ ಆಧರಿಸಿಕೊಂಡಿರುವುದರಿಂದಲೇ ಈ ಒಂದು ಹೆಸರಿಗೆ ಕಾರಣ ವೆನ್ನಬಹುದು. ದಂಪತಿಗಳಲ್ಲಿ ಒಂದುತನ, ಪ್ರೇಮ ಇರಬೇಕು. ಈ ಬಗೆಗೆ ಪ್ಲೇಟೋ ಎಂಬ ಗ್ರೀಕ ತತ್ತ್ವಜ್ಞಾನಿಯು ಹೇಳಿದುದೆಂಬ ಒಂದು ಕಟ್ಟುಕತೆಯಿದೆ:—

"ಪ್ರಾಚೀನ ಕಾಲದಲ್ಲಿ ಮನುಷ್ಯನ ಆಕಾರ ಈಗಿನಂತಲ್ಲ. ನಾಲ್ಕು ಕಾಲು, ನಾಲ್ಕು ಕೈ, ಎರಡು ಮೋರೆಗಳೂ, ಒಂದು ತಲೆಯೂ ಇದ್ದುವು. ಒಮ್ಮೆ ಅವನು ಉನ್ನತಿಯನ್ನು ಬಯಸಿದನು, ಸ್ವರ್ಗಕ್ಕೆ ಹೋಗಿ ದೇವತೆಗಳನ್ನು ಸೋಲಿಸಬೇಕೆಂದು ನಿಶ್ಚಯಿಸಿದನು. ಆ ರೀತಿಯಿಂದ ಮೇಲಕ್ಕೆ ಏರಿದನು.

ಆಗ ದೇವತೆಗಳು ಇಂದ್ರನಿಗೆ ಮೊರೆಯಿಟ್ಟರು. ಇಂದ್ರನು ದೇವತೆಗಳನ್ನು ಸಂತಯಿಸಿದನು. 'ಈ ಮನುಷ್ಯವರ್ಗವನ್ನು ಕೊಂದರೆ ಯಜ್ಞಗಳು ಇಲ್ಲದಂತಾಗಿ, ತಮಗೆ ತೊಂದರೆಯಾಗುವುದು. ಈ ಮನುಷ್ಯ ಶರೀರವನ್ನು ಸರಿಯಾಗಿ ಎರಡು ಪಾಲು ಮಾಡಿದರೆ, ಈ ಗರ್ವ-ಶಕ್ತಿಗಳು ಇಲ್ಲದಂತಾಗುವವು.' ಎಂದು ಬಗೆದನು. ಅಂತೆಯೇ ಎಲ್ಲವೂ ನಡೆಯಿತು. ಆ ಶರೀರದ ಎರಡು ಪಾಲುಗಳೇ ದಂಪತಿಗಳು. ಇವರಿಬ್ಬರೂ ಪ್ರೇಮಪಾಶದಿಂದ ಬಂಧಿತರಾಗಿದ್ದಾರೆ"— ಎಂದು. ಗಂಡು ಮತ್ತು ಹೆಣ್ಣು ಒಂದುತನದಿಂದ ಬಾಳಿದರೇನೇ 'ಒಂದು ತಲೆ' 'ಒಂದು ಬಾಳು'; ಇಲ್ಲವಾದರೆ 'ಅರೆತಲೆ, ಅರೆ-ಬಾಳು' ಎಂದು ಮರ್ಮ. 'ಅರ್ಧಂ ಭಾರ್ಯಾ ಮನುಷ್ಯಸ್ಯ ಭಾರ್ಯಾ ಶ್ರೇಷ್ಠತಮಃ ಸಖಾ' ಎಂದು ಮಹಾಭಾರತದ ವಾಕ್ಯವೂ ಇದೇ ಅರ್ಥವನ್ನು ಸೂಚಿಸುವುದು.

**೨. ದಂಪತಿಗಳ ಕರ್ತವ್ಯ**: ಪತಿಯು ಪತ್ನಿಯ ಆಧಾರ. ಪತ್ನಿಯು ಪತಿಯ ಸಹಧರ್ಮಿಣಿ ಆಗಿದ್ದಾಳೆ. ದಂಪತಿಗಳ ಕರ್ತವ್ಯ-ಗಳು ಹಲವು ಇವೆ. ಅವುಗಳಲ್ಲಿ ಕೆಲವನ್ನು ಹೀಗೆನ್ನಬಹುದು:—

**೧. ಗಂಡಿನ ಕೆಲಸ**: ಸಂಸಾರದಲ್ಲಿ ಗಂಡಿನ ಜವಾಬ್ದಾರಿ ಹೆಚ್ಚಬೇಕು.

ಸ್ವಾಂ ಪ್ರಸೂತಿಂ ಚರಿತ್ರಂಚ ಕುಲಮಾತ್ಮಾನಮೇವಚ
ಸ್ವಂ ಚ ಧರ್ಮಂ ಪ್ರಯತ್ನೇನ ಜಾಯಾಂ ರಕ್ಷನ್ ಹಿ ರಕ್ಷತಿ
(ಮನು)

ಗಂಡನು ಹೆಂಡತಿಯನ್ನು ಚೆನ್ನಾಗಿ ಇರಿಸಿಕೊಳ್ಳಬೇಕು. ಆಗ ತನ್ನ ಸಂತಾನ, ಶೀಲ, ಕುಲಗಳನ್ನೂ, ತನ್ನನ್ನು ಮತ್ತು ಧರ್ಮ-ವನ್ನೂ ಕಾಪಾಡಿಕೊಳ್ಳುತ್ತಾನೆ. ಗಂಡನು ಹೆಂಡತಿಯನ್ನು ಚೆನ್ನಾಗಿ ಇರಿಸುವ ಕೆಲವು ಉಪಾಯಗಳು ಇವು:—

ಅರ್ಥಸ್ಯ ಸಂಗ್ರಹೇ ಚೈನಾಂ ವ್ಯಯೇ ಚೈವ ನಿಯೋಜಯೇತ್
ಶೌಚೇ ಧರ್ಮೇಽನ್ನಪಕ್ತ್ಯಾಂ ಚ ಪಾರಿಣಾಹ್ಯಸ್ಯ ವೇಕ್ಷಣೇ
(ಮನು)

ಹಣದ ಕೂಡಿಕೆ-ವೆಚ್ಚಗಳಲ್ಲಿ ನಿರೀಕ್ಷಣೆಗೆ ಆಕೆಯನ್ನು ಹಚ್ಚಬೇಕು. ಧರ್ಮನಿರ್ಮಲ, ಪಾಕ ಹಾಗೂ ಯಾವತ್ತೂ ಉಪಕರಣ-ಗಳಲ್ಲಿ ಜಾಗ್ರತೆಗೆ ಆಕೆ ಹಚ್ಚಿರಬೇಕು. 'ಹೆಣ್ಣು ಗಂಡಿನ ಅಧೀನ' ಎನ್ನುವುದಕ್ಕಿಂತ 'ಹೆಣ್ಣು ಗಂಡು ಒಂದು ಜತೆ' ಎನ್ನುವುದೇ ಮೇಲೆಂದು ಇಲ್ಲಿ ತಿಳಿಯುವುದು.

---

ವಿ. ಸೂ.:— ಮನುವು ಮಾನವಜನಾಂಗದ ಮೂಲಪುರುಷನೂ ಅಹುದು, ಮಾನವಧರ್ಮಗಳ ಆದ್ಯಪ್ರಸಾರಕನೂ ಅಹುದು. ಹಾಗೆಯೇ ವ್ಯಾಸನು 'ಮಹಾಭಾರತ'ವೆಂಬ ಇತಿಹಾಸ ಗ್ರಂಥವನ್ನು ಬರೆದವನು, ಭಾರತೀಯರ ಧರ್ಮವೇನೆಂದು ನಿರೂಪಿಸಿದವನು. ಇವರಿಬ್ಬರ ಗ್ರಂಥಗಳಲ್ಲಿರುವ, ಎಲ್ಲಾ ಜನಾಂಗ ಒಪ್ಪುವ 'ಮಾನವಧರ್ಮ'ವೇನೆಂದು ತಿಳಿಯುವುದು, ಹಾಗೆ ನಡೆಯುವುದು ನಮ್ಮ ಜೀವನಶೋಧನೆಗೆ ಅಗತ್ಯ. ಈ ಪ್ರಕರಣವು 'ಮಾನವ ಧರ್ಮಚಕ್ರ' ಎಂಬ ಸಂಕಲನದಿಂದ ಆಯ್ದುದಾಗಿದೆ. —ಲೇ.

೨. ಹೆಣ್ಣಿನ ಕೆಲಸ: ಹೆಣ್ಣು ಗಂಡಿನೊಡನೆ ಬಾಳುವಲ್ಲಿ ತನ್ನ ಪಾಲಿನ ಕೆಲಸಗಳನ್ನು ಹೇಗೆ ನಡೆಸಬೇಕೆಂದು ತಿಳಿದಿರಬೇಕು. 'ಪತಿಯೇ ತನ್ನ ಹಿತ, ತಾನು ಪತಿಯ ಹಿತಳೆಂದು' ಬಾಳನ್ನು ನಡೆಯಿಸುವವಳು 'ಪತಿವ್ರತೆ'. ಆಕೆಯ ಶೀಲ ಆಕೆಯ ಹಿಡಿತದಲ್ಲಿ ಇರುವುದು—

ಅರಕ್ಷಿತಾಃ ಗೃಹೇ ರುದ್ಧಾಃ ಪುರುಷೈರಾಪ್ತಕಾರಿಭಿಃ
ಆತ್ಮಾನಮಾತ್ಮನಾಯಾಸ್ತು ರಕ್ಷೇಯುಸ್ತಾಃ ಸುರಕ್ಷಿತಾಃ
(ಮನು)

ಆಪ್ತರು ಹೆಣ್ಣನ್ನು ಅದೆಷ್ಟು ತಡೆದಿಟ್ಟರೂ ಫಲವಿಲ್ಲ. ಯಾವಳು ತನ್ನನ್ನು ತಾನೇ ಕಾಯುವಳೋ, ಅವಳೇ ಸುರಕ್ಷಿತೆ, ಪತಿವ್ರತೆ. ಹೆಣ್ಣಿನ ಶೀಲ ರೂಪಿಸಲು ಆಕೆಯೇ ಕಾರಣಳಲ್ಲದೆ ಬೇರೆ ಆವ ತಡೆಯೂ ಚೆನ್ನಲ್ಲ.

ವ್ಯಾಸನು ದ್ರೌಪದಿಯ ಮುಖದಿಂದ ಸತ್ಯಭಾಮೆಗೆ ಹೇಳಿದ 'ಸ್ತ್ರೀಧರ್ಮ' ಇಲ್ಲಿ ಹೇಳತಕ್ಕುದು. ಅದು ಬಹಳ ವಿಸ್ತಾರವಾಗಿರುವುದರಿಂದ ಇಲ್ಲಿ ಬರೆದಿಲ್ಲ.

ಒಂದು ಸಂಸಾರ ಒಂದು ಪುಟ್ಟ ರಾಜ್ಯದಂತೆ; ಇಲ್ಲಿ ಚೆನ್ನಾಗಿ ಬಾಳಲು ಕಲಿಯಬೇಕು. ದಂಪತಿಗಳು, ಮಕ್ಕಳು, ನೆಂಟರು, ನೆರೆಯವರು ತಮ್ಮ ತಮ್ಮ ಪಾಲಿನ ಕೆಲಸ ಸರಿಯಾಗಿ ನೆರವೇರಿಸುವುದೇ 'ಸಂಸಾರ-ಯಾತ್ರೆ' ಹಾಗಿಲ್ಲದಿದ್ದರೆ 'ಸಂಸಾರ ಬಂಧನ' ಶ್ರೀರಾಮನು 'ಏಕಪತ್ನೀವ್ರತ' ನೆಂದು ವ್ಯಾಸ–ವಾಲ್ಮೀಕಿಗಳು ಹೇಳಿದ್ದಾರೆ. ಸೀತೆ, ದಮಯಂತಿ, ಗಾಂಧಾರಿ ಮುಂತಾದವರು ಪುರಾಣಕಾಲದಲ್ಲೂ; ದಾನಚಿಂತಾಮಣಿ ಅತ್ತಿಮಬ್ಬೆ, ಪದ್ಮಿನಿ ಮೊದಲಾದವರು ಚಾರಿತ್ರಿಕ ಯುಗದಲ್ಲೂ ಹೆಸರುಗೊಂಡ 'ಆದರ್ಶ ಪತಿವ್ರತೆ'ಯರು, 'ಭಾರತದ ನಾರೀಮಣಿ' ಗಳು!

---

# ಬೆಳಕಿನ ಕಣ್ಣುಗಳಿಂದ:

**ಶ್ರೀ. ಜ. ಶ್ರೀ. ಜ.**

ಶಂಖಚಕ್ರವ ಧರಿಸಿ ಭಿಂಕದಲಿ ಬಂದಿಲ್ಲ
ಕಿಂಕರಗೆ ವರವ ನೀಡಿಲ್ಲ । ನೀಡಿಲ್ಲವಾದರೆಯು
ಶಂಕಿಸೆನು ತಂದೆ ನೀನಿಹುದ. ೧

ಸತ್ಯ ನಿನ್ನದೆ ರೂಪು ಚಿತ್ತು ನಿನ್ನದೆ ರೂಪು
ಮತ್ತೆ ಆನಂದ ನಿನ ರೂಪು । ನಿನ ರೂಪು ಎದೆಗವಿಯ
ಕತ್ತಲೆಯ ಕಳೆಯದಿಹುದೇನು ? ೨

ನೆಲದಲ್ಲಿ ಜಲದಲ್ಲಿ ಮಲೆಗಳಲಿ ಮನಗಳಲಿ
ಎಲ್ಲೆಲ್ಲು ತೋರುತಿಹ ಚೆಲ್ವು । ಚೆಲ್ವು ನೀನಲ್ಲದಿ-
ನ್ನಿಲ್ಲ ನಂಬುವೆನು ಎಂದೆಂದು. ೩

ಹೂವಿನಲಿ ನಗುತಿಹುದು ನೋವಿನಲಿ ಮರುಗುವುದು
ಹಾವಿರಲಿ ಹುಲಿಯಿರಲಿ ಚೆಂದ । ಕಚ, ಕುಚ, ತ್ವಚದಿ
ಸೌಂದರ್ಯದಾ ತತ್ತ್ವದಿಂದ. ೪

ವಂದಿಸುತ ಕೆಲವುಗಳ ನಿಂದಿಸುತ ಕೆಲಕೆಲವ
ಕುಂದಿಸುತ ಹಲವುಗಳ ನುಂದಿ । ಮುಂದಿಗೈವುದು ಎಂತೋ
ಸೌಂದರ್ಯಪೂಜೆ ತಿಳಿದಂತೆ. ೫

ಅರಳಿಸುವ ರವಿ ಹೂವ ಹರುಷಿಸುವ ಕವಿ ನೋಡಿ
ಹರಿದು ಮುಡಿಯುವನು ಮತ್ತೊಬ್ಬ । ಒಬ್ಬೊಬ್ಬನೊಂದೊಂದು
ತೆರದೊಳವರವರ ನಯುವಂತು. ೬

ನಿತ್ಯ ತಪಿಸುವನು ಋಷಿ, ಸತ್ಯಶೋಧನೆ ಗುರಿಯು
ಮತ್ತಂತೆ ವಿಜ್ಞಾನಿ, ಕವಿಯು । ಕವಿಸಹಜ, ಕಳ್ಳನೂ
ಸತ್ಯತನವೆಂದೆ ಸಾಧಿಸುವಾ. ೭

ಎತ್ತ ನೋಡಿದರತ್ತ ಸತ್ಯಕ್ಕೆ ಪಟ್ಟವಲ!
'ಸತ್ಯಮೇವ ಜಯತೇ' ಸತ್ಯ । ಸತ್ಯದಾ ಹೆಸರಿನಲಿ
ಮಿಥ್ಯೆಯೂ ಬದುಕುವುದು ಕಾಣೊ. ೮

ಜಾರ-ಚೋರರು ವೀರರಾರೇನು ಹೆಣಗುವರು
ಸಾರಿ ನ್ಯಾಯವದು ತಮದೆಂದು । ತಮದೆಂದು ಸಾರುವುದು
ತೋರುವುದು ಅದುವೆ ಹಿರಿದೆಂದು. ೯

ಕುಂಟುಂಟು ಕುರುಡುಂಟು ಗಂಟುಂಟು ಮಕ್ಕಳಲಿ
ಕುಂದಿಸದು ಮಮತೆಯದರಿಂದ । ಅದರಿಂದ ಚೆಲುವುಸೆಲೆ
ಯುಂಟು ಪ್ರೀತಿನೇತ್ರಂಗಳಲ್ಲಿ. ೧೦

ಮಾತೆಯಾ ಕಣ್ಣಿಂದ ಯಾವಾತ ನೋಡುವ ಜಗವ
ಆತಗಹುದಲ್ತೆ ಅಪರೋಕ್ಷ । ಅಪರೋಕ್ಷವವಗಿರದೆ
ಆತುಮದ ಮಾತೇಕೆ ಜಗದಿ ? ೧೧

---

# ಮುತ್ತಿನ ಹಾರ

( ಯುದ್ಧಕಾಲದ ಕಥೆ )

**ಶ್ರೀ. ನೆಂ. ಮು. ಜೋಶಿ, ಧಾರವಾಡ**

卐

**ಯುದ್ಧಕಾಲದ ಗುಪ್ತಚಾರಕರ ಕಥೆಗಳೆಂದರೆ, ಪುರಾಣಕಾಲದ ರಾಕ್ಷಸರ ಮಾಯೆಯಾಟಗಳಂತೆ ಅದ್ಭುತವಾಗಿರುವುವು. ಬ್ರಿಟಿಷ್ ಸೈನ್ಯಾಧಿಕಾರಿ ಪಿಕ್‌ಫೋರ್ಡ್ ಸೇರಾದರೆ, ಚೀನೀ ಗುಪ್ತಪಡೆಯ ನಾಯಕ ಪೆಂಗ್‌ಯಾನ್ ಸವ್ಯಸಾಚಿಯಾಗಿ ನಿಂತ.**

卐

ಕಜಾಂಗದ ಜಂಗಲ್‌ಗಳಲ್ಲಿಯ ಐದುಮೈಲು ಹಾದಿಯನ್ನು ಕ್ರಮಿಸಿ, ಅಡವಿಯ ಮಧ್ಯದಲ್ಲಿರುವ ನಿಸರ್ಗನಿರ್ಮಿತ ಗುಹೆಗಳನ್ನು ಮುಟ್ಟುವುದೆಂದರೆ ಕ್ಯಾಥರೀನಳಿಗೆ ಲೀಲಾಜಾಲವಾಗಿ ಆಡುವ ಆಟದಂತಿತ್ತು. ಇಂದು ಮುಂಜಾನೆ ಸರಕಾರೀ ಕಚೇರಿಯಲ್ಲಿಯ ಕಾಗದಗಳನ್ನು ಗೌಪ್ಯವಾಗಿ ದೊರಕಿಸಿಕೊಂಡು, ಅದನ್ನು ಕಮ್ಯುನಿಸ್ಟ್-ಹಿಡನ್ ಹೆಡ್‌ಕ್ವಾರ್ಟರ್ಸ್ಸಿಗೆ ಮುಟ್ಟಿಸುವುದೊಂದೇ ಅವಳ ಕೆಲಸವಾಗಿತ್ತು.

ಕ್ಯಾಥರೀನ್ ಕಾಗದಗಳನ್ನು ಹೇಗೋ ದೊರಕಿಸಿಕೊಂಡಳು. ಅಡವಿಯಲ್ಲಿಯ ಹಾದಿಯನ್ನು ಸುಲಭವಾಗಿ ಕ್ರಮಿಸಿದಷ್ಟು ಕಾಗದ-ಗಳನ್ನು ದೊರಕಿಸುವುದು ಸುಲಭವಾಗಿರಲಿಲ್ಲ. ಆದರೆ ಕ್ಯಾಥರೀನಳ ದೇಹಸೌಂದರ್ಯ, ಅವಳು ಮಾಡುತ್ತಿರುವ ಗೂಢಚಾರಿಣಿಯ ಕೆಲಸಕ್ಕೆ ಸಹಾಯಕವಾಗಿ ನಿಂತಿತ್ತು.

ಬ್ರಿಟಿಷರಿಗೆ ಮಲಯಾದಲ್ಲಿಯ ಕಮ್ಯುನಿಸ್ಟರು ಹುದುಗಿಕೊಂಡಿರುವ ಸ್ಥಳವನ್ನು ಗೊತ್ತುಹಚ್ಚುವುದು ಎಷ್ಟು ಕಠಿಣವಾಗಿತ್ತೋ, ಅಷ್ಟೇ ಕ್ಯಾಥರೀನಳನ್ನು ಪ್ರೀತಿಸುತ್ತಿದ್ದ ಕಮ್ಯುನಿಸ್ಟ್ ಮುಂದಾಳು ಪೆಂಗ್-ಯಾನ್‌ನಿಗೆ ಕ್ಯಾಥರೀನಳ ಒಳಹೃದಯವನ್ನು ಅರಿತುಕೊಳ್ಳುವುದು ಕಠಿಣವಾದ ಕೆಲಸವಾಗಿತ್ತು.

ಇಪೋದಲ್ಲಿಯ ಜಾಲಿ ವರ್ಲ್ಡ್‌ನಲ್ಲಿ ನರ್ತನಗೃಹದಲ್ಲಿ ಕುಣಿತದ ಹೆಂಗುಸಾಗಿ ನಿಂತಿದ್ದ ಕ್ಯಾಥರೀನಳನ್ನು ಪೆಂಗ್‌ಯಾನ್ ಸಂಧಿಸಿದುದು, ಜಾಲೀವರ್ಲ್ಡ್‌ನಲ್ಲಿಯ "ಹದಿನೆಂಟು ನರಕ"ಕತ್ತಲುಗುಹೆ-ಯಲ್ಲಿ. "ಹದಿನೆಂಟು ನರಕ" ಕತ್ತಲುಗುಹೆಯೆಂದರೆ ಕೆಲವರಿಗೆ ಅರ್ಥವಾಗಲಿಕ್ಕಿಲ್ಲ. ದೊಡ್ಡದೊಂದು ಮನೆ. ಮನೆಯ ಮುಂಭಾಗದಲ್ಲಿ ಎರಡು ಬಾಗಿಲುಗಳು. ಸಣ್ಣ ರೈಲುಹಳಿಗಳ ವ್ಯವಸ್ಥೆಯೂ ಇರುತ್ತದೆ. ಆ ಹಳಿಗಳ ಮೇಲೆ ಸಣ್ಣ ಮೋಟಾರುಗಾಡಿ. ಇಬ್ಬರೇ ಅದರಲ್ಲಿ ಕೂಡಬಲ್ಲರು. ಒಂದು ಬಾಗಿಲಿನಿಂದ ಅದು ಒಳಗೆ ಹೋಗುತ್ತದೆ. ಒಳಗೆ ಕತ್ತಲು. ಆ ಗಾಡಿ ಹದಿನೆಂಟು ಸ್ಥಳಗಳಲ್ಲಿ ಢಿಕ್ಕಿ ಹೊಡೆಯು-ತ್ತದೆ. ಢಿಕ್ಕಿ ಹೊಡೆದಾಗೊಮ್ಮೆ ವಿದ್ಯುತ್ತಿನ ಕಿಡಿಗಳು ಹಾರಿ, ಆ ಬೆಳಕಿನಲ್ಲಿ ವಿಕರಾಳ ಆಕೃತಿಯೊಂದು ನಿಮ್ಮನ್ನು ಹಿಡಿಯಲು ಹವಣಿ-ಸುತ್ತದೆ. ಆದರೆ ಹಿಡಿಯುವುದಿಲ್ಲ. ಅಳ್ಳೆದೆಯ ಮನುಷ್ಯ ಆಗ ಕೂಗಿಕೊಂಡೇ ಬಿಡುವ. ಅಂತಹ ಭಯಾನಕ—ಕ್ರೂರ ದೃಶ್ಯ. ಹೀಗೆ ಹದಿನೆಂಟು ಕಡೆಗೆ ಢಿಕ್ಕಿ ಹೊಡೆದು ಗಾಡಿ ತನ್ನಷ್ಟಕ್ಕೆ ತಾನೇ—ಮನೆಯ ಮತ್ತೊಂದು ಬಾಗಿಲಿನಿಂದ ಹೊರಬರುತ್ತದೆ. ಇದು ಮಲಯಾದಲ್ಲಿಯ ಮನೋರಂಜನೆಯ ಸ್ಥಳ. ಅವುಗಳ ಮಾಲೀಕರೆಲ್ಲರೂ ಚೀನೀ ಜನರು. ಮಲಯಾದಲ್ಲಿ ನಡೆದ ರಾಜಕೀಯ ಗಲಭೆ-ಗಳ ಸಂದಿಗ್ಧ ಪರಿಸ್ಥಿತಿಯಲ್ಲಿ, ಇಂತಹ ಮನೋರಂಜಕ ಕಗ್ಗತ್ತಲು ಗುಹೆಗಳು, ಒಂದೊಂದು ರಾಜಕೀಯ ಪಕ್ಷಗಳ ಗೂಢಾಲೋಚನೆಗಳ ಮಂದಿರವಾದುದರಲ್ಲಿ ಏನಾಶ್ಚರ್ಯ? ಆ ಕಗ್ಗತ್ತಲೆಯ ಗುಹೆಗಳಲ್ಲಿ ಒಳಹೊಕ್ಕು ಬ್ರಿಟಿಶರು ಎಷ್ಟೋ ಸಲ ಶೋಧ ನಡೆಸಿದರು. ಒಂದೆರಡು ಗುಹೆಗಳಲ್ಲಿ ಕೆಲವು ಅಸ್ಥಿಪಂಜರಗಳು ಮಾತ್ರ ದೊರಕಿದುವು.

ಆದರೆ ಅವು ನರಕದ ಪ್ರತಿರೂಪದ ದರ್ಶನವನ್ನು ಇಹಲೋಕದ ಜನರಿಗೆ ಮಾಡಿಸುವುದಕ್ಕೆ ಹೊರಗಿಂದ ತರಿಸಿದ ಎಲುಬಿನ ಹಂದರಗಳೇ ಹೊರತು, ಜನರನ್ನು ಕೊಂದುದರ ಸಾಕ್ಷ್ಯವಲ್ಲ—ಎಂದು ಸಾಧಿಸಿ ಪಾರಾದ ಚೀನೀ ಮಾಲೀಕರೆಷ್ಟೋ ಜನ, ಇನ್ನೂ ಹದಿನೆಂಟು ನರಕ-ಗಳನ್ನು ನಡೆಸುತ್ತಿದ್ದಾರೆ.

ಕಾಯಿದೆಯ ಕಬ್ಬಿಣದ ಹಿಡಿತದೊಳಗಿಂದ ಪಾರಾಗುವ ಚಾಣಾಕ್ಷಬುದ್ಧಿ ಚೀನೀಯರಲ್ಲಿದ್ದಷ್ಟು ಬೇರೆಯವರಲ್ಲಿಲ್ಲ.

ಇಂತಹ 'ಹದಿನೆಂಟು ನರಕ'ದ ಕತ್ತಲುಕೋಣೆಯಲ್ಲಿಯೇ ಕ್ಯಾಥರೀನ್ ಪೆಂಗಯಾನ್‌ನನ್ನು ಸಂಧಿಸಿ, ಅವನ ರಾಜಕೀಯ ಪಕ್ಷದ ಮುಖ್ಯ ಗೂಢಚಾರಿಣಿಯಾದಳು.

ಪೆಂಗ್‌ಯಾನ್‌ನಿಗೆ ಚತುರಗೂಢಚಾರಿಣಿಯಾದವಳಷ್ಟೆ ಬೇಕಿರಲಿಲ್ಲ; ಅಷ್ಟೇ ಹೆಚ್ಚಾಗಿ ಕ್ಯಾಪ್ಟನ್ ಪಿಕ್‌ಫೋರ್ಡ್—ಪೇರಾಕ್ ಸಂಸ್ಥಾನದ ರೆಸಿಡೆಂಟನನ್ನು ದ್ವೇಷಿಸುವ ವ್ಯಕ್ತಿ ಬೇಕಾಗಿತ್ತು. ಪಿಕ್‌ಫೋರ್ಡ್ ಬಹು ಚತುರ ಸೇನಾಪತಿ. ಪೇರಾಕದ ರಾಜಧಾನಿಯಾದ

ಇಪೋ ನಗರಕ್ಕೆ ಬಂದಾಕ್ಷಣ, ಪೆಂಗಯಾನ್‌ನನ್ನು ಸಜೀವವಾಗಿಯೋ ನಿರ್ಜೀವವಾಗಿಯೋ ಹಿಡಿದು ತಂದುಕೊಟ್ಟವರಿಗೆ ೫ ಸಾವಿರ ಡಾಲರು ಬಹುಮಾನ ಕೊಡುವುದಾಗಿ ಜಾಹೀರುಪಡಿಸಿದ್ದನು. ಅಷ್ಟೇ ಅಲ್ಲದೆ, ತಾನೂ ಸ್ವತಃ ಪೆಂಗನ ಶೋಧ ನಡೆಸಿದ್ದನು. ಪಿಕ್‌ಫೋರ್ಡ್— ಮಲಾಯಾ ಜಪಾನೀ ಸೈನಿಕರ ವಶವಾದ ನಂತರವೂ -- ಅಡವಿಯಲ್ಲಿ ಹುದುಗಿಕೊಂಡು, ಗೋರಿಲ್ಲಾ ಫೈಟರ್ಸ್ ಗುಂಪನ್ನು ಕಟ್ಟಿಕೊಂಡು ಜಪಾನಿಗಳ ವಿರುದ್ಧ ಕಾರ್ಯವನ್ನು ನಡೆಸಿ, ಕೆಲವು ಸಲ ಯಶವನ್ನು ಗಳಿಸಿಕೊಂಡಿದ್ದ. ಮಲಾಯಾ ಜಪಾನಿಗಳ ವಶದಲ್ಲಿದಾಗ, ಮಲಾಯಾದಲ್ಲಿದ್ದ ಚೀನೀ ಕಮ್ಯೂನಿಷ್ಟರೂ 'ಆಂಟೀ ಜಪಾನೀ ಅಸೋಶಿಯೇಶನ್' ಎಂಬ ಸಂಸ್ಥೆಯನ್ನು ಕಟ್ಟಿಕೊಂಡು, ಬ್ರಿಟಿಶ್ ಗೋರಿಲ್ಲಾ ಫೈಟರ್ಸ್ ಕಡೆಗೆ ಸಹಾಯ ಮಾಡಿದ್ದುದೂ ಉಂಟು. ಒಬ್ಬ ಶತ್ರುವನ್ನು ಬಗ್ಗುಬಡಿಯುವುದರ ಸಲುವಾಗಿ ಭಿನ್ನಾಭಿಪ್ರಾಯದ, ಎರಡು ಭಿನ್ನರಾಜಕೀಯ ಪಕ್ಷದ ಜನ ಒಂದೆಡೆ ಸೇರುವ ಕಾಲವೆಂದರೆ, ಎರಡನೆಯ ಮೂರನೆಯ ಮಹಾಯುದ್ಧದ ಕಾಲವೇ. ಅದೇ ಕಾಲಕ್ಕೆ ಪೆಂಗ್ ಮತ್ತು ಪಿಕ್‌ಫೋರ್ಡ್ ಎಷ್ಟೋ ಸಲ ಹೆಗಲಿಗೆ ಹೆಗಲು ಹಚ್ಚಿ ಶತ್ರುಗಳ ಮೇಲೆ ಏರಿಹೋಗಿದ್ದರು. ಹೀಗಾಗಿ ಪಿಕ್‌ಫೋರ್ಡ್‌ನಿಗೆ ಪೆಂಗನ ಸ್ವಭಾವ, ಅವನ ಲೋಪ ದೋಷ ಗೊತ್ತಾಗಿ, ಅವನ ಗುರುತು ಹಚ್ಚುವುದು ಸುಲಭವಾದ ಮಾತಾಗಿತ್ತು. ಈ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲ ಪೆಂಗ್ ಸರಿಯಾದ ವ್ಯಕ್ತಿಯನ್ನು ಹುಡುಕುತ್ತಿದ್ದ. ಅವನು ಹುಡುಕುತ್ತಿದ್ದ ವ್ಯಕ್ತಿ ಎಂದರೆ 'ಕ್ಯಾಥರೀನ್'. ಅವಳ ಬಗೆಗೆ ಅವಳ ಪೂರ್ವ ಚರಿತ್ರದ ಬಗೆಗೆ ಎಲ್ಲ ಮಾಹಿತಿಯನ್ನೂ ಪೆಂಗ್ ಮೊದಲೇ ತಿಳಿದುಕೊಂಡಿದ್ದರೂ, ಅವಳನ್ನು ಪಟ್ಟಣದಲ್ಲಿ ಬಂದು ಸಂಧಿಸುವುದು ಅಸಾಧ್ಯವಾದ ಮಾತಾಗಿತ್ತು. ಪೆರಾಕದ ದೊಡ್ಡ ದೊಡ್ಡ ಪಟ್ಟಣಗಳ ಸುತ್ತಲೂ ಸೈನಿಕರ ಸರ್ಪಕಾವಲು ಇದ್ದಿತಲ್ಲದೆ, ಹೊರಗಿನಿಂದ ಬರುವ ಮನುಷ್ಯ ಸಂಪೂರ್ಣ ವಿಳಾಸ ಕೊಡದೇ ಊರನ್ನೇ ಸೇರಬಾರದಂತಿತ್ತು.

ಇಪೋ ನಗರದ ಹೊರಗಿನ ಗಸ್ತುಚೌಕಿನ ಬದಿಯಲ್ಲಿ ಒಂದು ಟ್ರಕ್ ನಿಂತಿತ್ತು. ಸೈನಿಕರು ಟ್ರಕ್ಕನ್ನು ಶೋಧಿಸುತ್ತಿದ್ದರು. ಅದು ಬ್ರಿಟಿಶ್ ಸೈನಿಕರಿಗೆ ಆಹಾರ ಪೂರಯಿಸುವ ಕಾಂಟ್ರ್ಯಾಕ್ಟ್ ಹಿಡಿದ ಅಬ್ದುಲ್ ರಹಮಾನನ ಟ್ರಕ್ಕು. ಪ್ರತಿದಿನವೂ ಕೋಲಾಲಂಪುರದಿಂದ ಅಬ್ದುಲ್‌ರಹಮಾನ್ ಮಾಂಸವನ್ನು ಪೂರಯಿಸುತ್ತಿದ್ದ. ಆ ಗಾಡಿಯನ್ನು ನಡೆಸಿಕೊಂಡು ಬರುವವನೆಂದರೆ ಮಹ್ಮದ್ ಇಸ್ಮಾಯಿಲ್. ಸೈನಿಕರು ಇಸ್ಮಾಯಿಲನ ಶೋಧ ನಡೆಸಿರಲಿಲ್ಲ. ಅವನ ಟ್ರಕ್ಕಿನಲ್ಲಿ ಮತ್ತೇನಾದರೂ ಇದೆಯೇ ಎಂದು ಶೋಧಿಸಿದರು; ಅಲ್ಲಿ ಅವರಿಗೇನೂ ದೊರಕದ್ದರಿಂದ, ಗಾಡಿಯನ್ನು ಒಳಗೆ ಬಿಟ್ಟರು. ಆ ಗಾಡಿ ಊರನ್ನು ಸೇರಿದ ಒಂದೂವರೆ ತಾಸಿನ ಮೇಲೆ ರಸ್ತೆಯ ಮೇಲೆ ಗಸ್ತು ತಿರುಗುವ ಪೋಲೀಸ ತಂಡದ ಒಂದು ಜೀಪ್ ಟ್ರಕ್ ಬಂದು ನಿಂತಿತು. ಅದರಲ್ಲಿ ಅವರು ಒಂದು ಶವವನ್ನು ತಂದಿದ್ದರು. ಅವರು ಊರ ಹೊರಗಿನ ಚೌಕಿನಲ್ಲಿದ್ದ ಸೈನಿಕರಿಗೆ ಶವವನ್ನು ತೋರಿಸಿದರು. ಸೈನಿಕರು ಆಶ್ಚರ್ಯಚಕಿತರಾದರು. ಏಕೆಂದರೆ ಆ ಶವ ಮತ್ತಾರದೂ ಇರದೆ— ಮೋಟಾರು ಡ್ರಾಯವ್ಹರ್ ಇಸ್ಮಾಯಿಲನದೇ ಆಗಿತ್ತು. ಅವರಿಗೆ ಆಶ್ಚರ್ಯವಾದದ್ದೆಂದರೆ, ಅವರ ಕಣ್ಣೆದುರಿನಲ್ಲಿಯೇ ಇಸ್ಮಾಯಿಲ್ ಊರೊಳಗೆ ಗಾಡಿ ಒಯ್ದಿದ್ದಾನೆ; ಆತನ ಹಿಂದಿನಿಂದ ಅವನ ಶವ ಬರುವುದೆಂದರೇನು ? ಕೂಡಲೇ ವಾಯರಲೆಸ್ ಫೋನಿನ ಮೂಲಕ ಎಲ್ಲ ಕಡೆಗೂ ಊರ ಹೊರಗಿನ ಚೌಕಿಗೂ ಸೈನಿಕರ ಠಾಣೆಗೂ "ಪೆಂಗ್ ಯಾನ್ ಊರಲ್ಲಿ ಪ್ರವೇಶಿಸಿದ್ದಾನೆ" ಎಂದು ತಿಳುಹಲಾಯಿತು.

ಹಾಗೆಯೇ ಅವರು ಆ ಮೋಟಾರಿನ ಶೋಧಕ್ಕಾಗಿ ಸಪ್ಲಾಯ್ ಡಿಪೋಕ್ಕೆ ಬಂದರು. ಅಲ್ಲಿ ಟ್ರಕ್ಕು ನಿಂತಿತ್ತು. ಆದರೆ ಡ್ರೈವ್ಹರ್ ಇಲ್ಲ. ಡ್ರೈವ್ಹರ್ ಕೂಡುವ ಸೀಟಿನ ಮೇಲೇನೋ ಬಿದ್ದಿತ್ತು. ತೆಗೆದು ನೋಡಿದರೆ ಅದೊಂದು ಮುಖವಾಡ ತದ್ರೂಪ ಡ್ರಾಯವ್ಹರ್ ಇಸ್ಮಾಯಿಲನ ಮುಖ. ಅದರ ಮೇಲೆ ಕೆಳಗಿನ ಒಕ್ಕಣಿಕೆ ಇತ್ತು. "With best compliments to Pickford from Peng Yan". ಸೈನಿಕ ಅಧಿಕಾರಿ ಗುಡುಗಿದ, ನಡುಗಿದ. ಮುಂದೈದು ನಿಮಿಷದಲ್ಲಿ ಇಪೋ ಪಟ್ಟಣದ ಸುತ್ತಲೂ ಸೈನಿಕರ ಜಾಳಿಗೆಯೇ ಹೆಣೆಯಲ್ಪಟ್ಟಿತ್ತು. ಊರೊಳಗಿನ ವ್ಯವಹಾರ ಮಾತ್ರ ಯಥಾಪ್ರಕಾರ ಸಾಗಿತ್ತು.

'ಹದಿನೆಂಟು ನರಕದ' ಕತ್ತಲುಗುಹೆಗೆ ಗಾಡಿಗಳು ಓಡಾಡುತ್ತಿದ್ದುವು. ಮನೋರಂಜನೆಗಾಗಿ ಬಂದ ಜನ ದುಡ್ಡು ಕೊಟ್ಟು ಗಾಡಿಯಲ್ಲಿ ಹತ್ತಿ ಸುತ್ತಾಡಿ ಹೊರಬರುತ್ತಿದ್ದರು. ಕ್ಯಾಥರೀನ್ ಟಿಕೀಟನ್ನು ಕೊಂಡು ಗಾಡಿಯಲ್ಲಿ ಕುಳಿತಳು. ಅವಳು ಕುಳಿತ ಗಾಡಿಯಲ್ಲಿಯೇ ಮತ್ತೊಬ್ಬನು ಬಂದು ಕುಳಿತ ಗಾಡಿಯು ಚಲಿಸಿ ಬಾಗಿಲನ್ನು ತೆರೆದು ಕತ್ತಲುಮನೆಯನ್ನು ಹೊಕ್ಕಿತು. ಅದರ ಹಿಂದೆ ಮತ್ತೆ ಎಷ್ಟೋ ಗಾಡಿಗಳು ಹೊರಟುವು. ಎಣಿಸಿದವರಿಗಷ್ಟೇ ಗೊತ್ತು—ಆ ಸಂಖ್ಯೆ. ಆದರೂ ಮೂಲೆಯಲ್ಲಿ ನಿಂತಿದ್ದ ಮನುಷ್ಯ ಗಾಡಿಗಳನ್ನು ಎಣಿಸುತ್ತಿದ್ದ. ಮುಂದೆ ೨೦ ನಿಮಿಷದಲ್ಲಿ ಗಾಡಿಗಳೆಲ್ಲವೂ ಹೊರಬಂದುವು. ಹೊರಬಂದ ಗಾಡಿಗಳನ್ನು ಆ ಮನುಷ್ಯ ಮತ್ತೆ ಎಣಿಸಿದ. ಒಂದೇ ಕಡಿಮೆಯಾಗಿತ್ತು. ಲಕ್ಷ್ಯಗೊಟ್ಟು ಎಣಿಸಿದರಷ್ಟೇ ಅದು ಗೊತ್ತಾಗಬೇಕು. ಕ್ಯಾಥರೀನ್ ಕತ್ತಲುಕೋಣೆಗೆ ಹೋದಾಕ್ಷಣ— ಅವಳ ಬದಿಯಲ್ಲಿ ಕುಳಿತವ ಅವಳ ಕೈಯನ್ನು ಹಿಡಿದುಕೊಂಡು ಕತ್ತಲಲ್ಲಿಯೆ ಕೋಣೆಗೆ ನಡೆದ ಒಂದು ಚಿತ್ರವಿಚಿತ್ರ ಸದ್ದುಮಾಡುತ್ತ ಕೋಣೆಯ ಬಾಗಿಲು ತೆರೆಯಿತು. ಇವರಿಬ್ಬರ ಪ್ರವೇಶವಾದಾಕ್ಷಣ ಬಾಗಿಲು ಮುಚ್ಚಿಕೊಂಡಿತು.

ಪೆಂಗ್‌ಯಾನ್ ಇಬ್ಬರನ್ನೂ ಸ್ವಾಗತಿಸಿ ಕ್ಯಾಥರೀನಳನ್ನು ಪ್ರಶ್ನಿಸಿದ.

"ಈ ಹಿಂದೆ ನೀನು ಸಾಕಷ್ಟು ಸಹಾಯ ಮಾಡಿರುತ್ತಿ. ಆಗ ಜಪಾನಿಗಳ ವಿರುದ್ಧ ನಮ್ಮ ಹೋರಾಟವಿತ್ತು, ಇಂದು ಬ್ರಿಟಿಶರ ವಿರುದ್ಧ ಹೋರಾಟವಿದೆ. ಈಗ ನಿನಗೆ ಮಹತ್ವದ ಕೆಲಸವೊಂದನ್ನು ಕೊಡುವುದಿದೆ. ನಾಳೆ ನಮ್ಮ ಕೆಲವೊಂದು ಹೆಡ್ ಕ್ವಾರ್ಟರಿನ ಮೇಲೆ

ಆಕಾಶದಾಳಿಯನ್ನು ಮಾಡುವವರಿದ್ದಾರೆ. ಆದರ ವಿಷಯಕ-ವಾಗಿರುವ ಗೌಪ್ಯ ಕಾಗದಗಳು ಬೇಕಾಗಿವೆ. ನೀನು ಆ ಕೆಲಸವನ್ನು ಮಾಡಲೇಬೇಕು. ಆ ಕಾಗದಗಳನ್ನು ತೆಗೆದುಕೊಂಡು ನಾಳೆ ಸಂಜೆ, ಕಜಾಂಗ್ ಅಡವಿಯ ರಬ್ಬರು ತೋಟದ ಬಳಿ ಬಾ. ಅಲ್ಲಿ ಎಲ್ಲವೂ ಸಿದ್ಧವಾಗಿರುತ್ತದೆ. ಹೇಗೂ ನಿನಗೆ ಅಡವಿಯಲ್ಲಿ ನಡೆದು ರೂಢಿ ಇದ್ದೇ ಇದೆ."

"ನಾನು ಈ ಕೆಲಸ ಮಾಡಲು ಒಪ್ಪುವೆ ಸರಕಾರದ ಸೀಕ್ರೆಟ್ ಡಿಪಾರ್ಟ್‌ಮೆಂಟಿನ ಲೆಫ್ಟಿನಂಟನನ್ನು ಈಗಾಗಲೇ ಮರುಳು ಮಾಡಿದ್ದೇನೆ. ಅವನು ನನ್ನ ಸೌಂದರ್ಯಕ್ಕೆ ಮಾರುಹೋಗಿದ್ದಾನೆ. ಈ ಕೆಲಸವನ್ನು ನಾನು ಧೈರ್ಯವಾಗಿ ಮಾಡುವೆ. ಆದರೆ ಒಂದು ಪ್ರಶ್ನೆ ಕೇಳಬಹುದೇ?"

"ಏನು? ಕೇಳಬಹುದು."

"ನನ್ನನ್ನು ನೀವು ಅಂಟೀ ಜಾಪನೀಜ್ ಸಂಸ್ಥೆಯ ಕೆಲಸ ಮುಗಿದಾಕ್ಷಣ ಹೊರಗೇಕೆ ದೂಡಿದಿರಿ?"

"ಅದಕ್ಕೊಂದು ಕಾರಣವಿತ್ತು."

"ಏನು?"

"ನಿನ್ನ ಅಸಾಧಾರಣ ಸೌಂದರ್ಯ. ಈ ಸೌಂದರ್ಯ ನಮ್ಮ ಗುಂಪಿನ ವಿನಾಶಕ್ಕೆಲ್ಲಿ ಕಾರಣವಾಗುವುದೋ ಎಂದು ಅಂಜಿಕೆ."

"ಹಾಗಾದರೆ ನೀವು ಸೌಂದರ್ಯೋಪಾಸಕರಲ್ಲವೇ?"

"ಹೌದು! ಸೌಂದರ್ಯೋಪಾಸಕನೇನೋ ನಿಜ; ಆದರೆ ಹೆಚ್ಚಾಗಿ ನಾನು ತತ್ತ್ವೋಪಾಸಕ ನನ್ನ ಸಹೋದ್ಯೋಗಿ ಲಿನ್–ಚೂ ನಿನ್ನನ್ನು ಪ್ರೀತಿಸುತ್ತಾನೆ; ಅವನೆ ನಾನೂ ನಿನ್ನನ್ನು ಪ್ರೀತಿ-ಸುತ್ತೇನೆ. ಈ ಪ್ರೇಮದ ಹಗ್ಗಜಗ್ಗಾಟದಲ್ಲಿ ಸಂಗಡ ಹಾಳಾಗಿ ತತ್ತ್ವಭ್ರಷ್ಟರಾಗುವುದು ಬೇಡವೆಂದು ನಿನ್ನನ್ನು ದೂರವಾಗಿರಿಸಿವೆ. ಈ ಕೆಲಸವೆಂದರೆ ನಿನ್ನ ಪರೀಕ್ಷೆ. ಇದರಲ್ಲಿ ಪಾಸಾದರೆ ನಾನು ನಿನ್ನನ್ನು ನಿಜವಾಗಿಯೂ ಮದುವೆಯಾಗುವೆ."

"ಆ ವೇಳೆಗೆ ಲಿನ್ ಚೂ ಅಡ್ಡ ಬರಲಾರನೆ?"

"ಅವನು ಈಗಾಗಲೇ ಕೋಲಾಲಂಪೂರದ ಪಾವರ್ ಹೌಸ್ ಹಾರಿಸುವ ವ್ಯವಸ್ಥೆಯಲ್ಲಿ ತೊಡಗಿದ್ದಾನೆ. ಆತ ಅಲ್ಲಿಂದ ಪ್ರಾಣ ಸಹಿತ ತಿರುಗಿ ಬರಲಾರ."

"ಆಯಿತು. ನಾನು ಏಸುವಿನ ಆಣೆ ಮಾಡಿ ಈ ಕೆಲಸ ಮಾಡುವೆ."

"ಕೇವಲ ಕೆಲಸಕ್ಕಾಗಿ ಏಸುವಿನ ಆಣೆ ಬೇಕಾಗಿಲ್ಲ. ಕೆಲಸ ವಾಗಲಿ ಆಗದಿರಲಿ! ಆದರೆ ನೀನು ನನಗೆ ನಿಷ್ಠಳಾಗಿರುವಿ ಎಂಬುದಕೆ ಏಸುವಿನ ಆಣೆ ಕೊಡು!"

"ಏಸುವಿನ ಆಣೆಯಾಗಿಯೂ!"

"ಶಹಾಬ್ಬಾಸ್! ಈ ಮುತ್ತಿನ ಹಾರ ನಿನಗೆ ಇನಾಮು. ಈ ಹಾರವು ೨೪ ತಾಸೂ ನಿನ್ನ ಕೊರಳಲ್ಲಿಯೇ ಇರಲಿ. ಇದನ್ನೆಂದೂ ಯಾವ ಗಳಿಗೆಗೂ ಹೊರದೆಗೆಯಬೇಡ."

"ಏಕೆ?"

"ಇದು ಗುರುತು. ಊರಲ್ಲಿ ನಾಲ್ಕಾರು ನಿಟ್ಟಿನಲ್ಲಿ ನನ್ನ ಜನ ಸೇರಿದ್ದಾರೆ. ಅವರಿಗೆ ಈ ಹಾರದ ಪರಿಚಯವಿದೆ. ನಿನ್ನ ಕೊರಳಲ್ಲಿಯ ಹಾರ ಕಂಡಾಕ್ಷಣ, ನಿನಗೆ ಅವರು ಸಹಾಯಕರಾಗಿ ನಿಲ್ಲುವರು."

"ಸರಿ ನಾನು ಹೋಗುವೆ." ಸ್ವಲ್ಪ ಹೊತ್ತಿನ ಮೇಲೆ ಕ್ಯಾಥ-ರೀನ್, ಗಾಡಿಯೊಳಗಿಂದಲೇ ಹದಿನೆಂಟು ನರಕದಿಂದ ಹೊರಬಂದಳು.

ಹೊರಗೆ ಮೂಲೆಯಲ್ಲಿ ನೋಡುತ್ತ ನಿಂತ ಮನುಷ್ಯ ಮುಗುಳು-ನಗೆ ನಕ್ಕು ಹೊರಟು ನಡೆದ.

× × × ×

ಅಂದು ರಾತ್ರಿಯೇ ಪಿಕ್‌ಫೋರ್ಡ್ ಸೀಕ್ರೆಟ್, ಡಿಪಾರ್ಟ್-ಮೆಂಟಿನ ಲೆಫ್ಟಿನಂಟನನ್ನು ಕರೆಯಿಸಿ, ಪ್ರಶ್ನಿಸಿದ:

"ನೀವು ಯಾರ ಪ್ರೇಮಪಾಶದಲ್ಲಿ ಸಿಲುಕಿರುವಿರಿ?"

"..............................."

"ನಾಚಿಕೆ ಏಕೆ? ಮನುಷ್ಯ ಸ್ವಭಾವ ಅದು ಹೇಳಿರಿ."

"ಕ್ಯಾಥರೀನ ಎಂಬವಳ......."

"ಅವಳ ವಯಸ್ಸೆಷ್ಟು?"

"ಸುಮಾರು ೩೦."

"ಪರವಾ ಇಲ್ಲ. ಅವಳು ನಾಳೆ ಮುಂಜಾನೆ ತಮ್ಮ ಬಳಿಗೆ ಬರುವಳು. ಸೀಕ್ರೆಟ್ ಕಾಗದಗಳನ್ನು ಅವಳ ಕೈಗಿರಿಸಿಬಿಡಿ."

"ಛೆ, ಛೆ, ನಾನೇನೂ ಅಷ್ಟು ಹುಚ್ಚನಲ್ಲ!"

"ನಾನು ಹೇಳಿದಷ್ಟು ಮಾಡಿ; ನನಗೆ ಮುಂದಿನ ಕೆಲಸ ಮಾಡುವುದಿದೆ"

"ನನಗಾವುದೂ ಅರ್ಥವಾಗಲಿಲ್ಲ!"

"ಕ್ಯಾಥರೀನ್ ಏಜಂಟಳಾಗಿದ್ದಾಳೆ. ಇಂದೇ 'ಏಟೀನ್ ಹೆಲ್' ನಲ್ಲಿ ಅವಳು ಪೆಂಗ್‌ನನು ಸಂದರ್ಶಿಸಿದ್ದಾಳೆ."

"ಅದು ತಮಗೆ ಹೇಗೆ ಗೊತ್ತಾಯಿತು?"

"ನಿಮಗೆ ಇಷ್ಟು ತಲೆ ಇಲ್ಲವೇ? ಮೊನ್ನೆ 'Eighteen Hell' (ಹದಿನೆಂಟು ನರಕ) ಶೋಧ ನಡೆಸಲು ಹೋಗಿದ್ದೆವು ಗೊತ್ತಿದೆಯೋ?

"ಅಹುದು."

"ಆಗ ತಿರುಗಿ ಬರುವಾಗ ಸಂಶಯ ಬರುವ ಒಂದು ಕೋಣೆ-ಯಲ್ಲಿ ಧ್ವನಿಗ್ರಾಹಕ ಯಂತ್ರವನ್ನು ಮೂಲೆಯಲ್ಲಿ ಇರಿಸಿ ಬಂದಿರುವೆ. ದಿನವೂ ನಾನು ಹೆಲ್ ಹೊರಗೆ ವೇಷಾಂತರ ಮಾಡಿಕೊಂಡು ನಿಂತಿರು-ತ್ತೇನೆ. ಇಂದು ಪೆಂಗ್‌ಯಾನ್ ವೇಷಗೊಳಿಸಿ, ಡ್ರೈವರನನ್ನು ಕೊಂದು ಊರೊಳಗೆ ಪ್ರವೇಶಿಸಿದ್ದಾನೆ. ಅವನ ಮತ್ತು ಕ್ಯಾಥರೀನಳ ಮಾತುಗಳನ್ನು ಕೇಳಿದ್ದೇನೆ."

"ಹಾಗಿದ್ದರೆ ಆಗಲೇ ಆ ಮನೆಯ ಮೇಲೆ ಬಾಂಬುಹಾಕಲು ಅಪ್ಪಣೆ ಕೊಡಬೇಕಾಗಿತ್ತು? ಪೆಂಗ್‌ಯಾನ್ ಚೂರುಚೂರಾಗಿ ಬಿಡುತ್ತಿದ್ದ."

"ನನಗೆ ಅವನನ್ನು ಸಜೀವನಾಗಿ ಹಿಡಿಯುವುದಿದೆ. ಆಗ ಸರಿಯಾದ ಸಮಯವಿರಲಿಲ್ಲ. ಈ ಊರಲ್ಲಿಯೂ ಅವನ ಗುಂಪಿನ ಸಶಸ್ತ್ರ ಜನರು ಸಾಕಷ್ಟು ಇದ್ದಾರೆ. ಇರಲಿ ನಾನು ಹೇಳಿದಹು ಮಾಡು." ಲೆಫ್ಟಿನಂಟ್ ಸಲ್ಯೂಟ್ ಕೊಟ್ಟು ಹೊರನಡೆದನು.

× × × ×

ಕ್ಯಾಥರೀನ್ ತನ್ನ ಕೋಣೆಯಲ್ಲಿ ಕುಳಿತು. ಕಜಾಂಗ್ ಅಡವಿಯ ಕಡೆಗೆ ನಡೆಯುವುದಕ್ಕಾಗಿ ಸರಿಯಾದ ವೇಳೆಯ ಪ್ರತೀಕ್ಷೆ ಮಾಡುತ್ತ ಕುಳಿತಿದ್ದಳು. ಬಾಗಿಲು 'ಚರ್‌ರ್' ಎಂದಿತು.

ಒಳಗೆ ಒಂದು ವ್ಯಕ್ತಿ ಪ್ರವೇಶಿಸಿತು. ಆ ವ್ಯಕ್ತಿಯನ್ನು ಕಂಡು ಕ್ಯಾಥರೀನ್ ಅಂಜಿದಳು; ನಡುಗಿದಳು. ಆ ವ್ಯಕ್ತಿ ಮತ್ತಾರೂ ಅಲ್ಲ ರೆಸಿಡೆಂಟ್ ಪಿರ್‌ಫೋರ್ಡ್.

ನಡುನಡುಗುತ್ತ—ನಸುನಗುವ ನಾಟಕವನ್ನು ಮಾಡುತ್ತ ಕ್ಯಾಥರೀನ್ ಸ್ವಾಗತಿಸಿದಳು.

"ನಮಸ್ಕಾರ ರೆಸಿಡೆಂಟ್ ಸಾಹೇಬ್! ನನ್ನ ಮನೆಗೆ ತಮ್ಮ ಪಾದಧೂಳಿ? ಈ ಮನೆ ತಮ್ಮದೇ; ನಾನೂ ನಿಮ್ಮವಳೇ? ನನ್ನ ದೇಹ—"

"ಹೌದು ದೇಹವೊಂದೇ ಉಳಿಯುವುದು ಇನ್ನುಮೇಲೆ; ಜೀವಕ್ಕೆ ಅಲ್ಲಿ ಸ್ಥಾನವಿಲ್ಲ"

"........ .. ... ಸಾಹೇಬ್"

"ಇಲ್ಲದ ನಾಟಕ ಬೇಡ. ಆಧಾರಗಳು ತುಂಬ ಇವೆ. ಪೆಂಗ್‌-ಯಾನ್ ಕಜಾಂಗ್ ಅಡವಿಯ ಹತ್ತಿರ ನಿಂತಿರಬಹುದು; ಹೋಗಿ ಆ ನಕ್ಷೆಗಳನ್ನು ಕೊಡು.

"..............."

"ಒಂದು ಮಾತು. ಕ್ಯಾಥರೀನ್."

"ಏನು?"

"ನಿನಗೆ ಜೀವದ ಮೇಲೆ ಪ್ರೇಮವಿದೆಯೇ?"

"ಇವೆ"

"ಸಾಯುವುದಕ್ಕೆ ಸಿದ್ಧಳಿದ್ದೀಯಾ?"

"ಊಹೂಂ"

"ನೀನು ಯಾರನ್ನು ಪ್ರೀತಿಸುತ್ತೀ—ಪೆಂಗ್‌ಯಾನ್‌ನನ್ನೋ—ಅಥವಾ ಕೋಲಾಲಂಪೂರದ ಪಾವರ್‌ಹೌಸನ್ನು ಹಾಳುಗೆಡಹುವ 'ಲಿನ್ ಚೂ'ನನ್ನೋ."

"..............."

"ಹೇಳು ನಾಚಿಕೊಳ್ಳಬೇಡ. ಪ್ರೇಮ ಮಾಡುವುದು ತಪ್ಪಲ್ಲ"

ಕಾಥರೀನಳಿಗೆ ತಲೆ ತಿರುಗಿದಂತಾಯಿತು. ಸಾವರಿಸಿಕೊಂಡೇ ಹೇಳಿದಳು:—"ನಾನು ಯಾವ ಗಂಡುಸನ್ನೂ ಪ್ರೇಮಿಸುವುದಿಲ್ಲ. ಗಂಡುಸು ಎಂದರೆ ನನಗೆ ತಿರಸ್ಕಾರ."

"ಸಾಕು ಈ ನಾಟಕ, ಕೇಳಿದ್ದು ಏಕೆ ಗೊತ್ತೊ? ಇನ್ನು ಐದು ದಿನಗಳಲ್ಲಿ ಅವರಿಬ್ಬರೂ ಸಿಕ್ಕು ಬೀಳುತ್ತಾರೆ. ಇಬ್ಬರನ್ನೂ ಸಾಯ

ಗರ್ಭಕೋಶದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿ

ಹೊಡೆಯುವುದು ನನ್ನ ಕೈಯಲ್ಲಿಯ ಮಾತು. ಅವರಲ್ಲಿ ನಿನ್ನ ಸಲುವಾಗಿ ಯಾರನ್ನು ಉಳಿಸಿಕೊಳ್ಳಬೇಕು?"

"ಲಿನ್ ಚೂನನ್ನು ಉಳಿಸಿ!" ಹೆಣ್ಣುತನದ ಸಹಜಸ್ವಭಾವಕ್ಕೆ ಬಲಿಬಿದ್ದ ಕ್ಯಾಥರೀನ್, ಮನದಲ್ಲಿದ್ದ ಮಾತನ್ನೇ ಆಡಿದಳು.

"ಶಹಾಬ್ಬಾಸ್. ಇನ್ನು ಒಂದು ಮಾತು. ಈಗ ನೀನು ಮಾಡಿದ ಅಪರಾಧಕ್ಕೆ ನೀನೂ ಪ್ರಾಣದಂಡನೆಗೇ ಗುರಿಯಾಗಬೇಕು; ಆದರೆ ನಿನ್ನನ್ನು ನಾನು ಮಾಫೀ ಸಾಕ್ಷೀದಾರಳನ್ನಾಗಿ ಮಾಡುವೆ. ನಿನ್ನ ಜೀವಕ್ಕೇನೂ ಅಪಾಯವಾಗದಂತೆ ನೋಡಿಕೊಳ್ಳುವುದು ನನ್ನನ್ನೇ ಕೂಡಿತು. ಅದಕ್ಕಾಗಿ ನೀನು ನಾನು ಹೇಳಿದಂತೆ........"

"ನಿಮ್ಮ ಕಾಲು ಬೀಳುವೆ. ನೀವು ಹೇಳಿದಂತೇ ನಡೆಯುವೆ."

"ಈ ಗುಪ್ತಕಾಗದಗಳನ್ನು ಪೆಂಗ್‌ಯಾನ್‌ನಿಗೆ ಮುಟ್ಟಿಸು; ಅವನ ಗುಪ್ತಗುಹೆಯ ಸ್ಥಳವನ್ನು ಶೋಧಿಸಿ, ಮತ್ತೆ ಕಜಾಂಗದಿಂದ ಕೋಲಾಲಂಪೂರಕ್ಕೆ ಹೋಗುವ ರಸ್ತೆಯಮೇಲೆ ೧೧ನೆಯ ಮೈಲು-ಗಳಲ್ಲಿಯ ಬಳಿ ಬಾ! ಸುಮಾರು ಸಾಯಂಕಾಲ ೪ ಗಂಟೆಗೆ ನಾವು ಅಲ್ಲಿ ಬಂದು ನಿನ್ನನ್ನು ಕರೆದುಕೊಂಡು ಬರುವೆವು."

"ನಿಶ್ಚಯವಾಗಿಯೂ ಮಾಡುವೆ. ಏಸುವಿನಾಣೆ!"

"ಏಸುವಿನ ಆಣೆ ಬೇಡ."

"ಮತ್ತಾರದು?"

"ಲಿನ್ ಚೂನ ಆಣೆ ಮಾಡು!"

"ಹಾಗೇ ಆಗಲಿ; ಲಿನ್ ಚೂನ್ ಆಣೆಯೆಂದರೂ ಕೆಲಸವನ್ನು ಮಾಡುವೆ."

"ಮತ್ತೊಂದು ಮಾತು; ಕೊರಳಲ್ಲಿಯ ಹಾರದಿಂದ ಜನ—ಪೆಂಗನ ಜನ ನಿನಗೆ ತೊಂದರೆ ಕೊಡಲಾರರು. ನೀನು ಸುಖರೂಪ-ಳಾಗಿ ಪೆಂಗನ ಗುಹೆಯನ್ನು ಕಂಡುಬರಲು ಆ ಹಾರ ಸಹಾಯಕ ವಾಗುತ್ತದೆ." ಕ್ಯಾಥರೀನ್ ಒಂದು ಸಲ ಮುತ್ತಿನ ಹಾರವನ್ನೂ ಅದರ ಬಂಗಾರದ ಲಾಕೆಟ್ಟನ್ನೂ ನೋಡಿ, ತಲೆತಗ್ಗಿಸಿ ನಿಂತಳು. ಮತ್ತೆ ಪಿರ್‌ಫೋರ್ಡ್‌ನೇ ಹುರಿದುಂಬಿಸಿದ:

"ಈ ಕೆಲಸವನ್ನು ನೀನು ಜಾಗ್ರತಳಾಗಿ ಮಾಡಿದರೆ, ಈ

## ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ ೧೫-೧-೦

ಶ್ರೀ. ಮಿರ್ಜಿ ಅಣ್ಣಾರಾಯರು

ಹಾಲ್ಹಣ್ಣು ( ಕವನ ಸಂಗ್ರಹ ) ೧-೮-೦

ಶ್ರೀ. ಭುಜೇಂದ್ರ ಮಹಿಷವಾಡಿ

ಮೂಲಶಿಕ್ಷಣದ ಮೌಲ್ಯಮಾಪಣ ೦-೧೨-೦

ಶ್ರೀ. ಮಿರ್ಜಿ ಅಣ್ಣಾರಾಯರು

ಬಾಳ-ಬಂಡಿ ( ಕವನ ಸಂಗ್ರಹ ) ೦-೮-೦

ಶ್ರೀ. ಬಾಳ ಬಿ. ಉಪಾಧ್ಯೆ

ಭರತೇಶನ ನಾಲ್ಕು ಚಿತ್ರಗಳು ೧-೪-೦

ಶ್ರೀ. ಮಿರ್ಜಿ ಅಣ್ಣಾರಾಯರು

ಅಚ್ಚಿನಲ್ಲಿ:
ಸಂಸ್ಕೃತಿಯ ಹೃದಯ
ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ

ಪೋ. : ಸೇಡಬಾಳ ( ಜಿಲ್ಹಾ ಬೆಳಗಾಂವಿ )


ಮುತ್ತಿನ ಹಾರದ ನಾಲ್ಕರಷ್ಟು ಬೆಲೆ ಬಾಳುವ ಹಾರವನ್ನು ತಂದು ಕೊಡುವೆ!"

ಪಿಕ್‌ಫ್ರೋರ್ಡ್ "ವಿಶ್ ಯು ಗುಡ್‌ಸಕ್ಸೆಸ್" ಎಂದು ಹೇಳಿ ಹೊರಬಂದು, ತನ್ನ ರಕ್ಷಕಪಡೆಯೊಂದಿಗೆ ಕಚೇರಿಗೆ ಮರಳಿದ. ದಾರಿಯಲ್ಲಿ ಸಿಕ್ರೆಟ್ ಡಿಪಾರ್ಟಮೆಂಟಿನ ಲೆಫ್ಟನಂಟ್ ಅಂಜಂಜುತ್ತಲೇ ಕೇಳಿದ: "ಸಾರ್ ನೀವು ಆ ಆಕಾಶದಾಳಿಯ ನಕ್ಷೆಯನ್ನು ಕೊಡಿಸಿದ್ದು ತಪ್ಪು!"

"ನಿನಗೆ ಮಂಕು ಹಿಡಿದಿದೆ. ನಿನ್ನ ಹತ್ತಿರವಿದ್ದ ನಿಜವಾದ ನಕ್ಷೆಗಳನ್ನು ನಾನೇ ಹಾರಿಸಿ, ಅದರ ಬದಲು ನಕಲೀ ನಕ್ಷೆಗಳನ್ನಿರಿಸಿದ್ದೆ." ಎಂದು ಹೇಳಿ ಪಿಕ್‌ಫ್ರೋರ್ಡ್ ತನ್ನ ಒಳಕಿಸೆಯಿಂದ ನಕ್ಷೆಯ ಸುರುಳಿಗಳನ್ನು ತೆಗೆದು ತೋರಿಸಿದ. ಅದನ್ನು ಕಂಡು ಲೆಫ್ಟನಂಟ್ ಬೆಪ್ಪಾಗಿ ನಿಂತುಬಿಟ್ಟ.

× × × ×

ಮಧ್ಯಾಹ್ನ ಮೂರು ಹೊಡೆದಾಕ್ಷಣ ಪಿಕ್‌ಫ್ರೋರ್ಡ್, ೫ ಲಾರಿಗಳನ್ನು ಸೈನಿಕರಿಂದ ತುಂಬಿಕೊಂಡು, ಕಜಾಂಗ್— ಕೊಲಾಲಂಪುರ ರೋಡಿಗೆ ನಡೆದ. ಅವನ ಮನಸ್ಸಿನಲ್ಲಿ ಒಂದು ದುಗುಡ : ಕ್ಯಾಥರೀನ್ ತಾನು ಹೇಳಿದ ಕೆಲಸ ಮಾಡಿರುವಳೋ ಅಥವಾ ತಿರುಗಿ ಬಿದ್ದಿರುವಳೋ—ಎಂದು. ಆತನಿಗೆ ಧೈರ್ಯವಿತ್ತು. ಅವಳಿಗೆ ಜೀವದ ಮೇಲೆ ಆಶೆ ಇದೆಯೆಂದು. ಜೀವದಮೇಲೆ ಆಶೆ ಇದ್ದಾಗ ಅವಳು ಈ ಕೆಲಸವನ್ನು ಮಾಡಲೇಬೇಕು. ಈ ವಿಚಾರದ ತಂದ್ರಿಯಲ್ಲಿಯೇ ೧೧ನೆಯ ಮೈಲುಗಲ್ಲಿಗೆ ಪಿಕ್‌ಫ್ರೋರ್ಡ್ ಸೈನ್ಯ ಪಡೆಯೊಂದಿಗೆ ಬಂದುನಿಂತ. ಆದರೇನಾಶ್ಚರ್ಯ. ಪಿಕ್‌ಫ್ರೋರ್ಡ್ ತನ್ನ ಕಣ್ಣುಗಳನ್ನು ತಾನೇ ನಂಬದಂತಾದ. ಆ ಮೈಲುಗಲ್ಲಿನ ಮೇಲೆ ಕ್ಯಾಥರೀನಳ ಶವ ಬಿದ್ದಿದೆ. ಪಿಕ್‌ಫ್ರೋರ್ಡ್ ಜೀಪ್ ಟ್ರಕ್ಕಿನಿಂದಿಳಿದು, ಅವಳ ನಾಡಿಯನ್ನು ಹಿಡಿದು ನೋಡಿದ. ಕ್ಯಾಥರೀನ್ ಸತ್ತುಹೋಗಿದ್ದಳು. ಅವಳ ಕೊರಳಲ್ಲಿ ಮುತ್ತಿನಹಾರವಿರಲಿಲ್ಲ. ಆದರೆ ಆ ಸ್ಥಳದಲ್ಲಿ ಒಂದು ಚೀಟಿ ಇದ್ದಿತು. ಲಗುಬಗೆಯಿಂದ ಅದನ್ನು ಹೊರದೆಗೆದು ಪಿಕ್‌ಫ್ರೋರ್ಡ್ ಓದತೊಡಗಿದ :

"——With best compliments from Peng Yon.—ಹಲೋ ಪಿಕ್, ನೀನು ಜಾಣನಿರುವಿ; ಆದರೆ ನಾನು ನಿನಗಿಂತಲೂ ಜಾಣನಿರುವೆ ಎಂಬುದನ್ನು ನೀನು ಮರೆತಿರುವಿ 'ಏಟೀನ್ ಹೆಲ್'ದ ಕೋಣೆಯಲ್ಲಿ ಧ್ವನಿಗ್ರಾಹಕ ಯಂತ್ರವನ್ನಿಟ್ಟು ನಮ್ಮ ಮಾತನ್ನು ತಿಳಿದುಕೊಂಡು ನೀನು ಹೆಮ್ಮೆಪಡುತ್ತಿರಬಹುದು; ಆದರೆ ನಾನೂ ಕಡಿಮೆಯವನಲ್ಲ. ನಿನ್ನ ಮತ್ತು ಕ್ಯಾಥರೀನಳೆಲ್ಲಾದ ಸಂಭಾಷಣೆಗಳ ಪ್ರತಿ ಶಬ್ದ ನನಗೆ ಗೊತ್ತಿದೆ. ಕ್ಯಾಥರೀನಳ ಮುಖಾಂತರವಲ್ಲ; ಅವಳ ಕೊರಳಲ್ಲಿದ್ದ ಮುತ್ತಿನಹಾರದ ಮುಖಾಂತರ. ಆ ಹಾರದ ಲಾಕೆಟ್ಟಿಗೆ ಧ್ವನಿವಾಹಕಯಂತ್ರವನ್ನು ಜೋಡಿಸಿದ್ದೆ. ನಿನಗಾಗಿ ಇದೋ ಕಾಣಿಕೆ ಕಾಥರೀನಳ ದೇಹ. ಅವಳ ಅಪರಾಧಕ್ಕೆ ತಕ್ಕ ಶಾಸ್ತಿ.

ನಿನ್ನ ಪ್ರಾಣವನ್ನು ಅಪೇಕ್ಷಿಸುವ
'ಪೆಂಗಯಾನ್'

ಪಿಕ್‌ಫ್ರೋರ್ಡ್ ಮೈತುಂಬ ಬೆವತುಹೋದ. ತನ್ನ ನೆರಳನ್ನೇ ತಾನು ನಂಬದಂತಾದ. ಹಾಗೇ ಜೀಪನ್ನೇರಿ ಇಪೋ ಪಟ್ಟಣವನ್ನು ಸೇರಿದ

ಹೊರಗೆ ಮಳೆ ರೊಪರೊಪನೇ ಹೊಡೆಯುತ್ತಿದ್ದರೂ, ಪಿಕ್‌ಫ್ಲೊರ್ಡ್ ತುಂಬಾ ಬೆವತಿದ್ದಾನೆ. ಪೆಂಗ್ ಯಾನನನ್ನು ಹಿಡಿವ ಅವನ ಅಲ್ಪ ಸ್ವಲ್ಪ ಆಶೆಯೂ ಮಾಯವಾದಂತಾಗಿದೆ.

# ರೈಲು ನಿಲ್ದಾಣ

(ಲಘುಪ್ರಬಂಧ)

ಶ್ರೀ. ಎನ್. ಎಸ್. ಗದಗಕರ, ಬಿ. ಎ. ಧಾರವಾಡ

●

**ರೈಲುನಿಲ್ದಾಣಗಳೆಂದರೆ ಜಾಗತಿಕ ಪ್ರದರ್ಶನಶಾಲೆಗಳಿದ್ದಂತೆ. ನಿಲ್ದಾಣಗಳಿಗೆ ಹೋಗಿ ನಿಂತುಕೊಂಡರೆ ಅಲ್ಲಿ ಅನೇಕ ವಸ್ತುಗಳ ಮತ್ತು ಲೋಕಾನುಭವಗಳ ಪರಿಚಯುವಾಗುವುದು. ನಿಲ್ದಾಣವಿರುವ ಹಳ್ಳಿಯೂ ಪಟ್ಟಣದ ಸ್ವರೂಪ ಪಡೆಯುವುದು.**

●

ಚಿಕ್ಕ ಹಳ್ಳಿಗಾಗಲಿ, ದೊಡ್ಡ ಊರಿಗಾಗಲಿ ಜಟಕಾ. ಟಾಂಗಾ ಮೋಟರುಗಳ ಉಲಿವು ಎಷ್ಟಿದ್ದರೂ ಕಣ್ಣಿಗೆ ಹಬ್ಬವೆನಿಸಲಿಕ್ಕಿಲ್ಲ; ಮನದಲ್ಲಿ ಸಂತಸ ಉಕ್ಕಲಿಕ್ಕಿಲ್ಲ; ವಾತಾವರಣದಲ್ಲಿ ವೈಭವದ ಆವಿರ್ಭಾವವೆನಿಸಲಿಕ್ಕಿಲ್ಲ. ಅದೇ, ಮುಂಜಾವು ಇರುಳು ಜನರು ತುಂಬಿದ ಒಂದು ರೈಲುಗಾಡಿ ಬಂದು ಹೋಗುತ್ತಿದ್ದರೆ ಅದರ ಥಾಟೇ ಬೇರೆ. ದಿನದಲ್ಲಿ ಅದು ಒಂದು ಸಲ ಜನರಿಗಾಗಿ ನಿಂತರೂ ಏನೂ ಪ್ರವಾದವಾಗದು. ಬರುವುದೇ ತಡವಾಗಿ ಮರುದಿನ ಬಂದರಾಗಲಿ, ಇಲ್ಲವೆ ಗೂಡ್ಸ್‌ಗಾಡಿಯು ಆಗಮನವಾಗಲಿ, ಅಷ್ಟೇ ಉತ್ಸಾಹದ ಬುಗ್ಗೆ ಪೂರಹೊಮ್ಮೀತು. ನಾಗರಿಕತೆಯ ಸಂಕೇತವೆಂದರೆ ರೈಲುಗಾಡಿಯ ಸಂದರ್ಶನವೆಂದರೂ—ಇಂದಿನ ಇಪ್ಪತ್ತನೆಯ ಶತಮಾನದಲ್ಲಿ ಸರಿಹೋದೀತು.

'ಸರಿ. ಅಂತಹ ಐಸಿರಿ ಭಾಗ್ಯ ಇದರಿಂದೇನು?' ಎಂದು ಥಟ್ಟನೆ ಚಿಕಿತ್ಸಕ ವಾಚಕರು ಪ್ರಶ್ನೆಹಾಕುವ ಸಂಭವವುಂಟು. ನಿಲ್ದಾಣವೆಂದರೆ ಬರಿ ನಿಲ್ದಾಣವಾದೀತೇ ಊರಿಗೆ? ಹಳ್ಳಿಯ ಸ್ಥಳಕ್ಕೆ ರೈಲುನಿಲ್ದಾಣದಿಂದ ಹೊಸ ಪರಿಸರದ ನಿರ್ಮಿತಿಯಾಗುವುದಲ್ಲವೆ? ಅತಿ ಕನಿಷ್ಟವೆಂದರೆ, ಸಿರಿವಂತ ನಿರುದ್ಯೋಗಿಗಳು ಅವರ ಪರಿವಾರವು, ಒಂದಿಲ್ಲೊಂದು ನೆಪ ಮುಂದುಮಾಡಿ ಅಲ್ಲಿಗೆ ಬಂದು ಹೋಗದಿದ್ದರೆ, ಅವರ ಮನಸಿಗೆ ಹುರುಹುರು ಎನಿಸುವುದುಂಟು. ಲಗ್ನ-ಸಬ್ಬಣವಿದ್ದಾಗಂತೂ ಕಾಯಿದೆಯಿಂದ ರಭಸ ಹೆಚ್ಚುವುದು. ಒಂದೇ ಕೊರಡಿಯ ಚಿಕ್ಕ ನಿಲ್ದಾಣದ ಸುತ್ತುಮುತ್ತು ಕಾಣದ್ದೇನು? ಕಂಡೇ ಮನದ ಕಣ್ಣೆದುರು ಚಿತ್ರ ಮೂಡಿಸಿಕೊಂಡರೂ ಪರವಾ ಇಲ್ಲ. ಇತ್ತ ಪಟ್ಟಣವೂ ಅಲ್ಲ, ಅತ್ತ ಹಾಳುಹಳ್ಳಿಯೂ ಅಲ್ಲ—ಎಂಬಂತಹ ಊರಿಗೆ ರೈಲುನಿಲ್ದಾಣವಿದ್ದುದಾದರೆ, ಅದರ ಅಕ್ಕಪಕ್ಕದಲ್ಲಿ ಚಹಾದುಕಾನ್, ಬೀಡಿ ಅಂಗಡಿ, ವಾಶಿಂಗ್ ಕಂಪನಿ, ಸಲೂನ್, ಕಿರಾಣಿ ಕಾಳುಕೂಡಿದ ಅಂಗಡಿ, ಕೊನೆಗೆ ಕೋರ್ಟು ಕಚೇರಿ ನಗರಸಭೆಗಳ ತ್ರಿವೇಣೀ ಸಂಗಮವಾದ ಕಟ್ಟಡವಂತೂ ಕೂಗಳತೆಯ ಅಂತರದಲ್ಲಿ ಕಾಣಲೇಬೇಕು. ಹಳ್ಳಿಗಳ ರೈಲುನಿಲ್ದಾಣಗಳೇ ಇಂತಹ ಉತ್ಸುಕತೆಯ ಆಗರವಾದರೆ, ಪಟ್ಟಣಗಳ ರೈಲುಠಾಣಗಳ ಮಾತೆತ್ತುವುದೇ ಅನಾವಶ್ಯಕ; ಅವ್ಯವಹಾರ್ಯ!

ಅಹುದು. ನಿಲ್ದಾಣಗಳು ಚಿಕ್ಕವಿರಲಿ ದೊಡ್ಡವಿರಲಿ, ಅವುಗಳ ಅಂಗ-ಉಪಾಂಗಗಳಿಗೆ ಕೊರತೆ ಬರುವುದೇ ಇಲ್ಲ. ಮೊತ್ತಮೊದಲು ಪರದೇಶಕ್ಕೆ ಹೊರಡುವವರಿಗೆ ಪ್ಯಾಸ್‌ಪೋರ್ಟ್ ಅವಶ್ಯವಿರುವಂತೆ, ಪ್ರಯಾಣಕ್ಕೆ ಯೋಗ್ಯತೆ ತರುವಂತೆ ಮಾಡಲು ಒಂದು ಬುಕಿಂಗ್ ಆಫೀಸು ಇದ್ದೇ ಇರುವುದು. ಅವಸರದಲ್ಲಿ ಅಲ್ಲಿ ಸವಕಳಿಯ ನಾಣ್ಯ ದಾಟಿಸುವುದು, ಕಡಿಮೆ ಹಣ-ಹೆಚ್ಚು ಹಣದ ಗಲಭೆಯಲ್ಲಿ ಬೀಳುವುದು ಅಥವಾ ವಿಚಾರದ ಕೋಲಾಹಲದಲ್ಲಿ ಅದೇ ಊರ ಟಿಕೀಟು ಬೇಡುವುದು—ತೀರ ಸಾಮಾನ್ಯ ಸಂಗತಿಗಳು. ಹೀಗೆ ಹೇಗೂ ಟಿಕೀಟು ಕೊಂಡು ಪ್ರವಾಸಿಯು ಒಳಗೆ ಹೋದಾಗ—ವೇಳೆ ಇದ್ದರೆ—ಅವನು ಚಹ-ತಿನಿಸಿಗೆ ಮನಸ್ಸು ಮಾಡುವನು. ಅವುಗಳ ದರ ಗುಣಗಳೋ ಜಗತ್ತಿಗೇ ಹೊರತು! ಬಹಳ ಒಡವೆಗಳಿದ್ದು ವಿರಾಮದಿಂದ ಹೊರಡಬೇಕೆನ್ನುವವರಿಗೆ ಪಾರ್ಸಲ್ ಆಫೀಸ್, ಗೂಡ್ಸ್ ಸೆಡ್ ಇವುಗಳ ಸಂಪರ್ಕ ತಪ್ಪದು. ಕೇವಲ ನಿರೀಕ್ಷಣೆ, ಕಾಲಹರಣಕ್ಕೆಂದು ಬಂದವರಿಗೆ ಥಟ್ಟನೆ ಓಡಿ ಹೋಗಲು ಬುಕ್ ಸ್ಟಾಲ್ ವಿರಾಜಿಸುವುದು. ಆಗೀಗ ಅಲೆದಾಡುವ ನಮ್ಮ ರೈಲು ಅಧಿಕಾರಿ ವರ್ಗದ ಅಧಿಕಾರಿಗಳ ಭಾಷೆಯೋ? ಮೂಲ ಆಂಗ್ಲರು ಅದನ್ನು ಕೇಳಿ ಎದೆಯೊಡೆದುಕೊಳ್ಳುವಂತಾದರೂ, ಇವರು ಕಿರುಕುಳ ತಪ್ಪಾದಾಗ—"You may guard me; under guard me; but please do not porter me" ಎಂದು ಉದ್ಗಾರ ತೆಗೆಯುವುದು ತೀರ ಸಾಮಾನ್ಯ ರಂಜಕ ದೃಶ್ಯ! ಅಲ್ಲಿಯ ಸಾರಸ್ವತ ಪ್ರಪಂಚವೊ? ಕಂಡೇ ಸಂತಸಪಡಬೇಕು. ಸ್ವಭಾಷೆ-ಪರಭಾಷೆಗಳ ಲೋಕಪ್ರಿಯ(?) ಸಾಪ್ತಾಹಿಕ-ಮಾಸಿಕ-ದೈನಿಕಗಳು ಒಂದೆಡೆ ಒರಗಿದ್ದರೆ, ಸ್ಯಾಂಪಲ್ ಎಂದು ಒಂದೊ ಎರಡೊ ಇರುವ ಪತ್ತೇದಾರಿ ಕಾದಂಬರಿಗಳು, ಸಣ್ಣಕತೆಗಳು (ಕವನಗಳು ಔಷಧಕ್ಕೆ ಮಾತ್ರ!) ಬೇರೆಡೆಗೆ ಅವಿತು, ಕುಳಿತು ರಸಿಕ ವಾಚಕರ ಕಣ್ಮನ ಸೆಳೆಯುವುವು. ಉಚ್ಚ ಪೀಠವನ್ನೇರಿದ ಇತರ ಹೊತ್ತಿಗೆಗಳನ್ನು ಮರೆತರೆ ರಸದೂಟಕ್ಕೆ ಎರವಾದಂತೆ! ವಾತ್ಸ್ಯಾಯನನ ಕಾಮಸೂತ್ರ, ಹಸ್ತಸಾಮುದ್ರಿಕ ಗ್ರಂಥ, ಚರಿತ್ರೆ ಮೊದಲ್ಗೊಂಡು Confessions of a London Prostitute ಮತ್ತು How to make friends ವರೆಗೆ ಪುಸ್ತಕಗಳ ವಿಸ್ತಾರ ವೈವಿಧ್ಯವಿರುವುದುಂಟು. ಆಗೀಗಿನ ಕಡಮೆ ಬೆಲೆಯ ಭಗವದ್ಗೀತೆ ಆರಾಣೆಯಿಂದ ಪ್ರಾರಂಭಿಸಿ ಒಂದುವರೆ ರೂಪಾಯಿ ವರೆಗಿನ ಆಕರ್ಷಕ (?) ಗದ್ಯವಾಙ್ಮಯ ಹೊತ್ತಿಗೆಗಳಿಗೆ ಲೆಕ್ಕವೇ ಇಲ್ಲ. ನಿಲ್ದಾಣದ ಸೀಮೆಗಳೊಳಗೆ ಗಾಡಿಯನ್ನು ಬಿಡುವ ಸಿಗ್ನಲ್ ಕೊಡುವವರ ತರಾತುರಿ, ಅದೇ ಗಾಡಿ ಬಂದಾಗಿನ ಕೂಲಿಯವರ ಉಪಟಳ ಹೊರತುಪಡಿಸಿದರೆ, ಉಳಿದ ದಿನದ ಕಾಲಾವಧಿಯಲ್ಲಿ ನಿಲ್ದಾಣವು ಸಂತೆ ಬಯಲಾದ ಪೇಟೆಯ

ಸ್ಥಳದಂತೆ ಕೊಂಚ ಹಾಳು ಸುರಿಯುವುದೆಂದು ಹೇಳದೆ ವಿಧಿ ಇಲ್ಲ. ಆಂಗ್ಲನುಡಿಯಲ್ಲಿ ನುಡಿಯುವೇಕಾದರೆ 'Like a deserted banquet hall' ಎಂಬ ಉಪಮೆ ಉಸಿರಬಹುದು. ಬಂಧುಬಳಗದವರನ್ನು ಆಸ್ಥೆಯಿಂದ ಬೀಳ್ಕೊಡಲು ಬಂದವರ, ತೀರ ಸಂಬಂಧಿಕರ ಸಮ್ಮಿಶ್ರ ರಸವಿರಸಗಳ ಭಾವನೆಗಳನ್ನು ಮನೋಭೂಮಿಕೆಯನ್ನು ಮರೆತರೆ, ಗಾಡಿ ಹೋದೊಡನೆ ಉಳಿದದ್ದೇನು?—ಎಂದು ಕೇಳಿದರೂ ತಪ್ಪಲ್ಲ.

ರೈಲುನಿಲ್ದಾಣದ ನೈಜ ವಿಶ್ವರೂಪ ಕಂಡು ರಸನಿಮಿಷಗಳನ್ನು ನಾವು ಅನುಭವಿಸುವುದು ಗಾಡಿ ಬಂದಾಗಲೆ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಬರುವಾಗಲಾದರೂ ಅದರ ಅಬ್ಬರವೆಷ್ಟು! ಒಮ್ಮೊಮ್ಮೆ 'ಧಡ್ ಧಡ್' 'ಧಡ್ ಧಡ್' ಎಂಬ ನಿಸ್ವನದೊಡನೆ ಬಂದು ನಿಂತು, ರಾಕ್ಷಸರ ಯಕ್ಷಿಣಿಯರ ವೇಗ ನಾಚಿಸಿದರೆ, ಬೇರೊಂದು ಸಲ ನವವಧುವಿನ ನೂಪುರದ ಝಣತ್ಕಾರದ ಮಂಜುಳರವದಿಂದೇನೋ ಎನ್ನುವಂತೆ 'ಜಗ್ ಜಗ್' 'ಝುಕು ಝುಕು' 'ಜಗ್ ಜಗ್ ಝುಕು ಝುಕು' ಎಂಬ ದನಿಯೊಡನೆ ಪ್ಲಾಟಫಾರ್ಮಿಗೆ ಬಂದು ತಲುಪುದು. ಇಂತಹ ತಾಳಲಯಬದ್ಧತೆಗೆ ಮನಸೋತೇ ಹಿರಿಯರು ಕಿರಿಯರು ಇದಕ್ಕಾಗಿ ಮಾರುಹೋಗಿರುವರು. ಹೀಗೆ ಗಾಡಿ ಒಮ್ಮೆ ಒನಪಿನಿಂದ ಬಂದು ನಿಂತಿರುವುದೇ ತಡ; ಸಪ್ತಸ್ವರಗಳು ನಮ್ಮ ಕಿವಿ ಗಡಚಿಕ್ಕಿಸಿ ಬಿಡುವುವು. ಹತ್ತುವವರ ಗೋಳನ್ನಂತೂ—ಅತಿ ಗದ್ದಲವಿದ್ದು ಇರುವೆಗೂ ಇಂಬು ಇರದಾಗ—ದೇವರೇ ಬಲ್ಲ! ಈ ಮೊದಲೇ ಒಳಗಿದ್ದು ಸುಖಾಸೀನರಾದವರು, ತಮ್ಮ ಹಿಂದಿನ ತೊಂದರೆ ನೆನಸಿಕೊಂಡು ಬೇಕೆಂತಲೇ ಉಪಕಾರಬುದ್ಧಿಯನ್ನು ಮುಂದುಮಾಡರು. ಹಲವರು ನೈಜ ಸಹಾನುಭೂತಿಯಿಂದ—ಹೇಗೊ, ಒಳನುಗ್ಗಿದವರಿಗೆ ಸಹಾಯ ಸಲ್ಲಿಸಲು ಮುಂದುವರಿದು ಹೋದರೆ, 'ಹಾ! ಕರ್ಣನ ತುಂಡು'ಎಂದು ಉಪಹಾಸದಿಂದ ಉದ್ಗಾರ ಹೊರಡುವುದು. ಏನೇ ಆಗಲಿ, ಹತ್ತುವವರಿಗಾಗಲಿ ಇಳಿಯುವವರಿಗಾಗಲಿ ಗಾಡಿಯ ಒಳಗಿದ್ದಷ್ಟು ವೇಳೆ ಜೀವನದ ವಿವಿಧರಂಗಗಳ ಅನುಭವ ಸಂಪರ್ಕ ಬಂದೇ ತೀರುವುದರಲ್ಲಿ ಸಂದೇಹವೇನು? ಅಂತೇ Travel as a part of education ಎಂದು ಬಲ್ಲವರು ಸಾರಿರಬಹುದೆ? ಈ ಮಾತಿನ ನಿದರ್ಶನ ಇನ್ನೂ ಕಾಣಬೇಕಾದವರು, ಗಾಡಿಯೊಳಗಿನ ಚಿಕ್ಕ ಪ್ರಪಂಚದ ಚಟುವಟಿಕೆ ನಿರೀಕ್ಷಿಸಲಿ. ಒಂದು ಚಿತ್ರಪಟದ ಕಥಾನಕವನ್ನಾಗಲಿ, ನಾಟಕ-ಕಾದಂಬರಿಯ ವಸ್ತುಗಳನ್ನಾಗಲಿ, ಅಲ್ಲಿ ನಡೆಯುವ ನಾಟಕತೆಯ ರಸವಂತಿಕೆಯ ಮುಂದೆ ನಿವಾಳಿಸಿ ಚೆಲ್ಲಬೇಕು. ಒಬ್ಬರು ಮದುವೆಗಾಗಿ ಪರಿವಾರದೊಡನೆ ಉನ್ಮಾದದಿಂದ ಹೊರಟಿದ್ದರೆ, ಬೇರೆಯವರು ಮನದ ಬೇಜಾರ ಕಳೆದುಕೊಳ್ಳಲು ಪ್ರವಾಸ ಕೈಕೊಂಡಿರುವರು. ನವದಂಪತಿಗಳು ಚಿಕ್ಕ ಮಗುವಿನೊಡನೆ ತಮ್ಮ ನೌಕರಿಯ ನಗರಕ್ಕೆ ಹೊರಟಿರುವರು. ಶಾಲೆ-ಕಾಲೇಜುಗಳ ಪರೀಕ್ಷೆಯ ಹಾವಳಿ ತೀರಿತೆಂದು ಹಾಯಾಗಿ ಹಲವು ತರುಣರು ತಮ್ಮೊಂಗೆ ನಗುತ್ತ ಕೆಲೆಯುತ್ತ ಬೇರೊಂದು ಡಬ್ಬಿಯಲ್ಲಿ ಸಾಗಿದ್ದರೆ, ಅತ್ತೆಯ ಮನೆಗೆ ಗರತಿಯೊಬ್ಬಳು ಕಣ್ಣೀರಿನ ಕಾಲುವೆ ಹರಿಸುತ್ತ ಅಲ್ಲಿಯೇ ನಡೆದಿರುವಳು. ಅದೊ, ಅಲ್ಲಿ ಕಿಟಕಿಯ ಬಳಿ ನೇಗಿಲದೊಡೆಯನ ಪರಿವಾರವು ಕುಳಿತಿದೆ. ಎಲೆ ಅಡಿಕೆ ತಂಬಾಕಿನ ವೈಭವದಲ್ಲಿ, ಹೊಲ ಮನೆ ಸಂಸಾರದ ಸಂಭಾಷಣೆಯ ಉತ್ಸಾಹದಲ್ಲಿ ಸುತ್ತುಮುತ್ತಲಿನ ಪರಿವೆಯೇ ಅದಕ್ಕಿಲ್ಲ ಊಹಾಲೋಕದಲ್ಲದರ ವಿಹಾರ ಈ ರಂಗಭೂಮಿಯಲ್ಲಿಯೇ ಆಗೀಗ ಕುರುಡ ಕುಂಟ ಭಿಕ್ಷುಕ-ಭಿಕ್ಷುಕಿಯರು ಸಂಗೀತಲಹರಿಯಲ್ಲಿ ಜನಜಂಗುಳಿಯನ್ನು ಮುಳುಗಿಸಿಬಿಡುವರು. ಯಾವಾಗಲೂ ಈ ಸ್ತ್ರೀಪುರುಷರ ಸಂಗೀತ ಚೆನ್ನು ಎಂದು ಹೇಳಲಾಗದಿದ್ದರೂ, ಬ್ರಹ್ಮಸೃಷ್ಟಿಯ ಚಮತ್ಕಾರವೆಂದರೆ ಆಗೀಗ ದೇದೀಪ್ಯಮಾನ ತಾರೆಗಳು ಮಿನುಗಿ ಹೋಗುವುದು ಅಚ್ಚರಿಯ ಮಾತಲ್ಲ! ಟೂಥ್‌ಪಾವಡರ್, ಕಸ್ತೂರಿ ಮಾತ್ರೆ, ಪೆಪ್ಪರ್‌ಮೆಂಟು ಸೇಂಗಾ ಮಾರುವವರ ಉಪಟಳವನ್ನಂತೂ ಹೇಳಲಾಸಲ್ಲ. ಗಾಡಿಯು ವೇಗದಿಂದ ಸಾಗಿದಾಗಲೇ ಡಬ್ಬಿಯಿಂದ ಡಬ್ಬಿಗೆ ಧುಮುಕುವ ಅವರ ಆ ಲೀಲಾಪ್ರಸಂಗಗಳನ್ನು ಕಂಡವರು, ಸರ್ಕಸ್ಸಿನ ಕೆಲಸಗಾರರನು ತುಚ್ಛೀಕರಿಸಿದರೇನು ಪಾಪ!

'ಬದುಕು ರೈಲಿನ ಬಂಡಿ ಗಾರ್ಡ್ ಅದರ ಸಾಹೇಬ' ಎಂದು ಡಿ. ವ್ಹಿ. ಗುಂಡಪ್ಪನವರ ನುಡಿಯನ್ನು ವ್ಯತ್ಯಾಸಮಾಡಿ ಹೇಳಿದರೆ ರೈಲು ನಿಲ್ದಾಣದ ಮಾಹಿತಿಯ ಕಲ್ಪನೆ ಮಿಂಚೀತು. ಅಲ್ಲಿಯ ಗಾರ್ಡ್, ಡ್ರಾಯ್‌ವ್ಹರ್, ಆ ಯಂತ್ರ, ಎಲ್ಲ ಕರ್ಮಯೋಗದ ಉಪಾಸನೆ ನಡಿಸಿರುವಂತೆ ತೋರುವುವು. ಚಿಕ್ಕೆ ಚಂದ್ರಮ ಸೂರ್ಯರ ಗತಿಗೆ ತೊಡಕಾದರೂ ಇವರ ವ್ಯಾಪಾರ ಮಾತ್ರ ನಿರಂತರ ಸಾಗಿಯೇ ತೀರುವುದು. ಗಾಡಿ ತಾಸಿಗೆ ತಾಸೇಕೆ, ದಿವಸಕ್ಕೆ ದಿವಸ ತಡವಾದರೂ—ಕಾರ್ಯರಂಗದಲ್ಲಿ ಹೆಚ್ಚುಕಡಿಮೆ ಏನಾದೀತು? ಕೊನೆಗೆ ಮಾನವಸ್ವಭಾವ ಸಂದರ್ಶನಕ್ಕೆ, ಸಂಸ್ಕೃತಿಯ ಪ್ರಸಾರಕ್ಕೆ, ನವನಾಗರಿಕತೆಯ ನಿರ್ಮಾಣಕ್ಕೆ, ತಾತ್ತ್ವಿಕವಿವೇಚನೆಯ ದರ್ಶನಕ್ಕೆ ಇದು ಸ್ಫೂರ್ತಿಯ ಆಗರ ಎಂದು ಹೇಳಿದರೆ, ರೈಲುನಿಲ್ದಾಣದ ಭವ್ಯತೆ ದಿವ್ಯತೆ ಉಸುರಿದಂತಾಗಲಿಕ್ಕಿಲ್ಲವೆ? ಅಲ್ಲಿಯ ಜನಜೀವನದ ಭಾಷೆ-ಉಡುಪು-ಚಟುವಟಿಕೆ-ವೈಖರಿ ಕಣ್ಣಮುಂದೆ ತಂದುಕೊಂಡರಂತೂ, ರೈಲುನಿಲ್ದಾಣವು ಸಾಮಾಜಿಕ ನಾಟಕದ ರಂಗಭೂಮಿಯೆ! ನಿಸರ್ಗದ ಮಡಿಲಲ್ಲಿ ಶೂನ್ಯದೊಡನೆ ಐಕ್ಯಹೊಂದುವ ಆ ಬೆಳ್ಳಿಯ ಹಳ್ಳಿಗಳಗುಂಟ ನಿರಂತರ ಓಡುವ ಉಗಿಬಂಡಿಯು, ಜಗಚ್ಚಕ್ರದ ಪ್ರತೀಕವೇ ಅಲ್ಲವೇ? ಇದೀಗ ರೈಲುನಿಲ್ದಾಣದ ರೋಮಾಂಚಕತೆ, ಕಲಾಕಲ್ಪಕತೆ!

---

# ಕಣ್ಣೀರ ಕಾಣಿಕೆ!

( ಸಣ್ಣಕತೆ )

**ಶ್ರೀ. ಚಿತ್ರಿಗೆ ರಾಮನ್, ಗೋಕರ್ಣ**

卐

**ಹೃದಯದ ವಿಕಾಸವಿರುವಲ್ಲಿ ಕಾವೇರಿಯಂತಹ ಮೂಕಪಶುವೂ ಆಪ್ತಬಂಧುವಾಗಿ ನಿಲ್ಲುತ್ತದೆ; ಭೌತಿಕವಿಚಾರದ ಬುದ್ಧಿಯ ಬೆಳೆದು ಬಾಳುತ್ತಿರುವಲ್ಲಿ ಸ್ವಂತದ ಮಕ್ಕಳೂ ಪರಕೀಯರಾಗಿ ಕಾಣುವರು. ಇವುಗಳಲ್ಲಿ ಯಾವುದು ಒಳ್ಳೆಯದು?**

卐

"ಅಯ್ಯೋ, ಬೇಡ ಕಾವೇರೀ ಬೇಡ....ಆ ಬಾಳೆಯಹಣ್ಣು-ಗಳನ್ನು ತಿನ್ನಬೇಡ........ಅವುಗಳನ್ನು ತಿಂದರೆ ......" ಹೀಗೆ ನಾನು ಕನವರಿಸುತ್ತಿರುವಾಗಲೇ ಲಕ್ಷ್ಮಿ ಬಂದು ನನ್ನನ್ನೆಬ್ಬಿಸಿದಳು.

ಅಂದು ಶ್ರಾವಣ ಸೋಮವಾರ. ಸಮೀಪದಲ್ಲೇ ಇರುವ ಚಹದಂಗಡಿಯ ರೇಡಿಯೋದಿಂದ 'ಗೋ ಮಾತಾ ಹಮಾರೀ,' ಗೋ ಪಿತಾ ಹಮಾರೀ, ಎಂಬ ಸುಮಧುರ ಸಂಗೀತ ಅತ್ಯಂತ ಸ್ಪಷ್ಟವಾಗಿಯೇ ಕೇಳಿಸುತ್ತಿತ್ತು.

"ಕಾವೇರೀ! ಇದೋ ನಿನಗೆ ನನ್ನ ಕಣ್ಣೀರ ಕಾಣಿಕೆ!"

ನನ್ನ ಎರಡೂ ಕಂಗಳಿಂದಲೂ ಎರಡು ಹನಿಗಳುದುರುವು. ಆ ಎರಡೇ ಎರಡು ಹನಿ ಕಣ್ಣೀರಿನ ಕಾಣಿಕೆ, ಕಾವೇರಿಯ ಆತ್ಮಕ್ಕೆ ಶಾಂತಿಯನ್ನೀಯಲಾರದೇ? ಆದರೆ ಅವುಗಳಲ್ಲೊಂದು ಬಿಂದುವಾದರೂ ನನ್ನ ನಾಲಗೆಗೆ ಸೋಕಿದ್ದರೆ ನಾನು ಬದುಕುತ್ತಿದ್ದೆನೆಂಬ ಭರವಸೆ ನನಗಿಲ್ಲ.—ಅವೇ ಕಾವೇರಿಗೆ ಅಮೃತ!

ಅಂಗಳದಲ್ಲಿಯೇ ಪಕ್ಕಕ್ಕೆ ಇರುವ ಅಶ್ವತ್ಥಕಟ್ಟೆಯ ಎದುರು ಕೈ ಜೋಡಿಸಿ ಕುಳಿತುಕೊಂಡಿದ್ದಾಳೆ ಅಮ್ಮ. ಬಳಿಯಲ್ಲಿಯೇ ಬುಟ್ಟಿಯೊಂದರಲ್ಲಿ ಒಂದು ರಸಬಾಳೆಯ ಗೊನೆಯಿದೆ. ಕಾವೇರಿಯಂತೆಯೇ ಕಾಣುವ ಹಸುವೊಂದು ಅಮ್ಮನನ್ನು ಗಣಿಸದೆಯೇ ಬಕಬಕನೆ ಬಾಳೆಯಹಣ್ಣುಗಳನ್ನು ತಿನ್ನತೊಡಗಿತು. ತಿಂದು ನನ್ನ ಹೃದಯವನ್ನೇ ತನ್ನ ದವಡೆಯಲ್ಲಿ ಸೇರಿಸಿತು. ನಾನೇಕೆ ಆ ದೃಶ್ಯವನ್ನು ನೋಡಲು ಹೊರಜಗುಲಿಗೆ ಬಂದೆನೋ!

ಮಾನವನು ಸುಖದ ಯುಗವನ್ನೇ ಮರೆತುಬಿಡಬಹುದು; ಆದರೆ ದುಃಖದ ಒಂದೇ ಒಂದು ನಿಮಿಷವನ್ನೂ ಮರೆಯಲಾರ. ಕಠೋರತೆಯ ಪೆಟ್ಟನ್ನು ಸಹಿಸಬಲ್ಲ; ಆದರೆ ಕರುಣೆಯ ಮಿಡಿತವನ್ನು ಸಹಿಸಬಲ್ಲನೇ?

ಕರುಣಾಮಯಿ ಕಾವೇರಿಯ ಕೊನೆಯ ದಿನಗಳನ್ನು ಜನ್ಮಾಂತರಗಳಲ್ಲಿಯೂ ಮರೆಯಲಾರೆ....

...............ಕಾಲೇಜಿನಿಂದ ಹೊರಬಿದ್ದವನೇ ನೌಕರಿಗಾಗಿ ಅಲೆಯುತ್ತಿದ್ದೆ. ಕೊನೆಗೊಮ್ಮೆ ಊರ ಹತ್ತಿರದ ಹಳ್ಳಿಯೊಂದರಲ್ಲಿ ಶಿಕ್ಷಕನಾಗಿ ಕೆಲಸಮಾಡಲು ಒಪ್ಪಿ, ಅದೇ ಆಗ ತಾನೆ ಮನೆಯನ್ನು ಸೇರಿದ್ದೆ. ಅಷ್ಟರಲ್ಲಿಯೇ ಶನಿಯ ದಶೆ ಮತ್ತೆ ಪ್ರಾರಂಭವಾಗಿತ್ತು.

ಲಕ್ಷ್ಮಿ—ತನ್ನನ್ನು ತವರ್ಮನೆಗೆ ಕಳುಹಿಸಿಬಿಡಿ—ಎಂದುದೂ ಆಯಿತು. ಆ ವಿಚಾರ ತುಸು ಗಂಭೀರವಾಗಿಯೇ ಇತ್ತು. ನಮ್ಮ ಕಾವೇರಿ ಮನೆಗೆ ಬಾರದೆ ಮೂರು ದಿನಗಳಾಗಿದ್ದುವು. ಒಂದು ದಿನವೂ ಒಂದು ಗಳಿಗೆಯಾದರೂ ತಡಮಾಡಿ ಕೊಟ್ಟಿಗೆಗೆ ಬಂದಿರದ ಆಕಳು ಕಣ್ಮರೆಯಾದುದೆಂದರೆ 'ಲಕ್ಷ್ಮಿಯ ಕಾಲ್ಗುಣ'ವೆಂದು ಊರೊಳಗಣ ಅಧಿಕಪ್ರಸಂಗಿಗಳ ಅಭಿಪ್ರಾಯ!

ಲಕ್ಷ್ಮಿ ನಮ್ಮ ಗೃಹಲಕ್ಷ್ಮಿಯಾದ ವರುಷವೇ, ಕ್ಷಯರೋಗದಿಂದ ನರಳುತ್ತಿದ್ದ ನಮ್ಮಪ್ಪ ಕೈಲಾಸವಾಸಿಯಾದ. ಜನರಿಗೇಕಪ್ಪ ನಮ್ಮ ಸುಖ-ದುಃಖ? "ಮದುವೆಯಾಗಿ ಮೂರು ತಿಂಗಳೂ ಕಳೆದಿಲ್ಲ, ರಾಧಮ್ಮನ ಸೊಸೆಯ ಕಾಲ್ಗುಣ ಕಂಡಿರಾ? ಕೃಷ್ಣಭಟ್ಟರನ್ನು ವೈಕುಂಠಕ್ಕೆ ಕಳುಹಿಸಿಬಿಟ್ಟಳು ಭಾಗ್ಯಲಕ್ಷ್ಮಿ!"—ಎಂದು ಆಡಿದರು ಜನ. ಅದರ ಮರುವರ್ಷ—ಮೂರು ವರ್ಷಗಳಿಂದಲೂ ಕಟ್ಟುತ್ತ ಬಂದಿದ್ದ ವಿಮಾಕಂಪನಿಯೊಂದು ತನ್ನ ಜೀವವಿಮೆಯನ್ನು ಪಡೆಯಿತು. ಆಗಲೂ ಜನರೆಂದರು, "ರಾಧಮ್ಮನ ಸೊಸೆಯ ಕಾಲ್ಗುಣ!" ಅಲ್ಲಾ ನೀವೇ ಹೇಳಿ—ಸಾವಿರಾರು ಜನರು ವಿಮಾ ಕಟ್ಟಿಲ್ಲವೇ? ಅವರ ಕಂತುಗಳೆಲ್ಲ ಕಂತುಹೋಗುವಾಗ ನಮ್ಮದೂ ಹೋಯಿತು. ಈ ಆಡುವ ಜನಗಳ ಅಪ್ಪನ ಗಂಟೇನು ಹೋಯಿತಪ್ಪ? ಅಥವಾ ನಮಗಾದ ನಷ್ಟದಲ್ಲಿ ಒಂದು ಬಿಡಿಗಾಸನ್ನಾದರೂ ತುಂಬಿಕೊಡುವ ದಯಾಳುಗಳೇ ಇವರು? ಘಟಿಂಗರು....ಸರಿ, ಆಮೇಲೆ ನಮ್ಮ ಮನೆಯ ನಾಯಿ 'ನೀಲಿ' ಇಲ್ಲದಾಯ್ತು. ಇದೇ ಜನರೇ—ನಮಗಾಗಿ ಕನಿಕರವನ್ನು ನಟಿಸುವವರಿದ್ದಾರಲ್ಲ—ಇವರೇ ನಿರ್ದಯರಾಗಿ, ಬಡಪಾಯಿ ನಾಯಿಯ ಬಾಯಿಯ ಮೇಲೆಯೇ ಕಾದೆಣ್ಣೆಯನ್ನು ಹುಯ್ದು

ಕೊಂದುಹಾಕಿದರು, ನೀಚರು....ಆಗಲೂ ಅವರ ಹೇಸಿ ಮುಖದಿಂದ ಲಕ್ಷ್ಮಿಯ ಪವಿತ್ರ ನಾಮೋಚ್ಚಾರಣೆಯಾಗದಿರಲಿಲ್ಲ. ಈ ವಿಷಯದ ಬಿಸಿ ಇನ್ನೂ ಆರದಿರುವಾಗಲೇ ಕಾವೇರಿಯ ಪ್ರಕರಣ ಪ್ರಾರಂಭ-ವಾಯಿತು. ಆದಕ್ಕಾಗಿ ನಾನು ಲಕ್ಷ್ಮಿಯನ್ನು ತವರ್ಮನೆಗೆ ಕಳಿಸಿದೆ-ನೆಂದರೆ, ನನ್ನ ಜಾತಕದಲ್ಲಿದ್ದ ಶನೀಶ್ವರನೇನಾದರೂ ಅವಳನ್ನು ಮೋಹಿಸಿ ಹೋಗಲು ಕುಳಿತಿರುವನೇ! ಆಡನ್ನು ಆನೆಯನ್ನಾಗಿಸ ಬಹುದೇನೋ! ಆಡುವ ಜನರನ್ನು ತಡೆಯಲು ಸಾಧ್ಯವೇ?

ಆರು ಮಾಸಗಳ ಹಿಂದುಳಿಯಿತು— ಆ ಕರಾಳ ರಾತ್ರಿ— ಇಂದಿಗೂ ಕಾವೇರಿ ನಮ್ಮ ಕಣ್ಣಿಗೆ ಬೀಳಲಿಲ್ಲ. ಹಾಗೆಂದು ಅದನ್ನು ಹುಡುಕುವುದರಿಂದ ನಾವೂ ವಿಮುಖರಾಗಲಿಲ್ಲ. ಕಾವೇರಿ ಕೊಟ್ಟಿಗೆಯನ್ನು ಸೇರುವವರೆಗೂ ನಮ್ಮ ಹೃದಯ ಹಗುರವಾಗಲಾರದು

ಕಾವೇರಿಗಾಗಿ ನಾವು ಅಲೆಯದ ಊರಿಲ್ಲ; ನೋಡದೆ ಬಿಟ್ಟ ದನಕರುಗಳಿಲ್ಲ. ಹೊಕ್ಕು ಹೊರಡದ ಕೊಟ್ಟಿಗೆಯಿಲ್ಲ. ಅಕಸ್ಮಾತ್— ಒಂದು ವರ್ಷದ ಹಿಂದೆ ಕಳೆದುಹೋದ ನಮ್ಮ ನೆರೆಮನೆಯ ಎಮ್ಮೆಯೊಂದು ಸಿಕ್ಕಿತೇ ವಿನಾ, ಕಾವೇರಿ ಕಣ್ಣಿಗೆ ಬೀಳಲಿಲ್ಲ.

............ಒಂದು ದಿನ ನೆರೆಯೂರ ಮೊಗವೀರ ಸೋಮನ ಹೆಂಡತಿ (ತುಳಸಿ), ನಮ್ಮ ಮನೆಗೆ ಬಂದಿದ್ದಳು. ಕಾವೇರಿ ಇಲ್ಲದಾಗಿನಿಂದಲೂ ತುಳಸಿಗೆ ನಮ್ಮ ಮನೆಯಿಂದ ದೊರೆಯುತ್ತಿದ್ದ ಕಾಣಿಕೆಯೂ ಇಲ್ಲದಾಗಿತ್ತು. ಹೆಂಗಸರ ಜಾಣಾಕ್ಷತೆ ಚಾಪಲ್ಯಗಳನ್ನು ಇಂತಹ ವಿಷಯದಲ್ಲಿ ಯಾವ ಪುರುಷನೂ ಸರಿಗಟ್ಟಲಾರ! ಅಮ್ಮ, ಲಕ್ಷ್ಮಿ—ಇಬ್ಬರೂ ಸೇರಿ ತುಳಸಿಯನ್ನು ಪುಸಲಾಯಿಸಿದರು: “ನಿನಗೊಂದು ಸೀರೆ. ಮೇಲೈದು ರೂಪಾಯಿಗಳನ್ನು ಕೊಡುತ್ತೇವೆ”— ಎಂಬ ವರವನ್ನು ಪಡೆದ ಬಳಿಕ, ತುಳಸಿ ಗುಟ್ಟನ್ನು ರಟ್ಟು ಮಾಡಿದಳು. ವಿಷಯ ತಾನು ತಿಳಿಸಿದೆನೆಂದು ನಾಗಪ್ಪನಿಗೆ ತಿಳಿದರೆ, ತನ್ನ ಮನೆಗೆ ಬೆಂಕಿ ಬೀಳುವಂತಾದೀತೆಂಬುದನ್ನೂ ಅವಳು ವಿವರಿಸಿದಳು.

ನಾವು ಮೂವರೂ ಅಂದೇ ಇಳಿಹೊತ್ತಿಗೆ ನಾಮಧಾರಿ ನಾಗಪ್ಪನ ಕೊಟ್ಟಿಗೆಯನ್ನು ಪ್ರವೇಶಿಸಿದೆವು. ಕಾವೇರಿಯನ್ನು ಕಂಡು ಕಂಬನಿಗರೆದುದೂ ಆಯಿತು. ಸುಪುಷ್ಟ ದೇಹ ಕರಗಿ ಬಡಕಲಾಗಿದೆ ಮೈ; ನಗೆ ಸೂಸುವ ಅಗಲವಾದ ಕಂಗಳು ಹೋಗಿ ಹಿಡಿದಂತೆ ಬಾಡಿವೆ ಇಷ್ಟು ಸಾಲದೆ, ಒಂದು ಕಿವಿಯನ್ನೂ ಅರ್ಧ ಕತ್ತರಿಸಿದ್ದಾನೆ, ರಾಕ್ಷಸ! ಆದಾಗ್ಯೂ ಕಾವೇರಿಯನ್ನು ನಾವು ಗುರುತಿಸಿದೆವು; ಹೆಚ್ಚಾಗಿ ಕಾವೇರಿಯೇ ನಮ್ಮನ್ನು ಗುರುತಿಸಿತು.

ಆಕಳನ್ನು ಬಿಡಿಸಿಕೊಂಡು ಹೊರಟಾಗ ನಮಗಾದ ಹಿಗ್ಗು— ಗೋಗ್ರಹದಲ್ಲಿ ವಿಜಯ ಪಡೆದ ಬೃಹನ್ನಳೆಗೂ ಉಂಟಾಗಿರಲಾರದು!

ಹೊರಜಗುಲಿಯಲ್ಲಿಯೇ ಮಲಗಿದ್ದ ನಾಗಪ್ಪ, ಹಸಿದ ಹುಲಿಯಂತೆ ಹಾರಿದ ನಮ್ಮ ಮೇಲೆ “ಯಾರದು ನಮ್ಮ ಆಕಳನ್ನು ಕದ್ದುಕೊಂಡು ಹೋಗುವವರು?” ಎಂದು ಕೂಗಾಡಿದ “ನಿಮ್ಮಪ್ಪನ ಮನೆಯ ಆಕಳೆ, ಕಳ್ಳ ಹೊಲೆಯ”—ಎಂದು ನಾಮಧಾರಿಯ


# ಕ್ರೀಡಾಂಗಣ

( ಕವನ ಸಂಕಲನ )

ಬರೆಹಗಾರರು :

**ಎಸ್. ಎಸ್. ಗವಗೆಕರ**

ಇದರಲ್ಲಿ ವಿವಿಧವಿಷಯಗಳನ್ನು ವಸ್ತುವನ್ನಾಗಿ ಇರಿಸಿಕೊಂಡು ಬರೆದ ೬೬ ಕವನಗಳಿರುವವು.

ಶ್ರೀ. ಆನಂದಕಂದರ ಮುನ್ನುಡಿಯನ್ನೊಳಗೊಂಡಿದೆ.

ಕ್ರಾ. ಅ. ೬೦ ಪುಟ

ಬೆಲೆ ೧ ರೂಪಾಯಿ

**ಮುಖ್ಯ ಮಾರಾಟಗಾರರು :—**

**ಮನೋಹರ ಗ್ರಂಥಭಾಂಡಾರ, ಧಾರವಾಡ**


ಸಹಸ್ರ ನಾಮವನ್ನು ಮಾಡಿ, “ನಿನ್ನನ್ನು ಜೈಲಿಗೆ ಕಳುಹಿಸದಿದ್ದರೆ ನಾನು ಕೃಷ್ಣಭಟ್ಟರ ಮಗನೇ ಅಲ್ಲ”— ಎಂದು ನಾನೂ ಆರ್ಭಟಿಸಿದೆ. ಕಾವೇರಿ ‘ಅಂಬಾ’ ಎಂದು ಆರ್ತಸ್ವರ ತೆಗೆಯುತ್ತ ಮುಂದೆ ಮುಂದೆ ನೆಗೆದೋಡಿತು.

ತುಳಸಿಗೆ ಹೊಸಸೀರೆ, ಮೇಲೈದು ರೂಪಾಯಿಗಳು ದೊರೆತುವು.

ನಮಗೆ ಕಾಮಧೇನುವಿಗಿಂತಲೂ ಮಿಗಿಲಾದ ಕಾವೇರಿ ದೊರೆಯಿತು. ನಾಗಪ್ಪನಿಗೆ ಆರು ತಿಂಗಳ ಜೈಲುವಾಸ ದೊರೆಯಿತು. ಆತ ಬಂಧಮುಕ್ತನಾಗಿ ಬರುವುದರೊಳಗೆ ತುಳಸಿ ಕಣ್ಮರೆಯಾಗಿದ್ದಳು.

ಕಾವೇರಿ ಮತ್ತೆ ಮೊದಲಿನಂತೆ ಮೆರೆಯತೊಡಗಿತ್ತು. ನನ್ನ ಮಕ್ಕಳನ್ನು ತನ್ನ ಹೊಟ್ಟೆಯ ಕರುಳಿಗಿಂತಲೂ ಕರುಗಳಿಗಿಂತಲೂ ಮುದ್ದಾಗಿ ಪಿಳುಸುತ್ತಿತ್ತು; ಮೂಸುತ್ತಿತ್ತು; ಮೈ ನೆಕ್ಕುತ್ತಿತ್ತು. ತುಂಟ ಕೃಷ್ಣನಂತೂ ಅದರ ಮೊಲೆಗಳಿಗೇ ಬಾಯಿಹಾಕುತ್ತಿದ್ದ. ಕಾವೇರಿ ಹಸುಗೂಸಿಗೆ ಹಾಲುಣ್ಣಿಸುವ ಆ ಮುಗ್ಧ ನೋಟವನ್ನು ನೋಡಿದವರು ಯಾರೂ ಮರೆಯಲಾರರು! ಯಾವ ಜನ್ಮದ ಋಣಾನುಬಂಧವೋ: ನಮಗೆ ಅದರ ಸಂಬಂಧ ಅಷ್ಟು ನಿಕಟವಾಗಿತ್ತು.

ಮುಂಜಾನೆ ನೋರೆ ತೊಳೆದೊಡನೆಯೇ ಕಾವೇರಿಗೆ ಕೈಮುಗಿದು, ಗಂಗೆದೊಗಲನ್ನು ತುರಿಸಿ, ಅದರ ನಾಲಗೆಯಿಂದ ಮೈಕೈಯನ್ನೆಲ್ಲ ನೆಕ್ಕಿಸಿಕೊಂಡು ಅಪ್ಪಣೆ ಪಡೆದ ಬಳಿಕವೇ ಮನೆಗೆಲಸದಲ್ಲಿ ತೊಡಗಬೇಕು ನಮ್ಮಮ್ಮ. ಒಂದು ದಿನವಾದರೂ ತನ್ನನ್ನು ಕಾಣಲು ಅಮ್ಮ ಬಾರದಿದ್ದರೆ ಅಥವಾ ಬರಲು ತಡವಾದರೆ, ಅದು ಅಮ್ಮನನ್ನು

ಕರೆಯುವ ರೀತಿ, ಅಮ್ಮ ಸೀಕಿಗೆ ಬಿದ್ದರೆ ಹಾಸಿಗೆಯ ವರೆಗೂ ಬಂದು ಅಮ್ಮನನ್ನು ಮೂಸಿ, 'ವಾಸಿಯಾಗಲಿ' ಎಂದು ಹರಸುವ ರೀತಿ— ಇವುಗಳನ್ನೆಲ್ಲ ನೆನೆದರೆ, ಕರುಳು ಕತ್ತರಿಸಿ ಬರುತ್ತದೆ.

ಕಾವೇರಿ ಇಂದಿಲ್ಲ.......ಅದರ ಕೊನೆಯ ದಿನಗಳನ್ನೆಂದಿಗೂ ಮರೆಯಲಾರೆ.... ...

ಒಂದು ದಿನ ನಾನಿನ್ನೂ ಹಾಸಿಗೆಯಿಂದೆದ್ದಿರಲಿಲ್ಲ; ಅಮ್ಮ ಬಂದು "ನಾರಾಯಣಾ, ಕಾವೇರಿ ಮಲಗಿದಲ್ಲಿಂದ ಏಳುತ್ತಿಲ್ಲ, ಕಣ್ಣೀರು ಸುರಿಸುತ್ತಿದೆ"— ಎಂದಳು. ಕಾವೇರಿ ಅತ್ತದ್ದು ನಮ್ಮಪ್ಪ ಸತ್ತ ದಿನ ಮಾತ್ರ; ಅಂದಾಗ ನಾವೆಲ್ಲರೂ ಕಂಗಾಲಾಗುವುದು ಸಹಜ.

ಎಷ್ಟೇ ಪ್ರಯತ್ನಪಟ್ಟರೂ ಮಲಗಿದಲ್ಲಿಂದ ಎಬ್ಬಿಸಲಾಗಲಿಲ್ಲ ನಮ್ಮಿಂದ. ಎಡಗಡೆಯ ಹೊಟ್ಟೆಯ ಕೆಳಭಾಗಕ್ಕೆ ಬಲವಾದ ಪೆಟ್ಟು ಬಿದ್ದಂತಿತ್ತು. ಅದು ನಾಮಧಾರೀ ನಾಗಪ್ಪನದೇ ನಾಟಕವೆಂಬುದು ನಮಗೂ ತಿಳಿಯದಿರಲಿಲ್ಲ. ಆದರೆ ಪ್ರತ್ಯಕ್ಷ ಪುರಾವೆಯೊಂದು ಬೇಕಲ್ಲವೇ? ಆ ವಿಚಾರ ಹಿಂದಿನದಾಯಿತು.

ಊರೊಳಗಿನ ಔಷಧೋಪಚಾರ ಮಾಡಿದೆವು. ನಾಲ್ಕಾರು ದಿನಗಳಾದರೂ ಗಾಯ ಮಾಯಲಿಲ್ಲ. ಕುಮಟೆಗೆ ಹೋಗಿ ದನಗಳ ಆಸ್ಪತ್ರೆಯಿಂದ ಔಷಧವನ್ನು ತಂದಾಯಿತು. 'ದನದ ಡಾಕ್ಟರರು' ಕೊಟ್ಟ ಔಷಧವೂ ಪರಿಣಾಮಕಾರಿಯಾಗಲಿಲ್ಲ. ಕೊನೆಯ ಅಸ್ತ್ರವಾಗಿ ಬೆಳಂಬರದ ಗೌಡನನ್ನೇ ಕರೆತಂದುದಾಯಿತು. ಮೂಕ ಪ್ರಾಣಿಗಳ ರೋಗಕ್ಕೆ ಗೌಡನದು ಸಿದ್ಧ ಹಸ್ತ. ಗಾಯಗಳಿಗಂತೂ ರಾಮಬಾಣ! ಕಾವೇರಿಯ ಭಾರವನ್ನೆಲ್ಲ ಗೌಡನ ಮೇಲೆಯೇ ಹೊರಿಸಿದೆವು

ಆತ ತನ್ನ ಭಗೀರಥ ಪ್ರಯತ್ನವನ್ನೂ ಮಾಡಲು ಸಿದ್ಧನಿದ್ದ; ಆದರೆ ಆತ ಕಾವೇರಿಯನ್ನು ಪ್ರತ್ಯಕ್ಷ ಕಂಡಾಗ ಕುಗ್ಗಿಹೋದ. "ಗಾಯ ಕೈಮೀರಿದೆ; ಇಷ್ಟು ದಿನ ಮೊದಲೇ ತಿಳಿಸದೆ ಕೆಲಸವನ್ನೇ ಕೆಡಿಸಿದಿರಿ. ಅಲ್ಲದೆ ನೀವು ತಿಳಿದಂತೆ ಬರೀ ಗಾಯದ ಪೆಟ್ಟು ಮಾತ್ರವಲ್ಲ. 'ಕಾಲುವಡೆ' (ಒಂದು ಬಗೆಯ ಕಾಲಿನ ರೋಗ)ಯೂ ಆಗಿದೆ. ಅದಕ್ಕೂ ಔಷಧೋಪಚಾರ ಮಾಡಬೇಕಿತ್ತು. ಮಲಗಿದಲ್ಲಿಂದ ಏಳದಿದ್ದ ಕಾರಣವೂ ಅದೇ......." ಎಂದು ಹೇಳಿ, ತನ್ನ ಔಷಧೋಪಚಾರದಿಂದ ಈಗ ಪ್ರಯೋಜನವಾದೀತೆಂದು ತನಗೆನಿಸುವುದಿಲ್ಲವೆಂದು ಔಷಧವನ್ನು ಕೊಟ್ಟು ಹಿಂತಿರುಗಿದ.

ಗೌಡನ ಬಾಯಿಂದ ಕೈಮೀರಿದೆಯೆಂಬ ಮಾತು ಬಂತೆಂದರೆ ಚಿರಂಜೀವಿಯೂ ಬದುಕಿ ಉಳಿಯಲಾರ. ಅಂದಬಳಿಕ ಕಾವೇರಿಯ ಮಾತೇನು?

ಅಮ್ಮನೀಗ ಮಲಯಾಳಮುಖಿಯಾದಳು. ಔಷಧಿಗೆ ನಾನು, ಉಪಚಾರಕ್ಕೆ ನನ್ನಾಕೆ. ಅಮ್ಮ ಮಾತ್ರ ಊರೊಳ ಹೊರಗಣ ಮಂತ್ರ-ತಂತ್ರವಾದಿಯರನ್ನು ಸಂದರ್ಶಿಸತೊಡಗಿದಳು. ಒಂದು ಸಲ 'ಶಂಕುಮಹಾನ'ವಾದರೆ, ಇನ್ನೊಂದು ಸಲ ಕೆಂಪು ಅನ್ನ; ಒಂದು ದಿನ ಸೂಜಿ-ಲಿಂಬೆಯಾದರೆ ಇನ್ನೊಂದು ದಿನ ಜುಂಜಿ-ಹಂಬೆ—ಹೀಗೆ ಏನೇನೋ ನಡೆಯಿಸಿದ್ದಳು ಏಕನಿಷ್ಠೆಯಿಂದ. ವಾಸ್ತವಿಕವಾಗಿ ನನಗೆ ಅವುಗಳಲ್ಲಿ ವಿಶ್ವಾಸವಿಲ್ಲದಿದ್ದರೂ, ಹೇಗಾದರೂ ಸರಿ, ಕಾವೇರಿಗೆ ಗುಣವಾದರೆ ಸಾಕೆಂದು ಸುಮ್ಮನಿದ್ದೆ.

ಬರುಬರುತ್ತ ಹುಲ್ಲು ನೀರನ್ನೂ ಬಿಟ್ಟಿತು ಕಾವೇರಿ. ಗಾಯದ ಬಾಯಿ ಬೆಳೆಯುತ್ತಲೇ ಇತ್ತು. ನೊಣ ನೊರಜುಗಳು ಗಾಯವನ್ನು ಮುತ್ತಿ ಮುಕ್ಕರಿಸಹತ್ತಿದುವು. ಬಾಲದಿಂದ ಅವುಗಳನ್ನು ಓಡಿಸಲು ಯತ್ನಿಸುತ್ತಿದ್ದಿತಾದರೂ, ಬಾಲವನ್ನು ಝಾಡಿಸುವಷ್ಟು ತ್ರಾಣವೂ ಅದರಲ್ಲಿರಲಿಲ್ಲ. ಆ ಪಾಡನ್ನು ನೋಡಲಾರದೆ, ಮಕ್ಕಳನ್ನು ಶಾಲೆಗೂ ಕಳುಹಿಸದೆ, ಕಾವೇರಿಯ ಹತ್ತಿರವೇ ಕಾಯಲು ಕುಳ್ಳಿರಿಸಿದ್ದಾಯಿತು. ಮಕ್ಕಳಿಗೇನು ತಿಳಿಯಬೇಕು ಅದರ ಸುಖದುಃಖ? ನಾವು ಕಣ್ಮರೆ. ಯಾದೊಡನೆಯೇ ಅವರು ತಮ್ಮ ಆಟದಲ್ಲಿ ಮಗ್ನರಾಗುತ್ತಿದ್ದರು.

ಕಾವೇರಿಯ ಅನ್ನ ಸತ್ಯಾಗ್ರಹ ಬಲವಾಯಿತು. ಬಲಾತ್ಕಾರದ ಆಹಾರಪ್ರಯೋಗವೂ ನಿರರ್ಥಕವಾಯಿತು. ಈ ವರೆಗೆ ಮಗ್ಗಲು ಮುರಿಯಲು ಯತ್ನಿಸುತ್ತಿದ್ದುದೂ ಈಗ ನಿಂತಿತು. ಕಾಕಾಸುರರೂ ಅದರ ಗಾಯಕ್ಕೆ ದೃಷ್ಟಿಯಿಕ್ಕಿದರು.—ತಮ್ಮ ಕಬ್ಬಿಣದ ಕೊಕ್ಕಿನಿಂದ ಕುಕ್ಕಿ ಕುಕ್ಕಿ ರಕ್ತ ಮಾಂಸಗಳನ್ನು ಹರಿಯತೊಡಗಿದರು. ಕಾಗೆಗಳಿಂದ ರಕ್ಷಿಸುವುದೆಂದರೆ ಯಮನಿಂದಲೇ ರಕ್ಷಿಸಿದಂತೆ-ಎಂಬ ಕಹಿ ಅನುಭವವಷ್ಟೇ ನಮಗುಳಿಯಿತು.

ಈಗ ಕಾವೇರಿ ಕರುಣೆಯ ಕೊನೆಯ ಹಂತಕ್ಕೆ ಮುಟ್ಟಿತು. ಗಾಯದಿಂದ ನಾತ ಬರಲಾರಂಭಿಸಿತು. ಅದು ತನ್ನ ಕೈಕಾಲುಗಳನ್ನು ಒದ್ದುಕೊಳ್ಳುವ ಆ ನೋಟ, ಕಣ್ಣುಗಳನ್ನು ಮುಚ್ಚಿಸುವಂತಹ ಕಂಬನಿ, ನಾಲಿಗೆಯನ್ನು ಹೊರದೆಗೆದರೂ ಹುಲ್ಲು-ನೀರನ್ನು ಮುಟ್ಟೆನೆಂದು ಹೊತ್ತ ಹಟ—ಇವುಗಳಿಂದಾಗಿ ನಮಗೂ ಅನ್ನ ಸೇರದಾಯ್ತು. ಅದರ ನರಳುವಿಕೆಗೆ-ಮಿಡುಕುವಿಕೆಗಳನ್ನು ಕಂಡ ಜನರು, 'ಅಯ್ಯೋ ಪಾಪ' ಎಂದರು. ಅದರ ಗಾಯದಿಂದ ಹೊರಡುತ್ತಿದ್ದ ದುರ್ನಾತಕ್ಕೆ ಮೂಗು ಮುಚ್ಚಿಕೊಂಡವರು ಕೆಲವರು, ಮೂಗು ಮುರಿದವರು ಹಲವರು! ನಮ್ಮ ನೆರೆಮನೆಯವರಂತೂ ನಮಗೆ ಕೊಟ್ಟ ಶಾಪ ಹೇಳತೀರದು.

ಕಾವೇರಿಯ ಸುದ್ದಿ ಕೇರಿಯ ಜನತೆಗಲ್ಲದೆ ಊರ ಹೊರಗಣ ಹೊಲೆಯರ ಕಿವಿಗೂ ಸೋಂಕಿತು. ಕಳ್ಳತನದಿಂದ ಕೊಟ್ಟಿಗೆಯ ಹಿಂದಿನಿಂದಲೇ ಬಂದು ನೋಡಿದರವರು. ಆದರೆ ನಮ್ಮಮ್ಮನಿಗೆ ಹೆದರಿ ಅವರು ಪಿಟ್ಟೆನ್ನದೆ ಹಿಂದೆಯೇ ಕಾಲ್ತೆಗೆಯಬೇಕಾಗಿತ್ತು.

ಮಂಗಳವಾರ ದಿನ ನಾನು ಶಾಲೆಯಿಂದ ಮರಳುವಾಗ, ಕಟುಕರ ಮಂಗಳ, "ಬಟ್ರೆ, ನಿಮ್ದನ ಇನ್ನದ್ಯಾಂಗಿಲ್ರಾ,—ಆ ನಾತಾ ನಮ್ಗುನ್ನೂ ಸೈಸಾಕಾಗಾಗಿಲ್ಲ ನೋಡಿ, ಸುಮ್ನೆ ನಮ್ಗೊಕ್ಕಟ್ರಾಗ್ಬಾರದ್ದಾ?"—ಎಂದು ಅಮಂಗಲ ಮಾತುಗಳನ್ನಾಡಿ ಮುಗಿಸಿದ. "ಚಾತ್ಯಾ ನೀನು ಹೊಲೆಯ! ಇನ್ನೂ ಜೀವವಿರುವಾಗಲೇ ನಮ್ಮ

ಆಕಳನ್ನು ಸುಲಿಯಬಯಸುವ ನಿನ್ನನ್ನು ಕಟುಕರ ಬಾಯಿಯಲ್ಲಿ ಹುಟ್ಟಿಸಿದ ದೇವರು ಅವಿಚಾರವಂತನಲ್ಲ!.... ಮೂರ್ಖ ಮುಂಡೇಗಂಡ ... ಕಾವೇರಿ ಸತ್ತರೂ ನಿನ್ನಂಥವನ ಕೈಗೆ ತಾಗಗೊಡಲಾರೆ. ತಿಳಿಯಿತೇ ?" —ಎಂದು ಜೋರುಮಾಡಿದೆ. "ಹಾಂಗೇ ಆಗ್ಲಿ ಭಟ್ರ್ಯಾ; ಸಾವ್ರೂ. ಕೊಂದ್ರಾಯ್ಲಿ ಕಷೇಕ್ಕಂಗೇ ಕೊಡ್ತ್ರ್ಯೇನ್ನೀವೇ ತಿಂತ್ರ್ಯೋ ನೋಡ್ತಿನ್ನಿ ನಾ"—ಕಟುನಗೆಯೊಡನೆ ನಗುತ್ತ ಹೇಳಿದ. ಆ ಕಟುಕ.

ಈ ಘಟನೆ ಅಮ್ಮನಿಗೆ ತಿಳಿದಾಗ, ಅತ್ತು ಅತ್ತು ಸೋತು ಹೋದಳು. ಬಹುಶಃ ಕಂಗಳಲ್ಲಿಯ ನೀರೆಲ್ಲ ಖರ್ಚಾದ ಮೇಲೆಯೇ ಅಳುವುದನ್ನು ನಿಲ್ಲಿಸಿರಬೇಕವಳು !—

ಇಷ್ಟಾಗಿಯೂ ನಮ್ಮ ಋಣವಿಮೋಚನೆಗೆ ಕಾವೇರಿ ಇಷ್ಟಪಡಲಿಲ್ಲ. ತನ್ನ ಕಿವಿಗಳನ್ನು ಕೊಲಪಿ, 'ನಾನಿನ್ನೂ ಸತ್ತಿಲ್ಲ; ಇಷ್ಟು ಬೇಗನೇ ಸಾಯುವುದೂ ಇಲ್ಲ'-ಎಂದು ಸೂಚಿಸುವಂತಿತ್ತು. ನಮ್ಮಮ್ಮ "ಸತ್ತಾದರೂ ಹೋಗಬಾರದಾ ?" ಎಂದು ಕೂಡ ಹೇಳಿದಳು. ಇದೇನೂ ಕಾವೇರಿಯ ಕೊಳೆಯ ನಾತವನ್ನು ಸಹಿಸಲಾರದೆ ಹೇಳಿದ ಮಾತಲ್ಲ—ಅದರ ನೋವನ್ನು ನೋಡಲಾರದೆ, ಅದು ಪಡುತ್ತಿರುವ ವೇದನೆಯನ್ನು ಕಾಣಲಾರದೆ ಆಡಿದ ಅಂತಃಕರಣದ ಪ್ರತಿಧ್ವನಿಯದು. ಸತ್ತು ಸುಖ ಸಿಗುವಂತಿದ್ದರೆ—ಕಾವೇರಿ ಸತ್ತು ಬದುಕಿದಂತೆಯೇ ಸರಿ—ಎಂಬ ಕರುಳ ಮೊರೆಯಿಂದಾಗಿ.

ಅಂದು ಕೊನೆಯ ಶ್ರಾವಣ ಸೋಮವಾರ, ಅಂಕೋಲೆಗೆ ಹೋಗಿ ಔಷಧವನ್ನು ತಂದೆ.—ತಂದ ವಿಚಾರ ನನಗೊಬ್ಬನಿಗೆ ಮಾತ್ರ ಗೊತ್ತು. ಇತರರಿಗೆ ತಿಳಿಯಗೊಡುವಂತೆ ಇರಲಿಲ್ಲ.

ಮನೆಯನ್ನು ಮುಟ್ಟುವಾಗ ಐದು ತಾಸು ಹೊತ್ತೇರಿತ್ತು. ಔಷಧವನ್ನಡಗಿಸಿಟ್ಟುಕೊಂಡು ಕೊಟ್ಟಿಗೆಯ ಕಡೆ ಹೊರಟೆ; ಕಾಲ್ಗಳೇ ಕದಲುತ್ತಿರಲಿಲ್ಲ. ಆದರೂ ನನ್ನ ಕಾವೇರಿ ಬದುಕಬೇಕಾದರೆ ಔಷಧವನ್ನು ಕೊಡಲೇಬೇಕು. ಹತ್ತುಹತ್ತು ಸಲ ಕಾವೇರಿಯ ಬಳಿಗೆ ಹೋಗಿ ಹಿಂದಿರುಗಿದೆ. ಎಷ್ಟೆಂದರೂ ಮಾನವ ಹೃದಯ ನನ್ನದು. ಹೀಗಿರುವಾಗ....ಅವರೇನು ಮಾಡಲಿ ? ಕಾವೇರಿಯನ್ನು ಬದುಕಿಸಲು ಇದೇ ಯೋಗ್ಯ ಮಾರ್ಗವೆಂದು ನಿರ್ಧರಿಸಿ, ತಂದ ಔಷಧವನ್ನು ಕೊಟ್ಟೇಬಿಟ್ಟೆ.............ಆಗ ಯಾರೋ ನನ್ನ ಕಿವಿಗಳಲ್ಲಿ ಕೂಗಿದರು— "ಬ್ರಾಹ್ಮಣನಾಗಿರುವ ನೀನು ಕೊಲೆಗಡುಕರಿಗಿಂತಲೂ ಕಡೆ"— ಎಂದು.

ಕಾವೇರಿಗೆ ಬಾಳೆಯಹಣ್ಣೆಂದರೆ ಬಹಳ ಪ್ರೀತಿಯ ತಿನಿಸು. ತನ್ನ ಶ್ರಾವಣಮಾಸದ ಅಖಂಡವಾದ ಉಪವಾಸದಲ್ಲಿ ಅದು ಬಾಳೆಯ ಹಣ್ಣನ್ನೂ ತಿಂದಿರಲಿಲ್ಲ. ಶ್ರಾವಣಮಾಸದ ಕೊನೆಯ ಸೋಮವಾರ ದಿನ ಬಾಳೆಯ ಹಣ್ಣಿನಲ್ಲಿ ಹಾಕಿಕೊಟ್ಟ ಔಷಧವನ್ನು ಅಮೃತವೆಂದು ಭಾವಿಸಿಯೋ ಏನೋ—ಕಾವೇರಿ ಅತಿ ಪ್ರೀತಿಯಿಂದ ಸೇವಿಸಿತು....

ಸೋಮವಾರದ ಶಿವಪೂಜೆಯಿಂದ ಮರಳಿದ ಅಮ್ಮ, "ನಾರಾಯಣಾ, ಕಾವೇರಿ ಕಣ್ಮರೆಯಾಯಿತು. ಒಳ್ಳೆಯ ದಿನ; ಪುಣ್ಯವಂತ ಪ್ರಾಣಿ" ಎಂದು ಹೇಳಿದಾಗ, ನನ್ನ ಕಿವಿಯಲ್ಲಿ ಕಾದೆಣ್ಣೆಯನ್ನು ಸುರುವಿದಂತಾಯಿತು. ಈ ಮಾತುಗಳನ್ನಾಡುವಾಗ ಕಾವೇರಿಯ ವೇದನೆ ಕಡಿಮೆಯಾದ ಬಗ್ಗೆ ಒಂದು ಬಗೆಯ ಆನಂದವೂ ಕಾವೇರಿಯನ್ನು ಕಳೆದುಕೊಂಡ ಬಗ್ಗೆ ಒಂದು ಬಗೆಯ ದುಃಖವೂ ಉಂಟಾಗಿ ಅಮ್ಮನ ಕಣ್ಣುಗಳಲ್ಲಿ ನೀರುತುಂಬಿತ್ತು. ಕಾವೇರಿ ನನ್ನ ಕೈಗಳಲ್ಲಿಯೇ ಪ್ರಾಣವನ್ನು ಬಿಟ್ಟಿದೆಯೆಂದು ಅಮ್ಮನಿಗೆ ನಾನು ಯಾವ ಬಾಯಿಂದ ಹೇಳಲಿ ?

ಅಮ್ಮನ ಅಪ್ಪಣೆಯಂತೆ ಕಳೆದ ವರ್ಷ ಶಿವರಾತ್ರಿಗೆ ಗೋಕರ್ಣಕ್ಕೆ ಹೋದಾಗ ಕಾವೇರಿಗೂ ಪಿಂಡ ಹಾಕಿ ಬಂದಿದ್ದೇನೆ. ಅಮ್ಮನಿಗೆ ಕಾವೇರಿಯ ಮೇಲಿದ್ದ ಭಕ್ತಿ-ಶ್ರದ್ಧೆಗಳಿಗೆ ಇನ್ನೊಂದು ಮಾತನ್ನು ಕಾಣಬಹುದು—"ನಾರಾಯಣಾ, ನಾನು ಸತ್ತಬಳಿಕ ನನ್ನ ಶ್ರಾದ್ಧವನ್ನು ಮಾಡದಿದ್ದರೂ ಚಿಂತೆಯಿಲ್ಲ; ಆದರೆ ಪ್ರತಿ ವರ್ಷವೂ ಕಾವೇರಿಯ ಹೆಸರಿನಲ್ಲಿ ಗೋಗ್ರಾಸವನ್ನು ಕೊಡು; ಎಂದಿಗೂ ತಪ್ಪಬೇಡ. ನಾವಿರುವವರೆಗೆ ಆ ಪುಣ್ಯಕಾರ್ಯ ನನ್ನ ಪಾಲಿಗೇ ಇರಲಿ."

ಕೊನೆಯ ಶ್ರಾವಣ ಸೋಮವಾರ ದಿನ ಅಮ್ಮ ಹನಿ ನೀರನ್ನೂ ಮುಟ್ಟುವುದಿಲ್ಲ. ಗೋಸೇವೆ, ಗೋಪೂಜೆ, ಗೋಗ್ರಾಸ ಇಂಥವುಗಳಲ್ಲಿಯೇ ತೊಡಗಿರುತ್ತಾಳೆ.

ಇಂದು ಕೊನೆಯ ಶ್ರಾವಣ ಸೋಮವಾರ ಕಾವೇರಿಯ ಮೃತದೇಹವನ್ನು ಮನೆಯ ಹಿತ್ತಲಂಗಳದಲ್ಲಿಯೇ ಹುಗಿದ್ದೇವೆ. ಅದರ ಮೇಲೆ ಅಮ್ಮ ಒಂದು ಅಶ್ವತ್ಥ ಗಿಡವನ್ನು ನೆಟ್ಟು ಅಲ್ಲಿ ಕಟ್ಟೆಯನ್ನು ಕಟ್ಟಿಸಿದ್ದಾಳೆ. ಇಂದವಳು ಕುಳಿತುದೂ ಇದೇ ಕಟ್ಟೆಯ ಎದುರಿನಲ್ಲಿಯೇ.

ಕಾವೇರಿ !...... .. ನೀನು ಕಣ್ಮರೆಯಾದುದು ದೈಹಿಕವಾಗಿ; ಹೃದಯದ ಕಳೆದುರು ನಿನ್ನ ಕೊನೆಯ ದಿನಗಳ ನೆನಪು ಮಾಡಿ ಸುಪ್ತ ವೇದನೆಯನ್ನು ಕೆರಳಿಸುತ್ತಿದೆ; ಕಲ್ಪನೆಯ ಕಂಗಳೆದುರು ನೀನು ಮಕ್ಕಳನ್ನು ಮುದ್ದಿಸುವ—ಮೊಲೆಯುಣ್ಣಿಸುವ—ಮುದ್ದು ನೋಟ ಮಂತ್ರಮುಗ್ಧನನ್ನಾಗಿ ಮಾಡುತ್ತಿದೆ. ನಿನಗಾಗಿ ನಾನೇನನ್ನು ತಾನೆ ಮಾಡಬಲ್ಲೆ ?

ಕಾವೇರೀ ! ಇದೋ ನಿನಗೆ ನನ್ನ—ಕಣ್ಣೀರ ಕಾಣಿಕೆ.

# ಹಿಂದೂ ಮಹಿಳೆಯ ಬಾಳನೋಟ

## ಕನ್ಯಾಜೀವನ*

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

**ಕನ್ಯೆಯರ ಜೀವನವೆಂದರೆ ಲೀಲಾಮಯವಾಗಿ ವಿಕಸಿಸುವಂತಹದು. ಸೊಗಸಿನ ಊಟ-ಉಡಿಗೆ, ವಿನೋದದ ವಿವಿಧಕ್ರೀಡೆ ಇವೇ ಕನ್ಯಾಜೀವನದ ಮುಖ್ಯಲಕ್ಷಣಗಳು! ಆದರೆ ಇಂದಿನ ಕನ್ಯೆಯರ ಜೀವನ ಹೀಗಿದೆಯೆ?**

ಮದುವೆಯಾಗದ ಹೆಣ್ಣುಮಗಳನ್ನು 'ಕನ್ಯೆ' ಎಂದು ಕರೆಯುವುದು ಇಂದು ರೂಢಿಯಲ್ಲಿದೆ; ಆದರೆ ನಮ್ಮ ಭಾರತೀಯ ಸ್ಮೃತಿವಚನವು ಎಂಟನೆಯ ವಯಸ್ಸಿನಲ್ಲಿ ಹೆಣ್ಣುಮಗಳು ಕನ್ಯೆಯೆನಿಸಿಕೊಳ್ಳುವಳೆಂದೂ, ಒಂಬತ್ತನೆಯ ವಯಸ್ಸಿನಲ್ಲಿ 'ರೋಹಿಣಿ'ಯೆನಿಸಿಕೊಳ್ಳುವಳೆಂದೂ, ಹತ್ತನೆಯ ವರ್ಷದಲ್ಲಿ 'ಗೌರಿ' ಯೆನಿಸಿಕೊಳ್ಳುವಳೆಂದೂ ಹೇಳುವುದು. ಕನ್ಯಾವಸ್ಥೆಗೆ ಬಂದೊಡನೆಯೆ ಹೆಣ್ಣಿನ ಮದುವೆಯ ಏರ್ಪಾಡು ಮಾಡಬೇಕೆಂದೂ ಸ್ಮೃತಿಯು ಉಸುರುವುದು. ಹೆಣ್ಣುಮಗಳು 'ಕನ್ಯೆ'ಯೆನಿಸಿಕೊಳ್ಳುವಾಗಲೇ ಮದುವೆ ಮಾಡುವುದು ಉತ್ತಮವೆಂದೂ, ರೋಹಿಣಿಯೆನಿಸಿಕೊಳ್ಳುವಾಗ ಮದುವೆ ಮಾಡುವುದು ಮಧ್ಯಮವೆಂದೂ, 'ಗೌರಿ'ಯೆನಿಸಿಕೊಳ್ಳುವಾಗ ಮದುವೆಮಾಡುವುದು ಕನಿಷ್ಠವೆಂದೂ ಭಾರತೀಯ ಸ್ಮೃತಿಗಳು ಹೇಳುವುವು. ಹತ್ತುವರ್ಷದ ವಯಸ್ಸು ಮೀರಿದ ಮೇಲೆ ಮದುವೆ ಮಾಡುವುದು 'ಅಧಮಪಕ್ಷ' ಎಂದು ಸ್ಮೃತಿಕಾರರ ಅಭಿಪ್ರಾಯ. ಎಂತಲೇ ಇಂದು ಮದುವೆಯ ಹೆಣ್ಣು ಎಷ್ಟೇ ವಯಸ್ಸಿನದಾಗಿ ಇರಲಿ; ಮದುವೆಯ ಕಾಲದಲ್ಲಿ 'ಅಷ್ಟವರ್ಷಾ ಭವೇತ್ ಕನ್ಯಾ' ಎಂಬ ಶ್ಲೋಕವನ್ನು ಹೇಳುವುದು ಒಂದು ಸಂಪ್ರದಾಯದ ಮಾತಾಗಿ ಉಳಿತಿದೆ. 'ಕನ್ಯಾ' ಎಂಬ ಸಂಸ್ಕೃತಪದದ ಅರ್ಥವನ್ನು ಸರಿಯಾಗಿ ಹೇಳುವ ಕನ್ನಡಪದವೆಂದರೆ—'ಕೊಡಗೂಸು' ಎಂಬುದು. ಕೊಡಗೂಸು ಎಂದರೆ 'ಮದುವೆಮಾಡಿಕೊಡಲು ತಕ್ಕವಳಾದ ಹೆಣ್ಣುಮಗಳು' ಎಂದರ್ಥ.

ಕನ್ಯೆಯ ಬಗೆಗೆ ಸ್ಮೃತಿಧರ್ಮದ ನಿಯಮವು ಹೀಗಿದ್ದರೂ, ಪುರಾಣಕಾಲದಿಂದಲೂ ನಮ್ಮ ಭಾರತೀಯ ಸಾಹಿತ್ಯಸಾಗರವನ್ನು ಅವಲೋಕಿಸುತ್ತ ಬಂದರೆ, ಹೆಣ್ಣಿನ ಎಂಟನೆಯ ವರ್ಷದಲ್ಲಿಯೆ ಮದುವೆಮಾಡಿಕೊಡುವುದು, ನಮ್ಮ ಭಾರತೀಯ ಸಮಾಜದ ಎಲ್ಲ ಪಂಗಡಗಳಲ್ಲಿಯೂ ರೂಢಿಯಲ್ಲಿ ಇರಲಿಲ್ಲವೆಂಬುದು ಒಡೆದು ಕಾಣುವುದು. ಕ್ಷತ್ರಿಯವರ್ಣದಲ್ಲಿ ಕಂಡುಬರುವ 'ಗಾಂಧರ್ವವಿವಾಹಪದ್ಧತಿ' 'ಸ್ವಯಂವರ ಪದ್ಧತಿ' ಇವುಗಳನ್ನು ನೋಡಿದರೆ, ಮದುವೆಗಾದ ಹೆಣ್ಣುಮಕ್ಕಳು ಸ್ಮೃತಿನಿಯಮವನ್ನು ಮೀರಿ ಬೆಳೆದ ವಯಸ್ಸಿನವರಿರುತ್ತಿದ್ದರೆಂಬುದು ಗೊತ್ತಾಗುವುದು. ವಾಲ್ಮೀಕಿರಾಮಾಯಣದಲ್ಲಿ ಬರುವ ಸೀತಾಸ್ವಯಂವರದ ಬಣ್ಣನೆಯನ್ನು ಓದುವಾಗ, ಸೀತಾದೇವಿ ತಾರುಣ್ಯಾವಸ್ಥೆಯಲ್ಲಿಯೆ ಅಡಿಯಿರಿಸಿದ್ದಳೆಂಬ ಮನವರಿಕೆಯಾಗುವುದು. ಅದರಂತೆಯೆ ಕಣ್ವಋಷಿಯ ಆಶ್ರಮದಲ್ಲಿ ಪಾಲಿತಪುತ್ರಿಯಾಗಿ ಬೆಳೆದ ಶಕುಂತಲೆಯು ದುಷ್ಯಂತರಾಜನೊಡನೆ ಗಾಂಧರ್ವವಿವಾಹಮಾಡಿಕೊಂಡ ಕತೆಯನ್ನು ಓದುವಾಗ, ಶಕುಂತಲೆ ಕನ್ಯಾವಸ್ಥೆಯನ್ನು ಮೀರಿ ಯೌವನದಶೆಯನ್ನು ತಲ್ಪಿದ್ದಳೆಂಬುದು ತಿಳಿದುಬರುವುದು.

ಮಹಾಭಾರತಪ್ರಸಿದ್ಧರಾದ ದಮಯಂತಿ, ಸತ್ಯವತಿ, ಕುಂತಿ, ದ್ರೌಪದಿ; ರುಕ್ಮಿಣಿ, ಸತ್ಯಭಾಮೆ ಇವರೆಲ್ಲರೂ ತಾರುಣ್ಯಾವಸ್ಥೆಯಲ್ಲಿಯೆ ಮದುವೆಮಾಡಿಕೊಂಡರೆಂಬುದು ಗೊತ್ತಾಗುವುದು. ಕನ್ನಡಕಾವ್ಯಗಳಲ್ಲಿ ಬರುವ ಬೇರೆ ಬೇರೆ ನಾಯಿಕೆಯರ ಚರಿತ್ರೆಗಳನ್ನು ನೋಡಿದರೂ, ಅವರೆಲ್ಲ ಮದುವೆಯಾಗುವ ಸಮಯದಲ್ಲಿ, ತಾರುಣ್ಯಪಥದಲ್ಲಿ ಕಾಲಿರಿಸಿದವರೇ ಎಂದು ಹೇಳಬಹುದು. ಲಕ್ಷ್ಮೀಶಕವಿಯ ಚಂದ್ರಹಾಸೋಪಾಖ್ಯಾನದಲ್ಲಿ ಬರುವ—ಕುಂತಳನಗರದ ಮಂತ್ರಿ ದುಷ್ಟಬುದ್ಧಿಯ ಮಗಳು—ವಿಷಯೆ, ತನ್ನ ತಂದೆ ಪ್ರಯಾಣಕ್ಕೆ ಹೊರಟಾಗ, ತನಗೆ ತಾರುಣ್ಯ ಬಂದಿದೆಯೆಂಬುದನ್ನೂ ತಕ್ಕವರನನ್ನು ಹುಡುಕಿ ಮದುವೆಮಾಡಿಕೊಡಬೇಕೆಂಬುದನ್ನೂ ಪರ್ಯಾಯ ವಚನಗಳಲ್ಲಿ ತಿಳಿಸುವಳು. ನೇಮಿಚಂದ್ರನ 'ಲೀಲಾವತಿ' ದೇವಚಂದ್ರಕವಿಯ 'ಕುಸುಮಾವಳಿ' ಇವು ತೀರ ಕಲ್ಪಿತ ಕಥೆಗಳಿಂದ ಕೂಡಿದ ಕೃತಿಗಳಾದರೂ, ಇವುಗಳ ನಾಯಿಕೆಯರು ಕನ್ಯೆಯ ವಯೋಮರ್ಯಾದೆಯನ್ನು ಮೀರಿದವರೇ ಆಗಿರುವರು. ಇದೆಲ್ಲವನ್ನೂ ನೋಡಿದಾಗ, ಹೆಣ್ಣಿನ ಮದುವೆಯ ವಿಚಾರದಲ್ಲಿ ಸ್ಮೃತಿನಿಯಮದ ಅನುಸರಣೆಯನ್ನು ಮಾಡುವ ಜನರು, ನಮ್ಮ ಭಾರತೀಯ ಸಮಾಜದಲ್ಲಿ

* ಧಾರವಾಡದ ಆಕಾಶವಾಣಿ ಕೇಂದ್ರದಿಂದ ತಾ. ೪-೫-೫೬ರಂದು ಬಿತ್ತರಗೊಂಡ ಭಾಷಣವಿದು. ಸಂ. ಜ,

ಮೊದಲಿನಿಂದಲೂ ತೀರ ಕಡಮೆಯೆಂಬುದು ವ್ಯಕ್ತವಾಗುವುದು. ಆದುದರಿಂದಲೇ ಹೆಣ್ಣುಮಗಳು ಬೆಳೆದು ಎಷ್ಟೇ ದೊಡ್ಡವಳಾದರೂ ಮದುವೆಯಾಗುವವರೆಗೂ ಆವಳನ್ನು 'ಕನ್ಯೆ' ಎಂದು ಕರೆಯುವುದು ರೂಢಿಯಲ್ಲಿ ಬಂದಿರಬೇಕು. ಇಂದಿನ ನಮ್ಮ ಸಾಮಾಜಿಕಜೀವನದಲ್ಲಿ ಕೂಡ ಇದೇ ರೂಢಿ ಉಳಿದುಕೊಂಡಿದೆ.

ನಮ್ಮ ವಿದಗ್ಧವಾಙ್ಮಯದಲ್ಲಿ ಕಾಣುವ ಕನ್ಯೆಯರ ಬಾಳನ್ನು ವಾಸ್ತವವಾಗಿ ವರ್ಣಿಸಿದವರು ತೀರ ಕಡಿಮೆ. ಅವರ ಜೀವನವರ್ಣನೆ ಕವಿಸಮಯ, ಅರ್ಥಾಲಂಕಾರ ಇವುಗಳಿಂದ ಬಂಧಿತವಾಗಿ ಕೃತ್ರಿಮತೆಯಿಂದ ಕೂಡಿದುದಾಗಿ ಕಾಣುವುದು. ಆ ಕನ್ಯೆಯರು ನಖಶಿಖಾಂತವಾಗಿ ತೊಡುವ ಅಲಂಕಾರಗಳು, ಬೇರೆ ಬೇರೆ ಪ್ರಸಾಧನಗಳು, ಬಟ್ಟೆಬರೆಗಳು, ವರ್ತಮಾನಜೀವನದಲ್ಲಿ ಬಾಳುತ್ತಿರುವ ನಮಗೆ ವಿಲಕ್ಷಣವಾಗಿ ಕಾಣಬಹುದು. ಅವರ ವನವಿಹಾರ, ಜಲಕ್ರೀಡೆ, ವಸಂತೋತ್ಸವ, ವಿವಾಹಪೂರ್ವದ ವಿರಹವೇದನೆ ಇವೆಲ್ಲ ವಿಚಿತ್ರವೆನಿಸಬಹುದು. 'ನಮ್ಮ ಕನ್ಯೆಯರ ಜೀವನ ಹೀಗೂ ಇದ್ದಿತೇ?' ಎಂದು ನಾವು ಆಶ್ಚರ್ಯೋದ್ಗಾರಗಳನ್ನೂ ತೆಗೆಯಬಹುದು. ಏಕೆಂದರೆ, ನಮ್ಮ ದೇಶದಲ್ಲಿಯ ಇಂದಿನ ಕನ್ಯೆಯರ ವಾಸ್ತವ ಜೀವನವನ್ನು ಕಣ್ಣಿಟ್ಟು ನೋಡುವವರಿಗೆ, ನಮ್ಮ ಪ್ರಾಚೀನಸಾಹಿತ್ಯವರ್ಣಿತ ಕನ್ಯೆಯರ ಜೀವನವು ಕಟ್ಟುಕತೆಯಂತೆ ಎನಿಸುವುದು ಸಹಜವಾಗಿದೆ. ಆದರೂ ನಮ್ಮ ಕನ್ನಡ ಹಾಡುಹಬ್ಬಗಳಲ್ಲಿ ಬರುವ ಕನ್ಯೆಯರ ಕೆಲವು ವರ್ಣನೆಗಳಿಂದ ಅದರ ಜೀವನದ ಬಗೆಗೆ ಅಲ್ಪಸ್ವಲ್ಪ ವಾಸ್ತವಾಂಶಗಳನ್ನು ತಿಳಿದುಕೊಳ್ಳಬಹುದಾಗಿದೆ.

ಕನಕದಾಸರು 'ಮೋಹನತರಂಗಿಣಿ' ಎಂಬ ಹೆಸರಿನ—ಪೌರಾಣಿಕ—ಹಾಡುಗಬ್ಬವೊಂದನ್ನು ಬರೆದಿದ್ದಾರೆ. ಅದರಲ್ಲಿ ಶೋಣಿತಪುರದ ರಾಕ್ಷಸರಾಜ ಬಾಣಾಸುರನವ ಮಗಳು ಉಷೆ, ಶ್ರೀಕೃಷ್ಣನ ಮೊಮ್ಮಗ ಅನಿರುದ್ಧನೊಂದಿಗೆ ಮದುವೆ ಮಾಡಿಕೊಂಡ ಕಥೆಯು ಬರುವುದು. ಉಷೆಯ ಗೆಳತಿ ಚಿತ್ರಲೇಖೆ, ಆ ರಾಜಕುಮಾರಿಯನ್ನು ಹೇಗೆ ಹೇಗೆ ಶೃಂಗರಿಸಿದಳೆಂಬುದು ಅದರಲ್ಲಿ ವಿಶದವಾಗಿ ವರ್ಣಿತವಾಗಿದೆ. ಈ ವರ್ಣನೆಯಿಂದ, ನಮ್ಮ ಪ್ರಾಚೀನ ಕಾಲದ ಕನ್ಯೆಯರ ಪ್ರಸಾಧನ ಪದ್ಧತಿಯು ಹೇಗಿದ್ದಿತೆಂಬುದು ಚೆನ್ನಾಗಿ ತಿಳಿಯುವುದು.

ಒಂದು ದಿನ ಉಷಾಕುಮಾರಿ ದೇವದರ್ಶನಕ್ಕೆ ಹೊರಡುವವಳಿದ್ದಳು. ಆಗ ಅವಳು 'ಮೈಟುಜವ್ವನೆ'ಯರಾದ ತನ್ನ ಸಖಿಯರಿಗೆ ತನ್ನನ್ನು ಶೃಂಗರಿಸುವಂತೆ ಸೂಚಿಸಿದಳು. ಕೂಡಲೆ ಅವರು ಮನಗೊಂಬ ವಸ್ತ್ರ, ಭೂಷಣ, ಮಾಲ್ಯ, ಅನುಲೇಪನಗಳನ್ನು ತಂದರು.

"ಅಗರು ಚಂದನ ಪಚ್ಚೆಗಪ್ಪುರ ಪನ್ನೀರು
ಮೃಗನಾಭಿ ಮುಖ್ಯ ಲೇಪನದಿ |
ತಿಗುರನಿಕ್ಕಿದರಾಳಿಯರು ಸತ್ಕುಮರಿಯ
ಮೂಗರೇಖೆ ಹೊಂಬಣ್ಣಮೆಯ್ಗೆ ||

ಬಳಿಕ ಬೆಳುದಿಂಗಳಿಂದಲೇ ರಚಿತವಾದುದೇನೋ ಎಂಬಂತಿರುವ ಪೊಂಬರೆಹದ ಎಂದರೆ ಚಿನ್ನದ ಜರಿಯ ಬಳ್ಳಿ-ಹೂಗಳಿಂದ ಕೂಡಿದ ಶುಭ್ರದೂಟವನ್ನು ನಿರಿವಿಡಿದು ಉಡಿಸಿದರು. ಕಿರುವೆರಲ ಉಗುರಿಂದೆ ಬೈತಲೆ ತೆಗೆದು, ಆ ಮರಿದುಂಬಿಗುರುಳ ಮಾನಿನಿಗೆ ತುರುಬನಿಕ್ಕಿದರು. ಜಾತಿಮುತ್ತುಗಳ ಕೇವಣಿಸಿರ್ದ ಎಂದರೆ ಕೂಡಿಸಿ ಹೆಣೆದಿದ್ದ ನವರತ್ನಕೇತಕಿಯ ಎಸಳನ್ನು ಕಟ್ಟಿದರು. ತರುವಾಯ ಅವಳ ಪೆರ್ದುರುಬಿನ ಮೇಲೆ ತಣ್ಜಾತಿಮಾಣಿಕವನ್ನು ಕಟ್ಟಿದರು. ಅರ್ಧಚಂದ್ರನಂತಿರುವ ಹಣೆಯನ್ನು ಬಳಸಿದ ತಾರಕಾಜಾಲವೆಂಬಂತೆ ಬೈತಲೆಯ ಮುತ್ತಿನ ಮಾಲಿಕೆಯನ್ನು ಕಟ್ಟಿದರು. ಹಣೆಗೆ ಕೇಸರಿಯ ಮಂಗಲತಿಲಕವನ್ನು ಇಕ್ಕಿದರು. ಕಣ್ಣುಗಳಿಗೆ ಕಾಡಿಗೆ ಹಚ್ಚಿದರು. ನಾಸಾಪುಟದ ಕೆಲದಲ್ಲಿ ರೋಹಿಣೀ ನಕ್ಷತ್ರದಂತೆ ಮಿನುಗುವ ಮೂಕುತಿಯನ್ನು ಒಂದಿಸಿದರು. ಮನ್ಮಥನ ರಥಚಕ್ರಯುಗದಂತೆ ಇರುವ ನೀಲಮಾಣಿಕ್ಯದೋಲೆಯನು ಆ ಬಾಣಸುತೆಯ ಕರ್ಣದೊಳು ಸಾರ್ಚಿದರು. ಅವಳ ಕೆನ್ನೆಗಳ ಮೇಲೆ ನಾನಾ ಬಣ್ಣಗಳಿಂದ ಚಿತ್ರಿಸಿದಂತಿರುವ ಕರ್ಣಪತ್ರಿಕೆಗಳು ಪ್ರತಿಬಿಂಬಿಸಿದುವು. ಕಿವಿಗಳಿಗೆ ಕೊಪ್ಪುಗಳನ್ನು ತೊಡಿಸಿದರು. ಬಣ್ಣಗಲ್ಲುಗಳನ್ನು ಕೇವಣಿಸಿದ ಚಿಂತಾಕನ್ನು ಕೊರಳಿಗೆ ಇಡಿಸಿದರು. ಕಂಠಮಾಲೆಯ ಮಧ್ಯೆ ಜೋಲಾಡುವ ನಾಯಕರತ್ನವು ಮಿರಮಿರನೇ ಮಿರುಗಿ ರಂಜಿಸಿತು.

ತರುವಾಯ ಸಖಿಯರು ಆ ರಾಜಪುತ್ರಿಯ ತೋಳುಗಳಿಗೆ ಭುಜಪತ್ರಿಕೆಯನ್ನು ತೊಡಿಸಿದರು. ತೋಳಬಾಪುರಿ, ಕಡಗ-ಕಂಕಣಗಳನ್ನು ಇರಿಸಿದರು. ಸೆಳ್ಳುಗುರ ಬೆರಳಿಂಗೆ ಮಾಣಿಕದ ಉಂಗುರಗಳನ್ನು ಹಾಕಿದರು. ಸುಂದರವಾದ ರವಕೆಯನ್ನು ತೊಡಿಸಿದರು. ಸಣ್ಣಗಿರುವ ಸೊಂಟಕ್ಕೆ ಬಲವನ್ನು ಹೆಚ್ಚಿಸಲೆಂದು 'ರತ್ನಕೀಲಿತಸುವರ್ಣದ ಒಡ್ಯಾಣವ' ತಂದು ಇಕ್ಕಿದರು. ಸುಕುಮಾರತೆಯ ಬಿರುದು ಎಂಬಂತೆ ಕಟಿಸೂತ್ರ, ಕಾಂಚೀದಾಮಗಳನ್ನು ಕಟ್ಟಿದರು. ಕಾಲಲ್ಲಿ ಕಾಲಂದುಗೆ ಪಾಯವಟ್ಟಗಳನ್ನು ತೊಡಿಸಿದರು. ಕಾಲಬೆರಳುಗಳಿಗೆ ರತ್ನಖಚಿತವಾದ ಮುದ್ರಿಕೆ-ಮಂಟಿಕೆಗಳನ್ನು ಇರಿಸಿದರು. ಪಾದಗಳಿಗೆ 'ಕಾಲ್ನಿಗಳ' ಎಂದರೆ ಸರಪಳಿಗಳನ್ನು ತೊಡಿಸಿದರು. ಶೃಂಗರಿಸುವುದೆಲ್ಲ ಮುಗಿದ ಮೇಲೆ ಸಖಿಯರು ಉಷೆಗೆ ರತ್ನಮಯವಾದ ಹೊನ್ನಿನ ನಿಲವುಗನ್ನಡಿಯನ್ನು ತೋರಿಸಿದರು. ಆಮೇಲೆ ಅವಳಿಗೆ ಕೆಟ್ಟದಿಟ್ಟಿ ತಗಲದಂತೆ ರಕ್ಷೆಯ ಬೊಟ್ಟನ್ನು ಇಟ್ಟು, ಎಲ್ಲರೂ ಕೂಡಿ ಉಪ್ಪರಿಗೆಯಿಂದ ಕೆಳಗಿಳಿದರು.

ಹೀಗೆಯೆ ಕನ್ಯೆಯರ ಪ್ರಸಾಧನವರ್ಣನೆಗಳು ಕನ್ನಡ ಕಾವ್ಯಗಳಲ್ಲಿ ಅನೇಕ ಕಡೆಗೆ ಬರುತ್ತವೆ. ಆದರೆ ಅವೆಲ್ಲ ಸಿರಿವಂತ ರಾಜಪುತ್ರಿಯರ ವರ್ಣನೆಗಳು. ಅವರು ಉಪವನಗಳಲ್ಲಿ ಬೆಳುದಿಂಗಳಲ್ಲಿ ನವಿಲುಯ್ಯಾಲೆಯಲ್ಲಿ ಕುಳಿತು ತೂಗಿಕೊಳ್ಳುವರು. ಆಗ ಉಯ್ಯಾಲೆಯ ಹಾಡುಗಳನ್ನು ಹಾಡುವರು. ಸಖಿಯರೊಡನೆ ವನದಲ್ಲಿ ವಿಹರಿಸುವರು. ಹೂವುಗಳನ್ನು ತೆಗೆದುಕೊಂಡು ಅಂದಚೆಂದದ ಮಾಲೆಗಳನ್ನು ಮಾಡಿ ಮುಡಿಯುವರು. ಅಪೇಕ್ಷೆಯಾದಾಗ ಕೊಳಗಳಲ್ಲಿ ಈಜಿ ನೀರಾಟವಾಡಿದರು. ಈ ರಾಜಕನ್ಯೆಯರು ತಮ್ಮ ವಿನೋದದಾಟಕ್ಕಾಗಿ ಶುಕ, ಸಾರಿಕೆ, ಮಯೂರ, ಕೋಕಿಲೆ ಮೊದಲಾದ

ಪಕ್ಷಿಗಳನ್ನು ಸಾಕಿರುವರು. ಗಿಳಿ–ಗೊರವಂಕಗಳಿಗೆ ಮಾತುಗಳನ್ನು ಕಲಿಸುವರು.

ಈ ಬಗೆಯ ಕನ್ಯೆಯರ ಜೀವನವು ನಮ್ಮ ಇಂದಿನ ವಾಸ್ತವ ಜೀವನಕ್ಕೆ ತೀರ ದೂರದ್ದೆನಿಸುವುದು. ಏಕೆಂದರೆ ನಮಗೆಲ್ಲರಿಗೂ ಅನರಂತಹ ರಾಜೈಶ್ವರ್ಯವು ಎಲ್ಲಿಂದ ಬರಬೇಕು? ನಮ್ಮ ಸಾಮಾನ್ಯ ಕನ್ಯಾಜೀವನವು ನಮ್ಮ ಜಾನಪದಸಾಹಿತ್ಯದಲ್ಲಿ ತುಂಬ ಸ್ವಾಭಾವಿಕವಾಗಿ ಚಿತ್ರಿತವಾಗಿರುವುದು. ಇದು ಯಾವ ಕಾಲದಲ್ಲಿ ರಚಿತವಾದುದೋ ಏನೊ; ಆದರೂ ಇಂದಿನ ಕಾಲದ ನಮ್ಮ ವಾಸ್ತವ ಜೀವನವೇ ಅದರಲ್ಲಿ ಪ್ರತಿಬಿಂಬಿತವಾಗಿರುವುದು. ತಾಯಂದಿರು ಕನ್ಯೆಯರನ್ನು ಬಯಸುವುದೇಕೆ?

‘ ಹೆಣ್ಣುಮಕ್ಕಳು ನಮಗ ಪುಣ್ಯದಾ ಫಲಗಳು
ಅನ್ನಿಗರ ಮಗನ ನಸ ಮನೆಗೆ |
ಅನ್ನಿಗರ ಮಗನ ನಸ ಮನೆಗೆ ತರುವಂಥ
ಹೆಣ್ಣುಮಕ್ಕಳನು ಕೊಡು ಶಿವನೆ |

ಇದೇ ಬಗೆಯ ಮಾತೃಭಾವವೇ ನಮ್ಮ ಕವಯಿತ್ರಿ ಹೊನ್ನಮ್ಮನ ಬಾಯಿಂದ “ ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು, ಕಣ್ಣುಕಾಣದ ಗಾವಿಲರು ? ” ಎಂಬ ರೋಷನುಡಿಗಳನ್ನು ಆಡಿಸಿದೆ. ಹಳ್ಳಿಯ ಗರತಿ ತನ್ನ ಕನ್ಯೆಯ ಗೊಂಬೆಯಾಟವನ್ನು ಕುರಿತು ಇನ್ನೊಂದು ಹಾಡನ್ನು ಹೇಳುವಳು:

“ ಆಡುತಾಡುತ ಹೋಗಿ ಜೋಡೆರಡು ಮನೆಕಟ್ಟಿ,
ಮಾಡ್ಯಾಳ ಗೊಂಬಿ ಮದಿವೀಯ ||
ಮಾಡ್ಯಾಳ ಗೊಂಬಿ ಮದಿವೀಯ ನನ ಬಾಲಿ
ಬೇಡ್ಯಾಳ ಬೆಲ್ಲ ಅವಲಕ್ಕಿ !

ಈ ಬಗೆಯಾಗಿ ಆಟ ಹಚ್ಚಿ ಆಡಿ, ಗೊಂಬೆಯ ಮದುವೆ ಮಾಡುವ ಕನ್ಯೆಯರನ್ನು ಈಗಲೂ ನಾವು ನಮ್ಮ ಸಮಾಜದಲ್ಲಿ ನೋಡುವೆವಲ್ಲವೆ ? ತನ್ನ ಮಗಳ ಬಡತನದ ಉಡಿಗೆ-ತೊಡಿಗೆಗಳನ್ನೇ ಬಣ್ಣಿಸಿ ಹೊಗಳುವ ತಾಯ ಮಾತನ್ನು ಕೇಳಿರಿ!

“ ಕಟ್ಟಾಣಿ ಕಟ್ಯ್ಯಾಳ ಕಟ್ಟೀ ಮ್ಯಾಲೆ ನಿಂತಾಳ
ಬಟ್ಟಲಗಣ್ಣು ತಿರಿವ್ಯಾಳ |
ಬಟ್ಟಲಗಣ್ಣು ತಿರಿವ್ಯಾಳ–ನನ ಮಗಳ
ದಿಟ್ಟಿಸೋಕ್ಯಾವು ಒಳಗ್ಹೋಗೇ ||
ಕೂಡಿದಾ ಕುಡಿಹುಬ್ಬು ತೀಡಿದಾ ಬೈತಾಲಿ
ಕಾಡಿಗೀಗಣ್ಣು ಪಡುಪಣ್ಣು ನನ ಮಗಳ
ನಾಡೀನ ದೊರೆಯು ಬಯಸ್ಯಾನ ||

ಕಳೆದ ಶತಮಾನದ ಕೊನೆಯ ವರೆಗೂ ಸಾಮಾನ್ಯವಾಗಿ ನಮ್ಮ ಕನ್ಯೆಯರ ಬಾಳು ಕ್ರೀಡಾಮಯವಾಗಿಯೇ ಇರುತ್ತಿದ್ದಿತು. ಅವರು ತಮ್ಮ ಮನೆಯ ಕೂಸುಗಳನ್ನು ಎತ್ತಿಕೊಂಡು, ಊರ ಗುಡಿಯ ಪವಳಿಯಲ್ಲಿ ಒಟ್ಟುಗೂಡುತ್ತಿದ್ದರು. ಅಲ್ಲಿ ಅವರು ಆಡುವ ಆಟಗಳೆಷ್ಟು, ಹಾಡುವ ಗೀತಗಳೆಷ್ಟು ? ಆಣೆಕಲ್ಲಾಟ, ಗೊಟ್ಟಿಗುಣಿ, ಕಣ್ಣುಮುಚ್ಚಾಲೆ, ಜುತ್ತುಂಬಳ್ಳ, ಬಾಳೆಗಿಡದಾಟ, ಕುಂಬಳಬಳ್ಳಿಯಾಟ, ಗುಳುಗುಳು ಗುಪ್ಪಂಡಿ, ಭಗಾಟಬಗರಿ, ಆಸಿಬೀಸಿ ನೆಲ್ಲಕ್ಕಿ.... ಒಂದೇ ಎರಡೇ; ನೂರಾರು ಬಗೆಯ ಆಟಗಳನ್ನಾಡುವರು. ಆಟ ಬೇಸರ ಬಂದರೆ ಎಲ್ಲರೂ ಒಂದೆಡೆ ಸೇರಿ ಹಾಡುಹೇಳುವರು; ಒಗಟದ ಪಂಥಗಳನ್ನು ಹೂಡುವರು. ಆಷಾಢಮಾಸದಲ್ಲಿಯ ಗುಳ್ಳವ್ವ, ಶ್ರಾವಣಮಾಸದಲ್ಲಿಯ ನಾಗಪಂಚಮಿಯ ಜೋಕಾಲಿ-ಜೀಕಗಳು, ಸೀಗೆಹುಣ್ಣಿವೆಯ ಗೌರಿಯ ಹಬ್ಬ, ದೀವಳಿಗೆಯ ಅಲ್ಲೀಕೇರಿ ಬಸವನಾಟ ಇವೆಲ್ಲ ನಮ್ಮ ನಾಡಿನ ಕನ್ಯೆಯರ ವಿನೋದ ಸಂದರ್ಭಗಳಾಗಿದ್ದುವು. ನಮ್ಮ ನಾಡಿಗರ ಸಮೃದ್ಧ ಜೀವನದಲ್ಲಿ, ನಮ್ಮ ಕನ್ಯೆಯರ ಜೀವನವು ಒಂದು ಲೀಲೆಯಾಗಿಯೇ ಸಾಗುತ್ತಿದ್ದಿತು.

ಇಂದಿನ ಕನ್ಯೆಯರ ಜೀವನವು ಒಂದು ಬೇರೆ ಬಗೆಯದೇ ಆಗಿದೆ. ನಾಗರಿಕ ಸಮಾಜದ ಕನ್ಯೆಯರು ಶಾಲೆ-ಕಾಲೇಜುಗಳ ವಿದ್ಯಾರ್ಥಿನಿಯರಾಗಿ ತಮ್ಮ ಲೀಲಾಮಯ ಜೀವನವನ್ನೇ ಮರೆತುಬಿಟ್ಟಿರುವರು. ಶ್ರಮಜೀವಿಗಳಾದ ಗ್ರಾಮೀಣ ಸಮಾಜದ ಕನ್ಯೆಯರು, ಹಿರಿಯರಂತೆ ಕಿರಿಯತನದಲ್ಲಿಯೆ ಶ್ರಮಜೀವಿಗಳಾಗುವರು. ಆದುದರಿಂದ, ಇಂದಿನ ಕನ್ಯೆಯರ ಬಾಳಿನಲ್ಲಿ ಬೆರಳುಮಾಡಿ ತೋರಿಸುವಂತಹ ವಿಶೇಷ ಸೌಂದರ್ಯಗಳಾವುವೂ ತೋರುತ್ತಿಲ್ಲ. ಲೀಲೆ–ಕ್ರೀಡೆಗಳೇ ಕನ್ಯಾಜೀವನದ ಮುಖ್ಯ ಲಕ್ಷಣವಾಗಿತ್ತು ಹಿಂದಿನ ಕಾಲದಲ್ಲಿ. ಇಂದು ಅವುಗಳ ಮುಖವೇ ಕಾಣದಂತಾಗಿದೆ. ಇಂದಿನ ವೈಜ್ಞಾನಿಕಯುಗವು, ನಮ್ಮ ಕನ್ಯೆಯರ ಜೀವಿತವನ್ನು ಭವಿಷ್ಯಕಾಲದಲ್ಲಿ ಹೇಗೆ ಹೇಗೆ ರೂಪಿಸಲಿದೆಯೋ ನೋಡಬೇಕಾಗಿದೆ.

---

# ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಕಾಮದಹನ' ಸಣ್ಣಕಥೆಯನ್ನು ಕುರಿತು ಮೂವರಿಂದಲೂ 'ರಾಜವಂಚಕ' ರೂಪಕವನ್ನು ಕುರಿತು ಮೂವರಿಂದಲೂ ವಿಮರ್ಶೆಗಳು ಬಂದಿವೆ. ಈ ಸಲ ವಿಮರ್ಶಕರ ಸಂಖ್ಯೆ ತೀರ ಕಡಮೆ. ಹೈಸ್ಕೂಲು-ಕಾಲೇಜುಗಳ ವಾರ್ಷಿಕ ಪರೀಕ್ಷೆಗಳ ಗಲಾಟೆಯ ಮೂಲಕ ಹೀಗೆ ಆಗಿರಬಹುದು.

ಇನ್ನೂ ಒಂದು ನಮ್ಮ ಅನುಭವದ ವಿಷಯವೆಂದರೆ: ವಿಮರ್ಶೆಯಂತಹ ಗಂಭೀರವಿಷಯವನ್ನು ಬರೆಹದಲ್ಲಿ ಇಳಿಸಬೇಕಾದರೆ, ಅದರ ಬಗೆಗೆ ಬುದ್ಧಿಯನ್ನು ಹದನುಗೊಳಿಸಿಕೊಳ್ಳಬೇಕಾಗುವುದು; ಮೆದುಳನ್ನು ಕಾಯಿಸಿಕೊಳ್ಳಬೇಕಾಗುವುದು. ಈ ತಪಸ್ಸಿಗೆ ಸಿದ್ಧರಾಗುವುದಕ್ಕೆ ಹಿಂಜರಿಯುವವರ ಸಂಖ್ಯೆಯೆ ನಮ್ಮ ತರುಣಲೇಖಕರಲ್ಲಿ ಹೆಚ್ಚಾಗಿರುವುದು. ಮೆದುಳನ್ನು ತಣ್ಣಗಿರಿಸಿಕೊಂಡೇ ನಾಲ್ಕೆಂಟು ಸಾಲು 'ನವ್ಯಕವಿತೆ' (?) ಯನ್ನೋ, ಕಲೆಯ ಗುರುತೇ ಇಲ್ಲದ ಸಣ್ಣಕತೆಗಳನ್ನೋ ಬರೆದು, ಲೇಖಕರೆಂದು ಹೆಸರುಪಡೆಯಲು ಹವಣಿಸುವವರ ಸಂಖ್ಯೆಯೇ ಹೆಚ್ಚಾಗಿ ಕಾಣುತ್ತಲಿದೆ. ಕನ್ನಡ ಸಾಹಿತ್ಯದ ಅಭ್ಯುದಯ-ಅಭಿವೃದ್ಧಿಗಳ ದೃಷ್ಟಿಯಿಂದ ಇದು ಆಶಾದಾಯಕವೆನಿಸುವಂತಹ ಸಂಗತಿಯೇನೂ ಅಲ್ಲ. ಬರೆಹಗಾರರಾಗಬೇಕೆಂದು ಬಯಸುವವರು, ಜೀವನವನ್ನು ಕೂಲಂಕಷವಾಗಿ ನೋಡಿ, ಅದರಲ್ಲಿಯ ಯುಕ್ತಾಯುಕ್ತತೆಯನ್ನು ವಿವೇಚಿಸುವಂತಹ ಗಂಭೀರ ಬುದ್ಧಿಶಕ್ತಿಯನ್ನು ಪಡೆಯಬೇಕು. ಜಯಂತಿಯ ಈ ವಿಭಾಗವು ಅದರ ಸಾಧನೆಗಾಗಿಯೆ ಇದೆಯೆಂಬುದನ್ನು ನಮ್ಮ ತರುಣ ಲೇಖಕರು ಮರೆಯಲಾಗದು.

## 'ಕಾಮದಹನ' ಕಥೆಯ ವಿಮರ್ಶಕರು :

೧. ಶ್ರೀ. 'ಎಮ್ಮೆಸ್ಕೆ' ಹುಬ್ಬಳ್ಳಿ. ೨. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೩. ಶ್ರೀ. ಪಿ. ಸುಬ್ಬರಾಯಭಟ್ಟ ಕಾಸರಗೋಡು.

## 'ರಾಜವಂಚಕ' ರೂಪಕದ ವಿಮರ್ಶಕರು :

೧. ಶ್ರೀ. ಎಲ್. ಡಿ. ಸಭಾಹಿತ, ಮುಂಬಯಿ. ೨. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೩. ಶ್ರೀ. ಕೆ. ತ್ರ್ಯಂಬಕರಾವ್, ಸಂಪಿಗೆ ( ಮೂಡುಬಿದ್ರೆ )

ಎಲ್ಲ ವಿಮರ್ಶೆಗಳನ್ನೂ ಸಂಪಾದಕಮಂಡಲದವರೇ ನೋಡಿ ನಿರ್ಣಯವನ್ನು ಕೊಟ್ಟಿದ್ದಾರೆ. ಶ್ರೀ. 'ಎಮ್ಮೆಸ್ಕೆ ಮತ್ತು ಶ್ರೀ. ಕೆ. ಎಸ್. ಶರ್ಮರ ಸಣ್ಣಕಥೆಯ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಕೆ. ಎಸ್. ಶರ್ಮಾ ಅವರ 'ರಾಜವಂಚಕ'ದ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಎಲ್. ಡಿ. ಸಭಾಹಿತ ಅವರ ರೂಪಕದ ವಿಮರ್ಶೆಯೂ ಚೆನ್ನಾಗಿದೆ' ಮಿಕ್ಕುವು ಸಾಮಾನ್ಯ.

ಮುಂದಿನ ಸಂಚಿಕೆಗಾಗಿ 'ರೋಮಾ' ಎಂಬ ಅನುವಾದಿತ ಕಥೆಯನ್ನಾಗಲಿ, 'ಮುತ್ತಿನ ಸರ' ಎಂಬ ಯುದ್ಧಕಾಲೀನ ಕಥೆಯನ್ನಾಗಲಿ, ವಿಮರ್ಶಿಸಿ ಲೇಖನಗಳನ್ನು ಕಳುಹಬೇಕು.

—ಸಂಪಾದಕರು

# ಕಾಮದಹನ

## ( ಕಥಾವಿಮರ್ಶೆ )

### " ಎನ್ಮೆಸ್ಕೆ " ಹುಬ್ಬಳ್ಳಿ

"ಕಾಮದಹನ"ವೆಂಬ ಈ ಕಥೆಯ ತಲೆಬರಹವೇ ತುಂಬ ಕುತೂಹಲಕಾರಿಯಾಗಿದೆ. ಅದನ್ನು ಓದಿದ ತತ್‍ಕ್ಷಣ, ಶಿವನು ಮಾಡಿದ 'ಕಾಮದಹನ'ದ ಪ್ರಸಂಗ ನೆನಪಿಗೆ ಬಾರದೆ ಇರದು. ದೇವ-ದೇವತೆಗಳ ಇಚ್ಛೆಯಂತೆ, ಸಕಲಸನ್ನಾಹಪೂರ್ವಕವಾಗಿ ಹೇಮಕೂಟಾಚಲಕ್ಕೆ ನಡೆತಂದು, ಕಣ್ದೆರೆದ ವಿರೂಪಾಕ್ಷ ಕೋಪಾವಿಷ್ಟನಾಗಿ ಹಣೆಗಣ್ಣಿನಿಂದ 'ಕಾಮ'ನನ್ನು 'ದಹನ' ಮಾಡಿದ. ಆ 'ಕಾಮದಹನ' ನಡೆದದ್ದು ಶಿವನ "ಕುಮಾರಸಂಭವ"ಕ್ಕಾಗಿ, ಕುಮಾರನಿಂದ ತಾರಕಾಸುರನ ಸಂಹಾರಕ್ಕಾಗಿ ಎಂದರೆ ಲೋಕಕಲ್ಯಾಣಕ್ಕಾಗಿ.

ಆದರೆ ಇಲ್ಲಿಯ 'ಕಾಮದಹನ' ಕಾಮನ ದಹನವಲ್ಲ, ಆದರೆ ಕಾಮಲಾಲಸೆಯ ದಹನ. ಆ ಕಾಮದಹನ ನಡೆದದ್ದು ತ್ರಿಲೋಕ ರಕ್ಷಣೆಗಾಗಿ ಅರ್ಥಾತ್ ತ್ರಿಲೋಕ ಕಲ್ಯಾಣಕ್ಕಾಗಿ. ಇಲ್ಲಿ ನಡೆದದ್ದು "ಸಮಾಜ ಸುವ್ಯವಸ್ಥೆ"ಗಾಗಿ ಅರ್ಥಾತ್ ಸಮಾಜದ ಕಲ್ಯಾಣಕ್ಕಾಗಿ. ಅಲ್ಲಿ ನಡೆದ ಕಾಮದಹನ ಸಕಲಲೋಕ ಕಾಮದಹನವಾದರೆ, ಇಲ್ಲಿಯದು ವೈಯುಕ್ತಿಕ ಕಾಮದಹನ. ಅಲ್ಲಿ ಶಿವನು ಕಾಮನನ್ನು ದಹಿಸಿದ್ದು ನೇರವಾಗಿ ತ್ರಿಲೋಕರಕ್ಷಣೆಗಾಗಿ; ಆದರೆ ಇಲ್ಲಿರುವ ವೈಯುಕ್ತಿಕ ಕಾಮದಹನವು ಸಹ ಹಂತಹಂತವಾಗಿ ಎಂದರೆ ವೈಯುಕ್ತಿಕದಿಂದ ಸಮಾಜದ, ಸಮಾಜದಿಂದ ಒಂದು ವಿಶಿಷ್ಟ ದೇಶದ ಮತ್ತು ದೇಶದಿಂದ ಒಟ್ಟು ಜಗತ್ತಿನ, ಹೀಗೆ ಸರ್ವಾಂಗೀಣ ಕಾಮದಹನದಿಂದ ಜಗದ್ರಕ್ಷಣೆಯೂ ಇದೆ. ಅಲ್ಲಿ ನೇರವಾಗಿಯಾದರೆ ಇಲ್ಲಿ ಪರ್ಯಾಯವಾಗಿದೆ. 'ಕಾಮದಹನ' ಎಂದರೆ ಹೋಳಿಹಬ್ಬದಲ್ಲಿ ಆಚರಿಸುವ ಒಂದು ವಿಶಿಷ್ಟ ಪದ್ಧತಿಯಲ್ಲ. ಹಬ್ಬದಲ್ಲಿ ಆಚರಿಸುವ ಕಾಮದಹನದಿಂದ ಯಾವ ಉಪಯೋಗವೂ ಇಲ್ಲ, ಪ್ರಗತಿಯೂ ಇಲ್ಲ. ಬದಲಾಗಿ, ಅದರಿಂದ ಕುಳ್ಳು ಕದಿಯುವ ಮೊದಲಾದ ಹಾನಿಗಳೇ ಹೆಚ್ಚು. ಒಟ್ಟಿನಲ್ಲಿ ಅದು ನಿರುಪಯೋಗಿ; ಎಂದರೆ ಇದ್ದದ್ದು ಕೇವಲ ತುಂಟತನಕ್ಕಾಗಿಯೆನ್ನಬಹುದು. ಆದರೆ ಒಬ್ಬ ವ್ಯಕ್ತಿ, ತನ್ನ ವೈಯುಕ್ತಿಕ ಕಾಮಲಾಲಸೆಯನ್ನು ದಹನಮಾಡಿಕೊಂಡರೆ, ಅದರಿಂದ ಅವನ, ಅವನ ಕುಟುಂಬದ ಅಷ್ಟೇ ಏಕೆ ಅದರಿಂದ ಇಡೀ ಸಮಾಜದ ಪ್ರಗತಿಯಾಗುತ್ತದೆ; ಅಭಿವೃದ್ಧಿಯಾಗುತ್ತದೆ. ಅದು ಹೇಗೆ ಎಂಬುದನ್ನೇ ಲೇಖಕರು ತಮ್ಮ ಈ ಕಥೆಯ ಮೂಲಕ ತೋರಿಸಲು ಯತ್ನಿಸಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಯೂ ಸಮಾಜಜೀವಿ ಸಮಾಜ ಬೇರೆ ಅಲ್ಲ, ವ್ಯಕ್ತಿ ಬೇರೆ ಅಲ್ಲ. ವ್ಯಕ್ತಿಗಳ ಗುಂಪೇ ಒಂದು ಸಮಾಜ. ವ್ಯಕ್ತಿ ಅದರ ಸದಸ್ಯ. ಸಮಾಜವನ್ನು ಬಿಟ್ಟು ವ್ಯಕ್ತಿಯಾಗಲಿ, ವ್ಯಕ್ತಿಯನ್ನು ಬಿಟ್ಟು ಸಮಾಜವಾಗಲಿ ಎಂದೂ ಇರಬಾರದು. ಏಕೆಂದರೆ ಸಮಾಜವೆಂಬುದು ವ್ಯಕ್ತಿಗಳ ಒಂದು ಸಂಘವಾದ್ದರಿಂದ, ಮನುಷ್ಯ ಯಾವಾಗಲೂ ಸಂಘಜೀವಿ ಅಥವಾ ಸಮಾಜಜೀವಿ ( Social Animal ). ಅವನು ಹುಟ್ಟಿನಿಂದ ಸಾಯುವವರೆಗೆ ಬಾಳುವುದು ಸಮಾಜದಲ್ಲಿಯೇ. ಆದ್ದರಿಂದ ನಾವು ವ್ಯಕ್ತಿಯನ್ನು 'Inseperable Accidens of Society' ಎಂದು ಕರೆಯಬಹುದು. ಅರ್ಥಾತ್ ಸಮಾಜವೆಂಬುದೊಂದು ಮಹಾಯಂತ್ರವೆಂದು ನಾವು ನಂಬಿದರೆ, ವ್ಯಕ್ತಿ ಅದರ ಕೀಲು ಅಥವಾ ಸ್ಕ್ರೂ. ಸಮಾಜ ಸುವ್ಯವಸ್ಥಿತವಾಗಿ ನಡೆಯುತ್ತಿದ್ದು ಅದರ ಪ್ರಗತಿಯನ್ನಾಗಲಿ, ಅಭಿವೃದ್ಧಿಯನ್ನಾಗಲಿ, ಸಾಧಿಸಬೇಕೆನ್ನುತ್ತಿದ್ದರೆ, ಅದು ಎಲ್ಲಿಯೂ ಸಡಿಲಾಗದೆ. ಅದೇ ಒಂದು ಮೊದಲಿನ ಸುಗಮರೀತಿಯಿಂದ ಸಾಗುತ್ತಿರಬೇಕು. ಇಲ್ಲವೇ ಎಲ್ಲಿಯಾದರೂ, ಒಂದು ಕೀಲಿ ಅಥವಾ ಸ್ಕ್ರೂ ಕಳಚಿ, ಯಂತ್ರ ಸಡಿಲಾಗಿ, ಅದೇ ಮಾರ್ಗದಿಂದ ಚಲಿಸಿದರೆ, ಅದು ಪ್ರಗತಿಯನ್ನು ಸಾಧಿಸುವುದು ಕನಸಿನಗಂಟೆ ಸರಿ! ಆ ಮಹಾನ್ ಯಂತ್ರದ ಸ್ಕ್ರೂ ಆದ ವ್ಯಕ್ತಿಯು ಸಡಿಲಾಗುವುದು ಅಥವಾ ಅಧೋಗತಿಯನ್ನು ಕಾಣುವುದು ಅವನ ವೈಯುಕ್ತಿಕ ಗುಣಗಳಿಂದ. ಅದು ಸಮಾಜದೋಷವಲ್ಲ. ಏಕೆಂದರೆ ಸಮಾಜದಲ್ಲಿ ನಾನಾಜಾತಿಯ ನಾನಾತರದ ವ್ಯಕ್ತಿಗಳಿರುತ್ತಾರೆ. ಕಾರಣ ಅವರ ಅಧೋಗತಿ ಅವರಿಂದಲೇ ಆಗುವುದು ಎಂಬುದರಲ್ಲಿ ಸಂದೇಹವೇ ಇಲ್ಲ. ಅದರಂತೆ ಪ್ರಗತಿಯೂ ಕೂಡ. ವ್ಯಕ್ತಿ ತನ್ನ ವೈಯುಕ್ತಿಕ, ಶೀಲ-ಗುಣ-ನಡತೆಗಳಿಂದಲೇ ತನ್ನ ಅಧೋಗತಿಯನ್ನಾಗಲಿ, ಪ್ರಗತಿಯನ್ನಾಗಲಿ ಕಂಡುಕೊಳ್ಳುವನು. ಪ್ರಗತಿಯ ಪರಿಣಾಮ ಸಮಾಜದ ಮೇಲಾಗಬೇಕಾದರೆ ಕಾಲ ಬಹಳಬೇಕು. ಆದರೆ ಅಧೋಗತಿಯ ಪರಿಣಾಮ ಶೀಘ್ರವಾಗಿ ಆಗುವುದರಲ್ಲಿ ಸಂದೇಹವೇ ಇಲ್ಲ.

ವ್ಯಕ್ತಿಯ ಅಧೋಗತಿಯಂತೆ ಪ್ರಗತಿಯು ಕೂಡ ಅವನದೇ. ಅದ ವೈಯುಕ್ತಿಕ ಗುಣ-ದೋಷಗಳ ಮೂಲಕವೇ ಆಗುವುದೆಂಬುದು ಸ್ವತಸ್ಸಿದ್ಧವಾದ ಮಾತು. ಅದಕ್ಕೆ 'Character is Destiny' ಎಂದು ಹೇಳಬೇಕು. ಉದಾಹರಣೆಗಾಗಿ Thomas Hardy ಯ Mayor of Casterbridge'ನಲ್ಲಿ Henchard ತನ್ನ ಅಧೋಗತಿಯನ್ನು ಕಂಡದ್ದಾಗಲೀ, Farfrace ತನ್ನ ಪ್ರಗತಿಯನ್ನು ದೊರಕಿಸಿದ್ದಾಗಲೀ, ಅವರವರ ಗುಣಗಳಿಂದ ಅಥವಾ ದೋಷಗಳಿಂದಲೇ ಹೊರತು ಅದಕ್ಕೆ Henhard ಅಥವಾ Farfrace ಪರಸ್ಪರ ಕಾರಣರಲ್ಲ. ಅದರಂತೆಯೇ ಈ ಕಥೆಯಲ್ಲಿ ನಾವು ಅನಂತ ತನ್ನ ಅಧೋಗತಿ ಕಂಡದ್ದು ತನ್ನ ದೋಷಯುಕ್ತ ಸ್ವಭಾವದಿಂದಲೇ ಎಂಬುದನ್ನು ನೋಡುತ್ತೇವೆ. ಈ ವಿಷಯದಲ್ಲಿ ಅನಂತ ಮತ್ತು ಶಶಿಕಲೆಯರನ್ನು ಜನ್ನನ 'ಅನಂತನಾಥಪುರಾಣ'ದ ಚಂಡಶಾಸನ ಮತ್ತು ಸುನಂದೆಯರಿಗೆ ಹೋಲಿಸಬಹುದು.

ಅನಂತ ಹೈಸ್ಕೂಲಿನ ಶಿಕ್ಷಕನಾಗಿ ಆ ಊರಿಗೆ ಬಂದಾಗ, ಅವನಿಗೆ ಬಿಡಾರಸಿಕ್ಕಿದ್ದು ವಿಧವೆ ಶಶಿಕಲೆಯ ಮನೆಯಲ್ಲಿ. ಶಶಿಕಲೆಯು ದುರ್ಭಾಗ್ಯದಿಂದಾಗಿ ಅವಳ ಪತಿ ಶ್ರೀಧರ ಅಕಾಲ ಮೃತ್ಯುವಿಗೀಡಾಗಿ, ಅವಳು ತುಂಬುಹರೆಯದಲ್ಲೇ ವಿಧವೆಯಾಗುತ್ತಾಳೆ; ಆದರೆ ಸಹೇಶಿಯಾಗಿ, ತನಗಾಗಿ ಮತ್ತು ಪತಿಗಾಗಿ ಔಟ್ ಹೌಸ್ ಮಾತ್ರ ಸಾಕೆಂದು, ದೊಡ್ಡ ಮನೆಯನ್ನು ಅನಂತನಿಗೆ ಬಾಡಿಗೆಗೆ ಕೊಡುತ್ತಾಳೆ. ಅನಂತ ಬಿಡಾರ ಮಾಡಿದ ಕೆಲವೇ ದಿನಗಳಲ್ಲಿಯೆ ವಿವಾಹವಾಗಿ, ಪತ್ನಿ

ಲಲಿತೆಯನ್ನು ಕರೆತರುತ್ತಾನೆ. ಸಮವಯಸ್ಕರಾದ ಲಲಿತೆ–ಶಶಿಕಲೆಯರಿಗೆ ಸ್ವಾಭಾವಿಕವಾಗಿ ಸ್ನೇಹವುಂಟಾಗುತ್ತದೆ. ತನ್ನ ಉಪ-ಜೀವನದ ಮಾರ್ಗವಾದ ಹಪ್ಪಳ-ಉಪ್ಪಿನಕಾಯಿ ಮಾಡುವುವಾಗ ಸಾಮಾನುಗಳಲ್ಲಿ ರುಚಿಗಾಗಿ ಸ್ವಲ್ಪ ಲಲಿತೆಗೆ ಕೊಡುತ್ತಿದ್ದಳು ಶಶಿಕಲೆ. ಅದರಂತೆಯೇ ತರಕಾರಿಯಲ್ಲಿ ಒಂದು ಭಾಗ ಪಡೆಯುತ್ತಿದ್ದಳು ಮರಳಿ ಲಲಿತೆಯಿಂದ. ಅಂತೂ ಬಂದ ಕೆಲವೇ ದಿನಗಳಲ್ಲಿ ಅನ್ಯೋನ್ಯ ಗೆಳತಿಯರಾಗಿದ್ದರು ಅವರಿಬ್ಬರು. ಬಳಿಕ ಪರಿಚಯ ಹೆಚ್ಚಿದ್ದರಿಂದ, ಶಶಿಕಲೆ ಅನಂತನಿದ್ದಾಗ ಸಹ ಅವರ ಮನೆಗೆ ಬಂದು ಹೋಗುತ್ತಿದ್ದಳು. ಆಗ ಅನಂತ ಅವಳ ಬಗೆಗೆ ಅಷ್ಟೊಂದು ಯೋಚಿಸಿರಲಿಲ್ಲ. ಆದರೆ ಲಲಿತೆ ಬಸುರಿಯಾಗಿ ತವರುಮನೆಗೆ ಹೋದ ನಂತರ. ಅವನಿಗೆ ಅದನ್ನು ಕುರಿತು ಯೋಚಿಸುವ ಪ್ರಸಂಗ ಬಂದೇ ಬಂತು. ಮೊದಲನೆಯದಾಗಿ ಅನಂತ ತರುಣ; ಪತ್ನಿ ಹೊರಟು ಹೋದ ನಂತರ ವಿರಹಿಯಾಗಿ ಉಳಿದವನು. ಅಲ್ಲದೆ ಸದಾ ಮುಂದೆ ಸುಳಿಯುವ ಪತ್ನಿ ಇಲ್ಲದ ಮೇಲೆ, ಸದಾ ಮುಂದೆ ಇರುವ ಶಶಿಕಲೆಯ ಲಾವಣ್ಯ ಅವನ ಕಾಮಲಾಲಸೆಯನ್ನು ಕೆಣಕಿತು. ಅಲ್ಲದೆ ಲಲಿತೆ ಹೋಗುವಾಗ ಶಶಿಕಲೆಯ ಮನೆಯಲ್ಲಿಯೇ ಅವನಿಗೆ ಊಟ ಮಾಡಲು ಹೇಳಿದ್ದರಿಂದ, ಅನಂತನಿಗೆ ಕಾಮದಾಹ ವಿಪರೀತವಾಯಿತು. ರುಚಿ ಕಂಡವನು ಅದನ್ನೇ ಪುನಃ ಬಯಸುವುದು ಸಹಜವಲ್ಲವೇ? ಒಂದು ಬೆಳುದಿಂಗಳು ರಾತ್ರಿ. ಶಶಿಕಲೆ ತಮ್ಮ ಮನೆಯ ಮುಂದೆ ಕುಳಿತುಕೊಂಡು ಮಗಳನ್ನು ಮಲಗಿಸುತ್ತಿರುವಾಗ, ಧ್ವನಿ ಕೇಳಿ ಅನಂತ ಕಿಟಕಿಯಲ್ಲಿ ನೋಡಿದಾಗ, ಅವಳು ತುಂಬುಯೌವ್ವನದ ಪ್ರಾಯ, ಸುಂದರ ಸ್ವರೂಪ, ಅವಳ ಅಗಾಧ ರೂಪ-ಲಾವಣ್ಯ ಅವನನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿದುವು. ತನ್ನ ವಾಂಛಿತ ಪ್ರಾಪ್ತಿಗಾಗಿ ಅನಂತ ವನಿತೆಯ ಸ್ನೇಹ ಸಂಪಾದಿಸಿ ಆದರಿಂದ, ಶಶಿಕಲೆಯನ್ನು ಒಲಿಸಿಕೊಳ್ಳಲು ಯತ್ನಿಸಿದ ಪತ್ನಿವಿರಹಿ, ಅತೃಪ್ತಕಾಮಿ ಅನಂತ ಶಶಿಕಲೆಯ ರೂಪ-ಲಾವಣ್ಯಗಳಿಗೆ ಮನಸೋತು ಅವಳನ್ನು ವಶಪಡಿಸಿಕೊಳ್ಳಲು ಯತ್ನಿಸಿದ. ಆದರೆ ಶಶಿಕಲೆ ನಿಷ್ಕಲ್ಮಷ ಮನಸ್ಸಿನವಳು. ಹೊರಗಿನವರು ಚೇಷ್ಟೆ ಮಾಡಿದರೂ ಅನಂತ ಅಂತಹ ಸ್ವಭಾವದವನಲ್ಲ ಎಂದು ಸಮಾಧಾನಮಾಡಿಕೊಂಡು ಯಥಾಪ್ರಕಾರ ಇದ್ದಾಗ ಆ ಅವಳ ಮನೋದಾರ್ಢ್ಯ ಗಾಳಿಪಾಲಾಗಿ ಹೋಗುವ ಸಂದರ್ಭ ಒದಗಿ ಬಂತು. ಅವಳ ಸೌಂದರ್ಯಪಾನವನ್ನು ದೂರದಿಂದಲೇ ಮಾಡುತ್ತಿದ್ದ ಅನಂತ, ಲಲಿತೆ ಹೆತ್ತ ಸುದ್ದಿ ಕೇಳಿ, ಶಶಿಕಲೆಗೆ ಹೇಳಿ ಊರಿಗೆ ಹೋಗುವಾ—ಎಂದುಕೊಂಡು ಬಂದ. ಆಗ ಶಶಿಕಲೆ ಹಿಡಿತಕ್ಕೆ ಸಿಕ್ಕದ ಕರಿದಾದ ನಿಡುಗೂದಲುಗಳನ್ನು ಹಿಕ್ಕಿಕೊಳ್ಳುತ್ತಿದ್ದಳು. ವನಿತೆಗೆ ಜ್ವರ ಬಂದುದರಿಂದಾಗಿ ವ್ಯಗ್ರಮನಸ್ಕಳಾಗಿದ್ದುದರಿಂದ, ಸೆರಗು ಜಾರಿತ್ತು. ಯಾರೂ ಇಲ್ಲದ್ದನ್ನು ನೋಡಿ ಕೆರಳಿದ ಕಾಮಿ ಅನಂತ 'ಶಶೀ' ಎಂದು ಅವಳ ಕೈ ಹಿಡಿದು ಚುಂಬಿಸಿದ. ಅಷ್ಟರಲ್ಲಿಯೇ ವನಿತೆ ಎಚ್ಚತ್ತುದರಿಂದ, ಅವನ ಪೂರ್ಣ ಬಯಕೆಗಳು ಪೂರ್ತಿಯಾಗಲಿಲ್ಲ. ಹಾಗೆಯೇ ಊರಿಗೆ ಹೋಗಿ ಎರಡು ದಿನಗಳಲ್ಲೇ ತಿರುಗಿದ. ನಡೆದ ಪ್ರಸಂಗ ಅವನ ಚಿತ್ರಭಿತ್ತಿಯಿಂದ ಅಳಿಸಿರಲಿಲ್ಲ. ಅವಳು ತನ್ನ ವಶವಾಗದೇ ಇರಲಿಕ್ಕಿಲ್ಲವೆಂದು ದೃಢವಾಗಿ ನಂಬಿದ್ದ. 'ಬರಲಿ ಎಂದು ಕಾದು ಕುಳಿತು, ಅಲ್ಲಿಯೇ ಖುರ್ಚಿಯ ಮೇಲೆಯೇ ನಿದ್ದೆ ಮಾಡಿ, ತಂಗಾಳಿಯಿಂದ ಎಚ್ಚತ್ತಾಗ, ನಿಶ್ಚಲಮನಸ್ಕನಾಗಿ ಶಶಿ-ಕಲೆಯ ಮನೆಯತ್ತ ತೆರಳಿ ಬಾಗಿಲು ಬಡಿದು 'ಶಶೀ' ಎಂದ. ಎರಡು ಮೂರುಸಲ ಒದರಿದ ನಂತರ ಬಾಗಿಲು ತೆರೆದು ಒಳಗೆ ಹೋದ ಮುದಿ ಹೆಂಗಸನ್ನು ಕಂಡು 'ಶಶಿಕಲೆಯ ಮನೆಯಲ್ಲಿ ಬಂದ ಈ ಮುದಿ ಹೆಂಗಸ್ಯಾವಳಪ್ಪಾ!' ಎಂದುಕೊಂಡು ಒಳಗೆ ನಡೆದ. ವನಿತೆಯ ಬಳಿ ಇದ್ದ ದೀಪವನ್ನು ದೊಡ್ಡದು ಮಾಡಿದ ತತ್‌ಕ್ಷಣ ಮುದಿ ಹೆಂಗಸೇ ಶಶಿಕಲೆಯೆಂದು ಅವಳ ಮುಖಲಕ್ಷಣ ಸಾರಿತು. ಒಂದು ನಿಮಿಷವೂ ನಿಲ್ಲದೇ ಹೊರಬಿದ್ದು ಬಂದ ಅನಂತ, ಪೆಚ್ಚುಮುಖಮಾಡಿಕೊಂಡು.

" ಇದಿಷ್ಟೇ ಕಥಾವಸ್ತುವನ್ನಿಟ್ಟುಕೊಂಡು ಲೇಖಕರು ಅತ್ಯುತ್ತಮವಾದ ಕಥೆಯೊಂದನ್ನು ರಚಿಸಿದ್ದಾರೆ.

ಕಥೆ ಆರಂಭವಾಗುವುದು, ಬಸ್ಸಿನಲ್ಲಿ ಕುಳಿತ ಅನಂತನ ಮನಸ್ಸಿ-ನಲ್ಲಿ ಊರಿಗೆ ಹೋಗುವಾಗ ನಡೆದ ಘಟನೆಯ ನೆನಪಿನ ಪುನರಾವೃತ್ತಿ ನಡೆದಾಗ. ಹಿಂದೆ ಲಲಿತೆಯನ್ನು ನೋಡಲು ಹೋಗುವಾಗ ಇದ್ದ ಅವನ ಮನಃಸ್ಥಿತಿಗೂ, ಈಗ ಸದ್ಯದ ಅವನ ಗೊಂದಲಮಯ ಮನಃ-ಸ್ಥಿತಿಗೂ ಇದ್ದ ಹೋಲಿಕೆ ತುಂಬ ಚೆನ್ನಾಗಿದೆ. ಆಗ ಲಲಿತೆಯನ್ನು ನೋಡಲು ಹೋಗುವ ಹುಮ್ಮಸ್ಸಿದ್ದರೆ, ಈಗ ಶಶಿಕಲೆಯನ್ನು ಕೂಡುವ ಬಯಕೆಯಿತ್ತು. 'ಮೋಟಾರು ಏಕೆ ಬೇಗ ಹೋಗುವುದಿಲ್ಲ?' ಎಂದು ಅನಂತ ಹತಹಪಡುತ್ತಿದ್ದ. ಅನಂತನ ಮನಃಸ್ಥಿತಿ ತುಂಬ ಸ್ಪಷ್ಟವಾಗಿ ಒಡಮೂಡಿದೆ. "ಪ್ರಿಯಾರಾಧಕನ ಮಿಲನದ ಆತುರ ಬಡ ಮೋಟಾ-ರಿಗೆಲ್ಲಿಂದ ಬರಬೇಕು?" ಅವನ ಮನಸ್ಥಿತಿ ಹಾಗೆ ಚಿಂತಾಕ್ರಾಂತ-ವಾಗಿರುವಾಗಲೇ ಲೇಖಕರು, ಅವನು ಶಿಕ್ಷಕನಾಗಿ ಆ ಊರಿಗೆ ಬಂದದ್ದು ಬಿಡಾರದೊರಕಿಸಿದ್ದು—ಲಲಿತೆಯನ್ನು ಕರೆತಂದದ್ದು–ಲಲಿತೆ-ಶಶಿಕಲೆಯರ ಗೆಳೆತನ—ಲಲಿತೆ ಹೇಗೆಗೆ ಹೋಗುವಾಗ ಶಶಿಕಲೆಯ ಮನೆ-ಯಲ್ಲಿ ಊಟಮಾಡಲು ಹೇಳಿದ್ದು, ವಿರಹ, ಅನಂತ ಬೆಳುದಿಂಗಳ ದೃಶ್ಯದಲ್ಲಿ ಶಶಿಕಲೆಯನ್ನು ನೋಡಿ ಕಾಮಾರ್ತನಾದದ್ದು, ಅವಳನ್ನು ವನಿತೆಯ ಸ್ನೇಹಮೂಲಕವಾಗಿ ಸೇರಲು ಬಯಸಿದ್ದು, ಲಲಿತೆ ಹೆತ್ತ ಸುದ್ದಿ ಕೇಳಿ ಊರಿಗೆ ಹೋಗುವೆನೆಂದು ಹೇಳಿದ ಅನಂತ, ಕಾಮ-ಲಾಲಸೆಯಿಂದ ಶಶಿಕಲೆಯ ಕೈ ಚುಂಬಿಸಿದ್ದು—ಮೊದಲಾದ ಅನಂತನ ಜೀವನದ ಘಟನೆಗಳನ್ನು ಒಂದೊಂದಾಗಿ, ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಅನಂತ ತನ್ನ ಅಧೋಗತಿಗೆ ತಾನೆ ಹೇಗೆ ಕಾರಣನಾದನೆಂಬುದನ್ನು ಈ ಘಟನೆಗಳ ಮೂಲಕ ಉತ್ತಮವಾಗಿ ತೋರಿಸಲು ಯತ್ನಿಸಿದ್ದಾರೆ. ಅನಂತ ಊರಿಗೆ ಬಂದು ಶಶಿಕಲೆಯ ಮನೆಯನ್ನು ಹೊಕ್ಕಾಗಿನ ದೃಶ್ಯವಂತೂ ತುಂಬ ಸಹಜವಾಗಿ ಕರುಣಾರಸಪೂರ್ಣವಾಗಿ ಚಿತ್ರಿತವಾಗಿದೆ. ತನ್ನಿಂದ ಒಬ್ಬ ವ್ಯಕ್ತಿ ಹಾಳಾಗಬಾರದೆಂದು ಶಶಿಕಲೆ ಮುದಿಯಾಗಿ ಮಾಡಿದ ತ್ಯಾಗವಂತೂ ತುಂಬ ಶ್ಲಾಘನೀಯವೇ ಸರಿ.

ಒಬ್ಬ ವ್ಯಕ್ತಿ ಸುಸಂಸ್ಕೃತ ಅಥವಾ ಅಸಂಸ್ಕೃತ ಎಂದು ನಿರ್ಧರಿಸಲ್ಪಡುವುದು ಅವನ ಗುಣ–ಶೀಲತಳಿಂದ, ಸಮಾಜದ

ಸುವ್ಯವಸ್ಥೆಗಾಗಿ ತನ್ನನ್ನೇ ಬಲಿದಾನ ಮಾಡಿದ ಶಶಿಕಲೆ ಸುಸಂಸ್ಕೃತಳು; ವೈಯಕ್ತಿಕ ಕಾಮಲಾಲಸೆಯು ಬೆನ್ನುಹತ್ತಿ ಸಮಾಜದ ಅವ್ಯವಸ್ಥೆಗೆ ಕಾರಣನಾದ ಅನಂತ ವಿದ್ಯಾವಂತನಾದರೂ, ಅಸಂಸ್ಕೃತನೇ ಸರಿ! ಈ ಕಥೆಯಲ್ಲಿ ಪಾತ್ರಪೋಷಣೆ ತುಂಬಾ ಚೆನ್ನಾಗಿದೆ. ದುರ್ಬಲ ಮನಸ್ಕ, ಚಂಚಲಚಿತ್ತ, ಕಾಮಾರ್ತ, ಅನಂತ ಹೇಗೆ ಅಧೋಗಾಮಿಯೆಂದು ಚಿತ್ರಿತನಾಗಿದ್ದಾನೋ, ಹಾಗೆಯೇ, ನಿಷ್ಕಳಂಕ, ನಿಶ್ಚಲ ಮನಸ್ಕ ಶಶಿಕಲೆ ಊರ್ಧ್ವಗಾಮಿಯೆಂದು ಚಿತ್ರಿತಳಾಗಿದ್ದಾಳೆ. ಅನಂತ ತನ್ನ ಗುಣ-ದೋಷಗಳಿಂದ ಚಂಡಶಾಸನನಂತೆ ಪರಸತಿಯನ್ನು ಮೋಹಿಸಿದ ಆದರೆ ಪತಿವ್ರತೆಯಾದ ಶಶಿಕಲೆ ತನ್ನಿಂದ ಒಬ್ಬ ವ್ಯಕ್ತಿ ಕೆಡಬಾರದಲ್ಲ ಎಂದು ತನ್ನ ಕೇಶಪಾಶವನ್ನೇ ಬಲಿಗೊಟ್ಟು, ಸಮಾಜದ ಸುವ್ಯವಸ್ಥೆಗೆ ಕಾರಣಳಾದಳು. ಅನಂತ ಅಸಂಸ್ಕೃತಿಯ ಪ್ರತಿರೂಪವಾದರೆ, ಶಶಿಕಲೆ ಪೂರ್ಣ ಸುಸಂಸ್ಕೃತಳು, ನಿಜವಾದ ಯೋಗ್ಯತೆಯು ಒಬ್ಬ ವ್ಯಕ್ತಿಯ ವಿದ್ಯೆಯಲ್ಲಾಗಲಿ, ಸಂಪತ್ತಿನಲ್ಲಿಯಾಗಲಿ ಇರದೆ, ಶೀಲದಲ್ಲಿ ಇದೆ. ಹೀಗಾಗಿ ವಿದ್ಯಾವಂತ ಅನಂತ ಶೀಲದಿಂದ ಅಸಂಸ್ಕೃತ, ಶಶಿಕಲೆ ಅವಿದ್ಯಾವಂತಳಾದರೂ ಸುಸಂಸ್ಕೃತೆ; ಹೀಗೆ ಈ ಕಥೆಯಲ್ಲಿ ಪಾತ್ರ ಪೋಷಣೆ ಕಥೆಗೆ ಯೋಗ್ಯವಾಗಿಯೂ, ಉತ್ತಮವಾಗಿಯೂ ಬೆಳೆದು ಬಂದಿದೆ. ಅನಂತ ಶಶಿಕಲೆಯಂಥವರು ಜೀವಂತ ವ್ಯಕ್ತಿಗಳು. ನಮ್ಮ ಸಮಾಜದಲ್ಲಿ ವಿರಳರೇನೂ ಇಲ್ಲ

"ವೈಯಕ್ತಿಕ ಕಾಮದಹನದಿಂದ ಸಮಾಜದ ಉನ್ನತಿಯಿದೆ; ಪ್ರಗತಿಯಿದೆ" ಎಂಬ ತತ್ತ್ವವನ್ನು ಲೇಖಕರು ಈ ಕಥೆಯಲ್ಲಿ ಸಾಧಿಸಲು ಯತ್ನಿಸಿದ್ದಾರೆ. ಮತ್ತು ಸಾಧಿಸಿದ್ದಾರೆ. ಕಾಮಲಾಲಸೆ ಮೃಗಜಲವಿದ್ದಂತೆ, ಅದನ್ನು ನಾವು ಹಿಡಿತದಲ್ಲಿಟ್ಟುಕೊಂಡು ಸಂಯಮಿಗಳಾಗಿರಬೇಕೇ ಹೊರತು, ಅದರ ಅಡಿಯಾಳಾಗಿ, ನಾವು ಅದರ ಗುಲಾಮರಾಗಬಾರದು ಕಾಮಲಾಲಸೆಯ ವಿಚಾರ ಎಷ್ಟೊಂದು ಕೆಟ್ಟುದು ಎನ್ನುವದಕ್ಕೆ ವ್ಯಾಸರಾಯ ಬಲ್ಲಾಳರ 'ಹೇಮಂತಗಾನ'ದ ಉದಾಹರಣೆ ಕೊಡಬಹುದು. ಅಲ್ಲಿ ಇಂದಿರೆ ಮೆಚ್ಚಿದ್ದು ಅನಂತನನ್ನಲ್ಲ; ಅವನ ಶೈಲಿಯನ್ನು; ಆದರೆ ಅನಂತ ತಪ್ಪು ತಿಳಿದು ಅವಳನ್ನು ಚುಂಬಿಸಿದುದರ ಪರಿಣಾಮವಾಗಿ ಅವನ, ಅವನ ಕುಟುಂಬದ, ಅವನನ್ನು ದಂಬಿನೆಚ್ಚಿ ಕುಳಿತಿದ್ದ ಬಹಳ ಜನರ ಹಾನಿಯಾಯಿತು. ಹಾಗೆ ಇಲ್ಲಿಯೂ ಸಹ.

ಲೇಖಕರ ಶೈಲಿ ಕಥೆಗೆ ತುಂಬ ತಕ್ಕುದಾಗಿದೆ. ಶೈಲಿ ಸರಳವಾಗಿಯೂ ಸಹಜವಾಗಿಯೂ ಭಾವಸುಂದರವಾಗಿಯೂ ಸ್ವಭಾವ ಮಧುರವಾಗಿಯೂ ಇದೆಯೆನ್ನಬಹುದು. ಗಂಭೀರ ವಿಚಾರ, ಹೃದಯ ವೈಶಾಲ್ಯ, ಕಥನಕೌಶಲ್ಯ, ರಚನಾನೈಪುಣ್ಯ, ಶ್ಲಾಘನೀಯವಾಗಿವೆ. ಅವರು ಆರಿಸಿಕೊಳ್ಳುವ ಕಥಾವಸ್ತುಗಳು ವಾಸ್ತವಿಕ ಪ್ರಪಂಚದಿಂದಲೆ, ಉತ್ತಮವಾದ ; ಕಥಾವಸ್ತು, ಉತ್ತಮಶೈಲಿ, ಮನಮುಟ್ಟುವಂತೆ ಹೇಳುವ ಕಥನಕೌಶಲ, ತುಂಬ ಮನನೀಯವಾಗಿವೆ. ಕೆಲವೊಂದು ವಾಕ್ಯಗಳಂತೂ ತುಂಬ ಸುಂದರತಾಗಿವೆ. ಉದಾಹರಣೆಗಾಗಿ ಅನಂತನ ಮನಸ್ಥಿತಿ ವರ್ಣಿಸಿನಾಗ "ಪ್ರಿಯಾಕಾರಕನ ಮಿಲನದ ಆತುರ ಬಡ ಮೋಟಾರಿಗೆಲ್ಲಿಂದ ಬರಬೇಕು ?" ಎನ್ನುವದು ಅವನ ಮನಸ್ಥಿತಿಯನ್ನು ಕೂಲಂಕುಷವಾಗಿ ಸ್ಪಷ್ಟಗೊಳಿಸುತ್ತಿದೆ. "ಉಂಡ ಅನ್ನ ತನ್ನವರ ಮೈಗೆ ಹಿಡಿಯಬೇಕು ಎಂದು ಯಾವ ಹೆಣ್ಣು ಸೂಚಿಸುವದಿಲ್ಲ ?" ಎಂದು ಹೇಳುವದು ಕೇವಲ ಲಲಿತೆಯ ವಿಷಯದಲ್ಲಿಯಷ್ಟೇ ಅಲ್ಲ, ಆದರೆ ಇಡೀ ಸ್ತ್ರೀ ಜನಾಂಗದ ಬಗ್ಗೆ! ಬೆಳದಿಂಗಳ ಬೆಳಕಿನಲ್ಲಿ ತುಂಬು ಲಾವಣ್ಯದ ಶಶಿಕಲೆಯ ಸೌಂದರ್ಯ ಅನಂತನನ್ನು ಕೆಣಕಿತು ಎಂದು ಹೇಳುವಾಗ "ಚೆಲ್ಲುವರಿದಿಹ ಚಂದ್ರಿಕೆ ಯಾವ ವಿರಹಿಯನ್ನು ಕೆಣಕುವದಿಲ್ಲ ?" ಎನ್ನುವದು ಸ್ವಭಾವಸಿದ್ಧವಾದ ಮಾತಾಗಿದೆ, ಇನ್ನು ಗಂಡಸು ಎಷ್ಟು ಚಂಚಲಚಿತ್ತ ಎಂದು ಅನಂತನನ್ನು ವರ್ಣಿಸುವಾಗ "ಹೆಣ್ಣಿನ ವಿಚಾರ ಗಂಡಿನ ತಲೆಯಲ್ಲಿ ಹೊಕ್ಕರೆ ಗಂಡು ಎಷ್ಟೊಂದು ಅಸ್ಥಿರಚಿತ್ತನಾಗುತ್ತಾನೆ?" ಎನ್ನುತ್ತಾರೆ. "ಕಾಮಿ ಸ್ವಯಂ ಪಶ್ಯತಿ" ಎಂಬ ಕಾಳಿದಾಸೋಕ್ತಿಯಂತೆ, ಅನಂತ ಎಲ್ಲ ಕಡೆಗೆ ತನ್ನತನವನ್ನೇ ಕಂಡಾಗ, "ಕಾಮಿಗೆ ಕಾಣಿಸುವದೆಲ್ಲವೂ ತನ್ನತನವೇ!" ಎಂಬ ಸುಂದರವಾದ ಉದ್ಗಾರ ತೆಗೆಯುತ್ತಾರೆ. ಮೇಲಿನ ಉದಾಹರಣೆಗಳು ಸಾಕು, ಲೇಖಕರ ಶೈಲಿ ಅದೆಷ್ಟು ಮಧುರವಾಗಿಯೂ, ಪ್ರಕೃತಿರಮ್ಯವಾಗಿಯೂ, ಗಂಭೀರವಾಗಿದೆ ಎಂದು ತೋರಿಸುವದಕ್ಕೆ.

ಮೇಲಿನ ಗುಣಗಳನ್ನೆಲ್ಲ ನೋಡಿದರೆ, ಕಥೆ ಉತ್ತಮವಾದುದು ಎಂದು ಒಪ್ಪಲೇಬೇಕು. ಮನೋರಂಜಕವೂ, ವಿಚಾರಪ್ರಬೋಧಕವೂ ಆದ ಈ ಲೇಖಕರ ಕಥೆಗಳು ಇನ್ನೂ ಹೆಚ್ಚಾಗಿ ಬರಲಿ ಎಂದು ಆಶಿಸುತ್ತೇನೆ.

---

# ರಾಜವಂಚಕ

(ಐತಿಹಾಸಿಕ ತರಂಗರೂಪದ ವಿಮರ್ಶೆ)

**ಶ್ರೀ. ಕೆ. ಎಸ್. ಶರ್ಮಾ ವಾಣೀಮಂದಿರಂ, ಕಾಸರಗೋಡು**

ತರಂಗರೂಪಕವಿದು,–ಶ್ರವ್ಯಾನುಗುಣವಾಗಿ ಹರಿದು ಬಂದಿದೆ. ಒಂದುತ್ತಮ ವಸ್ತುವನ್ನು ಕೇಂದ್ರವಾಗಿರಿಸಿಕೊಂಡು ಬಂದೀ ರೂಪಕವು, ಕರ್ಣಾಟಕದ ಗತವೈಭವದ ಪುಣ್ಯಸ್ಮೃತಿಯೊಂದನ್ನು ನೆನಪಿಗೆ ತಂದುಕೊಡುತ್ತಿದೆ. ಉದಾತ್ತಚರಿತಸಂಪನ್ನನಾದ ಕೃಷ್ಣದೇವರಾಯನ ಧೀರೋದಾತ್ತ ಪ್ರವೃತ್ತಿಯನ್ನೂ ರಾಜಪ್ರವೃತ್ತಿಗೊಪ್ಪುವ ಪರಿವಾರ ಚರಿತೆಯನ್ನೂ ರೂಪಕವಿದು ಸಾರಿ, ರಾಜಧರ್ಮ, ಪ್ರಜಾಧರ್ಮ ಸ್ವಾಮಿಭಕ್ತಿ, ನ್ಯಾಯಪರತೆಗಳನ್ನು ಚೆಲುವಾಗಿ ರೂಪಿಸುತ್ತಿದೆ.

ರೂಪಕಧರ್ಮವು– ಶ್ರವ್ಯದೃಶ್ಯಮಾರ್ಗಾನುಬಂಧಿಯೆಂದಿದ್ದರೂ, ಪ್ರಸ್ತುತ ರೂಪಕವು ದೃಶ್ಯಕ್ಕಿಂತ ಮಿಗಿಲಾಗಿ ಶ್ರವ್ಯಕ್ಕೊಪ್ಪುವುದು. ಶ್ರವಣಮಾರ್ಗದಲ್ಲಿ ಕಥಾನುಬಂಧವು ಕಡಿಯದಿರುವಂತೆ, ಎಲ್ಲೆಡೆಯಲ್ಲೂ ಲೇಖಕರು ಸಂಭಾಷಣೆಗಳನ್ನು ಜಾಗರೂಕತೆಯಿಂದ, ಚಾಕಚಕ್ಯತೆಯಿಂದ, ಪೋಣಿಸಿದ್ದಾರೆ. ಶ್ರವ್ಯಧರ್ಮವನ್ನು ಮನದಂದುಕೊಂಡೇ ಲೇಖಕರೂ ಈ ರೂಪಕವನ್ನು 'ತರಂಗ'ವೆಂದು ಸಾರಿರಬೇಕೆಂದು ತೋರುತ್ತದೆ. ಇಲ್ಲವಾದರೆ ತರಂಗಕ್ಕೆಲ್ಲಿದೆ ಪ್ರಾಶಸ್ತ್ಯ—?

ರೂಪಕದಲ್ಲಿ ವಸ್ತುವಿಗಿರುವ ಪ್ರಾಧಾನ್ಯತೆಯಂತೆ, ದೃಶ್ಯಗಳಿಗೂ ಪ್ರಾಧಾನ್ಯತೆಯಿದೆ. ಪ್ರತಿಯೊಂದು ದೃಶ್ಯವೂ ದೃಶ್ಯಾಂತರದೊಡನೆ ಆಂತರಿಕವಾದ ಬಲವನ್ನು ಪಡೆದಿರಬೇಕು. ಅರ್ಥಾತ್ ವಿವಿಧಘಟನಾಯುಕ್ತವಾಗಿ ನಿಂತ ಪ್ರತಿಯೊಂದು ದೃಶ್ಯವೂ, ಪ್ರಧಾನವಸ್ತುವಿಗೆ ಪೋಷಕವಾಗಿದ್ದು–ಪ್ರತಿಯೊಂದು ಪಾತ್ರದ ಪೂರ್ಣಸ್ವರೂಪವನ್ನು ಬಲಿದಿರಬೇಕು. ಆಗಲೆ ರೂಪಕಧರ್ಮದ ನೆಲೆ.

"ಕೃಷ್ಣದೇವರಾಯನ ಆಜ್ಞೆಯಂತೆ — ಚೋಳರಾಜನನ್ನು ಸೋಲಿಸಿ, ಮಧುರೆಯನ್ನು ವಶಪಡಿಸಿ, ಅಲ್ಲಿ ಚಂದ್ರಶೇಖರ ಪಾಂಡ್ಯನನ್ನು ಅರಸಾಗಿಸುವಂತೆ ಪಣತೊಟ್ಟು ತೆರಳಿದ ನಾಗನಾಯಕ, ಚೋಳರಾಜನನ್ನು ಗೆದ್ದರೂ ಪಾಂಡ್ಯನನ್ನು ಅರಸಾಗಿಸದೆ, ತಾನೇ ಮೆರೆದನು. ಮಾತ್ರವಲ್ಲ, ಅವನನ್ನು ಸೆರೆಯಲ್ಲಿರಿಸಿ ಆತನ ಮಗ ಸುಂದರಪಾಂಡ್ಯನನ್ನು ಗತಿಶೂನ್ಯನನ್ನಾಗಿಸಿದನು. ಸುಂದರಪಾಂಡ್ಯ ತನ್ನ ವಿನಂತಿಯನ್ನು, ವಿಜಯನಗರ ರಾಜಸನ್ನಿಧಿಯಲ್ಲಿರಿಸಿದಾಗ– ಕೃಷ್ಣದೇವನು ರಾಜಸಭೆಯನ್ನು ಕರೆದು ನಾಗನಾಯಕನನ್ನು ಸೆರೆಹಿಡಿವ ವೀರರನ್ನು ಆಮಂತ್ರಿಸುವನು. ರಾಜಧರ್ಮದಂತೆ ನ್ಯಾಯ-(ಮಾರ್ಗ) ಧರ್ಮದಂತೆ, ನಾಗನಾಯಕನ ಪುತ್ರ ವಿರೂಪಾಕ್ಷನೇ ರಾಜಾಜ್ಞೆಯನ್ನು ಪಡೆದು ಮಧುರೆಗೆ ತೆರಳುವನು. ತಂದೆಮಕ್ಕಳೊಳಗೆ ನಡೆದ ಧರ್ಮವಿಚಾರಘರ್ಷಣೆಯಿಂದ ಮೊರೆದೆದ್ದ ಧಾರ್ಮಿಕ ಭಾವನೆಯು ನಾಗನಾಯಕನನ್ನು ಹಿಡುಕುವುದು, ನಾಯಕ ಸೆರೆಗೊಳಗಾಗಿ ವಿಜಯನಗರಕ್ಕೆ ಬಂದು, ಪ್ರಭುಗಳೆದುರಲ್ಲಿ ದೇಹಾಂತ ಶಿಕ್ಷೆಯನ್ನೇ ಕೇಳುವನು. ಆದರೆ ಉದಾರಚರಿತನಾದ ಅರಸನು ಸಮಸ್ತಪ್ರಜೆಗಳ ಬಯಕೆಯಂತೆ, ನಾಗನಾಯಕನ ಪುತ್ರ ವಿರೂಪಾಕ್ಷನ ಹೃದಯದೊಲವಿನಂತೆ–ನಾಗನಾಯಕನನ್ನು ಕ್ಷಮಿಸುವನು; ರಾಜಧರ್ಮವನ್ನು ಬೆಳಗುವನು.

ಆರು ದೃಶ್ಯಗಳೊಡನೆ ಒಪ್ಪಗೊಂಡ ನಾಟಕವಿದು ಷಟ್ಪಾತ್ರ ಸಮಾಪಿಷ್ಟವಾಗಿದ್ದು—ನಾಟಕಧರ್ಮದಂತೆ ಪಾತ್ರೇತರ ವೃಂದದೊಡನೆ ಮೆಲುವಾಗಿ ಸಾಗಿ, ಕೊನೆಗೆ ಸಂಗೀತಗಾರನ ಭರತ ವಾಕ್ಯದಲ್ಲಿ ವೃತ್ತನೀತಿಯನ್ನು ಸಾರಿ ಕೊನೆಗಾಣುತ್ತಿದೆ "ಜಾಂಬವತೀ-ಕಲ್ಯಾಣ ಕಾವ್ಯರಚನೆಯಲ್ಲಿ ಲೀನನಾದ ಅರಸನ ಬಳಿಗೆ—ಚಿನ್ನಾದೇವಿ ಬಂದು," ತನ್ನನ್ನಗಲಿ ಪ್ರಧಾನಮಹಿಷಿಯಾದ ತಿರುಮಲಾದೇವಿಯ ಬಳಿ ನೆಲೆನಿಂತ, ದಾಸಿ "ಜಕ್ಕಿ"ಯ ದೂರನ್ನು ಹೇಳಿ ಪತಿಯಿಂದ ಆಶ್ವಾಸನೆ ಪಡೆಯುವ ಭಾಗದಲ್ಲಿ—ಮೊದಲಿದ್ದ ದೃಶ್ಯವು ಕಥಾನುಗತ ಪೀಠಿಕೆಯನ್ನು ಸೆಳೆದುಕೊಂಡರೆ, ಅಲ್ಲೇ ಎರಡನೆಯ ಘಟನೆಯು,– ಮಂತ್ರಿ ಅಪ್ಪಾಜಿಯು ನಾಗನಾಯಕನ ಧೂರ್ತತನವನ್ನು ಹೇಳಿ ಅವನ ಪ್ರತೀಕಾರಕ್ಕಾಗಿ ಬಯಸಿ ರಾಜಸಭೆಯನ್ನು ಕರೆಯುವಂತೆ ಸೂಚಿಸಿ ಮೌನವಾಗುವುವು. ಮುಂದಿನ ದೃಶ್ಯವು ರಾಜಸಭೆಯನ್ನು ತಂದು ತೋರಿದರೆ, ನಾವಲ್ಲಿ ನ್ಯಾಯಸಾಧನೆಗಾಗಿ, ತಂದೆಯನ್ನು ಪ್ರತಿಭಟಿಸಲು ಅಪ್ಪಣೆ ಕೇಳಿದ ವಿರೂಪಾಕ್ಷನ ಹೃದಯವನ್ನು ಕಾಣಬಹುದು. ತದುತ್ತರ ದೃಶ್ಯವು ವಿರೂಪಾಕ್ಷ ಮತ್ತು ಆತನ ಸಹಧರ್ಮಿಣಿ ಉಮೆ ಇವರೊಳಗಣ ಸಂಭಾಷಣೆಯನ್ನು ಬೆಳಕು ಕಾಣಿಸುವುದು. ಉಮೆಯು ನಾಗನಾಯಕನ ಕಾರ್ಯವನ್ನು ಮೆಚ್ಚಿನುಡಿದು—ಸಾಮಾನ್ಯ ಸ್ತ್ರೀಯಂತೆ ಅಧಿಕಾರ ಸಂಪತ್ತನ್ನು ಬಯಸಿದರೆ, ವಿರೂಪಾಕ್ಷನು ಸತ್ಯನ್ಯಾಯಪೂರ್ಣವಾದ ಜೀವನವನ್ನು ಬಯಸುವನು. ತನ್ನ ಹೃದಯ ಧರ್ಮವನ್ನು ಪತ್ನಿಯ ಮುಂದಿರಿಸಿ—ಆಕೆಯ ಬಲವನ್ನು ಸೆಳೆದು ಪಂಪಾಪತಿಯ ಆಶೀರ್ವಾದವನ್ನು ಬಯಸುವನು. ದೃಶ್ಯವಿಲ್ಲಿಗೆ ಮುಗಿದರೆ, ಮುಂದಿನ ದೃಶ್ಯವು ನಾಗನಾಯಕ— ವಿರೂಪಾಕ್ಷರ ಸತ್ಯಧರ್ಮಪೂರ್ಣ ಯುದ್ಧವನ್ನು ಬಯಲಿಗೆಳೆದು "ರಾಜವಂಚಕ"ದ ಹೃದಯವನ್ನೆತ್ತಿ ತೋರಿ ನಾಟಕವನ್ನು ಪೂರ್ಣವಾಗಿ ತುಂಬುವುದು. ಆದರೆ ಮುಂದೆಯೆ ಕೃಷ್ಣದೇವರಾಯನ ಉದಾರಚರಿತೆಯನ್ನು ಬಿಂಬಿಸುವ—ನಾಗನಾಯಕನನ್ನು ತುಂಬುಮನದಿಂದ ಕ್ಷಮಿಸುವ—ಸಮಾರೋಪದ ದೃಶ್ಯವು ತಲೆದೋರಿ, ಭರತವಾಕ್ಯದ "ದಿನಕರನುದಿಸಿ ಕತ್ತಲೆ ಹೋಗದಿದ್ದರೆ ಹಗಲೇನೋ, ಇರುಳೇನೋ ಕುರುಡರಿಗೆ ಕೃಷ್ಣಾ" ಎಂಬ ಸುವರ್ಣೋಕ್ತಿಯಲ್ಲಿ ಶಾಂತಿಯನ್ನು ತುಂಬಿ ಕೊನೆಗಾಣುವುದು.

ಕೃಷ್ಣದೇವರಾಯನ ಕಾವ್ಯರಚನಾತತ್ಪರತೆ, ಅಂತಃಪುರ ಸ್ತ್ರೀಸವಜಾನುಗತಭಾವಸಂವೇದನೆ, ಕಾಲೋಚಿತವಾದ ರಾಜಧರ್ಮ ಪರಿಶೀಲನೆ, ಶೂರಪ್ರಿಯತೆ, ಉದಾರಮನೋವೃತ್ತಿಗಳನ್ನು ನಾವೀ ರೂಪಕದಲ್ಲಿ ಪ್ರಧಾನಭಾಗವನ್ನಾಗಿ ಕಂಡರೆ, ಚಿನ್ನಾದೇವಿಯ ಸರಳತೆಯನ್ನೂ—ಅಪ್ಪಾಜಿಯ ರಾಜಕಾರ್ಯಧುರಂಧರತೆಯನ್ನೂ, ವಿರೂಪಾಕ್ಷನ ನ್ಯಾಯಪರತೆಯನ್ನೂ, ನಾಗನಾಯಕನ ಹೃದಯ ಪರಿವರ್ತನೆಯನ್ನೂ, ಉಮೆಯ ಹೃದಯದೌರ್ಬಲ್ಯ ಹಾಗೂ ಪತಿಪ್ರೇಮವನ್ನೂ ಅಂಗತ್ವೇನ ನಾಟಕಪರಿಪೋಷಕಪಾತ್ರಸಂವೇದನೆಯನ್ನಾಗಿ ಕಾಣಬಹುದು. ಇದಿಷ್ಟು ಈ ನಾಟಕದಲ್ಲಿ ಕಾಣುವ ವಿಚಾರ.

ಮೊದಲ ದೃಶ್ಯವಾಗಿ ಬಂದ "ಕೃಷ್ಣದೇವರಾಯ ಮತ್ತು ಚಿನ್ನಾದೇವಿಯರ ಸಲ್ಲಾಪವು ನಾಟಕಕ್ಕೆ ಪೀಠಿಕೆಯಂತಿದ್ದರೂ ಕೇವಲ "ದುರಾಶೆಗೆ ಒಳಗಾದರೆ ಎಂಥಹ ನಂಬುಗೆಯ ಸೇವಕರೂ ವಂಚಕರಾಗುವುದುಂಟು" ಎಂಬ ಒಂದೇ ಮಾತಿನಿಂದ ನಾಮಮಾತ್ರ-ಬಂಧವನ್ನು ಹೊಂದಿಕೊಂಡಿದೆಯಲ್ಲದೆ ಬೇರೇನೂ ಪ್ರಯೋಜನವನ್ನು ಹೊಂದಿಕೊಂಡಂತೆ ಕಾಣಿಸುವುದಿಲ್ಲ. ಆದುದರಿಂದಲೆ ಈ ದೃಶ್ಯವು ನಿರುಪಯೋಗಿಯೆಂದೆನ್ನುವುದು ಸಹಜವಿದೆ. ಉಳಿದಾವ ದೃಶ್ಯಗಳೂ 'ರಾಜವಂಚಕ'ಕ್ಕೆ ಪೋಷಕಗಳಾಗದುಳಿದಿಲ್ಲ. "ರಾಜವಂಚಕ" ಎಂಬೀ ಹೆಸರಿಗೂ ಮೊದಲ ದೃಶ್ಯದ ಹೊಂದಿಕೆಯಿಲ್ಲ. ಅಂತೆಯೆ ವಿರೂಪಾಕ್ಷ ಮತ್ತು ಆತನ ಪತ್ನಿ ಉಮೆಯನ್ನು ತಲೆಗಾಣಿಸಿದ ದೃಶ್ಯವೂ ಸಮರ್ಪಕವಾಗಿಲ್ಲ. ಉಮೆಯ ಚಿತ್ರವು ದೌರ್ಬಲ್ಯಪೂರಿತವಾಗಿರುವುದೇ—ರಾಜವಂಚಕದ ಮುಂದೆ ಕುಸಿದಿದೆಯೆನ್ನಬೇಕು.

( ಹೊದಿಕೆಯ ಮೂರನೆಯ ಪುಟನೋಡಿರಿ. )









# ಜಯಂತಿ

ಸಂಪುಟ ೧೯ ಸಂಚಿಕೆ ೧

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೩ ರೂ.
ಬಿಡಿ ಸಂಚಿಕೆಗೆ ೬ ಆಣೆ.

⁂

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.


# ಸಂಪಾದಕೀಯ

## ಭಗವಾನ್ ಬುದ್ಧನ ನೆನಹಿನ ಹಬ್ಬ

ಸಾಮಾನ್ಯ ಜನತೆ ಉತ್ಸವಪ್ರಿಯ. ಯಾವದಾದರೊಂದು ಹಬ್ಬ, ಹುಣ್ಣಿವೆ, ಜಾತ್ರೆ ನಿಬ್ಬಣಗಳ ಉತ್ಸವದಲ್ಲಿ ಭಾಗವಹಿಸುವುದೆಂದರೆ ಅದಕ್ಕೆ ತುಂಬ ಉತ್ಸಾಹ. ಆದರೆ ತಾನು ಭಾಗವಹಿಸುವ ಉತ್ಸವ-ಸಮಾರಂಭಗಳ ತತ್ತ್ವರಹಸ್ಯವನ್ನು ಅದು ಅರಿಯದು; ಅರಿತು-ಕೊಳ್ಳಲು ಮನಸ್ಸನ್ನೂ ಮಾಡದು. ಪರಂಪರೆಯಿಂದ ಬಂದ ಧಾರ್ಮಿಕ ಉತ್ಸವ-ಸಮಾರಂಭ-ಗಳನ್ನು ನಮ್ಮ ಜನರು ಆಸಕ್ತಿಯಿಂದ ನೆರವೇರಿಸಿಯೇ ನೆರವೇರಿಸುವರು. ಆದರೆ ಸರಕಾರದಿಂದ ಯಾವುದಾದರೊಂದು ಉತ್ಸವ-ಸಮಾರಂಭಗಳನ್ನು ನಡೆಯಿಸಬೇಕೆಂದು 'ಹುಕುಂ' ಹೊರಟರೆ, ಅದರಲ್ಲಿ ಜನರ ಆಸಕ್ತಿ-ಕುತೂಹಲಗಳು ಕಾಣುವುದಿಲ್ಲ. ಸರಕಾರದವರ ಹುಕುಮನ್ನು ನಡೆಸ-ಬೇಕೆಂದು, ಉದಾಸೀನ ಭಾವದಿಂದಲೇ ಅಂತಹ ಉತ್ಸವ-ಸಮಾರಂಭಗಳಲ್ಲಿ ಜನರು ಭಾಗ-ವಹಿಸುತ್ತಾರೆ. ಈಗ ಭಾರತದಲ್ಲಿ ನಡೆದಿರುವ ಭಗವಾನ್ ಬುದ್ಧಜಯಂತಿಯ ಉತ್ಸವವೂ ಇಂತಹ ಉದಾಸೀನಭಾವದ ಜನರಿಂದಲೇ ನಡೆದುದಾಗಿದೆ. ಊರ ದೇವತೆಯ ತೇರೆಳೆಯುವ ಉತ್ಸವದಲ್ಲಿ ತೋರಿಬರುವ ಜನರ ಉತ್ಸಾಹ, ಈ ಬುದ್ಧನ ಸ್ಮಾರಕೋತ್ಸವದಲ್ಲಿ ಎಲ್ಲಿಯೂ ಕಂಡುಬರಲಿಲ್ಲ.

ಭಾರತದಲ್ಲಿಯ ಬಾನುಲಿಯಂತ್ರಗಳು ಬುದ್ಧನ ಕೀರ್ತಿಯನ್ನು ಎಡೆಬಿಡದೆ ಹಾಡಿ-ದುವು; ಹೇಳಿದುವು; ನಾಟಕವಾಡಿದುವು. ಸರಕಾರ-ಕಾಂಗ್ರೆಸುಗಳ ಆಜ್ಞೆಯನ್ನು ಪಾಲಿಸ-ಬೇಕೆನ್ನುವ ಮನೋವೃತ್ತಿಯ ಜನರು, ಅಲ್ಲಲ್ಲಿ ಬುದ್ಧನ ಜಯಂತ್ಯುತ್ಸವದ ಹುಚ್ಚಾಟ್ಟಗಳನ್ನು ಮಾಡಿದರು. ಆದರೆ ಎಲ್ಲಿಯೂ ಬುದ್ಧಜಯಂತ್ಯುತ್ಸವವನ್ನು ಏತಕ್ಕಾಗಿ ತಾವು ಆಚರಿಸುತ್ತೇವೆ-ಎಂಬ ಅರಿವು, ನಾಗರಿಕರೆನ್ನಿಸಿಕೊಳ್ಳುವವರಲ್ಲಿಯೂ ಮೂಡಿದುದನ್ನು ನಾವು ಹೆಚ್ಚಾಗಿ ಕಾಣಲಿಲ್ಲ. ಹಿಂದಿನ ಬ್ರಿಟಿಶರ ಆಳಿಕೆಯಲ್ಲಿ, ಬ್ರಿಟಿಷ್ ಸಾರ್ವಭೌಮರ ವರ್ಧಂತ್ಯುತ್ಸವವನ್ನು ಭಾರತದಲ್ಲಿ ನಡೆಸುತ್ತಿರುವಾಗಿನ ಮನೋಭಾವನೆಯಿಂದಲೇ ಇಂದಿನ ಈ ಬುದ್ಧಜಯಂತ್ಯುತ್ಸವವು ನಡೆದುದು ವಿಷಾದದ ಸಂಗತಿ.

ಬುದ್ಧ ಜಯಂತ್ಯುತ್ಸವವನ್ನು ರಾಷ್ಟ್ರೀಯವಾಗಿ ಜರುಗಿಸಬೇಕೆಂದು ಬಯಸಿದ ನಮ್ಮ ರಾಷ್ಟ್ರಧುರೀಣರ ಧೋರಣೆ ಪ್ರಶಂಸನೀಯವಾದುದೇ. ಬುದ್ಧನ ನಿಜವಾದ ಜ್ಞಾನೋಪಾಸನೆ, ಜೀವನಶ್ರದ್ಧೆ, ಮಾನವಬಂಧುತ್ವ, ತ್ಯಾಗ, ಕರುಣೆ ಇವೆಲ್ಲ ಸಮಾಜದ ಪ್ರತಿಯೊಂದು ವ್ಯಕ್ತಿಯ ಹೃದಯದಲ್ಲಿ ವಿಕಾಸಗೊಂಡಾಗಲೇ ಸಮಾಜ ಹಾಗೂ ವ್ಯಕ್ತಿ ಎರಡೂ, ಜೀವನದ ಕಷ್ಟನಷ್ಟ-ಗಳಿಂದ ಬಿಡುಗಡೆ ಹೊಂದುವುವು. ಈ ಗುಣಗಳು, ದೇವರಿದ್ದಾನೆ ಎಂದು ಭಾವಿಸಿ ನಡೆಯುವ ಪಾರಮಾರ್ಥಿಕ ಜನರಿಗೂ ಬೇಕು; ದೇವರಿಲ್ಲವೆಂದು ಭಾವಿಸಿ ನಡೆಯುವ ಲೌಕಿಕವೃತ್ತಿಯ ಜನರಿಗೂ ಬೇಕು. ಬಸವಣ್ಣನವರು 'ಇಲ್ಲಿ ಸಲ್ಲುವವ ಅಲ್ಲಿ ಸಲ್ಲುವನಯ್ಯಾ' ಎಂದು ಹೇಳಿದ ವಚನವೂ ಇದೇ ಮಾತನ್ನೇ ಪರಿಪೋಷಿಸುವುದು. ಭಗವದ್ಗೀತೆಯು ಹೇಳುವ ಸ್ಥಿತಪ್ರಜ್ಞ, ಕರ್ಮಯೋಗಿ, ಭಕ್ತ ಇವರೆಲ್ಲರ ಸ್ವರೂಪವರ್ಣನೆಯು ಬುದ್ಧನ ಆದರ್ಶಮಾನವತೆಯ ಸ್ವರೂಪವನ್ನೇ ವರ್ಣಿಸುವಂತಹವಾಗಿವೆ. ಬುದ್ಧನು ಹೇಳಿದ ಬೋಧೆ, ನಾಸ್ತಿಕವಾದವನ್ನು ಪ್ರಸ್ತಾಪಿಸುತ್ತಿದ್ದರೂ, ಇಹಲೋಕದಲ್ಲಿ ಅದು ತುಂಬ ಪ್ರಯೋಜನಕಾರಿಯೆಂಬುದು ಮನವರಿಕೆ. ಯಾವುದರಿಂದಲೇ, ಆಸ್ತಿಕರಾದ ಭಾರತೀಯ ಸನಾತನಿಗಳು ಕೂಡ, ಬುದ್ಧನನ್ನು ಶ್ರೀಮಹಾ-ವಿಷ್ಣುವಿನ ಒಂಬತ್ತನೆಯ ಅವತಾರವೆಂದು ಪರಿಗಣಿಸಿದರು. ಬುದ್ಧನ ಧರ್ಮಬೋಧೆಯು

ಲೌಕಿಕಭಾವದ ಸಾಮಾನ್ಯ ಜನತೆಗೆ ಕಲ್ಯಾಣಕಾರಿಯೆಂದು ತೋರಿದುದರಿಂದಲೇ, ಸ್ವಲ್ಪಕಾಲದಲ್ಲಿಯೇ ಬುದ್ಧಧರ್ಮ ಜಗತ್ತಿನ ಬಹುಭಾಗದಲ್ಲಿ ವ್ಯಾಪಿಸಿ ನೆಲೆನಿಂತಿತು.

ಭಾರತೀಯರ ಹೃದಯಂಗತವಾದ ಆಸ್ತಿಕಭಾವನೆಯ ಮೂಲಕ, ಬುದ್ಧನ ಸಂಪೂರ್ಣಧರ್ಮವು ಭಾರತದಲ್ಲಿ ಇಂದು ಬಹುಕಾಲ ಉಳಿದಿಲ್ಲವಾದರೂ, ಅವನ ತರುವಾಯ ಉದಿಸಿಬಂದ ನಮ್ಮ ಮತಾಚಾರ್ಯರ ಮತಬೋಧೆಯ ಮೇಲೆ, ಬುದ್ಧನ ಸತ್ಯತತ್ತ್ವಗಳು ತಮ್ಮ ಪ್ರಭಾವವನ್ನು ಬೀರದೆ ಬಿಟ್ಟಿಲ್ಲ. ಪ್ರತಿಯೊಬ್ಬ ಮತಾಚಾರ್ಯರೂ ಅಹಿಂಸೆ, ದಯೆ, ತ್ಯಾಗ, ತಪಸ್ಸು, ಮಾನವಬಂಧುತ್ವ ಇವುಗಳನ್ನು ಒತ್ತಿಹೇಳದೆ ಬಿಟ್ಟಿಲ್ಲ ಹಿಂಸಾಮಯವಾದ ವೈದಿಕಯಜ್ಞಗಳು ಧರ್ಮದಲ್ಲಿ ಗೌಣಸ್ಥಾನವನ್ನು ಪಡೆದುವು; ಮಾನವನ ಜ್ಞಾನದ ಪರಿಪೂರ್ಣತೆಯೇ ಮೋಕ್ಷಕ್ಕೆ ಕಾರಣವೆಂಬ ಭಾವನೆ ನಮ್ಮಲ್ಲಿ ನೆಲಸಿನಿಂತಿತು.

ಇಂದು ಮತ್ತೆ ನಮಗೆ ಬುದ್ಧನ ಬೋಧೆಯು ಆವಶ್ಯಕವೆನಿಸುವುದಕ್ಕೆ ಕಾರಣವೆಂದರೆ, ವಿಜ್ಞಾನದ ಬೆಳೆವಣಿಗೆಯ ಪ್ರಭಾವ, ಭಾರತೀಯರಲ್ಲಿಯೂ ಆಸ್ತಿಕಬುದ್ಧಿಯನ್ನು ಸರಿಸಿ, ನಾಸ್ತಿಕ ಭಾವನೆಯನ್ನು ಬೆಳೆಸತೊಡಗಿದುದು. ಇಂದು ನಮ್ಮ ರಾಷ್ಟ್ರದಲ್ಲಿಯೂ ಬಹುಜನರು ಲೌಕಿಕವಾದಿಗಳಾಗಿದ್ದಾರೆ ಆಸ್ತಿಕರ ಪ್ರಧಾನ ಮತತತ್ತ್ವಗಳು ಸಮಾಜದ ವಿಚ್ಛಿನ್ನತೆಗೆ ಕಾರಣವಾದುದರಿಂದ, ಸಮಾಜಸಂಘಟನೆಯನ್ನು ಬಯಸುವ ಸಂಘ–ಸಂಸ್ಥೆಗಳೂ, ಜನನಾಯಕರೂ ಲೌಕಿಕವಾದಕ್ಕೇ ಪ್ರಾಧಾನ್ಯವನ್ನು ಕೊಡುತ್ತಲಿದ್ದಾರೆ. ಲೌಕಿಕಜೀವನವನ್ನು ಸುಂದರಗೊಳಿಸಬಹುದಾದ ಮತತತ್ತ್ವಗಳಲ್ಲಿ, ಬೌದ್ಧಮತವನ್ನು ಬಿಟ್ಟರೆ ಇನ್ನೊಂದು ಯಾವುದೂ ಇಲ್ಲ. ಇದನ್ನು ಅರಿತುಕೊಂಡೇ ನಮ್ಮ ಭಾರತೀಯ ಜನತಾಸರಕಾರವು, ಜನತೆಯ ಕಣ್ಣೆದುರು ಬುದ್ಧನ ಆದರ್ಶಗಳನ್ನು ಇರಿಸಲು ಹವಣಿಸುತ್ತಲಿದೆ. ಇದೆಲ್ಲ ರಹಸ್ಯಜ್ಞಾನವು ಎಲ್ಲರಿಗೂ ಆಗಿ ಬುದ್ಧಜಯಂತ್ಯುತ್ಸವವನ್ನು ನಾವು ಆಚರಿಸಿದ್ದರೆ, ಉತ್ಸವ ಸಮಾರಂಭಗಳಲ್ಲಿ ಸ್ವಯಂಪ್ರೇರಣೆ—ಪ್ರಾಮಾಣಿಕತನಗಳು ಕಂಡುಬರಬಹುದಾಗಿತ್ತು.

ರಾಜಕಾರ್ಯದಲ್ಲಿಯ ಒಂದು ಸಾಧನೆಯೆಂದು ಈ ಬುದ್ಧಮಹೋತ್ಸವನ್ನು ನಮ್ಮ ರಾಷ್ಟ್ರ ಆಚರಿಸಿತೆಂದೂ ಕೆಲವರು ಮಾತ ನಾಡುವುದನ್ನು ನಾವು ಕೇಳುತ್ತಲಿದ್ದೇವೆ. ಅವರ ವಾದವೆಂದರೆ: ಪೂರ್ವ ಏಸಿಯದ ರಾಷ್ಟ್ರಗಳೆಲ್ಲ ಹೆಚ್ಚಾಗಿ ಬುದ್ಧಧರ್ಮದ ಅನುಯಾಯಿಗಳಿಂದ ತುಂಬಿದುವಾಗಿವೆ. ಸಾಂಸ್ಕೃತಿಕ ಸಂಬಂಧವನ್ನು ಬೆಳೆಸಿ, ಆ ರಾಷ್ಟ್ರಗಳ ಸ್ನೇಹದೃಷ್ಟಿಯನ್ನು ಭಾರತದ ಕಡೆಗೆ ತಿರುಗಿಸಿಕೊಳ್ಳಬೇಕೆಂಬುದು ಈ ಬುದ್ಧಮಹೋತ್ಸವದ ಉದ್ದೇಶವಂತೆ. ಹಾಗೂ ಇದ್ದರೆ ಇರಲಿ, ಯಾರುಬೇಡವೆನ್ನುತ್ತಾರೆ? ಯುದ್ಧಬೇಕೆನ್ನುವ ಹಿಂಸಾಪ್ರಿಯ ರಾಷ್ಟ್ರಗಳ ಸ್ನೇಹ-ಸಹಕಾರಕ್ಕಿಂತಲೂ ಯುದ್ಧಬೇಡವೆನ್ನುವ ತತ್ತ್ವದ ರಾಷ್ಟ್ರಗಳ ಸ್ನೇಹ–ಸಹಕಾರಗಳಿಂದ ಭಾರತಕ್ಕೂ ಕಲ್ಯಾಣವಾದೀತು; ಜಗತ್ತಿಗೂ ಕಲ್ಯಾಣವಾದೀತು. ರಾಜಕಾರ್ಯದಲ್ಲಿ ವಂಚನೆ, ಅಸತ್ಯ, ಕುಟಿಲತೆಗಳಿದ್ದರೆ ಅದು ನಿಂದ್ಯವೆನಿಸೀತು. ರಾಷ್ಟ್ರಹಿತದ–ಮಾನವಹಿತದ ದೃಷ್ಟಿಯಿಂದ ನಡೆಸುವ ರಾಜಕಾರ್ಯದ ಯಾವ ಚಟುವಟಿಕೆಗಳಿಂದಲೂ ಯಾರಿಗೂ ಅಹಿತವಾಗದು ಸ್ನೇಹವು ಸಮಾನಶೀಲವಿದ್ದಲ್ಲಿಯೆ ಸಾಧ್ಯವೆಂಬುದನ್ನು ಎಲ್ಲರೂ ಒಪ್ಪುವರು. ಮಿಕ್ಕ ಬೌದ್ಧರಾಷ್ಟ್ರಗಳೊಂದಿಗೆ ಸ್ನೇಹಬೆಳೆಸುವ ಮಹೋದ್ದೇಶದಿಂದ ಭಾರತವೂ ತನ್ನ ಸಮಾನಶೀಲತೆಯನ್ನು ಈ ಬುದ್ಧಜಯಂತ್ಯುತ್ಸವದ ಆಚರಣೆಯ ಮೂಲಕ ತೋರಿಕೊಂಡರೆ ಅದರಲ್ಲಿ ತಪ್ಪೇನಿದೆ, ನಷ್ಟವೇನು ಇದೆ?

ಏನೇ ಇರಲಿ, ಭಾರತೀಯರ ಯಾವ ಆದರ್ಶ–ಶ್ರದ್ಧೆಗಳಿಗೂ ಅವಕಾಶ ತಪ್ಪುತ್ತ ನಡೆದಿರುವ ಕಾಲದಲ್ಲಿ, ಕೇವಲ ಲೌಕಿಕ ಶಾಂತಿ ಸಮಾಧಾನಗಳನ್ನೇ ಕುರಿತು ಬೋಧಿಸಿದ ಬುದ್ಧಭಗವಾನನ ತತ್ತ್ವಗಳ ಮೇಲಾದರೂ ನಿಜವಾದ ಶ್ರದ್ಧೆ ನಮ್ಮ ಜನರಲ್ಲಿ ಮೂಡಲಿ. ಅದಕ್ಕಾಗಿ ನಮ್ಮ ಸರಕಾರಗಳು ಪ್ರಾಮಾಣಿಕತನದಿಂದ ಪ್ರಯತ್ನಿಸಲಿ

## ಜಯಂತಿಯ ಹಿತಚಿಂತಕರಲ್ಲಿ

ಹೊಸವರ್ಷದ ಪ್ರಾರಂಭದಲ್ಲಿ ಪ್ರತಿಸಲ ನಮ್ಮ ಹಿತಚಿಂತಕರಲ್ಲಿ ಬಿನ್ನವಿಸಿಕೊಳ್ಳುವುದೊಂದು ಜಯಂತಿಯ ಸಂಪ್ರದಾಯವೇ ಆಗಿದೆ, ಈ ಬಿನ್ನಹದ ಅವಶ್ಯಕತೆ ಇಲ್ಲದಂತಾಗುವವರೆಗೆ, ಅನಿವಾರ್ಯವಾಗಿ ನಾವು ಈ ಸಂಪ್ರದಾಯವನ್ನು ನಡೆಸಿಕೊಂಡೇ ಸಾಗಬೇಕಾಗಿದೆ.

ಜಯಂತಿಯ ಚಂದಾದಾರರು ಬೆಳೆಯಬೇಕು. ಅದುದರಿಂದ, ಪ್ರತಿಯೊಂದು ಕನ್ನಡ ಕುಟುಂಬದಲ್ಲಿಯೂ ಜಯಂತಿಗೆ ಎಡೆ ದೊರೆಯುವಂತೆ, ಅಲ್ಲಲ್ಲಿಯ ಕನ್ನಡ ಪ್ರೇಮಿಗಳೆಲ್ಲ ಸಹಕರಿಸುತ್ತಿರಬೇಕು. ಕನ್ನನಾಡಿನ ವಾಚನಾಲಯಗಳೆಲ್ಲ ಜಯಂತಿಗೆ ಸ್ವಾಗತವನ್ನೀಯಬೇಕು.

ಆರ್ಥಿಕ ಅನುಕೂಲತೆಯಾದಲ್ಲೆಲ್ಲ, ಜಯಂತಿಯ ಅಂತರಂಗ–ಬಹಿರಂಗ ಸೌಂದರ್ಯ ಹೆಚ್ಚುತ್ತ ಹೋಗುವುದೆಂಬ ಮಾತನ್ನು, ಎಲ್ಲರೂ ಜ್ಞಾಪಕದಲ್ಲಿ ಇರಿಸಿಕೊಂಡು ಜಯಂತಿಯ ಚಂದಾದಾರರನ್ನು ಹೆಚ್ಚಿಸಬೇಕು.

—ಸಂಪಾದಕರು

# ಮೂರು ಭಾವರೂಪಕಗಳು

ಶ್ರೀ. ಹಾ. ನೇಂ. ನಾಗೇಶ ಕಲಬುರ್ಗಿ

## ೧

## ಕವಿಸಮಯಗಳು ಮತ್ತು ಅಲಂಕಾರಗಳು

ಕವಿಗಳನ್ನು ಭ್ರಾಂತರೆಂದೂ ವಿವೇಕಶೂನ್ಯರೆಂದೂ ಜನ ಬೆನ್ನ ಹಿಂದೆ ಜರಿಯುತ್ತಾರೆ. ಅಸಾಧ್ಯಕೋಟಿಯನ್ನು ಎಳೆತಂದು ತಮ್ಮ ಕವಿಸಮಯಗಳಲ್ಲಿ ತುರುಕುತ್ತಾರೆಂದು ಬೈಯುತ್ತಾರೆ. ಆನೆಯ ಕುಂಭಸ್ಥಳದಲ್ಲಿ ಮುತ್ತು ಅಡಗಿದೆಯೆಂದು ಭ್ರಮಿಸಿದರೆಂದು ದೂರುತ್ತಾರೆ. ಬೆಳುದಿಂಗಳಲ್ಲಿ ಚಕ್ರವಾಕಗಳು ತಮ್ಮನಿಯಸಿಗಾಗಿ ಕಾದು ಕುಳಿತಿರುವುವು ಎಂದು ಸುಳ್ಳನ್ನ ಗಳಪುವರೆಂದು ಛೀಮಾರಿ ಹಾಕುತ್ತಾರೆ. ಅವರಲ್ಲಿ ನಾನೂ ಒಬ್ಬ!

ಕಾವ್ಯಗಳಲ್ಲಿ ಬರುವ ಇನ್ನೊಂದು ಮಾತು ನನಗೆ ಗೊತ್ತು— ಬೆಳುದಿಂಗಳು ಹಾಲು ಚೆಲ್ಲಿದಂತಿದೆ. ಒಂದು ಬೆಕ್ಕು ಇದಾವ ಪುಣ್ಯಾತ್ಮ ಚೆಲ್ಲಿದ ಹಾಲೆಂದು ತನ್ನ ನಾಲಗೆಯಿಂದ ತುಟಿಗಳನ್ನು ಸವರಿಕೊಂಡಿತಂತೆ— 'ಇದು ಪೂರಾ ಸುಳ್ಳೆಂದು ಜನ ದೂರುತ್ತಾರೆ. ಆದರೆ ಇದು ಸತ್ಯವೆಂದೂ ಸಾಧಾರಣವೆಂದೂ ನನ್ನ ಕಲ್ಪನೆ. ಏಕೆಂದರೆ ಮೂಕ ಪ್ರಾಣಿಯಾದ ಬೆಕ್ಕಿನ ಮಾತು ಹಾಗಿರಲಿ, ಎಷ್ಟೋ ಮನುಷ್ಯರೂ ಈ ತಿಂಗಳ ಬೆಳಕಿನ ಹಾಲನ್ನು ನೆಕ್ಕಿದ್ದಾರೆ ವರ್ಷಾನುವರ್ಷ ಹಾಲುಗಾಣದ ಈ ಜನರು, ನಿದ್ದೆಗಣ್ಣಿನಲ್ಲಿಯಾದರೂ ಈ ಹಾಲನ್ನು ಸವಿದೇ ಸವಿದಿದ್ದಾರೆ. ಅವರಲ್ಲಿ ನಾನೂ ಒಬ್ಬ!

ಅವರು ಭ್ರಾಮಕವೆನ್ನುವ ಬೇರೊಂದು ಮಾತು ಇದು:— ಬೆಳುದಿಂಗಳು ಶುಭ್ರವಾದ ಶ್ವೇತಾಂಬರದಂತೆ ಹರಡಿಕೊಂಡಿದೆ. ಯಾವಳೋ ಒಬ್ಬ ನಲ್ಲೆ ಸುರತಾನಂತರದ ಮಬ್ಬಿನಲ್ಲಿ ಬೆಳ್ಳಂಗೆಡೆದ ಬೆಳುದಿಂಗಳನ್ನು ನೋಡಿ, ತಾನು ತನ್ನ ಶ್ವೇತಾಂಬರವನ್ನು ಮುಸುಕೆಳೆದುಕೊಳ್ಳುತ್ತಿದ್ದೇನೆಂದು ಭ್ರಮಿಸಿದಳಂತೆ— ಇದು ಪೂರ್ಣ ಅಬದ್ಧವೆಂದು ಜನ ದೂರುತ್ತಾರೆ. ಆದರೆ ಇದು ಸತ್ಯವೆಂದೂ ಸಾಧಾರಣವೆಂದೂ ನನ್ನ ಕಲ್ಪನೆ. ಏಕೆಂದರೆ ಸುರತಾನಂತರದ ಮಬ್ಬಿನ ಮಾತು ಹಾಗಿರಲಿ, ಅದೆಷ್ಟೋ ಜನರು ಮಬ್ಬಿಲ್ಲದಾಗಲೂ ಈ ಬೆಳುದಿಂಗಳ ಹಚ್ಚಡವನ್ನು ಹೊದೆದುಕೊಂಡಿದ್ದಾರೆ. ಎಂದೆಂದೂ ತುಣುಕು ಬಟ್ಟೆ ಸಿಗಲಾರದ ಈ ಜನರು, ನಿದ್ದೆಗಣ್ಣಿನಲ್ಲಿಯಾದರೂ ಈ ಹಚ್ಚಡವನ್ನು ಹೊದ್ದೇ ಹೊದೆದುಕೊಂಡಿದ್ದಾರೆ. ಅವರಲ್ಲಿ ನಾನೂ ಒಬ್ಬ!

## ೨

## ಕಲ್ಪನೆಯು ಕಿವಿ ಹಿಂಡಿದಾಗ:

ಕಲ್ಪನೆಯ ಮಹತ್ತ್ವಾಕಾಂಕ್ಷಿ ಶಿಶು ತಾನು ರಾಜ್ಯ–ಸಾಮ್ರಾಜ್ಯಗಳನ್ನಾಳುವ ಮೂರ್ಧಾಭಿಷಿಕ್ತ ಚಕ್ರವರ್ತಿಯೆಂದು ಶ್ರೀಮದ್ಗಾಂಭೀರ್ಯದಿಂದ ತುಸುಕಾಲ ಮೆರೆಯುತ್ತಿತ್ತು.

ಆಗಲೇ ಯಥಾರ್ಥತೆಯ ಮುದಿಯಜ್ಜ ಆ ಕೂಸಿನ ಕಿವಿ ಹಿಂಡಿ ಹೇಳಿದ: "ನೀನು ರಾಜ್ಯ–ಸಾಮ್ರಾಜ್ಯಗಳನ್ನಾಳುವ ಚಕ್ರವರ್ತಿಯಲ್ಲ ಬೀದಿಯ ಭಿಕಾರಿ."

ಕಲ್ಪನೆಯ ಶಿಶು ತಾನು ಸಕಲ ರಾಜವೈಭವ ಪರಿಪೂರ್ಣವಾದ ರಾಜವಾಡೆಯಲ್ಲಿ ಮೆರೆಯುತ್ತಿದ್ದೇನೆಂದು ಕ್ಷಣಕಾಲ ವಿಜೃಂಭಿಸುತ್ತಿತ್ತು.

ಅಷ್ಟರಲ್ಲೇ ಯಥಾರ್ಥತೆಯ ಅನುಭವಿ ಅಜ್ಜ, ಆ ಮೆರೆದಾಡುವ ಮಗುವಿನ ಕಿವಿಹಿಂಡಿ ಹೇಳಿದ. "ನೀನು ಮೆರೆಯುತ್ತಿರುವ ಈ ಸ್ಥಳವೇನು ರಾಜಗೃಹವಲ್ಲ. ಇದು ಯಾವನೋ ದಾನಿ ಕರುಣಿಸಿ ಕೊಟ್ಟ ಧರ್ಮಛತ್ರದ ನೆರಳಿನ ಮೂಲೆ"

ಕಲ್ಪನೆಯ ವಿಲಾಸಿ ಶಿಶು, ತಾನು ಸುಪ್ಪತ್ತಿಗೆಯಲ್ಲಿ ಹೊರಳಾಡುತ್ತಿರುವೆನೆಂದೂ ಈ ಹಂಸತೂಲಿಕಾ ತಲ್ಪಗಳು ತನಗೊಬ್ಬನಿಗಾಗಿಯೇ ಸೃಷ್ಟಿಸಲ್ಪಟ್ಟಿವೆಯೆಂದೂ ನಿಮಿಷವೆರಡು ನಿಮಿಷ ಎಂದುಕೊಂಡಿತು.

ಆಗ, ವಾಸ್ತವತೆಯ ಮುದಿಯಜ್ಜ ಆ ಹುಚ್ಚು ಮಗುವಿನ ಕಿವಿ ಹಿಂಡಿ ಹೇಳಿದ: "ಎಲ್ಲಿಯ ಹಂಸತೂಲಿಕಾತಲ್ಪ! ಎಲ್ಲಿಯ ಸುಪ್ಪತ್ತಿಗೆ! ನೀನು ಹೊರಳಾಡುತ್ತಿರುವುದು ಬರಿ ನೆಲದಲ್ಲಿ!"

ಆ ಅಜ್ಜ ಏನು ಹೇಳಿದರೂ, ಕಿವಿ ಹಿಂಡಿದರೂ ಕಲ್ಪನೆಯ ಶಿಶು ಕೇಳಲಿಲ್ಲ. ತಿರುಗಿ ಅದು ತಾನು ತನಗೆಂದು ರಾಜಕನ್ಯೆಯರು ತಂದ ಹಾಲು-ಜೇನುಗಳನ್ನು ತುಟಿಗೆ ತಾಗಿಸುತ್ತ ತಟುಕುತಟುಕಾಗಿ ಕುಡಿಯುತ್ತಾ ಅಮೃತಸದೃಶವಾದ ಈ ಪಾನೀಯಕ್ಕೆ ಮೆಚ್ಚಿರುವೆನೆಂದು ಹೇಳಿಕೊಂಡಿತು.

ಅಷ್ಟರಲ್ಲಿ ಯಥಾರ್ಥತೆಯ ಅನುಭವಿ ಅಜ್ಜ, ಆ ಕನವರಿಸುವ ಕೂಸಿನ ಕಿವಿಹಿಂಡಿ ಹೇಳಿದ: "ನೀನೀಗ ಸವಿಯುತ್ತಿರುವುದು ಹಾಲು-ಜೇನುಗಳನ್ನಲ್ಲ. ಸೂರಿನೆಡೆಯಿಂದ ತೊಟಕಿಡುವ ಮಳೆಯ ಹನಿಗಳನ್ನು!"

ಮಗು ಎಂದೂ ಒಪ್ಪುವಂತಿರಲಿಲ್ಲ. ಆದರೆ ಆ ಛತ್ರದ ಸೂರಿನೆಡೆಯಿಂದ ಧಾರೆಯಾಗಿ ಇಳಿದ ನೀರು, ಮಗುವಿನ ಕಿವಿಹಿಂಡಿತು. ಮಗು ಕಣ್ತೆರೆದು ಮೇಲಿಂದ ಸುರಿದ ಮಳೆನೀರಿನಿಂದ ಒದ್ದೆಯಾದ ತನ್ನ ಹರಕು ಬಟ್ಟೆಯನ್ನು ಹಿಂಡಿ ಬಿಸಿಲಿಗೆ ಹರವಿಕೊಂಡಿತು.

ಲೌಕಿಕಭಾವದ ಸಾಮಾನ್ಯ ಜನತೆಗೆ ಕಲ್ಯಾಣಕಾರಿಯೆಂದು ತೋರಿದುದರಿಂದಲೇ, ಸ್ವಲ್ಪಕಾಲದಲ್ಲಿಯೇ ಬುದ್ಧಧರ್ಮ ಜಗತ್ತಿನ ಬಹುಭಾಗದಲ್ಲಿ ವ್ಯಾಪಿಸಿ ನೆಲೆನಿಂತಿತು.

ಭಾರತೀಯರ ಹೃದಯಗತವಾದ ಆಸ್ತಿಕಭಾವನೆಯ ಮೂಲಕ, ಬುದ್ಧನ ಸಂಪೂರ್ಣಧರ್ಮವು ಭಾರತದಲ್ಲಿ ಇಂದು ಬಹುಕಾಲ ಉಳಿದಿಲ್ಲವಾದರೂ, ಅವನ ತರುವಾಯ ಉದಿಸಿಬಂದ ನಮ್ಮ ಮತಾಚಾರ್ಯರ ಮತಬೋಧೆಯ ಮೇಲೆ, ಬುದ್ಧನ ಸತ್ಯತತ್ತ್ವಗಳು ತಮ್ಮ ಪ್ರಭಾವವನ್ನು ಬೀರದೆ ಬಿಟ್ಟಿಲ್ಲ. ಪ್ರತಿಯೊಬ್ಬ ಮತಾಚಾರ್ಯರೂ ಅಹಿಂಸೆ, ದಯೆ, ತ್ಯಾಗ, ತಪಸ್ಸು, ಮಾನವಬಂಧುತ್ವ ಇವುಗಳನ್ನು ಒತ್ತಿಹೇಳದೆ ಬಿಟ್ಟಿಲ್ಲ. ಹಿಂಸಾಮಯವಾದ ವೈದಿಕಯಜ್ಞಗಳು ಧರ್ಮದಲ್ಲಿ ಗೌಣಸ್ಥಾನವನ್ನು ಪಡೆದುವು; ಮಾನವನ ಜ್ಞಾನದ ಪರಿಪೂರ್ಣತೆಯೇ ಮೋಕ್ಷಕ್ಕೆ ಕಾರಣವೆಂಬ ಭಾವನೆ ನಮ್ಮಲ್ಲಿ ನೆಲಸಿನಿಂತಿತು.

ಇಂದು ಮತ್ತೆ ನಮಗೆ ಬುದ್ಧನ ಬೋಧೆಯು ಅವಶ್ಯಕವೆನಿಸುವುದಕ್ಕೆ ಕಾರಣವೆಂದರೆ, ವಿಜ್ಞಾನದ ಬೆಳವಣಿಗೆಯ ಪ್ರಭಾವ, ಭಾರತೀಯರಲ್ಲಿಯೂ ಆಸ್ತಿಕಬುದ್ಧಿಯನ್ನು ಸರಿಸಿ, ನಾಸ್ತಿಕ ಭಾವನೆಯನ್ನು ಬೆಳೆಸತೊಡಗಿದುದು. ಇಂದು ನಮ್ಮ ರಾಷ್ಟ್ರದಲ್ಲಿಯೂ ಬಹುಜನರು ಲೌಕಿಕವಾದಿಗಳಾಗಿದ್ದಾರೆ. ಆಸ್ತಿಕರ ಪ್ರಧಾನ ಮತತತ್ತ್ವಗಳು ಸಮಾಜದ ವಿಚ್ಛಿನ್ನತೆಗೆ ಕಾರಣವಾದುದರಿಂದ, ಸಮಾಜಸಂಘಟನೆಯನ್ನು ಬಯಸುವ ಸಂಘ–ಸಂಸ್ಥೆಗಳೂ, ಜನನಾಯಕರೂ ಲೌಕಿಕವಾದಕ್ಕೇ ಪ್ರಾಧಾನ್ಯವನ್ನು ಕೊಡುತ್ತಲಿದ್ದಾರೆ. ಲೌಕಿಕಜೀವನವನ್ನು ಸುಂದರಗೊಳಿಸಬಹುದಾದ ಮತತತ್ತ್ವಗಳಲ್ಲಿ, ಬೌದ್ಧಮತವನ್ನು ಬಿಟ್ಟರೆ ಇನ್ನೊಂದು ಯಾವುದೂ ಇಲ್ಲ. ಇದನ್ನು ಅರಿತುಕೊಂಡೇ ನಮ್ಮ ಭಾರತೀಯ ಜನತಾಸರಕಾರವು, ಜನತೆಯ ಕಣ್ಣೆದುರು ಬುದ್ಧನ ಆದರ್ಶಗಳನ್ನು ಇರಿಸಲು ಹವಣಿಸುತ್ತಲಿದೆ. ಇದೆಲ್ಲ ರಹಸ್ಯಜ್ಞಾನವು ಎಲ್ಲರಿಗೂ ಆಗಿ ಬುದ್ಧಜಯಂತ್ಯುತ್ಸವವನ್ನು ನಾವು ಆಚರಿಸಿದ್ದರೆ, ಉತ್ಸವ ಸಮಾರಂಭಗಳಲ್ಲಿ ಸ್ವಯಂಪ್ರೇರಣೆ—ಪ್ರಾಮಾಣಿಕತನಗಳು ಕಂಡುಬರಬಹುದಾಗಿತ್ತು.

ರಾಜಕಾರ್ಯದಲ್ಲಿಯ ಒಂದು ಸಾಧನೆಯೆಂದು ಈ ಬುದ್ಧಮಹೋತ್ಸವವನ್ನು ನಮ್ಮ ರಾಷ್ಟ್ರ ಆಚರಿಸಿತೆಂದೂ ಕೆಲವರು ಮಾತನಾಡುವುದನ್ನು ನಾವು ಕೇಳುತ್ತಲಿದ್ದೇವೆ. ಅವರ ವಾದವೆಂದರೆ: ಪೂರ್ವ ಏಸಿಯದ ರಾಷ್ಟ್ರಗಳೆಲ್ಲ ಹೆಚ್ಚಾಗಿ ಬುದ್ಧಧರ್ಮದ ಅನುಯಾಯಿಗಳಿಂದ ತುಂಬಿರುವಾಗಿವೆ. ಸಾಂಸ್ಕೃತಿಕ ಸಂಬಂಧವನ್ನು ಬೆಳೆಸಿ, ಆ ರಾಷ್ಟ್ರಗಳ ಸ್ನೇಹದೃಷ್ಟಿಯನ್ನು ಭಾರತದ ಕಡೆಗೆ ತಿರುಗಿಸಿಕೊಳ್ಳಬೇಕೆಂಬುದು ಈ ಬುದ್ಧಮಹೋತ್ಸವದ ಉದ್ದೇಶವಂತೆ. ಹಾಗೂ ಇದ್ದರೆ ಇರಲಿ, ಯಾರುಬೇಡನ್ನುತ್ತಾರೆ? ಯುದ್ಧಬೇಕೆನ್ನುವ ಹಿಂಸಾಪ್ರಿಯ ರಾಷ್ಟ್ರಗಳ ಸ್ನೇಹ-ಸಹಕಾರಕ್ಕಿಂತಲೂ ಯುದ್ಧಬೇಡವೆನ್ನುವ ತತ್ತ್ವದ ರಾಷ್ಟ್ರಗಳ ಸ್ನೇಹ–ಸಹಕಾರಗಳಿಂದ ಭಾರತಕ್ಕೂ ಕಲ್ಯಾಣವಾದೀತು; ಜಗತ್ತಿಗೂ ಕಲ್ಯಾಣವಾದೀತು. ರಾಜಕಾರ್ಯದಲ್ಲಿ ವಂಚನೆ, ಅಸತ್ಯ, ಕುಟಿಲತೆಗಳಿದ್ದರೆ ಅದು ನಿಂದ್ಯವೆನಿಸೀತು. ರಾಷ್ಟ್ರಹಿತದ–ಮಾನವಹಿತದ ದೃಷ್ಟಿಯಿಂದ ನಡೆಸುವ ರಾಜಕಾರ್ಯದ ಯಾವ ಚಟುವಟಿಕೆಗಳಿಂದಲೂ ಯಾರಿಗೂ ಅಹಿತವಾಗದು. ಸ್ನೇಹವು ಸಮಾನಶೀಲವಿದ್ದಲ್ಲಿಯೆ ಸಾಧ್ಯವೆಂಬುದನ್ನು ಎಲ್ಲರೂ ಒಪ್ಪುವರು. ಮಿಕ್ಕ ಬೌದ್ಧರಾಷ್ಟ್ರಗಳೊಂದಿಗೆ ಸ್ನೇಹ ಬೆಳೆಸುವ ಮಹೋದ್ದೇಶದಿಂದ ಭಾರತವೂ ತನ್ನ ಸಮಾನಶೀಲತೆಯನ್ನು ಈ ಬುದ್ಧಜಯಂತ್ಯುತ್ಸವದ ಆಚರಣೆಯ ಮೂಲಕ ತೋರಿಕೊಂಡರೆ ಅದರಲ್ಲಿ ತಪ್ಪೇನಿದೆ, ನಷ್ಟವೇನು ಇದೆ?

ಏನೇ ಇರಲಿ, ಭಾರತೀಯರು ಯಾವ ಆದರ್ಶ–ಶ್ರದ್ಧೆಗಳಿಗೂ ಅವಕಾಶ ತಪ್ಪುತ್ತ ನಡೆದಿರುವ ಈ ಕಾಲದಲ್ಲಿ, ಕೇವಲ ಲೌಕಿಕ ಶಾಂತಿ ಸಮಾಧಾನಗಳನ್ನೇ ಕುರಿತು ಬೋಧಿಸಿದ ಬುದ್ಧಭಗವಾನನ ತತ್ತ್ವಗಳ ಮೇಲಾದರೂ ನಿಜವಾದ ಶ್ರದ್ಧೆ ನಮ್ಮ ಜನರಲ್ಲಿ ಮೂಡಲಿ. ಅದಕ್ಕಾಗಿ ನಮ್ಮ ಸರಕಾರಗಳು ಪ್ರಾಮಾಣಿಕತನದಿಂದ ಪ್ರಯತ್ನಿಸಲಿ

## ಜಯಂತಿಯ ಹಿತಚಿಂತಕರಲ್ಲಿ

ಹೊಸವರ್ಷದ ಪ್ರಾರಂಭದ ಪ್ರತಿಸಲ ನಮ್ಮ ಹಿತಚಿಂತಕರಲ್ಲಿ ಬಿನ್ನವಿಸಿಕೊಳ್ಳುವುದೊಂದು ಜಯಂತಿಯ ಸಂಪ್ರದಾಯವೇ ಆಗಿದೆ. ಈ ಬಿನ್ನಹದ ಆವಶ್ಯಕ ಇಲ್ಲದಂತಾಗುವವರೆಗೆ, ಅನಿವಾರ್ಯವಾಗಿ ನಾವು ಈ ಸಂಪ್ರದಾಯವನ್ನು ನಡೆಸಿಕೊಂಡೇ ಸಾಗಬೇಕಾಗಿದೆ.

ಜಯಂತಿಯ ಚಂದಾದಾರರು ಬೆಳೆಯಬೇಕು. ಆದುದರಿಂದ, ಪ್ರತಿಯೊಂದು ಕನ್ನಡ ಕುಟುಂಬದಲ್ಲಿಯೂ ಜಯಂತಿಗೆ ಎಡೆ ದೊರೆಯುವಂತೆ, ಅಲ್ಲಲ್ಲಿಯ ಕನ್ನಡ ಪ್ರೇಮಿಗಳೆಲ್ಲ ಸಹಕರಿಸುತ್ತಿರಬೇಕು. ಕನ್ನನಾಡಿನ ವಾಚನಾಲಯಗಳೆಲ್ಲ ಜಯಂತಿಗೆ ಸ್ವಾಗತವನ್ನೀಯಬೇಕು.

ಆರ್ಥಿಕ ಅನುಕೂಲತೆಯಾದಲ್ಲಿ, ಜಯಂತಿಯ ಅಂತರಂಗ–ಬಹಿರಂಗ ಸೌಂದರ್ಯ ಹೆಚ್ಚುತ್ತ ಹೋಗುವುದೆಂಬ ಮಾತನ್ನು ಎಲ್ಲರೂ ಜ್ಞಾಪಕದಲ್ಲಿ ಇರಿಸಿಕೊಂಡು ಜಯಂತಿಯ ಚಂದಾದಾರರನ್ನು ಹೆಚ್ಚಿಸಬೇಕು.

— ಸಂಪಾದಕರು

# ಮೂರು ಭಾವರೂಪಕಗಳು

ಶ್ರೀ. ಹಾ. ವೆಂ. ನಾಗೇಶ ಕಲಬುರ್ಗಿ

## ೧

## ಕವಿಸಮಯಗಳು ಮತ್ತು ಅಲಂಕಾರಗಳು

ಕವಿಗಳನ್ನು ಛಾಂದಸರೆಂದೂ ವಿವೇಕಶೂನ್ಯರೆಂದೂ ಜನ ಬೆನ್ನ ಹಿಂದೆ ಜರಿಯುತ್ತಾರೆ. ಅಸಾಧ್ಯಕೋಟಿಯನ್ನು ಎಳೆತಂದು ತಮ್ಮ ಕವಿಸಮಯಗಳಲ್ಲಿ ತುರುಕುತ್ತಾರೆಂದು ಬೈಯುತ್ತಾರೆ. ಆನೆಯ ಕುಂಭಸ್ಥಳದಲ್ಲಿ ಮುತ್ತು ಅಡಗಿದೆಯೆಂದು ಭ್ರಮಿಸಿದರೆಂದು ದೂರುತ್ತಾರೆ. ಬೆಳುದಿಂಗಳಲ್ಲಿ ಚಕ್ರವಾಕಗಳು ತಮ್ಮ ಪ್ರಿಯಸಿಗಾಗಿ ಕಾದು ಕುಳಿತಿರುವುವು ಎಂದು ಸುಳ್ಳನ್ನು ಗಳಪುವರೆಂದು ಛೀಮಾರಿ ಹಾಕುತ್ತಾರೆ. ಅವರಲ್ಲಿ ನಾನೂ ಒಬ್ಬ!

ಕಾವ್ಯಗಳಲ್ಲಿ ಬರುವ ಇನ್ನೊಂದು ಮಾತು ನನಗೆ ಗೊತ್ತು— ಬೆಳುದಿಂಗಳು ಹಾಲು ಚೆಲ್ಲಿದಂತಿದೆ. ಒಂದು ಬೆಕ್ಕು ಇದಾವ ಪುಣ್ಯಾತ್ಮ ಚೆಲ್ಲಿದ ಹಾಲೆಂದು ತನ್ನ ನಾಲಗೆಯಿಂದ ತುಟಿಗಳನ್ನು ಸವರಿಕೊಂಡಿತಂತೆ— ಇದು ಪೂರಾ ಸುಳ್ಳೆಂದು ಜನ ದೂರುತ್ತಾರೆ. ಆದರೆ ಇದು ಸತ್ಯವೆಂದೂ ಸಾಧಾರಣವೆಂದೂ ನನ್ನ ಕಲ್ಪನೆ. ಏಕೆಂದರೆ ಮೂಕ ಪ್ರಾಣಿಯಾದ ಬೆಕ್ಕಿನ ಮಾತು ಹಾಗಿರಲಿ, ಎಷ್ಟೋ ಮನುಷ್ಯರೂ ಈ ತಿಂಗಳ ಬೆಳಕಿನ ಹಾಲನ್ನು ನೆಕ್ಕಿದ್ದಾರೆ. ವರ್ಷಾನುವರ್ಷ ಹಾಲುಗಾಣದ ಈ ಜನರು, ನಿದ್ದೆಗಣ್ಣಿನಲ್ಲಿಯಾದರೂ ಈ ಹಾಲನ್ನು ಸವಿದೇ ಸವಿದಿದ್ದಾರೆ. ಅವರಲ್ಲಿ ನಾನೂ ಒಬ್ಬ!

ಅವರು ಭ್ರಾಮಕವೆನ್ನುವ ಬೇರೊಂದು ಮಾತು ಇದು:— ಬೆಳುದಿಂಗಳು ಶುಭ್ರವಾದ ಶ್ವೇತಾಂಬರದಂತೆ ಹರಡಿಕೊಂಡಿದೆ. ಯಾವಳೋ ಒಬ್ಬ ನಲ್ಲೆ ಸುರತಾನಂತರದ ಮಬ್ಬಿನಲ್ಲಿ ಚೆಲ್ಲಿಂಗಡೆದ ಬೆಳುದಿಂಗಳನ್ನು ನೋಡಿ, ತಾನು ತನ್ನ ಶ್ವೇತಾಂಬರವನ್ನು ಮುಸುಕೆಳೆದುಕೊಳ್ಳುತ್ತೇನೆಂದು ಭ್ರಮಿಸಿದಳಂತೆ— ಇದು ಪೂರ್ಣ ಅಬದ್ಧವೆಂದು ಜನ ದೂರುತ್ತಾರೆ. ಆದರೆ ಇದು ಸತ್ಯವೆಂದೂ ಸಾಧಾರಣವೆಂದೂ ನನ್ನ ಕಲ್ಪನೆ. ಏಕೆಂದರೆ ಸುರತಾನಂತರದ ಮಬ್ಬಿನ ಮಾತು ಹಾಗಿರಲಿ, ಎಷ್ಟೋ ಜನರು ಮಬ್ಬಿಲ್ಲದಾಗಲೂ ಈ ಬೆಳುದಿಂಗಳ ಹಚ್ಚಡವನ್ನು ಹೊದೆದುಕೊಂಡಿದ್ದಾರೆ. ಎಂದೆಂದೂ ತುಣುಕು ಬಟ್ಟೆ ಸಿಗಲಾರದ ಜನರು, ನಿದ್ದೆಗಣ್ಣಿನಲ್ಲಿಯಾದರೂ ಈ ಹಚ್ಚಡವನ್ನು ಹೊದ್ದೇ ಹೊದೆದುಕೊಂಡಿದ್ದಾರೆ. ಅವರಲ್ಲಿ ನಾನೂ ಒಬ್ಬ!

---

## ೨

## ಕಲ್ಪನೆಯ ಕಿವಿ ಹಿಂಡಿದಾಗ :

ಕಲ್ಪನೆಯ ಮಹತ್ವಾಕಾಂಕ್ಷಿ ಶಿಶು ತಾನು ರಾಜ್ಯ-ಸಾಮ್ರಾಜ್ಯವನ್ನಾಳುವ ಮೂರ್ಧಾಭಿಷಿಕ್ತ ಚಕ್ರವರ್ತಿಯೆಂದು ಶ್ರೀಮದ್ಗಾಂಭೀರ್ಯದಿಂದ ತುಸುಕಾಲ ಮೆರೆಯುತ್ತಿತ್ತು.

ಆಗಲೇ ಯಥಾರ್ಥತೆಯ ಮುದಿಯಜ್ಜ ಆ ಕೂಸಿನ ಕಿವಿ ಹಿಂಡಿ ಹೇಳಿದ: " ನೀನು ರಾಜ್ಯ-ಸಾಮ್ರಾಜ್ಯಗಳನ್ನಾಳುವ ಚಕ್ರವರ್ತಿಯಲ್ಲ ಬೀದಿಯ ಭಿಕಾರಿ."

ಕಲ್ಪನೆಯ ಶಿಶು ತಾನು ಸಕಲ ರಾಜವೈಭವ ಪರಿಪೂರ್ಣವಾದ ರಾಜವಾಡೆಯಲ್ಲಿ ಮೆರೆಯುತ್ತಿದ್ದೇನೆಂದು ಕ್ಷಣಕಾಲ ವಿಜೃಂಭಿಸುತ್ತಿತ್ತು.

ಅಷ್ಟರಲ್ಲೇ ಯಥಾರ್ಥಕ್ಕೆ ಅನುಭವಿ ಅಜ್ಜ, ಆ ಮೆರೆದಾಡುವ ಮಗುವಿನ ಕಿವಿಹಿಂಡಿ ಹೇಳಿದ, "ನೀನು ಮೆರೆಯುತ್ತಿರುವ ಈ ಸ್ಥಳವೇನು ರಾಜಗೃಹವಲ್ಲ. ಇದು ಯಾವನೋ ದಾನಿ ಕರುಣಿಸಿ ಕೊಟ್ಟ ಧರ್ಮಛತ್ರದ ನೆರಳಿನ ಮೂಲೆ!"

ಕಲ್ಪನೆಯ ವಿಲಾಸಿ ಶಿಶು, ತಾನು ಸುಪ್ಪತ್ತಿಗೆಯಲ್ಲಿ ಹೊರಳಾಡುತ್ತಿರುವೆನೆಂದೂ ಈ ಹಂಸತೂಲಿಕಾ ತಲ್ಪಗಳು ತನಗೊಬ್ಬನಿಗಾಗಿಯೇ ಸೃಷ್ಟಿಸಲ್ಪಟ್ಟವೆಯೆಂದೂ ನಿಮಿಷವೆರಡು ನಿಮಿಷ ಎಂದುಕೊಂಡಿತು.

ಆಗ, ವಾಸ್ತವತೆಯ ಮುದಿಯಜ್ಜ ಆ ಹುಚ್ಚು ಮಗುವಿನ ಕಿವಿ ಹಿಂಡಿ ಹೇಳಿದ: " ಎಲ್ಲಿಯ ಹಂಸತೂಲಿಕಾತಲ್ಪ! ಎಲ್ಲಿಯ ಸುಪ್ಪತ್ತಿಗೆ! ನೀನು ಹೊರಳಾಡುತ್ತಿರುವುದು ಬರಿ ನೆಲದಲ್ಲಿ!"

ಆ ಅಜ್ಜ ಏನು ಹೇಳಿದರೂ, ಕಿವಿ ಹಿಂಡಿದರೂ ಕಲ್ಪನೆಯ ಶಿಶು ಕೇಳಲಿಲ್ಲ. ತಿರುಗಿ ಅದು ತಾನು ತನಗೆಂದು ರಾಜಕನ್ಯೆಯರು ತಂದ ಹಾಲು-ಜೇನುಗಳನ್ನು ತುಟಿಗೆ ತಾಗಿಸುತ್ತ ಚಟುಕು ಚಟುಕಾಗಿ ಕುಡಿಯುತ್ತಾ ಅಮೃತಸದೃಶವಾದ ಈ ಪಾನೀಯಕ್ಕೆ ಮೆಚ್ಚಿರುವೆನೆಂದು ಹೇಳಿಕೊಂಡಿತು.

ಅಷ್ಟರಲ್ಲಿ ಯಥಾರ್ಥತೆಯ ಅನುಭವಿ ಅಜ್ಜ, ಆ ಕನವರಿಸುವ ಕೂಸಿನ ಕಿವಿಹಿಂಡಿ ಹೇಳಿದ: "ನೀನೀಗ ಸವಿಯುತ್ತಿರುವುದು ಹಾಲು-ಜೇನುಗಳನ್ನಲ್ಲ. ಸೂರಿನಡೆಯಿಂದ ತೊಟಕಿಡುವ ಮಳೆಯ ಹನಿಗಳನ್ನು!"

ಮಗು ಎಂದೂ ಒಪ್ಪುವಂತಿರಲಿಲ್ಲ. ಆದರೆ ಆ ಛತ್ರದ ಸೂರಿನೆಡೆಯಿಂದ ಧಾರೆಯಾಗಿ ಇಳಿದ ನೀರು, ಮಗುವಿನ ಕಿವಿಹಿಂಡಿತು. ಮಗು ಕಣ್ತೆರೆದು ಮೇಲಿಂದ ಸುರಿದ ಮಳೆನೀರಿನಿಂದ ಒದ್ದೆಯಾದ ತನ್ನ ಹರಕು ಬಟ್ಟೆಯನ್ನು ಹಿಂಡಿ ಬಿಸಿಲಿಗೆ ಹರವಿಕೊಂಡಿತು.

೩

## ಸುಖದ ಕಲ್ಪನೆ

ರಾಯರು ರಾತ್ರಿಯ ಮುಕ್ಕಾಲು ಭಾಗವೆಲ್ಲ ಹಾಸಿಗೆಯಲ್ಲಿ ಹೊರಳಾಡಿದರು. ಕಣ್ಣಿಗೆ ನಿದ್ರೆಹತ್ತಲೇ ಇಲ್ಲ. ಆ ಮೆತ್ತನ್ನ ಹಾಸಿಗೆಯೂ ಅವರಿಗೆ ಜೊಂಪು ಹಿಡಿಯಲು ಸಮರ್ಥನಾಗಲಿಲ್ಲ. "ಥೂ! ಹಾಳು ನಿದ್ರೆಯೇಕೋ ಬಾರದು" ಎಂದು ಗೊಣಗುತ್ತಾ ರಾಯರು ಪಕ್ಕೆ ಹೊರಳಿಸುತ್ತಿದ್ದರು. ಗಳಿಗೆಗೊಮ್ಮೆ "ಎಂತಹ ಗೋಳು ಈ ಜಾಗರಣೆ! ಎಂತಹ ಹಾಳು ಹಾಸಿಗೆ" ಎನ್ನುತ್ತಾ ನಿಟ್ಟುಸಿರು ಬಿಡುತ್ತಿದ್ದರು.

ಜಾಮವೊಂದು ಕಳೆಯಿತು. ರಾಯರ ಮೇಲೆ ಕನಿಕರಿಸಿ ನಿದ್ರಾದೇವಿ ತನ್ನ ಮುಸುಕನ್ನು ಅವರ ಕಣ್ಣಿಗೆ ಎಳೆದಳು. ಬರು ಬರುತ್ತ ರಾಯರು ಗೋಳು ಹೊಯ್ದುಕೊಳ್ಳುವುದನ್ನೂ ನಿಟ್ಟುಸಿರು ಬಿಡುವುದನ್ನೂ ನಿಲ್ಲಿಸಿದರು. ಗಾಢನಿದ್ರೆ ಅವರನ್ನು ಆವರಿಸಿಕೊಂಡಿತು

ತುಸು ನಿದ್ರಾಭಂಗವಾದಾಗ, ತಾನು ನೆಲದ ಮೇಲೆ ಹೊರಳಾಡುತ್ತಿರುವೆನೆಂಬ ಅರಿವಾಯಿತು ಅವರಿಗೆ. "ಛೀ! ಈ ಒರಟು ನೆಲದಲ್ಲಿ ನಿದ್ರೆಯೆಂತು ಬಂದೀತು! ಹಾಸಿಗೆಯೇ ಚೆನ್ನು!" ಎನ್ನುತ್ತ ಅರೆನಿದ್ದೆಯ ಮಬ್ಬಿನಲ್ಲೇ ಹೊರಳುತ್ತಾ ಹೊರಳುತ್ತಾ ಅವರು, ಪುನಃ ತಮ್ಮ ಹಾಸಿಗೆಯ ಕಡೆ ಸಾಗಿದರು. ಮೆತ್ತನ್ನ ಹಾಸಿಗೆ ಈಗ ಅವರಿಗೆ ತುಸು ಸಾಂತ್ವನವೀಯುವಂತೆ ಕಂಡಿತು. ರಾಯರು "ಅಮ್ಮ....ಇದೇ ಸುಖ!" ಎನ್ನುತ್ತ ಹಾಸಿಗೆಯನ್ನು ಅಪ್ಪಿದರು. ಹಿಂದೆ ಸಿಗದೇ ಹೋದ ಸುಖದ ಕಲ್ಪನೆಯೊಂದನ್ನು ಈಗ ಅಲ್ಲಿ ಅವರು ಕಂಡು ಕೊಂಡರು!

---

## ಬೇಕೆನಗೆ ಕೈದೀಪವು

ಶ್ರೀ. ಜಿ. ಶಂಕರಭಟ್ಟ, ಬಿ. ಎ., ಬಿ. ಟಿ. ಉಜಿರೆ

೧

ಎದೆಯ ಬಾಂದಳದಲ್ಲಿ ಹಿಂಡಾಗಿ ಚಲಿಸುತಿವೆ
ನೈರಾಶ್ಯದಭ್ರಂಗಳು,
ಬಾಳಿನಾ ಬಯಲಲ್ಲಿ ತೊಳಲಾಟ ನಡೆಯುತಿದೆ
ಸುತ್ತೆಲ್ಲ ಕರಿಛಾಯೆಯು;
ಬೀಸುತಿದೆ ಅನವರತ ಘೋರೆಂದು ಗರ್ಜಿಸುತ
ಸೋಲಿನಾ ಸುಳಿಗಾಳಿಯು;
ಮುಗಿಲಿನಲಿ ಹೋರಾಟ, ಘರ್ಷಣೆಯ ಗುಡುಗಾಟ,
ಕಣ್ಣೀರೆ ನವವರ್ಷವು!

೨

ಬಾಲ್ಯದಲಿ ಬಿತ್ತಿದೆನು ಹತ್ತಾರು ನೂರಾರು
ಆಶೆಗಳ ಕಣಜವನ್ನೆ;
ಬೆಳೆದಂತೆ ಬೆಳೆದಿಹವು ಬದುಕನ್ನು ಬೆಂಬತ್ತಿ
ಬಳ್ಳಿ ಬಂಗಾರವೆನಿಸಿ;
ಎನಿತೊಂದು ಕಾಲದಿಂ ಕಾದಿದ್ದೆ ಕಾತರದಿ
ಸಫಲತೆಯ ಹೂವಿಗಾಗಿ;
ಕೊನೆಗಿಲ್ಲಿ ಅರಳಿತ್ತೈ— ವಿಫಲತೆಯ ಮುಗುಳೊಂದು
ನೋವೆ ಮಕರಂದವೆನಿಸಿ!

೩

ಪ್ರಪಾತದಾಘಾತ ಸಹಿಸಿ ನಿಂದಿದೆ ಕಠಿಣಶಿಲೆ
ಜೋಗಿನಾ ಜಲಪಾತದಿ;
ಸಂಕಷ್ಟ ಸಂತತಿಗೆ ರಕ್ಷಣೆಯ ಬಲ ನೀಡು
ಕಲ್ಲೆದೆಯೆ ವಜ್ರಾಯುಧ.
ಮಳೆಯೇನು? ಚಳಿಯೇನು? ಕಾಲದಾ ಗತಿಯೇನು?
ಘನವಂತೆ ಹಿಮವಂತನು;
ನೋವು–ನಲವುಗಳೇನು? ನಿಟ್ಟನಿಲ್ಲುವ ಧೀರ.
ಹೃದಯವೇ ಕೈಲಾಸವು.
ನೈರಾಶ್ಯದಭ್ರದಲಿ ಕಣ್ಸೆಳೆವ ಕೋಲ್ಮಿಂಚು
ಬೇಕೆನಗೆ ಕೈದೀಪವು.

# ಗುಲಾಬಿ

( ಮನೋವಿಶ್ಲೇಷಣಾತ್ಮಕ ಕಥೆ )

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

卐

**ಸುಪ್ತಮನಸ್ಸಿನ ವೇದನೆ-ಸಂವೇದನೆಗಳ ಪರಿಣಾಮ ಜಾಗೃತ ಮನಸ್ಸಿಗೆ ಅರ್ಥವಾಗುವುದೇ ಇಲ್ಲ. ಆದುದರಿಂದಲೇ ಜೀವನದಲ್ಲಿ ಅನೇಕ ಸಲ ಕಹಿರಸ ಕುಡಿಯಬೇಕಾಗುತ್ತದೆ. ರಘುವಿಗೆ ಗುಲಾಬಿಬಣ್ಣ, ಗುಲಾಬಿಹೂ ಬೇಸರಕ್ಕೆ ಕಾರಣವಾದುದು ಏತಕ್ಕಾಗಿ?**

卐

ದೀಪಾವಳಿಗಾಗಿ ಬಗೆಬಗೆಯ ಸೀರೆಗಳು ಬಂದಿದ್ದುವು. ಸೀತೆಯ ಮುಂದೆ ಅಂಗಡಿಯವನು, ಸೀರೆಗಳನ್ನು ಬಿಚ್ಚಿ ಬಿಚ್ಚಿ ತೋರಿಸಿ ರಾಶಿ ಹಾಕಿದ. ಕಡೆಗೆ ಸೀತೆಯ ಮನಸ್ಸಿಗೊಪ್ಪುವ ಸೀರೆ ಕಂಡಿತು— ಅಚ್ಚ ಹಸಿರು ಹಿನ್ನೆಲೆಯ ಮೇಲೆ ಚಿತ್ರಿತವಾದ ದೊಡ್ಡ ದೊಡ್ಡ ಗುಲಾಬಿಗಳು ಒಡಲುತುಂಬ; ಅಂಚಿಗೆ ಗುಲಾಬಿಗೊಂಚಲುಗಳು. ಸೀರೆ ಅಂದವಾಗಿತ್ತು, ಅಗ್ಗವಾಗಿತ್ತು. ಕೇವಲ ಹದಿಮೂರು ರೂಪಾಯಿ.

" ಜಮುನಾ, ಈ ಚರಪೆಯ ಸೀರೇನಾ ಇಬ್ಬರೂ ತೆಗೆದು-ಕೊಳ್ಳೋಣವೇ ? ತುಂಬಾ ಚೆನ್ನಾಗಿದೆ. "

ಜಮುನಾ ಒಪ್ಪಿದಳು. ಸೀತಾ ರಘುವಿನತ್ತ ತಿರುಗಿದಳು:

" ಇಲ್ಲಿ ನೋಡಿ, ಈ ಸೀರೆ ಎಷ್ಟು ಸೊಗಸಾಗಿದೆ. ಹದಿಮೂರೇ ರೂಪಾಯಿ. ತೆಗೆದುಕೊಳ್ಳೋಣವೇ ? "

"ರಘು ಸೀತೆಯ ಯಾವ ಆಶಯವನ್ನೂ ವಿರೋಧಿಸುತ್ತಿರಲಿಲ್ಲ. ಆದೇಕೋ ಆ ಗುಲಾಬಿಗಳನ್ನು ನೋಡಿ ಅವನ ಮನಸ್ಸು ಅಪ್ರಸನ್ನವಾಯಿತು, ಕಠಿಣವಾಯಿತು.

" ಬೇಡ, ಸೀತಾ. ಈ ಸೀರೆ ಮಾತ್ರ ಬೇಡ. ದುಡ್ಡು ಹೆಚ್ಚಾದರೂ ಚಿಂತೆಯಿಲ್ಲ. ಬೇರೆಯದನ್ನು ಆರಿಸು. "

ಸೀತೆಯ ಮುಖ ಪೆಚ್ಚಾಯಿತು. ಡಾಕ್ಟರರ ಮಗಳು ಜಮುನಾ ಬಂದಿರುವಾಗಲೇ, ರಘು ಹೀಗೆ ನಿಷ್ಠುರವಾಗಿ ನುಡಿದು ಅಪಮಾನ ಮಾಡಬೇಕೇ—ಎಂದು ತುಂಬಾ ಅಸಮಾಧಾನಪಟ್ಟಳು.

" ಬಿಡಿ ಸೀತಮ್ಮ. ನಾನದನ್ನ ತೆಗೆದುಕೊಳ್ತೇನೆ. ನೀವು ಬೇರೆಯದನ್ನು ಹುಡುಕಿ." ಎಂದಳು ಜಮುನಾ. ಸೀತೆ ಮನಸ್ಸೊಂದು ಸೀರೆಯನ್ನು ಕೊಳ್ಳಲೇ ಇಲ್ಲ. ಮಕ್ಕಳಿಗೆ ಬಟ್ಟೆಗಳನ್ನು ಕೊಂಡಳು ಮಾತ್ರ. ರಘು ಸೈಕಲ್ಲಿನಲ್ಲಿ ಆಫೀಸಿಗೆ ಹೋದ. ಸೀತಾ, ಜಮುನಾ ಮಾರ್ಕೆಟ್ಟಿಗೆ ಹೋದರು.

ಮಾರ್ಕೆಟ್ಟಿನಲ್ಲೂ ಸೀತೆಯ ಮನಸ್ಸನ್ನು ಸೆಳೆದುದು ಗುಲಾಬಿ ಹೂಗಳೇ. ಎರಡಾಣೆ ಕೊಟ್ಟು ಗುಲಾಬಿಯ ಜೋಕೆಯನ್ನು ಕೊಂಡು ತುರುಬಿಗೆ ಮುಡಿದುಕೊಂಡಳು. ಜಮುನಾ ಮಲ್ಲಿಗೆಯ ದಂಡೆ ಕೊಂಡಳು ಹೆಟ್ಟಕ್ಕೆಂದು ಸೀತಾ ಎಂಟಾಣೆಯ ಗುಲಾಬಿ ಹೂಗಳನ್ನು ಕಟ್ಟಿಸಿಕೊಂಡಳು.

" ಏನ್ರೀ ಸೀತಮ್ಮ? ಮಾರ್ಕೆಟಿನಲ್ಲಿರೋ ಗುಲಾಬೀನೆಲ್ಲ ಕೊಳ್ಳುವಂತಿದೆಯಲ್ಲಾ ? "

" ಏಕೆ ಹಾಗಂತೀಯ, ಜಮುನಾ ? "

" ನಿಮ್ಮ ಯಜಮಾನ್ರು ಗುಲಾಬಿಯಿದ್ದ ಸೀರೆ ಬೇಡ ಅಂದ್ರು ಅಂತಾ ಮುಯ್ಯಿ ತೀರಿಸಿಕೊಳ್ಳೋಕೆ ಬರೀ ಗುಲಾಬೀನೇ ಕೊಳ್ತಿದ್ದೀರಲ್ಲಾ ! "

" ಛೀ, ಹಾಗಲ್ಲ. ನನಗೆ ಎಲ್ಲಾ ಹೂಗಳಿಗಿಂತ ಗುಲಾಬಿ ಇಷ್ಟ. ಗುಲಾಬಿಯಷ್ಟು ಕಂಪು ಸೊಂಪು ಇರುವ ಹೂ ಬೇರಿಲ್ಲ. ಹೂಗಳ ರಾಣಿ ಇದು! " ಎಂದು ಸೀತಮ್ಮ ತನ್ನ ಮುಡಿಯಲ್ಲಿದ್ದ ಹೂವನ್ನು ಹೆಮ್ಮೆಯಿಂದ ಮುಟ್ಟಿಕೊಂಡಳು.

ಇಬ್ಬರೂ ಬಸ್ಸು ಹತ್ತಿದರು. ಜಮುನಳ ಮಾತಿನಿಂದ ಸೀತಾಗೆ ಗುಲಾಬಿಸೀರೆಯ ಕಹಿ ಪ್ರಸಂಗ ನೆನಪಾಯಿತು. ರಘುವಿಗೆ ಗುಲಾಬಿ ಎಂದರೆ ಏಕಿಷ್ಟು ಅಸಮಾಧಾನ? ಏಕಿಷ್ಟು ದ್ವೇಷ? ಮೂರು ವರ್ಷಗಳ ಹಿಂದೆ, ಇಂತಹುದೇ ಕಹಿ ಪ್ರಸಂಗ ನಡೆದಿತ್ತು. ಯುಗಾದಿಯ ಹಿಂದಿನ ದಿನ.........

ಸೀತೆಗೆ ಗುಲಾಬಿ ಹೂ ಎಂದರೆ ತುಂಬಾ ಇಷ್ಟ. ಗುಲಾಬಿ ತೋಟ ಮಾಡಬೇಕೆಂಬ ಹಿರಿಯಾಸೆ ಅವಳಿಗೆ. ಆದರೆ ಬೆಂಗಳೂರು ವಾಸ, ಬೆಂಕಿಪೊಟ್ಟಣದಂತಹ ಮನೆ. ಗಿಡಬಳ್ಳಿ ಬೆಳೆಸಲು ಸ್ಥಳವಿರಲಿಲ್ಲ. ಅಂಗಳಕ್ಕೆಲ್ಲಾ ಕಲ್ಲುಚಪ್ಪಡಿ. ಅಂಗೈ ಅಗಲದ ನೆಲವೂ ಇರಲಿಲ್ಲ. ಸೀತೆಯ ಉತ್ಸಾಹ ಕುಗ್ಗಲಿಲ್ಲ. ತುಳಸಿಯ ವೃಂದಾವನದ ಸುತ್ತ ಕುಂಡಗಳನ್ನಿಟ್ಟು, ಗುಲಾಬಿ ಗಿಡ ಬೆಳೆಸಿದಳು. ಗುಲಾಬಿ ಗಿಡ ಬೆಳೆದು ತನ್ನ ಮೊದಲಹೂವನ್ನು ಬಿಟ್ಟಿತ್ತು. ಸೀತೆ ಹಿಗ್ಗಿ ಹೋದಳು. ಮಾರನೆಯ ದಿನ ಯುಗಾದಿ ಆ ದಿನ ಕಿತ್ತು ದೇವರಿಗರ್ಪಿಸಿ, ಪ್ರಸಾದ ಮುಡಿಯುತ್ತೇನೆ – ಎಂದುಕೊಂಡಳು.

ಬೆಳಗ್ಗೆ ತುಲಸಿಯ ಮುಂದೆ ರಂಗವಲ್ಲಿಯಿಡಲು ಬಂದು ನೋಡುತ್ತಾಳೆ—ಹೂವನ್ನು ಕಿತ್ತು ದಳ ಉದುರುವಂತೆ ಹಿಸುಕಿ ಹಾಕಿದ್ದಾರೆ, ಮೊಗ್ಗು ಹಿಡಿದಿದ್ದ ಗುಲಾಬಿಗಿಡವನ್ನು ಬುಡಮುಟ್ಟ ಕಡಿದಿದ್ದಾರೆ—ಸೀತಳ ಎದೆ ' ಅಯ್ಯೋ ' ಎಂದು ಬೆಂದಿತು. ಪಕ್ಕದ ಮನೆಯವರೇ ಈ ಕಟುಕಕೃತ್ಯ ಮಾಡಿರಬೇಕೆಂಬ ಸಂಶಯ ಅವಳಿಗೆ. ಸೀತಾ ತಡೆಯಲಾರದೆ ಗದ್ದಲ ಮಾಡಿದಳು. ರಘುವು ಮುಖ ಗಂಟಿಕ್ಕಿಕೊಂಡು ಹೊರಗೆ ಬಂದ.

" ಬೆಳಗಾಗೆದ್ದು ಏನೇ ನಿನ್ನ ಪುರಾಣ ? ಆ ಹಾಳು ಮುಳ್ಳುಗಿಡ ಹೋದರೆ ನಿನ್ನ ಗಂಟು ಹೋಯಿತೇ ? ಅದಕ್ಕೆ ಬದಲು ಸೀಮೆ ಬದನೆಯನ್ನೋ ಬೀನ್ಸನ್ನೋ ಕುಂಡದಲ್ಲಿ ಬೆಳೆ. ಹೊಟ್ಟೆಯೂ ತುಂಬುತ್ತೆ, ನೆರಳೂ ಆಗುತ್ತೆ. " ಎಂದ.

“ ಎಷ್ಟು ಆಸ್ಥೆಯಿಂದ ಆ ಗಿಡಾನ ಜೋಪಾನ ಮಾಡಿದ್ದೆ ಅಂತಾ — ನೋಡಿ ಹೇಗೆ ಮಾಡ್ಬಿಟ್ಟಿದ್ದಾರೆ ಅದರ ಅವಸ್ಥೇನಾ. ”

“ ಯಾರು ಮಾಡಿರೋದು ? ನಾನೇ. ನಾನೇ ಬೆಳಗ್ಗೆ ಕತ್ತರಿಸಿ ಹಾಕಿದೆ. ರಾತ್ರಿ ನಾ ಬರುವಾಗ ನನ್ನ ಪಂಚೆ ಅದಕ್ಕೆ ಸಿಕ್ಕಿ ಹರೀತು. ನಾನೇ ಕತ್ತರಿಸಿ ಹಾಕಿದೆ. ಈಗ ಏಕೆ ಕೂಗ್ತೀಯಾ ? ಬೇಕಾದರೆ ಬಾ — ನನ್ನ ಕೈನೇ ಕತ್ತರಿಸುವೆಯಂತೆ. ”

ರಘು ಹಾಗೆ ಕೋಪಗೊಂಡಿದ್ದನ್ನು ಅವಳೆಂದೂ ನೋಡಿರಲಿಲ್ಲ. ಹಬ್ಬ ಬೇರೆ. ಸೀತೆಯ ಕಣ್ಣಲ್ಲಿ ನೀರು ತುಂಬಿತು.

“ ತಪ್ಪಾಯಿತು ಬಿಡಿ ! ಅದು ನಿಮ್ಮ ಕೆಲಸ ಎಂದು ಗೊತ್ತಿಲ್ಲದೆ ಮಾತಾಡಿದೆ. ” ಎಂದಿದ್ದಳು. ಆ ದಿನವೆಲ್ಲಾ ಅವನಿಗೆ ಊಟ ಬೇಕಾಗಲಿಲ್ಲ.

ಇದಾಗಿ ಮೂರು ವರ್ಷ ಕಳೆದಿದೆ. ಮುಂದೆಂದೂ ರಘು ಹಾಗೆ ಸಿಟ್ಟಾಗಿರಲಿಲ್ಲ. ಆ ದಿನದಂತೆ ಅವಳ ಮಾತಿಗೆ ವಿರೋಧ ತೋರಿಸಿರಲಿಲ್ಲ.

ಈ ದಿನ ತಾನೇ ಏಕೆ ವಿರೋಧಿಸಬೇಕಾಗಿತ್ತು ? ಕೇವಲ ಹ[illegible] ಮೂರು ರೂಪಾಯಿ. ಯಾವ ಗಾಂಪನಾದರೂ ಕೊಡಬಹುದು ಆ ಸೀರೆಗೆ. ಮತ್ತೇಕೆ ಬ್ಯೇಡ ಅಂದರು ? ನಾನು ಸೀರೆಯನ್ನು ಕೊಳ್ಳದೇ ಇದ್ದರೂ ಅವರಿಗೆ ನೋವಾಗಲಿಲ್ಲವಲ್ಲಾ — ಏಕೆ, ಇಷ್ಟು ನಿಷ್ಠುರ ?

“ ಸೀತಮ್ಮ, ಇಳೀರಿ. ನಮ್ಮ [illegible] ಸ್ಟಾಪ್ ಇದು. ಏನೋ ಯೋಚಿಸುತ್ತಿದ್ದೀರಲ್ಲಾ ? ” ಎಂದು ಜಮುನಾ ಅಂದಾಗಲೇ ಅವಳಿಗೆ ಎಚ್ಚರ.

ಜಮುನಾ, ಡಾಕ್ಟರ್ ಜಯರಾಜರ ಮಗಳು. ಸೀತೆಯ ಮನೆಯ ಎದುರೇ ಅವರ ಮನೆ. ಸೀತೆಯದು ಅಚ್ಚುಕಟ್ಟಾದ ಸಂಸಾರ — ಗಂಡ, ಹೆಂಡತಿ ಎರಡು ಮಕ್ಕಳು. ರಘುವಿಗೆ ಸೆಕ್ರೆಟರಿಯೇಟ್‌ನಲ್ಲಿ ಕೆಲಸ. ರಘುವಿನದು ಸಣ್ಣ ಕುಟ್ಟು. ಸೌಕಲು ಮನುಷ್ಯ. ಸಭ್ಯ. ಅವನಿಗೆ ಆಗಾಗ ಉಬ್ಬಸ ತೊಂದರೆಪಡಿಸುತ್ತಿತ್ತು. ಒಮ್ಮೊಮ್ಮೆ ಉಬ್ಬಸ ಬಂದರೆ ಎರಡುಮೂರು ದಿನಗಳಾಗುತ್ತಿತ್ತು ಸುಧಾರಿಸಿಕೊಳ್ಳಲು. ಡಾಕ್ಟರರ ನೆರವಿನಿಂದ ಉಬ್ಬಸ ಬೇಗ ಹತೋಟಿಗೆ ಬರುತ್ತಿತ್ತು.

ರಘು ಮನೆಗೆ ಬರುವ ಹೊತ್ತಿಗೆ ರಾತ್ರಿ ಹತ್ತುಗಂಟೆ. ಸ್ಕೂಟರಿನ ಟ್ರಿನ್‌ಟ್ರಿನ್ ಗಾನ ಕೇಳಿ, ಮಕ್ಕಳು ಬಾಗಿಲಿಗೆ ಓಡಿದುವು. ರಘು ಮಗನ ಕೈಗೆ ಪಟಾಕಿಯ ಪೊಟ್ಟಣ ಕೊಟ್ಟ.

“ ಅಪ್ಪಾ, ಅಮ್ಮ ತಲೆನೋವು ಅಂತ ಮಲಗಿದ್ದಾಳೆ. ” ಎಂದಳು ರಾಧಾ.

“ ಓ, ಹಾಗೋ? ಅವಳಿಗೆ ಈ ಪೊಟ್ಟಣದಲ್ಲಿ ಔಷಧಿ ಇದೆ, ಕೊಡು. ” ಎಂದು ಬ್ಯಾಗಿನಿಂದ ದೊಡ್ಡ ಪ್ಯಾಕೇಟ್ ತೆಗೆದುಕೊಟ್ಟ.

ರಾಧೆ ಓಡಿ ಹೋಗಿ ತಾಯ ಮುಂದೆ ಬಿಚ್ಚಿದಳು. ಜಾರ್ಜೆಟ್ ಸೀರೆ ! ಸೀತೆಯ ಮುಖ ಗೆಲುವಾಯಿತು. ರಘುವಿನ ಬಗ್ಗೆ ಹೆಮ್ಮೆಯಾಯಿತು. ಆದರೂ ತಲೆನೋವು ತೋರಿಕೆಯದೆಂದು ತೋರಿಸಿಕೊಳ್ಳಲು ಇಷ್ಟಪಡದೆ, ತಲೆಗೆ ಕರವಸ್ತ್ರ ಕಟ್ಟಿಕೊಂಡೇ ಬಡಿಸಿದಳು.

“ ಇನ್ನೂ ತಲೆನೋವು ಹೋಗಿಲ್ಲವಾ, ಸೀತಾ ? ”

“ ಅದ್ಯೇಗೆ ಇಷ್ಟು ಬೇಗ ಹೋಗುತ್ತೆ ಹೇಳಿ. ”

“ ನಿಜ; ಪೊಟ್ಟಣದಲ್ಲಿರುವುದನ್ನು ನೋಡಿ ನೆತ್ತಿಗೆ ಏರಿತು ತಲೆನೋವು ಪ್ರಸನ್ನಳಾಗಿ ನಕ್ಕುಬಿಡು. ತಲೆಯನ್ನು ಬಿಟ್ಟು ನೋವು ಹಾರಿಹೋಗುತ್ತೆ ! ”

“ ಸುಮ್ಮನಿರಿ ಸಾಕ್ಕೆ. ಮಕ್ಕಳ ಮುಂದೆ ಏನೇನೋ ಆಡಬೇಡಿ ” ಎಂದು ಅವನ ಮುಖ ನೋಡಿ ನಸುನಕ್ಕಳು. ರಘು ಸಮಾಧಾನ ಹೊಂದಿದ — ಅವಳ ಕೋಪ ಹಾರಿತು ಎಂದು.

ಸೀತಾ ಊಟ ಮುಗಿಸಿ ಕನ್ನಡಿಯ ಮುಂದಿಟ್ಟಿದ್ದ ಗುಲಾಬಿ ಜೋಕೆ ಮುಡಿದು, ವೀಳ್ಯದ ತಟ್ಟೆ ಹಿಡಿದು ರಘುವಿನ ರೂಮಿಗೆ ಬಂದಳು. ಪೇಪರ್ ಓದುತ್ತಿದ್ದ ರಘು ಸ್ಮಿತನಾಗಿ ತಲೆ ಎತ್ತಿದ.

ರಘು ನೋಡಿದ — ಗುಲಾಬಿ, ಅರಳುಗುಲಾಬಿ, ಸೀತೆಯ ಮುಡಿಯಲ್ಲಿ ಗುಲಾಬಿ !

ಸೀತಾ ನೆನೆದಂತೆ ಅವನು ಹರ್ಷಿತನಾಗಲಿಲ್ಲ. ಅವನ ಮುಖ ಗಂಟಾಯಿತು. ಹಾಗೇ ಉಸಿರು ಸಿಕ್ಕಿಕೊಂಡಿತು.

ಏಕಾಏಕಿ, “ ಅಯ್ಯೋ ಪಿಶಾಚಿ, ಕೊಲಗಾತಕಿ. ಹಾಯಾಗಿದ್ದಾನೆ ಅಂತ ಪ್ರಾಣ ತೆಗೆಯೋಕೆ ಏಕೆ ಬಂದೆಯೇ ? ” ಎಂದು ಕಿರುಚಿದ.

ಸೀತಾ ನಡನಡ ನಡುಗಿ, ವೀಳ್ಯದ ತಟ್ಟೆಯನ್ನು ಹಾಗೇ ಕೈಬಿಟ್ಟಳು.

ರಘು ಹಲ್ಲುಕಡಿದು ಅವಳತ್ತ ನೋಡಿದ. ಸೀತೆಯ ಮನಸ್ಸು ಹಾಗೇ ಕುಗ್ಗಿತು. ರಘುವಿನ ಮೇಲೆ ಅವಳಿಗೆ ಕೋಪ ಬರಲಿಲ್ಲ — ಆರು ತಿಂಗಳಿಂದ ಬರದೆ ಇದ್ದ ಅಟ್ಯಾಕ್ ಈಗ ಬಂದಿದೆ — ಅದರ ಅವಳದೇನು ತಪ್ಪು ? — ಗುಲಾಬಿ ಮುಡಿದು ರೂಮಿಗೆ ಬಂದದ್ದೇ ತಪ್ಪೇ ? ತಾ ಬಂದ ಗಳಿಗೆಯೇ ವಿಷಗಳಿಗೆಯೇ ?

“ ತಪ್ಪಾಯ್ತು ಅಂದ್ರೆ. ಡಾಕ್ಟರನ್ನು ಕರೆಯಲೇ ? ”

ರಘು ತೇಕುತ್ತ ಹೇಳಿದ — ' ಇನ್ನೂ .. .... ಕಿತ್ತು ಕೇಳು ! ಆ ಗುಲಾಬೀನ ಕಿತ್ತೆಸೆ. ನನ್ನ .... ಸಾಯಿಸೋಣ ಅಂತ ಹೇಗ್ಮಾಡ್ತೀಯಾ ?.... .. ಅಯ್ಯೊ .. .. ”

ಸೀತಾ ಒಂದೇ ಉಸಿರಿಗೆ ಹೋಗಿ ಡಾಕ್ಟರ್ ಜೈರಾಜರನ್ನು ಕರೆದಳು. ಡಾಕ್ಟರರು ಒಂದು ಇಂಜಕ್ಷನ್ ಕೊಟ್ಟರು. ಐದು ನಿಮಿಷಗಳಲ್ಲಿ ಉಸಿರು ಹತೋಟಿಗೆ ಬಂದಿತು.

ಸೀತಾ ಬಿಸಿ ಬಿಸಿ ಕಾಫಿ ತಂದಳು. ಆದರೆ ಆತುರದಲ್ಲಿ ಗುಲಾಬಿದಂಡೆಯನ್ನು ಕಳಚಿಡುವುದನ್ನು ಮರೆತುಬಿಟ್ಟಿದ್ದಳು. ಅದನ್ನು ಕಂಡೊಡನೆ ರಘುವಿಗೆ ಅಸಾಧ್ಯ ರೇಗಿತು.

“ ಎಷ್ಟು ಸಲ ಹೇಳ್ಬೇಕೆ — ಆ ಹಾಳು ಗುಲಾಬೀನ ಬೇಡಾ ಅಂತ ಎಂದು? ಒಂದು ಸಲ ಹೇಳಿದರೆ ತಲೆಗೆ ಹಿಡಿಯುವುದಿಲ್ಲವೇ? ಡಾಕ್ಟರ್. ಮತ್ತೆ, ಮತ್ತೆ ಹೆಚ್ಚಾಯ್ತು. ”

ರಘುವಿಗೆ ಮತ್ತೆ ಕೆಮ್ಮು ಹತ್ತಿತು. ಕಡಿಮೆಯಾಗಿದ್ದ ಉಬ್ಬಸ ಉಲ್ಬಣವಾಯಿತು.

ಜಯಂತಿ

ಸೀತಾ ಹಾವು ತುಳಿದವಳಂತೆ ಬೆಚ್ಚಿ, ಸರ್ರನೆ ಹೊರಟು ಹೋದಳು. ದುಃಖ-ಅಪಮಾನದಿಂದ ಬೇಯುತ್ತಾ, ಗುಲಾಬಿ ದಂಡೆಯನ್ನು ಒಂದೇ ಸಲಕ್ಕೆ ಕಿತ್ತಳು. ತನ್ನ ಎದೆಗುದಿಯನ್ನು ಅದರ ಮೇಲೆ ತೀರಿಸುವವಳಂತೆ ಅದನ್ನು ನೆಲಕ್ಕೆ ತೀಡಿ ಕಸ ಮಾಡಿದಳು. ಗೋಡೆಗೆ ಮುಖವಿಟ್ಟು ಬಿಕ್ಕಿ ಬಿಕ್ಕಿ ಅತ್ತಳು.

ದೀಪಾವಳಿಯ ಹಬ್ಬ ಹೀಗೆ ಪ್ರಾರಂಭವಾಗಬೇಕೇ?

ಡಾಕ್ಟರ್ ಇನ್ನೊಂದು 'ಪ್ರಿಕ್' ಕೊಟ್ಟರು. ಉಸಿರು ಸಮಾಧಾನಕ್ಕೆ ಬಂದಿತು.

"ನೀವು ಹೋಗಿ ಡಾಕ್ಟರ್, ನಿದ್ದೆ ಮಾಡಿ. ಮತ್ತೆ ಜಾಸ್ತಿಯಾದರೆ ಹೇಳಿಕಳುಹಿಸುತ್ತೇನೆ."

"ಸರಿ. ಏನು ಕಾರಣ ಈ ದಿನ? ಆಹಾರದಲ್ಲಿ ಹೆಚ್ಚುಕಡಿಮೆಯಾಗಿತ್ತೇ?"

"ಇಲ್ಲ ಡಾಕ್ಟರ್. ನನಗೆ ರೋಸ್ ಅಲರ್ಜಿ. ಗುಲಾಬಿಯನ್ನು ಕಂಡರೆ ಹೀಗಾಗುತ್ತೇ?" ಎಷ್ಟು ಹೇಳಿದರೂ ಆ ಹೆಂಗಸಿಗೆ ಬುದ್ಧಿಯಿಲ್ಲ...."

"ಪಾಪ, ಅವರನ್ನೇಕೆ ಬಯ್ತೀರಿ? ಅವರಿಗೆ ಈ ವಿಷಯ ಗೊತ್ತಿದೆಯೋ?"

"ಇಲ್ಲ ಡಾಕ್ಟರ್. ಮೊನ್ನೆ ಪೇಪರಿನಲ್ಲಿ ಓದುವ ವರೆಗೂ 'ಅಲರ್ಜಿ' ಎಂಬ ಪದವೇ ನನಗೆ ತಿಳಿದಿರಲಿಲ್ಲ. ಆಮೇಲೆ ಯೋಚಿಸಿದೆ. ಆಗ ತಿಳೀತು ನನ್ನ ಅಸ್ತಮಾಕ್ಕೆ ಕಾರಣ—ಈ ಗುಲಾಬೀನ ಕಂಡಾಗಲೆಲ್ಲಾ ನನಗೆ ಅಟ್ಯಾಕ್ಸ್ ಬರ್‍ತಾ ಇದೆ. ಈಗ ಆರು ತಿಂಗಳ ಕೆಳಗೆ ದೇವರ ಫೋಟೋಕ್ಕೆ ಗುಲಾಬಿ ಹಾರ ಹಾಕಿದ್ದಳು. ಅದನ್ನು ನೋಡಿದ ಕೂಡಲೆ ಉಸಿರು ಸಿಕ್ಕಿಕೊಂಡಂತಾಗಿ ಅಟ್ಯಾಕ್ ಪ್ರಾರಂಭವಾಯಿತು."

"ಹಾಗಾದರೆ ಮೊದಲಿನಿಂದಲೂ ನಿಮಗೆ ಗುಲಾಬಿ ಎಂದರೆ ಆಗೋದಿಲ್ಲವೇ?"

ರಘು ಸ್ವಲ್ಪ ಹೊತ್ತು ಗಂಭೀರನಾಗಿ ಯೋಚಿಸಿದ.

"ಇಲ್ಲ ಡಾಕ್ಟರ್. ಮೊದಲು ಹೀಗಾಗ್ತಾ ಇರಲಿಲ್ಲ. ನಾನು ಓದ್ತಾ ಇದ್ದಾಗ, ನಮ್ಮನೆಯಲ್ಲಿ ನಾನೇ ಗುಲಾಬಿ ಗಿಡ ಬೆಳಸಿದ್ದೆ. ಕಸಿ ಗಿಡ. ಒಂದೊಂದು ಹೂವು ಒಂದೊಂದು ಬೊಗಸೆಯಗಲ ಇರೋದು. ಮೈಸೂರಲ್ಲಿದ್ದ ಆ ಮನೇನ ಮಾರಿಬಿಟ್ಟೆವು ಆಮೇಲೆ. ಆಮೇಲೆ........ಆಮೇಲೆ........"

ರಘು ಅರ್ಧಕ್ಕೆ ಮಾತಿನ ಸರಣಿ ನಿಲ್ಲಿಸಿ ನಿಡುಸುಯ್ದ. ಅವನ ಮುಖವನ್ನೇ ಸಾನುಭೂತಿಯಿಂದ ನೋಡುತ್ತಿದ್ದರು ಡಾಕ್ಟರರು.

"ಮುಂದೆ? ಯಾವಾಗಿನಿಂದ ಹೀಗೆ ಪ್ರಾರಂಭವಾಯಿತು?" ಎಂದು ಉತ್ತೇಜಿಸಿದರು.

"ನನಗೆ ಮದುವೆಯಾದ ಮೇಲೆ ಅಟ್ಯಾಕ್ಸ್ ಪ್ರಾರಂಭವಾಯಿತು. ಮೊದಮೊದಲು ಗುಲಾಬಿಯನ್ನು ನೋಡಿದಾಗ ಉಸಿರು ಸಿಕ್ಕಿಕೊಂಡಂತಾಗೋದು. ಅನಂತರ ರೆಗ್ಯುಲರ್ ಅಟ್ಯಾಕ್ಸೇ ಶುರುವಾಯಿತು. ಅದರೆ, ರೋಸ್‌ಅಲರ್ಜಿ ಎಂದು ಹೊಳೆಯಲೇ ಇಲ್ಲ."

"ಸರಿ. ನಾಳೆ ಮಧ್ಯಾಹ್ನಕ್ಕೆ ನಮ್ಮ ಮನೆಗೆ ಬನ್ನಿ. ಟೆಸ್ಟ್‌ಮಾಡಿ 'ಅಲರ್ಜಿ' ಹೌದೋ ಅಲ್ಲವೋ ನಿಶ್ಚಯಿಸುತ್ತೇನೆ." ಎಂದು ಜೈರಾಜ ಹೇಳಿ ಹೊರಟರು

ರಘು ಗಂಭೀರವಾಗಿ ಯೋಚಿಸಹತ್ತಿದ......

'ಗುಲಾಬಿ, ಕಣ್ಮನ ಸೆಳೆಯುವ ಗುಲಾಬಿ, ನವಿರು ಸೂಸಿ, ತಂಪು ಬೀರಿ, ಹೃದಯ ನರಳಿಸುವ ಗುಲಾಬಿ! ಅಂತಹ ಗುಲಾಬಿ ತನಗೆ ಒಗ್ಗದೆ ಹೀಗೇಕೆ ತನ್ನ ಎದೆಯಲ್ಲಿ ವಿಪ್ಲವ ಎಬ್ಬಿಸುವುದು? ಇಷ್ಟು ಯಾತನೆ ಕೊಡುವುದು!'

ತಾನು ಬೆಳೆಸಿದ ಗಿಡದಲ್ಲಿ ಬಿಡುತ್ತಿದ್ದ ಬೊಗಸೆಯಗಲದ ಗುಲಾಬಿ ಹೂ! ರಘು ಹಳೆಯ ನೆನಪಿನಿಂದ ನಿಡುಸುಯ್ದ.

ಗುಲಾಬಿ—ರಮಾ. ಹೌದು, ಗುಲಾಬಿ ರಮಾಳ ನೆನಪನ್ನು ತಂದಿತು. ರಮಾಳ ತುಂಬಿದ ಕಪೋಲಗಳಲ್ಲಿ ಗುಲಾಬಿ ಅರಳಿದ್ದುವು. ರಮಾ ಎಂತಹ ಚೆಲುವೆ—ಎತ್ತರದ ನಿಲುವು, ಸೊಗಸಾದ ಬಣ್ಣ, ಹೊಳೆಹೊಳೆವ ಕಣ್ಣುಗಳು.

ರಘು ಬಿ. ಎ. ಫೈನಲ್ ಆ ವರ್ಷ. ರಮಾ ಅವನ ಕ್ಲಾಸ್‌ಮೇಟ್. ಇವನಿದ್ದ ರೋಡಿನ ಮುಂದಿನದರಲ್ಲೇ ರಮಾಳ ಮನೆ.

ರಮಾಳ ತಂದೆ ಸ್ಥಿತಿವಂತರು. ದೊಡ್ಡ ಬಂಗಲೆ. ಆದರೆ ಹೂತೋಟವಿರಲಿಲ್ಲ. ರಘುವಿನ ಮನೆ ಚಿಕ್ಕದು. ಆದರೆ ಮನೆಯ ಮುಂದೆ ಹೂದೋಟವಿತ್ತು. ರಘು ಸ್ವಂತ ಪರಿಶ್ರಮದಿಂದ ಬೆಳಸಿದ ಗುಲಾಬಿ ತೋಟವಿದ್ದಿತು.

ಕಾಲೇಜಿಗೆ ಹೋಗುವಾಗ ರಘು, ರಮಾಳ ಮನೆಯೆದುರೇ ಹೋಗಬೇಕಾಗಿತ್ತು. ರಮಾ ಹೊರಡುವುದಕ್ಕೂ ಇವನು ಅವರ ಮನೆಯ ಮುಂದೆ ಹಾಯುವುದಕ್ಕೂ ಸರಿಹೋಗುತ್ತಿತ್ತು. ಪುಸ್ತಕದ ಮೂಲಕ ಆರಂಭವಾದ ಪರಿಚಯ ದಿನಕ್ರಮೇಣ ಬೆಳೆಯಿತು. ಸ್ನೇಹ ಗಾಢವಾಗಿ ಪ್ರೇಮಕ್ಕೆ ತಿರುಗಿತು. ರಮಾ ಚೆಲುವೆ, ಸುಗುಣೆ, ಚತುರೆ. ರಘು ಅವಳನ್ನು ಪ್ರೇಮಿಸಿದ್ದು ಆಶ್ಚರ್ಯವೇನಲ್ಲ.

ರಘು ನಿತ್ಯ ಅವಳಿಗೆ ಒಂದು ದೊಡ್ಡ ಗುಲಾಬಿಯನ್ನು ಒಯ್ದು ಕೊಡುತ್ತಿದ್ದ. ಅವಳು ಸ್ವೀಕರಿಸಿ, ಕೃತಜ್ಞತೆಯಿಂದ ನಸುನಕ್ಕಾಗ ಇವನ ಹೃದಯ ಅರಳುತ್ತಿತ್ತು. ನಿತ್ಯವೂ ಆ ಆನಂದದ ಮುಹೂರ್ತಕ್ಕಾಗಿ ಕಾಯುತ್ತಿದ್ದ. ಕಾಲೇಜಿನಲ್ಲಿ ಇವನ ಮುಂದಿನ ಸೀಟಿನಲ್ಲಿ ರಮಾ ಕೂಡುತ್ತಿದ್ದಳು. ಅವಳ ಮುಡಿ ಏರಿದ ಗುಲಾಬಿಯನ್ನು ನೋಡುವುದೇ ಅವನಿಗೆ ಹರ್ಷ. ಆಕಸ್ಮಾತ್ ಅವಳ ಕಣ್ಣು ಸಂಧಿಸಿದಾಗ ಅವಳು ಸ್ಮಿತಳಾದರೆ ಅದೇ ಅವನಿಗೆ ಹಬ್ಬ.

ಸುಮಾರು ಆರು ತಿಂಗಳು ಈ ಭಾವುಕಪ್ರೀತಿ ಬೆಳೆಯಿತು.

ಅನಂತರ, ಒಂದು ದಿನ ರಮಾಳೇ ಅವನ ಈ ಆನಂದಸ್ವರ್ಗಕ್ಕೆ ಚಿಂತೆಯ ಕಾರ್ಮುಗಿಲನ್ನು ಮುಸುಕಿಸಿದಳು....ಆ ದಿನ ಗುಲಾಬಿಯನ್ನು ಕೊಡಹೋದಾಗ, ಅಸಮಾಧಾನದಿಂದಲೇ ತೆಗೆದುಕೊಂಡಳು.

"ಏಕೆ ರಮಾ? ತುಂಬಾ ಚಿಂತೆಯಿಂದಿದ್ದೀರಿ?" ಎಂದ, ಅವಳ ಮುಖದ ಸ್ಮಿತ ಕಾಣದೆ.

" ರಘು, ಇನ್ನು ಹೆಚ್ಚು ದಿನ ನಮ್ಮ ಗೆಳೆತನ ಹೀಗೇ ಮುಂದುವರಿಯಲಾರದು. ನೀವು ಏನಾದರೂ ನಿಶ್ಚಯಿಸಬೇಕು. ತಂದೆ ಲಗ್ನದ ಪ್ರಯತ್ನ ನಡೆಸುತ್ತಿದ್ದಾರೆ. ಪರೀಕ್ಷೆಯಾದೊಡನೆ ಲಗ್ನ ಎನ್ನುತ್ತಿದ್ದಾರೆ."

" ನನ್ನ ಭಾವನೆ ನಿಮಗೆ ತಿಳಿದಿದೆ. ನಿಮ್ಮನ್ನು ಬಿಟ್ಟು ನಾನು ಬೇರೆ ಯಾರನ್ನೂ ಲಗ್ನವಾಗಲಾರೆ. "

" ನೀವು ನನ್ನ ತಂದೇನ ಕೇಳಬೇಕು. "

" ಸ್ವಲ್ಪ ನಿಧಾನಿಸಿ. ಪರೀಕ್ಷೆ ಆಗಿ ಕೆಲಸ ಸಿಕ್ಕಲಿ. ಆನಂತರ ಕೇಳ್ತೀನೆ. "

ರಮಾ ಇನ್ನೂ ಅಸಮಾಧಾನದಿಂದಲೇ ಇದ್ದಳು. ರಘು ಪುನಃ:

"ನನಗೆ ಸ್ವಲ್ಪ ಕಾಲಾವಕಾಶ ಕೊಡಿ. ಯೋಚಿಸಬೇಕು "ಎಂದ.

ರಮಾ ಮಾತನಾಡಲಿಲ್ಲ. ಕಾಲೇಜಿನಲ್ಲಿಯೂ ಅವಳ ಮುಖ ಅರಳಲಿಲ್ಲ. ಮೌನವಾಗಿದ್ದಳು.

ರಘು ಮೌನವಾಗಿ ಯೋಚಿಸಿದ. ಸಮಸ್ಯೆ ಬಗೆಹರಿಯಲಿಲ್ಲ— ಡಿಗ್ರಿಯನ್ನೂ ಪಡೆಯದೆ ಕೆಲಸವಲ್ಲೂ ಇಲ್ಲದೆ ರಮಾಳ ತಂದೆಯೆದುರು ಹೇಗೆ ಹೋಗುವುದು? ಹೆಂಡತಿಯನ್ನು ಹೇಗೆ ಸಾಕುತ್ತೀಯಾ?— ಎಂದರೆ ಏನು ಉತ್ತರ ಹೇಳುವುದು? ಮದುವೆ ಎಂದರೇನು ಹುಡುಗಾಟಿಕೆಯೇ ?

ಮಾರನೆಯ ದಿನವೂ ರಘು ಜವಾಬಿಯನ್ನು ರಮಾಳ ಕೈಗಿತ್ತ. ರಮಾ ಅಪ್ರಸನ್ನಳಾಗಿದ್ದಳು.

" ಏನು ನಿರ್ಧರಿಸಿದಿರಿ ರಘು ?"— ಮಾತಿನಲ್ಲಿ ತೀವ್ರ ದುಗುಡವಿತ್ತು.

" ರಮಾ, ಮದುವೆ ಲಘುವಿಷಯವಲ್ಲ. ನನ್ನನ್ನು ನಂಬಿ ! ಸಂಪಾದನೆಯ ಮಾರ್ಗ ನೋಡಿಕೊಂಡು, ತಕ್ಷಣ ನಿಮ್ಮ ತಂದೇನ ಕೇಳ್ತೀನಿ. "

ರಮಾಗೆ ಸಿಟ್ಟೇರಿತು - ರಘುವಿನ ಪ್ರೇಮ ಇಷ್ಟೇನೆಯೆ ? ಏಕೆ ಈ ಅಧೀರತೆ, ಈ ಚಂಚಲತೆ? ಅಡ್ಡಗೋಡೆಯ ಮೇಲಿನ ದೀಪದಂತಹ ಈ ಮಾತೇಕೆ ?

" ಕ್ಷಮಿಸಿ ರಘು. ನನಗೆ ನಂಬಿಕೆ ಸಾಲದು. ನಮ್ಮ ತಂದೇನ ಕೇಳೋಕೆ ಏಕೆ ಈ ಸಂಕೋಚ? ನನಗೊಂದೂ ಅರ್ಥವಾಗೋದಿಲ್ಲ. ನಿಮ್ಮ ಪ್ರೇಮ ದೃಢವಾಗಿದ್ದರೆ, ನೀವಿಷ್ಟು ಅಳುಕಬೇಕಾಗಿಲ್ಲ. "

ರಘು ಬಿಸಿನೆತ್ತರಿನ ತರುಣ. ಅವನಿಗೂ ಕಾವೇರಿತು. ರಮಾಳ ಪ್ರೇಮದ ಬಗ್ಗೆ ಅವನಿಗೂ ಅನುಮಾನವಾಯಿತು. ರಮಾ ಗಾಢವಾಗಿ ಪ್ರೀತಿಸಿದರೆ, ತಂದೆಯನ್ನು ತಾನೇ ಕೇಳಿ ಕಾಲಾವಕಾಶ ಏಕೆ ಪಡೆಯಬಾರದು ? ರಮಾ ಇಷ್ಟು ಒತ್ತಾಯ ಮಾಡಲು ಏನು ಕಾರಣ ? ಬೇರಾವ ವ್ಯಕ್ತಿಯನ್ನಾದರೂ ಆರಿಸಿದ್ದಾಳೆಯೋ ?

" ರಮಾ, ನಿಮಗೆ ನಂಬಿಕೆ ಹುಟ್ಟಿಸುವ ಶಕ್ತಿ ನನಗಿಲ್ಲ. ಪ್ರೀತಿ ಇದ್ದೆಡೆ ನಂಬಿಕೆಯೂ ಮೊಳೆಯುತ್ತದೆ. ತಂದೆಯನ್ನು ಕೇಳಿ ನೀವೇ ಕಾಲಾವಕಾಶ ಪಡೆಯಬಾರದೇ ? "

" ಸರಿ. ನನ್ನದೇನೂ ಬಲವಂತ ಇಲ್ಲ. ನನ್ನ ಬಲವಂತಕ್ಕೆ ನೀವು ಏನೂ ಮಾಡಬೇಕಾಗಿಲ್ಲ. "

" ರಮಾ ! ನಿಮ್ಮ ಇಷ್ಟ ಹೇಗಿದೆಯೋ ಇನ್ನೊಮ್ಮೆ ಯೋಚಿಸಿ! ನನ್ನ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಪಶ್ಚಾತ್ತಾಪ ಪಡುವಂತೆ ಮಾಡಿಕೊಳ್ಳಬೇಡಿ. "

ರಮಾ ಸಿಟ್ಟಿನಿಂದ ತೀವ್ರವಾಗಿ ಅವನನ್ನು ನೋಡಿ ಹೊರಟುಹೋಗಿಬಿಟ್ಟಳು.

ರಘುವಿಗೂ ನೆಮ್ಮದಿಯಿರಲಿಲ್ಲ. ಚಿಂತೆಯಿಂದ ಕಾಯುತ್ತಿದ್ದ ರಘುವಿನ ದೃಷ್ಟಿ ಸಂಧಿಸಿದಾಗ, ರಮಾ ಹುಬ್ಬುಗಂಟಿಕ್ಕುತ್ತಿದ್ದಳು.

ರಘು ಬಗೆಹರಿಯದ ಈ ಸಮಸ್ಯೆಯನ್ನು ಬಿಡಿಸಲು ಯತ್ನಿಸುತ್ತ, ಕಾಲೇಜಿಗೂ ಬರದೆ ಮಧುವನದಲ್ಲಿ ಕುಳಿತು ನಾಲ್ಕೈದು ದಿನ ಕಳೆದ.

ಅವನು ಬಡವ. ರಮಾ ಸಿರಿವಂತೆ. ಅವಳ ಬಂಧುಗಳು ಪ್ರಭಾವಶಾಲಿಗಳು, ಒಳ್ಳೆಯ ಅಧಿಕಾರಗಳಲ್ಲಿರುವವರು. ಸ್ವಂತ ಪ್ರತಿಭೆಯೊಂದೇ ತನಗಿದ್ದ ಯೋಗ್ಯತೆ. ಡಿಗ್ರಿ ದೊರೆತ ಮೇಲೆ ಉದ್ಯೋಗ ದೊರೆಯುವುದೆಂದು ಯಾವ ನಂಬಿಕೆ . ಊರ ತುಂಬಾ ನಿರುದ್ಯೋಗಿಗಳಿರುವಾಗ ?

ಇಲ್ಲ. ರಮಾಳನ್ನು ಲಗ್ನವಾದರೆ ಸುಖವಿಲ್ಲ. ಅವಳಿಗೂ ಸುಖವಿಲ್ಲ. ಅವಳ ಅಂತಸ್ತು ಯಾವುದು ?—ತನ್ನ ಈ ಬಡತನ ಎಲ್ಲಿ ?

ಆದರೆ....ಆದರೆ ರಮಾ ನನ್ನನ್ನು ಪ್ರೇಮಿಸಿದರೆ, ಬಡಕುಟೀರವೇ ಸ್ವರ್ಗವಾಗುತ್ತದೆ. ಆದರೆ ರಮಾ ನನ್ನನ್ನು ನಿಜವಾಗಿ ಪ್ರೀತಿಸುವಳೇ ?

ರಮಾಳೆದುರು ಎಲ್ಲ ಹೇಳಿ, ಅವಳು ಒಪ್ಪಿದರೆ ಅವಳ ತಂದೆಯನ್ನು ಕೇಳುವುದು ಎಂದು ಯೋಚಿಸಿದ. ಐದನೆಯ ದಿನದ ಸಂಜೆ. ರಮೆಯ ಮನೆಯತ್ತ ನಡೆದ.

ರಮಾಳ ಮನೆಯ ಮುಂದೆ ಸೊಗಸಾದ ಕಾರು ನಿಂತಿತ್ತು. ಜವಾನನನ್ನು ಯಾರ ಕಾರೆಂದು ವಿಚಾರಿಸಿದ.

" ಚಿಕ್ಕಮ್ಮಾವರನ್ನು ನೋಡೋಕೆ ಮದ್ರಾಸಿನಿಂದ ಗಂಡ ಬಂದಿದೆ ಸ್ವಾಮಿ ! " ಎಂದ.

ರಘು ವಿದ್ಯುತ್‌ತಂತಿ ಮುಟ್ಟಿದವನಂತೆ ಬೆಚ್ಚಿದ. ಎಚ್ಚರು ತಪ್ಪಿದವನಂತೆ ಸ್ವಲ್ಪ ಹೊತ್ತು ನಿಂತಿದ್ದ. ಆನಂತರ ಯಾರೋ ಹೊರಗೆ ಬರುವ ಸದ್ದಾಯಿತು. ರಘು ಕಂಬದ ಮರೆಗೆ ಹೋದ.

ನೀಲಿಯ ಉಲನ್‌ಸೂಟು ಧರಿಸಿದ ವ್ಯಕ್ತಿ—ಬಹುಶಃ ಗಂಡು— ಅವನ ಹಿಂದೆ ಒಬ್ಬ ಮುದುಕರು ಬಂದು ಕಾರು ಹತ್ತಿದರು. ರಮಾ ತಾಯಿಯ ಸಂಗಡ, ವರಾಂಡದಲ್ಲಿ ನಸುನಗುತ್ತಾ ನಿಂತಿದ್ದಳು.

ರಘು ಈರ್ಷೆಯಿಂದ ಕುದಿದ. ಭೂಮಿ ಬಂದು ಆತನನ್ನು ನುಂಗಬಾರದೇ, ಏನಾದರೂ ಅಪಘಾತವಾಗಿ ಕಾರುಸಮೇತ ಎಲ್ಲರೂ ನಿರ್ನಾಮವಾಗಬಾರದೇ—ಎಂದು ಹಲ್ಲು ಕಡಿದ. ಅಬ್ಬಾ, ರಮಾ ಎಂತಹ ವಂಚಕಿ, ಎಂತಹ ಮೋಸಗಾರ್ತಿ. ಇದಕ್ಕೇ ಇವಳಿಗೆ ನನ್ನಲ್ಲಿ ನಂಬಿಕೆಯಿಲ್ಲ !

ಜಯಂತಿ

ಆ ದಿನವನ್ನೆಲ್ಲಾ ಎಷ್ಟು ತಳಮಳದಿಂದ ಕಳೆದನೋ. ಮಾರನೆಯ ದಿನ ಅವಳೆದುರಿಗೇ ತನ್ನ ಎದೆಯಾಳವನ್ನೆಲ್ಲಾ ತೋಡಿಕೊಳ್ಳಬೇಕೆಂದು ಬಂದ. ಪದ್ಧತಿಯಂತೆ ಗುಲಾಬಿಹೂವನ್ನು ತಂದ.

ರಮಾ ಬೇಸರದಿಂದಲೇ ಹೂವನ್ನು ತೆಗೆದುಕೊಂಡಳು. ಅವಳ ಮೌನ ಅವನಿಗೆ ಅಸಹನೀಯವಾಯಿತು.

"ಹೆಂಗುಸರೆಲ್ಲ ಹೀಗೇನೆ. ಹೊರಗೆ ನೋಡೋಕೆ ಹೂವಿನಂತೆ. ಹೃದಯ ಮುಳ್ಳಿನಂತೆ" ಎಂದ.

ರಮಾಳ ಕಣ್ಣು ಕಿಡಿ ಕಾರಿತು. "ಸಾಕು ಸುಮ್ಮನಿರಿ. ನಾಚಿಕೆ ಇಲ್ಲವೇ ನಿಮ್ಮ ಜನ್ಮಕ್ಕೇ? ಹೀಗೆ ನಂಬಿಸಿ ನಡುನೀರಲ್ಲಿ ನನ್ನ ಕೈಬಿಡಬೇಕು ಅಂತಿದ್ದೀರಾ? ಈಗ ಮತ್ತೆ ಹೆಂಗುಸರನ್ನು ದೂಷಿಸುತ್ತೀರಾ? ನೀವು ಶುದ್ಧ ಹೇಡಿಗಳು!"

ಅಬ್ಬಾ, 'ಹೇಡಿ' ಎಂದು ಅವಳು ಉಚ್ಚರಿಸುವಾಗ, ಅವಳ ಎದೆಯ ತಿರಸ್ಕಾರವೆಲ್ಲ ಆ ಪದದಲ್ಲಿ ಹೆಪ್ಪುಗಟ್ಟಿತ್ತು.

"ಓಹೋ. ನನಗೂ ಈಗ ತಿಳೀತು. ನಿನ್ನೆ ಸಂಜೆ ಆ ಧಡಿಯನ್ನ ನಾನೂ ನೋಡಿದೆ!" ರಘು ಎಷ್ಟು ಯತ್ನಿಸಿದರೂ ತನ್ನ ಅಹಿತಭಾವನೆಯನ್ನಡಗಿಸಿಕೊಳ್ಳಲಾಗಲಿಲ್ಲ.

ರಮಾ ಸಿಟ್ಟಿನಿಂದ ಕಂಪಿಸಿದಳು. "ಅವರ ಮಾತೆತ್ತಬೇಡಿ. ಅವರ ರೋಮ ಕೊರುವ ಯೋಗ್ಯತೆಯಿಲ್ಲ ನಿಮಗೆ. ಹೋಗಿ! ಛೀ, ಹೇಡಿ! ನನ್ನ ಹಾದಿಗೆ ಮತ್ತೆ ಬರಬೇಡಿ. ಏನು ನಿಮ್ಮ ಹಂಗು? ಈ ಹೂ ತಾನೇ? ನೀವೇ ತೆಗೆದುಕೊಳ್ಳಿ."

ಹೂವನ್ನು ಅವನ ಕಾಲಿನ ಬಳಿಗೆ ರೊಯ್ಯನೆಸೆದು ಸರ್ರನೆ ಹೋಗಿಬಿಟ್ಟಳು.

ರಘುವೂ ಕೋಪೋದ್ರಿಕ್ತನಾಗಿ ಕಾಲಿನಿಂದ ಆ ಹೂವನ್ನು ತುಳಿದುಹಾಕಿದ. ತನ್ನ ಹೃದಯವೇ ಛಿದ್ರಛಿದ್ರವಾಗಿದೆ ಎನ್ನಿಸಿತು ಅವನಿಗೆ.

ರಘುವಿನ ಸ್ವಾಭಿಮಾನ ಜಾಗೃತವಾಗಿತ್ತು. ಅವಳ ವಂಚನೆಯನ್ನು ನೆನೆ-ನೆನೆದು ಅವಳನ್ನು ಪೂರ್ಣ ಮರೆಯಬೇಕೆಂದು ಯತ್ನಿಸಿದ.

ಪರೀಕ್ಷೆ ಮುಗಿಯಿತು. ರಮಾಳ ಲಗ್ನ ರಜದಲ್ಲಿ ನಡೆಯಿತು. ರಘು ತುಂಬಾ ವೇದನೆಪಟ್ಟ. ಅವಳನ್ನು ಮರೆಯಲು ಯತ್ನಿಸಿದಷ್ಟೂ, ನೆನಪು ತೀವ್ರವಾಗುತ್ತಿತ್ತು.

ಮನೆಯಲ್ಲಿ ಗುಲಾಬಿಗಿಡ ನೋಡಿದಾಗ ಉಸಿರುಸಿಕ್ಕಿಕೊಂಡಂತಾಗುತ್ತಿತ್ತು. ಗುಲಾಬಿಯ ಹೂ ನೋಡಿದಾಗಲೆಲ್ಲ ತನ್ನ ಭಗ್ನಪ್ರಣಯದ ನೆನಪು ಕೆರಳಿ ವಿಚಿತ್ರವೇದನೆಯಾಗುತ್ತಿತ್ತು. ಮನೆಯಲ್ಲಿದ್ದ ಗುಲಾಬಿತೋಟ ಕಡಿದು ಹಾಕಿ, ತರಕಾರಿ ಬೆಳಸಿದ.

ಸ್ವಲ್ಪ ಕಾಲದಲ್ಲಿಯೇ ಬೆಂಗಳೂರಲ್ಲಿ ಕೆಲಸ ಸಿಕ್ಕಿತು. ಅನಂತರ ಸೀತೆಯೊಡನೆ ಲಗ್ನವಾಯಿತು.

ರಘು ರಮಾಳನ್ನು ಮರೆತೇ ಇದ್ದ. ಸೀತೆಯೊಡನೆ ಸುಖಸಂಸಾರ ಮಾಡುತ್ತಿದ್ದ. ರಮಾಳ ನೆನಪು ಬಂದರೂ ನೋವು, ಉದ್ವೇಗಗಳಿಲ್ಲದೆ ಶಾಂತನಾಗಿ ಯೋಚಿಸುತ್ತಿದ್ದ. ಹಾಗೆ ನೆನಪಾಗುತ್ತಿದ್ದುದೂ ಅಪರೂಪ.

ರಘು ರಾತ್ರಿಯನ್ನೆಲ್ಲ ಸುಖವಾಗಿ ಕಳೆದು, ಮಾರನೆಯ ದಿನ ಮಧ್ಯಾಹ್ನ ಜೈರಾಜರ ಮನೆಗೆ ಹೋದ. ಜಮುನಾ ಅವನು ಬಂದಿರುವ ಸುದ್ದಿಯನ್ನು ತಿಳಿಸಿದಳು. ಜೈರಾಜರೇ ಬಾಗಿಲಿಗೆ ಬಂದು ಕರೆದರು.

ರಘು ಅವರ ರೂಮಿನೊಳಗೆ ನೋಡಿದ. ಮಧ್ಯೆ ದೊಡ್ಡ ಟೇಬಲ್. ಅದರ ಮೇಲೆ ದೊಡ್ಡ ಹೂಕುಂಡ. ಅದರೊಳಗೆ ಬಗೆಬಗೆಯ ಗುಲಾಬಿಗಳು! ರಘುವಿಗೆ ಉಸಿರು ಸಿಕ್ಕಿದಂತಾಗಿ ತಕ್ಷಣ ಅಸ್ತಮಾ ಅಟ್ಯಾಕ್ ಆರಂಭವಾಯಿತು.

"ಒಳ್ಳೆಯ ಟೆಸ್ಟ್ ಡಾಕ್ಟರ್ ಇದು! ಪ್ರಾಣ ತೆಗೆಯೋ ಟೆಸ್ಟು! ಬೇಕು ಅಂತಾ ಹೀಗೆ ಮಾಡಿದೀರಲ್ಲಾ...." ಎಂದ ದುಗುಡದಿಂದ.

ಡಾಕ್ಟರ್ ಅಚ್ಚರಿಯಿಲ್ಲದ ತಲೆ ಎತ್ತಿದರು. "ಮೈ ಡೀಯರ್ ಮ್ಯಾನ್! ಇದು ಖಂಡಿತ ಅಲರ್ಜಿಯ ತೊಂದರೆ ಇಲ್ಲ. ಬಂದು ನೋಡಿ. ಇವು ಕಾಗದದ ಹೂಗಳು. ಜಮುನಾ ಮಾಡಿದ್ದು!"

ರಘು ಬಂದು ಪರೀಕ್ಷಿಸಿದ—ಹೌದು, ಕಾಗದದ ಗುಲಾಬಿಗಳೇ.

"ಕೂತುಕೊಳ್ಳಿ. ನಿಮ್ಮ ದೇಹದ ಮೇಲೆ ಗುಲಾಬಿಯ ಪರಾಗದ ಪರಿಣಾಮಾನ ಪರೀಕ್ಷಿಸಿ, ಹೇಳ್ತೀನೆ."

ಡಾಕ್ಟರರ ಪ್ರಯೋಗವೂ ಅದನ್ನೇ ಸಾರಿತು. ಅಲರ್ಜಿಯ ದೋಷ ಇಲ್ಲೆಂದು.

"ನಿಮ್ಮ ವಿಶ್ವಾಸದ ಗೆಳೆಯನೆಂತ ನಂಬಿ, ಗುಲಾಬೀನ ನೀವು ದ್ವೇಷಿಸೋಕ್ಕೆ ಕಾರಣ ಹೇಳಿ. ಗುಲಾಬಿಗೂ ನಿಮ್ಮ ಜೀವನಕ್ಕೂ ಏನಾದರೂ ಸಂಬಂಧ ಇದೆಯೇ?"

ಡಾಕ್ಟರರ ಒತ್ತಾಯಕ್ಕೆ ಮಣಿದು ರಮಾಳ ಪ್ರಸಂಗ ಹೇಳಿದ.

"ಸರಿ. ಕಾರಣ ತಿಳಿಯಿತು. ನಿಮ್ಮ ಅಸ್ತಮಾಕ್ಕೂ ಅಲರ್ಜಿಗೂ ಸಂಬಂಧವಿಲ್ಲ."

"ಮತ್ತೆ?"

"ನಿಮ್ಮ ಮನಸ್ಸಿನಿಂದ ರಮಾಳ ನೆನಪನ್ನು ಅಟ್ಟಿದ್ದೀರಿ; ಆದರೆ ನಿಮ್ಮ ಶ್ವಾಸಕೋಶಗಳು ಅವಳನ್ನು ಮರೆತಿಲ್ಲ." ಪ್ರೇಮ ಆಳವಾದ ರಾಗಭಾವ. ಗುಲಾಬಿ ರಮಾಳ ನೆನಪನ್ನು ಕೆರಳಿಸುತ್ತಿತ್ತು. ಆದ್ದರಿಂದಲೇ ಗುಲಾಬಿಯನ್ನು ನೋಡಿದರೆ ನಿಮಗೆ ಅಸಹನೆ. ನಿಮಗೆ ಭಗ್ನಪ್ರೇಮದ ನೆನಪಾಗಿ ಉಸಿರು ಹಿಡಿದಂತಾಗಿ ನೋವಾಗುತ್ತಿತ್ತು. ಕ್ರಮೇಣ ಅದೇ ಅಸ್ತಮಾಕ್ಕೆ ತಿರುಗಿತು. ನಿಮಗೆ ಆ ವೇದನೆಯಲ್ಲೂ ಒಂದು ಬಗೆಯ ತೃಪ್ತಿಯಿರಬೇಕು."

“ಹೌದು ಡಾಕ್ಟರ್. ಅದು ತೃಪ್ತಿಯಲ್ಲ—ಸಹನೆ. ನನ್ನ ಅದೃಷ್ಟಕ್ಕೆ ತಕ್ಕಂತೆ ಸರಿಬಾಗಬೇಕು—ಎಂದು ನಾನು ಸಹನೆಯಿಂದ ಅನುಭವಿಸುತ್ತಿದ್ದೆ ಅಷ್ಟೇ.”

ಜೈರಾಜ ನಕ್ಕರು. “ನೀವು ಹಾಗೆ ಸಂತೈಸಿಕೊಂಡಿದ್ದೀರಿ ನಿಮ್ಮ ಮನಸ್ಸಿನಲ್ಲಿ ನಿಜವಾಗಿ ಅಳುಕಿದ್ದಿತು—ಸ್ವಲ್ಪ ಹೇಡಿತನದಿಂದಲೇ ವರ್ತಿಸಿ, ರವಮ್ಮನ್ನ ಕಳೆದುಕೊಂಡೆ ಎಂದು. ನೀವು ಅಸ್ವಾಸ್ಥ್ಯದಿಂದ ತೊಂದರೆಪಡುವಾಗ ಆ ತಪ್ಪಿಗೆ ಪ್ರಾಯಶ್ಚಿತ್ತವಾಗುತ್ತಿದೆ ಎಂಬ ಭಾವನೆಯಿತ್ತು. ನಿಮಗೆ ಅದೇ ತೃಪ್ತಿ ಖಂಡಿತ. ಇದು ಅಲರ್ಜಿಯ ದೋಷವಲ್ಲ. ಜಮುನಾ ನೀವು ಸೀರೆ ಕೊಳ್ಳದ ವಿಷಯ ಹೇಳಿದಳು. ರಾತ್ರಿ ನಿಮ್ಮ ಕೋಪ ನೋಡಿದೆ. ನನಗೆ ಅನುಮಾನವಾಯಿತು—ಏನೋ ಒಳಕಾರಣ ಇದೆ ಎಂದು. ಗುಲಾಬಿಯ ಪರಾಗ ನಿಮ್ಮ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ. ಆದರೆ ಕಾಗದದ ಗುಲಾಬಿಯ ಹೂ ಕಂಡೊಡನೆ ಮೈಲ್ಡ್ ಆಟ್ಯಾಕ್ ಪ್ರಾರಂಭವಾಯಿತು.”

ರಘುವಿನ ಮನಸ್ಸಿಗೆ ಆಳವಾಗಿ ನಾಟಿತು ಆ ಮಾತು.

ಸೀತಾ ಮಕ್ಕಳಿಗೆ ಆರತಿ ಮಾಡಲಿಕ್ಕೆ ಎಲ್ಲ ಅಣಿಮಾಡಿಕೊಂಡಿದ್ದಳು. ರಘು ತಂದಿದ್ದ ಜಾರ್ಜೆಟ್ ಸೀರೆಯುಟ್ಟಿದ್ದಳು. ಸ್ವಲ್ಪ ಖಿನ್ನಳಾಗಿದ್ದಳು.

ರಘು ಸೈಕಲ್ಲಿನಲ್ಲಿ ಬಂದು ಸೀತೆಯನ್ನು ಕೂಗಿದ. ಸೀತಾ ಕುತೂಹಲದಿಂದ ಬಂದಳು. ಕಾಗದದ ಪೊಟ್ಟಣವನ್ನು ಅವಳ ಕೈಗೆ ನಗುತ್ತಾ ಕೊಟ್ಟ.

ಸೀತೆ ಬಿಚ್ಚಿದಳು—ತಾನು ಆರಿಸಿ, ರಘು ಬೇಡವೆಂದಿದ್ದ ಗುಲಾಬಿ ಸೀರೆ ಅವಳ ಮುಖ ಅರಳಿತು.

“ನನಗೆ ದೀಪಾವಳಿಯ ಉಡುಗೊರೆ, ಸೀತಾ? ಈಗಲೇ ಉಟ್ಟುಕೋಬೇಕು,”

ಸೀತಾ ಹಿಗ್ಗುತ್ತಾ ಹೋಗಿ ಒಂದು ಕ್ಷಣದಲ್ಲಿ ಅದನ್ನುಟ್ಟುಕೊಂಡು ಬಂದರು.

“ಇನ್ನೆಂದೂ ಗುಲಾಬೀನ ನಿಮ್ಮ ಇಷ್ಟಕ್ಕೆ ವಿರೋಧವಾಗಿ ಮುಡಿಯೊಲ್ಲಾಂದ್ರೆ. ನೀವು ಹೀಗೆ ನಗ್ತಾ ಇದ್ದರೆ ಸಾಕು—ಅದೇ ನನಗೆ ದೊಡ್ಡ ಉಡುಗೊರೆ. ಈ ದಿನ ನನಗೆ ನಿಜವಾದ ದೀಪಾವಳಿ ಅನ್ನಿಸಿದೆ.”

ರಘು ತನ್ನ ಕೋಟಿನ ಜೇಬಿನಿಂದ ಗುಲಾಬಿಯನ್ನು ತೆಗೆದು ನಗುತ್ತಾ ಅವಳಿಗೆ ಮುಡಿಸಿದ.

“ಇಲ್ಲ ಸೀತ. ನೀನು ಇನ್ನು ದಿನಾ ಗುಲಾಬಿ ಮುಡಿದರೂ ನಾನು ಏನೂ ಅನ್ನುವುದಿಲ್ಲ....ನನ್ನ ಎದೆಯ ಕತ್ತಲು ಹರಿದಿದೆ. ಅಲ್ಲೂ ದೀಪ ಬೆಳಗುತ್ತಿದೆ....” ಅಂದ.

ಸೀತಾ ಚಕಿತಳಾಗಿ ಅವನ ಮುಖ ನೋಡಿದಳು. ಅವನ ಕಣ್ಣುಗಳು ಸಪ್ರೇಮದಿಂದ ಅವಳನ್ನೇ ನಿಟ್ಟಿಸುತ್ತಿದ್ದುವು. ಸೀತಾಗೆ ಅವನ ಮೆಚ್ಚಿಗೆ ತಿಳಿಯಿತು. ಆದರೆ ಅವನ ಮಾತಿನ ಅಂತರ್ಯ ತಿಳಿಯಲಿಲ್ಲ.

# ಸಂಗಮ

**ಶ್ರೀ. ಶ್ರೀಕಾಂತ, ಶಮನೇವಾಡಿ**

೧

ಹೆಣ್ಣು ತಾನು ಹೂಬಳ್ಳಿಯಾಗಿ
ಮಾಮರದ ಗಂಡಿಗೆಳಸಿ
ಆಸೆಕುಡಿಯ ವೈಖಾರಿ ಅಡಿಯ
ಮುಂದಿಡುತ ಬಂದು ಬಳಸಿ
ಮಂದಗಮನೆವಧು ಬಂದು ನಿಲಲು
ಮಾಮರದವರನು ಹಿಗ್ಗಿ
ರೆಂಬೆದೋಳಿನಲಿ ತಂಗಬಾರೆ
ಎಂದೆಳೆದನೆಡೆಗೆ ತಬ್ಬಿ.

೨

ಜೋಡಿಗೂಡಲೊಡವೋಡಿ ಆಡುವರು
ಗೂಡ ಬೀಡ ಮರೆತು
ಪ್ರೀತಿಗೀತಗಳ ತೀರ್ಥದಲ್ಲಿ
ಈಜುವರು ಭಾವಬೆರೆತು
ಹೋಳುಗಣ್ಣುಗಳು ಹೊರಳಿನೋಡುತಿರೆ
ಮರುಳ ಮಾಟದಲ್ಲಿ
ಚೆಲುವು-ಒಲವುಗಳ ಚಿಲುಮೆ ಚಿಮ್ಮುವುದು
ಹೃದಯಂತೋಟದಲ್ಲಿ
ಬೆರಸತಾರ ಬಗೆ, ಸುರಿಸತಾರ ನಗೆ —
ಮುತ್ತಿನ ಮರ ತುತ್ತು
ಅವನು ಅವಳಿಗೆ—ಅವಳು ಅವನಿಗೆ—
ನೀಡಿ ಪಡೆವರಿತ್ತು

೩

ಅಂಗಅಂಗ ಪ್ರತ್ಯಂಗದಲ್ಲಿ
ಮಧುಮದನರಸವೆ ತುಳುಕಿ;
ಚೂತಮರವನೇರುವಳು ಹೂತ
ಆ ಮುಗುರುದೆಸಲ್ಲಿ ಬಳುಕಿ
ಎರಡುಕೂಡಿ ಒಂದಾಗಿ ಒಂದೆ
ಆ ಒಂದು ಬಿಂದುರೂಪ—
ಬಿಂದು ಬಿಂದು ಅನುರಾಗಸಿಂಧು
ಪೂರ್ಣೇಂದುಪ್ರೇಮದೀಪ

# ನವ್ಯಕಾವ್ಯದ ವೈವಿಧ್ಯ-ವೈಶಿಷ್ಟ್ಯಗಳು

ಶ್ರೀ. ಬಿ. ಎಚ್. ಶ್ರೀಧರ, ಎಂ. ಎ., ಕುಮಟಾ

●

**ಸದ್ಯದ ನವ್ಯದೃಷ್ಟಿಯಲ್ಲಿ ನವ್ಯಗದ್ಯ ನಿರರ್ಥಕ. ಪದ್ಯತ್ವರಹಿತವಾದ ವಾಕ್ಯರಚನೆ ತಂತ್ರಜಟಿಲವಾದರೆ, ಅದರ ಫಲವು ಒಡಪುಗಳ ವಾಚನವಷ್ಟೆ ! ಅದೊಂದು ಬಗೆಯ ಚಿತ್ರಕಾವ್ಯ !**

●

ನವ್ಯಕಾವ್ಯ ಅಥವಾ "New Literature" ಎಂಬುದು ಹೊಸಗನ್ನಡದ ಹೊಸ ಮಾದರಿಯೆಂದು. ಅದರಲ್ಲಿ ಗದ್ಯಕಾವ್ಯ, ಪದ್ಯಕಾವ್ಯ ಎಂದು ಎರಡು ವಿಧ. ಅಕ್ಷರಗಣ-ಮಾತ್ರಾಗಣಗಳೆರಡಕ್ಕೂ ಬಗ್ಗದ ಪಂಕ್ತಿಗಳಿದ್ದಲ್ಲಿ, ಅವನ್ನು ನವ್ಯಗದ್ಯವೆನ್ನುತ್ತಾರೆ. ಅಲ್ಪ ಸ್ವಲ್ಪ ಛಂದೋನಿಯಮಭಂಗ ಮಾಡಿದಲ್ಲಿ ನಾಟಕೀಯಕ್ಷಮ್ಯತೆಯಿದ್ದರೆ ಅದನ್ನು ನವ್ಯಪದ್ಯವೆನ್ನುತ್ತಾರೆ. ಸ್ವಚ್ಛಂದ ಛಂದು ಮುಕ್ತಛಂದಗಳು ಈ ನಮೂನೆಯ ಗದ್ಯಛಂದಸ್ಸಿನ ಭಿನ್ನ ಬಗೆಗಳು,

ನವ್ಯಕಾವ್ಯ ಅಥವಾ-ಸಾಹಿತ್ಯ ಹೊರಡುವ ಕಾಲಕ್ಕೇ ವಿವಿಧಗದ್ಯನವ್ಯತೆಯಿಂದ ಹೊರಟಿತು. ಆ ಗದ್ಯಗಳನ್ನು ಇಂದಿಗೂ ಕೆಲ ಕವಿಗಳು "ಓದುಗಬ್ಬ"ಗಳೆಂದು ಹಟ ಹಿಡಿದು ಹೇಳುತ್ತಾರೆ; ಎಂದರೆ "ಓದುವ ಪದ್ಯ" ಎಂದು ಅವರ ಇಷ್ಟ ಅರ್ಥ—ಓದುವುದೆಂದರೆ ಗದ್ಯ ಓದಿದಂತೆ, ವಚನ ಹೇಳಿದಂತೆ, ಮಾತಾಡಿದಂತೆ. ಪ್ರಿನ್ಸಿಪಾಲ್ ಗೋಕಾಕರೂ ಚೆನ್ನವೀರ ಕಣವಿಯವರೂ "ಗೇಯನವ್ಯ"ವನ್ನೂ ಬರೆದಿದ್ದಾರೆ. ಆದುದರಿಂದ ನವ್ಯಕಾವ್ಯದಲ್ಲಿ ವಾಚನೀಯ, ಪಠನೀಯ, ಗೇಯ ಎಂಬ ಮೂರುವಿಧಗಳಿವೆ ಎಂದಹಾಗಾಯ್ತು.

ಕೆಲ ನವ್ಯ-ಗದ್ಯ-ಕವಿಗಳು, ಪ್ರತಿಮಾಮಾಲೆಯ ಹೆಣಿಗೆಯನ್ನು ಮೊದಲುಮಾಡಿದರು. ಆ ಭಿನ್ನರಾಶಿಯ ರೂಪಕ ಸಮುಚ್ಚಯವು ಕಾವ್ಯದ ಆದ್ಯಂತ ವ್ಯಾಪಿಸುವಂತೆ ಅವರು ಬರೆದರು. ಅವರ ಆ ಸಂಕೇತಭಾಷೆಯ ನಿರ್ಮಾಣಕ್ಕೆ ಪದಲೋಪತಂತ್ರವನ್ನು ಬಳಸಿದರು. ರೂಪಕದ ಕುಟುಂಬಕ್ಕೆ ಸೇರಿದ ಎಲ್ಲ ಅಲಂಕಾರಗಳಲ್ಲೂ ನ್ಯೂನಪದರಚನೆಯಿಂದ ಅವರು ಪ್ರತಿಮೆಗಳನ್ನು ಮಾಡಿದರು. ಆ ಪ್ರತಿಮೆಗಳಲ್ಲಿ ಉಪಮಾನ-ಉಪಮೇಯಗಳಲ್ಲಿಯ ಸಾದೃಶ್ಯ ಹಾಗೂ ವಿರೋಧಧರ್ಮಗಳ ಅಲ್ಪತೆಯನ್ನೂ ದುಷ್ಕಲ್ಪನೀಯತೆಯನ್ನೂ ಆರೂಢತೆಯನ್ನೂ ಅಲಕ್ಷಣೀಯತೆಯನ್ನೂ ಅಪ್ರಸಿದ್ಧಿಯನ್ನೂ ಅತಿ ಸಾಹಸ ತುಲನೀಯತೆಯನ್ನೂ ಲೆಕ್ಕಿಸಿದ್ದಿಲ್ಲ. ಆದುದರಿಂದ ಅವು ಜನರಿಗೆ ಅಗಮ್ಯವಾದುವು, ವಿಮರ್ಶಕರಿಗೆ ಅಸಂಬದ್ಧವಾದುವು.

ಆದರೆ ಕೆಲ ಉತ್ತಮ ನವ್ಯಕವಿಗಳು ಸರಳಗದ್ಯದಲ್ಲಿ ಸುಲಭಗ್ರಾಹ್ಯ ಪ್ರತೀಕಗಳನ್ನು ಬಳಸಿ, ನಡುನಡುವೆ ಉಸಿರಾಡಿಸುವ ವೇಳೆಯನ್ನು ಓದುಗನಿಗಿತ್ತು, ವಿಚಾರದಿಂದ ಪ್ರತಿಮೆ-ಪ್ರತಿಮೆಗಳನ್ನು ಕೂಡಿಸಿಕೊಂಡು, ತಾತ್ಪರ್ಯವನ್ನು ಗ್ರಹಿಸಲು ಅವಕಾಶಕೊಟ್ಟರು. ಇಂಥಲ್ಲಿ ಕೆಲವೆಡೆ ಬೆಳ್ನುಡಿ ಬಂದರೂ, ನೇಯಾರ್ಥಗ್ರಹಣದ ಅವಶ್ಯಕತೆ ತಲೆದೋರಿದರೂ. ಧೇನಿಸಿದರೆ ಕವಿಹೃದಯ ಊಹ್ಯವಾಗಿಯಾದರೂ ಹೊಳೆದು ಓದುಗನಿಗೆ ಸಮಾಧಾನ ದೊರಕಿತು. ಕೆಲ ಪದ್ಯನವ್ಯರು ಲಘುಭಾವಗಳನ್ನು ಗೇಯವಾಗಿಯೂ ಬರೆದು ಉಪಕರಿಸಿದರು; ಪ್ರತಿಮಾಮಾಲೆಯನ್ನು ಅರ್ಥಸ್ಫುಟತೆಗೆ ಅನುಕೂಲವಾಗಿ ರಚಿಸಿದರು. ಈ ಪ್ರಯತ್ನದಿಂದ ಕನ್ನಡ ರಸಿಕರಲ್ಲಿ ನವ್ಯಕಾವ್ಯಾಭಿರುಚಿ ಹುಟ್ಟಿತು.

ಕೆಲ ನವ್ಯಗದ್ಯಗಳು ಜುಗುಪ್ಸಾಮಯ ಪ್ರತಿಮೆಗಳಿಂದ ತುಂಬಿ ತುಳುಕಿದರೆ, ಮತ್ತೆ ಕೆಲವು ನೈರಾಶ್ಯನೀತಿಯನ್ನು ಬೋಧಿಸಿದವು. ಆದರೆ ಮತ್ತೆ ಕೆಲ ನವ್ಯಪದ್ಯಗಳು ಇವುಗಳಷ್ಟನ್ನೇ ಅಲ್ಲದೆ ಉತ್ಸಾಹಜನಕವಾದ ಪ್ರಸನ್ನ-ಮೃದುಭಾವಗಳನ್ನು ಮಧುರವಾಗಿ ಬಿಂಬಿಸಿದುವು ಆದರೂ ಮೊದಲ ಯತ್ನದಲ್ಲಿ ಪರಸ್ಪರಾನುಕರಣ, ಪುನರುಕ್ತಿ, ಸಾಹಸಜನ್ಯ ಚಮತ್ಕೃತಿ-ಸಂಗ್ರಹಣ ಮುಂತಾದುವು ಕಂಡುಬಂದುವು. ಕ್ರಮೇಣ ಈಗ ಅಂಥ ದೋಷಗಳು ಇಲ್ಲವಾಗುತ್ತ ಬರುತ್ತವೆ.

ನವ್ಯ ಪದ್ಯಗಳಲ್ಲಿ ಸಂತಾಪಸೂಕ್ತಗಳು ಅತ್ಯಂತ ವಾಸ್ತವಿಕ ಮತ್ತು ಸಂದರ್ಭಸಹಜ. ನಾಗರಿಕತೆಯ ಸಂಕರ ಸಂಧಿಕಾಲವೆನಿಸಿದ ಇಂದಿನ ಜನಜೀವನದಲ್ಲಿ ಕಂಡುಬರುವ ಅರ್ಥದಾರಿದ್ರ್ಯ, ನೀತಿ-ದಾರಿದ್ರ್ಯ, ವಿವೇಕದಾರಿದ್ರ್ಯ, ಧೈರ್ಯದಾರಿದ್ರ್ಯ, ಸದಭಿರುಚಿದಾರಿದ್ರ್ಯಗಳನ್ನು ವಿಡಂಬನೆಯಿಂದ, ಆವೇಶದಿಂದ, ಉದಾಹರಣೆಯಿಂದ, ಉಪಮೆಯಿಂದ, ಅತಿಶಯದಿಂದ, ವ್ಯತಿರೇಕದಿಂದ, ದುಃಖದಿಂದ, ಕ್ರೋಧದಿಂದ, ಸಂತಾಪದಿಂದ, ಸಹಾನುಭೂತಿಯಿಂದ, ಚಮತ್ಕಾರದಿಂದ, ಓಜಸ್ಸಿನಿಂದ, ಟೀಕಿಸುವ ಸಾಂದರ್ಭಿಕ ಪೂರ್ಣದೃಷ್ಟಿಯ ಪ್ರವಾಹಶಕ್ತಿ ಇಂಥ ನವ್ಯಪದ್ಯಗಳಲ್ಲಿ ಚೆನ್ನಾಗಿ ಬಂದಿದೆ. ಸರ್ವಹಿತಸರ್ವೋದಯಗಳ ಉದಾರಭಾವದ ಮಹೋನ್ನತ ಆದರ್ಶದ ದರ್ಶನವುಳ್ಳ ಮಹಾನವ್ಯಕವಿ, ಅಲ್ಪಸಂತುಷ್ಟಿಯನ್ನು ಆಸ್ಥಾನಕವಿಯಂತೆ ಅತಿಶಯಿಸಿ, ಅವಾಸ್ತವ ಆನಂದವನ್ನು ವ್ಯಕ್ತಪಡಿಸಲಾರನು. ಆಶಾವಾದಿಯಿರಲಿ—ನಿರಾಶಾವಾದಿಯಿರಲಿ, ಕಂಡ ಕಾಣ್ಕೆಯ ವ್ಯಾಪಕ ಸತ್ಯವನ್ನು ಮುದ್ದಾಂ ಬದಿಗಿಟ್ಟು, ವ್ಯಕ್ತಿಸ್ವಾರ್ಥದ ಪರತೃಪ್ತಿಯನ್ನವಲಂಬಿಸಿ, ನಮ್ಮ ಸಿದ್ಧಿಯನ್ನು ನಮ್ಮೆದುರು ಸಿಹಿಯಾಗಿ ಹೊಗಳಿ, ಪ್ರಿಯವಾದದ ಆಡಂಬರದಲ್ಲಿ ಹಿತವಾದವನ್ನು ವಧಿಸಲು ಹೊರಟ ಕವಿ, ಕುಕಲೆಗಾರನಷ್ಟೇ ಅಲ್ಲದೆ ನವ್ಯಕವಿಯಲ್ಲ.

ಸಂಕೇತದ ಬಳಕೆ ಔಚಿತ್ಯವನ್ನು ಮೀರದೆ ಇದ್ದಲ್ಲಿ, ನವ್ಯಕಾವ್ಯದ ಪದ್ಯಪ್ರವಾಹ ಸುಂದರವಾಗಿ ಹರಿದಿದೆ. ಬಳಸಿದ ಸಂಕೇತಗಳ ಅರ್ಥವ್ಯಂಜನದಲ್ಲಿ ಅತಿವ್ಯಾಪ್ತಿ, ಅವ್ಯಾಪ್ತಿ, ಅಸಂಭವಗಳು ತಲೆದೋರಿದರೆ, ಆ ಭಾಗ ಅಪಾರ್ಥಕ ವಿರುದ್ಧಾರ್ಥಕ ಅಥವಾ ಅಸ್ಫುಟಾ

ರ್ಥಕವಾಗುತ್ತದೆ. ಮಿಶ್ರಭಾವನೆಗಳನ್ನು ಹೇಳುವ "ಈಲಿಯಾ. ಟಿಕ್" ಹಠದಿಂದ ಕೆಲ ನವ್ಯಗದ್ಯಗಳು ಕೆಟ್ಟುಹೋದದ್ದು ಹೀಗೆ. ಜೊತೆಗೆ ತಂತ್ರಸೌಂದರ್ಯ ನಿರ್ಮಿಸುವ ಅದೇ ಬಗೆಯ ವ್ಯಾಮೋಹವೂ ಅಂಥ ವ್ಯರ್ಥಾಲಾಪರಚನೆಗೆ ಕಾರಣವಾಯ್ತು. ಆದರೆ ಒಬ್ಬಿಬ್ಬರು "ಪ್ರಚಂಡ" ಕವಿಗಳನ್ನುಳಿದರೆ ಮತ್ತಾರೂ ಇಂಥ ಅಸಂಬದ್ಧ ಆಲಾಪದ ಅತಿರೇಕವನ್ನು ಧೃಷ್ಟರಾಗಿ ರಸಿಕರೆದುರಿಡಬರಲಿಲ್ಲ.

ನವ್ಯಕಾವ್ಯದ ದೃಷ್ಟಿ ಅತ್ಯಂತ ಗಂಭೀರವೂ ಪ್ರಾಮಾಣಿಕವೂ ಉದ್ದೇಶನಿರ್ಭರವೂ ಆಗಿದ್ದರೂ, ಆದರ ಶೈಲಿಯಲ್ಲಿ ಪರಿಣಾಮಕತೆಯ ದೃಷ್ಟಿಯಿಂದ ವಿಪರೀತಲಕ್ಷಣೆ, ವ್ಯಂಗ್ಯ, ಉಪಮೆತ್ವಾರೋಪಗಳು ಪ್ರತಿಮಾರಚನೆಯಲ್ಲೂ ಭಾವವಚನದಲ್ಲೂ ತಾತ್ಪರ್ಯಧ್ವನಿಯಲ್ಲೂ ಪದೇ ಪದೇ ವ್ಯಕ್ತವಾಗುವುವು. ಆದರೆ ಅಸ್ಫುಟತೆಯನ್ನು ಸತ್ಕಾವ್ಯದ ಅವಿನಾಭಾವಿ ಅಂಗವೆಂದು ಹಟಹಿಡಿದ ಕವಿಗಳು ಮಾತ್ರ ತಮ್ಮ ಅನ್ಯಥಾ ಚೆಂದವಾಗಬಹುದಾಗಿದ್ದ ಕಾವ್ಯಗಳನ್ನು ಚಿತ್ರದುಷ್ಟವನ್ನಾಗಿ ರೂಪಿಸಿಬಿಟ್ಟರು, ತೊನ್ನಬಡಕ ಸುಂದರಿಯನ್ನಾಗಿ ಮಾಡಿಬಿಟ್ಟರು. ಇದು ನವ್ಯಕಾವ್ಯದ ಪ್ರಯೋಗದಶೆಯಾಗಿರುವುದರಿಂದ ಇಂಥ ಎಲ್ಲ ಪ್ರಯತ್ನಗಳೂ ಆಗಿಹೋದದ್ದು ಸ್ವಾಭಾವಿಕವೆನ್ನಬಹುದು; ಆದರೆ ಇನ್ನು ಆಗುವುದು ಹೇಯ ಎಂಬುದು ಸು…

ಮಾತ್ಯಮಾರ್ಗವನ್ನು ನೋಡಲಿಗೆತ ಪರಿಮಿತಗೊಳಿಸುತ್ತ ಹೋದುದೇ ಲಕ್ಷ್ಯ (ವ್ಯಂಗ್ಯಸಹಿತ) ಅಥವಾ ಸೂಚ್ಯಮಾರ್ಗದ ಸಾಂಕೇತಿಕತೆಯನ್ನು ಅತಿಯಾಗಿ ಬಳಸಹೊರಡಲು ಕಾರಣ. ಇದೇ ರೀತಿ ನವ್ಯತೆಯ ವೈಶಿಷ್ಟ್ಯ ಈ ಸಂಕೇತಗಳ ಸಂಯೋಜನ-ಭೇದ ಆದರ ರೀತಿ ವೈವಿಧ್ಯಕ್ಕೆ ಹೇತು. ಹೀಗೆ ಸರ್ವಕಲೆಗಳ ಅಂತರ್ನಿಹಿತ ರೀತಿಸೂತ್ರವನ್ನು ಹಿಡಿದು, ಆದರ ಕುಶಲ ಉಪಯೋಗದಲ್ಲಿ ಪ್ರಯೋಗ ನಡೆಸಿದ್ದೇ ನವ್ಯಕವಿಗಳ ಪ್ರಶಂಸನೀಯ ಪರಾಕ್ರಮ. ಆದರೆ ಆದರ ವಿಕ್ಷಿಪ್ತ ಬಳಕೆ ಅಥವಾ ಅತಿವೃತ್ತಿ ನಡೆದಲ್ಲಿ ಕಲ್ಪನಾದುಷ್ಟತೆ ಹಾಗು ಅರ್ಥದುಷ್ಟತೆಗಳು ಸಂಭವಿಸಿದುವು. ಅಂಥ ದುಷ್ಟತೆಯನ್ನು ಒಳಗಿಟ್ಟುಕೊಂಡ ಗದ್ಯಪದ್ಯಗಳ ದೆಸೆಯಿಂದ ನವ್ಯಕಾವ್ಯದ ಜನಪ್ರಿಯತೆ ಬೆಳೆಯಬೇಕಾದಷ್ಟು ಬೆಳೆಯದಾಯ್ತು. ಆಗ ಇದು ಜನಪ್ರಿಯವಾಗಬೇಕಾಗಿಲ್ಲೆಂಬ ಪಿಕಾಸೋ ಭಾಷೆಯಲ್ಲಿ ಆಯಾ ಗ್ರಂಥಕರ್ತರು ಅಹಂಕರಿಸಿದರು. ಆದರ ಫಲವಾಗಿ ನವ್ಯಕಾವ್ಯ ಹಿನ್ನಡೆಯಿಡತೊಡಗಿತು. ಜೀವನದಲ್ಲಿಯೇ ಅಲಂಕಾರವಾಗಲಾರದ ಅಹಂಕಾರ ಕಾವ್ಯದಲ್ಲೆಂತಾದೀತು?

ಪದ್ಯದ ನವ್ಯದೃಷ್ಟಿಯಲ್ಲಿ ನವ್ಯಗದ್ಯ ನಿರರ್ಥಕ. ಪದ್ಯತ್ವರಹಿತವಾದ ವಾಕ್ಯರಚನೆ ತಂತ್ರಜಟಿಲವಾದರೆ, ಆದರ ಫಲವು ಒಡಪುಗಳ (ಒಗಟುಗಳು) ವಾಚನದಷ್ಟೇ. ಅದೊಂದು ಬಗೆಯ ಚಿತ್ರಕಾವ್ಯವೇ ಸರಿ. ಆ ರಂಗವಲ್ಲಿ ಹಾಕುವುದು ಕಸಬಿಲ್ಲದವರ ಕಸಬೇ. ಆದುದರಿಂದ, ನವ್ಯಪದ್ಯವೊಂದೇ ಬೆಳೆವಣಿಗೆಗೆ ಯೋಗ್ಯ. ಪದ್ಯವಾದರೆ ಅದು ಗಣಾಧೀನ. ಗಣವಿಲ್ಲದ ಪದ್ಯ ಹೆಗ್ಗಣವೇ ಸರಿ. ಸ್ವಚ್ಛಂದ-ಮುಕ್ತಛಂದಗಳು ಮಂಕುಬೂದಿಗಳು; ಮಹಾಪ್ರತಿಮೆಯ ಮಿಶ್ರರೂಪಗಳು ಅಪ್ರತಿಮ ಅಸಾಧ್ಯಭೂತಿಪ್ರಯೋಗಗಳು. ಈ ಅಂಶವನ್ನು ಚೆನ್ನಾಗಿ ಮುಂದಿಟ್ಟು ಮಾಡಿಕೊಂಡರೆ, ಕುನವ್ಯವಾವುದು ಸುನವ್ಯವಾವುದು—ಎಂದು ನಾವು ಸುಲಭವಾಗಿ ತಿಳಿದುಕೊಳ್ಳಬಹುದು. ಈ ತಿಳುವಳಿಕೆ ಇಂದು ಅತ್ಯಗತ್ಯ. ಏಕೆಂದರೆ ಇಂತಹ ಗಲಿಬಿಲಿಗಳ ದೆಸೆಯಿಂದ ರಸಿಕರು ನವ್ಯಲೇಖಕರನ್ನು ಬಹಿಷ್ಕರಿಸಲಾರಂಭಿಸಿದ್ದಾರೆ.

ಮನೋವೈಶಾಲ್ಯ, ಸಂದರ್ಭಪ್ರಾಪ್ತತೆ, ದರ್ಶನೌನ್ನತ್ಯಗಳಿಲ್ಲದೆ ಇಂದಿನ ಯಾವ ಉತ್ತಮಕಾವ್ಯವನ್ನೂ ನಾವು ಓದಿ ಅರಗಿಸಿಕೊಳ್ಳಲಾರೆವು. ಇವನ್ನು ರಸಿಕರು ಬೆಳೆಸಿಕೊಳ್ಳಬೇಕು. ಅದಕ್ಕೆ ಅನುಕೂಲ ಆವರಣವನ್ನು ನಿರ್ಮಿಸುವುದು ವಿಮರ್ಶಕರ ಕೆಲಸ. ಅಸಂಬದ್ಧ ಪ್ರಲಾಪವನ್ನು ಸುನವ್ಯವೆಂದ ಕುವಿಮರ್ಶಕನಿಂದು ನವ್ಯ ಕಾವ್ಯ-ಶತ್ರು. ಅವನ ಬಲೆಯಿಂದ ತಪ್ಪಿಸಿಕೊಂಡಾಗ ನವ್ಯಕಾವ್ಯದ ಉಗಮದ ಆದಿಕಾರಣ ಅರಿವಾಗುವುದು.

ಜಯಂತಿ


## ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

| | |
|---|---|
| ಜೈನಧರ್ಮ<br>ಶ್ರೀ. ಮಿರ್ಜಿ ಅಣ್ಣಾರಾಯರು | ೧೫-೦-೦ |
| ಹಾಲು-ಹಣ್ಣು (ಕವನ ಸಂಗ್ರಹ)<br>ಶ್ರೀ. ಭುಜೇಂದ್ರ ಮಹಿಷವಾಡಿ | ೧-೮-೦ |
| ಮೂಲಶಿಕ್ಷಣದ ಮೌಲ್ಯಮಾಪಣ<br>ಶ್ರೀ. ಮಿರ್ಜಿ ಅಣ್ಣಾರಾಯರು | ೦-೧೨-೦ |
| ಬಾಳ-ಬಂಡಿ (ಕವನ ಸಂಗ್ರಹ)<br>ಶ್ರೀ. ಬಾಳ ಬಿ. ಉಪಾಧ್ಯೆ | ೦-೮-೦ |
| ಭರತೇಶನ ನಾಲ್ಕು ಚಿತ್ರಗಳು<br>ಶ್ರೀ. ಮಿರ್ಜಿ ಅಣ್ಣಾರಾಯರು | ೧-೪-೦ |

ಅಚ್ಚಿನಲ್ಲಿ:

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ

ಪೋ.: ಸೇಡಬಾಳ (ಜಿಲ್ಲಾ ಬೆಳಗಾಂವಿ)

# ಮಾತಿನ ಮಲ್ಲಿ

ಶ್ರೀ. 'ಅಶ್ವತ್ಥ' ಬನಾರಸ

ಪುಟ್ಟಮಲ್ಲಿಗೆ ಮಾತೆ ಎಲ್ಲ ಜಗತು
ಮಾತಿನವತಾರವೇ ಮಲ್ಲಿಯೊಳಗಾಯ್ತು.
ಹರಿಯುವರಳಲ್ಲನದು, ಸಾಸುವೆಯ ಒಗ್ಗರಣೆ;
ಒಡೆಯೆ ಸಿಡಿದಣುಗಡಣ; ಮಣಿ ಜೋಡಣೆ.

ಕಪ್ಪು ಸೂರ್ಯರ ಬಿಂಬವೆರಡು ಮಾಡಲು ಸಾಕು,
ತುಟಿಯು ತಾವರೆ ತೆರೆದು ತುಂಬಿ ಹಾಡಿಗೆ ಮೊದಲು;
'ಮೃದುಮಧುರಮಾಲಾಪ' ನುಡಿನಾಟಕ,
ರೆಪ್ಪೆತೆರೆ ತಾನಾಗಿ ಬೀಳುವನಕ.

ಮೂರಡಿಯ ವಾಮನನು ಮೂರುಲೋಕವನಳೆಯೆ,
ಮೂರುಗೇಣಿನ ಮಲ್ಲಿ ಮಾತಿನೊಳಗಳೆಯುವಳು.
ಹೊಸಮತದ ಹುರುಪಿಂದಲಾತುರದ ಮಂತ್ರ,
ಹೊಸಶೈಲಿಸಾಹಿತ್ಯ ಸರ್ವ ಸ್ವತಂತ್ರ.

ಅಮ್ಮನಿಗೆ ಬಿಡುವಿಲ್ಲ, ಅಪ್ಪ ಮನೆಯೊಳಗಿಲ್ಲ,
ಒಡನಾಡಿಯೂ ಇಲ್ಲ. ಇಲ್ಲವೇ ಗೊಂಬೆ, ಗೋಡೆ?
ಮಲ್ಲಿಯೊಡನಾಡುವುವು ಕಲ್ಲು ಮಣ್ಣೂ ಎಲ್ಲ,
ಆಡದಿದ್ದರೆ ಮಲ್ಲಿ ಸುಮ್ಮನಿರಬೇಕಲ್ಲ!

ಜಗದರಹಸ್ಯವನೆಲ್ಲ ತಿಳಿಮಾಡಬೇಕವಳು.
ಸಾಕ್ರೆಟಿಸ್‌ನೊಡನಂತೆ ಅವಳೊಡನೆ ಮಾತು ಕ್ರಮ;
'ಯಾಕೆ, ಹೇಗೆ'ಯ ಸೌಟಿನಿಂದವಳು ಬಗೆದು
ತಲೆಯ ತಪ್ಪಲೆ ಬೇಗಲಾಗುವುದು ಬರಿದು.

ಹಾಲು ಬೆಳ್ಳಗೆ ಯಾಕೆ? ನೀರು ತೆಳ್ಳಗೆ ಯಾಕೆ?
ಯಾಕೆಯಾಕೆನಲೇಕೆ ಉತ್ತರಿಸುವಾಸೆ?
ನಾ ಬಂದೆ ಎಲ್ಲಿಂದ? ಅಲ್ಲಿದ್ದೆ ಯಾಕೆ?
ಅಮ್ಮನಮ್ಮನ ಅಮ್ಮ, ದೇವರಮ್ಮನು ಯಾರು?
ಅವಿತಿರುವುದೇಕವನು ಬರದೆ ಕರೆದಾಗ?
ಮನೆಮಂದಿಯೆಲ್ಲರೂ ಮಲ್ಲಿಗೇ ಮೀಸಲು,
ಮಡಿಲೊಳೇ ಕುಳಿತಿದ್ದು ಎಲ್ಲ ಮಾತಾಡುವಳು;
ಅತ್ತಿತ್ತ ತಿರುಗೆ ತಟ್ಟನೆ ಪುಟ್ಟ ಕೈಯೆತ್ತಿ,
ಗಲ್ಲವನೆ ಪಿಡಿದವಳ ಕಡೆಗೆಳೆದುಕೊಳ್ಳುವಳು;
ಎಂದಾದುದೋ ಗಾಯ, ಅವಳದಾವುದೊ ರಾಜಕೀಯ,
ಆಗುವುದು ಆಯ, ಅವಳು ಹಾಡಲು ಮಾಯ.
ಆಳೇನು, ಅರಸೇನು, ಮಂತ್ರಿತಂತ್ರಿಗಳೇನು,
ಯಾರಾದರೂ ಒಂದೆ, ಅಪ್ಪ-[illegible]ಗಳಿಗೆ
ಕಾದಿರುವುದೊಂದೆ, ಈರ್[illegible]ರ ಗತಿಯೆ.
ನುಡಿಯೊಂದ ನಡುವೆಯೆಲ್ಲಾದರೂ ತೂರುವೆಯ?
ಬೇಡ ಬಿಡು ನಿನ್ನಾಸೆ, ಎಲೆ ಮಂದಮತಿಯೆ!

ಹರಿವ ಹೊಳೆ, ಗ್ರಹ, ಸೂರ್ಯ ತಾರೆಗಳೆ ನಿಲಬಹುದು,
ಕಡಲಿನಲೆ ಕಾಲ್ನೋತು ಕಲ್ಲಾಗಬಹುದು,
ಕಾಲವೇ ಉಸ್ಸೆನುತ ವಿಶ್ರಮಿಸಲೂ ಬಹುದು,
ಮಲ್ಲಿಯಾಗಲು ಮೌನ ಜಗ ಮಲಗ ಬೇಕು—ಇಲ್ಲ, ಅವಳು!

---

# ದೇವರು

ಶ್ರೀ. 'ಅಶ್ವತ್ಥ' ಬನಾರಸ

ದೇವರು ದೇಗುಲದಲಿ ಇಲ್ಲ।
ತೆರೆಯಿರಿ ಕಣ್ಣನು ॥ ಪಲ್ಲ ॥

ಅರುಣೋದಯದಾ ರವಿಯೊಳು ಬೆಳಗುವ।
ಕಳಕಳ ಹರಿಯುವ ಹೊಳೆಯೊಳಗಾಡುವ।
ಮರಗಿಡಗಳ ಫಲಪುಷ್ಪದಿ ನಲಿಯುವ।
ಹಾರುವ ಹಕ್ಕಿಯ ಕೊರಳೊಳಗುಲಿಯುವ ॥ ೧ ॥

ಕೆಲಸದಣ್ಣನಾ ಕೈಯೊಳಗಿಹನು।
ದಣಿವಿನ ಬೆವರಿನ ಹನಿಯೊಳಗಿಹನು।
ಹುಲ್ಲುಹೆಣ್ಣಿನಾ ಹೊರೆಯೊಳಗಿಹನು।
ಕಲೆವಿದ್ಯೆಗಳಾ ಮಧ್ಯದೊಳಿಹನು ॥ ೨ ॥

ಬಡವನೊಡಲಿನಾ ಕರೆಯೊಳು ಕೇಳಿ।
ನೊಂದ ಜನರ ಸಂತೈಸುವ ನುಡಿಯಲಿ।
ಮುಂದೆ ಮುಂದೆನುವ ವೀರವಾಣಿಯಲಿ।
ಜಗವೆ ಬಂಧುವೆನುವಮಲಭಾವದಲಿ। ॥ ೩ ॥

ಆಕುಲ ಈಕುಲ ವ್ಯಾಕುಲವಿಲ್ಲ।
ಧರ್ಮಕರ್ಮವೇ ಕುಲನೆಂಟಿಲ್ಲ।
ಪ್ರೇಮದಯಾ ಸದ್ಗುಣಗಳ ಬಲ್ಲ।
ಅಂಧಾಚಾರಗಳೊಂದನು ಒಲ್ಲ ॥ ೪ ॥

# ನಂಜಿ

( ವ್ಯಕ್ತಿಚಿತ್ರ )

ಶ್ರೀ. ನಾ. ನರಸಿಂಹಮೂರ್ತಿ, ಮೈಸೂರುನಗರ

卐

**ನಂಜಿಯಂತಹರ ಹೊರಬಾಳು ಜನರ ಜುಗುಪ್ಸೆಗೆ ಪಾತ್ರವಾಗುವಂತಹದೆ! ಆದರೆ ಅವಳೂ ಮಾನವಿಯಲ್ಲವೆ? ಎಚ್ಚೆತ್ತ ಹೃದಯವಿದ್ದವಳಲ್ಲವೆ? ನಂಜಿ ಸಂತುಷ್ಟ ಜೀವಿಯಾಗಿದ್ದರೆ, ಆಕೆಯ ಹೊರಬಾಳಿನ ಬಗೆಯು ಹೀಗೆ ಇರುತ್ತಿದ್ದಿತೆ?**

卐

ನಂಜಿ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದಳು. ಅವಳನ್ನು ನೋಡಿದವರಿಗೆ, ಅವಳು ಕೆಲಸ ಮಾಡುವವಳೆಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಹೀಗೆಂದಮಾತ್ರಕ್ಕೆ ಅವಳು ಲಕ್ಷಣವಾಗಿದ್ದಳೆಂದು ತಿಳಿದರೆ ತಪ್ಪಾದೀತು. ಆಕೆಯ ಕೆದರಿದ ಕೂದಲು, ಸ್ವಲ್ಪವೇ ಸುಕ್ಕು–ಸುಕ್ಕಾಗಿರುವ ಮುಖ, ಹರಿದುಹೋದ ಕೊಳಕು ಸೀರೆ ಮತ್ತು ರವಕೆ, ಇದ್ದಕ್ಕಿದ್ದಹಾಗೆ ಯಾವುದೊಂದು ಮಾತಿಗೂ ಬಿದ್ದುಬಿದ್ದು ನಗುವ ಸ್ವಭಾವ, ಇವನ್ನೆಲ್ಲಾ ನೋಡಿದರೆ, ಅವಳೊಬ್ಬ ಹುಚ್ಚಿಯೆಂದು ಧಾರಾಳವಾಗಿ ಹೇಳಬಹುದಾಗಿತ್ತು.

ಅವಳು ನಮ್ಮ ಮನೆಗೆ ಕೆಲಸಕ್ಕೆ ಸೇರಿದ್ದೇ ಒಂದು ವಿಚಿತ್ರವಾದ ಸಂಗತಿ; ಒಂದು ದಿನ, ಕೆಲವು ವರ್ಷಗಳ ಕೆಳಗೆ, ಮಟಮಟ ಮಧ್ಯಾಹ್ನದ ಸಮಯ. ನಾವೆಲ್ಲಾ ಊಟ ಮುಗಿಸಿ ಆರಾಮವಾಗಿ ವಿಶ್ರಮಿಸಿಕೊಳ್ಳುತ್ತಿದ್ದೆವು. ಆಗ ಇದ್ದಕ್ಕಿದ್ದಹಾಗೆ ನಮ್ಮ ಮನೆಯ ಮುಂದೆ ಒಬ್ಬ ತಿರುಕಿ ಬಂದಳು. ಅವಳನ್ನು ನೋಡಿದ ನಮ್ಮ ಮನೆಯ ನಾಲ್ಕು ವರ್ಷದ ಲೀಲಾ, "ಅಮ್ಮಾ ಗುಮ್ಮ ಬಂತು" ಎಂದು ಕಿರುಚಿಕೊಂಡು ಒಳಕ್ಕೆ ಓಡಿಹೋದಳು. ನಮ್ಮ ತಾಯಿ ಈಚೆಗೆ ಬಂದವರೇ, ಅವಳಿಲ್ಲೋ ಹುಚ್ಚಿಯಿರಬೇಕೆಂದುಕೊಂಡು, "ಯಾರಮ್ಮ ನೀನು ? ನಿನಗೇನುಬೇಕು ?" ಎಂದು ಅವಳನ್ನು ಕೇಳಿದರು.

ಅವಳು, "ನನ್ನೆಸರು ನಂಜಿ ಕಣವ್ವ. ತುಂಬ ಒಟ್ಟೆ ಹಸೀತದೆ; ಅನ್ನಾ ಕೊಡೀವ್ವ" ಎಂದಳು.

ನಮ್ಮ ತಾಯಿ, "ಮಾಡಿದ್ದ ಅಡಿಗೆ ಎಲ್ಲಾ ಮುಗಿದುಹೋಗಿದೆ. ಮುಂದಕ್ಕೆ ಹೋಗಮ್ಮ" ಎಂದು ಒಳಕ್ಕೆ ಹೋದರು.

ಅವಳು ಬಿಡಲಿಲ್ಲ. ಮನೆಯ ಬಾಗಿಲ ಮುಂದೆ ಕುಳಿತೇಬಿಟ್ಟಳು. ನಾವೆಲ್ಲಾ, "ಮುಂದಕ್ಕೆ ಹೋಗಮ್ಮ" ಎಂದು ಕೂಗಿದೆವು.

ಅವಳು, "ನಿಮ್ಮಾಡಿಗೆ ನೀವು ಮನೀಕ್ಕೊಳ್ಳಿ, ಬುದ್ಧಿ. ನಾನೇನೂ ಗಲಾಟೆ ಮಾಡೊಲ್ಲ" ಎಂದು ಹೇಳಿ ಕುಳಿತೇ ಇದ್ದಳು. ಅವಳು ನಮ್ಮ ಮನೆಯ ಮುಂದೆ ಸತ್ಯಾಗ್ರಹ ಮಾಡುವುದಕ್ಕೆ ಬಂದಿದ್ದಂತೆ ತೋರಿತು. ಎರಡು ಮೂರು ಸಲ ನಮ್ಮ ತಾಯಿ ಅವಳಿಗೆ ಹೋಗುವಂತೆ ಹೇಳಿ ವಿಫಲರಾದರು. ಕಡೆಗೆ, "ಈ ಕಾಲ ನಂಬೋಕ್ಕಾಗೊಲ್ಲ. ಹುಚ್ಚಿ ಇದ್ದರೂ ಇರಬಹುದು, ಕಳ್ಳಿ ಇದ್ದರೂ ಇರಬಹುದು" ಎಂದುಕೊಂಡು ಬಾಗಿಲು ಹಾಕುವುದಕ್ಕೆ ಹೋದರು. ನಮ್ಮ ತಾಯಿ ಆಡಿದ ಮಾತು ಅವಳಿಗೆ ಕೇಳಿಸಿತೇನೋ! ಅವಳು ಕೂಡಲೇ, "ಅಮ್ಮಯ್ಯಾ ನಿಮ್ಮ ಪಾದ. ನಾನು ಒಟ್ಟೆಗಿಲ್ಲದೆ ಸತ್ತರೂ ಸರಿಯೇ, ಕದಿಯೋದಿಲ್ಲ ಕಣ್ ನಮ್ಮವ್ವ" ಎಂದು ಹೇಳಿದಳು. ನಮ್ಮ ತಾಯಿ ಕಡೆಗೆ ಅವಳಿಗೆ ಮೂರು ಕಾಸು ಕೊಟ್ಟು ಕಳುಹಿದರು.

ಪುನಃ ಮಾರನೆಯ ದಿನ ಅವಳ ಸವಾರಿ ನಮ್ಮ ಮನೆಯ ಕಡೆಗೆ ಬಂದಿತು. ನಾವೆಲ್ಲಾ, "ಇದೇನು ಗೊತ್ತು ಮಾಡಿಕೊಂಡು ಬಿಟ್ಟೆಯೋ? ನಿತ್ಯ ನಮ್ಮ ಹೊಟ್ಟೆ ತುಂಬಿಸ್ಕೊಂಡ್ರೆ ಸಾಕಾಗಿದೆ" ಎಂದೆವು.

ನಂಜಿ, "ನಿಮ್ಮ ಪಾದ ಬುದ್ಧಿ. ನನ್ನ ಒಟ್ಟೇನೂ ತುಂಬಬ್ಯಾಡ್ವಾ? ನಿಮ್ಮಂತೋರೇ ನನ್ನ ಮೇಲೆ ರೇಗ್ಬುಟ್ರೆ ಎಂಗೆ ಬುದ್ಧಿ.... ನಮ್ಮಂತೋರ ಜೀವಣ ಆಗಬೇಕು?" ಎಂದು ಸವಾಲು ಹಾಕಿದಳು

ನಮ್ಮ ತಾಯಿ, ನಿಂಗೇನು ಗಟ್ಟಿಮುಟ್ಟಾಗಿದೀಯ. ಕೆಲಸ ಮಾಡ್ಕೊಂಡು ಹೊಟ್ಟೆ ತುಂಬ್ಕೋ. ನಿಮ್ಮಂಥೋರೇ ಭಿಕ್ಷೆ ಬೇಡ್ತಿದ್ದರೆ ಇನ್ನು ಮುದುಕರು, ಕುಂಟರು, ಅವರೆಲ್ಲರ ಗತಿ ಏನು? ನಾವೂ ಎಷ್ಟು ಜನಕ್ಕೇಂತ ಹಾಕೋಕೆ ಆಗುತ್ತೆ ?" ಎಂದರು.

ನಂಜಿ, "ಅಮ್ಮಯ್ಯ, ನಿಮ್ಮನೇಲೇ ಬೇಕಾದ್ರೆ ಕೆಲಸ ಕೊಡಿ ನಂಗೆ. ಕೆಲಸ ಮಾಡೋಕೆ ನಾನು ತಯಾರಿದೀನವ್ವಾ. ನಿಮಗೆ ತೋರಿದ್ದು ಕೊಡಿ; ನೀವು ಏಳ್ದ ಕೆಲ್ಸ ಮಾಡ್ತೀನಿ" ಎಂದಳು.

ನಮ್ಮ ತಾಯಿ ಸ್ವಲ್ಪ ಯೋಚನೆಗೊಳಗಾದರು. ನಾವೆಲ್ಲಾ "ಅಯ್ಯೋ, ಅವಳು ಹುಚ್ಚಿ ಇದ್ಹಾಗೆ ಇದ್ದಾಳೆ. ಅವಳನ್ನು ಕೆಲಸಕ್ಕೆ ಇಟ್ಕೋ ಬೇಡ. ಆಮೇಲೇನಾದ್ರೂ............" ಎಂದು ಗೊಣಗಿದೆವು.

ನಂಜಿ, "ನಂಗೇನೂ ಉಚ್ಚಿಲ್ಲ ಬುದ್ಧಿ; ಒಟ್ಟೇಗಿಲ್ಲದೆ ಇಂಗಿದೀನಿ; ನಾನೂ ಬೇಕಾದಾಗ ಬ್ರಾಂಬರ ಮನೇಲಿ ಕೆಲಸ ಮಾಡಿದೀನಿ" ಎಂದು ಹೇಳಿದ ಮೇಲೆ, ನಮ್ಮ ತಾಯಿ ಅನುಮಾನಿಸುತ್ತಲೇ, "ಹ್ಞು, ನಾಳೆ ಬಾ, ನೋಡೋಣ" ಎಂದರು.

ನಂಜಿ, "ಇವತ್ತಿಗೆ ಅಮ್ಮಯ್ಯ ?" ಎಂದಳು. ನಮ್ಮ ತಾಯಿ ಅವಳಿಗೆ ಒಂದು ತುತ್ತು ಅನ್ನವನ್ನೂ, ಒಂದು ಸೌಟು ಸಾರನ್ನೂ ಕೊಟ್ಟು ಕಳುಹಿದರು.

ಮಾರನೆಯ ದಿನ ಬೆಳಗಿನ ಝಾವದಲ್ಲಿ ನಮ್ಮ ಮನೆಯ ಮುಂದೆ, "ಅಮ್ಮಯ್ಯ, ಅಮ್ಮಯ್ಯ" ಎಂಬ ಕೂಗು ಒಂದೇ ಸಮನೆ ಕೇಳಿಸಿದಾಗ ನಮಗೆಲ್ಲಾ ಎಚ್ಚರವಾಯಿತು. ನಾವು, "ಥೂ, ಇಷ್ಟೊತ್ತಿಗೇ ಏನಪ್ಪಾ ಬಂತು ?" ಎಂದು ಗೊಣಗುತ್ತ ಹೊದ್ದಿಕೆಯನ್ನು ಮುಖದ ಮೇಲೆ ಎಳೆದುಕೊಂಡೆವು.

ನಮ್ಮ ತಾಯಿ ಎದ್ದು ಹೋಗಿ ಬಾಗಿಲುತೆರೆದು ನೋಡಿದರು. ಕೂಡಲೇ, "ಇವಳೇ, ಹುಚ್ಚಿ, ನಂಜಿ" ಎಂದುಕೊಂಡು ಅವಳಿಗೆ,

"ಇಷ್ಟೊತ್ತಿಗೇ ಯಾಕೆ ಬಂದೆಯೋ ? ಇನ್ನೂ ಸರಿಯಾಗಿ ಬೆಳಕೇ ಹರಿದಿಲ್ಲ, ಆಗಲೇ ಬಂದು ಕೂಕ್ಕೋತಿದೀಯ?" ಎಂದು ಪ್ರಶ್ನಿಸಿದರು.

ನಂಜಿ, "ಇನ್ನೇನು ಬೆಳಗಾಗ್ತಾ ಬಂತಲ್ಲವ್ವ. ಬಾಕಲಿಗಷ್ಟು ನೀರಾಕಿ ಬುಡ್ತೀನವ್ವ ! ಒತ್ತು ಸರಿ ಓಗುತ್ತೆ. ಒಂದು ಕೊಡದಲ್ಲಿ ನೀರು ತಂದು ಕೊಡೀವ್ವ." ಎಂದಳು.

"ಆದು ಸರೀ ಕಣೇ. ನಿನಗೇನು ಕೊಡಬೇಕು ಹೇಳೇ ಇಲ್ವಲ್ಲೇ?"

"ಆಗಲೇ ಏಳಿದ್ನಲ್ಲವ್ವ, ನಿಮಗೆ ತೋರಿದ್ದು ಕೊಡೀವ್ವ."

ಕಡೆಗೆ ತಿಂಗಳಿಗೆ ಎರಡು ರೂಪಾಯಿ ಕೊಡುವುದೆಂದೂ, ಕಸ, ಮುಸುರೆ, ಬಟ್ಟೆ, ಬರೆ, ಇವುಗಳ ಕೆಲಸಗಳನ್ನು ಅವಳು ಮಾಡಬೇಕೆಂದೂ ನಿರ್ಧಾರವಾಯಿತು. ಅಂದಿನಿಂದಲೇ ನಂಜಿ ನಮ್ಮ ಮನೆಯವಳಾದಳು.

ನಂಜಿ ನಮ್ಮ ಮನೆಯ ಕೆಲಸಕ್ಕೆ ಸೇರಿದ್ದು ಆ ರೀತಿ. ನಮ್ಮ ಮನೆಗೆ ಸೇರಿದ ಎರಡು ಮೂರು ತಿಂಗಳಿನೊಳಗೇ ನಮ್ಮ ಬೀದಿಯಲ್ಲಿ ಅವಳಿಗೆ ಇನ್ನೂ ಎರಡು ಮೂರು ಮನೆಗಳಲ್ಲಿ ಕೆಲಸ ಸಿಕ್ಕಿತು.

ಒಂದು ದಿನ ನಾನು ನಂಜಿಯನ್ನು ಕುರಿತು, "ನಿನಗೆ ಗಂಡ–ಮಕ್ಕಳು ಇದಾರೇನೇ ?" ಎಂದು ಕೇಳಿದೆ. ಏಕೆಂದರೆ ಅವಳು ಕುಂಕುಮವನ್ನು ಇಟ್ಟುಕೊಳ್ಳುತ್ತಿದ್ದಳು.

ನಂಜಿ ಕಸಗುಡಿಸುತ್ತಲೇ, "ಅದೊಂದು ಪುರಾಣ ಬುದ್ಧಿ. ನನ್ನ ಗಂಡ ಇದಾನೆ.... ಗುಂಡುಕಲ್ಲಿದ್ದಾಗಿದಾನೆ. ನಂಗೆ ಮದುವೆ ಆಗಿ ಮುವ್ವತ್ತು ವರ್ಷ ಆತು ಬುದ್ಧಿ. ನಂಗೆ ಆಗಿನ್ನೂ ಅತ್ತು ವರ್ಷ. ದಾರೆಯ ದಿನಾನೇ ನಾನು ನನ್ನ ಗಂಡನ್ನ ನೋಡಿದ್ದು ಬುದ್ಧಿ. ಒಳ್ಳೇ ಕರಿ ಕೋರಡಿ ನಾಂಗಿದ್ದ. ಯಮದೂತನಾಗಿದ್ದ. ನಾನು ನೀವು ಕಂಡಾಗೆ ಬೆಳ್ಳಗಿದೀನಿ. ಆಗಿನ್ನೂ ಚೆಂದಾಕಿದ್ದೆ. ಇಂತೋನ ಕೊರಳಿಗೆ ನನ್ನ ಕಟ್ತಾರಲ್ಲಾಂತ ನಂಗೆ ಅಳು ಬಂತು ಬುದ್ಧಿ. ಕೋಪಾನೂ ಬಂತು. ತಕ್ಷಣ ಅಲ್ಲಿಂದ ಎದ್ದು ಓಡ್ಬುಟ್ಟೆ. ಆದರೆ ಕೂಡ್ಲೇ ನಮ್ಮಪ್ಪ ಓಡ್ಬಂದು, ನನ್ನ ಇಡ್ಕೊಂಡು ಓದ. ನನ್ನ ಕೊರಳಿಗೆ ಆ ದೂತ ತಾಳೀ ಕಟ್ಟೇಬುಟ್ಟ. ನಾನು, 'ಇನ್ನೇನು ಮಾಡೋದು ? ನನ್ನ ಪಾಲಿಗೆ ಬಂದದ್ದು' ಅಂತ ಸುಮ್ನಾದೆ.

"ನನ್ಗೊಟ್ಟೇಲೂ ಒಂದು ಮಗು ಉಟ್ಟಿತ್ತು ಬುದ್ಧಿ. ಆದ್ರೆ ಒಂದು ವರ್ಸ ತುಂಬೋದ್ರೊಳಗೇ ಕಾಯಿಲೆ ಆಗಿ ಓಗ್ಬುಡ್ತು. ಎಂಗಿತ್ತೂಂತೀರ ಆ ಮಗು! ನನ್ನಾಗೇ ಇತ್ತು" ಎಂದು ಹೇಳಿದಳು.

ಅಷ್ಟರಲ್ಲಿ ನಮ್ಮ ತಾಯಿ, "ಲೇ ಅಲ್ಲಿನೋಡು, ಕಸ ಹಾಗೇ ಇದೆ. ನೀನು ಮಾತನಾಡೋ ರಭಸದಲ್ಲಿ ಕೆಲಸಾನೇ ಹಾರಿಸ್ಬೇಡ ಬಿಡು" ಎಂದರು. ನಂಜಿ, ನಾವು ತಿಳಿದಿದ್ದಷ್ಟು ಹುಚ್ಚಿಯಲ್ಲವೆಂದೂ, ಬಹಳ ಕಿಲಾಡಿಯೆಂದೂ ನಮಗೆಲ್ಲಾ ಆಗಲೇ ಗೊತ್ತಾಗಿತ್ತು. ಅವಳ ಮುಖ್ಯವಾದ ಅಸ್ತ್ರವೆಂದರೆ ಮಾತು. ಅದೂ ಇದೂ ಮಾತನಾಡುತ್ತಲೇ, ಕೆಲಸವನ್ನು ಅಲ್ಲಲ್ಲಿಯೇ ಹಾರಿಸುತ್ತಿದ್ದಳು; ಪಾತ್ರೆಯಲ್ಲಿ ಮುಸುರೆಯನ್ನು ನಿಲ್ಲಿಸುತ್ತಿದ್ದಳು. ಬಟ್ಟೆ ಒಗೆಯುವುದಕ್ಕಂತೂ ಅವಳಿಗೆ ಬರುತ್ತಲೇ ಇರಲಿಲ್ಲ. ಎಷ್ಟೋ ಸಲ ನಮ್ಮ ತಾಯಿ ಅವಳಿಗೆ ಬಟ್ಟೆ ಒಗೆಯುವುದನ್ನು ತೋರಿಸಿಕೊಟ್ಟಿದ್ದರೂ, ಅವಳು ಒಗೆದ ಬಟ್ಟೆ ಮಾತ್ರ ಮೊದಲಿಗಿಂತ ಕೊಳೆಯಾಗಿರುತ್ತಿತ್ತು. ಅನೇಕ ತರಹೆಯ ಕರೆಗಳುಂಟಾಗಿ ಬಟ್ಟೆಗೆ ಅನೇಕ ಬಣ್ಣಗಳು ಬಂದಿರುತ್ತಿದ್ದುವು.

ನಮ್ಮ ತಾಯಿ ಎಚ್ಚರಿಸಿದ ಕೂಡಲೇ ನಂಜಿ, "ಎಲ್ಲವ್ವ ?" ಎಂದು ಕೇಳಿ, ಕೂಡಲೇ ಕಸವನ್ನು ಸರಿಯಾಗಿ ಗುಡಿಸುತ್ತಾ ತನ್ನ ಕಥೆಯನ್ನು ಮುಂದುವರಿಸಿದಳು: "ಆದ್ರೆ ಬುದ್ಧಿ, ಬರ್ತಾ ಬರ್ತಾ ಆ ದೂತ ಮನೇಗೆ ಬರೋದೇ ಬುಟ್ಟ. ಅವನು ಜವಾನನ ಕೆಲಸದಲ್ಲಿದ್ದ ಆ ಅಳ್ಳೀ ಇಸ್ಕೂಲಿನಲ್ಲಿ. ಯಾವೋಳ್ನೋ ಇಟ್ಕೊಂಡು ಅವಳ ಮನೇಲೇ ಇರಾಕೆ ಸುರುಮಾಡ್ದ ಬುದ್ಧಿ. ನಾನೂ ನೋಡೋತಂಕ ನೋಡಿ, ಕಡೇಗೆ ಒಂಜಿನ ಜಗಳ ಕಾಯ್ಕೊಂಡು ಬಂದ್ಬುಟ್ಟೆ. ಅವನ್ನ ನೋಡಿ ಅದಿನೈದು ವರ್ಷ ಆಯ್ತು ಬುದ್ಧಿ. ಪುನ ಅವನ ಅತ್ರಕ್ಕೆ ಓಗಿಲ್ಲ, ಅವನ ಮಕಾನ ನೋಡಿಲ್ಲ."

ನಾನು ಕೇಳಿದೆ: "ಅವನಿನ್ನೂ ಬದುಕಿದಾನೋ ?"

"ಬದುಕಿಲ್ಲದೇ ಏನು ಬುದ್ಧಿ. ಕಲ್ಗುಂಡಿದ್ದಾಗಿದಾನೆ. ಅವಳೂ ಅವನೂ ಸಂಸಾರ ಮಾಡ್ಕೊಂಡಿದಾರಂತೆ. ಮೊನ್ನೆ ಕೂಡ ಆ ಹಳ್ಳಿಯಿಂದ ಬಂದೋರೊಬ್ಬರು ಏಳಿದರು. ಅವನಿಗೆ ಈಗ ಮೂರು ಮಕ್ಕಳಿವೆಯಂತೆ. ಎರಡೆಣ್ಣು, ಒಂದು ಗಂಡು. ಓಗ್ಲಿ ಬುಡಿ. ಎಲ್ಲಾರೋ ಚೆಂದಾಗಿದಾನಲ್ಲ, ಅಟ್ಟೇಳಾಕು" ಎಂದು ನಿಟ್ಟುಸಿರು ಬಿಟ್ಟಳು ನಂಜಿ.

"ಈಗಲೂ ನೀನ್ಯಾಕೆ ಅವನ ಮನೇಗೆ ಹೋಗಬಾರದು ?" ನಾನು ಕೇಳಿದೆ.

"ಅಯ್ಯೋ, ನಾನು ಪುನ ಅವನ ಮನೇಗೆ ಕಾಲಿಕ್ಕೊಲ್ಲ ಬುದ್ಧಿ. ಒಂದು ಸರ್ತಿ ಯಾವಾಗ ಅವನ ಮನೇನ ಬುಟ್ಟುಬಂದೆನೋ, ಅವತ್ತೇ ಆಗೋಯ್ತು. ಇಟ್ಟರವ್ಯಾಗೆ ನಾನ್ಯಾಕೆ ಓಗಿ ಅವನಿಗೆ ಬಾರ ಆಗ್ಬೇಕು? ಅವನ್ಪಾಡಿಗೆ ಅವನಿರಲಿ, ನನ್ಪಾಡಿಗೆ ನಾನಿರ್ತೀನಿ." ನಂಜಿ ತನ್ನ ನಿರ್ಧಾರವನ್ನು ತಿಳಿಸಿದಳು.

"ಸರಿ" ಎಂದು ನಾನು ಸುಮ್ಮನಾದೆ.

ಒಂದು ದಿನ ನಂಜಿ ಕೆಲಸಕ್ಕೆ ಬರಲಿಲ್ಲ. ಅವಳ ಒಂದು ದುರ್ಗುಣವೆಂದರೆ, ತಾನು ಬರದಿದ್ದರೆ ಅದನ್ನು ಮುಂಚಿತವಾಗಿ ತಿಳಿಸುತ್ತಿರಲಿಲ್ಲ. ಇದ್ದಕ್ಕಿದ್ದ ಹಾಗೆ ತರಗತಿಗೆ ಹುಡುಗರು "ಚಕ್ಕರ್" ಕೊಡುವ ಹಾಗೆ, ಅವಳು ಎಲ್ಲರ ಮನೆಯ ಕೆಲಸಕ್ಕೂ "ಚಕ್ಕರ್" ಕೊಡುತ್ತಿದ್ದಳು. ಎಲ್ಲರೂ ಅವಳು ಬರಬಹುದೆಂದು ಕಾದು, ಕಡೆಗೆ ವಿಫಲರಾಗಿ ಅವಳಿಗೆ ಶಾಪಹಾಕಿ, ಬಹಳ ಹೊತ್ತಿನಮೇಲೆ ಕೆಲಸವನ್ನು ಮಾಡಿಕೊಳ್ಳುತ್ತಿದ್ದರು. ಎಷ್ಟೋ ಸಲ ಎದುರಿಗೇ ಬೈದು ಬೆದರಿಸಿದರೂ ನಂಜಿ ನಕ್ಕು ಸುಮ್ಮನಿರುತ್ತಿದ್ದಳು.

ಅಂದು ಹಾಗೆಯೇ ನಂಜಿ ನಮ್ಮ ಮನೆಗೆ "ಚಕ್ಕರ್" ಕೊಟ್ಟಿದ್ದಳು. ನಮ್ಮ ಮನೆಯವರೆಲ್ಲ ಬೆಂಗಳೂರಿಗೆ ಹೋಗಿದ್ದರು. ಮನೆಯಲ್ಲಿದ್ದವರು, ನಾನು ಮತ್ತು ನನ್ನ ತಮ್ಮ. ಸರಿ. ಬೆಳಗ್ಗೆ ಕಾಯುವವರೆಗೂ ಕಾದು, ಕಡೆಗೆ ಎಲ್ಲ ಪಾತ್ರೆಗಳನ್ನೂ ನಾವೇ ತೊಳೆದುಕೊಂಡು,

ಅನಂತರ ಪಾಕಸಿದ್ಧತೆ ಮುಂತಾದುವುಗಳಲ್ಲಿ ತೊಡಗಿದೆವು. ನಂಜಿಯ ಕೆಲಸ ಯಾವ ರೀತಿಯದೆಂದು ನಮಗೆ ಅಂದು ಬಲು ಚೆನ್ನಾಗಿ ಪರಿಚಯವಾಯಿತು. ನಾವು ಅಂದು ನಂಜಿಗೆ ಹಾಕಿದ ಶಾಪಗಳನ್ನು ಕೇಳಿದ್ದರೆ ಋಷಿಗಳೇ ತಲೆ ತಗ್ಗಿಸಿಬಿಡುತ್ತಿದ್ದರೇನೋ! ಪಾಕಶಾಸ್ತ್ರ-ದಲ್ಲಿ ನಮಗೆ ಹೆಚ್ಚು ಪರಿಶ್ರಮವಿಲ್ಲದಿದ್ದುದರಿಂದ, ಸಾರಿಗೆ ಉಪ್ಪು ಹೆಚ್ಚಾಗಿ ನಾಲಗೆಯು ಕೆಟ್ಟುಹೋದಂತೆ ಬುದ್ಧಿಯೂ ಕೆಟ್ಟುಹೋಗಿತ್ತು. ಮಾಡಿದ್ದ ಸಾರೆಲ್ಲವೂ ಹಾಗೆಯೇ ಇತ್ತೆಂದು ಹೇಳಬಹುದು. ಕಡೆಗೆ ಹೋಟಲಿನ ಸಾರನ್ನು ತಂದು ಊಟ ಮಾಡಿದೆವು. ಆ ಹೋಟಲಿನ ಸಾರಿಗೆ ಹುಳಿಯು ಹೆಚ್ಚಾಗಿದ್ದು, ಹೇಗೂ ನಾವು ಮಾಡಿದ ಸಾರಿಗಿಂತ ಉತ್ತಮವಾಗಿದ್ದಿತೆಂದು ಹೇಳಬಹುದಾಗಿತ್ತು.

ಅಂದು ಸಂಜೆ ನಂಜಿ ನಮ್ಮ ಮನೆಯ ಹತ್ತಿರಕ್ಕೆ ಬಂದಳು. ಅವಳ ಮುಖ ಸಪ್ಪಗಿತ್ತು. ನಾವು ಅವಳನ್ನು ಕಂಡಕೂಡಲೇ ಚೆನ್ನಾಗಿ ಗದರಿಸಿದೆವು. "ನಿನಗೆ ಈ ತಿಂಗಳ ದುಡ್ಡಿನಲ್ಲಿ ಅರ್ಧ ಹಿಡಿಯುತ್ತೇವೆ" ಎಂದು ಅರ್ಭಟಿಸಿದೆವು. ನಮ್ಮ ಹಾರಾಟವೆಲ್ಲಾ ಮುಗಿದ ಮೇಲೆ ನಂಜಿ ಮೆಲ್ಲನೆ ಒಳಕ್ಕೆ ಬಂದು, ಕಸವನ್ನು ಗುಡಿಸಲು ಮೊದಲು ಮಾಡಿದಳು. ನಮಗೆ ಇನ್ನೂ ಏನೇನು ಬೈಯಬೇಕೆಂದು ತೋರಲಿಲ್ಲ. ಮುಖವನ್ನು ಗಂಟುಹಾಕಿಕೊಂಡು ಕುಳಿತಿದ್ದೆವು. ಕ್ಷಣಕಾಲದನಂತರ ನಂಜಿ, "ನೋಡಿ ಬುದ್ಧೀ, ನಾನು ಇವತ್ತು ಬದುಕಿ ಬಂದದ್ದೇ ಎಚ್ಚು" ಎಂದು ಮಾತನ್ನು ಪ್ರಾರಂಭಿಸಿದಳು.

ನಾನು, "ಸಾಕು ನಿನ್ನ ಪುರಾಣ. ಯಾವಾಗ್ಲೂ ಏನಾದ್ರೂ ಒಂದು. ಮೊದಲೇ ಏಕೆ ಹೇಳಬಾರದಾಗಿತ್ತು, ಇವತ್ತ ಬರೊಲ್ಲಾಂತ? ನಾವೇನು ಬೇಡಾಂತಿದ್ದೇವೇ?" ಎಂದೆ, ಗಡುಸುಧ್ವನಿಯಿಂದ.

ನಂಜಿಯೆಂದಳು, "ನಂಗೇನು ಕನಸು ಬಿದ್ದಿತ್ತಾ ಬುದ್ಧೀ ಇವತ್ತು ಆವಿನ ಕೈಲಿ ಕಚ್ಚಿಸ್ಕೋತೀನೀಂತ?"

"ಹಾಗಾದರೆ ಇವತ್ತು ನಿನಗೆ ಹಾವು ಕಚ್ಚಿತ್ತೇ?"

"ಅದನ್ನೇ ಏಳೋಕೆ ಒರಟಿದ್ದೆ ಬುದ್ಧಿ. ಸುಮ್ನೆ ನನ್ನ ಮ್ಯಾಲೆ ಕೋಪ ಮಾಡ್ಕೋತೀರಿ. ಒತ್ತಾರೆ ಆಟ್ಹೊತ್ತಿಗೇ ಎದ್ದು ಮರದ ಪುಳ್ಳೆಗಳ್ನ ಆರಿಸ್ಕೊಂಡು ಬರಾಕೆಂತ ಉಕ್ಕಡದ ತಾವ್ಕ ಓದೆ ಬುದ್ಧಿ. ಎಲ್ಲಾ ಕಟ್ಟಿಗೆ ಚೂರ್‍ನ್ನ ಆರಿಸ್ಕೊಂಡು, ಒಂದು ಗುಡ್ಡೆಮಾಡಿ ಅದನ್ನ ಕಟ್ದೆ ಬುದ್ಧಿ. ಇನ್ನೇನು ಅದನ್ನ ಎತ್ತಿ ತಲೆ ಮ್ಯಾಲೆ ಇಟ್ಕೋಬೇಕು — ಆಗ ನೋಡಿ, ತಕ್ಷಣ ನನ್ನ ಬೆನ್ನ ಮ್ಯಾಲೆ ಏನೋ ಅರ್ರಾಡ್ದಾಗಾಯ್ತು. 'ಇದೇನ್ಸಂತಪ್ಪಾ ದ್ಯಾವ್ರೇಂತ, ಕಟ್ಗೇನ ಎಕ್ಹಾಕಿ ಸೀರೇನೆಲ್ಲ ಕೊಡವ್ದೆ ಬುದ್ಧಿ. ಆಟ್ಹೊತ್ತಿಗೆ ಬೆನ್ನಮೇಲೆ ಕಚ್ಚಿ ತಕ್ಷಣ ಕೆಳಕ್ಕೆ ಬಿತ್ತು ಬುದ್ಧಿ, ಒಂದು ಎಳನಾಗರ! ಆದರೆ ನನ್ನ ಪುಣ್ಯ ಚೆಂದಾಗಿತ್ತು. ಕಚ್ಚಿದ ಕೂಡ್ಲೆ ಅದು ಅಲ್ಲಿ ಒರಳ್ಲಿಲ್ಲ. ಒಂದೇ ಏಟ್ಗೆ ಮನೇಗೆ ಓಡ್ದೆ ಬುದ್ಧಿ. ಏನೇನೋ ಬೇರಿನ ಮದ್ದು ಆಕಿದ್ಲು ನನ್ನ ತಂಗಿ. ಸದ್ಯ ಬದುಕ್ಕೊಂಡೆ ಬುದ್ಧಿ.. ಅಂಗಾದ್ರೂ ಆಗ್ಲೇ ಕೆಲಸಕ್ಕೆ ಒರಟಿದ್ದೆ ಬುದ್ಧಿ. ನನ್ನ ತಂಗಿ ಬುಡ್ಲಿಲ್ಲ. 'ಸುದರಾಯ್ಸಿಕೊಂಡು ಸಂಜೇಗೋಗು' ಅಂತ ಅಂದ್ಲು. ನೋಡಿ ಬುದ್ಧಿ, ಒಂದು ದೊಡ್ಡ

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ನೀಲಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು. ಮೈಸೂರು. ಮಂಗಳೂರು. ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಹಲ್ಲು ಪೌಡರ್ ಉಪಯೋಗಿಸಿ

ಗಂಡಾಂತರದಿಂದ ಪಾರುಮಾಡ್ದ ನನ್ನ ಆ ಬಗವಂತ. ಊಂ, ಆಯುಸ್ಸು ಇನ್ನೂ ಇರೋವಾಗ, ಸಾಯಬೇಕೊಂದ್ರೆ ಆದಾತಾ?"

"ಅದು ಸರಿ. ನೀನು ಬೆಳಿಗ್ಗೇಲೇ ನಿನ್ನ ತಂಗಿ ಮನೇಯೋರ ಕೈಲಿ ಹೇಳಿಕಳುಹಿಸೋಕೆ ಏನಾಗಿತ್ತು ಹೀಗಾಗಿದೇಂತ?"

"ಅಯ್ಯೋ ಬುದ್ಧಿ. ನಾನು ಎಷ್ಟ್ಯೋ ಏಳ್ದೆ ನನ್ನ ತಂಗೀಗೆ, 'ಮೂರ್ತರಪ್ನೋರ ಮನೇಗೋಗಿ ಈ ಸಮಾಚಾರನ ತಿಳ್ಸು, ಪಾಪ ಅವರಿಗೆ ತುಂಬ ತೊಂದರೆ ಆಗ್ತದೆ' ಅಂತ. ಅವರೊಬ್ಬರೂ ನನ್ನ ಬಿಟ್ಟು ಕದಲ್ಲಿಲ್ಲ ಬುದ್ಧಿ. ಅವರಿಗೆಲ್ಲಾ ಅಷ್ಟು ಗಾಬರಿ ಆಗ್ಬುಟ್ಟಿತ್ತು ನಾನೆಲ್ಲಿ ಸತ್ತೋಗ್ತೀನೋಂತ."

ಅವಳು ಅಂದು ಯಾವುದೋ ಹಳ್ಳಿಗೆ ಹೋಗಿದ್ದಳೆಂದೂ, ಹಾವು ಕಚ್ಚಿದ್ದೆಲ್ಲವೂ ಕಟ್ಟುಕಥೆಯೆಂದೂ ಮಾರನೆಯ ದಿನ ನಮಗೆ ಗೊತ್ತಾಯಿತು.

ಇನ್ನೊಂದು ದಿನ ನಂಜಿ ಪುನಃ 'ಚಕ್ಕರ್' ಕೊಟ್ಟಿದ್ದಳು, ಎಲ್ಲರ ಮನೆಯ ಕೆಲಸಕ್ಕೂ. ನಮ್ಮ ತಾಯಿಯೂ ಚೆನ್ನಾಗಿ ರೇಗಾಡುತ್ತಿದ್ದರು. "ಏನು — ಹೆದರಿಸಿದರೂ ಇಲ್ಲ, ಅವಳ ಹುಟ್ಟುಗುಣಾನ ಅವಳು ಬಿಡೊಲ್ಲ. ತಾನು ಬರೋಕೆ ಆಗದೇ ಇದ್ದ ದಿನ ನಮಗೆ ಯಾಕೆ ತಿಳಿಸ ಬಾರದೂಂತ ನಾವು ಕೆಲಸಾನ ಮಾಡೊಳ್ಳೋಕೂ ಇಲ್ಲ. ಈಗ ಬರ್ತಾಳೆ, ಆಗ ಬರ್ತಾಳೆ, ಅಂತ ಕಾದಿರೋದು. ಆಮೇಲೆ ಬಿಸಿಲು ಹತ್ತಿದ ಮೇಲೆ ಎಲ್ಲಾ ಕೆಲಸಾನೂ ಮಾಡ್ಕೋಬೇಕು. ಹಾಳಾದೋಳು! ಅದೊಂದು ದುರ್ಗುಣ ಇಲ್ಲದೇ ಇದ್ದಿದ್ರೆ........"

ಅದರ ಮಾರನೆಯ ದಿನ ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ಸರಿಯಾಗಿ ನಮ್ಮ ಮನೆಯ ಮುಂದೆಯೇ ಸ್ವಲ್ಪ ದೂರದಲ್ಲಿ ಯಾರೋ ಹೆಂಗುಸು ಗಟ್ಟಿಯಾಗಿ ರೋದಿಸುತ್ತಿರುವುದು ಕೇಳಿಬಂತು. ನಾವು ಹೊರಕ್ಕೆಹೋಗಿ ನೋಡಿದೆವು. ಎದುರಿಗೆ ಬೀದಿಯಲ್ಲಿ, ಮೊದಲೇ ಕೆದರಿರುತ್ತಿದ್ದ ತಲೆಯ ಕೂದಲನ್ನು ಮತ್ತಷ್ಟು ಕೆದರಿಕೊಂಡು, ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ಬಿಕ್ಕಿ ಬಿಕ್ಕಿ ಅಳುತ್ತಿದ್ದ ನಂಜಿ ನಮ್ಮ ಕಣ್ಣಿಗೆ ಗೋಚರವಾದಳು. ಆಗಲೇ ಬೀದಿಯವರೆಲ್ಲಾ ಏನೋ ಭಾರಿ ದುರಂತ ನಡೆದಿರಬೇಕೆಂದುಕೊಂಡು ಅಲ್ಲಿ ಸೇರಿದ್ದರು. ಯಾರೋ ಒಬ್ಬರು ನಂಜಿಯನ್ನು ಕುರಿತು ಪ್ರಶ್ನಿಸುತ್ತಿದ್ದರು: "ಸ್ವಲ್ಪ ಸುಧಾರಿಸಿಕೋಮ್ಮಾ. ನಿಂಗೆ ಈವಾಗ ಏನಾಗಿದೆ ಹೇಳು."

ನಂಜಿ ಮತ್ತಷ್ಟು ಬಿಕ್ಕಿಬಿಕ್ಕಿ ಅಳುತ್ತಾ, "ಅಯ್ಯೋ!....... ಬು.. ದ್ಧೀ....ಅವನು....ಓ....ಗಿ ಬುಟ್ನಂತೆ...." ಎಂದಳು.

ನಾವೆಲ್ಲಾ, "ಯಾರು, ಯಾರು?" ಎಂದು ಒಟ್ಟಿಗೆ ಕೇಳಿದೆವು. ಅದಕ್ಕೆ ನಂಜಿ, "ನನ್ನ....ಸತಿ....ಬುದ್ಧಿ" ಎಂದಳು. ಅಲ್ಲಿದ್ದವರೆಲ್ಲರ ಮುಖದ ಮೇಲೂ ಅಂತಹ ಸಂದರ್ಭದಲ್ಲಿಯೂ ತಿಳುನಗೆ ತೇಲಿತು. ನಂಜಿ, 'ಗಂಡ'ನೆಂಬುದಕ್ಕೆ ಸತಿಯೆಂಬುದು ಸುಸಂಸ್ಕೃತ ಪದವೆಂದು ತಿಳಿದುಕೊಂಡಿದ್ದುದು ಎಲ್ಲರಿಗೂ ಗೊತ್ತಿತ್ತು.

ನಿಜಕ್ಕೂ ಅವಳ ಹಣೆಯ ಮೇಲಿನ ಕುಂಕುಮ ಅಳಿಸಿಹೋಗಿತ್ತು. ಅವಳ ಪಕ್ಕದಲ್ಲಿ ಅವಳು ತೊಟ್ಟಿದ್ದ ಬಳೆಯ ಚೂರುಗಳು ಬಿದ್ದಿದ್ದುವು.

ಎಲ್ಲರೂ ನಂಜಿಯನ್ನು ಸಂತಯಿಸಿದರು. ಕಡೆಗೆ ನಂಜಿ ಮುಖವನ್ನು ಒರೆಸಿಕೊಂಡು ಮೇಲಕ್ಕೆದ್ದಳು. ನಮ್ಮ ಮನೆಗೆ ಬಂದು, "ಪಾತ್ರೆ ಆಕೇವ್ವ, ತೊಳೀತೀನಿ" ಎಂದಳು.

ನಾವು, "ನಿನಗೆಲ್ಲೋ ಹುಚ್ಚು, ಗಂಡ ಸತ್ತಿದಾನೇಂತೀಯ. ಅಂಥಾದ್ದರಲ್ಲಿ ನಿನ್ನ ದುಃಖ ನಿನಗೆ. ತಿರುಗಿ ಕೆಲಸ ಮಾಡೋಕೆ ಹೊರಟಿದೀಯ. ಹೋಗು, ಹೋಗು. ಯಾರಾರೂ ನಕ್ಕಾರು. ನಿನ್ನ ಗಂಡ ಇದ್ದ ಕಡೇಗೆ ಹೋಗು. ಎಲ್ಲ ಮುಗಿದ ಮೇಲೆ ಬರೋವಂತೆ" ಎಂದೆವು. ಅವಳು ಸುಮ್ಮನಾಗಲಿಲ್ಲ. ನೇರವಾಗಿ ಅಂಗಳಕ್ಕೆ ಹೋಗಿ ಪಾತ್ರೆಯನ್ನು ಉಜ್ಜುವುದಕ್ಕೇ ಮೊದಲುಮಾಡಿದಳು. ನಾವೆಲ್ಲಾ ಎಷ್ಟೆಷ್ಟೋ ಹೇಳಿದೆವು, ಗಡುಸಾಗಿ ಅಪ್ಪಣೆ ಮಾಡಿದೆವು, ಕಡೆಗೆ ಕೇಳಿಕೊಂಡೆವು—"ಮನೇಗೆ ಹೋಗು ನಂಜಿ" ಎಂದು. ಅದೆಲ್ಲಕ್ಕೂ ಅವಳು ಕೊಟ್ಟ ಉತ್ತರವಿಷ್ಟೆ, "ಅಯ್ಯೊ ಓಗೋನು ಓದ. ಅದಕ್ಕೆ ನಾನು ಕೆಲಸಾನ ನಿಲ್ಲಿಸೋಕೆ ಆದದಾ? ಇಷ್ಟಕ್ಕೂ ನಂಗೂ, ಅವಂಗೂ ಎಂದೋ ತೊರೆದೋಯ್ತು ಬುದ್ಧಿ. ಇನ್ನ್ಯಾಕೆ ನಾನು ರಂಪ ಮಾಡ್ಲಿ?....ಉಹ್ಞ, ನಾನ್ಯಾಕೆ ಅಳಲಿ ಅವನು ಸತ್ರತೆ? ನಾನ್ಯಾರೋ, ಅವನ್ಯಾರೋ!"

ನಾವು, "ಇನ್ನು ಆ ಮೊಂಡಿಯ ಹತ್ತಿರ ಮಾತನಾಡಿ ಪ್ರಯೋಜನವಿಲ್ಲ" ಎಂದುಕೊಂಡು ಸುಮ್ಮನಾದೆವು.

ಅದರ ಮಾರನೆಯ ದಿನ ನಂಜಿ ಕೆಲಸಕ್ಕೆ ಬಂದಾಗ ಗೆಲುವಾಗಿ ಇದ್ದಳು. ಬಂದವಳೇ, "ಅಯ್ಯೊ, ಅವ್ವ, ನನ್ನ ಗಂಡ, ದೂತ ಸತ್ತಿದ್ದು ಸುಳ್ಳಂತವ್ವ. ಅವನಿಗೇನು ಚೆಂದಾಗಿದಾನಂತೆ. ಯಾರೋ ಅಂವಗಾಗದೇ ಇದ್ದೋರು ನಿನ್ನೆ ಬಂದು ನಂಗೆ ಅಗಂತ ಏಳಿದ್ರು. ಅನ್ಯಾಯವಾಗಿ ಬಳೆಯೆಲ್ಲ ಓಯ್ತು ಅವ್ವ!" ಎಂದಳು. ನಮಗೆಲ್ಲ ಕೂಡಲೇ ಗೊತ್ತಾಯಿತು: ಅವಳ ರೋದನವೆಲ್ಲ ಬರಿಯ ಆಟವೆಂದೂ, ತಾನು ಕೆಲಸದಿಂದ ತಪ್ಪಿಸಿಕೊಂಡಿದ್ದಕ್ಕೆ ಅವಳು ಒಂದು ದೊಡ್ಡ ಆಟವನ್ನೇ ಕಟ್ಟಿದಳೆಂದೂ.

ನಮ್ಮ ತಾಯಿ "ಹೋಗಲಿ ತೊಗೊ, ಬಳೆ ತೊಟ್ಕೋ" ಎಂದು ಅವಳ ಕೈಯಲ್ಲಿ ಎರಡಾಣೆಯನ್ನಿಟ್ಟರು. ಅವಳು "ಅಯ್ಯೋ ಬುದ್ಧಿ ನಿಮ್ಮ ಪಾದ" ಎಂದು ಹೇಳಿ, ದುಡ್ಡನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಳು.


## ಕ್ರೀಡಾಂಗಣ

(ಕವನ ಸಂಕಲನ)

ಬರೆಹಗಾರರು :

ಎನ್. ಎಸ್. ಗದಗಕರ

ಇದರಲ್ಲಿ ವಿವಿಧವಿಷಯಗಳನ್ನು ವಸ್ತುವನ್ನಾಗಿ
ಇರಿಸಿಕೊಂಡು ಬರೆದ ೭೬ ಕವನಗಳಿರುವವು.
ಶ್ರೀ. ಆನಂದಕಂದರ ಮುನ್ನುಡಿಯನ್ನೊಳಗೊಂಡಿದೆ.

ಕ್ರೌ. ೮. ೬೦ ಪುಟ

ಬೆಲೆ ೧ ರೂಪಾಯಿ

ಮುಖ್ಯ ಮಾರಾಟಗಾರರು :—

ಮನೋಹರ ಗ್ರಂಥಭಾಂಡಾರ, ಧಾರವಾಡ


ನಂಜಿಗೆ ಹಬ್ಬಗಳು ಬಂದುವೆಂದರೆ ಯಾರಿಗೂ ಇಲ್ಲದಷ್ಟು ಸಂಭ್ರಮ. ಇದ್ದಕ್ಕಿದ್ದಹಾಗೆ, "ಅವ್ವಾ, ಇವತ್ತು ಮನೇನ ತಾರಿಸಿ ಬುಡ್ತೀನಿ" ಎಂದು ಒಂದು ತಂಬಿಗೆಯಲ್ಲಿ ನೀರನ್ನೂ, ಒಂದು ಬಟ್ಟೆಯನ್ನೂ ಹಿಡಿದು ತರುತ್ತಿದ್ದಳು. ನಾವು, "ಯಾತಕ್ಕೆ ಇವೆತ್ತು?" ಎಂದು ಪ್ರಶ್ನಿಸಿದರೆ, "ಅಯ್ಯೋ, ಇದೇನು ಬುದ್ಧಿ, ನಾಳೆ ಅನಂತನ ಅಬ್ಬ ಅಂತಲ್ಲ ಬುದ್ಧಿ?" ಎಂದು ಹೇಳಿ "ತಾರಿಸಲು" ತೊಡಗುತ್ತಿದ್ದಳು.

ನಾವು, "ಪರವಾಗಿಲ್ಲ ನಂಜಿ, ಪುರೋಹಿತರಿಗೆ ಮರ್ತುಹೋದರೂ ನಿನಗೆ ಹಬ್ಬಗಳು ಯಾವ—ಯಾವತ್ತೂನ್ನೋದು ಮರೆಯೊಲ್ಲ" ಎಂದು ಹೇಳುತ್ತಿದ್ದೆವು.

ಹಬ್ಬದ ದಿನದ ಸಂಜೆಯಂತೂ ನಂಜಿ ಅಂದು ತನಗೆ ಸಿಕ್ಕಿದ್ದ ಅವರವರ ಮನೆಯ ಅಡಿಗೆ, ಭಕ್ಷ್ಯ, ಭೋಜ್ಯಗಳನ್ನು ತಾನು ತರುತ್ತಿದ್ದ ಗೂಡೆಯಲ್ಲಿ ವಿಂಗಡಿಸುತ್ತ, "ನೋಡಿ ಬುದ್ಧಿ, ಅಯ್ಯರ್ ಮನೇಲಿ ಒಬ್ಬಟ್ಟು, ಚಿತರಾನ್ನ; ಮೂಲೆಮನೇಲಿ ಬೋಂಡ, ಕೇಸರೀಭಾತು; ನಿಮ್ಮ ನೇಲಿ ಒಬ್ಬಟ್ಟು, ಪಾಯಸ" ಎಂದು ಮುಂತಾಗಿ ವರದಿ ಒಪ್ಪಿಸುತ್ತಿದ್ದಳು

ನಾವು, "ಪರವಾಗಿಲ್ಲನಿಂಗೇ ವಾಸಿ. ನಮಗೆಲ್ಲಾ ಒಂದೇ ಮನೆಯ ತಿಂಡಿಯಾದರೆ ನಿನಗೆ ಅನೇಕ ಮನೆಗಳದ್ದು ಸಿಕ್ಕುತ್ತೆ" ಎಂದು ಹೇಳಿದರೆ ಎಂದಿನಂತೆ, "ಅಯ್ಯೋ ಬುಡಿ ನಿಮ್ಮ ಪಾದ" ಎಂದು ಹೇಳಿ ಸುಮ್ಮನಾಗುತ್ತಿದ್ದಳು.

ಚಾಮುಂಡಿ ಬೆಟ್ಟದ ಜಾತ್ರೆ ಬಂದಾಗಲಂತೂ ಅವಳ ಸಂಭ್ರಮ ಹೇಳತೀರದು. ಜಾತ್ರೆಯ ಹಿಂದಿನ ದಿನ ನಮ್ಮ ತಾಯಿಯನ್ನು ಕುರಿತು, "ಅವ್ವಾ, ನಾನು ನಾಳೆ ಒಂದಿನ ಬರೊಲ್ಲ ಕಣವ್ವ. ನಾಳೆ

ಜಾತ್ರೆ. ತಾನಮಾಡಿ, ಆರು ಕಾಸಿನ ಕೊಪ್ರೀ ಎಣ್ಣೆ ಅಚ್ಕೊಂಡು ತಲಿ ಬಾಚ್ಕೊಂಡು, ಆರು ಕಾಸಿನ ಊವು ಮುಡ್ಕೊಂಡು, ನೀವು ಕೊಟ್ಟಿದಲ್ಲವ್ವ, ಆ ಸಾಲೀನ ಉಟ್ಕೊಂಡು ಓಗ್ತೀನವ್ವ" ಎಂದು ಹೇಳುತ್ತಿದ್ದಳು. ಆಗ ಅವಳ ಮುಖದಲ್ಲಿ ಆಟಕ್ಕೆ ಹೊರಡುವ ಹುಡುಗನ ಉತ್ಸಾಹ ತೋರುತ್ತಿತ್ತು.

ದಸರಾ ಕಾಲದಲ್ಲಿಯಂತೂ ಅವಳನ್ನು ಹಿಡಿಯುವವರೇ ಇಲ್ಲ ಪ್ರತಿದಿನ ಸಂಜೆಯೂ 'ನೋಟ'ಕ್ಕೆ ಹೋಗಿ ಬರುತ್ತಿದ್ದಳು. ಮಾರನೆಯ ದಿನ ಅದರ ವರದಿಯನ್ನು ನಮ್ಮ ತಾಯಿಯವರಲ್ಲಿ ಒಪ್ಪಿಸುತ್ತಿದ್ದಳು "ನೋಡೀ, ಏನು ಜನಾಂತೀರವ್ವ! ಅಬ್ಬಾ! ದೀಪ್ವೆಲ್ಲಾ ಪುಣಕ್ ಅಂತ ಅತ್ಕೊಂಡೋಟ್ಗೇ ದ್ಯಾವ್ರ್ಲೋಕ ಆದಾಂಗಾತು ಕಣವ್ವ" ಎಂದು ಮುಂತಾಗಿ ವರ್ಣಿಸುತ್ತಿದ್ದಳು. ವಿಜಯದಶಮಿಯ ಮಾರನೆಯ ದಿನ ನಮ್ಮನ್ನು ಕುರಿತು, "ಏನು ಚೆನ್ನಾಗಿತ್ತು ಬುದ್ಧಿಯೋರೇ! ಅಬ್ಬ, ಮಾರಾಜ್ರು ಎಷ್ಟು ಚೆಂದಾಗಿದಾರೆ ಬುದ್ಧಿ. ಅವರ ಕಿರೀಟ, ಕೈಯಲ್ಲಿ ಉಂಗುರ ....ದೇವ್ರು ಬುದ್ಧೀ, ದೇವ್ರು. ಏಟು ಪುಣ್ಯ ಮಾಡಿದ್ರೋ ಆ ಪದವೀ ಪಡೆಯೋಕೆ. ಪಾಪ ಏಟು ಅತ್ತಿರದಲ್ಲೇ ನೋಡ್ದೇಂತೀರ ಅವರ್ನ? ನಾನು ಕೈಮುಗಿದ ಕೂಡ್ಲೇ ಅವರೂ ನನ್ನ ಕಡೇಗೆ ತಿರುಗಿ ಕೈಮುಗಿದ್ರು ಪಾಪ!" ಎಂದು ಹೇಳಿ ಕಣ್ಣಿನಲ್ಲಿ ನೀರು ತಂದುಕೊಳ್ಳುತ್ತಿದ್ದಳು.

ಒಂದು ದಿನ ನಮ್ಮ ತಾಯಿ ನಂಜಿಯನ್ನು ಕುರಿತು, "ನಿನ್ನ ತಂಗಿಗೆ ಗಂಡ ಇಲ್ವೇನೇ?" ಎಂದು ಕೇಳಿದರು.

ಅದಕ್ಕೆ ಅವಳು, "ಅಯ್ಯೋ ಅವಳ ಪತಿ ಓಗಿ ಅತ್ತು ವರ್ಸ ಆಯ್ತು ಕಣವ್ವ. ನಾನೂ ಓಗಿದ್ದೆ ಮಸಣಕ್ಕೆ. ಏಟು ಬಡಕೊಂಡ್ಳೂಂತೀರ. ಬಿದ್ದು ಬಿದ್ದು ಬಡಕೊಂಡ್ಳು. ಬಳೀನ ಒಡೆಯೋದೆ ಒಂದು ರಂಪ ಆತು ತಾಯಿ. ಕಡೇಗೆ ಅವಳ ಗಂಡನ್ನ ಊಳೋವಾಗ 'ನನ್ನೂ ಅವನ್ಜೊತೆ ಊಳ್ಬುಡಿ' ಅಂತ ಕೂತಿದ್ಲು. ನಂಗತೂ ನೀವೇನಂದುಕೊಂಡ್ರೂ ಸರಿ—ತುಂಬ ನಗ ಬಂದ್ಬುಡ್ತು. 'ಅಲ್ಲ ಅವನು ಓಗೋನೋದ. ಈ ಮುಕ್ಕ ಯಾಕೆ ಇಂಗಾಡ್ತದೆ! ತಾನೇನೋ ಈ ಪರ್ಪಂಚದಲ್ಲಿ ಸದಾ ಇರ್ಬೇಕು ಅನ್ನೋ ಆಗೆ. ಅವನು ಒಸಿ ಮುಂಚೆ ಓದ, ಆ ಮೇಲೆ ಒಂದಿಲ್ಲ ಒಂಜಿನ ತಾನೂ ಓಗ್ಬೇಕು, ಎಲ್ರೂ ಓಗ್ಬೇಕು—ಅಂತ ಇದಕ್ಕೆ ತಿಳೀದೆ, ಈಗೆ ಉಚ್ಚುಚ್ಚಾಗಿ ಆಡ್ತದಲ್ಲಾ' ಅಂದ್ಕೊಂಡು ಸೆರಗಿನೊಳ್ಗೆ ಮುಖಾ ಮುಚ್ಕೊಂಡೆ ತಾಯಿ, ಇನ್ಯಾರಾರ ನಾನು ನೆಕ್ಕದ್ನ ನೋಡಾರೂಂತ" ಎಂದಳು.

ನಮ್ಮ ತಾಯಿ "ಅಯ್ಯೋ ಹುಚ್ಚಿ" ಎಂದರು.

ಅವಳು, "ಆಗೆ ಏಚಿಸ್ತಾ ಓದ್ರೆ, ಈ ಪರಪಂಚಾನೇ ಉಚ್ಚು ತಾಯಿ. ಆ ದ್ಯಾವ್ರಿಗೆ ಎಲ್ಲೋ ಉಚ್ಚಿಡ್ದಿದ್ದಾಗ ಈ ಪರ್ಪಂಚಾನ ಸೃಷ್ಟಿ ಮಾಡ್ತಾಂತ ಕಾಣುತ್ತೆ" ಎಂದು ತನ್ನ ವೇದಾಂತವನ್ನು ಹೇಳುತ್ತಿದ್ದಳು. ನಾವು ಏನು ಹೇಳಲೂ ತೋರದೆ ಸುಮ್ಮನಾಗುತ್ತಿದ್ದೆವು.


## ಒಡತನದ ಬಾಳು

( ಕಥಾಸಂಕಲನ )

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರಾ. ೩. ೧೭೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ


ಹೀಗಿರಲು, ಒಂದುದಿನ ನಂಜಿ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಯಾರೋ ನಮ್ಮ ಮನೆಯ ಮುಂದೆ ಬಂದು, "ನಂಜವ್ವ" ಎಂದು ಕೂಗಿದ ಹಾಗಾಯಿತು. ನಾವು, "ಯಾರ್ಬೇಕು?" ಎಂದಕೂಡಲೇ, "ನಂಜವ್ವ. ಇಲ್ಲಿ ಕೆಲಸ ಮಾಡ್ತಾಳಲ್ಲ, ಅವಳು ಇದಾಳಾ?" ಎಂದು ಹದಿನೆಂಟು ವರ್ಷದ ಹುಡುಗನೊಬ್ಬ ಪ್ರಶ್ನಿಸಿದ ನಾವು, "ಹ್ಞೂ, ಬರ್ತಾಳೆ" ಎಂದು ಒಳಕ್ಕೆ ಹೋಗಿ ನಂಜಿಯನ್ನು ಕೂಗಿದೆವು.

ನಂಜಿ, ಮುಸುರೆ ತಿಕ್ಕುತ್ತಿದ್ದವಳು, ಅದನ್ನು ಅರ್ಧದಲ್ಲಿಯೇ ಬಿಟ್ಟು ಈಚೆಗೆ ಬಂದು, "ಯಾರಪ್ಪ?" ಎಂದು ಹುಡುಗನನ್ನೇ ಪ್ರಶ್ನಿಸಿದಳು.

ಆ ಹುಡುಗ, "ನಾನು ಕಣವ್ವ, ತಿಮ್ಮ; ಕೆಂಪವ್ವನ ಮಗ. ನಮ್ಮಪ್ಪ ಏಳಿಕಳಿಸಿದಾನೆ ಕಣವ್ವಾ. ತುಂಬ ಕಾಯಿಲೆಯಾಗಿದೆ. ನಿನ್ನನ್ನು ನೋಡ್ಬೇಕೂಂತ ಅಂಬಲಿಸ್ತಾ ಇದಾನೆ" ಎಂದು ಒಂದೇ ಉಸುರಿಗೆ ಹೇಳಿದ.

ನಂಜಿಗೆ ತಕ್ಷಣ ಗೊತ್ತಾಯಿತು. ನಮ್ಮನ್ನು ಕುರಿತು, "ಈಗ ಬಂದಿರೋನು ನನ್ನ ಬಲಮಗ ಕಣವ್ವ. ಇದುವರ್ಗೂ ಇವನ್ನ ನಾನು ನೋಡೇ ಇರ್ಲಿಲ್ಲ ಕೆಂಪವ್ವ ನನ್ನ ಸವತಿ!" ಎಂದಳು.

ಆ ಹುಡುಗ ಪುನಃ "ಬೇಗ ಬರ್ಬೇಕಂತವ್ವ" ಎಂದ.

ನಂಜಿ, "ನಾನು ಬರೋಲ್ಲ ಓಗು. ನಂಗೂ ಅವುಂಗೂ ಯಾವತ್ತೋ ಅರಿದೋಯ್ತು" ಎಂದಳು. ಹುಡುಗನ ಮುಖದಲ್ಲಿ ನಿರಾಶೆ ಮೂಡಿತು.

ನಾವೆಲ್ಲಾ ಒಟ್ಟಿಗೆ ನಂಜಿಯನ್ನು ಗದರಿದೆವು, "ಅವನಿಗೆ ತುಂಬ ಖಾಯಿಲೆಯಂತೆ ಪಾಪ ಹೇಳಿಕಳ್ಸಿದಾನೆ, ನಿನ್ನ ನೋಡ್ಬೇಕೂಂತ. ನಿಂದೆಷ್ಟು ಜಂಭ ಹಾಗಂದ್ರಾಗೆ. ಸುಮ್ನೆ ಹೋಗಿ ನೋಡ್ಕೊಂಡು ಬಾ. ಹಾಗೆಲ್ಲಾ ಹಟತೊಡಬಾರದು!"

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯಶಾಲಾ ಲಿ. ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ [illegible] ಉಪಯೋಗಿಸಿ

ಕ್ಷಣಕಾಲ ಯೋಚಿಸಿದ ಮೇಲೆ ನಂಜಿ ಒಳಕ್ಕೆ ಹೋಗಿ ಕೈ ತೊಳೆದುಕೊಂಡು ಬಂದು, "ಅಂಗಾದ್ರೆ ಓಗ್ಬುಟ್ಟರ್ಲೇನವ್ವ?" ಎಂದು ನಮ್ಮ ತಾಯಿಯನ್ನು ಕೇಳಿದಳು.

ನಮ್ಮ ತಾಯಿ, "ಹ್ದ್ಞಾ ಹೋಗಿಬಿಟ್ಟು ಬಾ. ಒಳ್ಳೇದಾಗಲಿ. ಪಾಪ ಅವನಿಗೆ ಪಾಪಿಯಾಗಲಿ, ಬೇಗ, ದೇವರದಯದಿಂದ!" ಎಂದು ಹೇಳಿದಕೂಡಲೇ "ಎಲ್ಲ ನಿಮ್ಮ ಆಶೀರ್ವಾದ ಕಣವ್ವ, ಬತ್ತೀನಿ" ಎಂದು ಹೇಳಿ ಹೊರಟುಹೋದಳು ನಂಜಿ.

ಇದಾದ ಹದಿನೈದು ದಿನಗಳ ನಂತರವೇ ನಾವು ಪುನಃ ನಂಜಿಯನ್ನು ಕಂಡದ್ದು. ನಂಜಿ ಆಗ ಗುರುತು ಸಿಕ್ಕಲಾರದಷ್ಟು ಬದಲಾಯಿಸಿ ಹೋಗಿದ್ದಳು. ಹಣೆಯಲ್ಲಿ ಕುಂಕುಮವಿರಲಿಲ್ಲ, ಕೈಯಲ್ಲಿ ಬಳೆಗಳಿರಲಿಲ್ಲ. ಜೂಲಾದ ಸೀರೆಯನ್ನುಟ್ಟು ತಲೆಯ ಕೂದಲನ್ನು ಹಿಂದೆಂದೂ ಕೆದರದಷ್ಟು ಕೆದರಿಕೊಂಡಿದ್ದಳು. ಕಣ್ಣುಗಳು ಸ್ವಲ್ಪ ಗುಳಿಬಿದ್ದಿದ್ದುವು. ಅವುಗಳ ಸುತ್ತ ಕರಿಯ ಉಂಗುರಗಳು ಅಸ್ಪಷ್ಟವಾಗಿ ಮೂಡಿದ್ದುವು. ಆ ಹದಿನೈದು ದಿನಗಳಲ್ಲೇ ನಂಜಿ ತನ್ನ ಗಾತ್ರದಲ್ಲಿ ಅರ್ಧವಷ್ಟು ಇಳಿದುಹೋಗಿದ್ದಂತೆ ತೋರುತ್ತಿತ್ತು. ಯಾವಾಗಲೂ ನಮ್ಮನ್ನು ಕಂಡೊಡನೆಯೇ ಮುಖದಲ್ಲಿ ಮುಗುಳ್ನಗೆಯನ್ನು ತಂದುಕೊಳ್ಳುತ್ತಿದ್ದ ನಂಜಿ, ಅಂದು ಆಟದ ಸಾಮಾನನ್ನು ಕಳೆದುಕೊಂಡ ಮಗುವಿನಂತೆ ಮುಖವನ್ನು ಚಿಕ್ಕದು ಮಾಡಿಕೊಂಡಿದ್ದಳು. ಮೌನವಾಗಿಯೇ ಬಂದು ನಮ್ಮ ಬಾಗಿಲಲ್ಲಿ ನಿಂತಳು.

ನಮ್ಮ ತಾಯಿ ಮೆಲ್ಲನೆ, "ಏನು ನಂಜಿ ಹೀಗಿದೀಯ?" ಎಂದು ಪ್ರಶ್ನಿಸಿದರು. ಅದಕ್ಕೆ ನಂಜಿ, ಕ್ಷಣಕಾಲ ನಮ್ಮನ್ನೆಲ್ಲಾ ದೃಷ್ಟಿಸಿ, ಆ ನಂತರ ಬಿಕ್ಕಿಬಿಕ್ಕಿ ಅಳಲು ಮೊದಲುಮಾಡಿದಳು. ನಮಗೆಲ್ಲಾ ಕಾರಣವು ತಕ್ಷಣ ಗೊತ್ತಾಗಿ ಸುಮ್ಮನಿದ್ದೆವು, ಆಶ್ಚರ್ಯವನ್ನು ಪಟ್ಟೆವು— ತನ್ನ ಗಂಡನನ್ನು ಕಂಡರೆ ಅಷ್ಟು ತಿರಸ್ಕಾರದಿಂದಿದ್ದವಳು ಈಗ ಹೀಗೆ ರೋದಿಸುತ್ತಾಳಲ್ಲ— ಎಂದು.

ಸ್ವಲ್ಪ ಹೊತ್ತಿನ ಮೇಲೆ ತನ್ನ ಸೀರೆಯ ಸೆರಗಿನಿಂದ ಕಣ್ಣೀರನ್ನು ಒರೆಸಿಕೊಳ್ಳುತ್ತ ನಂಜಿ ಹೇಳಿದಳು: "ಅಯ್ಯೋ, ಕಡೆಗೂ ಓಗ್ಬುಟ್ಟ ಕಣವ್ವ ನನ್ನ ಯಜಮಾನ. ಪಾಪ ಪ್ರಾಣಿ. ಸಾಯೋದು ನಾಕೇ ತ ನನ್ನ ಕರಸ್ಕೊಂಡ. ಓದೋಳೇ ಅವನು ಅಂಗೆ ಮಲಗಿರೋದು ನೋಡಿ ನಂಗೆ ಕರುಳೇ ಕಿತ್ತುಬರೋ ಅಂಗಾಯ್ತು ಕಣವ್ವ. ಎಂಗಿದ್ದ! ಒಳ್ಳೆ ಯಮದೂತನಂತಿದ್ದೋನು ಮೂಳೆ ಚಕ್ಕಳ ಆಗ್ಬುಟ್ಟಿದ್ನಲ್ಲವ್ವ! ನಾನೋದೇಟ್ಗೆ ಎದ್ದು ಕೂತ್ಕೋಳ್ಳೋಕೇ ಓದ. ನಾನೇ ಕೈ ಇಡು ಮಲಗಿಸ್ದೆ. ಆಮೇಲ್ನೋಡೀ, ನಂಗೆ ಇಂಗೇಳ್ದ: "ನೋಡು ನಂಜಿ, ನಾನು ನಿಂಗೆ ತುಂಬ ಅನ್ಯಾಯ ಮಾಡಿದೆ. ಲಗ್ನ ಆದಾಗ್ನಿಂದ ಒಂದಿನ ಸುಖ ಪಡಿಸ್ನಿಲ್ಲ. ಕಡೇಗೆ ನೀನೇ ಮನೇಬುಟ್ಟು ಓಗೋ ಆಗೆ ಮಾಡ್ದೆ. ಈಗದೆಲ್ಲ ನ್ಯಪ್ತೀಗೆ ಬಂದು ಒಟ್ಟೇ ಉರೀತಾ ಇದೆ. ನಾನು ಆಸು ಗೋಳೀಕ್ಕೊಂಡ್ರೂ, ಸಾಯೋಕಾಲಕ್ಕೆ ನೀನು ನನ್ನ ಮಾತಿಗೆ ಬೆಲೆ ಕೊಟ್ಟು ಬಂದೆ. ನಾನು ನಿಂಗೆ ಇದುವರ್ಗೂ ಮಾಡ್ದ ತಪ್ಪನ್ನೆಲ್ಲಾ ನೀನು ಕ್ಷಮಿಸ್ದೀನೀಂತ ಬಾಸೆ ಕೊಟ್ರೆ, ಸುಕವಾಗಿ ಪರಾಣ ಬುಡ್ತೀನಿ" ಅಂತ ಏಳಿ ಕೈ ನೀಡ್ದ ಅಮ್ಮಯ್ಯ. ಅವಂಗೂ ಕಣ್ಣಾಗೆ ನೀರ್ ಬಂದಿತ್ತು. ನಂಗೂ ಒಟ್ಟೇಲಿ ಬೆಂಕಿ ಆಕ್ದಾಗಾಯ್ತು. ಅಮ್ಮಯ್ಯ' ತುಂಬ ಅತ್ಬುಟ್ಟೆ. ಕಡೇಲಿ ಅವನ ಕೈಮ್ಯಾಲೆ ಕೈಯಿಟ್ಟೇಳ್ದೆ, 'ನಿನ್ನ ಕ್ಷಮಿಸೋ ಅಷ್ಟು ಅಧಿಕಾರ ನಂಗೆಲ್ಲಿ ಬಂತು ನನ್ನೊಡೆಯ. ನನ್ನ ಣೇಲಿ ಬರದದ್ದು ನಾನು ಅನುಬವಿಸ್ದೆ. ಅದಕ್ಕೆ ನಿಂದೇನು ಬಂತು ತಪ್ಪು, ಯಾರದ್ದೂ ತಪ್ಪಿಲ್ಲ.' ಅಂತ ಒಂದು ಸಲ ನನ್ನ ಕಡೆ ನೋಡಿ ಮೆತ್ತಗೆ, 'ನೀನು ದೇವರಂತೋಳು ನಂಜಿ, ನಿನ್ನ ಸುಕವಾಗಿ ಇಟ್ಕರೊ ಪುಣ್ಯಾನ ನಾನು ಪಡೆದಿರ್ನಿಲ್ಲ' ಎಂದೇಳ್ದ. ಕೂಡ್ಲೇ ಗ್ನಾನ ಓಯ್ತು ಕಣಮ್ಮಯ್ಯ. ತಿರುಗ ಬರ್ಲೇ ಇಲ್ಲ. ಮಾರನೇ ಜಿಣಾನೇ ಓಗ್ಬುಟ್ಟ." ನಂಜಿ ಪುನಃ ಬಿಕ್ಕಿ ಬಿಕ್ಕಿ ಅಳಲು ಮೊದಲುಮಾಡಿದಳು. ನಾವೆಲ್ಲಾ ಸಮಾಧಾನ ಮಾಡಿದೆವು.

ಅವಳು ಹೇಳಿದಳು: "ನಾನು ಕನಸಿನಾಗೂ ಎಣಿಸಿರ್ನಿಲ್ಲ ಅಮ್ಮಯ್ಯ, ನಂಗಿಂತ ಅವನು ಮುಂಚೆ ಓಗ್ತಾನೇಂತ. ಎಂಗಿದ್ದ! ಈಗ ಅವನೆಲ್ಲಿ, ನಾನೆಲ್ಲಿ! ಅವನು ಬದುಕಿದ್ದಾಗ ನನ್ನ ಈ ಗತೀಗೆ ತಂದಾಂತ ಉಚ್ಚಾಪಟ್ಟೆ ಬಯ್ತಿದ್ದೆ ಕಣವ್ವ. ಆದರೆ ಈಗ ........" ಮತ್ತೊಮ್ಮೆ ಕಣ್ಣಿನಲ್ಲಿ ನೀರು ತಂದುಕೊಂಡಳು ನಂಜಿ. ನಾವೆಲ್ಲಾ ಪುನಃ ಸಮಾಧಾನವನ್ನು ಹೇಳಿದೆವು. ಕೆಲವು ಕ್ಷಣಗಳನಂತರ ನಂಜಿ "ನಾನು ನಾಳೆ ಕೆಲಸಕ್ಕೆ ಬತ್ತೀನವ್ವ. ಇವತ್ತು ನನ್ನ ಕೈಲಿ ಆಗಾಕಿಲ್ಲ." ಎಂದು ಹೇಳಿ ಹೊರಟಳು. ನಮ್ಮ ತಾಯಿ, "ಬೇಕಾದ್ರೆ ಇನ್ನು ನಾಲ್ಕು ದಿನ ಸುಧಾರಿಸ್ಕೊಂಡು ಬಾ" ಎಂದು ಹೇಳಿದರು. ಅವಳು ಮರುಮಾತನಾಡದೆ ಹೊರಟಳು.

ಅಂದಿನಿಂದ ಇದುವರೆಗೂ ನಾವು ನಂಜಿಯನ್ನು ಕಂಡೇ ಇಲ್ಲ

---

# ಜೇಮ್ಸ್ ಕ್ಲಾರ್ಕ್ ಮ್ಯಾಕ್ಸವೆಲ್

(ವೈಜ್ಞಾನಿಕ ವ್ಯಕ್ತಿಪರಿಚಯ)

ಶ್ರೀ. ಟಿ. ಆರ್. ನಾಡಿಗೇರ್, ಬಿ ಎಸ್‌ಸಿ. (ಟೆಕ್), ಮುಂಬಯಿ

●

**ಭಾರತದಲ್ಲಿ ಆಧ್ಯಾತ್ಮಿಕ ಸತ್ಯಸಂಶೋಧಕರಾದ ಋಷಿಗಳು ಅವತರಿಸಿದಂತೆ, ಪಶ್ಚಿಮ ಪ್ರದೇಶಗಳಲ್ಲಿ ಭೌತಿಕ ಸತ್ಯಸಂಶೋಧಕರು ಅನೇಕ ಜನ ಹುಟ್ಟಿದ್ದಾರೆ. ಜೇಮ್ಸ್ ಕ್ಲಾರ್ಕ್ ಮ್ಯಾಕ್ಸವೆಲ್, ಅಂತಹರಲ್ಲಿ ಒಬ್ಬ ಅಗ್ರಗಣ್ಯನು.**

●

೧೯ನೆಯ ಶತಮಾನದ ಭೌತಶಾಸ್ತ್ರಜ್ಞರಲ್ಲಿ ಮ್ಯಾಕ್ಸ್‌ವೆಲ್ಲನನ್ನು ಸುಪ್ರಸಿದ್ಧನೆಂದು ಗಣಿಸಲಾಗಿದೆ. ಎಡಿನ್‌ಬರ್ಗ್ ನಗರವು ಈತನ ಹುಟ್ಟಿನಿಂದ ಧನ್ಯತೆ ಪಡೆದರೆ, ಕೆಂಬ್ರಿಜ್ ನಗರವು ಈತನ ವ್ಯಕ್ತಿತ್ವದ ಹಿರಿಮೆಯಿಂದ ಮೆರೆಯುತ್ತದೆ. ಆದರೆ ಈತನ ಸೇವೆಯ ಸೌಭಾಗ್ಯ ಸಂಪೂರ್ಣ ಜಗತ್ತಿಗೆಂದೇ ಇದೆ.

—ಮ್ಯಾಕ್ಸ್‌ಪ್ಲಾಂಕ್

ನಾಟಕಕಾರ ಮನುಷ್ಯಸ್ವಭಾವವನ್ನು ಚಿತ್ರಿಸಿದರೆ, ಕವಿ ನಿಸರ್ಗದ ಸೊಬಗನ್ನು ಬಣ್ಣಿಸುತ್ತಾನೆ; ವಿಜ್ಞಾನಿ ಸೃಷ್ಟಿಯ ನಿಗೂಢ-ರಹಸ್ಯವನ್ನು ಬೋಧಿಸುವುದರಲ್ಲಿ ತಲ್ಲೀನನಾಗಿರುತ್ತಾನೆ. ಇವರೆಲ್ಲರ ಗುರಿ ಒಂದೇ—ಸೃಷ್ಟಿಯ ಆರಾಧನೆ; ಧ್ಯೇಯವೊಂದೇ— ಧೋರಣೆ ಮಾತ್ರ ಬೇರೆ.

ಮ್ಯಾಕ್ಸವೆಲ್ಲನು ಅಮರಕವಿ ಶೇಕ್ಸಪೀಯರನನ್ನು ಕೆಲಮಟ್ಟಿಗೆ ಹೋಲುತ್ತಾನೆ. ಈ ಮಹನಿಯರಿಬ್ಬರೂ ತಮ್ಮ ಜೀವಿತಕಾಲದಲ್ಲಿಯೆ ಕೀರ್ತಿಪಡೆದರು. ಆದರೆ ಇವರ ಕೃತಿಗಳ ಪರಿಚಯ ಮಹಾಜನಕ್ಕಾದುದು ವರ ಮರಣಾನಂತರ. ಶೇಕ್ಸಪೀಯರ್ ಬೌದ್ಧಿಕಸಮಸ್ಯೆಗಳನ್ನು ಮಾತ್ರ ಎದುರಿಸಿದ ಸಾಮಾಜಿಕ ಸಮಸ್ಯೆಗಳತ್ತ ಸಾಕಷ್ಟು ಲಕ್ಷ್ಯಪೂರಯಿಸಲಿಲ್ಲ ಮ್ಯಾಕ್ಸವೆಲ್ ಸಮಾಜವನ್ನು ಕಡೆಗಣಿಸಲಿಲ್ಲ; ಸಾಮಾನ್ಯಜನತೆಗೂ ವಿಜ್ಞಾನವನ್ನು ಬೋಧಿಸಿದ. ಆತನ ಎಣಿಕೆಯಲ್ಲಿ, ಸಾಮಾನ್ಯಜನತೆಯೇ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗಿಂತ ವಿಜ್ಞಾನದಲ್ಲಿ ಹೆಚ್ಚಿನ ಅಭಿರುಚಿ ತೋರಿಸಿತಂತೆ

ಮ್ಯಾಕ್ಸವೆಲ್ ಮತ್ತು ಚೆಕೋವ್ ಇವರಲ್ಲಿ ಸಾಮ್ಯವಿದೆ. ಇಬ್ಬರೂ ನಗೆಗಾರರು, ತಾರುಣ್ಯದಲ್ಲಿಯೇ ತೀರಿಕೊಂಡವರು. ತಮ್ಮ ಜೀವಿತಕಾಲದಲ್ಲಿ ಕೀರ್ತಿಪಡೆದರೂ, ಆ ಕೀರ್ತಿಲತೆ ಹೂಬಿಟ್ಟುದು ಮರಣಾನಂತರ. ಇಬ್ಬರ ವಿಚಾರಸರಣಿಯಲ್ಲಿ ಅದೆಲ್ಲಿಯೊ ಕೊಂಚ ತೂಕ ತಪ್ಪಿದೆಯೆಂದು, ಅಂದಿನ ಜನತೆ ಭಾವಿಸಿತು. ಇಬ್ಬರೂ ಕುಶಾಗ್ರಮತಿಗಳು. ಮ್ಯಾಕ್ಸವೆಲ್ಲನ ಮೊಟ್ಟಮೊದಲನೆಯ ಭಾಷಣವೇ ಆತನ ವಿದ್ವತ್ತಿಗೆ ಸಾಕ್ಷಿಯಾಯಿತು ಈ ಭಾಷಣ ಮಾಡಿದುದು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೆದುರು.

ಜೇಮ್ಸ್ ಕ್ಲಾರ್ಕ್ ಮ್ಯಾಕ್ಸವೆಲ್, ಎಡಿನಬರ್ಗ್ ನಗರದಲ್ಲಿ ೧೮೩೧ನೆಯ ಇಸ್ವಿಯ ಜೂನ್ ೧೩ರಂದು ಜನಿಸಿದನು. ಈತನ ವಂಶಜರು ಮೂಲತಃ ಸ್ಕಾಟ್ಲಂಡಿನವರು; ಮಧ್ಯಮವರ್ಗಕ್ಕೆ ಸೇರಿದವರು. ಮ್ಯಾಕ್ಸವೆಲ್ಲನ ಅಜ್ಜ ನೂತನ ಭೂಗರ್ಭಶಾಸ್ತ್ರದ ಸಂಸ್ಥಾಪಕನಾದ ಜೇಮ್ಸ್‌ಹಟನ್ನನ ಪರಮಮಿತ್ರ ಜೇಮ್ಸು ಮ್ಯಾಕ್ಸ್-ವೆಲ್ಲನ ಮನೆತನದಲ್ಲಿ ಮಹಾಪುರುಷರಾಗಿ ಹೋಗಿದ್ದಾರೆ. ಕೆಲವರು ರಾಜಕಾರಣದಲ್ಲಿ, ಹಲವರು ಕಾಯದೆ-ಕಾನೂನುಗಳಲ್ಲಿ, ಮತ್ತೆ ಕೆಲವರು ಸಾಹಿತ್ಯದಲ್ಲಿ, ಇನ್ನು ಕೆಲವರು ಭೂಗರ್ಭ--ಗಣಿತಶಾಸ್ತ್ರಗಳಲ್ಲಿ ಪ್ರಖ್ಯಾತಿಯನ್ನು ಪಡೆದವರು. ಇಂತಹ ಮನೆತನದಲ್ಲಿ ಜನ್ಮ ತಾಳಿದನು. ಜೇಮ್ಸನ ತಂದೆಗೆ ಕಾಯದೆ ಹಾಗೂ ಟೆಕ್ನಾಲಜಿಯಲ್ಲಿ ಆಸ್ಥೆ; ಆತ ಭೆಟ್ಟಿಕೊಡದ ಫ್ಯಾಕ್ಟರಿಗಳೇ ಎಡಿನ್‌ಬರ್ಗ್‌ನಲ್ಲಿರಲಿಲ್ಲವಂತೆ. ಜೇಮ್ಸನ ತಂದೆ ವಕೀಲವೃತ್ತಿಯನ್ನು ಕೈಕೊಂಡು ಸಾಕಷ್ಟು ಸಂಪಾದಿಸಿದ್ದ. ಹಾಗೂ ಪಿತ್ರಾರ್ಜಿತವಾದ ಆಸ್ತಿಯು ಚೆನ್ನಾಗಿಯೇ ಇತ್ತು. ಆದರೆ ಮಾತೆಯ ಅಪಾರ ಅಂತಃಕರಣದ ಅಭಿಷೇಕ ಜೇಮ್ಸನಿಗೆ ಬಹುಕಾಲ ದೊರೆಯಲಿಲ್ಲ. ತನ್ನ ಮಗ ಧೀರ ವಿಖ್ಯಾತನಾದುದನ್ನು ಕಣ್ಣಾರೆ ಕಾಣುವ ಸೌಭಾಗ್ಯ ಆ ತಾಯಿಗಿರಲಿಲ್ಲ. ಜೇಮ್ಸನಿಗೆ ಎಂಟು ವರುಷಗಳೂ ಪೂರ್ಣವಾಗಿರಲಿಲ್ಲ; ಮಮತೆಯ ಕಂದನನ್ನು ಕಣ್ತುಂಬ ನೋಡಿ, ಆತನ ಸಮಸ್ತಹೊಣೆಯನ್ನು ತಂದೆಗೊಪ್ಪಿಸಿ ಕಣ್ಮರೆಯಾದಳು. ತಂದೆಯಾದರೂ ಮಗನ ಆರಯಿಕೆಯಲ್ಲಿ ತಾಯಿಯನ್ನು ಮೀರಿಸಿ, ಅಪಾರ ವಾತ್ಸಲ್ಯದಿಂದ ಮಗನ ರಕ್ಷಣೆಯನ್ನು ಮಾಡಿದ.

ಮ್ಯಾಕ್ಸವೆಲ್ಲನ ಬುದ್ಧಿಯ ತೀವ್ರತೆ ಬಾಲ್ಯದಲ್ಲಿಯೇ ಕಂಡು ಬಂದಿತು. ಮೂರು ವರುಷಕ್ಕೇನೆ ಅವನ ಅಕ್ಷರಾಭ್ಯಾಸ ಮೊದಲಾಯಿತು. ೮ ವರುಷಗಳು ತುಂಬುವಷ್ಟರಲ್ಲಿ ಬಾಯಬಲ್ಲಿನ ೧೧೯ ಗೀತೆಗಳು ಆತನಿಗೆ ಮುಖೋದ್ಗತವಾಗಿದ್ದುವು. ಮಹಾಕವಿ ಮಿಲ್ಟನ್ನನ ಕಾವ್ಯದ

ಪರಿಚಯುವನ್ನು ಅವನು ಬಾಲ್ಯದಲ್ಲಿಯೇ ಪಡೆದು ಸಾಕಷ್ಟು ಪ್ರಭುತ್ವವನ್ನು ಸಂಪಾದಿಸಿದ. ತನ್ನ ೮ನೆಯ ವರುಷದಲ್ಲಿ ಈತನ ತಾಯಿ ಕ್ಯಾನ್ಸರ್ ರೋಗಕ್ಕೆ ಬಲಿಯಾದುದರಿಂದ, ಮ್ಯಾಕ್ಸವೆಲ್ ಮಹಾಮಹಿಮನಾದುದರ ಶ್ರೇಯ ಆತನ ತಂದೆಗೆ ಸಲ್ಲುವುದು. ಜೇಮ್ಸನ ಬಾಲ್ಯ ತಂದೆಯ ಮೇಲ್ವಿಚಾರಣೆಯಲ್ಲಿ ಗ್ಲೆನ್ಲೇರಿನಲ್ಲಿ ಕಳೆಯಿತು. ಆ ಹಳ್ಳಿ ಈತನಿಗೆ ತುಂಬ ಒಗ್ಗಿತು. ಹಳ್ಳಿಯ ವಿವಿಧ ಚಟುವಟಿಕೆಗಳು ಈತನ ಮನಸ್ಸನ್ನಾಕರ್ಷಿಸಿದವು. ಮಗ್ಗುಲಲ್ಲಿಯೇ ಮಂಜುಳರವಗೈಯುತ್ತಿರುವ ಹಳ್ಳದಲ್ಲಿ ಆಟವಾಡುವುದು ಆತನಿಗೆ ತುಂಬ ಇಷ್ಟ. ಹುಚ್ಚ ಜೇಮ್ಸನಿಗೆ ಬಾಯಿಯಲ್ಲಿ ಕಪ್ಪೆಮರಿ ಇಟ್ಟುಕೊಂಡು, ಬಾಯಿ ಮುಚ್ಚಿದಾಗ ಆ ಮರಿ ಪ್ರಾಣಭಯದಿಂದ ವಿಲಿವಿಲಿ ಒದ್ದಾಡುತ್ತಿದ್ದಷ್ಟು ಆನಂದ ಹೆಚ್ಚುತ್ತಿತ್ತು. ಫ್ಯಾರಡೇ ಕಂಡು ಹಿಡಿದ 'ಸಿನಿಮಾ' ಯಾವಾಗಲೂ ಆತನ ಪುಟ್ಟ ಜೇಬಿನಲ್ಲಿ ಅವಿತುಕೊಂಡಿರುತ್ತಿತ್ತು. ಸುಪ್ರಬುದ್ಧನಾದ ಮೇಲೆ, ಆ ಸಿನಿಮಾಕ್ಕೆ ಕೆಲಗೋಲಕಗಳನ್ನು ಸೇರಿಸಿದನು ಇದುವೆ ಮುಂದೆ ಜನಪ್ರಿಯವಾದ Cinematograph ಆಯಿತು. ತಂದೆಯ ಜಹಗೀರಿಯಲ್ಲಿ ದುಡಿಯುತ್ತಿದ್ದ ಒಕ್ಕಲುಮಕ್ಕಳಲ್ಲಿ ಈತನಿಗೆ ತುಂಬ ಸಲುಗೆ. ವರ್ಗಭೇಧವೆಂಬುದನ್ನರಿಯದ ಬಾಲಕ ಅವರೊಂದಿಗೆ ಕೂಡಿ ಕೆಲೆದ. ಮಕ್ಕಳ ಮನಸ್ಸು ನಿರ್ಮಲವಾದುದೇನೊ ನಿಜ; ಆದರೆ ದಿನಗಳೆದಂತೆ, ಆ ನೈರ್ಮಲ್ಯ ನಶಿಸಿ ದೂಷಿತವಾಗುವುದೇನೋ! ಈ ಒಕ್ಕಲುಮಕ್ಕಳ ಸಂಪರ್ಕದಿಂದ ಅವರ ಉಚ್ಚಾರವನ್ನು ಕೆಲವಟ್ಟಿಗೆ ಇವನೂ ಕಲಿತುಕೊಂಡ.

ಜೇಮ್ಸನಿಗೆ ಮನೆಯಲ್ಲಿ ಪ್ರಾರಂಭಿಕ ಶಿಕ್ಷಣದ ವ್ಯವಸ್ಥೆ ಮಾಡಲಾಯಿತು. ಬಾಲಕ ಅಭ್ಯಾಸದಲ್ಲಿ ಚುರುಕು ಇಲ್ಲವೆಂದು ಆ ಗುರುಗಳು ಅಭಿಪ್ರಾಯ ತಳೆದರು. ಅವರು ಜ್ಞಾನದಾನ ಮಾಡಲೆಂದು ಕೈಕಟ್ಟಿಗೆಗಳ ಪ್ರಯೋಜನವನ್ನು ಸಾಕಷ್ಟು ಪಡೆದುಕೊಂಡರು. ಪುಟ್ಟ ಬಾಲಕನಿಗೆ ಮನಸ್ವಿಯಾಗಿ ಹೊಡೆಯಲು ಹಿಂಜರಿಯಲಿಲ್ಲ. ಅವರ ಒರಟುಕೈಗಳಿಗೆ ಸಿಕ್ಕಿ ಕಿವಿಗಳು ಕೆಂಪಾಗದಿದ್ದುದು ತೀರ ಅಪೂರ್ವ. ಜೇಮ್ಸನ ತಂದೆಗೆ ಈ ವಿಧಾನದ ಅರಿವಿರಲಿಲ್ಲವೇನೊ; ಅಥವಾ ಬೆತ್ತದ ಬೆಂಬಲವಿಲ್ಲದೆ ಬುದ್ಧಿಯೇ ಬಾರದೆಂಬ ಮಹಾತತ್ತ್ವವನ್ನು ಒಪ್ಪಿಕೊಂಡಿರಲೂ ಸಾಕು. ಜೇಮ್ಸನೋ ಶತವೊಂದು! ಆ ಗುರುವೋ ಹಳ್ಳಿಯ ಶಾಲೆಯೊಂದರಿಂದ ಕಲಿತು ಪಾಸಾದವನು. ಬೆತ್ತದ ಸಹಾಯವಿಲ್ಲದೆ ವಿದ್ಯಾದಾನ ಅಸಂಭವವೆಂದು ನಂಬಿದವನು. ಕಡೆಗೆ ಜೇಮ್ಸನೇ ತಂದೆಗೆ ದೂರು ಹೇಳಿದ: 'ನಾನು ಈ ಗುರುವಿನಿಂದ ಶಿಕ್ಷಣ ಪಡೆಯಲಾರೆ' ಎಂದು. ಮಗನ ಕೆಂಪಾದ ಕಿವಿಗಳು ಆ ದೂರಿಗೆ ಪುಷ್ಟಿಯನ್ನಿತ್ತುವು. ಹೀಗಾಗಿ ತಂದೆ, ಈತನಿಗೆ ೧೦ ವರುಷಗಳಾದಾಗ, ಶ್ರೀಮಂತವರ್ಗದ ಮಕ್ಕಳಿಗೆಂದೇ ತೆರೆಯಲಾದ Edinburg Academyಗೆ ಹೆಸರು ಹಚ್ಚಿಸಿದ. ಆ ಅಕಾಡಮಿಯಲ್ಲಿ ೬ ವರುಷಗಳನ್ನು ಕಳೆದ. ಎಡಿನ್‌ಬರ್ಗನಲ್ಲಿ ಈತನ ವಾಸ್ತವ್ಯ ಅತ್ತೆಯ ಮನೆಯಲ್ಲಿತ್ತಾದರೂ ರಜೆಯನ್ನು ಗ್ಲೆನ್ಲೇರಿನಲ್ಲಿ ಕಳೆಯುತ್ತಿದ್ದ. ಜೇಮ್ಸ್ ಗ್ಲೆನ್ಲೇರಿನಿಂದ ಎಡಿನ್‌ಬರ್ಗಕ್ಕೆ ಬಂದುದೇನೋ ನಿಜ. ಆತನ ವೇಷ-ಭೂಷಣ ಹಳ್ಳಿಗರದಾಗಿತ್ತು. ಹೀಗಾಗಿ ವರ್ಗಕ್ಕೆ ಕಾಲಿಟ್ಟ ಮೊದಲನೆಯ ದಿನವೇ, ಮೊದಲನೆಯ ತಾಸಿನ ಗಂಟೆಯಾದೊಡನೆ, ಆ ವರ್ಗದ ವಿದ್ಯಾರ್ಥಿಗಳು ಈತನನ್ನು ಮುತ್ತಿ ಕಾಡಿಸತೊಡಗಿದರು. ಜೇಮ್ಸನಿಗೆ ಸಾಕಾಗಿಹೋಯಿತು ಮನೆಗೆ ಬಂದಾಗ ಆತನ ವಸ್ತ್ರಗಳು ಚಿಂದಿಯ ಸ್ವರೂಪವನ್ನು ತಳೆದಿದ್ದುವು. ಅಂದೆಯೇ ಆ ಬಾಲಕರು ಈತನಿಗೆ Dafty ಎಂದರೆ ಗಮಾರನೆಂಬ ಬಿರುದನ್ನು ದಯಪಾಲಿಸಿದರು. ಈ ಪರಿ ಪೀಡಿಸಿದರೂ, ಜೇಮ್ಸ್ ಅವರ ಮೇಲೆ ಸಿಟ್ಟಾಗಲಿಲ್ಲ. ಶಾಲೆಯಲ್ಲಿರುವಷ್ಟು ಕಾಲ ಆ ಬಿರುದು ಈತನಿಗಂಟಿಕೊಂಡಿತ್ತು. ಜೇಮ್ಸನ ಅಭಿಪ್ರಾಯ ಮತ್ತು ಹಾಸ್ಯದ ಚಟಾಕಿಗಳು ಮೂರ್ಖತನದುವೆಂದು ಆತನ ಸಹಾಧ್ಯಾಯಿಗಳು ಭಾವಿಸಿದ್ದರು. ಅವರೇನು ಬಲ್ಲರು, ತಮ್ಮ ಸಹಪಾಠಿ ಮುಂದೆ ಮಹಾವಿಜ್ಞಾನಿಯಾಗುವನೆಂದು! ಆತನಿಗೆ ೧೪ ವರುಷಗಳಾದಾಗ, ಆತನ ತಂದೆ ಆತನನ್ನು ವಿದ್ಯುಲ್ಲೋಹ ಯಂತ್ರಗಳನ್ನು ತೋರಿಸಲೆಂದು, ಎಡಿನ್‌ಬರ್ಗನಲ್ಲಿಯ Royal Societyಗೆ ಕರೆದುಕೊಂಡುಹೋದನು. ಜೇಮ್ಸ್ ೧೩ ವರುಷದವನಿದ್ದಾಗಲೇ Tetrahedron, Dodecahedronಗಳ ಮಾದರಿಗಳನ್ನು ರಚಿಸಿದ್ದ. ಹಾಗೆ ನೋಡಿದರೆ ಆಗ ಆತನಿಗೆ ಭೂಮಿತಿಯ ಪರಿಚಯ ಎಳ್ಳಷ್ಟೂ ಇರಲಿಲ್ಲ. ಎಡಿನ್‌ಬರ್ಗನಲ್ಲಿಯೇ Diabolo ಆಟವನ್ನು ಕಲಿತ. ಈ ಆಟ ಕೆಂಬ್ರಿಜ್‌ನಲ್ಲಿ ಮುಂದುವರೆಯಿತು. ತಾರುಣ್ಯ ವ್ಯಾಪಿಸುತ್ತಿದ್ದಂತೆ, ಬುದ್ಧಿ ಬೆಳಗುತ್ತ ನಡೆಯಿತು. ಉಜ್ಜುತ್ತೆ ಹೆಚ್ಚುತ್ತೆಲ್ಲ ಬಂಗಾರ ಬೆಳಗುವಂತೆ—ಗಣಿತ ಪಾಠ ಮೊದಲಾದಂದಿನಿಂದ, ಅದರಲ್ಲಿ ಆತನ ಪ್ರಗತಿ ದಿನದಿನಕ್ಕೂ ವರ್ಧಿಸುತ್ತ ನಡೆಯಿತು. ೧೫ನೆಯ ವರುಷದಲ್ಲಿಯೇ ಗಣಿತ ವಿಷಯಕ್ಕಿದ್ದ ಪಾರಿತೋಷಕ ಪಡೆದ ತಂದೆ ಗಣಿತದಲ್ಲಿಯ ಮಗನ ಅಭಿರುಚಿ ಹಾಗು ಗತಿಯನ್ನು ಗುರುತಿಸಿ, ಜೇಮ್ಸನನ್ನು ಮೇಲಿಂದಮೇಲೆ ರಾಯಲ್ ಸೊಸಾಯಿಟಿಗೆ ಹಾಗು ಆರ್ಟ್ಸ್ ಸೊಸಾಯಿಟಿಗೆ ಕರೆದುಕೊಂಡು ಹೋಗಲಾರಂಭಿಸಿದ. ಒಂದು ದಿನ ರಾಯಲ್ ಸೊಸಾಯಿಟಿಯಲ್ಲಿ, ಡಿ. ಆರ್. ಹೇನ ಭಾಷಣ ಈತನ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು. ಹೇ ತನ್ನ ಭಾಷಣದಲ್ಲಿ Ovalಗಳನ್ನು ಪ್ರಸ್ತಾಪಿಸಿದ್ದ. ಜೇಮ್ಸ್ ಈ ವಿಷಯವನ್ನು ಅಭ್ಯಸಿಸಿ Oval ತೆಗೆಯುವ ಬಗೆಯನ್ನು ಕಂಡುಹಿಡಿದ. ಅಂದೇ ಮಗನ ಈ ಶೋಧವನ್ನು ಆ ಅಭಿಮಾನೀ ತಂದೆ, ಹೇ ಹಾಗೂ ಎಡಿನಬರ್ಗನಲ್ಲಿಯ ಪ್ರಾಧ್ಯಾಪಕ ಫ್ರೋರ್ಬರಿಗೆ ತೋರಿಸಿದ. ಆ ವಿದ್ವನ್ಮಣಿಗಳು ಈ ಅಪ್ರಬುದ್ಧನ ಅಪೂರ್ವ ಬುದ್ಧಿಮತ್ತೆಯನ್ನು ಕಂಡು ಬೆರಗಾಗಿ, ಆ ಶೋಧಕ್ಕೆ ಒಂದು ರೂಪುಕೊಟ್ಟು ಎಡಿನಬರ್ಗನಲ್ಲಿಯ ರಾಯಲ್ ಸೊಸಾಯಿಟಿ ಎದುರು ಮಂಡಿಸಿದರು. ಜೇಮ್ಸನಿಗೆ ಆಗಿನ್ನೂ ಹದಿನೈದು ವರುಷಗಳೂ ತುಂಬಿರಲಿಲ್ಲ. ಜಾಣ ಜೇಮ್ಸನನ್ನು ಆತನ ತಂದೆ ಹೆಮ್ಮೆಯಿಂದ ಬೀಗುತ್ತಾ ರಾಯಲ್ ಸೊಸಾಯಿಟಿಗೆ ಕರೆದೊಯ್ದನು. ಅಂದೇ ಜೇಮ್ಸ್ ಮೊಟ್ಟಮೊದಲು ಭಾಷಣಮಾಡಿದುದು. ಅವೂ ಗಣಿತದಂತಹ ಕ್ಲಿಷ್ಟ ವಿಷಯವನ್ನು ಕುರಿತು. ಈತನ ಭಾಷಣಕ್ಕೆ ಶ್ರೋತೃಗಳಾಗಿ ಬಂದವರು ಅತಿರಥ-ಮಹಾರಥರು. ಆತನ ಅಂದಿನ ಭಾಷಣ ಹಾಗು ಆತನ ಆ ಶೋಧ ಮೆಚ್ಚಿಕೆಯಾದುವು. 'ಬುದ್ಧಿವಂತ ಮಗನನ್ನು ಪಡೆದ

ಭಾಗ್ಯಶಾಲಿ ತಂದೆ, ಎಂದು ನೆರೆದವರು ತಂದೆ-ಮಗನನ್ನು ಕೊಂಡಾಡಿದರು. ಜೇಮ್ಸನ ಶೋಧ ಡೆಸ್ಕಾರ್ಟೆಸ್, ನ್ಯೂಟನ್ ಮತ್ತು ಹುಯಿಗೆನ್ಸರಿಗಿಂತ ಮೇಲಾದುದಿತ್ತೆಂದು ವಿದ್ವಾಂಸರು ಅಭಿಪ್ರಾಯ ತಳೆದರು. ಅಪ್ರಬುದ್ಧ ವಿದ್ಯಾರ್ಥಿ ಎತ್ತ? ಈ ಘನ ವಿದ್ವಾಂಸರೊಂದಿಗೆ ಸಾಟಿಯೆ? ಒಂದೇ ಒಂದು ಶೋಧಮಾಡಲು ಜೀವನಾದ್ಯಂತ ಹೋರಾಡಬೇಕಾಗುವುದಲ್ಲವೆ? ನಿಜ! ಆದರೆ ಕೆಲವರಿಗೆ ವರದಾನವಿರುತ್ತದೆ. 'ವಯಸು ವಿಕ್ರಮಕೆ ಕಾರಣವಲ್ಲ!' ಎಂಬ ನುಡಿ ಏನನ್ನುಹುತ್ತದೆ? ಅಂದಿನಿಂದಲೇ ಜೇಮ್ಸನಿಗೆ ಹಿರಿಯ ಫೋರ್ಬ್‌ನೊಂದಿಗೆ ಸ್ನೇಹವಾದುದು. ಶಾಲೆಯ ಅಭ್ಯಾಸದತ್ತ ಸಾಕಷ್ಟು ಗಮನ ಕೊಡದ್ದರಿಂದ, ೧೮೪೬ರಲ್ಲಿ ಗಣಿತ ವಿಷಯಕ್ಕಿಟ್ಟ ಪದಕ ಈತನಿಗೆ ದಕ್ಕಲಿಲ್ಲ ಆದರೆ ಮಾರನೆಯ ವರುಷ ಹಾಗೂ ಅನಂತರದ ವರುಷ ಗಣಿತ, ಇಂಗ್ಲಿಷ್ ಮತ್ತು ಲ್ಯಾಟಿನ್ ವಿಷಯಗಳಲ್ಲಿ ಪ್ರ-ಪ್ರಥಮನಾಗಿ ಉತ್ತೀರ್ಣನಾಗಿ ಪದಕ ಭೂಷಿತನಾದನು. ಜೇಮ್ಸನಿಗೆ ೧೪ ವರುಷಗಳಾದಾಗ, ಅವನನ್ನು ಅಸ್ವಾಸ್ಥ್ಯವು ಅಸಾಧ್ಯವಾಗಿ ಕಾಡತೊಡಗಿತು. ಶಾಲೆಗೆ ಸರಿಯಾಗಿ ಹೋಗುವುದು ಅಶಕ್ಯವಾಯಿತು. ಈಗಾಗಲೇ ನ್ಯೂಟನ್ನನ ಗೋಲಗಳು (Newton's Rings) ಹಾಗೂ Polarisation of Light ವಿಷಯದಲ್ಲಿ ಈತನ ಆಸಕ್ತಿ ಕೆರಳಿತ್ತು. ಇದನ್ನು ಗಮನಿಸಿದ ಜೇಮ್ಸನ ಕಕ್ಕ, ಈತನನ್ನು ನಿಕೋಲನಲ್ಲಿಗೆ ಕರೆದುಕೊಂಡು ಹೋದ. ಮಾರನೆಯ ವರುಷವೇ ಎಡಿನ್‌ಬರ್ಗ್ ವಿದ್ಯಾಲಯ ಸೇರಿ ಮೂರು ವರುಷ ಅಭ್ಯಾಸಮಾಡಿದ. ಆಗ ಜೇಮ್ಸ್ ತರ್ಕಶಾಸ್ತ್ರ, ತತ್ತ್ವಜ್ಞಾನ ಹಾಗೂ ನೀತಿಶಾಸ್ತ್ರಗಳನ್ನು ಆಸ್ಥೆಯಿಂದ ಅಭ್ಯಸಿಸಿದ. ಹದಿನೇಳನೆಯ ವಯಸ್ಸಿನಲ್ಲಿ ಹ್ಯಾಮಿಲ್ಟನ್ನನ ನೇತೃತ್ವದಲ್ಲಿ ವಸ್ತು, ಸ್ಥಳ, ಕಾಲ, ಶಕ್ತಿ ಹಾಗು ಸಂವೇದನೆಗಳ ಕುರಿತು ಪ್ರಬಂಧಗಳನ್ನು ಬರೆದ. ಜಾರ್ಜ್ ಬೂಲನು ಬರೆದ The Mathematical Analysis of Logic ಎಂಬ ಪುಸ್ತಕವನ್ನು ತುಂಬ ಮೆಚ್ಚಿದನು. ಜೇಮ್ಸ್ ವಿದ್ಯಾರ್ಥಿಗಳೊಂದಿಗೆ ಸಮರಸನಾಗುತ್ತಿರಲಿಲ್ಲ. ಸ್ವಭಾವ ಮುಂಗೋಪಿತನದ್ದು; ವರ್ಗದಲ್ಲಿ ಮಾತು ಕಡಿಮೆ. ಸಾಕಷ್ಟು ಶ್ರೀಮಂತಿಕೆ ಇದ್ದರೂ ಮೂರನೆಯ ವರ್ಗದಲ್ಲಿ ರೈಲುಪ್ರವಾಸ. ಗ್ರಾಜಿನೊಂದಿಗೆ ಆಟವಾಡುತ್ತಿದ್ದಾಗ, ವೇಳೆ ಸರಿಯುತ್ತಿದ್ದುದನ್ನೇ ತಿಳಿಯನು. ಫೋರ್ಬ್‌ನ ಕೃಪೆಯಿಂದಾಗಿ ವೈಜ್ಞಾನಿಕ ಸಲಕರಣೆಗಳು ಇವನಿಗೆ ಸರಾಗವಾಗಿ ದೊರೆಯುತ್ತಿದ್ದುವು. ವಿಜ್ಞಾನಿ ನಿಕೋಲನನ್ನು ಕಂಡಾಗಿನಿಂದ Polarised Light ಈತನ ಆಸಕ್ತಿಯನ್ನು ಕೆರಳಿಸಿತ್ತು. ಕೆಲದಿನಗಳಲ್ಲಿಯೇ ತನ್ನ ಪ್ರಯೋಗಗಳ ಫಲಶ್ರುತಿಯನ್ನು ನಿಕೋಲನಿಗೆ ಅರಿಕೆಮಾಡಿಕೊಳ್ಳಲಾಗಿ, ಆತ ತಾನೇ ನಿರ್ಮಿಸಿದ Prism ಕಾಣಿಕೆಯಾಗಿತ್ತು ಪ್ರೋತ್ಸಾಹಿಸಿದನು. ಈ ಕಾಣಿಕೆ ಆತನಿಗೆ ಅಭಿಮಾನದ ಪ್ರತೀಕವಾಗಿದ್ದುದು ಸಹಜವಷ್ಟೆ! ೧೮ನೆಯ ವಯಸ್ಸಿನಲ್ಲಿ ಎಡಿನ್‌ಬರ್ಗ್‌ದ ರಾಯಲ್ ಸೊಸಾಯಿಟಿಗೆ Elastic solids ಎಂಬ ಪ್ರಬಂಧವನ್ನು ಒಪ್ಪಿಸಿದ. ಈತನ ಈ ಬಗೆಯ ಪ್ರಗತಿಯನ್ನು ಗಮನಿಸಿದ ಫೋರ್ಬ್ಸ್, ಜೇಮ್ಸನನ್ನು ಕೆಂಬ್ರಿಜ್‌ಗೆ ಕಳಿಸುವುದುತ್ತಮವೆಂದು ಆತನ ತಂದೆಗೆ ವಿವರಿಸಿದ. ಆದರೆ ಆತನ ತಂದೆಗೆ ಈ ಅಭಿಪ್ರಾಯ ಸಮ್ಮತವಾಗಲಿಲ್ಲ. ಪ್ರಾಧ್ಯಾಪಕ ಥಾಮ್ಸನ್ ಇರುವ ಪೀಟರ್‌ಹೌಸಿಗೆ ಜೇಮ್ಸನನ್ನು ಕಳಿಸಿದ ಕೆಂಬ್ರಿಜ್ಜಿಗೆ ಕಳಿಸಿದ್ದರೆ ಒಳ್ಳೆಯದಾಗುತ್ತಿತ್ತೆಂದು ಜೇಮ್ಸನಲ್ಲಿ ಆಸ್ಥೆ ಇದ್ದವರು ವಿಷಾದ ವ್ಯಕ್ತಪಡಿಸಿದರು. ಬಹುಬೇಗ ಜೇಮ್ಸನ ತಂದೆ ಆತನನ್ನು ಫೋರ್ಬ್ಸ್, ನಿಕೋಲ್, ಕೆಲಾಂಡ್ ಮೊದಲಾದ ವಿದ್ವಾಂಸರ ನಿದರ್ಶನಕ್ಕೆ ತಂದು ಮಹೋಪಕಾರ ಮಾಡಿದ್ದಾನೆ.

ಮ್ಯಾಕ್ಸವೆಲ್ ಪೀಟರ್‌ಹೌಸಿಗೆ ಬಂದುದು ಅಕ್ಟೋಬರ್ ೧೮೫೦ರಲ್ಲಿ. ಬಂದ ೬ ತಿಂಗಳಲ್ಲಿಯೇ ಅಲ್ಲಿಯ ಶಿಕ್ಷಣಕ್ರಮ ಅತೃಪ್ತಿಕರವಾಗಿ ತೋರಿತು. ಹೀಗಾಗಿ ಆಗ ಜೇಮ್ಸನ ವಾಸ್ತವ್ಯವು ಟ್ರಿನಿಟಿ ಕಾಲೇಜಿಗೆ ಸ್ಥಳಾಂತರವಾಯಿತು. ಆ ಕಾಲೇಜಿಗೆ ಪ್ರವೇಶ ದೊರೆಕಿಸಲು, ಆ ಕಾಲೇಜಿನ ಪ್ರಾಚಾರ್ಯನಾದ ಥಾಮ್ಸನ್ನನೆದುರು, ಜೇಮ್ಸ್ ಮ್ಯಾಕ್ಸ್‌ವೆಲ್ ತನ್ನ ಪ್ರಬಂಧ ಸಂಪುಟವನ್ನು ಎದುರಿಗಿಟ್ಟ. ಪ್ರಥಮ ಪುಟವನ್ನು ತಿರುಗಿಸುವುದರಲ್ಲಿಯೇ ಜೇಮ್ಸನ ಪಾಂಡಿತ್ಯದ ಅರಿವಾಯಿತು. ೧೮೫೨ರಲ್ಲಿ ಶಿಷ್ಯವೃತ್ತಿಯೂ ದೊರೆಯಿತು. ಹಾಪ್ಕಿನ್ಸ್‌ನ ನೇತೃತ್ವದಲ್ಲಿ ಈತನ ಅಭ್ಯಾಸ ಮುಂದುವರಿಯಿತು. ಈತನ ವಿದ್ವತ್ತೆಯನ್ನು ಕಂಡ ಹಾಪ್ಕಿನ್ಸ್ ಬೆರಗಾದ. ಹಾಗೆಯೇ ಅಭಿಮಾನ ತಾಳಿದ—ಇಂತಹ ಶಿಷ್ಯನಿಗೆ ಗುರುವಾಗುವ ಮಹಾಸೌಭಾಗ್ಯ ದೊರೆತುದಕ್ಕಾಗಿ. ಸಾಹಿತ್ಯದಲ್ಲಿಯೂ ಜೇಮ್ಸ್ ತನ್ನ ಕೈಚಳಕ ತೋರಿಸತೊಡಗಿದ. ಈತನ ಬರೆಹಗಳ ವೈಶಿಷ್ಟವೆಂದರೆ ಸ್ಪಷ್ಟತೆ ಹಾಗೂ ಕಲ್ಪಕತೆ. ಯಾವುದೇ ಸಮಸ್ಯೆ ಇರಲಿ, ಅದಕ್ಕೆ ಭೂಮಿತಿಯ ಮೂಲಕ ಪರಿಹಾರ ನಿಯೋಜಿಸುತ್ತಿದ್ದ. ೧೮೫೪ರಲ್ಲಿ ಪರೀಕ್ಷೆಯ ತಯಾರಿಯನ್ನು ಭರದಿಂದ ಸಾಗಿಸಿದಾಗ, ಬೇನೆ 'ಬಾ' ಎಂದು ಆಮಂತ್ರಿಸಿತು. ಅದು ಮಿದುಳಿನ ಜ್ವರ. ಅತಿ ಓದಿನ ಅಥವಾ ಅತಿ ವಿಚಾರದ ಪರಿಣಾಮವಿರಬೇಕು. ೧೮೫೪ನೆಯ ಜಾನೇವಾರಿಯಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣನೂ ಆದ. ಆದರೆ ದೊರೆತುದು ಎರಡನೆಯ ಸ್ಥಾನ. ತನ್ನೆಣಿಕೆ ಮೀರಿ ಮಗ ಯಶಸ್ಸು ಪಡೆದದ್ದನ್ನು ಕೊಂಡಾಡಿದ ಆ ಅಭಿಮಾನೀ ತಂದೆ. ಕೆಂಬ್ರಿಜ್ ವಿಶ್ವ-ವಿದ್ಯಾಲಯದ ಪದವೀಧರನಾದ. ೨೩ ವರುಷಗಳಾಗುವಷ್ಟರಲ್ಲಿ ೪ ಪ್ರಬಂಧಗಳನ್ನು ಮಾತ್ರ ಬರೆದಿದ್ದ. ಎಡಿನ್‌ಬರ್ಗ್‌ನಲ್ಲಿಯೇ—ಕಿಶೋರಾವಸ್ಥೆಯಲ್ಲಿಯೇ—ಹೆಚ್ಚು ಪ್ರತಿಭೆ ತೋರಿದನೆನ್ನಬಹುದು ಪದವೀಧರನಾದ ಮೇಲೆ ಸಂಶೋಧನೆ ಕೈಕೊಳ್ಳಬೇಕೆಂಬ ಮನೋಭಿಲಾಷೆಯನ್ನು ಥಾಮ್ಸನ್‌ನೆದುರು ವ್ಯಕ್ತಪಡಿಸಿದ. ಹಾಗೆಯೆ ವಿದ್ಯುತ್ತನ್ನು ಅಭ್ಯಸಿಸುವ ಇಚ್ಛೆ ಇರುವುದಾಗಿ ವಿವರಿಸಿದ. ಥಾಮ್ಸನ್ ಈತನ ಇಚ್ಛೆಗೆ ಪ್ರತಿ ಹೇಳಲಿಲ್ಲ. ತಂದೆಗೂ ಇದು ಒಪ್ಪಿತವಾಯಿತು

ವಿದ್ಯುತ್ತಿನ ಮೇಲೆ ಈತ ಮೊತ್ತಮೊದಲು ಬರೆದ ಪ್ರಬಂಧ—on Faraday's Lines of force—೧೮೫೫ರಲ್ಲಿ. ಇದೇ ಕಾಲದಲ್ಲಿಯೆ ಆತ ಬರೆದ ಸಾಹಿತ್ಯಕ ಪ್ರಬಂಧಗಳೂ ಅಸಂಖ್ಯಾತ ಈ ಪ್ರಬಂಧಗಳೋ ವೈವಿಧ್ಯಪೂರ್ಣವಾದುಗಳು. ಇಗೊ, ಇಲ್ಲಿವೆ ಕೆಲ ಪ್ರಬಂಧಗಳ ಶಿರೋನಾಮೆ: ೧) ತೀರ್ಮಾನ-ಲಕ್ಷಣ. ೨) ಕಾರ್ಗತ್ತಲೆಯಲ್ಲಿರುವ ವಿಜ್ಞಾನ; ೩) ಲಲಿತಕಲೆಯ ಮೂಲವೆಲ್ಲಿ? ೪) ಇಂಗ್ಲೀಷ್ ಭಾಷೆಯ ನೂತನ ಶಬ್ದಗಳ ನಿರ್ಮಿತಿ. ೫)ಸಾದೃಶ್ಯದ

ನೈಜತೆ. ೬) ಸತ್ಯಶೋಧನೆ. ೭) ಆತ್ಮಚರಿತ್ರೆಯ ವಿಚಾರ. ೮) ಅನಾವಶ್ಯಕ ವಿಚಾರದ ಭೀತಿ ನೈಜವಾದುದೆ? ಇತ್ಯಾದಿ. ಈ ಶಿರೋನಾಮಗಳ ಅವಲೋಕನ ಯಾರನ್ನು ತಾನೆ ದಿಗ್ಭ್ರಮೆಗೊಳಿಸಲಿಕ್ಕಿಲ್ಲ! ೧೮೫೫ರಲ್ಲಿಯೇ Colour Vision ಎಂಬ ಪ್ರಬಂಧವನ್ನು ಬರೆದನು. ಈ ಪ್ರಬಂಧವಲ್ಲಿ ವಿವಿಧ ವರ್ಣಗಳನ್ನು ಕಾಗದದ ತುಂಡುಗಳ ಮೇಲೆ ತೆಗೆದು, ಅನಂತರ ಈ ಎಲ್ಲ ತುಂಡುಗಳನ್ನು ಒಗ್ಗೂಡಿಸಿ, ವೇಗವಾಗಿ ತಿರುಗಿಸಿದಾಗ, ಮೊದಲಿನ ವಿವಿಧ ವರ್ಣಗಳು ಕಾಣಬಾರದೆ, ಕೇವಲ ಒಂದೇ ಒಂದು ವರ್ಣ ಮಾತ್ರ ಕಾಣಬರುವುದೆಂಬುದನ್ನು ವಿವರಿಸಿದ್ದ. ಈ ಪ್ರಬಂಧ ಈತನಿಗೆ ರಂಫೋರ್ಡ್ ಪದಕವನ್ನು ದಯಪಾಲಿಸಿತು. ಹಾಗೂ ಇದೇ ವಿಷಯವಾಗಿ ಅಭ್ಯಾಸಮಾಡಿ ಯಂಗ್ ಮತ್ತು ನ್ಯೂಟನ್ನರ ಮಾಲಿಕೆಯಲ್ಲಿ ಈತನ ಸೇರ್ಪಡೆಯಾಗಿತ್ತು.

'Faraday's Lines of force' ಎಂಬ ಪ್ರಬಂಧದಲ್ಲಿ ಭೌತಶಾಸ್ತ್ರದ—ಅದರಲ್ಲೂ ವಿದ್ಯುದ್ವಿಭಾಗದ— ತತ್ತ್ವಗಳನ್ನು ಗಣಿತದ ಸಹಾಯದಿಂದ, ಹೇಗೆ ಸಹಜವಾಗಿ, ಸುಲಭವಾಗಿ, ತಾರ್ಕಿಕವಾಗಿ ವಿವರಿಸಲು ಬರುತ್ತದೆಂಬುದನ್ನು ಸೋದಾಹರಣವಾಗಿ ವಿವೇಚಿಸಿದ್ದನು. ಈ ಪ್ರಬಂಧದ ಮೌಲಿಕತೆಯನ್ನು ಭೌತವಿಜ್ಞಾನಿ— ಸರ್ ಎಮ್. ಎಮ್. ಥಾಮ್ಸನ್ ಕಂಡುಕೊಂಡಿದ್ದಾರೆ. ಫ್ಯಾರಡೇ ಮಾಡಿದ ವಿದ್ಯುಚ್ಛಕ್ತಿನ ಎಲ್ಲ ಪ್ರಯೋಗಗಳನ್ನು ಸ್ವತಃ ಮಾಡಿ ನೋಡದೆ, ಸಿದ್ಧಾಂತಗಳನ್ನು ಗಣಿತದ ಸಹಾಯದಿಂದ ಕಂಡುಹಿಡಿದನು. ಮ್ಯಾಕ್ಸ್‌ವೆಲ್ಲನ ಪರಿಣಾಮಗಳು ಫ್ಯಾರಡೇನ ಪರಿಣಾಮಗಳನ್ನು ಶತಶಃ ಹೋಲಿದುವು. ಈ ಹೋಲಿಕೆ ಫ್ಯಾರಡೇನನ್ನು ಆಕರ್ಷಿಸಿತು. ಪ್ರಯೋಗ ಮಾಡಿ ನೋಡದೆ, ಒಂದೆ ಫಲಿತಾಂಶವನ್ನು ದೊರಕಿಸುವ ವಿಧಾನವನ್ನು ಕಂಡುಹಿಡಿದ ಮಹಾಶಯನನ್ನು ಕಾಣಬಯಸಿದ ಫ್ಯಾರಡೆ ನವೆಂಬರ್ ೧೩, ೧೮೫೭ರಂದು ಫ್ಯಾರಡೆನಿಂದ ಮ್ಯಾಕ್ಸ್‌ವೆಲ್ಲನಿಗೆ ಕರೆಯೋಲೆ ಬಂದಿತು. ಅದರಲ್ಲಿ ಹೀಗೆ ಬರೆಯಲಾಗಿತ್ತು: "ನನ್ನ ವಿದ್ಯುತ್ಪ್ರಯೋಗಗಳ ಫಲಿತಾಂಶವನ್ನು ನೀವು ಕಂಡುಹಿಡಿದ ಕ್ರಮ ನನ್ನ ಮನಸ್ಸನ್ನು ಸೆಳೆದಿದೆ. ನಿಮ್ಮ ಕ್ರಮದ ರೀತಿ ನೀತಿಗಳನ್ನು ನಾನು ತಿಳಿಯೆನಾದರೂ, ಫಲಿತಾಂಶ ಎಳ್ಳಷ್ಟೂ ಮುಳ್ಳುಮೊನೆಯಷ್ಟು ಒಂದೆ......ನಿಮ್ಮನ್ನು ಮುಖತಃ ಕಾಣಬಯಸಿದ್ದೇನೆ. ನಿಮ್ಮ ದರ್ಶನ ಬಹು ಬೇಗ ಲಭಿಸುವುದೆಂದು ನಂಬಿದ್ದೇನೆ....ಇತಿ"

ಜೇಮ್ಸ್ ಶನಿಗ್ರಹದ ಸುತ್ತಲಿರುವ ವರ್ತುಳಗಳನ್ನು ಅಭ್ಯಸಿಸಿದ. ಈ ಅಭ್ಯಾಸದಿಂದ ಈತನ ಖ್ಯಾತಿ ಹೆಚ್ಚುತ್ತ ನಡೆಯಿತು. ಆಗ ಈತನಿಗೆ ೨೪ ವರುಷ. ಈ ಸಮಯದಲ್ಲಿ, ಆತನನ್ನು ಫೆಲೋನನ್ನಾಗಿ ಮಾಡಿಕೊಂಡಿತ್ತು, ಕೇಂಬ್ರಿಜ್ ವಿಶ್ವವಿದ್ಯಾಲಯ. ಇದೇ ಕಾಲಕ್ಕೇನೇ ಜೇ. ಡಿ ಫೋರ್ಬ್ಸನಿಂದ ಅವಸರದ ಓಲೆ ಬಂದಿತು. ಆ ಓಲೆಯಲ್ಲಿ ಅಬರ್ಡೀನ್‌ನಲ್ಲಿಯ ಮ್ಯಾರಿಸಲ್ ಕಾಲೇಜಿನಲ್ಲಿ ಪ್ರಾಧ್ಯಾಪಕ ಸ್ಥಳವೊಂದು ತೆರವಾಗಿರುವುದಾಗಿಯೂ, ಮ್ಯಾಕ್ಸವೆಲ್ಲನು ಆ ಸ್ಥಳಕ್ಕಾಗಿ ಅರ್ಜಿ ಸಲ್ಲಿಸಬೇಕೆಂದೂ, ಆ ಸ್ಥಾನ ದೊರಕಿಸಿಕೊಡಲು ತಾನು ತನುಮನದಿಂದ ಪ್ರಯತ್ನಿಸುವುದಾಗಿಯೂ ಫೋರ್ಬ್ಸ್ ಬರೆದಿದ್ದ. ಮ್ಯಾಕ್ಸವೆಲ್ ಈ ಸ್ಥಾನಕ್ಕೆಂದು ಅರ್ಜಿ ಸಲ್ಲಿಸಲು ಇನ್ನೊಂದು ಕಾರಣವಿತ್ತು. ಆತನ ತಂದೆಯ ಪ್ರಕೃತಿ ದಿನಗಳೆದಂತೆ ಸೊಕ್ಷ್ಮಗೊಳ್ಳುತ್ತ ನಡೆದಿತ್ತು. ಅಬರ್ಡೀನ್ ಸಿಗುವಂತಾದರೆ, ತಂದೆಯ ಸಾಮೀಪ್ಯ ದೊರೆತು ಆತನ ಆರೈಕೆ ಮಾಡಲು ಅನುವಾಗುವುದೆಂದು ಆತ ಆಲೋಚಿಸಿದ್ದ. ಮ್ಯಾಕ್ಸವೆಲ್ಲನ ಈ ಆಲೋಚನೆಯನ್ನು ಆತನ ತಂದೆ ಅನುಮೋದಿಸಲಿಲ್ಲ; ಏಕೆಂದರೆ ಆ ವಿಶ್ವವಿದ್ಯಾಲಯದಿಂದ ದೊರೆಯಬಹುದಾದ ವೇತನ ಹೇಳಿಕೊಳ್ಳುವಂತಹದಲ್ಲ. ಏಪ್ರಿಲ್ ೨ ರಂದು ಈತನ ತಂದೆ ಕೈಲಾಸವಾಸಿಯಾದ. ಆತ ಮೃತಪಟ್ಟ ತಿಂಗಳೊಂದರಲ್ಲಿಯೇ ಅಬರ್ಡೀನಿನ ನೌಕರಿ ದೊರೆಯಿತು. ಈ ನೌಕರಿಗೆ ಸೇರಲು ಮ್ಯಾಕ್ಸ್‌ವೆಲ್ಲನಿಗೆ ಮನಸ್ಸು ಬಾರದು. ಯಾರಿಗಾಗಿ ಈ ಸ್ಥಳವನ್ನು ಬಯಸಲಾಗಿತ್ತೋ ಆ ತಂದೆಯೇ ಇನ್ನಿಲ್ಲವಾದ ಮೇಲೆ, ಈ ನೌಕರಿಯೇ ಏಕೆ? ಎಂದು ಮರುಗುತ್ತಿದ್ದನಾದರೂ, ಕೈಗೆ ಬಂದ ಅವಕಾಶವನ್ನು ಬಿಟ್ಟುಕೊಡದಿರಲು ಆತನ ವಿವೇಕ ಒತ್ತಾಯ ಮಾಡಿತು. ಅಬರ್ಡೀನಿನಲ್ಲಿ ಜೇಮ್ಸ್ ಮ್ಯಾಕ್ಸ್‌ವೆಲ್ ಇದ್ದುದು ಕೇವಲ ನಾಲ್ಕು ವರುಷ ಮಾತ್ರ. ೧೮೬೦ ರಲ್ಲಿ ಮಾರೀಶಲ್ ಹಾಗೂ ಕಿಂಗ್ಸ್ ಕಾಲೇಜುಗಳು ಕೂಡಿಕೊಂಡದ್ದರಿಂದ, ಈತನ ಸ್ಥಾನಕ್ಕೆ ಚ್ಯುತಿ ಬಂದಿತು. ಅಬರ್ಡೀನಿನಿಂದ ಹೊರಬಿದ್ದಾಗ ಮಾರಿಶಲ್ ಕಾಲೇಜಿನ ಪ್ರಾಚಾರ್ಯರ ಮಗಳ ಕೈಹಿಡಿದ. ಅದೇ ವರುಷವೇ ಫೋರ್ಬ್ಸ್ ನಿವೃತ್ತನಾಗಲಿರುವುದರಿಂದ; ಅವನ ಸ್ಥಾನಕ್ಕೆ ಅರ್ಜಿಸಲ್ಲಿಸಿ ಅಯಶಸ್ವಿಯಾದ. ಕೊನೆಗೆ ಲಂಡನಿನಲ್ಲಿಯ ಕಿಂಗ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕನಾದ. ಈ ವಿದ್ಯಾಲಯದಲ್ಲಿ ಆತ ೫ ವರ್ಷ ಸೇವೆ ಸಲ್ಲಿಸಿದ. ಈ ಅವಧಿಯಲ್ಲಿಯೇ ಅಪೂರ್ವ ಪ್ರಯೋಗಗಳನ್ನು ಕೈಕೊಂಡನು. ೧೮೬೦ರ ಶರದೃತುವಿನಲ್ಲಿ ಸ್ಮೈಲಿಯಿಂದ ಬಳಲಿದ. ೧೮೬೫ರಲ್ಲಿ ಕುದುರೆ ಸವಾರಿ ಮಾಡುತ್ತಿದ್ದಾಗೊಂದು ದಿನ, ಬೋ (Bough) ದಿಂದ ಗಾಯಗೊಂಡ. ಅನಂತರ ತ್ವಚರೋಗದಿಂದ ಕೆಲಕಾಲ ಹಾಸಿಗೆ ಹಿಡಿಯಬೇಕಾಯಿತು. ಈ ಅವಧಿಯಲ್ಲಿಯೇ ಆತ 'ಅನಿಲಗಳ ಸಂಚಾರಕ್ರಮ' ಕಂಡುಹಿಡಿದುದು. ವರ್ಷದಲ್ಲಿಯ ೯ ತಿಂಗಳು ವ್ಯಾಖ್ಯಾನಕ್ಕಾಗಿ ವಿನಿಯೋಗಿಸಲ್ಪಡುತ್ತಿದ್ದುವು. ಈಗಲೇ ವಿದ್ಯುಚ್ಛಕ್ತಿನ ಮಾಪನಗಳನ್ನು ನಿರ್ಧರಿಸುವ ಮಹಾಕಾರ್ಯವನ್ನು ಆ ವಿದ್ಯಾಲಯದವರು ಈತನಿಗೆ ಒಪ್ಪಿಸಿದರು. ನಲ್ಲೆಯ ಸಹಕಾರದಿಂದ ಅನಿಲಗಳ ಸ್ನಿಗ್ಧತೆಯನ್ನು ಕಂಡುಹಿಡಿಯುವುದು ಸುಲಭವಾಯಿತವನಿಗೆ. ಈತ ಪ್ರಯೋಗಗಳನ್ನು ಮಾಡುತ್ತಿದ್ದುದು ಹೆಚ್ಚಾಗಿ ದಿನದ ಅವಧಿಯಲ್ಲಿ. ಸಾಯಂಕಾಲ ಮಿತ್ರವೃಂದ ಹಾಗು ಅತಿಥಿ-ಅಭ್ಯಾಗತರಿಗಾಗಿ ಮೀಸಲಾಗಿರುತ್ತಿತ್ತು. ಮಧ್ಯಾಹ್ನ ಉದ್ಯಾನದಲ್ಲಿ ಆಲೆದಾಟ ನಕ್ಕು ನಗಿಸುವ ಮಕ್ಕಳ ಸೌಭಾಗ್ಯವನ್ನು ಈ ದಂಪತಿಗಳು ಪಡೆದುಬಂದಿರಲಿಲ್ಲ. ವಿಜ್ಞಾನಿಯಾಗಿದ್ದರೂ ಅಜ್ಞಾನಿಗಳನ್ನು ಅಲಕ್ಷ್ಯಿಸಿರಲಿಲ್ಲ.

ಮ್ಯಾಕ್ಸವೆಲ್ ಗಟ್ಟಿಮುಟ್ಟಾದ ಆಳು. ಕಪ್ಪಾದ ಕಂಗಳಲ್ಲಿ ನಗೆಮಿಂಚು ಕಾಣುತ್ತಿದ್ದರೂ, ಹುಬ್ಬುಗಳಲ್ಲಿ ವಿಚಾರಮಗ್ನತೆ ಕಾಣಬರುತ್ತಿತ್ತು. ಆತನ ವೇಷಮಾತ್ರದಿಂದ ಆತನನ್ನು ಹಳ್ಳಿಗನೆಂದು ಕರೆಯಬಹುದಾದಷ್ಟು ಸಾದಾವೇಷ. ಅಸ್ವಾಸ್ಥ್ಯದಿಂದ ಆತನಿಗೆ ಆತಂಕವುಂಟಾಯಿತಲ್ಲದೆ, ಅತಿ ಪರಿಶ್ರಮದಿಂದಲ್ಲ. ೧೮೬೭-೬೮ರಲ್ಲಿ

Physical lines of force ದ ಬಗ್ಗೆ ೪ ಪ್ರಬಂಧಗಳನು ಪ್ರಕಟಿಸಿದ. ೧೮೬೪ರಲ್ಲಿ ರಾಯಲ್ ಸೊಸಾಯಟಿಗೆ A Dynamic Theory of the Electro-Magnetic Field ಎಂಬ ಪ್ರಬಂಧವನ್ನು ಒಪ್ಪಿಸಿದನು. ಈತನ ಪ್ರಬಂಧಗಳ ವೈಶಿಷ್ಟ್ಯವೆಂದರೆ ಪಂಡಿತ-ಪಾಮರರಿಗೆ ತಿಳಿಯಲು ಸುಲಭಸಾಧ್ಯವಾದ ಶೈಲಿ. ೧೮೬೫ರಲ್ಲಿ ಪ್ರಾಧ್ಯಾಪಕ ವೃತ್ತಿಗೇನೆ ತಿಲಾಂಜಲಿಯನ್ನಿತ್ತು ಸ್ವಗ್ರಾಮವಾದ ಗ್ಲೆನ್ಲೇರನ್ನು ಸೇರಿದನು.

೧೮೫೬ರಲ್ಲಿ—ಈತನಿಗೆ ಆಗಿನ್ನೂ ೨೫ ವರ್ಷ. ಸೆಂಟ್ ಆಂಡ್ರೂಜ್ ವಿಶ್ವವಿದ್ಯಾಲಯಕ್ಕೊಳಪಟ್ಟ ಯುನಾಯಟೆಡ್ ಕಾಲೇಜಿಗೆ ಪ್ರಾಚಾರ್ಯನಾಗಲು ಕೇಳಿಕೊಂಡಾಗ, ಈತ ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದ. ಸ್ವಗ್ರಾಮ ಹಾಗು ಪಿತ್ರಾರ್ಜಿತ ಸಂಪತ್ತಿಗೆ ಮನತೆತ್ತ ಮ್ಯಾಕ್ಸವೆಲ್ ಮರ್ಯಾದೆಯ ಮಹಾಹುದ್ದೆಯನ್ನೂ ಮೂಲೆಗೊತ್ತಿದ. ಈಗಲೇ ವಿದ್ಯುಚ್ಛಕ್ತಿ ಹಾಗು ಲೋಹಚುಂಬಕತ್ವದ ಕುರಿತು ಗ್ರಂಥವನು ಬರೆದು ಪ್ರಕಟಿಸಿದ. ಹಳ್ಳಿಯ ವಾಸ ಆತನಿಗೆ ಹಿತಕರವಾಗಿತ್ತು. ಮನೆಯ ಪಕ್ಕದಲ್ಲಿಯೇ ಆತನಿಗೆಂದೇ ಅಂಚೆಯ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ವಿಶ್ವದ ಮೂಲೆಮೂಲೆಗಳಿಂದ ಬರುತ್ತಿದ್ದ ಅಸಂಖ್ಯಾತ ಓಲೆಗಳನ್ನು ಹಂಚುತ್ತಿದ್ದ ಅಂಚೆಯ ಕಾರ್ಮಿಕರು ಬೇಸತ್ತಿದ್ದರು. ನಿತ್ಯವೂ ಮನೆಯಲ್ಲಿಯೇ ಪ್ರಾರ್ಥನೆ ಮಾಡುತ್ತಿದ್ದನಾದರೂ, ಭಾನುವಾರ ತಪ್ಪದೆ ಇಗರ್ಜಿಗೆ ಹೋಗುತ್ತಿದ್ದ. ಪ್ರಾರ್ಥನಾಮಂದಿರದಿಂದ ಮನೆಗೆ ಮರಳಿದವನೇ ಪವಿತ್ರಗ್ರಂಥಗಳನ್ನು ಪಠಿಸುತ್ತಿದ್ದ. ಮ್ಯಾಕ್ಸ್‌ವೆಲ್ ಧರ್ಮಭೀರು ಹಾಗೂ ದೈವಭಕ್ತ. ೧೮೬೪, ಜೂನ್ ೨೧ರಂದು ಆತ ಹೆಂಡತಿಗೆ ಬರೆದ ಓಲೆ ಗಮನಾರ್ಹವಾದುದು—'ನನ್ನ ಹೃದಯದಲ್ಲಿ ನೀನು ಚಿರಸ್ಥಾಯಿಯಾಗಿರುವೆ. ಹಾಗೆಯೇ ಆ ದಯಾಘನನು ನಮ್ಮ ಹೃನ್ಮಂದಿರದಲ್ಲಿರಲಾರನೆ? ಸದೇಹಿಯಾಗಿಯೇ ಆತ ನಮಗೆ ದರ್ಶನವಿತ್ತಿದ್ದರೆ, ನಮಗೆ ದೈವೀಶಕ್ತಿಯ ಕಲ್ಪನೆ ಬರುತ್ತಿದ್ದಿಲ್ಲ........

ಮದುವೆ ದೈಹಿಕಮಿಲನಮಾತ್ರವಾಗಿರದೆ, ಆತ್ಮಿಕವಾದುದಾಗಿ ಆಧ್ಯಾತ್ಮದತ್ತ ಒಯ್ಯುವಂತಿರಬೇಕೆಂಬುದು ಆತನ ಮನದ ಇಂಗಿತ. ಸಾಮಾಜಿಕ ವ್ಯವಸ್ಥೆ ಪವಿತ್ರಗ್ರಂಥವಾದ ಬಾಯಬಲ್ಲಿಗನುಸರಿಸಿ ಇರಬೇಕೆಂದು ಆತನ ವಾದ.

ಜೀವನದ ಸಂಧ್ಯಾಕಾಲದಲ್ಲಿ ಈತನ ಆರೈಕೆಯನ್ನು ಹೆಂಡತಿ ಮಾಡುವುದುಳಿದು, ಈತನೇ ಆಕೆಯ ಶುಶ್ರೂಷೆಯನ್ನು ಮಾಡಬೇಕಾದುದು ದೈವಸಂಕಲ್ಪ. ಅವನೋ ಹೃದಯಸಾಕ್ಷಿಯಾಗಿ ತನ್ನ ಪ್ರಾಣಪ್ರಿಯೆಯ ಸೇವೆ ಮಾಡಿದ. ಜಗತ್ತಿನಲ್ಲಿ ಪತಿವ್ರತೆಯರನ್ನು ಕಾಣುವುದೇನೂ ದುರ್ಲಭವಲ್ಲ; ಆದರೆ ಪತ್ನಿವ್ರತರು ಸಿಗುವುದು ಕಷ್ಟಸಾಧ್ಯ. ಮ್ಯಾಕ್ಸವೇಲ್‌ನಂತಹ ಗಂಡ ದೊರೆಯಲು ಎಷ್ಟು ಜನ್ಮದ ಪುಣ್ಯಬೇಕು! ಒಮ್ಮೆಯಂತೂ ಮ್ಯಾಕ್ಸವೇಲ್ ಹೆಂಡತಿಯ ಹಾಸಿಗೆಯ ಬಳಿ ಇದ್ದು, ೩ ವಾರ ಕಣ್ಣಿಗೆಕಣ್ಣು ಹಚ್ಚಲಿಲ್ಲ. ವಿಶ್ವವಿದ್ಯಾಲಯದಿಂದ ನಿವೃತ್ತನಾಗಿದ್ದನಾದರೂ, ಪರೀಕ್ಷಕನಾಗಿರಲು ಒಪ್ಪಿಕೊಳ್ಳಲೇ ಬೇಕಾಗಿತ್ತು. ೧೮೭೧ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಚಾನ್ಸಲರರಾದ ಡ್ಯೂಕ್‌ರಿಂದಾಗಿ ಭೌತಶಾಸ್ತ್ರ ವಿಭಾಗವನು ತೆರೆಯಲಾಯಿತು. ಈ ವಿಭಾಗದ ಹೊಣೆ ಹೊರಲು ಮೊದಲು ಥಾಮ್ಸನ್ನನಿಗೆ ಕೇಳಿಕೊಳ್ಳಲಾಯಿತು. ಆದರೆ ಆತ ಗ್ಲಾಸ್ಗೋ ಬಿಟ್ಟುಬರಲು ಒಪ್ಪಲಿಲ್ಲ. ಅನಂತರ ಹೆಲ್ಮ್‌ಹೋಲ್ಟ್‌ಜನನ್ನು ವಿನಂತಿಸಲಾಯಿತು. ಆದರೆ ಆತ ಅದೇ ತಾನೆ ಬರ್ಲಿನಿನ ಪ್ರಯೋಗಶಾಲೆಗೆ ಡಿರೆಕ್ಟರನಾಗಲು ಸಮ್ಮತಿಸಿದ್ದ. ಹೀಗಾಗಿ ಕೊನೆಗೆ ಮ್ಯಾಕ್ಸವೆಲ್ಲನಿಗೆ ಮೊರೆಹೋದರು. ಅವರ ಒತ್ತಾಯಕ್ಕೆ ಒಪ್ಪಲೇ ಬೇಕಾಯಿತು. ೧೮೭೪ರ ಮೊದಲು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರಕ್ಕೆಂದೇ ಪ್ರತ್ಯೇಕ ಪ್ರಯೋಗಶಾಲೆ ಇರಲಿಲ್ಲವೆಂದರೆ ನಂಬಬಹುದೆ? ಸಿಕ್ಕಷ್ಟು ಸ್ಥಳದಲ್ಲಿಯೇ ಲಭ್ಯವಿದ್ದ ಸಲಕರಣೆಗಳನ್ನೇ ವಿನಿಯೋಗಿಸಿ, ಅಪ್ರತಿಮ ಸಂಶೋಧನೆಗಳನು ಮಾಡಿದ ಸಾಹಸಿಗರಾದ ನ್ಯೂಟನ್ ಹಾಗೂ ಸ್ಟೋಕ್ಸ್‌ರನ್ನು ಕೊಂಡಾಡಿದಷ್ಟೂ ಕಡಮೆಯೇ. ಮ್ಯಾಕ್ಸ್‌ವೆಲ್ ಕೆಲ ಸಲಕರಣೆಗಳನ್ನು ತಾನೇ ಕೊಂಡು ವಿದ್ಯಾಲಯಕ್ಕೆ ಕೊಡುಗೆಯಾಗಿ ಕೊಟ್ಟ. ಮ್ಯಾಕ್ಸ್‌ವೆಲ್ ೮ ವರ್ಷ ಕಾಲ ಈ ಸ್ಥಾನವನ್ನಲಂಕರಿಸಿದ. ಈ ಪ್ರಯೋಗಶಾಲೆಯ ಹೆಸರು ಕ್ಯಾವೆಂಡಿಶ್ ಪ್ರಯೋಗಶಾಲೆ. ಕ್ಯಾವೆಂಡಿಶ್ ಬರೆದ ವಿದ್ಯುತ್‌ಸಂಶೋಧನೆಗಳನ್ನು ಸಂಪಾದಿಸಿದ. ೧೮೭೦ರಲ್ಲಿ ಅಣುಗಳ ಕುರಿತು ಪ್ರಬಂಧ ಪ್ರಕಟಿಸಿದ. ೧೮೭೯ರಲ್ಲಿ ಅಗ್ನಿಮಾಂದ್ಯದಿಂದ ಬಹು ಬಳಲಿದ ಸಾವಿಗಾಗಿ ದಾರಿಕಾಯುತ್ತಿದ್ದ. ಅದೇ ವರುಷ ನವ್ಹೆಂಬರ್ ೫ರಂದು, ತನ್ನ ೪೮ನೆಯ ವಯಸ್ಸಿನಲ್ಲಿ ಈತ ಮರಣಹೊಂದಿದನು. ಸಾಯುವ ವರೆಗೂ ಬುದ್ಧಿ ಸ್ವಾಧೀನದಲ್ಲಿತ್ತು. ನ್ಯೂಟನ್, ಫ್ಯಾರಡೇರಂತೆ ಬುದ್ಧಿ ತಾಳತಪ್ಪಿರಲಿಲ್ಲ—ಕೊನೆಗಾಲದಲ್ಲಿ. ಈತನ ಮರಣಾನಂತರ ಈತನ ಹೆಂಡತಿ, ಈತನ ಅಪಾರಗ್ರಂಥ ಸಂಪತ್ತಿಯನ್ನು ದಾನಮಾಡಿದಳಲ್ಲದೆ, ಆ ಪ್ರಯೋಗಶಾಲೆಗೆ, ತನ್ನ ಮರಣಾನಂತರ ೬೦೦೦ ಪೌಂಡುಗಳು ದೊರೆಯುವಂತೆ ಮೃತ್ಯುಪತ್ರವನ್ನು ಬರೆದಳು.


ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ

● ಉತ್ತಮ ಚಿತ್ರಗಳ ಮೂಲಕ

● ಮ್ಯಾಜಿಕ್ ಲ್ಯಾಂಟರ್ನ-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ

ಗಾಂಧಿಚೌಕ, ಧಾರವಾಡ

# ಆದರ್ಶನಾಗುವ ಹಂಬಲ

( ಪೌರಾಣಿಕ ಕಥೆ )

ಶ್ರೀ. ಯು. ನಾ. ಉಡುಪ ವಿದ್ವಾನ್, ಐರೋಡಿ

**ವಾನರಕುಲದಲ್ಲಿ ಜನಿಸಿದ ಹನುಮಂತ, ದಾನವ-ಮಾನವ-ದೇವಕುಲಗಳಿಗೆಲ್ಲ ಆದರ್ಶನಾಗಿ ನಿಂತುದು ಹೇಗೆ? ಹನುಮಂತ ವಜ್ರದೇಹಿಯೂ ಅಹುದು; ಕುಸುಮಸಮಹೃದಯನೂ ಅಹುದು. ಆತನ ಜ್ಞಾನ ಅಪಾರವಾದುದು. ದೇಹಬಲವೂ ಅನ್ಯಾದೃಶವಾದುದು.**

೧

ಹನುಮನನ್ನು ಮಗನನ್ನಾಗಿ ಪಡೆದ ಅಂಜನೆಯು ಏನು ಧನ್ಯಳೊ! ಆ ಮಹಾತಾಯಿಯು ಮಗನಿಗೆ ಉಪನಯನ ಮಾಡಿಸಿ, ಆಗಿನ ಪದ್ಧತಿಯಂತೆ ಗುರುಕುಲಕ್ಕೆ ಕಳುಹಿಸಲು ಯೋಗ್ಯ ಗುರುಗಳನ್ನು ಶೋಧಿಸತೊಡಗಿದಳು. ಮತಂಗ ಮಹರ್ಷಿಗಳು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಹಿಂಜರಿದರು. ಅಗಸ್ತ್ಯರು ತಮಗೆ ವಯಸ್ಸಾಯಿತೆಂದರು. ಉಳಿದ ಪಾಠಶಾಲೆಗಳಿಗೆ ಹನುಮನನ್ನು ಕಳುಹಿಸುವಂತಿರಲಿಲ್ಲ. ಇದರಿಂದ ಯೋಚನೆಗೆ ಗುರಿಯಾದ ಅಂಜನೆಯ ಕಣ್ಣುಗಳು ಆಗಾಗ ದುಃಖಾಶ್ರುವಿನಿಂದ ತುರುಡುಗಟ್ಟತೊಡಗಿದುವು. ಆಂಜನೇಯನು ಇದನ್ನು ಕಂಡುಕೊಂಡು, ಸಹಿಸಲಾರದೆ ತಾಯಿಯೊಡನೆ ದುಃಖದ ಕಾರಣವನ್ನು ಕೇಳಿದನು. ಆಗ ಅಂಜನೆಯು ಕಣ್ಣೀರನ್ನೊಮ್ಮೆ ಸೆರಗಿನಿಂದ ಒರಸಿಕೊಂಡು, ಮಗನನ್ನು ಮುಂಡಾಡುತ್ತಾ— 'ಕಂದಾ, ಲೋಕವ್ಯಾಪಾರಾಸಕ್ತರಾದ ನಿನ್ನ ಪೂಜ್ಯ ಪಿತರನ್ನು ಕರೆತಂದು ಹೇಗೋ ನಿನಗೆ ಉಪನಯನ ಮಾಡಿಸಿದೆ. ಇನ್ನು ಕೆಲವು ವರುಷಗಳಾದರೂ ಗುರುಕುಲವಾಸ ಮಾಡಲೇ ಬೇಕು. ಇದು ನಮ್ಮ ಸನಾತನ ಸಂಪ್ರದಾಯ. ನಿನ್ನ ಸಹಪಾಠಿಗಳಲ್ಲಿ ನಳ-ನೀಲಾದಿಗಳು ಅಗಸ್ತ್ಯರ ಗುರುಕುಲವನ್ನು ಸೇರಿ ಕೆಲವು ವರ್ಷಗಳಾದುವು. ಆದರೆ ನಿನ್ನನ್ನು——' ಎನ್ನುವಾಗ ಆ ಪ್ರೇಮುಲ ಸ್ವಭಾವದ ಮಾತೆಯು ದುಃಖವನ್ನು ತಡೆಯಲು ಯತ್ನಿಸುತ್ತಿರುವುದು, ಆಕೆ ನುಡಿಯುವ ಧ್ವನಿಯಿಂದಲೇ ಸ್ಪಷ್ಟವಾಗುತ್ತಿತ್ತು.

ಹನುಮನು ತನ್ನ ಶೈಶವವನ್ನೆಲ್ಲಾ ತಾಯಿಯ ಮಡಿಲಲ್ಲೇ ಕಳೆದಿದ್ದನು. ಅವನ ಬಾಲ್ಯದ ಸಾಹಸಕಾರ್ಯವೊಂದು ಮಹಾಪುರುಷರ ಹೃದಯಕ್ಕೂ ಕಂಪನವನ್ನುಂಟುಮಾಡಿತ್ತು. ಇದರಿಂದ ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಅಸಾಮಾನ್ಯ ಗುರುಕುಲಗಳಿಗೂ ತಲೆಬೇನೆ ಬರಿಸುತ್ತಿತ್ತು. ಅವನ ಪಿತನಾದ ಮಾರುತನು ಜನರ ಜೀವಿತ-ಮರಣದ ಹೊರೆ ಹೊತ್ತುದರಿಂದ, ಮಗನನ್ನಾಗಲೀ ಪ್ರಿಯ ಪತ್ನಿಯನ್ನಾಗಲೀ ಆತನಿಂದ ವಿಚಾರಿಸಿಕೊಳ್ಳುವುದಾಗುತ್ತಿರಲಿಲ್ಲ. ಇದರಿಂದ ಹನುಮನ ಪಾಲಿಗೆ ಅಮ್ಮ-ಅಪ್ಪನೆಲ್ಲಾ ಅಂಜನೆಯೇ ಆಗಿದ್ದಳು. ಆಕೆಯು ಅವಕಾಶವಿದ್ದಾಗಲೆಲ್ಲಾ ಹನುಮನಿಗೆ ಅವತಾರ-ಪುರುಷರ ಕಥೆಯನ್ನು ಸರಳ ವಿರಳ ಭಾಷೆಯಲ್ಲಿ ಹೇಳುವಳು. ಸಾಧನೆಗಳಿಂದ ದೇವ-ದೇವನಾಗಲೂ ಮಾನವನಿಂದ ಸಾಧ್ಯವೆನ್ನುವುದಕ್ಕೆ ಅನೇಕ ದೃಷ್ಟಾಂತಗಳನ್ನು ಕೊಡುವಳು. ಈ ವಾಕ್ಯಗಳೆಲ್ಲಾ ಹನುಮನ ಕಿವಿಗೆ ಅಮೃತಧಾರೆಗಳಾಗುವುವು. ಬರುತ್ತಿದ್ದರೆ ತಾನೂ ಸಮಸ್ತ ಭಾರತೀಯರ ಆರಾಧ್ಯದೈವವಾಗಬೇಕೆಂದು ಅವನು ಪುನಃ ಪುನಃ ಇಚ್ಛಿಸುವನು. ಅದಕ್ಕೆ ಶಾರೀರಿಕ-ಮಾನಸಿಕ ಶಕ್ತಿಗಳು ಅಪಾರ ಹೆಚ್ಚಬೇಕಲ್ಲದೆ, ಹಲವು ವರ್ಷಗಳ ವರೆಗೆ ಆತ್ಮದ ಸಂಸ್ಕಾರವು ಎಡೆಬಿಡದೆ ನಡೆಯಬೇಕು. ಇದಕ್ಕೊಬ್ಬ ಸಮರ್ಥ ಗುರುವು ಬೇಕು. ತನ್ನ ಅಭೀಷ್ಟದ ಪೂರಯಿಕೆಯ ಸಾಫಲ್ಯಕ್ಕಾಗಿ ಯಾವ ಮಹಾಪುರುಷನನ್ನು ಆಶ್ರಯಿಸಲಿ? ಆತನು ಕರುಣ-ಕಾರುಣ್ಯದಿಂದ ಸದಾ ಪ್ರಜ್ವಲಿಸುವವನಾಗಬೇಕು. ಈ ಕುರಿತಾಗಿಯೇ ಆಂಜನೇಯನು ಕೊರಗ್ಗದಿಗೊಳ್ಳುವನು.

'ಅಮ್ಮಾ, ಯಾಕೆ ಅಳುತ್ತಿ? ವಾಲಿಮಹಾರಾಜರು ಎಂದಾದರೂ ಗದರಿಸಿದರೆ? ಅಥವಾ ಯುವರಾಜರು ಮನಸ್ಸು ನೋಯಿಸಿದರೆ?'

'ಅವರೇಕೆ ಗದರಿಸುತ್ತಾರೆ ಮಗು? ಅವರ ರಾಜ್ಯದಲ್ಲೇ ಬಿರುನುಡಿಗಳಿಲ್ಲದಿರುವಾಗ, ಅವರು ಹೇಗೆ ಕಲ್ಪಾತನ್ನು ಆಡಬಲ್ಲರು? ಸುಗ್ರೀವನಂತಹ ಯುವರಾಜರು ನಮ್ಮ ನಾಡಿನ ಪೂರ್ವಪುಣ್ಯದಿಂದಲೇ ದೊರೆತರು.'

'ಹಾಗಾದರೆ ಇನ್ನೂ ಅಳುವ ಕಾರಣವನ್ನು ಬಚ್ಚಿಡುವೆಯೇಕೆ?'

'ಮಗೂ, ನೀನು ಈ ಪೂರ್ವವಯಸ್ಸಿನಲ್ಲಿ ಗುರುಕುಲವಾಸ ಮಾಡಲೇ ಬೇಕು. ಬಾಲ್ಯಕುಸುಮವು ಗುರುಕುಲವಾಸದಿಂದಲೇ ಸುಗಂಧಪೂರಿತವಾಗಬೇಕು. ವಾಲಿ ಮಹಾರಾಜರಿಗೆ ಶಿಕ್ಷಣವಿತ್ತ

ಮತಂಗಮಹರ್ಷಿಗಳು ನಿನ್ನನ್ನು ಅವರ ಮಠಕ್ಕೆ ಸೇರಿಸಿಕೊಳ್ಳ-ಲೊಪ್ಪಲಿಲ್ಲ. '

'ಸಮುದ್ರವನ್ನೇ ಬರಿದು ಮಾಡಿದ ಅಗಸ್ತ್ಯರಿಲ್ಲವೇ ?

'ಅವರನ್ನೂ ಕೇಳಿದೆ. ಅವರು ಹಣ್ಣು ಹಣ್ಣು ಮುದುಕ-ರಾದುದರಿಂದ, ಶಾಸ್ತ್ರದ ಎಷ್ಟೋ ಭಾಗಗಳು ಅವರಿಗೆ ಮರೆತಿವೆಯಂತೆ. ಅವರ ಪತ್ನಿ ಲೋಪಾಮುದ್ರೆಯು ಕಾವೇರೀನದಿಯಾಗಿ ಹರಿದಮೇಲೆ, ಅವರಿಗೆ ಜೀವನದಲ್ಲೇ ಜುಗುಪ್ಸೆ ಹುಟ್ಟಿ, ವೈರಾಗ್ಯದ ಪರಾಕಾಷ್ಠೆ-ಯನ್ನನುಭವಿಸುತ್ತಿದ್ದಾರೆ. '

'ಅದಕ್ಕಾಗಿ ಚಿಂತೆಯೆ? ವಿಶಾಲವಾದ ಆರ್ಯಾವರ್ತ, ಬ್ರಹ್ಮಾ-ವರ್ತಗಳಲ್ಲಿ ದೊಡ್ಡ ದೊಡ್ಡ ಗುರುಕುಲಗಳುಂಟೆಂದು ಕೇಳಿದ್ದೇನೆ. ಅವುಗಳಲ್ಲೊಂದನ್ನು ಸೇರಿಕೊಳ್ಳುವೆ. '

'ಮಗೂ, ಆರ್ಯರು ಪ್ರತಿಭಾನ್ವಿತರೇನೋ ಹೌದು; ಆದರೆ ಅವರು ಕನ್ನಡಿಗರನ್ನು ವಾಚಾಮಗೋಚರವಾಗಿ ವಾನರರೆಂದು ಸಂಬೋಧಿಸುತ್ತಿದ್ದಾರೆ. ಅವರು ನರರಂತೆ! ನಾವು ವಾನರರಂತೆ!'

'ಛೀ, ಅಪಮಾನದೊಂದಿಗೆ ಅಪಹಾಸ್ಯದ ವಿಚಾರ !'

'ನೀನು ಅಂಥವರ ಗುರುಕುಲದಲ್ಲಿ ಹೇಗೆ ಅಭ್ಯಾಸ ಮಾಡುವೆ?'

'ಅದು ಸುತರಾಂ ಅಸಾಧ್ಯ'

ಅಂದಿನ ಆರ್ಯರಿಗೆ ಕನ್ನಡಿಗರಲ್ಲಿದ್ದ ತಾತ್ಸಾರಭಾವವನು ತಾಯಿಯ ಬಾಯಿಂದ ಕೇಳಿ, ಬಾಲಹನುಮನ ನೇತ್ರದ್ವಯವು ಮಿನುಗಿತು. ಗುಲಾಬಿ ವರ್ಣದ ಕಪೋಲಗಳು ರಕ್ತವರ್ಣದಿಂದ ರಂಜಿತವಾದುವು.

'ಅಮ್ಮಾ, ಆರ್ಯರ ಈ ಭಾವನೆಯೇ ಸದ್ಯದ ಅವರ ಬಿಕ್ಕಟ್ಟಿನ ಪೀಠಿಕೆಯಾಗಿದೆ. ಅವರು ಇನ್ನೊಂದು ದಿನ ನಮ್ಮ ಸಹಾಯವನ್ನು ಬೇಡಲು ಬಾರದಿರರು. ಆಗ ಅವರನ್ನೇ ವಾನರರಂತೆ ಕುಣಿಸಿದರಾಯಿತು. '

'ವತ್ಸಾ, ಸೇಡು ತೀರಿಸಿಕೊಳ್ಳುವುದು ಆರ್ಯರಲ್ಲಿ ಹಲವರ ಪದ್ಧತಿ. ನಿರ್ಮಲ ದರ್ಪಣದಂತೆ ಸದಾ ಪರಿಶುದ್ಧ ಮನಸ್ಸಿನವರೇ ಕನ್ನಡಿಗರು. ಹಗೆಯಿಂದ ಹಗೆಯೆಂದಿಗೂ ನೊಂದದು!'

ಅಷ್ಟರಲ್ಲಿ ಸೂರ್ಯದೇವನು ಮೂಡುಬಾನಿನಲ್ಲಿ ಪ್ರೈದೋರಿ-ದನು. ಅವನ ಹೊಂಗದಿರುಗಳು ತರುನಿಬಿಡ ಗಿರಿನಿತಂಬಗಳನ್ನು ಚೆನ್ನಾಗಿ ಅಲಂಕರಿಸತೊಡಗಿದ್ದುವು. ಬಾಲ ಆಂಜನೇಯನು ಒಮ್ಮೆಯೇ ಆವೇಶದಿಂದ 'ಅಮ್ಮಾ, ಹಗಲು-ರಾತ್ರಿಗಳ ನಿಯಾಮಕನಾದ ಸೂರ್ಯಭಗವಾನನನ್ನೇ ಗುರುವನ್ನಾಗಿ ಮಾಡಿಕೊಳ್ಳುವೆನು. ಖಂಡಿತ ವಾಗಿಯೂ ನಾನು ಅವನಿಂದಲೇ ವಿದ್ಯೆಪಡೆಯಬೇಕು. ಆ ಮತಂಗ ಋಷಿಗಳಲ್ಲಿ, ಈ ಅಗಸ್ತ್ಯಮಹರ್ಷಿಗಳಲ್ಲಿ ಮಾರುತಿಯನ್ನು ಜ್ಞಾನಿ-ಯಾಗಿಸುವಷ್ಟು ತಿರುಳಿದೆಯೇ ? '

'ಹನುಮಾ, ಸೂರ್ಯನಲ್ಲಿ ಗುರುಕುಲವಾಸ ಮಾಡಿದವರುಂಟೆ? ಸಿಟ್ಟುಬಂತೆಂದು ರಟ್ಟೆಮೀರಿದ ಮಾತಾಡಬೇಡ. '

'ನಾನು ಆಂಜನಾದೇವಿಯ ಸುಪುತ್ರನಾಗಿದ್ದರೆ, ಸೂರ್ಯನಲ್ಲೇ ಗುರುಕುಲವಾಸವನ್ನು ಮಾಡಬೇಕು, ಆದಾಗದಿದ್ದರೆ—'

'ಸಾಕು, ಅದಕ್ಕಾಗಿ ಭೀಷಣಪ್ರತಿಜ್ಞೆ ಬೇಡ. ಈ ಕುರಿತು ಮಹಾರಾಜರನ್ನೇ ಕೇಳುತ್ತೇನೆ, ಅವರು ದಾರಿ ತೋರಿಸದಿರರು. '

ಆಗ ಹನುಮನು ತಾಯಿಯ ಮಾತುಗಳನ್ನು ಕೇಳಿಯೂ ಕೇಳ-ದವನಂತೆ ಅಧೋವದನನಾಗಿದ್ದನು.

೨

'ಮಗೂ, ಹನುಮಾ!'

'ಅಮ್ಮಾ'

'ನಾಲ್ಕು ದಿನಗಳಿಂದ ಒಮ್ಮೆಯಾದರೂ ಮನೆಯ ಕಡೆಗೆ ಇಣುಕಬಾರದಿತ್ತೆ ?'

'ಅಮ್ಮಾ'

'ಅಮ್ಮನನ್ನು ಚೆನ್ನಾಗಿ ಸಂಬೋಧಿಸಲು ಕಲಿತಿರುವೆ. ಮಹಾ-ರಾಜರು ನಿನ್ನನ್ನು ಅಗಸ್ತ್ಯರ ಗುರುಕುಲಕ್ಕೇ ಕಳುಹಿಸುವಂತೆ ಆಜ್ಞಾ-ಪಿಸಿದ್ದಾರೆ. ಮನೆಗೆ ಬಾ. ನಿನ್ನ ವ್ರತೋಪವಾಸಗಳಿಂದ ತಾಯಿಯ ಕರುಳು ಹೇಗೆ ಬೇಯುವುವೆಂಬುದನ್ನು ಅರಿತಿರುವೆಯಾ ? '

'ಅಮ್ಮಾ. ನನ್ನ ಪ್ರತಿಜ್ಞೆಯಿಂದ ಇನ್ನೊಂದಂಗುಲದಷ್ಟೂ ಸರಿ ಯುವಂತಿಲ್ಲ. ನಾನು ಭಾರತೀಯರ ಆರಾಧ್ಯದೈವನಾಗಲೇಬೇಕು. ಆಂಜನೇಯನು ಸಾಮಾನ್ಯನಾಗಿ ಬದುಕಿ ಉಳಿಯುವುದು ನಿನಗೆ ಯೋಗ್ಯವೇ ? ಇನ್ನಾದರೂ ನನ್ನಷ್ಟಕ್ಕೆ ನನ್ನನ್ನು ಬಿಟ್ಟುಬಿಡು. ಈ ಜಗತ್ತಿನಲ್ಲಿ ಕಷ್ಟಪಡುವುದು, ಇನ್ನೂ ಕಷ್ಟಪಡುವುದು, ಮತ್ತೂ ಕಷ್ಟ ಪಡುವುದೇ ಇದರ ಹಣೇಬರಹವೆಂದು ನೀನೇ ಹೇಳುತ್ತಿಲ್ಲವೇ ? ಕನ್ನಡಿಗನಾಗಿ ಹುಟ್ಟಿ, ಅಖಂಡ ಭಾರತೀಯರಿಂದ ಪಡೆಯಲಾಗದ ಸ್ಥಾನಮಾನಗಳನ್ನು ಪಡೆಯುವುದೆಂದರೆ ನಿನಗೆ ಮಾತ್ರವಲ್ಲ; ಸಮಗ್ರ ಕರ್ನಾಟಕಕ್ಕೇ ಭೂಷಣವಲ್ಲವೇ ? ಅದಕ್ಕಾಗಿ ಸಾಧನೆಯನ್ನು ಮುಂದುವರಿಸುವಂತೆ ನನ್ನ ಹೃದಯವ್ಯಾಪಿ ದಿವ್ಯಶಕ್ತಿಯೊಂದು ಪ್ರೇರಿಸುತ್ತಿದೆ. ಆದನ್ನೆಂದೂ ನಿನ್ನ ಮಾರ್ಗದಲ್ಲಿ ಸಮಾಧಾನ ಪಡಿಸಲಾರೆ. '

'ನಿನ್ನ ಅಭಿಮಾನ—ಧ್ಯೇಯಗಳೇ ಹಿರಿದಾದುವಲ್ಲ! ಮಗೂ, ಕಠೋರನಿಯಮಗಳಿಂದ ನಿನ್ನ ಕಿಶೋರಾವಸ್ಥೆ ಬಾಡುತ್ತದೆ. ಜೀವನ-ದಲ್ಲಿ ಕಿಶೋರ-ತಾರುಣ್ಯಗಳು ಋತುರಾಜನ ನೇತ್ರದ್ವಯವಾದ ಚೈತ್ರ, ವೈಶಾಖಗಳಂತೆ ಅಮೌಲ್ಯವಾದುವುಗಳೆಂದು ನಿನ್ನ ಪೂಜ್ಯಪಿತನ ಬಾಯಿಯಿಂದಲೇ ನಾನು ಹಲವು ಸಾರಿ ಕೇಳಿದ್ದೆ. ಬಾಲ್ಯಲತೆಯು ಆರೈಕೆಯಿಂದ ನಳನಳಿಸದಿದ್ದರೆ, ಮುಂದಿನ ಕಿಶೋರ-ತಾರುಣ್ಯಗಳು ಕಳೆಗುಂದುವುವು.... ......'

ಅಂಜನೆಯು ಮಗನ ಹಸ್ತವನ್ನು ಹಿಡಿದುಕೊಂಡು ಮನೆ ತೆರಳುವಂತೆ ಒತ್ತಾಯಿಸತೊಡಗಿದಳು. ಆಗ ಮಾರುತನು ದಾಟು-ಕಾಲಿನಿಂದ ಬಂದು—'ಪ್ರಿಯ ಅಂಜನೆ! ಬಾಲ ಹನುಮನ ಧ್ಯೇಯಕ್ಕೆ

ಭಂಗ ತರಬೇಡ' ಎಂದನು. ಆಗಲೇ ಅಂಜನೆಯೂ ಹನುಮನೂ ಮಾರುತನ ಪಾದಗಳಿಗೆರಗಿದ್ದರು.

× × × ×

ನಸುಕು ಹರಿಯಲು ತಡವಿಲ್ಲದಿದ್ದರೂ, ಶರತ್ಕಾಲದ ಬೆಳ್ದಿಂಗಳು ಹಂಪೆಯಂತಹ ಗುಡ್ಡಗಾಡು ಪ್ರದೇಶಗಳಲ್ಲೂ ಕೈಹಿಡಿತವಿಲ್ಲದಷ್ಟು ಬಿದ್ದಿತ್ತು. ಉಷಃಕಾಲವು ಸಮೀಪಿಸುತ್ತಿದ್ದುದರಿಂದ, ಪಂಪಾಸರಸ್ಸು ಮತ್ತು ತುಂಗಭದ್ರಾ ನದೀತಟಗಳು ಮೀಯಲು ಬಂದ ಜನರಿಂದ ಕಿಕ್ಕಿರಿಯತೊಡಗಿದ್ದು, ಪ್ರಾತಃಸ್ಮರಣವು ಅಲ್ಲಲ್ಲಿ ವಾಯುವಿನ ಹಿಲ್ಲೋಲದೊಡನೆ ಅಸ್ಪಷ್ಟವಾಗಿ ಕೇಳಿಬರುತ್ತಿತ್ತು. ಹನುಮನು ತುಂಗಭದ್ರೆಯ ದಡದಲ್ಲಿಯ ಏಕಾಂತಪ್ರದೇಶದಲ್ಲಿದ್ದ ದೇಗುಲವೊಂದರಲ್ಲಿ ತನ್ನ ವಾಸ್ತವ್ಯವಿಟ್ಟಿದ್ದನು. ಅವನು ಕೇವಲ ನಮಸ್ಕಾರಗಳಿಂದಲೇ ಸೂರ್ಯನಾರಾಯಣನ ಕೃಪೆಗೆ ಪಾತ್ರನಾಗಬೇಕೆಂದು ನಿರ್ಧರಿಸಿ, ಮಂತ್ರಪೂರ್ವಕವಾಗಿ ಸೂರ್ಯನಮಸ್ಕಾರವನ್ನು ಹಾಕಲು ತೊಡಗಿದ್ದನು. ಅವನು ನಿತ್ಯವೂ ಪಂಚ ಪಂಚ ಉಷಃಕಾಲಕ್ಕೆದ್ದು, ಮುಖಮಾರ್ಜನಾದಿಗಳನ್ನು ತೀರಿಸಿಕೊಂಡು, ಪುಣ್ಯವಾಹಿನಿಯಾದ ತುಂಗಭದ್ರೆಯಲ್ಲಿ ಮಿಂದು, ಆಹ್ನಿಕ ಅಗ್ನಿಕಾರ್ಯಗಳನ್ನು ಪೂರಯಿಸಿ ಸೂರ್ಯನಮಸ್ಕಾರಕ್ಕೆ ಆರಂಭಿಸಿದನೆಂದರೆ, ಬಿಡಲು ಮಧ್ಯಾಹ್ನವಾಗಬೇಕು. ಆಗ ಕರ್ಮಸಾಕ್ಷಿಯಾದ ದಿನಕರನು ತರುಣ ಮಾರುತಿಯ ಸಾಹಸವನ್ನು ಕಾಣುತ್ತಾ ಕಾಣುತ್ತಾ ಸಾಗುತ್ತಿದ್ದನು. ದೂರದ ವಿರೂಪಾಕ್ಷ ದೇವಾಲಯದ ಮಧ್ಯಾಹ್ನದ ಶಂಖ-ಕಹಳೆ-ಭೇರಿಗಳ ನಾದವು ಅವನ ಮುಂದಿನ ಕರ್ತವ್ಯವನ್ನು ಸೂಚಿಸುವುದು. ಆಗ ಹನುಮನು ನಮಸ್ಕಾರವನ್ನು 'ಶ್ರೀ ಸವಿತ್ರೇ ಸೂರ್ಯನಾರಾಯಣಾಯ ನಮಃ' ಎಂಬ ಮಂತ್ರದಿಂದ ಮುಕ್ತಾಯಗೊಳಿಸಿ, ಪುನಃ ಸ್ನಾನಕ್ಕೆ ನದಿಗಿಳಿಯುವನು. ಮಿಂದು ಸೂರ್ಯದೇವನನ್ನು ಪೂಜಿಸಿ, ಅವನಿಗರ್ಪಿಸಿದ ಫಲಗಳನ್ನು ಮಿತವಾಗಿ ಮೆದ್ದು, ಪುನಃ ಕೊರಳುದ್ದದ ನದೀನೀರಿನಲ್ಲಿಳಿದು, ಸಂಧ್ಯಾಕಾಲದ ವರೆಗೆ ಎವೆಮುಚ್ಚದ ಕಣ್ಣಿನಿಂದ ಮಾರ್ತಾಂಡನನ್ನು ನೋಡುತ್ತಾ ಗಾಯತ್ರಿಯ ಪುರಶ್ಚರಣವನ್ನಾರಂಭಿಸುವನು. ಇದು ಕಮಲಿನೀನಾಥನು ಕಮಲಾಲಯಕ್ಕೆ ಬೀಗ ಜಡಿದು ತೆರಳಿದಾಗಲೇ ಕೊನೆಗೊಳ್ಳುವುದು.

ಹನುಮನ ಸಾಧನೆಯ ಕೆಲವು ಮಾಸಗಳುರುಳಿದುವು. ಅವನಿಗೆ ಸಪ್ತಾಶ್ವನ ದರ್ಶನವಾಗದುದರಿಂದ, ಜೀವನದಲ್ಲಿ ಸ್ವಾಭಾವಿಕವಾಗಿಯೇ ವೈರಾಗ್ಯಮೊಳೆಯಿತು. ಅವನಿಗೆ ಸೂರ್ಯದೇವನೂ ಕನ್ನಡಿಗರ ಪಕ್ಷಪಾತಿಯಲ್ಲವೆನಿಸಿತು. ಈ ಭಾವವು ಅವನಲ್ಲಿ ಎಷ್ಟೆಷ್ಟು ಬಲಿಯಿತೋ, ಆಗ ಸಾಧನವೂ ಅಷ್ಟೇ ತೀವ್ರವಾಯಿತು. ಅವನು ಕ್ರಮೇಣ ಕಠಿನ ಉಪವಾಸವ್ರತವನ್ನಾಚರಿಸತೊಡಗಿದ್ದನು.

ದಿನ ಕಳೆದಂತೆ ಆಂಜನೇಯನ ಉಪವಾಸದ ದಿನಗಳು ಅವನ ಶಕ್ತಿಯನ್ನೇ ಮೆಲ್ಲತೊಡಗಿದುವು. ಆಗ ಅವನಿಗೆ ತಾನು ತಾಯಿಯ ಇದಿರಿನಲ್ಲಿ ಮಾಡಿದ ಪ್ರತಿಜ್ಞೆಯು ನೆನಪಾಗುವುದು. ಅದರೊಂದಿಗೇ ಕಿರಣಮಾಲಿಯ ನಿಷ್ಠುರ ಹೃದಯವನ್ನು ನೆನಸಿಕೊಂಡು 'ಸೂರ್ಯನಾರಾಯಣಾ! ಕೃಪೆದೋರು, ಎಂದು ಎಂದು ಕೂಗುವನು. ಅವನ, ಕೂಗಿಗೆ ಪರ್ವತ ಕಣಿವೆಗಳು ಪ್ರತಿಧ್ವನಿಕೊಡುತ್ತಿದ್ದುವಲ್ಲದೆ, ದಿನಮಣಿಯಿಂದ ಆಶ್ವಾಸನೆಯೊಂದೂ ಬರಲಿಲ್ಲ. ಇದರಿಂದ ಮಾರುತಿಯು ಹತಾಶನಾಗದೆ, ತನ್ನ ದೇಹವನ್ನು ಆ ಪೂಜ್ಯ ತೇಜೋರಾಶಿಯ ಪದತಲದಲ್ಲಿ ನಿವಾಳಿಸಬೇಕೆಂದು ಪ್ರಯಾಸದಿಂದ ನದಿಗಿಳಿದು ಮಿಂದು, ಆಹ್ನಿಕಗಳನ್ನು ಮುಗಿಸಿ ಎಂದಿನಂತೆ ಮಂತ್ರೋಚ್ಚಾರ ಪೂರ್ವಕ ಸೂರ್ಯನಮಸ್ಕಾರಕ್ಕೆ ತೊಡಗಿದನು.

ಅಂದು ನಮಸ್ಕಾರಗಳು ಒಂದು ಸಾವಿರ ದಾಟಿದುವು. ದೇಹವು ಸಂಪೂರ್ಣ ಕೆಂಬಣ್ಣಕ್ಕೆ ಮಾರ್ಪಟ್ಟಿತು. ಆಮೇಲೆ ರಕ್ತನಾಳಗಳೆಲ್ಲಾ ಉಪವಾಸದಿಂದ ಪಟಪಟನೆ ಬಡಿಯತೊಡಗಿದುವು. ಶ್ವಾಸಕೋಶಕ್ಕೆ ಬಿಟ್ಟ ಶ್ವಾಸವನ್ನು ಸೆಳೆದುಕೊಳ್ಳಲೂ, ಸೆಳೆದುಕೊಂಡುದನ್ನು ಬಿಡಲೂ ಕಷ್ಟವಾಯಿತು. ಅಂತೆಯೇ ನಮಸ್ಕಾರಗಳು ಎರಡುಸಾವಿರ ದಾಟಿದುವು. ಬಾಯಿಯಿಂದ ಓಂಕಾರದೊಡನೆ ಹ್ರಾಂ ಹ್ರೀಂಕಾರವು ಶುದ್ಧೋಚ್ಚಾರದೊಡನೆ ಹೊರಟು ಗಿರಿಗುಹೆಗಳಲ್ಲಿ ತಾಕಲಾಡಿ ಪುನಃ ಹಿಂದೆ ಚಿಮ್ಮುತ್ತಿದ್ದುವು. ಆಗಲೇ ಸೂರ್ಯನ ಎಳನೇಸರಿಗೆ ಬಿಸಿಯೇರಿತ್ತು. ಮಾರುತಿಯು ಎರಡು ಸಾವಿರದ ಇನ್ನೂರನೆಯ ನಮಸ್ಕಾರವನ್ನು ಪೂರಯಿಸಲು 'ಓಂ ಶ್ರೀ ಸವಿತ್ರೇ ಸೂರ್ಯನಾರಾಯಣಾಯ ನಮಃ' ಎಂದವನೇ ಕಣ್ಣಿಗೆ ಕತ್ತಲು ಬಂದು ಬಸವಳಿದು ನೆಲದ ಮೇಲೆ ಬಿದ್ದನು. ಆಗ ದಯೆಯಿಂದ ಕರಗಿದ ಎಳಗಾಳಿಯು ಮಾರುತಿಯ ಮೇಲೆ ಬೀಸಿಕೊಂಡು ಹೋಯಿತು.

ಹನುಮನು ಕಣ್ತೆರೆಯುವಾಗ ದಿನನಾಥನ ತೇಜೋಮಯವಾದ ಮಡಿಲಲ್ಲಿ ಅವನು ಮಲಗಿದ್ದನು. ಭಗವಂತನು ಬಾಲಹನುಮನ ಮೈಕೈಗಳನ್ನು ಸವರುತ್ತಾ— 'ವತ್ಸಾ, ನೀನು ಭಾರತೀಯರಿಗೆ ಮಾತ್ರವಲ್ಲ, ಮಾನವಜನಾಂಗಕ್ಕೇ ಆದರ್ಶನಾಗುವೆ. ನಿನ್ನನ್ನು ಭಾಸ್ಕರನು ತನ್ನ ಶಿಷ್ಯನನ್ನಾಗಿ ಮಾಡಿಕೊಂಡುದಕ್ಕೆ ಹೆಮ್ಮೆಪಡುತ್ತಾನೆ. ಎದ್ದೇಳು ಮಗೂ!' ಎಂದನು. ಆ ಮುಹೂರ್ತದಲ್ಲೇ ಹನುಮನನ್ನು ಅಷ್ಟಸಿದ್ಧಿಗಳು ಆಶ್ರಯಿಸಿದುವು. ಸರಸ್ವತಿಯು ಕಾಣಿಸಿಕೊಂಡು ಆಶೀರ್ವದಿಸಿದಳು. ಅವನ ದೇಹವು ಆಧ್ಯಾತ್ಮಿಕ ಶಕ್ತಿಯ ಹೊನಲಿನಿಂದ ರೋಮಾಂಚನಗೊಂಡಿತು. ಹನುಮನು ಆನಂದಾಧಿಕ್ಯದಿಂದ 'ಗುರುವರ!' ಎಂದು ಸಂಬೋಧಿಸಿದಾಗ, ಸೂರ್ಯಭಗವಾನನ ಮುಗುಳುನಗೆಯು ಆ ಪ್ರಾಂತಕ್ಕೇ ಹೊಸ ಕಾಂತಿಯೊಂದನ್ನು ತಂದಿತು.

# ಜುಹೂತೀರದಲ್ಲಿ ಕುಳಿತಾಗ:

( ನವ್ಯಕವನ )

ಶ್ರೀ. ಅರವಿಂದ ನಾಡಕರ್ಣಿ, ಬಿ. ಎಸ್‌ಸಿ., ಎಲ್‌ಎಲ್. ಬಿ. ಮುಂಬಯಿ

[ಜುಹೂ—ಮುಂಬಯಿಯ ಉಪನಗರಗಳಲ್ಲೊಂದಾದ ಸಾಂತಾಕ್ರೂಝದ ಬಳಿಯ ಸಮುದ್ರತೀರ. ಪ್ರತಿ ರವಿವಾರಕ್ಕೊಮ್ಮೆ ಸಾವಿರಾರು ಜನ ವಿಹಾರಸುಖಕ್ಕಾಗಿ ಈ ಸುಂದರ ತೀರದೆಡೆ ಬರುವರು. ]

ಜುಹೂತೀರದಲಿ ಕುಳಿತೆ ಮಿತ್ರರೊಡನೆ
ಚಿನ್ನದ ಮಳಲು ಕೈಯಾಡಿಸುತ್ತ.
ಎದುರಲಿ ಗುಡುಗುತಿತ್ತು ಕಡಲು
ಗತಕಾಲದ ಕಗ್ಗವಿಯಿಂದ ಚಿಮ್ಮಿ.
ಗವಿಯ ಪೊಳ್ಳನು ಮಾರ್ದನಿಗೈದು
ಮುಗಿಲಿಗೆದ್ದ ಮಹಾಸ್ವನ.
ಒಂದೊಂದಾಗಿ ಎದ್ದು ಬಾಗಿ ಒಡೆದು
ಹನಿಹನಿಯಾಗಿ ಸೀರಾದ ಆಶೆಯ ವೀಚಿಸಂಭ್ರಮ.
ಆ ಗುಡುಗು ಹೀರಿತು ನ[illegible]ಡಿಬಲ
ಕ್ಷೀಣದೃಷ್ಟಿಯಲಿ ನೋಡಿದೆನೆದುರು—
  ದಿನಚರಿಯ ದೆಸೆ[illegible]ದ ದಿನವೊಂದು ಮುಕ್ತರಾದ ಜನ
  ಅಲೆದಾಡುತಿದ್ದರು [illegible]ರುಷ-ವಿನೋದಾನಂದದಲ್ಲಿ,
  ಮನದ ರಂಧ್ರಗಳ ಮುಚ್ಚಿ,
  ಹೊಸನಗೆಯ ಮುದ್ರೆಯೊತ್ತಿ ಮೊಗಕೆ
  ಕರಿಮೊಗವ ಬೆಳಗಿಸಲು 'ಸುಂದರಿ'ಯು
  ಪೌಡರು-ರಂಗುಗಳ ಲೇಪಿಸುವಂತೆ.
ದೂರಕ್ಷಿತಿಜದಿಂದ ಪಸರಿಸಿ ಬಂದ ಹೊಂಬೆಳಕು
ಅಲೆನಡುವಿನ ಹೊಂಡದಲ್ಲೇ ಲಯವಾಗಿ
ತಳಹೊಗುತಲಿತ್ತು ಒಂದೇಸವನೆ.
ಅಲೆಯಲೆಯ ಜಿಗಿದಾಟದಲಿ ಹೊಮ್ಮಿದ ನೊರೆಹಾಲು
ಮಳಲಲ್ಲೇ ಚೆಲ್ಲಿ ಬತ್ತಿಹೋಗುತಿತ್ತು.
ಮುಗಿಲಿನಿಂದ ಸೋರಿದ ಚುಕ್ಕಿಬೆಳಕು
ಆರಿದಾರಿಯ ಹವೆಯ ರಜಕಣಗಳಲ್ಲೇ ನಶಿಸಿ ಗುಪ್ತವಾಯಿತು
ನವಚೇತನದ ಕಾವಿಗೆ ಬಿಸಿಯಾಗಿ ಹೊಮ್ಮಿದ
ಜನರ ಸೊಗಸುಡಿಗಳು ಮರುದಿನದ ನೆನಹಿಗೆ
ಹೆಪ್ಪುಗಟ್ಟಿ ಗಾಳಿಯ ಮಡಿಲ ಸೇರಿ ಮಾಯವಾದುವು.
ಜನತುಂಬಿ ತುಳುಕಾಡುವ ತೀರ
ಕೂಡಲೇ ಬರಿದಾಯಿತು
ನೀರ ಹಿಡಿದ ಸಚ್ಛಿದ್ರಪಾತ್ರೆಯಂತೆ.
  ಎದುರಲಿ ಗುಡುಗುತ್ತಿತ್ತು ಕಡಲು
  ಗತಕಾಲದ ಕಗ್ಗವಿಯಿಂದ ಚಿಮ್ಮಿ,
ಗಿಡಗಗಳ ತಂಡ ಭಕ್ಷ್ಯ ಕುಕ್ಕಲು
ಪಕ್ಕ ಪಸರಿಸಿ ಎದ್ದು ಬಂದಂತೆ.

ಎಂಥ ಚೆನ್ನದ ಸಮಯ ಬಿತ್ತವಕೆ
                    ಸುಲಭ ಭಕ್ಷ್ಯ !
ಅಂದು—
  ನನ್ನ ಮಿತ್ರರಾಗ ಕುಣಿಯುತಿದ್ದರು
  ಚಿತ್ರಪಟಮಂದಿರ ಕ್ರೀಡಾಂಗಣ ಹೋಟೆಲುಗಳಲಿ
  ಪರೀಕ್ಷೆಗುಣಗಳ ಶಿಫಾರಸು ಮಾಡಿಕೊಳ್ಳುತ್ತ
  ಹೊಸಹೊಸ ವಿಷಯ ತಾಸುಗಟ್ಟಲೆ ಚರ್ಚಿಸುತ್ತ
  ಗೆದ್ದೆಗೆಲುವೆನು ಎಂಬ ಬಿಸಿನೆತ್ತರ ಹುಮ್ಮಸದಲಿ.
  ನನ್ನ ಮನವಾಗ ಹೊರಟಿತ್ತು ಕಾನನಕೆ
  ನಗರರಂಗದ ಮೋಹಜಾಲಕೆಲ್ಲಾ ಒಂದೊದೆತ ಹಾಕಿ
  ಹೊತ್ತಗೆಯ ಹಾಳೆ ಹರಿದು
  ವೀಣೆಯ ತಂತಿ ತೊಡೆದು.
  ಆಗ ಸುಪ್ತಿಯೇ ಆರಾಧ್ಯ ದೇವತೆ.
ಈಗಲಾದರೂ ಮಡಕೆ ಸಚ್ಛಿದ್ರವೇ ?
 ಇತ್ತ ಸುತ್ತಲೂ ಕುಣಿಯುತಿವೆ ಸಂಕಟಪಿಶಾಚಿ
 ನೆತ್ತರ ನೆಕ್ಕುವ ನಾಲಗೆ ಜೋಲಿಸುತ್ತ.
 ಮನತುಂಡರಿಸುವ ನಿರುದ್ಯೋಗ.
 ನೌಕರಿರಕ್ಷಣೆಗಾಗಿ ಹಲವಾರುಧಂದೆಕಾಟ
 ಸಂತತಿಧಾರಣೆ ಏರಿದಂತೆ ಹಣದ ಚೀಲ ರಿಕಾಮಿ.
 ಕಾಲಕೊಚ್ಚುವ ಯಾಂತ್ರಿಕಜೀವನದ ಹಲವಾರು ಸಮಸ್ಯೆ.
 ಹೆಜ್ಜೆಯಿಟ್ಟಲ್ಲಿ ಒಂದೊಂದು ಪಿಶಾಚಿ
 ಅದರೊಡನೆ ಗುದ್ದಾಡಿ ಗೆಲುವುದರಲ್ಲಿ
 ರಕ್ತಪಾತವಾಗಿ ಮೈ ನುಗ್ಗುನುಗ್ಗು, ಮನ ಛಿನ್ನವಿಚ್ಛಿನ್ನ.
 ಆದರೂ ಕ್ಷೀರಾಮೃತ ತುಂಬಲು ಯತ್ನಿಸುವೆ ನಾನು
 ರಂಧ್ರಗಳ ಮುಚ್ಚಿ.
 ಆದರಯ್ಯೋ— ಒಂದೆಡೆ ರಂಧ್ರ ಮುಚ್ಚಿದರೆ
 ಇನ್ನೊಂದೆಡೆ ಸುರಂಗ.
 ನಾ ಕಂಡ ಗಿಡಗಗಳೆಲ್ಲಾ ಬಂಜೆಯೇನು ಎಂದೆಂದಿಗೂ ?
 ಓಹೋ— ನನಗಿನ್ನೂ ಉಂಟು ವೈಶಾಖದಾಶೆ.
 ಅಂತೆಯೇ ಸೊರಗಿದ ಗಂಟಲಲಿ ಮದ್ಯಹೊಯ್ದು
 ಬಿದ್ದ ಪ್ರಾಣವನೆಬ್ಬಿಸಿತು
 ಗುಡುಗುದನಿಯಲಿ ಎದುರಿನ ಕಡಲು
 ಗತಕಾಲದ ಕಗ್ಗವಿಯಿಂದ ಚಿಮ್ಮಿ

# ಹಿಂದೂ ಮಹಿಳೆಯ ಬಾಳನೋಟ

## ಸುಮಂಗಲೆ*

ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ. ಎಲ್‌ಎಲ್. ಬಿ. ಧಾರವಾಡ

卐

**ಹೆಣ್ಣಿನ ಜೀವನದ ಮೂರು ಅವಸ್ಥೆಗಳಲ್ಲಿ ಸುಮಂಗಲಾವಸ್ಥೆ ಭಾರತೀಯ ಸಂಸ್ಕೃತಿಯಲ್ಲಿ ಸ್ಪೃಹಣೀಯವಾಗಿದೆ. ಪತಿ-ಪತ್ನಿ ಇಬ್ಬರಲ್ಲಿಯೂ ವಿವೇಕಬುದ್ಧಿ ವಿಕಸಿತವಾಗಿದ್ದರೆ, ಸುಮಂಗಲೆಯ ಜೀವನ ಸಫಲವೆನಿಸುವುದು, ಇಲ್ಲವಾದರೆ ಅದು ಗೋಳಿನ ಗೂಡು ಕಾಡು !**

卐

ಹಿಂದೂ ಮಹಿಳೆಯಾಗಿರಲಿ, ಬೇರೆ ಯಾವ ಮಹಿಳೆಯೇ ಆಗಿರಲಿ, ಅವಳ ಬಾಳಿನಲ್ಲಿ ಸ್ಥೂಲವಾಗಿ ಮೂರು ವಿಭಾಗಗಳು ಕಂಡು ಬರುವುದು ನಿಜವೇ ! ಕನ್ಯೆ, ಪತ್ನಿ, ಮಾತೆ ! ತಾಯಿ-ತಂದೆಗಳ ವಾತ್ಸಲ್ಯದಲ್ಲಿ ಕನ್ಯೆಯಾಗಿ ಬೆಳೆದು, ಪತ್ನಿಯಾಗುವ ಹಂಬಲ ತಳೆದು, ಜೀವನದ ಪಥದಲ್ಲಿ ಪುರುಷನೊಡನೆ ಸಮನಾದ ಭಾರ ಹೊತ್ತು ಮುಂದುವರಿದರೆ, ಅವಳಿಗೆ ಕಂಡುಬರುವುದು—ಅವಳ ಸಂಸಾರದ ಫಲ !-ಅವಳ ಮಾತೆಯ ರೂಪ !

ಸ್ತ್ರೀ-ಪುರುಷರ ಪರಸ್ಪರ ಸಹವಾಸ-ಮಿಲನಾಪೇಕ್ಷೆಗಳು ನೈಸರ್ಗಿಕವಾಗಿದ್ದರೂ, ಸಭ್ಯಸಮಾಜದಲ್ಲಿ ಶಾಂತಿ ಹಾಗೂ ಸುವ್ಯವಸ್ಥೆಯನ್ನು ಕಾಯಲು, ಅವು ಕೂಡ ನಿಯಮಬದ್ಧವಾಗಿರುವುದು ಅನಿವಾರ್ಯವಾಗಿದೆ. ಮನುಷ್ಯನು ಕಾಡುಸ್ಥಿತಿಯಲ್ಲಿದ್ದಾಗ, ಅಲ್ಲಿದ್ದ ಸ್ತ್ರೀಯರ ಸಂಖ್ಯೆಯನ್ನನುಸರಿಸಿ, ಒಬ್ಬ ಸ್ತ್ರೀ ಅನೇಕರಿಗೆ ಪತ್ನಿಯಾಗಿಯೋ, ಅಥವಾ ಅನೇಕ ಸ್ತ್ರೀಯರು ಒಬ್ಬನಿಗೆ ಪತ್ನಿಯರಾಗಿಯೋ ಇರಬಹುದಿತ್ತು; ಅದರ ಕುರುಹುಗಳು ಭಾರತದಲ್ಲಿಯೇ ಉಳಿದ ಜನಾಂಗಗಳಲ್ಲಿ ಅಲ್ಲಲ್ಲಿ ಕಂಡುಬರುವುವು ! ಈಸಾಯೀ ಮತದವರನ್ನು ಬಿಟ್ಟು ಉಳಿದವರಲ್ಲಿ, ಪುರುಷನು ಅನೇಕರನ್ನು ಮದುವೆಯಾಗಬಹುದು; ಆದರೆ ಸ್ತ್ರೀಗೆ ಆ ಅಧಿಕಾರವಿಲ್ಲ-ಎಂಬುದೂ ಪ್ರಚಾರದಲ್ಲಿದೆ. ಭಾರತದ ಕೆಲವು ಪ್ರಾಂತಗಳಲ್ಲಿಯೂ ಏಕಪತ್ನಿ ಕಾಯಿದೆ, ದ್ವಿಭಾರ್ಯಾಪ್ರತಿಬಂಧಕ ಕಾಯದೆಯು ಇತ್ತೀಚೆಗೆ ಪ್ರಚಾರದಲ್ಲಿ ಬಂದಿವೆ

ಹಿಂದುಗಳಲ್ಲಿ ವಿವಾಹವು ಹದಿನಾರು ಸಂಸ್ಕಾರಗಳಲ್ಲಿ ಒಂದು. ವಿವಾಹದಿಂದಾಗಿ ಸ್ತ್ರೀಗೆ ಸಾಮಾಜಿಕ ನೆಲೆ ಪ್ರಾಪ್ತವಾಗುತ್ತದೆ. " ಧರ್ಮೇ ಚ, ಅರ್ಥೇ ಚ, ಕಾಮೇ ಚ, ನಾತಿಚರಾಮಿ " ಎಂದು ಕೈಹಿಡಿದು ಪತ್ನಿಯೊಡನೆ " ಸಪ್ತಪದಿ "ಯನ್ನು ಆಚರಿಸಿದ ಪುರುಷ, ಜೀವನದಲ್ಲೂ ಅದನ್ನು ಪಾಲಿಸುತ್ತಾನೆ—ಎನ್ನುವ ತಿಳುವಳಿಕೆಯಿದೆ. ಆದರೆ ಕೆಲವೊಂದು ಸಂದರ್ಭಗಳಲ್ಲಿ ಪುರುಷ ಇನ್ನೊಬ್ಬಳನ್ನು ಮದುವೆಯಾಗಬಹುದು ಎಂಬ ಸಮ್ಮತಿ ಪ್ರಚಲಿತವಿದೆ. ಸ್ತ್ರೀಗೆ ಮಾತ್ರ ಪತಿಯೇ ದೇವರು. ಅವನಿಂದಲೇ ಅವಳು ಸುಮಂಗಲೆ. ಎಂತಹ ಸಂದರ್ಭದಲ್ಲೂ ಅವನ ಸೇವೆಯೇ ಅವಳ ಜೀವನಸಾರ್ಥಕ್ಯ ! ಮೂಢನಂಬಿಕೆಯಿಂದೊಳಗೊಂಡು ಆವಾವ ಕಾರಣಗಳಿಗೋ ಬಲಿಬಿದ್ದು ವಿದ್ಯೆಯ ಗಂಧವೇ ಇಲ್ಲದ ಸ್ತ್ರೀ, ಧಾರ್ಮಿಕಕಾರ್ಯಗಳಲ್ಲಿ ಭಾಗವಹಿಸುವ ಸಂದರ್ಭವನ್ನು ಕಳೆದುಕೊಂಡಳು. ಆರ್ಥಿಕ ಪಾರತಂತ್ರ್ಯ ಅವಳನ್ನು ಅಲಕ್ಷ್ಯಿತಳನ್ನಾಗಿ ಮಾಡಿದೆ. ವಿವಾಹಿತ ಸ್ತ್ರೀ. ಪತಿಯ ಆದಾಯಕ್ಕೆ ಬಾಧ್ಯಸ್ಥಳೇನೋ ಸರಿ; ಆದರೆ ಪ್ರತ್ಯಕ್ಷ ಆಚರಣೆ ಆ ರೀತಿಯಾಗಿಲ್ಲ. ಮಧ್ಯಯುಗದ ಪ್ರಕಾಶಮಯ ಆದರ್ಶ ಗ್ರಂಥಗಳಲ್ಲಿ ಒಳ್ಳೆಯದಾಗಿ ಕಂಡರೂ, ಪ್ರತ್ಯಕ್ಷ ಬಳಕೆಯ ಪ್ರಶ್ನೆ ಬಂದಾಗ, ಬದಲಾಗುತ್ತಿರುವ ಪರಿಸರ ಅವಳ ಆರ್ಥಿಕಸ್ವಾತಂತ್ರ್ಯವನ್ನಪೇಕ್ಷಿಸುತ್ತದೆ—ಎಂಬುದು ನಿರ್ವಿವಾದ.

ಪತಿಯಿಂದಾಗಿ ಸ್ತ್ರೀ ಸುಮಂಗಲೆಯಾದರೆ, ಪತ್ನಿಯಿಂದಾಗಿ ಪುರುಷ ಸೌಭಾಗ್ಯವಂತನಾಗುವುದಿಲ್ಲವೇ ? ಅವಳಿಲ್ಲದ ಸಂದರ್ಭದಲ್ಲಿ ಈ ಮಾತು ತಾನೇ ಸ್ಪಷ್ಟವಾಗುತ್ತದೆ. ಕವಿ ಕಾಳಿದಾಸ ಮಾತ್ರ ಈ ಮಾತನ್ನು ಹಲವೆಡೆಗಳಲ್ಲಿ ಎತ್ತಿತೋರಿಸಿದ್ದಾನೆ. ಮೇಘದೂತದಲ್ಲಿ ಯಕ್ಷನು ಮೇಘಕ್ಕೆ ಸಂದೇಶವನ್ನು ಕೊಟ್ಟು, ಮಾರ್ಗದರ್ಶನ ಮಾಡುವ ಸಂದರ್ಭ—ದಾರಿಯಲ್ಲಿ ಮಳೆ ಇಲ್ಲದೆ ನದಿ ಕೃಶವಾಗಿರುವುದು . ಆದರೆ ಪ್ರಿಯತಮನಾದ ಮೇಘದ ದರ್ಶನವಾದೊಡನೆ ವಿರಹದಿಂದ ಕೃಶವಾಗಿದ್ದರೂ ದೇಹ ಪ್ರಫುಲ್ಲಿತವಾಗುವುದು. ' ಆ ನದಿ ವಿಶಾಲವಾಗಿ ಹರಿಯುವಂತೆ ' ಸುಭಗ ' ನೀನು ಅವಳನ್ನು ಸಂತೋಷಗೊಳಿಸುವ ರೀತಿಯನ್ನು ಕೈಕೊಳ್ಳು ! ' " ಸೌಭಾಗ್ಯಂ ತೇ ಸುಭಗ ವಿರಹಾವಸ್ಥಯಾ ದರ್ಶಯಂತೀ । ಕಾರ್ಶ್ಯಂ ಯೇನ ತ್ಯಜತಿ ವಿಧಿನಾ ಸತ್ತ್ವಯೈವೋಪಪಾದ್ಯ !" ವಿರಹಪೀಡಿತ ಸುಮಂಗಲೆಯ ವರ್ಣನೆ " ಮೇಘದೂತ "ದಲ್ಲಿ ಪ್ರಧಾನವಾಗಿ ಬರುವುದು. ಸೌಭಾಗ್ಯಸೂಚಕ ಎಲ್ಲ ಅಲಂಕಾರಗಳಾಗಲಿ, ಶೃಂಗಾರವಾಗಲಿ, ವಿರಹಿಣಿಗೆ ಒಪ್ಪುವ

* ೧೦-೫-೫೬ರಂದು ಧಾರವಾಡ ಆಕಾಶವಾಣಿ ಕೇಂದ್ರದಿಂದ ಬಿತ್ತರಗೊಂಡಿದು.

ಮಾತಲ್ಲ. ಪ್ರಿಯತಮನ ವಿರಹದಿಂದ ಅತ್ತು ಅತ್ತು ಅವಳ ಕಣ್ಣೀರು ಕೋಡಿಯೊಡೆದು ಹರಿಯುತ್ತದೆ. ದುಃಖವೇನೋ ಸ್ವಾಭಾವಿಕ! ಆದರೆ ಕಣ್ಣೀರಿನ ಪ್ರಮಾಣ ಹೆಚ್ಚಾಗುವುದೇ ಪತಿಪ್ರೇಮದ ಕುರುಹು—ಎಂಬುದೂ ಕ್ರಮೇಣ ತಿಳುವಳಿಕೆಯಾಯ್ತು. ಭಾರತದ ಸ್ತ್ರೀಯರಲ್ಲಿ, ಹಾಸ್ಯಾಸ್ಪದ ರೀತಿಯಲ್ಲಿ ಇದು ಬಳಕೆಯಲ್ಲಿ ಬರಲಿಲ್ಲ; ಕೆಲ ಪಾಶ್ಚಿಮಾತ್ಯ ದೇಶಗಳಲ್ಲಿ, ಪತಿಯು ದೇಶಾಟನಕ್ಕೆ ಹೋದಂದಿನಿಂದ ಬರುವ ವರೆಗಿನ ತನ್ನ ಕಣ್ಣೀರನ್ನು, ಪತ್ನಿ ಒಂದು ಗಾಜಿನ ಬಾಟಲಿಯಲ್ಲಿ ಹಿಡಿದಿಡುತ್ತಿದ್ದಳಂತೆ! ಯಾರ ಕಣ್ಣೀರು ಹೆಚ್ಚೋ ಅವಳ ಪಾತಿವ್ರತ್ಯ ಹೆಚ್ಚು!

ಭವಭೂತಿಯ ಉತ್ತರರಾಮಚರಿತದಲ್ಲಿ, ವನದೇವತೆ ವಾಸಂತಿ ಆತ್ರೇಯಿಯನ್ನು ಕೇಳುವ ರೀತಿಯೇ ವ್ಯಂಗ್ಯಪೂರ್ಣವಾಗಿದೆ. ಸೀತೆಯ ಬದಲು ಅವಳ ಬಂಗಾರದ ಪ್ರತಿಮೆಯನ್ನಿಟ್ಟು ಯಜ್ಞನೆರವೇರಿಸಿದ ರಾಮನ ಬಗ್ಗೆ ಅವಳಿಗೆ ಒಂದೆಡೆ ಜುಗುಪ್ಸೆ, ಇನ್ನೊಂದೆಡೆ ಆಶ್ಚರ್ಯ, ಕರುಣೆ! ಸೀತೆ ಮೆಲ್ಲಗೆ ಹೇಳಿದ ಮಾತು ಮಾತ್ರ ಒಂದೇ: "ನ ಪ್ರಮಾಣೀಕೃತಃ ಪಾಣಿರ್ಬಾಲ್ಯೇ ಬಾಲೇನ ಪೀಡಿತಃ" ಎಳೆಮೆಯಲ್ಲಿ ಹಿಸುಕಲ್ಪಟ್ಟ ಈ ಕೈಗೆ ಸರಿಯಾದ ಮನ್ನಣೆ ದೊರೆಯಲಿಲ್ಲ—ಎಂದು.

ಕಾಳಿದಾಸನ ಶಕುಂತಲೆ,—ಪತಿಯ ವಿರಹದಲ್ಲಿ ಏಕವೇಣೀಧರೆ, ನಾರುಬಟ್ಟೆ ಉಟ್ಟವಳು. ಮಾರೀಚಾಶ್ರಮದಲ್ಲಿಯ ಮಿಲನದ ತರುವಾಯ ದುಷ್ಯಂತನು ಅವಳಿಗೆ ಆ ಉಂಗುರವನ್ನು ಪುನಃ ತೊಡಿಸಲು ಹೋದಾಗ, ಅವಳು ಶಂಕೆಪಟ್ಟು 'ಆರ್ಯಪುತ್ರನೇ ಈ ಉಂಗುರವನ್ನು ಧರಿಸಲಿ; ನನಗೆ ಬೇಡ!' ಎಂದು ಹೇಳುತ್ತಾಳೆ. ಭಾರತೀಯ ಸುಮಂಗಲಿ ತ್ಯಾಗ-ಸೇವೆಗಳ ಮೂರ್ತಿ! ತನ್ನ ಅಸ್ತಿತ್ವವನೂ ಮರೆತು, ಪತಿಯ ಅಸ್ತಿತ್ವದೊಡನೆ ಒಂದಾಗಿಬಿಡುತ್ತಾಳೆ. ಎಂತಹ ಪ್ರಸಂಗದಲ್ಲೂ ಪತಿಯನ್ನನುಸರಿಸಿ ಅವಳು ಗಳಿಸಿದ ಪಾತಿವ್ರತ್ಯದ ಪ್ರಭಾವ ದೊಡ್ಡದು. ಅದರ ಬೆಳಕನ್ನು ಹೆಚ್ಚು ಪ್ರಚಾರಗೊಳಿಸಲೆಂದೇ ಬಂದ ಕಥೆಗಳಾಗಿರಬಹುದು: ಒಬ್ಬ ಪತಿವ್ರತೆ ಸೂರ್ಯೋದಯವನ್ನೇ ತಡೆಹಿಡಿದಳು; ಇನ್ನೊಬ್ಬಳು ದೇವತೆಗಳನ್ನು ಮಕ್ಕಳನ್ನಾಗಿ ಮಾಡಿ ಆಡಿಸಿದಳು; ಮತ್ತೊಬ್ಬಳು ಕಲ್ಲುಗಳನ್ನು ಹುರಿದು ಕಡಲೆಗಳನ್ನಾಗಿ ಮಾರ್ಪಡಿಸಿದಳು. ವಿವಾಹದ ತರುವಾಯ ಸ್ತ್ರೀ ಪತಿಯ ಗೋತ್ರವನ್ನೇ ಪಡೆಯುತ್ತಾಳೆ. ಅದೂ ಅವಳ ವಿವಾಹವು ಬ್ರಹ್ಮ, ದೈವ, ಪ್ರಾಜಾಪತ್ಯ, ಆರ್ಷ ವಿಧಾನಗಳಲ್ಲಿ ಒಂದಾಗಿದ್ದರೆ! ಕೊನೆಯ ನಾಲ್ಕುವಿಧವಾದ ವಿವಾಹಗಳಲ್ಲಿ ಕನ್ಯಾದಾನವೂ ಆಗದು. ಪತಿಯ ಗೋತ್ರದಲ್ಲಿ ಅವಳ ಸಂಸ್ಕಾರವೂ ಆಗದು. ಇದು ಸ್ಮೃತಿಕಾರರ ಅಭಿಪ್ರಾಯ: 'ಸಕೃತ್ ಕನ್ಯಾ ಪ್ರದೀಯತೇ' ಎಂಬುದು ಸ್ಮೃತಿಯಲ್ಲಿ ಹೇಳಲ್ಪಟ್ಟಿದ್ದರೂ ಕನ್ಯಾದಾನದ ತರುವಾಯ "ನಮಮ" ಎಂಬ ಉಚ್ಚಾರವಿಲ್ಲದ್ದರಿಂದ, ಇನ್ನುಳಿದ ವಸ್ತುಗಳಿಗೆ ಅನ್ವಯಿಸಿದಂತೆ ಕನ್ಯೆಗೆ ಈ ಮಾತು ಅನ್ವಯಿಸುವುದಿಲ್ಲ—ಎಂಬುದು ಇಂದಿನ ವಿವರಣೆಯಾಗಿದೆ. ಮಧ್ಯಯುಗದಲ್ಲಿ ಹಲವಾರು ರಾಜಕೀಯ ಸಾಮಾಜಿಕ ಕಾರಣಗಳಿಂದಾಗಿ ಪಾತಿವ್ರತ್ಯದ ಕ್ಷೇತ್ರವೊಂದೇ ಸ್ತ್ರೀಯ ಸರ್ವಸ್ವವಾಯಿತು. ಕ್ರಮೇಣ ಅದು ವಿಕೃತಗೊಂಡುದೂ ಸಾಮಾಜಿಕ ಇತಿಹಾಸದಲ್ಲಿ ಕಾಣದೆ ಇಲ್ಲ.

ಹಿಂದೂ ವಿವಾಹಿತ ಸ್ತ್ರೀ ತನ್ನ ಮಾಂಗಲ್ಯದ ಕುರುಹಾಗಿ, ವಿವಾಹಸಮಯದಲ್ಲಿ ಪತಿಯು ಕಟ್ಟಿದ ತಾಳಿಯನ್ನೂ, ಗಾಜಿನಬಳೆ, ಕುಂಕುಮ, ಮೂಗುಬೊಟ್ಟು ಕಿವಿಯೋಲೆಗಳನ್ನೂ ಧರಿಸುತ್ತಾಳೆ. ಕ್ರಮೇಣ ಈ ಮಾಂಗಲ್ಯಸೂಚಕ ಅಲಂಕಾರಗಳು ಒಂದೊಂದೇ ಕಡಿಮೆಯಾಗುತ್ತ ಹೋಗಿರುವುದನ್ನೂ ನಾವು ಕಾಣಬಹುದು. ಮೀನು, ಪಿಲ್ಲಿ, ಕಾಲುಂಗುರ ಮುಂದುವರಿದ ಹಿಂದೂಸಮಾಜದಲ್ಲಿ ಹೆಚ್ಚಾಗಿ ಪ್ರಚಾರದಲ್ಲಿಲ್ಲ. ಅದರಂತೆಯೇ ಕಾಲಸರಪಳಿ, ನಡುವಿನ ಪಟ್ಟಿ, ನಾಗಮುರಿಗೆ, ಇತ್ಯಾದಿಗಳು. ಪತ್ನಿ ತನ್ನ ತಾಳಿ ಕುಂಕುಮಗಳ ಆಯುಷ್ಯ ಬೆಳೆಯಲಿ ಎಂಬುದೇ ಅವಳ ಆಶಯ. ಈ ಸಿದ್ಧಾಂತದಿಂದ ಹೊರಹೊರಡುವ ಇನ್ನೊಂದು ಮಾತೆಂದರೆ, ಸಾಯುವ ಪತಿಯೇ ಇಲ್ಲದವಳು ಸದಾಸುಮಂಗಲೆ. ವೇಶ್ಯೆಯರನ್ನು ಈ ಹೆಸರಿನಿಂದ ಹೇಳುವುದೂ ವಾಡಿಕೆಯಲ್ಲಿದೆ.

ಪತಿಯೇ ದೇವರೆಂದು ನಂಬಿದ ಹಿಂದೂಪತ್ನಿ, ತನ್ನ ಮಾಂಗಲ್ಯದ ಆಯುಷ್ಯಕ್ಕಾಗಿ ಏನು ಬೇಕಾದುದನ್ನೂ ತ್ಯಾಗಮಾಡಬಲ್ಲಳು. ಸ್ವಾರ್ಥ ಅವಳ ಸನಿಹಕ್ಕೂ ಸುಳಿಯದು. ವಿವಾಹದ ತರುವಾಯ ಒಂದು ವರ್ಷ ಆಯುಷ್ಯವುಳ್ಳ ಪತಿಯನ್ನು ಪಡೆದು, ತನ್ನ ತಪಸ್ಸಿನಿಂದ ಅವನನ್ನು ಚಿರಂಜೀವಿಯನ್ನಾಗಿಸಿದ ಸಾವಿತ್ರಿ; ವಿಧವಿಧದ ಕಷ್ಟಗಳನ್ನು ಅನುಭವಿಸಿ, ಅಗ್ನಿಪರೀಕ್ಷೆಯಲ್ಲಿಳಿದು ಬಂದು ಮತ್ತೆ ರಾಮಚಂದ್ರನ ಕಲ್ಯಾಣವನ್ನೇ ಬಯಸುವ ಸೀತೆ, ಹಿಂದೂ ಸುಮಂಗಲೆಯರ ಆದರ್ಶ. ಸೀತೆಯನ್ನು ಬಿಟ್ಟುಬಾರೆಂದು ರಾಮಚಂದ್ರನು ಲಕ್ಷ್ಮಣನಿಗೆ ಹೇಳಿದ ಸಂದರ್ಭ: ಋಷಿಪತ್ನಿಯರನ್ನು ಕಂಡು ವಂದಿಸಿ ಅವರ ಆಶೀರ್ವಾದ ಪಡೆಯಬೇಕೆಂಬ ಸೀತೆಯ ಬಯಕೆಯೇ ಇದಕ್ಕೆ ಮೂಲವಾಯ್ತು. ಸೀತೆ ಆ ಸುಮಂಗಲೆಯರನ್ನು ಕಾಣಲು ಕುಂಕುಮ, ಬಾಗಿನ, ತರತರದ ಸುವಾಸನಾ ದ್ರವ್ಯ ಇತ್ಯಾದಿಗಳನ್ನು ತೆಗೆದುಕೊಂಡು ಹೊರಡುತ್ತಾಳೆ. ಅವಳ ಸಂಭ್ರಮವನ್ನು ಕಂಡು ಲಕ್ಷ್ಮಣ ನೋವಿನಿಂದ ಕುದಿಯುತ್ತಾನೆ. ಕೊನೆಗೆ ನಿರ್ದಿಷ್ಟಸ್ಥಳಕ್ಕೆ ಬಂದು ಲಕ್ಷ್ಮಣ ಅಣ್ಣನ ಸಂದೇಶವನ್ನು ಅರುಹಿದಾಗ, ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುಂತೆ, ಅಂಗನೆ ಧರೆಗೆ ನಡುನಡುಗುತ ಬಿದ್ದು ಬಿಟ್ಟಳು. ಚೇತರಿಸಿ ಕೊಂಡೆದ್ದ ಮೇಲೆ ಸೀತೆಯ ಮಾತುಗಳನ್ನು ಕೇಳಬಹುದು: "ಕಡೆಗು ಕರುಣಾಳು ರಾಘವನಲ್ಲಿ ತಪ್ಪಿಲ್ಲ; ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ, ದೊಡಲಂ ಪೊರೆವುದೆನ್ನಪರಾಧವುಂಟು" ಎಂದು ಪತಿಯನ್ನು ಕುರಿತು ಮಾತನಾಡುವ ಸೀತೆಯಲ್ಲಿ ಯಾವ ರಾಗ-ದ್ವೇಷಕ್ಕೂ ಎಡೆಯಿಲ್ಲ. ಕಾಳಿದಾಸನ ಸೀತೆ ಇದೇ ಮಾತನ್ನೇ ಹೇಳಿದ್ದಾಳೆ. ಅವಳು ಇನ್ನೂ ಒಂದು ಹೆಜ್ಜೆ ಮುಂದುವರಿದು:

“ಸಾಽಹಂ ತಪಃಸೂರ್ಯ ನಿವಿಷ್ಟ ದೃಷ್ಟಿರೂರ್ಧ್ವಂ
ಪ್ರಸೂತೇಶ್ಚರಿತುಂ ಯತಿಷ್ಯೇ ।
ಭೂಯೋ ಯಥಾಮೇ ಜನನಾಂತರೇಽಪಿ ತ್ವಮೇವ ಭರ್ತಾ
ನ ಚ ವಿಪ್ರಯೋಗಃ ॥

ನನ್ನ ಮುಂದಣ ಜನ್ಮದಲ್ಲೂ ನೀನೆ ಪತಿಯಾಗಬೇಕೆಂದು ತಪಸ್ಸನ್ನು ಆಚರಿಸುತ್ತೇನೆ—ಎಂದು ಹೇಳುತ್ತಾಳೆ.

ಕನ್ನಡ ಸಂಸ್ಕೃತ ಸಾಹಿತ್ಯಗಳಲ್ಲಿ ಸುಮಂಗಲೆಯರ ವರ್ಣನೆ ಅಲ್ಲಲ್ಲಿ ಬಂದೇ ಬರುತ್ತದೆ. ಪುರಂಧ್ರಿಯರ ಸುಳಿವಿಲ್ಲದೆ ಮಹಾಕಾವ್ಯ ಪೂರ್ಣವಾಗದು. ರಾಜನು ಯುದ್ಧಕ್ಕೆ ಹೊರಟರೆ, ಪುರಂಧ್ರಿ ಹಣೆಗೆ ಕುಂಕುಮವಿಕ್ಕಿ ಆರತಿ ಎತ್ತಿ ಜಯವಾಗಲೆಂದು ಹರಸಿ ಕಳುಹಿಸಲು ಬರಬೇಕು. ಅವನು ಜಯಶಾಲಿಯಾಗಿ ಮನೆಗೆ ಮರಳಿದಾಗ ಎದುರುಗೊಳ್ಳಲೂ ಬರಬೇಕು. ಯಾವ ಶುಭಕಾರ್ಯಕ್ಕೂ ತುಂಬಿದ ಕಲಶದೊಡನೆ ಸುಮಂಗಲೆಯು ಎದುರು ಬರಲೇ ಬೇಕು. ಇದಕ್ಕೆ ವಿಪರೀತವಾಗಿ ವಿಧವೆ ಎದುರಿಗೆ ಬಂದರೆ, ಕಾರ್ಯ ಕೈಗೂಡದೆಂಬ ಕಲ್ಪನೆ ಇನ್ನೂ ಸಮಾಜದಲ್ಲಿ ಉಳಿದಿದೆ. ಅಂಧಶ್ರದ್ಧೆಯಿಂದಾಗಿ, ಮೊದಲೇ ದುರ್ಬಲಳಾದ ವಿಧವೆ ಅನುಭವಿಸಬೇಕಾದ ಸಾಮಾಜಿಕ ಅವಹೇಳನೆ ಇದು.

ಮಾಂಗಲ್ಯದ ಅಲಂಕಾರಗಳಿಂದ ಸುಮಂಗಲೆಯನ್ನು ಗುರುತಿಸುವುದಾದರೆ, ಅಂತಹ ಅಲಂಕಾರಗಳನ್ನು ಧರಿಸಿದವರೆಲ್ಲರೂ ಸುಮಂಗಲೆಯರೇ ?—ಎಂಬ ಪ್ರಶ್ನೆಯೂ ಸಹಜವಾಗಿದೆ. ಅದರಂತೆ ಈ ಅಲಂಕಾರಗಳನ್ನು ಧರಿಸದೇ ಹೋದರೂ, ಅವಳ ಪತಿಯು ಜೀವಂತನಾಗಿದ್ದರೆ ಅವಳು ಸುಮಂಗಲೆಯೇ, ಅಲ್ಲವೇ ? ಪತಿಯು ಜೀವಂತನಾಗಿದ್ದೂ, ಅವಳ ಪಾಲಿಗೆ ಮೃತನಾಗಿದ್ದರೆ, ಆಗಲೂ ಅವಳು ಸುಮಂಗಲೆಯೇ ? – ಹೀಗೆ ಹಲವಾರು ಪ್ರಶ್ನೆಗಳು ನಮ್ಮೆದುರಿಗೆ ಬರುತ್ತವೆ. ಪುನರ್ವಿವಾಹಿತ ತರುಣಿಗೆ ಸುಮಂಗಲೆಯ ಸ್ಥಾನವಿಲ್ಲವೇ ? ಸ್ಮೃತಿಗ್ರಂಥಗಳು ಸ್ಥಾನವಿದೆಯೆಂಬುದನ್ನು ಒಪ್ಪಿಕೊಂಡಿದ್ದರೂ, ಪ್ರಚಲಿತ ರೂಢಿ ಮೊದಲಿನ ವಿವಾಹಸಂಬಂಧವನ್ನಷ್ಟೆ ಪವಿತ್ರವೆಂದು ತಿಳಿಯುತ್ತದೆ. ಪುರುಷನ ಪುನರ್ವಿವಾಹ ಮಹಿಳೆಯ ಮಾಂಗಲ್ಯಕ್ಕೆ ಯಾವ ಬಾಧೆಯನ್ನೂ ತರಲಾರದು; ಆದರೆ ವಿಧವೆ ಅಥವಾ ಪರಿತ್ಯಕ್ತೆ ಪುನಃ ವಿವಾಹಿತಳಾದರೆ, ಅವಳನ್ನು ಸಮಾಜವು ಸಾಶಂಕದೃಷ್ಟಿಯಿಂದಲೇ ಕಾಣುತ್ತದೆ. ‘ಗೃಹಿಣೀ ಸಚಿವಃ ಸಖೀಮಿಥಃ ಪ್ರಿಯಶಿಷ್ಯಾ ಲಲಿತೇ ಕಲಾವಿಧೌ’ ಎಂದು ವರ್ಣಿತಳಾದ ಕಾಲಿದಾಸನ ಇಂದುಮತಿಯಂತೆಯೇ ಅವಳೂ ಇರಬಹುದು; ಆದರೆ ಸಮಾಜದ ದೃಷ್ಟಿಯೇ ಸಂಕುಚಿತವಾಗಿದ್ದರೆ ? ಸುಮಂಗಲೆಯರಾದುದರಲ್ಲಿ ಅವರ ಜಾಣ್ಮೆ ಏನಿದೆ ? ಸ್ವತಃ ಸುಮಂಗಲೆಯರೇ ವಿಧವೆ, ಪರಿತ್ಯಕ್ತೆಯರನ್ನು ಹಿಯ್ಯಾಳಿಸಿ ನುಡಿಯುವುದೂ ಅಲ್ಲಲ್ಲಿ ಕೇಳುವ ವಿಷಯ. ಈ ವಿಷಮತೆಯನ್ನು ತೆಗೆಯಲೆಂದೇ ಆರ್ಯಸಮಾಜದ ಪುರಸ್ಕರ್ತರಾದ, ಮಹರ್ಷಿ ಕರ್ವೆಯವರಂತಹ ಮಹಾನುಭಾವರು ತಮ್ಮ ಜೀವನವನ್ನು ಮೀಸಲಾಗಿರಿಸಿದರು.

ಇನ್ನು ಹಿಂದೂಸ್ತ್ರೀಯರಲ್ಲಿಯೇ, ಹಲವರು ಹಲವಾರು ಸಂಧರ್ಭಗಳಲ್ಲಿ, ಪತಿಯು ಜೀವಂತನಾಗಿದ್ದರೂ ತಾಳಿಯನ್ನು ಕೂಡ ಧರಿಸುವುದಿಲ್ಲ. ವಿಶೇಷತಃ ಕರ್ನಾಟಕದ ಹಳ್ಳಿಗಳಲ್ಲಿ ಒಕ್ಕಲತಿಯರು, ಹೆರಿಗೆಯ ತರುವಾಯ ಮೂರು ತಿಂಗಳು ಯಾವ ಆಭರಣವನ್ನೂ ಧರಿಸುವುದಿಲ್ಲ. ಹಿಂದುಗಳಲ್ಲದ ಕೆಲವು ಜನಾಂಗಗಳ ಸ್ತ್ರೀಯರು ಇಂತಹ ಆಭರಣಗಳಿಗೆ ಯಾವ ಬೆಲೆಯನ್ನೂ ಕೊಡುವುದಿಲ್ಲ. ಆಭರಣಗಳ ಮೇಲಿಂದಲೂ ನಾವು ಸುಮಂಗಲೆಯರನ್ನು ಗುರುತಿಸಬಹುದು; ಆದರೆ ಅದೊಂದೇ ಸಾಧನವಲ್ಲ—ಎಂಬುದನ್ನು ಮಾತ್ರ ಮರೆಯುಂತಿಲ್ಲ.

ಪತಿಯು ಜೀವಂತವಾಗಿದ್ದು, ಪತ್ನಿಗೆ ಅವನೊಡನೆ ಯಾವುದೇ ಸಂಬಂಧವಿಲ್ಲದಿದ್ದರೆ, ಆಗಲೂ ಅವಳು ಸುಮಂಗಲೆಯೇ ? ಸೌಭಾಗ್ಯವತಿಯೇ ?—ಎಂಬ ಪ್ರಶ್ನೆ ಮಾರ್ಮಿಕವಾದುದು. ಕೈಲಾಸಂ ಅವರ ‘ತಾಳಿಕಟ್ಟೋಕೂಲೀನೇ’ ಎಂಬ ಕೃತಿ ಮಾಂಗಲ್ಯದ ವ್ಯಾಪಾರೀ ಬೆಲೆಯನ್ನು ಎತ್ತಿ ತೋರಿಸಿತು. ಈ ಪ್ರಶ್ನೆ ರೂಢಿಮೂಲ ಅಂಧಶ್ರದ್ಧೆಯನ್ನು ಎತ್ತಿತೋರಿಸುತ್ತದೆ. ಪತಿಯು ಇದ್ದಾನೆಂಬ ಹೆಸರಿನಲ್ಲಿ ಪತ್ನಿಯೂ, ಪತ್ನಿ ಇದ್ದಾಳೆಂಬ ಹೆಸರಿನಲ್ಲಿ ಪತಿಯೂ ಸಾಮಾಜಿಕ ರಕ್ಷಣೆಯನ್ನು ಪಡೆದು, ಸ್ವೇಚ್ಛೆಯಿಂದ ಇರಲು ಯತ್ನಿಸಿದರೆ, ಯಾವ ಮಾಂಗಲ್ಯದ ಬೆಲೆ ಎಷ್ಟು ತಾನೆ ಉಳಿದೀತು ?

ಸ್ತ್ರೀ ಒಂದು ಶಕ್ತಿ. ಅವಳ ತ್ಯಾಗ-ಸಹನೆಗಳಿಲ್ಲದೆ ಯಾವ ಪ್ರಪಂಚವೂ ಮುಂದುವರಿಯಲಾರದು. ಅರ್ಧನಾರೀನಟೇಶ್ವರನೇ ಇದಕ್ಕೇ ಸಾಕ್ಷಿ. ಆದರೆ ಸ್ತ್ರೀ ತಾನು ದುರ್ಬಲಳೆಂದು ತಿಳಿದು, ತನ್ನ ದೌರ್ಬಲ್ಯವನ್ನು ಅರಿಯಲು ಪತಿಗೆ ಅವಕಾಶ ಕೊಟ್ಟರೆ, ಆ ದೌರ್ಬಲ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಶಕ್ತಿ ಪತಿಯಲ್ಲಿಲ್ಲದೆ ಹೋದರೆ, ಅವಳ ಮಾಂಗಲ್ಯಕ್ಕೆ ಚಿರಕಾಲ ಬಾಳುವ ಬೆಲೆ ದೊರೆಯದು.

ಮನೆಯ ಒಳಗೂ ಹೊರಗೂ ಮಂಗಲಕರವಾದ ವಾತಾವರಣವನ್ನು ನಿರ್ಮಿಸಬಲ್ಲವಳೇ ಸುಮಂಗಲೆ ! ಆ ಶಕ್ತಿಯನ್ನು ಬೆಳಸಿಕೊಂಡು, ಕಾಯ್ದುಕೊಂಡು ಹೋಗುವುದೇ ಅವಳ ಮಾಂಗಲ್ಯ !

# ರಾಯರ ರಂಗೂ

( ವಿನೋದ ಪ್ರಬಂಧ )

ಶ್ರೀ ಗೋವಿಂದಮೂರ್ತಿ ದೇಸಾಯಿ, ಧಾರವಾಡ

**ಸಾಕಿದ ಒಂದು ಬೆಕ್ಕು ಕೂಡ ನಮ್ಮ ಜೀವನದಲ್ಲಿ ಅನೇಕ ಕಹಿ ಸಿಹಿ ಅನುಭವಗಳನ್ನು ಒದಗಿಸಿಕೊಡಬಲ್ಲದು. ಸಾವಿತ್ರಮ್ಮನಿಂದ ಕೇವಲ ಬೈಗುಳನ್ನೇ ತಿನ್ನುತ್ತಿದ್ದ ಆಚಾರ್ಯರು, ಅವರ ಮನೆಯಲ್ಲಿ ಸವಿಯೂಟವನ್ನು ಹೊಡೆಯುವ ಸಂದರ್ಭ ಒದಗಿದುದು ಸಾಕಿದ ಬೆಕ್ಕಿನಿಂದಲೆ !**

" ನಮ್ಮ ರಂಗೂಗೆ ಮೂರು ವರುಷಗಳೇ ತುಂಬಿದರೂ, ಅವಳಲ್ಲಿ ನೂರುವರ್ಷದ ಬುದ್ಧಿಯಿದೆ. ಅವಳ ರೂಪವೆಂದರೆ ಕಾಮನನ್ನು ಕೂಡ ಮೋಹಿಸುವಂತಹದು. ಅವಳು ರೂಪಕ್ಕೆ ತಕ್ಕ ಗುಣಗಳನ್ನೂ ಅಳವಡಿಸಿಕೊಂಡಿದ್ದಾಳೆ. ಇಂತಹ ಸ್ಥುರದ್ರೂಪಿಯನ್ನು ಕಂಡರೆ ನಮ್ಮ ಪಕ್ಕದ ಮನೆ ಸೀತಾರಾಮಾಚಾರ್ಯರಿಗೆ ಯಾಕೆ ದ್ವೇಷವೋ ನಾನರಿಯೆ " ಎಂದು ರಾಯರ ಹೆಂಡತಿ, ರಂಗೂನ ದೇಹದ ಮೇಲೆ ತಮ್ಮ ಕೈಯನ್ನು ಆಡಿಸುತ್ತ, ಅವಳಿಗೊಂದು ಮುತ್ತನ್ನಿತ್ತು ಹೇಳಿದರು. ಸವಣೂರಿನ ಹೊರಕೇರಿಯ ತುಂಬಾ ರಾಯರ ರಂಗೂ ಎಂದರೆ ಎಲ್ಲರಿಗೂ ಗೊತ್ತು, ಅವಳು ರಾಯರ ಹಾಗೂ ಸಾವಿತ್ರಮ್ಮನ ಸಾಕುಮಗಳೆಂದು ಎಲ್ಲರಿಗೂ ಪರಿಚಿತಳು. ಅವರಿಗೆ ರಾಯರ ಮನೆಯಲ್ಲಿ ಮಲಗಲು ರೇಶ್ಮೆಯ ಗಾದಿ, ಹಾಲು ಕುಡಿಯಲು ರಜತದ ಪಾತ್ರೆ, ಕೊರಳಲ್ಲಿ ನೆಲ್ಲಿಕಾಯ ಆಕಾರದ ಕನಕದ ಕಂಠಹಾರ, ಕಾಲಲ್ಲಿ ರಜತದ ಪಿಲ್ಲೆ! ಹಿಂದಿನ ಸಂಸ್ಥಾನಿಕರ ಮಕ್ಕಳು ಕೂಡಾ ಅಷ್ಟು ಸುಖವನ್ನು ಅನುಭವಿಸಿರಲಿಕ್ಕಿಲ್ಲ. ರಂಗೂನನ್ನು ಹೂವಿನಂತೆ ರಾಯರು ಜೋಪಾನ ಮಾಡಿದ್ದರು. ಸಂತಾನವಿಲ್ಲದ್ದಕ್ಕೆ ತಮ್ಮ ಸಮಸ್ತ ಸಂಸಾರದ ಪ್ರೀತಿಯನ್ನು ರಂಗೂನ ಮೇಲೆ ತೋರಿಸುತ್ತಿದ್ದರು. ರಂಗೂನ ವಿಷಯವನ್ನು ಕುರಿತು ಮಾತನಾಡುವುದೆಂದರೆ ರಾಯರ ಪತ್ನಿ ಸಾವಿತ್ರಮ್ಮನಿಗೆ ತುಂಬಾ ಸಂತೋಷ. ಆಗಂತುಕರೂ ' ಹೋಗಂತುಕರು' ಸಾವಿತ್ರಮ್ಮನೆದುರು ಅವರ ರಂಗೂನ ಪ್ರಶಂಸೆಯ ಮಾತನಾಡಿದರೆ ಸಾಕು; ರಾಯರ ಜೊತೆಗೆ ಅಂದು ಅವರಿಗೂ ಒಂದು ಬೆಳ್ಳಿಯ ತಾಟು ಬಂದಿತೆಂದೇ ತಿಳಿಯ ಬೇಕು. ಆದರೆ ಪಕ್ಕದ ಮನೆಯ ಸೀತಾರಾಮಾಚಾರ್ಯರಿಗೆ ಮಾತ್ರ ರಾಯರ ರಂಗೂನನ್ನು ಕಂಡರೆ ರೇಲುಗಾಡಿಗೆ ಕೆಂಪುಬಾವುಟವನು ತೋರಿಸುವಂತಾಗುತ್ತಿತ್ತು. ಅಖಂಡಪಂಚಾಧಾರಿ ಸೀತಾರಾಮಾಚಾರ್ಯರು " ಖೋಡಿ ಬೆಕ್ಕು ರಂಗೂ ಅಂತೆ....ರಂಗೂ ! ಅದಕ್ಯಾಕೆ ನಾಮಕರಣವೋ ನಾ ಕಾಣೆ ! ಆ ಸ್ವಾರ್ಥಿಜಾತಿಯ ಬೆಕ್ಕಿಗೆ ತಿನ್ನಿಸುವ ಬದಲು, ಯಾವುದಾದರೂ ದೇವರಿಗೆ ನಡೆದುಕೊಂಡಿದ್ದರೆ, ಇವರಿಗೆ ಒಂದೇಕೆ ಹತ್ತು ಮಕ್ಕಳಾಗುತ್ತಿದ್ದವು. ನಾನು ಯಾವುದಾದರೂ ಕಾರ್ಯಕ್ಕೆ ಹೊರಟರೆ ಸಾಕು; ಖೋಡಿ ಮೋರೆಯನ್ನು ಮುಂದಕ್ಕೆ ಹಾಕಿಕೊಂಡು ಅಡ್ಡಹಾಯುತ್ತದೆ. ಇದು ನನಗೆ ಮಾಡಿದ ಅಪಶಕುನಗಳು ಅಕ್ರಮ್ಮ! ಆದರೆ ಜೀವಹತ್ಯವೆಂದು ಅದಕ್ಕೆ ಜೀವದಾನ ಮಾಡಿದ್ದೇನೆ' ಎಂದು ಹೇಳಿ ತಮ್ಮ ಕೋಪವನ್ನು ಶಮನಮಾಡಿಕೊಳ್ಳುತ್ತಿದ್ದರು. ರಾಯರ ಹೆಂಡತಿ ಸಾವಿತ್ರಮ್ಮನು ಕೂಡ "ಎಂತಹ ಮುತ್ತೈದೆಯರು ಬಂದರೂ ಅವರೆದುರು ಮೂರೇ ಗೇಣಿನ ಪಂಜೆ ಉಟ್ಟು ತಿರುಗುತ್ತಾನೆ. ಮಂತ್ರವಿಲ್ಲ, ತಂತ್ರವಿಲ್ಲ; ಹಣೆಯ ಮೇಲೆ ಹಬ್ಬಳ್ಳಿ ಧಾರವಾಡ ಟಾರುಬೀದಿಯಂತಹ ನಾಮವನ್ನು ಧರಿಸಿ, ಜನರಲ್ಲಿ ತಾನು ವೈದಿಕನೆಂದು ಹೇಳಿಕೊಳ್ಳುತ್ತಾನೆ. ಪಾಪ ! ಮೂಕ ಪ್ರಾಣಿ ನಮ್ಮ ರಂಗೂನನ್ನು ಕಂಡರೆ, ಈ ಅಧಿಕಪ್ರಸಂಗಿ ಸೀತಾರಾಮನಿಗೆ ಅಷ್ಟೇಕೆ ಕೋಪ ನನಗೆ ಗೊತ್ತಿಲ್ಲ" ಎಂದು ಮರುತ್ತರ ಕೊಡುತ್ತಿದ್ದರು. ರಂಗೂನ ಆಟಾಟದಿಂದ ಆಚಾರ್ಯರಲ್ಲಿಯೂ ಹಾಗೂ ಸಾವಿತ್ರಮ್ಮನಲ್ಲಿಯೂ ಮೇಲಿಂದಮೇಲೆ ಪಟಾಕ್ಷಿಗಳು ಹಾರುತ್ತಿದ್ದುವು. ಅಪ್ಪಿ ತಪ್ಪಿ ರಂಗೂ ಆಚಾರ್ಯರಲ್ಲಿ ಹಾದು ಹೋದರೆ ಸಾಕು; ಸಾವಿತ್ರಮ್ಮ ಎಳ್ಳನ್ನು ಸಿದ್ಧಪಡಿಸಿಕೊಂಡೇ ಕುಳಿತುಕೊಳ್ಳಬೇಕು. ಒಂದೇ ಸಲ ಸೀತಾರಾಮಾಚಾರ್ಯರು ಉದ್ದೇಶಪೂರ್ವಕವಾಗಿಯೇ ತುಂಬಾ ಕಾಯ್ದ ಹಾಲನ್ನು ರಂಗೂನ ಎದುರು ಇಟ್ಟು, ಅದರ ನಾಲಿಗೆ ತುಟಿ ಸುಡುವಂತೆ ಮಾಡಿದ್ದರು. ಅಂದಂತೂ ಸೀತಾರಾಮಾಚಾರ್ಯರ ಕುಲಕೋಟಿಯ ಉದ್ಧಾರವಾಯಿತು.

ಒಂದು ಸಲ ಸಾವಿತ್ರಮ್ಮನು, ರಂಗೂ ಅವರ ಮನೆಗೆ ಬಂದು ಒಂದು ವರ್ಷವಾಗಿದ್ದರಿಂದ, ಅದರ ಹುಟ್ಟುಹಬ್ಬವನ್ನು ಆಚರಿಸಬೇಕೆಂದು ನಿಶ್ಚಯಿಸಿದರು. ಆ ಬೆಕ್ಕಿಗೇಕೆ ಹುಟ್ಟುಹಬ್ಬವೆಂದು ಯಾರೋ ರಾಯರನ್ನು ಕೇಳಿದಾಗ " ಅವಳು ನನ್ನ ಮಗಳು ಸ್ವಾಮಿ, ನಿಮ್ಮ ಮಕ್ಕಳ ಹಬ್ಬವನ್ನು ನೀವು ಆಚರಿಸುವದಿಲ್ಲವೇ ? ಎಂದು. ಜಮದಗ್ನಿ ರೂಪವನ್ನು ತಾಳಿ ಹೇಳಿದ್ದರು. ಅಂದು ಓಣಿಯ ತುಂಬಾ ಸಾವಿತ್ರಮ್ಮನು, ಭೋಜನಕ್ಕೆ ಬರಲು ಆಹ್ವಾನಿಸಿ ಹೇಳಿಬಂದಿದ್ದಳು. ಆದರೆ ಸೀತಾರಾಮಾಚಾರ್ಯರ ಮನೆಯವರಿಗೆ ಮಾತ್ರ ಆಮಂತ್ರಣವಿರಲಿಲ್ಲ. ಈ ಸೇಡನ್ನು ಅವರು ಸಾಧಿಸಲು ಮೇಲಿಂದ ಮೇಲೆ ಸಾವಿತ್ರಮ್ಮನ ಜೊತೆ ಜಗಳ ಕಾಯುತ್ತಿದ್ದರು. ಹುಟ್ಟು ಹಬ್ಬದ

ದಿವಸ ಸಾವಿತ್ರಮ್ಮನು ರಂಗೂಗೆ ಸುಗಂಧದ ತೈಲವನ್ನು ಲೇಪಿಸಿ ಎರೆದಿದ್ದರು. ಊಟಕ್ಕೆ ಅದಕ್ಕೊಂದು ಬೆಳ್ಳಿಯ ತಾಟನ್ನು ಹಾಕಿದ್ದರು. ಆದರೆ ಜೇಲಿನಲ್ಲಿಟ್ಟ ಕೈದಿಯಂತೆ ಆ ಬೆಕ್ಕಿಗೆ ಅಂದಿನ ಅನ್ನವೇ ರುಚಿಸಲಿಲ್ಲ. ಅತ್ತಿತ್ತ ಅಡ್ಡಾಡಿ, ಬೇರೆಯವರ ಮನೆಯ ಹಾಲುಕುಡಿದು ಹೊಡಿಸಿಕೊಂಡು ಕಳ್ಳಜೀವನವನ್ನು ಸಾಗಿಸುವ ಬೆಕ್ಕಿಗೆ ಬೆಳ್ಳಿಯ ತಾಟೇನು, ಸುಗ್ರಾಸ ಭೋಜನವೇನು ? ಅಂದು ಸಂಜೆ ಸಾವಿತ್ರಮ್ಮ ರಂಗೂಗೆ ಆರತಿ ಮಾಡಬೇಕೆಂದು ಬಯಸಿ, ಅನೇಕರನ್ನು ಅರಿಸಿಣ ಕುಂಕುಮಕ್ಕೆ ಆಹ್ವಾನಿಸಿದರು. ಆದರೆ ಸಾವಿತ್ರಮ್ಮನ ಕಣ್ಣು ತಪ್ಪಿಸಿ ರಂಗೂ ಎಲ್ಲಿಯೋ ಜಾರಿದ್ದಳು. 'ಬಂದವರಿಗೆಲ್ಲಾ ನಿರಾಶೆಯಾಯಿತಲ್ಲಾ' ಎಂದು ಸಾವಿತ್ರಮ್ಮನು ಮರುಗಿದಳು. ರಾತ್ರಿ ಒಂಬತ್ತು ಘಂಟೆಯಾದರೂ ರಂಗೂ ಬರಲೇ ಇಲ್ಲ. ಸಾವಿತ್ರಮ್ಮನಿಗೆ ಅಂಜಿಕೆಯಾಯಿತು. ಅದರ ಜೀವಕ್ಕೆ ಸೀತಾರಾಮಾಚಾರ್ಯರಿಂದ ಧಕ್ಕೆಯಾಗಿದೆಯೆಂದೇ ಅವರ ತರ್ಕ. ರಾಯರು ಮನೆಗೆ ಬಂದು ಪಾದರಕ್ಷೆಗಳನ್ನು ಬಿಡುವ ಮೊದಲೆ, ಅವರ ಕೈಯಲ್ಲಿ ಕಂದೀಲನ್ನು ಕೊಟ್ಟು, ಅವರನ್ನು ರಂಗೂನ ಶೋಧನೆಗೆ ಕಳುಹಿದರು. ಆದರೆ ಅಲ್ಲಲ್ಲಿ ಅವರಿವರನ್ನು ಕೇಳಿ, ರಾಯರು ಪೆಚ್ಚುಮೋರೆ ಮಾಡಿಕೊಂಡು ಹಾಗೆಯೇ ಬಂದರು. ಸಾವಿತ್ರಮ್ಮನು ದೊಡ್ಡ ಧ್ವನಿ ತೆಗೆದು ಅಳಲು ಪ್ರಾರಂಭಿಸಿದರು. ನೆರೆಯವರೆಲ್ಲಾ ಕೂಡಿ ಸಮಾಧಾನ ಹೇಳಿದರು. ಮಾಡಿಟ್ಟ ಅನ್ನವು ಆರಿಹೋದರೂ, ಸಾವಿತ್ರಮ್ಮನು ಊಟದ ಮಾತನ್ನೇ ಆಡಲಿಲ್ಲ. ರಾಯರಿಗೆ ತುಂಬಾ ಹಸಿವೆಯಾಗಿತ್ತು. ಆದರೆ ಹುಲಿಯ ಮುಂದೆ ಇಲಿಯ ಆಟವೆಲ್ಲಿ ? ಅಷ್ಟರಲ್ಲಿಯೇ ನಡುಮನೆಯ ಕಿಡಕಿಯಿಂದ ಹಾರಿ, ಸಾವಿತ್ರಮ್ಮನ ಬಳಿ ಬಂದು ರಂಗೂ ನಿಂತಳು. ರಂಗೂನಿಗೆ ನೂರೆಂಟು ಮುತ್ತನ್ನಿತ್ತು ಆಕೆ ಅದನ್ನು ಬಗಲಲ್ಲಿ ಕೂಡಿಸಿಕೊಂಡೇ ರಾಯರಿಗೆ ಊಟಕ್ಕೆ ಬಡಿಸಿದರು. ಆ ವರ್ಧಂತಿಯ ದಿನವು, ರಂಗೂನ ಇತಿಹಾಸದಲ್ಲಿ ಸಾವಿತ್ರಮ್ಮನಿಗೆ ಅವಿಸ್ಮರಣೀಯದಿನವಾಗಿದ್ದರೆ, ಆಚಾರ್ಯರ ಜೀವನದಲ್ಲಿಯೂ ಮರೆಯಲಾರದಂತಹ ಸುವರ್ಣಮಯ ದಿವಸವಾಗಿತ್ತು. ಕಾರಣ ಓಣಿಯೆಲ್ಲ ಔತಣವನ್ನುಕೊಟ್ಟು, ಆಚಾರ್ಯರ ಒಂದು ಪಿಳ್ಳೆಗೂ ಆಮಂತ್ರಣ ಕೊಡದೆ ಹೋದದ್ದು. ಆ ದ್ವೇಷದ ಕಿಡಿಯು ಆಚಾರ್ಯರಲ್ಲಿ ಪ್ರಖರವಾಗಿತ್ತು.

ಅಂದು ಮಾತಿಗೆ ಮಾತು ಹೊರಟು ಸಹಜವಾಗಿ ಯಾರೋ "ಏನು ಸೀತಾರಾಮಾಚಾರ್ಯರೆ, ರಾಯರ ರಂಗೂನನ್ನು ಕಂಡರೆ ನಿಮಗೇಕೆ ದ್ವೇಷ ? ಅವಳಿಂದ ನೀವು ಅವರ ಮನೆಯವರೊಡನೆ ಹಗೆಯನ್ನೇಕೆ ಕಟ್ಟಿಕೊಂಡಿದ್ದೀರಿ ? " ಎಂದು ಕೇಳಿದಾಗ, ಆಚಾರ್ಯರು ತಮ್ಮದೇ ಆದ ವಿಶಿಷ್ಟಮಯ ಪುರಾಣಶೈಲಿಯಲ್ಲಿ ತಮ್ಮ ಸಿದ್ಧಾಂತವನ್ನು ಮುಂದಿಸಿದರು: " ನನಗೆ ವೈಯುಕ್ತಿಕವಾಗಿ ರಂಗೂನ ಮೇಲೆ ದ್ವೇಷವಿಲ್ಲ. ಆದರೆ ಈ ಸ್ವಾರ್ಥೀಮಾರ್ಜಾರ ಜಾತಿಯನ್ನು ಕಂಡರೆ ನನಗಾಗದು. ನಮ್ಮ ಬ್ರಾಹ್ಮಣಜಾತಿಯ ಅಧಃಪತನಕ್ಕೆ ಈ ಬೆಕ್ಕುಗಳೇ ಮೂಲಕಾರಣ ! ನೋಡಿರಿ ಒಂದು ದೃಷ್ಟಾಂತವಿದೆ. ಇಂದ್ರನು ಒಮ್ಮೆ ಗೌತಮಋಷಿಯ ಹೆಂಡತಿ ಅಹಲ್ಯೆಯಲ್ಲಿ ಅನುರಕ್ತನಾದ. ಅವಳು ಇಂದ್ರನನ್ನು ಬಯಸಿದಳು. ಗೌತಮರು ಹೊರಕ್ಕೆ ಹೋದಾಗ, ಇಂದ್ರ-ಅಹಲ್ಯೆಯರಿಬ್ಬರೂ ಪ್ರಣಯಚೇಷ್ಟೆಯಲ್ಲಿ ತೊಡಗಿದ್ದರು. ಅಷ್ಟರಲ್ಲಿ ಆಶ್ರಮದ ಒಳಕ್ಕೆ ಗೌತಮರು ಬರುವರೆಂದು ತಿಳಿದಾಗ ಅಹಲ್ಯೆ ಅಂಜಿದಳಂತೆ; ಆದರೆ ಇಂದ್ರನು ಒಮ್ಮೆಲೆ ಬೆಕ್ಕಿನ ರೂಪವನ್ನು ತಾಳಿ ಅವಳ ಮಗ್ಗುಲಲ್ಲಿ ಕುಳಿತನಂತೆ. ಆಶ್ರಮದಲ್ಲಿ ಯಾರು ಬಂದಿದ್ದರೆಂದು ಅಹಲ್ಯೆಗೆ ಕೇಳಿದರೆ, ಅವಳು ಯಾರೂ ಬಂದಿಲ್ಲವೆಂದು ಸುಳ್ಳು ಹೇಳಿದಳು. ಜ್ಞಾನದೃಷ್ಟಿಯಿಂದ ಎಲ್ಲವನ್ನೂ ಅರಿತುಕೊಂಡು ಗೌತಮ ಋಷಿಗಳು, ' ಈ ಸ್ವಾರ್ಥೀ ಬೆಕ್ಕಿನ ಜಾತಿಯಂತೆ ಬ್ರಾಹ್ಮಣರು ಮಹಾಕಟುಕರು; ಇವರ ಅಭ್ಯುದಯವಾಗಲೇ ಬಾರದು. ಈ ಬೆಕ್ಕು ಮನೆ ಮನೆ ತಿರುಗಿ ಹೊಟ್ಟೆ ಸಾಗಿಸುವಂತೆ, ಇವರೂ ಹೊಟ್ಟೆಸಾಗಿಸುವಂತಾಗಲಿ ' ಎಂದು ಶಾಪವನ್ನಿತ್ತರು. ಅವರ ಶಾಪದಿಂದ ನಾವೆಲ್ಲರೂ ಬಳಲ ಹತ್ತಿದ್ದೇವೆ. ಆ ಇಂದ್ರನು ಬೆಕ್ಕಿನ ಬದಲು ಬೇರೆ ರೂಪ ತಾಳಿದ್ದರೆ, ಅವರು ಬೇರೆ ರೂಪದಿಂದ ಶಾಪಕೊಡಬಹುದಿತ್ತು. ಎಂತಲೆ ಈ ಬಿಡಾಲಜಾತಿಯನ್ನು ಕಂಡರೆ ನನಗಾಗದು. " ಎಂದು ಒಂದು ಉಪನ್ಯಾಸವನ್ನೇ ಹೇಳಿದರು. ಸೀತಾರಾಮಾಚಾರ್ಯರು ತಮ್ಮ ತರ್ಕ, ನ್ಯಾಯ ಹಾಗೂ ವ್ಯಾಕರಣದ ಆಧಾರಗಳನ್ನು ಸಿದ್ಧಪಡಿಸಿಕೊಂಡು, ಬ್ರಾಹ್ಮಣನ ಅಧಃಪತನದ ಸಂಶೋಧನೆಯನ್ನು ಮಾಡಿದ್ದರು. ರಂಗೂನಿಗಿಂತಲೂ ಸಾವಿತ್ರಮ್ಮನ ಮೇಲೆ ಹೆಚ್ಚಿನ ಕೋಪವಿದ್ದುದರಿಂದ, ರಂಗೂನನ್ನು ಆಚಾರ್ಯರು ದ್ವೇಷಿಸಲೆ ಬೇಕಿತ್ತು. ರಂಗೂಗೆ ಒಂದು ಸ್ವಲ್ಪ ವ್ಯಾಧಿಯಾದರೆ ಸಾಕು. ಅಂದು ಪಶುವೈದ್ಯರು ಅವರ ಮನೆಗೆ ಸಂದರ್ಶನವೀಯಲೇ ಬೇಕು. ರಂಗೂ ಎಲ್ಲಿಯೂ ಎದ್ದು ಹೋಗಬಾರದೆಂದು ಅದನ್ನು ಒಂದು ಜಾಳಿಗೆಯ ಪಂಜರದಲ್ಲಿ ಹಾಕುತ್ತಿದ್ದರು. ಅದು ಒದರಿದರೆ ಸಾಕು; ಸಾವಿತ್ರಮ್ಮ ಬೆಳ್ಳಿಯ ಬಟ್ಟಲಲ್ಲಿ ಹಾಲು ತುಂಬಿಕೊಂಡು ಹೋಗುತ್ತಿದ್ದರು. ಸಾವಿತ್ರಮ್ಮನೆದುರು ಎಲ್ಲರೂ ಅವರ ರಂಗೂನ ಮೇಲಿನ ಪ್ರೀತಿಗಾಗಿ ಅವರನ್ನು ಹೊಗಳಿದರೂ, ಅವರ ಪರೋಕ್ಷದಲ್ಲಿ–ಅವರನ್ನು ತುಂಬಾ ತೆಗಳುತ್ತಿದ್ದರು. ರಂಗೂನನ್ನು ಹೇಗಾದರು ಅವಮಾನಮಾಡಿ, ಸಾವಿತ್ರಮ್ಮನ ಮೇಲಿನ ಕೋಪವನ್ನು ತೀರಿಸಿಕೊಳ್ಳಬೇಕೆಂದು ಆಚಾರ್ಯರು ಏನಾದರೂ ನೆವ ಹುಡುಕಿ, ರಂಗೂನನ್ನು ಹಾಗೂ ಆ ಪ್ರಾಣಿಯ ಸಮಸ್ತಜಾತಿಯನ್ನೇ ಬಯ್ಯುತ್ತಿದ್ದರು.

ಒಂದು ಸಲ ಒಂದು ವಿನೋದದ ಪ್ರಸಂಗ ಜರುಗಿತು. ಅಂದು ಸಾವಿತ್ರಮ್ಮನು ಸೋತು ಜಯಪತ್ರವನ್ನು ಬರೆದು ಆಚಾರ್ಯರ ಕೈಯಲ್ಲಿ ಕೊಟ್ಟಳು. ರಾಯರು ಮೊಗಸಾಲೆಯಲ್ಲಿ ಯಾವುದೋ ಕಾರ್ಯದಲ್ಲಿ ಮಗ್ನರಾಗಿದ್ದರು. ಸಾವಿತ್ರಮ್ಮನು ಅಡುಗೆಮನೆಯಲ್ಲಿ ಯಾವುದೋ ಕಾರ್ಯ ಮಾಡುತ್ತಿದ್ದರು. ಏನೂ ಕಾರ್ಯವಿಲ್ಲದ ರಂಗೂ ಆಕಳಿಸಿ, ಮುಖಕ್ಕೆ ಮುಂಗಾಲನ್ನು ತಿಕ್ಕಿಕೊಳ್ಳುವಾಗ, ಇಲಿಯೊಂದು ಅವಳ ಎದುರು ಹಾಯ್ದು ಹೋಯಿತು. ತತ್‌ಕ್ಷಣವೇ ರಂಗೂ ಇಲಿಯ ಬೆನ್ನುಹತ್ತಿದ್ದಳು. ಚಾಣಾಕ್ಷ ಇಲಿ ಹಿತ್ತಲಲ್ಲಿದ್ದ ಬೇವಿನಮರವನ್ನೇರಿತು. ಇದನ್ನು ನೋಡಿದ ರಂಗೂ, ತಾನು ಅದು ಹೇಗೋ ಪ್ರಯತ್ನಿಸಿ ಬೇವಿನ ಮರವನ್ನೇರಿತು. ಆದರೆ ಆ ಇಲಿ ರಂಗೂನ ಕಣ್ಣುತಪ್ಪಿಸಿತು. ರಾಯರ ಮನೆಯ ಅನ್ನವನ್ನುಂಡಬೆಕ್ಕು, ರಾಯರಷ್ಟೇ

ಚಾಣಾಕ್ಷವಿದ್ದುದರಿಂದ, ಇಲಿಯನ್ನು ಕಳೆದುಕೊಂಡಿತು. ಅದು ಹೇಗೋ ಗಿಡಗನ್ನು ಏರಿತ್ತು. ಆದರೆ ಅದಕ್ಕೆ ಕೆಳಗೆ ಇಳಿಯಲು ಬರಲೇ ಇಲ್ಲ. ಒಮ್ಮೆಲೆ ಅದು ಕೂಗಹತ್ತಿತು. ಆ ಪ್ರೀತಿಯ ಧ್ವನಿಯು ಸಾವಿತ್ರಮ್ಮನ ಕಿವಿಯ ಮೇಲೆ ಬೀಳುವುದೇ ತಡ; ಅವರು ಹಿತ್ತಿಲಲ್ಲಿ ಬಂದು ಬೇವಿನಮರದಲ್ಲಿದ್ದ ತಮ್ಮ ರಂಗೂನನ್ನು ನೋಡಿ ಅಂಜಿದರು. ಒಮ್ಮೆಲೆ ರಾಯರನ್ನು ಕರಕೊಂಡು ಬಂದು ತೋರಿಸಿದರು. ಆಗ ರಂಗೂನನ್ನು ಗಿಡದ ಮೇಲಿಂದ ಇಳಿಸಲು, ಸಾವಿತ್ರಮ್ಮನು ಸಹಾಯ ಮಾಡಿ, ರಾಯರನ್ನು ಗಿಡದ ಮೇಲೆ ಏರಿಸಿದರು. ಗಿಡವು ಬಹು ಉದ್ದವಿತ್ತು. ರಾಯರು ಗಿಡವನ್ನು ಏರಿ ರಂಗೂನನ್ನು ಕೈಯಲ್ಲಿ ಕರಕೊಂಡರು. ಆದರೆ ರಂಗೂನನನ್ನು ಕರಕೊಂಡು ತಾವು ಹೇಗೆ ಆ ವೃಕ್ಷದಿಂದ ಇಳಿಯಬೇಕೆಂಬುದೇ ಅವರಿಗೆ ಸಮಸ್ಯೆಯಾಯಿತು. ದೊಡ್ಡೆಯಿಂದ ಅದು ಸಾವಿತ್ರಮ್ಮನಿಗೆ ಸಿಕ್ಕುವಂತಿರಲಿಲ್ಲ. ಅದ-ಕ್ಕಾಗಿ ರಾಯರು ಸಾವಿತ್ರಮ್ಮನಿಗೆ “ ನೀನೂ ಗಿಡ ಹತ್ತಿ ಬಾ. ಈ ರಂಗೂನನ್ನು ಕರೆದುಕೋ ! ನಾನು ಇಳಿದು ರಂಗೂನನ್ನು ಇಸಕೊಳ್ಳುತ್ತೇನೆ. ನೀನು ಬಹಳ ಗಿಡ್ಡ ಇರುವಿ. ” ಎಂದು ಹೇಳಿದರು. ಆದರೆ ಸಾವಿತ್ರಮ್ಮನು ಗಿಡವನ್ನು ಹತ್ತುವ ಬಗೆ ಹೇಗೆ ? ಸರಿ, ಗೋಡೆಗೆ ಆತು ನಿಂತ ಏಣಿಯು ಅವರ ಲಕ್ಷ್ಯಕ್ಕೆ ಬಂದಿತು.

ಆ ನಿಚ್ಚಣಿಕೆಯನ್ನು ವೃಕ್ಷಕ್ಕೆ ಆನಿಸಿ, ಸಾವಿತ್ರಮ್ಮ ಹತ್ತಲು ಪ್ರಾರಂಭಿಸಿದರು. ಕಡೆಯ ಹಲ್ಲಿಗೆ ಬಂದು ನಿಂತಾಗ ಮೇಲಕ್ಕೆ ಹೋಗಲು ಬರಲೆ ಇಲ್ಲ. ಆಗ ರಾಯರು ಸಾವಿತ್ರಮ್ಮನಿಗೆ ಒಂದು ಕೈಕೊಟ್ಟು ಮೇಲಕ್ಕೆ ಜಗ್ಗಿದರು. ಆ ಜಗ್ಗಿದಭರದಲ್ಲಿ ಕೆಳಕ್ಕಿಟ್ಟ ನಿಚ್ಚ-ಣಿಕೆ ಸರಿದು ಬಿದ್ದುಹೋಯಿತು. ಅದನ್ನು ನೋಡಿ ಸಾವಿತ್ರಮ್ಮ ಚೀರಿದಳು. ತಾವು ಹೇಗೆ ಕೆಳಕ್ಕೆ ಇಳಿಯಬೇಕೆಂಬುದೇ ಸಮಸ್ಯೆಯಾಯಿತು. ರಾಯರಿಗೂ ವೃದ್ಧಾಪ್ಯವಾದುದರಿಂದ,ಅಲ್ಲಿಂದಲೇ ಕೆಳಗೆ ಹಾರುವಂತಿರಲಿಲ್ಲ. ಸಾವಿತ್ರಮ್ಮನಂತೂ ಹೆಂಗಸು. ಯಾರನ್ನಾದರೂ ಕರೆಯಬೇಕೆಂದರೆ ಹಿತ್ತಿಲಲ್ಲಿ ಯಾರು ಬರಬೇಕು ? ಯಾರೂ ಇವರ ಮನೆಯಲ್ಲಿ ಕಾಲನ್ನುಹಾಕುವಂತಿರಲಿಲ್ಲ. ಸಾವಿತ್ರಮ್ಮನ ಕೋಪಲೆಂದರೆ ಸರ್ವಗಾವಲೆಂದು ಎಲ್ಲೆಡೆ ಪ್ರತೀತಿ. ಇಬ್ಬರೂ ಒಳ್ಳೇ ಪೇಚಿನಲ್ಲಿ ಸಿಕ್ಕುಬಿದ್ದರು. ರಾಯರ ಹಿತ್ತಲಿನ ಪಕ್ಕದ ಹಿತ್ತಲಲ್ಲಿಯೇ ಸೀತಾ ರಾಮಾಚಾರ್ಯರ ಹಿತ್ತಲು. ಅವರು ಅಲ್ಲಿ ಏನೋ ಕೆಲಸ ಮಾಡು ತ್ತಿದ್ದರು. ಅದನ್ನು ಸಾವಿತ್ರಮ್ಮನು ನೋಡಿ ಸುಮ್ಮನಿದ್ದಳು. ರಾಯರು ಆಚಾರ್ಯರನ್ನು ನೋಡಿ “ ಅವರನ್ನೇಕೆ ನಮ್ಮ ಸಹಾಯಕ್ಕೆ ಕರೆಯಬಾರದು. ” ಎಂದು ಸಾವಿತ್ರಮ್ಮ ಕೇಳಿದರು. ‘ ಅವ್ಯಾಹತ-ವಾಗಿ—ರಂಗೂನ ದೆಸೆಯಿಂದ—ಆಚಾರ್ಯರ ಮೇಲೆ ಹೂಡಿದ ಮಹಾಯುದ್ಧವನ್ನು, ಇಷ್ಟು ಸುಲಭದಲ್ಲಿ ನಿಲ್ಲಿಸಬೇಕಾಯಿತಲ್ಲ ! ಎಂದು ಸಾವಿತ್ರಮ್ಮನು ಕೊರಗಿದಳು. ಅವರಿರ್ವರೂ ಬೋನಿನಲ್ಲಿ ಸಿಕ್ಕಿಬಿದ್ದ ಇಲಿಯಾಗಿದ್ದರು. ಹೊರಗಿನವರು ಕಂಡು ನಗುವಂತೆ ಅವರ ಪರಿಸ್ಥಿತಿಯಾಗಿತ್ತು. ಅಂತೂ ಕರೆಯಬೇಕೆಂದು ನಿಶ್ಚಯ ವಾಯಿತು. ಆದರೆ ಕರೆಯುವವರಾರು ? ರಾಯರಂತೂ ನಾನು ಸರ್ವಥಾ ಕರೆಯಲಾರೆನೆಂದು ಹೇಳಿದರು. ಸಾವಿತ್ರಮ್ಮನು ಕರೆದರೆ ಅವರ ಮರ್ಯಾದೆಗೆ ಕುಂದು ಬರುತ್ತದೆ.

ಅಂತೂ ಸಾವಿತ್ರಮ್ಮನೇ Better part of the life ಇದ್ದುದರಿಂದ, ಗಟ್ಟಿಯಾಗಿ ಆಚಾರ್ಯರ ಹೆಸರನ್ನು ಕೂಗಿದರು. ಅವರೂ ಒಂದು ಕ್ಷಣ ಸಾವಿತ್ರಮ್ಮನ ಧ್ವನಿ ಕೇಳಿ ಚಕಿತರಾದರು. ಗಿಡದಿಂದಲೇ ಸಾವಿತ್ರಮ್ಮನು ವಸ್ತುಸ್ಥಿತಿಯನ್ನು ವಿವರಿಸಿ ಸಹಾಯಕ್ಕೆ ಬರಲು ಕೇಳಿಕೊಂಡರು. ತಮ್ಮದೇ ಆದ ವಿಶಿಷ್ಟ ಮೂರುಗೇಣಿನ ಪಂಚೆಯನ್ನು ಧರಿಸಿ, ಆಪತ್ ಕಾಲದಲ್ಲಿ ಸಹಾಯಮಾಡುವುದು ಧರ್ಮವೆಂದು ಭಾವಿಸಿ ಬಂದರು. ಕೆಳಗೆ ಆಚಾರ್ಯರು ನಿಂತು ತಮ್ಮ ದೃಷ್ಟಿಯನ್ನು ಮೇಲಕ್ಕೆ ತಾಗಿಸಿದಾಗ, ದಂಪತಿಗಳಿಗಿಬ್ಬರಿಗೂ ಕೂಲಕ್ಕೆ ಹಾಕಿದಷ್ಟು ನೋವಾಯಿತು. ಕೈಯಲ್ಲಿ ನಿಚ್ಚಣಿಕೆ ಹಿಡಿದು ಕೊಂಡು ಒಂದು ಕ್ಷಣ ಹಾಗೆಯೇ ನಿಂತಾಗ ಸಾವಿತ್ರಮ್ಮನು “ ನನ್ನನ್ನು ಕ್ಷಮಿಸಿರಿ ಆಚಾರ್ಯರೆ, ವೃಥಾ ನೆರೆಯವರ ಮೇಲೆ ದ್ವೇಷ ಕಟ್ಟಿಕೊಂಡೆ.” ಎಂದು ಅಂದರು. ಆಚಾರ್ಯರು ನಿಚ್ಚಣಿಕೆಯನ್ನು ಹಚ್ಚಿ ಎಲ್ಲರನ್ನೂ ಇಳಿಸಿದರು. ಆ ಕಾರ್ಯಭಾರಕ್ಕಾಗಿ ಅಂದು ಸೀತಾ-ರಾಮಾಚಾರ್ಯರಿಗೂ ರಾಯರ ಜೊತೆ ಭೋಜನಕ್ಕೆ ಬೆಳ್ಳಿಯ ತಾಟು ಬಂದಿತು. ಅಂದು ಕೂಡ ಸಾವಿತ್ರಮ್ಮನು ರಂಗೂನ ವರ್ಣನೆ-ಯನ್ನು ಆಚಾರ್ಯರೆದುರು ಹೇಳಿದರು. ತಮ್ಮ ಹಿಂದಿನ ತಪ್ಪನ್ನೆಲ್ಲಾ ಪರಸ್ಪರರು ಒಪ್ಪಿಕೊಂಡರು. ಕೇಸರಿಯ ಗಂಧವನ್ನು ಲೇಪಿಸಿ ಗಣ-ಪತಿಯ ಹೊಟ್ಟೆ ಮಾಡಿಕೊಂಡು ಸಾವಿತ್ರಮ್ಮನ ಮನೆಯಿಂದ ಹೊರ ಬರುವ ಸೀತಾರಾಮಾಚಾರ್ಯರನ್ನು ನೋಡಿ, ಪವಣೂರಿನ ಹೊರಕೇರಿ ಯವರಿಗೆ ಶನಿ ಮಂಗಳಯುತಿ ಕಂಡ ಹಾಗಾಯ್ತು. ಅಂದಿನಿಂದ ಮತ್ತೆ ಆಚಾರ್ಯರ ಆಲೆದಾಟ ರಾಯರ ಮನೆಯಲ್ಲಿ; ಅವರ ರಂಗೂನ ಅಲೆ-ದಾಟ ಆಚಾರ್ಯರ ಮನೆಯಲ್ಲಿ ಸಾಗಿತ್ತು. ಎರಡೂ ಮನೆಗಳಲ್ಲಿ ಬಾಂಧವ್ಯವನ್ನು ಕಲ್ಪಿಸಿದ ಕೀರ್ತಿ ರಂಗೂನ ಪಾಲಿಗೆ ಬಂದಿತ್ತು !

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

**ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ**

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು : ಬಿ. ಜಿ. ಮುತ್ತಗಿ

# ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, 'ರೋಮಾ' ಕಥೆಯ ವಿಮರ್ಶೆಗಳು ೬ ಜನರಿಂದಲೂ 'ಮುತ್ತಿನ-ಸರ' ಕಥೆಯ ವಿಮರ್ಶೆ ಒಬ್ಬರಿಂದಲೂ ಬಂದಿವೆ. ವಿಮರ್ಶಕರ ಪರಿಚಿಡಿ ಹೀಗಿದೆ:

**'ರೋಮಾ' ವಿಮರ್ಶಕರು.**

೧. ಶ್ರೀ ಗೋಪೀನಾಥ ದೇಶಪಾಂಡೆ, ಮುಂಬಯಿ. ೨. ಶ್ರೀ. 'ಮಹೇಶ' ಸುಲ್ತಾನ್‌ಪುರ, ಗೋಗಿ. ೩. ಶ್ರೀ. ಜಿ. ಆರ್. ಕರಿಗುದರಿ, ಹುಬ್ಬಳ್ಳಿ. ೪. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೫. ಶ್ರೀ. ಎಚ್ ಸೀತಾರಾಮರಾವ್, ಹೊಸಬಾಳೆ (ಸೊರಬ). ೬. ಶ್ರೀ. 'ಸುಮನ', ಸುರತ್ಕಲ್ಲು.

**'ಮುತ್ತಿನಸರ' ವಿಮರ್ಶಕರು.**

೧. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯವರು ನೋಡಿ, ತಮ್ಮ ತೀರ್ಮಾನವನ್ನು ಹೀಗೆ ಕೊಟ್ಟಿದ್ದಾರೆ:

"ಈ ಸಲ ಬಂದ ವಿಮರ್ಶೆಗಳ ಸಂಖ್ಯೆ ಕಿರಿಯದಾಗಿದೆಯಾದರೂ, ಪ್ರತಿಯೊಂದು ವಿಮರ್ಶೆಯೂ ಉತ್ತಮ ಮಟ್ಟದ್ದಾಗಿರುವುದು ಸಂತೋಷದ ಸಂಗತಿಯಾಗಿದೆ. 'ಮುತ್ತಿನ ಸರ' ಕಥೆಯನ್ನು ಹೆಚ್ಚು ಜನರು ವಿಮರ್ಶೆಗೆ ತೆಗೆದುಕೊಳ್ಳದಿರುವುದು ಆಶ್ಚರ್ಯದ ವಿಷಯ. ಅದರ ವಿದೇಶೀಯ ಹಿನ್ನೆಲೆಯ ಮೂಲಕ ಹೀಗಾಗಿರಬಹುದು. 'ರೋಮಾ' ಕಥೆಯ ವಿಮರ್ಶೆಗಳಲ್ಲಿ ಶ್ರೀ. 'ಮಹೇಶ' ಸುಲ್ತಾನಪುರ ಅವರ ವಿಮರ್ಶೆ ಉತ್ತಮವಾಗಿದೆಯಾದರೂ ಆವಶ್ಯಕತೆಗಿಂತ ದೊಡ್ಡದಾಗಿರುವುದು. ಶ್ರೀ. ಜಿ. ಆರ್. ಕರಿಗುದರಿಯವರ ವಿಮರ್ಶೆಯನ್ನು ಈ ಸಂಚಿಕೆಯಲ್ಲಿ ಪ್ರಕಟಿಸಬಹುದು."

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ 'ಗುಲಾಬಿ' ಎಂಬ ಕಥೆಯನ್ನಾಗಲಿ 'ಸಂಜೆ' ಎಂಬ ಸ್ವಭಾವ ಚಿತ್ರವನ್ನಾಗಲಿ ವಿಮರ್ಶಿಸಿ, ತಾ. ೨೫—೬—೫೬ ರೊಳಗಾಗಿ ತಲ್ಪುವಂತೆ ಕಳುಹಬೇಕು.

—ಸಂಪಾದಕ

## ರೋಮಾ

(ಅನುವಾದಿತ ಕಥೆಯ ವಿಮರ್ಶೆ)

**ಶ್ರೀ. ಜಿ. ಆರ್. ಕರಿಗುದರಿ, ಹುಬ್ಬಳ್ಳಿ**

ಜಗತ್ತಿನಲ್ಲಿ ಕೆಲವು ಸಲ ಸ್ತ್ರೀಯೆಂಬ ಬಿಸಿಲುಗುದುರೆಗೆ ಪುರುಷ-ಜಿಗರೆಗಳು ಭ್ರಾಂತಿಗೊಂಡು, ಅದು ನಿಜವೇ ಎಂದು ನಂಬಿ ಮೋಸಗೊಳ್ಳುವುದನ್ನು ಕಾಣುವುದು ಅಸಂಭವವೇನೂ ಅಲ್ಲ. ಇಂತಹ ಎಷ್ಟೋ ಉದಾಹರಣೆಗಳನ್ನು ನೋಡಿದ್ದೇವೆ. ಮತ್ತು ನೋಡುತ್ತಲಿದ್ದೇವೆ. ಇದು ಮುಂದಾದರೂ ನಡೆಯತಕ್ಕದ್ದೇ. ಕೆಲವರು ತಾರುಣ್ಯದ ಮದದಲ್ಲಿ ಸಾರಾಸಾರ ವಿಚಾರವನ್ನು ಬದಿಗೊತ್ತಿ, ಹುಚ್ಚನಂತೆ ವರ್ತಿಸಿ, ತಮ್ಮ ನಾಶಕ್ಕೆ ತಾನೇ ಕಾರಣರಾಗಿರುವರು. ಇದು ಇಂದು ನಿನ್ನೆಯ ಮಾತಲ್ಲ. ಇಂತಹ ಉದಾಹರಣೆಗಳು ನಮ್ಮ ಪುರಾಣ-ಪುಣ್ಯ ಕಥೆಗಳಲ್ಲಿ ಸಾಕಷ್ಟು ನೋಡಸಿಗುವುವು. ಭಸ್ಮಾಸುರನು ಮೋಹಿನಿಗೆ ಮರುಳಾದ; ಹಾಗೂ ಪ್ರತಿಯಾಗಿ ಅವಳಿಂದ ವಂಚಿತನಾಗಿ ಕೊನೆಗೆ

ತನ್ನ ಮರಣಕ್ಕೆ ತಾನೇ ಕಾರಣನಾದ. ವಿಶ್ವಾಮಿತ್ರನಿಗೂ ಸಹ ಹೆಣ್ಣಿನ ಮೋಹದಿಂದ ದೂರ ಉಳಿಯಲು ಸಾಧ್ಯವಾಗಲಿಲ್ಲವೆಂಬುದು ಸರ್ವವಿದಿತವಾದದ್ದು. ಅಲ್ಲದೆ ಹೆಣ್ಣಿನ ವಂಚನೆಯಿಂದ ಸುಂದೋಪ-ಸುಂದರಂತಹ ಬಲಾಢ್ಯ ರಾಕ್ಷಸರ ಗತಿ ಏನಾಯಿತೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂತಹ ಅನೇಕ ಉದಾಹರಣೆಗಳನ್ನು ಇನ್ನೂ ಕೊಡಬಹುದು. ಇವನ್ನೆಲ್ಲ ಪೂರ್ಣವಾಗಿ ಸ್ತ್ರೀಕುಲದಲ್ಲಿ ಅರ್ಥವುಂಟಾಗದಿರದು. ವಿಶ್ವಾಮಿತ್ರನಂತಹ ಬ್ರಹ್ಮರ್ಷಿಗಳು ಸಹ ಸ್ತ್ರೀಯ ಮುಂದೆ ಸೋತಮೇಲೆ, ಮರ್ತ್ಯಲೋಕವಾಸಿಗಳಾದ ಮಾನವ ಪ್ರಾಣಿಗಳ ಪಾಡೇನು? ಹೀಗೆ ಹೆಣ್ಣಿನ ಮೋಹಕ್ಕೆ ಮರುಳಾಗಿ ಆಕೆಯಿಂದ ವಂಚಿತನಾಗಿ ವ್ಯಗ್ರಚಿತ್ತನಾಗಿ, ಮೋಸಹೋದ ಕೊರಗಿನಿಂದ ಸಾಯುವನಾಗಿ, ಕೊನೆಗೆ ತನ್ನ ಅಧೋಗತಿಗೆ ತಾನೇ ಕಾರಣನಾದ ಒಬ್ಬ ಆಧುನಿಕ ತರುಣನ ದಾರುಣಕಥೆಯನ್ನು ಹೇಳಿ, "ರೋಮಾ" ಕಥಾಲೇಖಕರು ಇಂದಿನ ತರುಣರು ಕಣ್ಣು ತೆರೆಯುವಂತೆ ಮಾಡಲು ಪ್ರಯತ್ನಿಸಿದ್ದಾರೆ.

ಲೇಖಕರು ತಮ್ಮ ಕಥೆಯಲ್ಲಿರುವ ಸನ್ನಿವೇಶಗಳನ್ನು, ಅವು ಸ್ವಾಭಾವಿಕವಾಗಿ ನಡೆಯುವಂತೆಯೇ ಹೇಳುತ್ತ ಹೋಗಿರುವರು. ಜೀವನನು ತನ್ನ ಎಂ. ಎ. ಪರೀಕ್ಷೆಯನ್ನು ಮುಗಿಸಿಕೊಂಡು, ನೌಕರಿ ಹುಡುಕಿಕೊಳ್ಳಲು ಮುಂಬಯಿಯಲ್ಲಿದ್ದ ತನ್ನ ಚಿಕ್ಕಪ್ಪನ ಮನೆಗೆ ಹೊರಟಿದ್ದಾಗ, ಗಾಡಿಯಲ್ಲಿ ರೋಮಾಳ ದರ್ಶನವಾಯಿತು. ಆಕೆ ಬಂಗಾಲೀ ತರುಣಿ. ಬಂಗಾಲೀ ಯುವತಿಯರು ಜೀವನನಿಗೆ ಹೆಚ್ಚು ಪ್ರಿಯರಾಗಿದ್ದರು. ಆತ ಕಾಲೇಜಿನಲ್ಲಿ ಓದುತ್ತಿದ್ದಾಗ ಅವನ ಸಹಪಾಠಿನಿಯರಾಗಿದ್ದ ಹುಡುಗಿಯರಿಗಿಂತ ಈ ರೋಮಾ ಹೆಚ್ಚು ಸುಂದರಿಯಾಗಿ ಕಂಡಳು. ಅಂತೆಯೇ ಅವಳನ್ನು ಮಾತಾಡಿಸಿ ಸ್ನೇಹ ಬೆಳೆಸಬೇಕೆಂದು ಯೋಚಿಸಿದ. ಆದರೆ ಧೈರ್ಯ ಸಾಲದಾಯಿತು. ಅಷ್ಟರಲ್ಲಿ ರೋಮಾಳೇ ಜೀವನನನ್ನು ಕುರಿತು "ತಾವು ಎಲ್ಲಿಗೆ ಹೋಗುತ್ತಿರುವಿರಿ?" ಎಂದಳು. ಆಕೆಯು ಮುಂಬಯಿ ತನಕ ಬರುವಳೆಂದೂ, ಆದರೆ ಆಕೆ ತಾನು ಇಳಿಯುವ ಸ್ಥಳವನ್ನು ನಿರ್ಧರಿಸಿಲ್ಲವೆಂದೂ ತಿಳಿದುಬಂತು. ಆಗಲೇ ಜೀವನನಿಗೆ ಅವಳ ಬಗ್ಗೆ ಕುತೂಹಲ ಹುಟ್ಟಿತು. ಮುಂದೆ ರೋಮಾ ತನ್ನ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಳಿಸುತ್ತ, ಕಂಬನಿ ಸುರಿಸುತ್ತ ಕುಳಿತ ಮೇಲಂತೂ, ಜೀವನನಿಗೆ ಆಕೆಯ ವೃತ್ತಾಂತವನ್ನು ಕೇಳಿ ತಿಳಿಯಬೇಕೆಂಬ ಹಂಬಲವು ಹೆಚ್ಚಾಯಿತು. ಜೀವನನಿಗೆ ಅವಳೊಡನೆ ಯಾವ ರೀತಿ ಮಾತನಾಡಬೇಕೆಂಬ ಚಿಂತೆ! ಅವಳಿಗೆ ತನ್ನ ಹೃದಯದಲ್ಲಿ ಆಗಲೇ ಒಂದು ಸ್ಥಾನ ಕಲ್ಪಿಸಿದ್ದ. ಜೀವನ ಬಲವಂತ ಮಾಡಲು ರೋಮಾ ತನ್ನ ಕಥೆಯನ್ನು ಹೇಳತೊಡಗಿದಳು:

ಚಿಕ್ಕಂದಿನಲ್ಲಿಯೇ ರೋಮಾಳ ತಂದೆ-ತಾಯಿಗಳು ತೀರಿದರು. ಆಕೆ ತನ್ನ ಮಾವನ ಮನೆಯಲ್ಲಿಯೇ ಬೆಳೆದು ತರುಣಿಯಾದಳು. ರೋಮಾಳನ್ನು ಒಬ್ಬ ಶ್ರೀಮಂತ ಮುದುಕನಿಗೆ ಕೊಟ್ಟು ಅವನಿಂದ ಹೇರಳವಾಗಿ ಹಣ ಪಡೆಯಬೇಕೆಂದು ಮಾವನ ಆಸೆ! ಆದ್ದರಿಂದ ರೋಮಾ ಇದಕ್ಕೆ ಒಪ್ಪದೆ, ಒಬ್ಬ ಗೆಳತಿಯ ಸಹಾಯದಿಂದ ಮನೆ ಬಿಟ್ಟು ಓಡಿಬಂದಳು. ಜೊತೆಗೆ ತನ್ನ ಹಾಗೂ ತನ್ನ ತಾಯಿಯ ಬೆಲೆಬಾಳುವ ಒಡವೆಗಳನ್ನೆಲ್ಲ ಪೆಟ್ಟಿಗೆಗಳಲ್ಲಿ ಹಾಕಿಕೊಂಡು ತಂದಿದ್ದಳು. ಜೀವನನು "ಈಗ ತಾವು ಏನು ಮಾಡುವಿರಿ?" ಎಂದು ಕೇಳಿದಾಗ "ಮುಂಬಯಿಯಲ್ಲಿ ನನ್ನ ಒಬ್ಬ ಗೆಳತಿಯಿರುವಳು, ಅವಳ ಸಹಾಯದಿಂದ ಒಂದು ಕೆಲಸವನ್ನು ದೊರಕಿಸುವೆನು. ನಡುವೆ ಮಥುರೆಯಲ್ಲಿ ಇಳಿದು ಮುಂದೆ ಹೋಗಬೇಕಾಗಿದೆ" ಎಂದಳು.

ಆಗಲೇ ಜೀವನನು ರೋಮಾ ತನ್ನ ಜೀವನದ ಸಂಗಾತಿಯಾಗುವುದನ್ನು ನೆನೆಯುತ್ತಿದ್ದ. ಆಕಸ್ಮಾತ್ತಾಗಿ ಒರ್ವ ಬಂಗಾಲೀ ತರುಣಿಯೊಡನೆ ತನಗೆ ಪ್ರೇಮವಾಯಿತೆಂದು ಬಗೆದ. ಮತ್ತು ಇಂತಹ ಅಸಹಾಯ ಪರಿಸ್ಥಿತಿಯಲ್ಲಿದ್ದ ಇವಳಿಗೆ ಸಹಾಯ ಮಾಡಿ, ತನ್ನ ಅರ್ಧಾಂಗಿಯನ್ನಾಗಿ ಮಾಡಿಕೊಳ್ಳಬೇಕೆಂದು ಹವಣಿಸಿದ. ಮನದಲ್ಲಿಯೇ "ರೋಮಾ, ರೋಮಾ" ಎಂದು ಹಲವು ಬಾರಿ ಅಂದುಕೊಂಡ. ತನ್ನ ಬೆರಳಿನಲ್ಲಿಯ ಮುತ್ತಿನುಂಗುರವನ್ನು ರೋಮಾಳ ಬೆರಳಿಗೆ ತೊಡಿಸಬೇಕೆಂದು ಯೋಚಿಸಿದ. ಮತ್ತು ತಂದೆಯ ಮುಂದೆ ರೋಮಾ ಬಂಗಾಲೀ ಹುಡುಗಿಯೆಂಬ ಸುದ್ದಿಯನ್ನೇ ಎತ್ತದೆ, ಲಗ್ನವಾಗುವುದೆಂದು ಎಂದುಕೊಂಡ. ಆಗಲೇ ರೋಮಾಳು ಸಹ ಆತನತ್ತ ಒಲಿಯುತ್ತಿರುವಳೆಂದು ಜೀವನನಿಗೆ ಎನಿಸತೊಡಗಿತ್ತು. ತನ್ನ ಥರ್ಮಾಸ್ ಫ್ಲಾಸ್ಕಿನಲ್ಲಿದ್ದ ಚಹವನ್ನು ಆಕೆಗಷ್ಟು ಕೊಟ್ಟು, ತಾನೂ ಕುಡಿದ. ನಿಲ್ದಾಣದಲ್ಲಿ ತಾನೇ ಇಬ್ಬರಿಗೆಂದು ಎರಡು ಊಟಗಳನ್ನು ತರಿಸಿದ. ರೋಮಾ ಮೊದಲು ಸಂಕೋಚಪಟ್ಟುಕೊಂಡಂತೆ ಮಾಡಿದರೂ, ಜೀವನನ ಆಗ್ರಹದ ಮೇರೆಗೆ ಚೆನ್ನಾಗಿ ಊಟ ಮಾಡತೊಡಗಿದಳು. ಊಟವನ್ನು ಮುಗಿಸಿ ಕೈ ತೊಳೆಯಲೆಂದು ಸ್ನಾನಗೃಹಕ್ಕೆ ಹೋಗುವಾಗ ಮತ್ತು ತಿರುಗಿ ಬರುವಾಗ, ಆಕೆಯ ಅಂಗಾಂಗಗಳ ಸೌಂದರ್ಯವನ್ನು ಕಂಡು ಜೀವನನು ಒಳಗೊಳಗೇ ಹಿಗ್ಗಿದ. ಅದೃಷ್ಟವಶಾತ್ ನಿಲ್ದಾಣ ಸ್ಟೇಶನಿನಲ್ಲಿ ಅವರ ಡಬ್ಬಿಗೆ ಯಾರೂ ಬರಲಿಲ್ಲ. ರೋಮಾಳ ಮೋಹಕ್ಕೆ ಬಲಿಯಾಗುವುದಕ್ಕೆ ಇದೊಂದು ಅನುಕೂಲವೇ ಆಯಿತು. ಅನೇಕ ಬಾರಿ ಅವರಿಬ್ಬರ ದೃಷ್ಟಿಗಳು ಒಂದನ್ನೊಂದು ಎದುರಿಸಿದವು. ಆಕೆ ತನ್ನ ಬಗೆಗೆ ಒಲವಿಟ್ಟಳೆಂದು ಭಾವಿಸಿ, ತನ್ನ ಮನೋರಥವನ್ನು ತಿಳಿಸಿಬಿಡಲೇ—ಎಂದು ಯೋಚಿಸತೊಡಗಿದ. ಕೊನೆಗೆ ಧೈರ್ಯ ತಂದುಕೊಂಡು, "ನಾನು ನಿಮಗೆ ಸಹಾಯ ನೀಡಬಲ್ಲೆ. ಜೀವನದ ಕೊನೆಯವರೆಗೆ......ಬಹಳ ಕಾಲದ ವರೆಗೆ" ಎಂದ. ರೋಮಾ ಮರುಮಾತನಾಡದೆ ಒಪ್ಪಿ, ತನ್ನ ಎರಡೂ ಕೈಗಳನ್ನು ಆತನತ್ತ ಚಾಚಿದಳು. ಜೀವನ ತನ್ನ ಮುತ್ತಿನುಂಗುರವನ್ನು ಆಕೆಯ ಬೆರಳಲ್ಲಿಟ್ಟ. ಇಬ್ಬರೂ ಮುಂಬಯಿಗೆ ಹೋಗಿ ಮುಂದಿನ ಯೋಚನೆಯನ್ನು ಮಾಡೋಣವೆಂದು ರೋಮಾಳಿಗೆ ಹೇಳಿದ. ತನಗೆ ಮಾತ್ರ ಮಥುರೆಯಲ್ಲಿಳಿಯಬೇಕಾಗುವುದೆಂದು ರೋಮಾ ಆತನಿಗೆ ನೆನಪು ಮಾಡಿಕೊಟ್ಟಳು. ಮಥುರೆಯಲ್ಲಿ ಇಬ್ಬರೂ ಇಳಿದು, ರಾತ್ರಿಯಾದುದರಿಂದ ವೇಟಿಂಗ್ ರೂಮಿನಲ್ಲಿಯೇ ತಂಗಿದರು.

ಬೆಳಗಾದಾಗ ಜೀವನ ರೋಮಾಳ ಹಾಸಿಗೆ ಬರಿದಾದುದನ್ನು ಕಂಡು ಬೆರಗಾದ. ತನ್ನ ಚಿಕ್ಕಪ್ಪನ ಮನೆಗೆ ಹೋಗಿರಬಹುದೆಂದು

ಸಮಾಧಾನ ತಂದುಕೊಂಡ. ತನ್ನ ಹಾಗೂ ರೋಮಾಳ ಎರಡೂ ಪೆಟ್ಟಿಗೆಗಳನ್ನು ಹೊರಗೆ ತಂದಿಟ್ಟು ಆಕೆಗಾಗಿ ಕಾಯತೊಡಗಿದ. ಹತ್ತು ಗಂಟೆಯಾಗುತ್ತ ಬಂದರೂ ರೋಮಾಳ ಸುಳಿವೇ ಇಲ್ಲ. ಅಲ್ಲಿಯೇ ಕುಳಿತಿದ್ದ ಒಬ್ಬ ಪೋಲೀಸ ಇನ್ಸ್ಪೆಕ್ಟರನ ನಾಯಿಯು ಜೀವನನ ಸಾಮಾನುಗಳನ್ನು ಮೂಸಿ ನೋಡಿ ನೋಡಿ ಹೋಗುತ್ತಿತ್ತು. ಕೊನೆಗೆ ಆ ಇನ್ಸ್ಪೆಕ್ಟರನು ರೋಮಾಳ ಪೆಟ್ಟಿಗೆಗಳನ್ನು ತೋರಿಸಿ "ಇವುಗಳಲ್ಲಿ ಏನಿವೆ?" ಎಂದನು. ಜೀವನ ಸಿಟ್ಟಿನಿಂದ "ಇವುಗಳಲ್ಲಿ ನನ್ನ ಹೆಂಡತಿಯ ಬಟ್ಟೆಗಳಿವೆ" ಎಂದ. ಇನ್ಸ್ಪೆಕ್ಟರನು ಬಲುಮೆಯಿಂದ ಆ ಪೆಟ್ಟಿಗೆಗಳನ್ನು ತೆರೆಯಿಸಿ ನೋಡಿಯೇ ಬಿಟ್ಟ. ಆ ಪೆಟ್ಟಿಗೆಗಳ ಮುಚ್ಚಳವನ್ನು ತೆಗೆಯುತ್ತಲೇ ದುರ್ಗಂಧವು ಹೊರಸೂಸಿತು. ಅವುಗಳಲ್ಲಿ ಒಬ್ಬ ಮನುಷ್ಯನ ಹೆಣದ ತುಂಡುಗಳಿದ್ದವು! "ಇವೇ ತಾನೇ ನಿನ್ನ ಹೆಂಡತಿಯ ಬಟ್ಟೆಗಳು?" ಎಂದು ಇನ್ಸ್ಪೆಕ್ಟರನು ಕೂಗಿದ. ಕೂಡಲೇ ಜೀವನನು "ಇವು ನನ್ನ ಹೆಂಡತಿಯ ಬಟ್ಟೆಗಳಲ್ಲ" ಎಂಬ ಮಾತನ್ನಾಡಿ ಅಪಸ್ಮಾರಕ್ಕೀಡಾದ. ಕೊನೆಗೆ ಇನ್ಸ್ಪೆಕ್ಟರನು ಆತನನ್ನು ಕರೆದುಕೊಂಡು ಹೋದನೆಂದು ಬೇರೆ ಹೇಳಬೇಕಿಲ್ಲ.

ಇಂತು ಜೀವನನ ದಾರುಣವಾದ ಕತೆಯು ಕೊನೆಗೊಳ್ಳುವುದು.

"ರೋಮಾ" ಕತೆಯ ಘಟನೆಯು ಸರ್ವಸಾಮಾನ್ಯವಾದದ್ದು. ರೋಮಾಳಂತಹ ವಂಚಕರೂ ಜೀವನನಂತಹ ಮುಗ್ಧಹೃದಯಿಗಳೂ ನಮ್ಮ ಸಮಾಜದಲ್ಲಿ ದುರ್ಲಭರೇನೂ ಅಲ್ಲ. ಇನ್ನು ಇಂತಹ ಘಟನೆಗಳ ಬಗ್ಗೆ ನ್ಯಾಯಾನ್ಯಾಯ ಕುರಿತು ವಿಚಾರ ಮಾಡಿದಲ್ಲಿ, ನಗಬೇಕೋ ಅಳಬೇಕೋ ಎಂಬುದೇ ತಿಳಿಯದಂತಾಗುವುದು. ವಂಚಕರ ವಿಷಯವಾಗಿ ತಾತ್ಸಾರವೂ ವಂಚಿತರ ವಿಷಯವಾಗಿ ಸಹಾನುಭೂತಿಯೂ ಎನಿಸುವುದು ಸಾಮಾನ್ಯ. ಆದರೆ ಇಂತಹ ಘಟನೆಗಳ ಬಗ್ಗೆ ಇನ್ನೂ ಹೆಚ್ಚು ಆಳವಾಗಿ ವಿಚಾರ ಮಾಡಿದರೆ, ವಂಚಕರ ವಿಷಯವಾಗಿ ತಾತ್ಸಾರದ ಬದಲು ಅವರ ಚಾಣಾಕ್ಷತೆಯ ಬಗ್ಗೆ ಆಶ್ಚರ್ಯವೂ, ವಂಚಿತರ ಬಗ್ಗೆ ಸಹಾನುಭೂತಿಯ ಬದಲು ಅವರ ಮುಗ್ಧತೆಯ ವಿಷಯವಾಗಿ ಪ್ರತೀಕಾರವೂ ಉಂಟಾಗದಿರದು. ಇಷ್ಟೆಂದ ಮಾತ್ರಕ್ಕೆ ಸಮಾಜಘಾತಕರನ್ನು ಪ್ರೋತ್ಸಾಹಿಸುವಂತಾಯಿತು ಎಂದೇನೂ ಅಲ್ಲ. ಇದು ಏನೇ ಇರಲಿ, ನಮ್ಮ ಪ್ರತಿಭಟನೆಯು ವಂಚಕರ ವಿರುದ್ಧವಾಗಿಯೇ ಹೊರತು ವಂಚಿತರ ವಿರುದ್ಧ ಇರಲಾರದು, ಇರಲೂ ಬಾರದು.

ಇನ್ನು ಇಂತಹ ಘಟನೆಗಳು ಜರುಗಿದಾಗ, ಯಾರ ಬಗ್ಗೆ ದೋಷವೆಣಿಸಬೇಕೆಂಬುದು ಒಂದು ಗಹನವಾದ ಪ್ರಶ್ನೆ. ನಮ್ಮ ಕಥಾನಾಯಕ ಜೀವನನ ಮನೋದೌರ್ಬಲ್ಯವೇ ಆತನು ಕೊನೆಗೆ ಎದುರಿಸಬೇಕಾಗಿ ಬಂದ ಗಂಡಾಂತರಕ್ಕೆ ಕಾರಣವಾಯಿತೆಂಬುದಕ್ಕೆ ಸಂದೇಹವೇ ಇಲ್ಲ. ಆದರೆ ಆತನಿಗೆ 'Character is Destiny' ಎಂಬ ಉಕ್ತಿಯನ್ನು ಅನ್ವಯಿಸುವುದು ಅಷ್ಟೊಂದು ಸಮಂಜಸವಾಗಲಾರದು; ಯಾಕೆಂದರೆ ಇಂತಹ ಮನೋದೌರ್ಬಲ್ಯವು ಆತನಂತಹ ಎಳೆಯ ತರುಣರಿಗೆ ಅಸಾಮಾನ್ಯವಾದುದೇನೂ ಅಲ್ಲ. ಎಂತಹ ಪ್ರವೃತ್ತಿಗಳಿಗೂ ಹೆಣ್ಣಿನ ಮೋಹವು ಬಿಟ್ಟಿಲ್ಲವೆಂದಮೇಲೆ, ಜೀವನನಂತಹ ಮಾನವಪ್ರಾಣಿ ಯಾವ ಗಿಡದ ತೊಪ್ಪಲು? "The Poet, the Lunatic and the Lover are of the same kind" ಎಂಬ ಉಕ್ತಿಯಂತೆ, ಜೀವನನು ರೋಮಾಳ ಮೋಹಜಾಲಕ್ಕೊಳಗಾಗಿ ಹುಚ್ಚನಂತೆ ವರ್ತಿಸಿದಲ್ಲಿ ಆಶ್ಚರ್ಯವೇನೂ ಇಲ್ಲ. ತಾರುಣ್ಯವು ತರುಣರಿಂದ ಏನೇನು ಮಾಡಿಸುವುದೆಂಬುದನ್ನು ಹೇಳಲಸಾಧ್ಯ. ಅದು ಸಾರಾಸಾರ ವಿಚಾರಶಕ್ತಿಯನ್ನೇ ತೆಗೆದುಹಾಕುವುದು 'ಕೃತ್ಯಾಕೃತ್ಯವಿಚಾರಣಾಸು ವಿಮುಖಂ (ತಾರುಣ್ಯಮ್) ಕೋ ವಾ ನ ವೇತ್ತಿ ಕ್ಷಿತೌ' ಎಂದು ನಿಪುಣ ಕವಿ ಹರ್ಷನು ಸಾರಿ ಹೇಳಿರುವನು. ಅಂತಹ ತಾರುಣ್ಯದ ಜಾಲಕ್ಕೆ ಒಳಗಾಗಿ, ಸದಸದ್ವಿವೇಕಶೂನ್ಯನಾಗಿ, ಒರ್ವ ಸ್ತ್ರೀಯಿಂದ ವಂಚಿತನಾದ ಒಬ್ಬ ಆಧುನಿಕ ತರುಣನ ದಾರುಣ ಕಥೆಯನ್ನೇ ಲೇಖಕರು ಇಲ್ಲಿ ಹೇಳಹೊರಟಿರುವರು. ಪ್ರೇಮವೆಂಬುದನ್ನೇ ಅರಿಯದ ಆ ತರುಣ, ಮೊದಲ ತುತ್ತಿಗೇ ಕಲ್ಲು ಬಂದಹಾಗೆ, ಪ್ರೇಮವ್ಯಾಪಾರದ ಪ್ರಥಮ ಮೆಟ್ಟಿಲಿನಲ್ಲಿಯೇ ಮುಗ್ಗರಿಸಿ ಬಿದ್ದು ಪಾಠ ಕಲಿತ ಆ ಘಟನೆಯು, ಆತನಿಗೆ ಸಾಯುವ ವರೆಗೂ ನೆನಪಿಡುವಂತಾಗಿ, ಸ್ತ್ರೀ ವ್ಯಾಮೋಹದಿಂದ ಎಚ್ಚರಿರುವ ಹಾಗೆ ಮಾಡಿತು. ಇದು ಆತನಿಗೆ ಒಳ್ಳೆಯದೇ ಆಯಿತಲ್ಲವೇ?

ಸಣ್ಣ ಕತೆಯ ಪೂರ್ಣತೆಯ ವಿಷಯವಾಗಿ ವಿಚಾರಿಸಬೇಕಾದ ಎಲ್ಲ ಗುಣಗಳೂ "ರೋಮಾ" ಕಥೆಯಲ್ಲಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪ್ರಖ್ಯಾತ ಆಂಗ್ಲ ಲೇಖಕನಾದ Sir Hugh Walpole ನು ಸಣ್ಣಕತೆಯೆಂದರೇನು ಎಂಬುದನ್ನು ಹೀಗೆ ಹೇಳಿದ್ದಾನೆ: "A short story should be story, a record of things happening, full of incidents and accidents, swift movement, unexpected development" ಎಂದ ಮೇಲೆ "ರೋಮಾ" ಕತೆಯಲ್ಲಿ ಮೇಲೆ ಹೇಳಿದ ಎಲ್ಲ ಗುಣಗಳೂ ಇವೆ ಎಂಬುದು ನಿಸ್ಸಂದೇಹ. "A short story writer reveals a character in a flash" ಎಂಬ ಉಕ್ತಿಯನ್ನು ಇಲ್ಲಿ ರೋಮಾಳ ಪಾತ್ರಕ್ಕೆ ಅನ್ವಯಿಸಬಹುದು. ಕಥೆಯಲ್ಲಿಯ ಘಟನೆಗಳು ಯಾವ ಅಡೆತಡೆಗಳಿಲ್ಲದೇ ಸಾಗಿ ಓದುಗರ ಲಕ್ಷ್ಯವನ್ನು ಸೆಳೆಯುವುವು. ಮುಂದೇನಾಗುವುದೆಂಬ ಉತ್ಸುಕತೆಯು ಮನವನ್ನು ಆವರಿಸುವುದು. ಕಥೆಯಲ್ಲಿಯ ಒಂದು ಮುಖ್ಯ ವ್ಯಕ್ತಿಯ ಸ್ವಭಾವಪರಿಚಯವನ್ನು ಒಮ್ಮೆಲೇ ಮಾಡಿಕೊಡುವುದು ಚಿಕ್ಕಕಥೆಯ ಲೇಖಕರ ಆದ್ಯಕರ್ತವ್ಯ. ಈ ಕರ್ತವ್ಯನಿರ್ವಹಣೆಯು ಇಲ್ಲಿ ಚೆನ್ನಾಗಿ ಆಗಿದೆ. ರೋಮಾಳ ಪಾತ್ರ ಪರಿಚಯವು ವಾಚಕರಿಗೆ ಕಥೆಯ ಕೊನೆಯ ಸಾಲುಗಳಲ್ಲಿ ಆಗುವುದರಿಂದ, ಕಥೆಯು ಹೆಚ್ಚು ಕುತೂಹಲಕಾರಿಯಾಗಿದೆ.

ಕಥೆಯ Construction ಎಂದರೆ ರಚನೆ ತುಂಬ ಶ್ಲಾಘನೀಯವೇ ಸರಿ. ಕಥೆಯನ್ನು ಓದುತ್ತ ಸಾಗಿದಂತೆ ನಮ್ಮ ಕುತೂಹಲವು ಕೆರಳುತ್ತ ಸಾಗುವುದು. ಹೀಗೆ ಮುಂದೆ ಜೀವನನು ರೋಮಾಳಿಂದ ವಂಚಿತನಾಗುವನೆಂಬುದರ ಸುಳಿವು ಎಳ್ಳಷ್ಟೂ ನಮ್ಮ ಮನದಲ್ಲಿ ಮೂಡುವುದಿಲ್ಲ. ಇಲ್ಲಿಯೇ ಲೇಖಕರ ಲೇಖನಿಯ ಜಾಣಾಕ್ಷತನವು ಹುದುಗಿದೆ. ರೋಮಾ ಯಾವನೋ ಒಬ್ಬನ ಕೊಲೆಗೈದು ಆತನ

ಹಣದ ತುಂಡುಗಳನ್ನು ಪೆಟ್ಟಿಗೆಗಳಲ್ಲಿಟ್ಟುಕೊಂಡು ಓಡಿ ಬಂದು, ಗಾಡಿಯನ್ನು ಹತ್ತುವಾಗಿನ ಆಕೆಯ ನಡತೆಗೂ, ಆಕೆ ಹೇಳಿದ ತನ್ನ ಸುಳ್ಳು ಕಥೆಯ ಪ್ರಕಾರ ಮಾವನ ಮನೆಯಿಂದ ಓಡಿಬಂದು ಗಾಡಿಯನ್ನು ಹತ್ತುವಾಗಿನ ಆಕೆಯ ನಡತೆಗೂ ಎಷ್ಟೊಂದು ಹೋಲಿಕೆ! ಆಕೆಯ ಆಗಿನ ನಡತೆ ಅವಳ ಕತೆಯನ್ನು ಕೇಳಿದ ಜೀವನನಿಗೆ ಸಹಜವಾಗಿಯೆ ತೋರಿತು. ರೋಮಾಳೊಡನೆ ಪ್ರೇಮಸಂಬಂಧವನ್ನು ಬೆಳೆಸಬೇಕೆಂದು ಎನಿಸಿದ ಜೀವನನಿಗೆ ತಮ್ಮ ಡಬ್ಬಿಗೆ ಯಾರೂ ಬರಬಾರದೆಂಬ ಬಯಕೆ. ಹಾಗೆಯೇ ಈಗಾಗಲೇ ಜೀವನನನ್ನು ತನ್ನ ಬಲೆಯಲ್ಲಿ ಹಾಕಿಕೊಂಡ ರೋಮಾಳಿಗೆ, ಆತನನ್ನೇ ಕೊನೆಗೆ ಗಂಡಾಂತರದಲ್ಲಿ ಸಿಕ್ಕಿಸಿ ಪಾರಾಗಬೇಕಾಗಿದ್ದುದರಿಂದ, ಅವಳಿಗೂ ತಮ್ಮ ಕಂಪಾರ್ಟ್‌ಮೆಂಟಿನಲ್ಲಿ ಬೇರೆ ಯಾರೂ ಬರಬಾರದೆಂಬ ಹೆಬ್ಬಯಕೆ!

ಕಥೆಯಲ್ಲಿಯ ಪಾತ್ರಪೋಷಣೆಯು ಅತ್ಯುತ್ತಮವಾಗಿದೆ. ಈ ವಿಷಯದಲ್ಲಿ ಯಾವ ದೋಷವನ್ನೂ ಎಣಿಸಲು ಬರುವಂತಿಲ್ಲ. ಮುಖ್ಯ ಪಾತ್ರಗಳಾದ ರೋಮಾ ಹಾಗೂ ಜೀವನರ ಪಾತ್ರಪೋಷಣೆಯು ಸ್ವಾಭಾವಿಕವಾಗಿ ಪರಿಪೂರ್ಣವಾಗಿದೆ. ರೋಮಾಳು ಗಾಡಿಯಲ್ಲಿ ಜೀವನನೊಡನೆ ವರ್ತಿಸುವ ರೀತಿಯು ಬಹಳ ವಾಸ್ತವವಾಗಿದೆ. ಆಕೆಯ ಪ್ರತಿಯೊಂದು ಮಾತೂ ಕೃತಿಯೂ ಅವಳ ಬೆಂದಹೃದಯದಿಂದ ಬರುತ್ತಿವೆಯೆಂದು ಜೀವನ ಭಾವಿಸಿದನೇ ಹೊರತು, ಅವು ತಾನು ಕೊನೆಗೆ ಬೀಳಲಿರುವ ಬಲೆಯ ಒಂದೊಂದು ಎಳೆ ಮಾತ್ರವೆಂದು ಪಾಪ ಆ ಮುಗ್ಧತರುಣ ಹೇಗೆ ತಾನೆ ಭಾವಿಸಿಯಾನು?

ಸಂಭಾಷಣೆಯು ಆಯಾ ಸನ್ನಿವೇಶಗಳಿಗೆ ಒಪ್ಪುವಂತಾಗಿ ಕಥೆಯ ಕಳೆಯನ್ನು ಹೆಚ್ಚಿಸಿದೆ. ರೋಮಾಳ ಮಾತುಗಳು ಆಕೆಯ ಕಾರ್ಯಸಾಧನೆಗೆ ಸಹಾಯಕಾರಿಯಾಗಿವೆಯಲ್ಲದೆ, ತನ್ನ ಬಗ್ಗೆ ಜೀವನನಲ್ಲಿ ಸಹಾನುಭೂತಿಯನ್ನು ಹುಟ್ಟಿಸಲು ಸಾಧನೆಯೂ ಆಗಿ ಪರಿಣಮಿಸಿವೆ. ಕೆಲವೊಂದು ಕಡೆಗಂತೂ ಮಾತುಗಳು ಅರ್ಥಗರ್ಭಿತವಾಗಿವೆ, ಮತ್ತು ಮೇರೆ ಮೀರದೆ ತೂಕಬದ್ಧವಾಗಿವೆ. ಉದಾಹರಣೆಗಾಗಿ ಜೀವನನು ರೋಮಾಳನ್ನು, "ನೀವು ಎಲ್ಲಿಗೆ ಹೋಗುತ್ತೀರಿ?" ಎಂದು ಪ್ರಶ್ನಿಸಿದಾಗ, ಆವಳು "ನಾನು.........ನಾನು......... ನನ್ನಲ್ಲಿ ಮುಂಬಯಿತನಕ ಟಿಕೇಟಿದೆ. ಆದರೆ........" ಎಂದೆನ್ನುತ್ತ ತಡೆದಳು. ಆಕೆಯ ಈ ಅಸ್ಪಷ್ಟವಾದ ಮಾತಿನಿಂದ ಜೀವನನಲ್ಲಿ ಆಕೆಯ ಬಗ್ಗೆ ಇನ್ನಷ್ಟು ಕುತೂಹಲವು ಹುಟ್ಟಿ, ಅವಳೊಡನೆ ಹೆಚ್ಚಾಗಿ ಮಾತನಾಡುವಂತಾಯಿತು. ಅಲ್ಲದೆ ಆಕೆಗೆ ತನ್ನ ಕಾರ್ಯಸಾಧನೆಗಾಗಿ ನಡುವೆ ಮಧುರೆಯಲ್ಲಿ ಇಳಿಯುವ ಪೂರ್ವಸೂಚನೆಯೂ ಆದಂತಾಯಿತು. ಹೀಗೆ ಕೆಲವು ಮಾತುಗಳು ಅರ್ಥದಲ್ಲಿ ದ್ವಿಮುಖವಾಗಿವೆ.

ಅನುವಾದಕರ ಶೈಲಿಯು ಸರಳವಾಗಿಯೂ ವಾಸ್ತವಿಕವಾಗಿಯೂ ಕಥೆಗೆ ತುಂಬ ತಕ್ಕುದಾಗಿದೆ. ಸಂಭಾಷಣೆಗಳು ಲಘುವಾಗಿ ಕಾಣಿಸಿಕೊಂಡರೂ ತುಂಬ ಅರ್ಥಗರ್ಭಿತವಾಗಿವೆ, ಮತ್ತು ಪ್ರಭಾವಯುಕ್ತವಾಗಿವೆ. ಕಥನಕೌಶಲ ಮತ್ತು ರಚನಾಕೌಶಲ್ಯಗಳು ಉತ್ತಮವಾಗಿವೆ. ಕಥೆಯ ವಸ್ತು (Plot) ವಾಸ್ತವಿಕ ಪ್ರಪಂಚದಿಂದಲೇ ಬಂದುದರಿಂದ ಹೆಚ್ಚು ವಿಚಾರಬೋಧಕವಾಗಿವೆ. ಕಥೆಯಲ್ಲಿಯ ಗೌಪ್ಯವು ಕೊನೆಗೆ ಸ್ಫೋಟವಾಗುವುದರಿಂದ ಕಥಾರಚನೆಯ ಶ್ರೇಷ್ಠತೆ ಇನ್ನಷ್ಟು ಹೆಚ್ಚಿ, ಹಾಲಿಗೆ ಸಕ್ಕರೆಯನ್ನು ಬೆರೆಸಿದಂತಾಗಿದೆ. ಅಲ್ಲಲ್ಲಿ ಅರ್ಥಾಂತರನ್ಯಾಸಗಳೂ ಕಥೆಗೆ ಸಂಬಂಧಿಸಿದ ಮಾತುಗಳೂ ಕಾಣಿಸಿಕೊಂಡು ಕಥೆಯ ಸೌಂದರ್ಯವನ್ನು ಹೆಚ್ಚಿಸಿವೆ. ಉದಾಹರಣೆಗಾಗಿ ಜೀವನನು ರೋಮಾಳನ್ನು ಹೇಗಾದರೂ ಮಾಡಿ ಮಾತಾಡಿಸಬೇಕೆಂದು ಯೋಚಿಸುತ್ತಿರುವಾಗ ಲೇಖಕರು "ಹೀಗೆ ತಾನೆ ಪ್ರೇಮದ ಕತೆ ಪ್ರಾರಂಭವಾಗುವುದು!" ಎನ್ನುವರು. ಇದು ಅವರ ಸಮಗ್ರ ದೃಷ್ಟಿವೈಶಾಲ್ಯದ ಅಳತೆಗೋಲಾಗಿದೆ. ಲೇಖಕರು ಅಲ್ಲಲ್ಲಿ ನಗೆಯ ಲಹರಿಗಳಿಗೂ ಎಡೆಕೊಟ್ಟಿದ್ದಾರೆ. ಒಮ್ಮೆ ಕತೆಯನ್ನು ಪೂರ್ತಿಯಾಗಿ ಓದಿ ಮುಗಿಸಿದ ಮೇಲೆ "ಅವನ ಜೀವನದಲ್ಲಿ ರೋಮಾಳೊಡನೆ ಸಂಧಿಸುವುದಕ್ಕಾಗಿಯೇ ಪರಮಾತ್ಮನು ಈ ಮುಂಬಯಿ ಪ್ರವಾಸದ ಇಚ್ಛೆಯನ್ನು ಮಾಡಿಸಿದಂತಿತ್ತು.' ಎಂಬ ಮಾತನ್ನು ಓದಿದರೆ, ಜೀವನನ ದುರಂತದ ಬಗ್ಗೆ ಅನುಕಂಪನೆಯೂ ಜೊತೆಗೆ ನಗೆಯೂ ಬಾರದಿರದು.

"ಜಗತ್ತಿನಲ್ಲಿ ಇತರರೊಡನೆ ವ್ಯವಹರಿಸುವಾಗ ತುಂಬ ಎಚ್ಚರಿಕೆಯಿಂದ ಇರಬೇಕು" ಎಂಬ ಮಾತನ್ನೇ ಲೇಖಕರು ಈ ಕತೆಯಲ್ಲಿ ಸಾಧಿಸಿದ್ದಾರೆ. ಅದರಂತೆ "ಹೆಣ್ಣು, ಮಣ್ಣು ಹಾಗೂ ಹೊನ್ನುಗಳನ್ನು ಹೆಚ್ಚಾಗಿ ನಂಬಬೇಡ" ಎಂಬ ಉಕ್ತಿಯನ್ನೂ ಸಾಧಿಸಿದ್ದಾರೆ.

ಒಟ್ಟಿನಮೇಲೆ ಕಥೆಯು ವಿಚಾರಪ್ರಬೋಧಕವೂ ಸುಂದರವೂ ಮನರಂಜನೆಯನ್ನು ನೀಡುವಂತಹದೂ ಆಗಿದೆ. ಇಂತಹ ಕೃತಿಗಳು ಇನ್ನೂ ಹೆಚ್ಚಾಗಿ ಬರಲೆಂದು ಹಾರೈಸುತ್ತೇನೆ.

---

# ಮುತ್ತಿನ ಹಾರ

## ( ಕಥೆಯ ವಿಮರ್ಶೆ )

### ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

"ಆಕರ್ಷಕ ರೂಪಸಂಪನ್ನೆ ಕ್ಯಾಥರೀನ್—ಕಮ್ಯುನಿಸ್ಟ್ ಹಿಡನ್ ಹೆಡ್‌ಕ್ವಾರ್ಟರ್ಸ್‌ಗೆ ಸರಕಾರೀ ಕಚೇರಿಯ ಗೌಪ್ಯವನ್ನರುಹುವ ಗೂಢಚಾರಿಣಿ. ಅಂಟಿ ಜಪಾನಿಜ್ ಸಂಸ್ಥೆಯ ಕೆಲಸ ಮುಗಿದಾಕ್ಷಣ ಚೀನೀ ಗುಪ್ತಪಡೆಯ ಮುಂದಾಳು ಪೆಂಗ್‌ಯಾನ್, ಆಕೆಯನ್ನು 'ಪ್ರೇಮ'ದ ಸಮಸ್ಯೆಯ ನಿಮಿತ್ತ ದೂರವಾಗಿಸಿದ್ದ. ಇಂದು ಬ್ರಿಟಿಷ್ ಸೈನ್ಯಾಧಿಕಾರಿ ಪಿರ್‌ಫೋರ್ಡನನ್ನು ದ್ವೇಷಿಸುವ ದುರ್ಧರ ಪ್ರಸಂಗದಲ್ಲಿ ಆತಗೆ ಆಕೆಯ ನೆರವು ಬೇಕಾಗಿತ್ತು. ಆದರೆ ಪೆಂಗ್‌ಯಾನ್ ಸ್ವತಃ ಈ ಕೆಲಸಕ್ಕೆ ಬರಲಾರ; ಕಾರಣ ಆತನ ಪರಿಚಯ ಬ್ರಿಟಿಷ್ ಸೈನ್ಯಾಧಿಕಾರಿಗಿದೆ. ಜಪಾನಿಗಳನ್ನು ಎದುರಿಸುವಾಗ—ರಾಜಕೀಯದ ಅನ್ಯಾದೃಶವಾದ ಸುಳಿಯಂತೆ ಇವರಿಬ್ಬರು ಹೆಗಲಿಗೆ ಹೆಗಲಿತ್ತವರು; ಇಂದು ಅದೇ ವಾತಾವರಣ ಇವರಲ್ಲಿ ವೈಪರೀತ್ಯಕ್ಕೆಡೆಯಿತ್ತಿದೆ.

ಪೆಂಗ್‌ಯಾನ್ ಜಾಲೀವಲ್ಡ್‌ನಲ್ಲಿ ನರಕದ ಗುಹೆಗೆ, ಬ್ರಿಟಿಷ್ ಸೈನಿಕರಿಗೆ ಆಹಾರವನ್ನು ಪೂರೈಸುತ್ತಿದ್ದ ರಹಮಾನನ ಟ್ರಕ್ಕನು ನೆ, ಪರೀಕ್ಷೆಕ್ಕರವಾಗಿ–ಅಥವಾ ಡ್ರೈವರನ್ನು ಕೊಂದು, ಪ್ರಚ್ಛನ್ನ ವೇಷದಲ್ಲಿ ತಾನೇ ಬಂದು, ಕ್ಯಾಥರೀನಳನ್ನು ಸಂಧಿಸಿ–ಆಕೆಯನ್ನು ಬ್ರಿಟಿಷ್ ಖಾತೆಯಿಂದ ಗೌಪ್ಯವೆಳೆಯಲು ಒಡಂಬಡಿಸಿ, ತಾನೇ ಆಕೆಯನ್ನು ಮದುವೆಯಾಗುವೆನೆಂಬ ಭರವಸೆಯನ್ನೂ ಕೊಟ್ಟು, ಮುತ್ತಿನಹಾರವೊಂದನ್ನಿತ್ತನು. ಇವರೀ ಒಪ್ಪಂದವನ್ನು ಗುಪ್ತಮಾರ್ಗದಿಂದರಿತ ಪಿಕ್‌ಫೋರ್ಡ್, ಕ್ಯಾಥರೀನಳ ಪ್ರೇಮಪಾಶಕ್ಕೆ ಬಲಿಯಾಗಿದ್ದ ತನ್ನ ಸಿಕ್ರೇಟ್ ಡಿಪಾರ್ಟ್‌ಮೆಂಟಿನ ಲೆಫ್ಟಿನೆಂಟನನ್ನು—ಗುಪ್ತಪತ್ರಗಳನ್ನೀಯುವಂತೆ ಹೇಳಿ, ತಾನೆಸಗಿದ ಕೆಲಸವನ್ನು ಬಿತ್ತರಿಸಿ,– ಕ್ಯಾಥರೀನಳನ್ನು ಸಂದರ್ಶಿಸಿ, ಆಕೆಯನ್ನು ತನ್ನವಳನ್ನಾಗಿಸಲು ಯತ್ನಿಸುವನು. ಕ್ಯಾಥರೀನಳು ನಿಜವಾಗಿ ಪ್ರೀತಿಸುತ್ತಿದ್ದ 'ಲಿನ್‌ಚೂ'ನ್ನು ಮರೆಯಬೇಕೆಂದು ಹೇಳಿ, ತನ್ನನ್ನೇ ಮದುವೆಯಾಗಲು ಕೇಳಿಕೊಂಡ ಪೆಂಗ್‌ಯಾನನ ಗುಪ್ತಭಾಷಣವನ್ನೇ–ಉಲ್ಲೇಖಿಸಿ, ಪಿಕ್‌ಫೋರ್ಡ್, ತನ್ನ ಕೆಲಸ ಸಾಧಿಸಿದರೆ ಕ್ಯಾಥರೀನಳಿಗೆ–ಲಿನ್‌ಚೂನನ್ನು ಪಡೆಯುವ ಮಾರ್ಗವನ್ನರುಹಿ ಒಲಿಸುವನು. ಕ್ಯಾಥರೀನ್ ಮತ್ತು ಪಿಕ್‌ಫೋರ್ಡ್ ಇವರೀ ಗುಪ್ತಭಾಷಣವನ್ನು–ಮುತ್ತಿನಹಾರದಲ್ಲಿದ್ದ ವಯರ್‌ಲೆಸ್ಸಿನಿಂದ ತಿಳಿದ ಪೆಂಗ್‌ಯಾನ್, ತನ್ನನ್ನು ಸೆರೆಹಿಡಿಯಲು ಬಂದ ಪಿಕ್‌ಫೋರ್ಡನ ಮುಂದೆ ಕಾಣಿಸಿದುದು ಕ್ಯಾಥರೀನಳ ಶವವನ್ನು, ಮತ್ತು ತನ್ನ ಸಾಹಸದ ಹಿರಿಮೆಯ ಪತ್ರವನ್ನು! ಪಿಕ್‌ಫೋರ್ಡ್ ಕಬ್ಬಿಬ್ಬಾದ."—

ಇದು ಮುತ್ತಿನಹಾರದ ಸುಂದರ ಕಥಾಭಾಗ.—ವಿವಿಧಭಾವಲಹರಿಗಳಲ್ಲಿ ಜೀವನವು ಸುಳಿದಾಡುತ್ತಿದೆ. ಜೀವನವು ಯಾವ ವಾತಾವರಣದಲ್ಲಿ ತೇಲುತ್ತದೋ ಅಲ್ಲೆಲ್ಲ ಗುಪ್ತಗಾಮಿನಿಯಾಗಿ ಹರಿಯುವ ನೂರಾರು ಸಮಸ್ಯೆಗಳನ್ನು ನಾವು ಕಾಣಬಹುದು. ಇವುಗಳಲ್ಲಿ ಕೆಲವುಗಳ ಪರಿಣಾಮ ರುದ್ರವಾಗಿದ್ದರೆ, ಕೆಲವು ಸುಂದರ ಸಮಾಪನಗಳೆಂಬುದನ್ನು ಪ್ರತ್ಯೇಕವಾಗಿ ಆಡಬೇಕೆಂದಿಲ್ಲ—ಆ ಬಗೆಯ ಸಮಸ್ಯೆಗಳಲ್ಲೊಂದಾಗಿದೆ ಮುತ್ತಿನಹಾರ!

ಇದೊಂದು ಯುದ್ಧಕಾಲದ ಚಿತ್ರ! ಲೇಖಕರು ಬಹು ಚಾಕಚಕ್ಯತೆಯಿಂದ ಈ ಚಿತ್ರವನ್ನೊರೆದೋರಿದ್ದಾರೆ. ಬಹು ಚಿಕ್ಕಕತೆಯಾದರೂ ಇದು ಓದುಗನನ್ನು ಆಕರ್ಷಿಸುತ್ತದೆ; ಅದಕ್ಕೆ ಕಾರಣ ಕುತೂಹಲಾಕರ್ಷಕ ಸಂವಿಧಾನ. ಪುರಾಣಕಾಲದ ರಾಕ್ಷಸರ ಮಾಯಾಜಾಲಗಳನ್ನು ಬೆರಗುಗಿವಿಗಳಿಂದ ಸವಿಯಲದೆಷ್ಟು ಆತುರವೋ, ಅದೇ ಆತುರ, ಅದೇ ಬಗೆಯ ನೈಜ ಪ್ರತಿಭಾಸ ಈ ಕತೆಯನ್ನೋದುವಾಗ ಬರುತ್ತದೆ. ಈ ಪ್ರತಿಭಾಸಕ್ಕನುವಾಗುವಂತೆ ಲೇಖಕರು ಸತ್ಯವಾದ ವಸ್ತುವನ್ನು ವಿವಿಧಘಟನೆಗಳಲ್ಲಿ ವಿಶ್ಲೇಷಿಸಿ, ಪುನಃ ಹೊಂದಿಸಿ ತೋರಿದ್ದಾರೆ. ವಿವಿಧಮಾರ್ಗವಾಹಿಯಾದ ಕಥಾವಾಹಿನಿಗೂ, ತತ್ತತ್ ವಾತಾವರಣಯುಕ್ತವಾದ ಒಂದು ಹಿಡಿತವಿದೆ. ಆ ಹಿಡಿತ ತಪ್ಪಿದರೆ, ಅದರಲ್ಲಿ ನೈಜತೆಯಿದ್ದರೂ ಓದುಗನದನ್ನು ಮೆಚ್ಚಲಾರನು. ನೈಜತೆಯು ಬೆಳಕಿಗೆ ಬರುವುದಾದರೂ ಅದನ್ನರುಹುವ ಮಾರ್ಗದಲ್ಲೊಂದು ಆಕರ್ಷಣೆ ಬೇಕು; ಓದುಗನನ್ನು ಸೆರೆಹಿಡಿವ ಭಾವತಂತ್ರಿ ಮೆಲುವಾಗಿ ಮಿಡಿಯಬೇಕು. ಈ ಮಿಡಿತವೇಳಬೇಕಾದರೆ ಕತೆಗಾರನಲ್ಲಿ ಅನುಭವದೊಡನೆ ರಸಿಕತೆಯೂ ಬೇಕು

ಪ್ರಸ್ತುತ ಕಥಾಪ್ರಸ್ತಾಪವೇ ಒಂದು ನವೀನ ರೀತಿಯಿಂದಿಳಿದಿದೆ. ಪ್ರಥಮವಾಗಿ ನಾವು ಕ್ಯಾಥರೀನಳ ಕಾರ್ಯತತ್ಪರತೆಯನ್ನು ಕಾಣುತ್ತೇವೆ. ಆಕೆಯ ರೂಪವನ್ನೊಂದಿಷ್ಟು ಲೇಖಕರು ಕಾಣಿಸಿ–ಮುತ್ತಿನಹಾರದ ಇಡೀ ಜೀವಿತವನ್ನೇ ತಂದಿರಿಸಿ ತೋರುತ್ತಾರೆ. ಮುಂದಿನ ಮೂರನೆಯ ಪಾರಾದಲ್ಲಿ ಕಮ್ಯುನಿಸ್ಟರು ಹುದುಗಿರುವ ಸ್ಥಳದ ದುರ್ಗಮವಿಚಾರವನ್ನೂ, ಕ್ಯಾಥರೀನಳ ಹೃದಯಗತ ವಿಚಾರಮಾರ್ಗವನ್ನು ಸೂಕ್ಷ್ಮವಾಗಿ ಹರಿದೋಡಿಸಿದ ಲೇಖಕರು,—ಈ ಮೂರು ಪಾರಾಗಳನ್ನು ಕಥಾವಸ್ತುವಿನ ಪೂರ್ಣತೆಗೆ–ಉಪಸಂಹಾರಕ್ಕೆ ಪೋಷಕವಾಗಿರಿಸಿದುದು ಪ್ರಶಂಸನೀಯವಿದೆ. ಆ ಬಳಿಕ ಪೆಂಗ್‌ಯಾನ್ ಕ್ಯಾಥರೀನಳನ್ನು ಸಂದರ್ಶಿಸಿದ ನರಕದ ಕತ್ತಲ ಗುಹೆಯ ವಿಚಾರವೆತ್ತಿ, ಅದರ ಹದಿನೆಂಟು ಕೋಣೆಗಳ ವೈಚಿತ್ರ್ಯವನ್ನೂ, ಚಾಣಾಕ್ಷಬುದ್ಧಿಯ ಚೀನೀಯ[illegible] ಚಾಕಚಕ್ಯತೆಯನ್ನೂ ಹೇಳಿ—ಹಿಂದೊಮ್ಮೆ ಪಿಕ್‌ಫೋರ್ಡನ ಸಹಾಯಿಯಾದ ಪೆಂಗ್‌ಯಾನನು ಅದೆಂತು ರಾಜಕೀಯ ವಿಚಾರಪ್ರವಾಹದಿಂದ ವಿರೋಧಿಯಾಗಬೇಕಾಯಿತೆಂಬುದನ್ನು–ಪ್ರಸ್ತುತಕಥಾಭಾಗಕ್ಕೆ ಪೀಠಿಕೆಯಾಗಿ ಬೇಕಾದಷ್ಟೆ ಬರೆದು, ಗತೇತಿವೃತ್ತದ ಪೂರ್ವಸಂಧಿಯನ್ನು ನೂತನವಾದ ಬಗೆಯಲ್ಲಿ ತೋರಿರುವರು. ಗತಚಿತ್ರದ ಪೂರ್ವಕಥನಮಾರ್ಗ ನೂತನವಿದ್ದಂತೆ ಈ ಬಗೆಯ ಕತೆಗೂ ಒಪ್ಪವನ್ನಿತ್ತಿದೆ.

ಇದಿಷ್ಟನ್ನು ಪೀಠಿಕೆಯಾಗಿಯಿತ್ತು ಲೇಖಕರು ಓದುಗನನ್ನು ಹುಸು ಆಲೋಚನೆಗೀಡುಮಾಡುತ್ತಾರೆ. ಸುಲಭವಾಗಿ, ಒಂದೇಬಾರಿ ಓದಿದಾಗ ತಿಳಿಯುವ ಮಾರ್ಗವಿದಲ್ಲ. ಬರೀ ಓದಿ ಮುಗಿಸಿದ ಬಳಿಕವೇ ಪೀಠಿಕೆಯಾಗಿ ಬಂದೀ ಭಾಗದ ಹೊಳಹು ಕಾಣಿಸುತ್ತಿದೆ. ಆಗಲೇ ಅಲ್ಲಿ ಮತ್ತೊಂದು ಅಧ್ಯಾಯವನ್ನು ತೆರೆಯುತ್ತಾರೆ. ಅದುವೆ "ಪೆಂಗ್‌ಯಾನ್ ರಹಮಾನನ ಟ್ರಕ್ಕಿನ ಡ್ರೈವರನಾಗಿದ್ದ ಇಸ್ಮಾಯಿಲ್‌ನನ್ನು ಕೊಂದು, ತಾನೇ ಅವನಾಗಿ ಬಂದು ಇಪೋನಗರದ ಚೌಕಿಯನ್ನು ದಾಟುವುದು" ಹೀಗೆ ಆತನು ಬರಬೇಕಾದರೆ ಕಾರಣವೆರಡಿವೆ: ಒಂದು ತನ್ನನ್ನು ಮೊದಲೇ ಅರಿತಿದ್ದ ಪಿಕ್‌ಫೋರ್ಡನ ಕಣ್ಣಿಗೆ ಮಣ್ಣೆರಚುವುದು; ಮತ್ತೊಂದು, ಆಂಟಿ ಜಪಾನಿಯರ ಸಂಸ್ಥೆಯಿಂದ ದೂರಮಾಡಿದ ಕ್ಯಾಥರೀನಳನ್ನು ಭೇಟಿಯಾಗಿ ಕಾರ್ಯಸಾಧನೆಗಾಕೆಯನ್ನೆರವಾಗಿಸುವುದು. ಈ ಕಾರಣಗಳ ತಿಳಿವು ವ್ಯಕ್ತವಾಗುವಂತೆ ಲೇಖಕರೀ ಭಾಗವನ್ನು ಪೀಠಿಕೆಯ ಮುಂದೆಯೆ ಸೆಳೆದು ಚೆಲುವಾಗಿಸಿದ್ದಾರೆ. ಅದರೇನು? ಇಸ್ಮಾಯಿಲನ ಮರಣವಾರ್ತೆ ಹಬ್ಬಿದಾಗ, ಟ್ರಕ್ಕಿನ ಶೋಧನೆಯಾಯಿತು. ಡ್ರೈವರನಿಲ್ಲ. ಬದಲಾಗಿ ಇಸ್ಮಾಯಿಲನ ಮುಖದಂತಿರುವ ಮುಖಚಿತ್ರವೊಂದು; ಅದರೆಡೆಯಲ್ಲೇ ಸಾಮರ್ಥ್ಯವ್ಯಂಜಕ ಪೆಂಗ್‌ಯಾನನ ಪತ್ರವೊಂದು! ಕ್ಯಾಥರೀನಳ ಸಂದರ್ಶನಕ್ಕೆ ಬಂದ ಪೆಂಗ್‌ಯಾನ್, ವಿನೋದವಿಹಾರದ ನರಕದ ಗುಹೆಯಲ್ಲಿ

ಕ್ಯಾಥರೀನಳನ್ನು ಜನಸಂದಣಿಯ ಸುಗ್ಗಾಟದಲ್ಲಿ ಭೇಟಿಯಾದ. ತನ್ನ ರಾಜಕೀಯ ವಿಚಾರವನ್ನೆತ್ತಿ — ಆಕೆ ಅನುರಾಗಗೊಂಡಿದ್ದ 'ಲಿನ್‌ಚೂ'ನನ್ನು ಮರೆಯುವಂತಾಗಿಸಿ, ತನ್ನನ್ನೇ ಒಲಿಯುವಂತಾಗಿಸಿ, ಮುತ್ತಿನಹಾರವನ್ನೆತ್ತಿ ತೊಡಿಸುವನು. ಕ್ಯಾಥರೀನ್ ಏಸುವಿನ ಆಣೆಯಿತ್ತು ಕಾರ್ಯರಂಗಕ್ಕಿಳಿದರೆ, ಇವರಿಬ್ಬರ ಈ ಗೋಷ್ಠಿ ವಿಚಾರವನ್ನು–ಪಿಕ್‌ಫೋರ್ಡ್ ಸಂಶಯಬರುವ ಕೋಣೆಯೊಂದರಲ್ಲಿ ಧ್ವನಿಗ್ರಾಹಕಯಂತ್ರವಿರಿಸಿ ಕೇಳುವನು. ಫಿಕ್‌ಫೋರ್ಡನು ಕೇಳುತ್ತಿರುವ ಈ ವಿಚಾರವನ್ನು ಲೇಖಕರು ಆ ಅಧ್ಯಾಯದಲ್ಲಿ ತೋರಗೊಡದಿರುವುದು ಬಹು ಮಾರ್ಮಿಕವಿದೆ. ಆ ಅಧ್ಯಾಯದಲ್ಲಿ ಒಂದು 'ವ್ಯಕ್ತಿ'ನಿರ್ದೇಶ ಮಾತ್ರವಾಗಿದೆಯಲ್ಲದೆ ವ್ಯಕ್ತಿನಿಷ್ಠ ಯಾವ ವಿಚಾರವೂ ಹೊರಬಂದಂತೆ ಕಾಣಿಸುವುದಿಲ್ಲ. ಆವುದೋ ಒಂದು ಬಗೆಯ ಸಂಶಯಾಸ್ಪದವಾದ ವೃತ್ತವೊಂದು ತೇಲಿಸಿಂತಿದೆಯೆಂದು ಮಾತ್ರ ತೋರುತ್ತಿದೆಯಲ್ಲದೆ, ಬೇರಾವ ಹೊಳಹೂ ಕಾಣಿಸದು. ಸೆಂಗ್‌ಯಾನ್–ಕ್ಯಾಥರೀನಳ ಈ ಸಂವಾದ ನಡೆದ ಅಧ್ಯಾಯವೇ ಪಿಕ್‌ಫೋರ್ಡ್‌ನ ಮಾಯಾಜಾಲ ಹೆಣೆಯಲು ಸಹಕಾರಿಯಾದುದು. "ಆದುವೆ ಲಿನ್‌ಚೂನನ ಪ್ರಣಯ ಸಂಧಿವಿಚ್ಛೇದ." ಇದನ್ನೆ ಸಹಕಾರಿಯಾಗಿ ಆತ ಆರಿಸಿಕೊಂಡ. ಆದುವೆ, ಗತಿಯಲ್ಲಿ ಕ್ಯಾಥರೀನಳ ಬಲೆಗೆ ಬಿದ್ದ ತನ್ನವನೇ ಆದ ಸಿಕ್ರೇಟ್ ಡಿಪಾರ್ಟ್‌ಮೆಂಟಿನ ಲೆಫ್ಟಿನೆಂಟನನ್ನು ಸಂಧಿಸಿ, ತಾನೆಸಗಿದ ಕೆಲಸವನ್ನೆಲ್ಲ ಹೇಳಿ, ಅವನ ಒಳಗುಟ್ಟನ್ನೂ ಹೊರಗೆಡಹಿ, ತಾವು ಎಸಗಬೇಕೆಂದಿದ್ದ ಆಕಾಶವಾಳಿಯ ಗುಪ್ತಪತ್ರಗಳನ್ನು ಕ್ಯಾಥರೀನಳಿಗೆ ಕೊಡುವಂತೆ ಹೇಳಿದ. ಆತ ತಬ್ಬಿಬ್ಬಾದ. ಆದರೆ ತನ್ನ ಕೈಯಲ್ಲಿರುವ ಗುಪ್ತಪತ್ರಗಳು 'ನಕಲೀ ಚಿತ್ರ'ಗಳೆಂಬುದನ್ನಾತ ತಿಳಿಯದಾದ. ಈ ಗುಪ್ತವಿಚಾರದ ಭಾವ-ಸಂಧಿಯನ್ನು ಮೊದಲೇ ಅರಿತಿದ್ದ ಪಿಕ್‌ಫೋರ್ಡ್, ತನ್ನ ಸ್ಥಿತಿಯನ್ನು ಭದ್ರವಾಗಿಸಿದ್ದನು. ನರಕದ ಗುಹೆಯಲ್ಲಿ ಪೆಂಗ್‌ಯಾನನನ್ನು ಬಹುದಾಗಿದ್ದರೂ–ತಾನೇಕೆ ಹಾಗೆ ಮಾಡಲಿಲ್ಲವೆಂಬುದಕ್ಕೆ ಫೋರ್ಡ್‌ನು–ಲೆಫ್ಟಿನೆಂಟನಿಗೆ ಸರಿಯಾದ ಕಾರಣವನ್ನೇ ಕೊಡುವುದದು–ಕತೆಗೂ, ಸ್ವೋದ್ದೇಶಕ್ಕೂ ಸಹಕಾರಿಯಾಗಿದೆಯೆಂಬುದನ್ನರಿತರೆ–ಕಥನತಂತ್ರವನ್ನು ಹೊಗಳದೆ ಗತ್ಯಂತರವಿಲ್ಲ! ಸಜೀವವಾಗಿ ಪೆಂಗ್‌ಯಾನನ್ನು ಸೆರೆಹಿಡಿಯಬಗೆದಿದ್ದ ಚಾಣಾಕ್ಷ ಫೋರ್ಡ್‌ನು ಬಾಂಬೆಸೆಯುವುದರಲ್ಲಿ ಔಚಿತ್ಯವಿಲ್ಲ. ಆ ಮಾರ್ಗ ಕತೆಯಿದಕ್ಕೆ ಸಮರ್ಥಕವಾಗುವುದೂ ಇಲ್ಲ. ಆದುದರಿಂದಲೇ ಆತ ನೇರವಾಗಿ 'ಭೇದೋಪಾಯ'ವನ್ನು ಪೋಣಿಸಲು–ಕ್ಯಾಥರೀನಳ ಬಳಿ ಬಂದ. ಬೆರಗಾದ ಕ್ಯಾಥರೀನಳನ್ನು ತನ್ನ ಬಲೆಗೆ ಸುಲಭವಾಗಿ ಎಟಕಿಸಿದ. ಲಿನ್‌ಚೂನನ್ನುಳಿಸುವೆನೆಂದಾಡಿದ ಫೋರ್ಡನ ಮಾತನ್ನು ಕ್ಯಾಥರೀನ್ ನಂಬಿದರೆ, ಹೆಣ್ಣೆದೆಯ ಪ್ರೇಮದ ಮುಂದಾ ಮಾತು ಸಫಲವಾಯಿತು 'ಪೆಂಗ್‌ಯಾನ್. ಲಿನ್‌ಚೂ'ನನ್ನು, ಸಾಯಹೊಡೆಯುವ ನಾನು, ನಿನಗಾಗಿ ಲಿನ್‌ಚೂನನ್ನುಳಿಸುವೆನೆಂದು, ಆಕೆಯ ಹೃದಯಧ್ವನಿಯನ್ನೇಳಿಸಿ ನುಡಿದು ಆಕೆಯೊಲವನ್ನು ಸೆಳೆದನು — ಬಹು ಮಾರ್ಮಿಕವಾದ ಅಧ್ಯಾಯವಿದು ಉಪಸಂಹಾರದ ಭಾಗವನ್ನು ಬೆಳಗುವ ಪೋಷಕಾಧ್ಯಾಯವಿದು. ಕ್ಯಾಥರೀನ್ 'ಮುತ್ತಿನಹಾರ'ದ ಗುಟ್ಟನ್ನರಿಯದೆ, ತನ್ನನ್ನೇ ಮೃತ್ಯುದೇವತೆಗೆರವಾಗಿಸಿದ ದುರಂತಪ್ರಸಂಗವಿದು. ಕ್ಯಾಥರೀನಳ ಕೊರಳ–ಹಾರದ ಸುಳಿವನ್ನು ಫೋರ್ಡನೂ ಅರಿಯದಾದ. ಅವನಿಗಿಂತ–ಇಮ್ಮಡಿ ಚಾಣಾಕ್ಷನಿದ್ದ ಪೆಂಗ್‌ಯಾನ್. ಒಂದುವೇಳೆ ಫೋರ್ಡನರಿಯುವಂತಾಗಿದ್ದರೆ, ಪೆಂಗ್‌ಯಾನನ ಜೀವನವು ಕೊನೆಗಾಣುತ್ತಿತ್ತು. ಆದರೆ ಪೆಂಗ್‌ಯಾನ್ ಸದಾ ಕ್ಯಾಥರೀನಳ ಅಂತರಂಗವನ್ನರಿಯಲು ಹವಣಿಸಿದ್ದ; ಪ್ರೇಮದ ಮುಂದೆ ಕ್ಯಾಥರೀನ್ ಚಂಚಲೆಯಾಗುವಳೆಂಬುದನ್ನಾತ ಆಕೆಯ ಮಾತಿನ ಸುಳಿಯಿಂದಲೇ ಅರಿತಿದ್ದ. ಅದಕ್ಕಾಗಿಯೆ ಆತ ಮುತ್ತಿನ ಹಾರವನ್ನಾಕೆಗೆ ಕೊಟ್ಟಿದ್ದ. ಆ ಮುತ್ತಿನ ಹಾರವೇ ಕ್ಯಾಥರೀನಳ ಪ್ರಾಣಹಾರವೂ ಆಯಿತು. ಫೋರ್ಡನ–ಗುಪ್ತಚಾರಿಣಿಯಾಗಿ ಸುಳಿದ ಕ್ಯಾಥರೀನಳನ್ನು ಪೆಂಗ್‌ಯಾನ್–ಹಾರದಿಂದರಿತು, ಆಕೆಯನ್ನು ಮುಗಿಸಿ, ಆ ಹೆಣವನ್ನು — ಫೋರ್ಡನು ಕ್ಯಾಥರೀನಳನ್ನು ಭೇಟಿಯಾಗುವೆನೆಂದೆಂದ ಸ್ಥಳದಲ್ಲಿರಿಸಿ, ತನ್ನ ಸಾಮರ್ಥ್ಯವನು ಪೂರ್ಣತಃ ಬೆಳಕು ಕಾಣಿಸುವನು.

ಇದಿಷ್ಟು ಕತೆಯನ್ನು ಬಹು ಗುಪ್ತವಾಗಿಯೆ ಹರಿದೋಡಿಸಿದ್ದಾರೆ ಲೇಖಕರು. ರಾಜಕೀಯ ವಾತಾವರಣ, ಯುದ್ಧಕಾಲದ ಗುಪ್ತನೈಪುಣ್ಯ ಇವುಗಳ ಪ್ರತೀಕವಿದು. ಕಥಾಸರಣಿಯು ಒಂದಿಷ್ಟೂ ಕೆಡದಂತೆಯೆ ಲೇಖಕರು ಕತೆಯ ತಂತ್ರವನ್ನು ಬಲಿದಿದ್ದಾರೆ. ಪ್ರತಿಯೊಂದ ಅಧ್ಯಾಯದ 'ಚುಕ್ಕೆ'ಯೂ ಉಪಸಂಹಾರದ ಕೊನೆಗೆ ಸಹಕಾರಿಯಾಗಿ ನಿಂತು, ತಂತ್ರನೈಪುಣ್ಯವನ್ನು ಪ್ರತಿಭಾನಿಸುತ್ತಿದೆ. ನರಕಗುಹೆಯ ಪ್ರಸ್ತಾಪ, ಅದರಲ್ಲಿ ಪೆಂಗ್‌ಯಾನನ ಸಂಭಾಷಣೆ, ಕ್ಯಾಥರೀನಳನ್ನು ಫೋರ್ಡ್ ಭೇಟಿಯಾಗುವುದು—ಇವು ಪ್ರಸ್ತುತ ಕಥಾಭಾಗದ ಕೀಲುಗೈ.

ಚೆಲುವಾದ ಮುತ್ತಿನಹಾರ, ಹೆಣ್ಣನ್ನು ಮಿರುಗುವ ಹಾರ,— ಕೊನೆಗೆ ಆದುವೆ ಮುತ್ತಿನಹಾರ ಮೃತ್ಯುಹಾರವಾಯಿತು. ಮುತ್ತಿನ ಹಾರವು ಒಂದು ಸುಂದರ ಕತೆ. ಸದಾ ಸ್ವಾಗತವೀ ಕತೆಗೆ!....

# ಸಾದರ ಸ್ವೀಕಾರ

೧ **ಜಾತಕತಿಲಕ:** (ಜ್ಯೋತಿಷ ವಿಷಯಕವಾದ ಹಳಗನ್ನಡ ಪದ್ಯಮಯ ಗ್ರಂಥ). ಮೂಲಕವಿ ಶ್ರೀಧರಾಚಾರ್ಯ. ಸಂಪಾದಕರು ಶ್ರೀ. ಎಂ. ಮರಿಯಪ್ಪ ಭಟ್ಟ ಎಂ. ಎ., ಎಲ್. ಟಿ. ಮತ್ತು ಶ್ರೀ. ಎಂ. ಗೋವಿಂದರಾವ್ ಎಂ. ಎ, ಬಿ. ಓ. ಎಲ್. ಅವರು. ಮದ್ರಾಸ ಯುನಿವರ್ಸಿಟಿಯ ಕರ್ನಾಟಕ ಗ್ರಂಥ ಮಾಲೆಯ ೧೩ನೆಯ ಗ್ರಂಥ. ರೊಯಲ್. ೮. ೨೬ + ೧೦೦ + ೧೪ ಪುಟಗಳು. ಬೆಲೆ ೫-೦-೦.

೨ **ಆಶ್ರಮವಾಸಿ** (ಕಾದಂಬರಿ) ಬರೆದವರು ಶ್ರೀಮಾನ್ ಬಸವರಾಜ ಕಟ್ಟೀಮನಿಯವರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ಪ್ರಕಾಶನ. ಕ್ರಾ. ೮. ೧೯೦ ಪುಟಗಳು. ಬೆಲೆ ೧-೮-೦.

೩ **ಸೂರ್ಯಪಾನ:** (ಕವನ ಸಂಕಲನ). ಲೇಖಕರು 'ಅಂಬಿಕಾತನಯದತ್ತ'. ಪ್ರಕಾಶಕರು ಶ್ರೀ. ಬಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ. ೮. ೧೯೦ ಪುಟಗಳು. ಬೆಲೆ ೧-೮-೦.

೪ **ಭಾರತ, ಬರ್ಮಾ, ಅಫ್ಘಾನಿಸ್ಥಾನ ಪ್ರವಾಸದ ಕುರಿತು ಸರ್ವೋಚ್ಚ ಸೋವಿಯೆತ್ತಿಗೆ ಇತ್ತ ವರದಿ:** (ಅನುವಾದಿತ-ಸಚಿತ್ರ ಪುಸ್ತಕ) ವರದಿಯಿತ್ತವರು: ಎನ್. ಎ. ಬುಲ್ಗಾನಿನ್ ಮತ್ತು ಎನ್. ಎಸ್. ಕ್ರುಶ್ಚೇವ್ ಅವರು. ಪ್ರಕಾಶಕರು: ಭಾರತದಲ್ಲಿಯ ಟಾಸ್ ಪ್ರತಿನಿಧಿ, ೨೫ ಬಾರಾಖಂಬಾ ರಸ್ತೆ, ನವದೇಹಲಿ. ಕ್ರಾ. ೮. ೧೦೦ ಪುಟಗಳು. ಬೆಲೆ ೦-೭-೦.

೫ **ಭಾರತ, ಬರ್ಮಾ, ಅಫ್ಘಾನಗಳಲ್ಲಿ ಬುಲ್ಗಾನಿನ್ ಮತ್ತು ಕ್ರುಶ್ಚೇವ್ ಅವರು ಮಾಡಿದ ಭಾಷಣಗಳು:** (ಅನುವಾದಿತ ಪುಸ್ತಕ). ಪ್ರಕಾಶಕರು ಭಾರತದಲ್ಲಿಯ ಟಾಸ್ ಪ್ರತಿನಿಧಿಗಳು, ೨೫ ಬಾರಾಖಾಂಬಾ ರಸ್ತೆ, ನವದೇಹಲಿ. ಕ್ರಾ. ೮. ೨೮೪ ಪುಟಗಳು. ಬೆಲೆ ೦-೨-೦.

೬ **ಕನ್ನಡಗುಡಿ:** (ಹೊರನಾಡ ಕನ್ನಡಮಗು-ಬೆಳ್ಳಿಯ ಸಂಪುಟ). ಸಂಪಾದಕರು ಶ್ರೀಮಾನ್ ವರದರಾಜ ಆದ್ಯ. ಪ್ರಕಾಶಕರು ಹೊರನಾಡ ಕನ್ನಡಿಗರ ಸಂಸ್ಥೆ, ೩೨ ಬಾಳಕೃಷ್ಣ ಸದನ, ಗೋಖಲೇರೋಡು (ಉತ್ತರ). ಮುಂಬಯಿ ೧೪. ಕ್ರಾ. ೪ದ ೧೨೪ ಪುಟಗಳು. ಬೆಲೆ ?

ಇದರಲ್ಲಿ ಹಲವಾರು ಜನ ಸುಪ್ರಸಿದ್ಧ ಲೇಖಕರು ಬರೆದ ಉಪಯುಕ್ತ ಲೇಖನಗಳೂ ಸರಸವಾದ ಕವನ-ಕಥೆಗಳೂ ಅಡಕವಾಗಿವೆ. ಮಕ್ಕಳಿಗಾಗಿ ಎಂದು ಈ ಸಂಚಿಕೆ ಬೆಳಕಿಗೆ ಬಂದಿದ್ದರೂ ಹಿರಿಯರು ಕೂಡ ಕುತೂಹಲದಿಂದ ಓದಿ ಪ್ರಯೋಜನ ಪಡೆಯುವಂತಿದೆ. 'ಗಡಿನಾಡಿನಲ್ಲಿ ಮಕ್ಕಳ ಶಿಕ್ಷಣ' 'ಸೋದರ ಪ್ರಾಂತಗಳಲ್ಲಿ ಮಕ್ಕಳ ಶಿಕ್ಷಣ' 'ಸೋದರ ರಾಷ್ಟ್ರಗಳಲ್ಲಿ ಮಕ್ಕಳ ಶಿಕ್ಷಣ' ಎಂಬ ವಿಭಾಗಗಳಲ್ಲಿಯ ಲೇಖನಗಳು, ಪ್ರತಿಯೊಬ್ಬ ಶಿಕ್ಷಕನೂ, ವಿದ್ಯಾರ್ಥಿಯೂ, ನಾಗರಿಕನೂ ಓದಲೇಬೇಕಾದಂತಹವು. ಇಂತಹ ಒಳ್ಳೆಯ ಸಂಚಿಕೆಯನ್ನು ಪ್ರಕಟಿಸಿದ ಹೊರನಾಡ ಕನ್ನಡಿಗರ ಸಂಸ್ಥೆ ಎಲ್ಲ ಕನ್ನಡಿಗರ ಕೃತಜ್ಞತೆಗೂ ಪಾತ್ರವಾಗಿದೆ.

೭ **ಭರತ ಸಮ್ಯಕ್ ಸಂಗೀತಯಜ್ಞ ಸ್ಮಾರಕ ಗ್ರಂಥ:** (ಒಂದು ಸಂಗೀತ ಸಮಾರಂಭದ ವರದಿ). ಲೇಖಕರು ಹಾಗೂ ಸಂಪಾದಕರು ಶ್ರೀ. ಎಂ. ಎನ್. ಕಸ್ತೂರಿಯವರು, ಹುಬ್ಬಳ್ಳಿಯ ವೀರಭಾರತ ಸಂಗೀತ ಕಲೋದ್ಧಾರಕ ಭವನದ ಗಾನವಿನೋದಿ. ಲೇಖಕರೇ ಪ್ರಕಾಶಕರು. ಕ್ರಾ. ೮. ೯೨ ಪುಟಗಳು. ಬೆಲೆ ೧ ರೂಪಾಯಿ.

೧೯೫೫ ಜೂನ್ ೨೬ ದಿನಾಂಕ ಪ್ರಾರಂಭವಾಗಿ, ಅದೇ ವರ್ಷದ ಡಿಸೆಂಬರ್ ೨ನೆಯ ದಿನಾಂಕ ಮುಕ್ತಾಯವಾದ "ಭರತಸಮ್ಯಕ್‌ಸಂಗೀತ ಯಜ್ಞ"ದಲ್ಲಿ ಭಾಗವಹಿಸಿದ ವಿದ್ವಾಂಸರು ಸಂಗೀಜ್ಞರು ಇವರ ಸಂಕ್ಷೇಪ ಪರಿಚಯಗಳನ್ನು ಸಚಿತ್ರವಾಗಿ ಈ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ಲೇಖನ-ದೋಷ, ಮುದ್ರಣ ದೋಷಗಳ ಕಡೆಗೆ ಹೆಚ್ಚು ಲಕ್ಷವಿತ್ತಿದ್ದರೆ ಒಳ್ಳೆಯದಾಗುತ್ತಿತ್ತು.

೮ **ಸಂಗೀತ ಸಮ್ರಾಟ್, 'ಸಂಗೀತರತ್ನ' ಕೈ. ವಾ. ಶ್ರೀ ಖಾನ್ ಅಬ್ದುಲ್ ಕರೀಮಖಾನರ ಸಂಕ್ಷಿಪ್ತ ಚರಿತ್ರೆ:** (ಸಚಿತ್ರ). ಲೇಖಕರು ಮತ್ತು ಪ್ರಕಾಶಕರು 'ಗಾನವಿನೋದಿ' ಎಂ. ಎನ್. ಕಸ್ತೂರಿಯವರು, ಹುಬ್ಬಳ್ಳಿ. ಕ್ರಾ. ೮. ೨೦ ಪುಟಗಳು. ಬೆಲೆ ೦-೪-೦.

೯ **ಚಿರಪರಿಚಿತರು:** (ವ್ಯಕ್ತಿಚಿತ್ರ ಸಂಗ್ರಹ) ಲೇಖಕರು ಶ್ರೀಮಾನ್ ಕೈಂತಜೆ ಗೋವಿಂದಭಟ್ಟರು, ಮಂಗಳೂರು. ಲೇಖಕರೇ ಪ್ರಕಾಶಕರು. ಫೂ. ಕ್ಯಾ. ೮. ೪೮ ಪುಟಗಳು. ಬೆಲೆ ೦-೬-೦.

೧೦ **ಬೆಡಗಿನ ನಾಡು ಕೊಡಗು:** (ಪ್ರದೇಶ ಪರಿಚಯ) ಲೇಖಕರು ಶ್ರೀಮಾನ್ ಶ್ರೀಪತಿರಾವ್ ಫಲಿಮಾರ್ಕರ್, ಬಿ. ಎ., ಬಿ. ಟಿ. ಹಾತೂರು (ದ. ಕೊಡಗು). ಪ್ರಕಾಶಕರು ಶ್ರೀ. ಕೆ. ವಿ. ಶೆಣೈ, ಒಂದಾಣೆ ಮಾಲೆ, ಮಂಗಳೂರು. ಕ್ರಾ. ೮. ೧೬ ಪುಟಗಳು. ಬೆಲೆ ೦-೧-೦.

ನಿಮ್ಮ ಮೋಬಿಲ್‌ಗ್ಯಾಸ್ ಸ್ಟೇಷನ್ನಿನಲ್ಲಿ ನಿಮಗೆ ಸರ್ವೋತ್ಕೃಷ್ಟವಾದ ಪೆಟ್ರೋಲು ಮತ್ತು ಕೀಲೆಣ್ಣೆಗಳು ಮಾತ್ರವಲ್ಲದೆ ನಿಮ್ಮ ಕಾರಿಗೆ ಪ್ರಪಂಚದಲ್ಲೆಲ್ಲಾ ಅತ್ಯುತ್ತಮ ಅನುಭವದ ಫಲವಾದ ತಜ್ಞ ಸರ್ವೀಸೂ ದೊರೆಯುತ್ತದೆ. ನಿಮ್ಮ ಹಣಕ್ಕೆ ಪೂರ್ಣ ಲಾಭ ಪಡೆಯಲು ಇಲ್ಲಿಗೆ ಬನ್ನಿರಿ!

# ಸ್ನೇಹಮಯ ಸೇವೆಯ




## ಸಂಕೇತ

**ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್ · ದ್ವಿವಿಧ ರಕ್ಷಣೆ ಕೊಡುವ ಮೋಬಿಲಾಯಿಲ್ · ಮೋಬಿಲೂಬ್ರಿಕೇಷನ್**

ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ

(ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿ ಸಂಸ್ಥಾಪಿತವಾದುದು; ಕಂಪೆನಿಯ ಮೆಂಬರುಗಳ ಹೊಣೆಗಾರಿಕೆಯು ಮಿತಿಸಿದೆ)

V. 777